ತಾಂಡ

ಶಿರಗಾನಹಳ್ಳಿ ಶಾಂತನಾಯ್ಕ



ತಾಂಡ

(ಕಾದಂಬರಿ)

ಶಿರಗಾನಹಳ್ಳಿ ಶಾಂತನಾಯ್ಕ

ಪ್ರಗತಿ
ಪ್ರಕಾಶನ

Taanda

(Novel)

Written by : Shiraganahalli
Shanthanaik

(N. SHANTHANAIK)

Professor of English, VSK
University, Ballari

Mob: 94490 21006

Pin - 583104

Email: akampan2000@gmail. com

First impression : 2021

Pages : 424+iv = 428

Price : ₹ 400

Inner Pages : Maplitho

Size : 1/8th Demmy

ISBN: 978-81-948957-1-8

Published by

Pragathi Prakashana
Upstair, No.2406, 2407/K-1
1st Cross, Hosabandikeri
K.R.Mohalla, Mysore-570 004
Ph: 0821-4287558

ತಾಂಡ

ಲೇಖಕರು: ಶಿರಗಾನಹಳ್ಳಿ ಶಾಂತನಾಯ್ಕ
ಮೊ: ೯೪೪೯೦ ೨೧೦೦೬
ಪಿನ್ - ೫೮೩೧೦೪

ಮೊದಲನೇ ಮುದ್ರಣ: ೨೦೨೧
ಪುಟಗಳು: ೪೨೪+iv = ೪೨೮
ಬೆಲೆ: ₹ ೪೦೦

ಮುಖಪುಟ ವಿನ್ಯಾಸ: ರಾಠೋಡ್

ಮುದ್ರಣ: ಶ್ರೀ ರಾಘವೇಂದ್ರ ಪ್ರಿಂಟರ್ಸ್
ಮೈಸೂರು-೫೭೦ ೦೦೪

ಪ್ರಕಾಶಕರು

ಪ್ರಗತಿ ಪ್ರಕಾಶನ
ಮಹಡಿ, ನಂ.೨೪೦೬, ೨೪೦೭/ಕೆ-೧
೧ನೇ ಕ್ರಾಸ್, ಹೊಸಬಂಡಿಕೇರಿ
ಕೆ.ಆರ್.ಮೊಹಲ್ಲಾ, ಮೈಸೂರು- ೫೭೦ ೦೦೪
ಫೋ: ೦೮೨೧-೪೨೮೭೫೫೮

ಮುನ್ನುಡಿ

ತಾಂಡ ಕಾದಂಬರಿ ಬಂಜಾರ ಸಮುದಾಯದ ಸಾಂಸ್ಕೃತಿಕ ಸಂಕಥನವಾಗಿದೆ. ತಾಂಡ ಸಂಸ್ಕೃತಿ ಭಾರತದ ಒಟ್ಟಾರೆ ಸಂಸ್ಕೃತಿಗಿಂತ ಭಿನ್ನವಾಗಿರುವುದನ್ನು ಪ್ರಸ್ತುತ ಪಡಿಸುವುದು ಅಲ್ಲದೆ ಇದೊಂದು ಜನಾಂಗೀಯ ಅಧ್ಯಯನ ಕೂಡ ಆಗಿರುವುದನ್ನು ಇಲ್ಲಿ ಗಮನಿಸಬಹುದಾಗಿದೆ. ಪೂರ್ವಕಾಲದಲ್ಲಿ ಬದುಕಿಗಾಗಿ ಸಂಘರ್ಷ ಮಾಡುತ್ತಾ ಎತ್ತುಗಳ ಮೇಲೆ ದಾಸ್ತಾನುಗಳನ್ನು ಹೇರಿಕೊಂಡು ಚಿಕ್ಕಪುಟ್ಟ ವ್ಯಾಪಾರ ಮಾಡುತ್ತಾ ಉತ್ತರದಿಂದ ದಕ್ಷಿಣದ ಕಡೆಗೆ ವ್ಯಾಪರ ಮಾಡುತ್ತಾ ಬಂದವರೆ ಭಾರತದ್ಯಾಂತ ತಾಂಡಕಟ್ಟಿ ವಾಸವಾಗಿರುವ ಬಂಜಾರರು ಅಥವಾ ಲಮಾಣಿ, ಸುಗಾಲಿ, ಸಿಂಗಡಿ ಬಂಜಾರ, ಲಂಬಾಣ, ಗೋರ್‌ಮಾಟಿ, ಲಂಬಾಡ ಮುಂತಾದ ಪ್ರತ್ಯೇಯಗಳಿಂದ ಗುರುತಿಸಲ್ಪಡುತ್ತಾರೆ. ಬಂಜಾರ ಮೂಲತ: ಅಲೆಮಾರಿ ಜನಾಂಗವಾಗಿದ್ದು,, ವಸಾಹಾತು ಪೂರ್ವಕಾಲಘಟ್ಟದಲ್ಲಿ ಬದುಕಿಗಾಗಿ ಸಂಘರ್ಷ ಮಾಡುತ್ತಾ ಎತ್ತುಗಳ ಮೇಲೆ ದಾಸ್ತಾನುಗಳನ್ನು ಹೇರಿಕೊಂಡುಚಿಕ್ಕ-ಪುಟ್ಟ ವ್ಯಾಪರ ಮಾಡುತ್ತಾ ಉತ್ತರದಿಂದ ದಕ್ಷಿಣದ ಕಡೆಗೆ ಬಂದವರು. ಉಪ್ಪು ಆಹಾರಧಾನ್ಯ ಸಾಗಣೆಯೆ ಪ್ರಮುಖ ವ್ಯಾಪಾರದ ಸರಕಾಗಿದ್ದು ಕಾಲಸರಿದಂತೆ ಅವರ ವ್ಯಾಪಾರ ನಿಂತು ಹೋಯಿತು. ಮೊಘಲರ ಕಾಲದಲ್ಲಿ ನಿರ್ಭಿಡೆಯಿಂದ ಭಾರತದ ಉದ್ದಗಲಕ್ಕೂ ಅಡ್ಡಾಡಿ ಸಂಪರ್ಕ ವ್ಯವಸ್ಥೆಯನ್ನು ಕಲ್ಪಿಸಿದ ಮೊಟ್ಟಮೊದಲ ವ್ಯಾಪಾರಿಗಳೆಂದೆ ಗುರುತಿಸಲ್ಪಡುವ ಈ ಜನಸಮುದಾಯ ಬ್ರಿಟಿಷರ ಸರಿ ಸಮಾನರಾಗಿ ವ್ಯಾಪಾರ ಮಾಡಲಾಗದೆ ಮೂಲೆಗುಂಪಾದದ್ದು, ಒಂದು ಐತಿಹಾಸಿಕ ಹಿನ್ನೆಡೆಯೆ ಸರಿ. ಎತ್ತುಗಳ ಮೇಲೆ ಹೇರಿಕೊಂಡು ಸಾಗುವ ಸಾಮಗ್ರಿಗಳು ತಿಂಗಳುಗಟ್ಟಲೆ ವಿಳಂಬವಾಗ ತೊಡಗಿದವು. ರೈಲಿನ ಸಂಚಾರ ಆರಂಭಗೊಂಡು ಬ್ರಿಟಿಷರ ವಸಾಹತು ನೀತಿ ಬದಾಲಾಗಿ, ಕಾಡು ಪ್ರವೇಶವನ್ನ ನಿರ್ಬಂದಿಸಲಾಯಿತು. ಒತ್ತಾಯದಿಂದ ಪ್ರವೇಶಿಸಿದವರನ್ನ ಹಿಡಿದು ಜೈಲಿಗೆ ಹಾಕಿದ್ದಲ್ಲದೆ ನೋಟಿಪೈಡ್ ಜನಾಂಗವೆಂದು ಗುರುತಿಸುವ ಹುನ್ನಾರ ಮಾಡಿದರು. ಈ ಕಪ್ಪುಚುಕ್ಕೆಯನ್ನ ಅಂಟಿಸಿಕೊಂಡು ದಾರುಣ ಬದುಕನ್ನ ಇಲ್ಲಿಯವರೆಗೆ ಬದುಕುವಂತಾಯಿತು. ಇವಲ್ಲವುಗಳ ನಡುವೆಯು ಬದುಕನ್ನ ಕಟ್ಟಿಕೊಳ್ಳಲು ಹೊರಾಟ ಮಾಡುವ ಸಂದರ್ಭ

ಒದಗಿ ಬಂದಿತು. ತಾವು ಮೂಲದಿಂದ ಬಂದ ಪ್ರದೇಶಗಳಿಗೆ ಹೋಗಲಾಗದೆ, ಆಸ್ತಿತ್ವದಲ್ಲಿದ್ದ ಸಮಾಜಿಕ ಬದುಕಿಗೆ ಹೊಂದಿಕೊಳ್ಳಲಾಗದೆ ನಾಗರಿಕ ಪ್ರಂಪಚದಿಂದ ದೂರ ತಮ್ಮದೆ ಒಂದು ನೆಲೆಯನ್ನ ಎಕ್ಸ್‌ಕ್ಲೂಸಿವ್ ಆಗಿ ನೆಲೆಕಟ್ಟಿಕೊಂಡು ಬದುಕಿದ್ದೆ ತಾಂಡ. ಈ ತಾಂಡದ ಬದುಕು ವಿಶಿಷ್ಟ ಮತ್ತು ವಿಶೇಷ ವಾಗಿರುತ್ತದೆ. ಒಂದೆ ಭಾಷೆ, ಒಂದೆ ಸಂಸ್ಕೃತಿ, ಒಂದೆ ಸಂಪ್ರದಾಯ, ಒಂದೆ ಆಚರಣೆ ಹಾಗೂ ಒಂದೆದೈವವನ್ನ ನಂಬಿ ಬದುಕಿರುವುದೆತಾಂಡ. ಆದರೆ ದುರಂತವೆಂದರೆ, ಅನಾದಿ ಕಾಲದಿಂದಲೂ ಶಾಪಗ್ರಸ್ತರಂತೆ ಬದುಕಿರುವ ಈ ಜನ ಸಮುದಾಯ ಕುಡಿಯುವುದು ಮತ್ತು ತಿನ್ನುವುದು ಈ ಎರಡು ಪ್ರಕ್ರಿಯೆಯಲ್ಲಿ ತಮ್ಮ ದುಡಿಮೆಯ ಬಹುಪಾಲನ್ನ ಕಳೆದುಕೊಂಡು ಮತ್ತೆ ಅದೆ ಬದುಕಿನ ಹುಡುಕಾಟಕ್ಕೆ ಹೊರಟು ಬಿಡುತ್ತಾರೆ. ಕಬ್ಬುಕಟಾವು ಮಾಡುವುದು, ಕಾಫಿ ಬೀಜವನ್ನ ಹರಿಯುವುದು, ಗಾರಿ ಕೆಲಸ, ರಸ್ತೆಗೆ ಡಾಂಬರ್ ಹಾಕುವ ಕಷ್ಟದ ಕೆಲಸಗಳಲ್ಲಿ ಮಾಹಿರಾದ ಈ ಜನರು ಶ್ರಮಜೀವಿಗಳು. ಬಂಜಾರರ ಹೆಣ್ಣು ಮಕ್ಕಳು ಸಲಿಸಾಗಿ ಬೆಟ್ಟಗಳನ್ನು ಹತ್ತಿಕಾಫಿ ಬೀಜವನ್ನು ಹರಿಯುವಾಗ ಅವರಿಗೆ ದಣಿವೆ ಆಗುವುದಿಲ್ಲ. ಸೊಂಟಕ್ಕೊ ಕಟ್ಟಿದ ಕಟ್ಟಿದ ಉಡಿಯನ್ನ ಹೊತ್ತು ಸಣ್ಣ ಬೆಟ್ಟಗಳನ್ನ ಅನಾಮತ್ತಾಗಿ ಏರಿ ಪಟ್ಟ ಪರಿಶ್ರಮದ ಪಾಲನ್ನಗಂಡನ ಕುಡಿತದ ಚಟದ ಜೋತೆಗೆ ತಾನು ಕುಡಿದು ದಣಿವನ್ನ ನೀಗಿಸಿಕೊಳ್ಳುವುದು ದಿನನಿತ್ಯದ ಕ್ರಿಯೆ. ದೀಪಾವಳಿಯಂದು ಮನೆಯ ಯಜಾಮನ ಲಿಂಗ ಬೇದವನ್ನು ಪರಿಗಣಿಸದೆ ಸಮಾನಾಗಿ ಸಾರಾಯಿ ಇಲ್ಲವೆ ಹೆಂಡವನ್ನು ಹಂಚುವುದು ಸಮಾನತೆಯ ಪ್ರತೀಕವಾದರು ಹೆಣ್ಣಿನ ಶೋಷಣೆ ನಡೆಯುವುದಿಲ್ಲ ಎಂದಲ್ಲ. ಬಹುಶ: ಇದು ನಾಗರಿಕ ಸಮಾಜದ ಅನುಕರಣೆ ಏನಿಸುತ್ತದೆ. ರಾಜಸ್ಥಾನ, ದೆಹಲಿ, ಗುಜಾರಾತಿನ ಗಡಿಪ್ರದೇಶಗಳಿಂದ ವಲಸೆ ಬಂದ ಈ ಜನಸಮುದಾಯದಲ್ಲಿ ಸತಿ ಪದ್ದತಿಯ ಆಚರಣೆ ಹೇಗೆ ನುಸುಳಿ ಕೊಂಡಿತೊಯಾರಿಗೂ ಗೋತ್ತಿಲ್ಲ. ಏಕೆಂದರೆ, ಪ್ರತಿ ಮದುವೆಯ ಸಂದರ್ಭ ಮತ್ತು ಹಬ್ಬಗಳ ಆಚರಣೆಯಂದು ಒಳಂಗ್ (ಪ್ರಾರ್ಥನೆ) ಸಲ್ಲಿಸುವುದು. ಹಾಗೂ ಬಂಜಾರರಲ್ಲಿ ಇಂದಿಗೂ ಪ್ರಸ್ತುತವಿರುವ ಏಳು ಸತಿಗಳಾದ ಭೀಮಾ, ಗುಜಾ, ಸೀತಾ, ಹೊನಾ, ಠಕರಿ, ಬನಕಿ ಮುಂತಾದ ಸತಿಗಳು ಕರ್ನಾಟಕದಲ್ಲಿ ಪ್ರಚಲಿತದಲ್ಲಿರುವುದು ಮತ್ತು ಅವುಗಳ ಪೂಜೆ ಆರಾಧಾನೆ ಅವುಗಳ ಇರುವಿಕೆಯನ್ನ ಪ್ರಚುರಪಡಿಸುವ ಐತಿಹ್ಯಗಳು ಇರುವುದು ಸತ್ಯವಾಗಿವೆ. ತಾಂಡ ಏಕೆ ಪ್ರಸ್ತುತವಾಗುತ್ತದೆ ಎಂದರೆ ಕರ್ನಾಟಕದ ಸಂದರ್ಭದಲ್ಲಿ ಕನ್ನಡಿಗರಾದ ಕೋರ್‌ಗಳನ್ನ ಅಂದರೆ, ಬಂಜಾರರಲ್ಲದವರನ್ನ ತಾಂಡದಿಂದ ಹೊರಗೆ ಇಟ್ಟಿರುವುದು.

ತಾಂಡ ಒಂದು ಅಸ್ಮಿತೆ ಯಾಗಿರುವುದು ಸತ್ಯ. ಒಂದೆ ತಾಂಡದಲ್ಲಿ ಜಾತ್ ಮತ್ತು ಬುಕ್ಯಾ ಎನ್ನುವ ಎಲ್ಲಾ ಒಳ ಪಂಗಡಗಳು ಸಂಬಂಧವನ್ನ ಬೆಸೆದುಕೊಂಡು

ಬದುಕುವುದು ಒಂದು ವಿಶೇಷವಾಗಿದೆ. ಪೂರ್ವದಲ್ಲಿ ತಾಂಡಗಳಲ್ಲಿ ಕೆಲಸದ ಆಧಾರದ ಮೇಲೆ ಕೆಲವು ವರ್ಗಗಳನ್ನ ಮಾಡಲಾಗಿತ್ತು. ಉದಾಹರಣೆಗೆ ತಾಂಡದ ಧನಗಳನ್ನ ಹಾಗೂ ಸತ್ತಾಗ ಹಲಗೆಯನ್ನು ನುಡಿಸಲು ಡಾಲ್ಯ ಕಬ್ಬಿಣದ ಕೆಲಸವನ್ನು ಮಾಡಲು ಲೋಹಾರ್ ಬಂಜಾರ, ಬಂಗಾರದ ಕೆಲಸವನ್ನು ಮಾಡಲು ಸೋನಾರ್ ಬಂಜಾರ, ಬಂಜಾರರಿಗೆ ಮನೋರಂಜನೆ ನೀಡಲು ಢಾಢಿ ಬಂಜಾರ ಹಾಗೂ ಗಾವಣ್ಯಾಬಂಜಾರ ಮುಂತಾದ ವರ್ಗಗಳು ಕಂಡುಬರುತ್ತವೆ.ಆದರೆ ಕಾಲಂತರದಲ್ಲಿ ಢಾಢಿ, ಡಾಲಿಯಾ, ಸೋನಾರ್, ಲೋಹಾರ್, ಬಾಜಿಗರ್, ಕಾಂಗ್ಸಿ ಬಂಜಾರ ಸಂತತಿ ಕಡಿಮೆಯಾಗಿ ವರ್ಗಜಾತಿ ವೈರುಧ್ಯಗಳ ನಡುವೆ ಬದುಕನ್ನ ಕಟ್ಟಿಕೊಳ್ಳಲು ದುಸ್ಥರವಾಗಿ ಪಟ್ಟಣ ಸೇರಿಕೊಂಡ ನಂತರಕೇವಲ ಬಂಜಾರರು ಮಾತ್ರ ತಾಂಡಗಳಲ್ಲಿ ನೆಲೆಯೂರಿರುವುದು ಕಂಡುಬರುತ್ತದೆ. ಕೆಲವು ತಾಂಡಗಳ ಪಕ್ಕದಲ್ಲಿ ಕನ್ನಡ ಮಾತನಾಡುವ ಜನರು ಇರುವುದರಿಂದಾಗಿ ಬಂಜಾರರ ಸಂಸ್ಕೃತಿಯ ಮೇಲೆ ಅವರ ಪ್ರಭಾವ ಬೀಳದೆ ಇರಲು ಸಾಧ್ಯವಾಗದೇ ಬಂಜಾರರು ಕೂಡ ಸಂಸ್ಕೃತೀಕರಣಗೊಂಡು ಕಾಂಚಳಿ, ಭೂರಿಯ, ಫೇಟಿಯಾ, ಛಾಂಟಿಯಾಗಳ ಬದಲಾಗಿ ಸೀರೆ, ರವಿಕೆ, ನತ್ತುಗಳ ರೂಪದಲ್ಲಿ ಅನೇಕ ಮಾರ್ಪಾಡುಗಳಾಗಿವೆ. ರಟ್ಟೆ ಬೆಳೆ, ಬಲಿಯಾ, ಜಾಲಿಕಾಯಿ ತೋಡೆ ಮಾಯಾವಾಗಿ ಹೊಸ ಹೊಸ ಅಭುಷಣಗಳು ಚಾಲ್ತಿಗೆ ಬಂದಿರುವುದು ಕಂಡುಬರುತ್ತದೆ. ಮದುವೆಯಲ್ಲೂ ಅನೇಕ ಮಾರ್ಪಾಟುಗಳಾಗಿ ಸಾಡಿತಾಣೆರು, ವಿಯಾರ್ ಹಾಟ್ ಮುಂತಾದ ಆಚರಣೆಗಳು ಕಡಿಮೆಯಾಗಿವೆ. ಬಹಳ ಮುಖ್ಯವಾಗಿ ಒಂದು ತಿಂಗಳ ಮುಂಚೆ ದೀಪಾವಳಿಗೆ ತಯಾರಿ ಮಾಡುತ್ತಿದ್ದ ಬಂಜಾರರ ನೃತ್ಯಮಾಯವಾಗಿ ಕೇವಲ ಸಾಹಿತ್ಯದ ಸಾಲುಗಳಲ್ಲಿ ಕಾಣುತ್ತಿರುವುದು ವಿಪರ್ಯಾಸವೇ ಸರಿ. ಬದಲಾಗುತ್ತಿರುವ ಜಾಗತಿಕರಣದ ಸಂದರ್ಭಕ್ಕೆ ಮುಖಾಮುಖಿಯಾಗುತ್ತಿರುವ ಬಂಜಾರರ ಸಂಸ್ಕೃತಿ ಹೇಗೆ ಅವಸಾನದತ್ತ ಸಾಗುತಿದೆ ಎನ್ನುವುದನ್ನು ಹಿಡಿದಿಡುವ ಪ್ರಯತ್ನ ಕಾದಂಬರಿಯಲ್ಲಿ ಆಗುತ್ತಿರುವುದು ಕಂಡುಬರುತ್ತದೆ. ತಾಂಡಗಳಲ್ಲಿ ಇಂದು ಬದಲಾಗುತ್ತಿರುವ ಸಂದರ್ಭಕ್ಕೆ ಅನುಗುಣವಾಗಿ ಎಗ್ ಫ್ರೈಡ್‌ರೈಸ್, ಬ್ರಾಂಡಿ ಅಂಗಡಿಗಳು ತಲೆಯೆತ್ತಿ ತಾಂಡಗಳನ್ನು ಅವಸಾನದತ್ತ ನೂಕುತ್ತಿವೆ. ನೈಟಿಕಲ್ಚರ್ ಆರಂಭವಾಗಿ ತಮ್ಮ ಹಿಂದಿನ ವೈಭವದ ನೆನಪುಗಳನ್ನು ಕೂಡ ಮಾಡದಿರುವ ಸ್ಥಿತ್ಯಂತರದ ಸಂಗಾತಗಳನ್ನ ಕಾದಂಬರಿ ತೆರೆದಿಡುತ್ತದೆ.

ಸರಜೂಕಾಟ್ಕರ್

11.12.2020

ಮುಂದೆ ಓದುವ ಮುನ್ನ

ಮಲಾಣ್ ನಂತರ ನನ್ನ ಎರಡನೇ ಕಾದಂಬರಿ 'ತಾಂಡ'. ಒಂದು ಲಮಾಣಿ ತಾಂಡದ ಒಳಸುಳಿಗಳನ್ನ ಬಿಚ್ಚಿಡುವ ಪ್ರಯತ್ನವಾಗಿದೆ. ಸುಮಾರು ಐದಾರು ನೂರು ವರ್ಷಗಳ ಹಿಂದೆ ಎಲ್ಲಿಂದಲೊ ಬಂದು ತಮ್ಮ ತಂಡ ಅಂದರೆ ತಾಂಡಗಳನ್ನ ನಾಗರೀಕ ಪ್ರಪಂಚದಿಂದ ದೂರ, ತಮ್ಮದೆ ಹೊರಗುಳಿಯುವ ಸಾಂಸ್ಕೃತಿಕ ಪ್ರತೀಕವಾಗಿ ಬದುಕಿರುವ ಇಡೀ ಭಾರತ ದೇಶದ ಬಂಜಾರರ ಬದುಕಿನ ಪ್ರತೀಕವಾಗಿದೆ. ಯಾವುದೇ ತಾಂಡದ ಕತೆ, ಘಟನೆ, ಸನ್ನಿವೇಶ ಪಾತ್ರಗಳು ಇಲ್ಲಿ ಪ್ರಸ್ತುತವಾಗಿರುವುದಿಲ್ಲ. ಹಾಗೇನಾದರು ಕಂಡು ಬಂದರೆ ಅದೊಂದು ಆಕಸ್ಮಿಕ ಮತ್ತು ಕಾಕತಾಳಿಯ ಅಷ್ಟೆ. ಇದೊಂದು ಜಾಗತೀಕ ಸತ್ಯವನ್ನು ಅನಾವರಣಗೊಳಿಸುವ ಪ್ರಯತ್ನವಾಗಿರುವುದರಿಂದ ಬರುವಕತೆ, ಪಾತ್ರಗಳು, ಸನ್ನಿವೇಶಗಳು ಕೇವಲ ಕಾಲ್ಪನಿಕವಾಗಿವೆ. ಈ ಘಟನೆಗಳು, ಸನ್ನಿವೇಶಗಳು ಅಥವಾ ಪಾತ್ರಗಳು ಯಾರಿಗಾದರು ಹೋಲಿಕೆಯಾದರೆ ಹೆಸರುಗಳು ದಾಖಲಾಗಿದ್ದರೆ ಅವು ಜಗತ್ತಿನಲ್ಲಿರುವ ಯಾವುದೇ ಭಾಗದವು ಆಗಿರುವಂತಹವೇ ವಿನಃ ಒಂದು ನಿಶ್ಚಿತ ತಾಂಡಕ್ಕೆ ಸೀಮಿತವಾಗಿರುವವು ಆಗಿರುವುದಿಲ್ಲ. ಅರ್ಥಂಬರ್ಥ ತಿಳಿದುಕೊಂಡಿರುವ ವ್ಯಕ್ತಿಗಳು ಸ್ವಾಮ್ಯತೆಯ ಹುಡುಕುವ ಪ್ರಯತ್ನ ಮಾಡಿದರೆ ಅದು ಅವರ ಮೂರ್ಖತನವೆ ಸರಿ.

2020ರಲ್ಲಿ ಕರೋನ ತನ್ನ ರುದ್ರತಾಂಡವ ಆಡುತ್ತಿರುವ ಸಂದರ್ಭ. ಬಡವರು, ಬಲ್ಲಿದರು ಯಾರನ್ನೂ ನೋಡದೆ ತನ್ನ ಮಾಯಾಜಾಲದಲ್ಲಿ ಸಿಗಾಕಿಸಿಕೊಂಡು ಬರ್ಭರಗೊಳಿಸಿದ ಕರಾಳದಿನಗಳಂದು ವಿಶ್ವವಿದ್ಯಾಲಯವು ಸಂಪೂರ್ಣವಾಗಿ ಲಾಕ್‌ಡೌನ್‌ಗೊಂಡಿತ್ತು. ಇದೇ ಪರಿಸ್ಥಿತಿ 2021ರ ವರೆಗೂ ಮುಂದುವರೆದಿತ್ತು. ಈ ಕರಾಳದಿನಗಳಂದು ನಾನು ಬೇಟಿ ನೀಡಿದ ಅನೇಕ ತಾಂಡಗಳು ನನ್ನ ಸ್ಮೃತಿಚಿತ್ರದಲ್ಲಿ ಆವಿರ್ಭವಗೊಂಡವು. ತಾಂಡ ಎಂದರೆ ಜನ ನಡೆಯುತ್ತದೆ ಎನ್ನುವ ಭಾವನೆಯನ್ನ ಹೊಂದಿದ್ದರು. ಉಳ್ಳವರಿಗೆ ತಾಂಡದ ಹೆಣ್ಣು, ಹೆಂಡ ಮೀಸಲು ಎಂದುಕೊಂಡಿದ್ದ ಕಾಲವನ್ನ ದಾಟಿ ಇವತ್ತು ತಾಂಡಗಳ ಸ್ಥಿತಿ ಸುಧಾರಿಸಿದೆ. ವಿದ್ಯಾವಂತರು, ನೌಕರಿ ಮಾಡುವವರು, ಹಿಡುವಳಿದಾರರು ನೆಲೆಸಿರುವ ಸ್ಥಳಗಳಾಗಿವೆ. ಈ ಎಲ್ಲಾ ಹಿನ್ನೆಲೆಯನ್ನ ಕೂಲಂಕುಷವಾಗಿ ನೋಡುವ ಪ್ರಯತ್ನ ತಾಂಡ ಕಾದಂಬರಿಯಾಗಿದೆ.

ಭಾರತದ ಕೆಲವು ರಾಜ್ಯಗಳನ್ನ ಬಿಟ್ಟು ಬಹುತೇಕ ರಾಜ್ಯಗಳಲ್ಲಿ ಕಾಣಸಿಗುವ ಏಕೈಕ ದೊಡ್ಡ ಬುಡಕಟ್ಟು ಸಮುದಾಯ ಕಾಲ ಚಕ್ರದ ಸುಳಿಗೆ ಸಿಲುಕಿಹೋಗಿ ತನ್ನ ಸಾಂಸ್ಕೃತಿಕ ಹಿರಿಮೆಯನ್ನು, ಸಾಮಾಜಿಕ ಸ್ಥರವನ್ನು ಕಳೆದುಕೊಂಡು ನಲುಗಿ ಹೋಗಿರುವ ಈ ಸಂದರ್ಭದಲ್ಲಿ ಬಂಜಾರ ಸಾಹಿತ್ಯಕ್ಕೆ ಬಂಜಾರರ ಬದುಕಿಗೆ ಮನ್ನಣೆ ದೊರೆಯುವುದು ಅವಶ್ಯವಾಗಿದೆ. ಇದಕ್ಕೆ ಮುಖ್ಯವಾಗಿ ರಾಜಕೀಯ ಹಿತಾಸಕ್ತಿ ಬೇಕಾಗಿದೆ. ನಮ್ಮ ಸ್ವಾರ್ಥಿ ನಾಯಕರಿಗೆ ಜಾತಿಬೇಕು, ಮೀಸಲಾತಿಬೇಕು. ಜನಾಂಗ ಅದರ ಏಳಿಗೆ, ಉಳಿವು, ವಿಕಾಸ ಪ್ರಗತಿ ಬೇಕಾಗಿಲ್ಲ.

ಎಲ್ಲಿಯವರೆಗೆ ಈ ಭಾವನೆ ಬದಲಾಗುವುದಿಲ್ಲವೊ. ಎಲ್ಲಿಯವರೆಗೆ ನಾವು ನಮ್ಮನ್ನು ಅರ್ಥೈಸಿಕೊಂಡು ಬದುಕನ್ನು ಕಟ್ಟಿಕೊಳ್ಳುವುದಿಲ್ಲವೊ ಅಲ್ಲಿಯವರೆಗೆ ಲಂಭಾಣಿ ಸಮುದಾಯ ಶಾಪದಿಂದ ಮುಕ್ತವಾಗುವುದಿಲ್ಲ. ನಮಗೆ ಜಾತ್ರ್ಯನಾಯ್ಕರಂತ ಕೆ.ಟಿ.ರಾಠೋಡ್, ವಿ.ಪಿ.ನಾಯ್ಕರಂತಹ ನಾಯಕರು ಬೇಕು. ನಮಗೆ ಸಂತ ಸೇವಾಲಾಲ್, ಹಾತಿರಾಮ್ ಬಾವ ರಂತಹ ಸಂತರು ಬೇಕು. ಬಂಜಾರರ ಹಕ್ಕಿಗೆ ಹೋರಾಡಿದ ಜಮಣಿ ನಾಯಕಣ್ ಅಂತಹ ದಿಟ್ಟ ಮಹಿಳೆ ಬೇಕು., ಅಮರಕಂಟಕನಲ್ಲಿ ನರ್ಮದಾ ನದಿಗೆ ದಾನನೀಡಿದ ರೇವಾ ನಾಯಕರಂತಹ ದಾನಿಬೇಕು. ಲಕ್ಕಿಸಾ ಬಂಜಾರರಂತಹ ಉದಾರಿ ನಾಯಕ ಬೇಕು. ಹೇಮ ಬುಕ್ಯಾರಂತಹ ಮಹಾರಾಜ ಬೇಕು. ನಿನ್ನೆ ಮನ್ನೆಕಣ್ಣು ಬಿಟ್ಟು ಎಂ.ಎಲ್.ಎ., ಮಿನಿಷ್ಟರ್ ಆಗಿ ತಮ್ಮ ಸಮುದಾಯವನ್ನೆ ನಿರ್ಲಕ್ಷಿಸುವ ನಿರ್ಲಜ್ಜಿತ ನಾಯಕರು ಬೇಕಾಗಿಲ್ಲ. ಹಾಗಾಗಿ ತಾಂಡ 'ಮಲಾಣ್' ಕಾದಂಬರಿಯ ನಂತರ ಹೊರಬರುತ್ತಿರುವ ಬೃಹತ್ ಕಾದಂಬರಿ ನೀವು ಓದಿ ಸ್ವೀಕರಿಸಿದ್ದೆ ಆದರೆ ನನ್ನ ಬರವಣಿಗೆ ಸಾರ್ಥಕ. ಮುನ್ನುಡಿ ಬರೆದ ಶ್ರೀ ಸರಜೂಕಾಟ್ಕರ್ ಅವರಿಗೆ, ಬೆನ್ನುಡಿ ಬರೆದ ಶ್ರೀರಾಘವೇಂದ್ರ ಪಾಟೀಲ್ ಅವರಿಗೆ ಓದಿ ಆನಂದಿಸಿದ ಹುಲಗಪ್ಪ ಹಾಗೂ ಇತರೆ ಎಲ್ಲಾ ಸ್ನೇಹಿತರಿಗೆ, ಮುಖಪುಟ ಚಿತ್ರಿಸಿದ ರಾಠೋಡ್ ಅವರಿಗೆ, ಪುಸ್ತಕ ಹೊರತಂದ ಪ್ರಗತಿ ಪ್ರಕಾಶನದವರಿಗೆ, ನನ್ನ ಸ್ಮಶಾನ ಮೌನವನ್ನು ಸಹಿಸಿದ ಶ್ರೀಮತಿ ದಾಕ್ಷಾಯಣಿ, ಅನಿಕೇತನ್, ಅಕಂಪನ್ ಅವರಿಗೆ ಋಣಿಯಾಗಿದ್ದೇನೆ. ನನ್ನನ್ನು ಈ ಹಂತಕ್ಕೆ ತಂದ ಶ್ರೀಮತಿ ಕೇಳಿಬಾಯಿ, ನಾಗ್ಯನಾಯ್ಕ, ಯಂಕನಾಯ್ಕ, ಚಂದ್ರನಾಯ್ಕ, ಶೇಖರ ನಾಯ್ಕ, ದೇಶ್ಯಾನಾಯ್ಕ, ಜಾತ್ರನಾಯ್ಕ, ಠಕರಿಬಾಯಿ, ಗೌರಿಬಾಯಿ, ವಾಲ್ಕಿಬಾಯಿ, ಅವರೆಲ್ಲ ಮಕ್ಕಳಿಗೆ ಕೃತಜ್ಞ,

ಪ್ರೊ. ಶಿರಗಾನಹಳ್ಳಿ ಶಾಂತನಾಯ್ಕ

16/08/2021

ಬಳ್ಳಾರಿ.

1. ಆರಂಭ...

ಮನುಷ್ಯನ ಅಸ್ತಿತ್ವ ಅವನ ಆಲೋಚನೆಯಲ್ಲಿದೆ. ಪ್ರಕೃತಿಯ ಎದುರಿಗೆ ಅವನ ಆಟ ನಡೆಯುವುದಿಲ್ಲ ಎಂದು ಗೊತ್ತಿದ್ದರು ಗೆಲ್ಲುವ ಹುಂಬತನ ಹೊಂದಿದ್ದಾನೆ ಈ ಹಾಳು ಮನುಷ್ಯ. ಹೊಟ್ಟೆಬಾಕ ಸಂಸ್ಕೃತಿಯ ಅಧಿಪತಿಯಾಗಿ ಕೇವಲ ಭೌತಿಕ ಸಂಪತ್ತಿನ ಹಿಂದೆ ನಿಲ್ಲದಂತೆ ಓಡುತ್ತಿದ್ದಾನೆ. 'ನಾನು' ಎಂಬ ಪ್ರತ್ಯೇಯದ? ಪರಿಕಲ್ಪನೆಯೂ ಅರಿಯದೆ ನಟನೆಯಾಡುತ್ತಿದ್ದಾನೆ. ಹಗಲು ಹುಟ್ಟುವ ಸೂರ್ಯ ಇಡೀ ದಿನ ಯಾರಿಗೂ ಏನನ್ನು ಹೇಳದೆ ಕೆಲಸ ಮುಗಿಸಿ ವಾಪಾಸು ತನ್ನ ಪಯಣ ಮುಗಿಸುತ್ತಾನೆ. ಆದರೆ ಕೆಲಸ ಅಂದ ತಕ್ಷಣ ಮನುಷ್ಯ ಯಾಕೆ ನೂರೆಂಟು ಕ್ಯಾತೆ ತಗಿಯುತ್ತಾನೆ.? ಯಾಕೆಂದರೆ, ಕೆಲಸ ಮಾಡುವವರ ಸಂಖ್ಯೆ ಕಡಿಮೆಯಾಗುತ್ತಿದೆ, ಕೆಲಸದ ಪರಿಕಲ್ಪನೆ ಬದಲಾಗಿದೆ, ಕಾಲ ಬಹಳಷ್ಟು ಬದಲಾದಂತೆ ನಮ್ಮ ರೀತಿನೀತಿಗಳು, ನಮ್ಮ ವೃತ್ತಿ ಪ್ರವೃತ್ತಿಗಳು, ನಮ್ಮ ಆಚರಣೆಗಳು, ಚಿಂತನೆಗಳು, ಆಲೋಚನೆಗಳು ಬದಲಾವಣೆಗೊಂಡಿವೆ. ಕಾರಣಗಳು ನೂರಾರು. ದಿನದಿನಕ್ಕೂ ಬದಲಾವಣೆಯ ಹೊಸಗಾಳಿ ಹೊರಸೂಸುತಿದೆ. ಇದು ಜಗದ ನಿಯಮ ಯಾರಿಂದಲೂ ತಡೆಯಲಾಗದ ಕ್ರಿಯೆ. ಈ ಕ್ರಿಯೆ ಮತ್ತು ಪ್ರಕ್ರಿಯೆಗಳ ನಡುವೆ ಸಂಘರ್ಷಕ್ಕೆ ಈಡಾಗಿರುವ ಮನುಜ ಏನೆಲ್ಲಾ ಕಳೆದುಕೊಂಡ ನೆಮ್ಮದಿ, ಆರೋಗ್ಯ, ಆಯುಷ್ಯ, ಸಂತೋಷ ಏನಿಲ್ಲಾ? ಕಳೆದುಕೊಂಡಿದ್ದನ್ನು ಪಡೆದುಕೊಳ್ಳದ ತಾಕಲಾಟದಲ್ಲಿಯೇ ಬಹುದೂರ ಕ್ರಮಿಸಿದ್ದಾನೆ. ಈಗ ಭೂತಕಾಲ ಕೇವಲ ಅವನ ಸ್ಮೃತಿಪಟಲದಲ್ಲಿರಬಹುದಾದ ಬರಿ ನೆನಪು ಮಾತ್ರ. ಆಗ, ಮನುಷ್ಯನಿಗೆ ಭೆಟ್ಟಿಯಾದ ವ್ಯಕ್ತಿಗಳು, ಪಡೆದಷ್ಟು ಖುಷಿ, ಹಿಡಿದಷ್ಟು ಅನುಭವ, ನಡೆದಷ್ಟು ದಾರಿ, ಸೇವಿಸಿದಷ್ಟು ಗಾಳಿ ಈಗಿಲ್ಲ. ಕೇವಲ ಐದೋ ಹತ್ತು ವರ್ಷ ವಯಸ್ಸಿನ ಮಿತಿಯಲ್ಲಿ ನಾನು ಕುಡಿದಷ್ಟು ಹಾಲು, ತಿಂದಷ್ಟು ತುಪ್ಪ, ಉಂಡಷ್ಟು ಊಟ ಇಡೀ ನಿನ್ನ ಜೀವಿತದಲ್ಲೇ ಮಾಡಲಾಗದು ಎನ್ನುತ್ತಾನೆ ಅವನು. ಹೋಳಿಗೆ ಅಂದರೆ ಕರಿಗಡಬು ತಿಂದರೆ ತಾಟಿನ ತುಂಬ ಕರಿಗಡಬು ಮುಳಗುವಂತೆ ತುಪ್ಪ ಹಾಕಿಕೊಂಡು ಉಂಡ

ಉದಾಹರಣೆಗಳನ್ನು ಹೇಳುವುದನ್ನು ಕೇಳಿದವರಿದ್ದಾರೆ. ಮಧ್ಯ ಕರ್ನಾಟಕದವರು ಉತ್ತರ ಕರ್ನಾಟಕಕ್ಕೆ ಹೋದಾಗ ಕುಸುಬಿಕಾಳನ್ನ ತಟ್ಟೆಯಲ್ಲಿ ಹಾಕಿದ್ದನ್ನು ನೋಡಿ ಹೈರಾಣಾಗಿ 'ಇದು ಯಾತಕ್ಕೆ' ಅಂತ ನಿಬ್ಬೆರಗಾಗಿ ಕೇಳಿದರೆ 'ಎಣ್ಣೆಗೆ' ಅಂದಳು ಊಟ ಬಡಿಸುತ್ತಿದ್ದ ತಾಯಿ ಊಟ ಮಾಡುತ್ತಿದ್ದವನ ತಲೆ ಓಡಲಿಲ್ಲ. ಹಾಗೆ ಗುಕ್ಕೊ ಮುರಿದು ಬಾಯಿಗೆ ಇಡಲು ಹೆಂಗಸು ಬಂದು ಕುಸುಬಿಯನ್ನ ಅಂಗೈಯಲ್ಲಿ ಹಿಡಿದು ಅಗಸಿ ಚಟ್ನಿಯಲ್ಲಿ ತಟತಟನೆ ಎಣ್ಣೆ ಹನಿಕಿಸಿದಳು. ಅಂತಹದ್ದೊಂದು ಕಾಲವಿತ್ತು ಎನ್ನುತ್ತಲೇ ಮಂದಿ ಸಾಗಿದ್ದಾರೆ. ವಯಸ್ಸಿನೊಳಗೆ ನೆಲ ಗುದ್ದಿದರೆ ನೀರು ಬರುತ್ತಿತ್ತು, ಆದರೀಗ ಕಣ್ಣಲ್ಲಿ ಬರುತ್ತೆ. ಈ ಎಲ್ಲಾ ಹೊಯ್ದಾಟಗಳು ಹುಲಿಯೂರನ ತಲೆ ತುಂಬ ತುಂಬಿಕೊಂಡಿದ್ದವು.

ಹುಲಿಯೂರ ಬಹಳ ಸೂಕ್ಷ್ಮಸಂವೇದಿ ತನ್ನ ನೆನಪಿನ ಕಣಜದಲ್ಲಿ ಹಾಗೆ ಕಾಪಿಟ್ಟಿದ ಸಾವಿರಾರು ಘಟನೆಗಳನ್ನು ಒಂದೊಂದಾಗಿ ರಾಸುಗಳು ದಿನವಿಡಿ ಹುಲ್ಲು ತಿಂದು ರಾತ್ರಿ ಮೆಲುಕು ಹಾಕುವಂತೆ ಮೆಲುಕು ಹಾಕುತ್ತಿದ್ದ. ಇಂತಹ ನೂರಾರು ಸಂಗತಿಗಳನ್ನು ಹೊರಹಾಕಲು ತವಕ ಪಡುತ್ತಿದ್ದ. ಹುಲಿಯೂರನ ಬದುಕೆ ಒಂದು ಸಾಹಸದ ಯಶೋಗಾತೆ. ಅವನು ನಡೆದುಬಂದ ದಾರಿ, ಸವಿಸಿದ ದೂರ, ಅನುಭವಿಸಿದ ನೋವು ಅವನನ್ನು ಎಡಬಿಡದೆ ಕಾಡುತ್ತಿತ್ತು. ಬಾಲ್ಯದಲ್ಲಿ ಕೂಳಿಗಾಗಿ ಪಟ್ಟ ಪರಿಶ್ರಮ, ಅನುಭವಿಸಿದ ವೇದನೆ, ಎದೆಯೊಳಗೆ ಕತಕತ ಕುದಿಯುತ್ತಿದ್ದವು. ಚಿಕ್ಕವನಿರುವಾಗಲೆ ಎಲ್ಲಾ ಸವಾಲುಗಳ ವಿರುದ್ಧ ಮನಸ್ಸಿನೊಳಗೆ ಪ್ರಶ್ನೆ ಮಾಡಿದ್ದ 'ಯಾಕೆ?' ಏನು?' ಅಂತ. ಹುಲಿಯೂರ ಹುಟ್ಟಿದ್ದು ಲಂಬಾಣಿ ಜನಾಂಗದಲ್ಲಿ. ಆದರೆ ಅವನ ತಂದೆ ತೊಪುನಾಯ್ಕ ವಾಸವಾಗಿದ್ದ ತಾಂಡದಲ್ಲಿ ಮುಸ್ಲೀಮರು, ಉಪ್ಪಾರರು, ಬಾರಿಕರು, ಹಡಪದ ಜನರು ಇದ್ದಿದ್ದರಿಂದ ಹುಲಿಯೂರನ ಕನ್ನಡ ಚೆನ್ನಾಗಿತ್ತು. ತೊಪುನಾಯ್ಕನ ಹೆಂಡತಿ ಜಾನಿಬಾಯಿಗೆ ಹದಿಮೂರು ಮಕ್ಕಳು. ಹುಲಿಯೂರ ಒಂಭತ್ತನೆಯವನು ಅವನ ನಂತರ ಹುಟ್ಟಿದ ಜಗನ, ಸಿಂಪಿ, ಪೀಕಿ, ಪಿತ್ಲಿ ಅವನನ್ನು ಬಹಳ ಹಚ್ಚಿಕೊಂಡಿದ್ದರು. ಏಕೆಂದರೆ ಹುಲಿಯೂರ ಅವರೆಲ್ಲರಿಗೂ ನಾಯಕನಂತೆ ಕಂಡಿದ್ದ. ಕೆರಿಏರಿಮೇಲಿನ ನೆರಲೆ ಮರಹತ್ತಿ ನೆರಲೆ ಹಣ್ಣು, ಕೇರು ಮಾವಿನ ಮರಹತ್ತಿ ಮಾವಿನಕಾಯಿ ಕೆಡವಿಕೊಡುತ್ತಿದ್ದ. ಸಿದ್ದಪ್ಪನ ಹೊಲದಾಗಿನ ಹಲಸಿನಹಣ್ಣು ಕದ್ದು ತಂದು ಕೊಡುತ್ತಿದ್ದ. ಹಾಗಾಗಿ ಅವನನ್ನು ಪ್ರತಿಯೊಬ್ಬರು ಇಷ್ಟಪಡುತ್ತಿದ್ದರು. ಮುಂಗಾರ ಜಡಿಮಳೆಯೊಳಗೆ ಮನೆಯಲ್ಲಿ ತಿನ್ನಾಕ ಕೂಳಿಲ್ಲದೆ ಹಸಿದ ಹೊಟ್ಟೆಯಲ್ಲಿ ಕೆಲಸ ಮಾಡುವಾಗ ಹಸಿವು ತಡಿಯಲಾಗದೆ ನಿಗಿನಿಗಿ ಕೆಂಡದಂತೆ ಸಿಟ್ಟಿಂದ ಉರಿಯುವ ತೊಪುನಾಯ್ಕನಿಗೆ ಹೆದರಿ ಕೆಲಸದ ನಡುವೆ ಜಗನ, ಸಿಂಪಿ, "ಹುಲಿಯೂರ ಹೋಗೊನಿ ಒಬ್ಬನೆ ಆ ನಾಯಿ ನೆರಳೆಮರಹತ್ತೋದು, ಹೊಟ್ಟೆಯೊಳಗ ಸಂಕಟ ಎದ್ಯೆತೆ ನಾಕಹರ್ಕೊಂಡ ಬಾ" ಅಂಥ ಪುಸಲಾಯಿಸಿ

ಗದುಮಿದರೆ ಹುಲಿಯೂರ ಕಾಲಮಡಿಯಾಕೆ ಕೊಡಿಸರದಾಗ ಇಳದಂಗ ಮಾಡಿ, ಆ ದಡದ ಬಾಂಡೊ ಭೀಮನ ಹೊಲದಾಟಿ ಅಗಸಿ ಪೆಳಿಯಿಂದ ಪಾರಾಗಿ ಮರಹತ್ತಿ ಕೈಗೆ ಸಿಗುವ ಹಣ್ಣು, ದ್ವಾರಗಾಯಿ ಅಂತವನ್ನ ಹರ್ರೊಂಡ ಬರ್ತಿದ್ದ. ಪೀಕಿ ಸಿಂಪಿ ಹಸಿವು ತಡಿಯಾಕ ಆಗದೆ ಊರವರ ಹೊಲಗಳ ಮೆರೆಗಳಲ್ಲಿ ಅಡ್ಡಾಡಿ ಕಾರಿ ಹಣ್ಣಿನ ಪೆದೆಗಳಲ್ಲಿ ಹಳದಿ ಬಣ್ಣಕ್ಕೆ ತಿರುಗಿರುವ ಕಾರಿಹಣ್ಣುಗಳನ್ನು ಹರ್ರೊಂಡ ಬಂದು ತಿಂತಿದ್ರು.

ಹುಲಿಯೂರ ಅಣ್ಣ ತಮ್ಮಂದಿರು, ಅಕ್ಕಂದಿರು ಪಡುವ ಬಡತನದ ಸಂಕಟವನ್ನು ಬಹಳ ಹತ್ತಿರದಿಂದ ನೋಡಿದ್ದ. ತೊಪುನಾಯ್ಕ, ಜಾನಿಬಾಯಿ ಹಗಲು ರಾತ್ರಿ ಒಂದ ಮಾಡಿ ದುಡಿದರು ಹೊಟ್ಟೆ ತುಂಬಿಸೋದಕ್ಕೆ ಸಾಧ್ಯವಾಗುತ್ತಿರಲಿಲ್ಲಾ. ಜೋಳದ ನುಚ್ಚು, ರಾಗಿಕಾಟಿ, ಬಹಳ ಅಂದ್ರೆ ರಾಗಿಮುದ್ದೆ ಯಾವಾಗಾರ ರೊಟ್ಟಿ ಇಷ್ಟೆ ಅವರಿಗೆ ಸಿಗುತ್ತಿದ್ದ ಊಟ. ಹೊಲದಾಗ ಸಿಗುತ್ತಿದ್ದ ಹಕರ್ಕಿಸೊಪ್ಪು, ಕೋಲಾಣಿ, ದಂಟಿನಸೊಪ್ಪು, ನುಣಗ್ಯಾ, ವೆತಡುನವಲೇರಿ, ಹಾಲವಾಣದಸೊಪ್ಪು ತಂದು ಬೇಯಿಸಾಕ ಒಣಮೆಣಸಿನಕಾಯಿ ಇಲ್ಲದಕ್ಕೆ ಪಕ್ಕದಮನಿ ಪೂರ್‍ಯಾನಾಯ್ಕನ ಹೆಂಡತಿ ಹಾಲಿತಾವ, "ಹಾಲವ್ವ ಒಂದ ಒಡ್ಡಿ ಮೆಣಸಿನಕಾಯಿ ಕೊಡವ್ವ ಒಂದ ಹಿಡಿಸಪ್ಪು ತಂದೀನಿ ಬೇಯಿಸಬೇಕು." ಅಂತ ಕಾಡಿಬೇಡಿ ತರ್ತಿದ್ಲು ಉಪ್ಪಿಲ್ಲದ್ದಕ್ಕೆ ಊರ ಮುಂದಿನ ಮಾಳಿಪಕ್ಕದ ಜೌಗುನೆಲದಲ್ಲಿ ಹೊಡಿತ್ತಿದ್ದ ಸೌಳುಮಣ್ಣು ತಂದು ಸ್ವಾರಿಯೊಳಗೆ ತುಂಬಿದನ್ನ ತಗದು ನೀರಾಗ ಕಲಿಸಿ ಕಣ್ಣಾಗಬಿಡೊ ಆಟ ಒಳ್ಳೆಣ್ಣಿ ಬಿಟ್ಟು ನಾಕಸಾಸ್ವಿಕಾಳ ಉದರಿಸಿ ಒಗ್ಗರಣೆ ಕೊಟ್ಲು. ಒಂದ ರೊಟ್ಟಿಗ ತಾಟ ತುಂಬ ಬೇಯಿಸಿದ ಕೋಲಾಣಿಸಪ್ಪು ತಿಂದು ಕೈತೊಳಿಬೇಕು. ಸಬ್ಬನಗಾಲ ಕಾಳು ಹುಟ್ಟವಲ್ದು, ರೊಕ್ಕ ಅಂತು ಮಂದಿ ನೋಡಿರಲೇ ಇಲ್ಲಾ, ಸುತ್ತ ಕೂಲಿಗ ಹೋದ್ರ ಅಚ್ಚೇರು, ಮೂರ ಪಾವು ಕಾಳು ಮಾತ್ರ ಕೊಡ್ತಿದ್ರು ತೊಪುನಾಯ್ಕನ ಮನಿ ಮಂದಿ ಎಲ್ಲಾ ಹೋದ್ರು ಒಂದ ಗಿದ್ನಾ ರಾಗಿ ಬರ್ತಿರಲಿಲ್ಲಾ. ಸಿಕ್ಕಿದ್ದನ್ನೆ ತಂದು ಬೀಸೊಕಲ್ಲಿನೊಳಗೆ ಬೀಸುತ್ತಿದ್ದರು. ಜಾನಿಬಾಯಿ ಮಕ್ಕಳು ಮಲಗಿದ್ದರೂ ಎಬ್ಬಿಸದೆ ಹೊತ್ತಾರೆ ಮೂಡಣದಾಗ ಬೆಳ್ಳಿ ಚಿಕ್ಕಿ ಮೂಡಿದ್ದನ್ನ ಗಮನಿಸಿಯೇ ಬೀಸಾಕ ಕುಂತು ಬಿಡ್ತಿದ್ಲು.

ಹಿರಿಮಗಳು ದುಗಿ ಏನಾರು ಬೀಸೊಕಲ್ಲಿನ ಸಪ್ಪಳಕ್ಕೆ ಎಚ್ಚರಾಗಿ ಗಡಬಡಿಸಿ ಎದ್ದರೆ, "ಯವ್ವ ಬರ್ಲೆನಬೆ" ಅಂತ ಕೇಳುತ್ತಿದ್ದಳು. "ಆಯ್ತು ಬಿಡವ್ವ, ಕೂಲಿಗ ಹೋಗಾಕಿನಿ ಇಲ್ಲೆಯಾಕ ದಣಿತಿ ಹಾಸಗಿ ತಗದು ಹಾಳಕಸಹೊಡಿ" ಅಂದಿಂದ, ಈಚಲ ಚಾಪಿ ಸುತ್ತಿ, ಗೋಣಿ ಚೀಲಗಳನ್ನು ಮಡಿಚಿ ಇಟ್ಟು ಮನಿಯೊಳಗಿನ ಹಾಳಕಸ ಹೊಡದು, ಒಲಿಯೊಳಗಿನ ಬೂದಿ ತಗದು ದನಗಳ ಕಾಲಲ್ಲಿ ಬಿಸಾಕಿ, ಸ್ವಾರಿಯೊಳಗ ಎರಡ ಚರಗಿ ನೀರು, ಹಾಕಿ ಒಂದು ಚಾಚೀಟು ಹರದು ಹಾಕಿ, ತುಂಡು ಬೆಲ್ಲ ಹಾಕಿ

ಉರಿ ಹೆಚ್ಚು ಮಾಡಿದಳು. "ಯವ್ವ ಚಾ ಕುದಿಯಾಕ ಹತ್ಯೆತಿ ಹಾಲ ಕರ್ಕಂಡ ಬಾ" ಅಂದಳು. ಮನಿ ಮಂದಿ ಎದ್ದವರೆ ಒಲಿಯೊಳಗಿಂದ ಇಜ್ಜಲು ತಗೊಂಡು ಕರಕರಕಡಿದು ಹಲ್ಲುತಿಕ್ಕಿ ಮುಖಕ್ಕೆ ನೀರ ಹಾಕ್ಕೊಂಡು, ಕಪ್ಪುಸಿಕ್ಕೊರು ಕಪ್ಪು, ಮಣ್ಣಿನ ತಟ್ಟೆಯಲ್ಲಿ ಚಾ ಕಿಟ್ಲಿಯಿಂದ ಬಿಡಿಸಿಕೊಂಡು ಕುಡಿದರೆ ಒಂದ ಕೆಲಸ ಆದಂಗೇಯಾ. ಮನೆಯೊಳಗಿನ ಪ್ರತಿಯೊಬ್ಬರು ಚಾ ಕುಡದಿಂದ ಮಂದಿಗೊಂದು ಕೆಲಸ ಹಿಡಿಬೇಕು. ಒಬ್ಬ ಅಂಗಳ ಗುಡಿಸಿದರೆ ಮತ್ತೊಬ್ಬ ಎಮ್ಮೆ ಸಗಣಿ ತುಂಬಬೇಕು. ದೊಡ್ಡ ಪುಟ್ಟಿ ತುಂಬಿದ ಮೇಲೆ ಅಂಗಳ ಗುಡಿಸುವವನು ಹೋಗಿ ಪುಟ್ಟಿ ಎತ್ತಬೇಕು. ಮತ್ತೊಬ್ಬವನು ತಲಿಮ್ಯಾಲ ಹೊತ್ಕೊಂಡ ಹೋಗಿ ತಿಪ್ಪೆಗೆ ಹಾಕಿ ಬರಬೇಕು. ಎಲ್ಲರಿಗಿಂತ ಸಣ್ಣವ ಜಗನ ಎಮ್ಮಿಗಳನ್ನು ಬಿಚ್ಚಕೊಂಡು ಕೆರಿಯೊಳಗ ಮೇಯಿಸಬೇಕು. ಪೀಕಿ, ಪಿಣ್ಣಿ, ದಿಣ್ಣಿ, ದಮ್ಮಡಿ ಕರ್ಕೊಂಡು ಹುಲಿಯೂರ ತಾಳಿದುರ್ಗವನ ಗುಡಿಮುಂದಕ ದನ ಮೇಯೋತಾವ ಸಗಣಿ ಹಿಡಿಯಾಕ ಹೋಗಬೇಕು. ತಲಾ ಒಂದೊಂದು ಕಲ್ಲು ಪುಟ್ಟಿ ತಗೊಂಡು ಛಳಿಯೊಳಗ ನಡಗ್ತಾ ಸಿಕ್ಕ ಹೊತ್ಲ ಎತ್ತಿ ಪುಟ್ಟಿ ತುಂಬಿ ದುರ್ಗವ್ವನ ಗುಡಿತಾವ ಇರೊ ತಮ್ಮದೆ ತಿಪ್ಪೆಯೊಳಗ ಹಾಕಿ ಬರಬೇಕು. ಅಷ್ಟೊತ್ತಿಗಾಗಲೆ ಜಾತು, ದೇವ್ಲ, ದಮ್ಮಾರ, ಧಣಿಯಾ ಗಳೆ ಕಟ್ಕೊಂಡು ಹೊಲ್ದಾಗಿರೋರು. ಮುಂಗಾರಿದ್ದರೆ ಎಡೆಹರಗಾಕೊ, ಇಲ್ಲ ಎಳ್ಳು, ಹೆಸರು ತಗದ ಹೊಲ ಹಸನ ಮಾಡಿ ರಾಗಿ ಬಿತ್ತಾಕ ಅಣಿ ಮಾಡ್ತಿದ್ರು, ಮಾಗಿಕಾಲ ಆಗಿದ್ರಂತು ನಾಕೆತ್ತಿನ ಕಬ್ಬಣರಂಟೆಕಟ್ಟಿ ಚಲ್ಲಾರ ಹೊಡಿಯಾಕ ಹುಲಿಯೂರ ಜಗನನ ಜೀವ ಹಿಂಡುತಿದ್ದರು.

ಹುಲಿಯೂರ ಸ್ಕೂಲಿಗೆ ಹೋಗೊ ಮುಂದ, ಅಂಗಿಚಣ್ಣ ಒಂದು ಇರಲಿಲ್ಲಾ, ಅವನ ವಯಸ್ಸಿನವರೆ ಆದ ಸೊಟ್ಟೇರ, ಸುಂಡ್ಲಿಮಂಜ, ದಿಮಾಕದಾರಿ ಕವಲೆತ್ತ, ನಾಜಗಾರ ರಾಮು, ಲಕ್ಷ್ಮಣ, ಹನುಮ, ಮುಂದಿನ ಮನಿ ಶಂಕರಿ, ಹೆಂಡಮಾರೋ ಪಕ್ಕೀರನ ಮಗ ಜಾನ್ಯ ಇಡಿಸಾಲಿನೆ ತುಂಬಿತ್ತು. ಒಬ್ಬಂದ ಅಂಗಿ ಇದ್ರ ಇನ್ನೊಬ್ಬನ್ನದು ಚಣ್ಣಾ ಇರ್‍ತಿರಲಿಲ್ಲಾ. ಹೊಟ್ಟೆ ಬಟ್ಟೆಯದೆ ದೊಡ್ಡ ಸವಾಲಾಗಿತ್ತು. ಕಾಸು ಅಸಲು ಯಾರ ಹತ್ರಾನೂ ಇರಲಿಲ್ಲ. ರಾಕಪ್ಪಮಾಸ್ತರ ತಪ್ಪು ಮಾಡಿದವರಿಗೆ ದನಕ್ಕೆಬಡದಂಗ ಬಡಿತ್ತಿದ್ದ. ಮನಿತುಂಬ ಜನ ಇದ್ರೂ, ಹುಲಿಯೂರಗೆ ದನ ಮೇಯಿಸುವ ಕೆಲಸ ಬರ್‍ತಿತ್ತು. ಸಾಲಿಗಿಂತ ದನ ಮೇಯಿಸೋದು ಪಾಡು ಅನಿಸಿತ್ತು. ಆದ್ರ ಧೈರ್ಯದಿಂದ ಅಪ್ಪನ ಮುಂದೆ ಹೇಳಾಕ ಪೊಗರು ಸಾಲದಾಗಿತ್ತು. ಧಣಿಯ ಬುದ್ಧಿವಂತನಾದರೂ, ಹಠಮಾರಿ ಹೊಗಲ್ಲಂದ್ರ ಹೊಗಲ್ಲ ಅಂತ ಸಾಲಿ ಚೀಲ, ಪಾಠಿ ಪೇಣಿ ಬಿಸಾಕಿಂದ, ಅವನ ನಂತರ ಅವು ಹುಲಿಯೂರನ ಪಾಲಾಗಿದ್ವು. ಆ ಕಾಲದ ಮಾಸ್ತರ್‌ಗಳು ಸಾಮ, ವೇದ, ದಂಡ ಇದರಲ್ಲಿ ನಂಬಿಕೆಯುಳ್ಳವರು. ಬೆತ್ತ, ರೂಲ್ ಕಟಗಿ, ಇಲ್ಲಾ ಕೈಗೆ ಏನು ಸಿಗುತ್ತೊ ಉಲ್ಟಾ ಬೆರಳಿಗೆ ಕಟಿತಿದ್ದರು. ಹುಲಿಯೂರ ವಿದ್ಯಾರ್ಥಿಯಾಗಿ ಸಾಲಿಗೆ ಸೇರಿರಾಕಿಲ್ಲ ಸುಮ್ಮನೆ ಹೋಗಿ ಸಿಗಾಕಿಕೊಂಡಿದ್ದ. ಜೊರುಬಂದಕ್ಕ

ಬಂದಿದ್ರು, ಹೇಳಾಕ ಆಗದೆ ಸೇವಾಭಾಯ ಮರಿಯಮ್ಮರ ಮಾಟ್ಟೋದಲ್ಲೆ ಹೊಯ್ದಿದ್ದ. ಮಾಸ್ತರ ಹೊಡಿತಾನಂತ ರಾವಿಕೊಂಡಿದ್ದ. "ಎಯ್ ಶನಿ ಸೂಳಿಮಗನ, ಬಂದಾವಂತ ಹೇಳಿಬಾರದೇನಲೆ" ಅಂದವರೆ ಅವನ್ನ ಮಾಸ್ತರ್ ಹೊರಗೆ ಓಡಿಸಿದ. ಹುಲಿಯೂರನಿಗೆ ಸನ್ನಿವೇಶ ಅರ್ಥನೇ ಆಗಲಿಲ್ಲಾ, ದೇವಸ್ಥಾನದ ನಡಕ್ಕೆ ಸಗಣಿ ಬಳದಿದ್ದ ನೆಲದ ಮೇಲೆ ಉಚ್ಚೆ ಹೊಯ್ದಿದ್ದ. ಅವತ್ತೆ ಕೊನೆ ಹುಲಿಯೂರ ಸಾಲಿ ಸನೀಕ ಬರಲಿಲ್ಲಾ. "ಯವ್ವ ಬುತ್ತಿ ಕಟ್ಟಬೆ ದನ ಮೇಯಿಸಾಕ ಹೊಕ್ತಿನಿ" ಅಂತಂದು ದನದ ಹಿಂದೆ ಬಿದ್ದ. ಆರ ಎಮ್ಮಿ ಎಂಟ ಆಕಳು ಊರದನದಾಗ ಹೊಡಿತಿದ್ದ. ಕುಂಟಿಕುರ್ಲಿ ದನಮೇಯಿಸುವ ಹುಡುಗರ ಗುಂಪಿನ ಲೀಡರ್. ಅವಳು ಹೇಳಿದ್ದೆ ಕೊನೆ, ಒಂದು ಕೈ ಚೊಂಚ, ಒಂದ ಕಾಲು ಊನ ಅವಳು ಯಾರಿಗೆ ಹೇಳ್ತಾಳೊ ಅವರು ಹೋಗಿ ದನಗಳನ್ನು ತಿರುವಿಕೊಂಡುಬರಬೇಕು. ಮಧ್ಯಾಹ್ನ ಹಳ್ಳದ ಪಕ್ಕ ದನಗಳನ್ನು ತರುಬವುದು ವಾಡಿಕೆ. ಇಡಿ ದಿನ ಜೋಕಟ್ಟಿ, ಮಾಳಿ, ಸುಡಗಾಡು, ಮಾನಾಪುರದ ಹಾಸಿಗೆ ಮೇದು ದನಗಳು ಒಂದ್ಸೊಮ್ಮೆ ಹೊಟ್ಟೆ ತುಂಬಿಕೊಂಡರೆ ಕುಂತಾಗ ಮೆಲಕು ಹಾಕುತ್ತಿದ್ದವು, ಅವಕ್ಕೆ ಹುಲ್ಲು ಸಾಲದಾದಾಗ ನೆಲ ಗೆಬರುತ್ತಿದ್ದವು. ಕೆಲವು ಕಳ್ಳ ದನಗಳಂತು ಅಕ್ಕಪಕ್ಕದ ಹೊಲಗಳಿಗೆ ಎಗ್ಗಿಲ್ಲದೆ ನುಗ್ಗಿ ರಾಗಿ, ಜೋಳದ ಬೆಳೆ ಕಟಾವಿಗೆ ಬಂದಿದ್ದರು ಬಾಯಿ ಹಾಕಿ ತಿಂದು ಹಾಳ ಮಾಡ್ತಿದ್ದವು. ಹೊಲದವರು ಇಲ್ಲದಿದ್ದಾಗ ಬಚಾವ್, ಯಾರಾದರೂ ನೋಡಿದರೆ ಮುಗಿತು. "ಲೇ ಯಾಕಲೆ? ಮುಂದನಿಂತ ಮೇಯಿಸಾಕ ಆಗಲ್ಲ" ಅಂತ ಹಣ್ಣಗಾಯಿ ನೀರಗಾಯಿ ಆಗಂಗೆ ಹೊಡಿತಿದ್ರು. ಹೀಗೆಲ್ಲಾ ಹೊಡಿಸಿಕೊಂಡು ಬೈಯಿಸಿಕೊಂಡ ದನ ಮೇಯಿಸುವುದರಲ್ಲೆ ಹುಲಿಯೂರಗೆ ಖುಷಿ ಸಿಕ್ಕಿತ್ತು. ಆದರೆ ಅವನೇನು ಅನ್ನೊ ಪರಿಕಲ್ಪನೆ ಕೂಡ ಅವನ ತಲೆಗೆ ಹೊಳೆಯದ ಕಾಲ ಅದು. ಕುಂಟಕುರ್ಲಿ ಹೇಳಿದ್ಲು ಅಂತ ದನ ತಿರುವುದಕ್ಕೆ ಈಚಲ ಪೆಳಿಗಳ ನಡುವೆ ಓಡಿದ, ನೀರು ತುಂಬಿದ ಗುಂಡಿಯೊಳಗೆ ಬಿದ್ದು ಬಿಟ್ಟ. ಆಗ ಅವನಿಗೆ ಈಜು ಕೂಡ ಬರ್ತಿರಲಿಲ್ಲಾ. ಹೇಗೋ ಸುದಾರಿಸಿಕೊಂಡು ದಡಹತ್ತಿ ಪಾರಾಗಿದ್ದ. ಅದು ಅವನಿಗೆ ದೊಡ್ಡದು ಅನಿಸಿರಲಿಲ್ಲ. ಪಕ್ಕದಲ್ಲೆ ಇದ್ದ ಸುಡಗಾಡಲ್ಲಿ ದೆವ್ವಗಳು ಮಲಗಿರ್ತಾವ ಅವು ಹಿಡ್ಕೊಂಡ್ರೆ? ಭಯದಿಂದ ಒಳಗೊಳಗೆ ಹೆದರಿದ್ದ. ಬಂಡಧೈರ್ಯದಿಂದ ಪಾರಾಗಿ ಮೂರನೆ ದೊಡ್ಡ ಮಾಳಿ ಮೇಲೆ ಹೋಗಿ ನೋಡಿದ. ದನದ ಹುಡುಗರು ಎಲ್ಲದಾರ ಅಂತ ಅವರೆಲ್ಲಾ ಆಗಲೆ ಮಾಮೂಲು ಜಾಗಕ್ಕೆ ಹೊರಟಿದ್ದರು. ಮಾಳಿ ಇಳಿದ ಕಿರಿಬನಕಟ್ಟೆ ತಡಾದರೆ ಹುದಲಿನ ಹಳ್ಳ ಕಾಲಿಟ್ಟರೆ ಸೊಂಟದ ಮಟ ಸಿಗಾಕಿಕೊಳ್ಳುತ್ತಿದ್ದವು. ಪಕ್ಕದಲ್ಲೇ ಬೆಳೆದ ಜೇಕಿನ ಹುಲ್ಲು ಆವನ್ನು ಹಿಡಿದುಕೊಂಡು ಪಾರಾಗಬೇಕಿತ್ತು. ಒಳಗೆ ಸಿಕ್ಕೊಂಡ್ರೆ ಮುಗಿತು ಯಾರಾರು ಬಂದು ಹೊರಗೆ ತೆಗೆಯುವವರೆಗೂ ಅಲ್ಲೆ ಸಾಯಬೇಕು. ಅದನ್ನ ತಡಾದು ಸಣ್ಣ ಹಳ್ಳಕ್ಕೆ ಬಂದಾಗ ಅವನಿಗೆ ಹೋದ ಜೀವ ಬಂದಂದಾಗಿತ್ತು. ಆಗಲೆ ದನಗಳು ಕುಂತು ದಣಿವಾರಿಸಿಕೊಂಡರೆ ಕೆಲಹುಡುಗರು ಹುಡುಗಿಯರು ಸಣ್ಣ

ಹಳ್ಳದಲ್ಲಿ ಮೀನುಏಡಿ ಹಿಡಿಯಲು .ತಯಾರಿ ನಡಿಸಿದ್ದರು. ಕುಂಟಕುರ್ಲಿ, "ಲೇ ಬೋಳಿಕೆ, ಒಂದ ದನ ತಿರುವಾಕ ಹೋದೋನು ಯಾಕಲೇ ಇಷ್ಟೊತ್ತು ಮಾಡಿದೆ. ಮೀನು, ಏಡಿ ನಿಮ್ಮಪ್ಪ ಹಿಡಿತಾನ" ಗದರಿಸಿದ ಮೇಲೆ ಅವನು ನೀರಿಗೆ ಜಿಗಿದ. ಬುತ್ತಿ ತರಾಕ ಹೋದವರು ಬರೋದರೊಳಗೆ ಮೀನು ಏಡಿ ಸುಟ್ಟು ಹಿಂಡಿಯೊಳಗೆ ಕಿವುಚುವುದಕ್ಕೆ ತಯಾರಾಗಬೇಕಿತ್ತು. ಬುತ್ತಿ ಇಸ್ಕೊಂಡ ಬರಾಕ ಹೋದವರು ದನ ಮೇಸುವ ಜಾಮಿ, ತಿಮ್ಮೇಶಿ, ಹಬಡ, ನೊಳಿಂಗೂ, ಸಂಘ, ಸಾಮಣಿ ಕುಂಟಕುರ್ಲಿ, ಎಬಡಧನು, ಗೋಪ್ಯ, ನಾನುಸಾಧ ಎಲ್ಲಾರ ಮನಿಗೆ ಹೋಗಿ, "ದನದ ಹುಡುಗರಿಗೆ ಮಧ್ಯಾಹ್ನದ ಬುತ್ತಿ ಕೊಡ್ರಿ" ಅಂತ ಕೇಳಿ ಇಸ್ಕೊಂಡ ಬರಬೇಕಿತ್ತು. ಹಳ್ಳದ ದಂಡೆಯಲ್ಲಿರುವ ಹೊರಿನೊಳಗೆ ಕೈಹಾಕಿ ಒಂದೊಂದು ಏಡಿಗಳನ್ನ, ಆಪಿನ ಬುಡದಲ್ಲಿ ಕುಳಿತ ಹೊಟ್ಟೆಪರ್ಕಿ, ಸಸಲು, ನುಣಿಗ್ಯಾ, ಮೀಸೆಗಿರ್ಲು, ಕೆಸರೊಳಗಿನ ಮಟ್ಟು, ಸಣ್ಣ ಚಿಂಚರು ಹಿಡಿದು ಯಾವಾಗಲೂ ಕುಂಟಕುರ್ಲಿಯ ಹತ್ತಿರ ಬೆಂಕಿಪೆಟ್ಟಿಗೆ ತಯಾರಾಗೆ ಇರ್ತಿರ್ತು. ಒಣಗಿದ ಜಾಲಮರದಕಂಟಿ ಆಫಿನ ಹುಲ್ಲು ಸೆದಿ ತಂದು ಬೆಂಕಿಹಚ್ಚಿ ಏಡಿ ಮೀನು ಸುಟ್ಟು ತಯಾರಿಡುವುದಕ್ಕೂ ಬುತ್ತಿಯವರು ಬರೋದಕ್ಕೂ ಸರಿಹೊಕ್ಕಿತ್ತು. 'ದನದಹುಡ್ರಲ್ಲಾ' ಅಂತ ಮನಿಯೊಳಗ ಹಸಿಮೆಣಸಿನ ಖಾರ ಬಿಸಾಡಿ ಒಂದೆರಡು ರೊಟ್ಟಿ ಮಡಿಸಿಕೊಡ್ತಿದ್ರು. ಆ ಖಾರದಾಗ ತಮ್ಮ ಪಾಲಿಗೆ ಬಂದ ಮೀನು, ಏಡಿಗಳನ್ನು ಕಿವುಚಿ ರುಚಿಕಟ್ಟಾದ ಚಟ್ನಿ ಮಾಡಿಕೊಂಡು ರೊಟ್ಟಿ ತಿಂದರೆ ಜಗತ್ತೆ ಮರತುಹೊಕ್ಕಿತ್ತು. ಉಂಡ ಮೇಲೆ ಹಳ್ಳದಾಗಿನ ತಿಳಿನೀರು ತೀರ್ಥದಂತೆ ಕುಡಿದಷ್ಟು ಕುಡಿಯಬೇಕು ಅನಿಸುತ್ತಿತ್ತು. ಒಂದು ನೆಗಡಿ, ಕೆಮ್ಮು, ತಲಿಸೂಲಿ ಯಾವುದು ಬರ್ತಿರಲಿಲ್ಲಾ. ದನಗಳು ಮೆಲಕು ಹಾಕ್ತಿದಂಗೆಯ, ಎಂಟೊಬ್ಬತ್ತು ಹುಡುಗರು ಉಪ್ಪಾರ ಈರಪ್ಪನ ಹೊಲದಾಗಿರೊ ಹಲಸಿನಮರಕ್ಕೆ ಓಡುತ್ತಿದ್ದರು. ಎಲ್ಲಾರು ಸೇರಿ ಕೈ ಉಲ್ಟಾಸಿದಾ ಹಾಕೋದ ಮಾಡಿದ ಮೇಲೆ ಯಾರು ಔಟ್ ಆಗ್ತಾನೊ ಅವನ್ನ ಕೋಲುತರಾಕ ಓಡಿಸಿ ಮರ ಹತ್ತುತ್ತಿದ್ದರು. ಹೆಣ್ಣಾದವನು ಮತ್ತೆ ಯಾರಿಗಾದರು ಔಟ್ ಮಾಡಿದರೆ ಗಂಡಾಗುತ್ತಿದ್ದ ಸೋತವನು ಹೆಣ್ಣಾಗಿ ಕಟ್ಟಿಗೆ ತರಬೇಕು. ಮರಕೋತಿ ಆಡಿ ಸುಸ್ತಾದ ಮೇಲೆ ದನಗಳು ಎದ್ದು ಸಗಣಿ ಹೊತ್ಲವಗಿತ್ತಿದಂತೆಯೇ ಪ್ರತಿಯೊಬ್ಬರು ಮಂಗಳಮಾಯ ಆಗ್ತಿದ್ರು. ತಮ್ಮ ತಮ್ಮ ದನಗಳನ್ನು ಮನಿಮಟ ಹೊಡ್ಕೊಂಡ ಹೋಗಿ ಮನಿಯಲ್ಲಿ ಯಾರದಾರೊ ಅವರಿಗೆ ಕಣ್ಣಿ ಹಾಕಾಕ ಹೇಳಿ ದೀಪಮಲಿಕಂಬದ ಹತ್ರ ಗೋಲಿ ಆಡ್ತಿರೊರು, ಗಿಚ್ಚಿ ಬಗರಿ ಆಡ್ತಿರೋರ ಹತ್ತಿರ ಓಡುತ್ತಿದ್ದರು. ಹುಲಿಯೂರ ಅಂತಪನು ಗುರಿಯಿಟ್ಟು ಹೊಡಿಯುವವನಲ್ಲ, ಆದರೂ ಒಂದೆರಡು ಗೋಲಿಗಳಲ್ಲಿ ನಡುವಿನ ಬೆರಳ ತುದಿಯಲ್ಲಿ ಗೋಲಿಯನ್ನಿಟ್ಟು ಹೊಡಿತ್ತಿದ್ದ. ಸಂಜೆ ಕೌಳ ಆಗ್ತಿದಂಗೆ ಮನಿಗ ಹೋಗೊ ಅವಸರ ಇರೋರು "ಬರ್ರಲೇ ಇದನ್ನೇನು ಆಡ್ತಿರಿ ತುರಾಮುಚ್ಚಿ ಆಡಾನ" ಅಂತ

ಕರದ್ರು ಅಂದ್ರ ಮುಗಿತು. ಹೆಬ್ಬರಳ ಮೇಲೆ ಹತ್ತ ಪೈಸದ ನಾಣ್ಯ ಇಟ್ಟು ಮೇಲೆ ತೂರಿ ಕೈಯೊಳಗೆ ಮುಚ್ಚಿದರೆ ಮುಚ್ಚಿದವನ ಕೈ ಮೇಲೆ "ಸತ್ತ ನಾಕು ಎತ್ತಲೆ" ಅಂತ ಒಬ್ಬ ಕಟ್ಟುತಿದ್ದ. ಅದು ಅಕ್ಷರದಲ್ಲಿರುವ ಹತ್ತರ ಕಡಿಗ ಬಿದ್ದಿದ್ದರೆ ಸತ್ತ ಅಂತ ನಾಕಕ್ಕೆ ನಾಕು ಗೋಲಿ ಕಟ್ಟಿಸಿಕೊಂಡವ ಕೊಡಬೇಕು. ಅದೇನಾದರು ಸಿಂಹದ ಮಕದ ಕಡಿಗೆ ಇತ್ತೊ 'ಹೊಡ್ತಾ' ಅಂತ ಕಟ್ಟಿಸಿಕೊಂಡವನು ಕಟ್ಟಿದ ಗೋಲಿಗಳನ್ನು ಇಟ್ಕೊಂತಿದ್ದ. ಹುಲಿಯೂರನಿಗೆ ಒಮ್ಮೊಮ್ಮೆ ಜಾಕ್‌ಪಾಟ್ ಹೊಡದು ನೂರ ಗೋಲಿ ಗೆದ್ದು ಎರಡೂ ಬಕ್ಕಣ ತುಂಬಿಕೊಂಡು ಬರ್ತಿದ್ದ. ಯಾರಾದರೂ ಐದು ಹತ್ತು ಪೈಸಾ ಕಟ್ಟಿದರೆ ಅದನ್ನು ಗೆದ್ದು ಖಾರಮಂಡಕ್ಕಿ ತಂದು ಎಲ್ಲರಿಗೂ ಆಟಾಟ ಕೊಟ್ಟು ತಿಂತಿದ್ದ. ದೀಪಾವಳಿ, ಯುಗಾದಿಗೆ, ಹನ್ಮಪ್ಪನ ಓಕಳಿ ಉಚ್ಚಾಯಕ್ಕೆ ತಾಂಡದ ತುಂಬ ಮಂದಿ ಮೂಲಿ ಮೂಲಿಯೊಳಗೆ ಕುಂತು ತೂರೊ ಬಿಲ್ಲಿ ಆಡ್ತಿದ್ರು. ಯುಗಾದಿಗಂತು ಹೇಳಬಾರದು. ಕಾಪಿಸೀಮಿಗೆ ಹೋಗಿದ್ದೋರು, ಕೈಕಾಸಿಗಂತ ಬೀಜ ಹರದಿದ್ದು ಹಂಗೆ ಕೊಡಿ ಇಟ್ಕೊಂಡು ಬಂದು ತೂರಬಿಲ್ಲಿ ಆಡೋರು. ನಾಕಣೆ, ಎಂಟಾಣೆ ದುಡ್ಡಿನ ಬಿಲ್ಲೆಯನ್ನು ಹೆಬ್ಬೆರಳ ಮೇಲಿಟ್ಟು ಆಕಾಶಕ್ಕೆ ಚಿಮ್ಮೊದು. ರಾಜ ಅಂದ್ರ ಸಿಂಹ ಬಿದ್ರೆ ಕಾಸು ತೂರಿದವನಿಗೆ. ಬಕ್ಕ ಅಂದರೆ ಸಂಖ್ಯೆ ಇದ್ದಕಡೆ ಬಿದ್ದರೆ ಕಟ್ಟಿದಷ್ಟೆ ಕಾಸು ವಾಪಾಸು ಕೊಡಬೇಕು. ಹುಲಿಯೂರ ಅವರಪ್ಪಗೆ ತಿಳಿದಂಗೆ ಎಲ್ಲಾ ವರಸೆಗಳನ್ನು ಕಲಿತಿದ್ದ. ಯಾರಾದರು ಅಪ್ಪಿತಪ್ಪಿ ಅವನಪ್ಪಗೆ ಹೇಳಿದ್ರೊ, ಅವನ ಚರ್ಮಾನೆ ಸುಲಿತಿದ್ದರು. ಹೊಟ್ಟೆ ತುಂಬ ಉಂಡು, ಕಣ್ತುಂಬ ನಿದ್ದೆ ಮಾಡಿ, ಮೈ ಮುರಿದು ಕೆಲಸ ಮಾಡಬೇಕು ಅಷ್ಟೆ. ಒಣಉಸಾಬರಿಗೆ ಮುಲಾಜ್ ಇಲ್ಲ. ಗೋಲಿ, ಗಜಗ, ಬಗರಿಪಗರಿ ಆಡಿಕೊಂಡರೇನು ಅಂತಿರಲಿಲ್ಲಾ, ಆತನ ಪ್ರಕಾರ ದುಡ್ಡು ಆಡುವುದು ಕೆಟ್ಟದ್ದು ಅಂತಾದನ್ನ ಯಾರು ಕಲಿಬಾರದು.

* * *

2. ದನ ಮೇಯಿಸೋ ಹುಡುಗರ ಮದುವೆ ಊಟದ ಪ್ರಸಂಗ

ಕುಂಟಕರ್ಲಿಗೆ ಅದೇಗೊ ಸಂಸಾಪುರದ ಸಾಹುಕಾರ ಜಯದೇವಪ್ಪನ ಒಬ್ಬಳೆ ಮಗಳು ಶೋಭವ್ವನ ಮದುವೆ ವಿಷಯ ಗೊತ್ತಾಗಿತ್ತು. ಜಯದೇವಪ್ಪ ಸುತ್ತ ಹದಿನಾರು ಹಳ್ಳಿಗೂ ದೊಡ್ಡಕುಳಾ. ಎಲ್ಲಾ ಊರುಗಳಲ್ಲೂ ಅವನ ಸಾಲಗಾರರು ಇದ್ದೇಇದ್ರು. ಯಾರು ನೂರು ಯಾರೊ ಐವತ್ತು ರೂಪಾಯಿಗಳ ಸಾಲ ತಂದು ಬಡ್ಡಿ ಕಟ್ಟುತ್ತಿದ್ದರು. ಜಯದೇವಪ್ಪ ದೊಡ್ಡ ಘಟ ಆರುವರಿ ಅಡಿ ಎತ್ತರದ ಆಸಾಮಿ ಭದ್ರಾನಾಯ್ಕನ ತಾಂಡ, ಕಂಡಿಪುರ, ಸೋಮನಳ್ಳಿ, ಸೀತಾಪುರ, ದುರ್ಗದೂರು, ಇಳಿಂಗೊವಿ, ತರ್ಲಾಪುರದವರಿಗೂ ಅವನ ಹತ್ತಿರ ಸಾಲ ತಗೊಂಡವರಿದ್ದರು. ಜಯದೇವಪ್ಪನ ತಮ್ಮ ಈಶಪ್ಪ ಸಂಸಾಪುರದಲ್ಲಿ ದೊಡ್ಡ ಕುಳ, ಅವರನ್ನ ಬಿಟ್ರೆ ಬಿದ್ದೆಗೌಡ, ಸಿದ್ದೇಗೌಡ, ಕೆಳಗಿನ ಒಣಿಯ ಚೆನ್ನವೀರಗೌಡ, ಸಂಸಾಪುರದಲ್ಲಿ ದೊಡ್ಡ ಸಮುದಾಯ ಅಂದ್ರೆ ಈರಶೈವ ಸಮಾಜವೆ. ಆ ಕಡೀಗ ಆಸು ಕುರಬರವು ಮನಿಗಳು, ಒಂದಿಷ್ಟು ಬ್ಯಾಡರವು ರಸ್ತೆ ದಾಟಿದರೆ ದಕ್ಷಿಣಕ್ಕೆ ಮಾದರವು, ಹರಿಜನರವು. ನಾಕು ಸಾಬರವು ಪೂರ್ವಕೆ ಬಡಿಗರದು ದೊಡ್ಡ ಓಣಿ, ಈರಭಧ್ರಾಚಾರಿ, ನಕುಲಾಚಾರಿ, ಕಾಳಾಚಾರಿ, ಈರಾಚಾರಿ ಸೋಮಲಿಂಗಾಚಾರಿ, ಹಗಲೆಲ್ಲಾ ಕೆತ್ತಿ ಬಡದ್ರೂ ಮೂರಪಾವು ಕಾಳು ಸಿಗದೆ ಜೀವನ ನಡೆಸೋದಕ್ಕೆ ಒದ್ದಾಡುತ್ತಿದ್ದರು. ಅವರೊಳಗೆ ಈರಶೈವ ಸಮಾಜದವರು ಬ್ರಾಂಬರ ನಂತರ ತಾವೆ ದೊಡ್ಡವರು, ಮಡಿವಂತರು ಅಂತೇಳಿ ಬೀಗುತ್ತಿದ್ದರು. ಈ ಕಾಟಕ ಜನಾಂಗವನ್ನು ತಮ್ಮ ಕಪಿಮುಷ್ಠಿಯೊಳಗೆ ಇಟ್ಕೊಂಡು ಆರಕ್ಕೇರದೆ ಮೂರಕ್ಕ ಇಳಿಯದಂಗೆ ಮಾಡಿದ್ದರು. ಆವಾಗ ಆವಾಗ ಬ್ರಾಂಬರ ಗುರುಗಳನ್ನ ಕರೆದು ಪಂಚಾಂಗ ಓದಿಸಿ ಊರಮಾರಮ್ಮ ಮುನಿಸಿಕೊಂಡವಳೆ ಅವಳನ್ನ ಪ್ರಸನ್ನಗೊಳಿಸೋದಕ್ಕೆ ಕುರಿಬಲಿ ಕೊಡಬೇಕು ಅಂತಂದು ಕಾಟಕಮಂದಿಗೆ ಹೆದರಿಸಿ ಸಾಲಕೊಟ್ಟ ಹಬ್ಬ ಮಾಡಿಸುತ್ತಿದ್ದರು.

ಲಮಾಣ್ಯಾರ ತಾಂಡಕ್ಕ ಹೋಗಿ "ಏನ್ರಲೇ ವರ್ಷಕೊಮ್ಮೆ ಮರಿಯಮ್ಮನ ಹಬ್ಬ ಮಾಡೋದು ಬಿಟ್ಟೆಂಗೈತೆ,? ಇನ್ನೇನ ಉದ್ದಾರ ಆದೀರಲೆ ಸೂಳಿಮಕ್ಕಳ್ರ, ನಮ್ಮ ಸಂಸ್ಕೃತಿ, ನಮ್ಮ ಆಚರಣೆ, ಹಬ್ಬಗಳನ್ನ ದೇವರನ್ನ ಮರತರೆ ಹೆಂಗ್ರಲೆ" ಇಲ್ಲಸಲ್ಲದ್ದು ತಲಿ ತುಂಬಿ ದಿಕ್ಕ ತಪ್ಪಿಸುವ ಕೆಲಸ ಮಾಡ್ತಿದ್ರು. ಲಮಾಣ್ಯಾರ ಕೆಲಸ ಕಟ್ಟಿಗಿ ಕಡಿಯೋದು, ರಂಗೋಲಿ ಕಲ್ಲು ಪುಡಿಮಾಡಿ ಮಾರೋದು, ಕೆಮ್ಮಣ್ಣು, ಹೊಲದಲ್ಲಿ ಸಿಗುವ ಅಣಬೆಯನ್ನು ಚೀಲದಲ್ಲಿ ತುಂಬಿಕೊಂಡು ಪಕ್ಕದ ದಾವಣಗೇರಿಯ ಆರ್ಯ್ಚರಕೇರಿ, ಹರಿಹರದ ಲದ್ವಾ ಓಣಿಯೊಳಗೆ ಹೋಗಿ ಮಾರುವುದು, ಕಳ್ಳಬಟ್ಟಿ ಸಾರಾಯಿ ಮಾಡುವುದು, ಕುಡಿಯುವುದು, ಸಾಲ ಹೆಚ್ಚಾದರೆ ತೀರಿಸೋದಕ್ಕೆ ಕಾಸರಗೋಡ, ಮಂಗಳೂರು, ಗೋವಾ, ಬಾಂಬೆ, ಕಾಫಿಸೀಮಿಗೆ ಹೋಗಿ ಕಷ್ಟ ಮಡುವುದೊಂದೆ. ಜಯದೇವಪ್ಪ, ದಿಮ್ಮಿಗೌಡನಂತವರು ತಾಂಡಗಳಲ್ಲಿ ತಿರುಗಾಡಿ ಮನಿಮನಿಗ ಹೋಗಿ ಸಾಲ ಕೊಡುವುದು, ಯಾವಾದರು ಕೂಸಗಳು ಸಾಲಿಗ ಹೊಂಟಿದ್ದರು. "ಲೇ ನಿಮ್ಮಮ್ಮನ ಲಮಾಣ್ಯಾರ, ನಿಮಗೇನ ಗೊತ್ತಲೇ, ದುಡಕೊಂಡ ತಿನ್ರಿ ಸರಸ್ವತಿ ನಿಮಗ ಒಲಿಯೋದಿಲ್ಲಾ, ಯಾಕಹಿಂಗ ಹುಡ್ರ ಜೀವನ ಹಾಳಮಾಡಿರಿ,? ನಮ್ಮ ಮನಿಯೊಳಗ ಜೀತಕ್ಕ ಕಳಿಸು ನಾಕ ಕಾಸಕೊಡ್ತಿನಿ. ಹೆಂಡ ಸರಾಯಿಗಾರ ಆಕೈತಿ ಸಾಲ ಯಾಕ ಮಾಡ್ತಿರಿ" ಅಂತೇಳಿ ಸಾಲಿಬಿಡಿಸಿ ಜೀತಕ್ಕ ಇಟ್ಕೊಂಡಿದ್ದರು. ಹಾಳಮನಿ ಲಮಾಣ್ಯಾರು ಸಾಲಿಗ ಹೋದರ ಶಾಣ್ಯಾರಾಗ್ತಾರ, ನಮ್ಮ ಹೊಲದಾಗ ರಾಕ್ಷಸರಂಗೆ ದುಡಿತಾರ, ದೇವರು ಅದೇನ ಬುದ್ಧಿ ಕೊಟ್ಟಾನೊ ದುಡಿತಾರ ಕತ್ತಿಹಂಗ ಆದ್ರ ಬದಕೋದು ಗೊತ್ತಿಲ್ಲ. ಒಮ್ಮೆ ಹಂಗೇನಾರ ತಿಳಕೊಂಡ್ರು ಅಂದ್ರ ಮುಗಿತು ನಮ್ಮನ ಮೀರಿಸಿ ಬದಕ್ತಾರ. ಅದಕ್ಕೆ ಅವರನ್ನ ಈಗಲೇ ದಿಕ್ಕ ತಪ್ಪಿಸಬೇಕು. ಅಂತಂದು ಬದ್ರಾನಾಯ್ಕನ ತಾಂಡಕ್ಕೆ ಬರೋ ಮಾಸ್ತರಗಳಿಗೂ ಹೇಳ್ತಿದ್ದರು. "ಲೇ ತಮ್ಮ ಮಾಸ್ತರ ನೋಡು ನೀ ಸಾಲಿಪಾಲಿ ಕಲಿಸಾಕ ಹೋಗಬೇಡ. ನೋಡು ನಾಳೆ ನಮ್ಮ ಹೊಲಮನಿ ಬೀಳಾಕ್ಕಾವ ನಮ್ಮ ಗದ್ದಿಗಳೊಳಗೆ ಕೆಲಸ ಮಾಡೋರು ಯಾರು? ನೀ ಬಂದು ಉಂಡು ತಿಂದು ಪಗಾರ ಎಣಸಿಕೋ ಅಟೇಯ. ಕೆಲಸ ಏನಾರು ಎಡವಟ್ಟ ಮಾಡಿದೆ ನೋಡು ದುರ್ಗದೂರಿಂದ ಬರೊ ದಾರಿಯೊಳಗೆ ಕಾಲು ಕೈ ಮುರಿಸಿಬಿಡ್ತಿನಿ" ದೌಲತ್ತೆಗೌಡ ತಾಂಡದ ಸಾಲಿಮಾಸ್ತರ ಪಾಂಡಪ್ಪಭಟ್ಟರಿಗೆ ತಾಕೀತು ಮಾಡಿದ್ದ. ಈ ಎಲ್ಲಾ ತಾಕಲಾಟದ ದಿನಗಳ ನಡುವೆ ಸಂಸಾಪುರದ ಸಾಹುಕಾರ ಜಯದೇವಪ್ಪ ತನ್ನ ಮಗಳ ಮದವಿ, ಸುತ್ತ ಯಾರೂ ಮಾಡಿರಬಾರದು ಹಂಗೆ ಮಾಡೋದಕ್ಕೆ ಏರ್ಪಾಟು ಮಾಡಿದ್ದ. ದನ ಸತ್ತರೆ ಹದ್ದಿಗೆ ತಲೆ ನೋವಾಗುತ್ತೆ ಎನುವಂತೆ ಕುಂಟಕುರ್ಲಿಗೆ ಯಾರೊ ಸುದ್ದಿ ಹೇಳಿದಕ್ಕೆ ಮೂರ ದಿನ ಮುಂಚಿಂದಲೆ ಊಟ ಬಿಟ್ಟಿದ್ದಳು. "ಲೇ ಹುಲಿಯೂರ, ಮಾದ್ಲಿ, ಬೂಂದಿ, ಹುಗ್ಗಿ, ಜುಲಾಬಿ, ಮತ್ತೇನೇನು ಅದಾವಂತಪ್ಪ" ಬಾಯಿಯೊಳಗೆ ಬಂದ ನೀರನ್ನ ಗುಳಂ ಅಂತೇಳಿ ನುಂಗಿದಳು. "ಯಕ್ಕ ಹಂಗಾರ ಮದಲುನಾವು

ಹೋಗಾನ" ಹುರುಪಿನಿಂದ ಹೇಳಿದ. "ಲೇ ಬ್ಯಾಡ, ನಾನು ಧಣಿಯಾ, ಗೋಪ್ಯ, ಹೊಕ್ಕಿವಿ, ನಾವಬಂದಮ್ಯಾಲ ನೀವು ಹೋಗವಂತ್ರಿ" ಅವನ ಆಸೆಗೆ ತಣ್ಣೀರು ಎರಚಿದಳು. ಕುಂಟಕುರ್ಲಿಯ ರಾಜಕೀಯ ಅರ್ಥವಾಗದೆ ಅನಿವಾರ್ಯವಾಗಿ ಸುಮ್ಮನಿರಬೇಕಾತು. ದನಗಳು ಹಳ್ಳದ ದಂಡಿಯೊಳಗೆ ಮೇಯುತ್ತಿದಂಗೆ ಎರಡು ಕಿಲೋಮಿಟರ್ ದೂರದ ಸಂಸಾಪುರದ ಹಾದಿ ಹಿಡಿದರು. ಕುಂಟಕುರ್ಲಿ "ಲೇ ಹುಲಿಯೂರ ಎಲ್ಲರನ್ನ ಕರ್ರೊಂಡು ದನಗಳನ್ನ ನೋಡ್ರಲೆ ಆ ಜಂಬೂರಮಾಸ್ತರ ಕಳ್ಳೆಮ್ಮಿ ಹಸರು ನೋಡಿದ್ರ ಓಡಿ ಹೊಕ್ಕೈತೆ. ಜೋಪಾನ ನೋಡ್ರಪ್ಪ" ಅವನಿಗೆ ಹೇಳಿ ಕುಂಟ್ಕೊಂತ ಹೊರಟಳು.

ಕುಂಟಕುರ್ಲಿ, ಧಣಿಯಾ, ಗೋಪ್ಯ, ನಾನುಸಾದ, ಹೀರಿ, ಚುನ್ನಿ ಸಂಸಾಪುರಕ್ಕೆ ಹೊಂಟವರು ಧೈರ್ಯವಾಗೆ ಹೊಂಟಿದ್ದರು. ಆದರೆ ಊರ ತಲಪೊ ದಾರಿಯೊಳಗೆ ಬರುವ ಬಂಗಾರಿಗೌಡರ ತೋಟದ ಬಾವಿ ಸನೀಕ ಬಂದವರೆ ಅಂಗಿಯೊಳಗಿಂದ ಎದಿ ಮೇಲೆ ಉಗಳಿಕೊಂಡರು. ತಾಂಡದಾಗ ರುಕ್ಮಜ್ಜಿ ಹೇಳಿದ ಬ್ರಮ್ಮರಕ್ಕಸದ ಕತೆ ನೆನಪಾಗಿ ಬಿಡ್ತು. ಯಾಕಂದ್ರ ಬಾವಿ ಸುತ್ತಮುತ್ತ ಬರಿ ಹುಣಿಸಿಮರಗಳೆ ಬೆಳದಿದ್ದವು. ಹಾಳಮನಿ ಬ್ರಹ್ಮರಕ್ಕಸಗಳು ಹುಣಸಿಮರದಾಗೆ ಇರ್ತಾವಂತ ಬೇರೆ ಹೇಳಿದ್ದಳು. ಹೆದರಿಕೊಂಡು ಅಲ್ಲೆ ಪಕ್ಕಕ್ಕೆ ನಿಂತು ಕಾಲಮಡಿದು ಆ ಮಣ್ಣನ್ನ ಉಂಡೆ ಮಾಡಿಕೊಂಡು ಕೈಯೊಳಗೆ ಹಿಡ್ಕೊಂಡು ಹೊರಟರು. ಸಾವುಕಾರ ಜಯದೇವಪ್ಪನ ಕಣದಾಗ ಮಂದಿ ಹಿಂಡು ನೂಕ ನುಗ್ಗಲು. "ಯಕ್ಕ ನಾವು ಹೋಗೋದು ಹೆಂಗಬೆ" ಚುನ್ನಿ ಕೇಳಿದಳು. "ಎ ನೀವ ಹಿಂಗ ಡೌಲು ಮಾಡಿದ್ರಿ ಏನು ಸಿಗೊದಿಲ್ಲ, ಮಂದಿ ಸಂದಿಯೊಳಗಿಂದ ನುಗ್ಗಿ ಮುಂದ ಹೋಗಿ ಸೀಟ ಹಿಡಿರಿ" ಜೋರ ಮಾಡಿದಳು. ಕಡದ ತಾವ ತುರಿಸಿಕೊಳ್ಳದಂತೆ ಚುನ್ನಿ, ನಾನು, ಒಳಗೆ ನುಗ್ಗಿದ್ದೆ. ತಮ್ಮ ದೊಡ್ಡಪನ ಮಗಳ ಮದವಿ ಐತೆ ಅನ್ನೋರಗತಿ ಹೋಗಿ ಮುಂದಕ ಸೀಟು ಹಿಡಿದು ಬಂದೋರಿಗೆ "ಎ ಯಣಾ, ನಮ್ಮ ಕುಂಟಕುರ್ಲಿ ಅಕ್ಕ ಬರ್ತಾಳ ಇಲ್ಲಿ ಕುಂದರ್ ಬೇಡಾನೋಡು" ಹೀರಿ ಹೇಳಿದಳು. "ಎಯ್, ನಿಮ್ಮಮ್ನ ಲಮಾಣೀ, ಹೋಗ ಅತ್ಲಗೆ ಅಗೋ ಆ ಮೂಲಿಗ ಹೋಗ್ರಿ, ಇದು ದೊಡ್ಡವರ ಜಾಗ" ಅಂತೇಳಿ ಯಾರೊ ಒಬ್ಬ ನಾಯಿಗೆ ಗದರಿಸಿದಂತೆ ಗದರಿಸಿ ಗದುಮಿದ. ಅಲ್ಲಿಂದ ಕಿತ್ತಕೊಂಡು ಮಾದರು ಬ್ಯಾಡರ ಹುಡ್ರು ಕುಂತ ತಾವ ಹೋಗಿ ಕುಂತ್ಕೊಂಡ್ರು. ಪಂತಿಯಲ್ಲಿ ಕುಂತುವರಿಗೆ ಪತ್ರಾವಳಿ ಹಾಕಿ, ಉಪ್ಪು, ಉಪ್ಪಿನಕಾಯಿ, ಬದ್ನೆಕಾಯಿ ಪಲ್ಯೆ, ಕೋಸಂಬರಿ, ಮಾದ್ಲಿ ಹಾಲು, ಜಿಲೇಬಿ, ಬೂಂದಿ, ಹುಗ್ಗಿ ಬಡಿಸಿದರು. ಅವರೆಲ್ಲಾ ಕುಂತ್ಕೊಂಡು ಉಣ್ಣೋದನ್ನ ಆಶೆಗಣ್ಣಿಂದ ನೋಡ್ತಾಕುಂತಿದ್ದ ಬಟ್ಟೆನೆ ಇಲ್ಲದ ಕೊಳಕು ಹುಡುಗರ ಕಡೀಗ ಬಡಸೋರು ತಿರುಗಿಯೂ ನೋಡದಾಗಿದ್ದರು. "ಯಣ್ಣಾ, ಬುದ್ದಿ, ಧಣಿ, ಮಾದರಕೇರಿ ಹುಡುಗರು" ಅಂಗಲಾಚುತ್ತಿದ್ದರು. "ಯ್,

ನಿಮ್ಮವ್ವರ ಯಾರ ಬರ್ಲಿಕ್ರು ನೀವು ಹಾಜರ ಇರ್ತಿರಿ ನೋಡ್ರಲೆ", ಒಬ್ಬ ಗದರಿಸಿ ಸುಮ್ಮನೆ ಹೋದ. ಅವರ ನಜರೆಲ್ಲಾ ದೊಡ್ಡಮಂದಿ ಕಡೀಗ ಇತ್ತು. ಅವರ ಜಾತಿಯವರು, ವರನ ಕಡಿಯವರು, ವಧು ಕಡಿಯವರಿಗೆ ಬಹಳ ಕಾಳಜಿಯಿಂದ ಬಡಿಸುತ್ತಿದ್ದರು. ಮೂಲೆಯಲ್ಲಿ ಕುಂತ ಈ ಅನಾದಿಗಳು ಉಣ್ಣೋರ ಬಾಯಿ ಅಲುಗಾಡೋದನ್ನೆ ನೋಡ್ತಾ ಬಿಟ್ಟು ಬಿಡದೆ ಬರುತ್ತಿದ್ದ ಉಗಳನ್ನ ನುಂಗುತ್ತಿದ್ದರು. ಹುಡುಗರ ಚಡಪಡಿಕೆ, ಆತಂಕ ಗಮನಿಸಿದ ಯಾರೊ ಒಬ್ಬ ಪುಣ್ಯಾತ್ಮ "ಲೇ, ಜೀವಗ ನೋಡು ಆ ಮಾದರು, ಲಮಾಣ್ಯಾರ ಹುಡ್ರು ಕುಂತಾರ ಇಬಿಬ್ಬರ ನಡುವೆ ಒಂದೊಂದು ಪತ್ರಾಳಿ ಇಟ್ಟು ಚೂರ ಚೂರು ಎಲ್ಲಾದನ್ನು ಇಕ್ಕು ಉಣ್ಕೊಂಡ ಹೋಗಲಿ ಪೀಡೆಗಳು" ಅಂತ ಬೊಯ್ದು ಅವರಿಗೆ ಹೇಳಿದ. ಜೀವಣ್ಣಗೆ ಅದೇನು ಅನಿಸಿತೊ "ಲೇ ಗಡಬಡಿ ಮಾಡದಂಗೆ ಅಲ್ಲೇ ಸಾಲು ಮಾಡ್ರಿ" ಅಂದವನೆ ಇಬ್ಬರು ಮೂವರನ್ನ ಕರ್ಕೊಂಡ ಬಂದ "ಲೇ ಹಡ್ಸಿಮಕ್ಕಳಾ ಏಟ ಬೇಕೊ ಆಟು ಇಲ್ಲೆ ತಿನ್ನಬೇಕು. ಪತ್ರಾವಳಿಯೊಳಗ ಉಳಿಸಿ ಮನಿಗೇನಾರ ಒಯ್ದರೊ ಸಾಯಿಸಿಬಿಡ್ತಿನಿ". ಕೆಂಪಿರನ ಮಗ ಜುಲಾ ಗದರಿಸಿದ. "ದೇವರಾಣಿಗೂ ಇಲ್ಲಣ್ಣ, ಇಲ್ಲೆ ತಿಂತಿವಿ" ಅಂತ ಮಾದರ ಚನ್ನನ ಮಗ ತಿಪ್ಪಗ ಸೋರತಿರೊ ಮೂಗನ್ನ ಭುಜಕ್ಕೆ ತಿಕ್ಕಿ ಹೇಳಿದ. ಜೀವಣ್ಣಗೆ ಹೊಟ್ಟೆ ತಳಿಸಿದಂಗಾತು. "ಲೇ ಚಪ್ಪರದಳ್ಳಿ ಬಾರಲೆ, ಆಟು ಬಡಿಸು" ಅಂದವನೆ ಜಾಗ ಖಾಲಿ ಮಾಡಿದ. ಕುಂಟಕುರ್ಲಿ, ನಾನು, ಹೀರಿ ಗಡದ್ದಾಗಿಯೆ ಮಾದ್ಲಿ, ಜುಲೇಬಿ, ಬೂಂದಿ, ಅನ್ನಸಾರು ತಿಂದು ಎದ್ದರು. "ಏಯ್ ಅಕ್ಕ ಅಲ್ಲೇನು ನಡಿಯಾಕ ಹತ್ತೈತಿ ನೋಡಾಮ ತಡಿ" ಅಂತಂದು ಹೀರಿ ಮಂದಿ ಗುಂಪು ಸೇರಿದ ಹತ್ರ ಹೋಗಿ ಮಂದಿ ಕಾಲಸಂದಿಯೊಳಗಿಂದ ಇಣುಕಿ ಇಣುಕಿ ನೋಡ ತೊಡಗಿದಳು. ಮುಂದೇನು ನಡಿಯಾಕ ಹತ್ತೈತಿ ಅನೋದು ಕಾಣವಲ್ದು. ಇವರು ಕಾಣೋವರಿಗೂ ಬಿಡಬಾರದು ಅಂತ ಹಠ ತೊಟ್ಟವರಂತೆ ಎಲ್ಲಾ ಕಡೀಗು ಬಗ್ಗುತಿದ್ದರು.

ಹುಲಿಯೂರ, ಗೊಳಿಯಾ, ಬದಿಯಾ, ಸಾತು, ಸಾಂಬಳು, ಪಾತ್ಲೊ ದನಗಳನ್ನ ಮೇಯಿಸಿಕೊಂತನೆ ಸಂಸಾಪುರ ದಾರಿ ಕಡೀಗ ನೋಡಿ ನೋಡಿ ಬ್ಯಾಸತ್ತು. "ಲೇ ಅವರವ್ವರ ಉಣ್ಣಾಕ ಹೋಗ್ಯಾರ ಇಲ್ಲ, ಸಾವುಕಾರ ಜಯದೇವಪ್ಪನ ಮಗಳ ಮದವಿ ಕಾರ್ಯ ಇವರೆ ಮುಂದನಿಂತು ಮಾಡಾಕಹೋಗ್ಯಾರ.? ಆ ಕುಂಟಕುರ್ಲಿಗ ಹತ್ತು ಕತ್ತಿ ವಯಸ್ಸಾತು ಸಣ್ಣ ಹುಡುಗರು ಕಾಯಿತಿರ್ತಾರಂತ ಖಬರ ಬೇಡಾ." ತನ್ನೊಳಗೆ ಮಾದ್ಲಿ, ಜುಲೇಬಿ, ಬೂಂದಿಯ ಕಲ್ಪನೆಯನ್ನ ಮಾಡಿಕೊಳ್ತಾನೆ ಹೇಳಿದ ಹುಲಿಯೂರ ಮಾದ್ಲಿ, ಜುಲೇಬಿ, ಬೂಂದಿ ಹೆಂಗಿರಬಹುದು ಅನ್ನೊ ಕಲ್ಪನೆ ಕೂಡ ಅವನ ತಲಿಯೊಳಗೆ ಇರಲಿಲ್ಲಾ. ಬಳಗಾನೂರಲ್ಲಿ ಓದುತ್ತಿದ್ದ ಅವನ ಎರಡನೆಯ ಅಣ್ಣ ದೇವ್ಲ ಸೂಟಿಗೆ ಬಂದಾಗ ಅವನು ಅದ್ಯಾರದೊ ಮನಿಯೊಳಗೆ ಉಂಡಿದ್ದ ಪಾಯಸ

ಕಲ್ತ್ಕೊಂಡು ಬಂದಿದ್ದ. ಬಂದವನೆ ಹಬ್ಬಕ್ಕೆ ಪಾಯಸ ಮಾಡಿಸಿದ್ದ. ಅದುಬಿಟ್ರೆ ಒತ್ತು ಶಾವಿಗೆ ಬೆಲ್ಲದ ನೀರು, ದೋಸಿ ತೊಗಿ, ಕರಿಗಡಬು ತಿಂದದ್ದು ಮಾತ್ರ ನೆನಪು. ಈ ಹೊಸ ಸಿಹಿ ಪದಾರ್ಥಗಳು ಹೇಗಾದರೂ ಇರಬಹುದೆಂದು ಹುಲಿಯೂರನ ಕಲ್ಪನೆ. "ಲೇ ಸಾತು, ಈ ಮಾದ್ಲಿ ಅಂದ್ರೇನು? ನಿಂಗೇನಾರ ಗೊತ್ತ" ಕುತೂಹಲ ತಡಿಯಾಕ ಆಗದೆ ಕುಂಟಕುರ್ಲಿ ಮೇಲಿನ ಸಿಟ್ಟು ಕಡಿಮೆ ಮಾಡಿಕೊಳ್ಳಾಕ ಸಾತುನ್ನ ಮಾತಿಗೆಳೆದ. "ಎಯ್ ಹುಲಿಯೂರಣ್ಣ ನಮ್ಮ ಮನಿದೇವರಾಣೆ ಹಿಂಗಂದ್ರ ಏನೂಂತ ಕೇಳೆ ಇಲ್ಲಾ ಬಿಡು. ನಾನು ಅದನ್ನ ನೋಡಾಕು ಅಂತ ಆಶಿ ಆಗೈತೆ. ಆದ್ರ ಕುಂಟಕುರ್ಲಿ ಮೀಟ್ಕೊಂತ ಬರೋದ್ರಾಗ ನಾಳೆ ಬೆಳಕು ಹರಿತೈತೆ." ಅವನ ಮುಖಕ್ಕೆ ಗುದ್ದಿದಂಗೆ ಹೇಳಿದ. "ಆತ ಬಿಡು ಹಂಗಾರ, ನಮಗ ಏನು ಸಿಗೋದಿಲ್ಲ. ನಮ್ಮಂತ ಮಂದಿ ಸುತ್ತಲೂ ಹತ್ತು ಹಳ್ಳಿಯಿಂದ ಬಂದಿರ್ತಾರ. ಅವರಿಗೆ ಉಣ್ಣಾಕ ಇಕ್ಕಬೇಕಲ್ಲ. ಏಟಾದರೂ ಈಡಾದೀತು ಹೇಳು." ಅವನಿಗೆ ಕೇಳಿದ. ದೂರದಾಗೆ ಕೆಲವು ಆಕೃತಿಗಳು ಬರ್ತಿರೋದು ಕಂಡಿದ್ದೆ ಹುಲಿಯೂರ. "ಕುಂಟಕುರ್ಲಿ ಬರ್ತ ಆದಾಳ ನೋಡು. ಹೊಟ್ಟೆ ಬಿರಿಯೊ ಹಂಗ ತಿಂದಿರಬೇಕು. ಅದಕ್ಕೆ ಗರ್ಭಧರಿಸಿರೊ ಉಡದಂಗೆ ನಡಿತವ್ರೆ, ನಾ ಬಡ್ಕೊಂಡೆ ಸಣ್ಣೋರು ಮದಲು ಹೋಗಾನ, ಅವರು ಆ ಮ್ಯಾಲ ಹೋಗಲಿ ಅಂತ, ನನ್ನ ಮಾತು ಕೇಳಲಿಲ್ಲಾ" ಅವನೆ ಸರಿ ಅನ್ನೊಹಂಗೆ ವಾದ ಮಾಡಿದ. "ಕುಂಟಕುರ್ಲಿ ನಮ್ಮ ಲೀಡರ್ ಕಣಪ್ಪ ಅಕಿ ಹೇಳಿದಂಗೆ ನಡಿಬೇಕು, ಯಾವಾನಾರು ಅಕಿ ವಿರೋಧ ಮಾಡಿದ್ನೊ ಲೇ ಬೊಸುಡಿಕೆ ನಿನ್ನ ದನ ನಮ್ಮದ್ರಾಗ ಸೇರಿಸಬೇಡ ನಡಿ ಅಂತ ಹೊರಗ ಹಾಕ್ತಾಳ. ಅವಾಗ ನಿ ಏನು ಹಟ್ಟಿನಾಯಕನ ತಾವ ಪಂಚಾತಿ ಮಾಡ್ಸಿಯಾ" ಅವಳ ನಿರಂಕುಶ ಬುದ್ಧಿಯನ್ನ ತಿಳಿಸಿದ ಬದಿಯಾ.

ಕುಂಟಕುರ್ಲಿ ಮತ್ತು ಅವಳ ಹಿಂದಿದ್ದವರು ಬಂದವರೆ, "ಏಯ್ ಏನ್ ಮಾದ್ಲಿ, ಜಿಲೇಬಿ, ಬೂಂದಿ, ಪಾಯಸ, ಜೀವನದಾಗ ಯಾವತ್ತು ತಿಂದಿರಾಕಿಲ್ಲಾ. ಅದ್ಯಾವನ ಮಾಡಿದ್ನೊ ಗೊತ್ತಿಲ್ಲ ಅಡಗಿಯಂತು ಭಾರಿ ಇತ್ತು ನೋಡು. ಓಡ್ರಲೇ ಈಗ ಹೋದ್ರ ಕೊನಿ ಪಂತಿಗಾರು ಹೊಕ್ಕಿರಿ ಹೋಗ್ರಿ" ಹೀರಿ ಉಸರು ಬಿಡದಂಗ ಹೇಳಿದಳು. ಕುಂಟಕುರ್ಲಿ ಪರವಾನೆಗೆಯನ್ನು ತೆಗೆದುಕೊಳ್ಳದೆ ಹುಡುಗರು ಅರ್ದ ದಾರಿ ಮಟ ಓಡಿದ್ದರು. ಉಣ್ಣೊ ಹುರುಪಿಗೆ ಬರೋದೆನೊಬಂದ್ರು. ಅವನವ್ವನ ಬಂಗಾರಿಗೌಡನ ಬಾವಿಗ ಬರೋದ್ರಾಗ ಹೆದರಿಕೆಯಿಂದ ಹೃದಯ ಬಾಯಿಗ ಬಂದಂಗಾತು. ತೊಟದಾಟೊವರಿಗೂ ಎರಡು ಕಡಿಗ ಬೆಳೆದ ದೊಡ್ಡ ಹುಣಸಿಮರಗಳಿಂದಾಗಿ ಕತ್ತಲು ಆವರಿಸಿತ್ತು. ಮನಸ್ಸಿನೊಳಗ ಊರಮುಂದಿನ ಹನುಮಪ್ಪ, ಮಟ್ಟೊದೊಳಗಿನ ಸೇವಾಬಾಯಿ, ಮರಿಯಮ್ಮ ತಾಳಿಮರದ ದುರ್ಗವ, ಬೇವಿನಮರದ ಗುದ್ದಮ್ಮ, ಊರ ಸುತ್ಲ ಚೌಡಿಯರನ್ನ ನೆಪ್ಪು ಮಾಡ್ಕೊಂಡರು. ಹೆಂಗೊ ಧೈರ್ಯ ತಂದುಕೊಂಡು ಎಲ್ಲೂ ನಿಲ್ಲದಂಗೆ ಚೆನ್ನಾಟ ಕಿತ್ತರು. ಅಲ್ಲಿ ಓಡಿದವರು ಕೊನೆಗೆ

ನಿಂತದ್ದು ಸಾವುಕಾರ ಜಯದೇವಪ್ಪನ ಮಗಳ ಮದುವೆ ಊಟ ನಡಿತಿದ್ದ ಆತನ ಕಣದಾಗ. ಮಂದಿ ಉಂಡು ಪತ್ರಾಳಿಗಳನ್ನ ಚೆಲ್ಲಾಪಿಲ್ಲಿಯಾಗಿ ಬಿಸಾಡಿದ್ರು. ಬಡಸೋರು ಇಲ್ಲಾ, ಅಡಗಿ ಮಾಡೋರು ಇಲ್ಲಾ. ಯುದ್ಧಮುಗದ ಮೇಲೆ ಬಿದ್ದ ಹೆಣದ ರಾಶಿಗಳಂತೆ ಸನ್ನಿವೇಶವಿದ್ದರೆ ಸತ್ತ ಹೆಣಗಳ ಮೇಲೆ ಮುಗಿಬೀಳುವ ಹದ್ದುಗುಳಂತೆ ಇಡಿ ಊರನಾಯಿಗಳು ಜಮಾಯಿಸಿದ್ದವು. ಒಂದು ಮತ್ತೊಂದು ಬೀದಿಯ ನಾಯಿಯನ್ನ ಕಂಡು ಗುರ್ ಅನ್ನುತಿತ್ತು. ಮಧ್ಯಾನ ಊಟ ಇಲ್ಲದೆ ಮಾದ್ಲಿ, ಬೂಂದಿ ಆಶೆಗೆ ಕಂಗಾಲಾಗಿದ್ದ ಹುಲಿಯೂರ, ಬದಿಯ, ಗೊಳಿಯ ಮನಸ್ಸಿನೊಳಗೆ ಜಯದೇವಪ್ಪನನ್ನ ಅಡಿಗೆ ಮಾಡೋರನ್ನ ಅವರಿಗೆ ಅನ್ನ ಸಿಗದಂಗೆ ಮಾಡಿದ ಕುಂಟಕುರ್ಲಿಯನ್ನ ಬೆಸ್ ಬೊಯ್ಯತೊಡಗಿದರು. "ಇವನಾಪ್ನ ಕುಂಟಿ ನಾಕ ಹೆಜೆ ಮುಂದ ಬಂದಿದ್ದರ ನಮಗೂ ಊಟ ಸಿಗೋದು. ಎಂಥ ಎಡವಟ್ ಮಾಡಿದ್ಲು ಎಲ್ಲಾದಕ್ಕೂ ತಾನೆ ಮದಲು ಹೋಗಬೇಕು ಅಂತಾಳ" ಸಿಟ್ಟು ತಡಿಯಾಕ ಆಗದೆ ಬದಿಯಾ ಮನಸು ಬಿಚ್ಚಿ ಬೋಯ್ಯ ತೊಡಗಿದ. "ಇನ್ನೇನೈತೆ, ನಡಿರಿ ಹೋಗಾನು ಯಾರಾರು ದೊಡ್ಡೋರು ಊರಕಡೀಗ ಹೊರಿಟಿರ್ತಾರ. ಆ ದೆವ್ವಗಳಿರೊ ತೋಟ ದಾಟಿಕೊಳ್ಳೊನು." ಗೊಳಿಯಾ ಒಳಗಿನ ಹೆದರಿಕೆಯನ್ನ ಹೊರಹಾಕಿದ. ಅವನು ಹೇಳೋದಕ್ಕೂ ಸೊಟ್ಟ ಬಾಯಿ ಸುಬ್ಬ "ಏನ್ನಲೇ ನೀವು ಉಣ್ಣಾಕ ಬಂದೀರ, ದನ ಕಾಯೋದ ಬಿಟ್ಟು" ಎಡಕ ವಾಲಿರೊ ಸ್ವಾಟಿಯನ್ನ ಉದ್ದ ಮಾಡಿ ಕೇಳಿದ. "ಹೂಂ, ಆದ್ರ ಊಟನೆ ಸಿಗಲಿಲ್ಲಾ ಎಲ್ಲಾ ಖಾಲಿ ಆಗಿತ್ತು. ಹೊಟ್ಟೆ ಚುರ್ ಅನ್ನಾಕ ಹತ್ಯೆತಿ" ಅವನು ಏನಾರು ಮಾಡಬಹುದೆ? ಅನುಮಾನದಾಗ ಹೇಳಿದ್ದ ಹುಲಿಯೂರ. "ಗಡಾನ ಬರಬೇಕ್ರಪ್ಪ, ದೊಡ್ಡ ಜನರ ಮದ್ವಿಗ ಮಂದಿ ಬಹಳ ಬರ್ತಾರ. ಒಂದು ಐದ ಸಾವರನಾರು ಮಂದಿ ಉಂಡಿರಬೇಕು ಇವತ್ತು." ತಾನೆ ಖುದ್ದಾಗಿ ಮಂದಿನ ಎಣಿಸಿದಂತೆ ಹೇಳಿದ. ಹೊಗಲಿ ಬಿಡು ಅಂದವನೆ ಅವನ ಮುಂದೆ ಹೊಂಟಿದ ಸುಬ್ಬನ ಕುರಿತು "ಸುಬ್ಬ ಮಾವ ಊರಿಗ ಹೊಂಟಿಯ" ಬದಿಯಾ ಕೇಳಿದ. "ಹೂಂ, ಯಾಕ?" ಸುಬ್ಬ ಯಾರನ್ನೊ ಹುಡಕೊ ಗಡಿಬಿಡಿಯಲ್ಲಿದ್ದ. "ಏನೂ ಇಲ್ಲಾ ನಾವು ಬರ್ತಿವಿ. ಅದಕ್ಕೆ ಕೇಳಿದೆ. ಆಟೇಯ" ಹುಲಿಯೂರ ಹ್ಯಾಪ ಮಾರಿ ಹಾಕ್ಕೊಂಡು ಹೇಳಿದ. ಈ ವ್ಯಾಳೆದಾಗ ಕುಂಟಕುರ್ಲಿ ಏನಾರು ಸಿಕ್ಕರೆ ಅಕಿ ಮತ್ತೊಂದು ಕಾಲನ್ನ ತಿರವಿ ನಡಿದಂಗ ಮಾಡಿಬಿಡೋಣ ಅನಿಸಿತ್ತು.

* * *

3. ಹುಲಿಯೂರನ ಸಾಲಿ ಪ್ರಸಂಗವೊ

ತೊಪುನಾಯ್ಕ ಬಡತನದಲ್ಲಿ ಹುಟ್ಟಿ ಬೆಳೆದಿದ್ದರಿಂದ ಅವನಿಗೆ ಸಾಲಿ ಕಲಿಯೊದಕ್ಕೆ ಆಗಲೆ ಇಲ್ಲ. ಅವನಪ್ಪ ಮಿಲ್ಲುನಾಯ್ಕ ಮತ್ತ ಜುಮಾಣಿ ವಿದ್ಯೆ ಗೊತ್ತಿಲ್ಲದವರು. ಪ್ರತಿ ಬಂಜಾರರಂತೆ ಗುಳೆ ಬಂದವರು. ಗುಳೆ ಅವರಿಗೆ ಅನಿವಾರ್ಯವಾಗಿತ್ತು. ಇನ್ನೂ ಹುಟ್ಟದ ತೊಪು, ಹುಸೇನಿ. ಆಮ್ಲಿ ಪಾಮಿಯರು, ಭದ್ರನಾಯ್ಕನ ತಾಂಡದಲ್ಲಿಯೆ ಹುಟ್ಟಿದರು. ತೊಪುನಾಯ್ಕನಿಗೆ ಬದುಕೆ ದೊಡ್ಡ ಸವಾಲಾಗಿತ್ತು. ಸಾದಾಬುದ ಮಿಲ್ಲು-ಜುಮಾಣಿಗೆ ಮಂದಿ ಮೋಸ ಮಾಡುವುದು ತೊಪುಗೆ ಗೊತ್ತಾಯ್ತು. ಅವನು ಚಣ್ಣ ಹಾಕೋದಕೆ ಇನ್ನೂ ಸುರು ಮಾಡಿರಲಿಲ್ಲಾ ಅವಾಗಲೆ ವ್ಯವಹಾರದ ಜ್ಞಾನ ಪಡದಿದ್ದ. ಯಾವತ್ತು ಖಾಲಿ ಪುಕ್ಕಟೆ ಅವನ ಇವನ ಹಿಂದೆ ತಿರುಗಿ ಕಾಲ ಕಳೆಯುವುದನ್ನ ನಿಲ್ಲಿಸಿದ್ದ. ಹಂಗಾಗಿ ಅವನ ದೊಡ್ಡ ಮಗ ಜಾತುಗೂ ಎರಡನೇಯ ದೇವ್ಲಗೆ ಸಾಲಿಗೆ ಸೇರಿಸಿದ. ಇಬ್ಬರು ನಿಸ್ಸೀಮರು ಸಾಲಿಗೆ ಹೋಗೋದ ಅಕೈತೆ ಅಂತಂದ ಅವರ ಅಜ್ಜ ಮಿಲ್ಲುನಾಯ್ಕನ ಹಿಂದೆ ಎತ್ತು, ಕುರಿ ಮೇಯಿಸೋದಕ್ಕೆ ಅಜ್ಜಿ ಜುಮಾಣಿ ಹಿಂದೆ ಕೂಲಿಗೆ ಓಟ ಕೀಳುತ್ತಿದ್ದರು. ಪಕ್ಕೀರಪ್ಪ ಮಾಸ್ತರ ಮನಿಮುಂದೆ ಬಂದು "ಲೇ ತಮ್ಮ ತೊಪು ನೀ ಏನು ಹುಡ್ರನ ಓದಿಸಬೇಕು ಅಂದ್ಕೊಂಡೀಯಾ ಆದ್ರ ಅವರ ತಲಿಯೊಳಗ ನಾಕ ಅಕ್ಷರ ಇಲ್ಲಾ ಸುಮ್ಮನೆ ಬಿಡಿಸಿ ದನ ಮೇಯಿಸೋದಕ್ಕೆ ಇಲ್ಲಾ ಕಮತ ಮಾಡೋದಕ್ಕ ಹಚ್ಚಿದರ ಹೆಚ್ಚು ಅನುಕೂಲವಾದಿತು" ಅಂತಂದು ಬುದ್ಧಿವಾದ ಹೇಳಿಂದ ತೋಪು, "ಅವರ ಹಣೆಬರಹದಾಗ ಅಕ್ಷರ ಜ್ಞಾನ ಇಲ್ಲ ಅಂದ್ರ ಏನ ಮಾಡಾಕಾದಿತು ನೀವ ಅಂದಂಗೇಯ ಆಗವಲ್ಡ್ಯಾಕ ಬಿಡಿ" ಅಂದು ಯಾರದೊ ದನಗಳಿಂದ ಹೊಡ್ಕೊಂಡ ಬಂದಿದ್ದ ಎಳೆಗರುಗಳನ್ನು ರಾಟಿಮಾಡಾಕ ಹಚ್ಚಿದ. ಅವು ರಾಟಿ ಆಗ್ತಿದಂಗೇಯ ಇವರು ದೊಡ್ಡವರಾಗಿ ಹೊಲದಾಗ ಕೆಲಸ ಮಾಡುವ ಸಾಮರ್ಥ್ಯ ಪಡೆದುಕೊಳ್ಳ ತೊಡಗಿದರು. ದೊಡ್ಡವರಿಬ್ಬರು ದಡ್ಡರಾಗಿ ಮನಿ ಸೇರಿಂದ ಮೂರನೇಯವ ದಮ್ಮೂರ, ಧಣಿಯಾರನ್ನ ಸಾಲಿಗೆ ಕಳುಹಿಸಿದ. ಹರಿದ ಅಂಗಿ ಚಣ್ಣ ಇಲ್ಲದೆ ಹೊಡೆದು ಎರಡು ತುಂಡಾಗಿದ್ದ ಪಾಟಿಯನ್ನ ತಲಾ ಒಂದೊಂದು ತುಂಡನ್ನ ಬಳಪದ ಕಲ್ಲಿಂದ ಮಾಡಿದ ಪೆಣಿ ಜೊತೆಗೆ ನಾಕುದಿನ

ಇನ್ನೇನು ಕಲೆಕ್ಟರ ಆದಾರು ಅನ್ನೊ ಹುರುಪಿಂದ ಹೋದರು. ಸಾಲಿ ಹೊರಗೆ ಗೋಲಿ ಆಡುತ್ತಿದ್ದ ಸೀಕ, ಪಿಳಿಯಾ, ಊದ, ಖೀರು, "ಲೇ, ಕುಂತೇನು ನೊಣ ಹೊಡಿತಿರಿ ಬರ್‍ರಲೆ ನಿಮ್ಮಾಪ್ರ ಕಂಚಿಗೋಲಿ, ದೊಕ್ಕೊದ ಆಟ ಆಡಾನು" ಅಂತ ಏನೇನೊ ಆಸೆ ತೋರಿಸಿ ಹೊರಗ ಕರ್‍ಕೊಂಡ ಬಂದ್ರು. ಮೆಲ್ಲಗೆ ಸಣ್ಣ ಹುಡುಗರ ಗುಂಪು ಸೇರಿ ಹಳ್ಳಕೆ ಏಡಿ ಹಿಡಿಯಾಕ ಹೋಗುವುದು ಸುರು ಮಾಡಿಂದ, ಸಾಲಿ ಕಡಿಗ ಮಕ ಹೋಗಲಿ ಮುಕಳಿನು ತಿರುಗಿಸಲಿಲ್ಲಾ. ಪಕ್ಕಿರಪ್ಪಾ ಮಾಸ್ತರ ಒಂದೆರಡಸಲ ಚರ್ಮ ಸುಲಿಯೋ ಹಂಗೆ ಹೊಡೆದರು ದಾರಿಗ ಬಂದಂಗ ಕಾಣಲಿಲ್ಲಾ ತೋಪ್ಪನಾಯ್ಕ ಅವರಿಬ್ಬರನ್ನ ಊರ ಅಗಸಿ ಬಾಗಲ ಮಟಾನು ಗದಮ್ಯಾಡಿಹೊಡದುಬಡದು ಮಾಡಿದ್ರು ಪ್ರಯೋಜನ ಆದಂಗ ಕಾಣದೆ ಕೊನೆಗೆ, "ನಿಮ್ಮ ಕರ್ಮ ನಾ ಏನ ಮಡಾಕ ಆದೀತು." ಅಂದವನೆ ಸುಮ್ಮನಾಗಿ ಬಿಟ್ಟ. ಆ ಕಾಲದಾಗ ಒಂಭತ್ತು ಹತ್ತಕ್ಕೆ ಮೈ ನೆರತಿದ್ದಂಗೆ ಹುಡುಗಿಯರ ಮದುವೆ ಮಾಡಿಸಿ ಗಂಡನ ಮನಿಗೆ ಕಳುಹಿಸಬೇಕು. ಇಲ್ಲಾಂದ್ರೆ, ಮುದುಕಿಯಾದಳು ಯಾವನ ಮದ್ವಿಯಾಗತಾನಂತ ಕೊಂಕತಗಿತಿದ್ದರು. ಹಂಗಾಗಿ ಹುಡುಗಿಯರನ್ನೇನೊ ಸಾಲಿಗೆ ಸೇರಿಸ್ತಿರಲಿಲ್ಲಾ. ಐದನೇಯ ಮಗ ದಮ್ಮಡಿ ಮಾತ್ರ ನಾಕ ಅಕ್ಷರ ಕಲ್ತು ಮುಂದ ಹೋದ ಮೆಟ್ರಿಕ್‌ನೊಳಗೆ ಆರು ಸಲ ದಂಡಯಾತ್ರೆ ಹೊಡದಿದ್ದ. ಜಾನಿಬಾಯಿ ಲಾಟ್‌ಪೊಟ್ ಮಾಡಿ ಮಗನ ಸಲುವಾಗಿ ಮೂಲಿ ಮುಕ್ಕಟ್ಟಿನ ಕಾಳು ಕಡಿನ ಹಸನ ಮಾಡಿ ಬಡಬಗ್ಗರಿಗೆ ಮಾರಿ ಕಾಸಿಗೆ ಕಾಸು ಸೇರಿಸಿ ಮಗ ಸಾಹೇಬ ಆಗಲಿ ಅಂತ ಕನಸು ಕಾಣುತ್ತ ಅವನಿಗೆ ಕಳುಹಿಸಿದಳು. ಅವನೇನು ಪಾಸಾಗೊ ಲಕ್ಷಣ ಕಾಣಲಿಲ್ಲಾ. ಯಾವದೊ ಕಛೇರಿಯೊಳಗೆ ಚಪರಾಸಿ ನೊಕರಿಗೆ ಸೇರಿಕೊಂಡ. ಅದನ್ನೆ ಮಗ ದೊಡ್ಡ ಡಿಸಿ ಆದ ಎಂಬಂತೆ ಖುಷಿ ಪಡತೊಡಗಿದ್ದರು. ತಿಂಗಳಿಗೆ ನಾಕು ರೂಪಾಯಿ ಸಂಬಳ ಕೊಡುವುದಕ್ಕೆ ತೃಪ್ತಿ ಪಟ್ಟಿದ್ದ. ಅವನ ಪ್ರಭಾವದಿಂದಾಗಿ ಹುಲಿಯೂರನ ಪಾಳಿಹತ್ತಿತ್ತು. ಅವನ ಜೊತೆಗೆ ಜಗನ, ಸಿಂದಿಯನ್ನು ಸಾಲಿಗೇನೊ ಸೇರಿಸಿದರು. ಅಷ್ಟೊತ್ತಿಗಾಗಲೆ ಪಕ್ಕೀರಪ್ಪ, ಶಾಂತಪ್ಪ, ಜಗವೀರಪ್ಪ ಪಾಂಡುರಂಗಭಟ್ಟ ಟ್ರಾನ್ಸ್‌ಫರ್ ಆಗಿ ಹೋಗಿ ದುರ್ಗದೂರಿಂದ ದಿನಾ ನಡೆದೆ ಬರುತ್ತಿದ್ದ ಕಿಟ್ಟಪ್ಪ ಮಾಸ್ತರ ಕೈಯ್ಯಾಗೊಂದು ಕ್ಯಾರಿಯರ್ ಹಿಡ್ಕೊಂಡು ಒಳ್ಳೆ ಹೊಲಕ್ಕೆ ಕೆಲಸ ಮಾಡೋರಿಗೆ ಬುತ್ತಿ ಕೊಡಾಕ ಹೊಗೋರಂಗೆ ಸಾಲಿ ಕಲಿಸಾಕ ಬರ್‍ತಿದ್ದ. ಭದ್ರಾನಾಯ್ಕನ ತಾಂಡದಾಗಿದ್ದ ಹಳೆ ಸಾಲಿ ಆ ವರ್ಷದ ಮುಂಗಾರ ಮಳೆಗೆ ಕವಚಿಕೊಂಡು ದಬಹಾಕಿಂದ ಸೇವಾಭಾಯ ಮರಿಯಮ್ಮನ ಮಟ್ಟೊನೇ ಸಾಲಿ ಅಂತ ಮಂದಿ ತಿಳ್ಕೊಂಡು ಹುಡ್ರನ ಕಳಿಸಿದರು. ಹಳೆಕಾಲದ ಮಣ್ಣಿನ ಮೆಲ್ಮುದ್ದಿ ಹಾಕಿರೊ ದೇವಸ್ಥಾನನೂ ದಬಾಹಾಕ್ಕೊಂಡಿಂದ ಬಟಾಬಯಲೆ ಸಾಲಿ ಆಗಿತ್ತು. ಸಾಲಿ ಹುಡುಗರೆ ಬಿದ್ದಿರೊ ಕಲ್ಲು, ಮಣ್ಣು ಸರಿಸಿ ಒಂದ ಕಡಿ ನಿಂತಿರೊ ಗೋಡಿಗ ಕಪ್ಪುಬೋರ್ಡ್ ನೇತುಹಾಕಿ ಮೂರು ಕಾಲಿನ ಖುರ್ಚಿಗೆ ಕಲ್ಲುಗಳನ್ನ ಆನಿಸಿ ಮಾಸ್ತರಗೆಂತ ಖುರ್ಚಿ ಮಾಡಿದರು.

ಹುಲಿಯೂರ, ಜಗನ, ಗದ್ದೇಶ, ಬಗರ, ನಂಜ, ಹಿಂದಿನ ಮನಿಸೊಟ್ಟಿ, ಮುಂದಿನ ಒಣ ಡೆಬರ, ಬಿಳಿಯ, ಸುಟ್ಟ, ಸೆಡವ, ಪರದೇಶಿ ಪಾಪ, ಪಾಂಡು, ಯಂಕ, ಸಂಕ್ಲ, ಸಾಕಣ್ಣಿ, ಸೋಮ್ಲು, ಛತ್ರ್ಯ, ಲಾಂಬ್ಯೊ, ಗಿಡ್ಡ, ಗಡವ, ಘಮಣಿ, ಗಾಂಗ್ಲಿ, ಗೋಸಾಲಿ ಹಿಂಡ ಹುಡ್ರು, ಇಡಿ ದಿನ ಕಳೆ ಕಿಳೊದಕ್ಕಿಂತ, ಕುಂತನಾಕ್ ಅಕ್ಷರ ಕಲ್ತರ ಪಾಡಾದಿತು ಅಂತೇಳಿ ಬಂದ್ರು. ಮುಂಗಾರು ಸುರು ಆಗಾಕ ಮುಂಚೆ ವಾರಕ್ಕ ಸಾಲಿ ಸುರು ಆಗಿತ್ತು. ಅಷ್ಟೊತ್ತಿಗೆ, ಹೊಲದಾಗ ಕೂಳಿ, ಕಸ, ಕಲ್ಲು ಕಂಟಿ ಆರಸೊ ಕೆಲಸ ಭರ್ಪೂರಿರ್ತಿತ್ತು. ಅದಕ್ಕೆ ಸಣ್ಣೋರು ದೊಡ್ಡೋರ ದಂಡು ಬೇಕಿತ್ತು. ನಡಬಗ್ಗಿಸಿ ಕೆಲ್ಸ ಮಾಡಾಕ ಮನಸ್ಸಿಲ್ಲದವು ಬಿಡಾಡಿದನ ದಂಗೆ ಸಾಲಿಗ ಬಂದು ಮುಗ್ನಾಗ ಬೆಳ್ಳ ಹಾಕೊಂಡು ಸುರಿತಿರೊ ಸಿಂಬಳದ ರುಚಿ ನೋಡ್ತಿದ್ರೆ ಮೇಷ್ಟ್ರಿಗೆ ಜೀವನಾನೆ ಜಿಗುಪ್ಸೆಯಾಗಿ ಬೆನ್ನ ಮೇಲೆ ಹಿಗ್ಗಾಮಗ್ಗ ಬಿಗಿಯತೊಡಗಿದ. ಒಂದ ವಾರದಾಗ ಹುಡುಗರು ಬರೋದು ಅರ್ದಕ್ಕೂ ಇಳಿತು. ಹಂಗೆ ಹಗುರಕ್ಕ ಬರೋರು ಕಮ್ಮಿಯಾಗಿ ಹುಲಿಯೂರ ಒಬ್ಬನೆ ದಿನಂಪ್ರತಿ ಬಿಟ್ಟು ಬಿಡದಂತೆ ಬರತೊಡಗಿದ. ಅಕ್ಷರ ತಲಿಗೆ ಹೋಗುವುದು ಜಡವಾಗ ತೊಡಗಿತು. ಎರಡರ ಮಗ್ಗಿ, ನಕ್ಷತ್ರಗಳು, ಕನ್ನಡದ ವರ್ಷಗಳು, ಮಾಸಗಳು, ತಿಥಿಗಳು ತಲಿಬುಡಾನೆ ಅರ್ಥವಾಗಲಿಲ್ಲಾ. ತೊಪುನಾಯ್ಕ ಊರಮನಿಯವರ ಸಾವಾಸ ಮಾಡಿ ಕನ್ನಡ ಕಲ್ತಿದ್ದ. ಹುಲಿಯೂರ ಮಾತ್ರ ಗೋರ್ ಬೊಲಿ ಮಾತಾಡಿ ಕನ್ನಡ ಮಾತಾಡಕೆ ನಾಲಗಿ ತಿರುಗದೆ ಕಷ್ಟಪಡ ತೊಡಗಿದ. ಸಾಲಿಯಿಂದ ಮನಿಗ ಬಂದವನೆ 'ಕಾಕ ಕಿಕೀ' ಬರೆಯೋದು ರೂಡಿ ಮಾಡಾಕ ಆಗದೆ ತೊಪುನಾಯ್ಕನ ಕೈಯಿಂದ ಹೊಡ್ತಾತಿಂದಿದ್ದ. ಕಿಟ್ಟಪ್ಪ ಕಲಿಸಿದಷ್ಟು ಕಲಿಸಿ ಊರ ಉಸಾಬರಿ ಮಾಡತೊಡಗಿದ. ಹುಲಿಯೂರನಿಗೆ ಕಲಿಯೊದು ಕಷ್ಟ ಆಗಿತ್ತು. ಅದನ್ನ ಮನಗಂಡ ದಮ್ಮಡಿ "ಎಯ್ ತಾಂಡದ ಮೇಷ್ಟ್ರ ಹತ್ರ ಅವನೇನು ಉದ್ಧಾರ ಆಗೋದು ನಾಕಾಣೆ. ಸುಮ್ಮನೆ ದುರ್ಗಪುರಕ್ಕೆ ಹಾಕ್ರಿ, ದೊಡ್ಡಸಾಲಿ, ಒಬ್ಬರಲ್ಲ ಒಬ್ಬ ಮಾಸ್ತರರು ಇರ್ತಾರ ಪಾಡಾಗಿನೇ ಕಲಿಸ್ತಾರ" ಅಂದಿದ್ದೆ ತಡ, ಅದನ್ನೇ ನಂಬಿದ ತೊಪುನಾಯ್ಕ ಹುಲಿಯೂರನನ್ನು ಕರ್‍ಕೊಂಡ ಹೋಗಿ ಮೂರು ಕಿಲೊಮೀಟರ್ ದೂರದ ದುರ್ಗಾಪುರಕ್ಕೆ ಸೇರಿಸಿದ.

ದುರ್ಗಾಪುರದ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಾನೂರ ಹುಡುಗರು, ತಾಂಡದ ಶಾಲೆಯಲ್ಲಿ ಒಬ್ಬನೆ ಕುಂತು ಪಾಠ ಕೇಳ್ತಿದ್ದ. ಈಗ ಅವನು ಸೇರಿದ ಮೂರನೆ ತರಗತಿಯಲ್ಲೆ ಅರವತ್ತು ಹುಡುಗರು ಎಲ್ಲಾರು ಮಣಿ ಮೇಲೆ ಹತ್ತಿ ಕೂಡುತ್ತಿದ್ದರು. ಮೇಷ್ಟ್ರು ಯಾರಿಗಂತ ಹೇಳಬೇಕು. ಅರವತ್ತು ಮಂದಿಗೆ ಒಂದೆ ಸಲ ಪಾಠ ಯಾರ ಕೇಳಿದ್ರೇನು ಬಿಟ್ರೇನು ಒಬ್ಬೊಬ್ಬರಿಗೆ ಹೇಳಾಕ ಅಸಾಧ್ಯದ ಮಾತು. ಹುಲಿಯೂರ ಅದೇನೊ ತಾಂಡದ ಸಾಲಿಗಿಂತ ಇಲ್ಲಿ ಏನೊ ಚುರುಪಾರು ಕಲಿಯ ತೊಡಗಿದ. ತಾಂಡಕ್ಕಿಂತ ದುರ್ಗಪುರ ಪರವಾಗಿಲ್ಲ ಅಂತ ಜಾನಿಯಾಯಿಗೂ ತೊಪುನಾಯ್ಕನಿಗೆ

ಅನಿಸಿತು. ಆದ್ರೆ ಮಳೆ ಬಂದಾಗ ಸೇತುವೆ ಇಲ್ಲದಿರೊ ದುರ್ಗಾಪುರದ ಹಳ್ಳ ದೊಡ್ಡ ಸಮಸ್ಯೆಗೆ ಈಡು ಮಾಡಿತ್ತು. ಮಳೆ ಬಂತು ಅಂದ್ರೆ ಮೇಲಿಂದ ನೀರು ಹಳ್ಳದ ತುಂಬ ಪ್ರವಾಹದಂಗೆ ಕೊಚ್ಕೊಂಡು ಬರುತ್ತಿತ್ತು. ಅದರಲ್ಲೇನಾದರು ಮನುಷ್ಯ ಸಿಗಾಕಿಕೊಂಡರೆ ಕೊಚ್ಚಿಕೊಂಡೆ ಹೋಗುತ್ತಿದ್ದ. ಈ ಸತ್ಯ ತಿಳಿದ ಗಂಡ ಹೆಂಡತಿ ಮಗ ಹುಲಿಯೂರನ ಬಗ್ಗೆ ಚಿಂತೆ ಮಾಡತೊಡಗಿದರು. ಅವರ ತಾಂಡದವರೆ ಆದ ಗಬ್ರೂನಾಯ್ಕ ಅವನ ತಮ್ಮ ಪಿಂಜಾರಿ ಶಾಲೆಗೆ ಹೋಗುತ್ತಿದ್ದರು. ಎಲ್ಲಾರು ಜಗಳ ಆಡಿ ತಮ್ಮ ಮಗನನ್ನು ಅವರೆ ಹಳ್ಳಕ್ಕೆ ದಬ್ಬಿದರೆ ಹೆಂಗೆ ಅನ್ನೊ ಆಲೋಚನೆ. ಹೆಂಗೊ ಮೂರನೆ ಕ್ಲಾಸು ಪಾಸು ಮಾಡಿದ ಅಷ್ಟೊತ್ತಿಗಾಗಲೆ ಅವರಣ್ಣ ದಮ್ಮಡಿನಾಯ್ಕ ಹರಿಹರದ ಸರ್ಕಾರಿ ಕಛೇರಿಯಲ್ಲಿ ಡಿ ದರ್ಜೆಯ ನೌಕರನಾಗಿ ಸೇರಿದ್ದ. ಅದೇ ವರ್ಷ ಅವನು ಅವರ ವಿರುದ್ಧ ಬೆಡಗ ಚವಾಣ್ ಹುಡುಗಿಯನ್ನ ನೋಡಿ ಮದುವೆ ಮಾಡಿಸೋದಕ್ಕೆ ಮನೆಯಲ್ಲಿ ತಾಕೀತು ಮಾಡಿದ್ದರು. ಮನೆಯೊಳಗೆ ಗಂಡ ಹೆಂಡತಿ ಇಬ್ಬರಲ್ಲೂ ಆತಂಕ ಮನೆ ಮಾಡಿತು. ನಾಲ್ಕನೇ ತರಗತಿಗೆ ಹುಲಿಯೂರನನ್ನ ದಮ್ಮಡಿ ಮನೆಗೆ ಕಳುಹಿಸಿದರು. ಗಾಂಧಿ ಮೈದಾನದ ಶಾಲೆಯಲ್ಲಿ ಹುಲಿಯೂರ, ಹೊಸಶಾಲೆ, ಹೊಸಪರಿಸರ, ಹರಿಹರ ದೊಡ್ಡ ಸಿಟಿಯಾಗಿದ್ದರಿಂದ ಹೊಸ ಹೊಸ ಅನುಭವಗಳಾಗ ತೊಡಗಿದವು. ದೊಡ್ಡೀರಪ್ಪ ಚಾಳಿನಲ್ಲಿ ದಮ್ಮಡಿನಾಯ್ಕನ ಮನೆ, ಪಕ್ಕದಲ್ಲಿ ತರಕಾರಿ ತಂಬೂರಮ್ಮ ಮುಂದೆ ಅವನ ಪಕ್ಕದ ಕಛೇರಿಯ ಗುಮಾಸ್ತ ಗಂಗೂರಪ್ಪನ ಮನೆ ನಡುವಿನ ಸಣ್ಣ ಕೊಠಡಿಯಲ್ಲಿ ದಮ್ಮಡಿ, ಅವನ ಹೆಂಡತಿ ಚೆಲುವಿ, ಹುಲಿಯೂರ ವಾಸವಾಗಿದ್ದರು. ಹೊಸ ಬದುಕು ಹೊಸ ಸಂಸಾರ ಹೊಂದಣಿಕೆಗೆ ದೊಡ್ಡ ಘರ್ಷಣೆ ನಡೆದಿತ್ತು. ಪುರುಷತ್ವದ ಪ್ರಾಬಾಲ್ಯತೆ ದಮ್ಮಡಿಯದಾದರೆ ಆಗಲೆ ಹೊಸಗಾಳಿ ಬೀಸಿ ದೇಶಿ ಸಂಸ್ಕೃತಿಯ ಬೇರಗಳನ್ನ ಅಲುಗಾಡಿಸಿದ್ದರಿಂದ ಹೆಣ್ಣು ಅಬಲೆಯಲ್ಲ ಅವಳು ಗಂಡಿಗೆ ಸರಿಸಮಾನಳು ಎನ್ನುವಂತೆ ತನ್ನ ಅಸ್ಥಿತ್ವದ ಸವಾಲು ಹಾಕಿದ್ದಳು ಚೆಲುವಿ. ಇಬ್ಬರು ರಾತ್ರಿ ಅದ್ಯಾವಗ ಗುದ್ದಾಡುತ್ತಿದ್ದರೊ ಬೆಳಗಾ ಮುಂಜಾನೆ ಮಕ ಮೂರ್ಕಡಿಯಾಗಿರುತ್ತಿದ್ದವು. ಅವನು ಎದ್ದು ಕಛೇರಿಗೆ ಉಪವಾಸ ಹೊಗೋನು. ಇವಳು ಒಲಿಯೊಳಗಿನ ಬೂದಿಯನ್ನು ತಗೆಯದೆ ಮಲಗಿದವಳು ಗಡದ್ದಾಗೆ ಮಲಗಿ ಬಿಡುತ್ತಿದ್ದಳು. ಹುಲಿಯೂರ ಎದ್ದು ಮಾರಿ ತೊಕ್ಕೊಂಡು ಪಾಠಿಚೀಲ ಹೆಗಲಿಗೇರಿಸಿ ಉಪವಾಸ ಸ್ಕೂಲಿಗೆ ಹೋಗುತ್ತಿದ್ದ. ಎಷ್ಟೊ ಸಲ ತರಕಾರಿ ತಂಬೂರಮ್ಮನ ಸವತಿ ಲಲ್ಲಮ್ಮ "ಎಯ್, ಇವರೆಂತ ಜಗಳ ಮಾಡ್ತಾರೆ ನಮ್ಮವ್ವ ಪಾಪ ಸಣ್ಣ ಹುಡುಗ ಎಷ್ಟ ದಿನಾಂತ ಉಪಾಸ ಇದ್ದಿತು." ಅಂತ ಮರುಗಿ ಅವರ ಮನೆಗೆ ಕರ್‍ಕೊಂಡ ಹೋಗಿ ಉಣ್ಣಾಕ ಕೊಡುತ್ತಿದ್ದಳು. ಎಷ್ಟು ದಿನಾಂತ ಮಾಡ್ಯಾರು? ಅವರದೆ ಅವರಿಗೆ ಸಾಕಾಗಿರುವಾಗ ತರಕಾರಿ ತಂಬೂರಮ್ಮ ಕಿಂದೆ ಸ್ವಾಮಿಯ ಮೂರನೇ ಹೆಂಡತಿ. ಮೊದಲನೆಯವಳು ತೀರಿಕೊಂಡ ಮೇಲೆ ಲಲ್ಲಮ್ಮನ್ನ ಮದುವೆಯಾಗಿದ್ದ ಅಲ್ಲೆ ತರಕಾರಿ ಮಾರೊ ಮುಂದೆ ಬೇರೆ ಜಾತಿಯ

ತಂಬೂರಮ್ಮ ಗಂಟಬಿದ್ದು ಅವನ ಮನೆಯಲ್ಲೆ ಇದ್ದಳು. ಮೊದಲನೆ ಹೆಂಡತಿ ಮಗ ಸೀನ ತಾಯಿ ಇಲ್ಲದ ತಬ್ಬಲಿ, ಲಲ್ಲಮ್ಮ ರೊಟ್ಟಿ ಹಾಕಿದ್ರೆ, "ನಾನು ಮೆಟ್ರಿಕ್ ಓದ್ತಿನಿ ನಿದ್ದೆ ಮಾಡ್ಲಿ ಅಂತ ರೊಟ್ಟಿ ಹಾಕ್ತಿಯ" ಅಂತ ಜಗಳ ತಗೆಯೋನು ಅನ್ನ ಹಾಕಿಯ, "ಓದೊ ಮುಂದ ಹಸಿವಾಗಿ ಫೇಲಾಗ್ಲಿ ಅಂತ ಮಾಡ್ತಿಯಾ" ದಿನ ಇವೆ ಜಗಳಗಳು. ಇನ್ನೂ ಲಲ್ಲಮ್ಮಗೆ ಪಾಪಿ, ರಾಚ ಇಬ್ಬರು ಮಕ್ಕಳು. ತಂಬೂರಮ್ಮಗೆ ಕರಿಬಸವ ಒಬ್ಬನೆ. ಪಾಪಿ ಹೆಚ್ಚೂ ಕಮ್ಮಿ ಹುಲಿಯೂರನ ವಯಸ್ಸಿನವಳೆ ಆಗಿದ್ದರಿಂದ. ಅವನ ಜೊತೆಗೆ ಸಲುಗೆಯಿಂದಲೆ ಇದ್ದಳು. ಅವನ ಮನೆಯಲ್ಲಿ ಆಗುವ ಜಗಳಗಳಿಗೆ ಸಾಕ್ಷಿಯಾಗಿದ್ದರಿಂದ ಅವನ ಮೇಲೆ ಅನುಕಂಪ ತೋರಿಸಿ ಆಗಾಗ ಕದ್ದು ತಿನ್ನೋದಕೆ ತಂದುಕೊಟ್ಟು ಅವನಿಗೆ ಸಾಥ್ ನೀಡುತ್ತಿದ್ದಳು. ಮುಂದಿನ ಮನೆ ಕಾರಕೂನನ ಹೆಂಡತಿಗೆ ಮಕ್ಕಳೆ ಆಗಿರಲಿಲ್ಲಾ. ಅವಳು ಅಷ್ಟಕಷ್ಟೆ ಯಾರನ್ನು ಹಚ್ಚಿಕೊಳ್ತಿರಲಿಲ್ಲಾ.

ಅದು ಹೇಗೊ ಹುಲಿಯೂರನ ಸ್ಥಿತಿ ಅವನ ತಾಯಿಗೆ ಗೊತ್ತಾಗಿ, "ನನ್ನ ಮಗ ಸಾಲಿಕಲಿಲ್ಲಾಂದ್ರು ಪರವಾಗಿಲ್ಲ, ಉಪವಾಸ ಅವನ ಮನಿಯೊಳಗೆ ಸಾಯೋದು ಬೇಡಾ" ಹಠ ಮಾಡಿಂದ ಮುಂದಿನ ವರ್ಷವೆ ತೊಪುನಾಯ್ಕ ಅವನನ್ನ ಅಲ್ಲಿಂದ ಬಿಡಿಸಿ ದಾವಣಗೆರೆ ಹಾಸ್ಟೇಲಿಗೆ ಹಾಕಿದ. ಹುಲಿಯೂರ ಪರಿಸರ ಬದಲಾಗುತ್ತಿದ್ದಂಗೆ ಕಷ್ಟಕ್ಕೆ ಮೈಯೊಡ್ಡಿದ ಬಂಡೆಕಲ್ಲಿನಂತೆ ಕಷ್ಟಗಳನ್ನ ನುಂಗಿ ಕಷ್ಟಪಟ್ಟು ಓದಿದ. ಮೆಟ್ರಿಕ್ ಒಂದೆ ವರ್ಷಕ್ಕೆ ಮುಗಿಸಿ ಮುಂದೆ ಹೋದ. ಅಲ್ಲಿಯೂ ಪಾಸಾಗಿ ಮುಂದೊಂದು ದಿನ ಸಣ್ಣ ನೌಕರಿಯನ್ನು ಹಿಡಿದ. ಅವತ್ತು ಅವನಿಗೆ ಹಿಂದಿನ ಬದುಕ ಅರ್ಥವಾಗಿತ್ತು.

* * *

4. ಹನುಮಜ್ಜನ ಕಾಯಕ

ಕಳೆದುಹೋದ ಸಮಯ ಹುಡುಕುತ್ತ ಹನುಮಜ್ಜ ಗೊಂಡಜ್ಜಿಯಿಂದ ಭದ್ರಾನಾಯ್ಕ ತಾಂಡಕ್ಕೆ ಬರುತ್ತಿದ್ದ. ಹರಕು ಚೀಲದೊಳಗೆ, ರಂಕಿ, ಉಳಿ, ಗಲ್ಲಿಬಾನಿ, ಹದಮಾಡಿದ ಚರ್ಮ, ತುಂಡು ಟೈಯರು ಇಷ್ಟೆ ಆತನ ಆಸ್ತಿ. ಗುದ್ದಮನ ಗುಡಿಯ ಗಾರಿಕಟ್ಟೆಯೆ ಆತನ ಠಿಕಾಣಿ. ಅಲ್ಲೆ ಉತ್ತರ ದಿಕ್ಕಿಗೆ ಮುಖ ಮಾಡಿ ಕುಂತು ಯಾರಾದರು ಹರಿದ ಚಪ್ಪಲಿಗಳನ್ನ ಕೊಟ್ಟರೆ ರಿಪೇರಿ ಮಾಡುತ್ತಿದ್ದ. ಅಟ್ಟೆ ಸವೆದು ಮೆಟ್ಟಿಕೊಳ್ಳಾಕ ಬಾರದ ಜೋಡಿಗೆ ಸೋಲ ಹಾಕಿ ಮತ್ತೊಂದು ಮೂರು ತಿಂಗಳು ಬರುವಂತೆ ರಡಿ ಮಾಡುತ್ತಿದ್ದ. ಮುಂಜಾನೆ ಹೊತ್ತಾರೆ ಮಣ್ಣಿನ ಮಡಿಕೆ ಹಿಡಿದು "ಅವ್ವಾರ ಚಾ ಮಾಡಿದ್ರ ಹನಮ ಬಂದೀನಿ, ಒಂದು ತೊಟ್ಟು ಬಿಡ್ರವ" ಅಂತ ಎರಡು ಮೂರು ಕಾಯಂ ಮನೆಗಳ ಮುಂದೆ ನಿಂತು ಕೂಗಿ ಹಾಕಿಸಿಕೊಂಡು "ಮೇಷ್ಟ್ರ ಮನಿ, ಚಾ ಪಾಡಿತ್ತು. ಹಾಲು, ಪುಡಿ, ಬೆಲ್ಲ ಸರಿಯಾಗಿ ಹಾಕಿ ಮಾಡಿದ್ರು, ತೊಪುಅಪ್ಪಾರ ಮನಿಯಾಗ ಮಂದಿ ಜಾಸ್ತಿ ಹಂಗಾಗಿ ಆದು ನೀರ ನೀರಾಗಿತ್ತು." ಒಬ್ಬನೆ ಮಾತಾಡಿಕೊಂಡು ಸುಮ್ಮನಾಗುತ್ತಿದ್ದ. ಹನುಮಜ್ಜ ಅಂದ್ರೆ ಹುಲಿಯೂರನಿಗೆ ಏನೊ ಕುತೂಹಲ ರಂಕಿಯನ್ನ ಉಜ್ಜೊ ಕಲ್ಲಿನ ಮೇಲೆ ಒಂದು ಸಲ ರಮ್ssss ರಮ್ssss ಅಂತ ಉಜ್ಜಿ ಗಲ್ಲಿ ಬಾನಿಯೊಳಗೆ ತೋಯಿಸಿದ್ದ ಸತ್ತ ಎಮ್ಮೆ ಚರ್ಮವನ್ನ ಕರಕರ ಅಂತ ಕೊಯ್ದು ಮೂಗ ಹರಕಗಳಿಗೆ ಅಂಗುಷ್ಟ, ಬೆಳ್ಳಸಂದಿಪಟ್ಟಿ ಕಟ್ಟುತಿದ್ದ. ಎರಡು ಕಡೆಗೆ ಭದ್ರವಾಗಿ ಚಿಕ್ಕ ಮೊಳೆಗಳನ್ನು ಹೊಡೆದು ಮೆಟ್ಟುವವರ ಕಾಲಿಗೆ ಚುಚ್ಚದಂತೆ ಉಳಿಯಿಂದ ಚೆನ್ನಾಗಿ ಬಡಿದು ಒಳಗೆ ಸೇರಿಸುತ್ತಿದ್ದ. ಯಾರೊ ದಮ್ಮಡಿ, ಅಣಿ ಕೊಟ್ರೆ ತಗೊತಿದ್ದ. "ಲೇ ಹನುಮ ಸಂಜಿಕ ಮನಿ ಕಡಿ ಬಾ, ಬಾಡೂಟ ಐತೆ" ಅಂತ ಕರದು ಆತನ ಮಡಿಕೆಯೊಳಗೆ ಒಂದು ಮುದ್ದಿ, ಎರಡು ಮಾಂಸದ ತುಂಡು, ಆಟು ಸಾರು ಹಾಕಿದ್ರೆ ಅದನ್ನೆ ಅಮೃತದಂತೆ ಊಟ ಮಾಡುತ್ತಿದ್ದ. ಇನ್ಯಾರು ಒಣರೊಟ್ಟಿ ಚಟ್ನಿ ಕೊಡುತ್ತಿದ್ದರು. ಆದರೆ ಐವತ್ತರ ಗಡಿದಾಟಿರೊ ಹನುಮಜ್ಜನಿಗೆ ತಾಂಡದ ಮಂದಿ ಏಕವಚನದಲ್ಲಿ ಕರೆಯುವುದು ಹುಲಿಯೂರನಿಗೆ ಸರಿಕಾಣಲಿಲ್ಲಾ. ಅವನ ಸಣ್ಣ ವಯಸ್ಸಿಗೆ ಲೇ ಅನ್ನೊ ಆಲೋಚನೆ

ಬರಲಿಲ್ಲಾ. "ಹನ್ಮಜ್ಜ ಉಂಡ್ಯಾ" ಅಂತ ಹುಲಿಯೂರ ಕೇಳಿದರೆ, "ಆಯ್ತು ಅಪ್ಪಾರ" ಅಂತ ಹೇಳುತ್ತಿದ್ದ. "ಅಲ್ಲಾ ನಾನು ವಯಸ್ಸಿನೊಳಗೆ ಭಾಳ ಸಣ್ಣೋನು, ನನಗ್ಯಾಕ ನೀನು ಅಪ್ಪಾರ ಅಂತೀಯಾ?" ಹುಲಿಯೂರ ಕೇಳಿಯೆ ಬಿಟ್ಟ. "ಬುದ್ಧಿ ಈ ಸಂಸಾರದಾಗೆ ರೀತಿ ರಿವಾಜು ಅಂತೆ ಐತೆ, ನಾನು ಯಾರು ಇಕ ಇಲ್ಲೋಡಿ, ಸತ್ತ ಪ್ರಾಣಿಚರ್ಮ ಹದಮಾಡಿ ನಿಮ್ಮ ಪಾದರಕ್ಷೆ ಮಾಡುವವನು. ನೀವು ಕೊಟ್ಟ ಭಿಕ್ಷೆಯನ್ನು ಉಣ್ಣೋನು. ನಾನು ನಿಮಗೆ ಹಾಗೆಲ್ಲಾ ಮಾತಾಡಾಕ ಆದೀತೆ." ಅವ್ಯಕ್ತ ಶಬ್ಧಗಳಿಂದ ಏನೇನೋ ಹೇಳಿದ. ಹುಲಿಯೂರನಿಗೆ ಆಗ ಅವನ ಮಾತುಗಳು ಅರ್ಥ ಆಗಲೆ ಇಲ್ಲಾ. ಆದರೂ ಅವನ ತಲೆಯೊಳಗೆ ಎಲ್ಲೋ ಒಂದು ಕಡೆ 'ಯಾಕೆ ಹೀಗೆ?' ಎನ್ನುವ ಪ್ರಶ್ನೆ ಎದ್ದಿತ್ತು. ಹುಲಿಯೂರನ ಮನೆಯಲ್ಲಿ ಬ್ಯಾಟಿ ಕೊಯ್ದಾಗ ತುರಬೂರಿನ ದುರ್ಗ, ಮಾದರ ಚೆನ್ನ, ಗುಡದೂರ ಅದೆಂಗೊ ಸುದ್ಧಿ ತಿಳಿದು ಬಂದಿದ್ದರು. ತೊಪುನಾಯ್ಕ "ಲೇ ದುರ್ಗ, ಚೆನ್ನಾ, ಅಕ್ಕ ಆ ಮೂಲೆಯೊಳಗೆ ಕುಂದರ್ರಿ" ಅಂತೇಳಿ ತೆಂಗಿನ ಚಿಪ್ಪಿನೊಳಗೆ ಎರಡು ಮೂರು ತುಂಡುಗಳು ಆಟು ಸಾರು ಬಿಟ್ಟು ಎರಡೆರಡು ರೊಟ್ಟಿ ಹಿಡಿಸಿದ. ಪಾಪ ದುರ್ಗ, ಚೆನ್ನಾ, ಗುಡದೂರ ಸಿಕ್ಕಿದ್ದೆ ಶಿವ ಹಿಂದುಮುಂದು ನೋಡದೆ ಕಸದಲ್ಲೆ ಕುಂತು ಉಂಡು ಚಿಪ್ಪುಗಳನ್ನು ದೂರ ಬಿಸಾಡಿ ಎದ್ದು ಹೋದರು. ಹುಲಿಯೂರನಿಗೆ ಸಿಟ್ಟುಬಂತು. ಇವರ್‍ಯಾಕೆ ದುರ್ಗ ಚೆನ್ನಾ ಗುಡದೂರನಿಗೆ ಚಿಪ್ಪುಕೊಟ್ರು? ಅಷ್ಟೆ ಅಲ್ಲಾ ಭದ್ರಾನಾಯ್ಕನ ತಾಂಡದ ಥಾಲಿಯ ಲಸಣು ಬಂದ್ರು ದೂರ ನಿಲ್ಲಿಸಿ ರೊಟ್ಟಿ ಕೊಡ್ತಾರ, ಇವರು ಯಾವ ಸೀಮೆ ಮಂದಿ ಅಂತ ಗೊಂದಲದಲ್ಲಿದ್ದ.

ಹನ್ಮಜ್ಜ ಮಾತ್ರ ಯಾವದಕ್ಕು ತಲಿಕೆಡಿಸಿಕೊಳ್ಳದೆ ತಿಂಗಳ ಮಟ ತಾಂಡದೊಳಗೆ ವಸತಿ ಹೊಡಿತಿದ್ದ. ಬೇಸರ ಆದಾಗ ಸಿಂಗಾರಿ ಚಾದಂಗಡಿಗ ಹೋಗಿ "ಸಿಂಗಾರವ್ವ ಲೋಟಕ್ಕೆ ಚಾ ಬಿಡವ್ವ, ಗಂಟಲು ತೋಯಿಸ್ಕೊಂತಿನಿ" ಅಂತೇಳಿ ಅಂಗಲಾಚಿ ಚಾ ಕುಡಿತಿದ್ದ. ಸಂಜಿ ಮುಂದ ಕೊಂಗರ ದ್ಯಾಮನ ಅಂಗಡಿ ಮುಂದ ನಿಂತು "ದ್ಯಾಮಣ್ಣೋರ ಗಸಿ ಹೆಂಡ ಉಳಿದಿದ್ರ" ಅಂತ ರಾಗ ಎಳದು ಅವನು ಕೊಡುವ ಗಸಿ ಹೆಂಡಕುಡದು ಮಂದಿ ಸೇದಿ ಬಿಸಾಡಿರೊ ಕೊರಿಬೀಡಿಗಳನ್ನ ಆಯ್ದು ಇಟ್ಕೊಂಡಿರೋದ್ರಲ್ಲಿ ಒಂದನ್ನ ಸೇದಿ ಚಟಾನು ಬಗೆಹರಿಸಿಕೊಳ್ಳುತ್ತಿದ್ದ. ತಿಂಗಳಾದ ಮೇಲೆ ಮನಿಮನಿಗ ಹೋಗಿ, "ಅಪ್ಪಾರ ಮೆಟ್ಟ ಹೊಲದದ್ದು ಕಾಳು, ಅಕಡಿಕಾಳು ಕೊಡ್ರಿ" ಅಂತ ಕೇಳಿ ತಗೊಂಡ ಚಿಲದಾಗ ತುಂಬಿ ಹೊತ್ಕೊಂಡ ಹೋಗುತ್ತಿದ್ದ. ಹನುಮ ಹನುಮಜ್ಜ, ಹನ್ಮಂತ ಮಂದಿ ನಜರಿನೊಳಗೆ ಅವನು ಏನೆ ಇದ್ದರು ಕೆಲವು ಮನಿಗಳಲ್ಲಿ ಮೆಟ್ಟು ಹಾಕೊರೆ ಇರಲಿಲ್ಲಾ. ಆದರೂ ಭೂಮಿತಾಯಿ ಕೊಟ್ಟಿರುವುದರೊಳಗೆ ಅವನ ಪಾಲು ಇರಬಹುದು ಅಂತೇಳಿ, ಯಾರೊ ಪಾವು, ಸೇರು, ಅಚ್ಚೇರು ಜೋಳ, ರಾಗಿ, ನವಣೆ, ಸಾಮೆ ತಮ್ಮ ಶಕ್ತಿಗನುಸಾರ

ಕೊಡ್ತಿದ್ರು. ಇಲ್ಲಾ ಅನ್ನುವ ಶಬ್ಧ ಯಾರ ಬಾಯಲ್ಲೂ ಬರ್‍ತಾನೆ ಇರಲಿಲ್ಲಾ. "ದೇವರು ಕೊಟ್ಟಾನಪ್ಪ ಅದ್ರಲ್ಲೆ ನೀನು ತಗೊ" ಅನ್ನೋರೆ ವಿನಃ ಇಲ್ಲಿ ಅಂತ ಯಾರು ಹೊರಗೈಲೆ ಹೊಡಿತಿರಲಿಲ್ಲಾ. ಹನುಮಜ್ಜನೂ ತಾಂಡದೊಳಗೆ ತಾನು ಒಬ್ಬ ಎನ್ನುವಂತೆ ಬದುಕಿದ್ದ. ಹರಿದ ಅಂಗಿ, ಹರಿದ ಧೋತ್ರ, ಬಿಳಿ ಕೂದಲು ಕಪ್ಪು ದೇಹ ಹನುಮಜ್ಜನ ಚಿತ್ರ ಹುಲಿಯೂರನ ಸ್ಮೃತಿಪಟದಲ್ಲಿ ಅಚ್ಚೊತ್ತಿತ್ತು. ಅವನು ಯಾರು? ಸಂಸಾರ, ಮಕ್ಕಳು, ಯಾರಿಗೂ ತಿಳಿದಿರಲಿಲ್ಲಾ. ಗೊಂಡಜ್ಜಿಯಿಂದ ನಡೆದು ಬರುತ್ತಿದ್ದ ಅಷ್ಟೆ. ತನ್ನ ಕಾಯಕವನ್ನು ಅಚ್ಚುಕಟ್ಟಾಗಿ ಮಾಡಿ ಮುಗಿಸಿ ಹೊರಟು ಹೋಗುತ್ತಿದ್ದ.

ಆದರೆ ಹನ್ಮಜ್ಜ ಎಂಬ ಚರ್ಮ ಹದ ಮಾಡುವ ಮಾಂತ್ರಿಕ ತಾಂಡದ ಮಂದಿಗೆ ಮನೆಮಾತಾಗಿದ್ದ. ಸಣ್ಣೋರು, ದೊಡ್ಡೋರು, ಚಪ್ಪಲಿ ಇರೋರು, ಇಲ್ಲದವರು ಆತನ್ನ ಹತ್ತಿರದಿಂದ ನೋಡಿದ್ದರು. ಬಡತನದ ಭವಣೆ, ಸಾಮಾಜಿಕವಾಗಿ ಕುಬ್ಜನಾಗಿದ್ದ ಹನುಮಜ್ಜ ಹುಟ್ಟಿದ್ದೇ ತಪ್ಪಾ? ಗೊಂಡಜ್ಜಿಯ ರಸ್ತೆ ಆಚೆ ನಿಮ್ನ ವರ್ಗದ ಜನರು, ರಸ್ತೆ ಈಚೆ ಹೊಲೆಯರ ಕೇರಿ, ಅಂದರೆ ಗುಡಿಸಲುಗಳು, ಹಂದಿ, ನಾಯಿ, ಕತ್ತೆ, ಕೋಳಿ, ದನಗಳು ಮನೆ ಮುಂದೆ ಹೊಲಸು ಮಾಡುತ್ತ ಅಡ್ಡಾಡುತ್ತಿದ್ದವು. ಇಡೀ ಮಾದರಗೇರಿಯೆ ಒಂದು ಕೊಳಚೆ ಪ್ರದೇಶವಾಗಿತ್ತು. ದಾಡಿಬಿಟ್ಟ, ಕೂದಲು ತೆಗೆಯಲು ಕಾಯಕದವರೆ ನಿರಾಕರಿಸುತ್ತಿದ್ದರು. ಕಾರಣ ಅವರು ಹರಿಜನ, ಮುಟ್ಟಬಾರದು ಎನ್ನುವ ಸಾಮಾಜಿಕ ಜಿಜ್ಞಾಸೆಯಿಂದಾಗಿ ಹೇನು, ಸೀರು ತುಂಬಿ ಮಕ್ಕಳ ತಲೆಗಳಲ್ಲಿ ಹುಣ್ಣುಗಳಾಗಿ ಬದಬದ ಅನ್ನುತ್ತಿತ್ತು. ಅಸಹನೀಯ ಬದುಕನ್ನ ಸಹಿಸಿಕೊಂಡೆ ಮಂದಿ ಬದುಕಿತ್ತು. ನಿಮ್ನ ವರ್ಗದ ಮುಂದಿ ಎಷ್ಟು ಕ್ರೂರಿಯಾಗಿದ್ದರು ಎಂದರೆ ಮಾದರಗೇರಿಯಲ್ಲಿ ಕಮಟನ ತಂದೆ ಜಿಂಗಾಲು ತೀರಿಕೊಂಡಿದ್ದ. ಬೇರೆ ಬೇರೆ ಊರಿನ ಮಾದರಕೇರಿ ಬೀಗರು, ಸಹೋದರರು, ಸಂಬಂಧಿಗಳು ಬಂದಿದ್ದರು. ಬಂದವರು ಅಂಗಡಿಗೆ ಹೋಗಿ ಚಹಾ ತಿಂಡಿ ಕೇಳ್ತಾರ, ಸಾಮಾನು ಖರೀದಿ ಮಾಡ್ತಾರ ಅನಾವಶ್ಯಕವಾಗಿ ಅವರ ನೆರಳು ಬೀಳುತ್ತೆ, ಸಾಮಾನು ಮುಟ್ತಾರ ಅಂತೇಳಿ ಇಡಿ ಊರಿನ ಅಂಗಡಿಗಳೆ ಮುಚ್ಚಿದ್ದರು. ಇಂತ ನಿಕೃಷ್ಟ ಮಂದಿಯ ನಡುವೆ ಬದುಕಿರುವ ಹನ್ಮಜ್ಜ ಮನಸ್ಸನ್ನ ಕಲ್ಲು ಮಾಡಿಕೊಂಡಿದ್ದ. ಹನ್ಮಜ್ಜ ಒಮ್ಮೆ ಹುಲಿಯೂರನಿಗೆ ಒಂದು ಘಟನೆ ವಿವರಿಸಿದ. ಹುಲಿಯೂರ ದಾರವಾಡದ ಕರ್ನಾಟಕ ಕಾಲೇಜಿನಲ್ಲಿ ಬಿ.ಎ. ಮಾಡುತ್ತಿದ್ದ. ಅವನಿಗೆ ಈ ಜಾತಿ, ಧರ್ಮಗಳ ಮೇಲೆ ವಿಶ್ವಾಸವಿರಲಿಲ್ಲಾ. ಹಾಗಾಗಿಯೇ ಅವರಪ್ಪನ ಮೇಲೆ ಯಾವಾಗಲೂ ಸಿಟ್ಟು ಮಾಡಿಕೊಳ್ಳುತ್ತಿದ್ದ. ಮನುಷ್ಯನನ್ನು ಮನುಷ್ಯನನ್ನಾಗಿ ನೋಡಬೇಕು ಎಂದು ಎಷ್ಟು ಸಾರಿ ಹೇಳಿದರು. "ಲೇ, ತಮ್ಮ ನಾಕ ಅಕ್ಷರ ಏನು ಕಲಿತೆ ದೊಡ್ಡವ ಆದೆ ಅನ್ಕೊಬೇಡ. ನಾಕ ಮಂದಿಯೊಳಗ ಬದಕೀವಿ ಅವರ ಹಂಗೆನೆ ಇರಬೇಕು.

ಇಲ್ಲಾಂದ್ರ ನಮ್ಮನ್ನ ಕುಲದಿಂದ ಹೊರಗ ಹಾಕ್ತರ. ನಾನು ನಾಕಮಂದಿ ತಾವ ಅಡ್ಡಾಡಿನಿ ನಾಕ ವಿಷಯ ತಿಳಿದಿನ ಏನಪ" ಅನುಭವದ ಮಾತ ಹೇಳಿದ.

ಆದರೆ ಹನ್ಮಜ್ಜ, ಇದೆಲ್ಲದರ ನಡುವೆ ಒಗ್ಗಿಕೊಂಡಿದ್ದ. ಜಾತಿಯ ತೀವ್ರತೆ ತಾಂಡಕ್ಕಿಂತ ಅವನ ಸ್ವಂತ ಊರಲ್ಲಿ ಹೆಚ್ಚಾಗಿತ್ತು. ಲಿಂಗವಂತರು, ಕುರುಬರು, ಬಾರಿಕರು, ವಾಲ್ಮೀಕಿ, ಬ್ರಾಹ್ಮಣರ ಹಿಂಸೆಯ ನಡುವೆ ಪಾಪ ಈ ಲಮಾಣಿ ಮಂದಿದೇನು ಅಷ್ಟ ತೀವ್ರತೆ ಇರಲಿಲ್ಲಾ. ಆದರೆ ಹುಲಿಯೂರನ ಮನಸ್ಸಿಗೆ ಬೇಸರವಾಗಿತ್ತು. ಸಮಸಮಾಜದ ಕನಸು ಕಾಣುತ್ತಿದ್ದ ಅವನಿಗೆ ತನ್ನ ಸ್ವಂತ ಮನೆಯಲ್ಲೆ ಹೀಗೆ ಭಿನ್ನತೆ ಕಂಡರೆ ಹೇಗೆ? ಅವನಿನ್ನು ವಾಸ್ತವತೆಯನ್ನು ಅರ್ಥೈಸಿಕೊಂಡಿರಲಿಲ್ಲಾ, ಲೋಹಿಯಾ, ಅಂಬೇಡ್ಕರ, ಪೆರಿಯಾರ, ಮಾರ್ಗದ ಬಗ್ಗೆ ಚೂರುಪಾರು ಓದಿಕೊಂಡು ಬಸವಣ್ಣನ ಬಗ್ಗೆ ಕೇಳಿದ ಅನುಭವದ ಮೇಲೆ ಆದರ್ಶಸಮಾಜದ ಕನಸುಕಾಣತೊಡಗಿದ್ದ. ಕೇವಲ ಸಿದ್ಧಾಂತ ಬೋಧನೆಯಿಂದ ಬದಲಾವಣೆಯಾಗದು ಎಂಬ ಸತ್ಯ ಹನ್ಮಜ್ಜನ್ನ ನೋಡೆ ಅರಿವಾಗಿತ್ತು. ಶಿಕ್ಷಣ ಬೇರೆ ಸಮಾಜವೇ ಬೇರೆ. ಸಿದ್ಧಾಂತ ಓದಿಕೊಳ್ಳುವುದಕ್ಕೆ ಹೊರತು ಪ್ರಾಯೋಗಿಕತೆಯಲ್ಲಿ ತರುವುದು ಕಷ್ಟಸಾಧ್ಯ ಎನ್ನುವ ಮಾತು ಅರಿವಿಗೆ ಬಂದಿತ್ತು. ಅವನ ತಂದೆಯಂತು ಜ್ಞಾನಿ, ನಾಕು ಜನರಿಗೆ ತಿಳುವಳಿಕೆ ಹೇಳುವವನು ಪಂಚಾಯ್ತಿಯಲ್ಲಿ ನ್ಯಾಯದ ಪರ ನಿಲ್ಲುವವನು ಹೀಗೆ ಆಲೋಚನೆ ಮಾಡುತ್ತಿದ್ದಾನೆ ಎಂದರೆ ಸಮಾಜದ ಕಟ್ಟಳೆ ಎಷ್ಟು ನಿಕೃಷ್ಟವಾಗಿದ್ದಿರಬಹುದು ಎನ್ನುವುದು ಅವನ ಅರಿವಿಗೆ ಬಂತು.

* * *

5. ಮೊಂಡ ಭೀಮಣ್ಣನ ಭೆಟ್ಟಿಯೂ

ಹೆಗಲ ಮೇಲೆ ಒಂದು ವಸ್ತ್ರ ತಲೆಗೆಪಟಗ, ಬಗಲಿಗೆ ಜೋಳಿಗೆ, ಎಡಗೈಯಲ್ಲಿ ಬಿಳಿ ಕಬ್ಬಿಣದ ಕಡಗಗಳು, ಕೈಯಲ್ಲಿ ನಾಯಿ ಹೊಡೆಯಲು ಹಿಡಿದ ಕೋಲು. ಕೋಲಿಗೆ ಬಳೆಗಗಳನ್ನ ಬಡೆಯುತ್ತ ಯಾರಿಗೂ ಅರ್ಥವೆ ಆಗದ ಭಾಷೆಯಲ್ಲಿ ಭೀಮಣ್ಣ ಹಾಡು ಹೇಳುತ್ತಿದ್ದ. ಮನೆ ಮುಂದೆ ಬಂದು ನಿಂತ ಘಳಿಗೆಯಲ್ಲೇ ಮೊರದಲ್ಲಿ ನಾಕು ಕಾಳು ತಂದು ಸರಿದು ಮುಂದಕ್ಕೆ ಸಾಗು ಹಾಕುತಿತ್ತು ಮಂದಿ. ಭೀಮಣ್ಣ ಯಾರು? ಯಾವ ಪಂಗಡದವನು, ಯಾವ ಸೀಮೆಯವನು ಯಾರಿಗೂ ಗೊತ್ತಿಲ್ಲ, ಆದರೆ ಪ್ರತಿವರ್ಷ ಸರಿಯಾಗಿ ಒಕ್ಕಲಿಯಾದ ಮೇಲೆ, ರಾಶಿ ಮುಗಿಸಿ ಮಂದಿ ಕಾಳು ಕಡಿಯನ್ನು ಮನೆಯೊಳಗೆ ತುಂಬಿಸುವ ಸಮಯಕ್ಕೆ ಸರಿಯಾಗಿ ಒಕ್ಕರಿಸುತ್ತಿದ್ದ. ಬಹಳಷ್ಟು ಮನೆಗಳಲ್ಲಿ ಭೀಮಣ್ಣಗೆ ಬಹಳ ಹೊತ್ತು ನಿಲ್ಲಿಸುತ್ತಿರಲಿಲ್ಲಾ. ಯಾಕಂದ್ರ ಮೊಂಡ ಭೀಮಣ್ಣ ಬಿಕ್ಷೆ ಕೊಡಲಿಲ್ಲಾಂದ್ರೆ ಮನೆಯ ಮುಂದೆ ವಾಂತಿ ಮಾಡುತ್ತಿದ್ದ ಎಂಬ ವಾಡಿಕೆ. ಇನ್ನೊಂದು ಹೆಸರೆ ಹೇಳುವಂತೆ ಮೊಂಡ ಕೊಡುವವರೆಗೆ ಹೊಸಲಿ ಪಕ್ಕದ ಕಟ್ಟೆ ಪಕ್ಕ ಕುಕ್ಕರಗಾಲಲ್ಲಿ ಕೂತು ಏನೊ ಪದ ಹೇಳುತ್ತಿದ್ದ. ಅವನ ಅಸಂಬದ್ಧ ಹಾಡು ತಲಿನೋವು ತರತಿತ್ತು. ಹಾಗಾಗಿಯೆ ಮೊದಲೆ ಸಾಗು ಹಾಕಿದ್ರೆ ಸಾಕು ಅಂತೇಳಿ ಜನ ಜೋಳಿಗೆಗೆ ನಾಕ ಕಾಳು ಜೋಳ ಸುರುವಿ ಮುಂದಕ್ಕೆ ಕಳುಹಿಸುತ್ತಿದ್ದರು. ಭೀಮಣ್ಣಂದು ಅಂತಹದ್ದೇನು ಬೇಡಿಕೆ ಇಲ್ಲ, ನಾಕು ಕಾಳು ಜೋಳಿಗೆಗೆ ಬಿದ್ದರೆ ಸಾಕು ತೃಪ್ತನಾಗಿ ಮುಂದೆ ಮತ್ತೊಂದು ಮನೆಗೆ ಹೋಗಿ ನಿಲ್ಲುತ್ತಿದ್ದ. ಅವನ ಹಿಂದೆ ಈ ಖಾಲಿಪಲಿ ಹುಡುಗರ ದೊಡ್ಡ ಹಿಂಡೆ ಇರುತ್ತಿತ್ತು. ಒಮ್ಮೊಮ್ಮೆ ಹುಡುಗರನ್ನ ಹೆದರಿಸುವ ಕೆಲಸವನ್ನು ಮಾಡುತ್ತಿದ್ದ. ಆದರೆ ಅವನ ಹಾಡಿಗೆ, ಶಬ್ಧಕ್ಕೆ ಪ್ರತಿಕ್ರಿಯೆ ಕೊಡುತ್ತಿದ್ದವುಗಳೆಂದರೆ ಇಡಿ ಊರ ನಾಯಿಗಳು ಅವನ ಹಾಡಿಗೆ ತಕ್ಕನಾಗಿ ಅವು ಕೂಡ "ಊ" ಅಂತೇಳಿ ಘಳಿಡುತ್ತಿದ್ದವು. ಒಮ್ಮೊಮ್ಮೆ ಬೆರಕಿ ನಾಯಿಗಳು ಮನೆ ಮುಂದೆ ತನ್ನ ಪ್ರತಿಸ್ಪರ್ಧಿ ಬಂದ ಎಂಬಂತೆ ಜೋರು ಬಾಯಿ ಮಾಡಿ ಬೊಗಳಿ ಹೆದರಿಸಲು ನೋಡುತ್ತಿದ್ದವು. ಆದರೆ ಮೊದಲೆ ಮೊಂಡ ಭೀಮ

ಅವನನ್ನ ಹೆದರಿಸಲು ಸಾಧ್ಯನೆ? ನಾಯಿಗಳು ಅವನ ಹೊಡೆತಕ್ಕೆ ಕುಂಯ್ಯೊ, ಮರ್ರೊ ಅನ್ನುತ್ತ ಕಾಲು ತೆಗೆಯುತ್ತಿದ್ದವು. ಭೀಮಣ್ಣ ತನ್ನ ಹಳೆಯ ಕೋಟು ಹಲ್ಲುದುರಿದ ಬೊಚ್ಚಬಾಯಿ, ಕಪ್ಪು ಮೀಸೆಯ ನಡುವೆ ನಕ್ಕು, ಸಣ್ಣ ಹುಡುಗರಿಗೆ ಅಂಜಿಸುತ್ತ ಯಾರು ಹೊಲ ಊಳುತ್ತಾರೊ ಆ ಮನೆಯೊಳಗೆ ಹೋಗಿ ಕಾಳು ಕೇಳುತ್ತಿದ್ದ. ರಾಗಿ, ಜೋಳ, ನವಣಿ, ಸಾಮೆ, ದೊಡ್ಡ ಒಕ್ಕಲಿದ್ದರೆ ಅವರ ಮನೆಯಲ್ಲಿ "ಅಪ್ಪಾರ, ಮೆಣಸಿನಕಾಯಿ, ತೊಗರಿಬೇಳೆ, ಕೊಟ್ರೆ ಪಾಡಿತ್ತು" ಅಂತ ಬೇಡಿಕೆಯಿಡುತ್ತಿದ್ದ. ಪಾಪಿ ಪರದೇಶಿಗಳು ಭೂಮಿಯ ಮೇಲೆ ಬದುಕುವುದಕ್ಕೆ ಹಕ್ಕಿದೆ ಎನ್ನುವ ಮನೋಧರ್ಮ ಉಳ್ಳವರು ಒಂದು ಹಿಡಿ ಒಣಗಿದ ಮೆಣಸಿನಕಾಯಿ, ಪಾವಿನಷ್ಟು ತೊಗರಿಬೆಳೆಯನ್ನು ದಾನ ಮಾಡಿ ಪುಣ್ಯ ಕಟ್ಟಿಕೊಳ್ಳುತ್ತಿದ್ದರು.

ಹುಲಿಯೂರ ಮೊಂಡರಭೀಮಣ್ಣನನ್ನ ತನ್ನ ಬಾಲ್ಯದಿಂದಲೆ ನೋಡುತ್ತ ಬೆಳೆದಿದ್ದ ಅವನು ದೊಡ್ಡವನಾಗುತ್ತಿದ್ದಂತೆ ಆಲೋಚನೆಗಳು ಬೆಳೆಯತೊಡಗಿದವು. ಯಾಕೆ ಮೊಂಡರಭೀಮಣ್ಣ ಭಿಕ್ಷೆ ಬೇಡುತ್ತಾನೆ? ತಾಯಿ ಜಾನಿಬಾಯಿಗೆ ಕೇಳಿದ. "ಯಾಕವ್ವ ಭೀಮಣ್ಣನ ಹೊಲ ಇಲ್ವೇನು? ಮೂಡಲ ಸೀಮೆಯಿಂದ ಇಲ್ಲಿವರಿಗ ಬಂದು ಪಾಪ ಒಂದುಪಾವೊಅಚ್ಚೇರು ಜೋಳಕ್ಕೆ ಮನಿಮನಿ ಅಲದಾಡುತ್ತಾನೆ" ಉತ್ತರಕ್ಕಾಗಿ ಕಾದ. "ಮಗ ಈ ದೇಶದೊಳಗೆ ಇಂತ ಮಂದಿ ಬಹಳ ಅದಾರ. ಜಮೀನಿಲ್ಲ, ಮನಿಇಲ್ಲ, ಒಂದ ಲೆಕ್ಕಕ್ಕ ಹೇಳಬೇಕು ಅಂದ್ರ ಅಸ್ತಿತ್ವಾನೆ ಇಲ್ಲ. ಆದರೂ ಭೂಮಿ ಮೇಲೆ ಮನುಷ್ಯ ಆಗಿ ಹುಟ್ಟಿದ ಮೇಲೆ ಬದುಕಲೇ ಬೇಕಲ್ಲ ಎನ್ನುವ ಒತ್ತಾಯದ ಬದುಕನ್ನ ಬದುಕಿರುವವರು ಕೋಟಿ ಜನರಿದ್ದಾರೆ. ಎಲ್ಲೊ ಹುಟ್ಟಿ, ಎಲ್ಲೊ ಬೆಳೆದು, ಎಲ್ಲೊ ಅಲೆದಾಡಿ ಯಾರೊ ಕೊಟ್ಟ ಅರೆಬರೆ ಹೊಟ್ಟೆಗಾಗುವ ಕೂಳನ್ನ ತಿಂದು ಬದುಕಿರುವ ಮಂದಿ ಪೈಕಿ ಭೀಮಣ್ಣನೂ ಒಬ್ಬಾಂವ. ಇಂತ ಜನರ ಬಗ್ಗೆ ಚಿಂತೆ ಮಾಡೋರು ಯಾರು? ಇವರನ್ನ ನೀ ಯಾರು ಅಂತ ಸರ್ಕಾರ ಕೇಳಾಕಿಲ್ಲ, ಅಧಿಕಾರಿ ಕೇಳಲ್ಲ, ಜನ ಪ್ರತಿನಿಧಿ ಕೇಳಲ್ಲ. ಇವರು ಯಾರಿಗೆ ಬೇಕಾದವರು ಅನ್ನೋದು ಗೊತ್ತಿಲ್ಲ. ಆದರೂ ನಮ್ಮೊಳಗೆ ಮನುಷ್ಯ ಜನ್ಮ ತಳೆದಿರುವ ಜೀವಿಗಳು ಬದುಕಿದ್ದಾವೆ ಅಂತ ಮರುಕ ಪಡುವವರು ನಮ್ಮಂತ ಅಲ್ಪಸ್ವಲ್ಪ ಮಂದಿ. ನಾವು ಮಾತ್ರ ಅಲ್ಪ ಸ್ವಲ್ಪ ಜಮೀನು ಮಾಡಿಕೊಂಡು ನಾಕು ಕಾಳು ಕಡಿ ಬೆಳೆದು ಆರಾಮದಿಂದಿರುವವರು" ಅವ್ವನ ಮಾತುಗಳು ಸೂಕ್ಷ್ಮವಾಗಿದ್ದವು, ಹುಲಿಯೂರನ ಅಂತರಾಳದಲ್ಲಿ ಅಲ್ಲೋಲಕಲ್ಲೋಲಗೊಳಿಸಿದ್ದವು. ಮೌನಿಯಾದ, ಈ ಜನ ಯಾಕೆ ದುಡಿಯಬಾರದು,? ದುಡಿಯಲಿಕ್ಕೆ ಅವಕಾಶ ಬೇಕಲ್ಲ. ಮನಸ್ಸಿನೊಳಗೆ ಯಾಕೊ ಒಂದು ರೀತಿಯ ಆಲೋಚನೆಗಳು ಅವನನ್ನ ಹೈರಾಣಗೊಳಿಸತೊಡಗಿದವು. ಮನುಷ್ಯ ಸಹಜ ಸಂಬಂಧಗಳ ಸೂಕ್ಷ್ಮವಾದ ಎಳೆಗಳು ಎಲ್ಲೊ ತುಂಡಾಗಿವೆ ಅನಿಸಿತು. ಇಲ್ಲದಿದ್ದರೆ ಯಾಕೆ ಕೆಲವರು ಮಾತ್ರ ಉಳ್ಳವರು ಮತ್ತೆ ಕೆಲವರು

ನಿರ್ಗತಿಕರು. ಅವನಿಗೆ ಆ ಸಮಯಕ್ಕೆ ಗೊತ್ತಿರುವ ಉಳ್ಳವರು, ಶ್ರೀಮಂತರು ಅಂದರೆ ಸಂಸಾಪುರದ ಜಯದೇವಪ್ಪ. ಯಾಕಂದ್ರ ಜಯದೇವಪ್ಪಂದು ಖುದ್ದು ಮೂವತ್ತು ಎಕ್ಕರೆ ಐನಾತಿ ಜಮೀನಿತ್ತು. ಸಂಸಾಪುರದಲ್ಲಿಯೇ ದೊಡ್ಡ ಅಂಗಡಿ, ಸಾಲದಕ್ಕೆ ಒಬ್ಬಳೆ ಮಗಳು ಹಿಂದಿಲ್ಲ ಮುಂದೂ ಇಲ್ಲ. ಬಡ್ಡಿ ಸಾಲದ ಬಡ್ಡಿ ಕೊಟ್ಟು ಸಂಪಾದಿಸಿದ ಬಂಗಾರದ ನಗಾನಾಣ್ಯಗಳು ಜಗ್ಗಿ ಇದ್ದವು. ಹಂಗಾಗಿ ಮಂದಿ ಬಾಯಿಯೊಳಗೆ ಜಯದೇವಪ್ಪನದೇ ಮಾತುಗಳು. ಅದ್ಯಾವದೊ ಕಡೆಯಿಂದ ಲಬ್ಬೆ ಅನ್ನೊ ಮುಸ್ಲಮಾನ ಬಂದು ಕಿರಾಣಿ ದುಕಾನ್ ಆರಂಭಿಸಿದ ನಂತರ ಲಬ್ಬೆನ ಅಂಗಡಿ ಅಂತ ಮಂದಿ ಅವನ ಕಡಿಗ ವಾಲತೊಡಗಿದರು. ಜಯದೇವಪ್ಪನ ಅಂಗಡಿಗೆ ಮಂದಿ ಕಮ್ಮಿಯಾದರು. ನಂತರ ನೂರು ಎಕ್ಕರೆ ಜಮೀನು ಉಳ್ಳ ಖಾದರ್ ಸಾಬಿ, ಉಳಿದವರು ಅಷ್ಟಕಷ್ಟೆ. ಹುಲಿಯೂರನ ಆಲೋಚನೆಯು ಅಲ್ಪಮಟ್ಟದಲ್ಲಿತ್ತು. ಅನುಭವದ ವಲಯವೂ ವಿಸ್ತಾರಗೊಂಡಿರಲಿಲ್ಲಾ. ಅವನು ನೋಡಿದ, ಕೇಳಿದ ಪ್ರದೇಶಗಳು, ಬೆಟ್ಟಿಯಾದ ಜನರಾದರೂ ಯಾರು? ಅವನ ತಾಯಿ ತೌವರುಮನೆ ಕಾಕಂಬಿಪುರ ಆ ಊರಿಗೆ ನಡೆದು ಹೋಗುವಾಗ ಸಿಗುತ್ತಿದ್ದ ಮಟಿಕೇನಹಳ್ಳಿ, ಕೊರಚರದೊಡ್ಡಿ, ಕಾಡಲ್ಲಿಪುರ ದಾಟಿದರೆ ಸಿಗುವುದೇ ಕಾಕಂಬಿಪುರ. ಐದಾರು ಕಿಲೋಮೀಟರ್ ಒಮ್ಮೊಮ್ಮೆ ಮಧ್ಯಾಹ್ನ ನಡೆದು ಬಂದು ಮಾಡುತ್ತಿದ್ದರು. ಅವನಿಗೆ ತಿಳುವಳಿಕೆ ಬಂದಾಗ ಮಂದಿ, "ಲೇ ದಾವಣಗೇರಿಗೆ ಹೋದ್ರ ಮಂದಿ ಚಪ್ಪಲಿ ಅಲ್ಲಲ್ಲೇ ಬಿಸಾಕಿರ್ತಾರ" ಅಂತ ಹೇಳಿದ್ದ ಕೇಳಿ ದಾವಣಗೇರಿ ಅನ್ನೊ ಮಾಯಾನಗರಿಯ ಬಗ್ಗೆ ಅವನ ಕನಸುಗಳು ಚಿಗುರಿದ್ದವು. ಆ ಊರನ್ನ ನೋಡಿದ್ದೆ ಅವನು ಬೆಳೆದು ದೊಡ್ಡವನಾದ ಮೇಲೆ. ಹಾಗಾಗಿಯೆ ಅವನ ಸೀಮಿತ ಆಲೋಚನಾವಲಯ ಚಿಂತನೆ ಮಾಡುತ್ತಿತ್ತು. ಹಾಗಾಗಿಯೇ ಮೊಂಡರ ಭೀಮಣ್ಣನಂತಹ ಒಬ್ಬ ಸಹಜ ಮನುಷ್ಯ ಅಸಹಜವಾಗಿ ಕಾಣುತ್ತಿದ್ದ. ಭಿಕ್ಷೆ ಕೊಡದಿದ್ದರೆ ವಾಂತಿ ಮಾಡಿಕೊಳ್ಳುವ ಭ್ರಮೆಯನ್ನು ಹುಟ್ಟಿಸಿ ಕಾಲು ನೀಡುವವರೆಗೆ ನಿಂತ ಜಾಗ ಬಿಟ್ಟು ಕದಲದೆ ಎದುರಾಳಿ ಏನು ಬೇಕಾದ್ದು ಹೇಳಿದರು, ಬೈದರು ಜಪ್ ಎನ್ನದೆ ಮೊಂಡುತನದಿಂದ ಕಾಡಿಬೇಡಿ ಭಿಕ್ಷೆ ಪಡೆಯುವವನ ಮಜಬೂರಿಯದಾರೂ ಏನು? ಎನ್ನುವ ಕೌತುಕ. ಭೀಮಣ್ಣ ನೆನಪಾಗಿ ಹುಲಿಯೂರನ ಮನದಾಳದಲ್ಲಿ ಹಾಗೆ ಒಂದು ಹೆಮ್ಮರವಾಗಿ ಉಳಿದು ಹೋದ ಇದ್ದಕಿದ್ದ ಹಾಗೆ ಭೀಮಣ್ಣ ಭದ್ರನಾಯ್ಕನ ತಾಂಡಕ್ಕೆ ಬರುವುದು ನಿಂತುಹೋಯಿತು. ಬಹುಶಃ ಭೀಮಣ್ಣ ಶಿವನಪಾದ ಸೇರಿರಬೇಕೆಂದು ಮಂದಿ ಮಾತಾಡಿಕೊಂಡರು.

* * *

6. ಯಾಸಗಾರ ರಾಮಣ್ಣನೊ ಮಹಾಭಾರತವೂ

ದ್ರೌಪದಿ, ಯುಧಿಷ್ಠರ, ಭೀಮ, ಅರ್ಜುನ ಯಾವಾಗ ಅವತರಿಸಿದರೂ ಮಂದಿ ಎಲ್ಲಾ ಹೈರಾಣು. ಆದರೆ ಮಹಾಕಾವ್ಯದ ಈ ಪಾತ್ರ್ರಗಳು ಆರ್ವಿಭವಿಸಿ ಭೂಮಿಯ ಮೇಲೆ ಹುಲ್ಲು ಮಾನವರಂತೆ ಅಡ್ಡಾಡಲೂ ಚಿಕ್ಕವರು, ದೊಡ್ಡವರೆಲ್ಲಾ ಅವರ ಹಿಂದೆ ಮನೆಮನೆಗೆ ಹೋದಲಲೆಲ್ಲಾ ಹೋಗಿ "ಅಗ್ರಜ ಪಾಂಚಾಲಿಯುಮಾಡಿರುವ ಶಪಥ ಇಡಿ ಕುರುವಂಶವನ್ನೇ ಸರ್ವನಾಶಗೊಳಿಸೀತು ಎಂಬ ಶಂಕೆ ನನ್ನದು" ಭೀಮ ಜಿಗಿದು ಡೈಲಾಗ್ ಹೇಳಿದರೆ ಸಣ್ಣ ಹುಡುಗರು ಗಾಬರಿಯಾಗಿ ಓಡುತ್ತಿದ್ದರು. "ಸಹೋದರ ಭೀಮ ಚಿಂತಿತನಾಗುವೆ ಏಕೆ ಎಲ್ಲವನ್ನು ಬಲ್ಲ ವಾಸುದೇವ ಜಗತ್ತಿನ ನಿಯಮವನ್ನು ಅರಿತವನು ಏನೇ ಆದರೂ ಅವನೆ ಕಾರಣಕರ್ತನು ನೀನು ಹೀಗೆ ವಿವಶನಾಗದಿರು." ಧರ್ಮರಾಯ ಡೈಲಾಗ್ ಹೊಡೆದಾಗ ಹುಡುಗರೆಲ್ಲಾ ಚಪ್ಪಾಳೆ, ಹಾರ್ಮೋನಿಯಂ ನುಡಿಸುವವನು, ತಬಲದವನು ಅದಕ್ಕೆ ಸರಿಯಾಗಿ ಒಂದು ಕಂದಪದ್ಯವನ್ನು ಹಾಡಿದರೆ ಒಂದು ಮನೆ ಮುಗಿಯಿತು. ಮುಗಿಯುವವರೆಗೆ ಕಾಯುತ್ತಿದ ಮನೆಯೊಡತಿ ಕಾಳು ತಂದು ಜೋಳಿಗೆಗೆ ಸುರಿದ ಮೇಲೆಯೇ ಮತ್ತೊಂದು ಮನೆಗೆ ಪಯಣ. ಇಲ್ಲದಿದ್ದರೆ ದ್ರೌಪದಿ ಸಮೇತ ಅವರದ್ದು ಅಲ್ಲೇ ಠಿಕಾಣಿ. ಯಾಸಗಾರರಾಮಣ್ಣ ಅವನಹೆಂಡತಿ ಸಹೋದರರು, ಜರಿಸೀರೆಗಳನ್ನು ಪೌರಾಣಿಕದ ಭೂಷಣಗಳನ್ನಾಗಿ ಧರಿಸಿ ದಿಟ್ಟವಾಗಿಯೇ ಊರೂರು ಅಲಿದು ಕಾಳು ಕೇಳುತ್ತಿದ್ದರು. ಒಮ್ಮೆ ಹಾಕಿದ ಪಾತ್ರಗಳನ್ನು ಮತ್ತೊಮ್ಮೆ ಹಾಕುತ್ತಿರಲಿಲ್ಲಾ. ಪ್ರತಿವರ್ಷ ಸುಗ್ಗಿಯ ಸಮಯಕ್ಕೆ ಸರಿಯಾಗಿ ಕಾರ್ತಿಕ ಮಾಸ ಮುಗದ ಮೂಡಣಧಿಕ್ಕಿಗೆ ಗಾಳಿಬೀಸ್ತು ಅಂದರೆ ಮಂದಿಮತ್ತೊಬ್ಬರ ದನದಕೊಟ್ಟಿಗೆಯಿಂದ ಕಣಬಳಿಯೋದಕ್ಕೆ ಸಗಣಿಕದಿತಿದ್ದರು. ಸಾಲದಕ್ಕೆ ತಿಪ್ಪೆಗೆ ಎಸೆದ ಸಗಣಿಯನ್ನು ನೋಡದೆ ಎತ್ತಿಬಿಡುತ್ತಿದ್ದರು. ಎರಡೆರಡು ಬರ್ಲಗಳು, ಹುಲ್ಲಾಗಿರೊ ಕಣಗಳಲ್ಲಿ ಸಲಿಕಿಯಿಂದ ಹುಲ್ಲಿನ ಚೆಂಡು, ಕಲ್ಲುಗಳು ಮೇಲೆಳದಂಗೆ ದಪ್ಪನೆ ರಾಡಿ ನೀರು ಬಿಟ್ಟು ಕಣ ಅಣಿಗೊಳಿಸಿ ರೋಣಗಲ್ಲಿರುವವರು ತಿಂಗಳವರೆಗೆ ಮೊದಲು ಸುಂಕವಿರುವ ಚೋಳವನ್ನ ಒಕ್ಕಿದ

ಮೇಲೆ ರಾಗಿ ಹುಲ್ಲು, ಅದಾಗುತ್ತಿದಂಗೇಯ, ನವಣೆ, ಸಾಮೆ, ಹುರಳಿ ಹೇರು ತಂದು ರೋಣಗಲ್ಲು ತಿರುಗಿಸಿದರೆ ಕಟ್ಟಕಡೇಯದಾಗಿ ತೊಗರಿಪುಳ್ಳಿ. ಹಿಂಗೆ ರೈತ ತನ್ನ ಪಾಡಿಗೆ ತಾನು ತೊಡಗಿಕೊಂಡ ಸಮಯದಾಗ ಯಾಸಗಾರ ರಾಮಣ್ಣ, ಅವನ ತಮ್ಮ ಆಂಜನೇಯ ಅವನ ಹೆಂಡತಿ ಬಿಕ್ಕಲುಬೀರಿ, ರಾಮಾಂಜನೇಯ, ಮುಂತಾದ ಕುಟುಂಬದ ಸದಸ್ಯರೆಲ್ಲ ಒಮ್ಮೆ ರಾಮಾಯಣದ ರಾವಣ, ಸೀತ, ಲಕ್ಷ್ಮಣರ ಜೊತೆಗೆ ಆಂಜನೇಯನ ಯಾಸ ಹಾಕಿದ್ರೆ, ಸೂರ್ಪನಕಿ, ರಾವಣ ಶೂರ, ಮುಂದ ವಾಲಿಸುಗ್ರೀವ ಪಾಲ್ಟ ಹಾಕ್ಕೊಂಡು ಊರಸುತ್ತರಿತಿದ್ರೆ ಹಿಂದೆ ಹಿಂಡ ಹುಡುಗರು, ನಾಯಿಗಳು ಬೆನ್ನು ಬೀಳುತ್ತಿದ್ದವು. "ಎಲೆ ಆಂಜನೇಯ ಲಂಕೇಗೆ ಹೋದ ವಿಷಯವೇನಾಯಿತು? ನನ್ನ ಸೀತೆ ಎಲ್ಲಿಯಾದರೂ ಕಂಡಳೆ" ರಾಮನ ಪಾರ್ಟ್ ಮಾಡಿದ ರಾಮಾಂಜನೇಯ ಹೇಳಿದರೆ ಹನುಮಂತನ ವೇಷಗಾರ ರಾಮಣ್ಣ, "ಪ್ರಭು ಸೀತಾಮಾತೆಯಾದರೂ ಅಶೋಕವನದಲ್ಲಿ ಒಬ್ಬಂಟಿಯಾಗಿ ರಾಮನಾಮದ ಜಪ ಮಾಡುತ್ತಿರುವಳು. ತಾಯೆ, ದುಃಖಿತಳಾಗದಿರು ಶ್ರೀರಾಮ ಪ್ರಭುವು ವಿಷಯವನ್ನು ತಿಳಿದೊಡನೆ ಕಪಿಸೈನ್ಯದೊಂದಿಗೆ ಲಂಕೆಗೆ ಬಂದೆಬರುವನು ಎಂದು ಮಾತೆಯ ದುಃಖವನ್ನು ಕಡಿಮೆ ಮಾಡಿ ಬಂದಿರುವೆ" ಎನ್ನುತ ಹಾರ್ಮೋನಿಯಂನಲ್ಲಿ ಕಂದಪದ್ಯವನ್ನು ಹಾಡಿದನೆಂದರೆ ಮನೆಯ ಒಳಗಿಂದ ಹೆಂಗಸರು ಮರದೊಳಗೆ ಕಾಳು ತಂದು ಸುರಿಯುತ್ತಿದ್ದರು.

ಹುಲಿಯೂರ ಆವಾಗ ಏಳೆಂಟು ವರ್ಷದವನು. ಈ ಯಾಸಗಾರರು, ಮಕಕ್ಕೆ ನೀಲಿ ಬಣ್ಣ ಬಳಿದು ಅದಕ್ಕೆ ತಕ್ಕನಾಗೆ ಆಭೂಷಣಗಳನ್ನು ತೊಟ್ಟು, ಬಿಲ್ಲು ಗದೆಯನ್ನು ಹಿಡಿದು ಪಾತ್ರದೊಳಗೆ ಪ್ರವೇಶಿಸಿ ಆಡುವ ಐದುಹತ್ತು ನಿಮಿಷದ ಪೌರಾಣಿಕಪ್ರಸಂಗಗಳಿಂದಲೇ ಹೆಚ್ಚು ಕಡಿಮೆ ಪ್ರಭಾವಿತರಾಗುತ್ತಿದ್ದರು. ಸಾಲಿಗ ಹೋಗೋ ಹುಡುಗರು, ದನ ಮೇಯಿಸೋದಕ್ಕೆ ಹೋಗುವವರು, ಕೂಲಿಗೆ ಗಡಾನೆ ಹೋಗಬೇಕಾದವರೆಲ್ಲರು ಯಾಸಗಾರರ ಹಿಂದೆ ಮನಿಮನಿಗೆ ಸುತ್ತುತ್ತಿದ್ದರೆ ಅವರನ್ನ ಕರಿಯಾಕ ತಂದೆ ತಾಯಿಗಳು ಸಾಲು ಹಚ್ಚಿದ್ದರು. "ಏಯ್, ನಮ್ಮ ಬೀರ ಎಲ್ಲಲೇ, ನಮ್ಮ ಸಾಮಿ, ಸಿದ್ನಿಂಗಿ, ಸಾವಿ, ಹನಮಿ, ಚೊಂಚ, ಡಬರ, ಚಡ್ಡಿ, ಸೌಟು, ಕೊಳಿಕಳ್ಳ, ನಿಗರ, ಗದಿಯಾ, ನೋಳಿಯಾ, ಚುಟ್ಟಾ, ಮತಾಪು," ಹಿಂಗೆ, ಹೆಸರು, ಅಡ್ಡಹೆಸರು, ಉದ್ದಹೆಸರುಗಳಿಂದ ಕರಿದರೆ ಅವರು, ಹೋಗಾಕ ಮನಸ್ಸಿಲ್ಲದೆ, "ಬರ್ತೀನಿ ಹೋಗು" ಅಂತ ಹುಡುಗರ ನಡಕ್ಕೆ ಸರಿಯೋರು. "ಕೂಲಿಗ ಹೊತ್ತಾತ ಬಾರ ಹಾಟ್ಗಾಳ" ಅಂತಂದು ಅವರ ತಾಯಂದಿರು, ಅಂಗಿಹಿಡಿದು ಜಗ್ಗಿ ಬೆನ್ನ ಮೇಲೆ ಎಲ್ಡು ಬಾರಿಸಿ ದರದರ ಎಳ್ಕಂಡು ಹೋಗೋರು. ಇನ್ನು ಕೆಲವರು ಕೈಗ ಸಿಗದಂಗೆ ಒಟಕಿತ್ತ ಬಿಡೋರು "ನೀ ಸಿಗು ನನ ಕೈಯಾಗ, ಚಣ್ಣದಾಗ ಹೇತ್ಕೊಬೇಕು ಹಂಗ ಬಿಗಿತೀನಿ" ಅಂತ ಅಂದು ಎಚ್ಚರಿಕೆ ಕೊಟ್ಟ ಹೋಗೊರು

ಕೆಲವರು. ಹುಲಿಯೂರ ಈ ಎಲ್ಲಾ ಆಟ ಬಯಲಾಟಗಳನ್ನು ಹತ್ತಿರದಿಂದಲೇ ಕಂಡುಂಡು ಬೆಳೆದಿದ್ದ ಮದಮದಲು ವರ್ಷಕೊಂದ ದಪ ಬರುತ್ತಿದ್ದ ಯಾಸಗಾರರು, ಕ್ರಮೇಣ ಎರಡ ಮೂರು ವರ್ಷದ ಮಟಾನೂ ಬರದಂಗಾದರು. ಮುಂದ ಹುಲಿಯೂರ ದೊಡ್ಡವನಾಗುತ್ತಿದ್ದಂತೆ ಓದಾಕಹೋದ. ಊರಕಡಿಗ ಬರೋದು ಕಮ್ಮಿಯಾತು ಯಾಸಗಾರರ ನೆನಪು ಮಾಸತೊಡಗಿತ್ತು. ಕಾಲಬದಲಾಗುತ್ತಿದ್ದಂತೆ ಮನುಷ್ಯನ ರೀತಿನೀತಿ ಬದಲಾಗತೊಡಗಿತು. ದುಡ್ಡು ಅಂದರೆ ಬಹಳ ಕಷ್ಟ ಎಲ್ಲೆಲ್ಲೂ ಐದು ರೂಪಾಯಿ ಹುಟ್ಟುತ್ತಿರಲಿಲ್ಲಾ. ಪೈಸಾ ಅಂದರೆನೆ ದೊಡ್ಡ ಮೊತ್ತವಾಗಿತ್ತು. ಹುಲಿಯೂರನ ತಂದೆ, ತಾಯಿ, ಅಣ್ಣಂದಿರು, ಅಕ್ಕಂದಿರು ದುಡಿದರು ದುಗ್ಗಾಣಿ ಹುಟ್ಟುತ್ತಿರಲಿಲ್ಲಾ, ಬರಿ ಜೋಳ, ಮಣ್ಣು ತುಂಬಿರುವ ರಾಗಿ ಬಿಟ್ಟರೆ ಬೆರೆನು ಕೂಲಿ ಕೊಡುತ್ತಿರಲಿಲ್ಲಾ. ಇನ್ನೂ ಈ ಜನರ ಜೀವನದ ಸ್ಥಿತಿ ಏನಾಗಬೇಡ. ದಿನಕೊಂದೆ ಕೆಂಪುಬಸ್ಸು, ಕೆಂಪು ಮಂದಿ ಆವಾಗ ತಾನೆ ಇಂಡಿಯಾ ಬಿಟ್ಟು ಹೋಗಿದ್ದರು. ಲಾರಿಗಳು ಆಗೊಂದು ಈಗೊಂದು ಬ್ರಿಟೀಷರು ಬಿಟ್ಟುಹೋದ ಜೀವನ ಹಾಗೆನೆ ಮುಂದುವರೆದಿತ್ತು.

* * *

7. ಚಿಂದ್ರಪ್ಪನೆಂಬ ಕಾಯಕದವನೂ ಮತ್ತು ಆಯ

ಅದೆಂಗೆ ಭದ್ರನಾಯ್ಕನ ತಾಂಡದಲ್ಲಿ ಹುಸೇನಿ, ಚಾಂದ್‌ಸಾಬಿ, ಹೊನ್ನುರಲಿ, ಹುಲ್ಲುಸಾಬಿ, ಅಲ್ಲಾಬಕ್ಷಿ, ಸೈನಾಜ್, ಸೂಫಿಯಾ ಎನ್ನುವ ಮುಸಲ್ಮಾನರ ಕುಟುಂಬ ಸಣ್ಣ ಸಾಲಿ ಮಾಸ್ತರ ಭೀಷಣಪ್ಪ, ಅವನ ಹೆಂಡತಿ ಪಾಪವ್ವ, ಸುಣ್ಣಗಾರ, ದುರಗ, ಗುದುಗ, ಚಲವ, ಚೆನ್ನ ಜಿಂಗಾಲು, ಹೊನ್ನಿ, ಮಾದಿ, ಲಲ್ಲಿ ಮುಂತಾದವರು. ಉಪ್ಪಾರ ಇಪ್ಪತ್ತು ಮನಿಗಳು ಅಲ್ಲದೆ ವಾಲ್ಮೀಕಿಯ ಆರೆಂಟು ಮನಿಗಳು ಒಂದಕಡಿಗ ಆದ್ರ ಲಮಾಣಿವು ನೂರೈವತ್ತು ಮನಿಗಳ ತಾಂಡ. ಅದರೊಳಗೆ ಸಣ್ಣ ಸಾಲಿಮಾಸ್ತರ ಭೀಷಣಪ್ಪನ ಜಾತಿಯವನೆ ಆದ ಚಿಂದ್ರಪ್ಪ ಹಡಪದ ಅನ್ನೊನ ಕಾಯಕದ ಕೆಲ್ಸಕ್ಕೆ ಕರ್‍ಕೊಂಡಬಂದಿದ್ದ. ಕಾಲಕಾಲಕ್ಕೆ ಮಳಿಬೆಳಿ ಆಗ್ತಿದಿದ್ದರಿಂದ ಮಂದಿನೂ ಬೆಳದದ್ದನ್ನ ಕೊಡಾಕ ಹಿಂದಮುಂದ ನೋಡ್ತಿರಲಿಲ್ಲಾ. ಲಮಾಣ್ಯಾರು, ಊರಮಂದಿ, ಸಾಬರು ಎಲ್ಲರೂ ರಾಶಿಮ್ಯಾಲ ಆಯಾ ಮಾತಾಡಿದ್ದರು. ಚಿಂದ್ರಪ್ಪ ಇಡಿ ವರ್ಷ ಪೂರಾ ಮಂದಿ ತಲಿಬೋಳಿಸೋದು, ಕೂದಲ ಕತ್ತರಿಸುವುದು, ಮಕಾಪ್ಷ ಮಾಡೋದು ಮಾಡ್ತಿದ್ದ. ರಾಶಿ ಮೇಲೆ ನೇರವಾಗಿನೆ ಬಂದು ಕುಂಬಾರ, ಬಡಗಿ, ಕಮ್ಮಾರನ ಜೊತೆಗೆ ಹನ್ಮಪ್ಪನ ಪೂಜಾರಿ ಜೊತಿಗೆ ನಿಂತ ತನ್ನ ಪಾಲಿನ ಅರ್ಧ ಚೀಲ ಕಾಳು ಎತ್ಕೊಂಡು ಹೊಕ್ಕಿದ್ದ. ಯಾರು ಗಿದ್ನ, ಎರಡಗಿದ್ನ, ಮಣ, ಅರ್ಧಚೀಲ, ಕಾಲಚೀಲಜೋಳ ತುಂಬಿಕೊಡುತ್ತಿದ್ದರು. ಅದ್ರಾಗೆ ದೊಡ್ಡರೈತರು, ಪುಟ್ಟಿ ತುಂಬಿ ಮೆಣಸಿನಕಾಯಿ, ನಾಕಸೇರು ತೊಗರಿ, ಒಂದ ಸೇರಿನಾಟು ಹುಳ್ಳಿ, ಅಲಸಂದಿ, ಹೆಸರಕಾಳು, ಮಡಕಿಕಾಳು, ಬೆಳದಿದ್ದನೆಲ್ಲಾ ಕೊಡುತ್ತಿದ್ದರು. ಕಾಸು ಯಾರ ಹತ್ರಾನೂ ಸಿಗದಾಗಿತ್ತು. ಚಾಚಿಟು, ತುಂಡಬೆಲ್ಲಾ ಬೇಕಾದ್ರ ಬಾರಕಿರ ಚೆಂಡೂವನ ಅಂಗಡಿಗೆ ಒಂದಪಾವಿನಷ್ಟು ಜೋಳ ಹಾಕಿತರಬೇಕು. ಚಿಂದ್ರಪ್ಪನ ಮನಿಯೊಳಗೆ ಗಂಗವ್ವ, ರುದ್ರವ್ವ, ಸಾಂತವ್ವ ಮೂವರು ಹೆಣ್ಣಮಕ್ಕಳು, ಹಜಾಮರ ಮಂಜ ಒಬ್ಬನೆ ಮಗ. ಅವರಪ್ಪ ತೀರಿಕೊಂಡ ಮೇಲೆ ಹೆಸರ ಮಾಡಿದ ಒಬ್ಬನೆ ಕುಲಪುತ್ರ. ಚಿಂದ್ರಪ್ಪನ ಹೆಂಡತಿ ತಮ್ಮಕ್ಕ ಅಷ್ಟ ಮಂದಿಗೆ ದಿನಕ್ಕೆರಡ ದಪ ಚಾ

ಕುಡಿಯಾಕ ಕೊಡಬೇಕಿತ್ತು. ಹಂಗಾಗಿ ಬಂದ ಕಾಳಿನೊಳಗೆನೆ ಅರ್ಧಾವೂ, ಪಾವು, ಒಮ್ಮೊಮ್ಮೆ ಅಚ್ಚೇರು ಕಾಳಒಯ್ದು ಮನಿಗೆ ಬೇಕಾದ ದಾವಣಗೇರಿ ಮಂಡಕ್ಕಿ, ಖಾರ, ಚಾಚೀಟು, ಬೆಲ್ಲ ತಂದು ಮನಿಮಂದಿಗೆಲ್ಲಾ ನಾಕಕಾಳು ಬಾಯಿಗ ಒಕ್ಕೊಳಕ ಕೊಟ್ಟ ಚಾ ಕೊಡುತ್ತಿದ್ದಳು. ಮುಂಜಾನೆ ಹೊತ್ತಾರೆ ಊರಾಗ ಪ್ರವೇಶ ಮಾಡಿದ್ರ. "ಥು, ಇವ್ನವ್ವನ ಹಜಾಮ ಚಿಂದ್ರಪ್ಪನ ಮಕನ್ನೋಡಿದೆ, ಏನು ಕೇಡಕಾದಿದೆಯೊ", ಅಂತೇಳಿ, ಅಡ್ಡ ಬಂದ ಚಿಂದ್ರಪ್ಪನನ್ನು ಬೊಯ್ಯುವುದು ವಾಡಿಕೆಯಾಗಿತ್ತು. ಅವನ ಜೊತೆಗೆ ಸಾಲಿಮಾಸ್ತರ ಭೀಷಣಪ್ಪನನ್ನು ಬಿಟ್ಟಿರಲಿಲ್ಲಾ, "ಲೇ ಭೀಷಣಪ್ಪನೂವೆ ಕೆತಗರವನು ಅವನ ಮಕ ನೋಡಿದ್ರು ಕೇಡ ಆಗುತ್ತೆ. ಮಕಮುಚ್ಕೊಂಡು ಅಡ್ಡಾಡ್ರಿ" ಅಂತ ಮಂದಿ ತಮ್ಮೊಳಗೆ ಮಾತಾಡಿಕೊಳ್ಳ ತೊಡಗಿದ್ದರು. ಅವರಿಗೆ ಒಮ್ಮೊಮ್ಮೆ ಕೇಳುವಂತೆ ಮಂದಿ ಮಾತನಾಡುತ್ತಿದ್ದರು. ಗಂಗವ್ವ, ಶಾಂತವ್ವ, ಮಂಜ ಮುಂಜಾನೆ ಹೊತ್ತಾರೆ ಎದ್ದು ಹೊರಗಡೆ ಹೋಗೋದನ್ನ ನಿಲ್ಲಿಸಿದ್ದರು. "ಯಾ ಪಾಪ ಮಾಡಿ ಹುಟ್ಟಿವಿ ಈ ಜಾತಿಯೊಳಗೆ, ಮುಂಜಾನೆ ಗಡಾನ ಎದ್ದು ತಾಂಡದಾಗ ನಡಿಯೊ ಹಂಗೂ ಇಲ್ಲದಾತು ಬಾಳೇವು". ಹತ್ತು, ಹನ್ನೊಂದರ ಮಟ ಹಾಸಗಿ ಬಿಡ್ತಿರಲಿಲ್ಲಾ. "ಹಜಾಮ, ಕಾಯಕದವನು, ಲೇ ಹಡಪದ, ಕೆತಗ" ಅಂತ ಮಂದಿ ಕರೆದು ಅವಮಾನ ಮಡ್ತಾರಲ್ಲ ಯಾಕೆ? ಮುಗ್ಧ ಮಂಜನ ಪ್ರಶ್ನೆಗೆ ಚಿಂದ್ರಪ್ಪನ ಹತ್ತಿರ ಉತ್ತರ ಇರಲಿಲ್ಲಾ. ಅವರ ಸಮುದಾಯವನ್ನು ಮಂದಿ ಗೂಬೆನ ನೋಡಿದಂಗೆ ನೋಡಿದಂಗೆ ನೋಡೋರು. ಏನೊ ದೊಡ್ಡ ಊರು, ವರ್ಷಕ್ಕೊಮ್ಮೆ ಆಯಾ ಬರುತ್ತೆ ಅಂತ ಅನಿವಾರ್ಯವಾಗಿ ಇರಬೇಕು ಇರಬೇಕು ಅಷ್ಟೆ. ಮೂವರು ಹೆಣ್ಣು ಹುಡುಗಿಯರು ಋತುಮತಿಯಾಗಿ ವರ್ಷಗಳೆ ಕಳದವು ತಮ್ಮ ಕುಲಸ್ಥರನ್ನ ಹುಡುಕಬೇಕು ಮದುವೆ ಮಾಡಬೇಕು ಇಂತಹ ದುರಂತದ ಬದುಕಲ್ಲಿ ಮಂದಿ ಮಾತು ಕೇಳಿದರೆ ಆಗುವುದಿಲ್ಲ ಅಂದು ಚಿಂದ್ರಪ್ಪ ಮೌನಿಯಾಗಿದ್ದ.

ಹಳೆ ಓಬಿರಾಯನ ಕಾಲದ ಟ್ರಂಕು ತೆಗದರೆ ಒಳಗೆ ಒಂದು ಒಡಕು ಕನ್ನಡಿಯ ತುಂಡು ಹೊಲಸು ವಸ್ತ್ರ, ನುಣುಪಾದ ಕಲ್ಲು ಕೂದಲು ತುಂಡು ಮಾಡುವ ಮಿಷನ್ನು ಮಕಾಷ್ಟಕ್ಕೆ ರೇಜರು ಇವೆ ಅವನ ಪಿತ್ರಾರ್ಜಿತ ಆಸ್ತಿ. ಯಾವಾಗಲೊ ಹಳೆ ಕಾಲದಲ್ಲಿ ಖರೀದಿಸಿದ್ದ ರೇಜರು ಇಡೀ ಊರಿನ ಗಂಡಸರ ಮಕದ ಮೇಲೆ ಅಡ್ಡಾಡುತ್ತಿತ್ತು. ನುಣಪಾದ ಕಲ್ಲ ಮೇಲೆ ಗಸಗಸ ತಿಕ್ಕಿ ಅದನ್ನೇ ಚೂಪು ಮಾಡಿ ಐನೂರಾ ಒಂದು ಸೋಪಿನ ತುಂಡಿಗೆ ಸೇವಿಂಗ ಬ್ರಷ್ ಅದ್ದಿ ಬುರಗು ಬರುಗು ಮಾಡಿ ಕುಂತವನ ಮುಖಕ್ಕೆ ಸವರಿ ಬೆಳೆದ ಪೆದೆಯಂತ ದಾಡಿಯ ನಡುವೆ ಆಡಿಸುತ್ತಿದ್ದ. ಒಮ್ಮೊಮ್ಮೆ ಅದು ಸಿಗಾಕಿಕೊಂಡು ಚರ್ಮದ ಸಮೇತ ಹೊರಗೆ ಬಂದು ರಕ್ತ ಜಿನುಗಿಸುತ್ತಿತ್ತು. "ಚಿಂದ್ರಪ್ಪ, ಹೆಂತ್ತೆ ಸಿಟ್ಟು ನನ ಮೇಲೆ ತಗಿಬ್ಯಾಡ, ನಿಧಾನಕ ಮಾಡು" ಅಂತ ಬಂದ ಸಿಟ್ಟನ್ನು ಹೊರಗ ಹಾಕಿದ್ರ ಈಗಲೆ

ತಿಂಗಳಿಗೊಮ್ಮೆ ಮಾರಿಮುಟ್ಟುತ್ತಿದ್ದ ಏನಾರು ಅಂದ್ರೆ "ಏಯ್ ಮಾಡನಂತ ಬಿಡಪ್ಪ, ಅವಸರ ಏನೈತೆ, ಅವರದು ಮಾಡಬೇಕು, ಇವರದ್ದು ಮಾಡಬೇಕು" ಅಂತ ಸಾಬೂಬು ಹೇಳ್ತಾನಂತ ಮಂದಿ ಹೆದರಿ ಕಂಗಾಲಾಗಿದ್ದರು. ಇರೋನು ಒಬ್ಬನೆ, ಗಿರಾಕಿಗಳು ನೂರಾರು ಅದ್ರಾಗ ಮಂಗಳವಾರ ಮಂದಿ ತಲಿ ಮುಟ್ಟಿಸುತ್ತಿರಲಿಲ್ಲಾ, ಶನಿವಾರ ಹನ್ಮಪ್ಪನ ವಾರ ಅಂತ ಚಿಂದ್ರಪ್ಪನೆ ಮಂದಿ ತಲಿ ಮುಟ್ಟಿರಲಿಲ್ಲಾ ಇರೊ ಐದೆ ಐದು ದಿನದಾಗ ಸಣ್ಣೋರು ದೊಡ್ಡೋರು ಅನ್ನದೆ ಮಂದಿ ತಲಿಮ್ಯಾಲ ಕೈಯಾಡಿಸುತ್ತಿದ್ದ. ಇವನ ಯಮಹಿಂಸೆ ತಾಳದೆ ಸಣ್ಣ ಹುಡುಗರು ಸನ್ಯಾಸಿಗಳಂತೆ ಜಡೆ ಬಂದಿದ್ದರೂ ಹತ್ರ ಸುಳಿತಿರಲಿಲ್ಲಾ. ಹೇನು, ಸೀರು, ಧೂಳು ತುಂಬಿದ ತಲೆಗಳು ತುರುಕೆಯಾಗಿ ತಲಿಯೊಳಗೆ ಹುಣ್ಣುಗಳಾಗಿ ಕೀವಾಗಿರುತ್ತಿದ್ದವು. ಎಲ್ಲಿ ಹುಣ್ಣುಗಳಿವೆಯೊ ಆ ಜಾಗ ಬಿಟ್ಟು ಕೂದಲು ಕತ್ತರಿಸಬೇಕು. ಮೊಂಡು ಕತ್ತರಿ ಒಮ್ಮೆ ಕತರಿಸಿದ ಕೂದಲನ್ನು ಮತ್ತೆ ಕತ್ತರಿಸುವಾಗ ಅದರ ಹೊಡತ ತಾಳದೆ, ಹುಡುಗರು, "ಯವ್ವ ಸತ್ನೆ" ಅಂತ ಕೆಟ್ಟ ಕನಸು ಕಂಡವರಂತೆ ಚಿಟಾರಂತ ಚೀರುತ್ತಿದ್ದವು. ಇನ್ನೂ ಕೆಲ ಹುಡುಗರಿಗೆ ತಲಿಯೊಳಗೆ ಕೈಯಾಡಿಸುತ್ತಿದ್ದರೆ, ಇಡೀ ತಲೆ ಹಗುರಾದಂತೆ ಭಾಸವಾಗಿ ತೂಕಡಿಸುತ್ತಿದ್ದವು. "ಲೇ, ಯಾವ ಸೀಮೆಯವನು, ನೆಟ್ಟಗ ಕುಂದ್ರು," ಅಂತ ಒಸಿ ಚರ್ಮವನ್ನು ಸೇರಿಸಿ ಕತ್ತರಿಸಿದಾಗ ತೂಕಡಿಸುತ್ತಿದ್ದವನ ನಿದ್ದೆ ಹಾರಿ ನೋವು ತಾಳಲಾರದೆ ವಿಲಿವಿಲಿ ಒದ್ದಾಡುತ್ತಿದ್ದ.

ಚಿಂದ್ರಪ್ಪ ಇಡಿ ಊರಮಂದಿ ತಲಿಮ್ಯಾಲ ಕೈಮಾಡಿಸುತ್ತಿದ್ದ, ಊರಿನವರಿಗೂ ಚಿಂದ್ರಪ್ಪ ಅನಿವಾರ್ಯವಾಗಿದ್ದ. ಅವನನ್ನ ಬಿಟ್ಟರೆ ಮತ್ಯಾವ ಕಾಯಕದವರು ಸಿಗುತ್ತಿರಲಿಲ್ಲಾ. ಸ್ಥಿತಿ ಹೀಗಿರುವಾಗ ಮಂದಿ ಅನಿವಾರ್ಯವಾಗಿ ಅವನನ್ನ ಸಹಿಸಿಕೊಳ್ಳಲೇಬೇಕಾಗಿತ್ತು. ಗೂರಲು ರೋಗ ಬೇರೆ, ಆರಂಭ ಮಾಡಿದಾಗ ಕಮ್ಮಿ ಅಂದರು ಎರಡು ಮೂರು ಸಾರಿ ಕೆಮ್ಮುತ್ತಿದ್ದ. "ಯಾವಾಗ ಕೈ ಬಿಟ್ಟಾನಪ್ಪ" ಅಂತ ವಿಲಿವಿಲಿ ಒದ್ದಾಡುತ್ತಿದ್ದರು. ಬೇರೆ ಊರಿಗೆ ಹೋಗಿ ಮಕಾಷ್ಟ ಮಾಡಸಾಕ ಅಸಾಧ್ಯದ ಮಾತು. ಆ ಊರಲ್ಲೂ ಒಬ್ಬನೆ ನಾಪಿತ ಇರುತ್ತಿದ್ದ ಸಾವಿರಾರು ತಲಿಯೊಳಗ ಕೂದಲು ಬೆಳೆದು ನಿಂತಿರುತ್ತಿದ್ದವು. ಹಾಗಾಗಿ ಆ ಊರಿಗೆ ಅವನೆ ಅನಿವಾರ್ಯವಾಗಿರುವಾಗ ಈ ಊರಿಂದ ಹೋದವರಿಗೆ ಸಂಯಮದಿಂದ ಕೂದಲು ಬೋಳಿಸೋದಕ್ಕೆ ಸಾಧ್ಯವಾದೀತೆ? ಸಣ್ಣ ಹುಡುಗರಿಗೆ ಕಡ್ಡಾಯವಾಗಿ ಒಂದು ಕಡೆಯಿಂದ ನುಣ್ಣಗೆ ಬೋಳಿಸುತ್ತಿದ್ದ. ದೊಡ್ಡವರಿಗೆ ಹೆಚ್ಚು ಕಡಿಮೆ ಮಾಡಿ ಕೈ ಬಿಡುತ್ತಿದ್ದ. "ಹೂಂ, ಇವನವ್ವನ ನಾವಿ ಎಡಕ್ಕ ಜಾಸ್ತಿ ಬಿಟ್ಟಾನಲಪ್ಪ, ಅರೇ ಇವನವ್ವನ ನಾವಿ ಈ ಕಡೆ ಜಾಸ್ತಿ ಬಿಟ್ಟು ಆ ಕಡೀಗ ಕಡಿಮೆ ಮಾಡ್ಯಾನ", ಪಿರ್ಯಾದಿ ಮಾಡುವವರೆ, ಆದರೆ ಬಹುತೇಕ ಹಳ್ಳಿಮಂದಿ ತಲಿಗ ಪಟಗಾ ಸುತ್ತುತಿದ್ದರಿಂದ ಕೂದಲು ತಗಸಿರೋದರ ಬಗ್ಗೆ ಹೆಚ್ಚೇನು ತಲೆ ಕೆಡಿಸಿಕೊಳ್ಳುತ್ತಿರಲಿಲ್ಲ. "ಅಯ್ಯೊ ಪಾಪ ಗೂರಲ ಮನುಷ್ಯ

ಅಷ್ಟಾದರೂ ಕಾಳಜಿಯಿಂದ ಕೂದಲು ಕತ್ತರಿಸುವ ಕೆಲ್ಸ ಮಾಡ್ತವ್ನಲ್ಲಾ" ಅಂತ ಹಟ್ಟಿ ನಾಯ್ಕ ಚಾಂಪ್ಲನಾಯ್ಕ ಮಂದಿ ಮುಂದ ಚಿಂದ್ರಪ್ಪ ನಾವಿ ಬಗ್ಗೆ ಶಿಫಾರಸ್ಸು ಮಾಡಿದ್ದ.

ಆರಕ್ಕೇರದ ಮೂರಕ್ಕಿಳಿಯದ ಬದುಕನ್ನ ಹೆಗಲ ಮೇಲೆ ಹೊತ್ತು ಹೊರಟಿರುವ ತಂದೆ ಚಿಂದ್ರಪ್ಪ ಮೂವರು ತಂಗಿಯರ ಮದುವೆ ಮಾಡುವುದಕ್ಕೆ ಪಡುತ್ತಿರುವ ಹರಸಾಹಸವನ್ನು ಹತ್ತಿರದಿಂದ ನೋಡಿದ ಮಂಜ, ಮುಂದಿನ ತನ್ನ ಭವಿಷ್ಯದ ಬಗ್ಗೆ ನೆನಸಿಕೊಂಡು ಕ್ಷಣಕಾಲ ನಡುಗಿಹೋಗಿದ್ದ. ಸಬ್ಬನಗಾಲ ಹೋಗಿ ಬರಗಾಲ ಬಂದಾಗ ಆಯಾ ಕೊಡುತ್ತಿದ್ದ ರೈತರು ತಮಗೆ ಕಾಳು ಇಲ್ಲದಾಗ ಅವರನ್ನೆ ಆಶ್ರಯಿಸಿರುವ ಆಯಾಗಾರರಾದ ಹಡಪದ, ಬಡಗಿ, ಕುಂಬಾರ, ಕಮ್ಮಾರ ಮುಂತಾದವರಿಗೆ ಕಾಳು ಕೊಡಲು ಹೇಗೆ ಸಾಧ್ಯವಾದೀತು? ಹೊಟ್ಟೆ ಹೊರೆಯುವುದು ಜಡವಾಗುತ್ತಿದ್ದಂತೆ ತಂಗಿಯರೊಂದಿಗೆ ಕೂಲಿಗೆ ಹೊರಟ. ಮನೆಯಲ್ಲೆ ಇದಿದ್ದು ನೋಡುವುದಕ್ಕೆ ಸುಂದರವಾಗಿದ್ದ ಚಿಂದ್ರಪ್ಪನ ಹುಡುಗಿಯರ ಮೇಲೆ ಸಹಜವಾಗಿಯೆ ಲಮಾಣಿ ಹುಡುಗರು, ಉಪ್ಪಾರ, ಬಾರಿಕರ ಹುಡುಗರು ಕಣ್ಣಾಕತೊಡಗಿದರು. ಉಪ್ಪು ಹುಳಿತಿಂದು ಬೆಳೆದ ಜೀವ, ಒಮ್ಮೆ ಎರಡು ಸಾರಿ ಸುಧಾರಿಸಿಕೊಂಡಾವು. ಪದೇಪದೇ ಮಾಂಸತಿಂದು ಕೊಬ್ಬಿದ ಗೂಳಿಯಂತಹ ತೊಪುನಾಯ್ಕನ ಐದನೆಯವ ಸಾಲಿಕಲಿಯೊ ದಮ್ಮೂರ ಚಿಂದ್ರಪ್ಪನ ಹಿರಿಮಗಳು ಗಂಗವ್ವನನ್ನ ಕಳೆ ಕಿಳೊ ಜಾಗಾದಾಗೆ ಉರಾಳಿಡಿಸಿದ್ದ. ಬದುಕಿನ ಅನಿವಾರ್ಯತೆಯ ನಡುವೆ ಮನಸ್ಸಿನ ವಿರುದ್ಧ ಹೋರಾಡಿ ಅಸಾಧ್ಯವಾದದ್ದನ್ನೂ ಒಪ್ಪಿಕೊಳ್ಳುವ ಅನಿವಾರ್ಯತೆ ಉಂಟಾಗಿತ್ತು. ಬದುಕಿನ ಏಕತಾನತೆಯನ್ನು ಅನುಭವಿಸುತ್ತಾ ಬಂದಿದ್ದ ಚಿಂದ್ರಪ್ಪ ಬದಲಾಗುತ್ತಿರುವ ಹೊಸ ಸ್ಥಿತಿಗೆ ಹೊಂದಾಣಿಕೆ ಮಾಡಿಕೊಳ್ಳಲು ಹೆಣಗಾಡುತ್ತ ಹೊರಗಿನ ಸಂಘರ್ಷಕ್ಕಿಂತ ಒಳಗಿನ ಸಂಘರ್ಷ ತಾಳಲಾಗದೆ ಹೆಣವಾಗಿದ್ದ. ಯಾವದೊ ಊರಿಂದ ಪಲಾಯನ ಮಾಡಿಕೊಂಡು ಬಂದಿದ್ದ ಚಿಂದ್ರಪ್ಪನ ಯುಗ ಅಲ್ಲಿಗೆ ಮುಕ್ತಾಯವಾಗಿತ್ತು. ಬದುಕಿನ ಅನಿವಾರ್ಯತೆಯನ್ನು ಒಪ್ಪಿಕೊಳ್ಳಲಾಗದೆ. ಬಿಟ್ಟು ಬಿಡಲಾಗದೆ ಮಂಜ ಬದುಕಿದ್ದ. ಯಾರೊ ಎದರುಬದರು ಸಂಬಂಧ ಹುಡುಕಿ ಬಂದಿದ್ದಕ್ಕೆ ಮೊದಲು ತಂಗಿಯ ಮತ್ತು ತನ್ನ ಮದುವೆ ಮಾಡಿ ಮುಗಿಸಿದ. ಹೆಂಗೊ ಉಳಿದ ಇಬ್ಬರು ತಂಗಿಯರ ಮದುವೆನೂ ಮಾಡಿ ಮುಗಿಸಿದ. ಆದರೆ ಪರಿಸ್ಥಿತಿ ಅವನ ಕೈ ಮೀರಿತ್ತು. ರೈತರುಬದಲಾದ ಪರಿಸ್ಥಿತಿಗೆ ತಕ್ಕಂತೆ ಬದಲಾಗತೊಡಗಿದರು. ಅಲ್ಲಲ್ಲೆ ಹೊಸಅಲೆಯ ಹೊಡೆತಕ್ಕೆ ಸಿಕ್ಕು ಹೊಸ ಕಟಿಂಗ್ ಅಂಗಡಿಗಳು ದೊಡ್ಡ ದೊಡ್ಡ ಊರುಗಳಲ್ಲಿ ಆರಂಭವಾದವು. ತಟ್ಟಿ ಅಂಗಡಿಯಲ್ಲಿ ದೊಡ್ಡ ಗಾಜುಗಳು ಕುಳಿತುಕೊಳ್ಳಲು ಖುರ್ಚಿ, ಕೊಳ್ಳ ಸುತ್ತ ಅರ್ಧ ಮೈಮುಚ್ಚುವ ಬಟ್ಟೆ, ಮೇಲೆ ಬಿದ್ದ ಕೂದಲನ್ನು ಚಾಡಿಸಲು ಕೂದಲಿನ ಬ್ರಷ್‌ಗಳು, ಪೌಡರು

ಮಕಾಷ್ಟಕ್ಕೆ ಹೊಸ ರೀತಿಯ ಸಾಮಾನುಗಳು ಬಂದ ಮೇಲೆ ಚಿಂದ್ರಪ್ಪನ ಮಗ ಮಂಜನ ದುಕಾನಿಗೆ ಯಾರು ಬಂದಾರು? ಮಂಜನಿಗೆ ಗಿರಾಕಿಗಳು ಕಮ್ಮಿಯಾಗ ತೊಡಗಿದರು. ಅವನ ಮದುವೆಯಾಗಿ ಬಂದ ಹುಡುಗಿಗೆ ಕಷ್ಟ ತಡೆದುಕೊಳ್ಳಲಾಗದೆ ನಲಗಿಹೋಗಿದ್ದಳು. "ತೊಪುನಾಯ್ಕಣ್ಣ ಒಂದು ಗಿದ್ನ ಜೋಳ ಕಡಕೊಡು ಯಾರಾದರು ಆಯಾ ಕೊಟ್ಟರೆ ವಾಪಸು ಕೊಡ್ತಿನಿ" ಅಂತ ಊರಲ್ಲೆ ಸ್ವಲ್ಪ ಉತ್ತಮ ರೈತನಾಗಿದ್ದ ತೊಪುನಾಯ್ಕನಿಗೆ ಕೇಳಿದ. ಅವನ ಸ್ಥಿತಿಯನ್ನು ಹತ್ತಿರದಿಂದ ನೋಡಿದ್ದ ತೊಪುನಾಯ್ಕ "ಗಿದ್ನ ಇಲ್ಲ ಮಂಜ್ಯ, ಒಂದೆರಡ ಸೇರು ಬೇಕಾರ ಒಯ್ದು ಅಡುಗೆ ಮಾಡ್ಕೊಳ್ಳಿ, ಏನಕಾಲ ಬಂತೊ ಭಗವಂತ, ಸೆರಗು ಒಡ್ಡಿದವರ ಮಡಿಲಿಗೆ ಪುಟ್ಟಿ ತುಂಬ ಕಾಳುಕಡಿಹಾಕಿ ತೃಪ್ತಿಪಟ್ಟು ಮನಸ್ಸು ತುಂಬ ಹರಿಸಿದ ದಿನಗಳು ಈಗ ಬರಿ ನೆನಪುಗಳಾಗೆ ಉಳಿದುಕೊಂಡಾವ." ತೊಪುನಾಯ್ಕ ನಿಟ್ಟುಸಿರು ಬಿಟ್ಟ. ಹಜಮಾರ ಮಂಜ ಪರಿಸ್ಥಿತಿಯ ಒತ್ತಡಕ್ಕೆ ಸಿಕ್ಕು ತರಗೆಲೆಯಂತಾದ. ಎರಡು ಹೊತ್ತು ಕೂಳು ಸಿಗುವುದೆ ದುಸ್ತರವೆನಿಸತೊಡಗಿತು. ಕೆಲಸ ಆವಾಗ ಈವಾಗ ಸಿಗುತ್ತಿತ್ತು. ಪ್ರತಿದಿನ ಸಣ್ಣವರು ದೊಡ್ಡವರು ಅನ್ನದೆ ನಮಸ್ಕಾರ ಮಾಡುತ್ತ ಎಲ್ಲರ ಮರ್ಜಿ ಕಾಯುತ್ತಿದ್ದ. ಬೀಡಿ ಸೇದುವ ಕೆಟ್ಟ ಚಟ ಅಂಟಿಕೊಂಡಿದ್ದಕ್ಕೆ, ಕಂಡಕಂಡವರ ಹತ್ತಿರ ಬೀಡಿ ಕೇಳುವುದು, ಎಲ್ಲೂ ಸಿಗದ ಪಕ್ಷದಲ್ಲಿ ಯಾರಾದರೂ ಸೇದಿ ಬಿಸಾಡಿದ ಕೊರಿಬೀಡಿಯನ್ನ ತಗೊಂಡು ಸೇದ ತೊಡಗಿದ. ನೀರು ತಲೆ ಮೇಲಿನಿಂದ ಹರಿದುಹೋಗಿತ್ತು. ಹಿಂಗೆ ಇದ್ದರೆ ಕತಿ ಮುಗಿದಂಗೆ ಅಂದವನೆ ಕೂಲಿ ಕೆಲಸಕ್ಕೆ ಹೋಗ ತೊಡಗಿದ. ಅವನ ಅಪ್ಪನಿಂದ ಬಳವಳಿಯಾಗಿ ಅವನಿಗೂ ಬಂದಿದ್ದ ಗೂರಲು ದಮ್ಮು ಎಡ ಬಿಡದೆ ಕಾಡಿತ್ತು. ಎರಡು ಮಕ್ಕಳ ತಂದೆ ಹಜಾಮರ ಮಂಜಗೆ ಜೀವ ಬ್ಯಾಡ ಅನ್ನಿಸಿತ್ತು. ಉಪಸವಾಸಕ್ಕಿಂತ ಹೆಚ್ಚಾಗಿ ಭವಿಷ್ಯದ ಚಿಂತೆ ಕಾಡಿದ ಮೆಲೆ ಅವನ ಆರೋಗ್ಯ ಹದಗೆಟ್ಟು ದಿನದಿನ ಸೊರಗತೊಡಗಿದ. ಪರಿಸ್ಥಿತಿ ಕೈ ಮೀರುತ್ತಿರುವುದನ್ನು ಮನಗಂಡಿದ್ದ ಅವನ ಹೆಂಡತಿ ರೂಪ ಎರಡೂ ಮಕ್ಕಳನ್ನ ಕರೆದುಕೊಂಡು ತೌರಿಗೆ ಹೋದಳು. ಅದೇ ಕೊನೆ ಅವಳು ಮರಳಿ ಹಳ್ಳಿಗೆ ಬರಲೇ ಇಲ್ಲ. ಹಜಮಾರ ಮಂಜ ಮನೆಯೊಳಗೆ ಕೃಷನಾಗಿ ಪ್ರಾಣ ಬಿಟ್ಟಿದ್ದ. ಅದೇ ಕೊನೆ ಭದ್ರಾನಾಯ್ಕನ ತಾಂಡದಲ್ಲಿ ಕಾಯಕದವರ ಕೊರತೆ ಕಾಡತೊಡಗಿತು. ಆದರೆ ಕೂದಲು ಬೆಳೆಯುತ್ತಿತ್ತು. ಮಂದಿ ಪಕ್ಕದ ದೊಡ್ಡ ಹಳ್ಳಿಗಳಾದ ತೆಗರು ಮತ್ತು ದುರ್ಗಾಪುರಕ್ಕೆ ಹೋಗಿ ಕಟಿಂಗು, ಮಕಾಷ್ಟಗಳ ಬದಲಾದ ರೂಪಗಳಿಗೆ ತಾವೂ ಬದಲಾಗಿ ಪ್ಯಾಷನ್ ಮಾಡತೊಡಗಿದರು.

* * *

8. ಬೇವಿನ ಮರದ ನೆರಳೂ ಈರಭದ್ರಚಾರಿಯೋ

ತಾಂಡದ ಸೇದೊಬಾವಿ ಪಕ್ಕದ ಸೇವಾಭಾಯ ಮರಿಯಮ್ಮ ದೇವಸ್ಥಾನದ ಪಕ್ಕಕ್ಕೆ ಇರೋದೆ ಗುದ್ದಮ್ಮನ ಗುಡಿ. ಗುದ್ದಮ್ಮನ ಗುಡಿಗೆ ಆತುಕೊಂಡು ಬೆಳದಿರೊ ಹೆಮ್ಮರದ ಸುತ್ತ ಗಾರಿ ಕಟ್ಟೆ ಕಟ್ಟಿದ್ದರು. ಆ ಗಾರಿಕಟ್ಟೆಯ ಬೇವಿನಮರದ ನೆರಳು ತಂಪಗೆ ಮನಸ್ಸಿಗೆ ಹಿತಕೊಡುತ್ತಿತ್ತು. ಲಮ್ಯಾಣರ ಹಟ್ಟಿಪಂಚಾಯ್ತಿ, ಊರ ಪ್ರಮುಖ ವಿಷಯಗಳು ನಿರ್ಣಯ ಆಗೋದೆ ಇಲ್ಲಿ. ಈ ಬೇವಿನಮರ ನೆಟ್ಟ ಪುಣ್ಯಾತ್ಮ ಯಾರೊಗೊತ್ತಿಲ್ಲ, ಆದರೆ ಸಣ್ಣಹುಡುಗರಿಗೆ ಕೆರಿಯ ಜೇಡಿಮಣ್ಣು ತಂದು ಟ್ರಾಕ್ಟರ್ ಮಾಡಿಕೊಂಡು ಆಡೋದಕ್ಕೆ, ಹೊತ್ತಾರೆ ಹೊಲಕ ಹೋಗಿ ಗಳೆಹೊಡದು ಬಂದವರೆಲ್ಲರು, ಎತ್ತುಗಳ ಮೈಮೇಲೆ ನಾಕ ಚೆರಗಿ ನೀರ ಸುರಿದು ಸಿಕ್ಕರೆ ಎಲ್ಡ ತಂಬಿಗಿ ತಾವು ಹೊಯ್ಕೊಂಡು, ಮಧ್ಯಾಹ್ನದ ರೊಟ್ಟಿ ತಿಂದ ಮರದ ನೆರಳಿಗ ಬಂದು ಕಾಡಹರಟೆ ಹೊಡೆಯೋರು, ಹಿಂದೆ ಬಡಿದಿದ್ದ ಬೆಂಡಿಯನ್ನು ಗಂಟಿಂದ ಹಿರ್ಕೊಂಡ ಬಂದು ಹಗ್ಗ ಹೊಸಿಯೋರು, ಇಡೀ ಊರಿಂದೂರೆ ಗಾರಿಕಟ್ಟಿ ಬೇವಿನಮರದ ನೆರಳಿಗ ಬರೋರು. ಚಪ್ಪಲಿ ಹೊಲಿಯೊ ಹನ್ಮಜ್ಜಂದು ಇದೇ ಜಾಗ, ಯಾಸಗಾರರು, ಹೊರಗಡೆಯಿಂದ ಯಾರೆ ಬಂದರು ಮರದ ಕೆಳಗೆ ಕುಳಿತುಕೊಂಡೆ ಮುಂದೆ ಹೋಗುತ್ತಿದ್ದರು. ಹಾಗಾಗಿಯೇ ಸೇವಾಬಾಯನ ಮಟ್ಟೊ ಪಕ್ಕದ ಖಾಲಿಜಾಗದಲ್ಲಿ ಈರಭದ್ರಾಚಾರಿ, ಮೌನಾಚಾರಿ, ಡಕಣಾಚಾರಿ, ನಾಗಾಚಾರಿ, ಸಣ್ಣಬಾಚಿ, ದೊಡ್ಡಬಾಚಿ, ಕೊಡತಿ, ಉಳಿ, ಉಜ್ಜುಗೊರಡು ಮುಂತಾದ ತಮ್ಮ ಉದ್ಯೋಗದ ವಸ್ತುಗಳನ್ನ ತಂದು ಬೇವಿನಮರದ ನೆರಳಿಗೆ ಕುಂತು ಪುರಸೊತ್ತಿಲ್ಲದೆ ಅಂಗಿಬಿಚ್ಚಿ ಒಂದ ಕಡೀಗ ಇಟ್ಟು ಒಳ ಅಂಗಿ ಮೇಲೆ ದೊಡ್ಡ ಬಾಚಿಯನ್ನ ಎತ್ತಿಕೊಂಡು ರೈತರು ಕೊಡಲಿಯಿಂದ ತುಂಡು ಮಾಡಿ ತಂದ, ಮರಜಾಲಿ, ಹೊನ್ನೆ, ಸೀಸಂ ಬಾರೆ ಮರದ ಕಟ್ಟಿಗೆಯನ್ನ ಅವರು ಹೇಳಿದ ರೂಪ ಕೊಡುತ್ತಿದ್ದರು. ಕಾರ್ತೀಕ ಮಾಸ ಮುಗಿದು ಗಾಳಿಧೂಳಿ ಎದ್ದು ವಾರಕ್ಕೆ ಆರಂಭವಾಗುತ್ತಿದ್ದ ಮುಂಗಾರು ಮಳೆಗೆ ರೈತರು ಪುರುಸೊತ್ತಿಲ್ಲದೆ ರಂಟೆ ಹೊಡೆಯುವುದು, ಕುಂಟಿ ಹರಗುವುದು ಮಾಡುತ್ತಿದ್ದರಿಂದ ಪ್ರಮುಖವಾಗಿಯೆ ಅವರಿಗೆ ಬೇಕಾದ್ದು ರಂಟೆ, ಕುಂಟೆ, ನೊಗ. ಇವುಗಳನ್ನು ಮಾಡಿಕೊಡಲು ಈರಭದ್ರಚಾರಿ ಖಾಯಂ ಆ ಮರದ ಕೆಳಗೆ ಠಿಕಾಣಿ ಹೂಡುತ್ತಿದ್ದ. ಐದುವರಿ ಅಡಿ ಎತ್ತರ, ಕರಿಬಣ್ಣ, ಬಗಲಾಗ ಯಾವತ್ತು ಬಿಳಿ ದಾರದ

ಜನಿವಾರ, ಮುಂಜಾನೆ ಹೊತ್ತಾರೆ ಒಂದೂವರೆ ಮೈಲಿ ದೂರದ ಕಂಡಿಪುರದಿಂದ ನಡೆದುಬರುತ್ತಿದ್ದ. ಹೆಗಲ ಮೇಲೆ ದೊಡ್ಡ ಬಾಚಿ, ಎಡಗೈಯೊಳಗೆ ಮಧ್ಯಾಹ್ನದ ಎರಡು ರೊಟ್ಟಿ ಕಟ್ಟಿದ ಗಂಟು, ಬಲಗೈಯಲ್ಲಿ ಇತರೆ ಸಾಮಾನು ತುಂಬಿದ ಚೀಲ, ಬಂದವನೆ ಸಿದಾ ರಂಗವ್ವನ ಅಂಗಡಿಯೊಳಗೆ ಸಿಂಗಲ್ ಚಾ ಕುಡಿದು ಕಾಯುತ್ತಿದ್ದ ರಂಗನಾಯ್ಕ, ಯಮುನನಾಯ್ಕ, ಹುಸೇನಿ, ಪಿಂಜಾರು, ಪೀಚುಗ, ಇವರಿಗೆ "ಬಂದೆ, ಬಂದೆ" ಭರವಸೆ ಕೊಡುತ್ತಿದ್ದ.

ಹಲ್ಲೊಳಗೆ ಬೀಡಿ ಕಚ್ಚಿ ಬೆಂಕಿ ಗೀರಿದನೆಂದರೆ ದೊಡ್ಡ ಉಳಿ ಎತ್ತಿಕೊಂಡ ಅಂತಲೆಅರ್ಥ. ಕೆಲಸಕ್ಕೆ ಬಾರದ ಮರದ ಕೊರಡಿಗೆ ರಂಟೆಯ ರೂಪನೊ, ಇಲ್ಲ. ಕುಂಟೆಯ ರೂಪವೊ ಕೊಟ್ಟು ನಾಜೂಕಾಗಿ, ಉಜ್ಜು ಗೊರಡು ಉಜ್ಜಿ ನಯವಾಗಿ ಮಾಡಿ ಬೊರಗಿಯಿಂದ ತೂತು ಕೊರೆದು ದೊಡ್ಡ ಉಳಿಯಿಂದ ಅದನ್ನು ಬೇಕಾದಷ್ಟಕ್ಕೆ ಮಕಮಾಡಿ ಕೊಡ್ತಿಯಿಂದ ಕಟ, ಕಟ ಬಡಿದು ರಂಟೆ, ಕುಂಟೆ, ಕೂರ್ಗಿ ಎಡೆನೊಗ, ಕೂರ್ಗಿನೊಗ, ಬಂಡಿನೊಗ, ಸೆಡ್ಡಿ, ಕೂರ್ಗಿಬಟ್ಟಲು, ಬಿತ್ತಲಿಕ್ಕೆ ಬೇಕಾದ ಎಲ್ಲಾ ಸಾಮಾನುಗಳು ಅವಸರಕ್ಕೆ ತಯಾರಾಗುತ್ತಿದದ್ದು ಇಲ್ಲೆ. ಪುಷ್ಯಮಳೆ, ಹಿರಿಪುಷ್ಯ, ಚಿಕ್ಕಪುಷ್ಯದ ಮೊದಲ ಪಾದ, ಇಲ್ಲವೆ ಎರಡನೆ ಪಾದದೊಳಗೆ ಮಳೆಬಂತು ರೈತರಹುಮ್ಮಸ್ಸು ಇಮ್ಮಡಿಯಾಗುತ್ತಿತ್ತು. ಅದರಲ್ಲೇ ಸ್ಥಿತಿವಂತರಾದವರು ಬೇಸಿಗೆಯೊಳಗೆ ತಮಗೆ ಬೇಕಾದ್ದನ್ನ ಮಾಡಿಟ್ಟುಕೊಂಡರೆ, ತುರಕೆ ಬಂದಾಗ ತುರಿಸಿಕೊಳ್ಳುವ ಜಾಯಮಾನದವರು ಮಳೆಬಿದ್ದ ಮೇಲೆ ಆರ್ಭಟ ಮಾಡುತ್ತಿದ್ದರು. ಆಗ ಈರಭದ್ರಚಾರಿ ತನ್ನ ಅಳಿಯಂದಿರಾದ ಮೌನಾಚಾರಿ, ಬುಡನಿಂಗಾಚಾರಿಯರನ್ನು ಎಳ್ಕೊಂಡ ಬರ್ತಿದ್ದ. ಇಬ್ಬರು ಗರಗಸದಿಂದ ತುಂಡು ಹಾಕಿ ಕೆತ್ತಿದರೆ, ತಿದ್ದುವ ಕೆಲಸ ಈರಭದ್ರಾಚಾರಿ ಮಾಡಿ ಮುಗಿಸುತ್ತಿದ್ದ. ಮುಂದಕ್ಕೆ ಕಬ್ಬಿಣದ ಕುಳ ತಂದು ಅದಕ್ಕೆ ಬೇಕಾದ ರೂಪದ ಕಬ್ಬಿಣದ ಮೊಳೆಗಳನ್ನ ಬಡಿಸಿಕೊಳ್ಳುವುದಕ್ಕೆ ದುರ್ಗಪುರದ ಕಮ್ಮಾರ ಕವಲಪ್ಪನ ಹತ್ರಕ್ಕೆ ಹೋಗುತ್ತಿದ್ದರು.

ಎಷ್ಟೆ ರಂಟೆ, ಕುಂಟೆ, ಕೂರ್ಗಿ, ಕಿರನಗ, ಎಡೆನಗ, ಕೂರ್ಗಿನಗ, ಬಂಡಿನಗ ಎಡೆಕುಂಟೆ, ಎರಡು ತಾಳಿನ ಕುಂಟೆ, ಸಾಲು ಮುಚ್ಚುವ ಕುಂಟೆ ಏನೆ ಮಾಡಿದರೂ ಈರಭದ್ರಚಾರಿ ಹಸಿವು ಮಾತ್ರ ಹಿಂಗಿರಲಿಲ್ಲಾ. ಮರದ ಬಡ್ಡಿ ಕೆತ್ತಿದ ಚಕ್ಕಿಗಳನ್ನು ರಂಗವ್ವನ ಅಂಗಡಿಗೆ ಕೊಟ್ಟು ಚಾ ಕುಡಿತಿದ್ದ. ಉಳಿದ ದೊಡ್ಡ ತುಂಡುಗಳನ್ನು ಕೂಡಿಸಿಕೊಂಡು ಗೊಬ್ಬರದ ಚೀಲದಲ್ಲಿ ತುಂಬಿಕೊಂಡು ಮನೆಗೆ ಹೊತ್ಕೊಂಡು ಹೋಗುತ್ತಿದ್ದ. ರಂಟೆ ಮಾಡಿದಕ್ಕೆ ಒಂದುವರೆಗಿದ್ನ ಕುಂಟೆಗೆ ಎರಡುಗಿದ್ನ ನೊಗ ಕೆತ್ತಿದರೆ ಮೂರುಗಿದ್ನ ಕಾಳು ಕೊಡುತ್ತಿದ್ದರು. ಆ ಕಾಳನ್ನು ಚೀಲದೊಳಗೆ ತುಂಬಿಕೊಂಡು ವರ್ಷಕ್ಕೆ ಒಂದು ದಪ ಐದಾರು ಚೀಲ ತುಂಬ ಜೋಳ, ರಾಗಿ, ನವಣೆ, ಸಾಮೆ, ಸಜ್ಜಿ ಕೂಡ ಕೊಡುತ್ತಿದ್ದರು. ಗುರೆಳ್ಳು, ಸಾಸಿವೆ, ತೊಗರಿ ಮುಂತಾದ ಅಕ್ಕಡಿ ಕಾಳು ರೈತರು ಬಡಿಗೆಪ್ಪಗೆ ಹಿಂದೆ ಮುಂದೆ ನೋಡದೆ ದಾನ

ಮಾಡುತ್ತಿದ್ದರು. ಆದರೆ ಬಡಗಿಗೆ ಅದೇನ ಶಾಪವೊ ಏನೋ ಏನುಕೊಟ್ಟರು ಯಾವ ದಿರ್ಬೇವೂ ಬರುತ್ತಿರಲಿಲ್ಲಾ ಅದೇ ಬಡತನ. ಈರಭದ್ರಾಚಾರಿಗೆ ಮೂರ್ನಾಕು ಗಂಡು ಮೂರು ಹೆಣ್ಣು ದೊಡ್ಡ ಕೂಡುಕುಟುಂಬ. ಅಜ್ಜಿ ನೂತಿದ್ದು ಮೊಮ್ಮಗನ ಕುಲಾಯಿಗೆ ಅನ್ನುವಂತೆ ಈರಭದ್ರಚಾರಿ ಹೊತ್ತಾರೆ ಭದ್ರಾನಾಯ್ಕನ ತಾಂಡಕ್ಕೆ ಬಂದು ಬಿಳಿ ಅಂಗಿ ಕಳಚಿ ಒಳ ಅಂಗಿಯ ಮೇಲೆ ಜನಿವಾರ ತೋರಿಸಿಕೊಂಡು ಕರಿಮೈ ಅರ್ಧ ಕಾಣುವಂತೆ ದೊಡ್ಡ ಬಾಚಿಯಿಂದ ಇಡಿಯಾದ ಮುಳ್ಳುಜಾಲಿ ಬಡ್ಡಿಯನ್ನು ಕೆತ್ತಿ ರಂಟೆಯ ರೂಪಕ್ಕೆ ತಂದು ಬೊರಗಿಯಿಂದ ಒಂದು ತೂತು ಮಾಡಿ ದೊಡ್ಡ ಉಳಿಯಿಂದ ಅದನ್ನ ಬಿಡಿಸಿಕೊಂಡು ಹೀಚು ಒಳಗೆ ಸೇರುವಂತೆ ತೂತು ಮಾಡಿ, ಹಳೆಯ ಹೀಚನ್ನೆ ತೊಡಿಸುತ್ತಿದ್ದ. ಇಲ್ಲಿಕ್ರ ಹೊಸದನ್ನು ಮಾಡಿ ಸೇರಿಸಿ, ಚಕ್ಕಿ ಕಟ್ಟಿದನೆಂದರೆ ಮುಗಿತು ಮಿಸಕಾಡುತ್ತಿರಲಿಲ್ಲಾ. ರಂಟಿಕುಳಸವದಾಗ ಕುಳಕಿತ್ಕೊಂಡು ಜಿಗಳಿಯನ್ನ ಕಿತ್ತು ಬಡಿದು ಮಾಡ್ಕೊಳ್ಳದು ಬಿಟ್ಟರೆ ರೈತರಿಗೆ ಹೆಚ್ಚು ಕೆಲಸ ಇಲ್ಲದಂತೆ ಮಾಡುತ್ತಿದ್ದ. ಒಂದು ಸಾಸಾನರಂಟಿ ಮಾಡಿದ್ರೆ ಮೂರಿಂದ ನಾಕ ವರ್ಷ ಹೆಂಗಾನ ಹೊಡಿ ಜುಪ್ ಅಂತಿರಲಿಲ್ಲಾ. ತಾಂಡದಾಗ ಯಾವ ದೊಡ್ಡ ರೈತರೂ ಇರಲಿಲ್ಲಾ. ಎಲ್ಲಾ ತುಂಡು ರೈತರೆ. ಸಣ್ಣ ಹಿಡುವಳಿದಾರರು, ಯಾರದೊ ಒಂದು ಎಕ್ಕರೆ, ಎರಡು, ಮೂರು, ಐದುಹೆಚ್ಚಂದ್ರೆ. ಕೂಡುಕುಟುಂಬಗಳು ಕಡಿಮೆ, ಬಹಳ ಮೊದಲು ಮೆಗಳ ಓಣಿಯ ದುಷ್ಟಾನಾಯ್ಕನ ಹಿರಿಕರು ಐದಾರು ಮಂದಿ ಒಟ್ಟಿಗಿದ್ದರಂತೆ. ಅವರದೆ ದೊಡ್ಡ ಕುಟುಂಬವಿತ್ತು. ಅಂತ ಜನ ಮಾತಾಡಿಕೊಳ್ಳುತ್ತಿದ್ದರು. ಅವರು ಬೇರೆಯಾದ ಮೇಲೆ ಒಂದೇ ಕೂಡುಕುಟುಂಬ ಉಳದಿದ್ದು ತೊಪುನಾಯ್ಕಂದು. ತೊಪು ತಮ್ಮಂದಿರಾದ ಹೀರಣಾನಾಯ್ಕ, ಜಂಗೀರನಾಯ್ಕ, ಬಂಗಲ್ಯಾನಾಯ್ಕ ಹೊಡದಾಡಿ ಬೇರೆ ಆದ ಮೇಲೆ ಹಿಂಡಮಂದಿ ಮಕ್ಕಳನ್ನ ಕಟ್ಟಿಕೊಂಡು ಬೇರೆಯಾದ ತೊಪುನ ಮಕ್ಕಳು ಹಂಗೆ ಕೈಗೆ ಬಂದ ಮೇಲೆ ಮುಂದಿನ ಹಾಸಿಗೆಯಲ್ಲಿ ಕಾಡುಕಡಿದ್ದು ಹದಿನೈದು ಎಕ್ಕರೆ ಭೂಮಿಯನ್ನ ಸಾಗವಳಿ ಮಾಡಿದ. ಮುಂದೆ ಹಸನಸಾಬಿ ಹೊಲ ಖರೀದಿ ಮಾಡಿದ. ನಾಕ ಎತ್ತುಗಳು, ನಂತರದಲ್ಲಿ ಮತ್ತೆರಡು ಗಿಡ್ಡಗಳನ್ನ ತಗೊಂಡು ಆರು ಎತ್ತುಗಳನ್ನು ಮಾಡಿಕೊಂಡಿದ್ದ. ಈರಭದ್ರಚಾರಿತಾವ ಒಂದಲ್ಲಾ ಒಂದು ಕೆಲಸ ಇರ್ತಾಯಿತು. ಮೆಳಿಕೂಡಿಸೊದು, ಗುಂಬಸರಿಮಾಡೋದು, ಕಾಯಿಗೊಲು ಮಾಡಿಸೋದು, ಏನೂ ಇಲ್ಲಪ್ಪಾ ಅಂದ್ರ ಜಂತಕುಂಟಿ, ಗೋರಿ, ಒತ್ತಸಾವಿಗೆ ಮಣಿ, ಸ್ಯಾವಿಗೆ ಮಣಿ ಮಾಡಿಸೋದಕ್ಕಾದರೂ ಬರುತ್ತಿದ್ದ ತೊಪು. “ಬಾ ತೊಪು ನಾಯ್ಕಣ್ಣ, ಬಾಳದಿನಗಳಾದ್ವು ಕಾಣಲೇ ಇಲ್ಲ” ಈರಭದ್ರಾಚಾರಿ ಬೊರಗಿ ತಿರುಗಿಸುತ್ತಲೆ ಕೇಳಿದ. “ಎಯ್, ಕೆಲ್ಸ ಏನೂ ಇರಲಿಲ್ಲಾ ಮುಂದಿನ ಕಾರ್ತಿಕಕ್ಕೆ ಎಲ್ಲಾ ಹೊಸ ಸಾಮಾನುಗಳು ಮಾಡಿಸೋದು ಅಂತಿತ್ತು ಆದ್ರ ಬಿತ್ತಕ ಸೆಡ್ಡಿಗಳು ಎಡವಟ್ಟು ಆದಾವು ಅಂತ ಬಂದೆ ನೋಡಪ್ಪ” ಅಂತ ಕೈಯಾಗಿದ್ದ ಮೂರು ಸೆಡ್ಡಿಗಳನ್ನು ಮುಂದಿಟ್ಟ. “ಅಲ್ಲಪ್ಪ ಊರಾಗ ದೊಡ್ಡ ಕಮತದವನಂದ್ರ ನೀ

ಒಬ್ಬಾತನೆಉಳ್ಕೊಂಡಿರೋದು ಯಾರದಾರ, ಎಲ್ಲಾ ಒಂದೆಲ್ಡ ಎಕ್ಕರಿ ಗಿರಾಕಿಗಳು. ನೀ ನಮ್ಮ ತಾವ ಬರ್ತಿರಬೇಕು ಅಂದ್ರೇನೆ ಈ ಜಾಗಕ್ಕೆ ಕಳೆಬರೋದು" ಹಿಂದ ಮುಂದ ನೋಡದೆ ಈರಭದ್ರಾಚಾರಿ ಲಗಾಯಿಸಿದ. ಅದನ್ನ ಕೇಳಿ ತಡಕೊಳ್ಳಾಕ ಆಗದೆ, ತಾಂಡದ ಪೂಜಾರಿ ಪಿಂಗಾಣಿ, ದನದ ವ್ಯಾಪಾರ ಮಾಡೊ ಡೋಬರ್ಯಾ, ರಂಗೋಲಿ ಪುಡಿ ಮಾರೊ ಚಂದ್ರೇಶಿಗ ಎಲ್ಲಿತ್ತೊ ಸಿಟ್ಟು "ಎಯ್, ಆಚಾರಿ ಮಂದಿ ಬಗ್ಗೆ ಮಾತಾಡ್ಡಿದ್ರ ಹೊಟ್ಟೆಗ ತಿಂದಕೂಳು ಅರಗೊದಿಲ್ಲೇನು ನಿಂದು, ನನ್ನ ಕೆಲ್ಸ ಮಾಡಾಕತ್ತಿ ಅಂದ ಮೇಲೆ ಬಾಯಿ ಮುಚ್ಕೊಂಡು ಮಾಡಬೇಕು" ಪೂಜಾರಿ ಪಿಂಗಾಣಿ ದಾಟಿಸಿದ. ಈರಭದ್ರಾಚಾರಿ ತಲಿ ಗಿರ್ರಂತು. "ಎಯ್, ನಿನ್ನದೊಂದು ರಂಟಿ ಹಾಸಲಿಲ್ಲಾಂದ್ರ ಏನಾದೀತು ತಗೊಂಡ ನಡಿಯೊ" ಅನ್ನಬೇಕಂತ ಬಾಯಿಗ ಬಂದ ಮಾತು ಮನಿಪರಿಸ್ಥಿತಿ ಕಣ್ಣಿಗೆ ಕಟ್ಟಿದಂಗಾಗಿ ಖಾಲಿ ಉಸರು ಹೊರಗ ಬಂತು. "ಐ ನನ್ನ ಶಿವನ ನಾ ಅನ್ನ ಬಾರದ ಏನಂದೆ ಪೂಜಾರಪ್ಪ, ನೀ ಯಾಕ ಹಿಂಗ ಸಿಟ್ಟಿಗ ಬರ್ತಿಯಾ, ಆಯ್ತು ಬಿಡು ಮರಾಯ ಮಾತಾಡೊದಿಲ್ಲ" ತುಟಿ ಕಚ್ಚಿದ. ತೊಪುನಾಯ್ಕಗ ಪರಿಸ್ತಿತಿ ಅರಿವಾಗಿದ್ದೇ ನಾಯಿ ತಡವಿ ಲಕ್ಷಣ ಯಾಕ ಕೆಡಿಸಿಕೊ ಬೇಕಂದವನೆ ಸುಮ್ಮನಾದ. ಆಚಾರಿಗ ಮಾತ್ರ ಯಾಕೊ ತನ್ನ ಮಾತಿನ ಸ್ವಾತಂತ್ರ್ಯ ಕಸಿದುಕೊಳ್ಳುತ್ತಿರುವುದು ಅರಿವಾಗಿ ಮನಸ್ಸಿಗೆ ಸಮಾಧಾನ ಇಲ್ಲದಾಯಿತು. ಆದರೂ ತಾನು ಈ ಮಂದಿಗೆ ಅವಲಂಬಿ ಹುಟ್ಟಿನಾರಂಭದಿಂದ ಅವರಪ್ಪ ಕುಂಟಬಡಗಿ ಅಂತಲೆ ಖ್ಯಾತನಾಗಿದ್ದ ಕಲ್ಮೇಶಾಚಾರಿ ಹಿಂದ ತಾಂಡಕ್ಕೆ ಬಂದು ಸಣ್ಣಪುಟ್ಟ ಉಜ್ಜಗೊಲ್ಡ ಹೊಡಿಯೋದು, ಉಳಿಯಿಂದ ಕೆಲಸ ಮಾಡೋದು ಮಾಡ್ತಾ ಕೆಲಸ ಕಲಿತಿದ್ದ. ಆವಾಗಿನಿಂದ ತಾಂಡಕ್ಕೆ ಬರುತ್ತಿದ್ದವನು ಅಪ್ಪ ಸತ್ತ ಮೇಲೆ ತಾನೆ ಖುದ್ದಾಗಿ ಸೊಟ್ಟಪಟ್ಟ ರಂಟಿ ಹಾಸೋದು, ಮಂದಿ ಕೈಯಿಂದ "ಲೇ ಈರಭದ್ರಚಾರಿ ರಂಟಿಯನ್ನಕಡದ ಅಕ್ಷರ 'ಊ' ಹಂಗೆ ಹಾಸಿಯಲ್ಲೋ ನೆಲದಾಗ ಹೊಡಿಯಾಕ ಹೋದ್ರ ಮುಗಲ ನೋಡುತೆ" ಅಂತ ಮಂದಿ ಹಾಸ್ಯೇವು ಮಾಡಿದ್ರು. "ಲೇ ಈಚು ಸರಿಗ ಮಾಡು" ಇನ್ಯಾರೊ "ಥು ನಿನ್ನ ಮನಿಹಾಳಾಗ ಕೂರ್ಗಿ ನೊಗ ಮಾಡಂದ್ರ ಇನ್ಯಾವದೊ ನಗ ಮಾಡಿಯಿಲ್ಲ" ಅಂತಂದು ಬೇಕ ಬೇಕಂತ್ಲೆ ಮಾತಾಡುತಿದ್ರು. ಎಲ್ಲಾ ಕುಟಕು ಮಾತುಗಳನ್ನ ಕೇಳಿ ಕೇಳಿ ಕೆಲಸದೊಳಗೆ ನೈಪುಣ್ಯತೆ ಸಾಧಿಸಿದ್ದ. ಈಗ ಮಂದಿ ಈರಭದ್ರಾಚಾರಿನ ಬಿಟ್ಟು ಬೇರೆ ಯಾರೆ ಬಂದರೂ ಬೇಡಪ್ಪ ಬೇಡ ಬಿಡು ಅಂತಾರ. ಹಿಂಗ ಈರಭದ್ರಾಚಾರಿಯ ಕೈಚಳಕ ಹೆಸರು ಪಡೆದಿತ್ತು. ಆದರೆ ಕಾಲಕ್ರಮೇಣ, ಕಿರ್ಲೋಸ್ಕರ್ ಕಂಪನಿಯವನು ನಾಕೆತ್ತಿನ ಕಬ್ಬಿಣದ ರಂಟೆ (ನೇಗಿಲು) ಗಳನ್ನು ತಯಾರಿಸಿದ ಮೇಲೆ, ಮತ್ತೆ ಎರಡೆತ್ತಿನ ಕಬ್ಬಿಣದ ರಂಟೆಯನ್ನು ಬಿಟ್ಟ. ನಿಧಾನಕ್ಕೆ ಮರಗಳು ಮಾಯವಾಗಿ ಮುಟ್ಟಿಗೆ ಮರಗಳೆ ಸಿಗದೆ ರೈತರು ಪರದಾಡುತ್ತಿದ್ದ ಸಮಯಕ್ಕೆ ಸರಿಯಾಗಿ ರಂಟಿ ಬಂದರೆ. ಈರಭದ್ರಚಾರಿ ಎದಿ ಧಸಕ್ಕೆಂದಿತ್ತು. ಎಂದು ಕಾಣದ, ಕಂಡು, ಕೇಳರಿಯದ ಸಾಮಾನುಗಳು ಮಾರುಕಟ್ಟೆಗೆ ಬರುತ್ತಿದ್ದಂತೆ ಭವಿಷ್ಯ

ಕತ್ತಲಾಗಿ ಕಾಣತೊಡಗಿತು. ಮಂದಿ ಹಳೆ ಸಾಮಾನುಗಳ ರಿಪೇರಿಗೆ ಬರತೊಡಗಿದರು. ಬಂಡಿಗಳು ಬದಲಾಗಿ ಟೈಯರ್‌ಗಾಡಿಗಳು ಬರತೊಡಗಿದವು. ಈರಭದ್ರಾಚಾರಿಗೆ ಕೇಳಿಸುವಂತೆ "ಆ ಕೊಂಡ್ಲಿಪುರದಾಗ ಸಾವುಕಾರ ಪುರ್ಲಿ ಹನುಮಪ್ಪ ಟ್ಯಾಕ್ರಿ ತಂದಾನಂತ. ಹಂಗ ರಂಟಿ ಹಾಕ್ಕೊಂಡು ಗಂಟೆಗ ಎಕ್ಕರಿ ಹೊಡತಾನಂತ. ಆಟೆ ಅಲ್ಲಾ, ಹರಗಾಕ ಕುಂಟಿ, ಬಿತ್ತಾಕ ಕೂರ್ಗಿ ಎಲ್ಲಾ ಟ್ಯಾಕ್ರಿಯೊಳಗ ಬಂದಾವಂತ ಏನಪ." ಇಸ್ಮಾಯಿಲ್ ಮಂದಿ ಮುಂದ ಹೇಳುತ್ತಿದ್ದ. "ಕಬ್ಬಿಣ ಬಂತು ಅಂದ್ರ ಕಾಲ ಕೆಡ್ತು ಅಂತ್ಲೆ" ಹಿಂದಲೂರ ಪಕ್ಕೀರ ತನ್ನದೆ ಫಿಲಾಸಫಿ ಓದಿದ. ಈರಭದ್ರಾಚಾರಿಗೆ ಒಳಗೊಳಗೆನೋವು, ಸಂಕಟ ಹೆಚ್ಚಾಗತೊಡಗಿತು. ಮದುವೆಯಾಗಲಿರೋ ಮೂವರು ಹೆಣ್ಣುಹುಡುಗಿಯರು, ಅವುಕೆಂಪಗೆ ಅವರ ತಾಯಿ ಪಿಂಚಮ್ಮಂದ್ರಲ್ಲಿ ಬಿಳೋದ ಬಿಟ್ಟು ಕರ್ರಗೆ ತೇಟ್ ಈರಭದ್ರಾಚಾರಿನ ನೋಡಿದಂಗದಾವು ಯಾರ ತಾನೆ ಮುಂದೆ ಬಂದಾನು ಎನ್ನುವ ಆತಂಕ.

ಈರಭದ್ರಚಾರಿ ಕನಸಿನೊಳಗೆ ರಂಟಿ, ಕುಂಟಿ ಕೂಡಗೊಲಹಿಡಿ, ಕೂರ್ಗಿ ಬಟ್ಟಲ, ಸೇಡ್ಡಿ, ರಂಟೆ ಮೆಳೆ, ಕುಂಟಿ ಮಳೆಗಳೆ ಬರತೊಡಗಿದವು. ಸರ್ಕಾರ ಬೇರೆ ಅರ್ಧ ದುಡ್ಡಿಗೆ ಟ್ಯಾಕ್ರಿ ಕೊಡಾಕ ಆರಂಭಿಸಿದ ಮೇಲೆ ಕಂಡಿಪುರ, ದುರ್ಗದೂರು, ಕರ್ಲಾಪುರ, ಸೀತಾಪುರ, ಸೊಂಬೇರಳ್ಳಿ, ಸಾಮನೂರುಗಳಲ್ಲಿ ಐದಾರು ಎಕ್ಕರೆ ಜಮೀನುಳ್ಳವರು ಭೂಮಿ ಅಡಾಯಿಟ್ಟು ಟ್ಯಾಕ್ರಿ ತಂದರು. ಅಲ್ಲಿಗಾಗಲೆ ಒಂದು ಪರ್ವಕಾಲ ಉರುಳಿದಂತಾಗಿತ್ತು. ಮುಂದೆ ಬೇನಮರದ ಕೆಳಗೆ ಕೈ ಬೊರು ಸರ್ಕಾರದಿಂದ ಬಂತು, ರಂಗಮ್ಮನ ಚಾದಂಗಡಿ ಎತ್ತಂಗಡಿಯಾಗಿತ್ತು. ಅದೇ ಜಾಗದ ಮೂಲೆಯಲ್ಲಿ ಪ್ರತಿ ಬೇಸಿಗೆಯಲ್ಲಿ, ಮುಂಗಾರಿನಲ್ಲಿ ಈರಭದ್ರಾಚಾರಿ, ಮೌನಾಚಾರಿ, ಡಕಣಾಚಾರಿ ತಮ್ಮ ಸಾಮಾನಿಟ್ಟು ಗರಗಸದಿಂದ ಕಟ್ಟಿಗೆ ತುಂಡು ಮಾಡುತ್ತಿದ್ದದ್ದು ನಿಂತುಹೋಯಿತು. ಊರ ನಡುವೆ ಇದ್ದ ಸೇದೊಬಾವಿಯ ಜಲ ಬತ್ತಿ ನೀರೆ ಇಂಗಿ ಹೋಯಿತು. ಹನುಮಜ್ಜನಿಗೆ ಜಾಗ ಇಲ್ಲದಂಗಾಗಿತ್ತು. ಲಮಾಣಿ ಮಂದಿ ಕಟ್ಟೆಯ ದಕ್ಷಿಣಕ್ಕೆ ಮಾಡುತ್ತಿದ್ದ ಸೀತ್ಲಾ ಮಾತ್ರ ನಡೆಯುತ್ತಲೆ ಇತ್ತು. ಚೆಂಡಿಲ್ಲದ ಕೋಳಿಗಳು ಹಾರಾಡುವುದು ಮಾತ್ರ ನಿಂತಿರಲಿಲ್ಲಾ. ಈಗ ಈರಭದ್ರಾಚಾರಿಯ ಬೊರ್ಗಿಯ ಕರಕರ ಸದ್ದು ಉಳಿಯ ಕಟಕಟ ಸದ್ದು ನಿಂತುಹೋಗಿದೆ. ಹುಲಿಯೂರ ಭದ್ರಾನಾಯ್ಕನ ತಾಂಡಕ್ಕೆ ಹೋದಾಗೊಮ್ಮೆ ಬೇವಿನಮರ ಅನಾಥವಾಗಿ ಎಷ್ಟೋ ಘಟನೆಗಳಿಗೆ, ಎಷ್ಟೊ ನ್ಯಾಯ ಪಂಚಾಯ್ತಿಗೆ, ಎಷ್ಟೋ ಜನರ ನೋವಿಗೆ ಮಿಡಿದದ್ದಕ್ಕೆ ಸಾಕ್ಷಿಯಾಗಿ ಹಾಗೆ ನಿಂತಿದೆ. ಗುದ್ದಮ್ಮನ ಗುಡಿ ಮಾತ್ರ ಮಾಯವಾಗಿದೆ. ಏನೊ ಕಳೆದುಕೊಂಡ ತಳಮಳದಲ್ಲಿ ಹುಲಿಯೂರನ ಮನಸ್ಸು ಹೊಯ್ದಾಡುತ್ತಿದೆ. ನಾಗರೀಕ ಪ್ರಪಂಚದ ದುರಂತಕ್ಕೆ ಸಾಕ್ಷಿಯಾಗಿ ಬೇವಿನಮರ ಮೌನವಾಗಿಯೆ ಮೂಖವಿಸ್ಮಯವಾಗಿದೆ.

* * *

9. ಕುಂಬಾರ ಭೀಮಣ್ಣನೊ ತಗರಿಪುಳ್ಳಿ ಪ್ರಸಂಗ

ಸಿಲಾವರಿ, ಇಸ್ಟಿಲ್‌ಗಳು ಪ್ರವೇಶ ಮಾಡೋದಕ್ಕೆ ಮುಂಚೆ, ಮಣ್ಣಿನ ಮಡಿಕೆ, ಕುಡಿಕೆ, ಸ್ವಾರಿ ಮಜ್ಜಿಗೆ ಸ್ವಾರಿ, ಹಾಲಿನ ಸ್ವಾರಿ, ಮುದ್ದಿಸ್ವಾರಿ, ತುಪ್ಪದ ಗಡಿಗೆ, ಬ್ಯಾಳೆಬೇಯಿಸೊ ಸ್ವಾರಿ ಅದರ ಮೇಲೆ ಮುಚ್ಚುವ ಅಗಲವಾದ್ದು, ಉಣ್ಣಾಕು ಅದರಲ್ಲೆ, ನಾನ್ಕ್ಯಕುಂಡಿಯಾ, ಮೋಟೊಕುಂಡಿಯಾ, ಕೈಬಿಟ್ರೆ ಹೊಡಿತಿದ್ದವು. ಆದರೂ ಮಂದಿ ಒಡೆಯದಂಗೆ ಇಟ್ಕೊಂಡಿದ್ದರು. ಲಮಾಣ್ಯರ ಪ್ರತಿಯೊಂದು ಮದುವೆಗೂ ಕುಂಬಾರ ಭೀಮಣ್ಣನ ಮನಿಯಿಂದ ಹಾಂಡಿ ಗುಡಿಯಾ (ಸ್ವಾರಿ ಮಡಿಕೆ) ತರುವ ದೊಡ್ಡ ಶಾಸ್ತ್ರವೇ ಇತ್ತು. ವರನ ಮನೆಯವರು ದುಡ್ಡು ಕೊಟ್ಟ, ಹುಡುಗಿಯರಿಗೆ ಖರ್ಚಿನ ಬಾಬ್ತು, ಹುಡುಗರ ಕುಡಿತದ ಬಾಬ್ತು ಅಂತ ನೂರಿನ್ನೂರು ಕೈಬಿಡುತ್ತಿತ್ತು. ಅದರಲ್ಲಿ ಕುಡಿಕೆ, ಚಿಪ್ಪಾ (ಮಣ್ಣಿನ ಅಗಲವಾದ ತಾಟಿನಂತಹದ್ದು) ಚಲಕೊಡ, (ಗುಬ್ಬಿಯಂತಹದ್ದು) ಹಾಂಡಿ (ಸ್ವಾರಿ) ಘುಡಿಯಾ (ಮಡಿಕೆ) ತರದಿದ್ದರೆ ಮದುವೆ ಆಗುತ್ತಿರಲಿಲ್ಲಾ. ಈಗಲೂ ಆ ಪದ್ಧತಿ ಆಚರಣೆಯಲ್ಲಿದೆ. ಆದರೆ ಮಣ್ಣು ಹದ ಮಾಡಿ ಮಡಿಕೆ ಮಾಡೊ ಕುಂಬಾರರು ಮಾತ್ರ ನಾಪತ್ತೆಯಾಗಿದ್ದರೆ. ಭೀಮಣ್ಣಗೂ ತಾಂಡಕ್ಕೂ ಅವಿನಾಭಾವ ಸಂಬಂಧ. ವರ್ಷವಿಡಿ ತೇಗೂರಿನ ಸೋಮ್ವಾರ ಸಂತಿಗ ಹೋಗುವವರು ಕುಂಬಾರ ಭೀಮಣ್ಣನ ತಾವ ಇಟ್ಟಿರೊ ಖಾತೆದಾಗ ಮುಚ್ಚಳ, ಅಗಲ ಮಡಿಕೆ, ಕುಡಿಕೆ, ಸ್ವಾರಿ ತಂದೆ ತರ್ತಿದ್ದರು. ಸುಗ್ಗಿಕಾಲಕ್ಕ ಭೀಮಣ್ಣ ಕಣದ ಮೇಲೆ ಬಂದು ಚೀಲ ಒಡ್ಡುತ್ತಿದ್ದ ಮಂದಿ ಆಯದ ಕಾಳು ಸುರಿದು ಕಳುಹಿಸುತ್ತಿದ್ದರು.

ಕುಂಬಾರ ಭೀಮಣ್ಣ ಒಳ್ಳೆಯ ಜೇಡಿಮಣ್ಣು ತಂದು ಮನೆಮಂದಿ ಎಲ್ಲಾ ಸೇರಿ ತುಳಿದು ಹದಮಾಡಿ ಮಡಿಕೆಗೆ ತಯಾರು ಮಾಡಿದರೆ ತನ್ನ ಬಂಡಿಗಾಲಿಯಂತಹ ತಿದಿಯಲ್ಲಿ ಮಣ್ಣು ಹಾಕಿ ಕೋಲಿಂದ ತಿರುಗಿಸಿದರೆ ಮಡಿಕೆ ರೂಪಗೊಳ್ಳುತ್ತಿತ್ತು. ಅದನ್ನ ತೆಗೆದು ಇಟ್ಟ ನಂತರ ಅದನ್ನು ಸುಡಲು ಕಟ್ಟಿಗೆ ಜೋಡಿಸುತ್ತಿದ್ದರು. ಸಮಪ್ರಮಾಣದ ಉರಿಯಲ್ಲಿ ಸುಟ್ಟನಂತರ ಮಾರಲು ಮಾರುಕಟ್ಟೆಗೆ ಬಿಡಲಾಗುತ್ತಿತ್ತು. ಹೀಗೆ ನೂರಾರು ರೀತಿಯ ಮಡಿಕೆಗಳು, ಕುಡಿಕೆಗಳು, ಬಾನಿಗಳು, ಸ್ವಾರಿಗಳನ್ನ ತಯಾರಿಸುತ್ತಿದ್ದ. ಸೋಮವಾರದ ಸಂತೆದಿನ ತನ್ನೂರಾದ ತೇಗೂರಲ್ಲಿ ದೊಡ್ಡದಾಗಿಯೆ ಇಡುತ್ತಿದ್ದ.

ಅಲ್ಲಿಂದ ಶುಕ್ರವಾರ ದುರ್ಗಾಪುರದಸಂತೆ. ಶನಿವಾರತಾಲೂಕ ಪ್ರದೇಶವಾದ ಹರಿಪುರ, ಮಂಗಳವಾರ ಹರಿಹರ, ಭಾನುವಾರ ದಾವಣಗೇರಿಯಲ್ಲಿ ಸೇರುವ ದೊಡ್ಡ ಸಂತೆಗಳಲ್ಲಿ ಭೀಮಣ್ಣನ ದುಕಾನ್ ಇರುತ್ತಿತ್ತು. ಇಷ್ಟೆಲ್ಲಾ ಕಡೆ ವ್ಯಾಪಾರ ಮಾಡುತ್ತಿದ್ದರೂ ಭೀಮಣ್ಣಗೆ ಬಡತನ ತಪ್ಪಿರಲಿಲ್ಲಾ. ದೊಡ್ಡ ಕೂಡುಕುಟುಂಬ ಇಡೀ ತೆಗೂರಿನಲ್ಲಿ ಕುಂಬಾರರ ಪೈಕಿ ಇರೋದು ಭೀಮಣ್ಣನದೊಂದೆ ಮನೆ ಉಳಿದಂತೆ ಸಾಧುಲಿಂಗಾಯತ, ಗಾಣಿಗಲಿಂಗಾಯಿತ, ಹಡಪದಲಿಂಗಾಯತ, ಬಣಜಿಗಲಿಂಗಾಯತ, ಜಂಗಮರು, ವಾಲ್ಮೀಕಿ ಜನರು ಎಲ್ಲರಿಗೂ ಬೇಕಾದ ಪ್ರತಿಯೊಂದು ಮಡಕೆಗಳು ಭೀಮಣ್ಣನ ಮನೆಯಲ್ಲೆ ತಯಾರಾಗುತ್ತಿದ್ದವು. ದೊಡ್ಡ ಶ್ರೀಮಂತರ ಮನೆಯಲ್ಲಿ ಮಾತ್ರ ಹಿತ್ತಾಳೆ ಪಾತ್ರೆಗಳು, ಒಂದೆರಡು ಕಂಚಿನ ತಾಟುಗಳು, ಚರಗಿ ಇರೋದು ಬಿಟ್ಟರೆ ಬಾಕಿ ಎಲ್ಲವೂ ಮಣ್ಣಿನವೆ. ಹಾಗಾಗಿಯೆ ಭೀಮಣ್ಣಗೆ ಸ್ವಲ್ಪ ಬೇಡಿಕೆ ಇತ್ತು. ಆಗ ಕಾಡಲ್ಲಿ ಒಣಕಟ್ಟಿಗೆ ಹೇರಳವಾಗಿ ಸಿಗುತ್ತಿತ್ತು. ತಂದು ಒಲೆಯಲ್ಲಿ ಉರಿಹಚ್ಚಿ ಮಡಿಕೆಗಳನ್ನ ಬೇಯಿಸುತ್ತಿದ್ದರು. ಕಂಡಿಪುರ, ದುರ್ಗದೂರು, ಕರ್ಲಾಪುರ, ಸೋಮನಹಳ್ಳಿ, ಸೀತಾಪುರ, ಇಳಂಗೋವಿ, ತೆಗೂರುಮಂದಿ ಕಾಡು ಕಡಿದುನಾಡು ಮಾಡು ಎನ್ನುವ ನೆಹರೂಸರ್ಕಾರದ ನೀತಿಗೆಕಟ್ಟುಬಿದ್ದು ಜಮೀನಿಲ್ಲದ ಬಡವರು ಮುಖ್ಯವಾಗಿ, ಕಾಡಲ್ಲೆ ಇದ್ದ ಬದ್ರಾನಾಯ್ಕನ ತಾಂಡದ ಮಂದಿ ಸುತ್ತಲಕಾಡನ್ನು ಬೋಳು ಮಾಡಿದರು. ದೊಡ್ಡ ಶ್ರೀಮಂತರು ಹಣದ ಪ್ರಭಾವದಿಂದ ಕೆಳವರ್ಗದವರನ್ನೇ ಹಚ್ಚಿ ಕಾಡು ಕಡೆಸಿ ಜಮೀನು ಮಾಡುವ ಪ್ರಕ್ರಿಯೆಯಲ್ಲಿ ಭೀಮಣ್ಣನ ಮೂರು ನಾಕು ಒಲೆಗಳಲ್ಲಿ ಒಂದೇ ಒಲೆಗೆ ಬೇಕಾಗುವಷ್ಟು ಕಟ್ಟಿಗೆ ಸಿಗತೊಡಗಿತು. ಉಳಿದಂತೆ ಅವನ ದಂಧೆ ಬಂದಾಗುವ ಪ್ರಸಂಗ ಏರ್ಪಟ್ಟಿತ್ತು.

ದಿನಗಳು ಕಳೆದಂತೆ ಕಟ್ಟಿಗೆ ಸಿಗುವುದು ಬಹಳ ಕಠಿಣವಾಗತೊಡಗಿತು. ಹಾಗಾಗಿಯೆ ಅವನು ಹಳ್ಳಿಗಳಕಡೆಗೆ ಮುಖಮಾಡಿದ. ಕಾಳು, ಅಕ್ಕತಿಕಾಳು, ಮೆಣಸಿನಕಾಯಿ ಜೊತೆಗೆ ಒಂದು ಹೇರು ತೊಗರಿಪುಳ್ಳಿ ಕೊಡುವಂತೆ ರೈತರಿಗೆ ತಾಕೀತು ಮಾಡಿದ. ತಾಂಡದಲ್ಲಿ ಕೆಲವರು ಯಾರೊ ಅರ್ಧ ಹೇರು ಯಾರೊ ಕಣಗದ ಮಟ ಶಕ್ತಿ ಅನುಸಾರ ತೊಗರಿ ಪುಳ್ಳಿ ಕೊಟ್ಟಿದ್ದರು. ಭೀಮಣ್ಣ ಎಲ್ಲಾರ ಕಣಗಳಿಂದ ಹೇರಿಕೊಂಡು ತೊಪುನಾಯ್ಕನ ಕಣದಲ್ಲಿ ಉಲ್ದಿಸಿದ್ದ. "ತೊಪ್ಪುನಾಯ್ಕ ಎಲ್ಲಾರು ಕೊಟ್ಟ ಮೇಲೆ ಊರಿಗೆ ಸಾಗಸ್ತಿನಿ ಹೆಂಗೂ ನಿಂದು ದೊಡ್ಡ ಕಣ ಮೂಲಿಯೊಳಗೆ ಹಾಕಿರ್ತಿನಿ. ಯಾಕಂದಿ ಈಗ ಬಿಟ್ರ ಅಯ್ಯೊ ಭೀಮಣ್ಣ ನಾಕದಿನ

* ಚಿಪ್ಪಾ–ಬೊಗಸೆಯಷ್ಟು ದೊಡ್ಡಮಣ್ಣಿನ ಬಟ್ಟಲು
* ಚಿಪ್ಪಿ–ಅಗಲವಾದ ಮಣ್ಣಿನ ಮುಚ್ಚಳ
* ಮಾಟ್ಲ– ನೀರು ಕಾಯಿಸುವ ದುಂಡನೆ ಸ್ವಾರಿ

ಮುಂದ ಬಂದಿದ್ರ ದೇವರಾಣಿಗೂ ಒಂದ ಬಂಡಿನ ಕೊಡ್ತಿದ್ದೆ. ಆದ್ರ ಬಣವಿ ಒಟ್ಟಿ ಬಿಟ್ಟನಿ ಏನ ಮಾಡೋದು ಮುಂದಿನ ಸಲ ಕೊಟ್ಟೇನು ಅಂತೇಳಿ ಸಾಬೂಬು ಹೇಳ್ತಾರ" ಅಂತ ಹೇಳಿದ. ತೊಪುನಾಯ್ಕಗೆ ಸತ್ಯ ಗೊತ್ತಿದ್ದರಿಂದ "ಎಯ್, ಯಾಕ ಆಗವಲದ್ದು ಭೀಮಣ್ಣ ನೀ ಯಾವಾಗ ಬೇಕಾದಾಗ ಒಯ್ಯುವಂತೆ ಮದಲು ಊರ ಅಡ್ಡಾಡು" ಅಂದ. ಹುಸೇನಿ, ಉಪ್ಪಾರ ಹನಮ, ಕೆಂದೂರ, ಬೇಡರ ಕೆಂಪಜ್ಜ, ತಿಗಳ ಪಕ್ಕೀರ ಒಂದಕಣ ಬಿಡದಂಗೆ ಒಂದ ತಬ್ಬು, ಹೊರಿ, ಚಕ್ಕಡಿ ಬಂಡಿ ಅವರವರ ಶಕ್ತಿಗನುಸಾರ ಪುಳ್ಳಿ ಕೊಟ್ಟರು. ಆದರೆ ಚರಗಿರಾಮ ಮಾತ್ರ ಬಾಯಿ ಸೊಟ್ಟು ಮಾಡಿ, "ಊರಾಗ ಮಂದಿ ಜಗ್ಗಿಕೊಟ್ಟಾರ ಬೀಮಣ್ಣಾ, ಈ ವರ್ಷ ನನ್ನ ಬಿಡು ಮುಂದಿನ ವರ್ಷ ಒಂದು ಬಂಡಿ ಬೇಕಾರ ಹೇರಿಕೊಂಡು ಹೋಗು" ಬಿಲ್‌ಕುಲ್ ಹೇಳಿದ, "ಎಯ್ ರಾಮಪ್ಪ ಮುಂದಿನ ವರ್ಷ ಯಾವಾನ ಕಂಡಾನೊ, ಈ ವರ್ಷದ್ದ ಕೊಡೋದು ಕೊಟ್ಟಬಿಡು. ನಾ ಏನು ಮುಂದಿನ ವರ್ಷದ ಮಟ ಕುಂಬಗಳನ್ನು ಸುಡೋದು ಬಿಟ್ಟು ಮುಂದಿನ ವರ್ಷದವರಿಗೆ ನಿನ್ನ ತಗರಿಪುಳ್ಳಿನ ಕಾಯಲ" ಭೀಮಣ್ಣನೂವೆ ಅಷ್ಟೆ ಲೆಕ್ಕಚಾರದಿಂದ ಹೇಳಿದ. "ನೀ ಏನೆ ಹೇಳು, ಈ ಸಲ ಕೊಡಾಕಿಲ್ಲ ಅಂದ್ರ ಕೊಡಾಕಿಲ್ಲ" ಒಂಟಿ ಹಿಡತ ಹಿಡದ. "ನೀ ಅದೆಂಗ ಕೊಡಾಕಿಲ್ಲ, ನಾ ಬಿಡಂಗಿಲ್ಲಾಂದ್ರೆ ಬಿಡಂಗಿಲ್ಲ. ನಾ ಏನು ಪುಗಸಟ್ಟೆ ಕೇಳ್ತಿದ್ದಿನಾ, ವಾರಕ್ಕೊಮ್ಮೆನಾದ್ರುವೆ ಸ್ವಾರಿ, ಮುಚ್ಚಳ, ಬಾನಿ, ಕುಂಬ ಮಡಿಕೆ, ಏನೆಲ್ಲಾ ತಂದಿಲ್ಲಾ ಹೇಳು. ಊರ ಮಂದಿಗಿಂತ ಜಾಸ್ತಿ ತಂದವನ ನೀನು ಏನಂದೆ. ಆಯಾ ಮಾಡಿರೋದೆ ನೀವು ಅಂತಾದ್ರಾಗ ಪುರಾಣ ಓದಿದರೆ ಹೆಂಗೆ ರಾಮಪ್ಪ ಸುಮ್ಮನ ಒಂದ ಚಕ್ಕಡಿ ಕೊಡು ಹೊಕ್ಕೀನಿ, ನಂದ ಖೇಮು ಬಾಳ ಐತೆ" ಅಂದು ಸ್ಪಷ್ಟ ನಿರ್ಣಯ ತಿಳಿಸಿದ. ರಾಮ ಯಾವಾಗಲೂ ಮಂದಿ ಏನು ಮಾಡ್ತಾರೊ ಅದರ ಉಲ್ಟಾ ಮಾಡೊದೆ ಅವನ ಕೆಲಸ. ಯಾರು ಕೊಡದಿದ್ದರೆ ಅವನೆ ಒಂದು ಚಕ್ಕಡಿ ತುಂಬಿ ಕೊಡುತ್ತಿದ್ದ ಅಂತ ಪೈಕಿ ಮನುಷ್ಯ. ಆದರೆ ಮಂದಿ ಕೊಟ್ಟಿರೊದಕ್ಕೆ ಅವನು ಕೊಡೊದಿಲ್ಲ ಅಂತ ಕುಂತವನೆ. "ನೋಡು ಕುಂಬಾರಣ್ಣ ನಾವೆ ಆಯಾ ಮಾಡಿದ್ರು ಈ ವರ್ಷನಮ್ಮ ಪರಿಸ್ಥಿತಿ ಪಾಡಿಲ್ಲ, ಕೊಡಾಕ ಆಗೋದಿಲ್ಲಾಂದ್ರೆ ಆಗೋದಿಲ್ಲ". ಕಡ್ಡಿ ಎರಡು ತುಂಡು ಮಾಡಿದಂಗೆ ಹೇಳಿದ. ಭೀಮಣ್ಣಗೆ ಅವನ ತಾವ ಪುಳ್ಳಿ ತಗೊಳೊ ಅನಿವಾರ್ಯತೆ ಇತ್ತು. "ರಾಮಪ್ಪ ನೀ ಅಂದಂಗೆ ಆಗವಲ್ಡ್ಯಾಕ, ಕಣಗದ ಮಟ ಬೇಡಾ, ಒಂದೆರಡು ಹೊರಿಗಳನ್ನ ಕಟ್ಟಿಕೊಡು ಅತ್ಲಗ ಹೋಗ್ತಿನಿ. ಊರಾಗ ಜಗ್ಗಿ ಕೆಲ್ಸ ಅದಾವ" ಹೂಂ ಅಂದಾನಂತ ಕಾದ. ರಾಮಪ್ಪ ನಿಧಾನವಾಗಿ ಯೋಚಿಸಿದ. "ಯಾಕೊ ಈ ಮನುಷ್ಯ ನನಗಿಂತ ಎಡವಟ್ಟು ಇದ್ದಂಗದಾನ" ಅಂದುಕೊಂಡವನೆ, ಒಂದು ತಬ್ಬಿನಷ್ಟು ಎತ್ತಿ, "ಇಗೊ ಇಟನೋಡು" ಅಂದ. "ಹೋಗಲಿ ನಿನ ಇಟ್ಕ, ಲೇ ತಮ್ಮ ನಮ್ಮ ಬಂಡಿಯೊಳಗಿಂದ ಒಂದ ತಬ್ಬು ಕೊಡು ಅತ್ಲಾಗೆ ಪಾಪ ಏನೂ ಬೆಳದಿಲ್ಲ ಅಂತಾನೆ. ಈ ಸಲ ಮಡಿಕೆ ಮಾಡೋದು ನಿಲ್ಲಿಸಿದರೂ ಪರವಾಗಿಲ್ಲ."

ಬೇಜಾರಿಂದ ಹೇಳಿದ. ಯಾರೊ ರಾಮಪ್ಪಗೆ ಚುಚ್ಚಿದಂಗಾತು. "ಆಯ್ತು ಕುಂಬಾರಣ, ಎರಡ ತಬ್ಬು ತಗೊಹೋಗು" ಅಂದವನೆ ಕಣದ ಮೂಲೆಯೊಳಗೆ ನಿಂತ. ಭೀಮಣ್ಣ ಬಿಗಿಯಾಗಿ ಗಂಟು ಕಟ್ಟಿದ ಎರಡು ಹೊರಿಗಳನ್ನು ಚಕ್ಕಡಿಯಲ್ಲಿ ಹೇರಿ ಸಾಕಪ್ಪ ಇವನ ಸವಾಸ ಅಂದ್ಕೊಂಡು ಮುಂದಿನ ಕಣಕ್ಕೆ ಹೊರಟ. ಕುಂಬಾರ ಭೀಮಣ್ಣಗೆ ತೊಗರಿಪುಳ್ಳಿ ಎಷ್ಟು ಅವಶ್ಯವಾಗಿತ್ತೆಂದರೆ, ಸುತ್ತ ಊರುಗಳ ಮಂದಿಗೆ ಬೇಕಾದ ಮಡಿಕೆ ಕುಡಿಕೆ ಬೇಯಿಸೋದು ಈತನೆ ನಾಳೆ ಪ್ರತಿಯೊಬ್ಬರು ಮುಗಿಬಿದ್ದರೆ ಏನ ಮಾಡೋದು ಅಂತ ಚಿಂತೆಯಾಗಿ ಜಗಳ ಆಡಿಯಾದರೂ ಕಟ್ಟಿಗೆ ಒಟ್ಟು ಮಾಡುತ್ತಿದ್ದ.

ಭೀಮಣ್ಣನ ಶ್ರೀಮಂತಿಕೆ ಅಂದರೆ, ಸುತ್ತ ಇಪ್ಪತ್ತ ಹಳ್ಳಿಮಂದಿ ವಿಶ್ವಾಸ, ಪ್ರತಿಯೊಬ್ಬರು ಕುಂಬಾರ ಭೀಮಣ್ಣ ಅಂದ್ರೆ ನಂಬಿಗಸ್ಥ, ದುಡಿಮೆ ಮಾಡುವ ಶ್ರಮಜೀವಿ ಮಾನವ ಅಂತಃಕರಣ ಉಳ್ಳವನು, ಸಣ್ಣವರು ಹೋದರು ಗೌರವದಿಂದ ಮಾತಾಡುತ್ತಾನೆ ಅನ್ನೊ ಮಾತುಗಳು. ಆತ ಬದುಕಿದ ದಿನದವರೆಗೂ ಮಂದಿ ಬಗ್ಗೆ ಮಾತಾಡಿದ್ದಿಲ್ಲ ಕೆಲಸ ಆಯ್ತು ತಾನಾಯ್ತು ಅಷ್ಟೆ ಆತನ ಬದುಕು. ಡಾ. ರಾಜಕುಮಾರ್ ನಟನೆಯ ಭಕ್ತಕುಂಬಾರ ಸಿನಿಮಾ ಬಂದಮೇಲಯ ರಾಜ್‌ಕುಮಾರ್ ಮಾಡಿರುವ ಆ ಭಕ್ತಕುಂಬಾರನ ಪಾತ್ರದ ಕುಂಬಾರ ನಮ್ಮ ಭೀಮಣ್ಣನೇಯ ಅಂತ ತಿಳಿದುಕೊಂಡಿದ್ದರು ಮಂದಿ. ಅದೆಂತ ಅಸಹನೀಯ ತಾಳ್ಮೆಯೊ ಆತನದ್ದು, ಯಾರೆ ರೇಗಲಿ, ಕೂಗಲಿ ಹಸನ್ಮುಖಿಯಾಗಿಯೇ ಉತ್ತರಿಸಿ ಬೇಕಾದ್ದು ಕೊಟ್ಟು ಕಳುಹಿಸುತ್ತಿದ್ದ. ಜಗಳ ಮಾಡುವವನೆ ನಾಚಿಕೆಯಿಂದ ತಲೆ ತಗಿಸಿಕೊಂಡು ಹೋಗುತ್ತಿದ್ದ. ಆತನ ಕಾಯಕದ ಆದರ್ಶವನ್ನ ಬೇರೆ ಕುಲಕಸಬಿನವರೇನಾದರು ತಿಳಿದುಮಾಡಿದ್ದೆಆದರೆ ಸುಭಿಕ್ಷಕಾಲ ಬಂದೊದಗುವುದರಲ್ಲಿ ಎರಡು ಮಾತುಗಳಿಲ್ಲಾ. ಆದರೆ ಓಡುತ್ತಿರುವ ಕಾಲರಾಯ ಎಲ್ಲವನ್ನು ಬದಲಾಯಿಸುತ್ತಿರುವಾಗ ಮಡಿಕೆ, ಕುಡಿಕೆಗಳದ್ದೇನು? ಸಿಲಾವರಿ ತಾಟು ಚರಗಿ ಪ್ರವೇಶ ಮಾಡಿದ್ದವು. ಮಣ್ಣು ಮೆತ್ತಗಾಗತೊಡಗಿತು. ಕ್ರಮೇಣ ಕಡಿಮೆ ದರದಲ್ಲಿ ಸ್ಟೀಲ್ ಬಂತು ಮಂದಿ ಭೀಮಣ್ಣನ ಮನಿದಾರಿ ಮರಿಯತೊಡಗಿದರು. ಮುಂದೊಂದಿನ ಪ್ಲಾಸ್ಟಿಕ್ ಚರಗಿಗಳು ಕೊಡಪಾನಗಳು ಮಾರುಕಟ್ಟೆಗೆ ಬಂದಾಗ ಭೀಮಣ್ಣನ ಮೂರು ಗುಂಬಗಳು ತಿರಗುವುದು ನಿಂತವು. ಬಂಡಿಗಾಲಿ ಮುಗ್ಗರಿಸಿತ್ತು. ಆಯಾ ಕೊಡಲು ಮಂದಿ ನಿರಾಕರಿಸತೊಡಗಿದರು. ಅಲ್ಲಿಗೆ ಯುಗವೊಂದು ಕೊನೆಗಂಡಂತಾಗಿ ಭೀಮಣ್ಣನ ಅಸ್ತಿತ್ವಕ್ಕೆ ದೊಡ್ಡ ಕೊಡಲಿಪೆಟ್ಟು ಬಿದ್ದಿತ್ತು.

* * *

10. ಕೊಡ್‌ಕತ್ತರಿಸು ಎಮ್ಮೆ ಬೊಳಿಸು

ಹುಲಿಯೂರ, ಜೋಳದ ಅಂಬ್ಲಿಗ ಸ್ವಾರಿಯೊಳಗಿಂದ ಮಜ್ಜಿಗಿ ತುಂಬಿಕೊಂಡು ತಾಟಿಗೆ ಸುರಿವುದಕ್ಕೆ ಅಣಿಯಾಗಿದ್ದ. ಯಾರೊ "ಎ ಕೊಡ್ ಕತ್ತರಿಸು ಎಮ್ಮೆ ಬೊಳಿಸು" ಎಂದು ಅರೆಬರೆ ಕನ್ನಡದಾಗ ಕೂಗುತ್ತ ಮುಂದೆ ಹೊರಟಿದ್ದ. ಲಗಬಗೆಯಿಂದ ಎಲ್ಲವನ್ನೂ ಅಲ್ಲೇ ಬಿಟ್ಟು ಕೂಗುವವನ ಹಿಂದೆ ಬಿದ್ದ. ಮೇಗಳ ಒಣಿಯ ಪಾಪೇಶಿನಾಯ್ಕ "ಏನಂತಲೆ", ಕೇಳಿದ. ಹುಲಿಯೂರ ಇವನದೇನ ಹಚ್ಚಿ ಅಂತ ಸುಮ್ಮನಿದ್ದ. "ಲೇ ಹುಡುಗ ನಿನಗ ಕೇಳಾಕ ಹತ್ತಿನಿ ಏನಂತೆ" ಅವನ ಹಿಡಿದು ಅಲುಗಾಡಿಸಿ ಕೇಳಿದ. "ಅದ ಗೊತ್ತಿಲ್ಲಾಲೆ" ಸುಮ್ಮನಾದ. ಅವನು ಎತ್ತು ಮೇಯಿಸುವಾಗ ಅವನ ಜೊತೆಗೆ ಗೆಳೆತನ ಬೆಳಸಿದ ಗಿರ್ಜಿ ಬಂದು "ಏ ಹುಲಿಯೂರ, ಯಾರು ಅದು" ಅಂತ ನುಲಿಯುತ್ತ ಕೇಳಿದಕ್ಕೆ ಹುಲಿಯೂರ. "ಅದೆಕಣಿ ಎತ್ತುಗಳ ಕೊಡು ಕತ್ತರಿಸುವ ಸಾಬ" ಅಂತ ವಿವರಿಸಿದ. "ಹೌದ ಈ ಪಾಟಿ ಹುಡುಗರು ಸೇರ್‍ಯಾರಲ್ಲ ಅದಕ್ಕೆ ಯಾರೊ ಮನೋರಂಜನೆ ಮಾಡೋರು ಬಂದಾರೇನಂತ ಕೇಳಿದೆ" ಅಂದಾಕಿನೆ "ಅಂದಂಗೆ ಎತ್ತುಗಳನ್ನ ಮೇಯಿಸೋದಕ್ಕೆ ಮುಂದಕ್ಕ ಹೊಂಟಿನಿ ಮತ್ತ ಬರ್ತಿಯಾ ಹೆಂಗೆ"? ಕೇಳಿದಳು. "ನೀನು ಮುಂದಕ್ಕ ಹೊಂಟೀಯೊ ಹೆಂಗೆ" ಕೇಳಿ ಖಾತ್ರಿ ಪಡಿಸಿಕೊಂಡ. ಸಾಬಿಯ ಹಿಂದೆ ಹೊಂಟ ಹುಡುಗರು, ಅವನ ಬಗಲಾಗ ಇರೊ ಚೀಲದಾಗ ಏನಿರಬಹುದು? ತಾಳೆ ಹಾಕ ತೊಡಗಿದರು. ತೆಳ್ಳಗೆ, ಉದ್ದಕ್ಕೆ, ಕುರಚಲು ಗಡ್ಡ ಕೊಳಕುಬಟ್ಟೆ, ಬಗಾಲಗೆ ಚರ್ಮದ ಚೀಲ ವಿಚಿತ್ರವಾಗಿ ಕಾಣುತ್ತಿದ್ದ ಸಾಬಿ ಹನುಮಪ್ಪನ ಗುಡಿಯಿಂದ ಜೋರಾಗಿ ಕೂಗುತ್ತಿದ್ದ. ಅವನ ಕೂಗಿಗೆ ಬೆದರಿದ ನಾಯಿಗಳು ಜೋರಾಗಿಯೇ ಬೊಗಳುತ್ತ ಕಚ್ಚಲಿಕ್ಕೆ ಅವನ ಮೈಮೇಲೆ ಎಗರುತ್ತಿದ್ದವು. ಇಂತ ನಾಯಿಗಳನ್ನು ಎಷ್ಟೋ ನೋಡಿರುವ ಸಾಬಿ, ಅಲ್ಲೆ ಪಕ್ಕದಲ್ಲಿದ್ದ ಕಟ್ಟಿಗೆ ಪುಳ್ಳೆಯಿಂದ ಒಂದು ಕಟ್ಟಿಗೆಯನ್ನ ಎಳೆದುಕೊಂಡವನೆ, "ಬಾ ಇಲ್ಲಿ ನಮ್ದುಕೆ ಬೊಗಳ್ತಿಯಾ? ಬದ್ಮಾಷ್ ಆ, ಇದರ್, ಆ ಬೇ" ಅಂದವನೆ ಜೋರಾಗಿ ಹೊಡೆದು ಓಡಿಸಿದ. ನಾಯಿ "ಅಯ್ಯಪ್ಪ ಸದ್ಯ

ಬೆನ್ನಿಗೆ ಬಿಳಲಿಲ್ಲಾ" ಅಂದ್ಕೊಂಡು ಬಗ್ಗಿ ಕುಂಯ್ಯ್, ಕುಂಯ್ಯ್ ಅಂತ ಒದರುತ್ತ ಓಡಿತ್ತು. ಹುಡುಗರು ಸಾಬಿಯ ಹಿಂದೆ ಜಮಾಯಿಸ ತೊಡಗಿದ್ದರು.

ಹುಲಿಯೂರನಿಗೆ ಸಾಬಿಯ ಚರ್ಮದ ಚೀಲ ಕುತೂಹಲ ಕೆರಳಿಸಿತ್ತು. ಹೊತ್ತಾರೆ ಕಬ್ಬಿಣ ರಂಟಿಗೆ ಹೋಗಿದ್ದ ಜಾತು, ದೇವ್ಲ, ದಣಿಯಾಗೆ ಬುತ್ತಿ ತಗೊಂಡು ಹೋಗಬೇಕಿತ್ತು. ಅವನ್ನ ಹುಡುಕಿಕೊಂಡು ಸಿಂದಿ ಬಂದಿದ್ದಳು. "ಲೇ ಹುಲಿಯೂರಣ್ಣ, ಮನಿಗ ಬಾ, ಐತೆ ಇವತ್ತು ನಿನಗ ಪೂಜೆ. ಅಪ್ಪ ಬುತ್ತಿ ಒಯ್ಯಾಕ ಕರಿಯಾಕಹತ್ಯಾನ ಗಡಾನ ಬಾ" ಅಂತೇಳಿ ಅವನಿಗ ಹೇಳಿ ಮೇಲಿನ ಒಣಿಯಲ್ಲಿ ಸಾಬಿ ಹಿಂದಿಂದ ಅವಳು ಹೊರಟಳು. ಹುಲಿಯೂರ "ಎಯ್, ಸಿಂದಿ ನೀ ಯಾಕೆ ಹಿಂದಿಂದ ಬರಾಕತ್ತಿಯಾ, ನಡಿ ಮನಿಗ ಆ ಚುಂಗಲಾನ ಚಾದಂಗಡಿ ಮಟ ಹೋಗಿಬರ್ತಿನಿ" ಗದರಿಸಿದ. "ಹೂಂ, ಬಾರೊ ನಾಗಣ್ಣ, ನೀ ಆದ್ರ ಅವನಿಂದ ಹೋಗಬಹುದಂತೆ ನಾನು ಮನಿಗ ಹೋಗಬೇಕಾ, ಬಾ ಹೊಕ್ಕೀನಿ ನಿನಗ. ಹೊಡ್ತಾ ತಿನ್ನೋನು ನೀನು" ಅಂದವಳೆ ಅವನಿಗೆ ಕಾಣದಂಗೆ ಮರಿಯಾದಳು. ಸಿಂದಿ ಮತ್ತು ಹುಲಿಯೂರನ್ನ ಹುಡುಕಿಕೊಂಡು ಪೀಕಿ ಹಿಂದಿಂದೆ ಬಂದಳು. "ಅಣ್ಣಾ ಬರ್ತಿಯಾ, ಇಲ್ಲ ಅಪ್ಪನ ಕೈಯಾಗ ನಾಕ ಬಿಳಸ್ಕೊಂತಿಯಾ ನೋಡು. ಹೊಲ್ದಾಗ ಕಬ್ಬಿಣರಂಟಿ ಹೊಡಿಯೋರು ಮುಂಜಾನೆ ನಸುಕಿನೊಳಗೆ ಬೆಳ್ಳಕ್ಕಿ ಮೂಡಿದ ಹಿಂದಾಗಡಸಲೆ ಹೋಗ್ಯಾರ ಮತ್ತ ನಿನ್ನ ಮರ್ಜಿ ನೋಡು". ಅಂದವಳೆ ವಾಪಾಸು ಮನಿಗೆ ಹೋದಳು.

ಚುಂಗ್ಲಾನ ಚಹಾದುಕಾನ್ ಮುಂದಿನ ಮನಿಯ ಪೀಳೊಪೊಮ್ಯನಾಯ್ಕ, ಸಾಬಿಯನ್ನ ನೋಡಿದವನೆ, "ಎಯ್, ಕೋಡಕತ್ತರಿಸು, ಬಾ ಇಲ್ಲಿ, ನಮ್ಮ ಎತ್ತಿನವು ಕೋಡ ಕತ್ತರಿಸಿ ಕೋಡ ಹಣಸು ಬರೊ ಹಂಗೆ ಮಾಡಬೇಕು, ನಾಳೆ ಬರೋ ಒಕಳಿಉಚ್ಚಾಯದ ಬೆಲ್ಲದ ಬಂಡಿಯ ಬಡ್ಡಿಗ ಕಟ್ಟಬೇಕು ಅಂದ್ಕೊಂಡಿನಿ. ಹೇಳು ಒಂದು ಜೋಡಿಗ ಎಷ್ಟು ಕೊಡಬೇಕು" ವಿಚಾರಿಸಿದ. "ದೇಕ್‌ಕೆ ಕೊಡಿ ಅಣ್ಣ ಅದ್ರಾಗೇನೈತೆ. ಜೋಡಿಕೊ ಹದಿನೈದು ರೂಪಾಯಿ ದೇಕ್ ಭೋಡ್" ಅಂದು ಚೀಲ ಬಗಲಿಂದ ತಗದ. "ಬಹಳ ಆತು ಸಾಬಿ, ಹತ್ತ ಸೇರು ಜೋಳ ಕೊಡ್ತಿನಿ ಮಾಡು" ಎರಡ ಮಾತಾಡದಂಗೆ ಹೇಳಿದ. "ಕ್ಯಾ ಪೊಮ್ಯಾದುಕೆ ಬಾಯಿ ಅದ್ರಲ್ಲೆ ಚೌಕಾಸಿ ಮಾಡ್ತಾರೆ. ದಾವಣಗೇರಿಯಿಂದ ಬಂದಿದೆ ನಮ್ಮದು ಬಸ್ಸಿನ ಛಾರ್ಜು, ನಮದು ತಿಂಡಿದು, ಕಾಫಿದು ಖರ್ಚಿಗೆ ಬೇಡವಾ ಹನೆಲ್ಡು ಸೇರು ಕೊಡಿ ನಮಗು ಬೇಡಾ ನಿಮಗೂ ಬೇಡ" ಅಂದವನೆ ಹರಿತವಾದ ಬ್ಲೇಡಿನಿಂದ ಎರಡು ಹಲ್ಲಿನ ಹೊರಿಗಳ ಮೂಗದಾರ ಹಿಡಿದು ಕೊಂಬಿನ ತುದಿಯನ್ನ ಕತ್ತರಿಸತೊಡಗಿದ. ಸಾಬಿಯ ಕೈಚಳಕ ನೋಡಿ ದಂಗಾದ ಹುಡುಗರು "ನೋಡ್ರಲೆ ಹೆಂಗಿತ್ತು ಕೊಂಬು ಹೆಂಗ ಮಾಡಿದ ಅವನವ್ವನ" ತಮ್ಮೊಳಗೆ ಮಾತಾಡಿಕೊಂಡರು. ಎರಡು ಎತ್ತುಗಳ ಕೊಂಬುಗಳನ್ನ

ಸವರಿ ಅವಕ್ಕೆ ಕೋಡಹಣಸು ತರಿಸಿಹಾಕಿ ತೋರಿಸಿ. ಜೋಳ ಇಸ್ಕೊಂಡು ಮುಂದಿನ ಮಾನಿಗ ಹೊರಟ. ಕೋಡಕತ್ತರಿಸುವುದನ್ನು ನೋಡ್ತಿದ್ದ ಹುಲಿಯೂರನಿಗೆ ಅವನ ತಂದೆ ತೊಪುನಾಯ್ಕ ಅವರವು ಮೂರು ಎಮ್ಮೆಗಳ ಮೈಮೇಲೆ ಹೇನು, ಸೀರುಗಳಾಗಿ ಏಳಗಿ ಆಗದಂಗೆ ಆಗಿರೊದಕ್ಕೆ ಬೋಳಿಸಬೇಕು. ಸಾಬಿ ಬಂದು ಎಲ್ಲ ಮೂರು ವರ್ಷಗಳಾದವು. ಕೂದಲ ಏಟು ಕತ್ತರಿಸಿದರೂ ಪ್ರಯೋಜನ ಆಗವಲ್ದು. ಈ ಸರ್ತಿ ಬೋಳಿಸಿದ್ರ ಪಾಡಾದೀತು ನೋಡಮತ್ತ ಅಂತ ಹೇಳಿದ್ದು ನೆಪ್ಪಾಗಿ ದನಗಳು ಬಿಡೋದಕ್ಕೆ ಮುಂಚೆ ಕರ್ಕೊಂಡು ಹೋಗುವುದು ಸರಿ ಅಂದವನೆ "ಸಾಬಿ ಅಣ್ಣ ನಮ್ಮ ಮನೆಗೆ ಬಾ ನಮ್ಮದು ಮೂರು ಎಮ್ಮೆಗಳನ್ನ ಬೋಳಿಸೋದು ಇದ್ದಾವೆ" ಹುಲಿಯೂರ ಮನಿ ಕಡಿಗ ಕರ್ಕೊಂಡ ಹೊಂಟ. ಸಾಬಿ ಚೌಕಾಸಿ ಮಾಡಿ ಮೂರು ಸೇರಿಗೆ ಒಂದು ಎಮ್ಮೆ ಬೋಳಿಸುವಂತೆ ಕರಾರು ಮಾಡಿಕೊಂಡು. ಚೀಲದಿಂದ ಪಾಷಾಣ ತಗದವನೆ ನಾಜೂಕಾದಕಲ್ಲಿಗೆ ಒಂದೆಲ್ಡ ದಪ ಉಜ್ಜಿಕೊಂಡು ಎಮ್ಮೆಯ ಮೈಮೇಲೆ ಕೈ ಯಾಡಿಸುತ್ತ ಪರಾಪರಾ ಕೂದಲು ಬೋಳಿಸತೊಡಗಿದ. ಹೇನು, ಸೀರು ತುಂಬಿಕೊಂಡು ಹಿಂಸೆ ಪಡುತ್ತಿದ್ದಿರಬೇಕು. ಅವಕ್ಕೂ ಹಿತ ಅನಿಸಿದಂತೆ ಆಗಿ ಮೈಕೊಟ್ಟು ಸುಖ ಅನುಭವಿಸತೊಡಗಿದವು. "ಮನುಷ್ಯನಂತೆ ಪ್ರಾಣಿಗಳು ನಮ್ಮ ತಲಿಯೊಳಗೆ ಹೇನು ಸೀರು ಆದ್ರೆ ಹೆಂಗೆ ಪರಪರ ಕೆರ್ಕೊಂತಿವೊ, ಪ್ರಾಣಿಗಳಿಗೆ ದೇವರು ಆ ಭಾಗ್ಯ ಕೊಟ್ಟಿಲ್ಲ. ಕೆಲವು ಪ್ರಾಣಿಗಳಿಗೆ ಕೊಟ್ಟ ಕೆಲವಕ್ಕೆ ಕೆಲವನ್ನ ಕೊಡಲಿಲ್ಲಾ ಹುಟ್ಟಿದ ಮೇಲೆ ಬದುಕಬೇಕಲ್ವ. ಪಾಪ ಮೂಕಪ್ರಾಣಿಗಳು ಬಾಯಿಬಿಟ್ಟು ಹೇಳಾಕ ಆಗದೆ ಸಂಕಟ ಪಡುತ್ತಿದ್ದವು." ಹುಲಿಯೂರ ತನ್ನೊಳಗೆ ಆಲೋಚನೆ ಮಾಡುತ್ತಿದ್ದ. ಸಾಬಿ ಮಾತ್ರ ಮೂರು ಎಮ್ಮಿಗಳನ್ನ ಬೋಳಿಸಿ ಕಾಳು ಅಳಿಸಿಕೊಂಡು, "ದನಕರು ಬಿಟ್ಟಿದ್ದಕ್ಕೆ, ಇನ್ನೇನು ರಾಸುಗಳು ಕಾಡಗೆ ಹೊದ್ವಲ್ಲಾ ಸಾಮಿ ನಮ್ದುಕೆ ಮತ್ತೊಂದು ದಿನ ಬರ್ತದೆ" ಅಂದವನೆ ಚೀಲ ಹೆಗಲಿಗೇರಿಸಿ ಫಯಾಜ್ ಬೀಡಿಯನ್ನು ಹಲ್ಲಲ್ಲಿ ಕಚ್ಚಿ "ಅಣ್ಣ ಸ್ವಲ್ಪ ಕಡ್ಡಿಕೊಡು, ಬಾಯಿಗೆ ಬೆಂಕಿ ಹಚ್ಕೊಂತಾರೆ" ಅಂದ. ಪಕ್ಕದವನು ಗಾಬರಿಯಾಗಿ "ಅರೆ ಇಸ್ಕಿ, ಎ ಸಾಬಿ ನಿನಗೇನಾತೊ ಬಾಯಿಗೆ ಬೆಂಕಿ ಹಚ್ಕೊಳೊದಕ್ಕೆ" ಗಾಬರಿಯಿಂದಲೆ ಕೇಳಿದ. "ಅರೆ ಅಣ್ಣ ನಮ್ದು ಬಾಯಿಗೆ ಬೆಂಕಿ ಅಂದ್ರೆ ಬೀಡಿಗೆ ಕೆರದು ಹಚ್ಕೊಳೋದು ಅಂತ, ನೀವು ಹೆದರಿದ್ರ. ಛೆ ಛೇ ಹಾಗೇನು ಇಲ್ಲ" ಅಂತ ಅವನು ಕೊಟ್ಟ ಅಳಿಲು ಮಾರ್ಕಿನ ಬೆಂಕಿಪೆಟ್ಟಿಗೆಯಿಂದ ಕಡ್ಡಿಯೊಂದನ್ನ ತಗದು ಬೆಂಕಿ ಗಿರಿಕೊಂಡು ಬೀಡಿಗೆ ಹಚ್ಚಿಕೊಂಡವನೆ ಒಂದು ಜುರಿ ಎಳದ. ಹೊಗೆಯನ್ನ ಹೊಟ್ಟೆಯೊಳಗೆ ನುಂಗಿ ಅದೇನು ಆನಂದ ಪಟ್ಟನೊ ಹೊಗೆ ಬರುವಾಗ ಮೂಗಿನಿಂದ ಬಸಾ ಬಸಾ ಬರ್ತಾ ಇತ್ತು. "ಎನ್ ಮಾಡೋದು ಸಾಬ್ ಹೊಟ್ಟೆದು ಪಾಡು ನಿಮ್ಮಂತ ದಾನ ಧರ್ಮ ಮಾಡೊ ಮಂದಿ ಅದಾರೆ ಅಂತ ಮಳೆಬೆಳೆ ಆಗ್ತಾ ಇದೆ, ನಮ್ಮಂತ ಬಡಬಗ್ಗರು ಬದುಕಿದ್ದಾರೆ. ನಾನು ಒಬ್ಬನೆ ದುಡಿಯೋದು ಏಳೆಂಟು ಮಕ್ಕಳಿಗೆ ಕೂಳು ಹಾಕಬೇಕು. ಇವತ್ತು ಈ ಊರು,

ನಾಳೆ ಮತ್ತೊಂದು. ಹೀಗೆ ಪ್ರತಿದಿನ ಸುತ್ತ ಕಾಯಕ ಮಾಡ್ತಿನಿ ಒಮ್ಮೆ ಹಿಂಗೆ ಇಪ್ಪತ್ತು ಮೂವತ್ತು ಸೇರು ದಾಣ ಸಿಗುತ್ತೆ. ಒಮ್ಮೆ ಏನೂ ಸಿಗೋದಿಲ್ಲ ಅಲ್ಲಾ ಎಲ್ಲಾ ಕೊಡ್ತಾನೆ." ಅವನ ಮನಸ್ಸಿನಾಳದ ವೇದನೆಯನ್ನ ಹೊರಗೆ ಹಾಕುವ ಪ್ರಯತ್ನ ಮಾಡಿದ್ದ. "ಅಲ್ಲಾ ಸಾಬಿ ದುಡಿಯಾಕ ಆಗೋದಿಲ್ಲ ಅಂತ ಗೊತ್ತಿದೆ ಯಾಕೆ ಇಷ್ಟೊಂದು ಮಕ್ಕಳು ಹಡಿಬೇಕು" ಕಡ್ಡಿಪೆಟ್ಟಿಗೆ ಕೊಟ್ಟ ಕೆಂಚಣ್ಣ ಕೇಳಿದ. ಅವನು ಮಹಾಪಂಡಿತ ಎಷ್ಟೋ ಊರುಗಳನ್ನ ಸುತ್ತಿ ನೀರ ಕುಡಿದವನು ಸಾಬಿ ಹಂಗೆ ಬಿಟ್ಟಾನ "ಅಬ್ ಕ್ಯಾ ಕರೆ ಅಣ್ಣ, ಮಾಡೊ ಟೆಮ್‌ನಾಗೆ ತಿಳಿಲಿಲ್ಲಾ ಮಾಡಿದ್ವಿ, ಸರ್ಕಾರಿ ದವಾಖಾನೆದಾಗೆ ಆಪರೇಷನ್ ಐತೆ ಅಂತ ಗೊತ್ತಾಗಲಿಲ್ಲಾ ಅಲ್ಲಾ ಎಲ್ಲಾ ಕೊಡ್ತಾನೆ ಅಂತ ಮಾಡಿಕೊಂಡ್ವಿ. ಆದ್ರೆ ಈಗ ತಿಳಿತಿದೆ ಯಾಕೆ ಬೇಕು ಅಂತ" ಮಾಡಿದ ತಪ್ಪನ್ನ ಒಪ್ಪಿಕೊಂಡ. ದಾವಣಗೆರೆಯ ಕೊಳಗೇರಿಯಲ್ಲಿ ತಗಡು, ರಟ್ಟು, ಆಪು ಹಳೆಚೀಲಗಳು ಸೇರಿಸಿ ಅನಾಮತಿ ಜಾಗದೊಳಗೆ ಕಟ್ಟಿಕೊಂಡ ಗುಡಿಸಲು, ಅದರಲ್ಲಿ ಸಲ್ಮಾಬಿ ಹೆಂಡತಿ ರಫೀಕ್, ಅಬ್ದುಲ್, ಗನಿಸಾಬಿ, ಚಮೂನ್, ಸೊಯಲ್, ಅಕ್ತರ್ ಆರು ಗಂಡುಮಕ್ಕಳ ಜೊತೆಗೆ ಏಳನೇಯವಳು ರಜಿಯಾ ಒಂದನೇ ವರ್ಷದಿಂದ ಏಳನೇ ವರ್ಷದವರೆಗೆ ಮಕ್ಕಳ ವಯಸ್ಸು. ದೊಡ್ಡವನಾದ ರಫೀಕ್ ಅಲ್ಲೆ ಪಕ್ಕದ ಜಲಾನಿ ಮೆಕನಿಕ್ ಹತ್ತಿರ ಪಾನರ ಕೊಡುವುದಕ್ಕೆ, ಗಾಡಿಗಳ ನಟ್, ಬೋಲ್ಟ್ ಬಿಚ್ಚಲು ಸಹಾಯಕನಾಗಿ ಕೆಲಸ ಮಾಡುತ್ತಿದ್ದ. ಎರಡನೆಯವನಾದ ಅಬ್ದುಲ್ ಬಂಬೂಬಜಾರ್‌ನಲ್ಲಿರುವ ಜಪಾರ್ ಸಾಮಿಲ್ಲಿನಲ್ಲಿ ಸಣ್ಣಪುಟ್ಟ ಕೆಲಸ ಮಾಡುತ್ತಿದ್ದ. ಸಲ್ಮಾಬಿ ಅವರಿಗೆ ಅಡುಗೆ ಮಾಡಿ ಹಾಕಿದ ನಂತರ ಸಿಕ್ಕ ಸಮಯದಲ್ಲಿ ಬೀಡಿ ಎಲೆ ಮತ್ತು ತಂಬಾಕನ್ನು ಒಟ್ಟಿಗೆ ಸೇರಿಸಿಕೊಂಡು ಬೀಡಿ ಸುತ್ತುವ ಕೆಲಸ ಮಾಡುತ್ತಿದ್ದಳು. ಮನೆಯಲ್ಲಿ ಎಲ್ಲರೂ ದುಡಿಯುತ್ತಿದ್ದರು ಗಫೂರ್‌ಸಾಬಿ ಮಾತ್ರ ಹೆಗಲಿಗೆ ಚರ್ಮದ ಚೀಲ ಏರಿಸಿಕೊಂಡವನೆ ಊರೂರು ಅಲೆದು "ಎಮ್ಮೆ ಬೋಳಿಸು, ಕೋಡು ಕತ್ತರಿಸು" ಅಂತ ಕೂಗುತ್ತ ಕರೆದವರ ಮನೆಗೆ ಹೋಗಿ ಕಾಳು ಕಡಿ ಸಂಪಾದಿಸುತ್ತಿದ್ದ. ಹಳೆ ಹರಕಲು ಫೈಜಾಮ, ಹರಿದ ಜುಬ್ಬ ಅದೆ ಬದುಕು ಅದನ್ನೆ ಹಾಸಿಕೊಂಡು ಹೊದ್ದುಕೊಂಡು ಬದುಕಿದ್ದ.

* * *

11. ಜಾತುನಾಯ್ಕನೂ ಹಿಡಿಡಗ್ಗಿದ ಎತ್ತುಗಳೊ

ತೊಪುನಾಯ್ಕನ ಹಿರಿಮಗ ಜಾತುನಾಯ್ಕ ತಂದೆಯ ಹಾದಿಯನ್ನೆ ತುಳಿದಿದ್ದ. ತೊಪುನಾಯ್ಕ ಯಾರಾದರು ಹೆದರಿದರೆ, ಗಾಳಿ ಮೆಟ್ಕೊಂಡಿದ್ದರೆ ಒಲೆಯೊಳಗಿನ ಬೂದಿಯನ್ನ ಅಂಗೈಯಲ್ಲಿ ಹಿಡಿದುಕೊಂಡು ಅದೇನೊ ಮಂತ್ರವನ್ನ ಬಾಯಲ್ಲಿ ಜಪಿಸಿ ಕೊನೆಗೆ ಮಾತ್ರ "ಭೂ" ಅಂತ ಜೋರಾಗಿ ಹೇಳಿ ಬೂದಿಯನ್ನ ಊದುತ್ತಿದ್ದ. ಆ ಬೂದಿ ಕಣ್ಣುಬಿಟ್ಟುಕೊಂಡು ಜ್ವರದ ತಾಪದಿಂದ ವೇದನೆ ಪಡುತ್ತಿದ್ದ ಹುಡುಗರ ಕಣ್ಣಿಗೆ ಹೋಗಿ ಚಿಟಾರಂತ ಚೀರುತ್ತಿದ್ದವು. "ಯವ್ವಸತ್ನೆ, ಕಣ್ಣು ಕಾಣದಂಗಾದವು" ಅಂತ ಕಣ್ಣಿಂದ ಧಾರಾಕಾರ ನೀರು ಸುರಿಯುತ್ತಿತ್ತು. "ಎಯ್, ಬಾಯಿ ಮುಚ್ಚು" ಅಂತೇಳಿ ಕರೆದುಕೊಂಡು ಬಂದವರು ಜ್ವರದಿಂದ ಬಳಲುತ್ತಿದ್ದಾನೆ ಅನ್ನೋದನ್ನ ಮರತು ಬೆನ್ನ ಮೇಲೆ ದಬದಬ ಅಂತ ಎರಡು ಏಟು ಕೊಟ್ಟು ಸುಮ್ಮನಾಗಿಸಿದ ಮೇಲೆ ಮಂತ್ರ ಹೇಳಿ ಉಳಿದ ಬೂದಿಯನ್ನ ಹೊಟ್ಟೆ, ಬೆನ್ನಿಗೆ ಸವರಿ ತಿನ್ನೋದಕ್ಕೆ ಕೊಟ್ಟು ನಡಿ ಅಂತಿದ್ದ. ಕಾಕತಾಳಿ ಎಂಬಂತೆ ಒಮ್ಮೊಮ್ಮೆ ಜ್ವರ ಕಡಿಮೆಯಾಗಿ ಮಗು ಆಟ ಆಡುತ್ತಿತ್ತು. ಅದಕ್ಕೆ ಕಡಿಮೆಯಾಗಲಿಲ್ಲಾ ಅಂದ್ರೆ ರಾವು ಹೊಡೆಯುತ್ತಿದ್ದ. ಕಾದ ಕೂಡುಗೋಲು ಹಿಡಿದು ಮುಖಕ್ಕೆ ತಣ್ಣೀರು ಹೊಡೆದರೆ, ಕಾದು ನಿಗಿನಿಗಿಯಾದ ಕೂಡಗೋಲಿನ ಬಿಸಿ ಮುಖಕ್ಕೆ ರಪ್ಪಂತ ರಾಚಿದರೆ ಬಿಸಿ ತಡಿಯಲಾಗದೆ ಹರೆಯದವರು ಬೆಚ್ಚಿ ಬೀಳುತ್ತಿದ್ದರು. ಕೆಲವರಿಗೆ ಬೆಳಕು ಹರಿಯುವುದರೊಳಗೆ ವಾಸಿಯಾದರೆ ಇನ್ನೂ ಕೆಲವರಿಗೆ ಕಡಿಮೆಯಾಗುತ್ತಿರಲಿಲ್ಲಾ. ವಾರ ಆದ ಮೇಲೆ ಪೂರ ವಾಸಿಯಾಗಲೇ ಇಲ್ಲ ಎಂದ ಪಕ್ಷದಲ್ಲಿ ಮಾತ್ರ ಪಕ್ಕದ ದುರ್ಗಾಪುರದ ನಾರಾಯಣಪ್ಪ ಎನ್ನುವ ಆರ್. ಎಂ. ಪಿ ವೈದ್ಯರೊ ಇಲ್ಲಾ ಭುಜಂಗಯ್ಯ ಎನ್ನುವ ಮಲೇರಿಯಾ ಡಾಕ್ಟರ್ ರೂಪಾಯಿಗೊಂದು ಸೂಜಿ ಮಾಡಿದರೆ ಜ್ವರ ಕಡಿಮೆಯಾಗುತ್ತಿತ್ತು. ಅಷ್ಟೆ ಅಲ್ಲಾ ತೊಪುನಾಯ್ಕ ಬೆನ್ನುನರಸೂಲಿಗೆ ಬೆಳಗಾ ಮುಂಜಾನೆ ನೀರು ಮುಟ್ಟದೆ ಬಂದವರಿಗೆ ಬಿಸೊಕಲ್ಲಿನ ಗೂಟದಿಂದ ಸೂರ್ಯಾಸ್ಥದ ಕಡೆಗೆ ಮುಖ ಮಾಡಿ ನಿಲ್ಲಿಸಿ ಏಳು ಕಲ್ಲುಗಳನ್ನು ಇಟ್ಟು ಸರಿಯಾಗಿ ನರ ಹಿಡಿದು ಗೂಟವನ್ನು ಕಲ್ಲಿಂದ ಹೊಡೆದು ವಾಸಿ ಮಾಡುತ್ತಿದ್ದ.

ಆದರೆ ಅವನ ಮಗ ಜಾತುನಾಯ್ಕ ಹರೆಯದ ವಯಸ್ಸಿನಲ್ಲಿ ದೊಡ್ಡ ದೊಡ್ಡ ಹೋರಿಗಳು ಓಡುವಾಗ ತೆಗ್ಗು ಪ್ರದೇಶದಲ್ಲಿ ಮುಂದಿನ ಕಾಲು ಇಟ್ಟಾಗ ಹಿಡಿ ಡಗ್ಗುತ್ತಿತ್ತು. ಪಾಪ ಮೂಕಪ್ರಾಣಿಗಳು ಹಿಂಸೆ ಪಡುತ್ತಲೆ ಹೇರು ತುಂಬಿದ ಚಕ್ಕಡಿಯನ್ನ ಎಳೆಯುತ್ತಿದ್ದವು. ಪಕ್ಕದ ಜೋಡಿ ಎತ್ತು ಓಡುವಾಗ ಕುಂಟುತ್ತಲೆ ಓಡುತ್ತಿತ್ತು ಮತ್ತೊಂದು. ಒಮ್ಮೊಮ್ಮೆ ಮಾಲಿಕ ಮರುಕಪಟ್ಟು "ಭದ್ರಾನಾಯ್ಕ ತಾಂಡದಲ್ಲಿ ಒಬ್ಬ ಹುಡುಗ ಅದಾನ ಹಿಡಿ ಡಗ್ಗಿರುವುದನ್ನು ಸರಿ ಮಾಡ್ತಾನ ನೋಡ್ರಿ" ಅಂತ ಹೇಳಿದ್ದನ ಕೇಳಿ, ಜಾತುನಾಯ್ಕನ ಹುಡುಕಿಕೊಂಡು ಬರುತ್ತಿದ್ದರು. ಎಡಗಾಲು ಇಲ್ಲವೆ ಬಲಗಾಲಿನ ಹಿಡಿ ಡಗ್ಗಿ ಕುಂಟುತ್ತ ನಡೆಯುವ ಆನೆಯಂತಹ ಎತ್ತುಗಳನ್ನು ಹೊಡೆದುಕೊಂಡು ಬಂದರೆ ಅವನ ಮನೆಯ ಎದುರಿನ ಗುದ್ದಮ್ಮನ ಗುಡಿ ಗಾರಿ ಕಟ್ಟೆಯ ಬೇವಿನಮರದ ನೆರಳಲ್ಲಿ ಎತ್ತನ್ನ ನಿಲ್ಲಿಸಿಕೊಂಡು ನೆಲದ ಮೇಲೆ ಅಂಗಾತ ಮಲಗಿಕೊಂಡು ಜಾತುನಾಯ್ಕ ಬಲಗಾಲಿಂದ ಎತ್ತಿನ ಮುಂದಿನ ಕಾಲು ಯಾವುದರ ಹಿಡಿ ಡಗ್ಗಿದೆಯೊ ಅದಕ್ಕೆ ಜೋರಾಗಿ ಕಸುಕಿತ್ತು ಒದೆಯುತ್ತಿದ್ದ. ಒಮ್ಮೊಮ್ಮೆ ಒಂದೇ ಸಲಕ್ಕೆ ಕಟ್ ಅಂತ ಸದ್ದುಮಾಡಿ ತಪ್ಪಿದ ಹಿಡಿ ಸೇರಿಕೊಳ್ಳುತ್ತಿತ್ತು. ಒಂದೊಮ್ಮೆ ಎಷ್ಟೆ ಹೊಡೆದರು ಸೇರುತ್ತಿರಲಿಲ್ಲ. ಅವನು ಒದೆಯುವಾಗ ಬಿಟ್ಟ ಎಲಬು ಸರಿಯಾಗಿ ಸದ್ದುಮಾಡಿ ಸೇರಿಕೊಂಡಿತೊ ಎತ್ತು ನೋವಿನಿಂದ ಪಾರಾಗುತ್ತಿತ್ತು. ಇಲ್ಲದಿದ್ದರೆ ಯಮಯಾತನೆ. ಯಾವ ಪಶುವೈದ್ಯರು, ಕಾಂಪೌಂಡರ್‌ಗಳು ತಜ್ಞರ ಕೈಯಿಂದಲೂ ಹಿಡಿಡಗ್ಗಿರುವುದು ಸುಲಭವಾಗಿ ಸರಿಮಾಡಲು ಅಸಾಧ್ಯವಾಗಿತ್ತು. ಜಾತುನಾಯ್ಕ ಒಬ್ಬನಿಗೆ ಒದೆಯುವ ವೈವಾಟು ಗೊತ್ತಿತ್ತು. ಅದೇ ಕೆಲಸವನ್ನ ಬಹಳಷ್ಟು ಯುವಕರು ಪರೀಕ್ಷಿಸಿ ನೋಡಿ ಆಗದ್ದಕ್ಕೆ ಸುಮ್ಮನಾದರು. ಜಾತುನಗರಡಿಯಲ್ಲಿ ಪಳಗಿದವರು ಕೆಲವರು ಪ್ರಯತ್ನ ಮಾಡಿದರು ಆದರೆ ತಮ್ಮ ಮಂಡಿನೋವು ಮಾಡಿಕೊಂಡರೆ ವಿನಃ ಎತ್ತಿಗೆ ಏನು ಆಗಲಿಲ್ಲಾ. ಉಪ್ಪಾರ ಕುಬೇರಗ ಜಾತುನಾಯ್ಕನ ಹೆಸರು ಪ್ರಸಿದ್ಧಿಗೆ ಬರುವುದು ಸುತಾರಾಂ ಇಷ್ಟವಿರಲಿಲ್ಲಾ. "ಅದೇನ ಮಹಾಬಿಡ್ರಲೆ, ಸರಿರಿ ಅತ್ಲಾಗ ಚಿಟಕಿ ಹೊಡಿಯೊದ್ರೊಳಗೆ ಸರಿಮಾಡ್ತಿನಿ" ಅಂದವನೆ ನಾಕಸಲ ಒದ್ದ. ಐನಾತಿ ಎತ್ತು ನೋವಿಗೆ ಕಿತ್ಕೊಂಡು ಓಡಿದನ್ನ ಜುಕ್ಕ ಜುಲುಮೆಯಿಂದ ಹಿಡ್ಕೊಂಡ ಬಂದ. ಅವನಿಗೆ ರೋಸಿ ಹೋಗಿತ್ತು. "ಎಯ್, ಜಾತಣ್ಣ ನೋಡು ನೀ ಕುಂದ್ರಸ್ತಿ ಅಂತೇಳಿ ಮಂದಿ ಹೇಳಿದಕ್ಕೆ ಕಷ್ಟಪಟ್ಟು ಒಳ್ಳೆದಾಗಲಿ ನನ್ನ ಎತ್ತು ಅಂತೇಳಿ ತಂದೀನಿ. ನೀ ನೋಡಿದ್ರ ಯಾರ್‍ಯಾರಿಗೊ ಹಚ್ಚಿ ನನ್ನ ಎತ್ತು ಮೆತ್ತಗಾಗೊ ಹಂಗ ಮಾಡಿದೆ." ಅಷ್ಟೊತ್ತಿನಿಂದ ನಾಟಕ ನಡಿತಿರೋದನ್ನ ಸುಮ್ಮನೆ ನೋಡ್ತಾ ನಿಂತಿದ್ದ. ಜಾತನಾಯ್ಕಗೆ ಎತ್ತಿನವನು ಹೇಳಿದ "ಆಯ್ತು ಬಿಡಣ್ಣ ಯಾಕೆ ಬೇಜಾರಾದೀಯ, ಎಲ್ಲಿ ಹಿಡ್ಕೊಂಡ ಬಾ" ಅಂದವನೆ ಮುಂದಿನ ಬಲಗಾಲನ್ನ ಒಮ್ಮೆ ಸೂಕ್ಷ್ಮವಾಗಿ ಪರೀಕ್ಷಿಸಿದ. ಸರಿದಿರೊ ಎಲಬನ್ನ ಸರಿಯಾಗಿ ಪತ್ತೆ ಹಚ್ಚಿದ. ಅಂಗಾತ ಮಲಗಿ ಒಮ್ಮೆ ಉಸಿರು ಬಿಗಿಹಿಡಿದು ಜಾಡಿಸಿ ಮುಟ್ಟಿದ ಜಾಗಕ್ಕೆ ಒದ್ದ. ಎಲಬು ಕಟ್ಟಂತ ಸದ್ದುಮಾಡಿ

ತಪ್ಪಿದ ಹಿಡಿ ಕೂಡಿಕೊಂಡು ಎತ್ತು ಸಿದಾ ನಡೆಯತೊಡಗಿತು. ಮಾಲಿಕನಿಗೆ ಬೊ ಖುಷಿಯಾತು, "ಅದಕ್ಕೆ ಹೇಳಿದೆ ಮಾಡ್ದೋರು ಮಾಡಿದ್ರೆನೆ ಚಂದಾ ಅಂತ. ಆಗದವರು ಅದೇನೆ ಮಾಡಿದರೂ ಆಗೋದಿಲ್ಲ, ಅದಕ್ಕೂ ಅನುಭವ ಬೇಕು. ಅದಕ್ಕೆ ಕಣಣ್ಣ ಕೈಗುಣ ಅನ್ನೋದು. ದೇವರು ನೂರ ವರ್ಷ ಆರೋಗ್ಯವಾಗಿಡಲಿ ಕಣಪ್ಪ. ಯಾವ ಡಾಕ್ಟರ್‌ಗಳ ಕೈಲಾಗದ ಕೆಲಸ ಇದು. ಆ ದೇವರು ನಿನಗೆ ಶಕ್ತಿ ಕೊಟ್ಟಾನ ಆದಷ್ಟು ದಿನ ಸೇವೆ ಮಾಡು" ಅಂದವನೆ ಎತ್ತು ಹೊಡೆದುಕೊಂಡು ಹೋದ.

ಪ್ರಯತ್ನ ಮಾಡಿದವರೆಲ್ಲಾ ಪತ್ತೆ ಇಲ್ಲದಂಗೆ ಜಾಗ ಖಾಲಿ ಮಾಡಿದರು. ಉಚ್ಚಂಗಿದುರ್ಗಕ್ಕೆ ಜಾತ್ರೆಗೆ ಹೋಗುವ ಚಕ್ಕಡಿಗಳು ಭದ್ರಾನಾಯ್ಕನ ತಾಂಡದ ಮೇಲೆ ಹೋಗಬೇಕು ಬೇಸಿಗೆಯಲ್ಲಿ ಕೆರೆ ಒಣಗಿದ್ದರೆ ಊರ ಒಳಗಿಂದ ಹಾದು ಚೌಡವ್ವನ ಗುಡಿ ಮುಂದೆ ತಡಾದು ಸಣ್ಣ ಡಿಬರಿ (ಮಣ್ಣಿನ ದಿಬ್ಬ) ಪಕ್ಕದ ಬಂಡಿ ಜಾಡಿನ ಗುಂಟೆ ಹೋಗುತ್ತಿದ್ದವು. ತುಂಗಭದ್ರ ನದಿ ಆಚೆಯ ಸೀಮೆಯವರು ಯಾರೊ ಗೆಣಸಿ (ಗಂಡಸಿ) ಹೋರಿಗಳನ್ನ ಕಟ್ಕೊಂಡು, ಕೋಡಹಣಸು ಕೊಳ್ಳಾಗ ಗೆಜ್ಜೆ ಪಟಗಣಿ, ಮೈಮೇಲೆ ಜೂಲ ಹಾಕಿ ಶೃಂಗಾರ ಮಾಡಿಕೊಂಡು ಹದಿನೈದು ಮಂದಿ ದೊಡ್ಡ ಟಗರು ಎಲ್ಲಾ ಚಕ್ಕಡಿ ಗಾಡಿಯೊಳಗೆ ಕುಂತು ಪ್ರಯಾಣ ಮಾಡುತ್ತಿದ್ದರು. ದುರ್ಗಾಪುರದಿಂದ ಬಂಡಿಜಾಡು ಹಿಡಿದು ಬರುವಾಗ ಸರ್ವತಪ್ಪಭಟ್ಟರ ಮಾವಿನಮರದ ಇಳಜಾರಿನಾಗೆ ಇಳಿಯೋ ಮುಂದ ತೆಗ್ಗಿನಲ್ಲಿ ಕಾಲಿಟ್ಟ ಹೋರಿದು ಹಿಡಿ ಡಗ್ಗಿ ಕುಂಟ ತೊಡಗಿತು. ಬಂಡಿಯೊಳಗಿನ ಹೆಂಗಸರು ಗಂಡಸರು ಕುಂಟುತಿರೊ ಎತ್ತಿನಗಾಡಿಯೊಳಗೆ ಕುಂದ್ರೊದಕ್ಕೆ ಮನಸ್ಸು ಆಗದೆ ಸಣ್ಣ ಹುಡುಗರನ್ನ, ಸಾಮಾನುಗಳನ್ನ ಬಿಟ್ಟು ನಡೆದು ಹೊರಟರು. ಹೆಂಡದ ರಾಮಪ್ಪನ ಎರೆಹೊಲದ ಚೌಡವ್ವನ ಗುಡಿ ಹತ್ರ ಬರೋದಕ್ಕು ಯಾರೊ ಮುದುಕ ರಸ್ತೆ ಮೇಲೆ ನಿಂತು ಕುಂಟುತಿರೊ ಎತ್ತನ್ನೆ ಗಮನಿಸೋದಕ್ಕು ಸರಿಹೋಯ್ತು. "ಲೇ ತಮ್ಮ ಚಕ್ಕಡಿ ನಿಲ್ಲಿಸು" ಅಂದ. ಚಕ್ಕಡಿ ಹೊಡಿತಿರೋನು, "ಯಜ್ಜಾ ಎತ್ತು ಕುಂಟಾಕ ಹತೈತಿ, ಏನಾಗ್ಯತೊ ತಿಳಿವಲ್ದು, ನಾವ ನಡಕೊಂಡು ಹೊಂಟಿವಿ ನಿನಗ ಹ್ಯಾಂಗ ಕುಂಡ್ರಸಲಿ" ಅಂತ ಅಂದ. "ಯಾವೂರಿಂದ ಬಂದೀರಿ" ಕೇಳಿದ ಮುದುಕ ಚಕ್ಕಡಿ ಹೊಡಿತಿದ್ದವನಿಗೆ ತಲಿ ಬಿಸಿಯಾತು. "ನಾವು ಶಿಗ್ಗಾಂವಿ ಪಕ್ಕದ ಮಾಲಕನೂರು ಗ್ರಾಮದವರೆ ಯಪ್ಪ, ಆಟು ದಾರಿ ಬಿಟ್ರ ಪುಣ್ಯ ಬಂದೀತು" ಸಂಬಾಳಿಸಿಕೊಂಡು ಹೇಳಿದ. "ಅಂದಂಗ ಎತ್ತು ಮದ್ಲೆ ಕುಂಟಾಕ ಹತ್ತಿತ್ತೊ, ಇಲ್ಲ ನಡಕ" ಕೇಳಿದ ಮುದಕ. "ಎಯ್ ನಿಮಾಪ್ನ, ಅದ್ಯಾವಾಗರ ಕುಂಟ್ಲೆ ಹೊಳ್ಳಾಗು" ಅನ್ನಬೇಕು ಅಂದುಕೊಂಡವ, "ಇಲ್ಲೊ ಯಜ್ಜ ನಿನ್ನಿ ಸಂಜಿ ಮುಂದ ಜಿಂಕಿಹಂಗ ಜಿಗಿತಿತ್ತು ಈಗ ಅರ್ಧತಾಸ ಆತು ನೋಡು ದಾರಿನಡಕ್ಕ ಕುಣಿಯೊಳಗ ಕಾಲ ಇಡಾನ ಕುಂಟಾಗ ಸುರುಮಾಡ್ತು. ನಮ್ಮ ಮಂದಿ ಪಾಪ ದೆವ್ವದಂತ ಎತ್ತು ಕುಂಟಾಕ ಹತ್ತು, ಮತ್ತ ನಾವು

ಹತ್ತಿ ಅದಕ್ಕ ಯಾಕ ಹಿಂಸೆ ಕೊಡಾಕಂತ ಇಳ್ಕೊಂಡು ನಡ್ಕೊಂತ ಬರಾಕ ಹತ್ಯಾರ ಏನಜ್ಜ" ಅಂದ. "ಹಂಗಾರ ತಮ್ಮ, ನಿಂದ ಎತ್ತಿಂದು ಹಿಡಿ ಡಗ್ಗಿದೆ" ಅಂದ. ಹಿಡಿ ಡಗ್ಗೊಗಿದಂದ್ರ ಏನೂಂತ ಕೇಳಿರದ ಯುವಕ "ಹಂಗಂದಿ, ಯಜ್ಜ ಹಿಂಗಂದ್ರ ಏನು?" ಅವನ ಮಕ ನೋಡಿದ. "ತಮ್ಮ ದಾರಿಯೊಳಗ ಕುಣಿಯಾಗ ಕಾಲು ಇಡ್ತು ಅಂದಿ ಅಲ್ಲ, ಅಲ್ಲೆ ಅದರ ಮುಂದಿನ ಕಾಲಿನ ಎಲಬು ಕುಣಿ ಸರದೈತೆ. ನಮ್ಮೂರಾಗ ಒಬ್ಬ ಹುಡುಗ ಅದಾನ ಏನಪ್ಪ, ಕಾಲು ಗಂಟಿಯೊಳಗ ನಿನ್ನ ಎತ್ತನ್ನ ಸರಿಮಾಡಿ ಬಿಡ್ತಾನ. ಪಾಪ ಮೂಕಪ್ರಾಣಿಗೆ ಎಷ್ಟು ಹಿಂಸೆಯಾಗಬೇಡ. ನೋಡು ನೆಟ್ಟಗ ಹೋಗು ಊರಾಗ ಹೊದಿಂದ, ಗಾರಿ ಕಟ್ಟಿ ಮುಂದ ಅವನ ಮನಿ ಐತೆ, ಆತನ ಹೆಸರು ಜಾತುನಾಯ್ಕ ಅಂತ, ಲಮಾಣ್ಯರ ಪೈಕಿ ಹುಡಗ ಸರಿಮಾಡ್ತಾನ ನೀ ಏನು ಕಾಳಜಿ ಮಾಡಬ್ಯಾಡ ಹೋಗು" ವಿಶ್ವಾಸ ಮೂಡಿಸಿದ. "ಯಜ್ಜ ಎತ್ತಿಗ ಏನು ತಗೊಂತಾನ". ಮರುಪ್ರಶ್ನೆ "ಅಂದ್ರ" ಮುದುಕ ಕೇಳಿದ. "ರೊಕ್ಕ ಎಟ್ ತಗೊಂತಾನ" ಅಂದೆ. "ಎಯ್ ಹೊಗೊ ಮರಾಯ ನಿನ್ನ ಎತ್ತು ಸಾಯೋವರಿಗ ಹಿಂಗ ಕುಂಟತೈತೆ, ಯಾವ ಡಾಕ್ಟರ್ ಕಡಿಂದ ಆಗೋದಿಲ್ಲ. ಅಂತಾದು ಅವನು ಮಾಡ್ತಾನ. ಏನು ತಗೊಹೊದಿಲ್ಲ ಹಂಗ ಮಾಡ್ತಾನ ಗಡಾನ ಹೋಗು ಮನಿಯೊಳಗ ಅದಾನೊ ಇಲ್ಲಾ ಹ್ವಾರೆ ಮಾಡಾಕ ಹೋಗ್ಯಾನೊ, ಕೇಳಿನೋಡು" ಅಂದವನೆ ಅವನನ್ನ ಕಳುಹಿಸಿದ. "ತಾತ ಗಡಾನ ಬಾ ಈ ಊರಾಗ ಒಬ್ಬ ಅದಾನಂತ ಅಂದ ಏನೊ ಎತ್ತಿನ ಕಾಲ ಸರಿಮಾಡ್ತಾನಂತ ಹೆಂಗ ಮತ ತೋರಿಸಿಕೊಂಡೆ ಹೋಗೋಣೇನು" ಕೇಳಿದ. "ತಮ್ಮ ತಾಸ ಹೆಚ್ಚ ಕಮ್ಮಿ ತೋರಿಸಿಕೊಂಡೆ ಹೊಡಿಮುಂದ, ಇಲ್ಲದ್ರ ಐನಾತಿ ಎತ್ತು ಹೆಚ್ಚು ಕಮ್ಮಿಯಾದ್ರ ಒಳ್ಳೆಯದಲ್ಲ ನಡಿ ಅತ್ಲಾಗೆ". ಅಂದಿಂದ ಜಾತುನಾಯ್ಕನ ಹುಡುಕಿಕೊಂಡು ಹೊರಟರು. ಗಾಡಿ ಸಿದಾ ಊರ ಮುಂದಕ್ಕ ಹೋಗಿ ನಿಂದ್ರಿಸಿ ಬಂಡಿಕೊಳ್ಳಹರದು, ಕುಂಟುತಿರೊ ಎತ್ತನ್ನ ಹಿಡಕೊಂಡು "ತಮ್ಮ ಇಲ್ಲಿ ಜಾತುನಾಯ್ಕಣ್ಣನ ಮನಿ ಎಲ್ಲೈತೆ" ಕೇಳಿದ. "ಜಾತಣ್ಣ ಮನಿ ಇದೆ ಹೌದು" ಅಂದವನೆ ಹುಡುಗ ಓಡಿದ. ಮನಿಮುಂದ ಹೋಗಿ "ಅವ್ವ, ಜಾತಣ್ಣ ಅದಾರೇನ್ರಿ" ಕೂಗಿದ. ಅವನ ತಾಯಿ ಜಾನಿಬಾಯಿ, "ಏನಪ್ಪ ಏನಾಗಬೇಕು" ಹೊರಗಬಂದಳು "ಏನಿಲ್ಲ ಎತ್ತು ಕುಂಟಾಕ ಹತಿತ್ತು ಅದಕ್ಕ ಜಾತಣ್ಣ ನೋಡ್ತಾನಂತಲ್ಲ, ಉಚ್ಚಂಗಿ ದುರ್ಗಕ್ಕ ಜಾತ್ರಿಗ ಹೊಂಟೀವಿ, ಅದಕ್ಕ" ಅಂದ ಯಜಮಾನ. "ಹಂಗ ವಿಷಯ, ಇರ್ರಿ ಹೇಳಕಳಸ್ತೀನಿ ಇಲ್ಲೆ ಎಲ್ಲೊ ಊರೊಳಗೆ ಇರಬೇಕು" ಅಂದಾಕಿನ ಸಣ್ಣ ಹುಡುಗನೊಬ್ಬನನ್ನ ಕರದು "ದೊಡಪ್ಪನ್ನ ಕರ್ಕೊಂಡಾ ಬಾ ಹೋಗು ಗಡಾನ" ಓಡಿಸಿದಳು.

ಜಾತುನಾಯ್ಕ ಬಂದವನೆ ಎತ್ತಿನ ಮೈಸವರಿ ಎಲಬು ಸರಿದ ಜಾಗವನ್ನ ನೋಡಿ ಅಂಗಾತ ಮಲಗಿದವನೆ ಸರಿದಿರೊಜಾಗಕ್ಕೆ ಜಾಡಿಸಿ ಒತಒದ್ದ, ಕಟ್ಟಂತ ಹೋಗಿ

ಕೂಡಿಕೊಂಡಿತು. ಎತ್ತು ಸಲಿಸಾಗಿ ನಡೆಯತೊಡಗಿತು. “ಅಣ್ಣ ನಿನ್ನ ಉಪಕಾರ ಬಾಳ ಆತು, ದೆವ್ವದಂತ ಎತ್ತಿಗ ಹಿಂಗಾತಲ್ಲ ಅನಿಸಿತ್ತು. ಒಳ್ಳೆದಾಗಲಪ್ಪ, ಉಚ್ಚೆಂಗಮ್ಮನೆ ಸಾಕ್ಷಾತ್ ಬಂದಂಗಾತು” ಅಂದವರೆ ಬಂಡಿಕಟ್ಟಿದರು. ಜಾತುನಾಯ್ಕ ತಂದೆಯಂತೆ ಸಣ್ಣಪುಟ್ಟ ಕೆಲಸಗಳನ್ನ ಮಾಡುತ್ತ ಹೆಸರು ಮಾಡತೊಡಗಿದ. ಮಂದಿಮಾತ್ರ, ದೇವರ ಕಣಪ್ಪ, ಮೂಕಪ್ರಾಣಿಗಳ ನೋವು ತಡಿಯಾಕ ಆಗದೆ, ಹೇಳಾಕು ಆಗದೆ ಕಠಿಣ ಕೆಲಸ ಮಾಡಬೇಕು. ಪುಣ್ಯಾತ್ಮ ಹೆಂಗ ಕಲಿತನೊ ಹಂಗೆ ಒಂದೆ ಹೊಡತಕ್ಕೆ ಎಲಬನ್ನ ಆ ಜಾಗದಾಗ ಕಟ್ಟ್ ಅಂತ ಕುಂದ್ರಿಸಿಬಿಡ್ತಾನ. ಎತ್ತು ಎಂತಹ ದೊಡ್ಡದೇ ಇರಲಿ, ಯೋಚನೆ ಅನ್ನೋದೆ ಇಲ್ಲ. ಅಂತ ಮಾತಾಡಿಕೊಳ್ಳ ತೊಡಗಿದರು. ಜಾತುನಾಯ್ಕನೂ ಅಷ್ಟೆ, ತಂದೆಯಂತೆ, ವಿನಯ, ನ್ಯಾಯಪರ ಮಾತುಗಳು, ಬೇರೆಯವರಂತೆ ಲಾಟ್‌ಲಬಾರಿ ಮಾತಾಡೊ ಪೈಕಿ ಅಲ್ಲಾ, ತಾರಾತಿಗಡಿ – ಬಾರ ವಿದ್ಯೆ ಕಲಿತವನಲ್ಲಾ, ನೇರನುಡಿ ನಿಷ್ಠುರ ಮಾತುಗಳು. ಹಿಡಿಡಗ್ಗಿದರೆ ಸರಿ ಮಾಡುವುದರೊಂದಿಗೆ, ದನಕರುಗಳು ಮೂರ್‍ನಾಕು ದಿನಗಳಿಂದ ನೀರು ಕುಡಿಯದೆ ಸೆಲೆಯಾಗಿದ್ದರೆ, ಜಾತುನೆ ಔಷಧಿ ಕೊಡುತ್ತಿದ್ದ. ಊರತುಂಬ ಬೆಳೆಯುತ್ತಿದ್ದ ತುಂಬೆಗಿಡದ ಎಲೆ ಮತ್ತ ಹೂಗಳನ್ನು ತಂದು ಚೆನ್ನಾಗಿ ಅರದು ನೀರುಬೆರಸಿ ಗೊಟ್ಟದಲ್ಲಿ ತುಂಬಿ ಎತ್ತಿದರೆ ಒಂದುತಾಸಿಗೆ ಎತ್ತುಎದ್ದು ನೀರು ಕುಡಿಯುತ್ತಿತ್ತು. ಬೇಸಿಗೆಯಲ್ಲಿ ಇದಂತು ಸಾಮಾನ್ಯವಾಗಿತ್ತು. ಕಾಡಲ್ಲಿ ಎಲ್ಲೂ ನೀರಿಲ್ಲಾ, ಯಾರ ದನಗಳೂ ನೀರು ಸರಿಗೆ ಕುಡಿದಿಲ್ಲಾ ಅಂತ ತಿಳಿದು ಸಂಜೆ ಇಲ್ಲವೆ ಮುಂಜಾನೆ ಬಾನಿಯಲ್ಲಿ ನೀರು ತುಂಬಿ ದನಗಳಿಗೆ ಎತ್ತುಗಳಿಗೆ ಕುಡಿಸಲೇಬೇಕು ಇಲ್ಲದಿದ್ದರೆ ಸೆಲೆಯಾಗಿ ಸತ್ತು ಹೋಗುತ್ತಿದ್ದವು. ಅವುಗಳಿಗೆ ತುಂಬೆಗಿಡದ ಎಲೆ ಮತ್ತು ಹುರುಳಿಕಾಳನ್ನ ಸೇರಿಸಿ ನೀರಲ್ಲಿ ಬೆರಸಿ ಗೊಟ್ಟದಿಂದ ಕುಡಿಸಿದರೆ, ಎತ್ತು, ಇಲ್ಲ ಎಮ್ಮೆ ಹಸು ಏನೆ ರಾಸುಗಳಿದ್ದರೂ ಸ್ವಲ್ಪ ವೇಳೆಯಾದ ನಂತರ ಸರಿಹೋಗುತ್ತಿದ್ದವು. ಇನ್ನು ಒಂದು ಹೊಟ್ಟೆ ಉಬ್ಬರದ ರೋಗ ಕೆಲವು ರಾಸುಗಳು ಹುರಳಿ, ಇಲ್ಲವೆ ಜೋಳದ ತೆನೆಯನ್ನ, ಇಲ್ಲ ಹುಲ್ಲು ಮೇಯುವಾಗ ಯಾವುದೊ ಒಂದು ರೀತಿಯ ಬಳ್ಳಿಯಂತಹದ್ದನ್ನು ತಿಂದರೆ ಹೊಟ್ಟೆ ಉಬ್ಬರ ಬರುತ್ತಿತ್ತು. ಅದಕ್ಕೆ ಮೆಣಸಿನಕಾಯಿ ಅರದು ಗೊಟ್ಟದಿಂದ ಎತ್ತಿದರಾತು ಕ್ರಮೇಣವಾಗಿ ಹೊಟ್ಟೆ ಕರಗುತ್ತಿತ್ತು. ಎತ್ತುಗಳು ಕಡಿಮೆ ಹುಲ್ಲು ತಿನ್ನುತ್ತಿದ್ದರೆ ಅದಕ್ಕೂ ಜಾತುನಾಯ್ಕ ಅವನ ತಂದೆ ತೊಪುನಾಯ್ಕ ಹೇಳಿಕೊಟ್ಟಿದ್ದ ಔಷಧಿಯಾದ ಲ್ಹಾಳಿಸರ ತಂದು ಮೇಲಿನ ಸಿಪ್ಪೆ ಸುಲಿದು ಲ್ಹಾಳಿಸರದ ಜೊತೆಗೆ ಉಪ್ಪು ಸೇರಿಸಿ ನಾಲಿಗೆ ಮೇಲೆ ಗಸಾಗಸಾ ಅಂತ ತಿಕ್ಕಿದರೆ ಎತ್ತುಗಳು ಅರಬಾಡಿಸಿ ಹುಲ್ಲು ಮೇಯುತ್ತಿದ್ದವು.

ಹಿಂಗಾರಿಮಳೆ ಏನಾದರು ಬಿದ್ದು ನೆಲ ಹಸಿಯಾಗಿತ್ತು ಅಂದರೆ ಮಾಗಿಯ ಕಾಲದೊಳಗೆ ನಾಲ್ಕು ಎತ್ತಿನ ಕಬ್ಬಿಣರಂಟೆ ಹೊಡದು ಹೊಲದಲ್ಲಿನ ಹುಲ್ಲಿನ ಬೀಜವನ್ನ

ಬುಡಸಮೇತ ಕಿತ್ತು ಅದರ ವಂಶವನ್ನೆ ನಿರ್ವಂಶ ಮಾಡಬೇಕೆಂದು ಪ್ರತಿಯೊಬ್ಬ ರೈತನು ಯಾರ್‍ಯಾರದೊ ಜೊತೆಗೆ ಸೇರಿಕೊಂಡ ಹೊಲ ಮಾಗಿ ಮಾಡುತ್ತಿದ್ದರು. ಎರಡೆ ಎತ್ತುಗಳು ಇರುವವರು ಮತ್ತೆ ಎರಡು ಎತ್ತುಗಳಿರುವವನ ಜೊತೆಗೆ ನಾಕು ದಿನ ಅವನ ಹೊಲ ಹೊಡೆದರೆ, ನಾಕುದಿನ ಇವನ ಹೊಲವನ್ನು ಊಳುವ ಒಪ್ಪಂದ ಮಾಡಿಕೊಳ್ಳುತ್ತಿದ್ದರು. ಎರಡು ಹೋರಿಗಳನ್ನು ಬಡ್ಡಿಗೆ ಹೊಡಿದರೆ, ಮತ್ತೆರಡು ಚೆಲ್ಲಾರ ಹೊಡೆಯಲು ಹೂಡುತ್ತಿದ್ದರು. ಒಬ್ಬ ದೊಡ್ಡ ರಂಟೆಯನ್ನು ಹಿಡಿಯುವವ, ಮತ್ತೊಬ್ಬ ಚೆಲ್ಲಾರಕ್ಕೆ ಹೂಡಿರುವ ಎತ್ತುಗಳನ್ನು ಹೊಡೆಯುತ್ತಿದ್ದ. ಹೊರ್ಜಿಯನ್ನ ದಾಟುವಾಗ ಮುಂದಿನವನು ಬಹಳ ಹುಷಾರಿನಿಂದ ದಾಟಬೇಕಿತ್ತು. ಏಕೆಂದರೆ ಎತ್ತುಗಳು ಗಕ್ಕಂತ ತಿರುಗಿದರೆ, ಹೊರ್ಜಿ ಮಿಣಿ ಅವನ ಕಾಲಿಗೆ ಬಿಳುತ್ತಿತ್ತು. ಅದೆ ಸಮಯಕ್ಕೆ ಎತ್ತುಗಳೇನಾದರು ಗಕ್ಕಂತ ತಿರುಗಿದವೂ ಅವನು ಹೊರ್ಜಿಯ ನಡಕ್ಕ ಬಂದು ಸಿಗಾಕಿಕೊಳ್ಳುತ್ತಿದ್ದ. ಒಂದು ಸರ್ತಿಗೆ ಅರ್ಧ ಮಾರು ನೆಲ ಕೀಳುತ್ತಿತ್ತು ರಂಟೆ. ಹುಲ್ಲು ಅನ್ನೋದು ಕೊಚ್ಚಿಕೊಂಡು ಬರುತ್ತಿತ್ತು. ಹೀಗೆ ಮುಂಜಾನೆ ಹೊತ್ತಾರೆ ಬೆಳ್ಳಿ ಚುಕಿ ಮೂಡಿದೊಡನೆ ಮನೆಯಲ್ಲಿ ಸಿಕ್ಕ ಕೆನೆಮೊಸರು, ಮುದ್ದಿನೊ, ರೊಟ್ಟಿ ಉಂಡು ಹೊಟ್ಟೆಗೆ ಒಂದಿಷ್ಟು ಆಧಾರ ಮಾಡಿಕೊಂಡೆ ಹೋಗುತ್ತಿದ್ದರು. ಎತ್ತುಗಳು ಮುಂಜಾನೆಯಿಂದ ಮಧ್ಯಾಹ್ನ ಒಂದು ಗಂಟೆಯವರೆಗೆ ಕಷ್ಟಪಟ್ಟು ರಂಟೆಯನ್ನ ಎಳೆದು ಎಳೆದು ಎದಿಹೊಡಿತಾವೆ ಅಂತ ತೊಪುನಾಯ್ಕ ಮನೆಯಲ್ಲಿ ಭಟ್ಟಿಸರಾಯಿ ಮಾಡುತ್ತಿದ್ದ. ಮನೆಯಲ್ಲೆ ಬೇಕಾದಷ್ಟ ಬೆಲ್ಲ ಇದಿದ್ದರಿಂದ ಬೆಲ್ಲ, ಬೇಲದ ಚಕ್ಕೆ, ಬ್ಯಾಟರಿ ಸೆಲ್ಲನ್ನ ಪುಡಿಮಾಡಿ, ಟ್ಯೂಬಿನಲ್ಲಿ ತುಂಬಿ ತಿಪ್ಪೆಗುಂಡಿಯಲ್ಲಿ ಹೂತಿಟ್ಟು ಹದಿನೈದು ದಿನಗಳಾದ ಮೇಲೆ ತಗದು ಕೆಳಗೊಂದು ದೊಡ್ಡ ಮಡಿಕೆ ಅದಕೊಂದು ಮುಚ್ಚುವ ಮಡಿಕೆ ಎರಡರ ನಡುವೆ ಉದ್ದನೇಯ ಗಳದ ತುಂಡನ್ನ ಹಾಕಿ ಸರಿಯಾಗಿ ಮುಚ್ಚಿ ಜೇಡಿಮಣ್ಣಿಂದ ಸುತ್ತಲು ಸರಿಯಾಗಿ ಅಂಟಿಸಿ ನಳಿಕೆಯಿಂದ ಸೋರುವ ಸ್ಪಿರೀಟ್ ಶೇಖರಣೆಗೆ ಮತ್ತೊಂದು ಪಾತ್ರೆ ಭಟ್ಟಿ ಇಳಿಯಲು ಸ್ವಾರಿಯ ಕೆಳಗೆ ಸರಿಯಾಗಿ ಕಟ್ಟಿಗೆ ಹಾಕಿ ಕುದಿಸಿದರೆ ಶೇಖರಣೆ ಮಡಿಕೆಯೊಳಗೆ ಸರಿಯಾಗಿ ಸರಾಯಿ ತುಂಬಿ ಕೊಳ್ಳುತ್ತಿತ್ತು. ಅದರಲ್ಲಿ ತೊಪು, ಜಾನಿಬಾಯಿ ಸ್ವಲ್ಪ ಕುಡಿಯುತ್ತಿದ್ದರು ಉಳಿದದ್ದನ್ನ ಗೊಟ್ಟದಿಂದ ಎತ್ತುಗಳಿಗೆ ಕುಡಿಸುತ್ತಿದ್ದರು. ಎದೆಯೊಳಗೆ ಕಟ್ಟಿರಬಹುದಾದ, ರಕ್ತ ಮತ್ತು ಒತ್ತಡವನ್ನು ಈ ಸರಾಯಿ ಕಡಿಮೆ ಮಾಡುತ್ತಿತ್ತು.

ರಾತ್ರಿ ಎತ್ತುಗಳು ನೆಮ್ಮದಿಯಿಂದ ನಿದ್ದೆ ಮಾಡಿ ಮುಂಜಾನೆ ಆರೋಗ್ಯವಾಗಿ ಏಳುತ್ತವೆ ಎಂಬ ನಂಬಿಕೆ. ಜೊತೆಗೆ ಜೋಳ, ಮೆಕ್ಕೆಜೋಳ, ಹುರುಳಿ ಇತ್ಯಾದಿ ಧಾನ್ಯಗಳನ್ನ ಬೆರಸಿ ಮಾಡಿದ ನುಚ್ಚನ್ನು ಕಲಿಸಿ, ಕಬ್ಬಿಣದ ಡಬರಿಗಳಲ್ಲಿ ಕಾಳು ಇಡುತ್ತಿದ್ದರು. ಒಮ್ಮೊಮ್ಮೆ ಹತ್ತಿಕಾಳನ್ನು ಕೇಜಿಗಟ್ಟಲೆ ತಂದು ತಿನ್ನೋದಕ್ಕೆ ಕೊಡುತ್ತಿದ್ದರು. ಇದರಿಂದ ಅವುಗಳ ತಾಕತ್ತು ಹೆಚ್ಚುತ್ತಿತ್ತು. ಗಳೆಗೆ ಹೂಡುವ ಮುನ್ನ

ಬಾನಿಗಳ ತುಂಬ ನೀರು ಸುರಿದು ಕುಡಿಸಿಕೊಂಡೆ ಹೋಗುವುದು ವಾಡಿಕೆಯಾಗಿತ್ತು. ಗೊಂದಲಿಗಳಲ್ಲಿ, ಎರಡೆರಡು ಬಾನಿಗಳು ಜೋಡಿ ಎತ್ತುಗಳ ನಡುವೆ ಒಂದೊಂದು ಬಾನಿ ಇದ್ದೆ ಇರುತ್ತಿತ್ತು. ಹೈಬ್ರಿಡ್ ಜೋಳದ ಸೊಪ್ಪೆಯನ್ನ ಒಂದು ಹೊರೆಗಟ್ಟಲೆ ತಂದು ಅದನ್ನ ದೊಡ್ಡ ಕತ್ತೆಣ್ಣಿಗಳಲ್ಲಿ ಕೊರೆದು ತುಂಡುಗಳನ್ನು ಮಾಡಿ ಎರಡ ಮೂರ ಸಲ ಹಾಕುತ್ತಿದ್ದರು. ಎತ್ತುಗಳು ಮಲಗಿದಾಗ ಬಿಟ್ಟರೆ ಉಳಿದ ಸಮಯದಲ್ಲಿ ಮೇವನ್ನ ತಿನ್ನುತ್ತಿದ್ದವು. ಹೀಗೆ ಅವುಗಳ ಕಾಳಜಿಯನ್ನು ಮಾಡಲಾಗುತ್ತಿತ್ತು. ರಾತ್ರಿ ಹೊರಗಡೆಯಿಂದ ಗೊಂದಲಿಗೆ ಕಟ್ಟುವಾಗ ಅವುಗಳ ಮೈಯನ್ನ ಚೆನ್ನಾಗಿ ಉಜ್ಜುತಿದ್ದರು.

ಸೋಮವಾರ ಮಾತ್ರ ಬಸವಣ್ಣನಿಗೆ ರಜೆ, ಯಾರು ಗಳೆ ಹೂಡುತ್ತಿರಲಿಲ್ಲ, ಕೆರೆಗೆ ಇಲ್ಲ ಹಳ್ಳದಲ್ಲಿ ಗುಂಡಿಗಳಿದ್ದರೆ ಅವುಗಳಲ್ಲಿ ನೀರಿದ್ದರೆ ಅವುಗಳನ್ನು ಈಜಲು ಬಿಡುತ್ತಿದ್ದರು. ಕೆಲವು ಎತ್ತುಗಳು ಮನುಷ್ಯರಂತೆ ಸೋಮಾರಿಗಳು, ಅವುಗಳ ಬೆನ್ನ ಮೇಲೆ ಸರಿಯಾಗಿ ಬಾರಿಕೋಲು ಬಿದ್ದಾಗಲೆ ಈಜಾಟಕೆ ಇಳಿಯುತ್ತಿದ್ದವು. ಎರಡು ಮೂರು ಸುತ್ತು ಚೆನ್ನಾಗಿ ಈಜಿದ ಮೇಲೆ ಬೆನ್ನ ಮೇಲೆ ಕೈಯಾಡಿಸಿ ಎರಡು ಹಿಂಗಾಲುಗಳ ಮೇಲೆ ಮೆತ್ತಿರುವ ಸಗಣಿ ಅಷ್ಟೊತ್ತಿಗಾಗಲೆ ನೆನೆದು ಮೆತ್ತಗಾಗುತಿತ್ತು. ಅದನ್ನ ಒಂದು ಕಲ್ಲಿನಿಂದ ಉಜ್ಜಿ ತೆಗೆದು ಗಿಡದ ನೆರಳಿಗೆ ಕಟ್ಟಿ ಒಣಮೇವು ಹಾಕುತ್ತಿದ್ದರು. ಕಮತ ಮಾಡಕ ಪ್ರತಿಯೊಬ್ಬರಿಗೂ ಎತ್ತುಗಳು ಬೇಕಾಗಿರುವುದರಿಂದ ಎತ್ತುಗಳೆ ಅವರ ಸರ್ವಸ್ವವಾಗಿದ್ದವು. ಹಾಗಾಗಿಯೆ ಅವುಗಳನ್ನು ಚೆನ್ನಾಗಿ ನೋಡಿಕೊಳ್ಳಲಾಗುತ್ತಿತ್ತು. ನೇಗಿಲು, ಕುಂಟಿ, ಚಕ್ಕಡಿ, ಬಿತ್ತಲು, ಹರಗಲು, ಸಾಲುಮಾಡಲು ಹುಲ್ಲು ತೆಗೆಯಲು ಕೊಯ್ಯಲು ಆದ ಮೇಲೆ ಹೇರಲು, ರೋಣಗಲ್ಲು ತಿರುಗಿಸಲು ಎತ್ತುಗಳು ಬೇಕೆ ಬೇಕಾಗಿದ್ದವು. ಯಾವುದಾದರೂ ಕಣದಲ್ಲಿ ಕಲ್ಲು ಎದ್ದಿದ್ದರೆ. ತುಳಿಯಲು ಎತ್ತುಗಳೆ ಬೇಕಾಗಿದ್ದವು. ಎತ್ತುಗಳ ಕಾಲಲ್ಲಿ ಲಾಳ ಹೊಡಿಸಿರುವುದರಿಂದಾಗಿ ಅವು ತುಳಿದರೆ ಕಲ್ಲುಗಳೆಲ್ಲಾ ಒಳಗೆ ಹೋಗಿ ಬಿಡುತ್ತಿದ್ದವು.

* * *

12. ಚಮನ್ ಸಾಬಿಯ ನಾಲಿನ ಕತೆ

ತಾಂಡದಲ್ಲಿ ಒಂದು ಜೊತೆ ಎತ್ತುಗಳ ಕಮತವೆ ಹೆಚ್ಚು. ಅದರಲ್ಲೊ ಚೂರು ಜಾಸ್ತಿ ಹೊಲ ಇರುವವರು ನಾಕು ಎತ್ತುಗಳನ್ನ ಕಟ್ಟಿದ್ದರು. ತೊಪುನಾಯ್ಕನವು ಆರಂಭದಲ್ಲಿ ನಂದಿ, ಕುರುವತ್ತಿ ಎನ್ನುವ ಎರಡು ದೊಡ್ಡ ಎತ್ತುಗಳೆ ಇದ್ದವು. ಅವನ್ನೆ ಸರಿಯಾಗಿ ಮೇಯಿಸಿಕೊಂಡು ಕಮತ ಏನೊ ಮಾಡುತ್ತಿದ್ದ. ಬೆಳೆದ ಮಾಲನ್ನ ಜಗಳೂರು ಖಾದರ್ ಸಾಬನ ದಲ್ಲಾಳಿ ಅಂಗಡಿಗೆ ಹೊಡೆಯುತ್ತಿದ್ದ. ಆವಾಗ ಬೆಳೆಯುತ್ತಿದ್ದ ದೊಡ್ಡಬೆಳೆ ಅಂದರೆ ರಾಗಿ, ಹೈಬ್ರಿಡ್ ಜೋಳ, ಅಕ್ಕಡಿಕಾಳುಗಳಾದ ತೊಗರಿ, ಅಲಸಂದಿ, ಸಾಸಿವೆ, ಗೂರಾಳು, ಎಳ್ಳು, ದೇವದರಹತ್ತಿ, ಸಣ್ಣಹತ್ತಿ, ನಂತರ ಬಂದ ವರಲಕ್ಷ್ಮಿ ಹತ್ತಿ, ಬತ್ತಗಳಲ್ಲಿ ಹೈಯರ್‌ಟ್ವಂಟಿ, ಜಯಾ, ಸೋನಾ, ಗೆಜ್ಜೆ ಶೇಂಗಾ, ಕಬ್ಬು, ಮಡಿಗಳಲ್ಲಿ ಮೆಣಸಿನಕಾಯಿ, ಅಲ್ಲೆ ಪಕ್ಕಕ್ಕೆ ಹೀರೆ, ಬೆಂಡೆ, ಬದನೆ, ಚಂಡುಹೂವು, ಸೆಣಬು, ಔಡಲ, ಅಂಬಾಡಿರಭಾಜಿ, ಸಜ್ಜೆಯ ತೆಲಿಸಾಲುಗಳು ಸಾಮಾನ್ಯವಾದವುಗಳು. ಕೆಲವರು ಒಂಭತ್ತು ಸಾಲಿಗೆ ಒಂದು ಅಕ್ಕಡಿ ಹಾಕಿದರೆ ಹನ್ನೆರಡು ಸಾಲಿಗೂ ಒಂದು ಅಕ್ಕಡಿ ಮಾಡುತ್ತಿದ್ದರು. ತೊಪುಕಂಡಹಾಗೆನೆ ಉಪ್ಪಾರ ಎಲುಬನ ಮನಿಯೊಳಗೆ ನಾಕು ಹುಡುಗರು ದುಡಿಮೆ ಮಾಡುತ್ತಿದ್ದರು. ತಾವಾಯ್ತು, ತಮ್ಮ ಹೊಲಮನಿ, ದನಕರು ಊರ ಉಸಾಬರಿಗ ಹೋಗ್ತಿರಲಿಲ್ಲ. ಅವನ ಹೆಂಡತಿ ಹೂವಕ್ಕ ಅಷ್ಟೆ ಹೊತ್ತಾರೆ ಬುತ್ತಿ ಗಂಟು ಕಟ್ಕೊಂಡು ಹೋದರೆ ವಾಪಾಸು ಕೌಳ ಆದಾಗಲೆ ಬರುತ್ತಿದ್ದಳು. ಊರಮುಂದಲ ಹಾಸಗಿಯೊಳಗೆ ಒಳ್ಳೆಯ ಎಂಟು ಎಕ್ಕರೆ ತರಿ ಜಮೀನು ಬಿತ್ತಿದರೆ ಮೂರು ಮಳೆ ನಡಿಸಿತು ಅಂದ್ರೆ ಬೆಳೆ ಸೀದಾಮನಿಗ ಎಲುಬನ ಮಕ್ಕಳು ಒಂದ ವರ್ಷ ನಾಕು ಎತ್ತಿನ ಕಮತ ಮಾಡೋದು ಅಂತ ಮತ್ತೆರಡು ಎತ್ತುಗಳನ್ನು ತಂದಿದ್ರು. ಆಗ ಇಡಿ ತಾಂಡ ಅವರದೆ ಮಾತು ತೆಗೆದು "ಲೇ ನಿಂದೇನು ಎಲುಬನ ನಾಕೆತ್ತಿನ ಕಮತ ಇದ್ದಂಗೈತೆ ಮುಚ್ಕೊಂಡಿರು" ಅಂತ ಯಾರಾದರು ಅವಸರ ಮಾಡಿದರೆ ಗದರಿಸಿ ಬಾಯಿ ಮುಚ್ಚಿಸುತ್ತಿದ್ದರು. ಓಬಿರಾಯನ ಕಾಲದಲ್ಲಿ ದೊಡ್ಡಮನಿ ಅಂತ ಸ್ವಯಂ ಘೋಷಿತ ಮನಿತನತವಾದ ಮೇಗಳ ಓಣಿಯ ಚಿಪ್ಪನಾಯ್ಕ ಮತ್ತ ಅವನ ತಮ್ಮ

* ಅಂಬಾಡಿರಭಾಜಿ–ಸೆಣಬಿನ ಸೊಪ್ಪು

ಥಾಕುನಾಯ್ಕನ ಮಕ್ಕಳು, ಮೊಮ್ಮಕ್ಕಳು ಸೇರಿ ಒಂದು ಇಪ್ಪತ್ತು ಮಂದಿ ಕೂಡಿದ್ದ ಕಾಲ ಅವರ ಸಂಬಂಧಿಕರದ್ದು, ಬೀಗರು ಬಿಜ್ಜರು ಅಂತ ಯಾರನ್ನೂ ನೋಡದೆ ಅವರ ಜಮೀನುಗಳನ್ನ ಚಿಪ್ಪನಾಯ್ಕ, ಥಾಕುನಾಯ್ಕ ಅಡ ಇಟ್ಕೊಂಡು ಮುಂದೆ ಕಾಲಕ್ರಮೇಣ ತಮ್ಮ ಹೆಸರು ಮಾಡಿಕೊಂಡಿದ್ದರು. ಊರಪಕ್ಕ ಹತ್ತು ಎಕ್ಕರೆ, ಊರ ಮುಂದೆ ಇಪ್ಪತ್ತು ಅಂತ ಸರಿಸುಮಾರು ಮೂವತ್ತು ಎಕ್ಕರೆ ಮಾಡಿದ್ದರು. ಕೂಡಿದ್ದಾಗ ಕೈಗೆ ಕೈ ತಾಕುತ್ತಿತ್ತು. ಹಂಗಾಗಿ ನಾಕು ಎತ್ತಗಳಿದ್ದವು ಅಂತೇಳಿ ಮಂದಿ ಮಾತಾಡುತ್ತಿದ್ದರು. ಅವರನ್ನ ಬಿಟ್ಟರೆ ಈಗ ದೊಡ್ಡ ಹಿಡುವಳಿದಾರ ಎಲಬನೆ ಅಗಿದ್ದ. ಖಾದರಸಾಬ್ ಊರಾಗೆ ಕೆಲಮಂದಿಗೆ ಸಾಲ ಕೊಟ್ಟಿದ್ದ. ಮಂದಿ ಸಾಲ ಕೊಡ್ತಾರಂತ ಗೊತ್ತಿದ್ದೆ ಮುಂಗಾರು ಸುರು ಆತು, "ಕೊಡ್ರಿದಣಿ ಗೊಬ್ಬರಕ್ಕೆ, ಬೀಜಕ್ಕೆ" ಅಂತ ಮುಗಿಬಿದ್ದು ಸಾಲ ಮಾಡ್ತಿದ್ದರು. ಉಪ್ಪಾರ ಎಲುಬ ಬಾರಕಿರ ಗಂಗಣ್ಣ, ಬ್ಯಾಡರ ಹನುಮೇಶಿ, ಹಡಪದ ಚನ್ನಬಸವ, ಸಾಬರ ಗುಲ್ಮಾಸಾಬಿ, ಎಲ್ಲಾ ಲಮಾಣ್ಯಾರು ಜಗಳೂರ ಖಾದರ್‌ಸಾಬಿ ಬಿಟ್ಟರೆ ಆ ಕಾಲದ ದೊಡ್ಡ ಸಾವುಕಾರ ಅಂದ್ರೆ ಜಗಳೂರು ಮಹಾಲಿಂಗಪ್ಪ. ಇವರಿಬ್ಬರ ಅಂಗಡಿಯಲ್ಲೆ ಮಾಲು ಬಿಡಬೇಕು, ದಲ್ಲಾಲಿ ಹಮಾಲಿ ಮುರಿಸಿ ಬಂದರೆ ತಗೊಂಡ ಬರಬೇಕು ಇಲಿಕ್ರ ಹಳೇಸಾಲಕ್ಕೆ ಚುಕ್ತ ಆದರೆ ಮಾಡಿ, ಹೊಸ ಸಾಲಕ್ಕೆ ಅರ್ಜಿ ಸಲ್ಲಿಸಿ ಬರಬೇಕು. ಹಿಂಗ ಮಾಡಿ ಉಪ್ಪಾರ ಎಲಬನ ಅಸಲು ಬಡ್ಡಿ ಸೇರಿ ಐದಾರು ಸಾವಿರ ಆಗಿದ್ದಕ್ಕೆ ಸಾಬಿಯೆ ಊರಿಗೆ ಬಂದು ಎಲುಬನ ಎರಡು ಎತ್ತುಗಳ ಮೇಲೆ ತೀರ್ಮಾನ ಮಾಡಿಕೊಂಡು ಬಂದಿದ್ದ. "ಇನ್ನ ಇವನ್ಯಾರ ಹೊಡ್ಕೊಂದ ಹೊಕ್ಕಾರ, ಲೇ ತೊಪುನಾಯ್ಕ ನಾ ಹೇಳಿಕಳಸೊವರಿಗೆ ಎತ್ತುಗಳನ್ನ ನಿನ್ನ ಮನಿಯಾಗೆ ಕಟ್ಕೊ" ಅಂದುಹೋಗಿದ್ದ. ಸಾವುಕಾರ ಹೇಳಿದ್ದಕ್ಕೆ ಇಲ್ಲಾ ಅಂತ ಹೇಳಾಕ ಆಗಲ್ಲ ಅಂದವನೆ. "ಹೂಂ ಬುದ್ದಿ ಆಯ್ತು ನೀವು ಹೊಡೆದುಕೊಂಡು ಬಾ ಅಂದಾಗ ಬರ್ತಿನಿ ಅಂದ ಮುಂದ ಅದೇ ದುಡ್ಡು ನೀಕೊಟ್ಟು ಮಾಡಕೊ ಹೋಗು ನಿಂದು ಭೂಮಿ ಹೆಚ್ಚಿದೆ ಯಾಕ ಯೋಚನೆ ಮಾಡಿಯ ದನದ ಸಂತಿಗ ಹೋದ್ರ ಎನಿಲ್ಲಾಂದ್ರು ಆರು ಸಾವಿರದ ಹೋರಿಗಳು ಆ ಫಜಿತಿನಾ ಯಾಕೆ ಪಡಲಿ, ನನ್ನ ಅಸಲು ಬಡ್ಡಿ ಸೇರಿ ಕಟ್ಟಿಬಿಡು ಹೋಗು ಅತ್ಲಗೆ" ಕಡ್ಡಿ ಎರಡು ತುಂಡು ಮಾಡಿದಂಗೆ ಹೇಳಿ ಕಳುಹಿಸಿದ ಸಾಬಿ. ಸಾಬಿ ಮಾತು ತಗಿಯಾಕ ಆಗದೆ, "ಅವಶ್ಯಕತೆ ಏನೂ ಇದೆ. ಸಾಲ. . ." ಯೋಚನೆ ಮಾಡಿ ಮನಿತುಂಬ ಮಂದಿ ಅದಾರ ಮಾಡ್ತಾರ ಅನ್ನೊ ನಂಬಿಕೆ ಮೇಲೆ "ಹೂಂ" ಅಂದು ಬಂದಿದ್ದ ತೊಪು. ನಂದಿ ಕುರುವತ್ತಿ ಜೊತೆಗೆ ನಾಕು ಹಲ್ಲಿನ ಎರಡು ಹೋರಿಗಳು. ಎಲುಬನ ನಾಕೆತ್ತಿನ ಕಮತ ತೊಪುನ ಮನೆಗೆ ವರ್ಗಗೊಂಡಿತ್ತು. ಎತ್ತುಗಳು ಅಂದರೆ ರೈತನ ಜೀವಾಳ, ಹೊಲದ ಪ್ರತಿಯೊಂದು ಕೆಲಸಕ್ಕೆ ಎತ್ತುಗಳು ಬೇಕೆಬೇಕು. ಊರಲ್ಲಿ ಒಂದೆರಡು ಬಡ ಕುಟುಂಬಗಳಾದ, ಹರಿಹರದ ಜೋಪಡಿಯಲ್ಲಿದ್ದ ಕಮಟುನಾಯ್ಕನ ಕುಟುಂಬ, ಸಾಮಳುನಾಯ್ಕನ ಕುಟುಂಬ,

ರಿಪೇರಿನಾಯ್ಕನ ಕುಟುಂಬ, ನವಲಾಸಾಬಿ, ಹಜಮಾರ ಮಂಜ, ಉಪ್ಪಾರ ತಿಪ್ಪಗ, ಬಾರಕಿರ ಬಲವಂತ ಹಿಂಗೆ ಹದಿನೈದು ಇಪ್ಪತ್ತು ಮನಿಯವರನ್ನ ಬಿಟ್ಟರೆ ಎತ್ತುಗಳು ಪ್ರತಿಯೊಂದು ಮನೆಗಳಲ್ಲೂ ಇದ್ದವು. ಮುಂಗಾರು ಆರಂಭವಾಯಿತು ಎಂದರೆ ರೈತ ಆರು ತಿಂಗಳ ಕಾಲ ಪುರುಸೊತ್ತಿಲ್ಲದೆ ದುಡಿಯುತ್ತಿದ್ದ. ಮುಂಜಾನೆ ನಸುಕಿನೊಳಗೆ ಹೋದರೆ ಒಂದು ಗಂಟೆಮಟಾನು ರಂಟೆಹೊಡೆದು ಹುಲ್ಲನ್ನ ಕೊಳೆ ಹಾಕುತ್ತಿದ್ದರು. ಬಿಸಲಿನ ಹೊಡೆತಕ್ಕೆ ಹುಲ್ಲು ಬಾಡಿದ ಮೇಲೆ ಹರಗೊ ಕುಂಟಿಯನ್ನ ಕಟ್ಟಿಕೊಂಡು ಚೆನ್ನಾಗಿ ಹಣಿಸಿಕೊಂಡು ತಂದ ಕುಡ ಹಾಕಿ ಹೂಡಿದರೆ ಹುಲ್ಲು ಬೇರುಸಮೇತವಾಗಿ ಮೇಲೆದ್ದು ಬಿಸಲಿನ ತಾಪಕ್ಕೆ ಒಣಗಿ ಹೋಗುತ್ತಿತ್ತು. ಅದನ್ನ ಸಾಧ್ಯವಾದರೆ ಆರಿಸಿ ಗುಂಪಿ ಹಾಕಿ ಸುಟ್ಟು ಹೊಲದಾಗ ಬೀಜ ಆಗದಂತೆ ನೋಡಿಕೊಳ್ಳುತ್ತಿದ್ದರು. ತೊಪುನಾಯ್ಕನ ಹೊಲವಂತು ಯಾವಾಗಲು ಸ್ವಚ್ಛವಾಗಿರುತ್ತಿತ್ತು. ಏಕೆಂದರೆ ತೊಪುನೆ ಖುದ್ದಾಗಿ ಹದಿಮೂರು ಜನರೊಂದಿಗೆ ಮುಂಜಾನೆ ಹೊತ್ತಾರೆ ಸಾಲು ಹಿಡಿದರೆ ಮುಗಿಯುವವರೆಗೂ ಯಾರು ಬೆನ್ನು ಎತ್ತಿ ಸುಧಾರಿಸಿಕೊಳ್ಳಲು ಅವಕಾಶವೆ ಕೊಡುತ್ತಿರಲಿಲ್ಲಾ. ಆದರೆ ಅವನ ಪಕ್ಕದ ಹೊಲದ ಪೀರ್‍ಯಾನಾಯ್ಕ ಮಾತ್ರ ಅವನಿಗೆ ಮತ್ತು ಅವನ ಮಕ್ಕಳಿಗೆ ದೊಡ್ಡ ತಲೆ ನೋವು ಆಗಿದ್ದ. ಇವರು ಸೆದಿ, ಮುಳ್ಳು ಕಂಟಿ, ದೊಡ್ಡ ದೊಡ್ಡ ಕಲ್ಲುಗಳನ್ನ ಆರಿಸಿ ಪೀರ್‍ಯನಾಯ್ಕ ಒತ್ತಿರುವ ಮೇರಿಯ ಮೇಲೆ ಕರಾರುವಕ್ಕಾಗಿ ಜೋಡಿಸಿದರೆ ಇವರೆಲ್ಲಾ ಕೆಲಸ ಮುಗಿಸಿ ಹೋದ ಬೆನ್ನಲ್ಲೆ ಮೇರಿಮೇಲಿನ ಕಲ್ಲು, ಸೇದಿ ಅಲ್ಲದೆ ತನ್ನ ಹೊಲದೊಳಗಿನ ಸೇದಿಯೊಂದಿಗೆ ತೊಪನ ಹೊಲದಲ್ಲಿ ಬಿಸಾಡುತ್ತಿದ್ದ. ಪೀರ್‍ಯಾನ ಮಗ ಘೂಲ, ಪಗಡಿ, ಪಮ್ಮಾರಿ ತಂದೆಗಿಂತ ದೊಡ್ಡ ಜಗಳಗಂಟರು. ಒಂದೆರಡು ಸಲ ಇದೆ ವಿಷಯಕ್ಕೆ ತೋಪನ ಎರಡನೇ ಮಗ ದೇವ್ಲ ಮೂವರಿಗು ಸಜ್ಜಾಗಿಯೆ ತದುಕಿದರು ಮತ್ತೆ ಅದೆ ಚಾಳಿ. “ಲೇ ಘೂಲ ನಿನಗಾದರೂ ಬುದ್ದಿ ಬೇಡ ಹಿಂಗ ಹಸನು ಮಾಡಿದ ಹೊಲದಾಗ ಬೇಕಾಬಿಟ್ಟಿಯಾಗಿ ಕಲ್ಲು, ಸೆದಿ ಬಿಸಾಕ್ತಿರಲ್ಲಾ, ಏನೊಪ್ಪ, ಬೇಕಂತ ಮಾಡ್ತಿರೊ, ಇಲ್ಲ ಕಲ್ಲುಗಳೆ ಬೇಕಂತ ನಮ್ಮ ಹೊಲ್ದಾಗ ಇರಬೇಕಂತ ಅವೆ ಬಂದ ಬಿಳ್ತವೊ ಆ ಭಗವಂತನಿಗೆ ಗೊತ್ತು.” ಸಮಾಧಾನಚಿತ್ತನಾಗಿಯೇ ಹೇಳುತ್ತಿದ್ದ. ಆದರೆ ಘೂಲ ಒಳಗೊಳಗೆ ನಗುತ್ತ. “ಏಯ್ ನಾವ್ಯಕ ಮಾಡೋನು ದೊಡ್ಡಪ್ಪ, ನಮಗೇನು ಮಾಡಾಕ ಬೇರೆ ಕೆಲಸ ಇಲ್ವೊ ಹೆಂಗೆ, ಆ ಕೆಲಸದವರಿಗೆ ಹೇಳ್ತಿವಿ. ಅವರು ನಿಂತ ಜಾಗದಿಂದಲೆ ಮೇರೆ ಮೇಲೆ ಬಿಸಾಕುತ್ತಾರೆ. ಅದು ಹೋಗಿ ನಿಮ್ಮ ಹೊಲದಾಗ ಬೀಳುತೈತಿ ನಾವು ಹೇಳ್ತಿವಿ. ಲೇ ನೋಡಿ ಮಾಡ್ರಲೆ ಹಿಂಗ ಮಾಡಬೇಡ್ರಿ ಅಂತ ಎಷ್ಟೆ ಆಗಲಿ ಕೂಲಿಯವರು ಕೂಲಿಯವರೆ” ಸಿದ್ಧಾಂತ ತುಂಬಿದ ಭಾಷಣವನ್ನೆ ಮಾಡಿದ್ದ. ತೊಪುನ ತಲೆ ತಿರುಗಿತ್ತು. ಆದರೂ ಚಿಲ್ಲರೆ ಬುದ್ಧಿಯ ಈ ಹುಡುಗನ ಕೂಡ ಮಾತೇನು ಬಿಡು ಅಂದವನೆ ಸಿಟ್ಟನ್ನ ನುಂಗಿಕೊಂಡು ಹೇಳಿದ್ದು ಸರಿ

ಇರಬಹುದೆಂದು ಭರಭರನೆ ಮುಂದಕ್ಕೆ ಸಾಗಿದ್ದ. ಬಿತ್ತುವಾಗ ತಲಿಸಾಲಿಗೆ ರಂಟೆ ಬಿಟ್ಟು ಸರಿಮಾಡಿಸುತ್ತಿದ್ದ.

ಎತ್ತುಗಳು ಪ್ರತಿಯೊಬ್ಬರ ಅವಶ್ಯಕತೆಯಾಗಿದ್ದವು. ಹಿಂಗಾರಿನ ಆರು ತಿಂಗಳು ಒಣಹುಲ್ಲು, ಚಲ್ಪಾ, ಸೊಪ್ಪು, ತೊಗರಿ ಒಕ್ಕಿದ ಮೇಲೆ ಬರುತ್ತಿದ್ದ ಹೊಟ್ಟು, ಶೇಂಗಾದ ಹೊಟ್ಟು, ಜೋಳದ ಕಂಕಿ ಎಲ್ಲವನ್ನು ಒಟ್ಟುಮಾಡಿ ರಾಗಿಹುಲ್ಲು ಒಕ್ಕಿಯಾದ ಮೇಲೆ, ನವಣೆ ಹುಲ್ಲಿತ್ತಂದರೆ ಅದನ್ನ ಒಂದು ಕಡೆಯಿಟ್ಟು ಬುಡಕ್ಕೆ ರಾಗಿಹುಲ್ಲು ಒಂದೆರಡು ತರ ಒಟ್ಟಿದ ಮೇಲೆ ನವಣೆ ಹುಲ್ಲಿನ ಒಂದು ತರ ಅದರ ಮೇಲೆ ಮತ್ತೊಂದು ತರ ರಾಗಿಹುಲ್ಲು ಬಿಟ್ಟು ಜೋಳದ ತೆನೆಯಿಂದ ಬಂದ ಕಂಕಿಯನ್ನ ಒಂದು ತರ ಒಟ್ಟುತ್ತಾರೆ. ಅದಾದ ಮೇಲೆ ಶೇಂಗಾದ ಹೊಟ್ಟು, ತೊಗರಿಹೊಟ್ಟು ಸೇರಿಸಿ ಸರಿಯಾಗಿ ಒಂದು ತರ ಒಟ್ಟಿದ ಮೇಲೆ ಪೂರಾ ರಾಗಿಹುಲ್ಲು. ಎಷ್ಟೇ ಮಳೆ ಹೊಯ್ಯಲಿ ಬಿರುಗಾಳಿ ಬೀಸಲಿ ಹುಲ್ಲಿನ ಬಣವೆ ಮಾತ್ರ ಜುಪ್ಪ್ ಎನ್ನದಂಗೆ ಹಸಿಹುಲ್ಲು ಚಿಗರುವವರೆಗೆ ಇರುತ್ತಿತ್ತು. ಬೇಸಿಗೆಯಲ್ಲಿ ಹುಲ್ಲನ್ನು ಹಿರಿಯುವವರು ಸಮ ಪ್ರಮಾಣದಲ್ಲಿ ಹಿರಿಯುತ್ತಿದ್ದರು. ಅವರಿಗೆ ಮಾತ್ರ ಗೊತ್ತಾಗುತ್ತಿತ್ತು. ಅವರ ನಂತರ ಬೇರೆ ಯಾರಾದರು ಹುಲ್ಲು ಹಿರಿದಿರುವ ಅನುಮಾನ ಹಚ್ಚುತ್ತಿದ್ದರು. ಎತ್ತುಗಳು ಆರು ತಿಂಗಳು ಒಣಮೇವನ್ನು ಸರಿಯಾಗಿ ತಿನ್ನುತ್ತಿದ್ದವು. ಮೇವು ನೀರು ಹಾಕಿ ಸಾಕಿದ ಎತ್ತುಗಳಿಗೆ ಕಾಲಿನ ಗೊರಸು ಉದ್ದ ಬೆಳೆಯುತ್ತಿದ್ದವು. ನಡೆದು ನಡೆದು ಕೆಳಗಿನ ಗೊರಸು ಸವಿಯುತ್ತಿದ್ದವು. ಮತ್ತೊಂದು ಕಡೆಗೆ ಕಲ್ಲು, ಮುಳ್ಳು ತುಳಿದು ಗೊರಸು ಗಾಯಗಳೊಳಗೆ ಆಗಿರುವ ಬಿಳಿಹುಳುಗಳನ್ನು ತೆಗೆದು ಅರಿಶಿಣ, ಸುಣ್ಣ ಬೆರಿಸಿ ತುಂಬುತ್ತಿದ್ದರು. ತೊಪು ಹೊಸದಾಗಿ ಕೊಂಡಿದ್ದ ನಾಕು ಹಲ್ಲಿನ ಹೋರಿಗಳಿಗೆ ಅವಾಗ ತಾನೆ ಚಾಲ್ತಿಗೆ ಬಂದಿದ್ದ ನಾಲುಗಳನ್ನು ಕಟ್ಟಿಸಲು ತೆಗೂರಿನ ಚಮನ್‌ಸಾಬಿಯನ್ನು ಹುಡುಕಿಕೊಂಡು ಹೊರಟ. ಚಮನ್‌ಸಾಬಿ, ತೆಗೂರಿನ ರಸ್ತೆ ಬದಿಯಲ್ಲಿ ಇದ್ದ ಮಸೀದಿಯ ಮುಂದೆ ಸೊಂಪಾಗಿ ಬೆಳೆದಿದ್ದ ಬೇವಿನಮರ, ಹುಣಸೆಮರದ ನೆರಳಿನೊಳಗೆ ಗೆಣಸಿ ಹೋರಿಗಳನ್ನು ನೆಲಕ್ಕುರುಳಿಸಿ ನಾಲು ಹೊಡೆಯುತ್ತಿದ್ದ. ನಾಲು ಕಟ್ಟೋರು ಹೊಸದಾಗಿದ್ದರಿಂದ ಮತ್ತು ಚಮಾನ್ ಸಾಬಿ ಒಬ್ಬನೆ ಆಗಿದ್ದರಿಂದ ಅವನಿಗೆ ಎಲ್ಲಿಲ್ಲದ ಬೇಡಿಕೆ. ತೊಪು ಅವನ ಹತ್ತಿರ ಹೋದವನೆ, "ಚಮನ್ ಭಾಯಿ, ನನ್ನ ಎರಡು ಹೋರಿಗಳಿಗೆ ನಾಲು ಕಟ್ಟಬೇಕಲ್ಲ" ಅಂದವನೆ ಅವನ ಉತ್ತರಕ್ಕೆ ಕಾದ. ಚಮನ್ ಮಾತ್ರ ಕೇಳಿಸದವನಂತೆ ಜಾಣ ಕಿವುಡನಂತೆ ನಟಿಸಿದ. ತೊಪುಗೆ ಅನಿವಾರ್ಯತೆ ಇತ್ತು. "ಏಯ್ ಚಮನ್ ಕೇಳ್ತಿದೆಯಾ, ಒಂದ ವರ್ಷದ ಹಿಂದೆ ಚಮ್ಡಾದ ವ್ಯಾಪಾರ ಮಾಡುತ್ತಿದ್ದೆ. ತೊಪುನಾಯ್ಕಣ್ಣ ಇಲ್ಲಿ ಐದು ಹತ್ತು ನಮ್ಮದುಕು ಸಿಗಲಿ ಅಂದಿದ್ದು ಮರೆತುಬಿಟ್ಟಾ" ಅಂತಿದ್ದಂಗೆ "ಅರೆ ತೊಪುಕೆ ಅಣ್ಣಾ ಸಿಟ್ಟು ಆಗೋದು ಬೇಡ, ನಿಮ್ದು ಹಬ್ಬದಾಗೆ ಬೇಟೆ ಮಾಡಿದಾಗ ನಿಮ್ಮ

ತಮ್ಮಂದು, ತಂಗಿದು, ಅಕ್ಕಪಕ್ಕದವರ ಚಮ್ದಾ ನನಗೆ ಕೊಡಿಸುತ್ತಿದದ್ದು ನಿಮ್ದುಕೆ ಉಪಕಾರ ಮರಿಯಾಕೆ ಸಾಧ್ಯಾನ. ಏನೊ ಗೆಣಸಿದ, ಹೋರಿ ಬಾಳ ತಾಕತ್ತೈತೆ ಹಗ್ಗ ಹರಿದು ಎದ್ದರೆ ಮತ್ತೆ ಚಿತ್ ಮಾಡೋದು ಕಷ್ಟ ಅಲ್ವಾ ಅದಕ್ಕೆ ಮದ್ಲು ಕೆಲ್ಸ ಮುಗಿಸಾಮ ಅಂತಿದ್ದೆ" ತೊಪುನಾಯ್ಕ ಸುಮ್ಮನೆ ಬಿಡೊದಿಲ್ಲ ಅಂತ ಗೊತ್ತಿತ್ತು.

"ಹೆಂಗ ಹೇಳು ಈಗ ಊರಿಗ ಯಾರದಾರ ಕೂಡ ಹೇಳಿ ಕಳುಹಿಸಿದರೆ ಹೋರಿ ಕರಗಳು ಬಂದ ಬಿಡ್ತಿವಾ, ನೀ ಈಗ ನಾಲಕಟ್ಟಿ ಅಂತಂದ್ರ ಮೂರು ಮೈಲಿ ದೂರ ಬಂದ ಬಿಡ್ತವೆ" ಅವನ ಮಾತಿಗಾಗಿ ಕಾದ. "ಇನ್ನೂ ಇಬ್ಬರು ಬೋಲ್ಯಾರ ಬರ್ತಾರೊ ಇಲ್ಲೊ ಹೇಳೋದು ಹೇಳಿ ಕಳುಹಿಸಿ ಬಿಡು" ಅಂದ. ಸಂತೆ ಬಜಾರಲ್ಲಿ ಬಕಲಬೀರ ಸ್ವಾಮಿ ಮನಿತಾವ ಯಾರಾರು ಇದ್ದೆ ಇರ್ತಾರಂತ ತೊಪು ಹೊರಟ. ಯಾರೊ ಹಾಲಪ್ಪನ ಕಿರಾಣಿಯಲ್ಲಿ ಚಹಾದಂಗಡಿಗೆ ಬೇಕಾದ ಸಾಮಾನು ಖರೀದಿಸುತ್ತಿದ್ದ "ಅರೆ ನೀನು ಜಾಗರಿನಾಯ್ಕನ ಮಗ ಜಾಂಪಾ ಅಲ್ಲೆ ನೊ ಎಟ್ ಎತ್ರ ಬೆಳದಿಯಾ ಈಟಿದ್ದೆ ಚಣ್ಣ ಹಾಕದಂಗೆ ಓಡಾಡುತ್ತಿದ್ದ ಎದಿಮಟ ಬೆಳದಿ ಅಲ್ಲೊ ಪಾಡಾತ ಬಿಡು ನಿಮ್ಮಪ್ಪಗ ಸಹಾಯ ಮಾಡೋಹಂಗಾದಿಯಲ್ಲ, ಅಂದಂಗ ತಮ್ಮ ನಮ್ಮ ಮನಿಗ ಹೋಗಿ ನಮ್ಮ ಹುಡುಗರಿಗೆ ಗಡಾನ ನಿಮ್ಮ ಹೊಸ ಹೋರಿಗಳನ್ನ ಓಡಿಸಿಕೊಂಡು ನಾಲು ಕಟ್ಟೆಸೋದಕ್ಕೆ ತೆಗೂಂಡ ಬರಬೇಕೆಂತಂದು ಹೇಳಪ್ಪ. ಮರಿಬ್ಯಾಡ ಮದಲು ಹೋದವನೆ ಈ ಸುದ್ದಿ ಮುಟ್ಟಿಸು" ಅಂದ. ಜಾಂಪಾ ತನ್ನ ಹಳೆಕಾಲದ ಮೊಡ್ಕ ಸೈಕಲ್ ಹತ್ತಿದವನೆ ಲಟ್ಕಾಪಟ್ಕಾ ಅಂತ ತುಳಿದುಕೊಂಡವನೆ ಊರಿಗೆ ಬಂದು ಮೊದಲು ತೊಪುನಾಯ್ಕ ಮನಿಗ ಹೋದ. ಅಲ್ಲೆ ಆಟ ಆಡುತ್ತಿದ್ದ ತೊಪುನಾಯ್ಕ ಮಗಳು ದಮ್ಮಡಿಯನ್ನು ಕರೆದು "ಎಯ್ ಹುಡುಗಿ ಯಾರದಾರ ಮನಿಯೊಳಗ" ಕೇಳಿದ. ಕೈಯಾಗಿದ ಕಲ್ಲುಗಳನ್ನು ತೂರಿ ಒಂದು ಕೈಮೇಲೆ ಹಾಕ್ಕೊಂಡು "ಒಳಗ ನಮ್ಮವ್ವ ಅದಾಳ ನೋಡಣ್ಣ" ಅಂದಾಕಿನೆ ಮೇಲೆ ಹಾರಿಸಿ ಒಂದೆ ಕೈಯೊಳಗೆ ಹಿಡಿದಳು. "ಅತ್ತೆ, ಅತ್ತೆ" ಕೂಗಿದ ಜಾಂಪಾ. ಒಳಗೆ ಕೆಲಸ ಮಾಡುತ್ತಿದ್ದ ಜಾನಿಬಾಯಿ, "ಯಾರಪ್ಪ ನೀನಾ, ಏನ ಕೆಲಸ ಇತ್ತು" ಹೊರಗಡೆ ಬಂದಳು. "ಮಾವ ಹೇಳಿದ ನಿಮ್ಮ ಹೊಸ ಕರುಗಳನ್ನು ನಾಲು ಕಟ್ಟಿಸಿದೊಕ್ಕೆ ತೆಗೂರಿಗೆ ಹೊಡೆದುಕೊಂಡು ಹೋಗಬೇಕಂತೆ" ಅಂದವನೆ ವಾಪಾಸು ಹೊರಟ. ಅವನು ಹೇಳಿದ್ದ ಕೇಳಿದ ಜಾನಿಬಾಯಿ, "ಲೇ ದಮ್ಮಡಿ ಹೋಗಿ ಹನ್ಮಂತ ದೇವರ ಗುಡಿತಾವ ನಿಮ್ಮಣ್ಣ ಹುಲಿಯೂರ ಅದಾನೇನು ಗಡಾನ ಕರ್ಕಂಡ ಬಾ, ಏನಂದೆ? ಓಡು, ಏಳಮ್ಯಾಕೆ ಅದೇನು ಕಲ್ಲರಾಶಿ ಮಾಡಿಕೊಂಡು ಮುಂಜಾನೆಯಿಂದ ಸಂಜಿಮುಟ ಆಡ್ತಿರೆ ನಮ್ಮವ್ವ, ನಿಮ್ಮ ಜನುಮಕ್ಕ ಸಾಕ ಆಗತ್ತೈತೊ, ಇಲ್ಲೊ ಆ ದೇವರಿಗೆ ಗೊತ್ತು" ಅಂದಾಕಿನ ಗದರಿಸಿ ಗದುಮಿದಳು. ಆಡುತ್ತಿದ ನಿಗರ ನಿಂಗೇಶಿಯ ಬಗರಿಯನ್ನ ಹೊಡಿಯಾಕ ಸುತ್ತಿಕೊಂಡಿದ್ದ ಲಾಡಿಯನ್ನ ಇನ್ನೇನು ಹೊಡಿಬೇಕು "ಅಣ್ಣ,

ಅವ್ವ ಕರಿಯಾಕ ಹತ್ಯಾಳ ಗಡಾನ ಬರಾಕಂತೆ" ಅಂಗಿ ಹಿಡಿದು ನಿಂತಳು. "ಲೇ ಹುಡುಗ ನನ ಬಗರಿಗೇನಾರ ಹೊಡದಿ ನೀ ಗೆಲ್ಲೊತಂಕ ಹೋಗಾಕ ಬಿಡಲ್ಲಿ" ಅಂದು ನಿಗರನಾಗೇಶಿ ಎಚ್ಚರಿಸಿದ. ಕೈಹಿಂದಕ್ಕ ತಗೊಂಡು, "ಲೇ ಮಗನ, ಈಗ ಬಿಡ್ತಿನಿ, ನಾಳೆ ಸಿಕ್ತಿಯಲ್ಲ, ನಿನ್ನ ಬಗರಿ ಹೊಡೆಯೊ ಹಂಗ ಹೊಡಿತಿನಿ" ಅವನ ಉತ್ತರಕ್ಕೆ ಕಾಯದೆ ಮನಿಗ ಓಡಿದ. "ಎಯ್, ಬೀಡು ಬರಾಕ ಹತ್ತಿರೊದಲ್ವಾ ನಡಿ" ಗದರಿಸಿದ. "ಅಪ್ಪ ಹೊಸ ಹೊರಿಕರುಗಳನ್ನು ತೆಗೂರಿಗೆ ಹೊಡ್ಕೊಂಡು ಬರಾಕ ಹೇಳ್ಯಾನಂತ ಮುಂದೆ ಇಲ್ಲಾಂದ್ರ ಐತಲ್ಲಾ ಸಂಜಿ ಮುಂದ" ಅಂಜಿಸಿದಳು. "ಈಗ, ಎಲ್ಲದಾವ ಎತ್ತುಗಳು" ಕುತೂಹಲದಿಂದ ಕೇಳಿದ. "ಗೊತ್ತಿಲ್ಲ ಅವ್ವನ ಕೇಳನಡಿ" ಮುಂದಕ್ಕ ದಬ್ಬಿದಳು. "ಆಯ್ತುಬಿಡು, ಕೇಳ್ತಿನಿ ಯಾಕೆ ದಬ್ಬಾಕ ಹತ್ತಿ" ಕೊಸರಿದ. "ಯವ್ವ, ಏನಾತು ಎತ್ತುಗಳು ಯಾರ ಹೊಡ್ಕೊಂಡ ಹೋಗ್ಯಾರ, ಯಾವ ಹೊಲದ ಕಡಿಗ, ಅಡವಿಹೊಲನಾ, ಇಲ್ಲ ಎರಿ ಎಲ್ಲಂತ ಹುಡುಕಲಿ" ಮಕ ನೋಡಿದ. "ಧಣಿಯಾ ಹೋಗ್ಯನ ಅವನಿಗ ಹೇಳು ಹೊಡ್ಕೊಂಡು ಹೊಗ್ತಾನ ನೀ ಹೋಗಾಕ ಹೋಗಬೇಡ ದಾರಿ ಪಾಡಿಲ್ಲ" ಅಂದಳು. ಹುಲಿಯೂರ ಭಟ್ಟರ ಹೊಲದಿಂದ ಆರಂಭ ಮಾಡಿದ "ಧಣಿಯಾ ಅಣ್ಣ ಅದಿಯಾ ತೆಗೂರಿಗೆ ಎತ್ತು ಹೊಡ್ಕೊಂಡ ಹೋಗಬೇಕಂತೆ ಅಪ್ಪ ಹೇಳಿ ಕಳಸ್ಯಾನ" ಕೂಗಿದ. ಮಂಟೂರಭಟ್ಟನ ಮೆರಿ ಮೇಲೆ ಎತ್ತುಗಳನ್ನು ಮೇಯಿಸುತ್ತಿದ್ದ ಧಣಿಯಾ, "ಏನಾತು, ಬಾ ಇಲ್ಲಿ" ಕೂಗಿದ. "ಗಡಾನ ಎತ್ತುಗಳನ್ನು ತೆಗೂರಿಗೆ ಹೊಡೆದುಕೊಂಡು ಹೋಗಬೇಕಂತ ಅಪ್ಪ ಹೇಳಿ ಕಳಿಸ್ಯಾನ" ಅಂದ. "ಸರಿಹೋಗು ಮನಿಗ ನಾ ಹೊಕ್ಕಿನಿ" ಅಂದವನೆ ಮೇಯುತ್ತಿದ್ದ ಹೋರಿ ಕರಗಳನ್ನು ಎಳೆದು ಬೆನ್ನ ಮೇಲೆ ಬಾರಿಕೋಲಿಂದ ಬಾರಿಸಿದ. ಬಾಯಿಯೊಳಗಿದ್ದ ಹುಲ್ಲನ್ನ ಬಿಟ್ಟು ಬೆನ್ನು ಚುರುಗುಟ್ಟಿದಕ್ಕೆ ಎತ್ತುಗಳು ಓಟಕಿತ್ತವು.

ತೇಗೂರಿಗೆ ಬಂದಾಗ ಆಗಲೆ ಇಳಿಹೊತ್ತು, "ಎಸಹಲ್ಲು" ಚಮನ್ ಸಾಬಿ ಕೇಳಿದ "ನಾಕ ಹಲ್ಲು ಇನ್ನೂ ಎಳೆಗರುಗಳು ರಾಟಿ ಮಾಡಿ ಮೂರ್ನಾಕ ವರ್ಷಗಳಾಗಿರಬಹುದು. ಆದ್ರ ಕೆಲಸಕ್ಕ ಎತ್ತಿದ ಕೈ, ರಂಟೆ, ಕುಂಟೆ, ಚಕ್ಕಡಿ ಏನಾರು ಕಟ್ಟು ಹಿಂದ ನೋಡದಂಗ ಓಡ್ತಾವ ನೋಡು." ತನ್ನ ಎತ್ತುಗಳ ಕಾರ್ಯ ವೈಖರಿಯನ್ನು ಹೇಳಿದ. "ಚೂಟಿ ಅದಾವ, ಹಿಡಿ ಬಾ ಹಗ್ಗ," ಬೆನ್ನ ಮೇಲೆ ಹಗ್ಗ ಹಾಕಿ ಬಿಗಿಯಾಗಿ ಎಳೆದ. ನೋವು ತಾಳದೆ ಹೋರಿಕರ ದಪ್ಪಂತ ಬಿತ್ತು. "ಗಡಾನ ಕಾಲುಗಳನ್ನು ಕಟು" ತುಂಡು ಹಗ್ಗ ಬಿಸಾಡಿದ. ನಾಕು ಕಾಲುಗಳನ್ನು ಕಟ್ಟಿ ಬೆಳದಿದ್ದ ಗೊರಸುಗಳನ್ನ ಸಮನಾಗಿಸಿ ನಾಲಿಗೆ ಮೊಳೆಬಡಿದು ಮುಗಿಸಿದ. ಅದರ ನಂತರ ಮತ್ತೊಂದು ಹೋರಿಗು ಬಡಿದ, ಅವನಿಂದ ಕಾಸು ಪಡೆದು ಜುಮುಜುಮು ಕತ್ತಲು ಆಗಿದ್ದಕ್ಕೆ ದಿನದ ಕೆಲಸ ಮುಗಿಸಿದ.

* * *

13. ಗುದ್ದಮ್ಮನ ಗುಡಿಯಲ್ಲಿ ಹುಲಿಯೂರನಿಗೆ ಚೇಳು ಕುಟುಕಿದ್ದು

ಹುಲಿಯೂರ ಚಿಕ್ಕವನಿರುವಾಗ ಮೇಲೆ ಅಂಗಿಮಾತ್ರ ಹಾಕಿಕೊಂಡು ಕೆಳಗಿನ ಬ್ರಹ್ಮಾಂಡವನ್ನು ಬಿಟ್ಟುಕೊಂಡೆ ಅಡ್ಡಾಡುತ್ತಿದ್ದ. ಬೇಸಿಗೆಬಂತು ಅಂದ್ರೆ ಹುಡುಗರೆಲ್ಲಾ ರಾತ್ರಿ ಬೆಳದಿಂಗಳು, ಅವನ ಮನೆಯ ಎದುರಿನ ದೊಡ್ಡ ಬೇವಿನ ಮರ ಮರದ ಸುತ್ತ ಪಂಚಾಯ್ತಿ ಕಟ್ಟಿಗಂತ ಗಾರಿ ಹಾಕಿ ಕಲ್ಲುಗಳನ್ನು ಜೋಡಿಸಿ ಸಮತಟ್ಟು ಮಾಡಿರುವ ಗಾರಿಕಟ್ಟೆ. ಪೂರ್ವ ದಿಕ್ಕಿಗೆ ಮುಖ ಮಾಡಿ ಆ ಕಡೆಯೊಂದು ಈ ಕಡೆಯೊಂದು ಸೈಜುಕಲ್ಲು ನಿಲ್ಲಿಸಿ ಮಣ್ಣು ಮೆತ್ತಿ ಮೇಲೆ ಯಾರದೊ ಮನಿ ಮುಂದಿನ ಸ್ನಾನದ ಕಲ್ಲು ತಂದು ಮುಚ್ಚಿ ಒಂದು ಮಡಿಕೆ, ನಾಕು ಕುಡಿಕೆಗಳು ಹಸಿರು ಕುಪ್ಪಸ, ಹಸಿರು ಬಳೆ, ಏರಿಸಿ ಅದಕ್ಕೊಂದು ಹೆಸರು ಕೊಟ್ಟಿದ್ದರು ಗುದ್ದಮ್ಮ ದೇವಿ ಅಂತ ಅಲ್ಲಿ ಆಟಕ್ಕೆ ಸೇರುತ್ತಿದ್ದರು. ಪ್ರತಿ ಮುಂಗಾರಿನಲ್ಲಿ ಹೊಲಕ್ಕೆ ಬೀಜ ಬಿತ್ತುವ ಮೊದಲು ಗುದ್ದಮ್ಮಗೆ ಒಂದು ಹಿಡಿ ಬೀಜದ ಕಾಳಿಟ್ಟು ಕೈಮುಗಿದು ಹೋಗುತ್ತಿದ್ದರು ಊರಲ್ಲಿ ಯಾರೆ ಮದುಮಗ ಮದುವೆಗೆ ಹೊರಗೆ ಹೋದರೆ ಎಲೆ, ಅಡಿಕೆ ಇಟ್ಟು ಗುದ್ದಮ್ಮನ ಆಶೀರ್ವಾದ ಪಡೆದೆ ಪಡೆಯುತ್ತಿದ್ದರು. ಹಾಗಾಗಿ ಗುದ್ದಮ್ಮ ಇಡಿ ಊರಿನ ಅದಿದೇವತೆಯಂತಿದ್ದಳು. ಸಣ್ಣ ಹುಡುಗರು ಅವಳ ಗುಡಿ ಮೆಲೆ ಕಾಲಿಟ್ಟು ಮರ ಹತ್ತುತ್ತಿದ್ದರು. ಕಟ್ಟೆ ಮೇಲೆ ಕೂಡಲು ಬಂದವರು ಎರಡೂ ಕೈಗಳನ್ನೆತ್ತಿ ಕೈಮುಗಿದು ಮನಸ್ಸಿನೊಳಗೆ ನೆನಪು ಮಾಡಿಕೊಂಡೆ ಎದ್ದು ಹೋಗುತ್ತಿದ್ದರು. ಹುಡುಗರ ಆಟದಿಂದ ಹಿಡಿದು ದೊಡ್ಡವರ ಸ್ಮರಣೆಯವರೆಗೆ ಎಲ್ಲರಿಗೂ ಬೇಕಾಗಿದ್ದಳು, ಊರಾಗ ಯಾರೆ ತಪ್ಪು ಮಾತಾಡಿದರೂ "ಲೇ ನಿನ್ನ ಗುದ್ದಮ್ಮ ಕಟ್ಟೆಗ ಎಳಿತಿನಿ," ಅಂತಾನೊ "ಗುದ್ದಮ್ಮನ ಕಟ್ಟೆಗ ಬಾ" ಎನ್ನುವುದು ಸಾಮಾನ್ಯ ಮಾತುಗಳಾದವು. ಹಾಗಾಗಿ ಗುದ್ದಮ್ಮ ಪ್ರತಿಯೊಬ್ಬರ ಮನೆಮಾತು. ಹುಲಿಯೂರ ಮತ್ತು ಅವನ ತಮ್ಮಂದಿರು, ತಂಗಿಯಂದಿರಿಗೆ ಅವನ ಅಣ್ಣಂದಿರ ಮಕ್ಕಳಿಗೆ ಒಂದು ಆಟದ ಬಯಲು, ಯಾವಾಗಲು ಅಲ್ಲೆ ಬಿದ್ದಿರುತ್ತಿದ್ದರು. ಏಕೆಂದರೆ ಗುದ್ದಮ್ಮನ ಗುಡಿ, ಗಾರಿಕಟ್ಟೆ ಎದುರಿನದ್ದೆ ಅವರ ಮನೆ ಹಾಗಾಗಿ ಅಲ್ಲೆ ಇರುತ್ತಿದ್ದರು.

ಅದೊಂದು ಬೇಸಿಗೆಯ ಹುಣ್ಣಿಮೆ ದಿನ ಎಲ್ಲರೂ ಚಂದ್ರನ ಬೆಳಕು ಅಂತ ಗುದ್ದಮ್ಮನ ಗುಡಿ ಹತ್ತಿರ ಕುಂತು ಆಟ ಆಡುತ್ತಿದ್ದರು. ಹುಲಿಯೂರ ಅದ್ಯಾಕೊ

ಒಳಗೆ ಕೈ ಇಟ್ಟಿದ್ದೆ ಏನೊ ಚುಚ್ಚಿದಂಗಾಗಿ ಹೊರಗಡೆ ತಗದಾಗ, ಅದು ಕೆಳಗಿಂದ ಮೇಲೆ ಏರಾಕ ಸುರು ಮಾಡಿತು. ಮದಲು ಏನೂ ಅನಿಸಲಿಲ್ಲ. ಯಾವಾಗ ಏರಾಕ ಸುರು ಆತು "ಯವ್ವ ಸತ್ನೆ ಕೈ ಜುಮು ಜುಮು ಅನ್ನಾಕ ಹತ್ಯೆತಿ." ಜೋರಾಗಿ ಕೂಗಿದ "ಏನಾತೊ ಯಾಕೆ ಹೊಯ್ಯಿಕೊಳ್ಳಾಕತ್ತಿ" ಮನಿಮಂದಿ ಹೊರಗಬಂದರು. "ಏನಾತೊ ಕೈ ಜುಮು ಜುಮು ಅನ್ನಾಕ ಹತ್ಯೆತಿ, ತಡಿಯಾಕ ಆಗವಲ್ದು" ಅಳತೊಡಗಿದ. "ಎಲ್ಲಿ ಕೈ ಇಟ್ಟಿದ್ದೆ, ಈ ಕತ್ಲಾಗ ಹಿಂಗ ಮಾಡ್ತಾರೇನೊ ಭಾಡಕೌವ್ ನನಮಗನೆ" ಅಂತ ಜಾನಿಬಾಯಿ ಬೋಯ್ದು, "ದೀಪ ಒಯ್ದು ನೋಡ್ರಿ ಏನ ಕಡಿತು ಗಡಾನ ಹೋಗ್ರಿ" ಅಂತ ಕಳುಹಿಸಿದಳು. ಗುದ್ದಮ್ಮನ ಗುಡಿಯೊಳಗಿನ ಮಡಿಕೆಗಳನ್ನು ಸಣ್ಣ ಕಟ್ಟಿಗೆಯಿಂದಲೆ ಸರಿಸಿ ನೋಡಿದರು, ಯಾರೊ ಸಣ್ಣ ಹುಡುಗ. "ಅಲ್ನೋಡ್ರಿ ಚೇಳು" ಅಂದ, ಕೋಲು ತಗೊಂಡು "ಹೊರಗ ಎಳದು ಹೊಡಿರಿ" ಅಂದಳು ಜಾನಿಬಾಯಿ. ಹುಲಿಯೂರ ಮಾತ್ರ ಸಹಿಸಿಕೊಳ್ಳೋದಕ್ಕೆ ಆಗದೆ "ಯವ್ವ, ಯಪ್ಪ" ಅನ್ನುತ್ತಿದ್ದ. "ಆಯ್ತು ಬಿಡು ಅದನ್ನ ಕೊಂದಿವಲ್ಲ ಒಂದೆರಡು ಗಂಟೆ ವಿಷ ಇರುತ್ತೆ ಆಮೇಲೆ ಕಮ್ಮಿಯಾಗುತ್ತೆ ಹೆದರಬೇಡ ಸಹಿಸಿಕೊ. ಯಾಕಂದಿ ಇದಕ್ಕ ಯಾವ ಔಷಧಿಗಳು ಇಲ್ಲ." ಹುಲಿಯೂರನನ್ನ ತೊಡೆ ಮೇಲೆ ಮಲಗಿಸಿಕೊಂಡು ಮಾತಾಡಿಸುತ್ತ ಎಚ್ಚರದಿಂದ ಇಡುವ ಪ್ರಯತ್ನ ಮಾಡಿದ್ದಳು. ಮಲಗಿದರೆ ಮಬ್ಬು ಮುಚ್ಚಿಕೊಂಡು ಆಗಬಾರದು ಆದೀತು ಅನ್ನುವ ಭಯ. ಹಾಡು ಹೇಳುತ್ತ ನಾಕೈದು ಮಂದಿ ಅವನ ಜೊತೆಗೆ ಜಾಗರಣೆ ಮಾಡತೊಡಗಿದರು. ಹುಲಿಯೂರ ಮಾತ್ರ ಕಮ್ಮಿಯಾಗದ ನೋವು, ಉರಿ, ಸಂಕಟ ತಾಳದೆ "ಯವ್ವ, ಯಪ್ಪ" ಅಂತ ಮುಲಕಾಡುತ್ತಲೇ ರೋಧಿಸುತ್ತಿದ್ದ. ರಾತ್ರಿ ಹನ್ನೆರಡುಗಂಟೆ ಹೊತ್ತು ಸರಿಯುವ ಸಮಯದಲ್ಲಿ ಸಣ್ಣ ಕೆಂಪು ಚೇಳು ಕುಟುಕಿದ್ದು ಕಡಿಮೆಯಾಗುತ್ತಾ ಬಂತು. ಕುಂತವರು ಅಲ್ಲಲ್ಲೆ ಮುದಡಿಕೊಂಡು ಮಲಗಿದರು. ಜಾನಿಬಾಯಿ ಮಗನನ್ನ ಎಬ್ಬಿಸಿ, ಒಮ್ಮೆ ಪರೀಕ್ಷೆ ಮಾಡಿ ತನ್ನ ಮಡಿಲಲ್ಲೆ ಮಲಗಿಸಿದಳು. ಹುಲಿಯೂರಗ ಮಾತ್ರ ತಾನು ಕುಟುಕಿದ ಕ್ಷಣವನ್ನ ನೆನಪಿಟ್ಟುಕೊಳ್ಳುವಂತೆ ಮಾಡಿತ್ತು ಚೇಳು. ಮುಂಜಾನೆ ಎದ್ದಾಗ ಆರಾಮವಾಗಿದ್ದ "ಈಟು ಚೇಳು ಕುಟುಕಿದ್ದಕ್ಕೆ ಹಿಂಗಾಡಿಯ, ನಾಳೆ ದೊಡ್ಡ ನೋವುಗಳನ್ನು ಹೆಂಗ ಸಹಿಸಿಯೊ ನಮ್ಮಪ್ಪಾ" ಜಾನಿಬಾಯಿ ಗದರಿದರು. "ಬೇ ನಿನಗೇನು ಗೊತ್ತು ಅದರ ಗಮ್ಮತ್ತು ನೀ ಯಾವಾಗೂ ಕಚ್ಚಿಸಿಕೊಂಡಿಲ್ಲ ಅಂತ ಕಾಣುತ್ತೆ, ಏನು ಜುಮು ಜುಮು ಅನ್ನುತೆ ಗೊತ್ತ" ಅದ ನೋವಿನ ಅನುಭವ ವರ್ಣಿಸತೊಡಗಿದ. ಮನಿಮಂದಿ ಮಾತ್ರ "ಏನೊ ತಪ್ಪು ಮಾಡಿಯಾ, ಅದಕ್ಕೆ ಚೇಳು ಕಚ್ಚಿದೆ, ಇಲ್ಲಾಂದೆ ಅದು ಹಾಗೆ ಕುಟುಕುವುದಿಲ್ಲ" ಅಂತೇಳಿ ರೇಗಿಸತೊಡಗಿದರು. ಹುಲಿಯೂರನಿಗೆ ಮಾತ್ರ ಕಳೆದ ಆ ಕ್ಷಣಗಳು ಭಯಾನಕವಾಗಿ ಕಂಡಿದ್ದವು.

* * *

14. ದನಕರುಗಳ ಬೇನೆಯೊ ಗಡಿದುರಗಮ್ಮನೊ

ತಾಂಡದ ತುಂಬ ಮನಿಗೆರೆಡು ಎತ್ತು, ಆಕಳುಗಳು, ಎಮ್ಮೆಗಳು ಹಿಂಡು ಹಿಂಡಾಗಿದ್ದವು. ತಾಂಡದ ಮುಂದಿನಕೆರೆ ಸಂಪಾಗಿ ಯಾವತ್ತು ತುಂಬಿರುತ್ತಿದ್ದರಿಂದ ಆಘು ಯಥೇಚ್ಛವಾಗಿ ಬೆಳೆದಿದ್ದರಿಂದಲೂ ಕೋಡಿಸರ, ಸೀತಾಪುರದ ಹಳ್ಳದ ಇಕ್ಕೇಲಗಳಲ್ಲಿ ಹುಲ್ಲು ಹುಲುಸಾಗಿ ಬೆಳೆದಿದ್ದರಿಂದಾಗಿ ಪ್ರತಿಯೊಬ್ಬರ ಮನೆಯಲ್ಲೂ ಎರಡೂ ಮೂರು ಎಮ್ಮೆಗಳು ಇದ್ದೇ ಇದ್ದವು. ತಾಂಡದ ಮೂರು ನಾಕು ಮನೆಗಳಲ್ಲಿ ಮಾತ್ರ ತಮ್ಮದೇ ಆದ ಗಿಡ್ಡ ತಳಿ ಹಸುಗಳು ಹೋರಿಕರುಗಳು, ಹನುಮಪ್ಪನ ಗೂಳಿ, ಪೇಟಿ ಬಸವಿ ಊರ ಹೊಲಗಳಲ್ಲಿ, ಕಣಗಳಲ್ಲಿ ಯಾರ ಮರ್ಜಿ ಕಾಯದೆ ಮೇದು ಕೊಬ್ಬಿದ್ದವು. ತೊಪುನಾಯ್ಕನ ಮನಿಯೊಳಗೆ ಮಾತ್ರ ದೇಶಿ ಗಿಡ್ಡ ತಳಿ ಹಸುಗಳು, ಎಮ್ಮೆಗಳ ಹಿಂಡು ದೊಡ್ಡದಾಗಿತ್ತು. ಮುಂಜಾನೆ ಮೂಡಣ ದಿಕ್ಕಲ್ಲಿ ಬೆಳ್ಳಿ ಚುಕ್ಕಿ ಮೂಡುತ್ತಿದ್ದಂತೆ ತೊಪು, ಜಾನಿಗೆ ಎಚ್ಚರವಾಗಿ, ತೊಪು ತಲೆದಿಂಬಲ್ಲಿದ್ದ ಅಡ್ಡಂಗಿಯ ಜೇಬಿನಿಂದ ತಾನು ಯಾವಾಗಲೂ ಸೇದುತ್ತಿದ್ದ ಫೈಜ್ ಬೀಡಿಯನ್ನು ತೆಗೆದು ಕಡ್ಡಿ ಪೆಟ್ಟಿಗೆಯಿಂದ ಬೆಂಕಿಗಿರಿ, ಬೀಡಿ ಹಚ್ಚಿ ಕೊಂಡವನೆ ಮೂಲೆಯಲ್ಲಿದ್ದ ಸೀಮೆಎಣ್ಣೆ ಬುಡ್ಡಿಯನ್ನು ಹಚ್ಚುತ್ತಿದ್ದ. ಬೀಡಿ ಸೇದುವುದು ಮುಗಿತಿದ್ದಂತೆ ಹಿರಿಯರನ್ನು, ಕಿರಿಯರನ್ನು ಬಿಟ್ಟು ಬಿಡದೆ ಎಬ್ಬಿಸುತ್ತಿದ್ದ. ಬಾಯಿಮಾತಿಗೆ ಏಳದವರಿಗೆ ಒದಿ ಬೀಳುತ್ತಿದ್ದವು. ಮೂವರು ಸಗಣಿ ಬಳದು ದೊಡ್ಡ ಪುಟ್ಟಿಯಲ್ಲಿ ತುಂಬಿ ಕೆರೆದಂಡೆಯಲ್ಲಿನ ತಿಪ್ಪೆಗುಂಡಿಗೆ ಎಸೆದು ಬಂದರೆ, ಒಬ್ಬ ಎಮ್ಮೆ ಗೂಟಗಳ ಪಕ್ಕದ ಕಸ, ಹುಚ್ಚೆ ಗಂಜಲನ್ನು ಸರಿಯಾಗಿ ಗುಡಿಸುತ್ತಿದ್ದ. ಬಾವಿಯಿಂದ ನೀರು ಸೇದುವವರು ಹಂಡೆ ತುಂಬಿಸಿ, ಬಾನಿ ತುಂಬಿಸಿ, ಸ್ವಾರಿ ತೊಳಿಯುವವರಿಗೆ, ಮಕ ತೊಳಿಯುವವರಿಗೆ ನೀರು ಹಾಕಬೇಕು. ಎತ್ತುಗಳ ಗೊಂದಲಿಯೊಳಗಿನ ಬಾನಿಯನ್ನ ತುಂಬಿಸುವುದು, ಉಳಿದವರು ಸಗಣಿ ಹಿಡಿಯುವುದಕ್ಕೆ ಓಡಬೇಕು, ಹಿಂಡು ರಾಸುಗಳಿಗೆ ಹಸಿಹುಲ್ಲುಹೊರೆ ತರುವವರು ಕೈಯಾಗ ಕುಡಗೋಲು, ಹೊರಿ ಕಟ್ಟೊದಕ್ಕೆ, ಹಗ್ಗ ಹೊರಿ ಹೊರುವುದಕ್ಕೆ ತಲೆಗೊಂದು ಟವೇಲು. ಹಾಲು ಕುಡಿಯೊ

ಕೂಸು, ಮೂರನಾಕು ವರ್ಷದ ಮಕ್ಕಳನ್ನು ಬಿಟ್ಟರೆ ಸೂರ್ಯ ಹುಟ್ಟುವುದಕ್ಕೆ ಮುಂಚಿತವಾಗಿ ಏಳಲೆಬೇಕಾಗಿತ್ತು. "ಅವನು ಎದ್ದಾನೇನೊ, ಹಾಸಿಗೆಯಿಂದಲೆ", ತೊಪು ಗುಡುಗಿದ್ದ. "ಹೂಂ ಎದ್ದು ಚಂಬು ತಗೊಂಡು ಹೋಗ್ಯಾನ" ಅಂತೇಳಿ ಉತ್ತರಿಸಿಂದ ಸುಮ್ಮನಾಗುತ್ತಿದ್ದ. ಹಾಗಾಗಿಯೆ ಮನೆ ತುಂಬ ದನಗಳು ನಾಕು ಎತ್ತುಗಳು ಎಲ್ಲಾ ಕೆಲಸಗಳು ತಮ್ಮ ಪಾಡಿಗೆ ತಾವೆ ನಡೆಯುತ್ತಿದ್ದವು.

ಊರ ದನಗಳು ಕೆರೆಯಂಗಳದಲ್ಲಿ ಮೇಯುತ್ತಿದ್ದವು, ಮುಂಜಾನೆ ಹೊತ್ತಾರೆ ಕಿರುಬನ ಕಟ್ಟೆ, ದೊಡ್ಡಮಾಳಿ, ಈಚಲು ಸುತ್ತಾಡಿ ಬರುತ್ತಿದ್ದವು. ತಾಂಡದ ಎಲ್ಲಾ ದನಗಳ ಒಂದು ಹಿಂಡನ್ನ ಕುಂಟಕುರ್ಲಿ ಪದ್ದಿ ವಹಿಸಿದ್ದರೆ ಮತ್ತೊಂದು ಗುಂಪಿನ ಹಿರಿತನವನ್ನ ಗೂರವಜ್ಜಿ ವಹಿಸಿದ್ದಳು. ಕುಂಟಿಯ ದನಗಳು ಪ್ರತಿದಿನ ಕೆರೆಮುಂದೆ ಹೋದರೆ ಗೂರವಜ್ಜಿ ದನಗಳು ಮಾತ್ರ ಸೀತಾಪುರದ ಹಳ್ಳಕ್ಕೆ ಮೇಯಲು ಹೋಗುತ್ತಿದ್ದವು. ಸಂಜಿ ಆ ದನದ ಹಿಂಡು ಕೆರೆಯಂಗಳದಿಂದ ಊರು ಪ್ರವೇಶಿಸಿದರೆ ಗೂರವಜ್ಜಿ ಹಿಂಡು ಸೀತಾಪುರ ಹಳ್ಳಿಯಿಂದ ಸೀದಾ ಕೊಡಿಸರದ ಗುಂಟ ಊರ ತಲಪುತ್ತಿದ್ದವು. ಎರಡೂ ಕಡೆಗೆ ಕಂಡಿಪುರ, ದುರ್ಗದೂರು ತರ್ಲಾಪುರ ಸೋಮನಹಳ್ಳಿ, ಇಳಂಗೋವದ ಹಿಂಡುಗಳು ಬಂದು ಕಲಿಯುತ್ತಿದ್ದವು. ಒಮ್ಮೊಮ್ಮೆ ಆ ಊರಿನ ಎಮ್ಮೆಗಳು ಗೂರವಜ್ಜಿ ಹಿಂಡಿನ ಎಮ್ಮೆಯನ್ನು ಹಾಯುತ್ತಿತ್ತು. ಗೂರವಜ್ಜಿ ದನದಲ್ಲಿನ ಗೂಳಿಯು ಆ ಊರಿನ ಹಸುವಿನ ಹಿಂದೆ ಮೂಸಿನೋಡ್ತಾ ತಿರುಗಾಡುತ್ತಿತ್ತು. "ಬೇ ಅಜ್ಜಿ ನಿಮ್ಮ ಎಮ್ಮಿ ಹೊಡ್ಕೊಬಾರದ, ಅಯ್ಯೊ ಗೂಳಿ ಗಬ್ಬದ ಹಸುವಿನ ಮೇಲೆ ಹಾರಾಕ ಹತ್ಯೆತಿ ನೋಡ ಮತ್ತು ಕಂದಗಿಂದಹಾಕಿದ್ರ ನಿನ್ನ ಹೆಸರೆ ಹೇಳೋದು" ಅಂತ ದನಕಾಯೊ ಹುಡುಗರು ಧಮಕಿ ಹಾಕುತ್ತಿದ್ದರು. ಅವರ ದನಗಳು ಅತಿಕ್ರಮ ಮಾಡಿದ್ರೆ "ಲೋ ನನಹಾಟ್ಗಳ್ಳ ಬಾರೊ ದನ ಹೊಡ್ಕೊ, ಎಮ್ಮಿ ಗಿಮ್ಮಿಗ ಹಾದು ಗಾಯ ಮಾಡಿತು" ಅಂತ ಅರವತ್ತರ ಗಡಿದಾಟಿದರು ಗಟ್ಟಿಮುಟ್ಟಾದ ಗೂರವಜ್ಜಿ ಒದರುತ್ತಿದ್ದಳು. ಹಿಂಗೆ ದನಗಳು ಕೂಡಾಡಿ ಮೇಯುತ್ತಿದ್ದರೆ ದನಗಳಿಗೆ ಸರ್ವೆ ಸಾಮಾನ್ಯವಾಗಿ ಬರುವ ಕಾಲುಬಾಯಿ ಜ್ವರ ಒಂದು ರಾಸಿನಿಂದ ಮತ್ತೊಂದು ರಾಸಿಗೆ ಬಹಳ ಬೇಗ ಹರಡುತ್ತಿತ್ತು. ಎಷ್ಟೆ ದವಾಖಾನಿಗೆ ಒಯ್ದರು ಒಳ್ಳೆಯ ಹಂಗಾಮಿ ಕರುಗಳು ಥಟ್ ಅಂತ ನೆಲಕ್ಕುರುಳಿ ಬಿಡುತ್ತಿದ್ದವು.

ಒಂದಕ್ಕೆ ಬಂದರೆ ಆ ವೈರಸ್ ಊರತುಂಬಾ ಹರಡುತ್ತಿತ್ತು. ಹಾಗಾಗಿಯೆ ಕೆಲವರು ದನದ ಡಾಕ್ಟರ್ ಕಡೆಗೆ ರಾಸುಗಳನ್ನು ಹೊಡೆದುಕೊಂಡು ತರ್ಲಾಪುರಕ್ಕೆ ಹೋದರೆ, ದನದ ಡಾಕ್ಟರ್ ಹನುಮೇಶಿ ಹಳ್ಳಿ ಮೇಲೆ ಹೋಗಿರುತ್ತಿದ್ದ. ಕಾಂಪೌಂಡರ್ ಪರಮೇಶಿ ತನಗೆ ಗೊತ್ತಿರುವ ಇಂಜೆಕ್ಷನ್ ಕೊಟ್ಟ, ನಾಕುಗುಳಿಗೆ ಕೊಟ್ಟು ಐದು ರೂಪಾಯಿ ಕಸ್ಕೊಂಡು ಓಡಿಸುತ್ತಿದ. ರಾಸುಗಳ ಪುಣ್ಯನೆಟ್ಟಗಿತ್ತು ಬದುಕುಳಿಯುತ್ತಿದ್ದವು. ಇಲ್ಲದಿದ್ರೆ ರಸ್ತೆ ನಡಕ್ಕೆ ಸತ್ತು ಹೋಗುತ್ತಿದ್ದವು. ಇದೆಲ್ಲವನ್ನು

ಅರ್ಥೈಸಿ ಕೊಂಡಿರುವ ಜನ ತಮ್ಮೊಳಗೆ ಪರಿಹಾರ ಹುಡುಕ ತೊಡಗಿದರು. "ಇಲ್ಲ ಇದು ದುರಗಮ್ಮನ ಹಾವಳಿ, ನಮ್ಮ ರಾಸುಗಳಿಗೆ ಏನೂ ಮಾಡಬೇಡವ್ವ ಅಂತ ಬೇಡಿಕೊಂಡು ಆಚೆ ದಾಟಿಸಿ ಬಂದರಾಯಿತು ಮುಂದಕ್ಕೆ ಆ ತಾಯಿ ನೋಡಿಕೊಳ್ಳುತ್ತಾಳೆ" ಹಿರಿಯ ಅನುಭವಿ ಫಣಸುನಾಯ್ಕ ಹೇಳಿದ. "ಆ ತಾಯಿ ಎಲ್ಲಿ ಇಲ್ಲ ಹೇಳು ಎಲ್ಲಾ ಕಡೇನೂ ಅದಾಳ ಏನ್ರಪ್ಪ, ನಾವೆ ಅಕೀನ ಮರತಿವಿ. ಹೂಂ ಅದಕ್ಕೆ ಅವಾಗ ಅವಾಗ ತನ್ನ ಶಕ ತೋರಿಸುತ್ತಾಳೆ. ಅದಕ್ಕೆ ಊರಿಂದೂರೆ ಎಡಿಮಾಡಿ ಅತ್ಲಾಗ ಮುಂದಿನ ಗಡಿಗ ಕಳುಹಿಸಿ ಬರಾನ. ಇಲ್ಲಂದ್ರ ಒಂದು ಹಸು, ಕರು ಉಳಿಯಾಕಿಲ್ಲ" ಸಾಬರ ಕರೀಮಜ್ಜ ಹೇಳಿದ. "ಹೂಂ ಒಂದ ಒಳ್ಳೆ ದಿನ ನೋಡ್ರಿಮತ, ಊರಾಗ ಪ್ರತಿಯೊಬ್ಬರಿಗೂ ಅನುಕೂಲ ಆಗೋದು. ಯಾಕಂದಿ ಕೂಲಿನಾಲಿ ಮಾಡೋರ ಅದಾರ, ಕೆಲ್ಸಬಗ್ಸಿಗ ಮಂದಿ ಹೊಕ್ಕಾರ ಏನ್ರಪ. ಶುಕ್ರವಾರ ದೇವಿದಿನ. ಹೆಣ್ಣನ್ನ ಶುಕ್ರವಾರ ಕಳಸಬಾರದು. ಆದ್ರ ನಮಗ ನೋವು ಕೊಡ್ತಾಳ, ನಮ್ಮ ರಾಸುಗಳನ್ನು ಕೊಲ್ಲೀಕಹತ್ಯಾಳ ಅದಕ್ಕ ಮದಲು ಹೊರಗ ಹಾಕ್ರಿ ತಾಯಿನ" ಮರಸಂತ ಮಾತಾಡಿದ. "ಮರಸಂತನ ಮಾತು ಬರೋಬರಿ ಐತಿ ಪ್ರತಿಯೊಬ್ಬರು ಮನಿಗ ರೂಪಾಯಿ ಹಂಚಿಕೆ ಹಾಕಿ ಊರವತಿಯಿಂದ ಪೂಜೆಮಾಡಿ ತಡಾಸಿ ಬರ್ರಿ" ಅಂತೇಳಿ ಯಜಮಾನ ಹಂಡಿನಾಯ್ಕ ಪಂಚಾಯ್ತಿಯನ್ನು ಬರಾಕಾಸ್ತ ಮಾಡಿದ.

ಶುಕ್ರವಾರ ನಾಕಗಂಟೆಗ ಪ್ರತಿಯೊಂದು ಮನಿಯೊಳಗು ಎಡೆ ತಯಾರಾಗಿತ್ತು. ಹರೆಯದ ಹುಡುಗರ ಕೈಯಾಗ ಹಸಿರು ಕುಪ್ಪಸದ ಬಟ್ಟೆ, ಕುಡಕಿ, ವೀಳ್ಯದೆಲೆ ಎರಡು ಮೂರು ಕಡಬು ಅದಕ್ಕೆ ಸಿಗಿಸಿರುವ ಊದಿನಕಡ್ಡಿ, "ಉಧೊ, ಗಡಿದುರಗಮ್ಮ ನಿನ್ನಾಲಕ್ ಉಧೊ" ಅಂತೇಳಿ ಸೇವಾಭಾಯನ ಗುಡಿಮುಂದ ಉಪ್ಪಾರು, ಲಮಾಣಿ, ಸಾಬರು, ಹಡಪದ, ಬಾರಿಕರು ಎಲ್ಲ ಮನಿ ಹುಡುಗರು ನೆರೆದಿದ್ದರು. ಹಂಚಿಕೆ ಹಾಕಿದ್ದರಲ್ಲಿ ತಂದ ಈಚಲಮೊರ, ಕಂಕಣ ಉತ್ತತ್ತಿ, ಹಸಿರುಬಳೆ ಹಾಕಿ ದೇವಿಯ ಉಡಿದುಂಬಿಸಿ ತಯಾರಿ ಮಾಡಲಾಗಿತ್ತು. "ಎಲ್ಲಾರು ಬಂದ್ರ, ಅವರ ಮನಿ, ಇವರ ಮನಿ ಅನ್ನೋದಿಲ್ಲ ಪ್ರತಿಯೊಬ್ಬರು ಬರಬೇಕು. ನೋಡ್ರಿ ಇದೇನು ಮನಿಗ ಹೋಗಿ ಕರೆಯುವ ಕಾರ್ಯವು ಅಲ್ಲ. ತಮಗ ತಿಳದೆ ಬರಬೇಕು" ಮರಸಂತ ಮಾತಾಡಿದ. ಆತನೆ ಮುಂದೆ ನಿಂತು ಎಲ್ಲಾರನ್ನೂ ಒಟ್ಟಿಗೆ ಸೇರಿಸಿದ. ಯಾರ ಮನೆಯೊಳಗೆ ದನಕರುಗಳು ಸತ್ತಿವೆಯೊ ಅವುಗಳನ್ನ ಕಟ್ಟುತ್ತಿದ್ದ ಹಗ್ಗ, ಎತ್ತುಗಳು ಸತ್ತಿದ್ದರೆ ಅವುಗಳ ಹಿಡಿ ಹಗ್ಗ, ನಾತು, ಹಗಡಗಳನ್ನು ಬಿಚ್ಚಿಟ್ಟುಕೊಂಡಿದ್ದರೆ ಅವನ್ನ ಜೊತೆಗೆ ಹಿಡಿದುಕೊಳ್ಳುತ್ತಿದ್ದರು. ಗಟ್ಟಿಮುಟ್ಟಾದ ಯುವಕನ ಆಯ್ಕೆ ಮಾಡಿ, "ಲೇ ತಮ್ಮ ಬಾ ಇಲ್ಲಿ ಈಗೊ ಈ ಮೊರವನ್ನ ನೀ ಹಿಡಿ, ಬಾಳ ಜೋಪಾನ, ಹಿಡದಿ ಯಂದಿ ನಿನ್ನ ಮೈಯಾಗ ದೇವಿ ಬರ್ತಾಳ, ಅಕಿ ಯಾವ ದಿಕ್ಕಿಗ, ಯಾವ ಸೀಮಿಗ ಹೊಕ್ಕಾಳೊ ಹೊಗಲಿ ನಮ್ಮೂರ ಗಡಿದಾಟಿಸಿ, ಪತ್ರಿಮರ, ಇಲ್ಲ ಬೇವಿನಮರದ

ಅಡಿಗ ಇಟ್ಟು ಬಂದು ಬಿಡ್ರಿ" ತಾಂಡದ ಮುಖ್ಯನಾಯ್ಕ ಕೆಂಗೇರಿನಾಯ್ಕ ಹೇಳಿದ. ಮೊರವನ್ನ ನಾನುಸಾದ್‌ನಾಯ್ಕ ಕೈಗೆತ್ತಿಕೊಂಡಂತೆ, ಮೈಯಲ್ಲಿ ಯಾವುದೋ ಶಕ್ತಿ ಬಂದಂತೆ "ಉಧೊ" ಅಂದವನೆ ಓಡತೊಡಗಿದ. ಹಿಂದಿದ್ದ ಎಡೆ ಹಿಡಿದುಕೊಂಡಿದ್ದ ದೊಡ್ಡ ಗುಂಪು ಅವನ ಹಿಂದೆ ಓಡಿತು ಅವನು ಓಡಿದ, ಓಡಿದ, ದಿಕ್ಕೆಟ್ಟು ಓಡಿದ, ದೊಡ್ಡ ಗುಂಪು ಅವನನ್ನ ಅನುಸರಿಸಿ ಓಡುತ್ತಿತ್ತು. ಯಾರೊಬ್ಬರು ತುಟಿಪಿಟಕ್ ಅಂದಿರಲಿಲ್ಲಾ. ಯಾರೂ ಕಾಲು ತುಳಿದರು, ಯಾರದೊ ಪಂಚೆ ಕಿತ್ತುಬಂದರು ಎತ್ತಿಕೊಂಡು ಹೆಗಲ ಮೇಲೆ ಹಾಕಿಕೊಂಡು ಓಡತೊಡಗಿದರು.

ಭದ್ರಾನಾಯ್ಕನ ತಾಂಡದ ಗಡಿ ದಾಟಿ ಒಂದು ಮೈಲಿ ದೂರದ ಕಂಡಿಪುರದ ಗಡಿಗೆ ಬಂದಿದ್ದರು ದೇವಿಯನ್ನು ಹಿಡಿದಿದ್ದ ನಾನುಸಾದ್‌ನಾಯ್ಕ ಕಂಡಿಪುರದ ಕುರುವೆತ್ಯಪ್ಪನ ಹೊಲದ ಜೋಡು ಮರಗಳ ಕೆಳಗೆ ಹೋಗಿ ದೇವಿಯನ್ನ ಇಟ್ಟು ವಾಪಾಸಾದ. ಉಳಿದವರು ತಂದ ಎಡೆಯನ್ನ ಸುತ್ತಲು ಇಟ್ಟು ಹಿಂದಕ್ಕೆ ತಿರುಗಿ ನೋಡದಂತೆ ಮುಂದೆ ಓಡಿದರು. ಓಡುವಾಗ ನೆಟ್ಟಿದ್ದ ಕಲ್ಲು, ಮುಳ್ಳು ಈಗ ಚುಚ್ಚತೊಡಗಿದವು. ಆಗ ಓಡಿದಾಗ ಮೈಮೇಲೆ ಯಾರಿಗೂ ಎಚ್ಚರ ಇಲ್ಲದಾಗಿತ್ತು. ತಗ್ಗುಗಳು ಎಷ್ಟು, ದಿನ್ನೆಗಳು ಎಷ್ಟು ಮುಳ್ಳಿನ ಕಂಟೆ ನೋಡದಂಗೆ ಓಡಿದ್ದರು. ಕಡೆಗೂ ಕಾಲುಬಾಯಿ ಜ್ವರದ ಜನಕಳಾದ ಗಡಿದುರಗವ್ವನನ್ನು ತಮ್ಮ ಗಡಿಯಿಂದ ಬಹುದೂರದವರೆಗೆ ಸಾಗಿಸಿ ಬಂದಿದ್ದರು. ಓಡುವಾಗ ಯಾರಿಗೂ ಏನೂ ಆಗಿರಲಿಲ್ಲಾ. "ಇದೇನು ದೇವಿ ಮಹಿಮೆಯೊ, ಇಲ್ಲ ನಮ್ಮ ಆತ್ಮವಿಶ್ವಾಸ ಗೊತ್ತಿಲ್ಲ, ದಿಕ್ಕೆಟ್ಟು ಓಡುತ್ತಿದ್ವಿ" ಗುಂಪಿನಲ್ಲಿ ಓಡಿ ಅನುಭವ ಪಡೆದಿದ್ದ ಪುಂಡನಾಯ್ಕ ಹೇಳಿದ. ಎತ್ತು, ದನಕರುಗಳು ಆರೋಗ್ಯವಾಗಿರಲೆಂದು ಜನ ಗಡಿಯಮ್ಮನನ್ನ ಭಕ್ತಿಯಿಂದ ಪೂಜಿಸಿ ತಾಯಿ ನಮ್ಮವ್ವ ನಮ್ಮ ರಾಸುಗಳನ್ನು ಬಿಟ್ಟು ನಮ್ಮ ಗಡಿಯನ್ನೆ ಬಿಟ್ಟು ಮುಂದಿನ ಗಡಿಗೆ ಹೋಗುತಾಯೆ ಅಂತ ವಿನಮ್ರತೆಯಿಂದ ಬೇಡಿಕೊಳ್ಳುತ್ತಿದ್ದರು. ಗಡಿಯಮ್ಮ ರಾಸುಗಳ ರಕ್ಷಣೆ ಮಾಡುತ್ತಿದ್ದಳೊ ಇಲ್ಲವೊ ಜನರ ಮನಸಿನಾಳದೊಳಗೆ ಗಡಿಯಮ್ಮ ತಾಯಿ ಅವರ ರಾಸುಗಳನ್ನು ಕಾಪಾಡುವ ಆದಿದೇವತೆಯಾಗಿದ್ದಳು. ಒಂದೊಮ್ಮೆ ಕಂಡಿಪುರ, ದುರ್ಗದೂರು, ತರ್ಲಾಪುರ, ಸೋಮನಳ್ಳಿ, ಸೀತಾಪುರದವರೂ ಕೂಡ ತಮ್ಮ ಗಡಿಯನ್ನ ದಾಟಿಸಿ ಕಾಯಿಲೆಯನ್ನು ಗಡಿಯಮ್ಮ ಜೊತೆಗೆ ಮುಂದಿನ ಊರಿಗೆ ದಾಟಿಸುತ್ತಿದ್ದರು. ಸುತ್ತಲ ಊರುಗಳು ತಮ್ಮೂರಿನಿಂದ ಹೋದರೆ ಸಾಕು ಈ ಹೆಮ್ಮಾರಿ ಅಂತ ಬೇಡಿಕೊಳ್ಳುತ್ತಿದ್ದರು.

* * *

15. ಲಮಾಣ್ಯರ ಸಾತುಭವಾನಿಯೂ ಕನ್ನಡದ ಕಾರುಣ್ಣಿಮೆ

ಲಮಾಣ್ಯರೆ ಹೆಚ್ಚಾಗಿರುವ ಭದ್ರನಾಯ್ಕ ತಾಂಡದಲ್ಲಿ ಪ್ರತಿ ವರ್ಷ ವಾಡಿಕೆಯಂತೆ ಜುಲೈ ತಿಂಗಳ ಮೊದಲ ಅಥವಾ ಎರಡನೆ ಮಂಗಳವಾರ ಸೀತ್ಲ ಅಂತ ಮಾಡಿ (ಕಾರುಣ್ಣಿಮೆ) ಊರ ಮುಂದೆ ಏಳು ಹೆಣ್ಣು ದೇವತೆಗಳಾದ ತುಳಜ, ಇಂಗಳಾ, ಬೊದ್ರಿ, ಮರಿಯ, ಮತರಿ, ಠಕರಿ, ಭನಕಿಯರ ರೂಪ ತಾಳಿದ ಆದಿದೇವತೆ, ತಾನೊಬ್ಬಳೆ ಏಳು ಅವತಾರಗಳನ್ನು ತಾಳಿ ಇಡೀ ಜನ ಸಮುದಾಯಗಳ ಉದ್ಧಾರಕ್ಕೆ ಭೂಮಿ ಮೇಲೆ ಬಂದಾಗ, ಲೂಕಡ್ (ತಿತಾರಾಜ) ಎನ್ನುವ ಪುರುಷನಿಗೆ ಜೀವ ನೀಡಿ ತಾನು ಸ್ನಾನಮಾಡಿ ಬರುವುದಾಗಿ ತಿಳಿಸುತ್ತಾಳೆ. ಜನರು ಬರದಂತೆ ಕಾಳಜಿ ಮಾಡುವಂತೆ ತಿಳಿಸಿದಳು. ಆದರೆ ಮಂದಿ ಕಣ್ಣಿಗೆ ಅವನು ಕಲ್ಲಾಗಿ ಕಾಣುವುದಾಗಿಯೂ ಆದಿದೇವಿಗೆ ಮಾತ್ರ ಅವನು ಮನುಷ್ಯನಂತೆ ಕಾಣುತ್ತಿದ್ದ. ಆದ್ದರಿಂದ ಬಂಜಾರ ಸಮುದಾಯ ಅವನನ್ನ ಏಳು ದೇವತೆಗಳ ಮುಂದೆ ಕೂಡಿಸಿ ಕುರಿ, ಕೋಳಿ ಕಡಿದಾಗ ಅವನ ಮೇಲೆ ರಕ್ತವನ್ನು ಧಾರೆಯಾಗಿ ಬಿಡುತ್ತಾರೆ. ಅವನಿಗೆ ರಕ್ತ ತರ್ಪಣ ಮಾಡಿದ ಮೇಲೆ ಏಳು ಭವಾನಿಗಳಿಗೆ ಎಡೆಯಾಗುವುದು. ಊರೊಳಗೆ ಕನ್ನಡ ಮಂದಿ ಇದಿದ್ದರಿಂದ ಅವರ ಕಾರುಣ್ಣಿಮೆ ಲಮಾಣ್ಯರ ಸೀತ್ಲಾ ಆಗಿ ಒಂದು ವಾರಕ್ಕೆ ಬರುತ್ತಿತ್ತು. ಆದರೆ ಲಂಬಾಣಿಗರು ಆಚರಿಸುವಂತೆ ವಿಜೃಂಭಣೆಯಿಂದೇನು ಆಚರಿಸುತ್ತಿರಲಿಲ್ಲಾ. ಆ ಕಾಲದಲ್ಲಿ ಸರ್ವೆಸಾಮಾನ್ಯವಾಗಿದ್ದ ದಡಾರ, ಸಿಡಬು, ಮಂಗನಬಾವು ಜ್ವರ, ಶಕ, ಮುಂತಾದ ಕಾಯಿಲೆಗಳಿಗೆ ಲಸಿಕೆ ಹಾಕಿಸಿದರೂ ಮಕ್ಕಳಿಗೆ ಬಂದು ಬಿಡುತ್ತಿದ್ದವು. ಹಾಗಾಗಿ ಪ್ರತಿಯೊಬ್ಬರು ಏಳು ವಾರ ಎಡೆ ಹಾಕಿ ಬೇವಿನಸೊಪ್ಪಿನಿಂದಲೇ ಮಕ್ಕಳನ್ನು ಮುಚ್ಚಿ ಬೇವಿನ ಸೊಪ್ಪಿನ ನೀರು ಹಾಕಿ, ಅಕ್ಕಿಹುಗ್ಗಿ ಮಾಡಿ ಪ್ರಾರ್ಥನೆ ಮಾಡಿದ ನಂತರ ಪ್ರತಿಯೊಬ್ಬರಿಗೂ ಹಂಚುತ್ತಿದ್ದರು. ಈ ಪ್ರಕ್ರಿಯೆಯಲ್ಲಿ ಅವರು ಸಾತು(ಏಳು) ಭವಾನಿಗಳಿಗೆ ಹರಕೆ ಹೊತ್ತು ಕುರಿ ಕೊಡುವುದಾಗಿ ಬೇಡಿಕೆಯನ್ನು ಇಟ್ಟಿರುವ ಹಿನ್ನೆಲೆಯಲ್ಲಿ ಪ್ರತಿಯೊಬ್ಬರು ಮನಿಗೆ ಒಂದರಂತೆ ಬ್ಯಾಟಿ ತಂದು ಕೊಯ್ಯುತ್ತಿದ್ದರು. ಹುಲಿಯೂರ, ಗಡಿಯ, ಬರಮ, ನಿಂಗ, ಸೀಕ, ಪರದೇಶಿ, ಪಲ್ಡು, ಭಲ್ಡು, ಭಗನ್ಯಾ, ಬಜನಾ, ಬುಚ್ಚ ಇವರದೆಲ್ಲಾ ಒಂದೇ ಗುಂಪು. ಹೆಚ್ಚು ಕಡಿಮೆ ಗೋಲಿ ಆಡುವ, ಉಗಣಿ ಬಳ್ಳಿಯಿಂದ ಬಸ್ಸು ಮಾಡುವ, ಊರ ಪಕ್ಕದ ಕೆರೆ ತುಂಬಿದಾಗ ಈಜಾಡುವ, ನೀರು ಖಾಲಿಯಾದಾಗ, ಚಿಂಚರೂ(ಸಣ್ಣ)

ಮೀನುಗಳನ್ನು ಹಿಡಿಯುವುದು ಬಹುತೇಕ ಇದೇ ಗುಂಪು. ಹಾಗಾಗಿ ಹೊತ್ತಾರೆ ಮನೆಯಿಂದ ಮಚ್ಚು ತಗೊಂಡು ಪೊಲಗ ಮರಕ್ಕೆ ಹೋಗಿ ಅದರ ಕೊಂಬೆಗಳನ್ನು ಕಡಿದು ದಂಡ ಮಾಡಿ ಅವಕ್ಕೆ ಕೆಮ್ಮಣ್ಣು ಇಲ್ಲವೆ ಕೆಂಪು ಮೃದು ಗೇರು ಕಲ್ಲನ್ನು ಅರಿದು ಮಾಡಿದ ಹೂರಮಂಜನ್ನ ದಂಡಗಳಿಗೆ ಬಳಿದು ತಂದು ಸಾತುಭವಾನಿಗಳಿಗೆ ಏರಿಸುತ್ತಿದ್ದರು. ಸರಿಸುಮಾರು ನಾಲ್ಕು ಗಂಟೆಗೆ ಕೆಲಸಕ್ಕೆ ಹೋದ ಮಂದಿ ಎಲ್ಲಾ ಪ್ರತಿಯೊಬ್ಬ ಹೊಲದ ಒಡೆಯನಲ್ಲಿ ತಮ್ಮ ಸೀತ್ಲಾ ಇರುವುದಾಗಿ ಹೇಳಿಯೇ ಮನೆಗೆ ಬಂದು ಬಿಡುತ್ತಿದ್ದರು. ಏಕೆಂದರೆ ರಾತ್ರಿ ನೆನಪಾಗಿ ಸಾತು ಭವಾನಿಯ ಹೆಸರಿಗೆ ಬಿಟ್ಟ ಹ್ಯಾಟಿಯನ್ನ ಮುಂಜಾನೆ ಮೇಯಲು ಬಿಡುತ್ತಿರಲಿಲ್ಲಾ. ಪುಟ್ಟಿಯ ಅಡಿಯಲ್ಲಿ ಮುಚ್ಚಿ, ಉಳಿದೆಲ್ಲಾ ಕೋಳಿಗಳನ್ನು ಹೊರಗಡೆ ಬಿಡುತ್ತಿದ್ದರು. ಆಕಸ್ಮಾತ್ ಮರೆತುಬಿಟ್ಟರೆ "ಅಯ್ಯೊ ನಿನ್ನ ಒಸಡಗಲಿ ರಾತ್ರಿನೆ ಹೇಳಿರಲಿಲ್ವಾಬಿಡಬೇಡಾ ಹುಂಜನನ್ನು ಮಾತ್ರ ಇವತ್ತು ಕಾರುಣ್ಣಿಮೆ ಅದನ್ನ ಸಾತುಭವಾನಿಗೆ ಬಲಿಕೊಡಬೇಕಂತ ಪುಟ್ಟಿಯಾಕ ಎತ್ತಿದೆ. ಹೋಗು ಈಗ ಹಿಡಿ ಅದನ್ನ" ಮನೆ ಹೆಂಗಸರು, ಗಂಡಂದರಿಗೆ ಮಕ್ಕಳಿಗೆ ತಾರಮಾರ ಬೊಯ್ಯುತ್ತಿದ್ದರು. ಅವರು "ಅಯ್ಯೊ ನನ್ನ ನೆನಪಿಗೆ ಅಷ್ಟು, ಲೇ ಚೇನು, ಉಮ್ಲಾ ಲಸಣು ಗಡಾನ ಬರ್ರಿ, ಸಿಕ್ತು ಸಿಕ್ತು" ಅಂತ ಹಿಡಿಯಾಕ ಹೋಗಿ ನೆಲದ ಮೇಲೆ ಮಕಾಡ ಬಿದ್ದು ಎದ್ದು ಇಡಿ ಊರ ತುಂಬ ಮಂದಿ ನೋಡುವಂತೆ ಓಡುತ್ತ ಹುಂಜವನ್ನ ಬೆನ್ನತ್ತಿ ಹಿಡಿವ ಓಟದ ಸ್ಪರ್ಧೆಗೆ ಇಳಿದವರಂತೆ ಹಿಡಿಯಲು ಇವರು, ತಪ್ಪಿಸಿಕೊಳ್ಳಲು ಕೋಳಿ, ಒಬ್ಬ ವ್ಯಕ್ತಿ ಕೈಯಲಂತು ಆಗದ ಕೆಲಸ, ಮೂವರು ಇಲ್ಲ ನಾಲ್ವರು ಬೆನ್ನುಹತ್ತಿದರೆ ಮಾತ್ರ ಸುಲಭದಲ್ಲಿ ಸಿಗುತ್ತಿತ್ತು. ಯಾವುದಾದರು ಮನೆಗಳ ಸಂದಿಯಲ್ಲಿ ಅಟಕಾಯಿಸಿ ಹಿಡಿದು "ನಿನ್ನ ಬಿಟ್ಟೆನೆ, ಇವತ್ತು ಚೂರಿ ಹಾಕಿ ಮಸಾಲೆ ಮಾಡಿ ತಿನ್ನಬೇಕು ಅಂದ್ಕೊಂಡಿದ್ರೆ ನೀನು ತಪ್ಪಿಸಿಕೊಂಡು ಓಡ್ತಿಯಾ" ಅಂತ ಪುಟ್ಟಿಯ ಕೆಳಗೆ ಮುಚ್ಚಿಡುತ್ತಿದ್ದರು. ಇಡೀ ತಾಂಡಕ್ಕೆ ತಾಂಡಾನೆ ಕೋಳಿ ಹಿಡಿಯುವವರ ಬಯಲಾಟವನ್ನು ನಿಂತು ನೋಡಿ ಮಜಾ ತಗೊಳ್ತಾ ಇದ್ರು.

ಹೊತ್ತು ಇಳಿಯುತ್ತಿದ್ದಂತೆ ಹಿಂಡಿ ತಿರುವೊಕಲ್ಲುಗಳ ಮುಂದೆ ಹೆಂಗಸರ ಹಿಂಡು ಪಾಳೆ ಹಚ್ಚಿ ಕುಂತ್ಕೊಂಡು ಮಾತಾಡುತ್ತಿದ್ದವು. "ಅಯ್ಯೋ ಗಡಾನ ತಿರುವೆ ನಮ್ಮವ್ವ ಇನ್ನೂ ಪೂಜೆ ಮಾಡಿಲ್ಲ" ಕುಳಿತವರು ಪಾಳೆ ಹತ್ತಿದವರಿಗೆ ಹೇಳುತ್ತಿದ್ದರು. ಸಂಜೆ ಇಳಿ ಹೊತ್ತು ಆಗುತ್ತಿದ್ದಂತೆ ಮಂದಿ ಕುರಿ ಕಡಿಯೋದಕ್ಕೆ, ಹುಂಜಗಳನ್ನ ಬಲಿ ಕೊಡೋದಕ್ಕೆ ನೂಕುನುಗ್ಗಲು, ಹುಡುಗರು ಬಾಡುಬಂಗಾಳಿನಾಯ್ಕನ ಬೆಲಿಸಾಲಲ್ಲಿ ಚೆಂಡು ಕೊಯ್ದು ಬಿಸಾಡಿದ ಕೊಳಿಗಳು ಸಾಯುವಾಗ ಪಡುವ ಸಂಕಟವನ್ನು ಬುದ್ಧಿ ಇಲ್ಲದೆ ನೋಡಲು ನೆರೆದಿದ್ದರು. ಕೆಲವರು "ಲೇ ಜಿಂಗಾಲಿ ಅಲ್ಲಿ ನೋಡಲೇ

* **ಪೊಲಗ–ಒಂದು ಜಾತಿಯ ಕಟ್ಟಿಗೆಯ ಮರ ಬೆಲೀ ಸಾಲಿನಲ್ಲಿ ಬೆಳೆಯುತ್ತದೆ.**

* **ಗೇರು–ಕೆಂಪು ಬಣ್ಣದ ಕಲ್ಲು**

ಬಂಗಾಳಿನಾಯ್ಕನ ಹುಂಜ ಹೆಂಗೆಕುಣಿತಿದೆ" ಅಂತ ತೋರಿಸಿದ. "ಅಲ್ಲಿ ನೋಡಲೆ ಕೊಲಾರಿನಾಯ್ಕನ ದೊಡ್ಡ ಹುಂಜ ಹೆಂಗೆ ಹಾರಾಡಕತ್ತಿದೆ" ನಕಲನಾಯ್ಕ ಹುಲಿಯೂರನಿಗೆ ಹೇಳಿದ. ಸಣ್ಣ ಹುಡುಗರು ಕೇಕೆ ಹಾಕಿ ಚಪ್ಪಾಳೆ ತಟ್ಟಿ ಹಾರಾಡುತ್ತಿದ್ದರು. ಕುರಿ, ಕೋಳಿಗಳ ಚಂಡುಗಳನ್ನ ತಿತಾರಾಜನ ಎದುರಿಗೆ ಸಾಲಿಗೆ ಒಟ್ಟಲಾಗಿತ್ತು. ಮಂದಿ ಸಾತುಭವಾನಿಗಳಿಗೆ ಮಾಡಿದ ಎಡೆಯನ್ನು ಎಲ್ಲರಿಗೂ ಹಂಚಿ ತಮ್ಮ ತಮ್ಮ ಮನೆಗೆ ವಾಪಾಸಾಗಿ, ಕೋಳಿಗೆ ಮಸಾಲೆ ಅರಿಯುವುದು, ಬಿಸಿನೀರು ಮಾಡಿ ಅದರೊಳಗೆ ಅದನ್ನ ಅದ್ದಿ ಮೇಲಿನ ತುಪ್ಪಳವನ್ನು ಸುಲಿದು, ಅದರ ಮೈಮೇಲೆ ಉಳಿದಿರುವ ಸಣ್ಣಸಣ್ಣ ಮೊಳಕೆಗಳನ್ನು ಕಿತ್ತು ತುಂಡು ಮಾಡಿ ಸಾರಿಗೆ ಅಣಿ ಮಾಡಿದರೆ, ದೊಡ್ಡ ಕುಟುಂಬದವರು ಒಂದೆ ಕೋಳಿ ಸಾಲದಕ್ಕೆ ಹರಿಹರದ ಸಂತೆಯಿಂದ ಕುರಿಯಕಳ್ಳುಪಚ್ಚಿ, ತಲೆಕಾಲು ತಂದು, ತಮ್ಮ ಸಂಸಾರದ ಜನಸಂಖ್ಯೆಯ ಆಧಾರದ ಮೇಲೆ ಅದನ್ನ ಬೇಯಿಸಿ ಹಿರಿಯರು ಸೆಂದಿ ಅಂಗಡಿಯಿಂದ ಎರಡು ಮೂರು ಬಾಟಲುಗಳನ್ನು ತಂದು ಹೆಂಡತಿಗೊಂದು ಸುರಿದು ತಾವೊಂದು ಕುಡಿದು ಊಟ ಮಾಡಿದ ಮೇಲೆ ಹಂಚಿಕೆ ಹಾಕಿ ಸಾರ್ವಜನಿಕವಾಗಿ ಕಡಿದ ಕುರಿಯನ್ನು ಒಂದೇ ಜಾಗದಲ್ಲಿ ಮಾಡಿರುವ ಫಿಕಿ ಬೊಟಿ (ಸಪ್ಪೆ ಮಾಂಸ,) ಫೇರಿರೊ ರಸ್ಸ್ (ಹಂಚುವ ಸಾರು) ತರೋದಕ್ಕೆ ಹೋಗುತ್ತಿದ್ದರು. ಪ್ರತಿಯೊಂದು ಮನೆಯ ಯಜಮಾನರಿಗೆ ಅವರ ಘನತೆಗೆ ಅನುಸಾರ ಕೈಮೇಲೆ ಮಾಂಸ ಹಂಚುತ್ತಿದ್ದರು. ಹಟ್ಟಿನಾಯಕ, ಕಾರಭಾರಿ ಡಾವೊ ಇವರಿಗೆ ಮೂರು ನಲ್ಲಿ ಎಲಬುಗಳು, ಊರಿನ ಪ್ರತಿಷ್ಠಿತ ಯಜಮಾನರುಗಳಿಗೆ ನಲ್ಲಿಗಳು ಹಂಚಿಕೆಯಾಗುತ್ತಿದ್ದವು. ಅದಾದ ಮೇಲೆ ಪ್ರತಿಯೊಬ್ಬರಿಗೂ ಹಂಚಿ ಖಾಲಿ ಮಾಡುತ್ತಿದ್ದರು. ಹಾಗೆನೆ ಹೊಟ್ಟೆಯೊಳಗಿನ ಕರುಳ್ಳನ್ನ ಬಿಸಿನೀರಲ್ಲಿ ಚೆನ್ನಾಗಿ ತೊಳೆದು ಸಣ್ಣದಾಗಿ ಕತ್ತರಿಸಿ ಲಂಭಾಣಿಗರ ವಿಶೇಷ ಖಾದ್ಯವಾದ ಸಳೋಯಿ (ಬೋಟಿ) ಮಾಡಿ ಸುಲದಚರ್ಮ ಮಾರಿದರೆ ಬರಬಹುದಾದ ಮೊತ್ತವನ್ನು ಅಂದಾಜು ಮಾಡಿ ಹೆಂಡ ತರಿಸಿ, ಒಂದೊಂದು ಗ್ಲಾಸು ಹೆಂಡ, ಕಲೀಜ, ಕಾನಾಬಾಜ್ (ಕಿವಿ) ತುಂಡುಗಳನ್ನು ಹಂಚಿ ಮುಗಿಸಿದ ನಂತರ ಅದೇ ಅಮಲಲ್ಲಿ ಇಡಿ ರಾತ್ರಿ ಸಾತುಭವಾನಿಯ ಹೆಸರ ಮೇಲೆ ವಾಜ (ಭಜನೆ) ಹಾಕಿ ತಮ್ಮ ತಮ್ಮ ಮನೆಗೆ ಹೋಗುತ್ತಿದ್ದರು. ಲಂಭಾಣಿಗರ ಈ ವಿಶೇಷ ಕಾರುಣ್ಣಿಮೆಯಾಗಿ ಒಂದು ವಾರಕ್ಕೆ ಸಾಮಾನ್ಯವಾಗಿ ಕನ್ನಡದ ಮಂದಿ ತಮ್ಮ ಕಾರುಣ್ಣಿಮೆ ಅಂತ ಮಾಡುತ್ತಿದ್ದರು. ಅವತ್ತು ಕನ್ನಡದ ಮಂದಿ ಏನು ಮಾಡುತ್ತಿದ್ದರೋ ಲಂಭಾಣಿ ಜನರಿಗೆ ಗೊತ್ತೆ ಆಗುತ್ತಿರಲಿಲ್ಲಾ.

* * *

16. ಬೂಡಿಯಾಡಿ(ಅಜ್ಜಿ) ಹಬ್ಬದ ವಿಜೃಂಭಣೆ

ಕಾರುಣ್ಣಿಮೆಯ ಖಾರದ ನಂತರ ಬಹಳ ದಿನಗಳವರೆಗೆ ಸಿಹಿಯೆ ತಿಂದಿರದ ತಾಂಡದ ಮಂದಿ ಇಡೀ ತಾಂಡವನ್ನೆ ರಕ್ಷಿಸುವ ಅಜ್ಜಿಯ ಹಬ್ಬವನ್ನು ಆಚರಿಸುವುದು ವಾಡಿಕೆಯಾಗಿತ್ತು. ಈ ಅಜ್ಜಿ ಯಾರು? ಹುಲಿಯೂರ ಬಹಳ ದಿನಗಳಿಂದ ಅವನ ಓರಿಗೆಯ ಹುಡುಗರ ಹತ್ತಿರ ಕೇಳಿದ್ದ. “ನನಗೊತ್ತಿಲ್ಲ ನೋಡಲೆ ಹುಡುಗ ನನ್ನ ತಲಿ ತಿನ್ನಾಕ ಹೋಗಬೇಡ. ಬೇಕಾರ ನಮ್ಮವ್ವನ್ನ, ನಮ್ಮಜ್ಜನ ಕೇಳು” ಅಂತ ಗದರಿಸಿದ ಮೇಲೆ ಯಾವತ್ತಾದರೂ ಪರಿಹಾರ ದೊರತೀತು ಅಂತ ಸುಮ್ಮನಾಗಿದ್ದ. ಈ ಹಬ್ಬವನ್ನು ಕನ್ನಡದ ಮಂದಿ ಕೂಡ ಸೇರಿ ಮಾಡುತ್ತಿದ್ದರು. ಅಜ್ಜಮ್ಮನ ಹಬ್ಬ ಬಹುತೇಕ ಆಗಸ್ಟ್, ಸೆಪ್ಟೆಂಬರ್ ತಿಂಗಳಲ್ಲಿ ಸುತ್ತಲು ಹಚ್ಚಹಸಿರು, ಜೋಳಗಳು ತೆನೆ ತೆಗೆದು ರಾಗಿ ಜೋಲಿಗೆ ಬಂದಿರುವ ಸಂದರ್ಭದಲ್ಲಿ ಬರುತಿತ್ತು. ಅ ತಿಥಿಯ ಶುಕ್ರವಾರ ಇಡೀ ತಾಂಡದ ಜನರಿಗೆ ಸಡಗರ, ಯಾರು ಹೊಸಬಟ್ಟೆಯನ್ನೇನು ತೊಡುತ್ತಿರಲಿಲ್ಲಾ ಏಕೆಂದರೆ, ಅಲ್ಲಿದ್ದವರೆಲ್ಲಾ ಸಣ್ಣ ಹಿಡುವಳಿಯ ಒಕ್ಕಲುಗಳು, ಇರುವ ಒಂದು ಎಕ್ಕರೆ, ಎರಡು ಹೆಚ್ಚೆಂದರೆ ನಾಕು ಎಕ್ಕರೆ ಜಮೀನು, ವ್ಯವಸಾಯ ಲಾಭದಾಯಕ ಉದ್ಯೋಗವಂತು ಅಲ್ಲ, ಅವೇ ಸಂಪ್ರದಾಯಿಕ ಬೆಳೆಗಳು, ಯಾರನ್ನ ಕೇಳು ಹೈಬ್ರೀಡ್ ಜೋಳ, ತೊಗರಿ ಅಕ್ಕಡಿ, ಸಣೇಸಪ್ಪು, ಪುಂಡಿಪಲ್ಯೆ, ನಾಕು ಅವರೆ, ಹೆಸರು, ಮಡಕಿಕಾಳು, ಅಲಸಂದಿ, ಕೊರಿಸಾಲುಗಳಿಗೆ, ತಲೆಸಾಲಿಗೆ ಮಾತ್ರ ಸಜ್ಜೆ. ಇಷ್ಟೆ ಲಾಭಕ್ಕಾಗೆ ಬದುಕಿದ ದಲ್ಲಾಳಿ ಅಂಗಡಿಯವನಾಗಲಿ, ದೊಡ್ಡ ಅಂಗಡಿಯಲ್ಲಿ ಹಗಲು ಲೂಟಿ ಮಾಡುವ ಶೆಟ್ಟಿಗಳಂತೆ ಯಾವತ್ತು ಆಲೋಚನೆ ಮಾಡುತ್ತಿರಲಿಲ್ಲಾ. ಇಂಥ ಜನರು ಪ್ರತಿಹಬ್ಬಕ್ಕೆ ಹೊಸಬಟ್ಟೆ ಧರಿಸಲು ಸಾಧ್ಯವಾದೀತೆ? ವರ್ಷಕ್ಕೆ ಒಂದೇ ಒಂದು ಸಲ ದೀಪಾವಳಿ ಇಲ್ಲವೆ ಯುಗಾದಿಯಲ್ಲಿ ಒಂದು ಅಡ್ಡ ಜೇಬಿನ ಒಳಂಗಿ, ಯಾವಾಗಾದರೊಮ್ಮೆ ಟವೆಲು, ಮತ್ತೊಮ್ಮೆ ಧೋತಿ ಇವೇ ಅವರ ಸುಂದರವಾದ ಪೋಷಾಕುಗಳು, ಹೆಚ್ಚು ಮಾಡಲು ಕಾಸು ಬೇಕಲ್ಲ, ಅದೇನೋ ಹೇಳ್ತಾರಲ್ಲ, “ಕೈಯಾಗ ಕಾಸಿಲ್ಲ ಮೈಯಾಗ ಉಸಿರಿಲ್ಲ” ಎಂಬಂತೆ ರೈತರ ಸ್ಥಿತಿಯಾಗಿತ್ತು. ಮನೆತುಂಬ ಹುಡುಕಿದರು ಹರಕಲು ಒಂದೆರಡು ಸೀರೆ, ಪಂಚೆ, ಕೊಳಕು ಬಟ್ಟೆಗಳನ್ನು ಬಿಟ್ಟರೆ ಏನು ಸಿಗದು. ಹಾಗಾಗಿ ಸಾಲ ಕೊಡದ ಸಂದರ್ಭ ಅದಾಗಿದ್ದರಿಂದ ಬಟ್ಟೆ

ಸಿಗುವುದು ಅಸಾಧ್ಯ. ಒಂದೆರಡು ಸೇರು ತಾವೆ ಬೆಳೆದ ಬೇಳೆ, ಒಂದೆರಡು ಕೇಜಿ ಬೆಲ್ಲಾ, ಮೈದಾ, ಒಂದು ಲೀಟರ್ ಎಣ್ಣೆ ಮುಗಿತು. ಮನಿಮಂದಿ ಹೊಟ್ಟೆತುಂಬ ಕಡಬು ತಿನ್ನುತ್ತಿದ್ದರು. ಮೊದಲು ಅಜ್ಜಿಗೆ ಐದು ಸಣ್ಣ ಹೋಳಿಗೆ ಮಾಡಿ ಕುಡಿಕೆ ಐದು ಹಸಿರು ಬಳೆ, ಒಂದು ಖಾರಿಕ, ಐದು ಪೈಸಾ, ಹಸಿರು ಕುಪ್ಪಸದ ಬಟ್ಟೆ ಮುತ್ತುಗದ ಎಲೆಯ ಮೇಲೆ ಇಟ್ಟು ಮನಿಯಿಂದ ಒಬ್ಬರಂತೆ ಸೇವಾಭಾಯನ ಗುಡಿ ಮುಂದೆ ಜಮಾಯಿಸಿದ ನಂತರ ಸರಿಯಾಗಿ ನಾಲ್ಕು ಗಂಟೆ ಸುಮಾರಿಗೆ ಊರಿಂದ ದೂರ ಅರ್ಧ ಕಿಲೋಮೀಟರ್ ಬಂದರೆ ಮರಿಯಮ್ಮ ದೇವಿಯ ಬನ್ನಿಪತ್ರಿ ಮರದ ಕೆಳಗೆ ಇಟ್ಟು ಕೈಮುಗಿದು ವಾಪಾಸು ಮನೆಗೆ ಹೋಗುತ್ತಿದ್ದರು. ದನ ಮೇಯಿಸೋ ಹುಡುಗರ ಗುಂಪು ಅವರು ಹೋಗುವುದನ್ನೇ ಕಾಯುತ್ತಿದ್ದವರು ಕಣ್ಮರೆಯಾಗುತ್ತಿದಂತೆ, ಕುಡಕಿಗಳನ್ನು ಹುಡುಕಿ ಅವುಗಳಲ್ಲಿ ಇರುವ ಐದು, ಹತ್ತು ಪೈಸೆಗಳನ್ನು ತೆಗೆದುಕೊಂಡು ಜೇಬಿನಲ್ಲಿ ಹಾಕುತ್ತಿದ್ದರು. ಬಾಯಿರುಚಿಗೆ ಎರಡು ಮೂರು ಸಣ್ಣ ಹೋಳಿಗೆಯನ್ನು ತಿಂದು ಮನೆ ಕಡೆಗೆ ದಾರಿ ಬಿಡುತ್ತಿದ್ದರು. ಅವರಿಗೆ ಮರಿಯಮ್ಮ ದೋಷನೂ ಮಾಡ್ತಿರಲಿಲ್ಲಾ, ಯಾವ ಕಾಯಿಲೆನೂ ಅಂಟುತ್ತಿರಲಿಲ್ಲಾ. ಯಾಕಂದ್ರೆ ಅವರು ಮನಸ್ಸಲ್ಲಿ ಮರಿಯಮ್ಮಳನ್ನು ನೆನಪು ಮಾಡಿಕೊಂಡೆ ಆ ಕೆಲಸಕ್ಕೆ ಇಳಿಯುತ್ತಿದ್ದರಿಂದಾಗಿ ಅವಳ ಪರವಾನಿಗೆ ಸಿಕ್ಕಿದೆ ಎಂದೇ ಭಾವಿಸುತ್ತಿದ್ದರು.

ಅಜ್ಜಿ ಹಬ್ಬದ ಹೋಳಿಗೆ ರಾತ್ರಿ ಬೆಳಿಗ್ಗೆ ಇರುತ್ತಿದ್ದಿದ್ದರಿಂದಾಗಿ ಜೇಬಲ್ಲಿನ ಎರಡು ಮೂರು ರೂಪಾಯಿಗಳನ್ನು ಖರ್ಚು ಮಾಡುವುದು ಮುಂದೂಡುತ್ತಿದ್ದರು. ಹಬ್ಬ ಕಳೆದು ಎರಡೊ ಮೂರು ದಿನಗಳಲ್ಲಿ ಹೊತ್ತಾರೆ ಎದ್ದು ರಂಗವ್ವನ ಅಂಗಡಿಯಿಂದ ವಡಿ ತಂದು ಬಿಸಿಬಿಸಿ ರೊಟ್ಟಿ, ಹಸಿಮೆಣಸಿನಕಾಯಿ ಚಟ್ನಿಯಲ್ಲಿ ಕಲಸಿ ಗಡದ್ದಾಗೆ ತಿಂದು ದನಮೇಯಿಸೋದಕ್ಕೆ ಹೋಗುತ್ತಿದ್ದರು. ಕಾರುಣ್ಣಿಮೆ, ಅಜ್ಜಮ್ಮನ ಹಬ್ಬ ಪ್ರತಿವರ್ಷ ಅದೇ ತಿಂಗಳು ಮೊದಲ ಶುಕ್ರವಾರ, ಇಲ್ಲ ಎರಡನೆಯ ಶುಕ್ರವಾರ ಆಚರಿಸುವುದು ವಿಧಿವತ್ತಾಗೆ ನಡೆಯುತ್ತಿತ್ತು. ಊರಿಂದ ದೂರ ದುಡಿಯಲಿಕ್ಕೆ ಹೋದವರು, ಸ್ಕೂಲ ಕಲಿಯೋದಕ್ಕೆ ಹರಿಹರ, ದಾವಣಗೇರಿ ಹರಪನಹಳ್ಳಿ ಅಂತ ಹೋದವರಿಗೆ ಭಾನುವಾರದ ಸಂತೆಗೆ ಯಾರಾದರೂ ಹೋದರೆ ತಮ್ಮ ಊರ ಹುಡುಗರಿಗೆ “ಬರಲ್ಲೇನಲೆ ಅಜ್ಜಮ್ಮನ ಹಬ್ಬಕ್ಕೆ?” ಅಂತ ಹೇಳಿದರೆ ಸಾಕು “ಏಯ್ ಯಾಕ ಸುಳ್ಳ ಹೇಳ್ತಿ ಕರೆ ಹೇಳು ಶುಕ್ರವಾರ ಅಜ್ಜಮ್ಮನ ಹಬ್ಬ ಮಾಡೋದು ದಿಟವೆ” ಎರಡು ಮೂರು ಸಲಕೇಳಿ ಕೇಳಿ ದೃಢಪಡಿಸಿಕೊಳ್ಳುತ್ತಿದ್ದರು. ಆವರೆ ಅಲ್ಲದೆ ಮತ್ತೆ ಬೇರೆ ಯಾರಾದರು ಸಿಕ್ಕರೆ “ಅಣ್ಣ ಅಜ್ಜಮ್ಮನ ಹಬ್ಬ ನಾಳೆ ಶುಕ್ರವಾರ ಅಂತೆ ಹೌದ?” ಕೇಳಿ ದೃಢಪಡಿಸಿಕೊಂಡು “ಶುಕ್ರವಾರ ಯಾವಾಗಪ್ಪ ಬರುತ್ತೆ, ಹಾಳಾದ ಹಾಸ್ಟಲ್ ಮುದ್ದಿ ತಿಂದುತಿಂದು ಸಾಕಾಗಿದೆ” ಅಂತ ದಿನಗಣನೆಗೆ ತೊಡಗುತ್ತಿದ್ದರು. ಹುಲಿಯೂರ, ಭಗನೇಶನಾಯ್ಕ, ಮೂಲಿಮನಿ ಪಕ್ಕೀರನಾಯ್ಕ ಪಾಂಡುನಾಯ್ಕ

ಒಂದೇ ಹಾಸ್ಟೆಲ್‌ನಲ್ಲಿ ಇದ್ದರು. ಒಬ್ಬರನ್ನು ಕಂಡರೆ ಒಬ್ಬರಿಗೆ ಆಗ್ತಿರಲಿಲ್ಲಾ. ಯಾರು ಯಾರಿಗೂ ಯಾವ ವಿಷಯವನ್ನೂ ಬಿಟ್ಟುಕೊಡುತ್ತಿರಲಿಲ್ಲಾ. ಅದಕ್ಕೆ ಭಾನುವಾರ ಸಂತೆಗೆ ಊರವರು ಒಬ್ಬರಲ್ಲ ಒಬ್ಬರು ಬಂದೇ ಬರ್ತಿದ್ದರು, ಅವರು ಸಿಗುತ್ತಿದ್ದದು ಅವರ ಊರಿಂದ ಮೂರುವರೆ ಮೈಲಿ ದೂರದ ನಲ್ವತ್ತೂರು ಗ್ರಾಮಕ್ಕೆ ಬಂದು ಹನ್ನೆರಡಾಣೆಗೆ ದಾವಣಗೆರೆಗೆ ತಲುಪಿಸುತ್ತಿದ್ದ ಸೈನಾಜ್ ಬಸ್ ಹತ್ತಿ ಬರುತ್ತಿದ್ದರಿಂದ ಹೊತ್ತಾರೆ ಹೋಗಿ ಕಾದು ಅವರನ್ನು ಹಿಡಿದು ಅವರ ಮನೆಯವರು ರೊಟ್ಟಿ ಕಳುಹಿಸಿದ್ದಾರ ಎಂಬುದನ್ನು ಕೇಳಿ, ಕಳುಹಿಸದಿದ್ದರೆ ಏನಾದರು ವಿಷಯವಿದೆಯ ತಿಳಿದು ವಾಪಾಸು ಬರುತ್ತಿದ್ದರು. ಆಕಸ್ಮಾತ್ ಊರವರು ಮುಂಚೆನೆ ಬಂದಿದ್ದರೆ ಮಂಡಿಪೇಟೆ ಮೂಲಕ ಅಮರಾವತಿ ಹಾಲಪ್ಪನ ಪನ್ಮಾಸಿರಿ ಅಂಗಡಿ, ಬಕೇಶ್ವರನ ದೇವಸ್ಥಾನ, ಅಂಬರಕರ್‌ಪಂಪಣ್ಣನ ಅಂಗಡಿ ತಡಾದು ಚನ್ನಬಸಪ್ಪನ ಸೀರೆ ಅಂಗಡಿ, ಜಯದೇವ ಪ್ರಿಂಟಿಂಗ್ ಪ್ರೆಸ್, ಹಾಂಸ ಬಾವಿ ಸರ್ಕಲ್ ದಾಟಿದರೆ ಬರುವುದೆ ಮುನ್ಸಿಪಲ್ ಸ್ಕೂಲ್. ಆದರೆ ಎದುರಿನ ಹಳೆಯ ಮಾರ್ಕೆಟ್‌ನಲ್ಲಿ ಗನಿಸಾಬಿಯ ಮಸಾಲೆ ಅಂಗಡಿ. ಇಡಿ ಹರಪನಹಳ್ಳಿ ತಾಲೂಕಿನ ತಾಂಡದ ಮಂದಿಗೆ ಗನಿಸಾಬಿ ಯಾರುಂತ ಗೊತ್ತು. ಭದ್ರನಾಯ್ಕನತಾಂಡದವರಂತು ಪ್ರತಿವಾರ ಮಾಂಸ, ಮೀನು ತಿನ್ನುವುದರಿಂದ ಗನಿಸಾಬಿ ಅಂಗಡಿಯಲ್ಲಿ ಎಂಟಾಣಿ, ಚಕ್ಕೆ, ಲವಂಗ, ಗಸಗಸೆ, ಕಾಳ ಮೆಣಸು, ಅಜ್ವಾನ, ಏಲಕ್ಕಿ ಮುಂತಾದ ಮಸಾಲೆ ಪದಾರ್ಥಗಳನ್ನು ಕೊಳ್ಳುವುದಕ್ಕೆ ಬಂದೇ ಬರುತ್ತಿದ್ದರಿಂದ ಯಾರಾದರೂ ಸಿಗುತ್ತಾರೆ ಎನ್ನುವ ಭರವಸೆಯಮೇಲೆ ಹುಲಿಯೂರ ಯಾರು ಸಿಗದಿದ್ದರೆ ಅಲ್ಲಿಂದ ಹಾಸ್ಟೆಲಿಗೆ ವಾಪಾಸಾಗುತ್ತಿದ್ದ.

ಅಲ್ಲಿ ಸಿಕ್ಕವರು ಪಕ್ಕಾಸುದ್ದಿ ಹೇಳುತ್ತಿದ್ದರು. ಅದು ಹಬ್ಬ ಇದೆಯೊ, ಇಲ್ಲವೊ ಎನ್ನುವುದನ್ನ ದೃಢಪಡಿಸುತ್ತಿತ್ತು. ಗುರುವಾರ ಮಧ್ಯಾಹ್ನದ ಸಾಲಿಗೆ ಚಕ್ಕರ್ ಹೊಡೆದು ಅರುಣಾ ಟಾಕೀಸು, ಹೊಂಡದ ಸರ್ಕಲಿಗೆ ಹೋಗುವ ದಾರಿಯಲ್ಲಿರುವ ರೈಲ್ವೆ ಹಳಿ ಪಕ್ಕದ ಕೊಳಚೆ ಪ್ರದೇಶ, ಮುಂದೆ ಬಂದರೆ ಮೀನು ಮಾರುಕಟ್ಟೆ ಪಕ್ಕದಲ್ಲೇ ಶೇಂದಿ ಅಂಗಡಿ ತಡಾದು ಎರಡುವರೆಗೆ ಬಿಡುವ ಕರ್ನಾಟಕ ಬಸ್ಸು ಬರೋಬರಿ ನಾಕು ಗಂಟೆಗೆ ನಲವತ್ತೂರ ತಲುಪುತ್ತಿತ್ತು. ಅದೇ ಸಮಯಕ್ಕೆ ಸರಿಯಾಗಿ ನಲವತ್ತೂರು ಸಾಹುಕಾರ ಮಠಪತಿಯಪ್ಪ, ರುದ್ರೇಶಪ್ಪನ ಗದ್ದೆಗಳಲ್ಲಿ ಕೆಲಸ ಮಾಡುತ್ತಿದ್ದ ಆಳುಗಳು ಕಾಲುಕೈ ಮುಖ ತೊಳೆದು ಹೊರಡುತ್ತಿದ್ದರು. ಅವರ ಜೊತೆಗೆ ಹುಲಿಯೂರ, ಅವರ ಊರಿನ ಭಗನೇಶ, ಪಾಂಡು ಪಕ್ಕೀರ ತಮ್ಮ ಶಾಲೆಯ ಅನುಭವಗಳನ್ನು ಅವರಿಗೆ ಹೇಳುತ್ತಾ ಹೋಗುತ್ತಿದ್ದರು. ಕಳೆತಗೆಯುವವರು ಮುಂಜಾನೆ ಬಗ್ಗಿ ಕೆಲಸ ಆರಂಭ ಮಾಡಿ ಸಾಲುಮುಗಿದಾಗಲೆ ಮೇಲೆ ಏಳುತ್ತಿದ್ದದ್ದು. ನಂತರ ಒಂದು ಗಂಟೆಗೆ ಊಟಕ್ಕೆಕುಂತವರು ಮತ್ತೆಮೇಲೇಳುವುದು ಸಂಜೆನಾಕಕ್ಕೆ. ಸೊಂಟ ನೋವು ವಿಪರೀತವಾದರೂ ಸಹಿಸಿಕೊಂಡು ಕೆಲಸಮಾಡುತ್ತಿದ್ದರು. ಈ ಎಲ್ಲಾ ಮಾತುಕತೆಗಳ

ನಡುವೆ ತಂಭಗಲೂರಿನ ಹಳ್ಳ ಬಂದಿದ್ದೇ ತಿಳಿಯುತ್ತಿರಲಿಲ್ಲಾ. ಹಳ್ಳ ದಾಟಿದರೆ ಮುಂದೆ ತಾಂಡದ ಗದ್ದೆಗಳು.

ಮಗ ಮುದ್ದೆ ಉಂಡು ಬೇಜಾರಾಗಿ ಬಂದಾನಂತ ಜಾನಿಬಾಯಿ ರೊಟ್ಟಿಯ ಪುಟ್ಟಿಯಿಂದ ಉಳಿದ ರೊಟ್ಟಿಗಳನ್ನು ಹುಲಿಯೂರನ ಸಲುವಾಗಿ ಮುಚ್ಚಿಡುತ್ತಿದ್ದಳು. ಯಾಕಂದ್ರೆ ಮುಂಜಾನೆ ರೊಟ್ಟಿ ಸುಟ್ಟು ಕೆಲಸಕ್ಕೆಹೋದ ಹೆಂಗಸರು ಮತ್ತೆ ಸಂಜೆ ಬಂದು ಒಲೆಯಮುಂದೆ ಬಹಳ ಹೊತ್ತು ಕೂರಲಾಗದಕ್ಕೆ ಮುದ್ದೆ ಕೂಡಿಸುತ್ತಿದ್ದರು. ಹಾಗಾಗಿಯೇ ಅವನಿಗೆ ಕೊಡುತ್ತಿದ್ದಳು. ಬರಿ ಮುದ್ದೆ ತಿಂದು ತಿಂದು ಬಾಯಿಯಲ್ಲಿ ಬಂದ ಬುರಗು ಕಡಿಮೆಯಾದೀತು ಅಂತ ಸಿಕ್ಕ ಒಂದೆರಡು ರೊಟ್ಟಿಗಳನ್ನು ಮುಚ್ಚಿಟ್ಟು ಒಣಬಾಂಗಡೆ ಮೀನಿನ ಬಾಲವನ್ನು ಹುರಿದು ಹಸಿ ಖಾರದ ಹಿಂಡಿ ಜೊತೆಗೆ ಕೊಡುತ್ತಿದ್ದಳು. ಮಾರನೇ ದಿನ ಅಜ್ಜಿ ಹಬ್ಬ ಅಂತ ಹೊತ್ತಾರೆ ಹೊಲಕ್ಕೆ ಹೋಗಿ ಹನ್ನೆರಡು ಗಂಟೆಗೆ ಬಂದವರೆ ನಾಕು ಸೇರು ಬೇಳೆ ಎರಡು ಮೂರು ಕೇಜಿ ಬೆಲ್ಲ ಸೇರಿಸಿ ಖಾರತಿರವೊ ದುಂಡಿಕಲ್ಲೊಳಗೆ ತಿರುವಿ ಹುಣ್ಣ ತಗೆದರೆ ಅವರಪ್ಪನ ಹಳೆ ಪಂಚೆ ಹಾಸಿ ಸಣ್ಣವರು ದೊಡ್ಡವರನ್ನದೆ ಕೈ ಜೋಡಿಸಿ ಕರಿಗಡಬು ತುಂಬುತ್ತಿದ್ದರು. ಪುಟ್ಟಿಗಳ ಮೇಲೆ ಪುಟ್ಟಿ ತುಂಬಿಟ್ಟಿದ್ದು ಅಜ್ಜಿಯನ್ನು ಕಳುಹಿಸಲು ಹೋದವರು ಬರ್ತಿದಂಗೆ ಕರಗಿ ಹೋಗುತ್ತಿದ್ದವು. ಮುಂದೆ, ಹಬ್ಬಕ್ಕೊಮ್ಮೆ ಮಾಡುವ ನುಚ್ಚು ಅಕ್ಕಿಯ ಅನ್ನಕ್ಕೆ ವಿಶೇಷವಾಗಿ ಜಾನಿಬಾಯಿನೆ ಮಾಡಿದ ಕಟ್ಟಿನ ಸಾರಿಗೆ ಎರಡು ತುತ್ತು ನುಚ್ಚಕ್ಕಿ ಇಲ್ಲವೆ ನವಣಕ್ಕಿ ಅನ್ನ ಉಂಡು ಕೈ ತೊಳೆದರೆ ಅಜ್ಜಮ್ಮ ಹಬ್ಬ ಮುಗದಂಗೆಯ.

* * *

17. ಗುಲಾಬಿ ಗನಿಸಾಬಿ ಎನ್ನುವ ಮಾತಿನಮಲ್ಲ ಮಂಗಳವಾರ ಹರಿಹರದ ಸಂತೆ

ಸೋಮುವಾರ ತೆಲ್ಗಾಪುರ, ಶುಕ್ರವಾರ ದುರ್ಗದೂರು, ಭಾನುವಾರ ದಾವಣಗೆರೆಯಲ್ಲಿ ಒಂದು ಟೆಂಟ್ ಹಾಕಿ ಚೆನ್ನಾಗಿ ಜೋಡಿಸಿದ, ಗಸಗಸಿ ಚೀಲ, ಯಾಲಕಿ ಬುಡ್ಡಿ ಚೀಲ, ಒಣಕೊಬ್ಬರಿ ಚೀಲ, ಲವಂಗ, ದಾಲ್ಚಿನ್ನಿ, ಕರಿಮೆಣಸು, ಜಾಕಾಯಿ ಹಿಪ್ಲಿ, ಮೋಡಿ, ಕಾಚು, ಸಣ್ಣಗಾಳು ಮುಂತಾದ ಅನೇಕ ರೀತಿಯ ಮಸಾಲೆ ಪದಾರ್ಥಗಳ ಮಾರಾಟ ಮಾಡುವ ಏಕೈಕ ವ್ಯಕ್ತಿ ಈ ಗನಿಸಾಬಿ. ಗನಿಸಾಬಿ ಎಣ್ಣೆಗೆಂಪು ತೆಳ್ಳಗೆ, ಆರಡಿ ಎತ್ತರದ ವ್ಯಕ್ತಿ. ಕನ್ನಡವನ್ನು ಉರ್ದುದೊಳಗೆ ಸೇರಿಸಿ, ಲಂಬಾಣಿ ಭಾಷೆಯನ್ನು ಉರ್ದು ಧಾಟಿಯೊಳಗೆ ಮಾತಾಡುತ್ತಿದ್ದ. ಆತನ ಟೆಂಟಿಗೆ ಬರುವವರಲ್ಲಿ ಕಾಟಕ ಮಂದಿಯ ಗುಂಪೆ ದೊಡ್ಡದಾಗಿತ್ತು. ಸಸ್ಯಹಾರಿಗೆ ಈತನ ದುಕಾನಿನಲ್ಲಿ ಅದೇನು ಕೆಲಸ? ಎಲ್ಲಾ ಮಾಂಸಹಾರಿಗಳದ್ದೆ ಕಾರುಬಾರು. "ಅರೆ ಆನಿ ಜಾನಿಕೆಬಾಯಿ ಘಣ್ ದಾಡವೇಗೆ ಕಾಕೊ ಆಯಿಕೊನಿಜಕೊ ಕ್ಯಾದೂ ಬೋಲೊ" (ಬಾರವ್ವ ಜಾನಿಬಾಯಿ ಬಹಳ ದಿನಗಳಾದವು ಬರ್ಲೆ ಇಲ್ಲ ಈ ಕಡೆಗೆ) ಎಂದಿನ ಧಾಟಿಯಲ್ಲಿ ಕೇಳಿದ. "ಮನೆಯಲ್ಲಿ ಕೆಲಸ ನಡಕ್ಕೆ ಮಕ್ಕಳು ಸಂತೆಗೆ ಬಂದಿದ್ದರು ಹಂಗಾಗಿ ಬರಾಕ ಆಗಲಿಲ್ಲಾ" ಬರದಕ್ಕೆ ಕಾರಣ ಹೇಳಿದಳು. ಗನಿಸಾಬಿಯ ಅಂಗಡಿಯ ಸುತ್ತಲು ಕುಂತಿದ್ದವರು ಮಸಾಲೆ ಪದಾರ್ಥಗಳನ್ನು ಕಟ್ಟಿಸಿ ಕಾಸುಕೊಟ್ಟು ಹೋಗುತ್ತಿದ್ದರು. ಕೆಲವರು "ದಾದ ರೊಕ್ಕ ಕಡಿಮೆ ಐತೆ ಮುಂದಿನವಾರ ಕೊಡ್ತಿನಿ", ಉದ್ರಿ ಹೇಳಿದರೆ ಗನಿಸಾಬಿ ತುಟಿ ಬಿಚ್ಚುತ್ತಿರಲಿಲ್ಲಾ ಬರಿ ಮಾತಿನ ವಿಶ್ವಾಸದಿಂದಲೇ "ಆಯ್ತು ಧನಕುಭಾಯಿ, ನೀ ಏನು ಓಡ್ತಿ ಹೋಗ್ತಿಯಾ ಮುಂದಿನ ವಾರ ಕೊಟ್ಟಿಯಂತೆ ಹೋಗು, ದುಡ್ಡು ಎಲ್ಲಿ ಹೋಗಲ್ಲ ಹೋಗು" ವಿಶ್ವಾಸದಿಂದ ಹೇಳುತ್ತಿದ್ದ. ಉದ್ರಿ ಒಯ್ಯುವವನು ಚಾಚುತಪ್ಪದೆ ತಾನೆ ನೆನಪಿನಿಂದ "ತಗೊ ಗುಲಾಬಿ ಗನಿಸಾಬಿ ಹೋದ ವಾರದ್ದು" ಅಂತ ರೊಕಡ ಕೊಟ್ಟಾಗ ನಗುತ್ತಲೆ ಇಸ್ಕೊಂತಿದ್ದ. ಭದ್ರಾನಾಯ್ಕನ ತಾಂಡದ ರಂಗೋಲಿಜಮುನಾನಾಯ್ಕ ಹೊರಮಂಜುಮಾರುಕಾಳೊನಾಯ್ಕ ಮೀನು ಹಿಡಿಯುವ ಮುಲ್ತಾನಿನಾಯ್ಕ ದಂಥೆ

ನಡೆವಾಗ ಕೊಡ್ತಿದ್ರು, ಇಲ್ಲದಾಗ ಸಾಬೂಬು ಹೇಳಿ ಬರ್ತಿದ್ರು. ವಾರ ಎರಡವಾರ ಸಾಬಿನೂ ಸುಮ್ಮನೆ ಬಿಡ್ತಿದ್ದ. "ಏನು ಮುಲ್ತಾನಿ ಕಿತ್ನ ಬಾರ್ ಉದ್ರಿ ಲೇಜಾಚೆ (ಒಯ್ಯುತ್ತಿಯಾ) ನಾನು ಈ ಎಲ್ಲಾ ಸಾಮಾನುಗಳನ್ನ ಮನಿಯೊಳಗೆ ಬೆಳೆತೀನಿ ಅಂತ ತಿಳ್ಕೊಂಡಿಯಾ ಹೆಂಗೆ, ಮೂರವಾರ ಬಿಟ್ಟೆ, ನೆಪ್ಪ ಮಾಡಿಕೊಂಡು ಕೊಡ್ತಿಯಾ ಅಂದುಕೊಂಡಿದ್ದೆ. ಕೊಡೊದು ದೂರ ಉಳಿತು, ನೆನಪೆ ಕರ್ತೆ ನಹಿ" ಮಕದ ಮೇಲೆ ಹೇಳಿದ. ಜನ ಜಾತ್ರಿಯೊಳಗೆ ಸಾಬಿ ಹೇಳಿದ್ದು ನೇರವಾಗಿ ತಾಗಿದಂತಾಗಿ "ಅಯ್ಯೋ ಮರೆತಿದ್ದೆ ಗನಿಸಾಬಿ, ಬೇಜಾರಾಗಬೇಡ, ತಗೊ ಎರಡ ರೂಪಾಯಿ ಹಳೆ ಬಾಕಿನೂ ಮುರ್ಕೊಂಡು ಬಿಡು" ಅಂದವನೆ ಖರೀದಿಸದ್ದಿನ್ನ ತಗೊಂಡು ಹಿಂದಕ್ಕೆ ತಿರುಗಿಯೂ ನೋಡದಂತೆ ಮರೆಯಾಗಿದ್ದ. ಗನಿಸಾಬಿ ಅವನಿಗೆ ಹೇಳಬೇಕಂತ ಆಗಲಿ, ಅವಮಾನ ಆಗಲಿ ಅಂತೇನು ಹೇಳಲಿಲ್ಲಾ. ಅವನಿಂದ ಉದ್ರಿ ಒಯ್ದು ಬಾಕಿ ವಾಪಾಸು ಮಾಡದ ದಲ್ಲಾಳ್ಳಿ, ಹೆಂಡದರಾಮು, ಗಬರು, ಗೋಮಾಳಿ ಹೀಗೆ ಎಂಟು ಹತ್ತು ಗಿರಾಕಿಗಳು ಸಾಲಿನಲ್ಲಿ ಇದ್ದರು. ಅದಕ್ಕೆ ಬಹಳ ಹುಷಾರಾಗಿ ಗನಿಸಾಬಿ ಎತ್ತಿಗ ಬರಿ ಎಳದ್ರೆ ಕೊಣಕ್ಕ ಬಿಸಿ ಮುಟ್ಟುತ್ತೆ ಅನ್ನುವಂತೆ ಅವನ ಮೇಲಿಂದ ಅವರಿಗೆ ಎಚ್ಚರಿಸಿದ್ದ. ಡಿಳ್ಳಿ, "ದಾದ ಮುಂದ ಹೋಗಿ ಬರ್ತಿನಿ" ಅಂತ ಎದ್ದುಹೋದ. ಬಾಕಿ ಉಳಿದ ಏಳು ಜನರಲ್ಲಿ ಮೂವರು ಹಿಂದಿನ ಬಾಕಿ ಚುಕ್ತ ಮಾಡಿದರೆ, ನಾಕ ಜನ "ದಾದಹಿಂದಿನದು ಮೂರುಕಾಲು ಬಾಕಿ ಇರ್ಲಿ ಈಗಿಂದು ರೋಕಡ ತಗೊ" ಅಂತೇಳಿ ಅಡಕಿಗೆ ಹೋದ ಮಾನ ಆನಿ ಕೊಟ್ಟರು ಬರಂಗಿಲ್ಲ ಅನ್ನೊ ಮಾತು ನೆನಪಾಗಿ ಭಾರಿ ನಿಯತ್ತಿನವರು ಎಂಬಂತೆ ನಾಟಕ ಮಾಡಿದ್ದರು. "ಹೆಂಗ ಹೋದ್ರ ನೋಡ್ರಿ ಹರಾಮಾ ಖೋರ್‌ಗಳು, ಅಲ್ಲ ನಮ್ದುಕೆ ಮನಿಯಾಗೆ ಬೆಳೆಯುತ್ತೆ ಮಸಾಲಿ, ತುಮಿ ಬೊಲೊ ಜಾನಿಬಾಯಿ. ಅಲ್ಲ ಇಷ್ಟೆಲ್ಲಾ ಮಾರಿದ್ರೆ ನಮಗೆ ಮಿಲ್ತಾ ಕಿತನ ನೂರು ರೂಪಾಯಿ. ಹರಿಹರದಿಂದ ಬಾಡಿಗೆ ಕೊಡಬೇಕು, ಸಂತೆಯಲ್ಲಿ ಮುನ್ಸಿದು ಪಾಲ್ಟಿಗೆ ಜಕಾತಿ ಅಂತ ತುಂಬಬೇಕು, ನಮದು ಚಾ ಅಂತ ಇರುತ್ತೆ, ಬೀಡಿ ಅಂತ ಇರುತ್ತೆ. ಅದ್ರಾಗೆ ಬಂದೋರು, ಹೋದೋರು ನಾಕ ಕಾಳು ಗಸಗಸಿ ಬಾಯಿಗೆ ಹಾಕ್ಕೊಂತಾರೆ. ಯಾರೊ ಅರ್ದ ಬಟ್ಟಲ ಕೊಬ್ಬರಿಯನ್ನು ಎರಡು ತುಂಡು ಮಾಡಿ ಕೈಯಲೆ ಇಟ್ಕೊಂತಾರೆ ಅದೇನೊ ಬೊಲ್ತಾರಲ್ಲ, ಉಳ್ಳಗಡ್ಡಿದು ಲಾಭ ಎಲ್ಲೋ ಹೋಯಿತು ಅಂತೆ. ಹಂಗಾಯ್ತು ನಮ್ದು ಕತೆ." ಅಲ್ಲಿ ಕುಂತವರು, ಕೇಳಿದವರು ಯಾವತ್ತು ಅವನ ಸಾಮಾನಿಗೆ ಕೈ ಹಾಕದಂತೆ ಮಾತಾಡಿದ್ದ. ಹುಲಿಯೂರ, ಗನಿಸಾಬಿ ಮಾತು ಕೇಳಿ ಕೈಯಾಗ ಹಿಡದಿದ್ದ ಕೊಬ್ಬರಿ ತುಂಡನ್ನ ಬಿಸಾಕಿದ. "ಅರೆ ಬೆಟೆ ನೀ ಯಾಕೆ ಮನ್ಸಿಗೆ ಹಚ್ಕೊಂತಿಯಾ, ನಿಮ್ದುಕೆ ನಾನು ಎಷ್ಟು ವರ್ಷದಿಂದ ನೋಡ್ತಿದ್ದೀನಿ" ನಿಮ್ಮವ್ವ, ಅಪ್ಪ ಬಂದರೆ ಮಾತ್ರ ಒಳಗೆ ಬರ್ತಿಯಾ, ಇಲ್ಲ ಅಂದ್ರೆ ಹೊರಗಿಂದನೆ, ದಾದ ನಮ್ಮವ್ವ ಬಂದಿದ್ಲ, ಅಪ್ಪ ಬಂದಿದ್ನ ಕೇಳಿ ಹೊಂಟೊಯ್ತಿಯಾ. ಬಚ್ಚೆ ತಿಂದ್ರೆ ಏನೂ ಆಗಲ್ಲ. ಬಂದವರೆಲ್ಲಾ ಒಂದೊಂದು ಸಾಮಾನುತಿಂದ್ರೆ,

ನಾನು ವ್ಯಾಪಾರ ಏನ ಮಾಡ್ಲಿಬೋಲೊ ಭೇನ್ ಎಷ್ಟೋ ವರ್ಷಗಳಿಂದ ಸುಮ್ಮನೆ ನೋಡುತ್ತಾ ಗಿರಾಕಿಗಳನ್ನು ಹಾಳು ಮಾಡಿಕೊಳ್ಳಬಾರದು ಅಂತೇಳಿ ಎಲ್ಲಾದನ್ನೂ ಸಹಿಸಿಕೊಳ್ಳುತ್ತಲೆ ಬಂದಿದ್ದ ಸಾಬಿ. ನೋಡಿ ನೋಡಿ ತಡಿಯಲಾರದೆ ಇವತ್ತು ಸಿಟ್ಟು ಸ್ಫೋಟಗೊಂಡಿತ್ತು.

ಗನಿಸಾಬಿ ಆಗಾಗ ತಾಂಡಕ್ಕೆನೊ ಬರುತ್ತಿದ್ದ. ಆದರೆ ಇತ್ತೀಚೆಗೆ ವಾರಕ್ಕೆ ಸಂತೆ ಇಲ್ಲದ ದಿನಗಳಲ್ಲಿ ಬರುವುದು ಹೆಚ್ಚಾಗಿತ್ತು. "ಸಲಾಂ ದಾದ" ಹುಲಿಯೂರ ದಾವಣಗೆರೆಗೆ ಬಂದಾಗ ಕೊಬ್ಬರಿ ಕೊಟ್ಟಾನಂತ ಮುಲಾಜಿಗೆ ಹೇಳಿದ್ದ. "ಅರೆ ಛೋಟು ನಿಂದು ಹೆಸರು ಅದೇನೊ ಹೈ", ಅಂತಿದಂಗೆ, "ಹುಲಿಯೂರ ಹೈ ಬೊಲೊ" ಅಂದ. "ಕ್ಯಾ ಹಿಂದಿ ಬೊಲ್ತಾತು, ಅದಂಗೆ ನಿಮ್ಮಪ್ಪ ಮನಿಯಾಗೆ ಇದ್ದಾನ" ಕೇಳಿದ. "ಅರೇ ದಾದ ನಮ್ದು ಗೋರ್ ಬೋಲಿ ಹಿಂದಿ ತರಾನೆ ಐತೆ, ಅದು ಅಲ್ಲದೆ ನಾನು ಇಸ್ಕೂಲ್‌ನಾಗೆ ಹಿಂದಿ ಕಲಿತಿದ್ದಿನಿ ಹಂಗಾಗಿ ಹಿಂದಿ ಬರುತ್ತೆ. ಅಪ್ಪ ಮನಿಯೊಳಗೆ ಇರಬೇಕು" ಅಂದವನೆ ಹುಡುಗರು ಗೋಲಿ ಆಡೋಜಾಗಕ್ಕೆ ಓಡಿದ. ಗನಿಸಾಬಿ ತನ್ನ ಹತ್ತಿರ ಸಾಲಕ್ಕಂತ ದುಡ್ಡು ಇಲ್ಲ ಮಸಾಲೆನೂ ಉದ್ರಿ ತಂದು ತಿಂದು ತೇಗಿದ ಮೂರ್ನಾಕು ಮಂದಿ ತಾವ ಸಾಲ ಕೇಳಾಕ ಬಂದ್ರೆ, ಇವತ್ತು, ನಾಳೆ, ಬರಿ ಸಾಬೂಬು ಹೇಳುತ್ತಲೆ ಟೋಪಿ ಹಾಕಲು ನೋಡಿದ ನರಸಿಂಗ, ಭಾನ್ಯನಾಯ್ಕನಿಗೆ ಒಂದು ಗತಿ ಕಾಣಿಸಲೇಬೇಕು ಅಂತ ಮನಸ್ಸಿನೊಳಗೆ ನಿರ್ಧಾರ ಮಾಡಿಕೊಂಡೆ ಬಂದಿದ್ದ. ನರಸಿಂಗ ಸಾಲ ತರೊ ಮುಂದೆ "ಏನ್, ದಾದ ನಾನೇನು ಊರು ಬಿಟ್ಟು ಎಲ್ಲಿಗಾದರು ಓಡಿಹೋಗಿಬಿಡ್ತಿನಾ, ಒಂದ ವೇಳೆ ಓಡಿಹೋದೆ ಅಂತ ಇಟ್ಕೊ ಊರ ಮುಂದ ನಾಕ ಎಕ್ಕರೆ ಐನಾತಿ ಜಮೀನು ಐತೆ ಅದನ್ನು ನೀನೆ ನಿನ್ನ ಹೆಸರಿಗೆ ಮಾಡ್ಕೊಂಡು ಬಿಡು" ಅಂತ ಸುಳ್ಳು ಹೇಳಿ ಮಸಾಲೆದು, ಸಾಲದ್ದು ಅಂತ ಸೇರಿ ಎರಡೂವರೆ ಸಾವಿರ ಬಾಕಿ ಮಾಡಿದ್ದ. ಈ ಮಾತು ಕೇಳಿದ ತೊಪುನಾಯ್ಕನ ತಲೆ ತಿರುಗಿದಂಗಾತು. "ಅಲ್ಲಾ ದಾದ, ನಾನು ಅಷ್ಟೊಂದು ಸಲ ಸಂತಿಗ ಬಂದೀನಿ, ನಿನ್ನ ಅಂಗಡಿಯೊಳಗೆ ಕುಂತು ಮಾತಾಡಿ ಬಂದೀನಿ. ಒಂದ ಸಾರಿ, ಒಂದೇ ಒಂದ ಸಾರಿ ನರಸಿಂಗ ಹಿಂಗ ಅಂದ ಅಂತ ಹೇಳಿದ್ರ ಅವನ ಜಾತಕವನ್ನೆ ನಿನ್ನ ಎದುರಿಗೆ ಬಿಚ್ಚಿ ಇಡುತ್ತಿದ್ದೆ. ಹೋಗಿ ಹೋಗಿ ಸುಳ್ಳಿನೊಳಗೆ ಮುಳುಗಿರುವ ನರಸಿಂಗನ್ನ ನಂಬಿ ಎರಡೂವರಿ ಸಾವಿರ ಕೊಟ್ಟಿಯಲ್ಲಾ, ಸರಿಗೆ ಚುನಾ ಹಚ್ಚಿ ದಾನ ಬಿಡು" ಅರ್ಥ ಆಗುವಂತೆ ಹೇಳಿದ. "ಅಂದ್ರೆ, ನಾಕ ಎಕ್ಕರೆ ಜಮೀನು ಸುಳ್ಳು, ಯಾ ಅಲ್ಲಾ, ನಾನು ನಂಬಿ ಮೋಸ ಹೋದೆ." ಗನಿಸಾಬಿ ಹಣಿ ಹಣಿ ಬಡ್ಕೊಂಡ. "ನಾಕ ಎಕ್ಕರ ಎಲ್ಲಿ ತರ್ತಿಯಾ, ಒಂದೆಕ್ಕರೆ ಅಷ್ಟು ಹಳ್ಳದ ದಂಡಿಯೊಳಗೆ ಪರಾಂಪೊಕ್ ಜಮೀನು ಐತೆ, ನೋಡು ಹಿಂದೆ ಮುಂದೆ ನೋಡದೆ ಅವನ ಎರಡು ಕರುಗಳನ್ನ, ಆ ಜಮೀನನ್ನ ಸಾಲಕ್ಕೆ ಹಾಕ್ಕೊಂಡೆ ಬದುಕಿದೆ ಇಲ್ಲಾಂದ್ರೆ ನಿನ್ನ ಗಂಟು ಎಂಟಾಣಿ ಆಗಿ

ಹೋಗುವುದರಲ್ಲಿ ಯಾವ ಸಂಶಯವೂ ಇಲ್ಲ ನೋಡು" ಕಡ್ಡಿ ತುಂಡು ಮಾಡಿದಂತೆ ಹೇಳಿದ. "ಬಂದಷ್ಟು ಬರ್ಲಿ ತೊಪಣ್ಣಾ, ಈ ಊರ್ನಾಗೆ ಎಲ್ಲಾ ದಗಲ್ಬಾಜಿಗಳೇ ತುಂಬವರೆ, ಆ ಪೂಜಾರಿ ಪಾಂಡುತಾವ ಹೋದ್ರೆ, ಅರೇ ಗನಿಸಾಬಿ, ನರಸಿಂಗ ಏನು ಓಡಿಹೊಂಟಾನ, ಮನಿಯಾಗ ಮಕ್ಕಳದಾರ, ದುಡಿತಾರ ಇಂದಲ್ಲ ನಾಳೆ ಕೊಟ್ಟಾನು, ಬಡ್ಡಿ ಇಸ್ಕೊಂಡು ಹೋಗು, ನಾವೆಲ್ಲ ಅದೀವಿ ಒಂದು ತೀರ್ಮಾನ ಮಾಡ್ತಿವಿ ಅಂತೇಳಿ ಅವನ ಪರವಾಗಿಯೇ ವಕಾಲತ್ತು ವಹಿಸ್ತವ್ನೆ ಬೇವಕೂಫ್" ಹುಟ್ಟುಸುಳ್ಳ. ದರಿದ್ರ ಪೂಜಾರಿಯ ಮಾತುಗಳನ್ನು ಹೇಳಿದ. "ಅವನ ದೊಡ್ಡ ದಗಲ್‌ಬಾಜಿ, ಅವನ ಮಾತ ಕೇಳ್ತಿಯಲ್ಲ, ಅವನು ಹೇಳಿದ ಜಾಗದಾಗ ನೀರಲ ಕೆಸರ ಕೂಡ ಇರೋದಿಲ್ಲ. ಹಿಂಗಿರುವಾಗ ಅವನು ಇನ್ನೇನು ಹೇಳೋದಕ್ಕೆ ಸಾಧ್ಯವಾದೀತು. ದಾವಣಗೇರಿ ದಲ್ಲಾಳಿ ಅಂಗಡಿಯೊಳಗೆ ಹತ್ತು ಎಕ್ಕರೆ ತರಿ ಜಮೀನು ಐತೆ ನನ್ನದು ಅಂತೇಳಿ ಬೆಳಿ ಸಾಲ ತಂದದ್ದು ತೀರಿಸೋದಕ್ಕೆ ಆಗದೆ ಅಂಗಡಿಗೆ ಹೋಗೋದು ಬಿಟ್ಟಾನ, ಸಾವುಕಾರ ಬಂದಾಗ ಮನೆಯಲ್ಲೆ ಹೊಕ್ಕೊಂಡು ಇಲ್ಲಾಂತ ಸುಳ್ಳು ಹೇಳಿಸುತ್ತಾನೆ". ಅವನ ಹತ್ತಿರ ವ್ಯವಹಾರ ಮಾಡಿರುವ ವ್ಯಕ್ತಿಯ ಚರಿತ್ರೆಯನ್ನು ಗುಲಾಬಿ ಗನಿಸಾಬಿ ಎದುರಿಗೆ ತೊಪುನಾಯ್ಕ ಎಳೆಎಳೆಯಾಗಿ ಬಿಚ್ಚಿಟ್ಟಿದ್ದ.

ಗನಿಸಾಬಿ ಮುಂದ ಅದೇನು ಮಾಡಿದ್ನೊ, ಯಾರ ಸಹಾಯದಿಂದ ನರಸಿಂಗ, ಭಾನ್ಯನ ಹತ್ರ ದುಡ್ಡು ವಸೂಲಿ ಮಾಡಿಕೊಂಡ್ನೊ ಅವನ ಹತ್ತು ಮಕ್ಕಳು ದೊಡ್ಡವರಾಗುತ್ತಿದ್ದಂತೆ ದೊಡ್ಡವನಿಗೆ ಮದುವೆ ಮಾಡಿ ಸ್ವಂತ ವ್ಯಾಪಾರಕ್ಕೆ ಹಚ್ಚಿದ್ದ. ಒಂದೆರಡು ಹೊಸ ಲಾರಿಗಳನ್ನು ಖರೀದಿಸದ್ದ. ಒಂದೆ ಟೆಂಟು ಇದ್ದಿದ್ದು ಮೂರ್ನಾಕು ಆದವು, ಲಾರಿ ಡ್ರೈವರ್ ಸ್ವಂತ ಅವನ ಹಿರಿಮಗಳ ಗಂಡನೆ ಆಗಿದ್ದರಿಂದ ಮಾವನ ಟ್ರಕ್ಕು ಅಂತೇಳಿ ಕೈಸಡಿಲಬಿಟ್ಟು ಖರ್ಚು ಮಾಡಿದ್ದ, ನಾನುದುಡಿದು ಅವರಿಗೇಕೆ ಉದ್ಧಾರ ಮಾಡಬೇಕೆಂಬ ಕೆಟ್ಟ ಆಲೋಚನೆ ಬೇರೆ ಅವನ ತಲೆಯೊಳಗೆ ಬಂದಿತ್ತು.

ದೊಡ್ಡ ಮಕ್ಕಳು ಅಸಲು ತೋರಿಸಿ ಲಾಭವನ್ನು ಬೇರೆ ಕಡೆಗೆ ಇಡತೊಡಗಿದರು. ಎಲ್ಲಾ ಕಾಕತಾಳಿ ಎಂಬಂತೆ ಸಾಬಿಯನಲವತ್ತು ವರ್ಷದವ್ಯಾಪಾರ, ಒಂದೆ ಸಲಕ್ಕೆ ತೊಪೆದ್ದಿತು. ಕೊಟ್ಟವರು ಮನೆಬಾಗಿಲಿಗೆ ಬಂದು ಕುಂತರು, ಇಸ್ಕೊಂಡವರು ಪತ್ತೆಇಲ್ಲದಂಗೆ ಮಾಯವಾದರು. ಸಾಬಿ ಯಾವಾಗಲೂ ಹಾಕುತ್ತಿದ್ದ ಗರಿಗರಿ ಫೈಜಾಮ, ಉದ್ದನೇಯ ನಿಲುವಂಗಿ, ಮಾಸಿ ಹೋಗಿತ್ತು, ಅಲ್ಲಲ್ಲಿ ತೂತುಗಳು ಬಿದ್ದಿದ್ದವು. ಸಣ್ಣಮಕ್ಕಳ ಭವಿಷ್ಯಕ್ಕಾಗಿ ಹೆಣಗಾಡತೊಡಗಿದ. ದಿಢೀರ್ ಅಂತ ಬಂದ ಸಂಪತ್ತು ಯಾರದೊ ತಪ್ಪಿನಿಂದ ಮತ್ತು ಸಾಬಿಯ ನಂಬಿಕೆ ಮತ್ತು ಅಜ್ಞಾನದಿಂದ ಹಾಳಾಗಿ ಹೋಗಿತ್ತು.

* * *

18. ಹುಲಿಯೂರನ ಮೊದಲ ಸಹವಾಸ

ಅವನಾಗ ನಾಕೊ, ಐದನೇ ತರಗತಿಯಲ್ಲಿದ್ದ. ಅವನ ತಮ್ಮ ಜಗನ, ಅವನ ಹಿರಿಯಣ್ಣ ಜಾತುನಮಗ ಕೋಟಾನಾಯ್ಕ ಒಂದೇ ತಿಂಗಳು ಹೆಚ್ಚುಕಮ್ಮಿ ಈಗ ಅವರು ಎರಡನೇ ಕ್ಲಾಸು. ಹುಲಿಯೂರನಿಗೆ ಆಗಲೆ ತಿಳುವಳಿಕೆ ಇದಿದ್ದರಿಂದ ಬೇಸಿಗೆ ರಜೆಗೆ ಬಂದಾಗ, ದನಮೇಯಿಸುವುದರಿಂದ ಬಿಡಿಸಿ ತೊಪು ಖರೀದಿಸದ್ದ ಯಂಕಟ್ರಮಣಪ್ಪನ ಗದ್ದೆಯೊಳಗೆ ಕಬ್ಬು ನೆಟ್ಟು ಒಳಗಡೆ ಮಿಶ್ರ ಬೆಳೆ ಎಂಬಂತೆ ಬೆಂಡಿಕಾಯಿ ಸಸಿನೆಟ್ಟಿದ್ದು ಕಾಯಿ ಬಿಡುತ್ತಿತ್ತು. ಮಂದಿ ಕಾಲ ಮಡಿಯಾಕಂತ ಹೋಗಿ ಕೇಜಿ, ಎರಡು ಕೇಜಿ ಬೆಂಡೆ ಹರ್ಕೊಂಡು ಬರುತ್ತಿದ್ದರು. ಹಾಗಾಗಿ ಅದನ್ನ ಕಾಯೋದಕ್ಕೆ ಕಬ್ಬು ಅಂಗಲ ಇದ್ದ ಜಾಗ ನೋಡಿ ನೆರಳಿಗೆ ಗುಡಿಸಲು ಹಾಕಿದ್ದಿತ್ತು. ಹುಲಿಯೂರ ತನ್ನ ಪಾಡಿಗೆ ತಾನು ಹೊಲದ ಸುತ್ತಲು ಅಡ್ಡಾಡಿ, ಯಾರು ಇಲ್ಲದ್ದನ್ನು ಖಾತ್ರಿ ಪಡಿಸಿದ ನಂತರ ಜಗನ, ಕೋಟಾರನ್ನ, ನೀರು, ಮಧ್ಯಾಹ್ನದ ಊಟ ತರೋದಕ್ಕೆ ಓಡಿಸುತ್ತಿದ್ದ. ಅವರಂತೆ ಅವರ ಗದ್ದೆಯಿಂದ ಮೂರು ಗದ್ದೆ ದಾಟಿದರೆ ನಾಲ್ಕನೇಯದ್ದು ಸರ್ವತಪ್ಪನದ್ದು, ಅದನ್ನ ಕೋರಿಗೆ ಮಾಡುತ್ತಿದ್ದ ಅವನ ತಾಂಡದ ಪಾಬಂದಿನಾಯ್ಕನ ಎರಡನೇ ಮಗಳು ಬಿಂಗ್ಲಿನೂ ಕೂಡ ಅವರ ಗದ್ದೆಯನ್ನು ಕಾಯಲು ಬರುತ್ತಿದ್ದಳು. ಅವಳು ಇವನಂತೆ ಇಡಿ ಗದ್ದೆ ಸುತ್ತಲು ಅಡ್ಡಾಡಿ ನೆರಳಿಗೆ ಅಂತ ಇವನ ಗುಡಿಸಲಿಗೆ ಬರುತ್ತಿದ್ದಳು. ಇಬ್ಬರು ಸೇರಿ ಏನೇನೊ ಆಟಗಳನ್ನು ಆಡುತ್ತಿದ್ದರು.

ಹುಲಿಯೂರ ತನ್ನ ಪಾಡಿಗೆ ತಾನು ಪ್ರತಿದಿನ ಬಂದು ಬೆಂಡಿಗಿಡಗಳನ್ನು ಕಾಯುತ್ತಿದ್ದ. ಬೆಂಗ್ಲಿನೂ ಕೂಡ ಪ್ರತಿದಿನ ಬರುತ್ತಿದ್ದಳು. ಅವಳ ಮನಸ್ಸಿನೊಳಗಿನ ಇಂಗಿತವಾಗಲಿ, ಪ್ರೀತಿಯಾಗಲಿ ಹುಲಿಯೂರ ಗ್ರಹಿಸದಾಗಿದ್ದ. ಬೇಸಿಗೆಯು ಅವನ ಪಾಲಿಗೆ ಅದೃಷ್ಟ ತಂದಿತ್ತು ಅಂತ ಕಾಣುತ್ತೆ, ಪ್ರತಿದಿನ ಕುರಿ ಮೇಯಿಸಲು ಬರುತ್ತಿದ್ದ ಅವನ ಅತ್ತೆ ಗಂಡ ಸಾಂಕೋಲನಾಯ್ಕ ಎಂದಿನಂತೆ ಅವತ್ತು ಬಂದ. ಆದರೆ ಅವನು ಬಹಳ ತಡವಾಗಿ ಬಂದಿದ್ದ. ಜಗನ, ಕೋಟಾ ಬುತ್ತಿ ತರೋದಕ್ಕೆ

ಹೋಗಿದ್ದರು. ಹುಲಿಯೂರ ಬಿಂಗ್ಲಿ ಆಟ ಆಡುತ್ತಾ, ಬಿಂಗ್ಲಿ ಹೇಳಿದಳು. "ಇದೇನು ಆಟನೊ ಹುಲಿಯೂರ, ನಿನಗೆ ಬೇರೆ ಯಾವ ಆಟ ಬರೋದಿಲ್ಲವೆ?" ಅವನು ಬಹಳ ಸಣ್ಣವನಿರಬೇಕಾದರೆ ಹನುಮಿ, ಸುಬ್ಬಿ, ಗಂಭೀರಿಯರ ಜೊತೆಗೆ ಪಾಂಡು, ಪಾತ್ಲೊ, ಪಾಮಡಿಯರೊಂದಿಗೆ ಮದುವೆ ಆಟ ಆಡಿದ್ದು ನೆನಪಾಯಿತು. ಹನಮಿ, ಪಾಂಡು ಹುಲಿಯೂರನ ತಂದೆ ತಾಯಿ ಪಾತ್ಲೊ, ಸುಬ್ಬಿ ಅವನ ಅತ್ತೆ ಮಾವಂದಿರು ಪಾಮಡಿ ಅವನ ಅಳಿಯ ಗಂಭೀರಿ ಅವನ ಹೆಂಡತಿ ಗಿಡ್ಡೇಸಿಮನಿ ಮುಂದಿನ ಬೇವಿನ ಮರದ ಕೆಳಗೆ ನಿಂತಿದ್ದ ಚಕ್ಕಡಿಯ ಕೆಳಗೆ ನಡೆದ ಆಟದಲ್ಲಿ ಅವನಿಗೆ ಬಲಕ್ಕೆ ಗಂಭೀರಿಯನ್ನು ಎಡಕ್ಕೆ ಕೂಡಿಸಿ ಜಾಲಿಯ ಎಲೆಗಳನ್ನು ತಲೆ ಮೇಲೆ ಹಾಕಿ "ಹೂಂ, ಮದವಿ ಆತು, ಗಂಡು ಹೆಣ್ಣು ಹೋಗ್ರಿ ಮಲಗ್ರಿ" ಅಂತ ಸುಬ್ಬಿ ಹೇಳಿದ್ದು ನೆನಪಾಯಿತು. ಬಿಂಗ್ಲಿ ಮಾತ್ರ "ಲೊ ಹುಲಿಯೂರ, ಬಾರಿ ದಡ್ಡ ಕಣೊ ನೀನು, ಏನು ಬರೊದಿಲವಲ್ಲೊ ನಿನಗೆ" ಅಣುಕಿಸಿದಳು. ಅವಳ ಮಾತು ಕೇಳಿ ನಾಚಿಕೆಯಿಂದಲೇ "ಏನಾತೆ ಬಿಂಗ್ಲಿ, ನಾ ಏನು ಮಾಡಿದೆ" ಪೆಕರನಂತೆ ಕೇಳಿದ. "ನಿಮ್ಮ ಮಾವ ಒಬ್ಬನೂ ಹಾಳಮನಿಯೊನು ದಿನಾ ಇದೆ ಸಮಯಕ್ಕೆ ಬರ್ತಾನ ನಿಮ್ಮ ಗದ್ದೆಗೆ, ಆಲ್ಲೊ ಕುರಿಗಳು ಕಬ್ಬಿನಗರಿಗಳನ್ನು ಕತ್ತರಿಸಿದರೆ ಏನ್ಮಾಡಿಯಾ ಅಂತೀನಿ. ಬಿಡಬೇಡ ಅಂತ ಹೇಳಬಾರದ. ಹಾಳ ಮುಸಡಿಯವನು, ಸಣ್ಣಹುಡುಗರನ್ನು ಹೆದರಿಸಿ ಒಳಗೆ ಕುರಿಗಳನ್ನು ನುಗ್ಗಿಸಿಬಿಡ್ತಾನ" ತಾರಮಾರ ಬೊಯ್ಯ ತೊಡಗಿದಳು. "ಹೊಗಲಿ ಬಿಡೆ ಕೇಳಿಸಿಕೊಂಡಾನು, ಕೇಳಿಸಿಕೊಂಡರೆ ಅಷ್ಟೆಯಾ, ನೋಡಮತ್ತ" ಹೆದರಿಸೋದಕ್ಕೆ ನೋಡಿದ. "ಏನ್ಮಾಡ್ತಾನ ಏನು ಕಿಸ್ಕೊಳೋದಕ್ಕೆ ಆಗೋದಿಲ್ಲ, ಹಂಗೇನಾರು ಮಾಡಿದ್ರೆ ನಿಮ್ಮತ್ತೆಗೆ ನಾಕು ಮಕ್ಕಳಾಗ್ತಿದ್ವು ಸುಮ್ಮಕಿರು." ಹುಲಿಯೂರನ ಬಾಯಿ ಮುಚ್ಚಿಸಿದಳು. ಹುಲಿಯೂರ ಮಾತ್ರ ಒಳಗೊಳಗೆ ಪತರುಗುಟ್ಟಿದ್ದ. "ಏನಲೆ, ಸಾಲಿಬಿಟ್ಟು ಹೊಲದಾಗ ಕೆಲಸಕ್ಕೆ ಖಾಯಂ ಮಾಡಿಬಿಟ್ಟನ್ನ ನಿಮ್ಮಪ್ಪ, ಆತ ಬಿಡು, ಎಲ್ಲರೂ ದಡ್ಡ ಮುಂಡೆಮಕ್ಕಳು. ಏನ ಕಡದು ಕಿಸಿದಿರಿ" ಹಾಸ್ಯ ಮಾಡಿದ. "ಎಲಾ ನಿಮ್ಮವ್ವನ ಬಂಜೆನನಮಗನ, ನನ್ನ ಬುಡಕ್ಕೆ ಬಂದ್ಯಾ ನೀನ ಏನು ಮಾಡಲಿಲ್ಲಾ, ನಮ್ಮಪ್ಪಗಂತಿ" ಒಳಗೊಳಗೆ ಅಂದುಕೊಂಡ. "ಏಯ್ ಈಗ ಬೇಸಗಿ ರಜೆ ಅಲ್ವಾ ಮಾವ, ರಜೆ ಕಳೆದ ಮೆಲೆ ಹೊಕ್ಕಿನಲ್ಲ ಸಾಲಿಗ" ನಗ್ತಾ ಹೇಳಿ ಸಾಗು ಹಾಕಿದ. "ಅದೇನ ಒದ್ತಿರೊ ಯಾ ಮಗನಿಗೆ ಗೊತ್ತು ನಿಮ್ಮಣ್ಣಂದಿರು ದೇವ್ಲ, ಧಣಿಯಾ, ದಮ್ಮೂರ, ಏನು ಕಡದು ಕಿಸದ್ರಪ್ಪ. ಅದೇನೊ ಮಾಡ್ತಿವಂತ ಹೋಗಿ ಫೇಲಾಗಿ ವಾಪಾಸು ಬರಲಿಲ್ಲವೆ, ಅವರೆ ಏನೂ ಮಾಡಲಿಲ್ಲಾ ನೀ ಏನು ಮಾಡಿ ಹೋಗಲೆ ಗಬ್ಬು ನನಮಗನೆ" ಕ್ಯಾಕರಿಸಿ ಮೂತಿಗೆ ಉಗಳಿದಂಗೆ ಹೇಳಿದವನೆ "ಠರ್ರ್, ಬಾ ಬಾ, ಎಯ್, ಬೇವರ್ಸಿ ಎಲ್ಲಿ ಓಡ್ತಿಯಾ" ಕುರಿಗಳನ್ನು ಕರೆದು ಒಟ್ಟುಮಾಡಿ ಕೋಡಿಸರಕ್ಕೆ ನೀರು ಕುಡಿಸಲು ಹೊರಟ.

ಅಂವss ಹುಲಿಯೂರನ ಗದ್ದೆ ದಾಟುತ್ತಿದ್ದಂತೆ ಬಿಂಗ್ಲಿ ಹೊರಗಡೆ ನೋಡಿದಳು, ಅವನು ಬಿಂಗ್ಲಿ ಹೊಲಾನು ದಾಟಿ, ಅವಳ ಚಿಕ್ಕಪ್ಪನ ಹೊಲದಾಗ ಹೋಗಿರಬೇಕು. "ಲೇ ಬಾರಲೆ ಹುಲಿಯೂರ, ನೋಡು ನಿನಗೊಂದು ಬಲು ಮೋಜಿನ ಆಟ ಕಲಿಸ್ತಿನಿ" ಅಂದವಳೆ, ಅವನು ಊಹಿಸಿದಿರುವಂತ ಮೋಜಿನ ಆಟವನ್ನು ಹೇಳಿಕೊಟ್ಟಳು. ಆಟ ಮುಗಿಸಿ ಹೊರಗಡೆ ಬರೋದಕ್ಕು ಹುಲಿಯೂರನ ತಮ್ಮ ಜಗನ ಮತ್ತು ಅವನ ಅಣ್ಣನ ಮಗ ಕೋಟಿ ಬುತ್ತಿ ತಗೊಂಡು ಒಳಗ ಬರೋದಕ್ಕೂ ಸರಿಹೋಯ್ತು. ಹುಲಿಯೂರನ ಮಾರಿ ಇಳಿದು ಹೋಯ್ತು. "ಈ ಇಬ್ಬರು ಕಳ್ಳರು ಎಲ್ಲಿ ನೋಡಿಕೊಂಡ್ರೊ ಏನೋ, ನೋಡಿದ್ದೆ ಆದರೆ ಮನಿಯೊಳಗೆ ಇವತ್ತು ನನ್ನ ಮಾನ ಕಾಸಿನ ಪಂಚರ್ ಮಾಡ್ತಾರೆ" ಒಳಗೊಳಗೆ ಹೆದರಿಕೊಂಡ. "ಹುಲಿಯೂರ ನಾನು ಬುತ್ತಿ ಗಂಟು ತರ್ತಿನಿ ತಡಿಯೊ ಒಟ್ಟಿಗೆ ಊಟ ಮಾಡಾನು" ಅಂದವಳೆ ಇಬ್ಬರಿಗೂ ಅನುಮಾನ ಬರಬಾರದಂತ ಗದ್ದೆ ಕಡೆಗೆ ಓಡಿದಳು. "ಲೇ ಹುಲಿಯೂರಣ್ಣ, ಏನ್ ಮಾಡ್ತಿದ್ರಿ" ಜಗನ ಕೇಳೆಬಿಟ್ಟ. "ಲೇ ಬೇಕೂಪ, ನಾವೆನ್ಲಾ ಮಾಡಾನು, ನೆಳ್ಳಾಗ ಸಿಕ್ಕ ಆಟ ಆಡ್ತಿದ್ವಿ. ಅಗೊ ಹೊಡ್ಕೊಂಡು ಹೊಂಟಾನ ನೋಡು ಕುರಿಗಳನ್ನು ನಿನ್ನ ಅತ್ತೆ ಗಂಡ, ಇಲ್ಲೆ ಇದ್ದ" ಅಂತೇಳಿ ವಿಷಯಾವಾರು ಮಾಡಲು ನೋಡಿದ.

"ಆದ್ರೊ ನನಗ್ಯಾಕೊ ಅನುಮಾನ ಕಣಣ್ಣ" ಕೋಟಿ ಧ್ವನಿಗೂಡಿಸಿದ. "ಲೇ ಕೋಟಿ, ಮುಚ್ಕೊಂಡಿಪಾಡಾತು, ಸುಕಾಸುಮ್ಮನೆ ಏನಾರು ಅಂದಿ ಮಗನೆ ನೆಲದಾಗ ಹೂತಹಾಕ್ತಿ" ಅಂಜಿಸಿದ. "ಆಯ್ತು ನಾವ ಬರ್ತಿವಿ ಬಿಂಗ್ಲಿ ಜೊತೆ ಕುಡಕುಂತು ರೊಟ್ಟಿ ತಿನ್ನು, ಈಗ ಈ ಚೆಂಬನೊಳಗ ನೀರು, ಗಂಟಿನೊಳಗ ರೊಟ್ಟಿ ಅದಾವ. ಸಂಜಿಕ ಬರೋಮುಂದ ಚೆರಗಿ ತರೋದ ಮಾತ್ರ ಮರಿಬ್ಯಾಡ." ಜಗನ ಹೇಳಿದವನೆ ಮನಿಕಡಿಗ ಓಟಕಿತ್ತ.

ಅವತ್ತು ಆರಂಭವಾದ ಅವನ ಆಟ, ಅವಿರತವಾಗಿ ನಡೆಯುತ್ತಲೇ ಇತ್ತು. ಬಿಂಗ್ಲಿ ದಿನ ಅಂಗಡಿಯಿಂದ, ಕಂಬರಗಟ್ಟಿ, ರಸಗುಲ್ಲ, ಪೆಪ್ಪರಮೆಂಟು, ಹುರಿಗಡಲೆ ಬೆಲ್ಲಾ ತಂದು ಕೊಡುತ್ತಿದ್ದಳು. ಹುಲಿಯೂರನೂ, ಅವನ ತಾಯಿ ಎಲೆ ಅಡಿಕೆ ಚೀಲವನ್ನ ಶೋಧಿಸಿ ಐದು ಹತ್ತು ಪೈಸೆ ಸಿಕ್ಕರೆ ಅವಳಿಗಾಗಿ ಏನಾದರು ಒಯ್ಯುತ್ತಿದ್ದ. ಒಂದು ದಿನ ಇವನು ಹೊಲಕ್ಕೆ ಹೋಗಬೇಕೆಂದವನು, ತಪ್ಪಿಸಿಕೊಂಡು ಗದ್ದೆ ಕಾಯಲು ಬಂದಿದ್ದ. ಅವನು ಬಂದು ಒಂದು ಗಂಟೆಯಾಗಿತ್ತು. ಅವನ ಅಣ್ಣ ಧಣಿಯ ಮತ್ತು ಅವನ ಗೆಳೆಯ ಪೀಳೊಪಾಣಿನಾಯ್ಕ ಒಟ್ಟಿಗೆ ಬಂದರು. "ಲೇ ಹುಲಿಯೂರ, ಅಪ್ಪ ಬಂದಾನ, ನಿನಗ ಅಂಗಿಚೆಣ್ಣ ತಂದಾನ ಗಡಾನ ಮನಿಗ ಹೋಗಿಬೇಕಂತ ನೋಡು" ಅಂದವನೆ ಗದ್ದೆಯ ಒಳಗೆ ಹೋದ. ಹರಿದ ಚೆಣ್ಣ ಹಾಕ್ಕೊಂಡಿದ್ದ ಅವನಿಗೆ ಅವರಪ್ಪ ಅವಾಗ ಕಾಫಿ ತೋಟಕ್ಕೆ ಆಳು ಕಟ್ಟುತ್ತಿದ್ದ, ಏನೊ ಕೆಲಸದ

ಮೇಲೆ ಒಂದು ವಾರದ ಹಿಂದೆ ಹೋಗಿದ್ದೋನು ಈಗ ಬಂದಿದ್ರು ಬಂದಿರಬಹುದು. ಅಲ್ಲದೆ ಯುಗಾದಿ ಇನ್ನೇನು ವಾರ ಇದಿದ್ದಕ್ಕೆ ಹೊಸಬಟ್ಟೆ ತಂದರು ತಂದಿರಬಹುದು ಅಂತೇಳಿ ಖುಷಿಯಿಂದ ಹಿಂದಲೂರ ಬೆಲಿಯೊಳಗೆ ನುಗ್ಗಿ ಪಾವಟಿಗಿ ತಾವ ಕೆರೆ ಏರಿ ಇಳಿದವನೆ ಊರ ಮುಂದಿದ್ದ ತನ್ನ ಮನೆಗೆ ಓಡಿದ. "ಲೇ ಜಗನ ಅಪ್ಪ ಎಲ್ಲೋದ, ನನ್ನ ಹೊಸ ಅರವಿ ನೋಡಿದೆ? ಹೆಂಗದಾವ" ಉಸರು ಬಿಡದಂಗೆ ಕೇಳಿದ. "ಎಯ್, ಹುಚ್ಚಪ್ಯಾಲಿ, ಅಪ್ಪ ಎಲ್ಲಿ ಬಂದಾನೋ ನಿನ್ನ. ಅಂದಂಗ ಗದ್ದಿಹತ್ರ ಇರೋದ ಬಿಟ್ಟು ಇಲ್ಲಿಗ ಯಾಕ ಬಂದಿ, ಯಾರಂದ್ರು ನಿನಗ ಅಪ್ಪ ಬಂದಾನಂತ" ಜಗನ ಮಾರ್ಮಂಗಕ್ಕ ಹೊಡದಂಗ ಹೇಳಿದ. "ಹಂಗಾರ, ನಮ್ಮ ಧಣಿಯ ಮತ್ತು ಪಿಳೊಪಾಣಿನಾಯ್ಕ ಅಪ್ಪ ಬಂದಾನಂತ ಸುಳ್ಳು ಯಾಕ ಹೇಳಿದರು?" ಒಮ್ಮೆ ಆಲೋಚನೆ ಬಂದು ತಲೆ ಕೆರ್ಕೊಂಡ. "ಹಾಳಾಗಿ ಹೋಗಲಿ ಬಿಡು, ಹೆಂಗೂ ಹುಡುಗರು ತುರಾಮಚ್ಚಿ ಆಡಾಕ ಹತ್ಯಾರ, ಅವ್ವನ ತಾವ ಒಂದು ನಾಕಾಣಿ ತಗೊಂಡು ಗೆದ್ದರಾತು" ಅಂದ್ಕೊಂತ, "ಯವ್ವಾ, ನಾಕಾಣಿ ಕೊಡು, ಇಲ್ಲ ಪಾವು ಜೋಳ ಕೊಡು" ಅಂತ ಅಂಗಲಾಚಿದ ಜೋಳ ಹಸನು ಮಾಡಿ ಉಳಿದ ಕಲ್ಲು ಬೆರತಿರೊ ಮುಕ್ಕಟ್ಟನ್ನ ಒಂದು ಬೊಗಸೆಯೊಳಗೆ ತುಂಬಿ ಅವನ ಅಂಗಿಗೆ ಹಾಕಿದಳು. ಖುಷಿಯಿಂದ "ಈ ಜೋಳ ಕಣ್ಣುಮುಚ್ಚಿ ಯಾರ ತಗೊಂತಾರ" ಯೋಚನೆ ಮಾಡಿ ಪಕ್ಕದಲ್ಲಿದ್ದ ನರಸನ ಅಂಗಡಿ ಕಡಿಗೆ ಓಡಿದ. ನರಸ ಭಲೆ ಸೊಕ್ಕಿನವನು, "ಏನಲೆ ಅದು" ಅಂತ ಕೇಳಿದ "ನರಸಣ್ಣ ಜೋಳ", ಅಂದವನೆ ಅಲ್ಲೆ ಇದ್ದ ಮೊರಕ್ಕೆ ಸುರುವಿದ. "ಏನಲೆ ಹುಡುಗ ಎಷ್ಟೊಂದು ಕಲ್ಲದಾವ, ಏನಬೇಕು ಹೇಳು" ಅಂದ, "ದುಡ್ಡ ಬೇಕು" ಹುಲಿಯೂರ ಹೇಳಿದ. "ಲೇ ಹುಡುಗ ಹೊಟ್ಟಿಗ ತಿನ್ನೋದ ಬಿಟ್ಟು ಹುಡುಗರ ಗುಂಪಿನೊಳಗೆ ಹೋಗಿ ತುರಾಮುಚ್ಚಿ ಆಡಿ ಕಳದಬಿಡ್ತಿರಿ" ಬುದ್ಧಿ ಹೇಳಾಕಬಂದ. "ಇಲ್ಲಣ್ಣ ನಮ್ಮವ್ವಗೆ ಬೇಕಂತ" ಹುಲಿಯೂರ ಸುಳ್ಳು ಹೇಳಿದ. "ಒಂದಪಾವು ಅರಪಾವು ಆಗೈತಿ" ಅಳತೆ ಹೇಳಿದ. "ತಗೊ ನಾಕಾಣೆ" ಅವನ ಕೈಗೆ ನಾಲ್ಕಾಣೆ ಹಿಡಿಸಿದ. ಹುಲಿಯೂರ ತಗೊಂಡವನೆ ಆಟಕ್ಕೆ ಓಡಿದ. ಅವನ ಅಣ್ಣ ಸುಳ್ಳು ಯಾಕೆ ಹೇಳಿದ, ಮುಂದೇನಾಯ್ತು ಎಲ್ಲವನ್ನು ಮರೆತು ಹತ್ತು ರೂಪಾಯಿ ಗೆದ್ದು ಬಂದಿದ್ದ.

* * *

19. ಬಣ್ಣದ ಒಕಳಿಯೊ–ಹನ್ಮಪ್ಪನ ಉಚ್ಚಾಯವೊ

ಕರ್ನಾಟಕದೊಳಗೆ ಹನುಮಪ್ಪನ ಗುಡಿಗಳೇ ಇಲ್ಲದ ಊರು ಒಂದು ಇಲ್ಲ. ಅಂತನೆ ಹೇಳಬಹುದು. ಭದ್ರನಾಯ್ಕ ತಾಂಡದಲ್ಲಿ ಅದೆಂಗೆ ಜೋಡಿ ಹನುಮಪ್ಪನ ಮೂರ್ತಿಗಳು ಪ್ರತಿಷ್ಠಾಪನೆಗೊಂಡವೊ ಯಾರಿಗೂಗೊತ್ತಿಲ್ಲ. ಮೊದಮೊಲಿಗೆ ಪಾಂಡುರಂಗಭಟ್ಟರು ದುರ್ಗಾಪುರದಿಂದ ಬಂದು ಪೂಜೆ ಮಾಡಿ, ವರ್ಷಕ್ಕೊಮ್ಮೆ ಕಾಳು ಕಡಿ ಅಂತ ಒಯ್ಯುತ್ತಿದ್ದರು. ಒಂದಿಷ್ಟು ವರ್ಷ ಸೇವೆ ಮಾಡಿದ ಮೇಲೆ ಆತ ಹರಿಹರ ಸೇರಿಕೊಂಡ ನಂತರ ಹನುಮಪ್ಪನ ಪೂಜೆ ಮಾಡಲು ಯಾರುಮುಂದಾಗಲಿಲ್ಲಾ. ಹನುಮಪ್ಪ ಶುದ್ಧ ಶಾಖಾಹಾರಿಯಾಗಿದ್ದರಿಂದ ಕಾಟಕಮಂದಿಗೆ ಒಳಗಡೆ ಪ್ರವೇಶವೆ ಇರಲಿಲ್ಲಾ. ಹಂಗಾಗಿಯೆ ಸಸ್ಯಹಾರಿಗಳಾದ ಭಟ್ಟರು, ಬಡಗಿರು ಬಂದು ಪೂಜೆ ಮಾಡುತ್ತಿದ್ದರು. ಬಟ್ರು ಹೋದ ಮೇಲೆ ಸಾಮೆನಳ್ಳಿ ಬಡಗರಬುಕ್ಕಾಲಪ್ಪ ಬಂದು ಮತ್ತೆದೇವರನ್ನ ಪ್ರತಿಷ್ಠಾಪಿಸಿದ. ಅನಾದಿಕಾಲದಿಂದಲೂ ಕಾರ್ತಿಕ ಮುಗಿದು ಬಸವ ಜಯಂತಿಯ ವಾರದಮುಂಚೆ ಹನುಮಪ್ಪನ್ನ ಒಕಳಿಲುಚ್ಚಾಯ ಇಡೀ ತಾಂಡ ಹಂಚಿಕೆ ಹಾಕಿ ಮಾಡುತ್ತಿದ್ದರು. ಉಚ್ಚಾಯಕ್ಕೆ ತೇರಿನಬಂಡಿ, ತಯಾರಿ ಆಗುತ್ತಿತ್ತು. ಬುಕ್ಕಾಲಪ್ಪನ್ನ ಅಳಿಯಂದಿರಾದ ಈರಭದ್ರ, ಮೌನೇಶಿ, ಕಪಾಲಿ, ಕರ್ಮಯೋಗಿ ಮುಂತಾದವರು ಒಂದು ಪಲ್ಲ ಜೋಳಕ್ಕೆ ತೇರಿನ ಬಂಡಿಗೆ ಗುಂಬ, ಅದಕ್ಕೆ ಬೇಕಾದ ಪಟ್ಟಿ, ಸರಿಮಾಡಿ ಅಡ್ಡ ಪಲ್ಲಕ್ಕಿಯನ್ನು ಜೋಡಿಸುತ್ತಿದ್ದರು. ತಾಂಡದ ಮಂದಿ ಸುತ್ತಮುತ್ತಲ ತಮ್ಮ ಬೀಗರಿಗೆ ಹೇಳಿ ಕಳುಹಿಸುತ್ತಿದ್ದರು. ನಾಳೆ ತೇರು ಅಂದ್ರೆ ಸಾಯಂಕಾಲನೆ ಮಂದಿ ಜಮಾಯಿಸುತ್ತಿದ್ದರು. ಸುಣಗಾರ ಮನೆಯವರು ತೇರು ಎಳೆಯೋದಕ್ಕೆ ಮುಂಚೆ ಗಾಲಿಗೆ ಹೊಡೆಯುವ ಈಡಗಾಯಿಗಾಗಿ ಸಜ್ಜಾಗಿ ನಿಂತಿದ್ದರು. ಬೆಳಗಾಮುಂಜಾನೆ ಹೊತ್ತಾರೆ ಮಂದಿ ಸ್ನಾನಮಾಡಿಕೊಂಡು ಕಾಯಿಗಳನ್ನು ಹಿಡ್ಕೊಂಡು ನೂಕು ನುಗ್ಗಲು, ಬುಕ್ಕಾಲಪ್ಪ ಆಂಜನೇಯಸ್ವಾಮಿಗೆ ಮಂಗಳಾರತಿ ಎತ್ತಿ ಗಂಟೆ ತೆಳಗೆ ಇಡುತ್ತಿದ್ದಂಗೆ ಮಂದಿ ತೇರಿನ ಗಾಲಿಗೆ ಪಟಪಟ ಅಂತ ಕಾಯಿ ಹೊಡೆಯತೊಡಗಿದ್ದರು. ಕಾಯಿ ಎತ್ತಕೊಂಡ ಹೋದಾರಂತ

ಸುಣಗಾರ, ಸಂಕಾಲಿ, ಕವಡಿ, ಕಾಪದಿಶ, ತೇರಿನಸುತ್ತ ಬಿದ್ದ ಕಾಯಿಗಳನ್ನು ಒಟ್ಟು ಮಾಡುತ್ತಿದ್ದರು. ಕಾಯಿ ಹೊಡೆಯುತ್ತಿದ್ದಂತೆ, ಹೊರ್ಜಿ ಹಗ್ಗ ಕಟ್ಟಿ ತಯಾರು ಮಾಡಿದ್ದ ಬಂಡಿಯನ್ನು ಕೇಕೆ, ಸಿಳ್ಳು ಹೊಡೆಯುತ್ತ ಎಳೆಯಲು ಸಜ್ಜಾದವರಂತೆ ಎಳೆಯತೊಡಗುವರು. ತೇರಿನ ಪಟ ಬೀಳದಂತೆ ಪೂಜಾರಿ ಹಿಡಿದುಕೊಂಡರೆ ಹರೆಯದ ಹುಡುಗರು ಗಾಲಿಯನ್ನ ಹಿಡಿದು ನಿಲ್ಲಿಸುವ ಪ್ರಯತ್ನ ಮಾಡುತ್ತಿದ್ದರು. ಅವನ ತಾಕತ್ತು ಅದೇಟು ಇದ್ದಿತು ಅಂತ ಜೋರಾಗಿ ಜಿದ್ದಿಗೆ ಬಿದ್ದು ಜೋರಾಗಿ ಎಳೆಯುತ್ತಿದ್ದರು. ಗಾಲಿಗೆ ಹೆಗಲು ಕೊಟ್ಟವನು ಕ್ಷಣಾರ್ಧದಲ್ಲಿಯೇ ಸೋತು ಬಗಲಿಗೆ ಬರುತ್ತಿದ್ದ. ತೇರು ಚೌಡವನಗುಡಿ ದಾಟಿ ಸೀದಾ ಬನ್ನಿಮರದ ದುರ್ಗಮ್ಮನ ದೇವಸ್ಥಾನಕ್ಕೆ ಹೋಗಿ ವಾಪಸ್ಸು ಎಳೆದುಕೊಂಡು ಬರಲಾಗುತ್ತಿತ್ತು. ಇದರ ನಡುವಿನ ಪ್ರಕ್ರಿಯೆ ಮಾತ್ರ ಅದ್ಭುತವಾಗಿರುತ್ತಿತ್ತು. ಸಣ್ಣೋರು ದೊಡ್ಡವರು, ಮೇಲು ಕೀಳು ಯಾವುದೇ ಭಿನ್ನಬೇಧವಿಲ್ಲದೆ ಒಂದೇ ರೀತಿಯ ಬಲಪ್ರಯೋಗವಾಗುತ್ತಿತ್ತು. ಮುದುಕರು, ಹರೆಯದವರು ಸಣ್ಣ ಹುಡುಗರಾದಿಯಾಗಿ ಒಂದೇ ಮನಸ್ಥಿತಿಯನ್ನು ಕಾಯ್ದುಕೊಂಡು ಎಳೆಯುತ್ತಿದ್ದುರ. ತೇರು ಸರಾಗವಾಗಿ, ಯಾವುದೇ ಅಡೆತಡೆ ಇಲ್ಲದೆ ದುರ್ಗವ್ವನ ಗುಡಿ ತಲುಪಿತೊ ಹಿರಿಕರೆಲ್ಲಾ ಒಂದು ಅಭಿಪ್ರಾಯಕ್ಕೆ ಬರ್ತಿದ್ರು. ಪರವಾಗಿಲ್ಲ ಈ ವರ್ಷ ಮಳೆಬೆಳೆ ಪಾಡಾಗಿ ಆಗಿ ಬೆಳೆ ಚೆನ್ನಾಗಿಬರುತ್ತೆ. ಹನುಮಪ್ಪ ವರ ಕೊಟ್ಟಾನ. ಸುಸೂತ್ರವಾಗಿ ಹೋದ ತೇರು ಸುಸೂತ್ರವಾಗಿಯೇ ವಾಪಾಸು ಬಂದಿದೆ. ಮಂದಿಗೆ ಹುರುಪು ನೂರ್ಮಡಿಸುತ್ತಿತ್ತು. ತೇರು ಬಂದು ನಿಂತ ಮೇಲೆ ಮಂದಿ ಹನುಮಪ್ಪಗೆ ಪೂಜೆ ಮಾಡಿ ತಮ್ಮ ಮನೆಗಳಲ್ಲಿ ಊಟ ಮಾಡುತ್ತಿದ್ದರು. ಅವತ್ತೆ ಸಂಜೆ ಓಕಳಿ. ಸುಣ್ಣದ ನೀರಿಗೆ ಕುಂಕುಮ ಬೆರಸಿ ಕೆಂಪಗೆ ಮಾಡಿ ಬೆಳಗ್ಗೆ ಕೊಬ್ಬರಿ ಆಯುತ್ತಿದ್ದವರ ಮೈಮೇಲೆ ಎರಚುತ್ತಿದ್ದರು. ಅದನ್ನ ತಪ್ಪಿಸಿಕೊಂಡು ಅವರು ಬಂದವರ ಮೇಲೆ ನೀರೆರೆಚುವ ಪ್ರಕ್ರಿಯೆಯಲ್ಲಿ ತೊಡಗುತ್ತಿದ್ದರು. ಅದರ ನಡುವೆ ಹಂದರಗಾಯಿಯನ್ನು ಹರಿದುಕೊಂಡು ಬರುವವರದೊಂದುಗುಂಪು. ಅಷ್ಟೆ ಸಣ್ಣಉಚ್ಛಾಯಕ್ಕೆ ಉಸರಬುಲ್ಡಿ, ಚಾಳಿಸು, ಚೆಂಡು ಮಾರುವ ಹಂದಿಜೋಗಿಗಳ ಎರಡು ಅಂಗಡಿಗಳು, ತೊಟ್ಟಿಲ ತೂಗಿಸುವವನು ಒಂದು ಕಡೆಗೆ ಹಾಕಿರುತ್ತಿದ್ದ. ಹುಡುಗರೆಲ್ಲಾ ಕಣ್ಣಿಗೆ ಬಣ್ಣದ ಚಾಳಿಸು, ಕೈಯಾಗೊಂದು ರಬ್ಬರ ಚೆಂಡು, ಮತ್ತೊಂದು ಕಡೆಗೆ ತೂರಮುಚ್ಚಿ ತೂರಾಬಿಲ್ಲಿ ಆಡುವವರ ಗುಂಪುಗಳು, ಸಣ್ಣ ಹರಳುಗಳನ್ನು ಆಯ್ದು ಸರಿ, ಬೆಸ ಆಡುವವರದ್ದು, ಮತ್ತೊಂದು ಗುಂಪು ತಮ್ಮ ಪಾಡಿಗೆ ತಾವು ಆಟ ಆಡುತ್ತಿದ್ದವು. ಹಬ್ಬವಾಗಿದ್ದರಿಂದ ಊರಿನ ಹಿರಿಯರು, ದೊಡ್ಡವರು ಯಾರಿಗೂ ತುಟಿಪಿಟಕ್ ಎನ್ನುತ್ತಿರಲಿಲ್ಲಾ.

ಮುಂಜಾನೆ ಹೊತ್ತಾರೆ ಭೂತದಾಟ ಆಡುವವರು ಹೊರಡುತ್ತಿದ್ದರು. ಪ್ರತಿಸಲ ಭೂತದಾಟ ಆರಂಭವಾಗುತ್ತಿದ್ದದ್ದು ಸಣ್ಣ ಸಾಲಿಮಾಸ್ತರ ಜುಲೇಲಪ್ಪನ ಮನಿಯಿಂದ.

ಜುಲೇಲಪ್ಪ ಯಾರು ಯಾವ ಊರವರು ಒಂದು ಗೊತ್ತಿರಲಿಲ್ಲ. ಊರಾಗ ಒಂದು ಜಾಗ ಹಿಡಿದು ಮೊದಲು ಕರಿಹಂಚಿನ ಮನಿ ನಂತರದಲ್ಲಿ ಕೆಂಪು ಹಂಚಿನ ಮನಿ ಕಟ್ಟಿಸಿಕೊಂಡು ವಾಸವಾಗಿದ್ದ. ಇರೊ ಇಬ್ಬರು ಹೆಣ್ಣು ಮಕ್ಕಳನ್ನು ಒಳ್ಳೆ ಮನಿಗಳಿಗೆ ಕೊಟ್ಟು ನೆಮ್ಮದಿಯಿಂದ ಇದ್ದ. ಇಬ್ಬರು ಅಡ್ಡ ಪಲ್ಲಕಿ ಹೊತ್ತವರು ಕೈಯಲ್ಲಿ ಕವಿ ಕಟ್ಟಿಗೆಯನ್ನುಹಿಡ್ಕೊಂಡಿದ್ರು. ಸ್ವಲ್ಪದೂರ ಹೊತ್ತುಕೊಂಡರೆ ಹೆಗಲುಬಿದ್ದುಹೋಗುತ್ತಿತ್ತು. ಹಾಗಾಗಿಯೇ ಭೂತದಾಟದವರು ನಿಂತಾಗ ಕವಿಕಟ್ಟಿಗೆಯ ಮೇಲೆ ಪಲ್ಲಕ್ಕಿಯನ್ನು ಅಡ್ಡ ಇಡುತ್ತಿದ್ದರು. ಅವರ ಮನೆಯ ಮುಂದೆ ಕಂಬಳಿ ಹಾಸಿ, ಅದರ ಮೇಲೆ ತಿನ್ನಲು ಮಂಡಕ್ಕಿ, ಕೊಬ್ಬರಿ ಇತ್ಯಾದಿಗಳನ್ನು ಹಾಕುತ್ತಿದ್ದರು. ಭೂತದ ವೇಷ ಧರಿಸಿದವರು "ಆಬ್ ಆಬ್" ಅಂತೇಳಿ ಸದ್ದುಮಾಡಿಕೊಂಡು ತಿನ್ನುತ್ತಿದ್ದರು. ಇದು ಇಡೀ ಊರ ತುಂಬ ಆಡಲಾಗುತ್ತಿತ್ತು. ಯಾರೊ ಪಲ್ಲಕ್ಕಿ ಹೊತ್ತವರ ಕಾಲಿಗೆ ನೀರು ಸುರಿದು ಎರಡು ಊದಿನಕಡ್ಡಿಯನ್ನು ಹಚ್ಚಿ ಬೆಳಗುತ್ತಿದ್ದರು. ಹೀಗೆ ಬಡವರ ಭಕ್ತಿ ಬಂಡಿಗಾಲಿ ಎಂಬಂತೆ ಮಧ್ಯಾಹ್ನದ ಹೊತ್ತಿಗೆ ಊರೆಲ್ಲ ಸುತ್ತಾಡಿ ಯಾರಾದರೂ ಕುರು ಹಾಕಿದ್ದರೆ ಪಲ್ಲಕ್ಕಿ ಹೊತ್ತವರು ಅವರಿಗೆ ಗೊತ್ತಿಲ್ಲದೆ ಕುರು ಹಾಕಿದ ಜಾಗದ ಶೋಧನೆಗೆ ಓಡುತ್ತಿದ್ದರು. ಒಮ್ಮೊಮ್ಮೆ ಊರಿಗೆ ಏನಾಗಬೇಕಿತ್ತೊ ಅದನ್ನ ಮನಸ್ಸಿನೊಳಗೆ ಅಂದುಕೊಂಡು ಕುರುವನ್ನು ಒಂದು ಜಾಗದಲ್ಲಿ ಬಟ್ಟೆಯನ್ನು ಹೂಳುವುದು, ಲಿಂಬೆಹಣ್ಣನ್ನು ಮುಚ್ಚಿಡುವುದು ಮಾಡುತ್ತಿದ್ದರು. ಒಮ್ಮೊಮ್ಮೆ ಸಿಗುತ್ತಿತ್ತು, ಒಮ್ಮೊಮ್ಮೆ ಸಿಗುತ್ತಿರಲಿಲ್ಲಾ ಅದರ ಮೇಲೆನೆ ಕುರು ಹಾಕಿದವನು ಅವನ ಸಮಸ್ಯೆಯ ತೀವ್ರತೆಯನ್ನು ಅರ್ಥ ಮಾಡಿಕೊಳ್ಳುತ್ತಿದ್ದ. ಮೂರು ದಿನಗಳ ಕಾಲ ಹೋಳಿಗೆ, ಹುಗ್ಗಿ, ಪಾಯಸ ಮಾಡಿಕೊಂಡು ಉಂಡು ಮಾರನೆಯ ದಿನ ಬೀಗರಿಗೆ ಬೀಳ್ಕೊಡುತ್ತಿದ್ದರು. ಹನುಮಪ್ಪನ ಉಚ್ಛಾಯವಾಗಿದ್ದರಿಂದ ಕರಿಯನ್ನ ಮಾಡುತ್ತಿರಲಿಲ್ಲಾ. ಇಲ್ಲಾಂದ್ರೆ ಇಷ್ಟೊಂದು ದಿನಗಳ ಕಾಲ ಸಿಹಿತಿಂದು ಬಾಯಿರುಚಿ ಹಾಳಾಗಿ ಹೋಗಿರುವಾಗ ಖಾರ ತಿನ್ನದಿದ್ದರೆ ಹೇಗೆ.? ಯುಗಾದಿ, ಪಂಚಮಿ, ಬೇರೆ ಬೇರೆ ಹಬ್ಬಗಳಲ್ಲಿ ಕರಿಯಂತು ಮಾಡಲೇ ಬೇಕಿತ್ತು.

* * *

20. ಭಜನಾ ಮಂಡಳಿಯೊ–ತಾಳದ ಲಯದ ಪರಿಪಾಠ

ಭದ್ರಾನಾಯ್ಕನ ತಾಂಡದ ಭಜನೆ ಎಂದರೆ ಸುತ್ತ ಹಳ್ಳಿಗಳಿಗೆ ಮಾದರಿಯಾಗಿತ್ತು. ಇದಕ್ಕೆ ಎರಡು ಮುಖ್ಯ ಕಾರಣಗಳು, ಲಮಾಣಿಹುಡುಗ ಬಗಲೇಶಿ, ಅದೆಲ್ಲಿ ಕಲ್ತಿದ್ನೊ ಹಾರ್ಮೋನಿಯಂ ಪೆಟ್ಟಿಗೆ ಹಿಡ್ಕೊಂಡು ಕುಂತ ಅಂದ್ರೆ ಮಂದಿ ನಿಂತವರು ಕುಂತ್ಕೊಂಡು ತಮಗೆ ಅರಿವಿಲ್ಲದೆ ಸುಮ್ಮನೆ ತಾಳ ಹಿಡಿಯುತ್ತಿದ್ದರು. ಎರಡನೆಯ ಮುಖ್ಯ ಕಾರಣ ಅದೇ ತಾಂಡದಲ್ಲಿ ಮತ್ತೊಬ್ಬ ಮಾಸ್ತರನೂ ಇದ್ದ ಆದರೆ ಅವನು ನಾಟಕ ಕಲಿಸುವುದಕ್ಕೆ ಎತ್ತಿದ ಕೈ ಬಗಲೇಶಿ ಮಾತ್ರ ರಾಗವಾಗಿ ಹಾಡುವುದು, ಹಾರ್ಮೋನಿಯಂ ನುಡಿಸುವುದನ್ನ ಶಾಸ್ತ್ರೋಕ್ತವಾಗಿ ಕಲಿತವರಿಗಿಂತ ಚೆನ್ನಾಗಿಯೇ ನುಡಿಸುತ್ತಿದ್ದ. ಪ್ರತಿದಿನ ಸಂಜೆ ಏಳುಗಂಟೆಗೆ ಊಟ ಮುಗಿಸಿ, ಊರ ನಡುವಿನ ಸೇವಾಭಾಯನ ಗುಡಿಯಲ್ಲಿ ಹುಡುಗರು ಬಂದು ದೀಪ ಹಚ್ಚಿ, ಒಂದು ಲಾಟೀನು ತಂದಿಟ್ಟು ಭಜನೆ ಸಾಮಾನುಗಳ ಚೀಲ ಹೊತ್ಕೊಂಡು ಬರುತ್ತಿದ್ದರು. ಅದರಲ್ಲಿ ಡಗ್ಗ, ತಾಳ, ಗಿಲ್ಕಿ, ದಮ್ಮಡಿ, ಮುಂತಾದವುಗಳು ಇರುತ್ತಿದ್ದವು. ಡಗ್ಗವನ್ನು ನುಡಿಸುವವರ ಸಂಖ್ಯೆ ಬಹಳ ಕಡಿಮೆ ಹಿಂದಲ ಓಣಿಯ ಕೆಪ್ಪಕಂಬಾಲಿ ಮಾತ್ರ ಡಗ್ಗದ ಜೊತೆಗೆ ಮಾತಾಡುತ್ತಿದ್ದ. ಅದಕ್ಕೆ ಮೇಗಲ ಓಣಿಯ ಸಂಪಂಗಿ ಅನ್ನೊ ಹುಡುಗಿ ಅವನಿಗೆ ಮರುಳಾಗಿ ಮದುವೆ ಮಾಡಿಕೊಟ್ಟರು. ಗಂಡನ್ನ ಬಿಟ್ಟು ರಾತ್ರೊ ರಾತ್ರಿ ಓಡಿಬಂದಿದ್ದಳು. ಬಗಲೇಶಿ ಏನು ಸ್ಥಿತಿವಂತನಲ್ಲ, ಆದರೂ ಅವನ ಹಾಡಿಗೆ ಮರುಳಾಗಿ ಮಂಗಲಿ ಅವನನ್ನ ಮದುವೆಯಾಗಿದ್ದಳು. ಆಗ ತಾಂಡದಲ್ಲಿ ಅದೊಂದೆ ಮನೋರಂಜನೆಯ ಮಾಧ್ಯಮವಾಗಿತ್ತು. ಲಂಬಾಣಿಗರ ವಾಜ, ಸಂಪಂಗೀಯ ಕೋಲಾಟ, ಲಮಾಣಿ ಹೆಣ್ಣುಮಕ್ಕಳ ನೃತ್ಯ, ಆವಾಗ ಆವಾಗ ಊರಲ್ಲಿ ಆಡುತ್ತಿದ್ದ ಹೇಮರೆಡ್ಡಿ ಮಲ್ಲಮ್ಮ, ಕೊಂಡುತಂದ ಗಂಡ ನಾಟಕಗಳು ಇವೆ ಇತ್ಯಾದಿ. ಆದ್ರಾಗ ಬಗಲೇಶಿಗೆ ಅದೇನು ಅದೃಷ್ಟವೋ, ಯಾರೊ ಚಾ ಕುಡಿಸೋರು, ಯಾರೊ ತಿಂಡಿ ತಿನಿಸೋರು, ಹಂಗಾಗಿ ಅವನು ಅದನ್ನೆ ದೊಡ್ಡದು ಅಂತೇಳಿ ಭಾವಿಸಿದ್ದ.

ಹಾಸ್ಟೇಲಿನಿಂದ ತಾಂಡಕ್ಕೆ ಬಂದಾಗ ಹುಲಿಯೂರ, ಆರುವರೆ ಏಳಕ್ಕೆ ಉಂಡು ಹೊರಗೆ ಜಗಲಿ ಮೇಲೆ ಬಿದ್ಕೊಂತಿದ್ದ. ಹದಿಮೂರು ಮಕ್ಕಳಿಗೆ ಎಲ್ಲಿ ಜಾಗ ತರ್ತಿಯಾ, ಒಳಗಡೆ ತಿಗಣೆಕಾಟ, ಸೆಕೆ, ಹಂಗಾಗಿ ಒಂದೊಂದು ಗೋಣಿ ತಟ್ಟನ್ನ, ಈಚಲ ಚಾಪೆ, ಹಳೆದುಪ್ಪಿ ಹೊತ್ಕೊಂಡು ಮಲಗಬೇಕು ಇದು ಪ್ರತಿದಿನದ ಕೆಲಸ. ಗುಡಿಯೊಳಗೆ ಏನೊ ನಡೆದೈತಲ್ಲಾ ಅಂದವನೆ, ಮಕ್ಕೊಂಡವನು ಬಂದು ಭಜನೆ ಮಾಡೋದನ್ನ ನೋಡ್ತ ಕುಂತ. ಮೊದಲ ದಿನ ಬಹಳ ಜನ ಇದ್ದರು. ಯಾರೊ ದಮ್ಮಡಿ, ಯಾರೊ ಗಿಲ್ಕಿ, ಒಂದು ನಾಕ ಮಂದಿ ಜೋಡಿ ತಾಳಗಳನ್ನು ಕೈಯಾಗ ಹಿಡಿದಿದ್ದರು. ನಡಕ್ಕೆ ಭಜನಿ ಮಾಸ್ತರನ ಪಕ್ಕದಾಗ ಯಾವತ್ತು ಡಗ್ಗ ಹೊಡೆಯುವವ ಇರುತ್ತಿದ್ದ. ಒಂದುತಿಂಗಳು ಸತತವಾಗಿಯೇ ತಯಾರಿಮಾಡಲು ಬಗಲೇಶಿ ಹೇಳಿದ್ದ. ದೀಪಾವಳಿ ಅಮವಾಸ್ಯೆ ದಿನ ಜುಂಜಪ್ಪನ ಜಾತ್ರೆ. ಜುಂಜಪ್ಪ ಹಾವುಗಳ ಅದಿದೇವ, ಹಾವು, ಚೇಳು ಜರಿ ಮುಂತಾದ ವಿಷಜಂತುಗಳನ್ನು ನಿಗ್ರಹಿಸುವವನೆ ಜುಂಜಪ್ಪ. ಆತನ ಜಾತ್ರೆಗೆ ಹೋಗಿ ದೇವರೇ ವಿಷಜಂತುಗಳಿಂದ ನಮ್ಮನ್ನ ರಕ್ಷಿಸು ತಂದೆ, ಅಂತೇಳಿ ಬೇಡಿಕೊಂಡಿದ್ದೆ ಆದರೆ ಅವನು ಕನಸು ಮನಸ್ಸಿನಲ್ಲಿ ಹಾವು, ಚೇಳಿನ ಕಾಟ ಕೊಡುವುದಿಲ್ಲ ಎನ್ನುವುದು ಆ ಭಾಗದ ಸಾವಿರಾರು ಹಳ್ಳಿಗಳ ಜನರ ಅಂಬೋಣ. ಶಿವನ ಮೂರ್ತಿಗೆ ಹಾವಿನ ಉಡಿಗೆಯನ್ನ ತೊಡಿಸಿ ಬರುವ ಸಾವಿರಾರು ಭಕ್ತಾದಿಗಳಿಗೆ ಕಾಯಿ ನೈವೇದ್ಯ ಪೂಜೆ ಪುನಸ್ಕಾರ ನಡೆಯುತ್ತಲೇ ಇತ್ತು. ಇದರ ಬಾಬ್ತು ಲೆಕ್ಕ ಇಡುವವರು ಯಾರು? ಹಂಗಾಗಿ ನೂರಾರು ತಂಡಗಳು ಸ್ವಯಂ ಇಚ್ಛೆಯಿಂದ ಭಜನೆ ಮಾಡಲು ಬರುತ್ತಿದ್ದವು. ಕೆಲವರು ಗ್ರಾಮಫೋನುಗಳನ್ನು ಬಾಡಿಗೆ ಮಾಡಿಕೊಂಡು, ಅದರಲ್ಲಿ ಮುಖ್ಯ ಗಾಯಕ ಹಾಡಿದರೆ, ಅವನ ಜೊತೆಗೆ ತಮ್ಮ ಧ್ವನಿನೂ ಕೇಳಲಿ ಮಂದಿಗೆ ಅಂತ ಕೆಲವರು ಆಕ್ರಮಣ ಮಾಡುತ್ತಿದ್ದರು. ಅದು ಮುಂದೆ ಬರ್ತಾಬರ್ತಾ ಸ್ಪರ್ಧೆಯಾದಂತೆ ಆಯಿತು. ಭಜನೆ ಮಾಸ್ತರ ಹಾಡು ಬಿಟ್ಟು ಕುಂತಲೆ ಆಶು ಕವಿಯಂತೆ ಎದುರಾಳಿಯ ಮೇಲೆ ಕೆಟ್ಟಕೆಟ್ಟದಾಗಿ ಹಾಡುಕಟ್ಟಿ ಹಾಡತೊಡಗಿದರು ಮಾಸ್ತರ್‌ಗಳು ಇವನ ಮೇಲೆ ಅವನು, ಅವನ ಮೇಲೆ ಇವನು. ಮುಂದೆ ಕೈಯಾನ ತಾಳಗಳು ತುರಾಡ ತೊಡಗಿದವು. ಜುಂಜಪ್ಪನ ಜಾತ್ರೆಗೆ ಭಜನಾಮಂಡಳಿಗಳು ಬರೋದು ಕಡಿಮೆಯಾದವು. ರಾತ್ರಿ ಇಡೀ ನಿದ್ದಿ ಇಲ್ಲದೆ ಅಡೆತಡೆ ಇಲ್ಲದೆ ತಮ್ಮ ಪಾಡಿಗೆ ತಾವು ಹಾಡು ಹೇಳುತ್ತ, ತಾಳ ಹಾಕುತ್ತ, ಹಾಡಿನ ಏರಿಳಿತಕ್ಕೆ ಧ್ವನಿಯನ್ನು ಏರಿಳಿಸುತ್ತ ಅನುಭವ ಪಡೆಯುತ್ತಿದ್ದರು ಕೆಲವರು. ಧ್ವನಿಪಟಲವು ಒಮ್ಮೊಮ್ಮೆ ಬೇಸೂರಾಗಿ ಕರಿನಾಕಕ್ಕೆ ಹೋಗಿ ಕಿರಲು ಧನಿಯಾಗಿ ಹೋದ ಸ್ವರ ಕೆಳಗೆ ಇಳಿಯದೆ ಧ್ವನಿಪೆಟ್ಟಿಗೆಯೇ ಖರಾಬು ಆಗುತಿತ್ತು. ಪೇಟಿಮಾಸ್ತರ, ಹಸಿವೀಳ್ಯೆದೆಲೆ, ಬೆಲ್ಲಹಾಕಿ, ಹಾಡಿಹಾಡಿ ಬಿದ್ದ ಧ್ವನಿಯನ್ನು ಎಬ್ಬಿಸುವ ಪ್ರಯತ್ನದಲ್ಲಿದ್ದ ಕೆಲವರು ಕಂಠಮಟಾನು ಸರಾಯಿ ಕುಡಿದರು ಜುಪ್ ಅನ್ನದಂಗೆ ಅರೆಪ್ರಜ್ಞೆಯಲ್ಲೇ ಜುಕ್ಕು ಜುಲಮಿಯಿಂದ ಕಣ್ಣುಬಿಡುತ್ತ, ಹಾಡಿನ ಪಲ್ಲವಿ

ಮುಗಿದಾದ ಮೇಲೆ ಹಾಡುತ್ತ, ಮೇಳದ ಜೊತೆಗೆ, ತಾಳ, ಲಯವೆ ಇಲ್ಲದಂತೆ ಬೇಸೂರು ಹಾಡುತ್ತ ತಮ್ಮ ಇರುವಿಕೆಯನ್ನು ತೋರಿಸಲು ಹೋಗಿ ನಗೆ ಪಾಟಲಿಗೆ ಇಡಾಗುತ್ತಿದ್ದರು. ಹಾಡಿನ ನಡುವೆನೆ ಬಗಲೇಶಿ, "ಯಾವನ್ಲೆ ಅವನು, ಅಬ್ಬಾ ಎಂಥ ಕೆಟ್ಟಸ್ವರ" ಹಲ್ಲು ಕಡಿಯುತ್ತಿದ್ದ. ನಾನಣ್ಣೊ ಮುಂದಿನ ಡೆಬರ, ನನಗು ಹಾಡಬೇಕು ಅನ್ನಾಕ ಹತ್ಯತಿ ಹಾಡಾಕತ್ತಿನಿ ಅಂತ ಒಂದು ಸಲ ನಿದ್ದೆ ಹೆಚ್ಚಾಗಿ ಜೋಲಿ ಹೊಡೆದು ನೆಲಕ್ಕ ಉರುಳಿ ಎದ್ದವನೆ ಹಾಡಿನ ತುಂಡನ್ನ ಗುನಗುನಿಸ ತೊಡಗಿದ. ಬಗಲೇಶಿ ಒಮ್ಮೆ ನಕ್ಕು. "ಓ ನೀ ಏನು ಡೆಬರಣ್ಣ, ಎಯ್ ಹಾಡು ಮಹರಾಯ, ನಿನ್ನಂತಹ ಒಳ್ಳೆ ಹಾಡುಗಾರ ಯಾರಾದರ ಈ ಭೂಮಿ ಮ್ಯಾಲಾ" ಕುಡಿದದ್ದು ಇಳಿಯುವಂತೆ ಮರಹತ್ತಿಸಿದ "ಹಂಗ ಬಾ ದಾರಿಗೆ ನೀ ಏನಾರ ಅಂದೆ, ಇನ್ನ್ಯಾವತ್ತು ಬರಲ್ಲ ನಿನ್ನ ಭಜನ ಸಂಘದ ಕಡಿಗೆ ನಾನೆಂತ ನಿನ್ನ ಅಭಿಮಾನಿ? ಗೊತ್ತಲ್ಲ ಅವತ್ತು ಹೆಂಡದಂಗಡಿಯೊಳಗೆ" ಏನೊತಗಿಯಾಕ ಹೋದ. "ತಪ್ಪಾ ತಣ್ಣ ಕಾಲಿಗೆ ಬೀಳ್ತಿನಿ ಮಂದಿಯೊಳಗೆ ಮರ್ಯಾದಿ ತಗಿಬೇಡಾ" ಬಗಲೇಶಿ ಅಂಗಲಾಚಿದ ನಂತರ ಡೆಬರ ಗಪ್ಪಾದ.

ಭಜನೆ ಮಾಡುವುದನ್ನು ವೃತ್ತಿ ಮಾಡಿಕೊಂಡ ಮೇಲೆ ಬಗಲೇಶಿ ಸುತ್ತ ಹತ್ತಾರು ಹಳ್ಳಿ ಮಂದಿಗೆ ಚಿರಪರಿಚತನಾಗಿದ್ದ. ಇಂಗಳೂರು, ದುರ್ಗಾಪುರ, ದೇವನಹಳ್ಳಿ, ಸಂಕಾಪುರ, ತಂಬೆಲೂರುಗಳಲ್ಲಿ ಕನ್ನಡ ಮಂದಿ "ಆ ಲಮಾಣಿ ಬಗಲೇಶಿ ಏನ ಪದ ಹಾಡ್ತಾನಪ್ಪ. ಹಂಗ ಕುಂತಕೇಳಬೇಕು ಅನ್ಸುತ್ತೆ ನೋಡು" ಒಬ್ಬ ಅಂದ. "ಅವನ್ನ ಊರಿಗೆ ಕರೆಸಿ ಭಜನೆ ಮಾಡೋದಾರು ಹೇಳಿಸಿಕೊಳ್ಳಬೇಕು" ಮತ್ತೊಬ್ಬ ಹೇಳಿದ. ಹಗಲೆಲ್ಲಾ ಮೈ ಮುರಿದು ದುಡಿಯುವ ಮಂದಿ. ಅದಕ್ಕೆ ಪಡಬಾರದ ಪಡಿಪಾಟಲು ಪಡೊದ್ಯಾಕೆ ಅಂದ್ಕೊಂಡು, ಏನೊ, ಕೆಲವರು ಅಪೇಕ್ಷೆ ಪಟ್ಟು ಕರೆಸಿಕೊಂಡು ತಮ್ಮ ಕೈಚಳಕ ತೋರಿಸಿದರು ಏನೋ ಪ್ರಯೋಜನವಾಗಲಿಲ್ಲ. ವರ್ಷ ಆದರೂ ಒಬ್ಬರಿಗೆ ತಾಳ ಬರಲಲ್ಲ ರಾಗ ನೆನಪು ಉಳಿಯಲಿಲ್ಲಾ. ತಾಂಡದಲ್ಲಿ ಭಜನೆ ಮಾಡುವಾಗ ಹೋಗಿ ಕೂಡುತ್ತಿದ್ದ ಹುಲಿಯೂರನಿಗೆ ತಾಳಸಿಗಬೇಕಾರ ಆರುತಿಂಗಳು ಸರಿಯಾಗಿ ತಾಳ ಸೇರಿಸೋದಕ್ಕೆ ಇನ್ನೂ ಆರುತಿಂಗಳು ಬೇಕಾದವು. ಅಲ್ಲಿಯವರೆಗೆ ಪ್ರತಿದಿನ ಕಣ್ಣಿಗೆ ನಿದ್ದೆ ಬರೋಮಾಟಾನೂ ಹಾಡು ಹೇಳುವವರ ಹಿಂದೆ ಸ್ವರ ಸೇರಿಸುವ ಪ್ರಯತ್ನ ಮಾಡಿದ್ದ. ಸ್ವಲ್ಪ ದಿನದ ನಂತರ ಕೈಯಲ್ಲೆ ತಾಳ ಹಾಕಿದ. ಲಯ, ಸ್ವರ, ತಾಳ ಸೇರಿಸುವುದನ್ನು ಸೂಕ್ಷ್ಮವಾಗಿಯೇ ಗಮನಿಸಿದ. ಮುಂದೆ ತಾಂಡಕ್ಕೆ ಯಾವುದೇ ಸಂಕಟ ಬಂದರು ಹನುಮಂತದೇವರ ಪೋಟೊ ಹಿಡಿದುಕೊಂಡು ಬೀದಿಗಳಲ್ಲಿ ಭಜನೆಮಾಡುತ್ತಿದ್ದರು. ಆಗ ತನ್ನೆರಡು ಕೈಗಳಲ್ಲಿ ಹನುಮಪ್ಪನ ಪೋಟೊ ಹಿಡಿಯುತ್ತಿದ್ದದ್ದೆ ಹುಲಿಯೂರ. ಮಂದಿ ಅವನ ಕಾಲಿಗೆ ಚರಿಗೆ ತುಂಬ ನೀರು ಹಾಕಿ, ಎರಡು ಊದಿನ ಕಡ್ಡಿ ಹಚ್ಚಿ ಅವನ ಕೈಗೆ ಕೊಡುತ್ತಿದ್ದರು. ಅದನ್ನವನು ಸೂಕ್ಷ್ಮವಾಗಿಯೇ

ಹಿಡಿದುಕೊಳ್ಳುತ್ತಿದ್ದ. ಒಮ್ಮೆ ಮುಂಗಾರಿಗೆ ಬಿತ್ತಿದ ಜೋಳದ ದಂಟು ತೆನೆ ಹೊಡೆಯೊ ಸಮಯ ಮಳೆ ಹೋಗಿ ಬಿಡ್ತು. ಇಡಿ ತಾಂಡದ ಹಿರಿಯರು ಸೇರಿ ಮಡಿಯಲ್ಲಿದ್ದು ಕಟ್ಟುನಿಟ್ಟಿನ ಭಜನೆ ಮಾಡಿ ದೇವರಲ್ಲಿ ಪ್ರಾರ್ಥನೆ ಸಲ್ಲಿಸುವ ಯೋಜನೆ ಹಾಕಿದರು. ಮುಂಗಾರಿನ ಆರಂಭಕ್ಕೆ ಸುರಿದ ಅಡ್ಡಮಳೆಯಲ್ಲಿ ಕೆರೆಗೆ ಬಂದ ಅಲ್ಪಸ್ವಲ್ಪ ನೀರು ದನಕರುಗಳಿಗೆ ಕುಡಿಯುವುದಕ್ಕೇನೊ ಇತ್ತು. ಅದರಲ್ಲೆ ಮಂದಿ ಬಟ್ಟೆ ತೊಳೆಯೊದಕ್ಕೆ ಸ್ನಾನಕ್ಕೂ ಬಳಸುತ್ತಿದ್ದರು. ಭಜನೆ ನಡೆಯುವಾಗ ನಡಕ್ಕ ಎದ್ದು ಬಂದವರು ಬೀಡಿ ಸೇದುವ ಚಟ, ಅಡಿಕೆ ಹಾಕಿಕೊಳ್ಳಬೇಕು ಎನ್ನುವವರು, ತಿನ್ನಬೇಕು ಅನಿಸಿದರೆ ಅದನ್ನ ಸಂಪೂರ್ಣವಾಗಿ ತಡೆದುಕೊಳ್ಳಬೇಕಿತ್ತು. ಆದರೆ ಕಾಲ್ಮಡಿಯುವುದು, ಬಯಲಕಡೆಗೆ ಹೋಗುವುದು ಅನಿವಾರ್ಯ ಅವು ನಿಲ್ಲುತ್ತಿರಲಿಲ್ಲಾ, ಅವಕ್ಕಂತಎದ್ದು ಹೊರಗೆಬಂದವನು ಎಲ್ಲವನ್ನು ಮುಗಿಸಿ, ಒಂದು ಜೂರಿ ಬೀಡಿ ಸೇದಿ, ರಂಗವ್ವನ ಅಂಗಡಿಯೊಳಗೆ ಅರ್ಧ ಚಾ ಕುಡಿದು, ಕೆರೆಯಲ್ಲಿ ಮುಳುಗಿ ಬರಬೇಕಾಗಿತ್ತು. ಆದರೆ ತಾಂಡದ ವಿಷಯದಲ್ಲಿ ಮಾತ್ರ ಯಾವತ್ತು ದಡ್ಡತನ ತೋರಿಸುತ್ತಿರಲಿಲ್ಲ. ಭಜನೆ ಮಾಡುವುದರಿಂದ ಮಳೆ ಬರಲಿ ಬಿಡಲಿ ಜನರ ಮನಸ್ಸಿನೊಳಗೆ ಒಂದು ನಂಬಿಕೆ ಮೂಡಿತ್ತು. ಬಗಲೇಶಿ ಹೀಗೆ ಬೆಳೆದು ಭಜನೆ ಮಾಸ್ತರ ಆದ, ಹೆಚ್ಚಿನ ಸಮಯವನ್ನ ಅವನು ಮನೆಯಲ್ಲೇ ಕಳೆಯುತ್ತಿದ್ದ. ಅವನನ್ನ ಮದುವೆಯಾದ ತಪ್ಪಿಗೆ ಮಂಗಲಿ ಒಬ್ಬಳೆ ಕೂಲಿಮಾಡಿ ತಂದುಹಾಕಬೇಕು. ಮತ್ತ ಅವನ ಕುಡಿತಬೀಡಿ ಎಲ್ಲವನ್ನೂ ನೋಡಿಕೊಳ್ಳುತ್ತಿದ್ದಳು. ರಸಿಕ ಭಜನಿಮಾಸ್ತರ ಬಗಲೇಶಿ ವರ್ಷಕೆ ಒಂದರಂತೆ ಏಳೆಂಟು ಕೂಸುಗಳನ್ನು ಹುಟ್ಟಿಸಿದ್ದ. ಅವೆಲ್ಲವುಗಳ ಜವಾಬ್ದಾರಿಯನ್ನ ಮೆಚ್ಚಿ ಮದುವೆಯಾದ ತಪ್ಪಿಗೆ ಮಂಗಲಿ ಒಬ್ಬಳೆ ಹೊರಬೇಕಾಯ್ತು. ಏಳೆಂಟು ಹೆಣ್ಣು ಬೊಳಿಗಳು ಹುಟ್ಟಿದಕ್ಕೆ ಬೆಳೆದುದೊಡ್ಡವಾದ ಮೇಲೆ ಕೂಲಿಗೆ ಕರೆದುಕೊಂಡು ಹೋಗತೊಡಗಿದಳು. ಆದರೂ ಅವಳ ಹೆಣಗಾಟ ಮಾತ್ರ ಕಡಿಮೆಯಾಗಲೇ ಇಲ್ಲ.

ಬಗಲೇಶಿ ಮಾತ್ರ ಆರಕ್ಕೆ ಏರಲಿಲ್ಲಾ ಮೂರಕ್ಕೆ ಇಳಿಲಿಲ್ಲಾ, ಮೂರೊನಾಕು ಊರುಗಳಿಗೆ ಹೋಗಿ ಭಜನೆ ಕಲಿಸಿದ್ದನ್ನು ಬಿಟ್ಟರೆ ಏನು ಸಾಧನೆನೆನೂ ಮಾಡಲಿಲ್ಲ. ಒಂದು ರಂಟಿ ಹೊಡೆಯೋದು, ಎಡೆಕುಂಟಿ ಯಾವುದು ಅವನಿಗೆ ಒಲಿಯಲಿಲ್ಲ, ಭಜನೆ ಮಾಡುವುದು ರಾಗವಾಗಿ ಒಂದು ನಾಕು ಹಾಡುಗಳನ್ನು ಹೇಳುವುದು ಬಿಟ್ಟರೆ ಮತ್ತೇನನ್ನು ಮಾಡಲಿಲ್ಲ. ಖ್ಯಾಲಿಹುಟ್ಟುತಂದ್ರೆ ಮಧ್ಯಾಹ್ನನೆ ಹಾರ್ಮೋನಿಯಂತಗೊಂಡು ಬಾತಿಹಾಕುತ್ತ ಹಳೆಪದಗಳನ್ನು ಹಾಡತೊಡಗುತ್ತಿದ್ದ. ಮುಂದೆ ಮಾಧ್ಯಮಗಳು ಹುಟ್ಟಿಕೊಂಡ ಮೇಲೆ ಬಗಲೇಶಿಯ ಖಯಾಲಿ ಅವನೊಬ್ಬನಿಗೆ ಮಾತ್ರ ಸೀಮಿತವಾಯಿತು.

* * *

21. ಮಿಂಡಕ್‌ಮಾತ ಎನ್ನುವ ಮಳೆಗಾಗಿನ ಕಪ್ಪೆ ಆಟ

ಕೆರೆ ಬಿಟ್ಟರೆ ನೀರು ಎಲ್ಲೂ ಸಿಗುತ್ತಿರಲಿಲ್ಲಾ. ತಾಂಡದ ನಟ್ಟನಡಕ್ಕಿದ ಬಾವಿಯಲ್ಲಿ ನೀರು ಹುಲಿಯೂರನಿಗೆ ತಿಳುವಳಿಕೆ ಬರುವವರೆಗೆ ತುಂಬಿ ತುಳುಕಾಡಿತ್ತು. ಗುದ್ದ ಗೋಪುನಾಯ್ಕ ಹೊಲದಾಗ ಬಾವಿ ತೋಡಿಸಿ, ತೆಂಗಿನ ತೋಪು ಮಾಡಬೇಕಂತ ಸರ್ಕಾರಕ್ಕೆ ಅರ್ಜಿ ಹಾಕಿದ್ದ. ತಾಲೂಕು ತಹಸೀಲ್ದಾರನೆ ಬಂದು ಎಂಟುನೂರು ರಾಪಾಯಿ ರೊಕಡ ಕೊಟ್ಟು ಹೋಗಿದ್ದ. ಗುದ್ದ ಗೋಪುನಾಯ್ಕ, ಹತ್ತು ಆಳುಗಳನ್ನು ಹಚ್ಚಿ ನಲವತ್ತು ಅಡಿ ನೆಲ ಅಗೆಸಿದ. ಅವರಿಗೆ ಹೆಂಡಕ್ಕೆ ಕೂಲಿಗೆ ಅಂತ ಸ್ವಲ್ಪ ಕಾಸು ಕೊಟ್ಟ ಉಳದಿದ್ದನ ಮನಿ ಖರ್ಚಿಗೆಂತ ಬಳಸಿಕೊಂಡು ತಾನು ಹೆಂಡಕುಡಿದು ಗಡದ್ದಾಗಿ ಮಕ್ಕೊಂಡ. ನೆಲದಾಗ ನೀರು ಬರಲಿಲ್ಲಾ ಸರ್ಕಾರಕ್ಕೆ ಕಾಸು ಕಟ್ಟಲಿಲ್ಲಾ. ತಾಂಡದ ಮುಂದೆ ಪೂರ್ವ ದಿಕ್ಕಿಗೆ ದಿಮ್ಮನ ಕಾಡಿತ್ತು. ಮಂದಿ ಮನಸ್ಸಿನೊಳಗೆ ದುರಾಸೆ ಹುಟ್ಟಿ ಕಾಡನ್ನ ಕಡಿದು ಊಳೋದಕ್ಕೆ, ಹೊಲ ಮಾಡಿಕೊಂಡರು. ಅದರಲ್ಲಿ ಇವರು ಬಿತ್ತಿದ್ದೆ, ಬೆಳೆದದ್ದು ಮಾತ್ರ ಬಹಳ ಕಡಿಮೆ. ಕಾಡುಕಡಿಮೆಯಾಯಿತು. ಜನರಮನಸ್ಸಿನೊಳಗೆ ಲೋಭತನವು ಹೆಚ್ಚಾಗಿತ್ತು ಹಿರೆಪುಷ್ಯ, ಚಿಕ್ಕಪುಷ್ಯ, ಆದ್ರಿಮಳೆ, ಕೈಕೊಡೋದಕ್ಕೆ ಸುರು ಮಾಡಿದವು. ಸಾಲ ಸೂಲ ಮಾಡಿ ಬೀಜ ತಂದು, ತಮ್ಮ ತಿಪ್ಪೆಗಳಲ್ಲಿ ಶೇಖರಣೆ ಮಾಡಿದ್ದ ಕಾಂಪೊಷ್ಟ ಗೊಬ್ಬರ, ಸಾಧ್ಯವಾದರೆ ಕೆರೆ ಒಣಗಿದಾಗ ಹೊಲಗಳಿಂದ ತೇಲಿ ಬಂದಂತಹ ಮೆಕ್ಕಲು ಮಣ್ಣನ್ನು ಚಕ್ಕಡಿ ಬಂಡಿ ಕಟ್ಟಿ ಹೇರುತ್ತಿದ್ದರು. ಜೋಳ, ರಾಗಿಹುಟ್ಟಿ ಹೊಡಿಗೆ ಬಂದು ತೆನೆಬಿಳಹೊರಗೆ ಹಾಕುವ ಟೈಮಿಗೆ ಸರಿಯಾಗಿ ಮಳೆ ಕೈಕೊಡುತ್ತಿತ್ತು. ಹನುಮಂತ ದೇವರಿಗೆ ಪರುಮಾಡಿಸಿ, ಕುರು ಕೇಳಿಸಿದರು ಬಾರದಮಳೆಗಾಗಿ ಹುಡುಗರ ಗುಂಪೊಂದು ತಮ್ಮಪ್ರಯತ್ನ ಮಾಡುತ್ತಿತ್ತು. ಕಲ್ಲುಗಳ ಕೆಳಗೆ ಸಾಮಾನ್ಯವಾಗಿ ಸಿಗುವ ಎರಡು ಕಪ್ಪೆಗಳನ್ನು ಹಿಡಿದು ಅವು ಶ್ರವಿಸುವ ದ್ರಾವಣ ಮೈಮೇಲೆ ಬೀಳದಂತೆ ನೋಡಿಕೊಳ್ಳುತ್ತಿದ್ದರು. ಅದೇನಾದರೂ ಮೈಮೇಲೆ ಬಿದ್ದರೆ ಅಲ್ಲೆ ಚರ್ಮರೋಗ ಬರುತ್ತದೆ ಎನ್ನುವ ನಂಬಿಕೆ. ಹೀಗಾಗಿ ಬಹಳ ಎಚ್ಚರಿಕೆಯಿಂದ ಹಿಡಿದು ಅವುಗಳನ್ನ ಉಲ್ಟಾ ಮಾಡಿ ಒಂದು

ಕಟ್ಟಿಗೆಗೆ ಎರಡರ ಕಾಲುಗಳನ್ನು ಕಟ್ಟಿ, ಮನೆ ಮನೆಗೆ ಹೋಗಿ "ಮಿಂಡಕ್ ಮಾತ ಪಾನಿಬುಲಾತ" ಅಂತ ಬತ್ತಲೆಯಾದ ಇಬ್ಬರು ಹುಡುಗರು ಹಾಡು ಹೇಳಿ ಭಿಕ್ಷೆ ಕೇಳುವರು. ಇಡೀ ತಾಂಡದಲ್ಲಿ ಒಂದು ಮನೆ ಬಿಡದಂಗೆ ತಿರುಗಿ ಕಾಳು, ಹಿಟ್ಟನ್ನ ಒಟ್ಟು ಮಾಡಿ ಕಾಳನ್ನು ಅಂಗಡಿಗೆ ಹಾಕಿ ಹಿಟ್ಟಿನಿಂದ ರೊಟ್ಟಿ ಮಾಡಕೊಂಡು ತಿಂದು, ಮೈಗೆ ಮೆತ್ತಿಕೊಂಡಿದ್ದ ಕೀಲೆಣ್ಣೆ, ಕರಿಮಸಿಯನ್ನು ಹೊರಗೆ ಕೆರೆಯಲ್ಲಿ ನೀರಿದ್ದರೆ ತೊಳೆಯುವರು ಇಲ್ಲ ಕರಿಮಸಿ ಬಳಕ್ಕೊಂಡ ಬೆತ್ತಲೆ ಹುಡುಗರ ಹಿಂದಿರುವ ಹಿಂಡು ಮನೆಗೆ ಹೋಗಿ ಕೊಂಡಪಾನದಿಂದ ನೀರು ತಂದು, ಮಣ್ಣಿಂದ ಉಜ್ಜಿ ಕೀಲೆಣ್ಣೆಯ ಕಲೆ ತೆಗೆಯುತ್ತಿದ್ದರು. ಅವರೆ ಮಾಡಿದ ಕೈ ರೊಟ್ಟಿಯನ್ನು, ಯಾರದೋ ಮನೆಯಿಂದ ತಂದ ಹೆಂಚು ಮೂರು ಕಲ್ಲಿನ ಒಲೆಯ ಮೇಲಿಟ್ಟು ಬೇಯಿಸಿ, ಅವರೆ ತಂದಿದ್ದ ಮೆಣಸಿನಕಾಯಿ, ಬೆಳ್ಳುಳ್ಳಿ ಉಳ್ಳಗಡ್ಡಿಯನ್ನು ಜಜ್ಜಿ ಕಿವುಚಿಕೊಂಡು ತಿಂದು ನೀರು ಕುಡಿದರೆ ಮಳೆ ಬರೆಸುವ ಕಪ್ಪೆಗಳ ಮದುವೆ ಶಾಸ್ತ್ರ ಮುಗಿದಂತೆಯೇ. ಮುಂಜಾನೆ ಹೊತ್ತಾರೆ ಉಲ್ಟಾ ನೇತಾಡಿ ಒಂದೇ ಕಾಲಿನ ಮೇಲೆ ನೇತಾಡಿ ಯಮಯಾತನೆ ಅನುಭವಿಸಿದ ಕಪ್ಪೆಗಳು ಗುಟರ್, ಗುಟರ್ ಅಂತೇಳಿ ಗಂಗಮ್ಮಗೆ ಪ್ರಾರ್ಥನೆ ಮಾಡಿದ ಫಲವೊ ಏನೋ ಒಮ್ಮೊಮ್ಮೆ ಮಳೆ ಧಾರಾಕಾರವಾಗಿ ಬೀಳುತ್ತಿತ್ತು. ಒಮ್ಮೊಮ್ಮೆ ಮಳೆನೆಬರದಾಗ ರೈತರುಕಂಗಾಲಾಗಿ "ಎಂಥೆಂಥ ದೇವರುಗಳಿಂದಲೇ ಬರಿಸೋದಕ್ಕೆ ಆಗಲಿಲ್ಲಾ, ನೀವೇನು ಮಾಡಿರಿ ಬಿಡ್ರಲ್ಲಾ, ಮಕ್ಕಳು ದೇವರಿದ್ದಂಗೆ, ಆ ದೇವರಾದ್ರು ನಿಮ್ಮ ಮೊರೆಯನ್ನ ಕೇಳಬೇಕಿತ್ತು" ಅಂತ ಆ ಊರಿನಲ್ಲೇ ಹಿರಿಯ ಜ್ಞಾನಿಯಂತಿದ್ದ ಸರಮಾರಜ್ಜ ಸಮಾಧಾನಪಡಿಸುತ್ತಿದ್ದ. ಪ್ರತಿದಿನ ತಂದೆತಾಯಿ ಪಡುತ್ತಿದ್ದ ಸಂಕಟವನ್ನು ನೋಡಿನೋಡಿ ಮಕ್ಕಳು ಬೇಸರಗೊಂಡಿದ್ದರು. ಒಳ್ಳೆಯ ಆಷಾಡದ ಮಾಸದಲ್ಲೇ ಉಣ್ಣೋದಕ್ಕೆ ಕಾಳು ಉಳಿಯುತ್ತಿರಲಿಲ್ಲ. ದೊಡ್ಡ ದೊಡ್ಡ ಹಿಡುವಳಿದಾರರ ಮನೆಯಲ್ಲೇ ಐದಾರು ಚೀಲ ದಾಸ್ತಾನು ಸಿಗುವುದು ದುಸ್ತರವಾಗುತ್ತಿತ್ತು. ಭದ್ರನಾಯ್ಕನ ತಾಂಡದಲ್ಲಿ ಕಾಳು ಹಗೇವಿಗೆ, ಇಲ್ಲ ಪಣತದಲ್ಲಿ, ಅಥವಾ ಖಣಜದಲ್ಲಿ ಹಾಕಿಟ್ಟಿರೋ ಭೂಪತಿ ಯಾರು ಇಲ್ಲ. ಎಲ್ಲರ ಬಾಳೇವುಆಟಕ್ಕಾಟೇಯ. ಆವರ್ಷ ಬೆಳೆದಿದ್ದನ್ನ ಸಾಹುಕಾರನ ಸಾಲದ ಬಡ್ಡಿಗೆ ಕಟ್ಟಿ ಬೆಳೆದ ಅಸಲಿಗೆ ಸಾಬೂಬು ಹೇಳಿ, ನೂರೋ ನೂರೈವತ್ತು ಲೆಕ್ಕಕ್ಕೆ ಪಡೆದು ಸಂಜೆ ಹೆಂಡಕ್ಕೆ ನಾಕು ತುಂಡಿಗೆ ಆಯ್ತು ಅಂತ ಅಲ್ಪತೃಪ್ತರಾಗಿ ಅವನದ್ದು ನನಗಿಂತ ಹೆಚ್ಚು ಸಾಲ ಇದೆ, ಇವನದ್ದು ನನ್ನ ಹತ್ತಿರ ಪಟ್ಟಿಯಿದೆ ಎನ್ನುವ ತೃಪ್ತಿಯಲ್ಲೇ ಕಾಲ ಕಳೆಯುತ್ತ, ಕೈಕೊಡುವ ಮಳೆ, ಸರಿಯಾಗಿ ಬೆಳೆಯದ ಬೆಳೆ, ಬೆಳೆದರು ಸರಿಯಾಗಿ ಸಿಗದ ಬೆಲೆ ರೈತ ಕಂಗಾಲಾಗಿ ಹೋಗಿದ್ದ. ಆದರೆ ಅವನು ಬೆಳೆಯುತ್ತಿದ್ದ ಬೆಳೆಯಾದರೂ ಯಾವುದು? ಹೈಬ್ರೀಡ್ ಜೋಳ, ಬಿಟ್ಟರೆ ರಾಗಿ, ನವಣೆ, ಸಾಮೆ, ಅಷ್ಟೆ. ಯಾರ ಹೊಲದಲ್ಲಾದರೂ ನೋಡು ರಾಗಿ, ಜೋಳವೆ. ಇಳುವರಿಯು ಅಷ್ಟಕಷ್ಟೆ.

ಎಷ್ಟೋ ವರ್ಷಗಳವರೆಗೆ ತೊಪುನಾಯ್ಕ ಬೆಳೆದ ನೂರು ಚೀಲ ಹೈಬ್ರಿಡ್ ಜೋಳ ಐವತ್ತು ಚೀಲ ರಾಗಿ, ಸುತ್ತಮುತ್ತಲ ಹಳ್ಳಿಗೆ ದೊಡ್ಡ ದಾಖಲೆಯಾಗಿತ್ತು. ಅವನೆ ಮೊದಲು ದುರ್ಗಾಪುರದಲ್ಲಿದ್ದ ಎರಡು ಹಗೇವುಗಳಲ್ಲಿ ಜೋಳ ಹಾಕಲು ಭೂಮಿಯಿಂದ ಕಾಳುಗಳು ಸುರಕ್ಷವಾಗಿರುವಂತೆ ಮಾಡಲು ಸಜ್ಜಿದಂಟು ಜೋಳದ ದಂಟುಗಳಿಂದ ಪೆಂಟಿಗಳನ್ನಕಟ್ಟಿಸಿದ. ಭೂಮಿಯಿಂದಹಿಡಿದು ಹಗೇವಿನ ಬಾಯಿಯವರೆಗೆ ಪೆಂಟಿಗಳನ್ನು ಚೆನ್ನಾಗಿ ಜೋಡಿಸಿ ಜೋಳಸುರಿದರೆ ಮಳೆಗೆ ಗಾಳಿಗೆ ಸಂರಕ್ಷಣೆಯಾಗುವುದಲ್ಲದೆ ನುಸಿ ಹುಳುಗಳು ಆಗುತ್ತಿರಲಿಲ್ಲಾ. ಉಳಿದದ್ದನ್ನ ಹರ್ತಿಟಿಗೆ ಮಾರಿಕೊಳ್ಳುತ್ತಿದ್ದ. ಒಂದಿಷ್ಟು ಮನೆಯೊಳಗೆ ಊಟಕ್ಕೆ ಅಂತ ಹತ್ತು ಚೀಲಗಳ ಎರಡು ಕಣಜಗಳನ್ನು ನಿಲ್ಲಿಸಿ ಅವುಗಳಿಗೆ ದನದ ಸಗಣಿ ಬಳಸಿ ಒಳಗೆ ಬೇವಿನ ಎಲೆ ಹಾಕಿ, ಸಗಣಿಯಿಂದ ಮೆತ್ತು ಹಾಕಿಸಿದ್ದ. ಇಲಿಗಳು, ಕ್ರಿಮಿಕೀಟಗಳು ಮುಟ್ಟುತ್ತಿರಲಿಲ್ಲ.

* * *

22. ಐಮೊಮ ದಿಮ್ ಎನ್ನುವ ಅಲಾಯಿ ಹಬ್ಬ

ಹುಲಿಯೂರ ಮುಸ್ಲೀಮರ ಅಲಾಯಿ ಹಬ್ಬ ಬಂತೆಂದರೆ ಪೀರಲ ದೇವರ ಕೆಂಪು ಕರಿ, ಹಳದಿ ದಾರಗಳಿಂದ ಮಾಡಿದ ದಾರದ ಲಡಿಯನ್ನ ಗನಿಸಾಬಿ ಅಂಗಡಿಯಿಂದ ಅವನ ತಾಯಿ ಜಾನಿಬಾಯಿ ತಂದು ಅವನ ಕೊರಳಿಗೆ ಹಾಕುತ್ತಿದ್ದಳು. ಹುಲಿಯೂರನ ತಾಯಿತವರೂರಾದ ಹಂಡೆಕೊಪ್ಪಲುತಾಂಡದಲ್ಲಿ ಅವನ ಮುತ್ತಜ್ಜನ ಕಾಲದಿಂದಲೂ ಪೀರಲು ದೇವರನ್ನ ಕೂಡಿಸುವ ವಾಡಿಕೆ ಇತ್ತಂತೆ. ಹಂಗಾಗಿಯೇ ಅವರ ಮಾವನಿಗೆ ಮೌಲಾಲಿ ಅಂತ ಹೆಸರಿಟ್ಟಿದ್ದರು. ಅದು ಯಾಕೆ ಸಾಬರ ಹೆಸರಿಟ್ಟರು, ಅದರ ಹಿನ್ನೆಲೆ ಏನು? ಅವನ ಅಜ್ಜನ ಮನೆಯವರೆ ಏಕೆ ಈ ಆಚರಣೆ ಮಾಡುತ್ತಿದ್ದರು. ಹುಲಿಯೂರನಿಗೆ ಹೊಳೆದಿರಲಿಲ್ಲಾ, ಅವನು ತಾಯಿ ಬದುಕಿದ್ದಾಗ ಪ್ರಶ್ನೆ ಕೂಡ ಮಾಡಿರಲಿಲ್ಲ, ಜಾನಿಬಾಯಿಗೆ ಗೊತ್ತಿಲ್ಲದಿರಬಹುದು ಏಕೆಂದರೆ ಅವಳ ಮದುವೆಯಾದಾಗ ಅವಳು ಏಳು ವರ್ಷದ ದನ ಕಾಯುವ ಹುಡುಗಿ. ಮೊದಲನೆ ಮಗ ಜಾತು ಹುಟ್ಟಿದ್ದು ಋತುಮತಿಯಾಗಿ ಬರೊಬರಿ ಒಂದು ವರ್ಷಕ್ಕೆ ಅಂದರೆ ಅವಳಿಗೆ ಆವಾಗ ಹನ್ನೆರಡು. ಅದೇನೊ ಅಂತಾರಲ್ಲ "ಆಡೊ ಹುಡಿಗ್ಯಾಕೆ ಕಾಡೊ ಹುಡುಗರು" ಅನ್ನೊ ಕತೆ ಅವಳದ್ದು. ಯಾವ ರೀತಿ ರಿವಾಜು ತಿಳಿಯದ ವಯಸ್ಸು. ಏನಾದರೂ ತಿಳಿಯುವ ಪ್ರಯತ್ನ ಮಾಡುವಷ್ಟರಲ್ಲೇ ಸಂಸಾರದ ತಾಪತ್ರೇಯ ಹಂಗಾಗಿ ಅಲಾವಿಯ ಹಬ್ಬಕ್ಕೂ ಲಮಾಣಿ ಮಂದಿಗಿರುವ ಸಂಬಂಧ ರಹಸ್ಯವಾಗಿಯೇ ಉಳಿದಿತ್ತು.

ಆದರೆ ಪ್ರತಿ ಪೀರಲದೇವರಹಬ್ಬಕ್ಕೆ ರಾಠೋಡ್ ಕುಲದವರಾದ ಹುಲಿಯೂರ ಅವನ ತಮ್ಮಂದಿರು, ಅಣ್ಣಂದಿರು, ಚಿಕ್ಕಪ್ಪನ ಮಕ್ಕಳು, ಪೀರಲ ದೇವರ ದಾರವನ್ನ ಕೊರಳಿಗೆ ಹಾಕುತ್ತಿದ್ದರು. ಅವರ ತಾಂಡದಲ್ಲೆ ಕೆಲವರು ಪೀರಲು ದೇವರಿಗೆ ಯಾವಾಗ ಬೇಡಿಕೊಂಡಿದ್ದರೊ ಹುಲಿಯಂತೆ ಕುಣಿದು ಮನೆಮನೆಗೆ ಹೋಗಿ ಹಣ, ಕಾಳು ಬೇಡುತ್ತಿದ್ದರು. ಇಷ್ಟಂತು ದಿಟ ಹಂಡೆಕೊಪ್ಪಲಲ್ಲಿ ಯಾರ್‍ಯಾರು ಬೀಗತನ ಮಾಡಿದ್ದಾರೊ ಅವರು ಮಾತ್ರ ಪೀರಲುದೇವರ ಒಕ್ಕಲಾಗಿದ್ದರು. ಹಂಡೆಕೊಪ್ಪಲಲ್ಲಿ

ಮಾತ್ರ ಪೀರಲು ದೇವರ ಆಚರಣೆಯನ್ನು ಬಹಳ ವಿಶೇಷವಾಗಿಯೇ ಮಾಡುತ್ತಿದ್ದರು. ಒಂಭತ್ತು ದಿನದ ಆಚರಣೆಯಲ್ಲಿ ಕೆಲವರು ಸೋಂಬೇರಿಗಳು ಆಚರಣೆಯನ್ನು ತಮ್ಮ ಚಟಕ್ಕಾಗಿ ಬಳಸಿಕೊಳ್ಳುತ್ತಿದ್ದರು. ಅದರಲ್ಲಿ ಭದ್ರಾನಾಯ್ಕನ ತಾಂಡದ ಅರವತ್ತರ ಮುದುಕ ಬಂದಾನಿನಾಯ್ಕ. ಹುಟ್ಟಿದಾರಭ್ಯ ಏನು ಕೆಲಸ ಮಾಡದ ಈತ, ಏಡಿ ಹಿಡಿಯುವುದು, ಉಡಾ ಹಿಡಿದ, ಮುಂಗಸಿಹಿಡಿದ, ನರಿಹಿಡಿದ, ನಾಯಿಯನ್ನು ತಿಂದಾನ ಮುದಕ ಅಂತ ಮಂದಿ ಮಾತಾಡಿಕೊಳ್ಳುತ್ತಿದ್ದರು. ಕೆರಿ ಒಣಗಿದರೆ ಅವನಿಗೆ ಹಬ್ಬವೋ ಹಬ್ಬ. ದಡದಲ್ಲಿ ಒಣಗಿದ ನೆಲದಲ್ಲಿ ಮೊಟ್ಟೆ ಇಡುತ್ತಿದ್ದ ಆಮೆಗಳ ಭೇಟಿಯಾಡುವುದರಲ್ಲಿ ನಿಸ್ಸೀಮ. ಆಮೆಯ ಅರವತ್ತು ಮೊಟ್ಟೆಗಳನ್ನು ಎತ್ತಕೊಂಡು ಬಂದು ಸಗಣಿ ಮೆತ್ತಿ ಬೆಂಕಿಯಲ್ಲಿ ಬೇಸಿ ತಿನ್ನುವುದು ಬಹಳ ಇಷ್ಟ ಅವನಿಗೆ. ವಯಸ್ಸಾಗಿತ್ತು, ಕೆಲಸ ಬಗಿಸಿ ಇಲ್ಲ, ಕೈಯಾಗ ಕಾಸಿಲ್ಲ ಅದಕ್ಕೆ ಹೆಂಡ ಕುಡಿಯೋದಕ್ಕೆ ಬಣ್ಣವೆ ಇಲ್ಲದೆ ಅವನೆ ಯಾವುದೊ ಸಿಕ್ಕ ಬಣ್ಣ ಬಳದುಕೊಂಡು ಹುಲಿಯಾಗಿ, ನಾಕು ವರಸೆ ಹಾಕಿ ಪೈಸೆ ಪೈಸೆ ಜೋಡಿಸಿಕೊಂಡು ಶೇಂದಿಗೆ ಕಾಸು ಕೂಡಿಸಿ ಇಡುತ್ತಿದ್ದ. ಅವನ ಜೊತೆಗೆ ಜಾನಿಬಾಯಿ, “ಇಲ್ಲ ಮಗ ಇದು ನಮ್ಮ ಆಚರಣೆ, ನೀನು ಐಮೊಮ್‌ದಿಮ್ ಆಗಲೇಬೇಕು” ಹಠದಿಂದ ಹುಲಿಯೂರನನ್ನೇ ಮಾಡುತ್ತಿದ್ದಳು.

ರೊಟ್ಟಿ ಹಂಚನ್ನ ತಿರುಗಿಸಿ ಮಸಿಯನ್ನು ಮುಖದ ತುಂಬ ಬಳಿದುಕೊಂಡು ಮೈಮೇಲೆ ಗೆರೆಗಳನ್ನು ಮೂಢಿಸಿ ತಲೆಗೊಂದು ಭತ್ತದ ಹುಲ್ಲಿನ ಟೋಪಿ, ಕೈಯಾಗೊಂದು ಭತ್ತದ ಹುಲ್ಲಿಂದ ಮಾಡಿದ ಒಂದು ದಿಂಬು, ಅವನ ತಮ್ಮ ಜಗನ, ತಂಗಿ ಪೀಕಿಯರ ಬಗಲಿಗೆ ಜೋಳಿಗೆ ಹಾಕಿಸಿಕೊಂಡು ಪ್ರತಿ ಮನೆ ಬಾಗಿಲಿಗೆ ಹೋಗಿ “ಐಮೊಮ್ ದಿಮ್” ಅಂತ ಕೂಗಿ ನಿಲ್ಲುತ್ತಿದ್ದ. “ಯಾರು ನೀನ ಬಂದೆ ಇರು ಐಮೊಮ್ ದಿಮ್” ಅಂತ ಹೆಂಗಸರು ಒಳಗೆ ಹೋಗಿ ಒಂದೇ ಒಂದು ಹಿಡಿ ಜೋಳ ಮೂಲಿ ಮುಕ್ಕಟ್ಟಿಂದುತಂದು ಜೋಳದ ಜೋಳಿಗೆಯೊಳಗೆ ಸುರಿಯುತ್ತಿದ್ದಳು. ಅವಳ ತಲೆ ಮೇಲೆ ಭತ್ತದ ದಿಂಬಿನಿಂದ "ಐಮೊಮ್ ದಿಮ್" ಅಂತ ಹುಲಿಯೂರ ಒಮ್ಮೆ ಬಡಿಯುತ್ತಿದ್ದ.

ಅವನ ಬಿಂಗ್ಲಿಯ ಜೊತೆ ಆದಮೇಲಂತು ಅವಳ ವಠಾರದ ಕಡೆಗೆ ಹೋಗುವುದಕ್ಕೆ ಅವನಿಗೆ ನಾಚಿಕೆಯಾಗುತ್ತಿತ್ತು. ಆದರೆ ಅವಳ ವಠಾರದಲ್ಲೆ ಹತ್ತು ಮನೆಗಳಿದ್ದವು. “ಆ ಮೇಲಿನ ಓಣಿಗೆ ಹೋಗುವುದು ಬೇಡ ನಡಿರಿ” ಅಂತ ಜಗನನಿಗೆ ಹೇಳಿದ. “ಯಾಕಪ್ಪ ಹೋಗೋದಿಲ್ಲ, ಅಲ್ಲಿ ಅಂತಹದ್ದೇನೈತೆ, ನಾಯಿ ಇದ್ದರೆ ನಾನು ಹೆದರಿಸ್ತಿನಿ, ಹುಲಿಯೂರಣ್ಣ ನೀ ಮದಲು ನಡಿ” ಅಂದಳು ಪೀಕಿ. ಅವನ ಸಂಕಟ ಅವನಿಗೆ, “ಸುಮ್ಮನಿರೆ” ಜಗನ ನಡಕ್ಕ ಬಾಯಿ ಹಾಕಿದ. “ಲೇ ಬೇಕೂಪ ಬಾಯಿ ಮುಚ್ಚು ಇರೊ ಮಾನ ಮರ್ಯಾದಿ ತಗದೀಯ ಹುಡುಗಿ ಅಕಿ,

ಒಮ್ಮೆ ಅವಳಿಗೆ ಗೊತ್ತಾದರೆ ನನ್ನ ಬದಕು ನರಕ" ಅಂದವನೆ. "ಅಂತಹದ್ದೇನು ಇಲ್ಲ ಕಣೆ, ಆದ್ರೂ ಯಾಕೊ ಬೇಡ ಅನಿಸುತ್ತೆ" ಮುಚ್ಚಿಕೊಳ್ಳುವ ಪ್ರಯತ್ನದಲ್ಲಿದ್ದ ಹುಲಿಯೂರ "ಅಂತಹದ್ದೇನು ಇಲ್ಲ, ಅಲ್ಲೋ ಅಣ್ಣ, ನೀನು ಗಂಡು ಹುಡುಗ, ಒಳ್ಳೆ ಹುಡುಗಿಯರಂತೆ ನಾಚಿಕೊಳ್ಳೋದು ನೋಡಿದ್ರೆ. ಆ ಮೇಲಿನ ಓಣಿಯ ಯಾವುದಾದರೂ ಹುಡುಗಿ" ರಾಗ ಎಳೆದಳು ಪೀಕಿ, ಆ ವಯಸ್ಸಿಗೆ ಗಂಡು ಹುಡುಗರ ಮನಸ್ಥಿತಿಯನ್ನು ಅರ್ಥ ಮಾಡಿಕೊಂಡವಳಂತೆ ಮಾತಾಡಿದ್ದಳು. "ಅಯ್ಯೊ ನನ್ನ ತಾಯಿ, ಅಂತಹದ್ದೇನು ಇಲ್ಲ ಸುಮ್ಮನೆ ಬಾ ಹೋಗೋಣ ಆದರೆ, ಒಂದ ಮನೆಗೆ ಮಾತ್ರ ಬೇಡ ನೋಡು." ಕಡಕ್ಕಾಗಿ ಹೇಳಿದ "ಆಯ್ತು ನಡಿಯೊ ಆ ಮನಿಗ ಹೊಗೋದು ಬ್ಯಾಡ" ಜಗನ ಅವನ ಕಷ್ಟ ಅರ್ಥ ಮಾಡಿಕೊಂಡಿದ್ದೆ ಅವನ ಪರ ವಹಿಸಿದ್ದ. "ಯಾರ ಮನೆ? ಅಲ್ಲಿಗೆ ಯಾಕೆ ಬೇಡ? ಹೇಳ್ತಿಯ ಇಲ್ಲ." ಪೀಕಿ ಕಪಾಳಕ್ಕೆ ಚಟಾರಂತ ಹೊಡೆದಂಗೆ ಕೇಳಿದಳು. ಇಬ್ಬರು ತಡವರಿಸುತ್ತ, "ಯಾರ ಮನಿಗೂ ಇಲ್ಲ ನಡಿ ನಡಿ" ಅಂದವರೆ ಅವಳ ಮನೆಗೆ ಮೊದಲು ಹೊರಟರು. ಎದೆಯೊಳಗೆ ಡವಡವ ಅನ್ನುತ್ತಿತ್ತು "ಬಿಂಗ್ಲಿ ಏನಾರು ಬಂದ್ರೆ? ದೇವರೇ ಪೀರಲಪ್ಪ ಅವಳು ಬರದಂಗಿರಲಿ, ಅವಳಕ್ಕ ಶಾರಿಬಾಯಿ ಬರಬಾರದ" ಒಳಗೆ ಯೋಚನೆ ಮಾಡುತ್ತಿದ್ದ. ಆದರೆ ಅವನು ಅಂದುಕೊಂಡಂತೆ ಶಾರಿಬಾಯಿ ಬರಲಿಲ್ಲಾ ಬಿಂಗ್ಲಿಯ ತಂಗಿ ಸೈನಿ ಬರಲಿಲ್ಲ, ಬಿಂಗ್ಲಿನೆ ಖುದ್ದಾಗಿ ಹಾಜರಾಗಿದ್ಲು. "ಐಮೊಮ್ ದಿಮ್ಮ್" ಅಂತ ಬಾಯಿಗೆ ಬರಲೇ ಇಲ್ಲ. ಬಿಂಗ್ಲಿನೆ ಐಮೊಮ್ ದಿಮ್ ಹೇಳಿಸಿದಳು. ಪೀಕಿ ಹತ್ತಿರ ಹೋಗಿ "ಏನೆ ನಿಮ್ಮಣ್ಣ ನೋಡೋಕೆ ಒಳ್ಳೆ ಗೊಂಬೆಯಂಗೆ ಅವ್ನೆ, ಆದ್ರೆ ನಾಚಿಕೆ ಹುಡುಗಿಯರಂಗೆ" ಅಂದವಳೆ ಒಳಗೆ ಓಡಿದಳು. "ಲೇ ಅಣ್ಣ, ಬೇಕಿತ್ತ ನಿನಗೆ. ಅವಳೇನು ಹೇಳಿದಳು ಗೊತ್ತ" ಅವನ ತಲೆಯೊಳಗೆ ಹುಳಬಿಟ್ಟಳು. ಇನ್ನೂ ಚಿಕ್ಕವಳಾಗಿದ್ದರಿಂದ ಮತ್ತು ಹುಡುಗರ ನಡುವೆ ಸಲುಗೆಯಿಂದ ಬೆಳೆದಿದ್ದ ಪೀಕಿ ಅಣ್ಣಂದಿರಂದರೆ ಅಷ್ಟೆ ಹೆದರಿಕೆ, ಭಯ, ಸಲುಗೆ, ಸ್ನೇಹ, ಮಮತೆ ಪ್ರೀತಿಯಿಂದ ನಿರ್ಬಡೆಯಿಂದ ಇರೋದಕ್ಕೆ ಮನೆಯಲ್ಲಿ ಎಲ್ಲರು ಅವಳಿಗೆ ಅಂಜುತ್ತಿದ್ದರು, ಇಷ್ಟಪಡುತ್ತಿದ್ದರು "ಏನೆ ಹೇಳಿದಳು ಅವಳು, ದೇವರು ಬೇರೆ ಹೊತ್ಕೊಂಡಿನಿ, ಇಲ್ಲದಿದ್ರೆ" ಹಲ್ಲು ಕಡಿದ "ಎಯ್ ಗೊತ್ತೈತೆ ನಡಿ ನಿಂದ" ಜಗನು ತಾಳ ಹಾಕಿದ. ಮುಂದಿನ ಮನೆಯ ಬಿಂಗ್ಲಿ ಚಿಕ್ಕಪ್ಪನ ಮಗಳು ಸೋಮ್ಲಿ ಹೋಗೋದಕ್ಕೆ ಮುಂಚಿತವಾಗಿಯೇ ಹುಲಿಯೂರನ ಸಲುವಾಗಿ ಕಾದು ನಿಂತವಳಂತೆ. "ಬರಾಕೊ ಮಾವ" ಅಂದಳು. ಪೀಕಿ ಜಗನು ಅವನ ಮಾರಿನ ನೋಡಿದರು. ಅವನು ಮುಗಿಲು ನೋಡಿ "ಐಮೊಮ್ ದಿಮ್" ಅಂತ ಅವಳ ತಲೆಗೆರಡು ಏಟು ಹೊಡೆದು ಮುಂದಿನ ಮನೆಗೆ ನಡೆದ. ಅಷ್ಟ ಚಿಕ್ಕ ವಯಸ್ಸಿನಲ್ಲೇ ಎಲ್ಲಾ ಸೂಕ್ಷ್ಮತೆಯನ್ನು ಗಮನಿಸಿದ ಪೀಕಿ. "ಲೇ ಅಣ್ಣ ಮುಂದಿನ ಸರ್ತಿ ನೀ ದೇವರು ಅಂತ ಐಮೊಮ್ ದಿಮ್ ಆಗಬೇಡ. ಊರ ಹುಡುಗಿಯರೆಲ್ಲಾ ನಿನ್ನ ಕೈಯಾಗ ಹೊಡತ ತಿನ್ನಾಕ

ಮುಂಚೆನೆ ತಯಾರಾಗಿ ನಿಲ್ತಾರೊ ಯಪ್ಪ, ಇದೆಲ್ಲಾ ನಾನು ನೋಡೋದಿಲ್ಲ, ಮುಂದಿನ ಸಲ ನೀನು ಪೀರಲು ದೇವರ ದಾರ ಹಾಕಿದೆ, ನಿನ್ನ ಹಿಂದೆ ನಾ ಬರಾಕಿನೆ ಅಲ್ಲ. ಈಗ ನೀ ದೊಡ್ಡವನಾಗಿ ಏನಪ್ಪ ಮುಂದಿನ ಸಲ ಜಗನುಗಾರ ಆಗಲಿ, ಕೋಟಿಗಾರ ಆಗಲಿ ಹಾಕ್ಸು ನೀ ಮಾತ್ರ ಹಾಕಕ ಹೋಗಬೇಡ, ಮದ್ಲ ಹೇಳಿನೋಡು" ಎಚ್ಚರಿಸಿದಳು. "ಆಯ್ತು ಈ ಮಾತು ಅವ್ವಗ ಹೇಳು, ಸುಮ್ಮನೆ ನನ್ನ ಜೀವ ಹಿಂಡತಾಳ" ಅವನಿಗೂ ಬೇಡವಾಗಿತ್ತು ಅಂತ ತೋರಿಸಿಕೊಂಡ.

* * *

23. ಬನ್ನಿ ಹಂಚಿ ಬಂಗಾರ ಪಡೆದವರು

ಅಕ್ಟೋಬರ್ ದಸರಾದ ನವರಾತ್ರಿಯ ಕಳೆದ ನಂತರ ಒಂಭತ್ತನೇ ದಿನಕ್ಕೆ ಸರಿಯಾಗಿ ಪಾಂಡವರು ವನವಾಸ ಪೂರೈಸಿದ ಕೊನೆಯ ದಿನ. ಶಸ್ತ್ರಗಳನ್ನು ಪೂಜೆ ಮಾಡಲು ಬನ್ನಿ ಮರದಲ್ಲಿ ಕಟ್ಟಿಟ್ಟಿದ್ದ ಶಸ್ತ್ರಗಳನ್ನು ಬೃಹನ್ನಳೆಯ ಅವತಾರಿಯಾಗಿದ್ದ ಅರ್ಜುನ ಉತ್ತರಕುಮಾರನ ಸಾರಥಿಯಾಗಿ ಕೌರವರು ಸೆರೆಹಿಡಿದ ದನಕರುಗಳನ್ನ ಬಿಡಿಸಲು ಹೋದಾಗ ಕೌರವ ಸೈನ್ಯನೋಡಿ ಬಿಲ್ಲನ್ನು ಬಿಸಾಡಿ ಹೆದರಿ ಓಡಲುಮುಂದಾದ ಉತ್ತರಕುಮಾರನನ್ನ ಹಿಡಿದು ತಂದು ಯುದ್ಧ ಮಾಡಿಸುವುದು ಅಸಾಧ್ಯದ ಮಾತೆಸರಿ. ಕಡೆಗೆ ವಿಧಿಯಿಲ್ಲದೆ ಅರ್ಜುನ ಗಾಂಡೀವ ಹಿಡಿಯುವ ಸಮಯ ಬಂದಾಗ ಉತ್ತರನಿಗೆ ಬನ್ನಿಮರದ ಮೇಲಿರುವ ಅವರ ಶಸ್ತ್ರಾಸ್ತ್ರಗಳನ್ನು ತರಲು ಹೇಳುತ್ತಾನೆ. ಅಲ್ಲಿಗೆ ಹೋದ ಉತ್ತರಕುಮಾರನಿಗೆ ಅವು ಹೆಬ್ಬಾವಿನ ರೂಪದಲ್ಲಿ ಗೋಚರಿಸುತ್ತವೆ. ಆಗ ಅರ್ಜುನ ಯುಧಿಷ್ಠಿರನ ಸಹೋದರ ಅರ್ಜುನ ಬಂದಿರುವನು ಎಂದು ಹೇಳಿ ಭಕ್ತಿಯಿಂದ ನಮಿಸು ಎಂದಾಗ ಅವನ ಗಾಂಢೀವ ತನ್ನ ನಿಜರೂಪದಲ್ಲಿ ಕಾಣಿಸಿತು ಎನ್ನುವ ಕತೆಯನ್ನು ಯಾರಿಂದ ಕೇಳಿದ್ನೋ ಅರವತ್ತರ ಹಿರಿಯ ಸಂಪಂಗಿ ಅಜ್ಜ ಹೇಳಿದ್ದ. ಅದು ಮುಂದಿನ ಯುಗದಾಗ ಬನ್ನಿ ಮುಡಿ ಹಬ್ಬ ಎಂದೆ ಖ್ಯಾತಿ ಪಡೆದು ಹಳ್ಳಿಗಳಲ್ಲಿ ಆಚರಣೆಗೆ ಬಂತು ಎಂದು ಸಂಪಂಗಜ್ಜನ ಶಿಷ್ಯನಾದ ಹುಲಿಯೂರನ ಅಪ್ಪ ತೊಪುನಾಯ್ಕ ಹೇಳುತ್ತಿದ್ದ. ಅವತ್ತು ಹೊತ್ತಾರೆ ಹೊಲದಿಂದ ದೊಡ್ಡ ಜೋಳದ ದಂಟುಗಳನ್ನು, ಗುರೆಳ್ಳು ಗಿಡ, ಒಂದು ತೊಗರಿಮರ ಇತ್ಯಾದಿಗಳನ್ನು ಬೇರುಸಮೇತ ಕಿತ್ಕೊಂಡು ತರುತ್ತಿದ್ದರು. ಮಾಮೂಲಾಗಿಯೆ ಚೆಂಡು ಹೂವು ಯಥೇಚ್ಛವಾಗಿ ಅರಳಿರುತ್ತಿದ್ದರಿಂದ ಹೂವನ್ನ ಹರ್ಕೊಂಡು ಬಂದು ಮನೆಯ ಬಾಗಿಲಲ್ಲಿ ಜೋಳದ ದಂಟು, ಗುರೆಳ್ಳು ಗಿಡವನ್ನು ನಿಲ್ಲಿಸುತ್ತಿದ್ದರು. ನಿಲ್ಲಿಸುವುದರಿಂದ ಸಮೃದ್ಧಿ ಹೆಚ್ಚುತ್ತದೆ ಎನ್ನುವ ನಂಬಿಕೆ. ಸಂಜೆ ಮಕ್ಕರಗೌಳದ ಸಮಯದಾಗ ಭಜನೆ ಮಾಡುತ್ತ ದುರಗವ್ವನ ಗುಡಿ ಮುಂದಿರುವ ಬನ್ನಿಗಿಡಕ್ಕೆ ಹೋಗುತ್ತಿದ್ದರು. ಮರದ ಮೇಲೆ ತಾವು ತಂದಿದ್ದ ದಂಟುಗಳನ್ನು ಬೀಸಿ ಮೇಲೆ ಎಸೆದು ಅದೇ ಗಿಡದಿಂದ ಬನ್ನಿ ತಪ್ಪಲನ್ನ ಹರಿದು ಕಿಸೆ ತುಂಬುತ್ತಿದ್ದರು. ಹುಲಿಯೂರನಿಗೆ ಮರದ ಕೊಂಬೆ ಎಟಕದಕ್ಕೆ "ಯಾಕ ಹರಿತಿಯಾ ಈ ತಪ್ಲ,

ತಿನ್ನಾಕಬರುತ್ತ." ಕೇಳಿದ. ಸ್ವಲ್ಪ ಹೊತ್ತ ಆದ ಮೇಲೆ ಹರಿತಿರೋನು ಅವನಿಗಿಂತ ಡಬ್ಬಲ್ ಶ್ಯಾಣ ಇದ್ದ. "ಇಲ್ಲಾ ಸಾರಿಗ ಹಾಕಕ" ಅಂದ. ಹುಲಿಯೂರ ಇನ್ನು ಬುದ್ಧಿವಂತ. "ವಸಿ ನನಗೂ ಹರದ ಕೊಡು, ನನ್ನ ಕೈ ಎಟಿಕ್ತಾ ಇಲ್ಲ" ಅಂದು ಅವನ ಉತ್ತರಕ್ಕೆ ಕಾದ ನಿಂತ. ಹಿಡಿತುಂಬಿ ಹರಿದಿದ್ದ ಕೊಟ್ಟು ಈ ಹುಡುಗನ ತಾವ ಮಾತಾಡಕ ಆಗಲ್ಲ ಅಂದು ಮಕ ತಿರುಗಿಸಿ ಹರಿಯತೊಡಗಿದ.

ಅಲ್ಲಿಂದ ಬಂದವರೆ, ಹನುಮಪ್ಪನ ಗುಡಿಯೊಳಗೆ, ಗುದ್ದಮ್ಮಗೆ, ಸೇವಾಭಾಯನ ಗುಡಿಗೆ ಒಂದೊಂದು ಪತ್ರಿ ಇಟ್ಟು "ಈ ವರ್ಷ ಬಂಗಾರ ಮಾಡಪ್ಪ ತಂದೆ" ನಮಸ್ಕಾರ ಮಾಡಿಕೊಂಡೆ ಮನೆಗೆ ಹೋಗ ತೊಡಗಿದರು. ಹುಲಿಯೂರ ಅವನ ಅಣ್ಣಂದಿರಾದ ಜಾತು, ದಮ್ಮೂರ, ಧಣಿಯಾ ಗುಡಿಗೆ ಹೋದರಿಂದ ನೇರವಾಗಿ ಮನಿಗ ಬಂದು ಉಣ್ಣೋದಕ್ಕೂ ಮುಂಚೆ ಮನೆದೇವರಿಗೆ ಬನ್ನಿಇಟ್ಟು ನಮಸ್ಕಾರ ಮಾಡಿದ. ಅವನ ತಾಯಿ ಜಾನಿಬಾಯಿ ಕಾಲಿಗೆ ದೀರ್ಘದಂಡ ಹಾಕಿದ. ಅಪ್ಪನ ಕಾಲಿಗೆ ಬಿದ್ದ, ಅವನ್ನ ಬಿಟ್ಟು ಉಳಿದ ಎಲ್ಲಾ ದೊಡ್ಡೋರ ಕಾಲಿಗೆ ಬಿದ್ದು ನಮಸ್ಕಾರ ಮಾಡಿದ. ಜಗನು, ಕೋಟಿ, ಪೀಕಿ, ಪಾತ್ಲಿ, ಅವನ ಹಿಂದಿಂದ ಅವರ ಕಾಲಬೀಳೋದಕ್ಕೆ ಸುತ್ತುತ್ತಿದ್ದರು. "ಲೇ ಹುಲಿಯೂರ ಇರ್ಲಿ ತಗೊಳೊ, ನೀ ದೊಡ್ಡವನು ಅಂತ ಗೊತ್ತು" ಜಗನು ನೇರವಾಗೆ ತಡಾಯಿಸಿದ. "ಲೇ ನಾ ಹೇಳಲಿಲ್ಲಾ, ನಾನೇನು ಮುದುಕನಾ ಕಾಲಿಗೆ ಬಿಳಿಸಿಕೊಳ್ಳೋದಕ್ಕೆ ಮುಚ್ಕೊಂಡು ಸುಮ್ಮನಿದ್ದೆ ಬದಕ್ತಿಯಾ" ಆವಾಜ್ ಹಾಕಿಂದೆ ಸುಮ್ಮನಾಗಿದ್ದ. ತಟ್ಟೆ ತುಂಬ ಹುಗ್ಗಿ ಉಂಡ ಮೇಲೆ ಇಡಿ ಸಣ್ಣ ಹುಡುಗರ ದಂಡೆ ಊರೊಳಗೆ ಬನ್ನಿ ಕೊಡೋದಕ್ಕೆ ಹೊಂಟಿತ್ತು. ಹುಲಿಯೂರ, ಜಗನ ಅವರ ಬಟಾಲಿಯನ್, "ನಾವು ಎಡಗೈ ಕಡೆಯಿಂದ ಹೋಗಾನು ಅಂದ್ರೆ ಎಲ್ಲಾ ಮನೆಗಳನ್ನು ಮುಗಿಸೋದಕ್ಕೆ ಆಗುತ್ತೆ" ಅನ್ನೊದು ಕೋಟಿಯವಾದ "ಆಯ್ತು ನಡಿ ನಿ ಏನಂತಿ ಅದೆ ಸರಿ" ಅಂದವರೆ ಸೀದ ಹೆಂಡದ ಸುಕ್ಲಾನಾಯ್ಕ ಮನೆಯಲ್ಲಿದ್ದ ಅವನ ಕಾಲಿಗೆ ಬಿದ್ದು ಅವನ ಹೆಂಡತಿ ಜುಮಾಣಿ ಕಾಲಿಗೆ ಬಿದ್ದ. "ಜುಮಾಣಿ ಬಾಯಿ ಬನ್ನಿ ತಗೊಂಡು ಬಂಗಾರದಂಗ ಇರು" ಅಂತ ಬನ್ನಿ ಕೊಟ್ಟು ಮುಂದಿನ ಉಪ್ಪಾರ ವಠಾರ ಪ್ರವೇಶ ಮಾಡಿದರು. ಅಲ್ಲೆ ಇದ ಸಾಲಿಮಾಸ್ತರ ಮನೆ, ಹಜಮಾರ ಮನೆ, ಸಾಬರ ಮನೆಗಳನ್ನು ಮುಗಿಸಿ, ಹಿಂದಿನ ಓಣ ತಡಾದು ಮೇಲಿನ ಓಣಿಗೆ ಬಂದರು. "ಹುಲಿಯೂರಣ್ಣ, ಹೂಂ ಬಾರಪ್ಪ, ಇಲ್ಲ ನೀ ಮದಲು ಹೋಗಬೇಕು. ಯಾಕಂದಿ ನಿನಗ ಬೇಕಾದವರು ಬಹಳ ಮಂದಿ ಅದಾರಿಲ್ಲ" ಪೀಕಿ ಕಾಡಿಸಿದಳು. "ಬಾಯಿ ಮುಚ್ಕೊಂಡು ಸುಮ್ಮನೆ ನಡಿತಿಯ, ಹಲ್ಲು ಉದುರಿಸಲ" ಗದರಿದ. "ಏನೋ ನಿನ ಬಗ್ಗೆ ಕೆಲವರು ಹೇಳೋದು ಹೇಳಿದೆ ತಪ್ಪಾದರ ಕ್ಷಮಿಸಪ್ಪೊ" ಕಾಲ ಎಳದಳು. "ಮಹಾತಾಯಿ ನೀ ಯಾಕೆ ಸಣ್ಣವಳಾಗಿ ಹುಟ್ಟಿದೆಯೊ ಗೊತ್ತಿಲ್ಲ, ಒಂದೊಂದು ಮಾತು ದೊಡ್ಡವರಿಗಿಂತ ಕಮ್ಮಿ ಇಲ್ಲ, ಸುಮ್ಮನೆ ನಡಿ ನನಗೆ ನಿದ್ದೆ

ಬರಾಕ ಹತ್ತೈತಿ." ಅಂದವನೆ ತಾನೆ ಮುಂದೆ ಹೋಗಿ ಬಿಂಗ್ಲಿ ಅಪ್ಪ ಸಾಮು ಮಾಮಗೆ ಕೊಡೊದಕ್ಕೆ ಹೋಗಬೇಕು ಮುಂದೆ ಅವಳು ಅಚಾನಕ್ ಸಿಕ್ಕು ಬಂದು "ಲೇ ನನಗ ಕೊಟ್ಟು ಕಾಲಿಗೆ ಬಿಳು" ಕಾಡ್ಸಿದಳು. "ಆಯ್ತು ನೀ ನನ್ನ ಕಾಲಿಗೆ ಬೀಳು, ನಾನು ಬಿಳ್ತಿನಿ" ಅಂದ ಹುಲಿಯೂರ. "ಬನ್ನಿ ತಗೊಂಡು ಬಂಗಾರದಂಗಿರು" ಎಲ್ಲರಿಗಿಂತ ಮೊದಲು ಅವನಿಗೆ ಕೊಟ್ಟು ನಗುತ್ತ ಮನೆ ಒಳಗೆ ಓಡಿದಳು ಬಿಂಗ್ಲಿ. ಹುಲಿಯೂರ ಹಿಂದೆ ಹಿಂಡಿರೋದನ್ನ ಖಾತ್ರಿ ಪಡಿಸಿಕೊಂಡು ನಕ್ಕರು ನಗದಂತೆ ತೋರಿಸಿಕೊಳ್ಳುವ ಪ್ರಯತ್ನ ಮಾಡಿದ. "ಅಣ್ಣಿ ಇರ್ಲ ಹೂಂ" ಅಂದಳು ಪೀಕಿ. "ಸುಮ್ಮನೆ ನಡಿ" ಅಂದವನೆ ಮುಂದಿನ ನಾಕ ಮನಿಗಳಿಗೆ ಹೊರಟರು. "ಅರೆ ಯಾರೊ ಮಕ್ಕೊಂಡಾರಲಪ್ಪ, ಸಾಣು ಮಾಮ ಇಷ್ಟ ಗಡಾನೆ ಮಕ್ಕೊಂಡು ಬಿಟ್ಯ. ಇವತ್ತು ನಾವು ಬನ್ನಿ ಕೊಡಾಕ ಬರ್ತಿವಿ ಅಂತ ತಿಳಿಯೋದ ಬೇಡಾ ನೀನು" ಸಣ್ಣವನಾದ ಕೋಟಿ ಹೇಳಿದ. "ಯಾರು, ಅರೆ ಬರ್ರಲೇ ಮಕ್ಕಳ್ರ ಹಂಗೆ ಸೊಂಟ ನೋವು ಈಗ ಅಡ್ಡಾಗಿದ್ದೆ" ಅಂತ ಬಿಂಗ್ಲಿಯ ಮತ್ತೊಬ್ಬ ದೊಡ್ಡಪ್ಪ ಮುಲಕಾಡುತ್ತಲೇ ಮೇಲೆದ್ದ. "ಇವನಿಗೆ ಪಾಡು ಆಶೀರ್ವಾದ ಮಾಡಪ್ಪ" ಜಗನ, ಹುಲಿಯೂರ ಮುಂದೆ ಬಂದಾಗ ಹೇಳಿದ. "ಏನ ಆಶೀರ್ವಾದ ಮಾಡಲಿ, ನೀನ ಹೇಳಪ್ಪ" ಅವನಿಗೆ ಕೇಳಿದ ಮುದುಕ. "ಇನ್ನೇನು, ನೂರ ವರ್ಷ ಬಾಳಪ್ಪ ಅಳಿಮಯ್ಯ ಅನ್ನು" ಅಂದ ನಗತೊಡಗಿದ. ಹುಲಿಯೂರನ ಮೈ ಉರಿಯತೊಡಗಿತ್ತು. ಪಿತ್ತ ನೆತ್ತಿಗೇರಿತ್ತು. "ಚೋಟುದ್ದ ಅದಾರ, ನನ್ನ ಒಳ್ಳೆ ಗೋಳು ಹೊಕ್ಕೊಳಾಕ ಹತ್ಯರಲ್ಲ ನಡೆಯಲೆ ನಿನಗೆ ಕಾರಬಾರಿ ಮನಿ ದಾಟಲಿ ಮಾಡ್ತಿನಿ" ಅಂದ್ಕೊಂತ ಮುದುಕನಿಗೆ ಬನ್ನಿ ಕೊಟ್ಟ ಮುಂದೆ ಬಂದ. ಜಗನ ಪೀಕಿ, ಕೋಟಿ, ಪಾತ್ಲಿ ಗಪ್‌ಚುಪ್ ಆದ್ರು. "ಅಲ್ಲೋ ದೊಡ್ಡ ಮನುಷ್ಯ, ಆ ಮುದಿಯನಿಗೆ ಹಿಂಗ ಹೇಳೊ ಅವಶ್ಯಕತೆ ಇತ್ತ. ಇದೆ ಲಾಸ್ಟ್ ವಾರ್ನಿಂಗ್ ಹಿಂಗೇನಾದರು ಮಾತಾಡಿದ್ರಿ ಹಲ್ಲು ಉದುರಿಸಿಬಿಡ್ತಿನಿ" ಬಾಯಿ ಜೋರು ಮಾಡಿದ. "ಗೊತ್ತಾತು ಬಿಡಪ್ಪ, ನೀ ಯಾಕ ನಮ್ಮ ಮೇಲೆ ಹಿಂಗೆ ಹರಿಹಾಯಾಕ ಹತ್ತಿದಿಯಂತ." ಪೀಕಿ ಸರಿಯಾಗೆ ಇಟ್ಟಳು. "ಅಂದ್ರೆ ಏನರ್ಥ" ಕೇಳಿದ. "ಇನ್ನೇನು ಅವತ್ತು ಅಕಿ ಏನಂದ್ಲು ಅಂತ ಎಲ್ಲರ ಮುಂದ ಹೇಳಲೇನು" ಆಟ ಆಡಿಸೋದಕ್ಕೆ ಪ್ರಯತ್ನ ಪಟ್ಟಳು. "ನೋಡವ್ವ ದೊಡವ್ವ, ಭಾರಿ ದೊಡ್ಡಾಕಿ ನೀನು ಹಿಂಗ ನನ್ನ ಮರ್ಜಿ ನೋಡಬೇಡ" ದಬಾಯಿಸಿದ. ಅಷ್ಟೊತ್ತಿಗೆ ಮನೆ ಬಂತು, ಹೊತ್ತು ಬಹಳ ಆಗಿದ್ದರಿಂದ ಭಜನೆಯವರ ಕಡೆಗೆ ತಿರುಗಿಯೂ ನೋಡದೆ ಹೊರಗೆ ಬಿಸಾಕಿಹೋಗಿದ್ದ ಗೋಣಿತಟ್ಟುಗಳನ್ನು ಹಾಸಿಕೊಂಡು ತಮ್ಮ ಜಾಗಗಳಲ್ಲಿ ಅಡ್ಡಾದರು.

* * *

24. ಪೂಜಾರಿಯ ದೆವ್ವದಾಟವೊ

ಹುಲಿಯೂರ ಆವಾಗಲೆ ಪದವಿಯ ತರಗತಿಯಲ್ಲಿದ್ದ. ಹಂಗಾಗಿ ತಾಂಡನಾರು ಉದ್ದಾರ ಆಗಲಿ ಅಂತಂದು ಮಧ್ಯಪಾನದ ವಿರುದ್ಧ ಆಂದೋಲನವನ್ನೆ ಮಾಡಿದ್ದ. ಅವನಿಗಿಂತ ಸಣ್ಣವರ ಒಂದು ಗುಂಪು ಊರಲ್ಲಿ ಮಂದಿ ಸರಾಯಿ ಕುಡಿದು ಹಾಳಾಗುತ್ತಿದ್ದಾರೆ. ಹೆಂಗಾದರು ಮಾಡಿ ತಾಂಡದಿಂದ ಸರಾಯಿ ಓಡಿಸಬೇಕೆಂದು ಯೋಜನೆ ರೂಪಿಸಿ ಅವರ ತಾಂಡದಿಂದ ಓಡಿಸಿದ್ದರು. ಆದರೆ ಕುಡಿಯುವ ಚಟ ಇರುವವರು ಇವರೇನೊ ದೊಡ್ಡ ಕ್ರಾಂತಿ ಮಾಡಿದರು ಅಂತ ಬಿಟ್ಟಾರೆ? ಮನೆಯೊಳಗಿನ ಜೋಳ, ರಾಗಿ, ಅಕ್ಕಡಿ ಕಾಳು ಬಿಡದಂಗೆ ಸಿಕ್ಕಷ್ಟಕ್ಕೆ ಮಾರಿ ಹೆಂಡ ಕುಡಿಯುವ ಹೆಂಗಸರ ಗತಿ? ಸಂಜೆಯಾಗುತ್ತಿದ್ದಂತೆ ಚಟದಿಂದ ಚಡಪಡಿಸುವ ಗಂಡಸರ ಪರಿಸ್ಥಿತಿ? ಈ ಊರಾಗ ಇರ್ಲಿಕ್ರೇನು ಬೇರೆ ಊರುಗಳು ಇಲ್ಲವೆ? ಹಠಮಾರಿ ಚಟಗಾರರ ವಾದ. ಬೇಸಿಗೆಯ ಸಮಯ, ಊರೊಳಗೆ ಗ್ರಾಮ ಪಂಚಾಯ್ತಿ ಚುನಾವಣೆಗಳು ನಡೆದು ತಾಂಡಕೆ ತಾಂಡನೆ ಮೂರ್‍ನಾಕ ಪಾರ್ಟಿಗಳಲ್ಲಿ ಹಂಚಿಹೋಗಿ, ನಾನು ಆ ಪಾರ್ಟಿ, ನಾನು ಈ ಪಾರ್ಟಿ ಅಂತ ಮಂದಿ ಮನಸ್ಸಿನೊಳಗೆ ಬೇಧ ಹುಟ್ಟಕೊಂಡಿತ್ತು. ಹಿಂದೆ ಯಾವ ಪಾರ್ಟಿಯವರೆ ಬರಲಿ ಯಾರದೊ ಒಬ್ಬರ ಕೈಗೆ ಕಾಸು ಕೊಟ್ಟು ಮಂದಿಗೆ ಹಂಚಿ ಓಟು ಹಾಕಿಸೊ ಜವಾಬ್ದಾರಿ ಕೊಟ್ಟು ಹೋಗುತ್ತಿದ್ದರು. ಆದರೆ ಈಗ ಸ್ಥಿತಿ ಚಿಂತಾಜನಕವಾಗಿತ್ತು. ತಂದೆ ಮಗನ ಮಾತು ಕೇಳದಾಗಿದ್ದ ಹೆಂಡತಿ ಗಂಡನ ಮಾತೆ ಕೇಳುವ ಮನಸ್ಥಿತಿಯಲ್ಲಿರಲಿಲ್ಲ. ಅಂತು ಒಬ್ಬೊಬ್ಬ ಕುಲಸ್ಥರು ಒಂದೊಂದು ಕಡೆಗೆ ಹರಿದು ಹಂಚಿಹೋಗಿದ್ದರು. ಮದಲೆ ದೆವ್ವ, ಭೂತ, ಪ್ರೇತಗಳ ಕತೆಗಳು ಊರೊಳಗೆ ಜನಜನಿತವಾಗಿದ್ದವು. ಪ್ರತಿಯೊಬ್ಬರು ದೆವ್ವವನ್ನ ಬಹಳ ಹತ್ತಿರದಿಂದಲೆ ನೋಡಿರುವ ಹಾಗೆ ರೋಚಕವಾಗಿ ಕತೆ ಹೇಳುವವರೆ. ಆದರೆ ರಾತ್ರಿ ಇಡಿ ಹೊಲಮನಿ ಅಂತ ಸುತ್ತಾಡುತ್ತಿದ್ದ ಚಪ್ಪಾಲಿ, ಚಿಮಣಿಗೆ ಇವು ಕಾಣಲಿಲ್ಲವೆ? ಹುಲಿಯೂರ ಕುತೂಹಲದಿಂದ ಹುಬ್ಬು ಏರಿಸಿದ್ದ. "ಎಲ್ಲರ ಕಣ್ಣಿಗೆ ಕಂಡಿದ್ದರೆ ಜಗತ್ತು ಹಿಂಗಿರುತ್ತಿತ್ತಾ. ಅವು ರಾವುಗಣ್ಣಿರೊರಿಗೆ ಮಾತ್ರ

ಕಾಣ್ತಿರುತ್ತವೆ. ಈಗ ರಾತ್ರಿ ಹೊತ್ತಿನೊಳಗೆ ನಾಯಿಗಳು ಯಾಕೆ ಅಳುತ್ತಿರುತ್ತವೆ ಹೇಳು? ಅವುಗಳಿಗೆ ದೆವ್ವ ಕಂಡಿರುತ್ತೆ." ಜಗನನ ವಾದ. "ಅವಕ್ಕೆ ದೆವ್ವ ಕಂಡಿದ್ದನ್ನ ಅವು ಬಂದು ನಿನಗೆ ಹೇಳಿದ್ವಲ. ಸುಳ್ಳೆ ಏನೇನೊ ಹೇಳಬೇಡ ಸಣ್ಣ ಹುಡುಗ್ರು ಅದಾವ 'ರಾತ್ರಿ ಹಾಸಗಿಯೊಳಗ ಉಚ್ಚೆ ಹೊಯ್ಯೊಡಾರು" ಅಂತ ಗದರಿಸಿದ. "ನೀನು ಧಾರವಾಡದಾಗ ಓದಾಕಹತ್ತಿ ತಮ್ಮ ನಿನಗೆ ಹಳ್ಳಿಯೊಳಗ ನಡಿಯೋದು ಏನಗೊತ್ತೈತೆ? ಮನ್ನೆ ಆ ಕುಣಬಿ ಅವರಜ್ಜ ಯಂಕಂಚಿ ಅಣಿ ಮೇಗಳ ಹೊಲದಿಂದ ಬರಾಕ ಹತ್ತಿದ್ನಂತೆ. ಅವನ ಕಾಲಗ ಆನಿ ಅದಾವ, ಕಲ್ಲು ಚುಚ್ಚೋದಕ್ಕೆ ಮೀಟ್ಕೊಂತ ಬರೋದ್ರಾಗ ಕತ್ತಲು ಆಗಿಬಿಡ್ತಿಂತೆ. ಹಂಗೆ ಕಾಣುನ ಹೊಲ, ಕಮರಿಹೊಲ ದಾಟಿ ಬರೋದರೊಳಗೆ ಪೂರ ಕತ್ತಲಾತು. ಪಾಪ ಮುದುಕ ಕತ್ತಲಾತಂತ ದೊಡ್ಡ ಹೆಜ್ಜೆ ಇಡಾಕ ಹೋಗಿ ಮುಗ್ಗರಿಸಿ ಮುಂದ ಬಿದ್ರ ತಲಿ ಗೂಟಗಲ್ಲಿಗೆ ತಾಗಿ ಹಣಿ ಮೇಲೆ ಬುಗಟೆ ಬರುಬರುಂತ ಉಬ್ಬಿಬಿಡ್ತು ಆದರೂ ವಯಸ್ಸಾದವನಲ್ವಾ ಯಂಕಂಚಿ, ಇಂಥಹ ಎಷ್ಟೊ ಘಟನೆಗಳನ್ನು ನೋಡಿದವನು ಹೆದರಿಕೆ ಅನ್ನೋದು ಅವನ ಜೀವಮಾನದಾಗ ಕಂಡರಿಯದವನು. ಹಿಂದಕ್ಕ ನೆಲಗಡಲೆ ಬಿತ್ತುತ್ತಿದ್ದಾಗ ಶೇಂಗ ಕಿತ್ತು ರಾಶಿ ಹಾಕಿದರೆ, ಕಳ್ಳರು ಹೊತ್ಕೊಂಡು ಹೋದಾರು ಅಂತೇಳಿ ರಾತ್ರೆಲ್ಲಾ ಒಬ್ಬನೆ ಕಾಯುತ್ತಿದ್ದನಂತೆ. ಹಂಗಾಗಿ ಕತ್ತಲೇನು ಹೊಸದಲ್ಲ. ಯಂಕಂಚಿ ಎದ್ದವನೆ ಪಂಚೆ ಕೊಡವಿ ಥು ನಿನ್ನವ್ವನ ಭ್ರಮೆಯೆ ಅಂದವನೆ ಮುಂದಕ್ಕೆ ಆ ಕಾಣುನ ಹೊಲದ ಅಗಸಿಪೆಳಿಗೆ ಬಂದ್ನಂತ. ಯಾರದೊ ಕುರಿಮರಿ ಮೇಯುತ್ತಿರೊ ಹಂಗೆ ಕಾಣತಂತೆ. "ಅಯ್ಯೊ ಪಾಪ ಯಾರದೊ ಮರಿ ಇಲ್ಲೇ ಮೇಯುತ್ತಿದೆಯಲ್ಲ, ರಾತ್ರಿ ಕೌಳದಾಗ ತೋಳಗಿಳ ತಿಂದೀತು ಅಂತಂದು ಬಾ ಠರ್‍ರ್, ಬಾ, ಬಾ ಅಂತ ಕರದ. ಕುರಿಮರಿನೂ ಬ್ಯಾ" ಅಂತಂದು ಸದ್ದು ಮಾಡ್ತಾ ಬಂತತಂತೆ. ಅಯ್ಯೊ ಪಾಪ ಅಂದವನೆ ಹಿಡ್ಕೊಂಡು ಕತ್ತಿನ ಮೇಲೆ ಇಟ್ಕೊಂಡು ಕಮರಿ ಹೊಲ ತಡಾದು ಕೋಡಿಸರದ ಕೇದಿಗೆ ಪೆಳಿ ಹತ್ರ ಬರೋದಕ್ಕೊ ಹೊತ್ಕೊಂಡಿರೋದು ಭಾರ ಅನಿಸಿ ಬೀಳುವಂತೆ ಜೋಲಿ ಹೋಯಿತಂತೆ, ಅರೆ ಇವನವ್ವನ ಇಲ್ಲಿವರಿಗೆ ಹಗರ ಇದ್ದಮರಿ ಇದ್ದಕ್ಕಿದ್ದಂಗೆ ಭಾರ ಯಾಕ ಅನಿಸಿತು? ಅಂತ ಕತ್ತು ಹೊರಳಿಸಿ ನೋಡ್ತಾನೆ. ಕುರಿಮರಿ ಆಕಾಶಕ್ಕೂ ಮುಗಿಲಗೂ ಒಂದಾಗಿ ನಿಂತತೆ." ಜಗನ ಕತಿ ಹೇಳೋದನ್ನ ನಿಲ್ಲಿಸಿದ "ಯಪ್ಪ" ಅಂತ ಕೋಟಿ ಹುಲಿಯೂರನ ಹಿಂದ ಬಂದು ಅವಿತುಕೊಂಡ. "ನಿನಗೇನಾತಲೆ? ಈಗರ ಪಾಡಿದ್ದೆ" ಹುಲಿಯೂರ ಗದರಿಸಿದ. "ಇಲ್ನೋಡು ನನ ಕೈಯಾಗ ರೋಮಗಳು ಹೆಂಗ ಎದ್ದು ನಿಂತಾವ ಅವನಿಗ ಕತಿ ಹೇಳೋದು ಬಂದಮಾಡು ಅಂತ ಹೇಳು" ಅಂದವನೆ ಅವರು ಕುಂತ ಜಾಗವನ್ನು ಬಿಟ್ಟು ಒಳಗೆ ಓಡಿದ.

ಜಗನನ ಕತಿ ಅವನ ಬಾಯಿಯೊಳಗೆ ಐತಿ. ಯಾರೊ, "ಯಪ್ಪ ಸತ್ನೊ ಕಾಪಾಡ್ರಿ" ಅಂತ ಜೋರಾಗಿ ಕೂಗಿದಂಗಾತು. "ಎಯ್ ಸುಮ್ಮನಿರು ಯಾರೊ

ಕೂಗಿದಂಗಾತು" ಪೀಕಿ ಅವನ ಬಾಯಿ ಮುಚ್ಚಿದಳು. "ಹೌದಲ್ಲ ಯಾರೊ ಸಾಯೋರಂಗೆ ಕೂಗ್ತವ್ರೆ" ಹುಲಿಯೂರ ಎದ್ದವನೆ ಅವನ ಮನೆ ಪಕ್ಕ ಕಪಾಳೊ, ಪರಮ, ಪಾಚಿ ಓಡ್ತಿರೋದನ್ನ ನೋಡಿ ಒಣಗಿದ ಕೆರಿಯೊಳಗೆ ಓಟಕಿತ್ತರು. ಸಣ್ಣ ಡಿಬರಿ ಪಕ್ಕದ ದೊಡ್ಡ ಗುಂಡಿ ಇಳದು ಹತ್ತಿ ಅರಳಿಮರ ಹಳೆ ದೊಡ್ಡ ಹುಣಸಿ ಮರದ ಹತ್ತಿರದ ಅಗಸಿ ಪೆಳಿಯೊಳಗೆ ತಾಂಡದ ದುರ್ಗವನ ಪೂಜಾರಿ ಬಿದ್ದು ಹೊರಳಾಡುತ್ತಿದ್ದ.

ಹೊತ್ತಾರೆ ಸರಾಯಿ ಕುಡಿಯೋದಕ್ಕೆ ತಾಂಡ ಬಿಟ್ಟಿದ ಪೂಜಾರಿ ಗಡಾನ ಬರಬೇಕಂತ ಅಂದುಕೊಂಡು ಕುಂತವನು ಅವರ ತಾಂಡದಿಂದ ಪಕ್ಕದ ತಾಂಡಕ್ಕೆ ಕೊಟ್ಟಿದ್ದ ಭನಕಿ ಅನ್ನೊಳು. "ಮಾವ ಬಹಳ ದಿನಕ್ಕೆ ಬಂದಿಯ ನಮ್ಮೂರಿಗೆ ಏನ ಸಮಾಚಾರ, ನಮ್ಮನಿಯೊಳಗೆ ನಮ್ಮವ್ವ ಅಪ್ಪಾ ಆರಾಮ ಇದಾರಲ್ಲ" ಅಂತ ಮಾತು ತಕ್ಕೊಂಡಿದ್ದೆ ಪೂಜಾರಿಗೆ ಸೊಂಟದಾಗ ನರ ಚಳ್ ಅಂದಂಗಾತು. "ಅರೆ ನಮ್ಮ ಸೊಸಿಬಂದಾಳ, ತಮ್ಮ ಒಂದ ಪಾಕಿಟು ಕೊಡಲೆ" ಅಂದವನೆ ಕೈಯಾಗಿದಿದ್ದ ಕಾಸನ್ನು ಕೊಟ್ಟು ಅಕೀಗ ಒಂದು ಪಾಕೀಟು ಕುಡಿಸಿ, ಮಸ್ಕ ಹೊಡಿಯಾಕ ನೋಡಿದ. ಭನಕೀನು ಚಾಲು ಮಗಳು ಖಾಲಿ ಪುಕ್ಕಟೆ ಮಾತನಲ್ಲೆ ಸ್ವರ್ಗ ತೋರಿಸಿ ಕೈಬಿಟ್ಟಳು. ಅವಳು ಹೇಳಿದ್ದು ಇವನು ಹೇಳಿದ್ದು ಗಾಳಿ ಸುದ್ದಿಯಾಗಿ ಕುಡಿದ ಸರಾಯಿನು ಇಳಿಯಾನ. ಅಕಿ ಹತ್ರಾನೆ ಸಾಲ ಮಾಡಿ ಎರಡ ಮೂರು ಪಾಕೀಟು ಖರೀದಿಸಿ ಒಮ್ಮೆಲೆ ಹಾಕ್ಕೊಂಡ. "ಭನು ನಿಮ್ಮಕ್ಕ ಕಾಯುತ್ತಿದ್ದಾಳ, ಈ ಸರಾಯಿ ಇಳಿಯೋದ್ರಾಗ ಮನಿಸೇರಬೇಕು" ಅಂದವನೆ ಎದ್ದು ಇಡಿ ದಾರಿಯೊಳಗೆ ತಾನೊಬ್ಬನೆ ಅನ್ನೋ ಹಂಗ ಈ ಕಡಿಯಿಂದ ಆ ಕಡೀಗ, ಆ ಕಡಿಯಿಂದ ಈ ಕಡೀಗ ವಾಲಾಡ್ತಾ, ತೇಲಾಡ್ತಾ ಕೆರೆ ಏರಿಗೆ ಬಂದ. ಕೆರೆ ಹೇಗೋ ಒಣಗಿತ್ತು, ಒಳಗಿನ ಕಾಲುದಾರಿಗ ಬರೋದು ಬಿಟ್ಟು ಹಗಲಲ್ಲೆ ಜೋಡುಗುಂಡಿಗೆಯವನು ಹೋಗೋದಕ್ಕೆ ಹೆದರುವ ಆಲದಮರ, ಹುಣಸೆ ಮರಗಳಿರುವ ಜಾಗದಿಂದ ಬಂದ. ಮರದವರೆಗೂ ಪಸಂದಾಗೆ ಬಂದಿದ್ದ. ಮರದ ಹತ್ತಿರ ಬಂದವನಿಗೆ ಅದೇನಾಯ್ತೊ ಇಳಿಜಾರು ಪೂರ ನೆಲ ಗರಸಿಂದ ತುಂಬಿತ್ತು. ಹರಳು, ಸಣ್ಣ ಕಲ್ಲುಗಳು ಮದಲೆ ವಾಲಾಡುತ್ತಿದ್ದ ಪೂಜಾರಿ ಕಾಲು ನೆಲದ ಮೇಲೆ ನಿಂತರೆ ತಾನೆ ಮನುಷ್ಯ ನೆಟ್ಟಗೆ ನಡದಾನು, ಕಾಲು ನಿಲ್ಲದೆ, ಮನಸ್ಸು ನಿಲ್ಲದೆ ಬಕ್ಕಬರ್ಲೆ ಬಿದ್ದು ಜರ್ರಂತ ಜಾರಿ ಅಗಸಿ ಪೆಳಿಯೊಳಗೆ ಬಿದಿದ್ದ. ಎಷ್ಟೇ ಧೈರ್ಯ ತಗೊಂಡ್ರು ಸಾಲದೆ ಸುತ್ತಲು ರವರವ ಅನ್ನೊ ಕತ್ತಲಕೂಪ. ಮೆಲ್ಲಗೆ ಎದ್ದು ಅಂಬೆಗಾಲಿಟ್ಟು ಮೇಲೇರುವ ಪ್ರಯತ್ನ ಮಾಡಿದ. ಹರಳುಗಳು ಜಾರುತಿದ್ದರಿಂದ ಮತ್ತೊಮ್ಮೆ ಜರ್ರಂತ ಜಾರಿದ. ಈಗ ಅವನಿಗೆ ಖಾತ್ರಿಯಾಯಿತು. ಯಾರೊ ನನ್ನ ಕಾಲುಹಿಡಿದು ಎಳಿತಿದ್ದಾರೆ ಅಂತ. "ಲೇ ನಿನ್ನಪ್ಪನ ಭ್ರಮ್ಮರಕ್ಕಸ, ನಾನು ದುರಗಮ್ಮನಪೂಜಾರಿ. ನಂದೇನು ಕಿತ್ಕೊಳದಕ್ಕೆ

ಆಗೋದಿಲ್ಲ ನನ್ನ ಜೊತೆಗೆ ಕುಸ್ತಿ ಆಡ್ತಿಯ, ನೀನು ಗಂಡಸಾಗಿದ್ರೆ ಮುಂದಕ್ಕಬಾರಲೇ ಹಿಂದಿಂದ ಯಾಕ ಎಳಿತಿಯ." ಜೋರಾಗಿ ಬಾಯಿ ಮಾಡಿದ. "ನೋಡಿದೆಯಾ ನನ್ನ ತಾಕತ್ತು ಈಗ ನಿನ್ನ ಎತ್ತಿ ಕೆಡವ್ತಿನಿ" ಅಂದವನೆ ಮಕಾಡಬಿದ್ದ ಮೂಗು ನೆಲಕ್ಕೆ ತಾಗಿ ರಕ್ತ ಬಳಗುಟ್ಟಿತ್ತು. "ಏನೆ ಆಗಲಿ ನೀ ನನಗೆ ಸೋಲಿಸೋದಕ್ಕೆ ಆಗಲ್ಲ" ಬಹಳ ಹೊತ್ತಿನಮಟ ನೆಲದ ಜೋಡಿ ಕುಸ್ತಿ ಹಿಡಿದು ಮೇಲಕ್ಕೆ ಬರುವ ಪ್ರಯತ್ನ ಮಾಡಿದ. ಬಂದ, ಬಂದ ಇನ್ನೇನು ಬಂದೇ ಬಿಟ್ಟ ಅನುವಷ್ಟರಲ್ಲಿ ಮತ್ತೆ ಜರ್ರಂತ ಜಾರಿ ಅಗಸಿ ಪೆಳಿಯೊಳಗೆ ಹೋಗಿದ್ದ. ಕುಡಿದದ್ದು ಇನ್ನೂ ಇಳಿದಿರಲಿಲ್ಲಾ. ಕಾಲು ಕೈ, ಮಕ ಮುಸುಡಿ ಎಲ್ಲಾ ಕೆತ್ತಿ ರಕ್ತ ಜಿನುಗುಡುತ್ತಿತ್ತು. ಒಂದು ಕಡೆಯ ಮೆದಳು ಚೂರು ಕೆಲಸ ಮಾಡಿದಂತಾಗಿ ಕಾಲನ್ನ ಗಟ್ಟಿಯಾಗಿ ಊರಿ ಮೇಲೆ ಬರುವ ಪ್ರಯತ್ನ ಮಾಡುತ್ತಿದ್ದಂತೆ, ಹಿಂಗಾದ್ರ ಇಲ್ಲೇ ಹೆಣ ಆಗ್ತಿನಿ ಅಂದವನೆ "ಯಾರಾದ್ರು, ಕಾಪಾಡ್ರಪ್ಪೊ ನಾ ಸತ್ತೆ, ಗಡಾನ ಬರ್ರಿ" ನಾಕೈದು ಸಲ ಜೋರಾಗಿ ಕೂಗಿದ. ಮದಲೆ ದೆವ್ವಭೂತಗಳ ಕತೆ ಕೇಳಿದ್ದ ಹಳ್ಳಿಗರು "ಯಾರೊ ಮನುಷ್ಯ ಇಷ್ಟೊತ್ತಿನಲ್ಲಿ ಯಾಕೆ ಆ ಹಾಳಾದ ಜಾಗದಲ್ಲಿ ಸಿಗಾಕಿಕೊಂಡ" ಅಂತ ಆಲೋಚನೆ ಮಾಡಿದ್ದೆ ಯುವಕರ ಗುಂಪುಗಳು ಹಿಂಡುಹಿಂಡಾಗಿ ಧ್ವನಿ ಬಂದ ಕಡೆಗೆ ದಿಕ್ಕೆಟ್ಟು ಓಡಿದರು. "ಅರೆ ನಮ್ಮ ಪೂಜಾರಿ ಇವನ ಮನಿಹಾಳಾಗ ಇವನ್ಯಾಕ ಬಂದಾನ ಇಲ್ಲಿ, ಎತ್ರಲೆ ಗಡಾನ ಪ್ರಾಣಗೀಣ ಹೊಂಟೋದೀತು" ಯಾರೊ ಕೂಗಿದರು. "ಗಾಳಿಬಿಡ್ರಿ ಯಾರಾರು ಬೀಡಿಹಚ್ಚಿ ನೆತ್ತಿ ಸುಡ್ರಿ ಎಚ್ಚರ ತಪ್ಪಿದ್ದಾನೆ" ಮತ್ತೊಬ್ಬ ಕೂಗಿದ. "ಮದಲು ದೂರ ಸರಿರಿ ಗಾಳಿ ಆಡಲಿ" ಯಾರೊ ಕೂಗಿದರು. "ಎಯ್ ನಿಮ್ಮ ಮಂಜಾಳಾಗ, ಜಾಗ ಬಿಡಸ್ರಿ, ದೆವ್ವ ಎಳ್ಕೊಂಡ ಹೋಗಿದ್ದು ಇಲ್ಲೆ ಇರಬೇಕು" ಒಬ್ಬ ಜೋರು ಮಾಡಿದ. ಇವರು ಏನೆ ಪ್ರಯತ್ನ ಮಾಡಿದರು ಅವನು ಎಚ್ಚರಗೊಳ್ಳುವುದಕ್ಕೆ ತಯಾರಿಲ್ಲ. ಹಲ್ಲುಗಳನ್ನು ಬಿಗಿಯಾಗಿ ಕಚ್ಚಿಕೊಂಡಿದ್ದ. "ಆತುಬಿಡು ದೊಡ್ಡ ಪ್ರಾಣ ಹಾರಿಹೋಗೈತೆ ಇನ್ನು ಬದುಕಲಾರ, ಬದುಕಿದ್ರೆ ಅವನ ಪುಣ್ಯ ನಾಕದಿನ ಹೆಣ್ತಿ ಮಕ್ಕಳಾಗ ಇರೊ ಋಣ ಇತ್ತು ಬದುಕ್ಯಾನು ಇಲ್ಲಂದ್ರ ಆ ಬ್ರಹ್ಮ ಬಂದ್ರೂ ಆಗೋದಿಲ್ಲ" ಅಂತ ಕಡಾಖಂಡಿತವಾಗಿ ಹೇಳಿದ. ಪೂಜಾರಿಯ ಹಿರಿಮಗ ಕಾಣು ಎಲ್ಲಿದ್ನೊ, "ಯಾವನಲೆ ಅವನು ಬಾಯಿಗ ಬಂದಂಗ ಮಾತಾಡೋನು, ನಮ್ಮಪ್ಪಗ ಏನು ಆಗಿಲ್ಲ ಮುಕ್ಕಾರ ಕುಡಿದಾನ ಇಲ್ಲಿ ಬಿದ್ದಾನ ಆಟೇಯ ಹಿಂಗೆಲ್ಲಾ ದೆವ್ವ ಭೂತ ಅಂತ ಮಾತಾಡಿ ಮಂದಿ ತಲಿಯಾಗ ಇಲ್ಲದ್ದು ಸಲ್ಲದ್ದು ತುಂಬಬೇಡ್ರಿ. ನಮ್ಮಪ್ಪನ ಆಯಸ್ಸು ಬಹಳ ಐತೆ ಈಗಲೇ ಸಾಯೊ ಪಾರ್ಟಿನೆ ಅಲ್ಲ" ಅವನೆ ಹೋಗಿ ಯಮನ ಹತ್ತಿರ ಲೆಕ್ಕ ತಗೊಂಡು ಬಂದವನ ಹಂಗೆ ಮಾತಾಡಿದ. ಅಷ್ಟೊತ್ತಿಗೆ ಯಾರೊ ಬೀಡಿ ಹಚ್ಚಿ ನೆತ್ತಿಸುಟ್ಟಿಂದೆ, "ಆ" ಅಂತ ಸದ್ದು ಮಾಡಿ ಕಣ್ಣುಬಿಟ್ಟಿದ್ದ. "ಸರಿರಿ, ಎಚ್ಚರಾತು, ಲೇ ನಾಗ, ಕರೀಮ, ಚಾಮ, ಆಜಾಮತ್ತಾಗಿ ಎತ್ಕೊಂಡು ಇಲ್ಲೆ ಏರಿ ಇಳದು ಮದಲು ಊರಿಗೆ ತಗೊಂಡು ನಡಿರಿ ಮುಂದಿಂದು ಆಮೇಲೆ ನೋಡಾಮ"

ಹಿರಿಯ ಮುದಕ ಸಾಮು ಹೇಳಿದ್ದ. ಇಂತಹವೆ ಹತ್ತಾರು ಪ್ರಕರಣಗಳು ಸಂಭವಿಸಿ ಹರೆಯದ ಹೆಂಗಸರು ರಂಡೆಯರಾಗಿ ಜೀವನ ಸಾಗಿಸುತ್ತಿದ್ದಾರೆ ಅಂತಾದ್ರಾಗ ಇದೊಂದು ಹೊಸ ಪ್ರಕರಣ ಆಗೋದು ಬೇಡ ಅಂತ ಸಾಮು ಹೇಳಿದ.

ಎತ್ಕೊಂಡ ಬಂದವರೆ ದುರಗಮ್ಮನ ಗುಡಿ ಮುಂದೆ ಇಳಿಸಿ, ಅಲ್ಲೆ ಬಾವಿಯಿಂದ ಎರಡು ಕೊಡಪಾನ ನೀರು ಸೇದಿ ಉಟ್ಟ ಬಟ್ಟೆ ಮೇಲೆ ನೀರು ಹೊಯ್ದರು. ಪೂಜಾರಿ ಥರಥರ ನಡುಗ ತೊಡಗಿದ. "ಯಾರ ನೀನು, ಮುಚ್ಕೊಂಡ ಹೇಳಿದೆ ಸರಿಯಾತು, ಇಲ್ಲದಿದ್ರೆ" ಅಂದವನೆ ಹುಸೇನಿ ದುರ್ಗವನ ಗುಡಿಯಲ್ಲಿದ್ದ ಆಸೂಡ ಬೆನ್ನಿಗೆ ಬಾರಿಸೋದಕ್ಕೆ ಕೈ ಎತ್ತಿದ. "ಅಯ್ಯೊ ಹುಸೇನಿ ಮಾಮ ಯಾರು ಇಲ್ಲೊ ನನ್ನ ಮೈಯಾಗ ಹೊಡಿಬ್ಯಾಡ." ಪೂಜಾರಿ ಕೀರಲು ಧನಿಯೊಳಗೆ ಕೂಗಿದ. "ದೆವ್ವ ನಹಿ ಹೈ ಬಿಡು, ಹಂಗೆ ಆಕೆ, ಟೆಸ್ಟ್ ಮಾಡೈತೆ. ನಮ ಪೂಜಾರಿ ಗಟ್ಟಿ ಅದಾನ ಸೈತಾನ ಅಲ್ಲ ಯಾವ ನರಪಿಳ್ಳೆ ಹತ್ರ ಬರಾಕ ಸಾಧ್ಯನ ಇಲ್ಲ." ಅಂದವನೆ ಆಸೂಡಗಳನ್ನ ಒಳಗೆ ಇಡಿಸಿದ. ಊರೊಳಗೆ ಪ್ರವೇಶ ಮಾಡಿದ ಪ್ರತಿಯೊಂದು ಸೈತಾನಗಳನ್ನು ಹುಸೇನಜ್ಜನೆ ಓಡಿಸಿದ್ದ. ಹುಲಿಯೂರನಿಗೆ ಹುಸೇನಜ್ಜ ಸಾಕ್ಷಾತ್ ದೇವರಂತೆ ಕಂಡಿದ್ದ. ಆದರೆ ಒಮ್ಮೆ "ಅಲ್ಲ ಹುಸೇನಜ್ಜ ಮಂದಿ ಈ ಕರಗಲ್ಲು ದಾಟಿ ದೆವ್ವಗಳು, ಆತ್ಮಗಳು ಒಳಗೆ ಬರೋದೆ ಇಲ್ಲ ಅಂತ ಹೇಳ್ತಾರ. ನೀನು ನೋಡಿದ್ರ ದೆವ್ವ ಬಿಡಿಸಿದೆ ಅಂತಿಯಾ. ನೀನು ಸರಿನಾ ಇಲ್ಲ ಮಂದಿ ಹೇಳೋದು ಸರಿ" ಹುಂಬ ಪ್ರಶ್ನೆ ಕೇಳಿದ್ದ, ಅವಾಗ ಅದು ಸರಿಯೂ ಆಗಿತ್ತು. ಬಾರಿಕರ ಭರಮ ಹುಲಿಯೂರನ ಹೊಲದಾಗ ಎತ್ತು ಮೇಯಿಸುತ್ತ ಮಾವಿನ ಮರದ ಕೆಳಗೆ ಒಂದೇ ಒಂದು ಘಳಿಗೆ ನಿದ್ದೆ ಮಾಡಿದ್ದಕ್ಕೆ. ಮಾವಿನಮರದಿಂದ ಎರಡುಮಾರು ದೂರದಲ್ಲಿ ಅವನಜ್ಜಿ ಗೋಮ್ಲಿಯನ್ನ ಸುಟ್ಟಿದ್ದ ಸ್ಮಶಾನ ಇರೋದು ಭರಮನಿಗೆ ಗೊತ್ತೆ ಇಲ್ಲ. ಸಂಜೆ ಮನೆಗೆ ಬಂದವನೆ ಹುಲಿಯೂರನ ಗೊಮ್ಲಜ್ಜಿ ಮಾತಾಡೊ ಹಾಗೆ "ಲೇ ಹೀಕ್ಯಾ, ಜಂಗೀರ ಲಕ್ಮಾ ಎಲ್ಲಿಸತ್ತ, ದೊಡ್ಡೋನು ತೊಪು ಕರೀರಿ ನಿಮ್ಮ ತಂಗಿ ಭೀಮಣಿಯನ್ನು. ನಾನು ಇಲ್ಲ ಅಂದ್ಕೊಂಡು ಅಕೀನ ಅನಾಥಳನ್ನ ಮಾಡಿರೇನ್ರಲೆ" ಅಂತ ಕಣ್ಣು ಕೆಂಪಗೆ ಮಾಡಿಕೊಂಡು ಜೋರು ಜೋರಾಗಿ ಮಾತಾಡತೊಡಗಿದ್ದ. ಭರಮನ ಅವ್ವ ಗಂಗಿ, "ಎಯ್ ಭಾಡಕೌ ನನ್‌ಮಗನೆ, ಗೊಮ್ಲಜ್ಜಿಹಂಗೆ ಯಾಕ ಮಾತಾಡಕಹತ್ತಿ, ಅಕಿ ಸತ್ತಾಗ ನೀ ಇನ್ನೂ ಎರಡು ಮೂರು ವರ್ಷದ ಕೂಸು. ಬಾಯಿ ಮುಚ್ಚು" ಅಂತ ಗದರಿಸಿ ತಲೆಗೆ ಒಂದೇಟು ಕೊಟ್ಟಳು. "ಲೇ ಮೆಣಸಿನಕಾಯಿ ಕಳ್ಳಿ ಗಂಗಿ, ನನ್ನ ಹೊಲದಾಗ ಮೆಣಸಿನಕಾಯಿ ಕದ್ದು ಬದುಕಿ ಏನೆ ಇನ್ನ" ಅಂತಂದು ಮೆಲಕ್ಕೆ ಎತ್ತಿ ನೆಲಕ್ಕೆ ಕುಕ್ಕಿದ ಭರಮ "ಯಪ್ಪ ಸತ್ನೆ" ಅಂದಾಕಿನೆ ಅವನ ಕೈಯಿಂದ ಬಿಡಿಸಿಕೊಂಡವಳೆ ಅಂಗಳಕ್ಕೆ ಓಡಿದಳು. ಅವಳ

* ಆಸೂಡ–ದುರುಗಮ್ಮನ ಪೂಜೆಗೆ ಅಂತ ಇಟ್ಟ ಬಾರುಕೋಲುಗಳು

ಮನೆ ಪಕ್ಕ ದುರಗಿ ಮಗ ನಂಜ, ರಾಮಿ ಮಗ ಸೋಮಿ ಯಮನಂತ ಆಳುಗಳು "ಏನಾತ ಬೆ ದೊಡವ್ವ ಯಾಕಿಂಗೆ ಅರಬಾಡಿಸಿ ಹೊರಗ ಬಂದೆ. ಏನಾತು ಹೇಳು ಯಾಕಿಂಗೆ ಗರಬಡದವರಂತೆ ನಿಂತಿಯ" ನಂಜ ಅವಳ ಮೈ ಹಿಡಿದು ಅಲ್ಲಾಡಿಸಿ ಕೇಳಿದ, "ಒಳಗ ಭರಮ ಒಂದ ತರಾ ಆಡಾಕಹತ್ಯಾನ ನೋಡಿ ಆಟು" ಅಂದಳು. "ಬರ್ರಲೇ ನಿಮಗಾಗಿ ಕಾಯ್ತಿದೆ. ನನ್ನ ಮರದಾಗ ಕಾಯಿ ಕೀಳ್ತಿರೆನ್ನಲ್ರೆ" ಭರಮ ಇಬ್ಬರನ್ನು ಎತ್ತಿ ಹೊರಗಡೆ ಬಿಸಾಕಿದ. ಪುಡಿಯಾಳು ಭರಮನಿಗೆ ಬಂದ ತಾಕತ್ತು ನೋಡಿ ಎಲ್ಲರು ಬೆರಗಾಗಿದ್ದರು. ಗೋಮ್ಲಿ ಅವನ ಮೈಯೊಳಗೆ ಬಂದಾಳಂತ ಅವಳ ಮಕ್ಕಳಿಗೆ ಗೊತ್ತಾದ್ರೆ ಸುಕಾಸುಮ್ಮನೆ ನಮ್ಮವ್ವನ್ನ ನಿಷ್ಠುರ ಮಾಡಿದ್ರಿ ಅಂತ ಕುಳು ನೀರು ಬಂದ ಮಾಡ್ತಾರ. ಆದ್ರ ಹಕೀಕತ್ತನ್ನ ಯಾರಾದರೂ ಒಪ್ಪಲೇ ಬೇಕಲ್ಲ. ಹುಸೇನಿ ಅಜ್ಜಾನೆ ಅದನ್ನ ಬಹಳ ಬುದ್ಧಿವಂತಿಕೆಯಿಂದ ಬಗೆಹರಿಸಿದ್ದ. ಉಪ್ಪಾರ ವಾಸಂತಿಗೆ ದೆವ್ವ ಹಿಡಿದದ್ದು, ಹೆಂಡದ ಸಾವಂತ್ರಿಗೆ ಹಿಡಿದ ದೆವ್ವ, ಇವು ಯಾಕೆ ಹಿಡಿದವು? ಯಾವಾಗ ಹಿಡಿದವು ಯಾರಿಗೂ ಗೊತ್ತಾಗಲಿಲ್ಲ.

* * *

25. ಯುಗಾದಿಯ ಚಂದ್ರನೂ, ಹಿರಿಯರಿಗೆ ಕಾಲು ಬೀಳುವ ಪ್ರಸಂಗ

ಯುಗಾದಿಹಬ್ಬ ಬಂತೆಂದರೆ ಬೇಸಿಗೆ ಕಾಲದ ಆರಂಭ. ವಸಂತ ಋತು ಕೊನೆಗೊಂಡು ಗಿಡಮರಗಳ ತುಂಬ ಹೂವು ಬೇವಿನ ಗಡಿಗಳಲ್ಲಿ ಬಿಳಿಯ ಬೇವಿನ ಹೂವು, ಮಾವು ಹೂಬಿಟ್ಟು ಹಿಚಾಗಿ ಕಾಯಿಗಟ್ಟುವ ಕಾಲ. ಕೋಗಿಲೆ ಅಗಲೆ ಕೂಹ, ಕೂಹ ಎಂದು ಕೂಗಿ ಹಾಡಿ ಕೇಳುಗರಿಗೆ ಸೋಜಿಗ ತಂದಿಟ್ಟ ಸಮಯ. ಹದಿನೈದು ದಿನದ ಮುಂಚಿನಿಂದಲೇ ಮನೆಮನೆಗಳಲ್ಲಿ ತಯಾರಿ ನಡೆಯುತ್ತಿತ್ತು. ಯುಗಾದಿ ಹಬ್ಬಕ್ಕಂತ ಶ್ಯಾವಿಗೆ ಮಣಿಮೇಲೆ ಕುಂತು ಶ್ಯಾವಿಗೆ ಹೊಸೆಯುವವರು, ಕೆಳಗೆ ಅವುಗಳನ್ನಹಿಡಿದು ಮರ, ಬುಟ್ಟಿಯಲ್ಲಿ ಹಾಕಿ, ಪಂಚೆ, ಸೀರೆಯ ಮೇಲೆ ಒಣಗಿಸುವುದು. ಗಾಳಿ ಬಂತೆಂದರೆ ಬಟಾಬಯಲಲ್ಲಿ ಒಣಗಿರುವ ಶ್ಯಾವಿಗೆಯ ಮೇಲೆ ಜಗತ್ತಿನ ಧೂಳು, ಕಸ, ಕಡ್ಡಿ, ಹೆಂಗಸರ ಕೂದಲು ಸಗಣಿ ತುಂಡುಗಳು ಸರ್ವೇಸಾಮಾನ್ಯವಾಗಿರುತ್ತಿದ್ದವು. ಒಣಗಿಸಿ ಡಬ್ಬ ತುಂಬವವರು, ಚೀಲ ತುಂಬಿ ವರ್ಷವಿಡಿ ಬೇಕಂದಾಗ ನಾಕುಸಾವಿಗೆ ತುಂಡುಗಳನ್ನು ಕುದಿಯುವ ನೀರಲ್ಲಿ ಹಾಕಿ ಚೆನ್ನಾಗಿಬೇಯಿಸಿ ಮೇಲಿನಿಂದ ಬೆಲ್ಲದತುಂಡು, ಒಣಶುಂಠಿ ಪುಡಿಯನ್ನು ಉದುರಿಸಿ, ನೀರ ನೀರಂತಹದ್ದು ಮಾಡಿಕೊಟ್ಟರೆ ಹರೆಯದವರಿಗೆ ತಾಕತ್ತು ಬರುತ್ತದೆ ಎನ್ನುವ ನಂಬಿಕೆ, ಮದುವೆಯಾಗುವ ಯುವಕರಿಗಂತು ನಾಕುದಿನ ಮೇಯಿಸುವುದು ರೂಢಿ. ಅದರಲ್ಲಿ ಮುಂಜಾನೆ ಖಾರಿಕು ಕೊಬ್ಬರಿ ಹಾಕಿ ತುಪ್ಪದಾಗ ನೆನೆ ಹಾಕಿರುವುದನ್ನ ಒಂದು ಉಂಡೆ ಮಾಡಿಕೊಟ್ಟು ಮಧ್ಯಾಹ್ನ ಒಂದು ತಟ್ಟೆ ಸೇವಿಗೆ ಹೊತ್ತಾರೆ ಒಂದು ತಾಟು ಕಾಡ. ಹದಿನೈದು ದಿನಗಳಲ್ಲಿ ಹುಡುಗ ಹುಡುಗಿ ಮೈತುಂಬಿಕೊಳ್ಳುತ್ತಿದ್ದರು. ಈ ಪ್ರಕ್ರಿಯೆಯಲ್ಲಿ ಯುಗಾದಿಯೂ ಒಂದು. ಶ್ಯಾವಿಗೆ ಮುರಿಯುವರು ಒಂದು ಕಡೆಯಾದರೆ ಉಳಿದ ಹಿಟ್ಟೆಲ್ಲ ಸೌತಿ ಬೀಜ ಹೊಸೆದು ಇಟ್ಟುಕೊಳ್ಳುವವರು

ಮಳೆಗಾಲದಲ್ಲಿ ಕೆಲಸಕ್ಕೆ ಬಂದಾವು ಅಂತ ಡಬ್ಬದಲ್ಲಿ ಬಚ್ಚಿಡುತ್ತಿದ್ದರು. ಅದಾಗಿ ವಾರಕ್ಕೆ ಪ್ರತಿಯೊಂದು ಮನೆ ಸುಣ್ಣ ಬಳಿಯುತ್ತಿದ್ದರು. ಪೇಟೆಯಿಂದಲೊ ಇಲ್ಲ ಸುಣ್ಣದ ಭಟ್ಟಿಯಿಂದ ನಾಕೈದು ಸೇರು ಸುಣ್ಣ ತಂದು ಹಳೆ ಸ್ವಾರಿಯೊಳಗೆ ನೀರು ಹಾಕಿ ಬಿಟ್ಟರೆ ಸುಣ್ಣ ಮುಂಜಾನೆಗ ಸ್ವಾರಿ ತುಂಬ ಅರಳಿರುತ್ತಿತ್ತು. ಒಂದೊಮ್ಮೆ ಕಲ್ಲುಗಳು ಸರಿಯಾಗಿ ಭಟ್ಟಿಯಲ್ಲಿ ಸುಡದೆ ಇದ್ದ ಪಕ್ಷದಲ್ಲಿ ಹಾಗೆ ಉಳಿಯುತ್ತಿದ್ದವು. "ಥುತ್ ಅವನ ಮನೆ ಹಾಳಾಗಿ ಹೋಗ, ರೊಕ್ಕ ತಗೊಂಡು ಬರಿ ಕಲ್ಲು ಸುಣ್ಣ ಕೊಟ್ಟಾನಂತ" ಶಾಪ ಹಾಕಿ ಅರಳಿರುವುದನ್ನೇ ಮತ್ತೊಂದೀಟು ನೀರು ಹಾಕಿ ತಿಳಿ ಮಾಡಿಕೊಂಡು ಹಳೆಬಟ್ಟೆಯನ್ನ ಅದ್ದಿ ಗೋಡೆಗೆ ಬಳಿಯುತ್ತಿದ್ದರು. ವಾರಕ್ಕೆ ಒಮ್ಮೆ ಹಸುವಿನ ಸಗಣಿಯಿಂದ ಅದು ಸೋಮುವಾರದ ದಿನದಂದು ಮಾತ್ರ ನೆಲ ಬಳಿಯುತ್ತಿದ್ದವರು ಹಬ್ಬಕ್ಕೆ ಬಳಿಯಲೆ ಬೇಕು. ಎಮ್ಮೆಗ್ವಾತದಲ್ಲಿ ಬಿದ್ದ ಗುಂಡಿಗಳನ್ನು ಜರಗು ಮಣ್ಣು ತಂದು ಹಾಕಿ ಬಿದ್ದ ಗುಂಡಿಗಳನ್ನು ಭರ್ತಿ ಮಾಡುವುದು. ಎತ್ತುಗಳು ಉಚ್ಚೆಹೊಯ್ದು ಬಿದ್ದ ಗುಂಡಿಗಳನ್ನ ತುಂಬುವ ಕೆಲಸ ಅಚ್ಚುಕಟ್ಟಾಗಿ ನಡೆಯುತ್ತಿತ್ತು. ವಾರದ ಮುಂಚಿತವಾಗಿಯೇ ಎಲ್ಲಾ ಕೆಲಸಗಳನ್ನು ಮುಗಿಸಿ ವಡ್ರಾಗಿ ಮಾಡೋದಕ್ಕೆ ಬೇಕಾದ ರಾಗಿಯನ್ನು ಹಸನು ಮಾಡಿಕೊಂಡು ನೀರಲ್ಲಿ ರಾತ್ರಿ ನೆನೆ ಹಾಕಿ ಮುಂಜಾನೆ ತಗದು ನೆಳ್ಳಲ್ಲೆ ಒಣಗಿಸಿ, ಸರಿಯಾಗಿ ಒಣಗಿದ ಮೇಲೆ ಬೀಸುವ ಕಲ್ಲಲ್ಲಿ ಇಬ್ಬರು ಕುಳಿತು ಬೀಸಿ ಹಿಟ್ಟು ಮಾಡುತ್ತಿದ್ದರು. ಅದನ್ನು ದೊಡ್ಡ ಪಾತ್ರೆಯ ಬಾಯಿಗೆ ಮನೆ ಯಜಮಾನನ ಸ್ವಚ್ಛವಾಗಿ ತೊಳೆದ ಹಳೆಪಂಚೆ ಕಟ್ಟಿ ಸೋಸಿದರೆ ಮೇಲೆ ಗರ್ಲಬರುತ್ತಿತ್ತು. ಅದನ್ನ ತಗದು ಎಮ್ಮೆ ಮುಸರಿಗೆ ಹಾಕಿ ಐದಾರು ಸೇರು ವಡ್ರಾಗಿ ಹಿಟ್ಟನ್ನ ಅಮವಾಸ್ಯೆಯ ದಿನ ದ್ವಾಸಿಗೆ, ಸ್ಯಾವಿಗೆ ಹಬ್ಬದ ದಿನ ಒತ್ತು ಶ್ಯಾವಿಗೆ ಮಾಡೋದಕ್ಕೆ ಜೋಪಾನವಾಗಿಯೇ ತೆಗೆದು ಇಡುತ್ತಿದ್ದರು. ಹುಲಿಯೂರನ ಮನೆಯೊಳಗೆ ಎಂದಿನಂತೆ ಜಾಡುಕೆಡುವವರು, ಜೇಡರಬಲೆಯನ್ನು ಸರಿಯಾಗಿ ಕೊಡವಿ ತೆಗೆದರೆ ಒಂದಿಬ್ಬರು ಮನೆ ಬಳೆಯುವರು, ಹುಲಿಯೂರನಿಗೆ ಬೇಸಿಗೆ ರಜೆ ಇದ್ದಿದ್ದರಿಂದ ಅವನು ಗೊಬ್ಬರ ಹೇರುವ ಬಂಡಿಗೆ ಚೆಲ್ಲಾರ ಹೊಡೆಯುವುದು ಮುಂಜಾನೆ ಬಾವಿಯಿಂದ ನೀರು ಸೇದುವುದು ಮಾಡಲೇಬೇಕಿತ್ತು. ಹಬ್ಬದ ತಯಾರಿಯಾದ್ದರಿಂದ ಯಾರೊಬ್ಬರು ಖಾಲಿ ಕುಳಿತಿರಲಿಲ್ಲಾ. ದೊಡ್ಡ ಪುಟ್ಟಿಗಳ ತುಂಬ ಗರಸು ತುಂಬಿ ಹೋರಿಸಿದ್ದನ್ನ ತಾಂಡದ ಮಂದಿನಿಂದ ಹೊತ್ತು ತಂದು ಎತ್ತುಗಳ ಕಾಲ ಕೆಳಗೆ ಹಾಕಿ ದಮಸ್ಸಿನಿಂದ ಕುಟ್ಟಿ ಸಮ ಮಾಡುತ್ತಿದ್ದ. ಐದಾರು ಪುಟ್ಟಿ ಹೊರುವುದರಲ್ಲೆ ಸಾಕಾಗಿಹೋಯ್ತು. ಮೆಲ್ಲಗೆ "ಎಯ್ ನನಗೆ ಸಾಕತಪ್ಪ, ಬೇರೆಯಾರಿಗಾದ್ರು ಕರದು ಹೊರಸ್ರಿ ನಾನು ಬೇಕಾರ ಅಗಲ ಮಾಡಿ ಕುಟ್ತಿನಿ" ಅಂತ ಜಾಗ ಖಾಲಿ ಮಾಡೋದಕ್ಕೆ ನೋಡಿದ. ಆದರೆ ಮಣ್ಣು ಅಗೆಯುತ್ತಿದ್ದವನು

ಅವನಿಗಿಂತ ಚಾಲು ಆಗಿದ್ದಕ್ಕೆ "ಸಾಕು ಎರಡು ಪುಟ್ಟಿ ಹೊರು, ಮತ್ತಿನ್ಯಾರಿಗೆ ಹೇಳಲಿ" ಅಂತ ಇನ್ನೂ ಎರಡು ಪುಟ್ಟಿ ಹೊರಿಸಿದ.

ಯುಗಾದಿ ಅಮವಾಸ್ಯೆಗೆ ಬಾಗಿಲಿಗೆ ತಳಿರು ತೋರಣ ಕಟ್ಟಿ, ಮನೆಯಲ್ಲಿ ಪ್ರತಿಯೊಬ್ಬರು ಕೆರೆ, ಬಾವಿಯಲ್ಲಿ ಎಲ್ಲ ನೀರಿದೆಯೊ ಸ್ನಾನ ಮಾಡಿ ತಯಾರಾಗುತ್ತಿದ್ದಂತೆ ಅಮಾವಾಸ್ಯೆಗೆ ಮಾಡಿದ ವಡ್ರಾಗಿ ದೋಸೆ, ದೋಸೆ ಹಂಚಿನ ಮೇಲೆ ಹಿಟ್ಟನ್ನ ಎಳೆಯುವುದಕ್ಕೆ ಜೋಳದ ದಂಟಿನಿಂದ ತೆಗೆದ ದಪ್ಪನೆಯ ಬೆಂಡು, ರೊಟ್ಟಿ ಪುಟ್ಟಿಯ ತುಂಬ ಬೇಸನಪುಟ್ಟಿಯ ತುಂಬ ದೋಸೆ ತೊಗಿ, ಗಡದ್ದಾಗಿ ಉಂಡರೆ ದಿನದ ಕೆಲಸ ಮುಗಿದಂಗೇಯ. ಮಾರನೆಯ ದಿನ ಮುಂಜಾನೆ ಅಂಬ್ಲಿ ಮಜ್ಜಿಗೆ ಉಂಡ ಮೇಲೆ ಹೆಂಗಸರು ಒತ್ತು ಶ್ಯಾವಿಗೆ ಮಾಡಲು ಮುದ್ದೆಯನ್ನ ಕೂಡಿಸುತ್ತಿದ್ದರು. ಹರೆಯದ ಹುಡುಗರು ಕುಂಟಿ ತಂದು ಅದರ ಮೇಲೆ ಒತ್ತು ಶ್ಯಾವಿಗೆ ಮಾಡುವ ಕಟ್ಟಿಗೆಯ ತುಂಡನ್ನ ಇಡುತ್ತಿದ್ದರು. ಆ ಮಣಿಯಲ್ಲಿ ತೂತುಗಳಿರುವ ಒಂದು ವೃತ್ತಾಕಾರದ ವಸ್ತುವನ್ನು ಸೇರಿಸಿ ಮುದ್ದೆ ಒಳಗೆ ತೂರಿಸಿ ಮೇಲೆ ಹಿಡಕ್ಕೆ ಇರುವಂತಹ ಕೋಲನ್ನ ಇಟ್ಟು ಒತ್ತಿದರೆ ಒತ್ತು ಶ್ಯಾವಿಗೆ ತಯಾರಾಗಿ ಹೊರಗೆ ಬರುತ್ತಿದ್ದವು. ಒಮ್ಮೆ ಒತ್ತಿದರೆ ಇಬ್ಬರು, ಮೂವರು ತಿನ್ನುವಷ್ಟು ಶ್ಯಾವಿಗೆ ತಯಾರಾಗಿ ಹೊರಗಡೆ ಬರುತ್ತಿದ್ದವು. ಅದಕ್ಕೆ ಬೆಲ್ಲದ ನೀರು, ಹಾಲು, ತುಪ್ಪ ಬಿಟ್ಕೊಂಡು ತಿಂದರೆ, ರುಚಿಯಾಗಿರುತ್ತಿತ್ತು. ಊಟ ಮುಗಿಸಿ ಬೇವು ಬೆಲ್ಲ ಒಂದು ಬಟ್ಟಲಲ್ಲಿ ತುಂಬಿಕೊಂಡು ಕಂಡವರಿಗೆಲ್ಲಾ ಕೊಡುವುದು ಅವರು ಕೊಟ್ಟದನ್ನ ಹಿಡಿಹಿಡಿ ಮುಕ್ಕುವುದು.

ಮೂರನೇಯ ದಿನ ಮತ್ತೆ ಎಲ್ಲರೂ ಸ್ನಾನ ಮಾಡಲೇಬೇಕು. ಒಲೆಯ ಮೇಲೆ ಐದಾರು ಸೇರು ಮನೆಯ ಬೆಳೆ ಕುದಿಯುತ್ತಿತ್ತು. ಒಬ್ಬರು ಬಟ್ಟೆಯಲ್ಲಿ ಬೆಲ್ಲ ಹಾಕಿ ಪುಡಿ ಮಾಡುತ್ತಿದ್ದರು. ಮತ್ತೊಂದು ಗುಂಪು ಮೆಣಸಿನಕಾಯಿ ಅರಿಯುವ ಕಲ್ಲನ್ನ ಚೆನ್ನಾಗಿ ನೀರು ಹಾಕಿ ತೊಳೆದು ಸ್ವಚ್ಛಗೊಳಿಸಿ ಮುಕಳಿ ಅಡಿಗೆ ಗೋಣಿತಟ್ಟು ಹಾಕ್ಕೊಂಡು ಹುಣ್ಣರುಬ್ಬುವುದಕ್ಕೆ ತಯಾರಾಗುತ್ತಿದ್ದರು. ಈ ಕಡೆಗೆ ಪಿಳ್ಳಿ ಪಿಚಕಗಳೆಲ್ಲವು ಚಪಾತಿ ಲಟಸೊ ಮಣಿ, ಚಪಾತಿ ಕೋಲು ತಂದು ಹಾಳಿ ಮಾಡುವವರು ಯಾರೊ ಹಾಳೆಗಳೊಳಗೆ ಹೂರಣತುಂಬಿ ಹಳೆ ಪಂಚೆಯ ಮೇಲೆ ಸಾಲಿಗೆ ಇಡುವವರು ಒಬ್ಬರಾದರೆ, ಒಲೆ ಮುಂದೆ ರೊಟ್ಟಿ ಸುಡುವ ಹಂಚಲ್ಲಿ ಒಳ್ಳೆಣ್ಣೆ ಬಿಟ್ಟ ಕರೆಯುವವರು ತಯಾರಾಗಿರುತ್ತಿದ್ದರು. ಯಾರಾದ್ರು ದೊಡ್ಡವರು ಒಂದು ತುತ್ತು ಅನ್ನ ನಾಕು ಹೋಳಿಗೆ ಹಾಕಿ ದೇವರಿಗೆ ಎಡೆ ಹಿಡಿದ ಮೇಲೆ ಊಟಕ್ಕೆ ಕುಂದ್ರೊದೆ. ಸಾಮಾನ್ಯವಾಗಿ ಹೋಳಿಗೆಯ ಮೇಲೆ ಸಾಂಪ್ರದಾಯಿಕ ಪಲ್ಯೆ ಎಂದರೆ ಬದನೆಕಾಯಿ ಗುರೆಳ್ಳು ಹಾಕಿ ಮಾಡಿದ ಪಲ್ಯೆ, ಹೋಳಿಗೆ, ಯಾರಾದರೂ

ಮನಸ್ಸು ಮಾಡಿದ್ರೆ ಬಾಳೆಹಣ್ಣು ಸೀಕರಣೆ ಆಗುತ್ತಿತ್ತು. ಇಲ್ಲದಿದ್ದರೆ ತುಪ್ಪದ ಹಳೆ ಮಡಿಕೆ ಸಿಕ್ಕಾದ ಮೇಲಿಂದ ಕೆಳಗೆ ಇಳಿಯುತ್ತಿತ್ತು. ದಂಡ್ಯಮ್ಮಗೆ ಮೀಸಲಿತ್ತು ಅಂದ್ರೆ ಅದನ್ನ ಯಾರಿಗೂ ಮುಟ್ಟಿಸುತ್ತಿರಲಿಲ್ಲ. ದಂಡ್ಯಮ್ಮ ಬಹುಶಃ ಅರಿಸಿಕೇರಿ ಹತ್ತಿರ ಎಲ್ಲೊ ಇರೊ ದೇವಿ ಎಮ್ಮೆ ಕರು ಹಾಕಿದಾಗ ಕೆಚ್ಚಲಿಗೆ ಹಾಲು ಇಳಿಸದಿದ್ದರೆ, ಇಲ್ಲ ಕರು ಏಳಿಗೆಯಾಗದಿದ್ದರೆ ಎಮ್ಮೆಗೆ ಏನಾದರು ತೊಂದರೆಯಾದರೆ "ತಾಯಿ ದಂಡ್ಯಮ್ಮ ಬಾಯಿ ಇಲ್ಲದವು ಕಾಪಾಡು ತಾಯಿ, ನಿನ್ನಮೀಸಲು ತಗದು ಇಡ್ತಿನವ್ವ" ಜಾನಿಬಾಯಿ ಏನೆ ತಪ್ಪಿದರು ದಂಡ್ಯಮಗೆ ಮೊದಲು ತಗದ ಬೆಣ್ಣೆಯನ್ನ ಯಾರು ಮುಕ್ಕು ಮಾಡದಂತೆ ಒಂದು ಕಡೆಗೆ ತಗದು ದಂಡ್ಯಮ್ಮನಿಗೆ ಮೀಸಲಿಡುತ್ತಿದ್ದಳು. ದಂಡ್ಯಮ್ಮನ ಜಾತ್ರೆಗೆ ಹೋಗುವವರು ಆ ಮೀಸಲನ್ನು ಪೂಜಾರಿಗೆ ಮುಟ್ಟಿಸಿ ಬರುತ್ತಿದ್ದರು. ಹಂಗಾಗಿ ಮಿಸಲು ಬಿಟ್ಟು ಉಳಿದ ಬೆಣ್ಣೆಯಿಂದ ಮಾಡಿದ ತುಪ್ಪ, ಹಾಲು ಉಣ್ಣಬಹುದಾಗಿತ್ತು. ಅವತ್ತೊಂದೆ ದಿನಕ್ಕೆ ಪೂರ ಕುಂಬಕ್ಕೆ ಕುಂಬವೆ ಖಾಲಿಯಾಗಿ ಹೆಣ್ಣುಮಕ್ಕಳು ಇದಿದ್ದ ಬದ್ದದ್ದನ ಬಳಿದು ಊಟ ಮಾಡುತ್ತಿದ್ದರು.

ಹುಲಿಯೂರನ ತಂಡ ಹೊತ್ತುವಾಲಿದೆಟಗೆ ಕೆರಿಏರಿ ಮೇಲೆ ಚಂದಪ್ಪನ ನೋಡೋದಕ್ಕೆ ಅಣಿಯಾಗಿರುತ್ತಿತ್ತು. ಅವನ ಹಿಂದೆ ಇಡೀ ಮನೆಯ ಸಣ್ಣ ಪುಟ್ಟವೂ ಸಾಲು ಹಚ್ಚಿ ನಿಂತಿದ್ದವು. ಪಶ್ಚಿಮಕ್ಕೆ ಸರಿಯಾಗಿ ಸಾರತಿ ಗುಡ್ಡದ ನಳುಕಿನಲ್ಲಿ ಚಂದ್ರ, ತರಚೂಜ ಹಣ್ಣು ಕೊಯ್ದಾಗ ಬರುವ ಕರಿಕೆಯ ಹಂಗೆ ಒಂದು ಸಣ್ಣ ಚೀಪಿನಂತೆ ಕಾಣುತ್ತಿದ್ದ. ಒಮ್ಮೊಮ್ಮೆ ಬಹಳ ಹೊತ್ತಿನವರೆಗೂ ಮೂಡದೆ ಸತಾಯಿಸುತ್ತಿದ್ದ. ಅದಕ್ಕೆ ಕಾಣದಿದ್ದರೂ ಕಣ್ಣಿನ ಮೇಲೆ ಕೈಯಿಟ್ಟು ನೋಡಲು ತವಕಿಸುತ್ತಿದ್ದ ಎಪ್ಪತ್ತರ ಹನಿಪಜ್ಜ, ಕೆಂಚಜ್ಜ, ತೊಣಿಕಟ್ಟಿ ಅಜ್ಜ, "ಲೇ ಹುಡ್ರ ಕಂಡನೇನ್ರಲೆ ಚಂದಪ್ಪ" ಖಾತ್ರಿ ಪಡಿಯೋದಕ್ಕೆ ಕೇಳಿದರೆ ಕೆಲ ಎಡವಟ್ಟು ಹುಡುಗರು. "ಚಂದಪ್ಪ ಬಂದು ಒಂದ ತಾಸ ಆತು ನಿನಗಿನ್ನೂ ಕಾಣಿಸಿಲ್ವ ಮುದಕ. ಹೋಗಲಿ ಬಿಡು ನಿನ್ನ ವಯಸ್ಸಿನೊಳಗೆ ಎಷ್ಟೋ ಚಂದಪ್ಪನ್ನ ನೋಡಿಯ". ಬದುಕಿರುವುದು ವ್ಯರ್ಥ ಅನ್ನೊ ಹಂಗೆ ಮಾತಾಡುತ್ತಿದ್ದುರೆ. ಮುದುಕರು ವಯಸ್ಸು ಹಂಗೆ ಮಾತಾಡಿಸುತ್ತೆ ಅಂತ ಗೊತ್ತಾಗಿ "ದೇವರು ನಿನಗ ಒಳ್ಳೆದ ಮಾಡ್ಲಿ ಬಿಡುಮಗ" ಅಂತ ಹೊಸ ಚಂದ್ರನನ್ನ ನೋಡಿ ಸಾಯುವ ಎನ್ನುವ ಹಂಬಲದಲ್ಲಿ ಛಲದಂಕಮಲ್ಲರಂತೆ ಕಾಣುವವರೆಗೆ ನೋಡುತ್ತಲೇ ಇರುತ್ತಿದ್ದರು. ಇನ್ನೂ ಕೆಲವರು ಮೊದಲು ನೋಡಿ "ಕಾಣಲಿಲ್ವಾ, ಬಾ ಇಲ್ಲಿ, ಅಗೊ ಅಗೊ ನೇರವಾಗಿ ನನ್ನ ಬೆರಳನ್ನೆ ನೋಡು ಕಾಣುತ್ತೆ" ಅಂತ ಚಂದ್ರನಿಲ್ಲದ ಜಾಗದಲ್ಲಿ ತೋರಿಸಿ ನೋಡುವವನಿಗೆ ಹುಚ್ಚು ಪ್ಯಾಲಿ ಮಾಡುತ್ತಿದ್ದರು. ಅದಾದ ಬಳಿಕ ಮೊದಲು ಮನೆಗೆ ಬಂದು ಅವರಿಗಿಂತ ದೊಡ್ಡವರು ಯಾರಿದ್ದಾರೊ ಮನೆಯಲ್ಲಿ ಎಲ್ಲರಿಗೂ ಕಾಲುಬಿದ್ದ. ನಂತರ ಪಕ್ಕದ

ಮನೆಯವರಿಗೆ ಹೋಗಿ, "ದೊಡವ್ವ ಚಂದ್ರನ್ನ ನೋಡಿದೆ" ಅಂತ ಕೇಳುತ್ತಿದ್ದರು. "ಹೂಂ ನೊ ಮಗ ನೋಡಿದೆ." ಅಂದಳು ಮುದುಕಿ "ತಗೊ ನಮಸ್ಕಾರ ಮಾಡ್ತಿನಿ ಮುಂದಿನ ಉಗಾದಿಗೆ ಯಾರು ಬದುಕ್ತಾರೊ, ಯಾರು ಸಾಯ್ತರೊ ಯಾ ನನಮಗ ಬಲ್ಲ" ಅಂತ ಕಾಲಿಗ ಬಿದ್ದಿದ್ದ. "ದೇವರು ನೂರು ವರ್ಷ ಚೆನ್ನಾಗಿಟ್ಟಿರಲ್ಲಪ್ಪ ನಿನಗೆ" ಅಂತ ಆಶೀರ್ವಾದ ಮಾಡಿದ ಮೇಲೆ ಮುಂದಿನ ಮನೆ. "ಅಜ್ಜ ಚಂದಪ್ಪನ ನೋಡಿದೆಯ" ನೂರು ವರ್ಷದ ಗುಂಡಜ್ಜನ ಕಾಲಿಗೆ ಬಿದ್ದು ಹೇಳಿದ ಎದರಮನೆ ಪಾಪುಗ "ಅಯ್ಯೊ ಈ ವಯಸ್ಸಿನ್ಯಾಗ ಯಾವ ಚೆಂದಪ್ಪನೊ ಏನೊ ನೀ ಯಾರು ಅಂತನೆ ಗೊತ್ತಿಲ್ಲ, ಚೆಂದಪ್ಪ ಎಲ್ಲ ಕಂಡಾನು ಮಗ" ಮುದುಕ ಕೇಳಿದ ವಯಸ್ಸಿನ ತಾಳೆ ಹಾಕಿ ಹೇಳಿದ "ಅಲ್ಲ ಮುದಿಯ ನೂರಾದರೂ ಇನ್ನೂ ಬದುಕಿನ ಮೇಲೆ ಆಸೆನೆ ಹೋಗಲಿಲ್ಲಾ ನಿಂದು ಇನ್ನೂ ಎಷ್ಟು ವರ್ಷ ಅಂತ ಬದಕ್ತಿಯಾ. ಅಲ್ಲಾ ನಿನ್ನ ವಯಸ್ಸಿನ ಕಾಗೆಗಳೆ ಬದುಕಿಲ್ಲ ಭೂಮಿ ಮೇಲೆ ಅಂತೀನಿ" ಕಿಚಾಯಿಸಿದ. "ಯಾಕ್ಲ ಹಲಕಟ್, ಆ ದೇವರು ನನ್ನ ಹೆಸರಿನ ಚೀಟಿ ಹರಿಯೊ ಮಟ ಬದುಕ್ತಿನಿ. ಎಲ್ಲಾನೂ ಕೂಡಿ ಬರಬೇಕು, ನನಗೂ ಬ್ಯಾಸರಾಗೈತೆ ಈ ಬದುಕು ಬರಬೇಕಲ್ಲ ಸಾವು" ಗುಂಡಜ್ಜನ ಉಸಿರು ಹೊರಗ ಹಾಕಬೇಕೆಂದ್ರು ಉಸಿರು ಇಲ್ಲದಂಗಾತ್ತು "ಆತ ಬಿಡು, ನಾವು ನಿನ್ನ ಅರ್ಧದಷ್ಟು ಬದುಕ್ತಿವೊ ಇಲ್ಲ ಗೊತ್ತಿಲ್ಲ ಆಶೀರ್ವಾದ ಮಾಡು" ಮುದುಕನ ಕಾಲಿಗೆ ಬಿದ್ದು ಆಶೀರ್ವಾದ ಪಡೆಯೋದಕ್ಕೆ ನೋಡಿದ ಹುಲಿಯೂರ. ಗುಂಡಜ್ಜ ಇನ್ನೂ ಗಡದ್ದಾಗೆ ಅದಾನ, ನೂರ ವರ್ಷ ಅನ್ನೋದೆ ಇಲ್ಲ ಮುದುಕಗೆ ಅಂತ ಹೈರಾಣಾಗಿ ಕಾಲಿಗೆ ಬಿದ್ದು ಬಿರುಮಾತಾಡದೆ ಹೊರಟ.

ಎಲ್ಲಾ ಓಣಿಗಳಲ್ಲಿ ಸುತ್ತಾಡಿ, ಜಗಳ ಆಡಿ ಕಡುವೈರಿಗಳಾದ್ರು, ಯುಗಾದಿಗೆ ಅವರ ಮನೆಗೆ ಹೋಗಿ ಶುಭಾಶಯಗಳನ್ನು ಹೇಳುವುದೆ ಯುಗಾದಿಯ ವಿಶೇಷವಾಗಿತ್ತು. ತೊಪುನ ತಮ್ಮಂದಿರು ಅವನ ದುಡಿಮೆಗೆ ಹೊಟ್ಟೆಕಿಚ್ಚು ಪಟ್ಟು ವರ್ಷಕ್ಕೆ ಎರಡು ಸಲನಾದರೂ ಜಗಳ ಆಡಿ ತೆಕ್ಕಮಾರಿ ಬೀಳ್ತಿದ್ರು. ಅವನ ದುಡಿಮೆ ಸಹಿಸದ ಬಾರಿಕರ ಬಿದ್ದಾಡಪ್ಪ ಮತ್ತು ಅವನ ಮಕ್ಕಳು ಹನುಮ, ಕೇಂಚಿರ, ಕೋದಂಡ, ರಾಮನಿಂಗ, ಕಾಟ, ಕಂಚಿಕಟ್ಟಿ ಗುದ್ದಾಡಿದ್ರು ಯುಗಾದಿಗೆ, "ಎನ ಮಾವ ಚಂದಪ್ಪ ನೋಡಿದೆ" ಅಂತ ಮಾತಾಡಿಸುತ್ತಿದ್ದರು. "ಹೂನಪ್ಪ ನೀ ನೋಡಿದ್ಯಾ" ಅಂತ ತೊಪುನಾಯ್ಕ ನಗುತ್ತಲೆ ಮಾತಾಡಿಸಿ ಎದೆಯೊಳಗಿನ ವೈರತ್ವವನ್ನು ಮರೆಯುತ್ತಿದ್ದ. ಜಗಳ, ತಿಟವಾಟ ಆ ಕ್ಷಣಕ್ಕೆ ಮಾತ್ರ ವರ್ಷಕ್ಕೆ ಒಮ್ಮೆ ಮಾತ್ರ ಬರುವ ಹೊಸವರ್ಷ ಉಗಾದಿ ಮುಂದಿನ ಸಾರಿ, ಯಾರು ಸತ್ರೊ ಯಾರು ಬದುಕಿದ್ರೊ ಕಂಡವರ್ಯಾರು. ಎಲ್ಲಾ ವಿಧಿ ಲಿಖಿತ. ಹಂಗಾಗಿ ಈ ವರ್ಷದ ಚಂದ್ರಮ ಬಹಳ ಮುಖ್ಯ. ಭೂಮಿಗೆ ಬಿದ್ದ ಹೋಗುವಾಗ ಒಯ್ಯುವುದೇನಿದೆ, ದ್ವೇಷ, ಅಸೂಯೆ, ದಿಮಾಕು, ಶ್ರೀಮಂತಿಕೆ,

ದಿರ್ಬೆವು ಎಲ್ಲಾ ಭೂಮಿ ಮೇಲೆ ಬಿಡಬೇಕು, ಅನ್ನೋದನ್ನ ಯುಗಾದಿ ಕಲಿಸಿತ್ತು. ತೊಪುನ ಕಡುವೈರಿ ಕಾಮುಗ ಸತ್ತಾಗ, ಮೊದಲು ಹೆಗಲು ಕೊಟ್ಟಿದ್ದೆ ತೊಪುನಾಯ್ಕ. ಹಂಗಾಗಿ ತಾಂಡದಾಗ ತೊಪುನ ಕೂಡ ಜಗಳ ಆಡಿದವರು ಬಹಳ ದಿನ ವೈರತ್ವ ಕಟ್ಟಿಕೊಳ್ಳುತ್ತಿರಲಿಲ್ಲಾ. ಅವನ ಎಲ್ಲಾ ಮಕ್ಕಳು ಹಂಗೇಯ, "ಮರತುಬಿಡು ಆದದ್ದು ಆಯಿತು." ಹೊಂದಾಣಿಕೆ ಮಾಡಿಕೊಂಡು ತಾವೆ ಸೋತು ಮುಂದು ಮರೆಯುತ್ತಿದ್ದರು. ಅದರಲ್ಲೂ ಹುಲಿಯೂರನ್ನ ಕಂಡು ಯಾರು ಏನು ದಿಮಾಕ ಮಾಡ್ತಾನ, ಏನ ಸೊಕ್ಕಿನಾಗ ಅದಾನ ಅಂತ ಯಾರು ಹೇಳಲಿಲ್ಲಾ.

* * *

26. ಬೇಸಿಗೆಯಲ್ಲಿ ಹೂಡಿದ ಗೊಂದಲಿಗರ ಆಟ

ಬುಡಗ ಜಂಗಮರು, ಯಾಸಗಾರರು, ಗೊಂಧಳಿಗರು ಅನ್ನೊ ಜನಸಮುದಾಯ ಊರೂರಿಗೆ ತಿರುಗಾಡಿ ಗೊಂದಲಿಗರ ಹಾಡು ಅಂತ ಪ್ರಸಿದ್ಧವಾಗಿರುವ ಕೆಲವು ಹಾಡುಗಳನ್ನು ಹಾಡಿ ಬೇಡುತ್ತಿದ್ದರು. ಇವರು ವರ್ಷಕ್ಕೆ ಒಂದು ಸಾರಿ ಮಾತ್ರ ಹಳ್ಳಿಗೆ ಬರುತ್ತಿದ್ದರು. ಅವರು ತಿರುಗಾಡಿದ ಪ್ರದೇಶಗಳೆ ಇರಲಿಕ್ಕಿಲ್ಲ. ಅವರ ಜೊತೆಗೆ ಅವರ ಕುಟುಂಬದ ಸದಸ್ಯರು, ಮಕ್ಕಳು, ಅವರು ಸಾಕಿರುವ ನಾಯಿ, ಕೋಳಿಗಳು ಜತೆಗೆ ಇರುತ್ತಿದ್ದವು. ಯಾರೊ ಐದು ಪೈಸಾ, ಯಾರೊ ಪಾವು ಅರ್ಧಪಾವು ಜೋಳ ಕೊಡುತ್ತಿದ್ದರು. ಅದನ್ನೆ ತಗೊಂಡು ಮುಂದಿನ ಮನೆಗೆ ಹೊರಡುತ್ತಿದ್ದರು. ಯಾರಾದರೂ ಊರ ಮುಖಂಡರು "ಸಂಜೆ ಕತೆ ಹೇಳುವಿಯಂತೆ ಇರು" ಅಂದರೆ ಅವತ್ತು ಸಂಜೆ ಜನ ಸೇರುವ ಜಾಗದಾಗೆ ಅವರದೆ ಒಂದು ವೇದಿಕೆ ಸಜ್ಜು ಮಾಡಿಕೊಂಡು ಅವರದೆ ವೇಷಭೂಷಣ ಹಾಕಿಕೊಂಡು ಕೈಯೊಳಗೆ ಒಂದು ತಂಬೂರಿ, ತಾಳ, ಏಕತಾರಿ ಇಷ್ಟೆ ಅವರ ಸಂಗೀತದ ಉಪಕರಣಗಳು. ಒಬ್ಬ ಮುಖ್ಯ ಹಾಡುಗಾರ, ಹಿಮ್ಮೆಳ, ಅವರೆ ಹಾಡುತ್ತ ಅವರೆ ನುಡಿಸುತ್ತ ಕತೆಯನ್ನು ಹೇಳಿದರೆ ಕಂಠಮಟ ಸರಾಯಿ ಕುಡಿದವನು ದಿಮ್ಮಗೆ ಕಣ್ಣುಮುಚ್ಚಿ ಒಮ್ಮೆಲೆ ಕಣ್ಣುಬಿಟ್ಟು "ಹೌದು ಹೌದು, ಹೇಳು ಗೊಂದಲಿಗಣ್ಣ, ಭಾರಿ ಹೇಳಾಕತಿ" ಬಾಯಾನ ಮಾತು ಬಾಯಗಿರುತ್ತಿದ್ದಂತೆ ಸಣ್ಣ ಘೊರಕೆ ಸದ್ದು. ಜನರನ್ನು ತಮ್ಮ ಕತೆಯ ಒಳಗೆ ಒಯ್ಯುವುದೆ ಅವರ ಮುಖ್ಯ ಕೆಲಸವಾದ್ದರಿಂದ ಕೇಳುವ ನಾಕು ಮಂದಿನಾದ್ರುವೆ ತಮ್ಮ ಕತೆ ಮನಮಟ್ಟಲಿ ಅಂತೇಳಿ ಸೋಮಶೇಖರ, ಚಿತ್ರಶೇಖರಾಜರ ಕತೆಯನ್ನು ಇಡೀ ರಾತ್ರಿ ಹೇಳುತ್ತಿದ್ದರು. ಹುಲಿಯೂರ ಅವರ ಮನೆಯವರು ಹಿಡಿದಿದ್ದ ಜಾಗದಲ್ಲಿ ಕುಳಿತು ಕೇಳಿಸಿಕೊಳ್ಳುತ್ತಿದ್ದ. "ಅಲ್ಲ ಓದಿದ್ದು ಅರ್ಧಗಂಟೆಯಾದ ಮೇಲೆ ನೆನಪಿರೋದಿಲ್ಲ. ಇವರು ಏನೂ ನೋಡದೆ ಪುರಾಣಕತೆಯನ್ನು ಈ ಪಾಟಿ ಹೇಳ್ತಾರಲ್ಲ, ಇನ್ನೂ ಓದಿದ್ದರೆ ರ್‍ಯಾಂಕ್ ಬರುತಿದ್ದರೋ ಏನೋ" ಅಂದುಕೊಂಡು ಪಕ್ಕದಲ್ಲಿ ಗಂಭೀರವಾಗಿ ನೋಡುತ್ತಿದ್ದ ತಂಗಿಯ ತಲೆಗೆ ಪಟ್ಟಂತ ಹೊಡೆದ.

"ಯಾಕಲೆ ಸುಮ್ನೆ ಕೇಳು" ವಾರ್ನಿಂಗ್ ಕೊಟ್ಟಳು. "ನಿನಗೇನು ಅರ್ಥ ಆಗ್ತಿದೆ ಹೋಗಿ ಮಲಕ್ಕೊ ಹೋಗು" ಗದರಿಸಿದ. "ಮುಂಜಾನೆ ಗಡಾನೆ ಎಬ್ಬಿಸ್ತಾರ ಸುಮ್ಮನಿರು ಇದೆ ನೆಪದಾಗ ಸೂರ್ಯ ಬರೊ ಮಟಾನು ಹಾಸಗಿ ಮೇಲೆ ಬಿದ್ಕೊಬಹುದು" ಅಂದಳು. "ಶಬ್ಬಾಷ್ ಮಗಳೆ ಮನಿಕೆಲಸ ಮಾಡೋದ ಅಗತ್ಯೆತಂತ ಈ ನಾಟಕ" ಅಂದವನೆ ಗೊಂದಲಿಗರ ಕತೆಯನ್ನು ಅರ್ಥ ಮಾಡಿಕೊಳ್ಳುವ ಪ್ರಯತ್ನ ಮಾಡಿದ. ಎಷ್ಟೊ ವರ್ಷಗಳಿಂದ ಈ ಕತೆಗಳನ್ನು ಹೇಳಿ ಹೇಳಿ ಕಂಠಪಾಠ ಆಗಿದೆ. ಅವೆ ಹಾಡುಗಳು, ಅವೆ ಸನ್ನಿವೇಶಗಳು ಆದರೆ ಜನ ಮಾತ್ರ ಬೇರೆ. ಆದರೂ ಹೊಟ್ಟೆಪಾಡು ಏನೆಲ್ಲಾಮಾಡಿಸುತ್ತೆ ಮನುಷ್ಯನಿಗೆ ಇವರ ಬದುಕಿಗೆ ಒಂದು ನಿಶ್ಚಿತತೆ ಅನ್ನೋದೆ ಇಲ್ಲವೆ? ಕತೆಯೊಳಗೆ ಪ್ರವೇಶ ಮಾಡಿದ್ದ ಹುಲಿಯೂರನಿಗೆ ಯಾಕೊ ಅವರ ಬದುಕು ಕಾಡತೊಡಗಿತ್ತು. ಮುಂಜಾನೆ ಎದ್ದ ಮೇಲೆ ಮತ್ತೊಂದು ಊರಿನ ಹಾದಿ. ಈ ಊರಿನ ಜೊತೆಗೆ ಇವರ ಸಂಬಂಧ ಇಷ್ಟೆ. ಮತ್ತೊಮ್ಮೆ ಸಿಕ್ಕಾಗ ಯಾರು ಎಂಬ ನೆನಪು ಕೂಡ ಉಳಿಯದು. ಆದರೆ ಬರುವಾಗ ಏನೊ ಒಂದು ಆತ್ಮೀಯತೆ, ಪರಿಚಯ ಬೆಳೆಸಿಕೊಂಡು ಸಿಗುವ ಒಂದಿಷ್ಟು ಕಾಳಿಗೆ ಒಂದ ಹನಿ ಚಹಾಕೂಡ ಹಲುಗಿಂಜಿ ಸಂಬಂಧ ಬೆಳೆಸುತ್ತಾರೆ.

* * *

27. ಮಾಟಗಾರ ಸಿದ್ದಪ್ಪನ ಇದಿರು ಮೋಡಿಯಾಟ

ಸುತ್ತ ಹಳ್ಳಿಗೆಲ್ಲಾ ದುರ್ಗಾಪುರದ ಸಿದ್ದಪ್ಪ ಮಾಟಗಾರ. ತಂತ್ರ ಬಲ್ಲವನು, ಮದ್ದು ಮಾಡ್ತಾನೆ, ಕೆಟ್ಟವನು ಅಂತ ಕುಖ್ಯಾತಿ ಪಡೆದಿದ್ದ. ದುರ್ಗಾಪುರದವರೆ ಯಾರು ಅವನ ಸುದ್ದಿಗೆ ಹೋಗುತ್ತಿರಲಿಲ್ಲಾ. ದೇವರು ಯಾವಾಗಲೂ ಒಳ್ಳೆಯದ್ದೇ ಮಾಡುತ್ತಾನೆ. ಕಷ್ಟ ಬಂದವರಿಗೆ ರಕ್ಷಣೆ ಕೊಡುತ್ತಾನೆ ಎನ್ನುವುದು ಎಲ್ಲರ ನಂಬಿಕೆ. ಕೆಟ್ಟದ್ದು ಆದಾಗ ತಾನೆ ದೇವರು ನೆನಪಾಗುವುದು. ಆ ಕೆಟ್ಟದ್ದು ಮಾಡಲು ಕೆಲವು ದೇವರುಗಳಿದ್ದಾರೆ. ಅದರಲ್ಲಿ ಭೂತಪ್ಪನೂ ಒಬ್ಬ. ಸಿದ್ದಪ್ಪ ಭೂತ ಸಾಕಿದ್ದಾನೆ ಯಾರಾದರು ಅವನ ವಿರುದ್ಧ ಮಾತಾಡಿದರೊ ಇಲ್ಲ ಅವನಿಗೆ ಅವಾಚ್ಯ ಶಬ್ಧಗಳಿಂದ ನಿಂದಿಸಿದರೆ ಅವರ ಮೇಲೆ ಭೂತ ಬಿಡುತ್ತಾನೆ ಅಂತ ಮಂದಿ ಮಾತಾಡಿಕೊಳ್ಳುತ್ತಿದ್ದರು. ಈ ಸಿದ್ದಪ್ಪ ಸಂಸಾರಸ್ಥ ಮದುವೆಯಾಗಿ ಐದಾರು ಮಕ್ಕಳಿದ್ದಾರೆ. ಆದರೂ ತಮ್ಮ ಎದುರಾಳಿಗೆ ತಮಗಿಂತ ಚೆನ್ನಾಗಿ ಸಂಪಾದನೆ ಮಾಡುತ್ತಿರುವ ತಮ್ಮ ಸಂಬಂಧಿಗಳಿಗೆ, ಅಣ್ಣತಮ್ಮಂದಿರಿಗೆ ಕೇಡಾಗಲಿ ಎಂದು ಬೇಡಿಕೆ ಸಲ್ಲಿಸಲು ಬಂದವರಲ್ಲಿ ಹೆಚ್ಚು ಹೆಂಗಸರೆ ಆದ್ದರಿಂದ ಸಿದ್ದಪ್ಪ ಅವರೊಂದಿಗೆ ಸಲಿಗೆ ಬೆಳೆಸಿಕೊಂಡವನೆ ಅಂತಾನು ಪುಕಾರಿತ್ತು. ಮೊದಲೆ ಕೆಟ್ಟವನು, ಇವರೆ ಹೋಗಿ ಸಲಿಗೆ ಹಿಡಿಸಿದರೆ ಅವನು ಬಿಟ್ಟಾನೆಯೇ? ಅಂತ ಮಂದಿದೂ ಒಂದು ವಾದವಿತ್ತು. ಅದೇನೆ ಇದ್ದರು, ಸಿದ್ದಪ್ಪ ತನ್ನ ಕೈಚಳಕ ತೋರಿಸುವುದಕ್ಕೆ ಅವನಂತೆ ಕೆಲವಿದ್ಯೆ ಬಲ್ಲವರಿಗೆ ಸವಾಲು ಹಾಕುತ್ತಿದ್ದ. ಈ ಮೋಡಿ ಇದರು ಮೋಡಿ ಆಟ ನೋಡುವುದಕ್ಕೆ ಸುತ್ತಮುತ್ತಲ ಹಳ್ಳಿ ಮಂದಿ ಬಿಟ್ಟುಬಿಡದೆ ದುರ್ಗಾಪುರದ ಹೈಸ್ಕೂಲು ಮೈದಾನಕ್ಕೆ ಧಾವಿಸುತ್ತಿದ್ದರು. ಒಬ್ಬರಿಗೆ ಐದು ಪೈಸೆ ಪ್ರವೇಶ ಧನ. ಸುತ್ತಲು ಹಗ್ಗಕಟ್ಟಿ ಒಂದು ಸೀಮೆಯನ್ನು ಮಾಡಲಾಗಿತ್ತು. ಮಂದಿ ಹಗ್ಗದ ಹೊರಗೆ ಕುಳಿತು ಆಟವನ್ನು ನೋಡಬೇಕಿತ್ತು.

ಆಟ ಆರಂಭವಾಗುತ್ತಿದ್ದಂಗೆ ಸಿದ್ದಪ್ಪನನ್ನ ಬೆಂಡಿನ ಪಲ್ಲಕ್ಕಿಯಲ್ಲಿ ಕುಂದ್ರಿಸಿ ಮೆರವಣಿಗೆ ಮಾಡುವ ಮೂಲಕ ಜಾಗಕ್ಕೆ ಕರೆತರಲಾಗಿತ್ತು. ಆದರೆ ಅದು ಹೇಗೆ ಎನ್ನವುದೆ ಮಂದಿಗೆ ಹೈರಾಣಾ ಮಾಡುತ್ತಿತ್ತು. "ಇವನಪ್ಪ್ನ ಎಂಭತ್ತ ಕೇಜಿ

ಅದಾನ ಆದ್ರೂ ಜೋಳದ ದಂಟಿನಲ್ಲಿರುವ ಬೆಂಡುಗಳನ್ನ ಸುಲಿದು ಮಾಡಿರುವ ಅಡ್ಡಪಲ್ಲಕ್ಕಿಯಲ್ಲಿ ಬರ್‍ತಾನಂದ್ರೆ ಅವನ ತಾಕತ್ತು ಭಾರಿ ಐತೆ ಬಿಡು" ಅಂತ ಮಂದಿ ಆಡಿಕೊಂಡ್ರೆ, ಅವನ ಹಳೆ ಸೆಟಪ್ಪುಗಳು ಹೆಮ್ಮೆಯಿಂದ ಎದಿ ಉಬ್ಬಿಸಿ ಅವನ ಕಡೆಗೆ ನೋಡುತ್ತಿದ್ದವು. ವಿಶೇಷವಾಗಿ ಪೋಷಾಕಿನಲ್ಲಿರುವ ಅವನನ್ನ ಕಣ್ಣುತುಂಬ ತುಂಬಿಕೊಳ್ಳುವ ಪ್ರಯತ್ನಮಾಡುತ್ತಿದ್ದವು. ಮಂದಿನಾಕು ಕಡೆಗಳಲ್ಲಿ ಕೆಕೆ, ಸಿಳ್ಳೆ, ಜೈಕಾರದ ನಡುವೆ ಅವನ ಚಂಡಾಲ ಶಿಷ್ಯನೊಂದಿಗೆ ಪ್ರವೇಶ ಮಾಡಿದ್ದ ಮಂದಿ ಗಂಭೀರವಾಗಿ ಕುಳಿತು ಆಟ ಚಾಲು ಆಗೋದನ್ನೆ ಕಾಯೋರು ಎದುರು ಮೋಡಿಯವನು ಮೊಟ್ಟಮೊದಲಿಗೆ ತುಂಬಿದ ಮೂರು ದೊಡ್ಡ ಮಡಕೆಗಳ ನೀರನ್ನು ಒಬ್ಬನೆ ಗಟಗಟ ಕುಡಿದು ಖಾಲಿ ಮಾಡುತ್ತಿದ್ದ. ನಂತರ ರಾಶಿ ಕಳ್ಳಿಯನ್ನ ತಿಂದು ಕೆಂಪು, ಹಸಿರು ಪೇಪರ್ ತೆಗೆಯುತ್ತಿದ್ದ. ಸಿದ್ದಪ್ಪನ ಶಿಷ್ಯ ಬಂದವನೆ ಅವನ ಮೇಲೆ ಹೂವು ಎಸೆಯುತ್ತಿದ್ದ. ಎದರು ಮೋಡಿಯವನ ಮೈತುಂಬ ಚೇಳುಗಳು. ಎದರು ಮೋಡಿಯವನು ಒಂದೊಂದೆ ಚೇಳನ್ನ ತಗೊಂಡು ಬಾಯಿಗೆ ಹಾಕ್ಕೊಂಡು ತಿನ್ನುತ್ತಿದ್ದ. ಆಟ ಹೊಸ ಹೊಸ ರೂಪ ತಳೆಯುತ್ತಿತ್ತು. ಸಿದ್ದಪ್ಪ ಲಿಂಬೆಹಣ್ಣು ಕೊಯ್ದು ಬಿಸಾಕಿದರೆ ಅವನ ಮೈಯಿಂದ ರಕ್ತ ಸೋರುತಿತ್ತು. ಮಂದಿ ದಂಗಾಗಿ ನೋಡುತ್ತಿದ್ದರು. "ಅಲ್ಲಲೆ ಹುಲಿಯೂರ, ಅವನ ಕೈಯಾಗ ಚಾಕು ಐತೆ, ಲಿಂಬೆ ಹಣ್ಣು ಅವನು ಕೊಯ್ತಾನ ಇವನವ್ವನ, ಇವನ ಮೈಯಿಂದ ರಕ್ತ ಹೆಂಗ ಬಂತೂ" ಹುಲಿಯೂರ ಗೆಳೆಯ ಗಾದಿನಿಂಗ ಕೇಳಿದ. "ಲೇ ಗಾದಿನಿಂಗ, ಮನ್ನಿನಾಗ ಮಾಸ್ತರ ಏನು ಹೇಳಿದ? ಲೇ ಪೆದ್ದಮುಂಡೆವ ಅದು ಕಣ್ಣ್ ಕಟ್ ಆಟ ಅದನ್ನ ನೋಡಿ ನೀವು ಅಲ್ಲೆ ಮರತು ಬಿಡ್ರಿ. ಯಾಕಂದಿ, ಅದರ ವೈಜ್ಞಾನಿಕ ಹಿನ್ನೆಲೆಗಳು ಬೇರೆ ಅದಾವ. ತಲಿ ಎಲ್ಲಿಟ್ಟಿಯಾ ಸುಮ್ಮನೆ ನೋಡು, ಯಾಕಿಂಗ ಆಡಿಯಾ" ಹುಲಿಯೂರ ಕುತೂಹಲದಿಂದ ನೋಡುತ್ತಿದ್ದವನಿಗೆ ಗಾದಿನಿಂಗ ಮಾತು ವಿಚಲಿತಗೊಳಿಸಿತ್ತು. ಅಷ್ಟಕ್ಕೆ ಬಿಟ್ಟನು ಗಾದಿನಿಂಗ ಅಂತ ಸುಮ್ಮನಾದ. "ಅಲ್ಲಲೆ ನಾವು ಹಿಂಗ ಮಾಡಬಹುದ?" ಮಾರನೆ ಪ್ರಶ್ನೆ "ಅಲ್ಲಲೇ ತಮ್ಮ ನೀನು ಇದೇ ಊರಾಂವ, ಸಿದ್ದಪ್ಪ ನಿಮ್ಮೂರವನೆ ಒಂದ ಮಾತು ಆತಗೆ ಯಾಕೆ ಕೇಳಬಾರದು?" ಹುಲಿಯೂರ ಮುಟ್ಟಿನೋಡ್ಕೋಳೊ ಹಂಗೆ ಹೇಳಿದ. "ಅದು ಸರಿಬಿಡು, ಯಾವತ್ತಾರು ಆ ಯಪ್ಪ ಸಿಕ್ಕರೆ ಕೇಳ್ತೀನಿ" ಅಂದವನೆ ಸುಮ್ಮನಾದ. ಮುಂದಿನದ್ದು ಬಹಳ ರೋಚವಾಗಿತ್ತು. ಒಂದು ಕಂಬಕ್ಕೆ ಕಟ್ಟಿದ ಕೋಳಿಯನ್ನು ಎದಿರು ಮೋಡಿಯವನು ಬಾಯಿಯಿಂದ ಬಿಚ್ತಾ ಇದ್ದ. ಸಿದ್ದಪ್ಪನ ಚಾಂಡಾಲ ಶಿಷ್ಯ ಆ ಕಂಬಕ್ಕೆ ಜೋರಾಗಿ ಬಾರುಕೋಲಿನಿಂದ ಹೊಡೆಯುತ್ತಿದ್ದ. ಬಿಚ್ಚುತ್ತಿದ್ದ ಎದಿರು ಮೋಡಿಯವನ ಮೈಮೇಲೆ ರಕ್ತದುಂಡೆಯಂತೆ ಬಾಸುಂಡೆಗಳು. ಇದನ್ನ ನೋಡಿ ಮಂದಿ ಹೈರಾಣ ಆಗಿ ಕೂಗತೊಡಗಿದರು. ಕೋಳಿ ಬಿಚ್ಚವುದೆ ಅರ್ಧಗಂಟೆಯಾಗಿತ್ತು. ಬಾಯಿ ರುಚಿಗೆ ಸಿಗ್ತಲ್ಲ ಕೋಳಿ ಅಂತ ಎದಿರು ಮೋಡಿಯವನು ಬಿಡಲಿಲ್ಲಾ ಹಲ್ಲಿಂದ ಕಚ್ಚಿ ಗಂಟನ್ನು ಸಡಿಲಿಸಿ ಸಂಜೆ

ಹೆಂಡದ ಮೇಲೆ ಪಾಡಾಗುತ್ತೆ ಪಾವುಗೊಳಿ ಅಂತ ಪ್ರಯಾಸ ಪಟ್ಟು ಬಿಚ್ಚಿದ. ಅವನು ಬಿಚ್ಚುವಷ್ಟರಲ್ಲೇ ಅವನ ಬೆನ್ನು ತುಂಬ ಜಾಗವೆ ಇಲ್ಲದಂತೆ ಬಾಸುಂಡೆಗಳ ಗುರುತುಗಳು ಮೂಡಿದ್ದವು.

ಸಿಟ್ಟಿಗೆ ಬಂದ ಎದಿರು ಮೋಡಿಯವನು ಕೈಯಾಗಿದ್ದ ಬೂದಿಯನ್ನು ಸಿದ್ದಪ್ಪನ ಶಿಷ್ಯನ ಮೇಲೆ ಊದಿದ. ಸಿದ್ದಪ್ಪನ ಶಿಷ್ಯ ಮೂರ್ಛೆ ಹೋಗಿ ನೆಲದ ಮೇಲೆ ಉರುಳಿದ. ಸಿದ್ದಪ್ಪಗೆ ಸಿಟ್ಟುಬಂತು. ಕೈಯೊಳಗೆ ಏನೊ ಮಂತ್ರ ಉಚ್ಚರಿಸಿ ಅವನ ಮೇಲೆ ಬಿಸಾಕಿದ. ಕಡಜಗಳ ಗುಂಪು ಅವನನ್ನ ಬೀಳಿಸಿ ಬೀಸಿ ಕಚ್ಚತೊಡಗಿದವು. ಚಣ್ಣದಲ್ಲೆ ಹೆತಗೊಂಡ ಮೋಡಿಗಾರ ಹಳ್ಳದ ಕಡೆಗೆ ಓಟಕಿತ್ತ. ಅವನ ಕೈಯಲ್ಲಿದ ಚರಗಿಯಿಂದ ನೀರು ತಗದು ಶಿಷ್ಯನ ಮೂತಿಗೆ ಬಿಸಾಕಿದ ಶಿಷ್ಯ ಗರಬಡಿದವನಂತೆ ಎದ್ದ. ಇಷ್ಟು ಆಟ ಮಾಡುವಷ್ಟೊತ್ತಿಗೆ ನಾಕುವರೆಯಾಗಿತ್ತು. ಆಟವನ್ನ ಅಲ್ಲಿಗೆ ನಿಲ್ಲಿಸಲಾಯಿತು. ಅರ್ಧ ಸಾಮಾನುಗಳು, ಗೊಂಬೆಗಳ ಆಟ ನಡೆಯಲೇ ಇಲ್ಲ. ಎಲ್ಲರೂ ಕುತೂಹಲದಿಂದ ಕುಳಿತದ್ದು ದೊಡ್ಡದೊಂದು ಕೆಸರಿನ ಗೊಂಬೆ ಮಾಡಿ ಬಂಡಿಯ ಗಾಲಿಯನ್ನು ಅದರ ಬಾಯಿಗೆ ತುರಕಲಾಗಿತ್ತು. ಅಲ್ಲಿ ಏನು ನಡೆಯಬಹುದು? ಬಂದವರ ತಲೆಯೊಳಗೆ ಹುಳ ಕಡಿಯತೊಡಗಿತು. "ಲೇ ಹುಲಿಯೂರ, ನಾವು ಕೊಟ್ಟ ರೊಕ್ಕ ಸುಮ್ಮನೆ ಹಾಳಾತ ನೋಡಲೆ, ಅಲ್ಲಪ್ಪ, ಸಣ್ಣಪುಟ್ಟದ್ದು ತೋರ್ಸಿ ಸೂಳಿಮಕ್ಕಳು ಈ ದೊಡ್ಡಗೊಂಬಿ ಆಟಾನ ತೋರಿಸಲಿಲ್ಲ. ಹೌದು ಅಂದಂಗೆ ಇಲ್ಲಿ ಏನ ನಡಿತೈತಲೆ, ನಿನಗೇನಾರು ಗೊತ್ತೈತ" ಸಣ್ಣ ಹುಡುಗರಂತೆ ಕೇಳಿದ ಗಾದಿನಿಂಗ. "ಲೇ ಹಡ್ಸಿಕೆ, ನೀನು ನೋಡಾಕ ಹತ್ತಿ, ನಾನು ನೋಡಾಕಹತ್ತಿನಿ. ನೀ ಏಟು ನೋಡಿದ್ಯೊ ನಾನು ಅಷ್ಟೆ ನೋಡಿದೆ ಹೌದೊ ಅಲ್ಲೊ" ಕೇಳಿದ ಹುಲಿಯೂರ. "ಹೌದು" ಅಂದ ಗಾದಿನಿಂಗ. "ಮುಂದಿಂದು ನಿನಗ ಗೊತ್ತಾತ?" ಹುಲಿಯೂರನ ಮರುಪ್ರಶ್ನೆ "ಇಲ್ಲ ಬಿಡು ಹೆಂಗ ಗೊತ್ತಾದೀತು" ಗಾದಿನಿಂಗ ಉತ್ತರಿಸಿದ. "ನನಗೂ ಅಷ್ಟೆ ಮುಂದೇನು ಆಗುತ್ತೆ? ಆಗಬಹುದು ಅನ್ನೊ ಕಲ್ಪನೆ ಇಲ್ಲ ಏನಪ್ಪ, ನೀನು ಇದೇ ಊರವನು" ಮುಂದಿಂದ ಹೇಳಾಕ ಮುಂಚೆ ಗಾದಿನಿಂಗನೆ, "ಆತ ಬಿಡಲೆ ಆ ಮಂತ್ರವಾದಿ ಹಡ್ಸಿಮಗ ಸಿಕ್ಕಾಗ ಕೇಳ್ಕೊಂತಿನಿ ನೀ ಯಾಕ ನನ ಮೇಲೆ ಸಿಟ್ಟ ಆಗ್ತಿಯಾ? ಏನೊ ಲಮಾಣ್ಯಾರ ಹುಡುಗ ಬುದ್ಧಿವಂತ ಅಂತ ಕೇಳಿದ್ನಪ್ಪ" ಅಂದ. "ಹೌದು, ಬರಿ ಬುದ್ಧಿವಂತ ಅಂದಿದ್ರ ಏನಾಗುತ್ತಿತ್ತು ಲಮಾಣಿ ಅನ್ನೋದನ್ನ ಹೇಳಲೇಬೇಕಿತ್ತ" ಬಂದ ಸಿಟ್ಟನ್ನು ನುಂಗಿಕೊಂಡವನೆ ಹುಲಿಯುರ ಮುಂದಕ್ಕೆ ಹೊರಟ. "ತಪ್ಪಾತಲೇ, ಸಾರಿ, ಬೇಕಂತ ಹೇಳಲಿಲ್ಲಾ" ಗಾದಿನಿಂಗ ಬೇಡತೊಡಗಿದ. "ಹೋಗಲಿ ಬಿಡೊ ನಾನೇನು ಸಿಟ್ಟಾಗಿಲ್ಲ" ಅಂದವನೆ ತಾಂಡದ ಕಡಿಗೆ ಜಾಡಹಿಡಿದ.

ಅವನ ತಾಂಡದಿಂದಲೂ ಬಹಳ ಮಂದಿ ಸಿದ್ದಪ್ಪನ ಕೈಚಳಕ ನೋಡಾಕ ಬಂದಿದ್ರು. ಎಲ್ಲರೂ ಮಂತ್ರವಾದಿ ಸಿದ್ದಪ್ಪಂದೆ ಗುಣಗಾನ ಮಾಡುತ್ತಿದ್ದರು.

“ಅಲ್ಲೊ ಕಾಕ, ಆ ದೊಡ್ಡ ಗೊಂಬಿವರಿಗ ಆಟ ಬರ್ಲಿಲ್ಲ” ಯಾರೊ ಮುಂದಕ್ಕೆ ಹೊಂಟ್ಟಿದ್ದವನು ಹುಸೇನಿಗ ಕೇಳಿದ. “ಲೇ ತಮ್ಮ ಅದು ಸುಲಭದ ಆಟ ಆಲ್ಲ ಏನಪ್ಪ, ಅತ್ಯಂತ ಭಯಾನಕವಾದದ್ದು. ಮಂದಿ ಹೆದರಿ ಕಂಗಾಲಾದರು ಅಂತ ಯಾವತ್ತು ಆ ಆಟವನ್ನು ತೋರಿಸೋದಿಲ್ಲ” ಹುಸೇನ ಸಾಬಿ ತನ್ನ ತಿಳುವಳಿಕೆಯನ್ನ ವ್ಯಕ್ತಪಡಿಸಿದ್ದ. “ಅಲ್ಲಪ್ಪ, ಯಾವತ್ತು ಆ ಆಟ ಆಡಿಲ್ಲ ಅಂತಿಯ ಭಯಾನಕವಾದದ್ದು ಅಂತಿಯ, ಅಲ್ಲ ಅದನ್ನ ಸುಮ್ಮನೆ ತೋರಿಕೆಗೆ ಮಾಡಿದ್ದು ಅನಿಸುತ್ತೆ. ಇಲ್ಲಂದ್ರೆ ಅದು ನಡದೆ ನಡೆಯುತ್ತಿತ್ತು.” ಜೇಮ್ಲನಾಯ್ಕ ಹೇಳಿದ. ಹುಸೇನಿ ಮಾತಾಡಲಿಲ್ಲಾ ಅವನ ಮುಂದೆ ಹೊಂಟಿದ್ದ ಕೆಂಚಜ್ಜಗ ಜೇಮ್ಲನ ಮಾತ ಕೇಳಿ ಸಿಟ್ಟುಬಂತು. “ಅಲ್ಲಲೇ ಜೇಮು, ನಿ ಏನು ಅನ್ಕೊಂಡಿ ಸಿದ್ದಪ್ಪನ್ನ. ಸುತ್ತ ನಾನೂರು ಪ್ರದೇಶಗಳಿಂದ ಅಮವಾಸ್ಯೆ ದಿನ ಮಂದಿ ಮುಗಿಬಿಳ್ತಾರ. ಯಾರ ಮನಿ ಮುರದಿಲ್ಲ, ಯಾರ ಕದ ಹಾಕ್ಸಿಲ್ಲ ಹೇಳು.ಇದೊಂದು ವಿದ್ಯೆ, ಕೆಟ್ಟ ವಿದ್ಯೆ ಅದನ್ನ ಸಾಧನೆ ಮಾಡೋದು ಅಷ್ಟು ಸುಲಭ ಅಲ್ಲಾ, ಆಮನುಷ್ಯನ ಬಗ್ಗೆ ಅಷ್ಟು ಹಗುರವಾಗಿ ಮಾತಾಡಬೇಡ. ಅವನ ಮನಿತನ, ಅವನ ಕಮತ, ದನಕರುಗಳು ಹೊಲಮನಿ ನೋಡಿ ಏನು?” ಕೆಂಚಜ್ಜ ಮೌನ ತಾಳಿದ. ಜೇಮ್ಲಗೆ ಯಾಕೊ ಈ ಮಾತುಗಳು ಹಿಡಿಸಲಿಲ್ಲಾ. “ಇದ್ರ ಅವನಿದ್ದಾನು ಕೆಂಚಜ್ಜ ಆಟ ತೋರಿಸೋದಕ್ಕೆ ಏನಾಗುತ್ತಿತ್ತು” ಅವನ ಉತ್ತರಕ್ಕೆ ಕ್ಯಾದ. “ಸೂಕ್ಷ್ಮ ಅರ್ಥ ಆಗಲ್ಲಲೇ ತಮ್ಮ ನಿನಗ, ಎಲ್ಲಾನೂ ಬಿಡಿಸಿ ಹೇಳಬೇಕು. ಅವನು ಸಾಕಿರೊ ಭೂತಗಳು ರಾತ್ರೆಲ್ಲಾ ಅವನ ಹೊಲದಾಗ ಕೆಲ್ಸ ಮಾಡ್ತಾವಂತೆ. ಅವನಿಗೆ ಬೇಡವಾದವರ ಹೊಲದಾಗಿನ ಬೆಳೆ ರಾತ್ರಿರಾತ್ರಿನೆ ಮಾಯಾ ಆಗ್ತಾವಂತೆ.” ಮಾತು ನಿಲ್ಲಿಸಿದ. “ಆಗವಲ್ದು, ಈ ಗೊಂಬಿಗೂ ಅದಕ್ಕೇನು ಸಂಬಂಧ” ಮತ್ತೆ ಪ್ರಶ್ನೆ ಮಾಡಿದ ಜೇಮು. “ದಡ್ಡ ಹೇಳ್ತೀನಿ ಕೇಳು” ಕೆಂಚಜ್ಜ ಸುರು ಮಾಡಿದ. “ಅದು ನಿನ್ನ ಕಣ್ಣಿಗೆ ಮಂದಿ ಕಣ್ಣಿಗೆ ಕೇಸರಿನ ಗೊಂಬೆಯಂಗೆ ಕಾಣ್ತಿದೆಯಲ್ಲ, ಅದು ಗೊಂಬೆಯಲ್ಲ, ಖುದ್ದು ಭೂತಪ್ಪನೇಯ. ಅದರ ಅಡಿಗೆ ಲಕ್ಷಾಂತರ ರೂಪಾಯಿ ಇಟ್ಟಿರ್ತಾರ. ಎದಿರು ಮೋಡಿಯವನು ಅದನ್ನ ವಶಕ್ಕೆ ತಗೊತೀನಿ ಅಂತ ಧೈರ್ಯ ಇದ್ದರೆ ನಡುರಾತ್ರಿ ಬರೋಬರಿ ಹನ್ನೆರಡಕ್ಕೆ ಅದನ್ನ ವಶ ಮಾಡಿಕೊಳ್ತಾನ. ಒಂದು ವೇಳೆ ಅವನಿಗೆ ಆ ಶಕ್ತಿ ಇಲ್ಲಾ ಅಂದ್ಕೊ. ಅವನನ್ನ ಅಜಾಮತಿಂದ ಎತ್ತಿ ಗ್ಲಾಮಾಳಕ್ಕೆ ಬಾಯಿ ಹಾಕಿ ಅವನ ರಕ್ತವನ್ನ ಗಟಗಟಾಂತ ಕುಡಿದು ಬಿಡ್ತಾನ ಭೂತಪ್ಪ.” ಕೆಂಚಜ್ಜನ ಮಾತು ಮುಗಿತಿದ್ದಂಗೆ ಜೇಮುನ ಟಾಕಿ ಸಡ್ಲಾಗಿತ್ತು. “ಲೇ ಹುಲಿಯೂರ ನಿಲ್ಲು ಒಂದೀಟು ಕಾಲ್ಮಡಿದು ಬರ್ತಿನಿ” ಅಂತ ದೂರ ಹೋಗದೆ ದಾರಿಬದಿಗೆ ಪಂಚೆ ಎತ್ತಿ ಕೂತ್ಕೊಂಡ. “ಜೇಮು ಮಾಮ ಗಡಾನೆ ಬಾರಪ್ಪೊ ನನಗೆ ಹೆದರಿಕೆ” ಅಂದವನೆ ಮೆಲ್ಲಗೆ ಕಾಲ್ಕಿತ್ತ ಹುಲಿಯೂರ.

* * *

28. ಕರಡಿ ಕೂದಲು ಮತ್ತ ಕರಡಿ ಕುಣಿಸುವವನು

ಯಾವಾಗರೂ ಒಮ್ಮೆ ಕರಡಿ ಕುಣಿಸುವವನು ಜೀವಂತಕರಡಿಗೆ ಮೂಗುದಾರ ಹಾಕಿ ಉದ್ದನೆಯ ಕೋಲಿಗೆ ಅದನ್ನು ಬಿಗಿದು ಆಡಿಸಲು ಬರುತ್ತಿದ್ದ. ಇಡಿ ತಾಂಡದ ಹುಡುಗರು, ನಾಯಿಗಳು ಅವನ ಹಿಂದೆ. "ಬೂರ್ರ ಬೂರ್ರ ಬೂಬೂ" ಅಂತ ಏನೊ ಅಸಂಬದ್ಧ ಸದ್ದು ತಗದು ಹಾಡು ಹೇಳುತ್ತ "ಕರಡಿ ಕುಣಿಸೋನು ಬಂದಿನವ್ವ, ಕಾಳುದಾನ ಕೊಡ್ರಿ" ಜೋಳಿಗೆ ಮುಂದೆ ಮಾಡುತ್ತಿದ್ದ. ಮಂದಿ ಆಗ ತಾನೆ ಹುಟ್ಟಿದ ಸಣ್ಣಮಕ್ಕಳನ್ನು ಅದರ ಮೇಲೆ ಕೂಡಿಸಿದರೆ ಧೈರ್ಯ ಬರುತ್ತೆ ಅಂತ. "ಏ ಕರಡಿ ಕುಣಿಸೋನೆ ನನ್ನ ಮಗಿನನ್ನ ಅದರ ಮೇಲೆ ಕೂಡಿಸು ನಾಕಾಣಿ ಕೊಡ್ತಿನಿ" ಅಂದರೆ "ಯಾಕ ಆಗವಲ್ಲದು ತಾಯಿ, ಜಾಂಬವಂತ, ಈ ಮಗು ಮುಂದೆ ಧೈರ್ಯ, ಶೌರ್ಯವಂತನಾಗಲಿ ಎಲಿ ನಿನ್ನ ಮೇಲೆ ಕೂಡಿಸಕೊ" ಅಂದವನೆ ಅದರ ಮೇಲೆ ಕೂಡಿಸಿದೊಡನೆ ಮಗು ಕರಡಿಯ ಕೂದಲು ಚುಚ್ಚಿದ್ದಕ್ಕೆ ಚಿಟಾರಂತ ಚೀರಿಕೊಂಡರು ಬಿಡದೆ ನಾಲ್ಕಾಣಿಗಾಗಿ ಅಷ್ಟು ದೂರ ಒಯ್ಯುತ್ತಿದ್ದ.

ಮುಂದಿನ ಮನೆಗೆ ಹೋಗಿ "ನೋಡಪ್ಪ ಜಾಂಬವಂತ ಅಣ್ಣೋರು ಊರಿಗೆ ಶ್ರೀಮಂತರು ಅವರು ನಿನ್ನ ಹೊಟ್ಟೆಗೆ ಆಹಾರ ಕೊಡಲು ರೂಪಾಯಿ ಕೊಡುತ್ತಾರೆ ಒಂದು ಸಲಾಂ ಹೊಡಿ." ಒಳ್ಳೆಪಂಚೆ ಉಟ್ಟ ಆಸಾಮಿ ಕಂಡ ಕರಡಿಯವನು ಭಿಕಾರಿ ಬದ್ಯಾನಾಯ್ಕನಿಗೆ ಈ ಮಾತು ಹೇಳಿದ. ಯಾರೊ ಗೊತ್ತಿಲ್ಲದವನು ಈ ಮಾತಾನ್ನ ಹೇಳಿದ್ನಲ್ಲ, ಈಗ ಏನಾರು ಕೊಡದಿದ್ದರೆ ಸಣ್ಣ ಹುಡುಗರೆ ಮರ್ಯಾದಿ ತಗಿತಾರ ಅಂದವನೆ. ಜೇಬಲ್ಲಿ ಕಿಲುಬು ಹಿಡಿದಿರೊಹತ್ತು ಪೈಸಾ ಇತ್ತು ಅದನ್ನೆ ತಗದು "ಹೂಂ ಹೂಂ ಸಾಕು ಸಾಕು" ಅಂದವನೆ ಬಾಯಿ ಬಿಟ್ಟರೆ ಬಣ್ಣಗೇಡು ಅಂದುಕೊಂಡು "ಲೇ ನಾಗಿ, ಕಲ್ಡಿಯವನಿಗೆ ಒಸಿರಾಗಿ ದಾನ ಮಾಡೆ" ಅಂದವನೆ ಜಾಗ ಖಾಲಿ ಮಾಡಿದ್ದ. ಕರಡಿಗೂ ತಿರುಪೆ ಎತ್ತಿರೊ ಬದ್ಯಾನಾಯ್ಕ ಸ್ಥಿತಿ ಅರ್ಥ ಆಗಿರಬೇಕು ಎರಡು ಕಾಲಮೇಲೆ ಎದ್ದು ನಿಲ್ಲಲೇ ಇಲ್ಲ. ಬೇರೆ ಕಡೆಗೆ ಪಸಂದಾಗಿಯೆ ಎರಡು ಕಾಲಗಳ ಮೇಲೆ ನಿಂತು ಗುಟರ್‌ರ ಹಾಕಿತ್ತು. ಹುಡುಗರೆಲ್ಲರು ಅಂಜಿ ಮಾರುದೂರ ಓಡಿದ್ದರು.

"ಅಪ್ಪಾರ ಒಂದ ರೊಟ್ಟಿ ಕೊಡ್ರಿ, ಒಂದ ಸೇರು ಜ್ವಾಳ ಕೊಡ್ರಿ, ಕರಡಿ ಕೂದಲ ಕೊಡ್ತನಿ ಕರಡಿ ಕೂದಲಿಗೆ ದೆವ್ವ, ಭೂತ, ಪ್ರೇತ, ಆತ್ಮಗಳು ಹತ್ರಾನೆ ಬರೋದಿಲ್ಲ. ನಿಮ್ಮ ಮಗ ರಾತ್ರಿ ಎಷ್ಟೊತ್ತಾದರು ಹೊಲಕ್ಕೆ ಮನಿಗೆ ಅಡ್ಡಾಡಲಿ ಗಾಳಿ ಸೊಕೋದಿಲ್ಲ" ಏನೇನೋ ಸಾಬೂಬು ಹೇಳಿ ಜೋಳಿಗೆ ತುಂಬಿಕೊಳ್ಳೋದಕ್ಕೆ ನೋಡುತ್ತಿದ್ದ. ಯಾರೊ ಒಂದಿಬ್ಬರು ನಿಜವಿರಬಹುದು ಎಂದು ಸೇರು ಎರಡ ಸೇರು ಕಾಳು ಕೊಟ್ಟು ಕೂದಲು ಖರೀದಿಸಿ ಅವನ ಮುಂದೆನೆ ಮಕ್ಕಳ ಉಡದಾರಕ್ಕೆ ಬಿಗಿಯಾಗಿ ಕಟ್ಟಿ "ಹೋಗು ಆಟ ಆಡು" ಅಂತೇಳಿ ಗದಮುತ್ತಿದ್ದರು. ಇನ್ನೂ ಕೆಲವರು "ಬೇಡ ಬಿಡು ಕರಡಿ ಅಣ್ಣಾ" ಅಂತ ಕರಡಿಗೆ ಯಾಕೆ ಹಿಂಸೆ ಕೊಡಬೇಕು ಅಂತೇಳಿ ನಿರಾಕರಿಸುತ್ತಿದ್ದರು. ತಾಂಡದ ಆಯಕಟ್ಟಿನ ಜಾಗಕ್ಕೆ ಬಂದಾಗ ಮಾತ್ರ ಹರೆಯದ ಹುಡುಗರನ್ನ ನೋಡಿ "ಅಣ್ಣಾ ನನ್ನ ಕರಡಿಜೊತೆಗೆ ಕುಸ್ತಿ ಆಡಿಯಾ ಒಂದು ಆಟಕ್ಕೆ ಎರಡು ರೂಪಾಯಿ" ಮುಕ್ತವಾಗಿ ಕರೆ ನೀಡಿದ್ದ. ಕರಡಿಯ ಜೊತೆಗೆ ಕುಸ್ತಿ ಅಷ್ಟು ಸುಲಭದ ಮಾತಲ್ಲ. ಕಾಡಿನೊಳಗೆ ಒಬ್ಬಂಟಿಯಾಗಿ ಮನುಷ್ಯ ಸಿಕ್ಕರೆ ಅವನನ್ನ ಕಚ್ಚಿ ಗಾಯಗೊಳಿಸಿ ಕೊಂದು ಹಾಕುತ್ತದೆ ಈ ಕರಡಿ. ಇದಕ್ಕೆ ಕಲ್ಲಿರುವ ಗುಡ್ಡಗಾಡು ಪ್ರದೇಶ ಅಂದರೆ ಬಲುಇಷ್ಟ. ಕಲ್ಲಿನ ಪೊಟರೆಯಲ್ಲಿನ ಜೇನು, ಮಳೆಗಾಲದಲ್ಲಿ ಭೂಮಿಯಿಂದ ಹೊರಬರುವ ಗೊದ್ದಗಳು ತಿಂದು ಬದುಕುವ ಕರಡಿ ನೆಲಬಗೆದು ಶೇಂಗ ತಿನ್ನುವುದು ಅದಕ್ಕೆ ಇಷ್ಟವಾದ ಆಹಾರ. ಇಂತ ಕರಡಿಯನ್ನು ಹೆದರಿಸೋದು ಮನುಷ್ಯನಿಗೆ ಮಾತ್ರ ಗೊತ್ತು, ಬೆಂಕಿಯಿಂದ ಮಾತ್ರ ಕರಡಿಗೆ ಭಯ. ಹಾಗೆ ಮಾಡಿಯೆ ಬಹುಶಃ ಅದನ್ನ ಹಿಡಿದು ಪಳಗಿಸಿ ಅದನ್ನ ತನ್ನ ಆದಾಯದ ಭಾಗವನ್ನ ಮಾಡಿಕೊಂಡಿದ್ದ ಈ ಕರಿಡಿಯವನು ಅನ್ನೋದು ಹುಲಿಯೂರನ ನಂಬಿಕೆಯಾಗಿತ್ತು.

* * *

29. ಹಗ್ಗಜಗ್ಗಾಟದ ದೊಂಬರಾಟ

ಅನ್ನಕ್ಕೆ, ಕಾಳಿಗೆ ಬದುಕಿನ ಸೆಣಸಾಟಕ್ಕೆ ಬರುವ ಮಂದಿಗಳಲ್ಲಿ ದೊಂಬರಾಟದವರೂ ಒಂದು ಭಾಗವಾಗಿದ್ದರು. ಒಂದು ಡೊಲಕು, ತಪಡಿ, ಸಣ್ಣ ಹುಡುಗಿಯೊಬ್ಬಳು ನೆಲದ ಮೇಲೆ ಕೋತಿಯಂತೆ ಹಿಂದೆ ಚಂಡುಮಾಡಿ ಜಿಗಿಯುವುದು, ಎರಡೂ ಕೈ ನೆಲಕಿಟ್ಟು ಲಾಗ ಹೊಡುವುದು ಮಾಡುತ್ತಿದ್ದಳು. ಹಂಗಾಮಿನ ತಂದೆ ತಾಯಿಗಳು ಕೂಲಿನಾಲಿ ಮಾಡಿ ಮಕ್ಕಳನ್ನ ಸಾಕದೆ, ಸಣ್ಣ ವಯಸ್ಸಿನ ಮಕ್ಕಳಿಗೆ ದೊಂಬರಾಟವನ್ನ ಕಲಸಿ ಅವರ ಕೌಶಲ್ಯದ ಮೇಲೆ ಕೂಳು ಉಣ್ಣುತ್ತಿದ್ದರು. ಲಾಗ ಹಾಕುತ್ತಿದ್ದಂತೆ ಗುಂಪಿನಲ್ಲಿದ್ದವರೆಲ್ಲಾ ಜೋರಾಗಿ ಚಪ್ಪಾಳೆ ತಟ್ಟುತ್ತಿದ್ದರು. ಆ ಸಣ್ಣ ಹುಡುಗಿಗೆ ಚಪ್ಪಾಳೆ ತಟ್ಟುತ್ತಿರುವವರು ಅವಳು ಮಾಡಿದ ಕಸರತ್ತಿಗೆ ಪ್ರಶಂಸೆ ಎನ್ನುವ ಅರಿವೂ ಇಲ್ಲದಾಗಿತ್ತು. ಮಂದಿ ಯಾಕೊ ಚಪ್ಪಾಳೆ ಹೊಡೆಯುತ್ತಿದ್ದಾರೆ ಎನ್ನುವ ಪರಿಕಲ್ಪನೆಯೂ ಅವಳಿಗಿಲ್ಲದೆ ಸಣ್ಣದೊಂದು ವೃತ್ತಾಕಾರದ ಲೋಹದ ಗೊಲದೊಳಗಿನಿಂದ ಕಾಲು, ತಲೆ ಕೈಯನ್ನು ನುಗ್ಗಿಸಿ ಹಿಂದಿನಿಂದ ತೆಗೆಯುತ್ತಿದ್ದಳು. ಪಡ್ಡೆಹುಡುಗರು ಶಿಳ್ಳೆ ಹೊಡೆಯುತ್ತಿದ್ದರು. ಅವಳ ಎಲ್ಲಾ ಕಸರತ್ತಿಗೆ ಸರಿಯಾಗಿ ಡೊಲಾಕು, ಕೊಳಲು ಬೇಕಾಬಿಟ್ಟಿಯಾಗಿ ನುಡಿಸುತ್ತಿದ್ದ. ಅರೆಬರೆ ಪರ್ಷಿಯನ್ ಭಾಷೆಯಲ್ಲಿ ಕಾಮೆಂಟ್ರಿ ಕೂಡ ಕೊಡುತ್ತಿದ್ದ. “ದೇಕೊ ಸರ್ಕಾರ್, ನಮುದುಕೆ ಚೊಕ್ರಿದು ಕರಾಮತಿ, ಈ ಸಲಾಕೆದು ಒಳಗಡೆಯಿಂದ ಒಂದು ಕೈ ತಗಿಯೋದೆ ಮುಸ್ಕಿಲ್ ಐತೆ, ಅಂತಾದ್ರಲ್ಲಿ ಇಡಿ ದೇವನ್ನೆ ತಗದಾಳ” ಅಂತೇಳಿ ಮತ್ತೊಂದು ಕಡೆಗೆ ಹೋಗಿ, ಈ ಮಗಿಗೆ ಜೋರಾದ ಚಪ್ಪಾಳೆ. ಜನರ ಆಕರ್ಷಣೆಯನ್ನು ತನ್ನ ಕಡೆ ಸೆಳೆಯುವ ಪ್ರಯತ್ನ ಮಾಡುತ್ತಿದ್ದ. “ದೇಕೊ ಬೈಯ್ಯಾ, ಯಾರದು ಚೇಬಿನಾಗೆ ನಾಕಾಣೆ ಐತೆ, ಎಂಟಾಣೆ ಐತೆ ಈ ಗರಿಬ್ ಬಚ್ಚಿಕೆಲಿಯೆ ದಾನ ಮಾಡಿ” ಅಂತ ಬೇಡಿಕೊಳ್ಳುತ್ತಿದ್ದ. ಅಲ್ಲ ಕಾಸಿದ್ದೋರು ಯಾರು ಇರಲಿಲ್ಲಾ ಎಲ್ಲರೂ ಪುಕ್ಕಟೆ ನೋಡುವವರೆ. ಅಂತಾದ್ರಗ ಈ ಡೊಂಬರವನು ಕಾಸು ಕೇಳಿದರೆ

ಯಾರು ಕೊಟ್ಟಾರು? "ಯಾರ ಹತ್ರ ಕಾಸಿದ್ದಿತೊ ದೊಂಬಣ್ಣ, ಆಟ ಮುಗದಿಂದ ಮನಿಮನಿಗ ಹೋಗಿ ಕಾಳು ತಗೊಂಡು ಹೋಗು" ಅಂದ ಥಾವು. "ಅರೆ ನಮ್ಮದು ಆಟ ಇಲ್ಲಿಗೆ ಮುಗಿಲಿಲ್ಲಾ, ಒಂದು ದೊಡ್ಡ ಚಮತ್ಕಾರ ಹಮ್ಮ್ ದಿಕಾಯೆಂಗೆ" ಅಂದವನೆ ಎರಡು ಗೂಟಗಳನ್ನು ನಿಲ್ಲಿಸಿ ಅದರ ಮೇಲೆ ಪ್ರಾಯಕ್ಕೆ ಬಂದ ಹುಡುಗಿಯ ಕೈಯಲ್ಲಿ ಕೋಲು ಕೊಟ್ಟ ಆ ಕಡೆಯಿಂದ ಈ ಕಡೆಗೆ ಬರುವಂತೆ ಹೇಳುತ್ತಿದ್ದ. ಆ ಹುಡುಗಿ ಉದ್ದನೆಯ ಕೋಲಿನ ಸಹಾಯದಿಂದ ಒಂದೆ ಎಳೆಯ ಹಗ್ಗದ ಮೇಲೆ ಸರ್ಕಸ್ಸು ಮಾಡುತ್ತಿದ್ದಳು. "ಅಲ್ಲ, ಒಂದ ವೇಳೆ ಬಿದ್ದಳು ಅಂತಂದ್ರ ಎಲಬು ಪುಡಿಪುಡಿಯಾಗಿ ಹೊಕ್ಕಾವ. ಈ ದರಿದ್ರ ನನಮಗ ಎಲ್ಲಾದರೂ ಹೋಗಿ ದುಡದು ಮಕ್ಕಳನ್ನ ಸಾಕೋದ ಬಿಟ್ಟು ಹಿಂಗ ಅವರ ಕಡಿಯಿಂದ ಕಠಿಣ ಕೆಲಸ ಮಾಡಿಸಿ ತಾನು ಸರಾಯಿ ಕುಡಿದು ಮಜಮಾಡ್ತನಲ್ಲಾ" ಅಂತ ಕುಮಾರಿ ಆ ಹುಡುಗಿಯ ಬಗ್ಗೆ ಕಾಳಜಿ ಮಾಡಿದ. "ಯಾಕಲೆ, ನೋಡಾಕ ಗುಂಡ ಗುಂಡಗ ಅದಾಳಂತ ಮನಸ್ಸು ಮಾಡಿ ಏನು" ಸೊಟ್ಟ ಭೀಮ ಹಂಗಿಸಿದ. "ಲೇ ನಿನಾಪ್ನ, ಅವಳ ಕುಲ, ಗೋತ್ರ ಊರು ಕೇರಿ ಗೊತ್ತಿಲ್ಲದ ಅಕೀನ ಕಟ್ಕೊಂಡ ನಾ ಏನು ಮಾಡಲಿ" ಮೇಲ್ನೋಟಕ್ಕೆ ಹೇಳಿದ. ಹುಡುಗಿ ನಿಧಾನಕ್ಕೆ ಒಂದು ಕಡೆಯಿಂದ ಮತ್ತೊಂದು ಕಡೆಗೆ ನಡೆದು ಕೆಳಗೆ ಪಲ್ಟಿ ಹೊಡೆದಳು. "ಹೊಟ್ಟಿಗ ಏನು ತಿಂತಾಳ ಅಂತಿನಿ, ಅಷ್ಟ ಮೇಲಿನ ಕಂಬದಿಂದಲೇ ಜಿಗಿತಾಳಲ್ಲ, ಬಿದ್ದಗಿದ್ರೇನು ಅನೊ ಅಂಜಿಕಿ ಇರ್ಲಿಕಿಲ್ವಾ ಅಂತೀನಿ." ಕುಮಾರಿ ಅವಳನ್ನ ನೋಡಿ ಯಾವುದೋ ಲೋಕ ಪ್ರವೇಶ ಮಾಡಿದ. "ಹೊಗಲಿ ಬಿಡೊ ತಿರಪ್ಪೆ ಎತ್ತೊ ಡೊಂಬರ ಹುಡುಗಿನೂ ಬಿಡವಲ್ಲಿ. ಏನೊ ಹೊಟ್ಟೆ ಪಾಡಿಗೆ ಊರ ಬಿಟ್ಟು ಊರಿಗೆ ಬಂದಿರ್ತಾವ, ಬಿಟ್ರೆ ಆ ಹುಡುಗಿ ಜೊತಿಗೆ ಕಚ್ಕೊಂಡು ಬಿಡೊ ಹಂಗ ಕಾಣುತ್ತೆ" ಸೊಟ್ಟ ಭೀಮ ಜಾಡಿಸಿದ. "ಲೇ ಮಾವ ರಸಿಕತೆ ಇಲ್ಲದಿರೊ ನಿನ್ನಂತಹವನಿಗೆ ಹೇಳ್ತಿದ್ದೀನಲ್ಲಾ ನನ್ನ ಎಕ್ಕಡ ತಗೊಂಡು ನಾನೆ ಹೊಡ್ಕಬೇಕು, ಪಾಪ, ಹೆಣ್ಣು ಮಕ್ಕಳಿಗೆ ನೋವು ಆಗಬಾರದು, ನನಗೆ ತಡ್ಕೊಳ್ಳಾಕ ಆಗೋದಿಲ್ಲ, ಬಂದನೋಡು ಗಡವ ನನಮಗ ಅಕಿ ಅಪ್ಪ, ಮಕ್ಕಳ ದುಡಮೆ ತಿನ್ನೋನು, ಅವನ ಸೀಮೆಯೊಳಗೆ ಯಾರಿಗಾರು ಆಹರೆಯದ ಹುಡುಗನಿಗೆ ಮದುವೆ ಮಾಡಿಕೊಟ್ಟು ಇವನು ಏನಾರ ಕೆಲ್ಸ ಮಾಡೋದು ಬಿಟ್ಟು" ದೊಡ್ಡ ಭಾಷಣ ಮಾಡಿದ. ಅಷ್ಟೊತ್ತಿಗಾಗಲೇ "ಇದರ್ ದೇಕೊ ನಮ್ದುಕೆ ಕೊನೆ ಆಟ" ಅಂದವನೆ ಸಣ್ಣ ಹುಡುಗಿಯನ್ನು ಗಳದ ಮತ್ತೊಂದು ತುದಿಗೆ ಅರಿವೆ ಇಟ್ಟು ಅದರ ಮೇಲೆ ಅವಳ ಹೊಟ್ಟೆ ಭಾಗವನ್ನು ಇಟ್ಟು ಅಜಾಮತ್ತಾಗಿ ಮೇಲೆತ್ತಿದ್ದ. "ನೋಡಿ ಅಣ್ಣ ನಮ್ಮ ಆಟ ಯಾರಿಗೆ ಹಿಡಸ್ತು, ನಿಮ್ಮ ಕೈಲಾದ ಸಹಾಯ ಮಾಡಿ" ಅಂದವನೆ ಕೋಲು ಬಿಟ್ಟು ಬಿದ್ದಿ ಹುಡುಗಿಯನ್ನು ಅಜಾಮತ್ತಾಗಿ ಹಿಡಿದ. "ಯವ್ವಸತ್ನೆ, ಆ ಹುಡುಗಿ ಬಿದ್ರ ಏನು ಗತಿ" ಆಟ ನೋಡ್ತಿದ್ದ ಝುಮಾಣಿ ಹೆದರಿ

ಮಕ ಮುಚ್ಕೊಂಡ್ಳು. "ಏಯ್, ನೀ ಯಾವುರೊನೆಯಪ್ಪ ಹೆತ್ತ ಮಕ್ಕಳನ್ನ ಹಿಂಗೆ ಹೆಂಗಬೇಕಾದಂಗೆ ಹಿಂಸೆ ಕೊಡ್ತಿಯಲ್ಲ" ಜೋರು ಬಾಯಿ ಮಾಡಿದ್ಲು "ಕ್ಯಾ ಕರ್ನಾ ಅಮ್ಮ ಹೊಟ್ಟೆದು ಸವಾಲೈತೆ, ಭಿಕ್ಷೆ ಕೇಳಿದೆ, ಯಾರು ಪೈಸಾ ನಹಿ ದೇತಾ ಅದಿಕೆ ಕಸರತ್ತು ಮಾಡಿ ದುಡಿತಿವಿ" ಅವಳಿಗೂ ಮರುಕ ಬರೋ ಹಂಗೆ ಮಾತಾಡಿದ. ಝುಮಾಣಿ ಬುಡ್ಡಿಚೀಲ ತಗದವಳೆ, "ಎಯ್ ಆ ಮಾ, ಲೇ" ಅಂತ ಐವತ್ತು ಪೈಸೆ ಕೊಟ್ಟಳು. ದೊಂಬನಕಣ್ಣು ಐವತ್ತು ಪೈಸೆಯ ಮೇಲಿತ್ತು, ರಾತ್ರಿ ಹೆಂಡದ ವ್ಯವಸ್ಥೆ ಆಯ್ತು, ಹೆಂಗು ಒಣಮೀನು ಚೀಲದೊಳಗೆ ಅದಾವೆ, ಈ ಹುಡುಗಿಯರನ್ನ ಕಳುಹಿಸಿದರೆ ಯಾರಾದರು ರೊಟ್ಟಿ ಕೊಡ್ತಾರ ಕನಸು ಕಾಣತೊಡಗಿದ.

* * *

30. ಹೊಟ್ಟೆ ಹೊರೆಯಲು ಹೊಟ್ಟೆ ಹೊಡ್ಕೊಳೊ ಹಂದಿ ಜೋಗಿ ಹುಡುಗ

"ದಾರ, ಸೂಜಿ, ಪಿನ್ನ, ಊಸರಬುಲ್ಡಿ ಬೇಕೆನ್ರವ್ವ, ಕೂದ್ಲ ದಾರ ಸೂಜಿ ಪಿನ್ನ" ಅಂತ ರಾಗವಾಗಿ ಕೂಗುತ್ತ ಹೊಲಸು ಬಟ್ಟೆ ಕೆದರಿದ ಕೂದಲು ಕಂಕುಳಲ್ಲಿ ಒಂದು ಮಗು ಬೆನ್ನ ಮೇಲೆ ಗಂಟು ಬಗಲಲ್ಲಿ ಜೋಳಿಗೆ. ಇವು ಹಂದಿಜೋಗಿ ಹೆಂಗಸರ ವ್ಯಾಪಾರದ ವೈಖರಿ. ಯಾರಾದರು "ಎಯ್ ಉಸರಬುಲ್ಡಿ" ಕೂಗಿದರೆ ನಿಂತು ಅವರು ಕೊಡುವ ಕೂದಲಿಗೆ ಕೇಳಿದ ಸಾಮಾನು ಕೊಡಲು ಚೌಕಾಶಿ ಮಾಡುವುದು ಅವಳ ಜನ್ಮಸಿದ್ಧ ಹಕ್ಕು ಎಂಬಂತೆ ಪ್ರತಿಪಾದನೆ ಮಾಡುತ್ತಿದ್ದಳು. ಅವಳ ರಾಗಕ್ಕೆ ನಾಯಿಗಳು ಹರಿದು ತಿನ್ನುವಂತೆ "ಬೌ ಬೌ" ಅಂತ ಕಾಲಕಾಲಿಗೆ ಕಚ್ಚಲು ಹೋಗುತ್ತಿದ್ದವು. ಕೈಯಲ್ಲಿದ್ದ ಕೋಲಿನಿಂದ ಓಡಿಸುತ್ತ ಹೆದರದೆ ವ್ಯಾಪಾರ ಮಾಡಲೇಬೇಕಿತ್ತು. ಅವರು ತಾಂಡಕ್ಕೆ ಬಂದಾರೆಂದರೆ ಸಣ್ಣ ಹುಡುಗರು ಗೋಡೆಯ ಸಂದುಗಳಲ್ಲಿ ಗುಡಸಲಿನ ನೆರಕೆಯಲ್ಲಿ, ಅವರಮ್ಮ, ಅಕ್ಕಂದಿರು ತಲೆಬಾಚಿ ಬಾಚಣಿಗೆಯಲ್ಲಿ ಬಂದ ಕೂದಲುಗಳನ್ನು ತೆಗೆದು ಒಟ್ಟು ಮಾಡಿ ಸಿಕ್ಕಿಸಿರುವುದನ್ನು ಗಮನಿಸಿ ಎತ್ಕೊಂಡು ಹೋಗಿ ಅವಳಿಗೆ ಕೊಟ್ಟ ಉಸರಬುಲ್ಡಿ ತಗೊಂತ್ತಿದ್ದರು. "ನೋಡಬೆ ಕೂದಲು ಜಾಸ್ತಿ ಐತೆ, ಒಂದು ಊಸರಬುಲ್ಡಿ ಕೊಡು, ಒಂದು ಪಿನ್ನ ಕೊಡು, ಒಂದು ಪೀಪಿಕೊಡು" ಚಾವಳಿ ದೊಡ್ಡ ಬೇಡಿಕೆಯ ಪಟ್ಟಿ ಸಲ್ಲಿಸಿದ್ದಳು. "ನೋಡವ್ವ ನಿನ್ನ ಕೂದಲಿಗೆ ಎಲ್ಡೆ ಬರೋದು ಊಸರ್ ಬುಲ್ಡಿ, ಪಿನ್ನಾ ತಗೊ ಇಲ್ಲ, ಪಿನ್ನಾ ಪೀಪಿ ತಗ" ಮಕಕ್ಕೆ ಹೊಡದಂಗೆ ಹೇಳಿದಳು. ಅಕಿಕುಡ ಚೌಕಾಸಿ ಏನು ಮಾಡೋದಂತ "ಬಂದಿದ್ದ ಕೊಡವ್ವ" ಅಂದಾಕಿನ ಸುಮ್ಮನಾದಳು. ಚಾವಳಿ ತಿಳುವಳಿಕೆ ಇದ್ದೋಳು, ಹೇಳಿದ ಕೇಳಿ ಸುಮ್ಮನಾದಳು. ಸಣ್ಣ ಹುಡ್ರಿಗೆ ಹೇಳೋದು ಅಸಾಧ್ಯದ ಮಾತಾಗಿತ್ತು. ಜೋರು ಬಾಯಿ ಮಾಡಂಗಿಲ್ಲ, ಮಾಡಿಯ ವ್ಯಾಪಾರ ಕೆಡತೈತಿ. ಮಂದಿ ತಮ್ಮ ರೀತಿಯೊಳಗೆ ಆಲೋಚನೆ ಮಾಡ್ತಾರ. "ಏಯ್, ನಿಮ್ಮಮ್ಮ ಒಂದ ಊಸರಬುಲ್ಡಿಗೆ ಹುಡುಗರಿಗೆ

ಹಿಂಗ ಗದರಿಸುತ್ತಿಯಾ" ಅಂತ ತಾಂಡದಿಂದಲೆ ಹೊರಗೆ ಅಟ್ಟುತ್ತಾರ. ಈ ಎಲ್ಲಾ ಆಲೋಚನೆಗಳಿದ್ದೆ ವ್ಯಾಪಾರದೊಳಗೆ ಲಾಭ ಮಾಡಿಕೊಳ್ಳಬೇಕಿತ್ತು. ಹುಲಿಯೂರನ ಮನೆಗೆ ಬಂದಾಗ ಪೀಕಿ, ಪಾಮಡಿ, ಪಾತ್ಲಿ ತಮಗೆ ಗೊತ್ತಿರುವ ನಿಧಿ ರಹಸ್ಯದಂತೆ ಸಿದಾ ಹೋಗಿ ಮನೆಯ ಎಲ್ಲಾ ಹೆಂಗಸರು ಎಲ್ಲೆಲ್ಲಿ ಕೂದಲು ತೂರಿಸುತ್ತಾರೆ ಎಂಬುದನ್ನು ಪತ್ತೆ ಹಚ್ಚಿ ಒಬ್ಬೊಬ್ಬರು ಒಂದೊಂದು ಹಿಡಿ ಕೈಯಾಗ ಹಿಡ್ಕೊಂಡು ಬಂದಿದ್ರು. ಜಾನಿಬಾಯಿಗೆ ಅವಳನ್ನು ನೋಡಿ ಏನು ಅನಿಸಿತು. "ನಿನ್ನ ಹೆಸರೇನೆ ಉಸರಬುಲ್ಡಿಯವಳೆ" ಕೇಳಿದಳು. "ಲಚ್ಮಿ ಕಣ್ಣಕ್ಕ" ಉತ್ತರಿಸಿದಳು. "ನೋಡೆ ಲಚ್ಚಿ ಹುಡುಗರ ತಾವ ಬಹಳ ಕೂದಲ ಅದಾವ ಹುಷಾರಾಗಿ ಕೇಳಿದ್ದ ಕೊಡು" ಅಂದ್ಲು. "ಆಯ್ತು ಅಕ್ಕ, ನಿಮ್ಮ ಕೂದ್ಲಾಗ ಏನ ಸಿಕ್ಕಿತು ನಮಗೆ, ಒಯ್ದುದನ್ನ ಒಂದ ಕಡೆ ಸೇರಿಸಿ, ತೊಳದು ಬಿಡಿಸಿ ಉದ್ದ ಮಾಡಿ ಕೊಟ್ರೆ ಕೇಜಿಗೆ ಹತ್ತು ಇಪ್ಪತ್ತು ಸಿಗತೈತೆ. ಅದ್ರಾಗ ಸಾಮಾನು ಖರೀದಿಸಬೇಕು, ಬೇರೆ ಊರಿಂದ ಬರೋಮುಂದೆ ಬಸ್ಸು ಅದರ ಛಾರ್ಜು ಏನು ಉಳಿತೈತೆ ನೀನೆ ಹೇಳು" ನಿಜ ಸಂಗತಿಯನ್ನು ಬಿಚ್ಚಿಟ್ಟಳು. ಜಾನಿಬಾಯಿಗೆ ಕೂದಲಿಂದ ಏನು ಮಾಡ್ತಾರೆ ಅನ್ನೊ ಕುತೂಹಲವಿತ್ತು. "ಅಲ್ಲೆ ಲಚ್ಮಿ ಹೌದು ಈ ಕೂದಲು ಒಯ್ದು ಅದೇನು ಮಾಡೀರಿ" ಕೇಳಿದಳು. "ಅಯ್ಯೊ ಗೊತ್ತಿಲ್ವಾ ವಿಗ್ ಮಾಡ್ತಾರ, ಚೌರಿ ಅಂತ ಮಾಡ್ತಾರ, ಇನ್ನೇನು ಮಾಡ್ತಾರಂತೆ ಅಕ್ಕ ನಮಗೇನು ಗೊತ್ತು?" ಲಚ್ಮಿ ಗೊತ್ತಿದ್ದಷ್ಟು ಹೇಳಿದಳು. "ಕೂದಲ ತಗೊಳೊ ನಿನಗೇನು ಗೊತ್ತು ಬಿಡು ಪಾಪ" ಜಾನುಬಾಯಿ ಮರುಕದಿಂದ ಹೇಳಿದ್ದೆ ತಡ "ಯಕ್ಕಾ, ಉಣ್ಣಾಕ ಒಂದ ರೊಟ್ಟಿ ಕೊಡವ್ವ ಹೊಟ್ಟೆ ಹಸದೈತೆ. ಮಗಿ ಮಲಿ ಜಗ್ಗಿ ಜಗ್ಗಿ ಜೀವಾನೆ ತಗಿಯುತ್ತೆ" ಹೆಣ್ಣಿನ ಮಾನಸಿಕ ಸ್ಥರಕ್ಕೆ ಬಾಣ ಬಿಟ್ಟಿದ್ದಳು. ಮದಲೆ ಹಸದು ಬಂದವರಿಗೆ ಒಂದು ರೊಟ್ಟಿ ಕೊಡೊ ಜಾನಿಬಾಯಿ. "ಲೇ ಪೀಕಿ, ಎರಡ ರೊಟ್ಟಿ ಚಟ್ನಿ ತಂಬಾ" ಅಂದಳು. ಅವಳವ್ವ ಉಣ್ಣತಿರಬಹುದು ಅಂತೇಳಿ ಒಂದಿಷ್ಟು ಚಟ್ನಿನೂ ರೊಟ್ಟಿ ಹಿಡ್ಕೊಂಡು ಹೊರಗಬಂದ್ಲು. "ಕೊಡು ಲಚ್ಮಿಗೆ" ಹೇಳಿದಳು. ಪೀಕಿ ಸುತ್ತಲು ತಿರುಗಿ "ಎಲ್ಲಿದಾಳ ಲಚ್ಮಿ, ಯಾಕೆ ಸುಳ್ಳ ಹೇಳ್ತಿ ಬೆ" ಒಳಗೆ ಹೊರಟಳು. "ಎ ಬೇವರ್ಸಿ ಮುಂಡೆ ಇಲ್ಲಿ ನಿಂತಾಳಲ್ಲ ಇವಳೆ ಲಚ್ಮಿ ಕೊಡು, ಬಡವಳು ತಿನ್ನಲಿ" ಗದರಿಸಿದಳು. "ಈಕೆ ಲಚ್ಮಿ ಏನು, ಆಗ್ಲೆ ಒಂದು ಉಸರಬುಲ್ಡಿ ಕೊಡಂದರೆ ಕೊಡಲಿಲ್ಲಾ" ಸಿಟ್ಟಿಂದ ಮಾರಿ ನೋಡಿದಳು. "ಹಂಗ ಅನ್ನಬಾರದವ್ವ, ಅಕೀನು ಸಾಮಾನು ತರಬೇಕು, ಹೊತ್ತು ಮಾರಬೇಕು, ಲಾಭ ಹೋಗಲಿ ಅಸಲು ತಗಿಯಬೇಕು, ನೋಡು ಹಸದು ಬಂದೋರಿಗೆ ಒಂದ ರೊಟ್ಟಿ ಕೊಟ್ಟರೆ ಆ ದೇವರು ನಿನಗೂ ಒಂದ ರೊಟ್ಟಿ ಎಲ್ಲಾದರೂ ಕೊಡ್ತನ" ಸಮಾಜಾಯಿಸಿ ಮನಸ್ಸು ಪರಿವರ್ತನೆ ಮಾಡಿದಳು. "ಅಲ್ಲೆ ಲಚ್ಮಿ ಆ ತಿರುಪತಿ ತಿಮ್ಮಪ್ಪನ ಮುಡಿಕೊಡೊ ಕೂದಲನ್ನು ಯಾರಾರು ತಗೊಂತಾರ" ಕುತೂಹಲದಿಂದ ಕೇಳಿದಳು. "ನಮ್ಮ ಮಂದಿಯವರಲ್ಲ, ಈ ಚೆನ್ನದಾಸರು ಅಂತ, ಅದಾರ ಅವರು ನಮ್ಮ ಹತ್ರದಿಂದ

ಕೂದಲನ್ನೆಲ್ಲಾ ಖರೀದುಸ್ತಾರ ಅವರು ಹೇಳುತ್ತಿದ್ರು ತಿರುಪತಿಯಲ್ಲಿನ ಕೂದಲು ಹರಾಜ ಹಾಕ್ತಾರಂತೆ. ಕೊಪ್ಪಳದ ಹತ್ರ ಎಲ್ಲೊ ಕೂದಲಿನ ದೊಡ್ಡ ಫ್ಯಾಕ್ಟರಿ ಮಾಡ್ಯಾರಂತೆ" ಅವಳಿಗೆ ತಿಳಿದಷ್ಟು ಮಾಹಿತಿ ಕೊಟ್ಟಳು ಲಚ್ಮಿ.

ಮತ್ತೊಂದು ಕಡೆಗೆ ಅವಳ ಐದು ವರ್ಷದ ಮಗ ಎರಿಗಾ ಹರಕು ಚಣ್ಣ ಹಾಕ್ಕೊಂಡು ಕೈಯಾಗೊಂದು ಹಳೆ ಮಡಿಕೆ, ಬಗಲಾಗೊಂದು ಜೋಳಿಗೆ, ಮೂಗಿಂದ ಇಳಿತಿರೊ ಗೊಣ್ಣೆಯನ್ನು ಎಳಿದುಕೊಳ್ಳುತ್ತಲೆ "ಅವ್ವವ್ವ ನಮ್ಮವ್ವ ಉಂಡು ಮೂರು ದಿನಾತವ್ವ ಹಸದು ಸಾಯಿತ್ತಿದಿನವ್ವ, ಒಂದು ರೊಟ್ಟಿ ಕೊಡವ್ವ" ಅಂದವನೆ ಜೋರಾಗಿ ಕೈಯಲ್ಲಿನ ಕಸು ಕಿತ್ತು ಹೊಟ್ಟೆ ಮೇಲೆ ಹೊಡೆದುಕೊಳ್ಳುತ್ತಿದ್ದ. "ಎಯ್ ಯಾರಲೆ ಅಲ್ಲಿ ಮನಿಯಾಗಿಂದ ಉಣ್ಣಾಕ ಏನೈತೆ ತಂದು ಹಾಕು, ಸತ್ತ ಹೋದಿತು ಈ ಹುಡುಗ" ಅಂತ ಮನೆಯ ಯಜಮಾನನೆ ಖುದ್ದು ಶಿಫಾರಸ್ಸು ಮಾಡುತ್ತಿದ್ದ. ಮುಂದಿನ ಮನೆಯಲ್ಲೂ ಅದೇ ಸನ್ನಿವೇಶ. ಹೊಡೆತ ಹೊಡ್ಕೊಂಡು ಹೊಟ್ಟೆ ಮೇಲೆ ಬಾಸುಂಡೆ ಮೂಡಿದ್ದವು. ಹೊಟ್ಟೆ ಹೊರಗಿನ ಪೆಟ್ಟು ಕ್ಷಣ ಕಾಲ ನೋವುತಂದರೆ ಅವಿರತವಾಗಿ ಕಾಡುವ ಹಸಿವಿಗೆ ಪರಿಹಾರವೇ ಇಲ್ಲ. ಮನೆಯಲ್ಲಿ ಈ ಕಾಲದಲ್ಲಿ ಗಂಡಸರು ದುಡಿಯುವುದು ತಮ್ಮ ಗೌರವಕ್ಕೆ ಕಡಿಮೆ ಅಂತ ತಿಳ್ಕೊಂಡಿದ್ದರು. ಹೆಂಡತಿ ಮಕ್ಕಳು ಬರಿ ದುಡಿಯೋದು ಅವರ ಕೆಲಸ ಸಂಜೆ ಎಲ್ಲರ ಮನೆ ಆಹಾರ ಬಂತು, ಕೂದಲು ಮಾರಿ ಗಂಡನಿಗೆ ಕುಡಿಯೋದಕ್ಕೆ ಸರಾಯಿ, ಅವನು ನೆಂಚ್ಕೊಳದಕೆ ಕೋಳಿ ಮಾಂಸ, ಮೀನು ಏನೂ ಇಲ್ಲಂದ್ರೂ ಒಂದೆರಡು ಮೊಟ್ಟೆನಾದರು ಬೇಕೆಬೇಕು. ಇಲ್ಲಂದ್ರೆ ಹೆಡಮುರುಗಿ ಕಟ್ಟೆ ಮಕ್ಕಳನ್ನು, ಹೆಂಡತಿಯನ್ನು ಹೊಡೆಯುತ್ತಿದ್ದ. ಮಕ್ಕಳು ಸಾಯಲಿ ಅಂತೇಳಿನೆ ಕಚಿಪಿಚಿ ತುಳಿಯುತ್ತಿದ್ದ. ಹಂಗಾಗಿ ಎರಿಗ ಅವನಿಗಾಗಿ ಅವನ ತಾಯಿಗಾಗಿ ತನ್ನ ಹೊಟ್ಟೆ ನೋವಾದರೂ ಅವರಿಗೆ ಬೇಡುತ್ತಿದ್ದ. ಮನಿಯೊಳಗೆ ಉಂಡಾಡಿಗುಂಡನಂತೆ ಅಡ್ಡಾಡುವ ಹುಡುಗರಿಗೆ "ನೋಡಲೆ ನಾಳೆ ನೀನು ಕೆಲಸ ಮಾಡಲಿಲ್ಲಾ ಆ ಹುಡುಗನ ಹಾಗೆ ಭಿಕ್ಷೆ ಬೇಡ್ತಿಯಾ" ಎಚ್ಚರಿಸುತ್ತಿದ್ದರು. ಎರಿಗನ್ನ ನೋಡಿದ ಹುಲಿಯೂರನಿಗೆ ಸಂಕಟವಾಯ್ತು. "ಈಟಿದಾನ, ಎಲ್ಲೊ ಮಕ್ಕಳ ಕೂಡ ಆಟ ಆಡಬೇಕಾದ ವಯಸ್ಸು. ಎಂಥ ರಿಸ್ಕ್ ತಗೊಂಡಾನ ನೋವನ್ನ ಹೊರಗಡೆ ಹಾಕದೆ ನಗ್ತಾ ಹೊಟ್ಟೆಗೆ ಹೊಡೆದುಕೊಳ್ತಾನ. ಇವನ ತಂದೆ ತಾಯಿಗೆ ಏನಾಗಿದೆ ಉಣ್ಣಾಕ ಹಾಕೋದಕ್ಕೆ ಆಗದಿದ್ದರೆ ಹುಟ್ಟಿಸಬೇಕು ಯಾಕೆ?" ಅವನ ಆಲೋಚನೆ ನಿಲ್ಲದಾಗಿತ್ತು.

* * *

31. ಕೋಲೆ ಬಸವ ಬಸವಿಯ ಮದುವೆಯೂ

ಒಂದು ಎತ್ತಿಗೆ ಜೂಲು ಹಾಕಿ, ಕೊಡಣಸು, ಹಣೆಗೆ ಬಾಸಿಂಗ ಹಾಕಿ ಶೃಂಗಾರ ಮಾಡಿ ಬಸವಿಗೆ ಜೂಲು ಹಣಿಗೊಂದು ಬಾಸಿಂಗದ ಶೃಂಗಾರ, ಕೈಯಾಗೊಂದು ಶಹನಾಯಿ ಒಬ್ಬ ಹೆಂಗಸೂ ಬಸವನ ಹಿಡಿದುಕೊಂಡಿರುವ ಮನುಷ್ಯ ಮಾತ್ರ ತಲೆಗೆ ಪಟಗ, ಬಿಳಿಧೋತ್ರ ಅಂಗಿಯ ಮೇಲೊಂದು ಹಳೆ ಕೋಟು ಇಬ್ಬರ ಬಗಲಲ್ಲೂ ಒಂದೊಂದು ಜೋಳಿಗೆ. "ಫಲಿಸಿತು ಒಲವಿನ ಪೂಜಾಫಲ ಎನಗಿಂದು ಕೂಡಿ ಬಂತೆ ಕಂಕಣಬಲ" ಇಷ್ಟೆ ಹಾಡು. "ಅವ್ವ ಬಸವ ಬಸವಿ ಬಂದಾರ ದಾನ ಕೊಡ್ರವ" ಯಂಗಟರಮಣನೋ, ಭೀಮಷಿ, ಏನೊ ಒಂದು ಹೆಸರು. ಇವರದು ಒಂದು ಪರಂಪರೆ ಇವರ ಹಿಂದಿನವರು ರೈತರಿಗೆ ಅತ್ಯಂತ ಪ್ರಿಯವಾದ ಬಸವಣ್ಣ ಮತ್ತು ಹಸು ಇವೆರಡು ಅವರ ಜೀವಾಳವಾದ್ದರಿಂದ ಅವುಗಳನ್ನೇ ಬಂಡವಾಳ ಮಾಡಿಕೊಂಡು ದುಡಿಯದೆ ತಿನ್ನುವ ಜನ ಅಂದರೆ ತಪ್ಪಾದೀತು ಅದರ ಮೇಲೆಜೀವನ ನಿಭಾಯಿಸುವ ಒಂದು ಜನಸಮೂಹವು ಬದುಕಿತ್ತು. ಎತ್ತು, ಬಸವ ಅಂದೊಡನೆ ರೈತ ಏನು ತ್ಯಾಗವನ್ನು ಬೇಕಾದರೂ ಮಾಡಲು ಸಿದ್ಧನಾಗಿದ್ದ. ಏಕೆಂದರೆ ಅವನ ಜೀವನಾಡಿನೆ ಎತ್ತು ಅವನ ಬದುಕೆ ಎತ್ತು, ಅವನ ಬಂಡವಾಳವೆ ಎತ್ತು ಹೀಗಿರುವಾಗ ಎತ್ತಿಗೆ ಸಂಬಂಧಿಸಿದ ವಿಷಯದ ಬಗ್ಗೆ ಅವನು ಬಹಳ ಬೇಗನೆ ಭಾವುಕನಾಗುತ್ತಿದ್ದ. ಹಾಗಾಗಿ ಕೋಲೆ ಬಸವ ಬಂದಾಗ ಯಾವ ತಕರಾರು ಇಲ್ಲದೆ ಅವನ ಮನಸ್ಸಿಗೆ ಬಂದಷ್ಟು ಕಾಳನ್ನ ದಾನ ಮಾಡುತ್ತಿದ್ದ. ಕೋಟುಧಾರಿ ತನ್ನ ಶಹನಾಯಿವಾದನ ಮುಗಿದ ಮೇಲೆ ಎತ್ತು ಮತ್ತು ಆಕಳಿಗೆ ಒಂದು ಆಟ ಆಡಿಸುತ್ತಿದ್ದ. "ಏನಮ್ಮ ಗೌರಮ್ಮ ನಮ್ಮ ಬಸವನನ್ನ ಮದುವೆ ಆಗ್ತಿಯಾ" ಕೇಳುತ್ತಿದ್ದ. ಆಕಳು ಇಲ್ಲ ಎಂಬಂತೆ ತಲೆಯಾಡಿಸುತ್ತಿತ್ತು. "ನೋಡು ಗೌರವ್ವ, ನಮ್ಮ ಬಸವ ಸರಾಯಿ ಕುಡಿಯಲ್ಲಾ" ಹಸು ಹಿಡಿದುಕೊಂಡಿದ ಹೆಂಗಸು ಶಿಫಾರಸ್ಸು ಮಾಡುವವಳಂತೆ "ಕುಡಿಯಲ್ಲ ಭಾರಿ ಒಳ್ಳೆಯವನು ಕಣವ್ವ" ಅಂದಳು. "ನಮ್ಮ ಬಸವ ಬೀಡಿ ಸೇದಲ್ಲ, ಸಿಗರೇಟು ಅಂದ್ರೆ ಆಗಲ್ಲ" ಚಟ ಇಲ್ಲ

ಅನ್ನೋದನ್ನು ಹೇಳಿದ. "ಹೌದ ಕಣೆ, ಪಾಪದವನು ಯಾವ ಚಟಾನು ಇಲ್ಲ" ಹೆಂಗಸು ಹೇಳಿದಳು. ಹಸು ಸುಮ್ಮನೆ ನಿಂತಿತ್ತು. "ಅಲ್ಲ ಗೌರವ್ವ ಏನಾದರು ಹೇಳು, ನೀ ಹಿಂಗೆ ನಾಚಿಕೆಪಟ್ರೆ ಹೆಂಗೆ" ಅನ್ನುತ್ತಿದ್ದಂತೆ ಹುಡುಗರು ಜೋರಾಗಿ ಕೇಕೆ ಹಾಕಿ ನಕ್ಕರು. "ಅಲ್ಲ ಆಕಳು ಮಾತಾಡುತ್ತ" ಎರೆಸಿಮಿ ಮೆಹಬೂಬ ಹೇಳಿದ. "ಲೇ ಸುಮ್ಮನೆ ನೋಡು, ಆಗಲೆ ಆವಯ್ಯ ಹೇಳಿದಕ್ಕೆ ಚಂಡು ಅಲ್ಲಾಡಿಸಿ ಇಲ್ಲ ಅನ್ನಲಿಲ್ಲವೆ" ಹಿಂದ್ಲೂರ ಶಾಣ್ಯ ಕೇಳಿದ. "ಬಿಡಲೆ ಗೊತ್ತೈತೆ ನಿಮ್ಮ ಮನಿಯಾಗ ಆಕಳಗಳ ಅದಾವ, ನಿಂದೇನ ಹಚ್ಚಿ" ಚುರುಮುರಿಚಿಕ್ಕ ಅವರ ನಡುವೆ ಮಾತಾಡಿದ ಅದರ ಚರ್ಚೆ ಗಂಭೀರವಾಗಿತ್ತು. ಆ ಕಡೆಗೆ ಕೋಟು ಹಾಕಿದವನು "ನೀ ಹಿಂಗಂದ್ರೆ ಹೆಂಗೆ ಗೌರವ್ವ ನೋಡು ನಮ್ಮ ಬಸವ ಸುಳ್ಳು ಹೇಳಲ್ಲ, ಮತ್ತೊಂದು ಹೆಣ್ಣನ್ನ ಕಣ್ಣೆತ್ತಿ ನೋಡಲ್ಲ, ಬಹಳ ಸಿದಾಸಾದ, ಇಂತಹವನು ನಿನಗೆ ಮತ್ತೆಲ್ಲೂ ಸಿಗಲ್ಲ" ಅವನ ಮಾತು ಮುಗಿತಿದ್ದಂಗೆ "ಅಯ್ಯ ಹೂಂ ಅನ್ನ ಬೆ ನನಗೇನಾರ ಕೇಳಿದ್ರ ಹೂಂ ಅಂದು ಬಿಡ್ತಿದ್ದೆ ನೋಡು" ಹೆಂಗಸು ಮನುಷ್ಯರ ಭಾವನೆಯನ್ನ ಪ್ರಾಣಿಗಳಿಗೆ ಸಮೀಕರಿಸಿ ಹೇಳಿದಳು. "ನಾಚ್ ಬೇಡ, ಒಪ್ಕೊ, ಹೂಂ ಹೂಂ" ಅವನು ಹೇಳುತ್ತಿದ್ದಂಗೆ ಹಸು ಚಂಡು ಅಲ್ಲಾಡಿಸಿತು. "ನಮ್ಮ ಗೌರಿ ಒಪ್ಪಿಕೊಂಡಳು" ಕುತೂಹಲದಿಂದ ನೋಡುತ್ತಿದ್ದ ಪ್ರತಿಯೊಬ್ಬರು ಆಶ್ಚರ್ಯದಿಂದ "ಶಬ್ಬಾಸ್ ಗೌರಿ ಕಡೀಗ ಬಸವನ್ನ ಒಪ್ಪಿಕೊಂಡೆ" ಜಗ್ಗ ಜೋರಾಗಿ ಕೂಗಿದ. ಅಲ್ಲಿಗೆ ಆ ಮನೆಯ ಮುಂದಿನ ಆಟ ಮುಕ್ತಾಯವಾಗಿತ್ತು. ಯಾರೊ ಕೆಲಸಕ್ಕೆ ಹೋಗುವವರು "ಲೇ ಅಡ್ನಾಡಿ ಬಾರಲೆ, ಇದನ್ನ ನೋಡಿದ್ರೆ ಏನು ಉಣ್ಣಾಕ ಸಿಗುತ್ತ, ಕೆಲ್ಸ ಬಗ್ಸಿ ನೋಡನಡಿ, ಇಲ್ಲಿ ನಿಂತ್ಕೊಂಡು ಹಲ್ಲು ಕಿರಿಬೇಡ" ಜಗ್ಗನ ತಂದೆ ಚಂಬಸು ತಲೆಗೆ ಪಟ್ಟಂತ ಹೊಡದ. ಸಾಲಿ ಹುಡುಗರು "ಲೇ ಬರ್ರಲೆ ಪಾಂಡಣ್ಣ ಮೇಷ್ಟ್ರ ಬೆತ್ತ ನೋಡಿರಲ್ಲ ಬಿತ್ತಂದ್ರ ನಿಂತ ಹತ್ರಾನೆ ಉಚ್ಚಿ ಹೊಯ್ಕೊಬೇಕು" ಗಣಪ ಅಲ್ಲೆ ನಿಂತ, ಚಕಮ, ನಾಗಿ, ಸಿದ್ದಿ, ಪರಮೇಶಿ, ಪಾಖಂಡಿಯರಿಗೆ ಹೇಳಿದ. "ನಡ್ರಪ್ಪೊ ಈ ವಯ್ಯನ ಎತ್ತುಗಳು ಆಟ ಆಡ್ತಾನೆ ಇರ್ತಾವ. ನಮ್ಮ ಆಟ ನೋಡೋರು ಯಾರು" ಚಕಮ ಹೇಳಿದ. "ಅಣ್ಣ ಇನ್ನೊಂದ ಆಟ ನೋಡಾಮ ಇರೊ" ನಾಗಿ ಚಕಮನಿಗೆ ಅಂಗಲಾಚಿದಳು. "ಬಾರೆ ಮೇಷ್ಟ್ರತ್ರ ಹೊಡೆಸಿಕೊಳ್ಳಬೇಕು, ಬ್ಯಾಡ ಬಾ" ಅಂತ ಎಳೆದುಕೊಂಡು ಸಾಲಿ ಕಡೆಗೆ ಹೊರಟ.

ಹತ್ತು ಮನೆಗಳನ್ನ ತಿರುಗಿದ ಬಸವನ ಆಡಿಸುವವರು ಹನ್ನೊಂದನೆಯ ಮನೆಗೆ ಹೋದಾಗ ಹಾಡು ಬಾರಿಸಿದ ನಂತರ "ಗೌರವ್ವ ಗಂಡನ ಮನೆಗೆ ಹೆಂಗ ಹೋಗ್ತಿಯ" ಕೇಳಿದ. ಹಸು ಬೇಸರದಿಂದ ಹೆಜ್ಜೆ ಹಾಕುವಂತೆ ಹಾಕಿತ್ತು. "ನೋಡ್ರಪ್ಪ ನಮ್ಮ ಗೌರವ್ವಗೆ ಗಂಡನ ಮನಿ ಅಂದ್ರ ಎಷ್ಟು ಕಷ್ಟ" ಅವನು ಹೇಳಿದ. "ಯಾಕಂದ್ರೆ ಗಂಡನ ಕಾಟ ಒಂದ ಕಡಿ ಆದ್ರ, ಅತ್ತೆ ಮಾವಂದಿರ ಕಾಟ ಜಾಸ್ತಿ ಅದಕ್ಕೆ ಗೌರಿಗೆ

ಗಂಡನ ಮನಿ ಅಂದ್ರೇನೆ ಬೇಜಾರು." ಅವನ ಮಾತುಗಳಿಗೆ ಪೂರಕವಾಗಿಯೇ ಹೇಳಿದ "ಈಗ ನೋಡ್ರಿ ನಮ್ಮ ಗೌರಿ ಹೆಂಗೆ ನಡಿತಾಳೆ. ಗೌರವ್ವ ನಿಮ್ಮಪ್ಪನ ಮನೆಗೆ ಹೆಂಗ ಹೋಗ್ತಿಯ ತೋರಿಸು" ಸಟ್‌ಅಂತ ಎದ್ದವಳೆ ಧಾಪುಗಾಲು ಹಾಕಿ ನಡೆಯುವಳು. "ನೋಡ್ರಪ್ಪ ಗೌರವ್ವಗೆ ತಂದೆ ತಾಯಿ ಮನೆ ಅಂದ್ರೆ ಎಷ್ಟು ಪ್ರೀತಿ, ಅಬ್ಬಾ ಒಂದು ಕ್ಷಣಾನು ಇರಲ್ಲ ಅಂತಾಳೆ" ಅಂದ. "ಹೌದ ಮತ್ತೆ ತೌರಮನೆ ಅಂದ್ರೆ ಯಾರಿಗೆ ಖುಷಿ ಇಲ್ಲಾ ಹೇಳಿ, ಪ್ರತಿ ಹೆಣ್ಣು ಮಕ್ಕಳಿಗೆ ತೌರು ಅಂದ್ರೆ ಪಂಚಪ್ರಾಣ ಅವಳನ್ನು ಪ್ರೀತಿಸುವವರು, ಇಷ್ಟ ಪಡುವವರು, ಆರೈಕೆ ಮಾಡುವವರು, ಅವಳ ಸುಖ ದುಃಖವನ್ನು ಹಂಚಿಕೊಳ್ಳುವವರೆಲ್ಲಾ ಅಲ್ಲೆ ಇರೋದು. ಅತ್ತೆ, ಮಾವ, ಗಂಡ ಮೂರೊತ್ತು ಹಿಂಸೆ ಕೊಡ್ತಾರೆ, ಪ್ರಾಣ ಹಿಂಡತಾರೆ" ಅವಳು ಧ್ವನಿ ಗೂಡಿಸಿದಳು. ನೋಡುತ್ತಿದ್ದ ಹೆಣ್ಣು ಮಕ್ಕಳು ಮೊರದಲ್ಲಿ ರಾಗಿ ತಂದು ಸುರಿಯುವರು ಯಾರೊ, ಜೋಳ ಕೊಡುವವರು ಯಾರೊ, ಕೋಲೆ ಬಸವನ ಆಟ ಮನುಷ್ಯನ ಮೇಲಣ ಪ್ರಭಾವ ಬೀರಿತ್ತು. ಇಡೀ ಊರು ಸುತ್ತಾಡಿ ಯಾರೊ ಕೊಟ್ಟ ರೊಟ್ಟಿ ಮುದ್ದೆ ಉಂಡು ಎತ್ತು ಮತ್ತು ಹಸುವನ್ನು ಮೇಯಿಸಿಕೊಂಡು ತಾವು ಟೆಂಟು ಹಾಕಿದ ಜಾಗಕ್ಕೆ ಹೊರಡುತ್ತಿದ್ದರು. ಮತ್ತೆ ಬೆಳಕು ಹರಿದಾಗ ಮತ್ತೊಂದು ಊರು ಇವರನ್ನ ಕೈಬೀಸಿ ಕರೆಯುತ್ತಿತ್ತು.

* * *

32. ಮರದ ಮೇಲಿನ ಕೋತಿ ನೆಲದ ಮೇಲೆ ಕುಣಿದಾಗ

ಮಾಮೂಲಾಗೆ ತಾಂಡದ ಹುಡುಗರು ಕೋತಿ ಕುಣಿಸುವವನ ಹಿಂದೆ ಗುಂಪು ಕಟ್ಟಿದರು. ಹಗಕ್ಕೆ ಕಟ್ಟಿದ ಕೋತಿ ಅದರ ಮಾಲಿಕ ಹೇಳಿದಂತೆ ಕೇಳುತ್ತಿತ್ತು. ಮರದಿಂದ ಮರಕ್ಕೆ ಕೊಂಬೆಯಿಂದ ಕೊಂಬೆಗೆ ಜಿಗಿಯುತ್ತ ಮರದ ಮೇಲೆ ಸಿಕ್ಕ ಹಣ್ಣು, ಕಾಯಿ, ಬೀಜ, ಹೂವು, ಎಲೆ ಆಹಾ ಎಂಥ ಅದ್ಭುತ ಜಗತ್ತು. "ಹಾಳು ಮನುಷ್ಯನ ಗುಲಾಮನಾಗಿ ಅವನು ಹೇಳಿದಂತೆ ಕೇಳುತ್ತ ಕೂಡುವುದು ಯಾವ ಹಣೆಬರ" ಕೋತಿ ಒಳಗೊಳಗೆ ಅಂದುಕೊಳ್ಳುತ್ತಿತ್ತು. ಯಾರೊ ಅದರ ಬಾಲ ಮುಟ್ಟುತ್ತಿದ್ರು, ಯಾರೊ ಕೋತಿ ಅಂತ ಕಿಚಾಯಿಸಿ ಸತಾಯಿಸುತ್ತಿದ್ದರು. ಯಾರೊ ಹಿಂಸೆ ಮಾಡುತ್ತಿದ್ದರು, ಆದರ ಬಂಡ ಹೊಟ್ಟೆ ಸಲುವಾಗಿ ಸಾಕಿರುವ ಬೇವಕೂಪ್ ನನಮಗ ಹೇಳಿದಂತೆ ಮಾಡಲೇಬೇಕಿತ್ತು. "ಲೇ ರಾಮ ಲಾಗ ಹಾಕು, ಹೂಂ ಹಾಕು" ಎಂದ ತಕ್ಷಣ, ನೆಲದ ಮೇಲೆ ಮೂರು ಸಾರಿ ಉರಾಳಾಡುತ್ತಿತ್ತು. "ನೋಡಿದ್ರ ಸಾಹೇಬ್ ನಮ್ದುಕೆ ಕೋತಿ ಹೆಂಗೆ ಕಸರತ್ತು ಮಾಡುತ್ತೆ" ಜನರ ಕಡೆಗೆ ಮುಖ ಮಾಡಿ ವಾಲಿಸಾಹೇಬು ಹೇಳುತ್ತಿದ್ದ. "ಇವನೆ ನನ್ನ ಮಗಾ ಸಾಹೇಬ, ಇವನು ಪಲ್ಟಿ ಹೊಡೆದರೆ ನೀವು ಖುಷಿ ಆಗ್ತಿರಾ ನಮ್ದುಕೆ ಕಾಸು ಕೊಡ್ತಿರ" ಎಮೋಷನಲ್ ಬ್ಲಾಕ್‌ಮೇಲ್ ಮಾಡೋದಕ್ಕೆ ನೋಡಿದ. "ಆರೆ ಬೇಟಾ ರಾಮ, ಅಲ್ನೋಡು ಊರದುಕೆ ಗೌಡ ಬಂದಾರೆ ಒಂದು ಸಲ್ಯೂಟ್ ಹೊಡಿ" ಅಂದೊಡನೆ ಕೈಮೇಲೆತ್ತಿ ಹಣೆಗೆ ಅಂಟಿಸುತ್ತಿದ್ದ. ನಮ್ಮ ರಾಮ ಭಾರಿ ಬುದ್ಧಿವಂತ, "ರಾಮ ಗಂಡಸರು ಹೆಂಗೆ ಬೀಡಿ ಸೇದುತ್ತಾರೆ ತೋರಿಸು" ಅಂದ ಅಲ್ಲೆ ಬಿದ್ದಿದ್ದ ಕೊರಿಬೀಡಿಯನ್ನು ಎತ್ತಿಕೊಂಡವನೆ ಬಾಯಲ್ಲಿ ಇಟ್ಟುಕೊಂಡ. ನೆರದವರೆಲ್ಲ ಚಪ್ಪಾಳೆ ತಟ್ಟಿದರು. "ನೋಡಲೆ ಹೆಂಗ ಮಾಡುತ್ತೆ ಶಬ್ಬಾಸ್, ಒಳೆ ಮನುಷ್ಯರಂಗೆ ಮಾಡುತ್ತೆ" ಜಿಲೇಬಿ ಹೇಳಿದ "ಲೇ ಮಂಗನಿಂದ ಮಾನವ ಅಂತ ಕೇಳಿಲ್ವಾ, ನಾವು ಮೊದಲು

ಮಂಗಗಳೆ ಇದ್ದೆವು. ಎಷ್ಟೊ ಸಾವಿರ ವರ್ಷಗಳು ಕಳದ ಮೇಲೆ ಮಂಗನಿಂದ ಎರಡು ಕಾಲುಗಳನ್ನು ಎತ್ತಿ ನಿಲ್ಲುವುದನ್ನ ಕಲಿತೆವು. ಕಾಲುಗಳು ಕೈಗಳಾದವು, ನೆಟ್ಟಗೆ ನಿಲ್ಲುವುದು ರೂಢಿಯಾಯಿತು" ಸಾಲಿಯೊಳಗೆ ಮಾಸ್ತರ ಹೇಳಿದ್ದನ್ನ ಚಾಚುತಪ್ಪದೆ ಹಲುಬಿದ ಸಣ್ಣಬಸವ. "ಅಣ್ಣ ಇದು ದೊಡ್ಡದಾದಿಂದ ಮನುಷ್ಯ ಆಗುತ್ತ" ಜಿಲೇಬಿಯ ಪೆಕರು ಪ್ರಶ್ನೆ "ನೀನಾಗಿಯಲ್ಲ ಹಂಗ" ಸಣ್ಣಬಸವ ಹೇಳಿದ. ಜಿಲೇಬಿ ಏನೊ ಹೇಳಬೇಕಂತ ಬಾಯಿ ತಗಿಯೋದಕ್ಕು, "ಸಣ್ಣ ಹುಡುಗರು ಗಲಾಟೆ ಕರೊ ನಕ್ಕೊ, ನೋಡ್ರಿ ನಮ್ಮ ರಾಮ ಮುಂದಿನ ಆಟ ರಾಮ ಹೆಂಗಸರು ಹೆಂಗೆ ನಾಚಿಕೊಳ್ತಾತ ತೋರಿಸು" ಅನ್ನುತ್ತಿದ್ದಂತೆ ಅಲ್ಲೆ ಇದ್ದ ಬಟ್ಟೆಯ ತುಂಡನ್ನ ತಲೆ ಮೇಲೆ ಹಾಕ್ಕೊಂಡು ಹೆಂಗಸರಂತೆ ನಾಚಿಕೊಂಡಿತು ಕೋತಿ. ಮಂದಿ ಚಪ್ಪಾಳೆ ತಟ್ಟುತ್ತಿದ್ದರು. ಕೋತಿಯನ್ನು ಚಿಕ್ಕದಿರುವಾಗಲೆ ತಾಯಿಯಿಂದ ಅಗಲಿಸಿ ಹಗಲು ಆಟಕ್ಕೆ ಉಪಯೊಗಿಸಿ ದುಡಿದರೆ ರಾತ್ರಿ ಬೇರೆ ಕಡೆಗೆ ಹೋಗಿ ಕೋತಿಯನ್ನು ಬಿಟ್ಟು ಕಳ್ಳತನ ಮಾಡಿಸುತ್ತಾರೆಂಬ ವದಂತಿ ಇತ್ತು. ಇನ್ನೂ ಕೆಲವರು ಕೋತಿಯ ಸಹಾಯದಿಂದ ಕೋತೀಕಾಟವಿರುವ ಊರುಗಳಿಗೆ ಹೋಗಿ ಅವುಗಳನ್ನು ಹಿಡಿದು ಬೇರೆ ಕಡೆಗೆ ಬಿಟ್ಟು ಬರುತ್ತಿದ್ದರು. ಆದರೆ ಈ ಮನುಷ್ಯ ದುಡಿಯುವುದಕ್ಕೆ ಪ್ರಾಣಿಗಳನ್ನು ಬಳಸಿಕೊಂಡು ಅವುಗಳನ್ನ ಶೋಷಣೆ ಮಾಡುತ್ತಿದ್ದ. ಹುಲಿಯೂರನಿಗೆ ಕೋತಿಯ ಕೈಚಳಕ ನೋಡಿ ಅಯ್ಯೊ ಪಾಪ ಅನಿಸಿತು. ಅದರ ಜಗತ್ತು ಕಾಡು ಆದರೆ ಸ್ವಾರ್ಥದ ಸಲುವಾಗಿ ಈ ಸಾಬಿ ಇದನ್ನ ಮುಂದಿಟ್ಟುಕೊಂಡು ಹೀಗೆ ಕಾಸು ಬೇಡುವುದಕ್ಕಿಂತ ಕೈಯಲ್ಲಿ ತಟ್ಟೆಯೊಂದನ್ನ ಹಿಡಿದುಕೊಂಡು ಬೇಡಬಾರದೆ.

* * *

33. ವರ್ಚಗಣ್ಣು ಹನುಮನ ಜ್ವರದ ಪ್ರಸಂಗವೂ

ತಾಂಡದೊಳಗೆ ತರಾವರಿ ಮಂದಿ ಇದ್ರು, ಕುಡುಕರು, ಸುಳ್ಳುಗಾರರು, ಮೋಸಗಾರರು, ಕ್ಯಾಬಳ್ಳಿ ಮಾಡುವವರು, ಟೀಕೆ ಮಾಡುವವರು, ಪಟ್ಟಿ ದೊಡ್ಡದಾಗೆ ಬೆಳೆಯುತ್ತಿತ್ತು. ಅದರಲ್ಲಿ ಒಬ್ಬ ವರ್ಚಗಣ್ಣು ಹನುಮ. ವಯಸ್ಸು ಐವತ್ತು ಆಗಿರಬಹುದು, ಐದಾರು ಗಂಡು ಒಂದೊ ಎರಡೊ ಹೆಣ್ಣು. ಸಣ್ಣವನಿದ್ದಾಗ ಮಳ್ಳುಕಲ್ಲು ತುಳಿದು ಕಾಲಲ್ಲಿ ಆನಿಗಳಾಗಿ ಮೀಟುತ್ತ ನಡೆಯುತ್ತಿದ್ದ. ಮತ್ತೊಂದು ಕಡೆಗೆ ಅವನು ಎದುರಿಗೆ ನಿಂತರೆ ಯಾರನ್ನ ನೋಡುತ್ತಿದ್ದಾನೆಂಬ ಅನುಮಾನ. ಬಹಳಷ್ಟು ಜನ ತಮ್ಮನ್ನ ನೋಡ್ತಿಲ್ಲ ಬೇರೆ ಕಡೆ ನೋಡ್ತಿದ್ದನಂತ ದಾರಿ ಬಿಡೋದಕ್ಕೆ ನೋಡಿದರೆ "ಲೇ ತಮ್ಮ ಎಲ್ಲೊಂಟಿ ಬಾರಿ ದಿಮಾಕ ಬಂತ ಬಿಡಲೆ, ನಾನು ನೋಡಾಕ ಹತ್ತಿನಿ ಮಾತಾಡದಂಗೆ ಮುಂದಕ ಹೊಂಟೀಯ ತತ್ತಾರಲೆ ಒಂದ ಬೀಡಿ" ಅಂತ ಕೇಳಿ ಇಸ್ಕೊಳ್ತಿದ್ದ. ಹನುಮನದ್ದು ಒಂಟಿ ಹಿಡಿತ ಏನಾದರು ಕೆಲಸ ಮಾಡಿದರೆ ಅಚ್ಚುಕಟ್ಟಾಗಿ ಮುಗಿಯುವವರೆಗೂ ಬಿಡುತ್ತಿರಲಿಲ್ಲಾ ಸರಿಯಾಗಿ ಅದಕ್ಕೆ ಒಂದು ಗತಿ ಕಾಣಿಸದೆ ಇರುತ್ತಿರಲಿಲ್ಲಾ. ಮಣ್ಣು ಕಡಿಯಲು ನಿಂತರೆ, ಹಾರೆಯನ್ನ ಜೋರಾಗಿ ನೆಲದಾಳಕ್ಕೆ ತೂರಿಸಿ ಸರಿಯಾಗಿ ನೆಲ ಸಡಿಲು ಮಾಡಿ ಹಾರಿಯಿಂದ ಚಿಮ್ಮಿದರೆ ಎಂಟತ್ತು ಪುಟ್ಟಿಯಷ್ಟು ಮಣ್ಣು ಹೊರಗಡೆ ಬೀಳುತಿತ್ತು. ಹನುಮನ ಹಿರೆ ಮಗ ಸಂಪಂಗಿ ಅವನ ತಮ್ಮ ಮಂಗನ ಜೊತೆಗೆ ದಾವಣಗೆರೆ ಸೇರಿದ್ದ. ಚೆನ್ನ, ನಾಣಿ, ಸೀನ ಊರಲ್ಲಿ ಇರೊ ಜಮೀನು ಊಳುತ್ತಿದ್ದರು. ಹನುಮನ ಹಿರಿಯಣ್ಣ ಸೋಮಿನಿಂಗ ಬೇರೆ ಹೋದ ಮೇಲೆ ಆಸ್ತಿ ಭಾಗ ಆಯ್ತು. ಮಕ್ಕಳು ಸರಿಯಾಗಿ ಕೆಲಸ ಮಾಡದಾದರು ಹಾಗಾಗಿ ದೊಡ್ಡ ಮನಿತನ ಮಕಾಡಿ ಮಲಗಿಬಿಟ್ಟಿತು. ಹಿಂದೊಂದು ಕಾಲದಲ್ಲಿ ಭದ್ರನಾಯ್ಕನತಾಂಡದ ಮಂದಿ ದೊಣ್ಣೆರ ಮನಿತದಿಂದ ಕಾಳು ತಗೊಂಡು ಹೋಗಿ ಒಲೆ ಹಚ್ಚುತ್ತಿದ್ದರು. ಆದರೆ ಇವತ್ತು ಸ್ಥಿತಿ ಪೂರಾ ಬದಲಾಗಿತ್ತು. ಸೋಮಿನಿಂಗ, ಹನುಮ ಇಬ್ಬರೆ ಗಂಡು ಮಕ್ಕಳು ಹಿರೆದುರಗನಿಗೆ. ಸುತ್ತಲು ದುಡಿಮೆಗೆ ಹಿರೆದುರಗನೆ ಖ್ಯಾತಿ ಪಡದಿದ್ದ. ಆಳು ಕಾಳು ಮನಿ ತುಂಬ

ಕೆಲಸ ಮಾಡುವವರು ತುಂಬಿದ್ದರು. ಮನಿ ಕೆಲಸ ಹೊಲದ ಕೆಲಸ ಸರಾಗವಾಗಿ ನಡೆಯುತ್ತಿತ್ತು. ಮಂದಿ ಮಾತಾಡಿಕೊಳ್ಳುತ್ತಿದ್ದರು. ಅವನ ಅವ್ವ ಅಂದರೆ ವರ್ಚಗಣ್ಣು ಹನುಮನಿಗೆ ಅಜ್ಜಿ ಇದ್ದಳು ಅವಳಂದ್ರೆ ಇಡೀ ಊರಿಗೆ ಊರೆ ಗಡಗಡಾಂತ ನಡಗುತ್ತಿತ್ತು. ಅವಳ ಹೆಸರು ಕಾಟಮ್ಮ ಅವಳ ಹಣಿಮೇಲೆ ಬುಗಟೆಯಂತೆ ಒಂದುವಾಳ ಇತ್ತು. ಹಂಗಾಗಿಯೇ ದೆಸಿ ಇತ್ತು, ಮಂದಿಮಾತಾಡಿಕೊಳ್ಳುತ್ತಿದ್ದರು. ಮುದುಕಿ ಏನು ಮುಟ್ತಾಳೊ ಅದು ಚಿನ್ನ ಆಗುತ್ತಿತ್ತು. ಮುದುಕಿನೂ ಅಷ್ಟೆ ಬಹಳ ಗರ್ವಿಷ್ಠೆ ಮನಿಮುಂದೆ, ಒಂದ ನಾಯಿ ಬರದಂಗೆ ಓಡಿಸುತ್ತಿದ್ದಳು. ಒಮ್ಮೆ ಯಾರದೊ ಎಮ್ಮೆ ಮಣಕ ಬಂದಿತ್ತು. ಕೈಯಾನ ಕೋಲಿಂದ ಹೊಡೆದು ಹೊಡೆದು ಅದರ ಕಾಲೆ ಮುರಿದಳು. ಹೊಲದಲ್ಲಿ ಕೂಲಿಯಾಳುಗಳಿಗೆ ಸೊಂಟ ಮೇಲೆ ಎತ್ತಿ ನಿಮಿಷ ನಿಲ್ಲಾಕ ಬಿಡುತ್ತಿರಲಿಲ್ಲಾ. ಅವಳ ಹಿಂಸೆ ತಡಿಯಾಕ ಆಗದೆ ಕೆಲವರು "ಇಲ್ಲೆ ನಮ್ಮವ್ವ ಕಾಟವ್ವನ ಕಾಟ ತಡಿಯೋದಕ್ಕೆ ಆಗಂಗಿಲ್ಲ, ಕೂಲಿ ಇಲ್ಲದೆ ಉಪವಾಸ ಮನೆಯೊಳಗೆ ಸತ್ರೂ ಪರವಾಗಿಲ್ಲ" ಚೆನ್ನಿ ಕೂಲಿಗೆ ಬರೋದನ್ನೆ ನಿಲ್ಲಿಸಿದ್ದಳು. ವರ್ಚಕಣ್ಣು ಹನುಮ ಮುದುಕಿಯ ಮುದ್ದಿನ ಮೊಮ್ಮಗನಾಗಿದ್ದ. ಹಿಂಗಾಗಿ ಅವಾಗ ಅವಾಗ ಹೊಲಕ್ಕ ಹೋಗೋದು ಬಿಟ್ಟು ಮೈಯುಂಡಿದ್ದ. ಮುದುಕಿ ಸತ್ತಳು, ಅವರಪ್ಪ ಸತ್ತ, ಇದ್ದ ಆಸ್ತಿನೂ ಹೋಯ್ತು ತಾಂಡದೊಳಗೆ ಲಂಬಾಣಿ ಜನಾಂಗದ ತೊಪುನಾಯ್ಕ ನಂತವರು ದುಡಿಮೆಯಿಂದಾಗಿ ಮುಂದೆ ಬರತೊಡಗಿದರು. ವರ್ಚಗಣ್ಣು ಹನುಮ ಅವನ ಬಹುತೇಕ ಜಮೀನು ಮಾರಿಯಾಗಿತ್ತು. ಈಗ ಅವನ ತಾವ ಏನೂ ಇರಲಿಲ್ಲ. ದಾವಣಗೆರೆಯಲ್ಲಿದ್ದ ಮಕ್ಕಳು ಅಲ್ಲೆ ಮದುವೆಯಾಗಿ ಉಳಿದುಕೊಂಡರು. ತಾಂಡದೊಳಗೆ ಇದ್ದವರು ಮದುವೆಯಾಗಿ ಸಂಸಾರ ಹೂಡಿದ್ದರು. ಮನೆ ಹಿರೆತನ ತಾಂಡದೊಳಗೆ ಇದ್ದ ಚೂರುಪಾರು ಹೊಲ ಮಾಡುವುದನ್ನು ಎರಡನೇಯವನಾದ ಚೆನ್ನ ವಹಿಸಿದ್ದ. ಅವತ್ತಿನಿಂದ ಮನೆಯಲ್ಲಿ ಊಟ ಮಾಡುವುದು, ಅಲ್ಲಿ ಇಲ್ಲಿ ಅಡ್ಡಾಡಿ ಒಂದು ಬೀಡಿಗೂ ಮಗನ ಮುಂದೆ ಕೈಚಾಚುವ ಪ್ರಸಂಗ ಬಂದೊದಗಿತ್ತು. ಇನ್ನೂ ಸರಾಯಿಗೆ ಅಡ್ಡ ಖರ್ಚುಗೆ ಏನಾರು ಕೆಲಸ ಮಾಡಲೇ ಬೇಕಾಗಿತ್ತು. ಹಂಗಾಗಿ ರಟ್ಟೆ ಮುರಿದು ಕೆಲಸ ಮಾಡತೊಗಿದ. ಒಮ್ಮೊಮ್ಮೆ ಅವನ ಅಣ್ಣನ ಮೂರ್ಖತನದಿಂದಾಗಿ ಅವನ ಸೊಂಬೇರಿತನದಿಂದಾಗಿ ಇಡೀ ಮನೆ ಹಾಳಾಗಿ ಹೋದ ಬಗ್ಗೆ ಪಶ್ಚಾತ್ತಾಪ ಪಡುತ್ತಿದ್ದ. ಆದರೂ ಬಿದ್ದರೂ ಮೀಸೆ ಮಣ್ಣಾಗಲಿಲ್ಲಾ ಎನ್ನುವಂತೆ ಆ ಹಳೆ ದೌಲತ್ತಿನ ಮಾತುಗಳನ್ನು ಆಡಿ ಜನರಿಂದ ಅಪಹಾಸ್ಯಕ್ಕೊಳಗಾಗುತ್ತಿದ್ದ.

ಒಂದೊಮ್ಮೆ ಯಾಕೊ ಒಂದು ವಾರದಿಂದ ಜ್ವರ ಬಂದು ಹಾಸಿಗೆ ಹಿಡಿದಿದ್ದ. ಕೈಯೊಳಗೆ ಕಾಸಿಲ್ಲದ್ದಕ್ಕೆ ದುರ್ಗಾಪುರದ ಮಲೇರಿಯಾ ಡಾಕ್ಟರ್ ಹತ್ರ ಹೋಗಿ ಸೂಜಿ ಚುಚ್ಚಿಸಿಕೊಳ್ಳದಕ್ಕೂ ಆಗದೆ ಪರದಾಡಿದ್ದ "ಹಾಳ ಸೂಳಿಮಕ್ಕಳ್ರು, ಹಾಸಿಗೆ ಮೇಲೆ ಬಿದ್ದುಕೊಂಡರು ಬಂದು ಏನಾತು, ಯಾಕ ಮಲಗೀಯ ಅಂತ

ಮಾತಾಡುವಷ್ಟು ಪುರಸೊತ್ತಿಲ್ಲದಂಗೆ ಆಗಿದ್ದಾರೆ." ಚೆನ್ನ ಒಡಕು ಕನ್ನಡಿಯೊಳಗೆ ತಲೆ ಬಾಚಿಕೊಂಡು ಹೆಗಲ ಮೇಲೆ ಟವೇಲು ಏರಿಸಿ ಊರೊಳಗೆ ಸುತ್ತಾಡೋದಕ್ಕೆ ಹೊಂಟಿದ್ದ. ಬೇಕಂತಲೆ ಅವನ ನೋಡಿ ಜೋರಾಗಿ ಹೇಳಿದ. ಬಾಯಿಬಿಟ್ಟರೆ ಬಣ್ಣಗೇಡು ಅಂದುಕೊಂಡವನೆ ಸುಮ್ಮನೆ ಹೊರಗೆ ಹೊರಟುಬಿಟ್ಟ. "ಲೇ ಎಲ್ಲಿ ಹಾಳಾಗಿ ಹೋದೆ. ನೀನಾರು ಆಟ ಹೇಳಬಾರದ ದೊಡ್ಡ ಮನುಷ್ಯನಿಗೆ ಹೌದು ನಮ್ಮಪ್ಪ ಹತ್ತು ದಿನ ಆಯ್ತು ಮನಿಬಿಟ್ಟು ಹೊರಗೆ ಹೋಗಿಲ್ಲ ಏನಾಗಿದೆ ಅಂತ ವಿಚಾರ ಬೇಡ" ಹೆಂಡತಿ ಸಿಂಗಾರಿಯ ಮೇಲೆ ಜೋರು ಮಾಡಿದ "ಎಯ್ ಸುಮ್ಮನೆ ಬಿದ್ಕೊ ಹೊರಗೆ ಹೋಗಿ ಮಾಡೊದಾರೂ ಏನೈತೆ. ಅಲ್ಲಾ ಅಷ್ಟು ಕೆಲಸ ಮಾಡಿಯಾ, ಆಸ್ರಕ್ಕೆ, ಬ್ಯಾಸರಕ್ಕೆ ಬಂದೀತು ಅಂತ ಒಂದ ಹತ್ತು ರೂಪಾಯಿ ಉಳಿಸಿದ್ದರೆ ಈಗ ಕೆಲಸಕ್ಕ ಬರುತ್ತಿತ್ತು. ಮಕ್ಕಳು ದೊಡ್ಡೋರ ಆಗ್ಯಾರ, ಎಷ್ಟದಪಾ ಅಂತ ಕೈಚಾಚಲಿ ಅವರ ಮುಂದೆ ನನಗೂ ಮರ್ಯಾದೆ ಅನ್ನೋದಿದೆ. ಐವತ್ತು ಸಲ ನೋಡ್ಯಾನ, ನೂರ ಸಲ ಮುಲಕಾಡೋದನ್ನ ಕೇಳ್ಯಾನ. ಕೊಡೊ ಮನಸಿದ್ದರೆ ಕೊಡುತ್ತಿದ್ದ. ನಿನ್ನ ಹಣೆಬರ ಅಂದ್ಕೊಂಡು ಸುಮ್ಮನಾಗು." ಎಷ್ಟೋ ದಿನಗಳ ಕೋಪವನ್ನು ಹೊರಹಾಕಿದಳು. ಹುಟ್ಟಿಸಿ ದೊಡ್ಡ ತಪ್ಪ ಮಾಡಿದೆ, ಎಲ್ಲಿ ಕರಿ ಅವನ್ನ ನಾನೆ ಕೇಳ್ತೀನಿ ಹೆಂಡತಿಗೆ ಹೇಳಿದ. "ಲೇ ಚೆನ್ನ, ಬಾರ್ಲ ನಿಮ್ಮಪ್ಪ ಯಾಕೊ ಕರಿತವ್ನೆ" ಕೂಗಿದಳು. "ಏನಂತ ಅವನದು ಮನಿಯೊಳಗೆ ಕೂಳು ಕತ್ತರಿಸಿ ಸುಮ್ಮನೆ ಬಿದ್ಕೊ ಅಂತ ಹೇಳು, ಹೊರಗ ಹೋಗಿ ಕಡದು ಕಿಸಿಯೋದು ಅಟ್ರಾಗೆ ಐತೆ" ಗದರಿದ. "ಅಲ್ಲಲೆ ವಾರ ಆತು, ಜ್ವರದಿಂದ ನಾಲಗಿ ಅನ್ನೋದು ಕೆರದ ಅಟ್ಟಿ ಆಗ್ಯೆತೆ. ನೋಡು ಒಂದು ಹತ್ತು ರೂಪಾಯಿ ನೋಟು ಕೊಡು ಇತ್ಲಗೆ, ದಾವಣಗೇರಿಗ ಹೋಗಿ ಡಾಂಬರ ರೋಡ ಮೇಲೆ ಅಡ್ಡಾಡಿ ಬೆಣ್ಣೆದ್ವಾಸಿ ತಿಂದು ಒಂದು ಸಿಂಗಲ್ ಚಾ ಕುಡುದು ಬಂದೆ ಅಂದರೆ ಜ್ವರ ಕಡಿಮೆ ಆಕ್ಕೈತೆ. ಸಂಜಿ ಮುಂದ ಒಂದು ಪಾಕೀಟು ಸರಾಯಿ ಕುಡದು ಮಲಗಿದರೆ ಮಂಜಾನಿಗ ಎಲ್ಲಾ ಸರಿಹೊಕ್ಕೈತೆ" ಅವನ ಮಾನಸಿಕ ದೃಢತೆಯನ್ನು ವಿವರಿಸಿದ.

* * *

34. ಖಾಲಿ ತೌಡು ಕುಟ್ಟುವ ಕಂಸನಾಯ್ಕನೊ

ಇಪ್ಪತ್ತು ವರ್ಷದ ನಂತರ ಹುಟ್ಟಿದ ಒಬ್ಬನೆ ವಾರಸು. ಬೋತನಿಗೆ ಎಂಟು ಎಕ್ಕರೆ ಒಳ್ಳೆ ಜಮೀನಿತ್ತು. ಇದ್ದ ಇಬ್ಬರು ಹೆಣ್ಣು ಹುಡುಗಿಯರ ಮದುವೆ ಇವನು ಹುಟ್ಟಿದ ಪೂರ್ವದಲ್ಲಿಯೇ ಆಗಿಹೋಗಿತ್ತು. ಹಂಗಾಗಿ ಮುದುಕ ಬೋತ ಹೆಗಲ ಮೇಲೆ ಹೊತ್ತು ತಿರುಗಾಡಿಸಿ ಮುದ್ದು ಮಾಡಿದ್ದ. ಹಂಗೆ ಮೆಜಾರಿಟಿಗೆ ಬಂದಿದ್ದೇ ಅವನಿಗೆ ಕೆಲಸಕ್ಕೆ ಹಚ್ಚದೆ ಹಿರೆತನ ಮಾಡೋದಕ್ಕೆ ಬಿಟ್ಟ. ಕಂಸನಾಯ್ಕ ಪ್ರತಿದಿನ ಮುಂಜಾನೆ ಎದ್ದವನೆ ಮನೆಯಲ್ಲಿ ಸಿಕ್ಕದ್ದು ತಿಂದು ದುರ್ಗಪುರಕ್ಕೆ ನಡೆದುಕೊಂಡೆ ಹೋಗುತ್ತಿದ್ದ. ಅಲ್ಲಿ ಜಯಣ್ಣನ ಚಹಾದಂಗಡಿಯಲ್ಲಿ ಕಾಸಿದ್ದರೆ ಸಿಂಗಲ್ ಮಿರ್ಚಿ, ಚಹ ಕುಡಿದು ಪಕ್ಕದಲ್ಲಿದವನಿಗೆ ಕೇಳುತ್ತಿದ್ದ. "ಅಣ್ಣ ಯಾವೂರು" ಅಂತ ಅವನೇನಾರು ಮಾತಾಡೋದಕ್ಕೆ ಸುರು ಮಾಡಿದನೊ "ಅಂದಂಗೆ ಹ್ವಾದ ವರ್ಷ ಮಳಿ ಪಾಡಾಗಿರಬೇಕಲ್ಲ? ಬಂಪರ್ ಬೆಳೆ ಬಂದೈತೆ, ರೈತರು ಒಳ್ಳೆ ಕಾಸು ಮಾಡಿದ್ದಾರೆ. ನಿಮ್ಮ ಊರ ಕಡೀಗ ಶೇಂಗಾ ಬೆಳಿತಾರ, ಜೋಳ ಬೆಳಿತಾರ, ಮೆಣಸಿನಕಾಯಿ, ಅಕ್ಕಡಿಕಾಳು, ಪಣತಗಳು, ಹಗೇವು, ರೊಕ್ಕ ಎಷ್ಟು ಇದೆ, ಮಕ್ಕಳು, ಮೊಮ್ಮಕ್ಕಳು" ಎಂದು ನಿಲ್ಲಿಸಿದೆ ಮಾತಾಡುತ್ತಿದ್ದರೆ ಎದುರು ಪಾರ್ಟಿ ಸುಸ್ತಾಗಿ "ಅಣ್ಣ ಹೊತ್ತಾತು ಊರು ದೂರ ಬರ್ತಿನಿ. ಇನ್ನೂ ಯಾವತ್ತು ಸಿಗಲ್ವಪ್ಪ ನಿನ್ನ ಕೈಗೆ" ಅಂತ ಮಾಯ ಆಗುವವರೆಗೆ ಹಲಬುತ್ತಿದ್ದ. ಅವನು ಹೋದ ಮೇಲೆ ಬೇಜಾರಾಗಿ ಕಂಸ ಎದ್ದವನೆ ಕಂಡಿಪುರಕ್ಕೆ ಹೊರಡುತ್ತಿದ್ದ. ದಾರಿಯಲ್ಲಿ ಯಾರಾದರು ಕಂಡೀಪುರದವರು ಸಿಕ್ಕರೆ "ಅಂದಂಗೆ ತಮ್ಮ ನಿಮ್ಮೂರೊಳಗೆ ದೊಡ್ಡ ಹಿಡುವಳಿದಾರ ಅಂದ್ರೆ ಯಾರು,? ಅವನ ಎತ್ತುಗಳು ಎಷ್ಟು, ಕುರಿಗಳು ಎಷ್ಟು, ಎಮ್ಮೆಗಳು, ಆಕಳು, ಕರಗಳು, ಕೋಳಿಗಳು, ರಂಟೆ ಎಸದಾವ, ಕೂರ್ಗಿ, ಕುಂಟಿ, ಎಡೆನಗ, ರೋಣಗಲ್ಲು" ಕೇಳುತ್ತಿದ್ದವನು ತಲಿಸುತ್ತು ಬಂದು "ಅಣ್ಣ ನೀ ಆಟು ನಡಿ, ನನಗೆ ಬೇರೆ ಕೆಲಸ ನೆನಪಾಯಿತು" ಅಂತ ಬಿಡಿಸಿಕೊಂಡು ಮಂಗಳಮಾಯ ಆಗುತ್ತಿದ್ದ. ಕಂಡೀಪುರದಲ್ಲಿ ಸಂಜೆ ನಾಕರವರೆಗೆ ಕಾಲಕಳೆದು ಊರ ಕಡೆಗೆ ಕಾಲು

ಕೇಳುತ್ತಿದ್ದ. ಎಲ್ಲಿಗೆ ಹೋಗಿದೆ? ಯಾಕೆ ಹೋಗಿದ್ದೆ,? ಏನು ಕೆಲಸ ಇತ್ತು,? ಏನು ಕೆಲಸ ಮಾಡಿದೆ? ಅಂತ ಅವನಪ್ಪ ಬೋತನೂ ಕೇಳುತ್ತಿರಲಿಲ್ಲಾ, ಉಂಡೆಯಾ, ಉಣ್ತಿಯಾ ಅಂತ ಅವನ ತಾಯಿ ಸುವಾಲಿಬಾಯಿನೂ ಕೇಳಲಿಲ್ಲಾ. ಪ್ರತಿದಿನ ಮನೆಯಿಂದ ಊರೂರು ಸುತ್ತುವುದು ಕಂಸನಿಗೆ ರೂಢಿಯಾಗಿ ಬಿಟ್ಟಿತ್ತು. "ಲೇ ಬೋತ ಮನಿಯೊಳಗೆ ಹರೆಯದ ಮಗ ಅದಾನ, ನೀ ಯಾಕಲೆ ಮುಕಳಾಗಿನ ನರಕಿತ್ಕೊಂತಿಯ ಎಲ್ಲಾ ಅವನಿಗೆ ವಹಿಸಿ ಮನಿಯೊಳಗೆ ರಾಜನಂಗೆ ಇರಬಾರದೆ" ಅವನ ಒರಿಗೆಯ ಹನುಮಂತ ಕಾಳೇಶಿ, ಚುನ್ನಾನಾಯ್ಕ ಬೊಯ್ದು ಹೇಳಿದರು. ಬೋತನಾಯ್ಕ ನಡೆದ ವಿಷಯವನ್ನು ಸವಿಸ್ತಾರವಾಗಿ ಹಂಚಿಕೊಂಡ. ಸುವಾಲಿ ಮಗ ಕಂಸನನ್ನ ಬಹಳ ಹತ್ತಿರದಿಂದ ಗಮನಿಸಿದ್ದಳು. ಮಗ ಅಡ್ಡ ಕಸಬಿಯಾಗಿ, ಅಂಡಲಿತಿರೋದು ಅವಳಿಗೂ ಸುತಾರಾಂ ಇಷ್ಟವಾಗಲಿಲ್ಲ. ಹೇಗಾದರು ಮಾಡಿ ಜವಾಬ್ದಾರಿ ಬರೊ ಹಾಗೆ ಮಾಡಬೇಕು ಇಲ್ಲದಿದ್ದರೆ ನಾಳೆ ಬೀದಿಗೆ ಬಂದಾನು. ಅಂತೇಳಿ ಆಲೋಚನೆ ಮಾಡಿ ಅವಳ ಅಣ್ಣನ ಮಗಳು ಪಾವಲಿಯನ್ನ ಕೂಡ ಅವನಿಗೆ ಮದುವೆ ಮಾಡಿಕೊಂಡು ಬಂದಳು. ಕೊಳ್ಳಿಗೆ ಗುದ್ದಿ ಕಟ್ಟಿದರೆ ಮಗದಾರಿಗೆ ಬಂದಾನು ಅನ್ನೊ ಭ್ರಮೆ ಅವಳದಾಗಿತ್ತು.

ಮದುವೆ ಹೊಸ ಸಂಸಾರ, ಜವಾಬ್ದಾರಿ ಹೆಚ್ಚುತ್ತೆ ಅಂತ ಬೋತಸುವಾಲಿ ಅಂದುಕೊಂಡು ಖುಷಿಪಟ್ಟರು. ಆದರೆ ಅವನು ಹಸಿಮೈ ಇದ್ದಾಗಲೆ ತರ್ಲಾಪುರಕ್ಕೆ ಹೋಗಿ ಬರುವುದಾಗಿ ಹೊರಟೆಬಿಟ್ಟ. ತರ್ಲಾಪುರದ ಶಾನುಬೋಗ ಪ್ರಹ್ಲಾದಭಟ್ಟರು ಕರ್ಮಕ್ಕೆ ಕಂಸನಕೈಗೆ ಸಿಕ್ಕಿಬಿಟ್ಟರು. "ಭಟ್ರೆ, ಆರಾಮಲ, ಈ ವರ್ಷ ಕಂದಾಯಪಾಡಾಗೆ ವಸೂಲಿಯಾಗಿರಬೇಕು. ಮಳೆ ಬೆಳೆ ಚೆನ್ನಾಗಿ ಆಗಿದೆ. ಮುಂಗಾರು ಭರಪೂರ, ಹಿಂಗಾರು ಭರಪೂರ. ಅವನವ್ವನ ರೈತರು ಮುಗೆ ಬಿದ್ದು ಕಂದಾಯ ಕಟ್ಟಿರಬೇಕು. ಅಂದಂಗೆ ನಮ್ಮೂರ ಹಾಸಿಗಿಯೊಳಗೆ ನಿಮ್ಮದೊಂದು ಐವತ್ತು ಕೂರ್ಗಿ ಜಮೀನು ಇರಬೇಕು. ಅದ್ರಾಗ ಹತ್ತು ಕೂರ್ಗಿ ಕರಿಮಣ್ಣು, ಹಿಂಗಾರೇನು ಬರೋಬರಿ ಬಂದಿದೆ. ಬಿಳಿಜೋಳ, ಕುಸಬಿ, ಮೆಣಸಿನ ಗಿಡ, ಸೊಂಪುಕಾಳು, ಧನಿಯಾ, ಹತ್ತಿ, ರೈತರು ಸರಿಯಾಗಿ ತಂದು ಮನಿಗೆ ತಲುಪಿಸುತ್ತಾರೆ ತಾನೆ. ಇಲ್ಲಾಂದ್ರೆ ಹೇಳ್ರಿ" ಕೇಳಿ ಕೇಳಿ ಪ್ರಹ್ಲಾದ ಭಟ್ಟ ಸುಸ್ತಾಗಿ "ಲೇ ನಾಯಕ, ಯಾ ಮಳೆ ನಕ್ಷತ್ರದೊಳಗೆ ಹುಟ್ಟಿಯಲೇ. ಅಲ್ಲ ನಿಂದೇನು ಬಾಯಿನ, ಬೊಂಬಾಯಿನ ಅಲ್ಲಲೇ ನಾನು ನೋಡ್ತಾ ಅದೀನಿ ಕೇಳ್ತಾ ಅದೀನಿ ಒಂದೇ ನಿಮಿಷದಾಗ ಎಷ್ಟು ಮಾತುಗಳು. ಥು ನಿಮ್ಮಮ್ಮನ ಲಮಾಣ್ಯ, ಎದ್ದನಡಿ" ಅಂಥ ಜಯನ ಅಂಗಡಿಯೊಳಗೆ ಅರ್ಧ ಚಾ ಕುಡಿಯೋದಕ್ಕೆ ಎದ್ದುಹೋದ. ತರ್ಲಾಪುರದಿಂದ ಸೋಮನಹಳ್ಳಿಗೆ ಹೊರಟ ಅವಾಗ ಆಗಲೇ ಹೊತ್ತು ನೆತ್ತಿ ಮೇಲೆ ಬಂದಿತ್ತು. ಅಲ್ಲಿ ಹಜಾಮರ ಚಂಪಾಕಲಿ ಅಂಗಡಿಯೊಳಗೆ ಸ್ವಲ್ಪ ಹೊತ್ತು ಕುಂತು ಅವನ ಮದುವೆ ವಿಷಯ ತಗದ. "ಮನ್ನೆ

ನನ್ನ ಮದುವೆಗೆ ಏನ ಜನಾ ಅಂತೀಯ ಆಯರು ಬಿದಿದ್ದೆ ಸಾವರದ ಹತ್ರ ಇತ್ತು ನೋಡು. ಹುಗ್ಗಿ ಮಾಡ್ಸಿದ್ದೆ, ಮಾದ್ಲಿ, ಹಾಲು, ತುಪ್ಪ, ಅನ್ನ ನುಗ್ಗೇಕಾಯಿ, ಬೆರಕಿಸೊಪ್ಪು, ನಾಕು ಬದ್ನೆಕಾಯಿ, ಆಲೂಗಡ್ಡೆ ಹಾಕ್ಸಿ ಸಾರು, ನಿಮ್ಮೂರ ಅಡುಗೆ ಭಟ್ಟ ಚಿದಂಬರ ಅಡುಗೆ ಮಾಡಿದ್ದು. ಅವನವ್ವನ ಕೊನೆಗೆ ವಗ್ಗರಣೆ ಕೊಟ್ಟ. ಸುಡೊ ಬೆಂಕಿಯೊಳಗೆ ಸೌಟಿನೊಳಗೆ ಬೆಳ್ಳುಳ್ಳಿ, ಸಾಸಿವೆ, ಜೀರಗೆ, ಕರಿಬೇವು ಹಾಕಿ ಕಾಯಿಸಿ ಸಾರಿನ ಪಾತ್ರಿಗೆ ಸುರುವಿದರೆ ಬೆಂಕಿ ಹತ್ಕೊಂತು ಅಂತೀನಿ.” ಇನ್ನೇನೊ ಹೇಳಾಕ ಬಾಯಿತಗದಿದ್ದ. “ಕಂಸಣ್ಣ, ಹೊಟ್ಯಾಗ ಹಸಿವಿಂದ ಬೆಂಕಿ ಆಡಾಕ ಹತ್ತೈತಿ, ಕದ ಹಾಕ್ತಿನಿ” ಅಂದವನೆ ಅವನ ಕರ್ಣಕಠೋರ ಶಬ್ಧಗಳನ್ನು ಕೇಳಲಾಗದೆ ಹೊರಗೆ ಹಾಕಲು ಪ್ರಯತ್ನಿಸಿದ.

ಕಂಸನಿಗೆ ಏಳು ಮಂದಿ ಮಕ್ಕಳು ಆದರು. ನಾಕು ಮುತ್ತಿನಂತ ಹೆಣ್ಣು, ಮೂರು ಗಂಡು, ದೊಡ್ಡವನು ಲಕಪತಿ ಹಂಗೆ ಕೈಗಬಂದಿದ್ದ. ಮಗನ ಖಾಲಿ ಪುಕ್ಕಟ್ಟೆ ತಿರುಗಾಟದಿಂದ ಬೇಸರಗೊಂಡಿದ್ದ ಬೋತ ವಯಸ್ಸಿಗೆ ಸಹಜವಾದ ಕಾಯಿಲೆಗೆ ತುತ್ತಾಗಿ ಹಾಸಿಗೆ ಹಿಡಿದು ಒಂದುದಿನ ಸತ್ತುಹೋದ. ಅವನು ಸಾಯುವವರೆಗೆ ಗಳೆಹೊಡೆಯೋದು ಬಿತ್ತೋದು, ಎಡೆಹೊಡೆಯೋದು ಮಾಡುತ್ತಿದ್ದ. ಯಾವತ್ತು ಹೊಲದಾಗ ಏನು ಬಿತ್ತಿರಿ? ಏನು ಮಾಡಿರಿ? ಅಂಥ ಕೇಳಲಿಲ್ಲಾ ಬೆಳೆದಿದ್ದನ್ನ ಮಾರೊ ಮುಂದೆ ಹಾಜರಾಗಿ ಅಂಗಡಿಗೆ ಹೋಗಿ ಲೇವಾದೇವಿ ಮಾಡುತ್ತಿದ್ದ. ತಂದೆ ಹೋದ ಮೇಲೆ ಅಷ್ಟೊತ್ತಿಗಾಗಲೇ ಲಕಪತಿ ಗಳೆ ಹೊಡೆಯೋದಕ್ಕೆ ಸಜ್ಜಾಗಿದ್ದ. ಅವನೆ ಎಲ್ಲಾ ಕೆಲಸ ಮಾಡಲು ಆರಂಭಿಸಿದ. ಕಂಸನಾಯ್ಕ ಮತ್ತೆ ಮೈತೊಳೆದ ಎತ್ತಿನಂತೆ ಕೆಲಸ ಬಗಸಿ ಹ್ವಾರೆ ನೋಡದೆ ಗೊಳ್ಳ ಕುಟ್ಟಲು ಊರೂರು ಅಲೆಯುತ್ತಿದ್ದ. ವರ್ಷದ ಮುನ್ನೂರ ಅರವತ್ತೈದು ದಿನಾನು ಊರೂರು ಸುತ್ತಿ ಆ ಸುದ್ಧಿ ಈ ಸುದ್ಧಿ ಅಂತ ಊರವರ ಎಲ್ಲಾ ವಿಷಯಗಳನ್ನು ತಲುಪಿಸಿ ಅಲ್ಲಿಂದ ಹೊಸ ಸುದ್ದಿ ತಗೊಂಡು ಊರಿಗೆ ಬಂದು ಅವನ ಮಾತು ಕೇಳವವರಿಗೆ ಅರ್ಧ ಬಾಟಲು ಹೆಂಡನಾರು ಕುಡಿಸಿ ಅಲ್ಲಿಂದ ತಂದ ಸುದ್ದಿಯನ್ನು ಬಿತ್ತಿರಿಸುತ್ತಿದ್ದ. ಇದು ಯಾವ ಪರಿ ರೋಗವೊ ಅಂತ ತಿಳಿಯದೆ ಮಂದಿ ಹೈರಾಣಾಗಿ ಯಾರಾದರು ಗುಂಪು ನಿಂತಿದ್ದರೆ “ಒಡ್ರಲೆ ಕಂಸಾನಾಯ್ಕ ಬಂದ” ಅಂತ ಹೇಳಿ ಅವನ ಮಾತಿನ ವರಸೆಯಿಂದ ತಪ್ಪಿಸಿಕೊಂಡು ಅಡ್ಡಾಡುವಂತಾಗಿತ್ತು ಸ್ಥಿತಿ.

* * *

35. ರಂಗೋಲಿ ಚೀಮನನ ಬಡಾಯ ಮಾತುಗಳು

ಕಂಸಹಿಂಗಾದರೆ ರಂಗೋಲಿ ಚೀಮನಾಯ್ಕ, ಮತ್ತೊಂದು ಅತಿರೇಕದ ಮನುಷ್ಯ. ಕೋಡಿಸರದಾಗೆ ಸಿಗುವ ಬಿಳಿಕಲ್ಲು ತಂದು ನುಣ್ಣಗೆ ಪುಡಿಮಾಡಿ ಚೀಲದಲ್ಲಿ ತುಂಬಿಕೊಂಡು ಹರಿಹರ, ದಾವಣಗೆರೆ ಪಟ್ಟಣಗಳಲ್ಲಿ ಹೊತ್ತು ಮಾರಿ ಕಾಸು ಮಾಡುವುದೆ ಅವನ ಕಾಯಕ. ಬಡಾಯಿ ಕೊಚ್ಚುವುದು ಅವನಿಗೆ ಅವನಪ್ಪ ಪಾಪಣ್ಣಿನಾಯ್ಕನಿಂದ ಬಂದಿತ್ತು. ಪಾಪಣ್ಣಿ ಅದ್ಯಾವುದೊ ಸೀಮೆಗೆ ಹೋಗಿ ಯಾರದೊ ಒಂದು ಹಳೆ ಕೋಟನ್ನು ಕೇಳಿ ಇಸ್ಕೊಂಡು ಅದನ್ನೆ ಉಟ್ಕೊಂಡು ಭಿಕ್ಷೆ ಬೇಡಿ ಕಾಸು ಮಾಡಿಕೊಂಡು ಬರುತ್ತಿದ್ದ ಎನ್ನುವ ವದಂತಿ ಇತ್ತು. ಊರಿಗೆ ಬಂದು “ಎಯ್, ನಾನು ಕೆಲಸ ಮಾಡುವ ಊರಾಗ ಏನು ಜನ ಅದಾರೆ ಅಂತಿಯ, ನನಗೆ ಕೆಲಸಕ್ಕೆ ಹಚ್ಚಲ್ಲ ಅಂತೀನಿ. ನಾನು ಕೆಲಸ ಮಾಡಿದ್ರೆ ಅರೆ ಪಾಪಣ್ಣಿನಾಯ್ಕ ನೀನು ಯಜಮಾನ ಮನುಷ್ಯ ಕೆಲಸನೇ ಮಾಡಬೇಡ. ನಿನ್ನ ಜ್ಞಾನದ ಮಾತುಗಳು ಆಡಿದ್ರೆ ಸಾಕು ಅಂತ ಕುಂದ್ರಿಸಿ ನೂರಿನ್ನೂರು ಕೊಟ್ಟು ಕಳುಹಿಸುತ್ತಾರೆ” ದೊಡ್ಡ ದೊಡ್ಡ ಸುಳ್ಳನ್ನು ಹೇಳುತ್ತಿದ್ದ ತಂದೆಯ ಯತಾವತ್ತು ನಕಲುಪ್ರತಿ ಯಂತಿದ್ದ ರಂಗೋಲಿ ಚೀಮ ದಾವಣಗೇರಿಯ ಕುರುಬರಕೇರಿ, ಆರ್ಯರಕೇರಿ, ಹೊಂಡದ ಸರ್ಕಲ್, ದುರ್ಗಮ್ಮನ ಗುಡಿ, ಭಾರತ ಕಾಲೋನಿ, ಹಾಂಸ ಬಾವಿ ಸರ್ಕಲ್, ಕೆ ಟಿ ಜೆ ನಗರ ಒಂದು ಜಾಗವನ್ನು ಬಿಡದೆ ರಂಗೋಲಿ ಮಾರುತ್ತಿದ್ದ. ಒಂದು ರೂಪಾಯಿ ಕೂಡಿದ್ದೆ ತಡ ಗಂಟನ್ನ ಹೊರಗಡೆ ಇಟ್ಟು ಬೆಣ್ಣಿದೋಸೆ ಚಾ ಕುಡಿದು ಮುಂದಿನ ಮಾರಾಟಕ್ಕೆ ಶಕ್ತಿ ಪಡೆದು ಸುರು ಹಚ್ಕೊಳ್ಳುತ್ತಿದ್ದ. ಯಾರಾದರು ಇವನ ಮಾತು ಕೇಳುವ ಪುರುಸೊತ್ತಿರುವ ಹೆಣ್ಣು ಮಕ್ಕಳಿಗೆ “ನಾನೇನು ದೂರದವನಲ್ಲಮ್ಮ, ಇಲ್ಲೆ ಭದ್ರಾನಾಯ್ಕನ ತಾಂಡದವನು. ನನ್ನದು ಹತ್ತು ಎಕ್ಕರೆ ಒಳ್ಳೆ ತರಿಜಮೀನಿದೆ. ನಾಕು ಎತ್ತಿನ ಕಮತನೂ ಇದೆ, ಕುಂತು ಉಣ್ಣೋದು ಏನು ಅಂತ ರಂಗೋಲಿ ಮಾರಾಟ ಮಾಡ್ತಿನಿ.” ಅಂತ ಕೊಚ್ಚಿಕೊಳ್ಳುತ್ತಿದ್ದ. ನಂಬೋರು ನಂಬುತ್ತಿದ್ದರು. ನಂಬದಿರುವರು ಏನೊ ಹೇಳ್ತಾನಂತ ಕೇಳಿ ನಕ್ಕು ಸುಮ್ಮನಾಗುತ್ತಿದ್ದರು. ಚೀಮ

ಅಷ್ಟಕ್ಕೆ ಸುಮ್ಮನಾಗಿದ್ದರೆ ಏನೂ ಆಗ್ತಿರಲಿಲ್ಲವೇನೊ. ಈ ಬಡಾಯಿ ಕೊಚ್ಚುವ ಚಾಳಿ ರಕ್ತದಲ್ಲೇ ಇದಿದ್ದರಿಂದ ಇಡಿ ಮನೆತನವೆ ಸಣ್ಣದನ್ನ ಎತ್ತಿ ತೋರಿಸಿ ತಾವೆ ಶ್ರೇಷ್ಠ ಎಂಬಂತೆ ತೋರಿಸಿಕೊಳ್ಳುತ್ತಿದ್ದರು. ಒಂದು ಊರು ಒಂದು ಮನೆ ಬಿಡದಂತೆ ಇಲ್ಲದಿದ್ದನ್ನ ಇದೆ ಎಂದು ಪ್ರತಿಪಾದಿಸಿ ಅದರೊಳಗೆ ಖುಷಿ ಪಡುತ್ತಿದ್ದ. ಬಹುಶಃ ಅವನಿಗೆ ಯಾರು ಚೀಮ ನೀನು ಮಾಡ್ತಿರೋದು ಸರಿಯಲ್ಲ, ಸುಳ್ಳು ಹೇಳಿದರೆ ನಾಳೆ ಮಂದಿ ನಿನ್ನ ಹೇಗೆ ನಂಬಬೇಕು ಮಕ್ಕಳು ಮರಿ ಇರೋನು ಕೊಡೋದು ತಗೊಳ್ಳೋದು ಇರತೈತಿ ಅಂತ ಯಾರು ಅವನಿಗೆ ತಿಳಿಸಿ ಹೇಳಿದಂತೆ ಕಾಣಲಿಲ್ಲಾ. ಅವನು ತಾನು ಹೇಳುತ್ತಿರುವುದು ನಿಜವಿದೆ ಅಂದುಕೊಂಡನೊ ಏನೋ ಅವನ ಸುದ್ದಿ ಸುಳ್ಳಾಗಲಿ ನಿಜವಾಗಿರಲಿ ಸುಳ್ಳಿರಲಿ ಅದರಿಂದ ಯಾರಿಗಾದರು ಲಾಭ ಇದೆಯೇ? ಅಥವಾ ನಷ್ಟ ಏನಾದರು ಇದೆಯೇ ಬಾಯಿಗೆ ಬಂದಿದ್ದು ಹೇಳುತ್ತಿದ್ದ. ಮನೆಯಲ್ಲಿ ಒಬ್ಬೊಬ್ಬರೆ ಇರುವ ಹೆಂಗಸರಿಗೆ ಮಾತುಗಳು ಬೇಕಾಗಿರುವುದು ಸಹಜವೆ, ಏಕೆಂದರೆ ಗಂಡಂದಿರು ಕೆಲಸದ ಮೇಲೆ ಹೋದಾಗ ಯಾರಾದರು ಮಾತಾಡೋರು ಸಿಕ್ಕರ ಸಾಕಪ್ಪ ದೇವರೆ ಅಂದುಕೊಂಡಿರೊ ಸಮಯದಾಗ "ರಂಗೋಲಿ ಬೇಕೆನ್ರವ್ವ" ಅಂತ ರಂಗೋಲಿ ಚೀಮನ ಎಂಟ್ರಿಯಾಗುತ್ತಿತ್ತು. "ಸಿಕ್ಕ ಬಕರ ತಡಿ" ಅಂದವರೆ "ಎಯ್ ರಂಗೋಲಿ ಹೆಂಗ ಸೇರು ಕೊಟ್ಟಿಯಾ" ಕೇಳುವರು. "ನಾಕಾಣೆಗೆ ಸೇರು ಕಣವ್ವ" ಚೀಮನ ಉತ್ತರ "ರಂಗೋಲಪ್ಪ ಅಂದಂಗೆ ಯಾ ವೂರು ನಿಂದು" ಹೆಂಗಸು ಕೇಳಿದಳು. "ನಮ್ಮದ ಇಲ್ಲೆ ಕಣ್ರವ್ವ ದುರ್ಗದೂರು ಪಕ್ಕದಾಗೆ ಭದ್ರನಾಯ್ಕನ ತಾಂಡ. ನಮ್ಮಂದಿ ಬಹಳ ಅದೀವಿ ಕನ್ನಡದವರು ನಾಕೈದು ಮನಿ ಅದಾವ. ಮುಸ್ಲಿಂ ಒಂದು ಐದು ಮನಿಗಳು. ಅಂತಾದೊಡ್ಡದೇನಿಲ್ಲ ನಮ್ಮೂರಾಗೆ ನಾನೆ ದೊಡ್ಡ ಹಿಡುವಳಿದಾರ. ನಾಕ ಎತ್ತಿನ ಕಮತ ಐತೆ. ಅದ್ರಾಗ ಎರಡು ಗೆಣಸಿ ಹೋರಿ ಹಂಗ ಬೆಳ್ಳಕ್ಕಿ ಇದ್ದಂಗದಾವ ನೋಡಬೇಕು. ಏನು ಕೋಡು ಏನು ಕೊಂಬು ನನ್ನ ಎತ್ತು ನೋಡಾಕ ಮಂದಿ ದೂರ ದೂರದಿಂದ ಬರ್ತಾರಂತಿನಿ. ಮನ್ನೆ ಅದ್ಯಾವುದೂ ಹಗರಿ ಬೊಮ್ಮನಳ್ಳಿಯವರು ಬಂದು ಲೇ ಚೀಮಪ್ಪ ನಿನ್ನ ಹೋರಿಗಳನ್ನು ಕೊಟ್ಟುಬಿಡು. ದುಡ್ಡು ಎಷ್ಟಾರ ಕೇಳು, ಆಹಾ ಏನ ಸಾಕಿಯಪ್ಪ ಎತ್ತುಗಳನ್ನ ಗಲಾಗಲಾ ಅಂದ." ನಾನ್‌ಸ್ಟಾಪ್ ಸುರುಮಾಡಿದ. ಅಕೀನು ದೊಡ್ಡಫಟಾನೆ "ಅದಕ್ಕೆ ನೀ ಏನಂದೆ" ಅಕೀಗೂ ಮಾತು ಬೇಕಿತ್ತು "ಏನಂತಿಯವ್ವ ಕೊಟ್ಟ ನಾ ಏನು ಮಾಡಂದಿ. ಹಂಗ ಬೆನ್ನ ಮೇಲೆ ಕೈ ಇಟ್ಟರೆ ಒಳ್ಳೆ ಚಿಗರಿಮರಿ ಜಿಗದಂಗೆ ಠಣ್‌ಂತ ಜಿಗಿತವೆ. ಕುದುರೆ ಹಂಗೆ ನಾಗಾಲೋಟ ಕೀಳುತ್ತವೆ. ಇಂತ ಎತ್ತುಗಳನ್ನ ಹೆಂಗ ಕೊಡಂದಿ. ಈ ನಾಕ ಎತ್ತಿಂದು ಕಬ್ಬಿಣ ರಂಟಿಯನ್ನ ಎರಡೆ ಎಳಿತವೆ. ಇದನ್ನ ನೋಡಿ ಮಂದಿ ಹೈರಾಣ ಆಗ್ಯಾರ." ರೈಲು ಬಿಡುತ್ತಲೆ ಇದ್ದ. ಹೆಂಗಸು ನಾಕಣೆ ತಂದು ಕೈಗಿಟ್ಟಳು. ಎದ್ದು ಮುಂದಕ್ಕೆ ನಡದ. ಕಂಡಿಪುರ, ದುರ್ಗದೂರು ಸೋಮನಳ್ಳಿಯಲ್ಲಿ ಪರಿಚಿತರೆದುರಿಗೆ "ಅಣ್ಣ ಮನ್ನೆ ರಂಗೋಲಿ ಮಾರಿ ಗೆಣಸಿ ಹೋರಿ ತಂದಿನಿ." ಎರಡು ಬೆರಳುಗಳನ್ನ

ನೆಟ್ಟಗೆ ಮಾಡಿ "ಈ ಕೋಡಿನವು ಅದಾವ ಎರಡು ಹಲ್ಲು ಹಂಗ, ಹಂಗ ಬೆಳ್ಳಕ್ಕಿ ನೋಡಿದಂಗಾಗುತ್ತೆ. ಬಂಡಿಗೆ ಕಟ್ಟಿದ್ದೆ ಊರಿಂದ ಕಂಡಿಪುರಕ್ಕೆ ಹತ್ತು ನಿಮಿಷ ಬಂದುಬಿಟ್ವು. ಹಂಗ ಮೇಲೆ ನೆಗಿತವ." ಬಿಡುತ್ತಲೆ ಇದ್ದ. "ಹೌದ ಪರವಾಗಿಲ್ಲ ಈ ಮುಂಗಾರಿಗೆ ಬಾಡಗಿಗೆ ಗಳೆ ಕಳಿಸು" ಅಂತ ಪಾರ್ಟಿ ಸಾಕಾಗಿ ಮುಂದೆ ಹೊರಟ. ಅದೆ ವೇಳೆಗೆ ಭದ್ರನಾಯ್ಕನ ತಾಂಡದ ತೊಪುನಾಯ್ಕ ಕಂಡವನೆ "ಆ ರಂಗೋಲಿಚೀಮ, ನಿಮ್ಮ ಊರಿನವನೆ ತಾನೆ, ಊರಾಗ ದೊಡ್ಡ ಕುಳವಂತೆ. ಊರಿಗೆ ಅವನೆ ದೊಡ್ಡ ಮನುಷ್ಯನಂತೆ. ಮನ್ನೆ ಗೆಣಸಿ ಹೋರಿ ತಂದವನಂತೆ. ಒಳ್ಳೆ ಬೆಳಕ್ಕಿ ನೋಡಿದಂಗೆ ಆಗುತಂತೆ ಅವನ ಎತ್ತುಗಳನ್ನು ನೋಡಿದರೆ" ಮನುಷ್ಯ ಮಾತಾಡುತ್ತಲೆ ಇದ್ದ. ತೊಪುನಾಯ್ಕ ಹೈರಾಣ ಆಗಿದ್ದ ಕೇಳಿ ಕೇಳಿ ಕಡೀಗ, "ಅಣ್ಣ ಅವನು ಹಂಗೆ ಸ್ವಲ್ಪ ಇದಿದ್ದನ್ನ ಬಹಳ ಹೇಳ್ತಾನ. ಅವನ ಮಾತಿಗೆ ಬೇಸರ ಆಗೋದು ಬೇಡ. ಮಾತನ್ನ ಗಂಭೀರವಾಗಿ ತಗೊಳೋದು ಬೇಡ!" ಸ್ಪಷ್ಟೀಕರಣ ನೀಡಿದ. "ಹೌದು, ಅವನು ಬೇರೆಯವರಿಗೆ ಹೇಳಿದ್ದನ್ನೆ, ಹೇಳಿಕೊಳ್ಳುತ್ತ ತಿರುಗುತ್ತಿರುವಹಂಗಿದೆ." ತೊಪುನ ಕೇಳಿದ "ಬಿಡಣ್ಣ ಹೋಗಲಿ ಅದೇನೋ ಗಾದೆ ಐತಲ್ಲಾ ಮಾಡಿದವನು ಉಣ್ಣತಾನ ಮಣಿಯಂತ ಕಡಬು. ಅವನೆ ಅನುಭವಿಸುತ್ತಾನೆ ಬಿಡು ನಮಗೆ ಯಾಕೆ ಬೇಕು" ಸುಮ್ಮನಾದ. ಇದು ಬಹಳ ವರ್ಷಗಳಿಂದ ಮಂದಿ ರಂಗೋಲಿ ಬಗ್ಗೆ ಮಾತಾಡುತ್ತಿದ್ದರು. ಆದರೆ ತೊಪುಗೆ ವಿಷಯ ಈಗ ಗೊತ್ತಾಗಿತ್ತು ಇದನ್ನ ಅವನ ಮಗ ಹುಲಿಯೂರನೆದರು ಹೇಳಿದ.

* * *

36. ನೀರಲ್ಲೆ ಆಯುಷ ಕಳೆದ ದಿನ್ನಾನಾಯ್ಕ ದಿಬ್ಬಾ ನಾಯ್ಕ

ತಾಂಡದ ಮಂದಿ ಇರೊ ಎಕ್ಕರೆ, ಎರಡೆಕ್ಕರೆ ಜಮೀನನ್ನ ರಂಟಿ ಹೊಡದು ಕುಂಟಿಹೊಡದು, ಹಸನು ಮಾಡಿ, ಬಿತ್ತಿ ಬೆಳೆದು, ಒಕ್ಕಿ, ತೂರಿ ಅಡ್ತಿ ಅಂಗಡಿಗೆ ಒಯ್ದು, ಸಾಲಕ್ಕೆ, ಬಡ್ಡಿಗೆ ಅಂತ ಕೂಲಿ ಮಾಡೋದು ತಪ್ಪದೆ ಬದುಕಿನ ಜೊತೆಗೆ ಸಂಘರ್ಷ ನಡೆಸಿದ್ದರೆ. ದಿಬ್ಬಾ, ದಿನ್ನಾ ಇಡೀ ಜೀವನವನ್ನ ತಾಂಡದ ಕೆರೆ, ಹಳ್ಳ, ಕಕ್ಕರಗೊಳ್ಳದ ಹಳ್ಳ, ಮಂದಾಪುರ ಹಳ್ಳ, ಕರ್ಲಾಳ್ಳಿ, ಸಾರಥಿ, ಸಾಲದಕ್ಕೆ ತುಂಗಭದ್ರ ನದಿಯನ್ನು ಬಿಡಲಿಲ್ಲಾ. ಮುಂಜಾನೆ ಹೊತ್ತಾರೆ ಉಂಡು ಸೊಂಟದ ಮೇಲೆ ಎರಡು ರೊಟ್ಟಿ ಕೈಯಾಗೊಂದು ಚೀಲ ಅಷ್ಟೆ. ಹೋದವರೆ ಹಳ್ಳದಾಗ ನೀರು ಎಷ್ಟಿದೆ. ಕಲ್ಲು, ಮುಳ್ಳು, ಮೊಸಳೆ, ಹಾವು ಯಾವುದು ಲೆಕ್ಕವಿಲ್ಲ ಭಯ ಅನ್ನೋದೆ ಇಲ್ಲ. ಹಳ್ಳದ ದಂಡೆಯಲ್ಲಿ ಆಪಿನ ಬುಡದಲ್ಲಿ, ಹಳ್ಳದ ಹೊರುಗಳಲ್ಲಿ ಇರುವ ಕಲ್ಲೇಡಿ, ನುಣಗ್ಯಾ ಮೀಸೆಗಿರ್ಲಾ, ಹೊಟ್ಟೆಪರಕಿ, ಕಲ್ಲುನೆಕ್ಕೊ ಮೀನು, ಹಾವು ಮೀನು, ಮಟ್ಟು, ಔಲುಮೀನು, ಬಾಳೆ, ಗೋದ್ಲಿ ಮೀನು, ಕೆಮ್ಮಿನು ಎಲ್ಲಾ ಮೀನುಗಳ ಮಾಹಿತಿ, ಅವು ಇರುವ ಜಾಗ ಅವುಗಳನ್ನ ಕೈಯಿಂದ ಹಿಡಿಯುವ ಸೂಕ್ಷ್ಮತೆಯ ಅಧ್ಯಯನ ಮಾಡಿ ಪ್ರತಿದಿನ ತಾವೆ ಹಿಡಿದ ಒಂದೆರಡು ಮೀನುಗಳನ್ನು ಮಧ್ಯಾಹ್ನದ ರೊಟ್ಟಿಯ ಮೇಲೆ ಹಸಿಖಾರದ ಚಟ್ನಿಗೆ ಮೀನು ಸುಟ್ಟು ಕಿವುಚಿ ಉಂಡು ಒಂದು, ಎರಡು, ಒಮ್ಮೊಮ್ಮೆ ನಾಕು ಐದು ಕೆಜಿ ಮೀನು ಹಿಡಿದು, ದಾರಿ ಮೇಲಿನ ಹಳ್ಳಿಯವರು ಕೇಳಿದರೆ ಹತ್ತು, ಹದಿನೈದು ರೂಪಾಯಿಗೆ ಕೆಜಿ ಮಾರಿಸಂಜೆ ನಡೆದು ಮನೆ ತಲಪುತ್ತಿದ್ದರು. ಇಬ್ಬರ ದಿನಚರಿ ಒಂದೆ ಆಗಿತ್ತು, ದಿಬ್ಬನಾಯ್ಕ ಮದುವೆಯಾಗಿ ನಾಕ್ಕೈದು ಮಕ್ಕಳ ತಂದೆ, ಅವನ ಹೆಂಡತಿ ಗೊಪ್ಲಿ ದೊಡ್ಡಮಗ ಧನಕುನ ಕರ್‍ಕೊಂಡು ಹೊಲಮನಿ ಕೆಲಸ ಮಾಡುತ್ತಿದ್ದಳು. ಸಂಜೆ ಮೀನು ಮಾರಿ ಉಳಿದ ಒಂದೆರಡು ಏಡಿ, ಒಂದೆರಡು ಮೀನು ಮನೆಯಲ್ಲಿ ಹುಳಿ ಮಾಡಿದರೆ ಆಯ್ತು ಅಂತ ಪ್ರತಿದಿನ ತರುತ್ತಿದ್ದ.

ಮಾರಿಬಂದ ದುಡ್ಡಿನಲ್ಲಿ ಹೆಂಡತಿಗೊಂದು ಸರಾಯಿ ಪಾಕೇಟು ತಾನೊಂದು ತಗೊಂಡು ಮನೆಯಲ್ಲಿ ಸಾರಿನ ಜೊತೆಗೆ ಮುದ್ದೆನೊ, ರೊಟ್ಟಿ ಜೊತೆ ನೆಂಚ್ಕೊಂಡು ಹಗಲಲ್ಲಾ ನೀರೊಳಗೆ ಈಜಾಡಿ ದಣಿದ ಮೈಗೆ ನಿದ್ದೆ ಬಂದದ್ದು ಗೊತ್ತಾಗುವುದೆ ಮುಂಜಾನೆ, ಹೊತ್ತಾರೆ ಎದ್ದು ಮತ್ತೆ ಅದೇ ಹಾಡು. ದಿನ್ನಂದು ಹೊಲ ಏನು ಇಲ್ಲ ಹೆಂಡತಿ ಕೂಲಿನಾಲಿ ಮಾಡಿ ಮೂವರು ಮಕ್ಕಳನ್ನು ಸಾಕುತ್ತಿದ್ದಳು. ಇಬ್ಬರು ಜೊತೆಗೆ ಮನೆಯಿಂದ ಹೊರಡುತ್ತಿದ್ದರು. ಇಬ್ಬರಿಗೂ ಒಂದೇ ತೆರನಾದ ಚಟ, ಎಲೆ ಅಡಿಕೆ, ಅವಗವಾಗ, ಒಂದು ಚುಟ್ಟ ಸೇದುವುದು ಒಟ್ಟಾರೆ ಜೀವನದಲ್ಲಿ ಮಹದಾಸೆ ಏನು ಇರಲಿಲ್ಲಾ. ಅವನ ಪಾಲಿಗೆ ಅವನು ಹಿಡಿಯುತ್ತಿದ್ದ ಇವನ ಪಾಲಿಗೆ ಇವನು. ಇವನು ಈ ದಂಡೆಯಲ್ಲಿದ್ದರೆ ಅವನು ಮತ್ತೊಂದು ದಂಡೆ. ಮೀನು ಹಿಡಿಯುತ್ತ ಹೋಗುತ್ತಿದ್ದರು. ಒಮ್ಮೆ ದಿನ್ನಾನಾಯ್ಕ ಏಡಿ ನಡದಾಡಿರೊ ಒಂದು ಬಿಲ ನೋಡಿದ. ಕಲ್ಲೇಡಿ ಇರಬಹುದು ಅಂತ ಕೈಹಾಕಿದ. ಏಡಿ ಹಿಡಿಯುವುದು ಬಹಳ ಕಷ್ಟದ ಕೆಲಸ. ಹುಲಿಯೂರನು ಸಾಲಿ ಬಿಟ್ಟ ಮೇಲೆ ಅವನ ಗೆಳೆಯರಾದ ಸಾಂಕಳಿ, ಕಟೇರರ ಜೊತೆಗೆ ಜಗನನ ಕರ್ಕೊಂಡು ಸಣ್ಣ ಹಳ್ಳ, ದೊಡ್ಡ ಹಳ್ಳ, ಒಂದೊಂದು ಸಲ ಆಪಿನ ಹಳ್ಳಕ್ಕೆ ಹೋಗಿದ್ದ. ಏಡಿ ಅಂತ ಕೈ ಹಾಕಿದರೆ ದೊಡ್ಡದಿತ್ತೆಂದರೆ ಅದರ ಕಾಲಲ್ಲಿರುವ ಇಕ್ಕಳದಿಂದ ಬಿಗಿಯಾಗಿ ಕಚ್ಚುತಿತ್ತು. "ಕಡದು ಬಿಡ್ತಲೆ, ಯವ್ವ ಬೆರಳು ಹೊತು. ಸತ್ನೋ ಯಾರಾರ ಬರ್ರಿ" ಅಂತ ಕೂಗಿದ ಹುಲಿಯೂರ. ಏಡಿ ಗಟ್ಟಿಯಾಗಿ ಅವನ ಬೆರಳನ್ನ ಹಿಡಿದಿತ್ತು. ಸಾಂಕಳಿ ಕಟೇರ ಆ ದಂಡಿಯಿಂದ ಹಳದಾಗ ಅಡ್ಡಬಿದ್ದು ಈಜಿ ಬಂದವರೆ ಅವನ್ನ ಹಿಡದು ಎಳೆದರು. ಅದು ಅವನ ಬಿಟ್ಟಿರಲಿಲ್ಲಾ, ಇವನು ಅದನ್ನ ಬಿಟ್ಟಿರಲಿಲ್ಲಾ. ಹೊರಗ ಕೈ ತಗದಿದ್ದೆ ಮೆಲ್ಲಗೆ ಏಡಿಯಿಂದ ಅವನ ಕೈ ಬಿಡಿಸಿದರು. ನಂತರ ಅದರ ಕಾಲುಗಳನ್ನ ಮುರಿದು ಜಗನನ ಚೀಲದಲ್ಲಿ ಹಾಕಿದರು. "ಲೇ ಹುಷಾರಲೇ ಮೆಲ್ಲಕ ಮದಲು ಅದರ ಕಾಲುಗಳನ್ನು ಮಡಚು ನಂತರ ಹಿಡಿ, ದೊಡ್ಡ ಕಾಲು ಮುಂದೈತಿ ಅಂತ ತಿಳಿ ಮೆಲ್ಲಗೆ ಕೈ ಸರಿಸಿ ಅದರ ಮತ್ತೊಂದು ಕಡೆ ಕೈಹಾಕು ಆವಾಗ ಹಿಡಿಯೋದಕ್ಕೆ ಸುಲಭ ಆಗುತ್ತೆ" ಕಟೇರ ಹೇಳಿದ. ಹುಲಿಯೂರ ಮೆಟ್ರಿಕ್ ಮುಗಿಯೊ ತನಕನೂ ಕೆರೆಯೊಳಗೆ ಈಜುವುದು, ಏಡಿ ಹಿಡಿಯುವುದು ಮಾಡಿದ್ದ. ಆ ಕಡೆ ದಂಡೆಯೊಳಗೆ ಹಿಂಗೆ ಹೊರೊಳಗೆ ಕೈ ಹಾಕಿದ ಸಾಂಕಳಿ ಮೆತ್ತಂದು ಕೈಗೆ ಬಡಿತು. ಬೋನಲ್ಲಿ ಒಂದು ಹಾವು ಮೀನಿರಬೇಕು ಇಲ್ಲಾಂದ್ರ ಮಟ್ಟಿರಬೇಕು ಅಂದವನೆ "ಲೇ ಹುಡುಗರ, ಇದ್ರಾಗ ಮಟೈತೋ ಇಲ್ಲ ಹಾವ ಮೀನು ಗಡಾನ ಬರ್ರಿ ಆ ಕಡಿಗ ಎಲ್ಲಾರು ಹೋರಗಳು ಅದಾವೇನು ಬಂದ ನೋಡ್ರಿ" ಅಂತ ಕೂಗಿದ. ನೀರೊಳಗೆ ರೊಂಯ್ಯಂತ ಈಜಾಡಿದ ಇಬ್ಬರು ಅವನ ಕಡೆಗೆ ಹೋದರು. ಅವನು "ಹಾಂ ತಲಿ ಸಿಕ್ಕೈತ್ರಲೆ, ದೊಡ್ಡದೆ ಐತೆ ಗಡಾನ ಬರ್ರಿ ಹೊರಗ ಬಂದು ಬಿಡಿಸಿಕೊಂಡಿತ್ತು" ಕೂಗಿದ. "ನಿಧಾನಕ್ಕ ಎಳ್ಕೊಂಡ ಬಾ, ಬಿಡಬೇಡ" ಧೈರ್ಯ ಕೊಟ್ಟರು. "ಸಾಂಕಳಣ್ಣ, ಒಂದ ಕೆಜಿದು ಇರಬಹುದ?"

"ದಂಡಿ ಮೇಲಿದ್ದ ಜಗನ ಕೇಳಿದ." ಇರ್ಲಕಿಲ್ಲ, ಒಂದ ಮುಕ್ಕಾಲ ಕೇಜಿ ಇರಬೇಕು ಕಣಲೆ ಅಂದ. "ಆಯ್ತು ಬಿಡು ನಿಮ್ಮ ಮಿನಿಯಾಗ ಸಾರು ಆದಂಗೇಯ ನಮ್ಮ ಹುಲಿಯೂರಿನಗಾರು ಸಿಗಬಾರದಿತ್ತ. ನಮ್ಮವ್ವ ಮೀನ ಸಾರು ಚೆಲೊ ಮಾಡ್ತಾಳ" ಕನಸು ಕಾಣ ತೊಡಗಿದ ಜಗನ. "ಆಯ್ತು ಬಿಡು ನಮ್ಮ ಮನಿಯಾಗ ಇರೋದಾದರೂ ಎಷ್ಟಮಂದಿ ನಮಗೇನು ಸಾಕು. ಲೇ ಜಗನ ನಿಮ್ಮನಿಗ ಒಂದು ಕೇಜಿ ಎರಡ ಕೇಜಿ ಎಲ್ಲಿ ಆಗತೈತಿ ನಿಮಗೇನಿಲ್ಲಾಂದ್ರು ಒಂದ ಐದ ಕೆ.ಜಿ. ಬೇಕು" ಅಂದುಕೊಳ್ಳುತ್ತಲೆ ಹೊರಗ ಎಳ್ಕೊಂಡ ಬಂದು ನೋಡ್ತಾನ. "ಯಪ್ಪಾ ಕೆರೆಗೊಡ್ಡು ಹಾವಲೆ" ಅಂತ ಹುಲಿಯೂರ ಜಿಗದು ಆ ದಂಡಿಗ ಓಡಿದ. ಕೆರೆಗೊಡ್ಡ ಮದಲೆ ಹೆದರು ಪುಕ್ಕಲು ಹಾವು ಸಾಂಕಳಿ ಹುಲಿಯೂರನ ಮಾತು ಕೇಳಿ "ಸತ್ನೆಯಪ್ಪ" ಅಂತ ಬಿಟ್ಟು ಮೇಲೋಡಿದ. ಅವನ ಕೈಯಿಂದ ಬಿಡಿಸಿಕೊಂಡ ಹಾವು ನೀರೊಳಗೆ ಹರಿದು ಮಾಯ ಆಗಿತ್ತು. ದಿನ್ನಾನ ಕೈ ಹೆಬ್ಬೆರಳನ್ನು ಬಿರಸಾಗೆ ಹಿಡಿದಿತ್ತು ಕಲ್ಲೇಡಿ ಇವನು ಬೆರಳು ಬಿಡಿಸಿಕೊಳ್ಳೋದಕ್ಕೆ ಒದ್ದಾಡುತ್ತಿದ್ದರೆ ಏಡಿ ತನ್ನ ಶತ್ರುವನ್ನ ಬಿಲದಿಂದ ಓಡಿಸುವ ಹುನ್ನಾರ ನಡೆಸಿತ್ತು. ಜೋರಾಗಿ ಕೂಗಾಕು ಆಗಂಗಿಲ್ಲ ಸಹಿಸಿಕೊಳ್ಳಕು ಆಗದೆ ವಿಲಿವಿಲಿ ಒದ್ದಾಡುತ್ತಿದ್ದ ದಿನ್ನಾನಾಯ್ಕ. ಸಂಕಟ ನೋವು ತಡಿಯಾಕ ಆಗದೆ "ಲೇ ದಿಬ್ಬ ಸತ್ನೊ ಗಡಾನ ಬಾ. ಇವ್ನವನ ಕಲ್ಲೇಡಿ ಹೆಬ್ಬರಳನ್ನ ಪೂರಾ ಇಕ್ಕಳದಾಗ ಹಾಕೊಂಡೈತೆ" ಕೂಗಿದ. ಅವನ ಪಾಡಿಗೆ ಅವನು ಮೀನು ಹುಡುಕುತ್ತಿದ್ದ ದಿಬ್ಬಗೆ, ದಿನ್ನನಾಯ್ಕನ ಧ್ವನಿ ಕೇಳಿಸಲಿಲ್ಲಾ. "ಲೇ ದಿಬ್ಬಾನಾಯ್ಕ ಗಡಾನ ಬಾರ್ಲೆ ಸತ್ನೆಯವ್ವ ಬೆರಳು ತುಂಡಾತು ಅಂತ ಕಾಣತೈತೆ" ಜೋರಾಗಿ ವದರಿದಾಗ ದಿಬ್ಬಗ ಕೇಳಿಸಿ ಅರಬಾಡಿಸಿ ಓಡಿಬಂದ. "ಏನಾತು ಮಾವ," ಗಾಬರಿಯಿಂದ ಕೇಳಿದ. ನೋವಿನಿಂದ ದಿನ್ನಾನಾಯ್ಕ ಮೂರ್ಛೆಹೋಗುವುದರಲ್ಲಿದ್ದ. ಜುಕ್ಕಜುಲುಮಿಯಿಂದ ಕೈಹೊರಗ ಎಳೆಯ ತೊಡಗಿದ ದಿಬ್ಬನಾಯ್ಕ. ದಿನ್ನನ ಹೆಬ್ಬೆರಳು ಹಿಡಿದುಕೊಂಡಿದ್ದ ಕಲ್ಲೇಡಿ ಬಹಳ ದೊಡ್ಡದೆ ಇತ್ತು. ಕೈ ಎಲ್ಲಾ ರಾಮ ರಕ್ತವಾಗಿತ್ತು. ಇನ್ನೇನು ಬಿಡಬೇಕು ಅನ್ನೋದ್ರಾಗ "ಬಿಡ ಬೇಡ ಅದನ್ನ ಬೆರಳು ತುಂಡ ಮಾಡೈತೆ" ಅಂತ ಹೇಳಿ ದಡದ ಮೇಲೆ ಬಿದ್ದ ಮೂರ್ಛೆ ಹೋಗಿದ್ದ. ದಿಬ್ಬ ಎರಡು ಕೈಯಿಂದ ಸೂಕ್ಷ್ಮವಾಗಿ ದೊಡ್ಡ ಕಾಲುಗಳನ್ನು ಮಡಚಿ ಅದರ ಇಕ್ಕಳದಲ್ಲಿದ್ದ ದಿನ್ನಾನಾಯ್ಕನ ಹೆಬ್ಬೆರಳು ಬಿಡಸಾಕ ನೋಡಿದ. ಬೆರಳು ಅದರ ಹೋರಿನೊಳಗೆ ಉಳಿದುಕೊಂಡಿತ್ತು. ಅವನ ಪಂಚೆಯಿಂದ ಒಂದಿಷ್ಟು ಭಾಗ ಬಟ್ಟೆಯನ್ನು ಹರಿದು ರಕ್ತ ಸುರಿಯುತ್ತಿದ್ದ ಭಾಗಕ್ಕೆ ಅವನಿಗೆ ಗೊತ್ತಿರೊ ಸೊಪ್ಪು ತಂದು ಕಲ್ಲಲ್ಲಿ ಅರೆದು ಬಿಗಿಯಾಗಿ ಅದುಮಿ ಕಟ್ಟಿದ.

ದಿನ್ನಾ ಒಂದು ವಾರ ಮೀನು ಹಿಡಿಯಲಿಕ್ಕೆ ಬರಲಿಲ್ಲಾ. ದಿಬ್ಬ ಒಬ್ಬನೆ ಹೋಗಿ ಮಾಮೂಲಿನಂತೆ ಸಿಕ್ಕಷ್ಟು ಹಿಡಿದುಕೊಂಡು ಬರುತ್ತಿದ್ದ. ಬೆರಳಿನ ಗಾಯ ಮಾಯುತ್ತಿದ್ದಂತೆ ದಿನ್ನಾ ನಾಯ್ಕ ದಿಬ್ಬನ ಜೊತೆಗೆ ಸೇರಿಕೊಂಡ.

ಒಂದು ದಸರಾರಜೆ ಇಲ್ಲ, ಒಂದು ಬೇಸಿಗೆರಜೆ, ಸರ್ಕಾರಿ ನೌಕರರಿಗೆ ಇರುವಂತೆ ಭಾನುವಾರ, ಎರಡನೆಯ ಶನಿವಾರ, ಮೂರನೇ ಶನಿವಾರ ರಜೆಗಳಿಲ್ಲ. ಹಬ್ಬಗಳ ಹಾಲಿಡೆ ಇಲ್ಲ. ಮೀನು ಸಿಕ್ಕರೆ ಹಬ್ಬ, ಇಲ್ಲದಿದ್ದರೆ ಬಂದ ದಾರಿಗೆ ಸುಂಕವಿಲ್ಲ ಎಂಬಂತೆ ಮನೆಗೆ ಬರುತ್ತಿದ್ದರು. ಮನೆಯಲ್ಲಿದ್ದರೆ ಮನೆಯಲ್ಲಿದಿದ್ದನ್ನ ಉಂಡು ಮಲಗಿ ಬಿಡುತ್ತಿದ್ದರು. ಹಬ್ಬಗಳಂದು ಯಾರು ಮೀನು, ಏಡಿ ತಿನ್ನುತ್ತಿರಲಿಲ್ಲಾ ಆದರೂ ಮುಸ್ಲಿಂ ಜನ, ಕ್ರಿಶ್ಚಿಯನ್ನರು ತಿನ್ನುತ್ತಿದ್ದರಿಂದ ಅವರ ಸಲುವಾಗಿಯಾದರು ಹಿಡಿಯಲು ಹೋಗುತ್ತಿದ್ದರು. ಬಹಳ ಅಂದರೆ ದೀಪಾವಳಿ ಅವರ ಪೂರ್ವಿಕರಿಗೆ ಎಡೆ ಕೊಡುತ್ತಿದ್ದರಿಂದ ದೀಪಾವಳಿಯ ಮೊದಲು ಎರಡುದಿನ ಮನೆಯಲ್ಲಿ ಉಳಿಯುತ್ತಿದ್ದರು. ಅಮವಾಸ್ಯೆಯ ದಿನ ಹೊರಗೆ ಕಾಲಿಡಬಾರದು. ಒಂದು ಅವತ್ತು ಏನಾದರು ಬೇಟೆ ಹುಸಿ ಹೋಯಿತು ಅಂದರೆ ವರ್ಷಏಡೀ ಬೇಟೆ ಸಿಗುವುದಿಲ್ಲ ಎಂಬ ನಂಬಿಕೆಯಿತ್ತು. ಹಾಗಾಗಿ ಮುಂಜಾನೆ ಕುರಿಕಡಿದ ಜಾಗಕ್ಕೆ ಹೋಗಿ ತಮ್ಮ ಶಾಸ್ತ್ರದಂತೆ ಬೆಳಗಾ ಮುಂಜಾನೆ ರಕ್ತದ ಮಕ ನೋಡಿ, ಅದರಲ್ಲಿ ಕಿರುಬೆರಳು ಅದ್ದಿ ಶಾಸ್ತ್ರವನ್ನು ಮುಗಿಸುತ್ತಿದ್ದರು. ಹೆಚ್ಚೆಂದರೆ ಯುಗಾದಿ ಹಬ್ಬದಂದು, ಉಳಿದ ಮೂರುನೂರಾ ಐವತಾರು ದಿನಾನು ನೀರಲ್ಲೆ ಇರುತ್ತಿದ್ದರು. ಕೈಯುಡಿಕೆಯಿಂದ ಮೀನು ಹಿಡಿಯವುದು ಒಂದೆ ಅವರಿಗೆ ಗೊತ್ತಿರುವ ಕೌಶಲ್ಯ ಅದರಿಂದಲೆ ಅವರ ಅಡ್ಡ ಖರ್ಚು ಕಳೆಯುತ್ತಿತ್ತು. ಮನೆಯಲ್ಲೂ ಅಲ್ಪಸ್ವಲ್ಪ ದುಡ್ಡನ್ನು ಕೊಡುತ್ತಿದ್ದರು. ಅವರ ಮನೆಯಲ್ಲಿ ಪ್ರತಿದಿನ ಮೀನು, ಏಡಿಯ ಸಾರು ತಪ್ಪಿರಲಿಲ್ಲಾ. ಹಂಗಾಗಿ ಮನೆಯಲ್ಲಿ ಯಾರು ಅವರ ಕೆಲಸದ ಬಗ್ಗೆ ಚಕಾರ ಎತ್ತಿರಲಿಲ್ಲ. ಹಾಗಾಗಿ ಅವರು ಪ್ರತಿದಿನ ಅದನ್ನೆ ಉದ್ಯೋಗ ಮಾಡಿಕೊಂಡಿದ್ದರು. ಆದರೆ ಯಾವತ್ತು ಕೂಡ ಜ್ವರ ಬಂತು, ನೆಗಡಿಯಾಯಿತು ಅನ್ನೊ ಪ್ರಮೇಯಗಳೆ ಇಲ್ಲ ದಿನ್ನಾನಾಯ್ಕ ಮತ್ತು ದಿಬ್ಬನಾಯ್ಕರ ಜೀವನದಲ್ಲಿ. ಮುಂಜಾನೆ ಹೊತ್ತಾರೆ ಮನೆ ಬಿಟ್ಟವರು ಯಾರ ಮಾತುಗಳನ್ನ ಆಡುವುದು ಮಂದಿಯಂತೆ ತೀಟಿಪೊಟಿ, ತಾರತಿಗಡಿ, ಅವ್ಯವಹಾರ, ಮತ್ತೊಬ್ಬರನ್ನ ಹೀಯಾಳಿಸಿ ಮಾತಾಡುವುದು, ಮತ್ತೊಬ್ಬರ ಹತ್ತಿರ ಹೋಗಿ ಬೇರೆಯವರ ಬಗ್ಗೆ ಮಾತಾಡುವುದು ಯಾವುದನ್ನು ಕಲಿಯಲೆ ಇಲ್ಲ. ಮಂದಿ ಅವರ ಬಗ್ಗೆ ನೂರಾರು ಮಾತಾಡಿಕೊಂಡರು ಯಾವತ್ತು ತಲೆ ಕೆಡಿಸಿಕೊಳ್ಳದೆ ಕೆಲಸದ ಜೊತೆಗೆ ಬೆರೆತು ಕಾಯಕ ಯೋಗಿಗಳಂತೆ ಬದುಕಿದ ದಿನ್ನಾ ನಾಯ್ಕ ನಂತವರು ಭೂಮಿ ತುಂಬ ಇದ್ದರೆ ಗಾಳಿಸುದ್ದಿಗಳು ಕಡಿಮೆಯಾಗಿ ದೇಶಗಳು ಅಭಿವೃದ್ಧಿ ಹೊಂದಿಯಾವು. ಬರಿ ಮೈಗಳ್ಳರು ಕೆಲಸಕ್ಕೆ ಕರಿಬೇಡ ಊಟಕ್ಕೆ ಮರಿಬೇಡ ಎನ್ನುವ ಮನೋವೃತ್ತಿಯನ್ನು ಹೊಂದಿರುವ ಜನರ ನಡುವೆ ಇಂತಹವರು ಬದುಕಿದ್ದರು ಎಂಬುದು ಹೆಮ್ಮೆಯ ಸಂಗತಿ.

* * *

37. ಕೈಬೆರಳು ಮುರಿದು ಸಂಪಾದಿಸಿದ ದಲ್ಲಾಳಿ ದಸಮನಾಯ್ಕ

ಜಗತ್ತಿನಲ್ಲಿ ಕೆಲವು ವ್ಯಾಪಾರಗಳು ನೇರವಾಗಿ ಆಗುತ್ತವೆ. ಕೆಲವು ದೊಡ್ಡ ದೊಡ್ಡ ಹೊಟೇಲುಗಳಲ್ಲಿ ಕೆಲವು ಮಧ್ಯವರ್ತಿಗಳ ಮುಖೇನ ನಡೆಯುತ್ತಿವೆ. 2000ನೇ ಇಸ್ವಿಯ ನಂತರವಂತು ಈ ಭೂಮಿಯ ಬೆಲೆ ಅದರಲ್ಲೂ ಮುಖ್ಯವಾಗಿ ಪಟ್ಟಣಗಳಲ್ಲಿ ಮನೆ ಕಟ್ಟಲು ಪಟ್ಟಣಗಳ ಪಕ್ಕದಲ್ಲಿದ್ದ ರೈತರು ತಮ್ಮ ಜಮೀನಿನ ಬೆಲೆ ನೂರುಪಟ್ಟು, ಸಾವಿರ ಪಟ್ಟು ಹೆಚ್ಚಾದಾಗ ಅವರ ಬದುಕಿನ ರೀತಿಯೆ ಬದಲಾಗಿತ್ತು. ಇನ್ನು ಕೆಲವು ವ್ಯವಹಾರಗಳು ಅವರವರೆ ಮಾಡಿಕೊಳ್ಳುತ್ತಾರೆ. ದಿನ್ನಾನಾಯ್ಕನ ಹಿರಿಯ ಮಗ ದಸಮನಾಯ್ಕ ಅಪ್ಪನಂತೆ ಮೀನು ಹಿಡಿಯಲು ಹೋಗದೆ ಅವಾಗ-ಅವಾಗ ಹೊಲದ ಕೆಲಸ ಮಾಡುತ್ತಿದ್ದ. ಉಳಿದ ದಿನಗಳಲ್ಲಿ ರಂಗವ್ವನ ಅಂಗಡಿ ಮುಂದೆ ಪುಂಡಲೀಕನ ಅಂಗಡಿ ಕಟ್ಟೆ ಮೇಲೆ, ಚೊಂಚಕಲಮನಾಯ್ಕನ ಅಂಗಡಿ ಹೀಗೆ ಊರೊಳಗೆ ಇರುವ ಎಲ್ಲಾ ಚಹಾದ ಅಂಗಡಿ ಕಟ್ಟೆಗೆ ಕುಂತು ಬಂದು ಹೋಗುವವರ ಜೊತೆಗೆ ಹರಟೆ ಹೊಡೆಯುತ್ತ ಹೆಂಡತಿ ದುಡಿದು ತಂದಿದ್ದರಲ್ಲೆ ಉಂಡು ಉಟ್ಟು ಬದುಕಿದ್ದ. ಆದರೆ ಕೈ ಖರ್ಚಿಗೆ ಹಣ ಬೇಕಲ್ಲವೆ, ಕುಡಿಯುವ ಚಟಕ್ಕೆ ಬೇರೆ ದಾಸನಾಗಿದ್ದ. ಒಂದೆರಡು ಸಾರಿ ಎಲೆ ಅಡಿಕೆ, ಒಂದೆರಡು ಸಾರಿ ಬೀಡಿ, ಮೂರು ಸಲ ಚಹ. ಇವಿಷ್ಟು ಅವನ ದಿನನಿತ್ಯದ ಸಣ್ಣ ಸಣ್ಣ ಬೇಕು ಬೇಡಗಳು. ಅದಕ್ಕೆ ಅವನು ಒಂದು ಸಣ್ಣ ಕೈಚಳಕದ ಕೆಲಸ ಮಾಡುತ್ತಿದ್ದ. ಯಾರೆ ಪರ ಊರಿಂದ ಎತ್ತು ಖರೀದಿಗೆ, ಎಮ್ಮೆ ಖರೀದಿಗೆ, ಎಮ್ಮೆ ಮಣಕ, ಕೋಣ ಖರೀದಿಗೆ ಬಂದರೆ ಮೊದಲು ಹುಡುಕಿಕೊಂಡು ಬರುತ್ತಿದ್ದದ್ದೆ ದಸಮಾ ನಾಯ್ಕನನ್ನ. ಅವನು ಇರುವ ಜಾಗ ಗೊತ್ತಿಲ್ಲದವರು ಯಾರನ್ನಾದರು ಕೇಳಿದರೆ ಅವರು ಸೀದಾ ಕರೆದುಕೊಂಡು ಬಂದು ಅಂಗಡಿ ಮುಂದೆ ಬಿಟ್ಟು ಹೋಗುತ್ತಿದ್ದರು. ಕಕ್ಕರಗೊಳ್ಳದ ಕರಿಂಸಾಬಿ ದಾವಣಗೇರಿ ಜಲಾನಿ, ಹರಿಹರದ ರಹಮತುಲ್ಲಾ ಮುಂತಾದವರು

ದನಗಳ ಖರೀದಿಗೆ ಇವನೆ ನಂಬಿಕಸ್ಥ ಎಂದು ಅವನ ಸಹಾಯ ಕೇಳುತ್ತಿದ್ದರು. ಅದನ್ನೆ ಕಾಯುತ್ತಿದ್ದವನಂತೆ ದಸಮನಾಯ್ಕ "ಜಲಾನಿಯಾರದ ಜಾನುವಾರು" ಕೇಳಿದ. "ಅದೆ ದಸಮಾದುಕೆ ಭಾಯಿ ಆ ಮೂಲೆಮನೆ ಲಚ್ಮ ಇದ್ದರಲ್ಲ ಅವನದು ಎತ್ತುಗಳಿಗೆ ಅದಾವೆ ಅವನ್ನ ಒಂದು ರೇಟು ಮಾಡಿದ್ರೆ ಅಚ್ಛಾ ಆಗುತ್ತೆ." ವಿವರಣೆ ನೀಡಿದ್ದ ಜಲಾನಿ "ಆಯ್ತು ನಿಂದೇನು, ಸರಿಯಾಗಿ ಹೇಳು" ಕೇಳಿದ. ಅವನ ಹೆಗಲ ಮೇಲಿನ ಟವೇಲು ತಗದು ಅದರ ಅಡಿಯಲ್ಲಿ ಕೈಹಾಕಿ ಅವನ ದರವನ್ನು ಸೂಚಿಸಿದ. "ಎಯ್, ಇಷ್ಟಕ್ಕೆ ಕೊಡುವುದು ಅನುಮಾನ, ಮತ್ತೊಂದು ರೇಟು ಹೇಳು" ಅಂದ. ಇವನು ಇದರಲ್ಲಿದ್ದಾನೆ ಅನ್ನೋದನ್ನ ಖಾತ್ರಿಪಡಿಸಿಕೊಂಡ ಇವನಿಗೆ ಕೊಡಿಸುವ ಭರವಸೆ ಕೊಟ್ಟು ಅವನಿಗೆ ಮಾರಿಸುವ ಭರವಸೆ ಕೊಡುತ್ತಿದ್ದ. "ಆಯ್ತು ನಡಿ ನೋಡುವ ನಿನ್ನ ಹಣೆಬರಹ ಹೆಂಗ್ಯೆತೆ, ಅವನ ಹಣಿಬರಹ ಹೆಂಗ್ಯೆತೆ ನೋಡೆ ಬಿಡೋಣ" ಅಂದವನೆ ಲಚ್ಮನ ಮನೆ ಹತ್ರ ಎತ್ತುಗಳಿಗೆ ಮೇವು ಹಾಕಿ ಬೀಡಿ ಸೇದಾಕಂತ ಹಲ್ಲಲ್ಲಿ ಕಚ್ಚಿ ಕಡ್ಡಿ ಗೀರುತ್ತಿದ್ದ. "ಏನೊ ಎತ್ತುಕೊಡ್ತಿನಿ ಅಂದಿಯಂತೆ" ಕೇಳಿದ ದಸಮಾ. "ಹೂಂನಣ್ಣ ಏನೊ ಮನಿಯೊಳಗೆ ತೊಂದರೆ ಅದಕ್ಕೆ ಮಾರಿಕಡಿಗಾಗನು ಅಂತ ಅಂದ್ಕೊಂಡೀನಿ. ಸರಿಯಾದ ರೇಟು ಬರಬೇಕಲ್ಲ" ಲಚ್ಮ ತನ್ನ ಪದಾರ್ಥವನ್ನು ಬೇಕಾಬಿಟ್ಟಿಗೆ ಮಾರುವುದಿಲ್ಲ ಅನ್ನೋದನ್ನ ದೃಢಪಡಿಸಿದ. "ಆಯ್ತು ಬಿಡಲೆ ಯಾರು ಪುಗಸಟ್ಟೆ ಕೇಳಂಗಿಲ್ಲ. ಮಾರ್ಕೆಟಲ್ಲಿ ಏನು ನಡಿತ್ಯೆತೆ ಅದನ್ನ ಕೊಟ್ಟೆಕೊಡ್ತಾರ ನೀಯಾಕಿಂಗ ಆಡಿಯಾ" ಅವನ ತಲೆಯೊಳಗೆ ಭರವಸೆ ಬಿತ್ತಿದ. "ಪುಕ್ಕಟೆ ಕೇಳಲ್ಲ ಬಿಡು ಆದ್ರು ಮಾರ್ಕೆಟಲ್ಲಿ ನನ್ನ ಎತ್ತುಗಳಿಗೆ ಒಂದು ರೇಟ್ ಐತೆ ಅದನ್ನ ಬಿಟ್ಟು ಕೊಡಾಕಿಲ್ಲ" ಅಂದ ಲಚ್ಮ. ದಶಮನಾಯ್ಕನಿಗೆ ಅದೇ ಬೇಕಾಗಿತ್ತು. "ಸರಿ ಅಳಿಯ ನಿನ್ನ ರೇಟ್ ಆದ್ರು ಹೇಳೋ ಮರಾಯ ನೋಡನ ನಿ ಎಲ್ಲಿ ಅದೀಯ" ಕೇಳಿದ ದಶಮ. ಲಚ್ಮನಿಗೆ ಬೆರಳು ಮುರಿಯುವ ವ್ಯವಹಾರ ತಿಳಿಯದ್ದರಿಂದ ಅವನು "ಬಾ ಇಲ್ಲಿ ಆಟು" ಅಂತ ಸ್ವಲ್ಪ ದೂರ ಕರೆದುಕೊಂಡು ಹೋದ. "ಹೇಳಲೆ ಅವನೇನು ಕೇಳಿಸಿಕೊಳ್ಳೋದಿಲ್ಲ" ದಶಮ ತಡದ. "ಹದಿನೈದ ಸಾವಿರಕ್ಕೆ ಪೈಸಾ ಕಡಮಿ ಇಲ್ಲ ನೋಡಮಾವ, ಹದಿನೈದರ ಮೇಲೆ ನೀ ಎಷ್ಟಕ್ಕಾರ ಹೇಳು ಹೋಗು ಅದು ನಿಂದನೇ ಏನು ಆಶಿಪಡಂಗಿಲ್ಲ, ಮುಗಿಸು ನಡಿ" ಕಡಾಖಂಡಿತವಾಗಿ ಹೇಳಿದ ಲಚ್ಮ "ಅಲ್ಲಲೆ ಆ ಪರಿ ವ್ಯಾಪಾರ ಹೇಳಿದ್ರ, ಹೆಂಗ ಕುಂತೀತು, ಹೋಗಲಿ ಮತ್ತೊಂದು ರೇಟ್ ಹೇಳು. ಹದಿನೈದಕ್ಕೆ ಮಾಡೋಣ, ಆಕಸ್ಮಾತ್ ಕುದರಲಿಲ್ಲಾಂದ್ರೆ" ತನ್ನ ಎಂದಿನ ಧಾಟಿಯಲ್ಲಿ ಹೇಳಿದ. "ನನ್ನದು ಕೊನೆ ಹದಿನಾಕುವರಿ ಮುಂದ ಅವನಿಗೆ ಬಿಟ್ಟದ್ದು ನಡಿ" ಅಂದು ಟವೇಲು ಕೊಡವಿ ಹೆಗಲಿಗೇರಿಸಿದ. "ಆಯ್ತು ಬಾ ನೋಡೋಣ ಅವನೆಲ್ಲಿಗದಾನು ಕೇಳ್ತೀನಿ" ಅವನ ಮುಂದೆ ಸುಳ್ಳೆ ನಾಟಕ ಮಾಡಿದ. ಅವನ ರೇಟು ದಶಮನಿಗೆ ಗೊತ್ತಿತ್ತು. ಐನೂರು ರೂಪಾಯಿ ಲಾಭಕ್ಕೆ ಇವನು ಬಡಿದಾಡುತ್ತಿದ್ದ. ಇವನು ನಿಕ್ಕಿ ಹದಿನೈದು ಅಂದಾಗ,

ಅವನು ಹದಿನಾರು ಕೊನೆ ದರ ಹೇಳಿದ್ದಾನೆ ಹಂಗ ಹಿಂಗ ಮಾಡಿ ಹದಿನೈದುವರೆಗೆ ಮುಗಿಸಿದರೆ ಐದು ನೂರು ಈ ಕಡೆ ರೊಖಡ ಸಿಗುತ್ತೆ, ಜಲಾನಿ ಹೆಂಗೂ ನೂರಿನ್ನೂರು ಕಮಿಷನ್ ಕೊಡ್ತಾನೆ. ಲಚ್ಮ ಐವತ್ತು ರೂಪಾಯಿ ಕೊಟ್ಟ ಎರಡದಿನ ಸರಾಯಿ ಕುಡಿಸುತ್ತಾನೆ. ಎಲ್ಲಾ ಸರಿಯಾಗಿ ತಾಳೆ ಹಾಕಿ "ದೇಕೊ ಜಲಾನಿ ಅವನು ನೀ ಹೇಳಿದ ರೇಟಿಗೆ ಇಲ್ಲ. ಆದರೆ ವ್ಯವಹಾರ ಕುದರಬೇಕು ಅಂದ್ರೆ ನೀನು ಅಲ್ಪಸ್ವಲ್ಪ ಮೇಲೆ ಬರಬೇಕಾಗುತ್ತೆ ಅವನು ಆಟು ಇಳಿಯಬೇಕು." ಇವನ ಮಾತುಗಳು ಜಲಾನಿಗೆ ಅರ್ಥ ಆದವು ಬಕರ ಬಂದಿದ್ದೆ ಹಲಾಲ್ ಮಾಡೋದು ಒಂದೇ ಬಾಕಿ ಅಂದವನೆ "ಅರೆ ದಶಮಾದುಕೆ ಭಾಯಿ ನೀನು ಹೇಳಿದ್ದಕ್ಕೆ ಇಲ್ಲ ಅಂದಿನಾ ಬೋಲ್. ಖುಷಿ ಖುಷಿ ವ್ಯಾಪಾರ ಹೊನಾ ಭಾಯ್. ಬೋಲೊ ಏನು ಅದಂತ ನಾವು ಯೋಚನೆ ಮಾಡ್ತಾರೆ." ಅವನು ಕೈ ಮುಚ್ಚಿ ಹದಿನೇಳು ಅಂದ. ಜಲಾನಿ "ನಕ್ಕೊ ಆಗಲ್ಲ ಬೊಲೋ ಎ ರೇಟ್ ಕಹಾಂ ಹೈ ಬೈ ಅಬ್ಬಿ, ಮಾರ್ಕೆಟ್‌ನಾಗೆ ಯಾರು ಪೂಚ್ತಾ ನಹಿ, ನಹಿ ಹೋಗ" ನಾಟಕ ಮಾಡಿದ. ಈಗ ಒಂದೆ ಸಲ ಹೂಂ ಅಂದ್ರೆ ಲಚ್ಮನಿಗೆ ಅನುಮಾನ ಬರುತ್ತೆ ಅಂತ "ನಕ್ಕೊ ಕತೊ ನಕ್ಕೊ" ನಕರಾತ್ಮಕವಾಗಿಯೇ ಮಾತಾಡಿದ ಲಚ್ಮಗೆ ಕರ್‍ಕೊಂಡ ಹೋಗಿ "ಏನೊ ಅವನು ಹಿಂಗಂತವ್ನೆ ಲೇ ಹುಡುಗ ನಿನಗ ಕೊಡೊದು ಮನಸಿದ್ರೆ ಐನೂರು ಹೆಚ್ಚು ಕಮ್ಮಿ ಕೊಟ್ಟುಬಿಡು" ಅಂದ "ದಶಮ ಹೊಗಲಿ ಬಿಡು ಈ ಮುಂಗಾರಿಗೆ ಹಸಿ ಹುಲ್ಲು ಮೇಯಿಸಿ ಮುಂದಿನ ಬೇಸಿಗೆಗೆ ಮಾರಿದ್ರೆ ಆಯ್ತು" ಹಿಂದೆ ಸರಿಯೋದಕ್ಕೆ ನೋಡಿದ ಲಚ್ಮ. "ಲೇ ಒಳ್ಳೆ ರೇಟೈತೆ ಮುಚ್ಕೊಂಡು ಮಾರಿಬಿಡು, ಊರಲ್ಲೆ ನಿನ್ನ ರೇಟಿಗೆ ಯಾರು ವ್ಯಾಪಾರ ಮಾಡಿಲ್ಲ, ನಾನು ಹೇಳಾಕತ್ತಿನಿ ನನ್ನ ಮಾತು ಕೇಳು, ಆಯ್ತು ನಿನ್ನ ರೇಟಿಗೆ ನೂರಿನ್ನೂರು ಆಚೀಚೆ ಮಾಡ್ತಿನಿ ಒಪ್ಪಿಕೊಂತ್ತಿಯಾ?" ಒಪ್ಪಿಕೊಳ್ಳುವ ಅನಿವಾರ್ಯತೆ ಸೃಷ್ಟಿಸಿದ. "ಆಯ್ತು ಹೋಗು ನನ್ನ ರೇಟಿಗೆ ನೂರು ಹೆಚ್ಚು ಕಮ್ಮಿ ಮುಗಿಸು" ಅಂದ. "ಸರಿ ಬಾ ಹಂಗಾರ" ಅಂತ ಅವನನ್ನ ಕರೆದುಕೊಂಡು ಬಂದವನೆ "ಜಲಾನಿ ದೇಕೊ ಕೊನೆ ರೇಟು ಚಂಚಗಾರ ಕೊಡು ನೂರಾ ಒಂದು ನೋಡು ಹೇಳಿದಕ್ಕೆ ನೀನು ಹೂಂ ಅನ್ನ ಬೇಕು, ನೋಡು ಲಚ್ಮ ನೀನು ಒಪ್ಕೊ ಬೇಕು. ತಗೋ ಈ ನೂರ ಒಂದು ಚಂಚಗಾರ ಮೊದಲು." ಲಚ್ಮನ ಕೈಯಾಗ ಹಿಡಿಸಿ ಜಲಾನಿ ಬೆರಳು ಮುರಿದ. ಜಲಾನಿ "ನಕ್ಕೊ ಬಾ ಬಹಳ ಆಯ್ತು" ರಾಗ ಎಳದ. "ರಂದೆ ಬಾಯಿ ನಿನಗೆ ಲಾಸಿಲ್ಲ. ಪಾಪ ವರ್ಷ ಪುರ ಮೇಯಿಸಿದವನೆ ಅವನಿಗೆ ಹತ್ತ ರೂಪಾಯಿ ಲಾಭ ಆಗಲಿ" ಹೇಳಿ ವ್ಯವಹಾರ ಮುಗಿಸಿದ ಮೇಲೆ ರಂಗವ್ವನ ಅಂಗಡಿಯಲ್ಲಿ ಮಂಡಕ್ಕಿ, ಮಿರ್ಚಿ ಮಾಡಿಸಿ ಗಡದ್ದಾಗಿ ಹೊಡೆದು ಚ ಕುಡಿದು ಬಿಲ್ಲು ಕೊಟ್ಟ ಮೇಲೆನೆ ಜಲಾನಿ ದುಡ್ಡು ಎಣಿಸುತ್ತಿದ್ದ. ಅವನು ಹೇಳಿದಂಗೆ ಹದಿನೈದು ಸಾವಿರದ ಐನೂರು ರೊಕಡ ಎಣಿಸಿದ. "ಲೇ ಬಾ ಬರಾ ಬರ್ ಹೈ ನೋಡು" ಅಂತ ದಶಮನ ಕೈಗೆ ಕೊಟ್ಟ. ದಶಮಾ ಕಾಸು ಹಿಡಿದು ಲಚ್ಮನ ಕಣಕ್ಕೆ ಬಂದು ಎತ್ತುಗಳನ್ನು ಬಿಚ್ಚಿ ಜಲಾನಿ ಕೈಗೆ

ಹಿಡಿಸಿದ ಮೇಲೆನೆ ಲಚ್ಮನಿಗೆ ದುಡ್ಡು ಹಿಡಿಸಿದ್ದ. ಜಲಾನಿ ಖುಷಿಯಿಂದ. ಎತ್ತುಗಳನ್ನು ಹೊಡೆದುಕೊಂಡು ಹೊರಟ. ಮುಂದಿನವರೆಗೆ ಬಿಟ್ಟು ಬರುವ ನೆಪದಲ್ಲಿ ದಶಮ ತನ್ನ ಕಮಿಷನ್ ಪಡೆಯುವುದಕ್ಕೆ ಬಂದಿದ್ದ. ಜಲಾನಿ ಮೊದಲೇ ನಿರ್ಧರಿಸಿದಂತೆ ಇನ್ನೂರ ಕೊಡಾಕ ಬಂದ. "ಕ್ಯಾ ದಾ, ನಾನು ಕಷ್ಟಪಟ್ಟು ರೇಟು ಮಾಡಿಸಿ, ಅದು ನೀನು ಹೇಳಿದರ ಒಳಗೆ ಮಾಡಿಸಿ. ಇನ್ನೂರು ಕೊಡಾಕ ಬಂದಿ" ಅಂದ. "ಇಲ್ಲ ದಶಮಾದುಕೆ ಭಾಯಿ ನನಗೆ ಐನೂರು ಲಾಸಾಗಿದೆ" ಅಂದವನೆ ಇನ್ನೂ ಒಂದು ನೂರು ಹಿಡಿಸಿ ತಿರುಗಿ ನೋಡದಂತೆ ಹೊರಟು ಬಿಟ್ಟ. ದಶಮಾ ಬೆರಳು ಮುರಿದಿದ್ದಕ್ಕೆ ಸಿಕ್ಕ ಮೂರು ನೂರು ಕಿಸೆಯೊಳಗೆ ಇಟ್ಕೊಂಡವನೆ. ಸೀದಾ ಲಚ್ಮನ ಮನಿಗೆ ಹೊರಟ "ತಗಳಪ್ಪ ಮಾವ ನಿನ್ನ ಐನೂರು. ನಿಂದು ನನಗ ಬೇಡಪ್ಪ. ಪಾಪ ಕಷ್ಟಾಪಟ್ಟು ಏನೊ ತಟವಾಟ ಮಾಡಿ ಮಾಡ್ಸಿದ್ದಿಯಾ. ರೊಕ್ಕದ ವ್ಯವಹಾರದಾಗ ಬರೋಬರಿ ಇರಾನು. ತಿನ್ನೋದು ಉಣ್ಣೋದು ಬೇರೆ," ಅವನದ್ದು ಅವನಿಗೆ ಕೊಟ್ಟ. "ಅಲ್ಲಲೆ ಹುಡುಗ, ಹಲ್ಲುಗಿಂಜಿ, ಅವನ ಹಿಂದೆ ಬಿದ್ದು ನೂರಸಲ ಅವನ್ನ ಅದುಮಿ ನೀನು ಹೇಳಿದ ಹದಿನೈದು ಸಾವಿರ ಮಾಡ್ಸಿನಿ ಬರಿ ಐನೂರು ಕೊಡಾಕ ಹತ್ತಿ" ರಾಗ ಎಳೆಯುತ್ತಾ ಮೊದಲು ಐದು ನೂರು ಕಿಸೆಗೆ ಹಾಕಿಕೊಂಡ. "ಇವತ್ತು ಯಾರ ಮಕ ನೋಡಿದ್ನೊ ತಿಂಗಳ ಸರಾಯಿ ಚಟದ ಖರ್ಚು ಬಂತು. ಕೂಲಿಗೆ ಹೋಗುವ ಅವಶ್ಯಕತೆ ಇಲ್ಲ" ಮನಸ್ಸಿನೊಳಗೆ ಅಂದುಕೊಂಡ. "ತಗೊಮರಾಯ ಇನ್ನೊಂದು ಐವತ್ತು ಇಟ್ಕ ಹೋಗಲಿ ಅತ್ಲಾಗ" ಅಂತ ಕೊಟ್ಟ. ಅವನು ಅಂದುಕೊಂಡಂತೆ ಆಯಿತು. "ಸಂಜಿಮುಂದ ಪಾಕೀಟು ವ್ಯವಸ್ಥೆ ಐತೊ ಇಲ್ಲೋ" ದೃಢಪಡಿಸಿಕೊಳ್ಳುವುದಕ್ಕೆ ಕೇಳಿದ. "ಎಯ್, ಅದೆಂಗ ಮಾವ, ಸಂಜಿಗಿ ನಾನ ಬರ್ತಿನಿ ತಗೊ, ಆಟು ಆ ಕಮಟೂರು ಕಾಫಿ ತೋಟದ ಮೇಸ್ತ್ರಿಗೆ ಹತ್ತು ಸಾವಿರ ಕಟ್ಟೋದೈತೆ. ಅಲ್ಲೇ ಒಂದ ಮೂರ ಸಾವಿರಕ್ಕೆ ಎರಡು ಕರಗಳು ಅದಾವಂತ ಹೊಡಕೊಂಡು ಬರ್ತಿನಿ" ಅಂದವನೆ ಹೊರಟ. ದಶಮನಾಯ್ಕ ಬೆರಳು ಮುರಿದು ಸಂಪಾದನೆ ಮಾಡಿಕೊಂಡು ಅರಗಾಗಿದ್ದ. ಮರ ಕೊಳ್ಳುಕೆ ಬರುವ ಡಿಳ್ಳೆಪ್ಪನನ್ನೂ ಬಿಡುತ್ತಿರಲಿಲ್ಲಾ. ಊರ ಜನಕ ಹೊಲದಲ್ಲಿ ಇರುವ ಬೇವಿನಮರ, ಹುಣಸೆಮರ, ಜಾಲಿಮರ, ಹೊಂಗೆ ಮರಗಳನ್ನು ವ್ಯಾಪಾರ ಮಾಡುತ್ತಿದ್ದ ಡಿಳ್ಳೆಪ್ಪ. ಮಾತುಕತೆ ಮುಗಿಸೋದಕ್ಕೆ ದಶಮನಾಯ್ಕನನ್ನ ಕರೆಯುತ್ತಿದ್ದ. ಅವನನ್ನು ಬಿಟ್ಟು ಒಂದೆರಡು ವ್ಯವಹಾರ ಮಾಡಿ ನೋಡಿದ ಆದರೆ ಕೊಟ್ಟ ಚಂಚಗಾರ ವಾಪಾಸು ಕೊಡದ್ದಂಗೆ ಮಂದಿ ಮೋಸ ಮಾಡಿಂದ. ಬ್ಯಾಡಪ್ಪ ಈ ಲಮಾಣ್ಯರ ಸಾವಾಸ ಅಂದವನೆ ದಶಮನಾಯ್ಕನ ಮಧ್ಯಸ್ಥಿಕೆಯೊಳಗ ವ್ಯವಹಾರ ಮಾಡತೊಡಗಿದ.

* * *

38. ಮಾಡ್ರಳ್ಳಿ ಮಂಜನೊ ಹೆಂಡದಂಗಡಿಯೊ

ಮಾಡ್ರಳ್ಳಿ ಮಂಜನೆಂಬುವನು ದಿನದ ಇಪ್ಪತ್ತಾನಾಕು ಗಂಟೆ ಕಾಲಾನೂ ಕುಡಿದ ಅಮಲಿನಲ್ಲೆ ಇರುತ್ತಿದ್ದ. ಇಪ್ಪತ್ತು ನಾಕು ಬಿಟ್ಟ ಒಂದು ಮೂವತ್ತೈದು ಗಂಟೆಗಳ ಕಾಲವಿದ್ದರೂ ಕೂಡ ಅವನು ಅದನ್ನೇ ಮಾಡತ್ತಿದ್ದನೆನೊ ಅದಕ್ಕೆ ಬೇಕಾದ ಕಾಸು ಜೋಡಿಸುವ ಕಲೆಗೆ ಮೆಚ್ಚಿಕೊಳ್ಳಲೇಬೇಕು. ಈ ಮಾಡ್ರಳ್ಳಿಯ ವಯಸ್ಸು ಇಪ್ಪತ್ತೇಳು ಇರಬೇಕು. ಇವನ ತಂದೆ ಮಾಡ್ರಳ್ಳಿ ಕುಬೇರಪ್ಪ ಭದ್ರಾನಾಯ್ಕನ ತಾಂಡದ ಹೊಟೇಲು ರಂಗವ್ವನ ಚಿಕ್ಕಮ್ಮನ ಮಗಳು ಪಾರ್ವತಿಯನ್ನ ಮದುವೆಯಾಗಿದ್ದ. ಪಾವರ್ತಿಯನ್ನ ರಂಗವ್ವ ತನ್ನ ಬೇರೆ ಬೇರೆ ಕೆಲಸಕ್ಕೆ ಉಪಯೋಗಿಸಿಕೊಂಡಿದ್ದಳು. ಹಂಗಾಗಿ ಬೇಜಾರಾದ ಕುಬೇರಪ್ಪ ಊರು ಬಿಟ್ಟು ಹೋದವನು ಬದುಕಿದ್ದಾನೊ, ಸತ್ತಾನೊ ಅಂತ ಹೇಳುವರ್‍ಯಾರು. ಯಾರೊ ಹೇಳಿದರು ಕುಬೇರಪ್ಪ ಬಳ್ಳಾರಿಯೊಳಗೆ ಸಿಕ್ಕಿದ್ದ ಸಂಡೂರೊಳಗೆ ಬೆಟ್ಟಿಯಾಗಿದ್ದ ಅಂತ, ಅಂತೆ ಕಂತೆಗಳ ಸುದ್ದಿಗಳೇ ವಿನಃ ಪಾರ್ವತಿಯಾಗಲಿ ರಂಗವ್ವ ಆಗಲಿ ಅವನ ಹುಡುಕುವ ಪ್ರಯತ್ನ ಮಾಡಲಿಲ್ಲಾ. ಪಾರ್ವತಿ ನೋಡೋದಕ್ಕೆ ಕಣ್ಣು ತುಂಬುವಂತೆ ಇದಿದ್ದಕ್ಕೆ ಗಲ್ಲೆಮೆಲೆ ಕುಂತರೆ ಗಿರಾಕಿಗಳು ಜೇನು ಮುಕುರಿದಂಗೆ ಬರುತ್ತಿದ್ದರಿಂದ ನಡೆಯುವವರೆಗೂ ನಡೆಯಲಿ ಅಂತ ಸುಮ್ಮನಾಗಿದ್ದಳು ರಂಗವ್ವ, ಈಗ ಅವಳಿಗೂ ವಯಸ್ಸಾಯಿತು, ಮಂದಿಯಂತು ಮೂಸೋದಿಲ್ಲ, ಇವಳ ಕಾಲುದಸೆಯಿಂದ ದುಕಾನ್ ನಡೆಯೋ ಮಟ ನಡಿಲಿ ಅಂತ ರಂಗವ್ವನ ಈರಾದೆಯಾಗಿತ್ತು. ಪಾರ್ವತಿಗೆ ಎರಡು ಹೆಣ್ಣು ಮೂರು ಗಂಡು, ಕೂಲಿ ಮಾಡಬೇಕು ಆಸ್ತಿ ಅಂತ ಇದ್ದದ್ದು ಒಂದು ಹಳೆ ಗುಡಿಸಲು. ರಂಗವ್ವನ ಅಂಗಡಿ ನಡೆದರೆ ಉಣ್ಣಬೇಕು, ಇಲ್ಲದಿದ್ದರೆ ಉಪವಾಸ ಹಾಗಾಗಿ ಅವರೆಲ್ಲ ರಂಗವ್ವನನ್ನ ದೊಡವ್ವ ಅಂತೇಳಿ ಕರಿತಿದ್ದರು. ಪಾರ್ವತಿಯ ಹಿರಿಮಗ ಮಾಡ್ರಳಿ ಮಂಜ, ಯಾರ ಸವಾಸಕ್ಕೆ ಬಿದ್ದು ಕುಡಿಯೋದನ್ನ ಕಲಿತನೊ ಯಾರಿಗೂ ಗೊತ್ತಿಲ್ಲ. ಆದರೆ ದೊಡ್ಡ ಕುಡುಕನಾಗಿದ್ದ. ಅವನ ಘನಂದಾರಿ ಕೆಲಸ ನೋಡಿ ರಂಗವ್ವ ಯಾವತ್ತು ಅವನನ್ನು ಅಂಗಡಿ ಸನಿಹಕ್ಕೆ ಕರೆಯುತ್ತಿರಲಿಲ್ಲಾ. ಯಾವಾಗಲೂ ನಶೆಯಲ್ಲೆ ಇರುತ್ತಿದ್ದ.

ಈ ಪರಿ ಕುಡಿಯೋದಕ್ಕೆ ಕಾಸು? ಅದನ್ನ ಹೇಗೆ ಹೊಂದಿಸುತ್ತಿದ್ದ ಎಂಬುದು ಎಲ್ಲರಿಗು ಹೈರಾಣು ಮಾಡಿತ್ತು. ಕಳ್ಳತನ ಮಾಡ್ತನ, ಸುಳ್ಳ ಹೇಳ್ತಾನ, ದಗಲ್ಬಾಜಿ ಮಾಡ್ತಾನ? ಹೆಂಗ ಮಾಡ್ತಾನ ಅನ್ನೋದೆ ರಹಸ್ಯವಾಗಿತ್ತು. ಅವನ ಪಟಾಲಂ ಗುಂಪು ದೊಡ್ಡದಾಗಿತ್ತು. ಔಟಚಂದಿಯಾ, ಗೊಲಹನುಮ, ಬದಿಯಾ, ಗೋಪಾಲ, ಕಾಣೊಯಂಗಟಿ, ಕಾಣೊ ತೊತು, ಹಾಂಡರ ಭೀಮ, ಕಾಜಳೆ ವಾಳೆರ ಖೇಮು. ಅವರವರ ಬಾಟಲಿ ತಗೊಂಡು ಕುಂತುಬಿಡ್ತಿದ್ದರು. ಹೆಂಡ ಇರಲಿ, ಸರಾಯಿ ಇರಲಿ ಕಳ್ಳಭಟ್ಟಿ ಯಾವುದೇ ಇದ್ದರು ಕುಡಿಯುತ್ತಿದ್ದರು. ಎಲ್ಲರಿಗೂ ಮದುವೆಯಾಗಿ ಒಂದು ಎರಡು ಮಕ್ಕಳಿರುವರೆ. ಮಾಡ್ರಳ್ಳಿ ಮಂಜ ಮಾತ್ರ ಎಲ್ಲರನ್ನೂ ಮೀರಿಸಿ ಕುಡಿತ್ತಿದ್ದ. ಕುಡಿಯೋದಕ್ಕೆ ಕುಂತ್ರೆ ಕೊನೆ ಅಂತಾನೆ ಇರುತ್ತಿರಲಿಲ್ಲ ಕುಡಿದದ್ದು ಹೆಚ್ಚಾಯ್ತು ಅಂದರೆ "ಲೇ ಯಾರ‍್ರಲೆ ನೀವು, ನನಮಕ್ಕಳ, ನನ್ನ ನೋಡಿ ನಗಾಕತ್ತಿರಿ. ಕೊಂದ ಬಿಡ್ತಿನ್ನಲೇ" ಮೈಮೇಲಿನ ಬಟ್ಟೆ ಹರ‍್ಕೊಂಡು ಉಲ್ಡಾಡುತ್ತಿದ್ದ. "ಕುಡಕ ಸೂಳಿಮಗ ಅವನದೇನು ಹಚ್ಚಿರಿ ನಡಿರಲೆ, ಒಂದು ಬಿತ್ತಂದ್ರ ಶಾಶ್ವತವಾಗಿ ಮೇಲೇಳೋದಿಲ್ಲ ಬಿಡ್ರಿ." ಔಟ ಚಂದಿಯಾ ಹೇಳಿದ. ಆದರು ಗೊಲ ಹನುಮನ ಪಿತ್ತ ನೆತ್ತಿಗೇರಿ ಒಂದಸಲ ಎತ್ತಿ ನೆಲಕ್ಕೆ ಕುಕ್ಕಿದ. "ಯಾ ಸೂಳೆಮಗನ್ರಪ್ಪ ನನಗ ನೆಲದ ಮೇಲೆ ಎಸೆದವನು. ಮಾತಡ್ರಲೆ, ಹುಟ್ಲಿಲ್ಲಾ ಅನಿಸಿಬಿಡ್ತಿನಿ. ಯಾರು ಬಿಸಾಕಿದ್ದ ಹೇಳ್ರಿ." ಪ್ರಜ್ಞೆ ಇಲ್ಲದಂಗೆ ಉರುಳಾಡಿದ. "ಲೇ ಅವನು ಒಂದ ತರ ಸಗಣಿ ಇದ್ದಂಗ ನಡಿರಿ. ರಾಡಿಯೊಳಗೆ ಕಲ್ಲು ಎಸೆದರೆ ನಮ್ಮ ಮೈಮೇಲೆ ಬೀಳುತ್ತೆ ಓಡ್ರಿ" ಅಂದವನೆ ಬದಿಯಾ ಹೊರಗೆ ಬಂದಿದ್ದ. ಮಾಡ್ರಳ್ಳಿ ಮಂಜನ್ನ ಯಾರು ಎತ್ತಕೊಂಡ ಬಂದು ಮನಿವರಿಗೆ ಬಿಟ್ಟರು ಯಾರಿಗೂ ಗೊತ್ತಿಲ್ಲ. ಮನೆಯೊಳಗೆ ಅವನ ಹೆಂಡತಿ ಸುಮ್ಮಿಗೆ ದೊಡ್ಡ ಉಪದ್ರವ ಆಗಿತ್ತು. "ಇದರ ಓ ಸಡಗ, ಅಲ್ಲೆ ಸಾಯವಲ್ಲದ್ಯಾಕೆ, ಯಾಕ ತಗೊಂಡ ಬಂದೆ ಗೋಪಾಲಪ್ಪ" ಅಂದಳು. ಗೋಪಾಲ ಮಾತ್ರ ಅವನ ಸ್ವಾರ್ಥಕೆ ಅವನ್ನ ಎತ್ತಕೊಂಡ ಬಂದಿದ್ದ. "ಯಾಕ ಈಗಲೆ ರಂಡಮುಂಡಿಯಾಗ ಬೇಕಂತ ಮಾಡಿಯ. ಇಲ್ಲೆ ಹೊರಗೆ ಬಿದ್ದಿರ್ತಾನ ನೀ. ಹೊಗಿ ಮಲಗು ನಡಿ" ಅಂದವನೆ ಅವಳ ಕರೆದುಕೊಂಡು ಒಳಗೆ ಹೋದ. ಮುಂಜಾನೆ ಎದ್ದಾಗ ಮೈಕೈ ನೋವು, ಊಟ ಮಾಡದೆ ಇರೋದರಿಂದ ಹಸಿವಾಗಿತ್ತು. ಒಲೆ ಮುಂದೆ ರೊಟ್ಟಿ ಸುಡುತ್ತಿದ್ದ ಹೆಂಡತಿ ಹತ್ರ ಹೋಗಿ ರೊಟ್ಟಿ ಕೆಳೋದಕ್ಕೂ ನಾಚಿಕೆಯಾಗಿತ್ತು.

ಲಮಾಣ್ಯರ ಪ್ರತಿಯೊಂದು ಹಬ್ಬದಲ್ಲಿ ಕುಡಿದು, ಲಮಾಣ್ಯರ ಕೂಡ ಜಗಳ ತಗದು ಮುಕ್ಳಾರೆ ಹೊಡತ ತಿಂದಿದ್ದ. ಹುಟ್ಟು ಕುಡುಕರಾದ ಅವರಿಗೆ ಏನೇನಾದರು ಹೇಳೋದಕ್ಕೆ ಹೋಗಿ ಆವಾಂತರ ಸೃಷ್ಟಿಸಿಕೊಂಡು ಕಡೀಗ ನರಗಳು ಹಚ್ಚಗೆ ಆಗೊಂಗ ಹೊಡೆದು ಕಳುಹಿಸುತ್ತಿದ್ದರು. ಜಿಗಟು ಮನುಷ್ಯ ಯಾರಿಗಾದರೂ ಅಂಟಿಕೊಂಡನೋ ಅವರ ಜೀವವನ್ನೇ ಜಾಲಾಡಿ ಬಿಡುತ್ತಿದ್ದ. ದೀಪಾವಳಿ ಹಬ್ಬ

ಅಂದರೆ ಲಮಾಣಿಯರಿಗೆ ಎಲ್ಲಿಲ್ಲದ ಉತ್ಸಾಹ. ಯಾವ ಹಬ್ಬವನ್ನು ಮಾಡದೆ ಇದ್ರು ದೀಪಾವಳಿ ಸಂಭ್ರಮಾಚರಣೆಯಾಗಲೇಬೇಕು. ತಿಂಗಳ ಮುಂಚಿನಿಂದಲೇ ಹುಡುಗಿಯರು ಕುಣಿಯುವುದು, ಹುಡುಗರ ಮೋಜು ಮಸ್ತಿ, ಹುಲಿಯೂರ ಹುಡುಗರ ಜೊತೆಗೆ ತುರಾಮಚ್ಚಿ ಆಡ್ತಿದ್ದ. "ಲೇ ಹುಡುಗರಾ ನೀವು ಯಾರು ಗೆಲ್ಲುತಿರೊ ಅವರು ಒಂದು ಪಾಕೇಟಿಗೆ ರೊಕ್ಕ ಕೊಡಬೇಕು" ಮಾಡ್ರಳಿ ಮಂಜ ಹೇಳಿ ಅಡ್ಡಾಗಿದ್ದ ಸಾಲಿ ಕಟ್ಟೆಗೆ. ಹುಡುಗರು ತಮ್ಮ ಆಟದೊಳಗೆ ಸೋಲು ಗೆಲುವಿನ ಭರಾಟೆಯಲ್ಲಿ ಮೈಮರತರು. ಅದೆಂಗೊ ಮಾಡ್ರಳ್ಳಿ ನಾಗಿರ ಥಾವು ಕೂಡ ಜಗಳಕೆ ಬಿದ್ದ. ಅವನು ಇವನಿಗಿಂತ ತಲೆ ತಿರುಕ ಕುಡದ್ರೆ ಯಾರು ಬಂದ್ರು ಸುಮ್ಮನಿರೊ ಪೈಕಿನೆ ಅಲ್ಲಾ. ಮಾತಿಗೆ ಮಾತು ಆರಂಭವಾಗಿ ಕೈಕೈ ಮಿಲಾಯಿಸಿದ್ದರು ಕಲ್ಲು, ಕಟ್ಟಿಗಿ ಕೈಗೇನು ಸಿಗ್ಯೆತು ಅದರಿಂದಲೇ ಹೊಡದಾಟ ಸುರು ಹಚ್ಕೊಂಡಿದ್ರು. ಹುಡುಗರಿಗೆ ಅದೊಂದು ದೊಡ್ಡ ಹಬ್ಬವೆ. ಹುಲಿಯೂರ "ಯಪ್ಪ ಸತ್ನಲೆ ಮಾಡ್ರಳಿ, ಥಾವು ಏನ ಹೊಡದ, ಯಾರಾದ್ರು ಬಿಡಿಸ ಬಾರದ, ಸಾಯಿತಾನನ ಮಾಡ್ರಳಿ" ಅಂತ ಅಂಗಲಾಚಿದ. ಯಾರೊಬ್ಬರು ತುಟಿಪಿಟಕ್ ಅನ್ನಲಿಲ್ಲಾ. ಸುಮ್ಮನೆ ಪ್ರೇಕ್ಷಕರಂತೆ ನೋಡುತ್ತಿದ್ದರು. ಮಾಡ್ರಳ್ಳಿ ಹೆಂಡತಿ ಸುಮ್ಮಿಗೆ ಹೇಳೋದಕ್ಕೆ ಓಡಿದ. "ಸುಮ್ಮಕ್ಕ, ಗಡಾನ ಬಾರಬೆ ನಿನಗಂಡನ್ನ ಆ ಥಾವರ್‍ಯ ಕೊಂದ ಹಾಕ್ತನ" ಅಂತ ಆತಂಕದಿಂದ ಹೇಳಿದ. "ದಿನಾ ಸಾಯೋರಿಗೆ ಅಳೊರು ಯಾರೊ ತಮ್ಮ ಹುಲಿಯೂರ. ಇದು ಒಂದ ದಿನದಲ್ಲ, ಪ್ರತಿದಿನಾ ಹಿಂಗ ಒಬ್ಬರಲ್ಲ ಒಬ್ಬರ ಹತ್ರ ಜಗಳ ತಕ್ಕೊಂಡು ಹೊಡ್ತಾತಿಂದು ಮೈನೋವು ಮಾಡಿಕೊಂಡು ಬರ್‍ತಾನ. ಅವನಿಗಿಂತ ಮದಲು ನಾನ ಸಾಯಬೇಕ ನೋಡು" ಅಂತ ಒಳಗ ಕುಂತಿದ ಗೋಪಾಲನ ಕಡೀಗ ನೋಡಿದಳು. "ಹಿಂಗ್ಯಾಕಂತಿ ಬೆ ಗಡಾನ ಹೋಗಿ ಬಿಡಸು, ಕುಡಿದಿರೊ ಹೊತ್ನಾಗ ಎಲ್ಲಿಗಾರು ಏಟು ಬಿದ್ದರೆ ಹೊಕ್ಕಾನ ನೋಡು." ಜಾಗೃತಿ ಮಾಡಿದವನೆ ಅವಳಿಗೆ ಇವನ ಮಾತು ಯಾವ ಪರಿಣಾಮ ಬೀರಲಿಲ್ಲ. ಅಂತ ಗೊತ್ತಾತು ವಾಪಾಸು ಬಂದ. ಅವನ ಹಿಂದಿಂದೆ ಗೋಪಾಲ ಓಡಿಬಂದಿದ್ದ ಆಗಲೆ ಜಗಳ ತಮನ್ನ ಆಗಿತ್ತು. ಯಾರೊ ಬಂದು ಥಾವೂನ ಎಳೆದುಕೊಂಡು ಹೋಗಿದ್ದರು. ಹುಲಿಯೂರ ಮಾತ್ರ ಆಲೋಚಿಸುತ್ತ ಕಾಲು ಕೈ ಸ್ವಾಧೀನ ತಪ್ಪಿದಂತೆ ಬಿದ್ದಿದ್ದ ಜೀವಂತ ಹೆಣ ಮಾಡ್ರಳಿಮಂಜನನ್ನ ಹೆಗಲ ಮೇಲೆ ಹಾಕಿಕೊಂಡು ಹೊರಟ್ಟಿದ್ದ ಗೋಪಾಲನಾಯ್ಕನನ್ನ ದಿಟ್ಟಿಸಿ ನೋಡತೊಡಗಿದ. ಮಾಡ್ರಳ್ಳಿ ಮಂಜ ಯಾಕೆ ಕುಡುಕನಾಗಿರಬಹುದು? ಹುಲಿಯೂರನ ಚಿಕ್ಕಮೆದಳು ಆಲೋಚಿಸ ತೊಡಗಿತು. ಅದಕ್ಕೆ ಅವನ ಹೆಂಡತಿ ಸುಮ್ಮಿ ಕಾರಣವಿರಬಹುದೆ? ಅವನ ತಾಯಿ ಪಾರ್ವತಿ? ರಂಗವ್ವ ಇಲ್ಲ ಅವನ ಸ್ನೇಹಿತರಾದ ಗೋಪಾಲಿ, ಬದಿಯಾ, ಗೊಲ ಹನುಮ, ಔಟ ಚಂದಿಯಾ ಯಾರು? ಬಹಳ ಹೊತ್ತು ಅವನ ಪ್ರಶ್ನೆಗೆ ಉತ್ತರವೆ ಸಿಗಲಿಲ್ಲಾ. ಮೈತುಂಬ ಸಾಲ ಮಾಡಿಕೊಂಡಿದ್ದ ಕದಿಯುವುದನ್ನು ಕಲಿತಿದ್ದ, ಸುಳ್ಳ ಹೇಳುವುದರಲ್ಲಿ ನಿಸ್ಸೀಮ. ಸರಾಯಿ ಅಂಗಡಿ ಗೌರವ್ವನನ್ನ ಒಂದು

ನೂರ ಸಲನಾದರೂ ಯಾಮಾರಿಸಿರಬೇಕು ಮಾದ್ರಳ್ಳಿ ಮಂಜ. "ಗೌರವಕ್ಕ, ನೋಡು ಯಾರು ಸುಳ್ಳು ಹೇಳಿದ್ರು ಕುಡುಕರು ಸುಳ್ಳ ಹೇಳಲ್ಲ. ನಿನ್ನಾಣೆಗೂ, ನಾಳೆ ನನ್ನ ಹೆಣ್ತಿಕೊಳ್ಳಾನ ತಾಳಿ ಮಾರಿಯಾದರೂ ನಿನ್ನ ರೊಕ್ಕ ಉಳಿಸೋದಿಲ್ಲ ಒಂದು ಕೊಡು." ಹಿಡ್ಕೊಂಡ್ರೆ ಬಿಡಲ್ಲ ಅಂತ ಗೊತ್ತು ಆದ್ರು ಗೌರವ್ವ ಅವನ ಕಡೀಗ ಕಣ್ಣೆತ್ತಿ ನೋಡ್ತಿರಲಿಲ್ಲಾ "ಬೇ ಗೌರವಕ್ಕ, ದಿನಾನಂದು ಇದ್ದಿದ್ದೆ ಅಂತ ತಿಳ್ಕೊಂಡಿಯಾ ಅಂತ ಗೊತ್ತು. ದಿನಾ ನಾನು ಕುಡಿಯೋದಕ್ಕೆ ಕಣವ್ವ ನಿನ್ನ ಸರಾಯಿ ಖಾಲಿಯಾಗೋದು. ನಾನೊಬ್ಬನೆ ಅಲ್ಲ ಹತ್ತ ಮಂದಿನ ಕರ್ಕೊಂಡ ಬಂದು ಕುಡಿಯಾಕ ಹೇಳ್ತಿನ ಬೇ ನಾನು ನಿನ್ನ ತಮ್ಮ. ಒಡ ಹುಟ್ಟಿದವನಲ್ಲದಿದ್ದರೂ ತಮ್ಮ ತಮ್ಮಗೆ ಏನಂತಿಯಪ್ಪ ಲಾಲ್ಯಾನಾಯ್ಕ. ಹೌದಲ್ಲೋ ಆನಂದಣ್ಣ ನೀನೆ ಹೇಳು." ಕಡ್ಕೊಂಡು ನೆಲದ ಮೇಲೆ ಬಿದ್ದ ಅರ್ಧಗಂಟೆ ಅಲ್ಲೆ ಉರಳಾಡಿದ. ಎದ್ದವನೆ ಮತ್ತೆ ಅದೆ ಪ್ರಲಾಪ ಗೌರವ್ವ ರೋಸಿ ಒಂದು ಪಾಕೇಟು ಕೊಡುತ್ತಿದ್ದಳು.

ಮಾದ್ರಳ್ಳಿ ಮಂಜನ ದೇಹದೊಳಗೆ ರಕ್ತ ಪೂರ ಸರಾಯಿ ಆದಂಗಿತ್ತು. ಯಾವುದೇ ಕಾಯಿಲೆ ಕಸಾಲೆ ಅನ್ನೋದಿಲ್ಲ, ಯಾವತ್ತು ಮಲಗಿದೋನಲ್ಲ ಮಂದಿ ಹಿಂದ ಸೋ ಅಂತ ಕೆಲಸಕ್ಕೆ ಹೋಗುತ್ತಿದ್ದ ಸಿಕ್ಕಷ್ಟು ದುಡಿಮೆ ದುಡಿಮೆಗಿಂತ ಖರ್ಚು ಜಾಸ್ತಿ. ಇಂತೋರ ಹತ್ರ ಸಾಲ, ಕೈಗಡ ಕಟ್ಟಗಡ ಇಸ್ಕೊಂಡಿಲ್ಲಾಂತಿಲ್ಲ. ಮಂದಿನಾದ್ರು ಇಂತ ಕುಡುಕನಿಗೆ ಹೆಂಗೆ ಕಾಸು ಕೊಟ್ಟರೂ ದೇವರೇ ಬಲ್ಲ. ಮಾದ್ರಳ್ಳಿ ಹಿಂದಿದ್ದ ಬದಿಯಾ, ಕುಡದು ಬಿದ್ದವನು ಮೇಲೇಳಲಿಲ್ಲಾ. ಔಟ ಚಂದಿಯಾ ನಿಗರ್ಕೊಂಡ ಹೋದ. ಕಾಣೊಯಂಗಟಿ ಸತ್ತ ಇವನದು ಪಟ್ಟಿಯೊಳಗೆ ಹೆಸರಿದೆ. ಆದರೆ ಇವನ ಅದೃಷ್ಟ ಬಲೆ ಗಟ್ಟಿ ಇರುವಂತೆ ಕಾಣುತ್ತೆ. ಕುಡಿತಾನೆ ಮಂದಿ ಕೂಡ ಜಗಳ ಆಡ್ತಾನೆ. ಭದ್ರಾನಾಯ್ಕನ ತಾಂಡದಲ್ಲಿ ಎಲ್ಲರಿಗೂ ಮನೋರಂಜನೆ ಕೊಡ್ತಾನೆ.

* * *

39. ಗಾಂಧಿವಾದಿ ಗೂರಜ್ಜನೊ

ಭದ್ರನಾಯ್ಕನತಾಂಡ ದೇಶದ ಯಾವುದೋ ಒಂದು ಮೂಲೆಯಲ್ಲಿ ಯಾರಿಗೂ ಇದರ ಅತಾಪತ ಗೊತ್ತಿಲ್ಲದಂತಿರುವ ಲಂಬಾಣಿ. ಕನ್ನಡ ಮಂದಿ ಒಂದಿಷ್ಟು ಜನ ಮುಸಲ್ಮಾನರು ಇರುವ ಊರಂದ್ರೆ ಊರು, ಲಮಾಣಿತಾಂಡ ಅಂದ್ರೆ ತಾಂಡ. ಇದೊಂದು ಸಂಮಿಶ್ರ ಸಂಸ್ಕೃತಿಗಳ ಸಮ್ಮೇಳನ. ಲಮಾಣಿಗರು ಕನ್ನಡದ ಜಗತ್ತಿಗಷ್ಟೆ ಅಲ್ಲಾ, ನಾಗರೀಕ ಜಗತ್ತಿನಿಂದ ದೂರವಿರುವ ಜನ ಸಮುದಾಯ. ಆದರೆ ಈ ಸಂಮಿಶ್ರಣ ಹೇಗಾಯಿತು ಗೊತ್ತಿಲ್ಲ ಕನ್ನಡಿಗರು ಇರುವಲ್ಲಿ ಅವರು ಬಂದರೋ. ಇಲ್ಲ ತಾಂಡದವರಿದ್ದಲ್ಲಿ ಕನ್ನಡದವರು ಬಂದರು ಯಾರಿಗೂ ಗೊತ್ತಿಲ್ಲ. ಕೆಲವು ಪ್ರದೇಶಗಳಲ್ಲಿ ಒಂದು ಕಡೆ ಲಂಬಾಣಿಗರು ಇದ್ದರೆ, ಮತ್ತೊಂದು ಕಡೆ ಕನ್ನಡಿಗರು ಇರುವುದು ವಾಡಿಕೆ. ಆದರೆ ಇಲ್ಲಿ ಹಾಗಿಲ್ಲ ಎಲ್ಲಾ ಮನೆಗಳು ಸಂಮ್ಮಿಶ್ರಗೊಂಡಿವೆ. ಹಾಗಾಗಿ ಯಾರು? ಏನು? ಗೊತ್ತಾಗುವುದಿಲ್ಲ. ಅಂತಹದರಲ್ಲಿ ಗೂರ‍್ಯನಾಯ್ಕ ಉರ್ಫ್ ಗೂರಜ್ಜ ಗಾಂಧಿವಾದಿಯಾಗಿದ್ದು ಹೇಗೆ? ಹುಲಿಯೂರನ ದೊಡ್ಡ ಪ್ರಶ್ನೆ. ಊರಲ್ಲಿ ವಿದ್ಯಾವಂತರ ಸಂಖ್ಯೆ ಬಹಳ ವಿರಳವಾಗಿತ್ತು. ಬಹುಶಃ ಹುಲಿಯೂರ ಓದುವಾಗ ಒಬ್ಬರು, ಇಬ್ಬರು ಅಲ್ಪ ಸ್ವಲ್ಪ ಓದಿದವರು ಇದ್ದಿರಬೇಕು. ಬಿಟ್ಟರೆ ಹೆಚ್ಚು ಓದಿದವರು ಇರಲಿಲ್ಲ. ಜಾಸ್ತಿ ಓದಿದವರ ಪಟ್ಟಿಯಲ್ಲಿ ಹುಲಿಯೂರನೂ ಇದ್ದ. ಅವರ ಇಡೀ ಕುಟುಂಬದಲ್ಲಿ ಮೊದಲನೆಯ ತಲೆಮಾರಿನ ವಿದ್ಯಾವಂತರಲ್ಲಿ ಹೆಚ್ಚು ಕಲಿತವನು ಹುಲಿಯೂರ ಒಬ್ಬನೆ. ಅವನ ಅಣ್ಣಂದಿರು ಸಾಲಿಗೆ ಹೋಗಿ ಅಕ್ಷರ ತಲೆಗೆ ಹತ್ತದೆ ಹೊಡತಾ ತಿಂದು ಅರ್ಧಕ್ಕೆ ಬಿಟ್ಟು ಮನೆಗೆ ಬಂದಿದ್ದರು. ಇಂಥ ಸ್ಥಿತಿಯಲ್ಲಿ ಗೂರಜ್ಜ ಗಾಂಧಿಯನ್ನು ನೋಡಿದ್ದೆಲ್ಲಿ ಅವನನ್ನ ಅನುಸರಿಸಿದ್ದಾದರು ಹೇಗೆ? ಹುಲಿಯೂರ ಪದವಿಗೆ ಹೋದ ನಂತರವೆ ಅವನಿಗೆ ಈ ಆಲೋಚನೆ ಬಂದಿತ್ತು. ಅವನಿಗೆ ತಾಂಡದಲ್ಲಿ ಅತ್ಯಂತ ಪ್ರಿಯವಾದ ಜಾಗ ಮಂಜಮ್ಮನ ಚಹಾದಂಗಡಿ. ಮಂಜಮ್ಮ ಕನ್ನಡದವಳು. ಯಾವೂರಿನವಳು ಅವಳ ಹಿನ್ನೆಲೆ ಮುನ್ನೆಲೆ ಬಹಳಷ್ಟು ಮಂದಿಗೆ ಗೊತ್ತಿಲ್ಲ. ಒಂದು ದೊಡ್ಡ ಗುಡಿಸಲು ಹಾಕಿಕೊಂಡು ಒಂದು ಎಮ್ಮೆ ಸಾಕಿಕೊಂಡು

ವಾಸಿಸುತ್ತಿದ್ದಳು. ಯಾವಾಗಾದರು ಒಮ್ಮೆ ಬಜ್ಜಿ ಚಹ ಮಾಡುತ್ತಿದ್ದಳು. ಗಿರಾಕಿ ಆದಷ್ಟು ಮಾಡಿಕೊಂಡು ಅಡುಗೆ ಮಾಡಿ ಉಂಡು ಮಲಗುವುದು ಇಷ್ಟೆ ಅವಳ ದಿನಚರಿ. ಅವಳ ಮನೆಯ ಕಟ್ಟೆ ಅಂದರೆ ಅವನಿಗೆ ಬಲು ಇಷ್ಟದ ಜಾಗ. ಗೂರಜ್ಜನಿಗೂ ಮಂಜಮ್ಮನಿಗೂ ಸಂಬಂಧ ಇತ್ತು ಅಂತ ಮಂದಿ ಮಾತಾಡಿಕೊಳ್ಳುವುದನ್ನು ಕೇಳಿದ್ದ ಹುಲಿಯೂರ. ಆದರೆ ಅದರ ಬಗ್ಗೆ ಅವನಿಗೆ ಯಾವುದೇ ಆಸಕ್ತಿ ಇರಲಿಲ್ಲಾ. ಮತ್ತೊಬ್ಬರ ವೈಯಕ್ತಿಕ ಜೀವನದ ಜಾಸೂಸಿ ಮಾಡುವ ಬೇಕೂಪರಿಗೆ ಇದೆಲ್ಲಾ ಬೇಕು. ಅವರವರ ತೆವಲುಗಳು, ಅವರವರ ವೈಯಕ್ತಿಕ ಬದುಕಿನೊಳಗೆ ಪ್ರವೇಶ ಮಾಡುವ ಅಧಿಕಾರ ಯಾರಿಗೂ ಇಲ್ಲ ಹಾಗಾಗಿ ಗಾಂಧಿವಾದಿ ಗೂರಜ್ಜ ಬೇಕಿತ್ತೆ ವಿನಃ ಅವನ ಪ್ರೇಮ ಪ್ರಸಂಗಗಳಲ್ಲ. ಗೂರಜ್ಜ ಅಂಥ ದೊಡ್ಡ ಹಿಡುವಳಿದಾರನೇನು ಅಲ್ಲ. ಮಾಮೂಲಿ ಮನುಷ್ಯ. ಅವನಿಗೆ ಕಂಡಿಪುರದ ಶಾನುಬೋಗ ಪ್ರಹ್ಲಾದಭಟ್ಟರ ಒಡನಾಟವಿತ್ತು. ಆಗ ಶಾನುಬೋಗನೆಂದರೆ ಡಿಸಿ ಇದ್ದಂಗೆ. ಬ್ರಿಟೀಷರ ಪರ ಕೆಲಸ ಮಾಡುವ ಏಕೈಕ ವ್ಯಕ್ತಿ ಶಾನುಭೋಗ. ಹಳ್ಳಿಗಳ ಕರ, ತೆರಿಗೆ ವಸೂಲಿ ಮಾಡಿ ಬ್ರಿಟಿಷ್ ಹುಕೂಮತ್‌ಗೆ ಸಲ್ಲಿಸುತ್ತಿದ್ದ. ಕೊಟ್ಟಷ್ಟು ಕೊಟ್ಟು ಇಟ್ಕೊಂಡಷ್ಟು ಇಟ್ಟುಕೊಳ್ಳುತ್ತಿದ್ದ. ಪರಾಂಪೂಕ್, ಬೇನಾಮಿ ಜಮೀನುಗಳನ್ನೆಲ್ಲಾ ತನ್ನ ವಂಶಜರ ಹೆಸರಿಗೆ ಕಡತ ಮಾಡಿ ನೂರಿನ್ನೂರು ಎಕರೆ ಜಮೀನು ಮಾಡಿಕೊಳ್ಳುತ್ತಿದ್ದ.

ಭಾರತದ ಅಂದಿನ ಇಡೀ ರಾಜಕಾರಣದ ಒಳಸುಳಿಯನ್ನ ಅರ್ಥ ಮಾಡಿಕೊಂಡಿದ್ದ ಪ್ರಹ್ಲಾದಭಟ್ಟ ಆಗಾಗ ಅವರು ಮಾಡುವ ಹರ್ಕತುಗಳನ್ನು ಚರ್ಚೆ ಮಾಡುತ್ತಿದ್ದ. ಹಾಗಾಗಿ ಅವನಿಗೆ ಚರ್ಚೆಗೆ ಬೇಕಾದ ವ್ಯಕ್ತಿ ಗೂರಜ್ಜ. ಗೂರಜ್ಜ ಯಾವಾಗಲೂ ಪ್ರಹ್ಲಾದಭಟ್ಟರ ಬಂಗಲೆಯ ಮುಂದೆ ಇರುತ್ತಿದ್ದ. "ಬುದ್ಧಿ ಇವತ್ತು ಏನಾದರು ಸುದ್ದಿ?" ಕೇಳಿದ. "ಅಯ್ಯೊ ಗುರ್ಯಾನಾಯ್ಕು ಏನು ಸುದ್ದಿ ಇಲ್ಲ ಬಿಡಲೆ, ಆದರೆ ಯಾರೊ ಗಾಂಧಿ ಅಂತೆ ಅದೆಲ್ಲೊ ವಕೀಲಗಿರಿ ಮಾಡ್ತಿದ್ದೊನು ಭಾರತಕ್ಕೆ ವಾಪಾಸು ಬಂದು ಸ್ವತಂತ್ರ್ಯ ಚಳುವಳಿಯಲ್ಲಿ ಪಾಲ್ಗೊಂಡಿರೋದು ದೊಡ್ಡ ಸುದ್ದಿ ನೋಡಪ್ಪ." ಅಂದ ಪ್ರಹ್ಲಾದ ಭಟ್ಟ. ಅವತ್ತು ಗಾಂಧಿ ಹೆಸರು ಕೇಳಿದವನು, ಪ್ರತಿದಿನ ಗಾಂಧಿ ಬಗ್ಗೆ ಚರ್ಚೆ ಮಾಡತೊಡಗಿದ. "ಅಲ್ಲಾ ಸೋಮಿ ನೀವು ಹಿಂಗ ಅರ್ಧಭರ್ಧ ಸುದ್ದಿ ಹೇಳಿದರೆ ಹೆಂಗೆ? ಈ ಗಾಂಧಿ ಅನ್ನೋನು ಯಾರು? ಯಾ ಊರಿನವನು ಯಾಕೆ ಹಿಂಗೆ ಇದ್ದಕ್ಕಿದ್ದಂಗೆ ಹೆಸರು ಮಾಡಿದ ನಿಧಾನಕ್ಕೆ ಹೇಳಬಾರದ.?" ಹದಿನೈದು ವರ್ಷದ ಗೂರ್ಯಾನಾಯ್ಕು ಭಟ್ಟರನ್ನ ಕೇಳಿದ್ದ. ಶಾನುಭೋಗ ಪ್ರಹ್ಲಾದಭಟ್ ಆಗಾಗೆ ಪತ್ರಿಕೆ ಓದುತ್ತಿದ್ದ. ಹೋರಾಟದ ಚಳುವಳಿಯ ತೀವ್ರತೆಯ ಬಗ್ಗೆ ಅವನಿಗೆ ಪರಿಚಯವಿತ್ತು. ಆದರು ಮಂದಿಯ ತಲೆಯೊಳಗೆ ಇಂತ ವಿಷಯಗಳನ್ನು ಹೇಳಿ ತನ್ನ ತಲೆ ಮೇಲೆ ಕಲ್ಲು ಚಪ್ಪಡಿ ಎಳೆದುಕೊಳ್ಳುವುದು ಬೇಡವೆಂದು ಸುಮ್ಮನಾಗಿದ್ದ. ಆದರೂ ಓದಿದ್ದನ್ನ ಯಾರಿಗಾದರೂ ಹೇಳುವುದರ ಮುಖಾಂತರ ತಾನು ಬುದ್ಧಿವಂತ ಎಂದು

ಪ್ರದರ್ಶನ ಮಾಡುವುದು ಅನಿವಾರ್ಯವಾಗಿತ್ತು. ಅದಕ್ಕೆ ಗಂಡಾಂತರಕಾರಿ ಅಲ್ಲದ ಕಾಡುಜನರಾದ ಲಮಾಣಿಗರು, ಬೇಡರು, ಹರಿಜನರ, ಇತರೆ ಜಾತಿಯವರ ಮುಂದೆ ಅಲ್ಪಸ್ವಲ್ಪ ಹೇಳಿಕೊಳ್ಳುತ್ತಿದ್ದ. ಅವರ ಪ್ರತಿಸ್ಪರ್ಧಿಗಳೆಂದರೆ ಶೂದ್ರರರಲ್ಲೇ ಮೇಲಿರುವ ಲಿಂಗವನ್ನ ಧರಿಸಿರುವ, ಬಸವಣ್ಣನ ಅನುಯಾಯಿಗಳಾದ ಲಿಂಗವಂತರು ಎನ್ನುವ ಸ್ಪಷ್ಟತೆ ಆತನಿಗೆ ಇರುವುದರಿಂದಲೇ, ಗೌಡರನ್ನ ದೂರ ಇಟ್ಟಿದ್ದ. ತನಗೆ ಬೇಕೆಂದಾಗ ಗೌಡರ ಮೂಲಕ ಈ ಕಡಿಮೆ ಜಾತಿಯ ಜನರನ್ನ ಹಣಿಯುತ್ತಿದ್ದ. ಇಲ್ಲದಿದ್ದರೆ, ಕೆರೆ ಏರಿ ಕೇಳಗಿನ ಎಲ್ಲಾ ಜಮೀನು ತನಗೆ ಬೇಕಾದವರ ಹೆಸರಿಗೆ ಮಾಡುತ್ತಿರಲಿಲ್ಲಾ. ಕಂಡಿಪುರದಲ್ಲಿ ಪ್ರಹ್ಲಾದ ಭಟ್ಟರ ಬಂಗಲೆ ಎಂದೇ ಖ್ಯಾತಿಯಾಗಿದ್ದ ದೊಡ್ಡಮನೆ ಸುತ್ತಲು ಅರ್ಧ ಎಕ್ಕರೆ ಜಮೀನಲ್ಲಿ ತರಾವರಿ ಗಿಡ ಮರ, ಬಳ್ಳಿಗಳು, ತರಕಾರಿ ತನಗೆ ಬೇಕಾದ ಐಶಾರಾಮಿ ಬದುಕು. ಆದರೆ ಕಂಡಿಪುರ ತುಂಬ ಗುಡಿಸಲೆ ಇರುವಂತೆ ಕಾಯ್ದುಕೊಂಡಿದ್ದ. ಇಂಥ ಚಾಣಾಕ್ಷನಾದ ಪ್ರಹ್ಲಾದಭಟ್ಟ, ಜ್ಞಾನವನ್ನ ಪುಗಸಟ್ಟೆ ಹಂಚಲು ಸಾಧ್ಯವೇ? ಸುತ್ತಹಳ್ಳಿಗಳಾದ ಕಂಡಿಪುರ, ದುರ್ಗದೂರು, ಇಳಂಗೊಲಿ, ಸೋಮನಳ್ಳಿ ಭದ್ರಾನಾಯ್ಕನ ತಾಂಡ ಎಲ್ಲಾ ಅವನ ಪಾಬಂದಿಯೊಳಗೆ ಇತ್ತು. ಎಲ್ಲಿಯೂ ಒಂದು ಸಾಲಿ, ಸವಲತ್ತು ಬರದಂತೆ ನಿಗಾವಹಿಸಿ ನೋಡಿಕೊಂಡಿದ್ದ. ಅವನ ಎದುರು ನಿಂತು ಚರ್ಚೆ ಮಾಡುವ ಮಾತಾಡುವ ಎದೆಗಾರಿಕೆ ಯಾರಿಗೂ ಇರಲಿಲ್ಲಾ. ಹತ್ತು ಮಂದಿ ಅವನ ಹಿಂದೆ ಹರಕು ಬಟ್ಟೆ ಹಾಕಿಕೊಂಡು ಕೈ ಕಟ್ಟಿಕೊಂಡು ಸದಾ ತಿರುಗಾಡುತ್ತಿದ್ದರು. ಯಾರಾದರೂ ಗಾಂಚಾಲಿ ಮಾಡಿದರೊ ಅವನ ಹಿಂದಿದ್ದ ಹರಿಜನರ ಹುಡುಗರಾದ ಕಾಮೇಶಿ, ಸರ್ಪ, ಬಸ್ಯಾ, ಹರಕ, ಬೋದಿ, ಬಂಗಾಲು ಹಿಟ್ಟುನಾದೊ ಹಂಗೆ ನಾದಿ ಬಿಡುತ್ತಿದ್ದರು.ಆಗಾಗ ಅವರಿಗೆ ತಿನ್ನೋದಕ್ಕೆ ಕುಡಿಯೋದಕ್ಕೆ ಕಾಸು ಕೊಡುತ್ತಿದ್ದ ಶಾನುಭೋಗ. ಅವನು ಹೇಳಿದ್ದೆ ವೇದವಾಕ್ಯ, ಉಳಿದವರ ಮಾತಿಗೆ ಕಾಸಿನ ಕಿಮ್ಮತ್ತು ಇಲ್ಲ. ಆ ಕಾಲಕ್ಕೆ ಅವನೆ ಮಹಾಪ್ರಭುವಿನಂತಿದ್ದ. ಯಾಕಂದರೆ ಅಲ್ಪಸ್ವಲ್ಪ ಬ್ರಿಟಿಷರ ಭಾಷೆಯಾದ ಅಂಗ್ರೇಜಿಯನ್ನು ಕಲಿತಿದ್ದ. ಮಾತಾಡುತ್ತಿದ್ದ ಹಾಗಾಗಿ ಬ್ರಿಟಿಷರಿಗೆ ಪರಿಸ್ಥಿತಿಯನ್ನು ತಿರುಚಿ ಹೇಳಿ, ಎಲ್ಲಾ ಸವಲತ್ತು ತಾನು ಪಡೆದುಕೊಳ್ಳುತ್ತಿದ್ದ. ಜನ ಸಾಮಾನ್ಯರನ್ನು ಕತ್ತಲೆಯೊಳಗೆ ಇಡುವುದನ್ನು ವ್ಯವಸ್ಥಿತವಾಗಿ ಮಾಡುತ್ತಿದ್ದ.

ಲಮಾಣಿಗರ ಮೇಲೆ ದಂಗೇಕೋರರು, ಕಳ್ಳಕಾಕರು ಎನ್ನುವ ಕಾನೂನು ಲಾಗು ಇರುವುದು ಅವನಿಗೆ ಮೊದಲೆ ಗೊತ್ತಿತ್ತು. ಅದನ್ನ ಸಮಯ ಬಂದಾಗ ಮಾತ್ರ ಉಪಯೋಗಿಸುತ್ತಿದ್ದ. ಸುತ್ತಮುತ್ತ ಯಾರ ಮನೆಯಲ್ಲಾಗಲಿ, ಕಣದಲ್ಲಾಗಲಿ ಜಮೀನಿನಲ್ಲಿ ಕಳ್ಳತನವಾದರೆ ಮೊದಲು ಭದ್ರಾನಾಯ್ಕನ ತಾಂಡಕ್ಕೆ ಬಂದು ನವಲನಾಯ್ಕ, ಕಬೀಲನಾಯ್ಕನ ಪೊಲೀಸರು ಎತ್ತಿಕೊಂಡು ಹೋಗಿ, ಏರೋಪ್ಲೇನ್ ಹತ್ತಿಸುತ್ತಿದ್ದರು. ಅವರ ಅಪರಾಧ ಅಲ್ಲದಿದ್ದರು ಸಬೂತು ಬೇಕು ಅಷ್ಟೆ. ಅವರ

ಹಿಂದಿನ ರೆಕಾರ್ಡ್‌ಗಳ ಆಧಾರದ ಮೇಲೆ ಎತ್ಕೊಂಡು ಹೋಗುತ್ತಿದ್ದರು. ಇದೆಲ್ಲಾ ಚಿಕ್ಕವನಾದ ಗುರ್‍ಯಾನಾಯ್ಕನ ಅರಿವಿಗೆ ಬಂದಿತ್ತು. ಆದರೆ ಶಾನುಭೋಗನನ್ನ ಎದುರು ಹಾಕಿಕೊಂಡು ಅಂತ ದೊಡ್ಡ ಕಾಮಣ್ಣಗೌಡರೆ ಬದುಕೋದಕ್ಕೆ ಆಗದೆ ಒಳೊಪ್ಪಂದ ಮಾಡಿಕೊಂಡು "ಏನೇ ಹೇಳಿದರು ಶಾನುಬೋಗರೆ ಅಂತಿಮ ಕಣಪ್ಪ ಅವರಂದ್ರೆ ಓದು ಬಲ್ಲಂತವರು, ಹೆಬ್ಬಿಟ್ಟು ನನಮಕ್ಕಳು ನಮಗೇನು ತಿಳಿದಿತು" ಅಂತ ಕೈ ಎತ್ತಿ ಬಿಡುತ್ತಿದ್ದರು. ಈ ಎಲ್ಲಾ ವಿಪರ್ಯಾಸಗಳ ನಡುವೆಯೂ ಗುರ್‍ಯಾನಾಯ್ಕ ದೇಶದ ಬಗ್ಗೆ ತಿಳಿಯುವ ಹರಸಾಹಸ ಮಾಡಿದ್ದ.

ಗಾಂಧಿ ದಂಡಿ ಉಪ್ಪಿನ ಸತ್ಯಾಗ್ರಹ ಮಾಡಿದಾಗ ಜನರು ಸಾಗರೋಪಾದಿಯಲ್ಲಿ ಆತನ ಹಿಂದೆ ಬೆಂಬಲ ಕೊಟ್ಟಿದ್ದರು. ಈ ಸುದ್ದಿ ಶಾನುಭೋಗ ಗುರ್‍ಯಾನಾಯ್ಕನಿಗೆ ಹೇಳಿದ. "ನೋಡಲೇ ಗುರ್‍ಯಾ ನಿನ್ನೆ ಮೊನ್ನೆ ಬಂದ ಗಾಂಧಿ ಜನರನ್ನ ಹೆಂಗಮಳ್ಳು ಮಾಡಿದ. ಅಲ್ಲಪ್ಪ ಉಪ್ಪು ತಿನ್ನಬೇಕು ಅಂತ ಏನೈತೆ. ತಿನ್ನೋದಾದ್ರ ಅದಕೆ ತೆರಿಗೆ ಕೊಡೋಣ" ಅಂದ. "ಅಲ್ಲ ಬುದ್ದಿ ಉಪ್ಪು ನಮ್ಮ ಸ್ವತ್ತು, ನಮ್ಮ ಸಮುದ್ರಗಳಲ್ಲಿ ತಾನೆ ತಯಾರಾಗೋದು ಅಂದ ಮೇಲೆ ಈ ನನಮಕ್ಕಳು ಕೆಂಪು ಮೂತಿಯವರಿಗೆ ತೆರಿಗೆ ಯಾಕೆ ಕೊಡಬೇಕು?" ಮೊದಲ ಬಾರಿಗೆ ಆಕ್ರೋಶದಿಂದ ಮಾತಾಡಿದ್ದ ಗುರ್‍ಯಾನಾಯ್ಕ ಅವನು ಕ್ರೋದಿತನಾಗಿರುವುದನ್ನು ಗಮನಿಸಿದ ಪ್ರಹ್ಲಾದಭಟ್ಟರು. "ಏನೂ ಅರಿಯದ ಆದಿವಾಸಿ ಲಮಾಣಿಯುವಕನೆ ಈ ವಿಷಯಕೇಳಿ ಆಕ್ರೋಶಗೊಂಡ, ಅಲ್ಪಸ್ವಲ್ಪ ದೇಶಾಭಿಮಾನಿಗಳು, ತಿಳುವಳಿಕೆ ಉಳ್ಳವರು ಸಿಡಿದೇಳುವುದರಲ್ಲಿ ತಪ್ಪಿಲ್ಲ, ಏನೊ ಎಡವಟ್ಟು ಆಗೋಹಾಗೆ ಕಾಣುತ್ತೆ. ಹಿಂಗೇನಾದರು ಸಂಭವಿಸಿದ್ದೇ ಆದರೆ ನನ್ನ ಶಾನಬೋಗಿಕೆ, ಬಂಗಲೆ, ಈ ಗರಿಗರಿ ಬಟ್ಟೆ, ಘಮ್ಮೆನ್ನುವ ತುಪ್ಪ ಅನ್ನ ಎಲ್ಲವೂ." ಸ್ವಲ್ಪ ಹೊತ್ತು ಆಲೋಚನೆಯಲ್ಲಿ ಮುಳುಗಿದ. "ಬುದ್ಧಿ ಸಣ್ಣ ಮನುಷ್ಯ ದೊಡ್ಡ ಮಾತು ಕ್ಷಮಿಸಿ, ಈ ಗಾಂಧಿ ಅನ್ನೋನು ಅಷ್ಟು ಧಾಡ್ಸಿ ಅದಾನಂತಿರ." ಪ್ರಶ್ನೆ ಮಾಡಿದ. ಆಲೋಚನೆಗಳು ತುಂಡಾದವು. "ಹೂಂ ಕಣಲೆ, ಅವನ ತಾವ ಎರಡು ಅಸ್ತ್ರಗಳಾದವ. ಒಂದು ಸತ್ಯ, ಇನ್ನೊಂದು ಅಹಿಂಸೆ. ಇದೆರಡನ್ನು ಹಿಡ್ಕೊಂಡು ಅಂಗಿ ಬಿಚ್ಚಿ ಬರಿ ಪಂಚೆ ಮೇಲೆ ಹೊಂಟುಬಿಟ್ಯಾನ ಮುದುಕ. ಏನು ಮಾಡ್ತಾನ ನೋಡಬೇಕು." ಆತನ ಮಾತಿನಲ್ಲಿ ಅಸಮಾಧಾನ ವ್ಯಕ್ತವಾಗಿತ್ತು. ಹಿಂದೆ ಚೂರುಪಾರು ಗಾಂಧಿ ಕುರಿತು ಕೇಳಿದ ಗುರ್‍ಯಾನಾಯ್ಕ ತಾಂಡಕ್ಕೆ ಹೋಗಿ ನೆರದ ಮಂದಿಗೆ ಬಣ್ಣ ಬಳಿದು ಗಾಂಧಿ ಕತೆಗಳನ್ನು ಹೇಳತೊಡಗಿದ. ಗಾಂಧೀಜಿಯವರ ಹೋರಾಟ ಅದರ ನಡುವೆ ಬಂದ ಸುಭಾಷ್ ಚಂದ್ರ ಬೋಸ್, ಭಗತ್ ಸಿಂಗ್, ಸುಖದೇವ್, ಚಂದ್ರಶೇಖರ್‌ಆಜಾದ್ ಮುಂತಾದ ಯುವಕರನ್ನ ನೇಣುಹಾಕಿದ್ದು, ಸುಭಾಷ್‌ಚಂದ್ರ ಬೋಸ್ ಸತ್ತಿದ್ದು ಆತ ಹೇಗೊ ತಿಳಿದುಕೊಂಡಿದ್ದ. ಬಾಪು ಬೆಳಗಾವಿಗೆ ಕಾಂಗ್ರೆಸ್ ಅಧಿವೇಶನಕ್ಕೆ ಬಂದಾಗ ಎಲ್ಲೆಲ್ಲೊ ಕಾಸು ಜೋಡಿಸಿ

ಬೆಳಗಾವಿಗೆ ಹೊರಟು ಬಿಟ್ಟ. ಆವಾಗ ಗುರ್‍ಯಾನಾಯ್ಕನ ಮದುವೆಯಾಗಿ ಹೆಂಡತಿ ತುಂಬುಗರ್ಭಿಣಿ. ಜನಸಮೂಹದಲ್ಲಿ ಅವನಿಗೆ ಗಾಂಧೀಜಿಯವರನ್ನ ಹತ್ತಿರದಿಂದ ನೋಡಲು ಆಗಲೇ ಇಲ್ಲ. ಮಂದಿ ಮಾತ್ರ ಆತನ ಹೆಜ್ಜೆಯ ಗುರುತಿಗೆ ನಮಸ್ಕಾರ ಮಾಡಿ ಗಾಂಧಿಯನ್ನ ಭೆಟ್ಟಿಯಾದಂತೆ ಪುಳಕಿತಗೊಂಡು ಪುನೀತರಾಗಿದ್ದರು. ಅಲ್ಲಿಂದ ವಾಪಾಸಾದ ಗುರ್‍ಯಾನಾಯ್ಕನಿಗೆ ಗಂಡು ಮಗು ಆಗಿತ್ತು. ಆಗಲೆ ಅವನಿಗೆ ಗಾಂಧಿನಾಯ್ಕ ಅಂತ ಹೆಸರು ಇಟ್ಟಿದ್ದ. ಅಷ್ಟೆ ಅಲ್ಲ ಆತನಂತೆ ಜುಬ್ಬಾ ಗಾಂಧಿ ಟೋಪಿ, ಧೋತ್ರ ಬರಿಗಾಲ ನಡಿಗೆ. ಇಡೀ ಸುತ್ತಮುತ್ತಲ ಊರುಗಳಿಗೆ ಗಾಂಧೀಜಿಯನ್ನ ಪರಿಚಯಿಸಿದ. ಅದಾದ ಸ್ವಲ್ಪ ದಿನಗಳಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕು ಕೆಂಪು ಮಂದಿ ಭಾರತವನ್ನು ಬಿಟ್ಟು ತೊಲಗಿದರು. ನಮ್ಮದೆ ದೇಶ, ನಮ್ಮದೆ ಅಧಿಕಾರ, ನಮ್ಮದೆ ಸ್ವಾತಂತ್ರ್ಯ ಬಂದಾಗ ಆತ ಬಹಳ ಖುಷಿಪಟ್ಟಿದ್ದ. ಹೆಚ್ಚು ಕಡಿಮೆ ಅವನದೆ ವಯಸ್ಸಿನ ಪ್ರಹ್ಲಾದಭಟ್ಟ ಬ್ರಿಟಿಷರ ನಂತರದ ತನ್ನ ಪರಿಸ್ಥಿತಿಯನ್ನು ಆಲೋಚನೆ ಮಾಡಿಕೊಂಡವನೆ ಕಂಡಿಪುರವನ್ನು ಬಿಟ್ಟ ಹರಿಹರ ಪಟ್ಟಣವನ್ನು ಸೇರಿದ್ದ. ಕಂಡಿಪುರ, ದುರ್ಗಪುರದಲ್ಲಿನ ಆಸ್ತಿಯನ್ನ ರೈತರಿಗೆ ಕೋರಿಗೆ ಕೊಟ್ಟ ಬಂದಿದ್ದ. ಮುಂದೆ ಇಂದಿರಾಗಾಂಧಿ ಸರ್ಕಾರ ಬಂದಾಗ ಉಳುವವನೆ ಒಡೆಯ ಎನ್ನುವ ಕಾನೂನು ತಂದು ಭೂಮಿಯನ್ನು ಕಳೆದುಕೊಂಡು ದಿವಾಳಿಯಾದ ಅಂದು ಕೊಂಡವರು ಮುಠ್ಠಾಳರು. ಆಸ್ತಿಯನ್ನು ಅವನ ಮೊಮ್ಮಕ್ಕಳು ಹುಟ್ಟದೆ ಇರುವವರ ಹೆಸರಿಗೆ ಮಾಡಿ ಅಲ್ಪಸ್ವಲ್ಪ ಜಮೀನು ಉಳಿಸಿಕೊಂಡಿದ್ದ. ಗೂರಜ್ಜ ಮಾತ್ರ ಗಾಂಧೀಜಿಯ ಹೋರಾಟವನ್ನು ಹುಲಿಯೂರನಂತಹವರಿಗೆ ಪ್ರತಿದಿನ ಒಂದೇ ಕತೆಯನ್ನ ವಿಸ್ತಾರವಾಗಿ ಹೇಳುತ್ತಿದ್ದ.

* * *

40. ಕೆಂಪುಮಂದಿಯನ್ನು ಕಂಡಿದ್ದ ಕೆಂದನಮ

ಭದ್ರನಾಯ್ಕನ ತಾಂಡ ದುರ್ಗಪುರ, ದೇವಳ್ಳಿ, ಕಾರಿಗನೂರುಗಳನ್ನ ದಾಟಿ ಎಂಟು ಹತ್ತು ಮೈಲಿ ದೂರ ಕ್ರಯಿಸಿದರೆ ಹರಿಹರ ಸಿಗುತ್ತಿತ್ತು. ಹರಿಹರ ತಡಾದರೆ ದಾವಣಗೆರೆ ಮುಖ್ಯರಸ್ತೆ. ಆಗ ದಾವಣಗೆರೆ ಏನು ಅಂತ ದೊಡ್ಡ ಪಟ್ಟಣವಾಗಿರಲಿಲ್ಲ. ಸಂತೆಗೆ, ಖರೀದಿಗೆ, ಅಡ್ತಿ ಅಂಗಡಿಗೆ ಹೋಗಬೇಕೆಂದರೆ ದಾವಣಗೆರೆ ಬಿಟ್ಟರೆ ಹರಿಹರಕ್ಕೆ ಬರಬೇಕಿತ್ತು. ಕಟ್ಟಿಗೆ ಸುಟ್ಟು ಇದ್ದಲು ಮಾರುವುದು, ಅಣಬೆ, ಶೇಂಗಾದ ಬಂಡಿಗಳು ಒಂದಲ್ಲ ಒಂದು ನೆಪದಲ್ಲಿ ಪಟ್ಟಣಕ್ಕೆ ಬರಲೇಬೇಕಾಗುತ್ತಿತ್ತು. ಹಾಗಾಗಿ ಮಂದಿ ತಮ್ಮ ಚಕ್ಕಡಿ ಬಂಡಿ ಕಟ್ಟಿಕೊಂಡು, ಇಲ್ಲ ನಡೆದು ಬರುತ್ತಿದ್ದರು. ಕೆಂದನಮ ಕೆಳಗಿನ ಓಣಿಯಲ್ಲಿ ಮನೆ ಕಟ್ಟಿಕೊಂಡು ನಾಕ್ಯೆದು ಎಕ್ಕರೆ ಜಮೀನು ಮಾಡಿಕೊಂಡು ಇದ್ದ. ಯಾವೂರಿಂದ ಬಂದುನೆಲೆಸಿದ್ದ, ಯಾವಾಗ ಬಂದಿದ್ದ ಯಾರಿಗೂ ಮಾಹಿತಿ ಇರಲಿಲ್ಲಾ. ಆದರೆ ಅವನು ಊರೊಳಗೆ ಗುಡಿಸಲು ಹಾಕಿಕೊಂಡು ಎರಡು ಎತ್ತುಗಳು ಒಂದು ಚಕ್ಕಡಿ ಬಂಡಿಯನ್ನು ಇಟ್ಕೊಂಡಿದ್ದ. ಅವನ ತಂದೆ ಕರಿ ಹನುಮ ತಾಯಿ ಬೋಳಮ್ಮ ಮಗನ ಕೆಸಲದಲ್ಲಿ ಕೈಜೋಡಿಸಿ ಇರುವ ಒಂದೇ ಮನೆ ಎಲ್ಲರಿಗೂ ಪ್ರಿಯರಾಗಿ ಎಲ್ಲರ ಜೊತೆಗೆ ಬೆರೆತು ಹೋಗುವುದು ಅನಿವಾರ್ಯವಿತ್ತು. ಹಾಗಾಗಿಯೇ ಅವನು ಯಾರಿಗೂ ಬಿರುನುಡಿ ಆಡಿದವನೆ ಅಲ್ಲ. ತಾಂಡದ ಉಸಾಬರಿ ಮಾಡಿದವನ್ನಲ್ಲ. ತಾನಾಯ್ತು ತನ್ನ ದುಡಿಮೆಯಾಯಿತು ಅಷ್ಟಕ್ಕೆ ಸೀಮಿತವಾಗಿದ್ದ. ಬೇರೆಯವರ ಬಗ್ಗೆ ತಲೆನೇ ಕೆಡಿಸಿಕೊಳ್ಳುತ್ತಿರಲಿಲ್ಲಾ. ವಯಸ್ಸಿಗೆ ಬಂದ ಮಗನಿಗೆ ಅವರ ಕುಲಸ್ಥ ದುರ್ಗಾಪುರದ ದೇವುಗನ ಮಗಳು ಮಾತಂಗವನ್ನ ಕೊಡ ಮದುವಿ ಮಾಡಿಸಿದರು. ಶ್ರಮಜೀವಿಯಾಗಿದ್ದ ಕೆಂದನಮ, ಯಾರಾದರೂ ಬಾಡಿಗೆ ಸಿಕ್ಕರೆ ಹೊಡೆಯುವುದು ಸಿಗದಿದ್ದರೆ ಮನೆ ಕೆಲಸ ಮಾಡುವುದು, ಎತ್ತುಗಳಿಗೆ ಮೇವು, ನೀರು ನೋಡುವುದಷ್ಟೆ ಕೆಲಸ ಮಾಡಿಕೊಂಡಿದ್ದ.

ಅವತ್ತು ಅವನ ಬಂಡಿ ಹೇರು ಹೆಚ್ಚಾಗಿತ್ತು. ಬಹಳ ಸೂಕ್ಷ್ಮವಾಗಿ ಹೊಡೆಯುತ್ತಿದ್ದ ಎತ್ತುಗಳನ್ನು "ಏಯ್ ಬಸವ ಕುರವೆತ್ತಿ ಹೋಪ್ಲ" ಅಂತ ಹರಿಹರದ ಸರ್ಕಲ್ಲಿಗೆ ಬಂದ. ಮಂದಿ ಗುಂಪು ಅಲ್ಲಲ್ಲೇ ತಂಡ ತಂಡವಾಗಿ ನಿಂತು ಕೆಂಪು ಮಂದಿ ಬರೋದನ್ನೇ ನೋಡುತ್ತಿದ್ದರು. ಹರಿಹರದ ಪೊಲಿಸರು ಕೆಂದನಮನಿಗೆ ಬಾಯಿಗೆ

ಬಂದಂತೆ ಬೊಯ್ದು ಸರ್ಕಲಿನ ಮೂಲೆಯೊಂದರಲ್ಲಿ ಕುಳ್ಳರಿಸಿದರು. "ಲೇ ಬದ್ಮಾಷ್, ದಣಿಗಳು ಹೋಗುತ್ತಿರುವುದು ಕಾಣುತ್ತಿಲ್ವಾ ನಿನ್ನ ಕಣ್ಣಿಗೆ, ನಿಗರಿಸಿಕೊಂಡು ಚಕ್ಕಡಿ ಹೊಡ್ಕೊಂಡ ಬಂದಿಯಾ" ಒಂದೆರಡು ಬಿಟ್ಟರು. "ಇಲ್ಲ ಅಯ್ಯ ತೆಪ್ಪಾತು, ಗೊತ್ತಾಗಲಿಲ್ಲಾ" ತಪ್ಪು ಒಪ್ಪಿಕೊಂಡ. "ಬಿಳು ನೆಲದ ಮೇಲೆ" ಅಂತ ಕೆಲವರು ಗುಲಾಮರಂತೆ ನೆಲದ ಮೇಲೆ ಬಿದ್ದಿರುವುದನ್ನು ನೋಡಿದ್ದ ಅವರಂತೆ ಇವನು ಅಡ್ಡಬಿದ್ದ. ಓರೆಗಣ್ಣಿನಿಂದಲೇ ಅವರ ಕಡೆಗೆ ನೋಡಿದ. "ನಮ್ಮಂದಿಗಿಂತ ನೂರು ಪಟ್ಟು ಕೆಂಪಗದಾರಲ್ಲ ಫಿರಂಗಿಗಳು. ಯವ್ವಯವ್ವ ಕೆಂಪಗೆ ರಕ್ತದ ಹನಿ ಆಗ್ಯಾರ" ಮನಸ್ಸಿನೊಳಗೆ ಒಬ್ಬನೆ ಮಾತಾಡಿಕೊಂಡ. ಅವನ ಪಕ್ಕದಲ್ಲೇ ಮತ್ತೊಬ್ಬ ಹಳ್ಳಿಯವನು ಅಡ್ಡಾಗಿದ್ದವನಿಗೆ "ಎಲ್ಲಿಂದ ಬಂದಾರ? ಎಲ್ಲಿಗೆ ಹೊಂಟಾರ?" ಕೇಳಿದ ಕೆಂದನಮ ಯಾಮಾಗನಿಗೆ ಗೊತ್ತು, ಕೆಂಪ ಮಂದಿ ಬರ್ತಾರಂತ ಊರಾಗ ಯಾರೊ ಹೇಳಿದ್ದ. ಅವನವ್ವನ ಹೆಂಗಾರ ಅದಾರ ನೋಡೆ ಬಿಡೋಣ ಅಂತ ಮುಂಜಾನೆ ಹೊತ್ತಾರೆ ಎದ್ದು ಕಡ್ತಿಯಿಂದ ನಡ್ಕೊಂಡ ಬಂದಿವಿ. ಸಾರ್ಥಕ ಆತು. ಮುಂದ ನಮ್ಮ ಮೊಮ್ಮಕ್ಕಳಿಗೆ ಹೇಳಾಕಾದರೂ ಆಯ್ತು. ಲೇ ತಮ್ಮ ನಾನು ಕೆಂಪ ಮಂದಿನ ಖುದ್ದಾಗಿ ನೋಡಿನಿ ಅಂತ." ಹೆಮ್ಮೆಯಿಂದಲೇ ಹೇಳಿಕೊಂಡಿದ್ದ ಆತ. "ಸತ್ಯ ಬಿಡಣ್ಣ, ಜೀವನ ಸಾರ್ಥಕ ಆತು. ನೂರಿನ್ನೂರು ವರ್ಷಗಳಿಂದ ನಮ್ಮನ ಆಳುತ್ತಿರುವವರು ಹೆಂಗದಾರ ಅಂತ ನೋಡದಿದ್ರೆ ಮುಂದೊಂದು ದಿನ ನಮ್ಮ ಮಕ್ಕಳು ಮೊಮ್ಮಕ್ಕಳು ಕೇಳಿದರೆ ಹೇಳಾಕಬೇಕಲ್ಲ. ಪಾಡಾತನೋಡು ಇವತ್ತು ಈ ಮಂದಿ ಬಂದಿದ್ದು" ಅಂದವನೆ ತನ್ನ ಮನೋಭಿಪ್ಸೆಯನ್ನ ವ್ಯಕ್ತಪಡಿಸಿದ್ದ. "ಯಣ್ಣ ಅವರ ಕುದ್ರಿನಾರ ನೋಡ ಮರಾಯ ಹೆಂಗದಾವ. ಅಲ್ಲ ಇವೇನು ನಮ್ಮ ದೇಶದವೂ ಇಲ್ಲ ಬರ್ತಾ ಅಲ್ಲಿಂದಲೇ ಹೊಡ್ಕೊಂಡು ಬಂದಾರ." ತನ್ನ ಮುಗ್ಧತೆಯನ್ನು ವ್ಯಕ್ತಪಡಿಸಿದ್ದ. "ಅಲ್ಲಪ್ಪ ಅವರೇನು ನಮ್ಮಂಗೆ ಹತ್ರದವರೇನು? ಹೊಡ್ಕೊಂಡ ಬರಾಕ. ನಮ್ಮ ಶಾನಬೋಗರು ಹೇಳ್ತಿದ್ದರು. ಹಡಗಲ್ಲಿ ಬರಾಕ ಎಷ್ಟೊ ದಿನಗಳು ಬೇಕಂತೆ ಅವರಿಗೆ ಅಂದ ಮೇಲೆ ಅಲ್ಲಿಂದ ತರಾಕ ಸಾಧ್ಯವಾದಿತೇನು" ಅವನಿಗೆ ತಿಳಿದ ಮಾಹಿತಿಯನ್ನು ಕೊಟ್ಟ.

ಫಿರಂಗಿಗಳು ಹರಿಹರ ಬಿಟ್ಟಾಗ ಸಂಜೆಯಾಗಿತ್ತು. ಕೆಂದನಮ ಚಕ್ಕಡಿಯಿಂದ ಚೀಲಗಳನ್ನು ಇಳಿಸಿ ವಾಪಾಸು ಹೊರಡುವುದಕ್ಕೆ ಕತ್ತಲಾಗುತ್ತೆ. ಏನ ಮಾಡೋದು ಅಂತ ಆಲೋಚನೆ ಮಾಡತೊಡಗಿದ. ಅಂಗಡಿಯಲ್ಲಿ ಹಮಾಲಿಗಳು ಇರಬೇಕು, ಹೇಳಿ ತಕ್ಷಣ ಚೀಲ ಇಳಿಸಬೇಕು, ಅಸಾಧ್ಯದ ಕೆಲಸ ಅಂತ ಅನಿಸಿತು. ರಾತ್ರಿ ಹಾಲ್ಟ ಮಾಡಿ ಮುಂಜಾನೆ ಹೊತ್ತಾರೆ ಬಂಡಿ ಹೊಡ್ಕೊಂಡು ಹೊದರಾತು ಅಂತ ಒಮ್ಮೆ ಆಲೋಚನೆ ಬಂತು. ಹಾಂಸಭಾವಿಕಳಕಪ್ಪನ ಅಂಗಡಿಗೆ ಹೋದಾಗ ಹೊತ್ತು ವಾಲಿತು. ಅವನ ಪುಣ್ಯಕ್ಕೆ ಹಮಾಲಿಗಳಿದ್ದರು. ಪಟಪಟ ಚೀಲ ಇಳಿಸಿದರು.

"ಅಣ್ಣ ಯಾರದಾರ ಮಾಲಿಕರು" ಹಮಾಲಿಯೊಬ್ಬ ಕೇಳಿದ. "ಸಾಹುಕಾರರು ಮುಂಜಾನೆ ಬರ್ತಾರ, ಇಳಿಸಿಕೊಂಡು ನಿಟ್ಟು ಹಾಕ್ರಿ" ಅಂದವನೆ ಅವನ ಭಾಡಗಿ ಕಾಸು ಪಡೆದುಕೊಂಡ. ಸ್ವಲ್ಪದೂರ ನಡೆದಾಗ ಭತ್ತದ ಹುಲ್ಲು ಕಾಣ್ತು ಒಂದು ತಬ್ಬು ತಂದವನೆ ಎತ್ತುಗಳನ್ನು ಬಂಡಿ ಮೊಕಕ್ಕೆ ಕಟ್ಟಿ ಹುಲ್ಲು ಹಾಕಿ ಬಾಡಿಗೆಯನ್ನು ಜೋಪಾನವಾಗಿ ಪಂಚೆಯ ತುದಿಗೆ ಗಂಟುಕಟ್ಟಿ ನಿಕ್ಕರಿನಲ್ಲಿ ಸಿಗಸಿದ. ಅಲ್ಲೆ ಹೊಟೇಲಿನಲ್ಲಿ ಸಿಕ್ಕ ತಿಂಡಿಯನ್ನು ತಿಂದವನೆ ಬಂಡಿಯ ಮೇಲೆ ಮಲಗಿದ. ಮುಂಜಾನೆ ಹೊತ್ತಾರೆ ಬಂಡಿ ಕಟ್ಟಿಕೊಂಡು ಹೊರಟ. ಊರು ಸೇರಿದಾಗ ಹೊತ್ತು ನೆತ್ತಿ ಮೇಲೆ ಬಂದಿತ್ತು. ಊಟ ಮಾಡಿದವನೆ ಎತ್ತುಗಳನ್ನು ಬಿಚ್ಚಿ ನೀರು ಕುಡಿಸಿದವನೆ ಮೇಯಿಸಲು ಹೊಡೆದುಕೊಂಡು ಹೊರಟ. ಎತ್ತು ಮೇಯಿಸುತ್ತಿರುವಾಗ ಅಲ್ಲೆ ಎತ್ತು ಮೇಯಿಸುತ್ತಿದ್ದ ತಿಪ್ಪಾನಾಯ್ಕ ಕಂಡ, "ಏನೋ ಕೆಂದನಮಣ್ಣ ಬಂಡಿ ಲೋಡು ಇಳಿಸಿಬಂದೆಯೋ ಹೇಗೆ?" ಕೇಳಿದ. "ಹೂನಣ್ಣ ಹೊತ್ತಾರೆ ಬಂದುಬಿಡುತ್ತಿದ್ದೆ ಆದ್ರ ಫಿರಂಗಿ ಮಂದಿ ಹೊರಟಿದ್ದರು. ಯಾರನ್ನೂ ತಿರುಗಾಡೊದಕ್ಕೆ ಬಿಡುತ್ತಿರಲಿಲ್ಲಾ. ಪೋಲಿಸರು ನಮ್ಮ ಬಂಡಿಗಳನ್ನು ಕೊಳ್ಳಹರಿಸಿ ಮೂಲಿಯೊಳಗೆ ನಿಲ್ಲಿಸಿದರು. ಎಂಥೆಂಥ ಕುದುರಿಗಳು ಅಂತೀನಿ ಹತ್ಕೊಂಡ ಕೆಂಪಮಂದಿ ಬಂದ್ರು ನೋಡು ಎದಿ ಡವಡವ ಹೊಡ್ಕೊಳ್ಳಾಕತ್ತು. ಬಾಯಿ ಬಿಟ್ಕೊಂಡು ನೋಡ್ತಾ ನಿಂತ್ವಿ. ಅವರು ಹೋಗುವಷ್ಟೊತ್ತಿಗೆ ಕತ್ತಲ್ಲಾತು. ಇನ್ನು ಆ ಕೌಳದಾಗ ಏನಬರೋದು ಅಂತ ಉಳ್ಕೊಂಡ ಹೊತ್ತಾರೆ ಬಂದೆ" ನಡೆದ ಘಟನೆಯನ್ನ ಸಂಪೂರ್ಣವಾಗಿ ವಿವರಿಸಿದ.

ಕೆಂದನಮ ಮದುವಿಯಾಗಿ ಮಕ್ಕಳಾಗಿ ಮೊಮ್ಮಕ್ಕಳಾದರೂ ಕೆಂಪುಮಂದಿಯನ್ನು ನೋಡಿದ ಘಟನೆಯನ್ನು ಮಾತ್ರ ಮರೆಯಲೇ ಇಲ್ಲ. ಇಡೀ ಊರಲ್ಲಿ ಅವನೊಬ್ಬನೆ ಕೆಂಪು ಮಂದಿಯನ್ನು ತೀರ ಹತ್ತಿರದಿಂದ ನೋಡಿದವನು. ಯಾರಿಗಾದರೂ ಏನಾದರೂ ಮಾಹಿತಿ ಬೇಕಾದರೆ ಇಲ್ಲಿ ಸನ್ನಿವೇಶ ಬಂದರೆ ಆತನೆ "ಲೇ ತಮ್ಮ ಇನ್ನೂರ ವರ್ಷ ಆಳಿದ ಅತಿ ಬುದ್ಧಿವಂತರು ಅನಿಸಿಕೊಂಡಿದ್ದ ಫಿರಂಗಿಗಳನ್ನೇ ನೋಡಿನಿ ನಿಂದೇನ ಹಚ್ಚಿಹೋಗಲೇ" ಜಾಡಿಸುತ್ತಿದ್ದ. ಯಾವುದಾದರೂ ಪ್ರಸಂಗ ಬಂದಾಗ "ಅದೇನು ಗತ್ತು, ಅದೇನು ಗಮ್ಮತ್ತು, ವೇಷ, ಭೂಷಣ, ಅವರ ನಡೆ ನುಡಿ ನೋಡಬೇಕು. ಆರು ಅಡಿ ಎತ್ತರ ಕೆಂಪಗೆ ಎಲ್ಲಿಂದ ನೋಡು ಕೆಂಪು ಕೂದಲು ಕೆಂಚು ಅಂತಿನಿ. ನಿಗಿನಿಗಿ ಉರಿವ ಕಣ್ಣುಗಳು, ನಮ್ಮಂಥ ಮಂದಿ ಅವರನ್ನ ನೋಡಿಯೆ ಒಂದಾ ಮಾಡ್ಕೋಂತೀವಿ ಹಂಗಿದ್ರು ಫಿರಂಗಿಗಳು. ಅದಕ್ಕೆ ಬಿಡಪ್ಪ ಸೂಳಿಮಕ್ಕಳು ನಮ್ಮ ದೇಶನ ಇನ್ನೂರವರ್ಷ ಆಳಿದ್ರು." ರಾಮಾಯಣ ಮಹಾಭಾರತದ ಕತೆ ಹೇಳಿದಂತೆ ಪ್ರತಿ ಸನ್ನಿವೇಶದಲ್ಲೂ ಹೇಳುತ್ತಿದ್ದ. ಮುಂದಿನ ತಲೆಮಾರಿಗೂ ತನ್ನ ವಿಷಯ ತಿಳಿಯಬೇಕು. ಕೆಂಪು ಮಂದಿನ ನೋಡಿದವನು ಇದ್ದ ಈ ತಾಂಡದಾಗ ನೆನಪಿರಬೇಕು ಮಂದಿಗೆ ಅಂತ ಸಾಲಿಗ ಹೋಗೋ ಹುಡುಗರನ್ನ ಸೇರ್ಸಿ ಅವರಿಗೆ

ಸ್ವಾತಂತ್ರ್ಯ ಹೋರಾಟದ ಜೊತೆಗೆ ಆತ ಫಿರಂಗಿಗಳನ್ನು ನೋಡಿದ ಸನ್ನಿವೇಶವನ್ನು ರಸವತ್ತಾಗಿಯೇ ವಿವರಿಸಿದ್ದ. ಹುಲಿಯೂರ ಬೇರೆ ಊರಲ್ಲಿ ಓದುತ್ತಿದ್ದಾನೆ ಅಂದಾಗ ಅವನು ಬುದ್ಧಿವಂತ ಅನ್ನೋದು ಕೆಂದನಮಜ್ಜನ ವಾದ. "ಇಲ್ಲೆ ಎಲ್ಲರೂ ಓದ್ತಾರ್ಲೆ ತಮ್ಮ ಏನು ಓದ್ತಾರ? ಗೊತ್ತಿಲ್ಲ, ಎಮ್ಮಿ ಮೇಸೋದು. ಕುರಿ ಮೇಯಿಸೋದು ದನ ಮೇಯಿಸೋದು, ಬುತ್ತಿ ಕೊಡಾಕ ಹೋಗೋದು. ಇನ್ನೂ ಸಾಲಿ ಏನು ಓದತಾರ ಹುಡುಗ ಹೊರಾಗ ಅದಾನ ಅಂದ್ರ ಏನೊ ವಿಶೇಷ ಅಂತ ತಿಳ್ಕೊ." ಸರಿಯಾಗಿ ವಿವರಣೆ ನೀಡಿದ್ದ. ಹುಲಿಯೂರ ಅಂದ್ರೆ ಕೆಂದನಮಜ್ಜನಿಗೆ ಬಹಳ ಪ್ರೀತಿ. "ಈ ಹುಡುಗ ಮುಂದಕ್ಕ ಏನಾರ ಮಾಡ್ತನೋಡ್ರಪ್ಪ. ಆ ತಾಕತ್ತು ಐತೆ ಇವನಿಗೆ ಮುಖ ನೋಡಿದ್ರೆ ಹೇಳಬಹುದು. ಆ ತಾಯಿ ಸರಸ್ವತಿ ತಕತಕ ಕುಣಿತ್ತಿದ್ದಾಳೆ ಮುಖದಲ್ಲಿ ಲೇ ನಮ್ಮಂತ ಪಾಮರರಿಗೆ ವಿದ್ಯೆ ಬೆಲೆ ಏನು ಗೊತ್ತಾದೀತು. ಸರ್ವಜ್ಞ ಹೇಳಿಲ್ಲವೆ ವಿದ್ಯೆಯುಳ್ಳವನ ಮುಖ ಮುದ್ದು ಬರುವಂತಿಕ್ಕು ವಿದ್ಯೆ ಇಲ್ಲದವನ ಮುಖ ಹಾಳೂರು ಹದ್ದಿನಂತಿಕ್ಕು ಅಂತೇಳಿ ಹಂಗೇ ಅದೇನು ತೇಜಸ್ಸು, ಅದೇನು ವಿನಯ ಅಬಾ ಅಬಾ ಮಂದಿಗೆ ಕೊಡುವ ಗೌರವದಿಂದಲೇ ಗುರುತಿಸಬಹುದು. ಇವನೊಬ್ಬ ದೊಡ್ಡ ಪಂಡಿತ ಆಗ್ತಾನಂತ." ಮಂದಿ ಮತ್ತೊಬ್ಬರ ಮಕ್ಕಳನ್ನು ಹೊಗಳಿದರೆ ಸುಮ್ಮನಿದ್ದಾರೆಯೆ. ಕೇಳಿಯೂ ಕೇಳದಂಗೆ ಮಾಯವಾಗಿದ್ದರು. ಆದರೆ ಕೆಂದನಮಜ್ಜ ಅವನಿಗೆ ಗೊತ್ತಿದ್ದ ಅನೇಕ ವಿಷಯಗಳನ್ನು ಅವನಿಗೆ ಹೇಳುವಲ್ಲಿ ಯಶಸ್ವಿಯಾಗಿದ್ದ. ಹಾಗಾಗಿಯೇ ಹುಲಿಯೂರನಿಗೆ ಕೆಂದನಮಜ್ಜ ಅಂದ್ರೆ ವಿಶೇಷ ಆದರ ಅವನ ಓರಿಗೆಯ ಪ್ರತಿಯೊಬ್ಬರಿಗೂ "ಆ ಮುದುಕ ಕೆಂದನಮಜ್ಜ ಗೊತ್ತೆನಲೆ ಬಹಳ ಬುದ್ಧಿವಂತ. ತಲಿಯೊಳಗ ಏನೆಲ್ಲಾ ವಿಷಯಗಳದಾವ. ಅಷ್ಟೆ ಅಲ್ಲ ಪಿರಂಗಿ ಮಂದಿಯನ್ನ ಕಣ್ಣಾರೆ ನೋಡಿದ ಏಕೈಕ ವ್ಯಕ್ತಿ ಕೆಂದನಮಜ್ಜ" ಎಲ್ಲರಿಗೂ ಆತನ ಬಗ್ಗೆ ವಿವರಿಸಿದ್ದ. ಆತನ ಮಕ್ಕಳು ಆತನ ಬಗ್ಗೆ ಗೌರವ ಹೊಂದಿದ್ದಾರೊ ಇಲ್ಲವೋ ಗೊತ್ತಿಲ್ಲ ಹುಲಿಯೂರನಿಗೆ ಮಾತ್ರ ಗೊತ್ತಿತ್ತು.

ಮುದುಕ ಸತ್ತಾಗ ಹುಲಿಯೂರ ಧಾರವಾಡದಲ್ಲಿದ್ದ. ರಜೆಗೆ ಬಂದಾಗ ಕೆಂದನಮಜ್ಜ ಸತ್ತ ಸುದ್ದಿ ಯಾರೊ ಹೇಳಿದರು. ಹುಲಿಯೂರನಿಗೆ ಒಂದು ಕ್ಷಣ ಬೇಸರವಾಯಿತು. ಏಕೆಂದರೆ ಪರಂಪರೆಯ ಪ್ರತೀಕವಾಗಿದ್ದ ಕೆಂದನಮಜ್ಜ, ಹುಸೇನಿ, ದೊಡ್ಡ ಹನುಮ ಒಂದು ತಲೆಮಾರಿನವರು ಭೂಮಿಯ ಋಣವನ್ನು ತೀರಿಸಿ ಮೌನವಾಗಿದ್ದರು. ಹಿಂದಿನ ಇತಿಹಾಸ, ಘಟನೆಗಳು, ಪ್ರಸಂಗಗಳು, ಸನ್ನಿವೇಶಗಳು ಅವರ ಜೊತೆಗೆ ಇತಿಹಾಸ ಸೇರಿದ್ದವು. ಅವರ ವೈಯಕ್ತಿಕ ಬದುಕು ಏನೇ ಇದ್ದರು ಕೆಲವರಿಗೆ ಕೆಲವು ಸಂದರ್ಭದಲ್ಲಿ ಉಪಯೋಗಕ್ಕೆ ಬಂದಿದ್ದರು. ಕೆಲವರಿಗೆ ಮಾತ್ರ ನಾಯಕರಂತೆ ಅವರ ಮನಸ್ಸಿನೊಳಗೆ ಅಚ್ಚಳಿಯದೆ ಉಳಿದಿದ್ದರು.

* * *

41. ದೇವರು ಮೈಮೇಲೆ ಬಂದಾಗ

ರುಕ್ಮನಾಯ್ಕ ತಾಂಡದ ಪೂಜಾರಿ ಅಲ್ಲ, ಆದರೆ ನಗಾರಿ ಬಾರಿಸಿದೊಡನೆ ಅವನ ಮೈಯಲ್ಲಿ ತಾಂಡೆ ದುರ್ಗಮ್ಮ ಪವಡಿಸುತ್ತಿದ್ದಳು. ಪೂಜಾರಿಗೆ ರುಕ್ಮನ ಮೇಲೆ ಎಲ್ಲಿಲ್ಲದ ಕೋಪ. "ಸೂಳಿ ಮಗ ಮೈತೊಳಿಯಂಗಿಲ್ಲ, ಹೊಲಸಬಟ್ಟೆ, ಕೊಳಕು ಕೂದಲು ಅವನಿಗೇನು ದುರ್ಗವ್ವ ಒಲಿಯೋದಕ್ಕೆ ಸಾಧ್ಯ." ಕಂಡವರ ಮುಂದೆ ಆಲಾಪಿಸುತ್ತಿದ್ದ. ಅಂದರೆ ತನಗೆ ಒಲಿಯದ ದೇವರು ಇವನಿಗೆ ಹೇಗೆ ಒಲಿಯಲು ಸಾಧ್ಯ? "ಹಾ... ಹೂ... ಲೇ ಮಕ್ಕಳ್ರ..." ಜೋರಾಗಿ ಕೆಕೆ ಹೊಡೆಯುತ್ತಿದ್ದ. "ನನ್ನ ಮರೆತು ಬಿಟ್ಟರೇನ್ರೊ? ನೀವು ಉದ್ಧಾರ ಆಗೋದಿಲ್ಲ, ತಾಂಡಕ್ಕ ಗಂಡಾಂತರ ಬಂದಿದೆ ಸರ್ವನಾಶ ಆಗಿ ಹೋಗ್ತಿರಿ. ಯಾರು ಬದಕೋದಿಲ್ಲ, ಯಾರು ಬದಕೋದಿಲ್ಲ, ಹೂಂ.. ಹೂಂ..." ಜೋರಾಗಿ ಒದರುತ್ತಿದ್ದ. ಕುಡಿದ ಮಂದಿ ನಗಾರಿ ಬಾರಿಸೋದನ್ನ ನಿಲ್ಲಿಸಿ "ಯವ್ವ ತಾಯಿ ನಾವು ನರ ಮನುಷ್ಯರು. ತೆಪ್ಪಾಗ್ಯೆತೆ ಕ್ಷಮಿಸು." ಕುಡಿದಿದ್ದ ಮಂದಿ ಏನು ತಪ್ಪು ಮಾಡಿದ್ದರೊ. ಹುಲಿಯೂರನಿಗೆ ಅರ್ಥ ಆಗಲಿಲ್ಲಾ. ಅವನು ಸುಮ್ಮನೆ ನಾಟಕ ನೋಡುತ್ತಿದ್ದ. "ಅಲ್ಲವ್ವ ಹೋದ ವರ್ಷ ಪೂಜೆ ಮಾಡಿವಿ. ಮನೆ ಮನೆ ಹಬ್ಬ ಮಾಡಿ ನಿನಗೆ ಕುರಿ ಕಡಿದು ದೊಡ್ಡ ಹಬ್ಬ ಮಾಡಿದಿವಿ ಆದರೂ ನಿನಗೆ ತೃಪ್ತಿಯಾಗಲಿಲ್ವಾ" ಮೂಲೆಯಲ್ಲಿ ಗೊರಕೆ ಹೊಡೆಯುತ್ತಿದ್ದ ಹನುಮಂತ ಎದ್ದವನೆ ಬೊಯ್ಯುವ ರೀತಿಯಲ್ಲಿ ಹೇಳಿದ. "ಎಷ್ಟು ವರ್ಷ ಆಯ್ತೊ ಹಬ್ಬ ಮಾಡಿ, ನನ್ನ ಮರೆತುಬಿಟ್ಟರಿ. ಹಸರಮರಿ ಕಡಿಲಿಲ್ಲಾ, ಉಡಿ ತುಂಬಲಿಲ್ಲಾ, ತಾಂಡಕ್ಕ ತಾಂಡಾನೆ ಸರ್ವನಾಶ ಆಗೋ ಕಾಲ ಬಹಳ ದೂರ ಉಳಿದಿಲ್ಲ." ಮತ್ತೊಮ್ಮೆ ಜೋರಾಗಿ ಒದರಿದ ರುಕ್ಮನಾಯ್ಕ ಪೂಜಾರಿ, "ಏಯ್ ಎಲ್ಲಿ ಹಚ್ಚಿರಿ, ಅವನು ಸುಳ್ಳೆ ನಾಟಕ ಮಾಡ್ತವ್ನೆ, ನಂಬಬೇಡ್ರಿ, ತಾಯಿ ದುರ್ಗವ್ವ ನನ್ನ ಬಿಟ್ಟು ಅವನ ಮೈಯೊಳಗೆ ಪ್ರವೇಶ ಮಾಡುವುದು ಅಸಾಧ್ಯದ ಮಾತು" ಜೋರಾಗಿ ಕೂಗಿದ. ಅವನ ಬಗ್ಗೆ

ಯಾರು ತಲೆಕೆಡಿಸಿಕೊಳ್ಳಿಲ್ಲಾ. ಅಷ್ಟೊತ್ತಿಗೆ ಯಾರೊ ಬೇವಿನ ತಪ್ಪಲು ತರೋದಕ್ಕೆ ಹೋದವರು. ತಂದು ಆತನ ಕೈಯೊಳಗೆ ಹಿಡಿಸಿದರು. "ಸಮಾಧಾನ ಮಾಡಿಕೋ ನಮ್ಮವ್ವ ನನ ತಾಯಿ ನಾವು ಕರಿತಲಿ ಮನುಷ್ಯರು. ನೀನು ನಮ್ಮ ಭೂತ, ಭವಿಷ್ಯವನ್ನು ಬಲ್ಲವಳು, ನಿನ್ನ ಬಿಟ್ಟು ನಾವಿಲ್ಲ. ಏನೊ ಕಷ್ಟಕಾಲ ಬಂದೈತೆ ಮಳೆ ಇಲ್ಲಿ ಬೆಳೆ ಇಲ್ಲ ಕೂಲಿಸಿಗೋದ ಜಡ ಇರೊ ವ್ಯಾಳೆದಾಗ ಎಲ್ಲಿಂದ ಖರ್ಚು ಮಾಡಾಕ ಆದೀತು" ದರಗಿಬಾಯಿ ಹೇಳಿದಳು. "ಖರೆ ಹೇಳಿದೆ ನೋಡು, ಮಂದಿ ಬದಕೋದ ಜಡ ಇದೆ, ಉಣ್ಣಾಕ ಕೂಳಿಲ್ಲ ಅದೆಂಗೆ ಹಬ್ಬ ಮಾಡ್ತಾರ. ನೀನೇನು ಕುರುಡಿನಾ ನಿನ್ನ ಕಣ್ಣಿಗೆ ಕಾಣಲ್ಲೇನು? ನಿನಗ ಬಿಟ್ಟು ನಾವದೀವ." ಥಾವರಿಬಾಯಿ ದೇವರು ಅನ್ನೋದನ್ನು ನೋಡದೆ ಕೊಡವಿದಳು, ಎಲ್ಲರ ಮಾತುಗಳನ್ನು ಧ್ಯಾನ ಕೊಟ್ಟು ಕೇಳುತ್ತಿದ್ದ ರುಕ್ಮ ಅದಕ್ಕೆ ಪ್ರತಿಯಾಗಿ ಮತ್ತೊಂದು ಉತ್ತರ ಸಿದ್ದಗೊಳಿಸಿಕೊಂಡಿರುತ್ತಿದ್ದ. "ದೊಡ್ಡ ಪ್ರಮಾಣದಲ್ಲಿ ಮಾಡದಿದ್ದರೂ ಸಣ್ಣ ಪ್ರಮಾಣದಲ್ಲಿ ಮಾಡಬೇಕು ಕಣ್ರೋ. ನಮ್ಮ ಪರಂಪರೆ ಹಾಳಾಗೋದಕ್ಕೆ ನೀವು ಬಿಟ್ಟಬಿಡ್ತಿರಾ ಹೇಳ್ರಿ." ರುಕ್ಮ ಹೇಳ್ತಾನೆ ಇದ್ದ ಕುಡಿದ ಮಂದಿನೂ ಕೇಳ್ತಾ ಇದ್ರು, ಸವಾಲು ಪಾಟಿಸವಾಲು ನಡೆದೆ ಇತ್ತು. "ಅಲ್ಲಾ ಪಟ್ಟಣಗಳಲ್ಲಿ ದೇವರ ದರ್ಶನಕ್ಕೆ ದೊಡ್ಡ ಲೈನುಗಳು ನಿಂತಿರುತ್ತವೆ. ಇಲ್ಲಿ ದೇವರು ನೇರವಾಗಿ ಮನುಷ್ಯರ ಕೂಡ ಸಂಭಾಷಣೆ ನಡೆಸುತ್ತಿದ್ದಾನಲ್ಲಾ, ಹುಲಿಯೂರನಿಗೆ ಆಶ್ಚರ್ಯವಾಗಿತ್ತು. ಸಾಮಾನ್ಯವಾಗಿ ದೇವರಿಗೆ ಸಂಸ್ಕೃತ ಭಾಷೆ ಒಂದೇ ಬರುತ್ತೆ ಆದರೆ ಇಲ್ಲಿ ದೇವರು ಸ್ವಚ್ಛ ಕನ್ನಡದೊಳಗೆ ಮಾತಾಡುತ್ತಿದ್ದಾನೆ. ಅದು ಗ್ರಾಂಥಿಕ ಕನ್ನಡವಲ್ಲ, ಆಡು ಭಾಷೆಯಲ್ಲಿ ಬಳಕೆಯಾಗುವ ಕನ್ನಡ. ಏನಿರಬಹುದು ಇದರ ಒಳಗುಟ್ಟು, ಈ ಮಂದಿಗೆ ಕೇಳಿದರೆ ಹಾಕ್ಕೊಂಡು ಹೊಡಿತಾರೆ, ನಾಳೆ ಮುಂಜಾನೆ ಕೇಳಬೇಕು, ಯಾರಾದರೂ ಒಬ್ಬರು ಉತ್ತರ ಹೇಳೇ ಹೇಳ್ತಾರೆ." ಹುಲಿಯೂರ ಮುಂಜಾನೆಗಾಗಿ ಕಾಯತೊಡಗಿದ. ಬೆಳಕು ಹರಿದಾಗ ತಂಬಿಗೆ ಹಿಡಿದು ಹೊರಟಿದ್ದ ಹಿರಿಯ ರಾಮಡುನಾಯ್ಕನಿಗೆ ಕೇಳಿದ. "ಮಾವ ನಿನ್ನೆ ರುಕ್ಮನಿಗೆ ದೇವರು ಬಂದಿತ್ತು." ಕೇಳಿದ. "ಹೌದು ಬಂದಿತ್ತು." ರಾಮಡು ಉತ್ತರಿಸಿದ. "ಅಲ್ಲಾ ಅವನು ಜನ ಮಾತಾಡುವ ಕನ್ನಡದಲ್ಲಿ ಮಾತಾಡಿದ್ನಲ್ಲಾ ಯಾಕೆ?" ಕೇಳಿದೆ ಉತ್ತರ ನಿರೀಕ್ಷಿಸಿದ. "ಯಾಕಂದ್ರ ನಮಗೆ ಅರ್ಥ ಆಗಲಿ ಅಂತ, ಅಲ್ಲಲೆ ಹುಲಿಯೂರ ನೀನು ಅದ್ಯಾವದೋ ಊರಲ್ಲಿ ಅದೇನೋ ದೊಡ್ಡ ಕ್ಲಾಸಲ್ಲಿ ಓದಾಕ ಹತ್ತಿಯಂತೆ ಇದೆ ಏನು?" ಹೊಳ್ಳಿ ಅವನಿಗೆ ಕೇಳಿದ. "ಅಲ್ಲಪ್ಪ ಮಾವ ದೇವರು ಕನ್ನಡ ಯಾವಾಗ ಕಲಿತ? ಅವನು ಮಾತಾಡೋದು ಸಂಸ್ಕೃತ. ಈಗ ಭಟ್ಟರು ಮದುವೆಗೆ ಬರ್ತಾರ ಮಂತ್ರ ಯಾವ ಭಾಷೆಯಲ್ಲಿ ಹೇಳ್ತಾರೆ? ಸಂಸ್ಕೃತದಲ್ಲಿ ದೊಡ್ಡ ಭಟ್ಟರು ಪೂಜೆ ಮಾಡುವಾಗ ನೋಡಿ ಏನು? ಅವರು ಉಚ್ಚರಿಸುವುದೇ ಸಂಸ್ಕೃತ ಶ್ಲೋಕ ಹೀಗಿರುವಾಗ ರುಕ್ಮನ ಮೈಯಾಗ ಬಂದ ದೇವರು ಸಂಸ್ಕೃತ ಮಾತಾಡಬೇಕು ತಾನೆ?" ರಾಮಡುಗೆ ದೋತ್ರದಲ್ಲೆ ಒತ್ತರಿಸಬಂದಂಗಾತು "ಗೊತ್ತಿಲ್ಲ ಬಿಡು"

ಅಂದವನೆ ಓಡಿದ. ಹುಲಿಯೂರನ ಪ್ರಶ್ನೆ ಹಾಗೆ ಉಳಿತು ರುಕ್ಮ ನೆನ್ನೆ ದೇವರು ಬಂದಾಗ ಬೇರೆ ವರ್ತನೆ ಮಾಡಿದ್ದ. ಆದರೆ ಮುಂಜಾನೆ ನೀರು ಸೇದಬೇಕಾದರೆ ಸಾಮಾನ್ಯವಾಗಿಯೇ ಇದ್ದಾನೆ. "ಅಲ್ಲಪ್ಪ ರುಕ್ಮನಾಯ್ಕ ರಾತ್ರಿ ದೇವರು ನಿಜವಾಗಿ ಬಂದಿತ್ತೊ, ಇಲ್ಲ ಸುಮ್ಮನೆ ಜನರು ನನ್ನ ನೋಡಲಿ ಅಂತ ನಾಟಕ ಮಾಡಿದೆ." ಅವನಿಗೆ ಗಲಿಬಿಲಿಗೊಳಿಸಿದ. ರುಕ್ಮನಾಯ್ಕನಿಗೆ ಏನು ಹೇಳಬೇಕು ಅಂತ ಗೊತ್ತಾಗಲೇ ಇಲ್ಲ. "ಏನು ಹೇಳ್ತಿದ್ದೀಯ ಹುಲಿಯೂರ, ತಲೆ ಕೆಟ್ಟೈತೇನು, ಏನೋ ನಾಕ ಕ್ಲಾಸ ಓದಿದ್ದೀನಿ ಅಂತ ಧಿಮಾಕು ನಿನಗೆ. ದೇವರನ್ನೆ ಪ್ರಶ್ನೆ ಮಾಡ್ತಿದ್ದೀಯಾ? ನಿನಗೆ ಒಳ್ಳೆಯದಾಗೋದಿಲ್ಲ. ಈ ವಿಷಯನ ಮಂದಿ ಮುಂದೆ ಹೇಳಿದೆ ಅನ್ನು ನಿನ್ನ ಹೆಡಮುರಗಿ ಕಟ್ತಾರೆ." ತನ್ನ ನಾಟಕವನ್ನ ಸಮರ್ಥನೆ ಮಾಡಿಕೊಳ್ಳಲು ನೋಡಿದ. "ಯಾಕಂದಿ ಮಂದಿಗೆ ನಿನ್ನ ನಾಟಕ ತಿಳದಿಲ್ಲ ದೇವರು ಹಿಂಗೆ ಕಂಡ ಕಂಡೋರ ಮೈಯೊಳಗೆ ಬರೋದಾದರೆ ಗುಡಿಗಳು ಯಾಕಿರುತ್ತಿದ್ದವು ಭಟ್ಟರು, ಮಠಗಳು ಯಾಕಿರುತ್ತಿದ್ದವು" ಹುಲಿಯೂರ ತನ್ನ ಪಾಂಡಿತ್ಯ ಪ್ರದರ್ಶಿಸಿದ. "ಹೌದಲ್ಲಪ್ಪ ಮಠದಾಗಿರೊ ಸ್ವಾಮಿಗೆ ದೇವರು ಬರಬಹುದು, ಭಟ್ಟರು ಬೇಕಾದರೆ ಸಂಸ್ಕೃತದಲ್ಲಿ ಏನು ಬೇಕಾದರು ಹೇಳಬಹುದು? ತಮ್ಮವರಿಗೆ ದೇವರು ಹೇಗ ಒಲಿಯುತ್ತೆ ಅಂತ ಕೇಳ್ತಿಯಾ ನೋಡು. ನಿನ್ನ ಬುದ್ದಿಗೆ ಏನು ಹೇಳಲಿ?" ಅವನಿಗೆ ತಿರುಗಿ ಪ್ರಶ್ನೆ ಮಾಡಿದ. "ಎಯ್ ದಡ್ಡ ರುಕ್ಮ ಮಠದೊಳಗೆ ಸ್ವಾಮಿ ಅನೇಕ ವರ್ಷಗಳಿಂದ ಕಠಿಣ ಪರಿಶ್ರಮ, ಯೋಗ, ಧ್ಯಾನ, ತಪಸ್ಸು, ವೇದ ಅಧ್ಯಯನ ಮುಂತಾದವುಗಳನ್ನ ದಿನನಿತ್ಯ ಮಾಡಿ ಮನಸ್ಸನ್ನು, ದೇಹವನ್ನು ಆ ದಿಶೆಯೊಳಗೆ ಅಣಿ ಮಾಡಿರ್ತಾನ, ಏನಪ್ಪ. ಇನ್ನು ಭಟ್ಟರ ಬಗ್ಗೆ ಹೇಳ್ತಿದ್ದಿಯಲ್ಲ ಅದನ್ನ ಒಪ್ಕೊಳ್ಳೋವಂತಹದ್ದೆ. ಯಾಕಂದಿ ಆತ ದೇವರಿಗೆ ಕೇವಲ ಸಂಸ್ಕೃತ ಭಾಷೆ ಮಾತ್ರ ಬರುತ್ತೆ ಅಂತ ಶತಮಾನಗಳಿಂದ ನಮ್ಮನ್ನ ನಂಬಿಸುತ್ತಲೆ ಬಂದಿದ್ದಾನೆ ಹಿಂಗಾಗಿ ಆತನನ್ನ ನಾವು ದೂರಿಕರಿಸಬಹುದು. ಆದರೆ ಒಂದಮಾತು ಭಟ್ಟರಿಂದ ಈ ಕಾಲಕ ಮಂದಿ ಏನು ಕಲಿಬೇಕು ಅಂದ್ರೆ, ಕಠಿಣವಾದ ಪರಿಶ್ರಮದಲ್ಲಿ ತೊಡಗುವುದು ಹೇಗೆ? ಅನಿಶ್ಚಿತವಾದ ಬದುಕನ್ನು ನಿರಾಂತಕಗೊಳಿಸಿಕೊಳ್ಳುವುದು ಹೇಗೆ? ಎಂಬುದನ್ನ. ಅದು ನಿನ್ನಿಂದ ಸಾಧ್ಯನ. ಅದೆಂಗೆ ದೇವರು ಹೇಳದೆ ಕೇಳದೆ ನಿನ್ನ ಮೈಯೊಳಗೆ ಬಂದ್ನಪ್ಪ. ಬರೋದೆನೊ ಬಂದ, ಆಯ್ತು ಜನರ ಉದ್ಧಾರಕ್ಕೆ, ಜನರ ಕಲ್ಯಾಣಕ್ಕೆ ಏನನ್ನು ಹೇಳದೆ ಪ್ರಾಣಿಬಲಿಯನ್ನು ಕೊಟ್ಟಿಲ್ಲ ಪ್ರಾಣಿಬಲಿ ಕೊಡ್ರಿ ಅಂತ ಕೇಳಿ ಜನರ ಮೌಢ್ಯತೆಯನ್ನ ಹೆಚ್ಚರಿಸುವುದು ಒಂದ ಕಡಿಯಾದರೆ ಜನರನ್ನ ಆರ್ಥಿಕ ದಿವಾಳಿಗೆ ಕಳುಹಿಸುತ್ತಾ ಇದೆಯಲ್ಲಿ ದೇವರು ಇದಕ್ಕೆನಂತಿಯಾ. ಕರಿ ನಿನ್ನ ಪರ ಅದ್ಯಾವನು ವಕಾಲತ್ತು ವಹಿಸುತ್ತಾನೆ ನಾನು ಕೇಳೆ ಬಿಡ್ತಿನಿ" ಸತ್ಯ ಬೆಂಕಿ ಉಂಡೆಯಂತೆ ಹೊರಗೆ ಬಂದಿತ್ತು. ರುಕ್ಮನಿಗೆ ತಲಿಬುಡಾನೆ ಅರ್ಥ ಆಗಲಿಲ್ಲಾ. ಆವತ್ತು ನಗಾರಿಯ ಸದ್ದಿಗೆ ಅವನು ಯಾಕೆ ಹೀಗೆ ಮೈಮೇಲೆ ದೇವರು ಬರಿಸಿಕೊಂಡಿದ್ದು ಹೇಗೆ ಅವನಿಗೆ

ಅಸ್ಪಷ್ಟವಾಗಿತ್ತೊ ಹುಲಿಯೂರನ ಮಾತುಗಳು ಆ ಕ್ಷಣದಲ್ಲಿ ಅವನಿಗೆ ಹಾಗನಿಸಿದವು. "ಗೊತ್ತಿಲಪ್ಪ, ನಾನು ನಿನ್ನಷ್ಟು ಓದಿದವನಲ್ಲ, ಅವತ್ತು ಏನಾಯ್ತೊ ಗೊತ್ತಿಲ್ಲ, ಇವತ್ತು ನೀ ಏನು ಹೇಳಿದೆಯೋ ಗೊತ್ತಿಲ್ಲ. ಹಾಂ ಅವತ್ತು ದೇವಿ ನನ್ನ ಮೈಯೊಳಗೆ ಪ್ರವೇಶ ಮಾಡಿದಂತು ದಿಟ" ಅಂದವನೆ ಹೊರಡಲು ಅನುವಾದ. "ಮತ್ತದೆ ಕೆಲಸಕ್ಕೆ ಬಾರದ ಮಾತು" ಹುಲಿಯೂರ ಗೋಡೆಗೆ ತಲೆ ಚಚ್ಚಿಕೊಳ್ಳುವುದಕ್ಕಿಂತ ಸುಮ್ಮನಿರುವುದು ಒಳ್ಳೆಯದು ಅಂದುಕೊಂಡವನೆ ರುಕ್ಮನನ್ನು ನೋಡುತ್ತ ಅವತ್ತು ರಾತ್ರಿ ನಡೆದ ಇಡೀ ಘಟನೆಯನ್ನು ನೆನಪು ಮಾಡಿಕೊಳ್ಳುವ ಪ್ರಯತ್ನ ಮಾಡಿದ.

* * *

42. ಹೆರಿಗೆ ಮಾಡಿಸೊ ರಾಮಿಬಾಯಿಯೊ

ಈ ಮಂದಿಗೆ ಆಸ್ಪತ್ರೆ ಸಮೀಪದಲ್ಲಿರದಕ್ಕೆ ಬಾಣಂತನದ ನೋವು, ಹೆರಿಗೆ ಕಷ್ಟು ಸರ್ವೇಸಾಮಾನ್ಯವಾಗಿತ್ತು. ಯಾಕಂದ್ರೆ ಸುತ್ತ ಹರದಾರಿಯಲ್ಲಿ ಎಲ್ಲೂ ದವಾಖಾನೆಯ ಸುಳಿವೆ ಇರಲಿಲ್ಲಾ. ದುರ್ಗದೂರು, ಕಂಡಿಪುರದ ಮಂದಿವೂ ಅವೆಸಮಸ್ಯೆಗಳು. ದುರ್ಗದೂರಿನವರು, ಕಂಡಿಪುರ, ಸೋಮನಹಳ್ಳಿ, ಸೀತಾಪುರ, ಇಳಂಗೋವಿ ಜನರು ತೇಗೂರಲ್ಲಿರು ಕಲ್ಕಪ್ಪ ಡಾಕ್ಟರ ಹತ್ರ ಹೋದ್ರೆ ಆತ ಮಾಡಿದ್ದು ಬರಿ ಎಂ.ಬಿ.ಬಿ.ಎಸ್. ಹೇಳ್ತಿದದ್ದು ದೊಡ್ಡ ವೇದಾಂತ. ಇವಕ್ಕೆ ಡಾಕ್ಟರ್, ಯಾರು ಕಾಂಪೌಂಡರ್ ಯಾರು? ಮಲೇರಿಯಾ, ಆರ್.ಎಂ.ಪಿ. ಏನೂ ಇಲ್ಲದವರೂ ಕೂಡ ನರ ನೋಡಿ ಪೆನ್ಸಿಲಿನ್, ಮತ್ಯಾವೂ ಒಂದೆರಡು ಜ್ವರಕ್ಕೆ ಮೈಕೈ ನೋವಿಗೆ, ನೆಗಡಿ ಕೆಮ್ಮಿಗೆ ಇಂಜೆಕ್ಷನ್ ಹೆಟ್ಟುತ್ತಿದ್ದರು. ಇವರ ಪುಣ್ಯಕ್ಕೆ ತಿರಗ ಮುಂಜಾನೆ ಕಡಕ್ ಆಗಿ ತಿರುಗಾಡಕೆ ಸುರು ಹಚ್ಕೊಂತಿದ್ದರು. ಮತ್ತೆ ಆರು ತಿಂಗಳು ವರ್ಷಕ್ಕೆ ಅದೆ ಡಾಕ್ಟರ್ "ಆತನ ಕೈಗುಣ ಪಾಡೈತಪ್ಪೊ ಅಲ್ಲೆ ಹೊಕ್ಕಿನಿ" ಅಂತ ಹೋಗುತ್ತಿದ್ದರು. ಡಾಕ್ಟರ್ ಕಲ್ಕಪ್ಪ ಬಂದ ಮೇಲೆ ಆಸ್ಪತ್ರೆ ಆಟು ಸುಧಾರಿಸಿತ್ತು. ಗುಳಗಿ ಕೊಟ್ರೆ ನಾಕುವರೆ ರೂಪಾಯಿ ಗುಳಿಗಿ ಕೊಡದೆ ಇದ್ದರೆ ಮೂರು. ಇಂಜೆಕ್ಷನ್ ಹೆಟ್ಟಿದ್ರೆ ಮುಲಾಜಿಲ್ಲದೆ ಏಳುವರೆ ರೂಪಾಯಿ: ವಸೂಲಿ ಮಾಡಿಕೊಂಡೆ ಕಳುಹಿಸುತ್ತಿದ್ದ. ಸರ್ಕಾರಿ ದವಾಖಾನೆಯಲ್ಲಿರೊ ಸರ್ಕಾರಿ ವೈದ್ಯನ ಪ್ರಲಾಪಗಳು ಹೀಗಿರುವಾಗ ಹೆರಿಗೆ ನೋವು ಬಂದವರ ಗೋಳು ಕೇಳತೀರದು. ಆದ್ರೆ ತಾಂಡರಲ್ಲಿ ಲಮಾಣಿ ಹೆಂಗಸರಾಗಲಿ, ಕನ್ನಡ ಮಾತಾಡುವವರ ಹೆಂಗಸರು ಯಾರು ಸತ್ತ ಉದಾಹರಣೆಗಳೆ ಇಲ್ಲ. ಹೆರಿಗೆ ನೋವು ಬಂತು ಅಂತ ಕೇಳಿದರೆನೆ ಸಾಕು ಮೂಲೆಮನೆ ರಾಮವ್ವ, ಥಾವರವ್ವ, ಜಾನಿಬಾಯಿ, ಕೆಂಪಮ್ಮ, ಜಮಾಣಿಬಾಯಿ, ಸಾಕಿಬಾಯಿ ಮನೆಯೊಳಗಿನ ಏನೆ ಕೆಲಸಿ ಇದ್ರು ಬಿಟ್ಟು ಯಾರಿಗೆ ಹೆರಿಗೆ ನೋವಿದೆಯೊ ಆ ಮನೆಗೆ ಹಾಜರಿರುತ್ತಿದ್ದರು. ನೂರಕ್ಕೆ ತೊಂಭತ್ತರಷ್ಟು ಹೆರಿಗೆಗಳು ಮಗು ಸೀದಾ ತಲೆಕೆಳಗೆ ಮಾಡಿಕೊಂಡು

ಇರುವುದರಿಂದ ಸುಲಭವಾಗಿಯೇ ಆಗುತ್ತಿದ್ದವು. ಅದರಲ್ಲೂ ಚೊಚ್ಚಲ ಹೆರಿಗೆ ನೋವು ಬಂದವರಿಗೆ ಭಾರಿಕಷ್ಟವೇ ಸರಿ. ಹಿಂದಿನ ಓಣಿಯ ಹೆಂಕಡಿಗೆ ಹದಿನಾರು ವರ್ಷ ಅವಳ ಹೊಟ್ಟೆ ದೊಡ್ಡದಾಗಿತ್ತು. "ಏನೆ ಹೆಂಕಡಿ, ಎಲ್ಡ ಹಡಿತಿ ಏನೆ, ಹೊಟ್ಟೆ ನೋಡಿದರೆ ಇಷ್ಟೊಂದು ದೊಡ್ಡದಾಗಿದೆ." ರಾಮಕ್ಕ ಕೇಳಿದಳು. ಪಾಪದ ಹುಡುಗಿ ಹಡಿಯೋದು ಅಂದ್ರೇನೆ ಅರಿಯದ ಮುಗ್ದೆ. ಎರಡು ಮೂರು ಎನ್ನುವ ಶಬ್ಧ ಕೇಳಿ ಸೀರೆಯಲ್ಲೇ ವಂದ ಮಾಡಿಕೊಳ್ಳೋ ಹಾಗಾಗಿತ್ತು. "ಇಲ್ಲ ರಾಮವ್ವ ಹುಡುಗಿ ಹುಟ್ಟುತ್ತಾಳೆ ನೋಡು" ಹಿಂದಲೂರ ಜಾಜಿ ಹೇಳಿದಳು. "ಏನಾರ ಆಗಲಿ ಇನ್ನೇನು, ಬಹಳ ದಿನ ಇರ್ಲಕ್ಕಿಲ್ಲ ಬಿಡು ವಾರ ಒಪ್ಪತ್ತು ನಾವೆ ನೋಡ್ತಿವಲಾ" ರಾಮಕ್ಕ ನಕ್ಕು ಮನಿಕಡೆಗೆ ಹೊರಟಳು. ರಾಮಕ್ಕ ಅದಾಳ ಅಂದ್ರೆ ಬಹಳಷ್ಟು ಚೊಚ್ಚಲ ಹೆರಿಗೆಯವರು ಅವಳ ಧೈರ್ಯದ ಮೇಲೆನೆ ಪಾರಗುತ್ತಿದ್ದರು. "ಏನು ಮಾಡೊದೆ ತಾಯಿ, ಮಕ್ಕಳನ್ನ ಹೆರುವುದು ಅಷ್ಟು ಸುಲಭ ಅಲ್ಲ, ಮತ್ತೊಂದು ಜೀವ ಬಂದಂಗೆನೆ ಹೆಣ್ಣಿಗೆ, ಎಲ್ಲಾ ಕೆಲಸ ಮಾಡಬೇಕು ಗಂಡನ ಬೇಕು ಬೇಡ ನೋಡಬೇಕು. ಹೊಲಮನಿ, ಅಡಿಗೆ, ಕಸಮುಸುರಿ, ಮಕ್ಕಳ ಲಾಲನೆ ಪಾಲನೆ ಎಲ್ಲಾ ಆ ದೇವರು ಹೆಣ್ಣಿನ ಹಣೆ ಬರಹದಾಗ ಬರದಾನಂತ ಕಾಣತೈತೆ" ಜಾನಿಬಾಯಿ ಹೆಂಕಡಿಗೆ ಹೇಳಿದಳು. "ಅಯ್ಯೊ ಬೀಡೆ ಜಾನಿ, ನಿಂದೇನ ಹಚ್ಚಿ, ಅಲ್ಲೆ ನೀ ಮಗು ಹೆತ್ತಾಗ ನಿಂದೇನು ವಯಸ್ಸು ನಾ ಕಾಣದಲ್ಲ. ನಿನ್ನ ಕೈಕಾಲು ಈಟ ಗಡತರ ಇದ್ವು, ಇಕಿ ಏನು ಹಡಿತಾಳ ಅಂತು ಊರಿಂದೂರೆ ಹೈರಾಣಾಗಿತ್ತು. ಋತುಮತಿಯಾಗಿ ಮೂರೆ ತಿಂಗಳ, ಐದನೇ ತಿಂಗಳಾಗ ಗರ್ಭಿಣಿಯಾಗಿದ್ದೆ ನೀನು. ಆವಾಗ ನಿನ್ನ ವಯಸ್ಸು, ಹನ್ನೆರಡು ವರ್ಷ ಇರಬಹುದು." ಅವಳ ಊರಿನವಳೆ ಆದ ಲೋಕಿ ಹೆಂಕಡಿಗೆ ಧೈರ್ಯ ಬರಲಿ ಅಂತ ಬಿಡಿಸಿ ಹೇಳಿದ್ದಳು. "ಅಯ್ಯೊ ನಮ್ಮದೆಲ್ಲ ಈಗ ಯಾಕ ತಗಿತಿ ಬಿಡು ತಾಯಿ, ಈಗನ ಹುಡುಗಿಯರಿಗೆ ಅವೆಲ್ಲಾ ಅರ್ಥ ಆಗಂಗಿಲ್ಲಾ." ರಾಮಕ್ಕ ಎಲ್ಲರ ಬಾಯಿ ಮುಚ್ಚಿಸುವುದಕ್ಕೆ ಒಂದೇ ಮಾತು ಹೇಳಿದಳು. ಹೆಂಕಡಿ ಗಂಡ ಪೀಕಲ, ಎಲೆ ಅಡಿಕೆ, ಒಂದು ಎಸಳು ತಂಬಾಕು ತಂದು. "ರಾಮಿ ದೊಡವ್ವ, ತಗೊಳಬೆ ಎಲಡಿಕೆ ತಂದೀನಿ" ಅಂತ ಒಳಗ ಮಕ ಹಾಕಿದೆ. "ಲೋ ಭಾಡಕೌ, ಮಾಡೋದ ಮಾಡಿ ಹೆಂಡತಿ ಹೆಂಗದಾಳಂತ ಒಳಗ ನೋಡಾಕ ಬಂದಿ ನಡಿ ಹೊರಗೆ" ಹೊರಗಟ್ಟಿದಳು. "ನೋಡು, ಜೋರಾಗಿ ಒಮ್ಮೆ ಮುಲಕು, ಉಸಿರು ಬಿಗಿಹಿಡಿ. ಏನೂ ಆಗಲ್ಲ, ಹೂಂ ಜೋರು ಕೆಳಗೆ ಒತ್ತಡ ಹಾಕು." ರಾಮಬಾಯಿ ಹೆಂಕಡಿಗೆ ಬುದ್ದಿ ಹೇಳುತ್ತಿದ್ದಳು. ನೋವು ಹೆಚ್ಚಾಗಿತ್ತು ಹೆಂಕಡಿ ಚಿರಾಡುತ್ತಿದ್ದಳು. "ಇಲ್ಲವ್ವ ತಡಿಯಾಕ ಆಗ್ತಿಲ್ಲ, ನಾ ಸತ್ತೆ" ಅಂದುಬಿಟ್ಟಳು. "ಲೇ ಲೌಡಿ ಈಟ ನೋವು ತಡಿಯಾಕ ಆಗದಾಕಿ ಮದುವೆ ಯಾಕಾದೆ. ಸತ್ತೆ ಅಂತೆ, ನಿನಗೇನಾರ ಮಾನ ಮರ್ಯಾದೆ ಐತ, ಹಿಂಗ ಮಾತಾಡ್ತಿಯಲ್ಲ. ಮಲಗುವಾಗ ಹಿಂಗೆ ಆಲೋಚನೆ

ಮಾಡಬೇಕಿತ್ತು ಬೇವರ್ಸಿ ತಂದು. ಉಸಿರು ಹಾಕು ಜೋರಾಗಿ, ಶಕ್ತಿಯಿಂದ ಕೆಳಗೆ ತಳ್ಳು ಅದೇನು ಮಹಾ" ಥಾವರಜ್ಜಿ ತಾರಮಾರ ತಗೊಂಡಿಂದೆ. ಹೆಂಕಡಿ ಗಾಬರಿಯಾಗಿ ನೋವನ್ನೆ ಮರತು, ಜೋರಾಗಿ "ಹೂಂ" ಅಂತ ಒತ್ತಡ ಹಾಕಿದಳು. ತಲೆ ಹೊರಗಡೆ ಬಂತು. "ಯಕ್ಕ ತಲಿ ಬಂತು ನೋಡು ಅಂದ್ಲು" ಜಾನಿಬಾಯಿ. "ಗೆದ್ದೆ ಬಿಡವ್ವ, ಆ ದೇವರು ನಿನ್ನ ಕಾಪಾಡಿದ." ಅಂದಾಕಿನ ತಲಿಹಿಡದು ಜೋರಾಗಿ ಹೊರಗ ಎಳದು ಮಗುನ ತಗದಳು. ಹೊರಗ ಎಳದು "ಕರಳುಬಳ್ಳಿ ಕತ್ತರಿಸೋದಕ್ಕೆ ಕೂಡಗೋಲು ಇಸ್ಕೊಳ್ರೆ" ಕೂಗಿದ್ಲು ರಾಮಜ್ಜಿ, ಯಾರೊ ಕುಡುಗೋಲು ಹಿಡಿಸಿದರು. "ಲೇ ತಂಗಿ ತುಕ್ಕು ಹಿಡದೈತೇನು ನೋಡವ್ವ, ತುಕ್ಕ ಹಿಡದಿದ್ರ ತಡಾನೆ ಇಲ್ಲದಂಗೆ ಧನುರ್ವಾಯು ಸೇರ್ಕೊಂಡು ಬಾಣಂತಿ ಉಳಿಯಾಕಿಲ್ಲ" ಗದರಿದಳು ರಾಮಜ್ಜಿ. "ಅಕ್ಕ ಕೂಡಗೋಲು ಪಾಡಿಲ್ಲ, ಬೇರೆ ಏನಾರು ಐತೇನು ನೋಡು, ಎಯ್, ಗಡಾನೆ ಹೊರಗ ಹೋಗಿ ಪಕ್ಕದ ಮನಿಯಿಂದಾದರೂ ಒಂದು ಒಳ್ಳೆಯ ಕೂಡಗೋಲು ಇಲ್ಲ ಚೂರಿ ಇಸ್ಕೊಂಡ ಬರಾಕ ಹೇಳ್ರೆ" ಜಾನಿಬಾಯಿ ಕೂಗಿದಳು. "ಅಲ್ಲ, ಎಲ್ಲಾ ತಯಾರಿ ಇಟ್ಕೊಬಾರದ ಆ ನನ ಹಾಟಗಳ್ಳ. ಹೆಂಡತಿ ಅಂದ್ರ ಬರಿಮಲಗಾಕಂತ ತಿಳ್ಕೊಂಡಾನ ಹೆಂಗೆ. ಎ ತಾಯಿ ಗಡಾನ ನೋಡು ಬಹಳ ಹೊತು ಕಾಯೋದಕ್ಕೆ ಆಗಂಗಿಲ್ಲ." ರಾಮಜ್ಜಿ ಗಡಿಬಿಡಿ ಮಾಡಿದಳು. ಹೆಂಕಡಿ ನಿಸ್ತೂಕದಿಂದ ಬಿದ್ದುಕೊಂಡಿದಳು. ಏನೋ ದೊಡ್ಡ ಕೆಲಸ ಮಾಡಿ ಮುಗಿಸಿದಂತೆ ಮಲಗಿದ್ದಳು. ಯಾರೊ ಹೊರಗಡೆಯಿಂದ "ತಗೊಳ್ರಿ ಕುಡಗೋಲು" ಅಂದ್ರು. ರಾಮಬಾಯಿ ತಗೊಂಡು ಕರಳುಬಳ್ಳಿಯನ್ನ ತುಂಡರಿಸೋದಕ್ಕೆ ಮುಂದಾದಳು. "ಎಯ್, ಯಾವನವನು ಈ ಕುಡುಗೋಲು ಕೊಟ್ಟಿದ್ದು. ಇದೇನು ತರಕಾರಿ ಕೋಯ್ಯೋದು ಅಂದ್ಕೊಂಡ್ರೇನು. ನಿಮ್ಮ ಮಂಜಾಳಾಗ. ಗಡಾನ ಬೇರೆದು, ಹರಿತ ಇರೋದು ಏನಾರು ಕೊಡ್ರಿ" ಸಿಟ್ಟಿಂದ ಕೆಂಡಮಂಡಲವಾಗಿದ್ದಳು. ಬಹಳ ಸೂಕ್ಷ್ಮ ಸನ್ನಿವೇಶ. ಎಲ್ಲವು ಸರಿಯಾಗಿರಬೇಕು. "ಲೇ ತಮ್ಮ ಒಂದು ಕಲ್ಲನ್ನ ಸೀಳಿ ಹರಿತ ಮಾಡಿಕೊಡು ಕಡೀಗ" ಅಂಗಲಾಚಿದಳು.

ತುಕ್ಕುಹಿಡಿದ ಕಬ್ಬಿಣದಿಂದ ಕರಳುಬಳ್ಳಿ ಕೊಯ್ದರೆ ಆಗುವ ಅನಾಹುತಕ್ಕೆ ಒಂದು ಜೀವ ಬಲಿಯಾದದ್ದನ್ನ ರಾಮಕ್ಕ ಯಾವತ್ತು ಮರೆತಿರಲಿಲ್ಲಾ. ಹಿಂದಿನ ಮನೆ ಕಪಾಲಿಯ ಹೆಂಡತಿ ಕಸನಿಗೆ ನೋವು ಸುರು ಆಯ್ತು ಅಂತ ಹಿಂದೆ ಮುಂದೆ ನೋಡದೆ ದನದ ಕೊಟ್ಟಿಗೆಯೊಳಗೆ ಹಡಿಯೋದಕ್ಕೆ ವ್ಯವಸ್ಥೆ ಮಾಡಿದ್ರು. ಬಂದ ಸೂಲಗಿತ್ತಿಯರೆಲ್ಲಾ. "ಏಯ್ ಕಪಾಲಿ ನಿನಗೇನಾದರ ಬುದ್ಧಿಗಿದ್ದಿ ಐತೊ ಇಲ್ಲ, ಅಲ್ಲಲೇ ಹೆಣ್ಣಿನ ಜೀವದ ಜೊತಿಗೆ ಆಟ ಆಡಿ ಏನು. ಹಡಿಯೋದಂದ್ರ ಏನ್ಕೊಂಡಿಯಾ. ಎಲ್ಲಿ ಬೇಕಾರು, ಹೆಂಗ ಬೇಕಾರು ಆಗಬಿಡುತ್ತೆ ಅಂದ್ಕೊಂಡಿಯೋ

ಹೆಂಗೆ ತಾಯಿ ಮಗ ಆರೋಗ್ಯವಾಗಿರಬೇಕು. ಬೇರೆ ಜಾಗದಾಗ ಗಡಾನ ಎತ್ತಕೊಂಡ ನಡಿ" ರಾಮಕ್ಕ ಅಂಗಲಾಚಿದಳು. "ದೊಡವ್ವ ಮನಿಯಾಗ ದೇವರೈತೆ, ಮುಟ್ಟುಚಟ್ಟು ನಮ್ಮವ್ವ ಬಾಯಿ ಹರಕಿ ಏನಾರ ಅಂದ್ರ ಪಾಡಲ್ಲ, ಅದಕ್ಕೆ ಹೆದರಿ ಇಲ್ಲಿ ವ್ಯವಸ್ಥೆ ಮಾಡೀನಿ" ಅವನ ತುಮುಲವನ್ನು ಹೊರಹಾಕಿದ. ಹೆಂಗಸರೆಲ್ಲ ಅನುಮಾನದಿಂದ ಲೇ ಕೆಲಸ ಮಾಡತೊಡಗಿದರು. ಕಸನಿ ಮಾತ್ರ ನೋವಿಂದ ಚೀರಾಡುತ್ತಿದ್ದರು. "ಏನಾರ ಹೆಚ್ಚು ಕಮ್ಮಿ ಆದೀತು ಕಣಕ್ಕ ಹೆಣ್ಣು ಜೀವ ನೋಡು" ಅಂತ ಜಾನಿಬಾಯಿ ಹೇಳೋದಕ್ಕೂ "ಗಡಾನ ಬರ್ರಬೆ ತಲಕೆಳಗಬಂದೈತೆ" ಅಂತಂದು ಯಾರೊ ಕೂಗುವುದಕ್ಕೂ ಸರಿಹೋಯ್ತು. ಎಲ್ಲಾನು ಮರೆತು ಮದಲು ಎರಡು ಕಡೆ ಮಾಡೋಣ ಎನ್ನುವ ಉದ್ದೇಶದಿಂದ ಗಡಿಬಿಡಿಯಿಂದ ಎರಡು ಕಡೆ ಮಾಡ್ಸಿದ್ರು ಹೆಣ್ಣು ಹುಡುಗಿ. "ಕಪಾಲಿ ಹುಡುಗಿ ಕಣಲೆ, ಲಕ್ಷ್ಮಿ ಬಂದಾಳ ನಿನಮನಿಗ" ಯಾರೊ ಹೊರಗೆ ಸುದ್ದಿ ಹೇಳಿದರು. ಕಪಾಲಿಗೆ ಹೆಣ್ಣು ಗಂಡು ಏನಾರ ಆಗಲಿ ಕಸನಿಗೆ ಎರಡು ಕಡಿಗ ಆದ್ರ ಸಾಕಪ್ಪ ದೇವರೆ ಅಂತ ಬೇಡಿಕೊಂಡಿದ್ದ. ಗಡಿಬಿಡಿಯೊಳಗೆ ಯಾವುದೊ ಹಳೆ ತುಕ್ಕು ಹಿಡಿದಿರೊ ಕುಡುಗೋಲು ಕೊಟ್ಟಿದ್ದ. ಹೊಸದೊಂದು ಚೂರಿಯನ್ನು ವ್ಯವಸ್ಥೆ ಮಾಡಿ ಇಟ್ಕೊಂಡಿದ್ದರೂ ಅವಸರದಾಗ ಕೂಡಗೋಲು ಕೊಟ್ಟಿದ್ದ. ದನದ ಕೊಟ್ಟಿಗೆ ಕತ್ತಲು ಕೂಡುಗೋಲನ್ನ ಯಾರು ಗಮನಿಸಲೆ ಇಲ್ಲಾ. ಅವಸರದಾಗ ಕರಳುಬಳ್ಳಿ ಕೊಯ್ದು ಮಗುನ ಬೇರೆ ಮಾಡಿ ತಮ್ಮ ಕೆಲಸ ಮುಗಿಸಿ ಹೆಂಗಸರೇನೊ ಹೊರಗ ಹೋದ್ರು. ಕಸನಿಗೆ ಸ್ನಾನ ಮಾಡಿಸಿ ಮನಿಯೊಳಗೆ ತರೋದಕ್ಕೂ ನರ ಬಿಗಿತದಾವಂತ ಹಿಂದೆ ಸೆಟೆಬೀಳೋದಕ್ಕು ಸರಿಹೋಯ್ತು. ಮಗು ಒಂದ ಕಡೆ ಚಿರಾಡ್ತಿತ್ತು. ಕಪಾಲಿಗೆ ಕೈಕಾಲು ಆಡದಂಗಾದವು. ಸುದ್ದಿ ತಿಳಿದ ಅಕ್ಕಪಕ್ಕದ ಮನೆಯವರೆಲ್ಲಾ ದವಾಖಾನಿಗೆ ಕರ್ಕೊಂಡ ಹೋಗಾಕ ಹೇಳಿಂದ. ಆಗಿಂದಾಗ್ಗೆ ಬಂಡಿಕಟ್ಟಿ, ದಾವಣಗೇರಿ ದೊಡ್ಡ ಆಸ್ಪತ್ರೆಗೆ ಒಯ್ದು ಅಡ್ಮಿಟ್ ಮಾಡಿದ್ರು, "ಈ ಪೇಶೆಂಟ್ ಕಡೆಯವರು ಯಾರು?" ನರ್ಸಮ್ಮ ಕೇಳಿಕೊಂಡು ಬಂದಳು. "ಕಪಾಲಿ ಏನಾಯ್ತು ನರ್ಸಮ್ಮ, ನಾನೆ ಕಸನಿಯ ಗಂಡ" ಮುಂದೆ ಹೋದ "ಡಾಕ್ಟರಮ್ಮ ಕರಿತವ್ರೆ ಬಾ" ಅಂತ ಒಳಗೆ ಕರೆದುಕೊಂಡು ಹೋದಳು. ಡಾಕ್ಟರ್ ಸಿಟ್ಟಿನಿಂದ ಕ್ರೋಧಗೊಂಡಿದ್ದಳು. "ಏಯ್ ನೀ ಯಾವ ಸೀಮೆ ಗಂಡಸೊ ಬೋಳಿಮಗನೆ ಹೆರಿಗೆ ಸಮಯದಾಗ ಒಂದು ಹೊಸ ಬ್ಲೇಡು ಸಿಗಲಿಲ್ಲಾ ನಿನಗೆ. ಪಾಪ ಹುಡುಗಿಗೆ ಧನುರ್ವಾಯು ಆಗಿದೆ. ಅಂದಂಗೆ ಜನಂಕಾಲ ಎಲ್ಲಿ ಆಯ್ತು" ಡಾಕ್ಟರಮ್ಮ ಕೇಳಿದಳು. "ಅವ್ವಾ ದನದ ಕೊಟ್ಟಿಗೆಯೊಳಗೆ" ಅಂದ. ಕೈಯೊಳಗಿದ್ದ ಪೈಲ್ಲನ್ನ ಅವನ ಮುಖದ ಮೇಲೆ ಬಿಸಾಡಿದಳು. "ನೀನೊಬ್ಬ ಮನುಷ್ಯನಾ?" ಡಾಕ್ಟರ್ ಹಾಗೆ ಕುಸಿದಳು.

ಕಸನಿ ನಿಧಾನಕ್ಕೆ ಕೊನೆ ಉಸಿರು ಎಳೆದಿದ್ದಳು, ರಾಮಜ್ಜಿ ಗಾಬರಿಯಾದಳು. ಮತ್ತೊಮ್ಮೆ ಅಂಥ ಮಹಾತಪ್ಪ ನಡೆದುಹೋದೀತು ನನ್ನ ಕೈಯಿಂದ ಅಂತ, ತಾನೆ ಖುದ್ದಾಗಿ ಹೊರಗಡೆ ಹೋಗಿ ಚೂಪಾದ ಕಲ್ಲು ತಂದು ಕರಳುಬಳ್ಳಿಯನ್ನು ಕಡಿದು ತುಂಡು ಮಾಡಿದವಳೆ ಮಗುವನ್ನು ಸೂಲಗಿತ್ತಿಯರ ಕೈಗೆ ಕೊಟ್ಟಳು. "ಯವ್ವ ತಾಯಿ ನಿನ್ನ ಘಳಿಗೆ ಪಾಡೈತೆ, ಕಲ್ಲಾದ್ರು ಕೈಗೆ ಸಿಗತು, ನಮ್ಮ ಗಂಡಮಕ್ಕಳು ಹಿಂಗೆ ಬೇಜಾವಾಬ್ದಾರಿಯವಿರುತ್ತವೆ ನೋಡು, ಹೊಸ ಬ್ಲೇಡು, ಇಲ್ಲಾ ಕುಡುಗೋಲು ತಯಾರಿ ಮಾಡಿ ಇಡೋದಿಲ್ಲಾ. ಗಡ್ಡಕ್ಕೆ ಬೆಂಕಿ ಬಿದ್ದಾಗ ಬಾವಿ ತೋಡುವುದಕ್ಕೆ ಬಡಿದಾಡುತ್ತಾರೆ." ರಾಮಜ್ಜಿ ನೆಮ್ಮದಿಯಿಂದ ಹೊರಗೆ ಬಂದಳು.

* * *

43. ದಂಡೆಮ್ಮನ ಮೀಸಲು ಮತ್ತ ಮಜ್ಜಿಗೆ ಪ್ರಸಂಗ

ತಾಂಡದಾಗ ಯಾರ ಎಮ್ಮೆ ಕರು ಹಾಕಿದರು ಮೂರು ದಿನ ಗಿಬದಹಾಲು ತೆಗೆದು ಸ್ವಾರಿಯೊಳಗೆ ಹಾಕಿ ಇಡುತ್ತಿದ್ದರು. ಎಮ್ಮೆಯನ್ನ ಬಿಸಿನೀರಿಂದ ಚೆನ್ನಾಗಿ ಸ್ನಾನ ಮಾಡಿಸಿ ಬಿಸಿ ಕೆಂಡದ ಕಾವಿನಿಂದ ಅದರ ಕೆಚ್ಚಲ್ಲನ್ನು ಬೆಚ್ಚಗೆ ಮಾಡಿ ಅದಕ್ಕೆ ಈಚಲು ಬಗೆದು ಅದರ ಬುಡದಲ್ಲಿ ಬರುವ ತಿರುಳನ್ನು ತಿನ್ನಿಸಿದ್ರೆ ಮುಂದೆ ಏನನ್ನು ಮಾಡುತ್ತಿರಲಿಲ್ಲಾ. ಮೂರು ದಿನಗಳ ಸಂಜೆ, ಮುಂಜಾನೆಯ ಹಾಲು ಒಂದೆ ಕಡೆಗೆ ಸೇರಿಸಿ, ಅಣ್ಣತಮ್ಮಂದಿರ ಮನೆಗೆ ಒಂದೊ ಎರಡು ಲೋಟಗಳಷ್ಟು ಹಂಚಿ, ತಮಗೆ ಬೇಕಾದವರಿಗೆ ಕೊಟ್ಟಾದ ಮೇಲೆ ಗೀಬಿದ ಹಾಲಿಗೆ, ಅಕ್ಕಿ, ಇಲ್ಲ ರವಾ ಹಾಕಿ ಬೆಲ್ಲದಿಂದ ಗೀಬ ಮಾಡಿದ್ದ ಬೇರೆ. ಹಾಲಿಗೆ ನೇರವಾಗಿ ಬೆಲ್ಲ ಹಾಕಿ ಗಟ್ಟಿ ಉಂಡೆ ಉಂಡೆ ಗೀಬ ಮಾಡುವುದು ಬೇರೆ. ಎಲ್ಲಾ ದೇವರುಗಳಿಗೆ ಎಡೆ ಮಾಡಿದ ಮೇಲೆ ಮನಿಮಂದಿ ಉಣ್ಣುತ್ತಿದ್ದರು. ಇದು ಕೇವಲ ಒಂದು ಮನೆಯವರು ಮಾಡುವ ಆಚರಣೆಯಾಗಿರಲಿಲ್ಲ. ಊರಿನ ಲಮಾಣಿಗರು, ಸಾಬರು, ಕನ್ನಡ ಮಂದಿ ಯಾರ ಮನೆಯಲ್ಲಿ ಎಮ್ಮೆ ಕರು ಹಾಕಿದ್ರು ಇದು ಸರ್ವಸಾಮಾನ್ಯವಾದ ಆಚರಣೆಯಾಗಿತ್ತು. ಅದಾಗಿ ಒಂದುವಾರ ಮಜ್ಜಿಗೆಗೆ ಬರುವವರಿಗೆ "ಲೇ ತಮ್ಮ ದಂಡೆಮ್ಮಗೆ ಮೀಸಲೈತೆ ಮನಿಗ ಹಾಕಲ್ಲ" ಅಂತ ಬಿಲ್‌ಕುಲ್ ಹೇಳಿ ಕಳುಹಿಸುತ್ತಿದ್ದರು. "ಅಲ್ಲಕ್ಕ ಅಂಬಲಿ ಇಲ್ಲೆ ತಂದ್ರ ಹಾಕ್ತಿಯ" ಬಂದವನು ಕೇಳಿ ಹೂಂ ಅಂದಾಗ ತಾಟಿನ ತುಂಬ ಜೋಳದ ನುಚ್ಚನ ಹಾಕ್ಕೊಂಡು ಬಂದು ಅಲ್ಲೆ ಉಂಡು ಕೈತೊಳೆದುಕೊಂಡು ಹೋಗುತ್ತಿದ್ದ.

ಮತ್ತೊಂದು ಬಹಳ ಮುಖ್ಯವಾದ ವಿಷಯ ಮಜ್ಜಿಗೆ ಒಯ್ದು ಊಟ ಮಾಡುವವರು, ಉಂಡ ಮೇಲೆ ಬಟ್ಟೆಯಿಂದ ಕೈ ಒರಿಸಿಕೊಂಡಿದ್ದೆ ಆದರೆ ಆ ಕರು ಎಳೆಗರು ಇರುವಾಗಲೆ ಬಟ್ಟೆ ಕಡಿಯುವುದನ್ನ ರೂಢಿ ಮಾಡಿಕೊಳ್ಳುತ್ತದೆ ಎನ್ನುವ ಅಭಿಪ್ರಾಯ. ಹಾಗಾಗಿ ಕರು ಹದಿನೈದು ದಿನಗಳಾಗುವವರೆಗೆ ಯಾರ ಮನೆಗೂ ಮಜ್ಜಿಗೆ ಹಾಕುತ್ತಲೆ ಇರಲಿಲ್ಲಾ. ಹುಲಿಯೂರನ ಮನೆಯಲ್ಲಿ ಹಿಂಡು ದನಗಳು,

ಯಾವಾಗಬೇಕೋ ಆವಾಗ ಇಯುತ್ತಿದ್ದವು. ಹಾಗಾಗಿ ಬೇರೆ ಬೇರೆ ಮಜ್ಜಿಗೆ ಎಲ್ಲಿ ಕಡಿಯುವುದಂತ ಒಂದೆ ಸೋರೆಯೊಳಗೆ ಸೇರಿಸಿ ಮಜ್ಜಿಗೆ ಕಡಿಯುತ್ತಿದ್ದರು. ಹಾಗಾಗಿ ಅವನಜ್ಜಿ ಸೊನಕಜ್ಜಿ "ಲೇ ಮಗ ಹುಲಿಯೂರ ಯಾರೆ ಬಂದರು ಒಂದು ತೊಟ್ಟ ಮಜ್ಜಗಿ ಹಾಕಬೇಡ ನೋಡು, ಉಳಿದ ನಿಮ್ಮ ತಂಗಿಯರಿಗೆ, ನಿಮ್ಮ ಅಣ್ಣನ ಮಕ್ಕಳಿಗೆ ಹೇಳಿಬಿಡು, ಯಾರಾದರೂ ಹಾಕಿದ್ದು ಕಂಡುಬಂತು ಕೊಲೆ ಬೀಸ್ತಿನಿನೋಡು." ತಾಕತ್ತು ಮಾಡಿದ್ದಳು ಮುದುಕಿ. "ಅಲ್ಲಬೆ ಊಟ ಮಾಡಿದ ಮೇಲೆ ಅರಿವಿಯಿಂದ ಕೈ ಒರೆಸಿದರೆ ಅರವಿ ಕಡಿತೈತೆ ಅಂತ ಯಾರು ಹೇಳಿದ್ರು ನಿನಗೆ. ಇವೆಲ್ಲ ಹಳೆ ಶಾಸ್ತ್ರಗಳು ನಿಮ್ಮಂತ ಮುದುಕರು ಮಾಡೋದಕ್ಕೆ ಕೆಲಸ ಇಲ್ಲದಕ್ಕೆ ಸೃಷ್ಟಿ ಮಾಡಿದಂಗಿದೆ." ಮಕದ ಮೇಲೆ ಹೇಳಿದ. "ಹೂನಪ್ಪ ನಮಗೆ ಮಾಡಾಕ ಕೆಲಸ ಇಲ್ಲ, ನಮ್ಮ ಸೀರೆ ನೀನೆ ಹೊಲದ ಕೊಡ್ತಿ. ತಿಮ್ಮಪ್ಪನ ಹೊಲ ನೀನಕಾಯ್ತಿ. ಹೋಗ ನಿನ ಬಾಯಾಗ ಊರ ಹಾಟುಹೊಯ್ಯ ಬೇವರ್ಸಿ ತಂದು. ನಿಮ್ಮಪ್ಪನೆ ನೋಡು ವಯಸ್ಸಾಯಿತು ತಾಯಿಗೆ ಅಂತ ಕುಂದ್ರಿಸಿ ಕೂಳ ಹಾಕೋದು" ಸಿಟ್ಟಿಂದ ಅವನ ಕಿವಿ ಹಿಂಡಿದಳು. "ಆಯ್ತು ಬಿಡಬೇ ನಿನಗೆ ಸುಮ್ಮನೆ ಕೂಡದಕ್ಕೆ ಆಗೋದಿಲ್ಲ ಕೆಲಸ ಮಾಡ್ತಾನೆ ಇರ್ತಿಯ. ಅಂದಂಗ ಅಜ್ಜಿ ಈ ಮಜ್ಜಗಿ ಪೂರ್ತಿಗೆ ರಾಮಾಯಣ ಅಂದ್ರ ಏನ ಬೆ?" ಕೇಳಿದ. "ಅದ ಕುತ್ಕೊ ಬಾ ಹೇಳ್ತಿನಿ" ಅಂದವಳೆ ಅವನ ತಲೆಯನ್ನ ತನ್ನ ತೊಡೆಯ ಮೇಲೆ ಇಟ್ಕೊಂಡು ಮುಂಗುರುಳು ತೀಡುತ್ತಾ ಹೇಳಲು ಸುರು ಮಾಡಿದಳು. "ಅಲ್ಲ ಲೇ ಮಗ ನಿನಗ ಯಾರು ಕೇಳಿದರು ಕತೆಯನ್ನು ನೀ ಯಾರ ಮನಿಗೆ ಮಜ್ಜಗಿ ಹಾಕ್ಸೊಂಡ ಬರಾಕ ಹೋಗಿದ್ದೆ" ಕೇಳಿದಳು. "ನಾ ಯಾರ ಮನಿಗ ಹೋಗಲಿ, ನಮ್ಮೂರ ಸಾಲಿಮಾಸ್ತರ ಅದಾನಲ್ಲ ಅವರ ಮನಿಗ ಬಂದಾಳಲ್ಲ ವಿಶಾಲಕ್ಷಿ ಅನ್ನೊ ಹುಡುಗಿ. ಮನ್ನೆ ಎತ್ತುಗಳು ಮೇಯಿಸದಕ್ಕೆ ನನ್ನಿಂದೆ ಬಂದಿದ್ಲು, ಅಕಿ ಕೇಳಿದ್ಲು" ಅಂದ ಏನು ಮರೆಮಾಚದೆ. "ಅಂದಂಗೆ ಅಕೀಗ ಯಾಕ ಬೇಕಂತಿದು. ಮಿಟಕಲಾಡಿ ಎತ್ತು ಮೇಸಾಕ ಬಂದೊಳು ಎತ್ತು ಮೇಯಿಸಿಕೊಂಡು ಹೋಗಬೇಕು ಇಂತಹದ್ದೆಲ್ಲ ಪ್ರಶ್ನೆ ಕೇಳ್ತಾಳ ಗಂಡು ಹುಡುಗರಿಗೆ." ಅಕಿ ಬುಡಕ್ಕೆ ಕೈ ಹಾಕಿದಳು. "ಅಲ್ಲ ಬೆ ನಾನು ಸಾಲಿಗ ಹೊಂಟಿನಲ್ಲ, ನನಗ ಗೊತ್ತೈತೊ ಇಲ್ಲಾಂತ ಟೆಸ್ಟ್ ಮಾಡಿದ್ಲು" ಸಮಜಾಯಿಸಿದ. "ಅದಕ್ಕ ನೀ ಏನಂದೆ" ಕೇಳಿದಳು. "ಗೊತ್ತಿರಾಕಿಲ್ಲ, ಗೊತ್ತಿಲ್ಲವ್ವ ಅಂದೆ." ಸತ್ಯ ಒಪ್ಪಿಕೊಂಡ. "ನನ್ನ ಮರ್ಯಾದಿ ಕಾಸಿನ ಪಂಚೇರು ಮಾಡಿದೆ ನೋಡು, ನಾನು ನಿನಗ ಈ ಕತೆ ಹೇಳಿರಾಕಿಲ್ಲ. ಈ ಹೇಳ್ತಿನಿ ಕೇಳು. ಈಗ ಒಬ್ಬಾಕಿ ಪಕ್ಕದ ಮನಿಗ ದಿನಾ ಮಜ್ಜಿಗಿ ಕೇಳಾಕ ಚರಗಿ ತಗೊಂಡು ಬರ್ತಿದ್ಲು ಪಕ್ಕದ ಮನೆಯವಳು. ಅಯ್ಯೋ ಪಾಪ ನೆರಮನಿಯೊಳು ಆಸರಕ್ಕ ಬ್ಯಾಸರಕ್ಕ ಕೆಲ್ಸಕ ಬಂದಾಳಂತ. ಒಂದ ದಿನ, ಎರಡ ದಿನ, ಒಂದ ವಾರ, ಹದಿನೈದು ದಿನ ಬಿಟ್ಟು ಬಿಡದಂಗೆ ಹಾಕಿದಳು." ಮುದುಕಿ ನಿಲ್ಲಿಸಿ ಕೆಮ್ಮಿದಳು "ಹೂಂ ಮುಂದ" ಕುತೂಹಲ ತಡಿಯಾಕ ಆಗದೆ ಕೇಳಿದ ಹುಲಿಯೂರ. "ಬರಾಕಿ

ಬಿಡುವಿಲ್ಲದಂಗೆ ಬರ್ತಿದ್ಲ ಪಕ್ಕದ ಮನಿಯವಳು, ಏನಾರು ಕೆಲಸ ಮಾಡುವಾಗಲೆ ವಕ್ಕರಿಸಿಬಿಡುತ್ತಿದ್ದಳು. ನೋಡಿ ನೋಡಿ ಬೇಜಾರಾಗಿ ಇಲ್ಲ ಅಂದಿಯ ಬೇಜಾರಾಗತಾಳ. ಈಕಿ ಮನಿಯೊಳಗೆ ಮಾತ್ರ ಮಜ್ಜಿಗಿ ಇದ್ದಿತು. ನೀರು ಸೇರಿಸಿ ಮಜ್ಜಗಿಯೊಳಗ ಏನೂ ಇಲ್ಲದಂಗೆ ಮಾಡಿರ್ತಾಳ. ಅಂತ ಮಾತಾಡಿಕೊಂಡು ಇಡೀ ವಠಾರದಲ್ಲೆ ಹೆಸರು ಹಾಳು ಮಾಡ್ತಾಳ ಈ ಬೆವರ್ಸಿ ಹೆಂಗಸು ಅಂದ್ಕೊಂಡಾಕಿನ. ಅಕ್ಕ ಮಜ್ಜಿಗಿ ಕೊಡ್ತಿನಿ, ರಾಮಾಯಣದ ಕತೆ ಹೇಳಿದ್ರ ಮಾತ್ರ ನೋಡವ ಅಂದಳು. ಇಕಿ ರಾಮಾಯಣದ ಕತಿ ಹೇಳಲಿಲ್ಲಾ ಇಕೀಗ ನಾ ಮಜ್ಜಿಗಿ ಹಾಕಲಿಲ್ಲಾ ಇವತ್ತು" ಅಂದ್ಕೊಂಡು ವಯ್ಯಾರದಿಂದ ಮೆರೆಯತೊಡಗಿದಳು. ಎಮ್ಮಿ ಇಲ್ಲದೆ ಮಜ್ಜಗೀಗ ಬಂದಾಕಿ ಒಂದು ಘಳಗಿ ಯೋಚನೆ ಮಾಡಿದಳು. "ಎಲಾ ಇವಳ ಮಜ್ಜಾಗಿ ಕೊಡೋದು ಬ್ಯಾಸರ ಅನಿಸಿರಬೇಕು ಈ ಮೂಳಿಗೆ ಅದಕ್ಕೆ ಈ ಮೋಸದ ಒಳಸಂಚು ಮಾಡಿರೋ ಹಂಗೈತೆ. ಅಂದಾಕಿನ ಆಗವಲ್ದ ಯಾಕವ್ವ ಹೇಳ್ತಿನಿ ಬಿಡು ಅಂದಾಕಿನ, ದಶರಥನಂದ ರಾವಣನ ಕೊಂದ, ಸೀತೆನ ಕರ್ಕೊಂಡ ಬಂದಾ ಹಾಕು ಮಜ್ಜಿಗಿ" ಅಂದ್ಲು. ಪಕ್ಕದ ಮನಿಯಾಕಿ ಕೇಳಿ ಹೈರಾಣಾದಳು. "ಆಯ್ತು ತತ್ತಾರವ್ವ ಚೆಂಬು ಅಂತ ಚೆರಗಿ ತುಂಬ ಮಜ್ಜಿಕೊಟ್ಟಳು. ಮತ್ತೆ ಯಾವತ್ತು ತಿರುಗಿ ಇಂತಹ ತಲೆಹರಟೆ ಪ್ರಶ್ನೆ ಕೇಳುವ ಉದ್ದಟತನ ಮಾಡಲಿಲ್ಲಾ. ಮುದುಕಿ ಕತೆ ಮುಗಿಸಿದಳು. ಭರಿ ಅದಾಳ.......ಮತ್ತ" ಬಿಡು ಆ ಹೆಂಗಸು ಅಲ್ಲಬೆ ತಿಂಗಳಗಟ್ಟಲೆ ಹೇಳಿದರೂ ಮುಗಿಯದ ಕತೆಯನ್ನು ಮೂರೆ ಮೂರು ವಾಕ್ಯದೊಳಿಗ ಹೇಳಿ ಮುಗಿಸಿದಳು. ಮಹಾಬೆರಕಿ ಹೆಂಗಸು ಮತ್ತ ಅಂದವನೆ ಅವನ ಗೆಳೆಯರು ಆಟಕ್ಕೆ ಕರೆಯಾಕ ಬಂದಿದ್ದರಿಂದ ಓಡಿದ.

ಆ ದಿನಗಳಲ್ಲಿ ದಿನಾ ಬೆಳಗಾ ಮುಂಜಾನೆ ಸಗಣಿ ಕಸ ಗುಡಿಸೋರು ಗುಡಿಸುತ್ತಿದಂಗೇಯ ಒಲೆಯೊಳಗಿನ ಬೂದಿ ತಗಿಯೋರು ಯಾರೊ. ಕಸಮುಸುರಿ ಮಾಡೋರು ಯಾರೊ, ಒಲಿ ಮೇಲೆ ಜೋಳದ ನುಚ್ಚಿಗೆ ಎಸರಿಡೊರು ಯಾರೊ. ಎರಡು ಮೂರು ಹಾಲಿನ ಸ್ವಾರಿಗಳನ್ನ ಹೆಪ್ಪ ಹಾಕಿದ್ದವುಗಳನ್ನು ಸೀಕಾದ ಮೇಲಿಂದ ಇಳಿಸಿ, ಕೆನೆಸರಿಸಿ ಮೊಸರು ತಗದು ಕೆನೆ ಸಮೇತ ದೊಡ್ಡ ಸೋರಿಯಲ್ಲಿ ಸುರುವಿ ಮಜ್ಜಿಗೆ ಕಡಿಯಲು ಹುಗಿದಿರುವ ಗೂಟಕ್ಕೆ ಕಡಗೋಲು ತಂದು ಗೂಟಕ್ಕೆ ಕಟ್ಟಿದ ಎರಡು ಹಗ್ಗಗಳನ್ನು ಕೆಳಿಗೊಂದು ಮೇಲೊಂದು ಸರಿಸಿಕೊಂಡು, ಮೊಸರು, ಕೆನೆ, ನೀರು ಸೇರಿಸಿ ಸರಾಬರಾ ಅಂತ ಮಜ್ಜಿಗೆ ಕಡಿಯೋದಕ್ಕೆ ಶುರು ಮಾಡಿದರೆ ಕಡಿದು ಕಡಿದು ಕೈನೋವು ಬಂದರೂ ಸ್ವಲ್ಪ ಹೊತ್ತು ನಿಲ್ಲಿಸಿ ಸುಧಾರಿಸಿಕೊಂಡು ಮತ್ತೆ ಆರಂಭ ಮಾಡುತ್ತಿದ್ದಳು. ಕಡಿದಾದ ಮೇಲೆ ಬಂದ ಬೆಣ್ಣೆಯನ್ನು ತಗದು ಬೆಣ್ಣಮಡಿಕೆಯೊಳಗೆ ಉಂಡೆಕಟ್ಟಿ ಹಳೆಯದನ್ನ ತಗದು ತೊಳದು ಹಳೆ ಮಜ್ಜಿಗೆಯನ್ನು ಎಮ್ಮೆಗೆ ಇಡುವ ಬಾನಿಗೆ ಚೆಲ್ಲಿ ಹೊಸ ಮಜ್ಜಿಗೆಯನ್ನ ಸುರಿದು

ಕಮತಕ್ಕೆ ಹೋಗುವವರು ತಟ್ಟೆ ತುಂಬ ಜೋಳದ ನುಚ್ಚು ತುಂಬಿಕೊಂಡು ಮಜ್ಜಿಗೆಗೆ ಬರುವ ಮುನ್ನ ತಯಾರಿರಬೇಕಿತ್ತು, ತಟ್ಟೆ ತುಂಬ ಅಂಬ್ಲಿ ಬಿತ್ತಂದ್ರೆ ಮಧ್ಯಾಹ್ನ ಹನ್ನೆರಡವರೆಗೂ ಹೊಟ್ಟೆ ಹಸಿವಾಗುತ್ತಲೇ ಇರಲಿಲ್ಲಾ. ಮನೆಯವರು ಸುರು ಹಚ್ಕೋಳದಕ್ಕೆ ಮುಂಚೆನೆ ಥಾವರಜ್ಜಿ, ಕುಂಟ ಸಿಂಗರಿ, ಹೆಳವ ಪಕ್ಕೀರ, ಪಕ್ಕದ ಮನೆ ಪಾಂಡು ಹಾಜರಾಗಿರುತ್ತಿದ್ದರು. "ಮಜ್ಜಿಗೆಯಲ್ಲಾ, ದಾನ ಮಾಡ್ರಿ" ಅಂತ ತೊಪು, ಜಾನಿ, ಮುದುಕಿಗೆ ಅಪ್ಪಣೆ ಮಾಡಿಂದ. ಪ್ರತಿಯೊಬ್ಬರಿಗೂ ಸತತವಾಗಿ ಮನೆಮನೆಗೆ ಚರಗಿಯಲ್ಲ ಹಾಕುವವರೆಗೆ ಬಂದವರಿಗೆ ಇಲ್ಲ ಅಂತ ಹೇಳಿದಂತೆ ದಾಸೋಹ ನಡೆಯಲೇ ಬೇಕಿತ್ತು.

ದಂಡ್ಯಮ್ಮನ ಮೀಸಲು ಮೊದಲು ಕಾಸಿ ಮಡಿಕೆಕುಂಬದಲ್ಲಿ ತುಂಬಿ ಮಡಿ ಬಟ್ಟೆಯಿಂದ ಕಟ್ಟಿ ಮೇಲಿಡಲಾಗುತ್ತಿತ್ತು. ದಂಡ್ಯಮ್ಮನ ಜಾತ್ರೆ ದಿನ, ಮನೆ ಮನೆಯಿಂದ ಜಾತ್ರೆಗೆ ಹೋಗುವವರು ಕಡ್ಡಾಯವಾಗಿ ಮೀಸಲು ತುಪ್ಪವನ್ನು ಹರಿಕೆಯ ದುಡ್ಡನ್ನು ತೆಗೆದುಕೊಂಡು ಹೋಗಿ ಹರಿಕೆಯನ್ನ ತಲುಪಿಸಿ "ತಾಯಿ ದಂಡಿ ದುರ್ಗವ, ನಮ್ಮ ಮನೆಯೊಳಗೆ ಹೈನಿನಹೊಳಿ ಹಿಂಗ ಹರಿತಾ ಇರಲವ್ವ" ಅಂತ ಹರಕೆ ಹೊತ್ತು ಊರಿಗೆ ಬರುತ್ತಿದ್ದರು.

* * *

44. ಹುಲಿಯೂರನ ಎರಡನೇ ಪ್ರಸಂಗವೊ

ಹುಲಿಯೂರ ಹಾಸ್ಟೆಲಿನಲ್ಲಿದ್ದು ಓದುತ್ತಿದ್ದ. ವಾರಕ್ಕೆ ಒಮ್ಮೆ ರಜಾದಿನಗಳಲ್ಲಿ ಹಾಸ್ಟಲ್ ಬಂದ್ ಆದಾಗ ಊರಿಗೆ ಬರುತ್ತಿದ್ದ. ಊರಿಗೆ ಬಂದರೆ ಅವನಿಗೇನು ಕೂಡಿಸಿ ಕೂಳು ಹಾಕುತ್ತಿರಲಿಲ್ಲಾ. ಬೇಸಿಗೆಯಲ್ಲಿ ಹೊತ್ತಾರೆ ಎದ್ದು ಅವರ ಎರೆ ಜಮೀನಲ್ಲಿ ಹಾಕಿದ್ದ ಸಣ್ಣ ಹತ್ತಿ ಬಿಡಿಸೋದಕ್ಕೆ ಮನೆಯ ಹೆಂಗಸರ ಜೊತೆಗೆ ಹೋಗಲೆ ಬೇಕಿತ್ತು. ಅದಾದ ಮೇಲೆ ಹತ್ತಿ ಪುಳ್ಳಿ ಆರಿಸೋದು, ಕಬ್ಬಿಣ ರಂಟೆಗೆ ಚೆಲ್ಲಾರ ಹೊಡೆಯುವುದು, ಗೊಬ್ಬರದ ಬಂಡಿಗೆ ಕಟ್ಟಿದ ನಾಕು ಎತ್ತುಗಳಲ್ಲಿ ಮುಂದಿನ ಚೆಲ್ಲಾರದ ಎರಡು ಎತ್ತುಗಳನ್ನು ಹೊಡೆಯುವುದು. ಎತ್ತುಗಳನ್ನು ಮೇಯಿಸುವುದು ಮಾಡಲೇಬೇಕಿತ್ತು. ಹತ್ತಿ ಬಿಡಿಸುವುದು, ಹತ್ತಿ ಪುಳ್ಳಿ ಆರಿಸುವುದು ಅತ್ಯಂತ ಕೆಟ್ಟ ಕೆಲಸ ಅಂತ ಹುಲಿಯೂರ ಭಾವಿಸಿದ್ದ. ಹತ್ತಿ ಬಿಡಿಸುವಾಗ ದೂರದ ಇಳಂಗೋವಿಯ ಅಂಗಡಿಗೆ ಕೆಜಿ ಎರಡು ಕೆಜಿ ಹತ್ತಿ ಒಯ್ದು ಕೊಬರಚಿನ್ನಿ ಮತ್ತು ಕರ್ಜೂರ ತಂದು ತಿನ್ನೋದು ಒಂದು ಮೋಜಿನ ಕೆಲಸವಾಗಿತ್ತು. ಆದರೆ ಪುಳ್ಳಿ ಆರಿಸೋದು ಮಾತ್ರ ಬೇಡವಾದ ಕೆಲಸ ಅನಿಸಿ ಒಮ್ಮೊಮ್ಮೆ ಹಠಮಾಡಿ ತಪ್ಪಿಸಿಕೊಂಡು ದನ ಮೇಯಿಸೋದಕ್ಕೆ ಬೇಕಾದರೂ ಹೋಗುತ್ತಿದ್ದ. ಅವ್ಯಾವೂ ಇಲ್ಲದಿದ್ದರೆ ನಾಕು ಎತ್ತುಗಳನ್ನು ಹೊಡೆದುಕೊಂಡು ಮೇಯಿಸುವ ಜವಾಬ್ದಾರಿ ಅವನಿಗೆ ಕೊಡಲಾಗುತ್ತಿತ್ತು. ಅಂತಹದ್ದೆ ಒಂದು ಸನ್ನಿವೇಶ ಅವನ ನಾಕು ಎತ್ತುಗಳನ್ನು ಹೊಡೆದುಕೊಂಡು ಮೇಯಿಸೋದಕ್ಕೆ ಹೊರಟಿದ್ದ. ಅವನ ಹಿಂದೆ ಊರಿಗೆ ಹೊಸದಾಗಿ ಬಂದಿದ್ದ ಮಾಸ್ತರನ ಸಂಬಂಧಿಕಳಾದ ವಿಶಾಲಕ್ಷಿನೂ ತನ್ನೆರಡು ಎತ್ತುಗಳನ್ನು ಹೊಡೆದುಕೊಂಡು ಹೊರಟಿದ್ದಳು. "ಹುಲಿಯೂರ ಎತ್ತು ಮೇಯಿಸೋದಕ್ಕೆ ಹೊಂಟಿಯಾ" ಕೇಳಿದಳು. "ಹೂಂನವ್ವ ವಿಶಾಲಕ್ಷವ್ವ, ನೀನು ಹೊಂಟಿಯೇನು?" ಮರುಪ್ರಶ್ನೆ ಮಾಡಿದ. "ಹೂಂ ನೋ ನಾನು ಹೊರಟೀನಿ. ಅಂದಂಗೆ ಯಾವ ಕಡೀಗ ಹೊಂಟಿ, ನಾನು ಬರಲ ನೀನು ಹೋಗೋ ಕಡೀಗ" ಅವನು ಹೂಂ ಅನ್ನೋದಕ್ಕೂ ಮುಂಚೆ ಅವನ ಹಿಂದೆ ಹೊರಟಳು.

ಅವನು ಒಂದು ಬದುವಿನ ಮೇಲೆ ನಾಕು ಎತ್ತುಗಳನ್ನು ಮೇಯಿಸುತ್ತಿದ್ದರೆ ಪಕ್ಕದಲ್ಲೇ ಮತ್ತೊಂದು ಬದುವಿನ ಮೇಲೆ ವಿಶಾಲಕ್ಷಿ ಎತ್ತು ಬಿಟ್ಕೊಂಡು ಹರಟೆ ಹೊಡೆಯುತ್ತಿದ್ದಳು. "ಅಲ್ಲ ನೀ ಸಾಲಿ ಓದಾಕ ಹತ್ತಿ, ಈ ಎಲ್ಲಾ ಕೆಲಸ ಯಾಕ ಮಾಡ್ತಿ, ಮಾಡಲ್ಲ ಅಂತ ಹೇಳಬೇಕು, ನಿಮ್ಮ ಮನಿಯಾಗ ಮಂದಿಗೇನು ಕಮ್ಮಿ ಯಾರಾರು ನೋಡಿಕೊಳ್ತಾರೆ" ಹೇಳಿದಳು. "ಹೂಂ ಕೆಲಸ ಮಾಡದಿದ್ದರೆ ಸಂಜೆ ಮುಂದೆ ಊಟ ಇಲ್ಲ, ನಮ್ಮ ಮನೆಯಲ್ಲಿ ಇವು ಯಾವು ನಡೆಯಲ್ಲ, ಪ್ರತಿಯೊಬ್ಬರು ಕೆಲಸ ಮಾಡಲೇ ಬೇಕು" ಉತ್ತರಿಸಿದ. ಹೊತ್ತು ವಾಲಿತ್ತು ಅಲ್ಲೆ ಕೆಳಗಿದ್ದ ಹಳ್ಳದೊಳಗೆ ನೀರು ಕುಡಿಸಿ ಮತ್ತೊಂದಿಷ್ಟೊತ್ತು ಎತ್ತುಗಳನ್ನ ಮೇಯಿಸಿ ಮನೆಗೆಹೋಗಬಹುದು ಅಂತ ಅಲ್ಲೆ ಅವರ ಹೊಲದ ಪಕ್ಕದ ಬೀಳಲ್ಲಿ ಎತ್ತುಗಳನ್ನ ಬಿಟ್ಟರು. ಆಗಲೆ ಅವರಿಗಿಂತ ಮುಂಚೆ ಎತ್ತುಗಳನ್ನು ಬಿಟ್ಟು ಮೇಯಿಸುತ್ತಿದ್ದ ಜುಮ್ಮ, ಯಂಕಂಚಿ, ಸಾಣೇರೊ ಸುಬ್ಬ, ಹಗರಿನಾಗ. "ಅಲಾ ಇವ್ನ ವಿಶಾಲಕ್ಷಿ ಹುಲಿಯೂರನ ಹಿಂದ ಅದಾಳ್ರಲೆ, ನಾವು ಈಕಡೀಗ ಬಂದ್ಲು, ಎಲ್ಲಿಗೆ ಹೋದಳು ಅಂತ ಹುಡುಕೆ ಹುಡುಕಿದ್ವಿ" ಯಂಕಂಚಿ ಇಡೀ ಗುಂಪಿಗೆ ಹೇಳಿದ. "ಹೌದಲ್ಲಲೆ ಈ ಮಗ ಹುಲಿಯೂರ ಮುಂಜಾನೆ ನಾನು ಕೇಳಿದರೆ ಇಲ್ಲಪ್ಪ ಮುಂದ ಬರಲ್ಲ ಹಿಂದೆ ಎರಿಹೊಲದ ಕಡೀಗೆ ಹೋಗ್ತಿನಿ ಅಂದಾವ ನೋಡು ಹೆಂಗ ಈ ಕಡೀಗ ಬಂದಾನ" ಸಾಣೇರೊ ಸುಬ್ಬ ಹೇಳಿದ. ಸುಬ್ಬ ಅವನ ಜೊತೆಗೆ ಹಾಸ್ಟೆಲ್‌ನಲ್ಲಿ ಓದುತ್ತಿದ್ದ. ಆದರೆ ಅವರಿಬ್ಬರ ದೋಸ್ತಿ ಅಷ್ಟಕಷ್ಟೆ ಇತ್ತು. ಹಂಗಾಗಿ ಅವನ ಜೊತೆಗೆ ಹೆಚ್ಚು ಸಲಿಗೆ ಇಟ್ಕೊಂಡಿರಲಿಲ್ಲಾ. "ಅಲ್ಲಪ ನಿಂತಾಗ ಏನೈತೆ ನಿನ್ನ ಕರ್ಕೊಂಡ ಬರಾಕ. ಆಂ, ವಿಶಾಲಕ್ಷಿ ಹುಡುಗಿ" ಸೂಕ್ಷ್ಮವಾಗೆ ಹೇಳಿದ ಜುಮ್ಮ. "ಆದದ್ದ ಆಯಿತು ಈಗ ಬಂದಾಳಲ್ಲ ನನಮಕ್ಕಳ್ರ ಯಾರ್‍ಯಾರದು ನೋಡೋ ಆಶೆ ಐತೆ ನೊಡಿ ತೀರಿಸಿಕೊಳ್ರಿ ಮತ್ತ ಸಿಕ್ತಾಳೊ ಇಲ್ಲ. ಯಾರ್‍ಯಾರು ಮುಟ್ಟಬೇಕು ಅನ್ಕೊಂಡೀರಿ ಮುಟ್ಟಿ ಆನಂದ ಪಟ್ಕೊಳ್ರಿ, ನಡೀರಿ ಮದಲು, ಅವನನ್ನ ಮತ್ತ ಅಕೀನ ಸೇರಿಸಿಕೊಂಡು ಅಂಡೋಲ್ ಪಂಡೋಲ್ ಆಡೋಣ. ಅವಾಗ ನೀವು ಏನೇನು ಅಂದುಕೊಂಡಿರೊ ಅದು ಇಡೇರುತ್ತೆ" ವಯಸ್ಸಿಗೆ ಸಹಜವಾದ ಬಯಕೆಗಳನ್ನು ಯಂಕಂಚಿ ಹೊರಹಾಕಿದ್ದ. "ಅಲ್ಲಪ್ಪ ಹುಲಿಯೂರ ನಾವು ಅಷ್ಟೊಂತ್ತಿಂದ ನೀ ಬರ್ತಿ ಅಂತ ಕಾಯಾಕತ್ತಿವಿ, ನೀ ನೋಡಿದರೆ ತಾಳೆ ಮರದ ಕೆಳಗೆ ಕುಂತಿಯ. ಅಲ್ಲ ನಾವು ಎಲ್ಲ ಸೇರಿ ಆಟ ಆಡೋಣ ಬರ್ರಿ" ಅಂದ ಜುಮ್ಮ. ಜುಮ್ಮ ಬಲೆ ಮಾತಿನ ಮಲ್ಲ, ಮಾತು ಅಂದ್ರೆ ಮುಂದಿನ ಮಂದಿ ನಂಬಿ ತಮ್ಮ ಬಳಿ ಇರೋದನ್ನ ಹಂಗೆ ಕೊಟ್ಟ ಬಿಡಬೇಕು ಅಂತ ಮಾತುಗಾರ. ಯಾರದಾದರು ಹೊಲದಲ್ಲಿ ಕಲಂಗಡಿ ಹಣ್ಣಿದೆ ಹೊಲದವನು ಮಹಾಬೆರಕಿ ಯಾರನ್ನೂ ಒಳಗೆ ಬಿಡದಿದ್ದರೆ, ಯಾರಿಗೂ ಹತ್ರ ಸುಳಿಯಗೊಡದಿದ್ದರೆ, ಎತ್ತು ಮೇಯಿಸುವವರು ಹುಸೇನಿಯ ಮಗ ಮಾತುಗಾರ ಜುಮ್ಮನನ್ನ ಮುಂದೆ ಬಿಡುತ್ತಿದ್ದರು. "ಏನು ಕಾಕ ಕಲ್ಲಂಗಡಿ ಹೊಲ ಕಾಯ್ತಿದಿಯಾ, ಭಾರಿ ಬಿಟ್ಟಾವನೋಡು

ಕಲ್ಲಂಗಡಿ" ದೂರದಿಂದಲೆ ಮಾತಿವರಸೆ ತೆಗೆದು ಒಳಗೆ ಪ್ರವೇಶಿಸುತ್ತಿದ್ದ. "ಎಯ್, ಯಾರಲೇ ತಮ್ಮ ನೀ ದೂರಿರು, ಹೊಲದಾಗ ಬರಾಕ ಹೋಗಬೇಡ" ಕಾಯುವವನ ಕಟ್ಟಪ್ಪಣೆ. "ಅಲ್ಲಾ ಕಾಕ, ಈ ಕರ್ರಗಿರೊವೂ ಬಳ್ಳಿಯಲ್ಲಿ ಕಮರಗಟ್ಟಿದವು ಇರ್ತಾವಲ್ಲ, ಅವನ್ನ ದನಗಳಿಗೆ ಹಾಕ್ತಿರಿ ತಾನೆ, ಅಂತಹವನ್ನ ಮಂದಿಗ ಕೊಟ್ರ ಪುಣ್ಯದ ಕೆಲಸ ಮಾಡಿದಂಗೆ ತಾನೆ. ಅಲ್ಲಾ ನಾವು ಮಧ್ಯಾಹ್ನದಿಂದ ನೀರಡಿಸಿವಿ ಕುಡಿಯಾಕ ಎಲ್ಲೂ ನೀರಿಲ್ಲ ಒಂದು ಕಮರಗಿಟ್ಟಿರೊ ಕಲ್ಲಂಗಡಿ ಕೊಟಿದ್ರೆ ನಿನ್ನ ಹೆಸರೇಳಿ ಬದಿಕಿಕೊಳ್ತಿದ್ವಿ" ಕೇಳಿದವನ ಕರಳುಕಿತ್ತು ಬರುವಂತೆ ಭಾವನಾತ್ಮಕವಾಗುವಂತೆ ಮಾಡಿದ್ದ. "ಲೇ ತಮ್ಮ, ಕಮರಗಟ್ಟಿದ್ದ ಯಾಕಲೇ, ತಗೊ ಅಂತ" ದೊಡ್ಡದೊಂದು ಕಾಯಿಯನ್ನೇ ಕಿತ್ತುಕೊಟ್ಟಿದ್ದ. ಎತ್ತು ಮೇಯಿಸುವವರು "ಅಲ್ಲಪ್ಪ ಜುಮ್ಮ ಅದೇನ ಮಾತುಗಳು ನಿನ್ನವು ಅಂತೀವಿ, ಕೇಳಿದವನು ಸುಕಾಸುಮ್ಮನೆ ಕಿತ್ತುಕೊಟ್ಟುನಂದ್ರ ಭಾರಿ ಆಯಿತು ಬಿಡು" ಶಬ್ಬಾಸ್‌ಗಿರಿ ಕೊಟ್ಟಿದ್ದರು.

ಜುಮ್ಮ ಹುಲಿಯೂರನ್ನ ಮೇಲೆತ್ತಿ ಕೆಳಗೆ ಬಿಸಾಕಿದ್ದ. ಇನ್ನೂ ವಿಶಾಲಕ್ಷಿ ಯಾರ ಕಡೆಗೆ ಸೇರಿ ಆಟ ಆಡುತ್ತಾಳೆ ಅನ್ನೋದನ್ನ ಯಂಕಂಚಿ, ಸುಬ್ಬ, ಹಗರಿನಾಗ ಕಾಯ ತೊಡಗಿದರು. ಅಕಿ ಯಾವುದೇ ಕಾರಣಕ್ಕೂ ಹುಲಿಯೂರನ ಗುಂಪಿನೊಳಗೆ ಇರಬಾರದು ಎನ್ನುವುದು ಅವರೆಲ್ಲರ ವಾದ. ಜುಮ್ಮನ ಮಾತುಗಳು ಯಾವತ್ತು ಪ್ರಸ್ತುತವೊ ಇಲ್ಲವೊ ಅಂತ ಟೆಸ್ಟ್ ಮಾಡೊ ಟೈಂ ಬಂದಿತ್ತು. ಜುಮ್ಮ ತನ್ನ ಪ್ರಸ್ತಾವನೆಯನ್ನ "ನೋಡಪ್ಪ, ನಾನು ವಿಶಾಲಕ್ಷಿ, ಯಂಕಂಚಿ ಹಗರಿನಾಗ ಒಂದು ಕಡೀಗ, ನೀವು ಉಳದವರು ಒಂದ ಕಡೀಗ, ನಡೀರಿ ಹಂಗಾರ ಆಡೋಣ." ಜುಮ್ಮನ ಮಾತಿಗೆ ವಿಶಾಲಕ್ಷಿ ಸಿಡಿಮಿಡಿಗೊಂಡಿದ್ದಳು. ಜುಮ್ಮ ಖಾಲಿ ಮಾತುಗಳ ಬಗ್ಗೆ ಚಿರಪರಿಚಿತಳಾಗಿದ್ದಳು. ಮಾತು ಕೇಳಿ ಅವಳ ಮನಸ್ಸಿಗೆ ನೋವಾಗಿ "ಲೇ ಜುಮ್ಮ ಮುಚ್ಕೊ ಒಂದೀಟು, ನಾನು ಮದಲಿಂದಲೂ ಹುಲಿಯೂರನ ಟಿಂನಲ್ಲಿ ಅದೀನಿ ಅಲ್ಲೆ ಇರ್ತಿನಿ ಆಡೋರು ಬೇಕಾರ ಆಡಬಹುದು? ಇಲ್ಲಂದ್ರೆ ನಿಮ್ಮ ದಾರಿ ನೀವು ನೋಡಿಕೊಳ್ರಿ". ಕಡ್ಡಿ ತುಂಡು ಮಾಡಿದಂಗೆ ಮುಖಕ್ಕೆ ಹೇಳಿದಳು. "ಆಯ್ತು ಬಿಡವ್ವ ನೀ ಇಲ್ಲದ್ರೇನು, ಅಲ್ಲಿದ್ರೇನು? ನಾವು ಏನು ಅಂದುಕೊಂಡಿವೊ ಅದನ್ನ ಮಾಡೆ ಮಾಡ್ತಿವಿ, ಆಯ್ತು ಬಿಡು" ಯಂಕಂಚಿ ಸೋಲನ್ನ ಒಪ್ಪಿಕೊಂಡ. "ಹುಲಿಯೂರ ಅದೇನು ಮೋಡಿ ಮಾಡಿದ್ದಾನ್ರಲೇ? ಅವನು ಅಂದರೆ ವಿಶಾಲಕ್ಷಿ ಒಬ್ಬಾಕೀನ ಅಲ್ಲ, ಬಹಳ ಹುಡುಗಿಯರನ್ನು ನೋಡಿನಿ, ಅವನೆ ಬೇಕು ಅಂತಾರ, ನನ ಮಗ ಶ್ರೀಕೃಷ್ಣನ ಪಕ್ಷದಾಗ ಹುಟ್ಟಿರಬೇಕು." ಸುಬ್ಬ ತಡಿಯಾಕ ಆಗದೆ ಹೊರಹಾಕಿದ. "ಹೋಗಲಿ ಬಿಡಲೆ, ಅವನ ಟೀಂ ನಲ್ಲಿದರೆ ಅವನಿಗೆ ಮುಟ್ಟೋದಕ್ಕೆ ಆಗೋದಿಲ್ಲ, ಆದರೆ ನಾವು ಮುಟ್ಟಬಹುದಲ್ಲ" ಜುಮ್ಮ ತನ್ನ ವಾದವನ್ನು ಹೊರಹಾಕಿದ.

ಮೂರ್ನಾಕು ಆಟ ಆಡಿದ ಮೇಲೆ ಹುಲಿಯೂರನ್ನ ಒಂದು ಎತ್ತು ಪಕ್ಕದ ಹೊಲದಲ್ಲಿ ಬೆಳದಿದ್ದ ಕೂಳಿಯನ್ನ ತಿನ್ನಲು ಓಡಿತ್ತು. "ಲೇ ಹುಲಿಯೂರ ಮುಗಿತಲೆ ನಿನ್ನ ಕತೆ ಜೋಳದ ಕೂಳಿ ತೆನೆ ಆಗೋದಕ್ಕೆ ಬಿಟ್ಟಿದ್ದ ತಗರಿ ರಾಮ. ನಿನ್ನ ಎತ್ತು ನೋಡಲ್ಲಿ ತೊಗರಿ, ಕೂಳಿ ಜೋಳ ತಿಂತಾ ಇದೆ. ನಿನ್ನ ಚರ್ಮ ಸುಲಿಯೊ ಹಾಗೆ ಹೊಡಿತಾನೆ ಬಿಡು" ಜುಮ್ಮ ಹೇಳಿದ. ಹುಲಿಯೂರ ಆಟ ಬಿಟ್ಟವನೆ ಎತ್ತನ್ನಹಿಡಿದುಕೊಂಡು ಬರೋದಕ್ಕೆ ಓಡಿದ. ಅವನ ಹಿಂದಿಂದೆ ವಿಶಾಲಕ್ಷಿನೂ ಓಡಿದಳು. "ಹೂಂ ನೋಡ್ರಲೆ, ಅವನು ಒಬ್ಬನೆ ಹೋಗುತ್ತಾನೆ ನಾವು ಇಕೀಗ ಏನಾರು ಮಾಡಬಹುದು ಅಂದುಕೊಂಡರೆ ಅವನಹಿಂದೆ ಓಡಿ ಹೋಗ್ತಾ ಇದ್ದಾಳೆ." ಯಂಕಂಚಿ ತಡಿಯೋದಕ್ಕೆ ಆಗದೆ ಜೋರಾಗಿ ಹೇಳಿದ "ಹೋಗಲಿ ತಡಿರಿ, ಏನು ಮಾಡ್ತಾರೆ ನೋಡೋಣ" ಜುಮ್ಮನ ಕ್ರಿಮಿನಲ್ ತಲೆ ಓಡಿತ್ತು. ಅವರ ತಲೆಯೊಳಗೆ ಏನೇನೊ ಆಲೋಚನೆಗಳು ಹುಟ್ಟಿಕೊಂಡಿದ್ದವು. ಅವರು ಬಹಳ ಹೊತ್ತು ಆ ಹೊಲದಲ್ಲೇ ಇರೋದನ್ನ ನೋಡಿ ಇನ್ನೂ ಚಡಪಡಿಕೆ ಸುರು ಆಗಿತ್ತು. "ಆಯ್ತು ನಡಿರಲೆ, ಅಕಿ ಅವನ ಮೇಲೆ ಮನಸ್ಸು ಮಾಡಿ ಅವನ ಹಿಂದೆ ಹೋಗ್ಯಾಳ, ಏನಾರ ಮಾಡಿಕೊಳ್ಳಲಿ ನಿಮ್ಮದೇನು ಗಂಟು ಹೊಕೈತಿ" ಜುಮ್ಮ ಸಮಾಧಾನ ಮಾಡಾಕ ನೋಡಿದ. ಆದರೆ ಅವನ ಬದ್ಧ ವೈರಿ ಸುಬ್ಬ ಮಾತ್ರ "ಅದೆಂಗಲೆ, ಆ ಮಗ ಒಬ್ಬನೆ ಮಜ ಮಾಡ್ತಾನ, ನಾವು ಮಾತ್ರ ಒಣಗಣಾಸನ ನೀವು ಹೋಗ್ರಿ ನಾನು ನೋಡಿಕೊಂಡೆ ಬರ್ತಿನಿ. ಎಲ್ಲದಾರ, ಏನು ಮಾಡ್ತಾರ." ಅಂದವನೆ ಅಂದಾನಪ್ಪನಹೊಲ ತಡಾದು ಮುಂದ ಹೊರಟ. ಅವನು ಹೋಗೋದಕ್ಕು, ಅವರಿಬ್ಬರು ಮಾತಾಡಿಕೊಳ್ತ ನಗುತ್ತ ಹೊರಗಡೆ ಬರೋದಕ್ಕು ಸರಿಹೋಯ್ತು. ಆದರೆ ಹುಲಿಯೂರನ ಮೇಲೆ ಪ್ರಾಣಾನೆ ಇಟ್ಕೊಂಡಿದ್ದ ವಿಶಾಲಕ್ಷಿ ಅವನ ವರ್ತನೆಯಿಂದ ಅವನ ಮೇಲೆ ಗೌರವ, ನಂಬಿಕೆ, ಭರವಸೆ ಬಂತು. ಆದರೆ ಹೊರಗೆ ಕಾಯುತ್ತಿದ್ದ ಉಡಾಳರ ಗುಂಪಿಗೆ ಅವನು ಖಳನಾಯಕನಂತೆ ಕಂಡಿದ್ದ. ಹುಲಿಯೂರ ಮಾತ್ರ ವಿಶಾಲಕ್ಷಿಯ ಮನಸ್ಸಿನೊಳಗೆ ಮನೆ ಮಾಡಿದ್ದ. ಅವಳು ಉಳಿದವರಿಗೆ ಹೆದರಿ ಹುಲಿಯೂರನ ಹಿಂದೆ ಓಡಿಬಂದಿದ್ದಳು. ಆ ರಕ್ಷಣೆ ಅವಳಿಗೆ ಹುಲಿಯೂರನಿಂದ ಸಿಕ್ಕಿತ್ತು.

* * *

45. ಹಸಿವು ಮತ್ತು ಹತ್ತು ಪೈಸೆ

ಹುಲಿಯೂರನ ಕೂಡು ಕುಟುಂಬದಲ್ಲಿ ಮೂವತ್ತು ಜನರಿದ್ದರು. ಮುಂಜಾನ ಮಾಡುವ ಜೋಳದ ಅಂಬಲಿ ಖಾಲಿಯಾಗಿ ಇಬ್ಬರು ಹೆಂಗಸರು ಸುಡುವ ರೊಟ್ಟಿ ಸಾಕಾಗುತ್ತಿರಲಿಲ್ಲಾ. ಮಧ್ಯಾಹ್ನದ ಊಟಕ್ಕೆ ಏನೂ ಸಿಗುತ್ತಿರಲಿಲ್ಲಾ. ಸುಗ್ಗಿಯಲ್ಲಿ ಕಾಳಿನದೇನು ಕೊರತೆ ಇರಲಿಲ್ಲಾ. ಆದರೆ ಮುಂಗಾರು ಆರಂಭ ಆಯಿತು ಅಂದರೆ ಕಾಳಿನದು ಭಲೆ ಫಜಿತಿ. ಪಣತ, ಕಣಜಗಳೆಲ್ಲಾ ಖಾಲಿ ಖಾಲಿ. ಮಧ್ಯಾಹ್ನದ ರೊಟ್ಟಿಗೆ ಹುಡುಗರು ವಿಲಿವಿಲಿ ಒದ್ದಾಡುತ್ತಿದ್ದರು. ಹುಲಿಯೂರನೂ, ಅವನ ತಮ್ಮಂದಿರು ತಂಗಿಯರು ಹಸಿದುಕೊಂಡು ಒಳ್ಳೆಯ ನಾಯಿಯಂತೆ ಬೇಕಾರ ತಿರುಗಾಡುತ್ತಿದ್ದರು. ಇಡೀ ಮನೆಯ ದೊಡ್ಡವರೆಲ್ಲಾ ತಮ್ಮ ಕೆಲಸ ಮುಗಿಸಿ ಬೇರೆಯವರ ಕೆಲಸಕ್ಕೆ ಹೋಗುತ್ತಿದ್ದರು. ಸುತ್ತಲ ಊರುಗಳ ಪೈಕಿ ರಾಗನೂರು, ಬೂಸನಕಟ್ಟೆ, ಬುಡಮೇಲೆಳಹಳ್ಳಿ ಜನರು ಹೊರಗಡೆ ಎಷ್ಟೆ ಸಾಲ ಇದ್ದರೂ ಮನೆಯೊಳಗಿನ ಕಾಳು ಕಡಿ ಮಾತ್ರ ಪಣತಗಳಲ್ಲಿ ಹಗೇವುಗಳಲ್ಲಿ ತುಂಬಿಡುತ್ತಿದ್ದರು. ಭದ್ರನಾಯ್ಕನ ತಾಂಡದಲ್ಲಿ ತೊಪುನ ಬಿಟ್ಟರೆ ಯಾರು ಅಂತ ದೊಡ್ಡ ಹಿಡುವಳಿದಾರರಿರಲಿಲ್ಲಾ. ಬೆಳೆ ಅಷ್ಟಕಷ್ಟೆ, ಹಿಂದಿನ ಮಳೆಗಾಲಗಳೆಲ್ಲ ಮುಗಿದು ಹೋಗಿದ್ದವು. ಈಗ ಏನಿದ್ದರೂ ಜುಬುರು ಜಟ್ಟು ಮಳೆ. ಹಿಂದೆ ಬೀಳೋದಕ್ಕೆ ಸುರು ಮಾಡಿದರೆ ರಾತ್ರಿ ಹಗಲು ನೋಡ್ತಾನೆ ಇರಲಿಲ್ಲ. ಹಿಂದೆ ಎಲ್ಲಾ ಕಡೀಗು ಮಳೆ ಆವರಿಸಿಕೊಂಡು ಗುಡುಗಿ ಗುಡುಗಿ ಬೀಳುತ್ತಿತ್ತು. ಈಗಂತು ಹೊಲದಾಗಿದ್ರೆ ಮೇರೆ ಮೆಲಿಲ್ಲಾ, ಒಂದೆತ್ತಿನ ಕೊಂಬು ತೊಯ್ದಿದದ್ದರೆ ಮತ್ತೊಂದು ಎತ್ತಿನ ಕೊಡು ತೊಯ್ದಿರುತಿರಲಿಲ್ಲಾ. ಒಂದೆ ಝೂರೋ ಐದು ಹತ್ತು ನಿಮಿಷ ಬಿದ್ದು ನಿಂತು ಬಿಡುತ್ತಿತ್ತು. ಬಿತ್ತಿದ ಹೈಬ್ರಿಡ್ ಜೋಳ ಅಷ್ಟಕಷ್ಟೆ. ಒಮ್ಮೊಮ್ಮೆ ಈಡಾಗಿದ್ದರೆ, ಒಮ್ಮೊಮ್ಮೆ ಅಂಗಲಾಗಿ, ಬಿಳಿ ಕಸಹೊಡದು ತೆನೆ ಹೊಡೆಯದೆ ಒಳಹೊರಗಾಗಿ ಅಲ್ಲೆ ಬಾಡಿಹೋಗುತ್ತಿತ್ತು. ಇಡೀ ಹೊಲದಲ್ಲಿನ ತೆನೆ ಆರಿಸಿಕೊಯ್ದರು ಒಂದೆರಡು ತಟ್ಟೆ ಕಟ್ಟಿ ಬಂಡಿಯಲ್ಲಿ ಹೇರುತ್ತಿದ್ದರು. ಹಾಗಾಗಿ ಇಡಿ ವರ್ಷ ಆಹಾರದ ತೊಂದರೆ ಕಾಡುತ್ತಿತ್ತು. ಯಾರ ಹೊಲಗಳು ಕಸುಕಿತ್ತು

ಬೆಳೆಯುತ್ತಿರಲ್ಲಾ, ಅಲ್ಲದೆ ಊರಿನ ಸುತ್ತ ಹರದಾರಿಯಲ್ಲಿ ಯಾರನ್ನ ಕೇಳಿದರು ಹೈಬ್ರಿಡ್ ಜೋಳ, ತೊಗರಿಸಾಲು, ಬಹಳ ಅಂದ್ರೆ ರಾಗಿ. ಹತ್ತು ಹದಿನೈದು ಎಕ್ಕರೆ ರಾಗಿ ಹಾಕಿದರೂ ಮೂವತ್ತು ನಲವತ್ತು ಚೀಲ ಬೆಳೆಯುತ್ತಿರಲಿಲ್ಲಾ. ಸಾಲದ ಬಾಬ್ತು ಬೆಳೆದ ಬೆಳೆಯನ್ನೇ ಮಾರಿದ್ರು ಸಾಲ ಹಾಗೆ ಉಳಿಯುತ್ತಿತ್ತು. ಎಲ್ಲಾ ರೈತರು ಸಾಲದಲ್ಲಿಯೇ ಮುಳುಗಿದ್ದರು. ಬ್ಯಾಂಕ್‌ಗಳು, ಸೊಸೈಟಿಗಳಲ್ಲಿ ಕಡಿಮೆ ಬಡ್ಡಿಯ ಸಾಲದ ಉಪಯೋಗ ತಿಳಿಯದೆ ಸಿಂಬಳದಲ್ಲಿ ಬಿದ್ದ ನೊಣದಂತೆ ಒದ್ದಾಡುತ್ತಿದ್ದರು, ತೊಪುನಾಯ್ಕನು ಅದಕ್ಕೆ ಹೊರತಾಗಿರಲಿಲ್ಲ, ಮನೆತುಂಬ ಮಕ್ಕಳು, ಮೊಮ್ಮಕ್ಕಳು, ಮದುವೆ ವಯಸ್ಸಿಗೆ ಬಂದ ಹೆಣ್ಣು ಹುಡುಗಿಯರು, ಓದುವವರು, ಬೀಜ, ಗೊಬ್ಬರ, ಕಳೆ, ಕೊಯ್ಯುವುದು ಎಲ್ಲವಕ್ಕೂ ಕಾಸು, ಕಾಳು ಕೊಡಬೇಕಿತ್ತು. ಹೀಗಾಗಿ ವ್ಯವಸಾಯವೇನು ಲಾಭದಾಯಕವಾಗಿರಲಿಲ್ಲಾ. ಬರುವ ರಾಗಿ ಜೋಳದಲ್ಲೆ ಮನೆ ಖರ್ಚುಗಳಾದ ಸಂತೆ, ತರಕಾರಿ, ಮೆಣಸಿನಕಾಯಿ, ಮಸಾಲೆ, ಹಬ್ಬ ಬಟ್ಟೆ ಪ್ರತಿಯೊಬ್ಬರು ತಿನ್ನುವವರೆ ಆದ್ದರಿಂದ ತಾಂಡದಲ್ಲಿ ಕುರಿ, ಕೋಳಿ, ಮೀನು, ಏಡಿ ಏನಾದರೊಂದು ಖಾಯಂ ಆಗಿ ಸಿಗುತಿತ್ತು. ಅವರು ಬೆಳೆದ ಜೋಳ ಮಾರಿ ದುಡ್ಡು ಎಷ್ಟಾದರು ಬಂದೀತು. ಅದನ್ನೆ ಕಾಸಬೇಕು ಅದನ್ನೆ ಬಡಿಯಬೇಕು, ಬೇರೆ ಏನೂ ಇಲ್ಲ, ಪರಿಸ್ಥಿತಿ ಹೀಗಿರುವಾಗ ಕಾಳು ಕಡಿಯ ಗಂಭೀರವಾದ ಕೊರತೆ ಅನಿವಾರ್ಯವಾಗಿತ್ತು. ಅದಕ್ಕೆ ಮನೆಯಲ್ಲಿ ಒಮ್ಮೊಮ್ಮೆ ಬರಿ ಬೇಯಿಸಿದ ಹುರುಳಿಕಾಳನ್ನೆ ಬಾಯಾಡಿಸಿ ನೀರು ಕುಡಿದು ಮಲಗುವ ಸನ್ನಿವೇಶಗಳೇ ಏರ್ಪಡುತ್ತಿದ್ದವು. ಯಾಕಂದ್ರೆ ಯಾರೊಬ್ಬರಿಗೂ ಶಿಸ್ತಿನ ಜೀವನನಡೆಸುವ ವಿಧಾನವೇ ಗೊತ್ತಿರಲಿಲ್ಲಾ. ಹೆಂಡ ಸರಾಯಿ ಪ್ರತಿದಿನ ಬೇಕು, ಎಲೆ ಅಡಿಕೆ, ನಶ್ಯಪುಡಿ, ತಂಬಾಕು, ಬೀಡಿ, ಮನೆ ಮಂದಿ ಎಲ್ಲರಲ್ಲೂ ಈ ಚಟಗಳು ಇದ್ದೇ ಇರುತ್ತಿದ್ದವು. ಕೆಲವು ಗೊತ್ತಾದಂಗೆ ಮಾಡಿದರೆ ಕೆಲವರು ಕಳುವಿನಿಂದ ಯಾರಿಗೂ ತಿಳಿಯದಂತೆ ಮಾಡುತ್ತಿದ್ದರು. ತಿಳಿಯದಂತೆ ಮಾಡುವವರಿಗೆ ಕಾಸು ಸಿಗುವುದು ಹೇಗೆ? ಮನೆಯಲ್ಲಿ ಇರುವ ಸೇರು ಪಾವು ಕಾಳನ್ನು ಕದ್ದು, ಟವೇಲು ದೋತ್ರದಲ್ಲಿಟ್ಟುಕೊಂಡು ಬಂದು ಅಂಗಡಿಯಲ್ಲಿ ಮಾರಿ ಬಂದ ಕಾಸಿನಲ್ಲಿ ಇವೆಲ್ಲ ತಲುಬಿನ ಸಾಮಾನುಗಳ ಖರೀದಿಯಾಗುತ್ತಿದ್ದವು.

ತೊಪುನಾಯ್ಕನ ದೊಡ್ಡ ಸಂಸಾರ ಸಾಕುವುದು ಒಮ್ಮೊಮ್ಮೆ ದುಸ್ತರವಾಗಿ ಬಿಡುತ್ತಿತ್ತು. ಕಾಳು ಜೋಡಿಸಬೇಕು, ಸಂಜೆ ಸಾರಿಗೆ, ಮುಂಜಾನೆ ಸಾರಿಗೆ, ಮಧ್ಯಾಹ್ನದ ಊಟಕ್ಕೆ ಜೋಡಿಸಿ ಹೆಂಗಸರಿಗೆ ಸಾಕು ಸಾಕಾಗಿ ಹೋಗುತ್ತಿತ್ತು. ಮನೆಯಲ್ಲಿ ಏನೂ ಇಲ್ಲದಾಗ ಏಡಿ ಹಿಡಿಯಲು ಹುಡುಗರಿಗೆ ಓಡಿಸುತ್ತಿದ್ದರು. ಅವರು ತರುವ ಮೂವತ್ತು ನಲವತ್ತು ಏಡಿಗಳನ್ನೇ ಸಾರು ಮಾಡಿ, ಮುದ್ದಿ ಮಾಡುತ್ತಿದ್ದರು. ಏನೂ ಇಲ್ಲದಾಗ ಒಣಮೀನುಗಳನ್ನು ನೆನೆಸಿ ಒಂದು ನಾಕು ಬದನೆಕಾಯಿ ಹಾಕಿ ಸಾರು

ಮಾಡಿ ಅದನ್ನೆ ಮುದ್ದೆಗೆ, ರೊಟ್ಟಿಗೆ ಪಲ್ಯೆ ಮಾಡಿ ಬಿಡುತ್ತಿದ್ದರು. ಸುಗ್ಗಿಕಾಲದಲ್ಲಾದರೆ ಹೀರೇಕಾಯಿ, ಸೆಣಬಿನ ಹೂವು, ಕೋಲಾಣಿಸೊಪ್ಪು ಮತ್ತು ಮದುಮಗಳ ಸೊಪ್ಪು, ಅಣಬೆ, ಪುಂಡಿಪಲ್ಯೆ ಇನ್ನೂ ಅನೇಕ ರೀತಿಯ ತರಕಾರಿ ಸೊಪ್ಪುಗಳು ಹೊಲದಲ್ಲೇ ದೊರೆಯುತ್ತಿದ್ದರಿಂದ ತಲೆಕೆಡಿಸಿಕೊಳ್ಳುವ ಪ್ರಮೇಯವೇ ಇರಲಿಲ್ಲ. ಒಮ್ಮೊಮ್ಮೆ ಸಂಜೆ ಗಂಡಸರು ಮನೆಗೆ ಬಂದರೆ ಹಳ್ಳಗಳ ಗುಂಡಿಗಳಲ್ಲಿ ಮನಸಾನಿಚ್ಛೆ ಮೀನುಗಳು ಸಿಗುತ್ತಿದ್ದವು. ಮೂವರು ಗಂಡಸರು ಕೈಯಾಗ ಚೀಲ ಹಿಡಿದು ಹೊರಟರೆ ಒಂದೆರಡು ಗುಂಡಿಗಳಲ್ಲಿ ಡುಮ್ಕಿ ಹೊಡೆದರೆ ಸಾಕು ದಂಡೆಯಲ್ಲಿ ಕುಂತಿರುತ್ತಿದ್ದ ಹೊಟ್ಟೆಪರಕಿ ಮೀನು, ನುಣಗ್ಯಾ, ಮೀಸಿಗಿರ್ಲು, ಹಾವುಮೀನು, ಮಟ್ಟು ಔಲಮಟ್ಟು ಕಲ್ಲು ನೆಕ್ಕುವ ಮೀನು, ಗೊದ್ಲಿ, ಬಾಳೆಮೀನು ವಿವಿಧ ಜಾತಿಯ ಮೀನುಗಳನ್ನ ಕೈಗೋಚಿಯಿಂದಲೆ ಹಿಡಿದು ದಂಡೆಗೆ ಎಸೆಯುತ್ತಿದ್ದರು. ದಡದ ಮೇಲೆ ಕೈಚೀಲ ಹಿಡಿದುಕೊಂಡವನು ಆರಿಸಿಕೊಂಡು ಹಾಕಿಕೊಳ್ಳುತ್ತಿದ್ದ. ಎಲ್ಲಾ ಆದ ಮೇಲೆ ಕಲ್ಲಮೇಲೆ ತಿಕ್ಕಿ ಹೊಟ್ಟೆಯೊಳಗಿದ್ದ ನೀಚನ್ನ ತೆಗೆದು ಬಿಸಾಕಿ ಸ್ವಚ್ಛ ಮಾಡಿಕೊಂಡೆ ಹೊರಟು ಬಿಡುತ್ತಿದ್ದರು. ಮನೆಯಲ್ಲಿ ಮಸಾಲೆ ಅರೆದು ಸಿದ್ದವಾಗಿರುತ್ತಿತ್ತು. ಮನೆಯಲ್ಲಿ ಹಿಟ್ಟು ಇದ್ದರೆ ರೊಟ್ಟಿ, ಇಲ್ಲದಿದ್ದರೆ ಗಂಜಿಯೂ ಅಲ್ಲದ ಬಿರಕಲ್ಲು ಅಲ್ಲದ ಮುದ್ದನೆ ಗತಿಯಾಗಿರುತ್ತಿತ್ತು.

ಹಿಂಗೆ ಒಂದು ಮುಂಗಾರು ಜೋರಿತ್ತು, ಊರ ಕೆರೆನೂ ಭರಪೂರ ತುಂಬಿತ್ತು. ಕಷ್ಣಭಟ್ಟರ ಮೂಲೆಗದ್ದೆಯಲ್ಲಿ ನಾಟಿ ಮಾಡಲು ತೊಪುನಾಯ್ಕನ ಮನೆಯವರೆ ಗುತ್ತಿಗೆ ಹಿಡಿದಿದ್ದರು. ಯಾಕಂದ್ರೆ, ನಾಗರಪಂಚಮಿ ಹಬ್ಬಕ್ಕೆಮಣಬೆಲ್ಲ ಎಂಟೊಂಭತ್ತು ಗಿಟಕು ಒಣಕೊಬ್ಬರಿ, ಹೊಳಿಗೆಗೆ ಮೈದಾ, ಉಂಡೆಗೆ ಬೇಕಾದ ಪುಡಿ ಸಾಮಾನಿಗೆ ಮನೆಯೊಳಗೆ ಕೌಡಿಕಾಸು ಇಲ್ಲದೆ ಉಸಿರುಗಟ್ಟಿತ್ತು. ಆದರೆ ಕಷ್ಟನೊ ಸುಖಾನೊ ಒಂದೇ ಮನೆಯವರು ಕಡ್ಡಾಯವಾಗಿ ಭತ್ತದ ಗದ್ದೆಯಲ್ಲಿ ಕೆಲಸ ಮಾಡಲೇಬೇಕಿತ್ತು. ಸಣ್ಣ ಹುಡುಗರು ಮಡಿ ತುಳಿಯುವುದು ಅಗಿ ಕಿತ್ತು ಒಂದೊಂದು ಹಿಡಿ ಅಗಿಗಳನ್ನ ಕೂಡಿಸಿ ಕಟ್ಟಿದ ಗಂಟನ್ನ ಮಡಿಗಳಲ್ಲಿ ಎಸೆಯುವುದು. ಹೆಂಗಸರು ಗಂಡಸರು ಕೆಸರೊಳಗೆ ಅಗಿಗಳನ್ನು ಹೂತು ಮುಂದೆ ಸಾಗುತ್ತಿದ್ದರು. ಮೂಲೆಗದ್ದೆ ಮೂಲಿ ಮುಕ್ಕಟ್ಟಿಂದ ಕೂಡಿತ್ತು. ಕಷ್ಣಭಟ್ಟ ಮೂರುವರೆ ಅಂತ ಬಾಯಿಲೆ ಹೇಳುತ್ತಿದ್ದ. ಆದರೆ ಅದರ ಮೂಲೆ ಮುಕ್ಕಟ್ಟು ಸೇರಿ ಹತತ್ರ ನಾಕು ಎಕ್ಕರೆನೆ ಆಗುತ್ತಿತ್ತು. ಟೆನೆನ್ಸಿ ಕಾನೂನು ಬಂದ ಮೇಲೆ ಯಾರು ಅವರ ಹೊಲ ಮಾಡುತ್ತಿದ್ದರು ಅವರೇ ಮಾಲೀಕರಾಗಿದ್ದರು. ಅದು ಜಮೀನು ದುಡದಿದ್ದಲ್ಲ ಹಾಗೆ ಅನಾಮತಿಯಲ್ಲಿ ಹೆಸರು ಮಾಡಿಕೊಂಡಿದ್ದು, ಈಗ ಅದು ಹೋದಾಗ ಬಹಳ ನೋವಾಗಿತ್ತು. ಅನಾದಿ ಕಾಲದಿಂದಲೂ ಉತ್ತು, ಬಿತ್ತಿ ಕಷ್ಟಪಟ್ಟು ಮಾಡಿದ ಬೆಳೆಯನ್ನ ಒಮ್ಮೆ ಬಂದು ರೈತರಿಂದ ಕಿತ್ಕೊಂಡು ಹೋದಾಗ ಹೆಂಡತಿ ಮಕ್ಕಳಿಗೆ ಕಷ್ಟಪಟ್ಟಿರು ಉಣ್ಣಾಕ

ಕಾಳಿಲ್ಲದೆ ವಿಲವಿಲ ಒದ್ದಾಡಿದ್ದು ಶಾಪವಾಗಿ ತಟ್ಟಿತ್ತು ಅವರಿಗೆ. ಆದರೂ ಕೃಷ್ಣಭಟ್ಟ ತನ್ನ ಗತ್ತು-ಗಮ್ಮತ್ತು ಬಿಟ್ಟಿರಲಿಲ್ಲಾ ಮಸರ್ರೈಜು ಪಂಚೆ, ಗರಿಗರಿ ಜುಬ್ಬ, ಹೆಗಲ ಮೇಲೆ ಶಲ್ಯೆ, ಕೈಯಲ್ಲಿ ಕೆಂಪು ಹರಳಿನ ಬಂಗಾರದ ಉಂಗರ, ಕಾಲೊಳಗೆ ಜರ್, ಜರ್ ಅನ್ನೊ ಚರ್ಮದ ಕೊಲ್ಲಾಪುರಿ ಜೋಡು. ಹಾಗೆ ಉಳಿಸಿಕೊಂಡು ಬಂದಿದ್ದ. ಸದಾ ಬಾಯಿಯೊಳಗೆ ಎಲೆ ಅಡಿಕೆ ಸಾಲದ್ದಕ್ಕೆ ಹೆನಡಿ ಸಿಗರೇಟು.

ಭತ್ತ ಹಚ್ಚೋದು ಇನ್ನೂ ನಡಿತಾನೆ ಇತ್ತು. "ಏಯ್ ಸು, ತೂ" ಅಂತ ಹುಳಹುಪ್ಪಡಿ ಗದರಿಸುವಂತೆ ಹುಲಿಯೂರನನ್ನ ಕರದ. "ಏನಲೆ ನಿನ್ನ ಹೆಸರು" ತನ್ನ ಜಮೀನ್ದಾರಕಿ ಗತ್ತಿನಲ್ಲಿ ಕೇಳಿದ. "ಹುಲಿಯೂರ" ಅಂದ. "ಏನಲೆ ಜೋಟುದ್ದ ಅದಿ ತಲೆ ನಿಗರಿಸಿಕೊಂಡೆ ಮಾತಾಡ್ತಿ. ಏನು ಸ್ವಾತಂತ್ರ್ಯ ಬಂದ್ರೆ ನನಮಕ್ಕಳ ನಿಮಗೆಲ್ಲಾ ದಿಮಾಕು ಬಂದು ಬಿಡ್ತೇನು? ಎದರು ನಿಂತೋರು ಯಾರು? ಏನು? ಅಂತೇಳಿ ಸ್ವಲ್ಪನಾರು ಖಬರ್ ಬೇಡ" ಕೃಷ್ಣಭಟ್ಟ ಹತಾಶೆಯನ್ನ ಸಣ್ಣ ಹುಡುಗನ ಮೇಲೆ ತೀರಿಸಿಕೊಳ್ಳ ತೊಡಗಿದ್ದ. ಅವನು ಮರೆತಿದ್ದ ಸ್ವಾತಂತ್ರ್ಯ ಸಿಕ್ಕು ಆಗಲೆ ಇಪ್ಪತ್ತೈದು ವರ್ಷಗಳೇ ಕಳೆದುಹೋಗಿದ್ದವು. ಹೊಸ ಬದಲಾವಣೆ, ಹೊಸ ಆಲೋಚನೆ ಹೊಸ ಸಿದ್ಧಾಂತ, ಹೊಸ ಬದುಕು, ಹೊಸ ಯುಗ ಆರಂಭವಾಗಿರುವುದು ಭಟ್ಟರಿಗೆ ತಿಳಿದಿದ್ದರೂ ಜಾಣ ಕಿವುಡು. ಹುಲಿಯೂರನ ಕೈಗೆ ಎರಡರ ನೋಟು ಕೊಟ್ಟು "ಹನಡಿ ಸಿಗೊರೇಟು ತತ್ತಾ, ಹೋಗು, ಹಾಂ, ಎಷ್ಟ ಬರ್ತಾವ ಅಷ್ಟು ತಗೊಂಡ ಬಾ" ಅಂದಿದ್ದ. ರಂಗವ್ವನ ಅಂಗಡಿಗೆ ಹೋಗಿ ಸಿಗರೇಟು ಖರೀದಿಸಿದ. ರಂಗವ್ವ ಐದು ಸಿಗರೇಟು ಕೊಟ್ಟು ಮೇಲೆ ಹತ್ತು ಪೈಸೆ ಚಿಲ್ಲರೆ ಕೊಟ್ಟಳು. "ಅಲ್ಲಬೆ ಎಲ್ಲಾನೂ ಸಿಗರೇಟು ಕೊಟ್ಟುಬಿಡು. ಭಟ್ರು ಎಲ್ಲಾ ತರಾಕ ಹೇಳ್ಯಾರ" ಅಂದ. "ಹೂನಲಾ, ಲೆಕ್ಕಮಾಡಿಕೊಟ್ಟಿನಿ ಹತ್ತು ಪೈಸಾ ವಾಪಾಸ್ ಬರುತ್ತೆ ತಗೊ ಮಜಾ ಮಾಡು" ಅಂದ್ಲು? "ಭಟ್ರಿಗೆ ಲೆಕ್ಕ ಗೊತ್ತಿರಾಕಿಲ್ಲ ಈ ರಂಗವ್ವನ ಮಾತ ಕೇಳಿ ನಾನು ತಗೊಂಡೆ ಅಂದ್ಕೊ ನನ್ನ ಜೀವ ಜಾಲಾಡಿ ಬಿಡ್ತಾನ ಈವಯ್ಯಾ ಬ್ಯಾಡವೆ ಬ್ಯಾಡ" ಅಂದವನೆ ಅಂಗಡಿಯಿಂದ ತುಸು ದೂರ ನಡೆದ. ಮನಸ್ಸಿನ ಮಾತು ಹೊಟ್ಟೆ ಕೇಳಾಕ ತಯಾರಿರಲಿಲ್ಲಾ. ಆಗಿದ್ದಾಗಲಿ ಖಾರಮಂಡಕ್ಕಿ ತಿನ್ನು ಅಂದಂಗಾಗಿ ಹತ್ತು ಪೈಸೆದು ಅಂಗಿಯೊಳಗೆ ಹಾಕಿಸಿಕೊಂಡು ತಿಂತಾ ಬಂದ. ತಿನ್ನೋದ ಮುಗದಿಂದ ಕೈ ಬಾಯಿ ಒರೆಸಿಕೊಂಡು ಸಿಗರೇಟು ಕೊಟ್ಟ ಕೆಲಸಕ್ಕೆ ಓಡಿದ. ಭಟ್ರಿಗೆ ಎಲ್ಲಾ ಲೆಕ್ಕಾನು ಇತ್ತು ಹತ್ತ ಪೈಸಾ ಚಿಲ್ಲರೆ ಬರಬೇಕಿತ್ತಲ್ಲ ಆಲೋಚನೆ ಮಾಡಿದ. ಇರ್ಲಿ ಮಗ ಎಲ್ಲಿಗ ಹೋಗ್ತಾನ ಅಂದವನೆ ಕೆಲಸ ಮಾಡಾಕಬಿಟ್ಟ ಅವನನ್ನ.

ನಾಟಿ ನೆಡೊದು ಮುಗಿತು, ತಾಂಡದನಡವೆ ಗೆಳೆಯರ ಜೊತೆ ನಿಂತಿದ್ದ ಹುಲಿಯೂರನನ್ನ ಕರದವನೆ "ಅಲ್ಲಲೇ ಬೇವಕೂಫ್ ನನಮಗನೆ, ಎರಡು ರೂಪಾಯಿ ಸಿಗರೇಟು ತಂದು ಮೇಲಿನ ಹತ್ತು ಪೈಸೆ ಚಿಲ್ಲರೆ ಕದೀತಿಯಲ್ಲ, ಮಾನಾ

ಮರ್ಯಾದೆ ಇಲ್ವ ನಿನಗೆ, ಯಾರ ದುಡ್ಡು ಅಂದ್ಕೊಂಡಿದ್ದೆ. ಇಂತ ಚಾಳಿ ಈಗಲೇ ಕಲ್ತಿಯಾ ಮುಂದ ಉದ್ದಾರ ಆಗಲ್ಲ ಹೋಗಿ ಹೋಗಿ ನಿನಗ ಹೇಳ್ತಾ ಇದ್ದಿನಲ್ಲಾ. ಕಳ್ಳತನ ನಿಮ್ಮ ರಕ್ತದೊಳಗೆ ಐತೆ. ಅನಾದಿ ಕಾಲದಿಂದಲೂ ಕಳ್ಳತನ ಮಾಡುತ್ತಲೇ ಬಂದೋರು ನೀವು" ಜನಾಂಗದ ಬುಡಕ್ಕೆ ಕೈಹಾಕಿದ್ದ. ಹುಲಿಯೂರ ಅವಮಾನ ತಡಿಯಾಕ ಆಗದೆ, ಮಕ ಕೆಳಗೆ ಹಾಕಿಕೊಂಡು ಹೇಳಿದನ್ನ ಕೇಳಿಸಿಕೊಳ್ಳುವುದು ಮಾಡುತ್ತಿದ್ದ. ಅವನ ತಂದೆಗೆ, ಇಲ್ಲ ಅಣ್ಣಂದಿರಿಗೆ ಗೊತ್ತಾದರೆ ಚರ್ಮ ಸುಲಿಯೋದು ದಿಟವಾಗಿತ್ತು. ಒರೆಗಣ್ಣಿಂದ ಅವರ ಮನೆಯವರು ಯಾರಾದರೂ ನೋಡ್ತಾರೇನಂತ ನೋಡುತ್ತಿದ್ದ. ಅವನ ಪುಣ್ಯಕ್ಕೆ ಯಾರು ಆಕಡೀಗ ಸುಳದಿರಲಿಲ್ಲಾ. ಊರ ಮಧ್ಯ ಆಗಿರೋದರಿಂದ ಅಡ್ಡಾಡುವವರ ಸಂಖ್ಯೆ ಹೆಚ್ಚಿತ್ತು. ಭಟ್ರಗೆ ಅದೇ ಜಾಗದಲ್ಲಿ ಅವಮಾನ ಮಾಡಬೇಕಂತಿತ್ತು. ಎಷ್ಟೋ ವರ್ಷಗಳಿಂದ ಒಳಗೆ ಅದುಮಿ ಇಟ್ಟಿದ್ದ ಸಿಟ್ಟನ್ನ ಒಮ್ಮಿಂದೊಮ್ಮಿಗೆ ತೀರಿಸಿಕೊಂಡಂತಿತ್ತು. ದೊಡ್ಡವರಿಗೆ ಮಾತಾಡಕ ಆಗೋದಿಲ್ಲ, ತೀರ ಸಣ್ಣೋರಿಗೆ ತಿಳಿಯಲ್ಲ. ಹುಲಿಯೂರ ಒಳ್ಳೆ ಹಂಗಾಮಿನಲ್ಲಿದ್ದ ಅವನಿಗೆ ಹೇಳಿದರೆ ನಾಟುತ್ತೆ ಅಂತ ಬೇಕಂತ ಅವನೆ ಸೃಷ್ಟಿಸಿಕೊಂಡ ಅವಕಾಶ. ಹುಲಿಯೂರನಿಗೆ ನಿಂತ ನೆಲ ಕುಸಿದಂತೆ ಭಾಸವಾಗಿತ್ತು. "ಏನು ಕೃಷ್ಣಭಟ್ರೆ ಹುಡುಗ ಏನಾರು ತೆಪ್ಪ ಮಾಡ್ಯಾನ" ಮೆಗಲ ಒಣಿ ಎಸ್ ಕೋಟಾನಾಯ್ಕ ಕೇಳಿದ. ತೊಪುನ ಬದ್ದ ವೈರಿನೂ ಅಲ್ಲ, ಒಳ್ಳೆಯ ಸ್ನೇಹಿತನೂ ಅಲ್ಲ, ಆದರೆ ಹೊರಗೆ ಮಾವ ಪಾಡದಿ ಅಂತಿದ್ದ ಒಳಗೊಳಗೆ ಕುಯ್ಯುಕ್ತಿ ಬುದ್ಧಿ ಈ ಮಗ ಏನು ಈ ಪರಿ ಮುಂದಕ್ಕ ಬರಾಕ ಹತ್ಯಾನ ಅನ್ನೊ ಈರ್ಷೆ. ಏನಾದರೂ ಮಾಡಿ ಅವನನ್ನ ಹಣಿಬೇಕು ಅನ್ನೊ ಅವಕಾಶಕ್ಕಾಗಿ ಕಾಯುತ್ತಿದ್ದ. ಅವನ ಮಗ ಹುಲಿಯೂರ ತನ್ನ ಮಕ್ಕಳ ಹಾಗೆ ಓದುವುದರಲ್ಲಿ ಮುಂದೆ ಬಂದಗಿಂದಾನಂತ ಅವನನ್ನ ಮಾನಸಿಕವಾಗಿ ಘಾಸಿಗೊಳಿಸಲು ಮುಂದಾದ. "ಕೃಷ್ಣಭಟ್ರೆ, ಹೇಳ್ರಿ ಏನಾತು, ಈ ಮಗ ಏನು ಮಾಡಿದ, ಇವರದು ಬಹಳ ಆಗಿದೆ. ಈ ಊರೊಳಗೆ." ಏಕಾಏಕಿ ಮೇಲೆ ಬಿದ್ದಿದ ಎಸ್.ಕೋಟಾನಾಯ್ಕ. ಕೃಷ್ಣಭಟ್ಟ ಮಾತ್ರ ಮೂವತ್ತು ವರ್ಷಗಳ ಹಿಂದೆ ಕಳೆದು ಹೋದ ತನ್ನ ಪೂರ್ವಜರ ದಿಮಾಕನ್ನ ಈಗ ತೋರಿಸುವ ಹುಸಿ ಪ್ರಯತ್ನ ಮಾಡಿದ್ದ. ಅವರ ತಾತ ಶಾನಭೋಗನಾಗಿದ್ದಾಗ ಮೂಲಿ ಮುಕ್ಕಟ್ಟು ಬಿಡದಂಗೆ ಹದ್ದುಬಸ್ತಿ ಮಾಡಿ, ಚಕ್ಕುಬಂದಿ ಹಾಕಿ ಜಮೀನನ್ನು ತಂಗಿ ಮಕ್ಕಳು, ಅಕ್ಕನ ಮಕ್ಕಳು, ಇದ್ದವರು ಇಲ್ಲದವರ ಹೆಸರಿಗೆ ಬರೆದು ಸತ್ತು ಹೋಗಿದ್ದ. ಬೇನಾಮಿ ಜಮೀನು ಹುಟ್ಟಿದಾಗಲೆ ಬಂಗಲೆಯಂತಹ ಮನೆ, ಹಾಲು, ಹೈನು, ತುಪ್ಪ ಇಲ್ಲದೆ ಊಟನೆ ಇಲ್ಲ, ಮಂದಿಗೆ ಊಟಕ್ಕೆ ತೊಂದರೆಯಾಗಿ ಪರದಾಡುತ್ತಿದ್ದರೆ ಹುಲಿಯೂರನಿಗೆ ಕೊಟ್ಟ ಎರಡು ರೂಪಾಯಿಯಲ್ಲಿ ಐದು ಸಿಗರೇಟು ಸೇದಿದರೂ ಉಳಿದ ಹತ್ತೆ ಪೈಸೆಗೆ ಅವಮಾನ ಮಾಡತೊಡಗಿದ್ದ. ಸಾಲದಕ್ಕೆ ಎಸ್.ಕೋಟಾನಾಯ್ಕ ಬೇರೆ ಸೇರಿಕೊಂಡಿದ್ದ. ಬೇರೆ

ಯಾರೊ ಬಂದ "ಕೃಷ್ಣಭಟ್ಟರೆ ನಾಟಿ ಮುಗಿತ. ಆಯ್ತು ಬಿಡಿ ಆ ತೊಪುನಾಯ್ಕನ ಮನಿಯವರು ಕೈ ಹಾಕಿದ್ದರೆ ಅಂದರೆ ಸಾಸಾನ ಕೆಲಸಿ ಮಾಡಿರ್ತಾರೆ. ಚಿಂತೆ ಬಿಟ್ಟು ಮನೆಗೆ ಹೋಗಿ ನೂರ ಚೀಲ ಭತ್ತ ಮನಿಯೊಳಗೆ ಇದ್ದಂಗೆ" ಅಂದ. ಕೃಷ್ಣಭಟ್ಟನಿಗೆ ಏನು ಅನಿಸಿತು "ಲೇ ಬದಕಿಕೊಂಡೆ ಹೋಗು ಇನ್ನೊಮ್ಮೆ ಯಾವತ್ತು ಹೇಳದೆ ಕೇಳದೆ ಯಾರ ದುಡ್ಡು ಮುಟ್ಟಬೇಡ" ಹುಲಿಯೂರನಿಗೆ ಬಹಳ ಅವಮಾನವಾಗಿತ್ತು. ಅದು ಅಲ್ಲದೆ ಅವರ ಬದ್ಧ ವೈರಿ ಎಸ್.ಕೋಟಾನಾಯ್ಕನ ಮುಂದೆ ಅವನಿಗಾದ ಅನುಭವ, ಅವಮಾನ ಜೀವಮಾನದಲ್ಲಿಯೇ ಮರೆಯಲಾರದಂತಿತ್ತು.

* * *

46. ಮರದ ಹೇರು ಡಿಸಿ ತಮ್ಮಣ್ಣನ ಎನ್‌ಕ್ವೈರಿ

ಕಾಡು ಮಾಯವಾಗಿ ಬಹಳ ದಿನಗಳಾಗಿತ್ತು. ಮಳೆ ಕಡಿಮೆಯಾಗಿದ್ದೇ ಮುಟ್ಟು ಮುಯಿಗೆ ಮರ ಸಿಗುವುದು ಬಹಳ ಅಪರೂಪವಾಗಿತ್ತು. ತಾಂಡದಮಂದಿ ಹೊಲದಮೇರಿ ಮೇಲೆ ಬೆಳೆಯುತ್ತಿದ್ದ ಬೇವಿನಮರ, ಜಾಲಿಮರಗಳನ್ನು ಕಡಿದು ರಂಟೆ, ಕುಂಟೆ, ನೊಗ, ತಾಳು ಮೆಳಿ, ಶೆಡ್ಡಿ ಬಾರಕೋಲಿನ ಗುಣಕು ಮಾಡಿಸಿಕೊಂಡು ವ್ಯವಸಾಯ ಮಾಡುತ್ತಿದ್ದರು. ಹೊಲದ ಕೋಡಿಸರಗಳಲ್ಲಿ ನೀರು ಕೊಚ್ಚಿಕೊಂಡು ಹೋಗುವುದನ್ನು ತಡೆಯಲು ರಕ್ಕಸಪಟ್ಟಿ ತಂದು ನೆಡುತ್ತಿದ್ದರು. ಅವೆ ಬೆಳದ ಮೇಲೆ ಕೊಯ್ದು ತಿಂಗಳ ಕಾಲ ನೀರಲ್ಲಿ ನೆನೆ ಹಾಕಿ ಅದರ ಮೇಲೆ ಕಲ್ಲಿಟ್ಟು ಅದು ಸಂಪೂರ್ಣವಾಗಿ ನೆನೆದು ಮೆತ್ತಗಾದ ಮೇಲೆ ಅದರ ಮೇಲಿನ ಚರ್ಮ ಹೊಗಲಿ ಅಂತೇಳಿ ಕೋಲಿಂದ ಬಡಿದು ಬಿಸಲಲ್ಲಿ ಒಣಗಿಸಿ ಭೆಂಡಿ ಮಾಡುತ್ತಿದ್ದರು. ಅದನ್ನ ಗಂಟುಗಳಲ್ಲಿ ಕಟ್ಟಿ ಮೂಲೆಯೊಳಗೆ ಒಟ್ಟಿಕೊಂಡು ಬಿಡುವಿನ ಸಮಯದೊಳಗೆ ಪ್ರತಿಯೊಬ್ಬರು ಗುಡಿಮುಂದೆ, ಕಟ್ಟೆ ಮೇಲೆ ಜನರು ಕುಳಿತ ಹತ್ತಿರ ಕುಳಿತು ಹಗ್ಗ ಹೊಸೆಯುತ್ತಿದ್ದರು. ಹಿಡಿಹಗ್ಗ, ನಾತು, ಹಗಡ, ಹೊರ್ಜಿ, ನೊಗದ ಮಿಣಿ, ಕುಂಟಿ ಮಿಣಿ, ಕೂರ್ಗಿ ಮಿಣಿ, ಹೇರು ಕಟ್ಟುವ ಮಿಣಿ ಅಂತ ಮಾಡಿಕೊಳ್ಳುತ್ತಿದ್ದರು. ಈ ನಡುವೆ ತಾಂಡದಲ್ಲಿ ಸಾಮರಸ್ಯ ಬೆಳೆಯುತ್ತಿತ್ತು. ಆದರೆ ಭದ್ರಾನಾಯ್ಕನ ತಾಂಡದಲ್ಲಿ ಲಮಾಣಿ, ಕನ್ನಡ ಮಾತಾಡುವವರು, ಕಾಯಕದವರು, ಬಾರಿಕರು, ಉಪ್ಪಾರು, ಸಾಬರು, ನಾಯಕರು ಯಾವ್ಯಾವದೊ ಜನಾಂಗದ ಮಂದಿ ಬಾಯಿ ಮಾಡಿಕೊಳ್ಳುತ್ತಿದ್ದರು. ಕೈಕೈ ಮಿಲಾಯಿಸಿಕೊಂಡು ಜಗಳವಾಡಿ ಕೋರ್ಟು ಕಛೇರಿಗೆ ಹೋಗಿದ್ದರು, ಕೊಲೆ ಮಾಡುವ ದ್ವೇಷವೇನು ಕಂಡುಬಂದಿರಲಿಲ್ಲ.

ಆದರೆ ಭದ್ರಾನಾಯ್ಕನ ತಾಂಡದಿಂದ ಆರುವರೆ ಕಿಲೋಮೀಟರ್ ದೂರದ ಪೊತ್ನೂರು ಎನ್ನುವ ಹಳ್ಳಿಯಲ್ಲಿ ಲಿಂಗಾಯಿತರು, ನಾಯಕರು, ಹರಿಜನರು ಹೆಚ್ಚಿದ್ದರು. ಲಿಂಗಾಯಿತರು ಇವೆರಡು ಸಮುದಾಯಗಳಿಂದ ದೂರವಿದ್ದು ಅವರವರಲ್ಲೇ ಒಳಜಗಳ ಹಚ್ಚಿದ್ದರ ಪರಿಣಾಮ ಎರಡು ಕೊಲೆಗಳಾಗಿದ್ದವು.

ಅದಕ್ಕೆ ಬಳ್ಳಾರಿ ಜಿಲ್ಲೆಯ ಡಿ.ಸಿ.ಸಾಹೇಬ ತಮ್ಮಣ್ಣ ಎನ್‌ಕ್ವೈರಿಗೆಂತ ಪೊತ್ನೂರು ಕಡೆಗೆ ಹೊರಟಿದ್ದ. ಅವನ ಜೀಪಿನ ಮುಂದೆ ಚಕ್ಕಡಿಯಲ್ಲಿ ಮರದ ದೊಡ್ಡ ದೊಡ್ಡ ದಿಮ್ಮೆಗಳನ್ನು ಹೇರಿಕೊಂಡು ಹೊರಟಿದ್ದ ಎಸ್.ಕೋಟ್ಯಾನಾಯ್ಕನ ಬಂಡಿ ಹೊಂಟಿತ್ತು. ಸರ್ಕಲ್ ಇನ್ಸ್‌ಪೆಕ್ಟರ್, ಎಸ್ಪಿ ಜೀಪು ಎಷ್ಟೇ ಹಾರನ್ ಮಾಡಿದರು ಚಕ್ಕಡಿ ಹೊಡೆಯುತ್ತಿದ್ದವನು ಜುಪ್ ಅನ್ನದಂತೆ ನಡೆಸುತ್ತಿದ್ದ.

ಮದಲೆ ಸುತ್ತಲೂ ಸೂಕ್ಷ್ಮ ವಾತಾವರಣ ಇತ್ತು. ಇಂಥ ಸನ್ನಿವೇಶದಲ್ಲಿ ಇದೊಳ್ಳೆ ಫಜಿತಿಯಾಯಿತಲ್ಲ ಅಂತ ಜೀಪು ಮುಂದೆ ಹೋಗಲು ಆಗದೆ ನಿಲ್ಲಿಸಿ ಮುಂದೆ ಓಡಿದ ಪೊಲೀಸರು. "ಎಯ್, ಹಾರನ್ ಬಾರಿಸೋದು ಕೇಳಿಸುತಿಲ್ವಾ, ಡಿ.ಸಿ.ಸಾಹೇಬರು ಹಿಂದೆ ಕಾಯುತ್ತಿದ್ದಾರೆ ದಾರಿ ಬಿಡು" ಅಂದ. ಮದಲೆ ಕುಡಿದಿದ್ದ ಪೋಲೀಸನ ಮಾತು ಕೇಳಿ ತಲೆ ತಿರುಗಿದಂಗಾಯ್ತು. "ಅಲ್ಲಪ್ಪ ಡಿ.ಸಿ. ಏನು ದೇವರ? ರಾಜನೆ? ಪ್ರಧಾನಮಂತ್ರೀನ? ಏನು? ಹೇಳು. ಬಂಡಿ ಹೇರು ಜಾಸ್ತಿ ಐತೆ ದಾಟೋವರಿಗೂ ಹಿಂದೆ ಬರ್‍ರಿ. ಒಗ್ಗಾಲಿ ಆಯ್ತು ಅಂದ್ರೆ ಬಂಡಿ ಬಿದ್ದುಬಿಡುತ್ತೆ" ಹೊಟ್ಟೆ ಒಳಗಿದಿದ್ದನ್ನ ಚಾಚೂ ತಪ್ಪದೆ ಹೇಳಿದ್ದ ಎಸ್.ಕೋಟ್ಯಾನಾಯ್ಕ.

ಈ ಕೋಟ್ಯಾನಾಯ್ಕ ವಿಚಿತ್ರ ಮನಸ್ಥಿತಿಯವನು. ಮನೆ ತುಂಬ ಮಕ್ಕಳು, ಕಾಡಿನೊಳಗೆ ಐದಾರು ಎಕ್ಕರೆ ಹೊಲ ಆದರೆ ಪ್ರತಿದಿನ ದೇವರ ಮೇಲೆ ಪತ್ರಿ ತಪ್ಪಿದರೂ ಇವನ ತೀರ್ಥ ಸೇವನೆ ಮಾತ್ರ ತಪ್ಪುತ್ತಿರಲಿಲ್ಲ. ಯಾವಾಗ ನೋಡಿದರೂ ಕುಡಿದ ಅಮಲಲ್ಲೇ ಇರುತ್ತಿದ್ದ. ಯಾವನಾದರೂ ಬಕರ ಸಿಕ್ಕರೆ ಅವನ ಮೆದುಳಿಗೆ ಕೈಹಾಕಿ ಹೊರಗೆ ತಗದು ಒರೆಸಿ ಮತ್ತೆ ಒಳಗೆ ಹಾಕುತ್ತಿದ್ದ. ಮಾತು, ವಾದದಲ್ಲಿ ಅವನಿಗೆ ಮೀರಿಸುವವರು ಸುತ್ತಲೂ ಯಾರು ಹುಟ್ಟಿರಲಿಲ್ಲಾ. ಕೋಳಿ ಮೊದಲ, ಮೊಟ್ಟೆ ಮೊದಲೊ ಎನ್ನುವಂತೆ ಇರುತ್ತಿತ್ತು ಅವನ ವಾದ, ಅಂತ್ಯಕೆ ಏನೂ ಇಲ್ಲ. ಯಾವಾಗದರೂ ಅಪರೂಪಕ್ಕೆ ಯಾರಾದರು ಸಿಕ್ಕರೆ "ಅಲ್ಲಲೆ ತಮ್ಮ ಯಾವೂರು ಅಂತ ಆರಂಭವಾಗಿ ಅಲ್ಲಪ್ಪ ನಮ್ಮ ದೇಶದ ಪ್ರಧಾನಿ ಯಾರು? ಅವರಿಗೆ ನಮ್ಮ ಬಗ್ಗೆ ಏನಾರು ಗೊತ್ತಿದೆಯಾ. ನಾನು ಎಸ್.ಕೋಟ್ಯಾನಾಯ್ಕ ಅಂತ ಗೊತ್ತ ಆ ಯಪ್ಪನಿಗೆ ಗೊತ್ತಿಲ್ಲ ಯಾಕೆ ಗೊತ್ತಿಲ್ಲ?" ಅವನ ಕಡಿಗ ನೋಡಿದ. ಪಾಪ ಪರ ಊರಿನವ, ಪರಸ್ಥಳ ಪರಸಂಕಟ ಅನ್ನೋ ಹಾಗೆ, ಏನೋ ಸಾಬೂಬು ಹೇಳಿ ಕಡಿಗ ಆಗೋದು ಅಂತ ಅಂದುಕೊಂಡಿದ್ದ. ಮದಲೆ ಮುಕ್ಕಾರೆ ಕುಡಿದಿದ್ದ ಕೋಟ್ಯಾನಾಯ್ಕ "ಯಾಕಂದ್ರೆ ಅದು ನನಗೆ ಗೊತ್ತೈತೆ. ಮತ್ತೆ ನಾನು ಅಂದಿದ್ದನ್ನ ನೀ ಎಸ್ ಅನ್ನಲೇ ಬೇಕು ಎಸ್ ಅಂದ್ರೆ ಗೊತ್ತ?" ನೇರವಾದ ಪ್ರಶ್ನೆ. ಗೊತ್ತೈತೆ ಅಂದರೆ ಅಡ್ರತಾನ ಇಲ್ಲ ಅಂದ್ರು ಅಡ್ರಕ್ಕೊಂತಾನ. ಅವನು ಯೋಚನೆ ಮಾಡುತ್ತಿದ್ದ. ಆತನ ಪರಿಸ್ಥಿತಿಯನ್ನು ನೋಡಿದ ಯಾರೊ ದಾರಿಹೋಕ "ಏನಪ್ಪ ಕೋಟ್ಯಾನಾಯ್ಕ ಪಾಡದಿಯ?" ಕೇಳಿದ. ಆ ಕಡೆ ತಿರುಗಿ "ಲೇ ತಮ್ಮ ನೀ ಓಡು, ಹೂಂ ಓಡು" ಅವನನ್ನ

ಬಿಡುಗಡೆಗೊಳಿಸಿದ್ದ. "ಯಾರಪ್ಪ ನೀನು ಎಸ್.ಕೋಟ್ಯಾನಾಯ್ಕ ಅನ್ನೋನು. ಅಲ್ಲ ನಿನಗೆ ಎಸ್ ಅಂದ್ರ ಗೊತ್ತ?" ಅವನು ತಿರುಗಿ ನೋಡುವುದರಲ್ಲಿ ಇಬ್ಬರು ಮಾಯವಾಗಿದ್ದರು. ಅಷ್ಟೆ ಅಲ್ಲಾ ಎಸ್.ಕೋಟ್ಯಾನಾಯ್ಕ ಒಮ್ಮೆ ಯಾರಿಗೊ ಒಂದು ಕತೆ ಹೇಳಿದ್ದ. ಇವನೆ ನಾಡಕುಡುಕ. "ಇಬ್ಬರು ಕುಡುಕರು ಚೆನ್ನಾಗಿ ಕುಡಿದು ನಡೆದುಕೊಂಡು ಬರ್ತಿದ್ರು" ಕೇಳುತ್ತಿದ್ದವನು ನಡಕ್ಕೆ ಬಾಯಿ ಹಾಕಿ, "ಯಾಕೆ ಎಲ್ಲಾದ್ರ ಬೀಳಲಿಲ್ವಾ" ಅಂದ. "ಏಯ್ ಕುಡಕರು ಅಂದ್ರೆ ಕುಡುದು ಬೀಳೊದು ಅಷ್ಟೆ ಅಂದು ಕೊಂಡೀಯ ಹಗರುವಾಗಿ ಮಾತಾಡಬೇಡ ಕುಡುಕರ ಬಗ್ಗೆ. ಕೆಲವರು ಖಾನ್‌ದಾನಿ ಕುಡುಕರಿರ್ತಾರಪ್ಪ, ಏನೀಗ?" ರೈಲು ಹಳಿ ತಪ್ಪಿತ್ತು. ಅದನ್ನ ನೆಪಮಾಡಿಕೊಂಡ ಕೊಟ್ಯನಾಯ್ಕ ಲೇ ಜಾಣ ನನ್ನ ಯಾಮಾರಿಸಿ ನೀನು ಕತೆ ಕೇಳದಂಗೆ ಓಡಬೇಕು ಅಂದುಕೊಂಡಿದ್ದರೆ ಅದು ನಿನ್ನ ಮೂರ್ಖತನ. ಮುಂದಕೇಳು ಬರ್ತಾ ಬರ್ತಾ ಅವರಿಗೆ ಬೆಳದಿಂಗಳ ಚಂದ್ರ ಕಂಡ. ಬೆಳದಿಂಗಳು ಎಷ್ಟು ಪ್ರಖರವಾಗಿತ್ತೆಂದರೆ ಹಗಲು ಕಂಡ ಹಾಗೆ ಅನಿಸಿತ್ತು. ಒಬ್ಬ ಹೇಳಿದ, ಆಹಾ! ಸೂರ್ಯ ನೆತ್ತಿ ಮೇಲೆ ಬಂದ್ರೂ ನಾವಿನ್ನು ಕುಡಿತಾನೆ ಇದ್ದಿವಲ್ಲ ಅಂದ, ಮತ್ತೊಬ್ಬ ಮುಗಿಲು ನೋಡಿ ಲೇ ದಡ್ಡ ಅದು ಸೂರ್ಯ ಅಲ್ಲ ಅಂದ, "ಮತ್ತೆ" ಕೇಳಿದ ಮತ್ತೊಬ್ಬ "ಅದು ಚಂದ್ರಮ. ಚಂದ್ರನ ಬೆಳಿಕಲ್ಲಿ ನಾವಿಬ್ಬರು ನಡಿತಾ ಇದ್ದಿವಿ ಕಣಲೆ ಬೇವಕೂಪ" ಅಂದ. ಮೊದಲು ಸೂರ್ಯ ಅಂದವನಿಗೆ ಪಿತ್ತನೆತ್ತಿಗೆ ಏರಿತು. "ಲೇ ಮೂರ್ಖ, ಚಂದ್ರಾ ಈಗ ಯಾಕೊ ಬರ್ತಾನೆ ಹಗಲೊತ್ತಿನಲ್ಲ. ನಾವು ಕುಡಿಯಾಕ ಕುಂತಿದ್ದು ಸಾಯಂಕಾಲ ತಾನೆ ಸೂರ್ಯ ಇದ್ದ ತಾನೆ" ಕೇಳಿದ. ಅವನು ಹೂಂ ಅಂದ "ಅಂದ ಮೇಲೆ ಸೂರ್ಯನೆ" ಅಂದ ಅವನು, "ಲೇ ಯಾವೂರಲೆ ನಿಂದು, ಸಂಜೆ ಕುಂತ್ರೆ ಕುಡಿತ ಕುಡಿತ ಹೊತ್ತು ಮುಳುಗಿ ಕತ್ತಲಾಗಿ ಸೂರ್ಯ ಬಂದವ್ನೆ ಯಾ ಮೈ ರೈಟ್ ಬಾಸ್" ತೊದಲುತ್ತಲೆ ಅಂದ. "ನೋ ನೋ ನಾ ಒಪ್ಪಲ್ಲ, ನಾ ಒಪ್ಪಲ್ಲ, ಸೂರ್ಯ ಮುಳಗಾಕ ಬಹಳ ಟೈಂ ಇತ್ತು, ಇಷ್ಟು ಬೇಗ ಅವನು ಮುಳಗೋದಕ್ಕೆ ಸಾಧ್ಯನೇ ಇಲ್ಲ." ಜಗಳ ಜೋರಾಯ್ತು, ಕೈ ಕೈ ಮಿಲಾಯಿಸಬೇಕು. ಯಾರೊ ದಾರಿಯಲ್ಲಿ ನಡೆದು ಬರುತ್ತಿದ್ದ. "ಸರಿಯಪ್ಪ, ಅಗೊ ಅಲ್ಲಿ ಯಾರೊ ಒಬ್ಬ ಬುದ್ಧಿವಂತ ಬರ್ತಾ ಇದ್ದಾನೆ ಅವನಿಗೆ ಕೇಳುವ" ಅಂದ. "ಆಯ್ತು ಅವನು ಸತ್ಯ ಹೇಳ್ತಾನ ಕೇಳೋಣ" ಅಂದ. ಅಷ್ಟೊತ್ತಿಗೆ ಅವನು ಸರಿಯಾಗಿ ಸವಿಹಕ್ಕೆ ಬಂದಿದ್ದ. "ಲೇ ತಮ್ಮ ಮೇಲೆ ಕಾಣಸ್ತಿರೋದು ಚಂದ್ರನಾ ಸೂರ್ಯನಾ" ಒಬ್ಬ ಅಂದ. "ಸೂರ್ಯನ ಚಂದ್ರಾನ ಹೇಳು" ಅಂದ. ಬಂದಾವ ನಿಜವಾಗಿಯೂ ಮಹಾಬುದ್ಧಿವಂತನಿದ್ದ. "ನನಗ ಗೊತ್ತಿಲ್ಲಪ್ಪ ನಾ ಈ ಊರವನೆ ಅಲ್ಲ ತಗಿ" ಅಂದವನೆ ಹೊರಟು ಬಿಟ್ಟ. ಇಬ್ಬರು ಅವನು ಏನು ಹೇಳಿದ ಅಂತ ಅರ್ಥ ಮಾಡಿಕೊಳ್ಳುವುದರೊಳಗೆ ಅಂವ ದೂರ ಹೋಗಿದ್ದ. ಈ ಕತಿ ನೂರ ಸಲಾ ಹೇಳಿದ್ದ ಕೊಟ್ಯನಾಯ್ಕ ಇನ್ನು ಡಿ.ಸಿ. ತಮ್ಮಣ್ಣನ ಮುಂದೆ ಅದೇನು ಕತೆ ಕಟ್ತಾನೊ.

ಮದಲೆ ಪೊತ್ನೂರು ಸಮಸ್ಯೆ ತಲೆಯೊಳಿಗೆ ತುಂಬಿಕೊಂಡಿದ್ದ ತಮ್ಮಣ್ಣ ಯಾರೊ ಯಡಬಿಡಂಗಿ ರಸ್ತೆಗೂ ಬಿಡವಲ್ಲಾ ಅಂದಾಗ ಖುದ್ದಾಗಿಯೆ ಕಾರು ನಿಲ್ಲಿಸಿ ಮುಂದೆ ಬಂದು ಚಕ್ಕಡಿಗೆ ಅಡ್ಡ ಹಾಕಿದ. "ಯಾರಪ್ಪ ನೀನು?" ತಮ್ಮಣ್ಣ ಕೇಳಿದ. "ಅಂದಂಗ ನನಗೆ ಹಿಂಗ ಕೇಳಾಕ ನೀ ಯಾರು?" ಅಂದ. ಡಿ.ಸಿ.ಗೆ ಕಡದ ಹತ್ರ ತುರಿಸಿಕೊಳ್ಳದ ಹಂಗಾತು. "ನಾನು ಬಳ್ಳಾರಿ ಜಿಲ್ಲಾ ಡಿ.ಸಿ.ತಮ್ಮಣ್ಣ ಅಂತ" ಕಡಕ್ಕಾಗಿಯೇ ಹೇಳಿದ. ಕೊಟ್ಯಾ ಕುಡಿದಿದ್ದ. "ಇದ್ರೆ ಜಿಲ್ಲಾಕೆ ನನಗಲ್ಲ" ಅಂದ ಕೋಟ್ಯಾ. ಡಿ.ಸಿ.ಗೆ ನಗು ಬಂತು. ನಗುತ್ತಲೇ ಕೇಳಿದ "ಎಲ್ಲಿಂದ ತಂದೆ, ದಿಮ್ಮೆಯನ್ನ, ಎಲ್ಲಿಗೆ ಒಯ್ಯಕತ್ತಿ". ಡಿ.ಸಿ. ಕೇಳಿದ, "ನಮ್ಮ ಹೊಲದ್ದು ಮುಟ್ಟು ಮಾಡಿಸೋದಕ್ಕೆ ಒಯ್ಯುತಾ ಅದೀನಿ" ನೇರ ಉತ್ತರ "ನಿಮ್ಮ ಹೊಲದ್ದೆ ಅಂಥ ಏನು ಗ್ಯಾರಂಟಿ" ಡಿ.ಸಿ.ಕೇಳಿದ "ನೀನು ಡಿ.ಸಿ. ಅನ್ನೋದಕ್ಕೆ ಏನು ಗ್ಯಾರಂಟಿ" ಅಷ್ಟೆ ಸ್ಪಷ್ಟ ಉತ್ತರ. ಪೊಲೀಸ್ ಇನ್ಸ್‌ಪೆಕ್ಟರ್ ನಡಕ್ಕೆ ಬಾಯಿಹಾಕಿ, "ಏಯ್ ಏನು ಮಾತಾಡ್ತಿದ್ದಿಯಾ, ಯಾರ ಕೂಡ ಮಾತಾಡ್ತಿದ್ದಿಯಾ ಪ್ರಜ್ಞೆ ಇದೆಯಾ" ಬಾಯಿ ಜೋರು ಮಾಡಿದ. ಡಿ.ಸಿ. "ಸುಮ್ಮನಿರ್ರಿ" ಅಂದು. "ನಿನ್ನ ಹೆಸರೇನಪ್ಪ" ಕೇಳಿದ. "ಎಸ್ ಕೋಟ್ಯಾನಾಯ್ಕ" ಅಷ್ಟೆ ಮೊಟಕು ಉತ್ತರ. "ಎಸ್ ಅಂದ್ರೆ" ಡಿ.ಸಿ. ಕೇಳಿದ. "ಎಸ್ ಅಂದ್ರೆ ಯಸ್" ಅಂದ. ಡಿ.ಸಿ.ಗೆ ಕುತೂಹಲ ಹುಟ್ಟು ಮತ್ತ "ನೋ ಅಂದ್ರೆ" ಕೇಳಿದ. "ನೋ ಅಂದ್ರೆ ನೊ" ಅಂದ. ಎಸ್ಪಿ ಜಿಂಗಾಲಿ, ಇದು ದೀರ್ಘಕ್ಕೆ ಹೋಗುತ್ತೆ ಅಂದವನೆ "ಸಾಹೇಬರೆ ಅಲ್ಲಿ ಮಂದಿ ಪಂಚನಾಮೆಗೆ ಕಾಯುತ್ತಿದ್ದಾರೆ" ಅಂದ. ಡ್ರೈವರ್ "ನೋಡು ಅವನು ತೀರ ಕುಡಿದಿದ್ದಾನೆ, ಚಕ್ಕಡಿ ಪಕ್ಕಕ್ಕೆ ತಗೊಂಡ್ರೆ ಬೀಳುತ್ತೆ ನೀನೆ ಈ ಪಕ್ಕದಿಂದ ನಿಧಾನಕ್ಕೆ ತಡಾಯಿಸು" ಅಂದ. ಆ ಘಟನೆಯಾದ ಮೇಲೆ "ಏಯ್ ಎಸ್.ಕೋಟ್ಯಾನಾಯ್ಕನ ಸುದ್ದಿಗೆ ಹೋಗಬೇಡ್ರೊ ಅಂಥ ಡಿ.ಸಿನ್ನೆ ಬಿಟ್ಟಿಲ್ಲ" ಅಂತ ಮಂದಿ ಮಾತಾಡಿಕೊಳ್ಳ ತೊಡಗಿದರು. ಅದು ನಿಜ ಕೂಡ ಆಗಿತ್ತು.

* * *

47. ಚಿಂಚಮ್ಮನ ಸೊಬಾನೆ ಪದವ್ರೊ

ಲಮಾಣಿಗರ ಮದುವೆಯಲ್ಲಿ ನವಲೇರಿ, ವೆತಡೂ (ಮದುಮಗ, ಮದುಮಗಳು) ಹಾಡುಗಳು ಪ್ರತಿಯೊಬ್ಬರು ಹಾಡುತ್ತಿದ್ದರು. ಅದು ಅವರ ರಕ್ತದಲ್ಲೆ ಬಂದಿತ್ತು. ಆದರೆ ಇರೊ ಮೂರು ಮತ್ತೊಂದು ಕನ್ನಡ ಮಂದಿಗೆ ಹಾಡು ಹಸೆ ಬರಬೇಕಲ್ಲ. ತಾಂಡದಲ್ಲಿ ನಡೆಯುವ ಪ್ರತಿಯೊಂದು ಮದುವೆಯಲ್ಲೂ ಸೊಬಾನೆ ಪದ ಹೇಳೋದಕ್ಕೆ ಚಿಂಚಮ್ಮನೆ ಬೇಕು. ಅದಕ್ಕಂತ್ಲೆ ಒಂದು ತಿಂಗಳ ಮುಂಚಿತವಾಗಿ ಮದುಮಗ ಇಲ್ಲ ಮದುಮಗಳು, ಯಾರದು ಮದುವೆಯಾಗುತ್ತದೆಯೊ ಅವರು ಹೋಗಿ "ಚಿಂಚಮ್ಮ ಎಲ್ಲಿಗಾದರೂ ಹೋದಿಯಬೇ ನಮ್ಮ ಹುಡುಗಿದು ಮದುವೆ ಐತೆ ಮುಂದಿನ ತಿಂಗಳು ಈ ತಾರೀಖಿನೊಳಗೆ" ಅಂತ ಹೇಳಿ ಆಗಾಗ ನೆಪ್ಪ ಮಾಡಿದ್ರೆ ಚಿಂಚಮ್ಮ ತನ್ನ ಜೋಳಿಗೆ, ಕೈಯಾಗೊಂದು ಬುಟ್ಟಿ ಹಿಡಿದು ಭಿಕ್ಷೆಗೆ ಹೋಗೋದು ಬಿಟ್ಟು ಮನೆಯಲ್ಲೇ ಇರುತ್ತಿದ್ದಳು. ಚಿಂಚಮ್ಮನ ತಾಯಿ ತಂದೆ ಅವಳು ಚಿಕ್ಕವಳಿರುವಾಗಲೆ ಅಷ್ಟೊಂದು ಆರೈಕೆಮಾಡದೆ ಬಿಟ್ಟಿದ್ದರಿಂದ ಸಣ್ಣಮಗು ಚಿಂಚಮ್ಮ ಮಣ್ಣಲ್ಲಿ, ಧೂಳಲ್ಲಿ ಆಟ ಆಡೋದು, ಪುರಸತ್ತು ಇಲ್ಲದೆ ಚಿಂಚಮ್ಮ ತಾಯಿ ಗಂಗಮಾಳಿ ಕೂಲಿಗೆ ಹೋಗುತ್ತಿದ್ದರಿಂದಾಗಿ ಮಗಳಿಗೆ ತಲೆ ಸ್ನಾನ ಮಾಡಿಸದೆ ತಿಂಗಳುಗಳೆ ಆಗಿದ್ದವು. ಮುದ್ದು ಮುದ್ದಾದ ಚಿಂಚಮ್ಮನ ಕೂದಲು ಎಣ್ಣೆಜಿಡ್ಡಿನಿಂದಾಗಿ ಧೂಳು ತುಂಬಿಕೊಂಡು ಜಡೆಗಟ್ಟಿದವು. ಗಂಗಮಾಳಿ ಗಂಡ ಬಸವಂತಗೆ ದೇವಿ ತನ್ನ ಮಗಳಿಗೆ ಒಲಿದಾಳ ಅಂದುಬಿಟ್ರು. "ಆ ತಾಯಿ ನನ್ ಮಗಳನ್ನ ಬಯಸ್ಯಾಳ ಅಂದ್ರ ಮುಗಿತು, ಮುಂದಿದೇನಾರ ಆಗವಲದ್ಯಾಕ. ಅಕೀನ ಬಸವಿ ಮಾಡೋದೆ." ಚಿಂಚಮ್ಮನ ಭವಿಷ್ಯ, ಅವಳ ಬದುಕು ಏನನ್ನೂ ಆಲೋಚಿಸದೆ ಗಂಗಮಾಳಿ ಖುಷಿಯಿಂದ ಹೇಳಿಕೊಂಡು ತಿರುಗಾಡಿದಳು. ಹೆಂಡದಂಗಡಿಯಲ್ಲಿ, ಸರಾಯಿ ಕುಡಿಯುವಲ್ಲಿ, ಮಂದಿ ಎದುರಿಗೆ "ಏನೋ ಐದು ಹೆಣ್ಣುಗಳಲ್ಲಿ ಚಿಂಚಮ್ಮನ್ನ ಆರಿಸಿಕೊಂಡಾಳಂದ್ರ, ಆ ತಾಯಿದು ಲೀಲೆ ಮಹತ್ವದ್ಯೆತೆ ಮಾವ, ಅಣ್ಣ, ಸಣ್ಣಪ್ಪ ಅಂತ" ಮಂದಿ ಮುಂದೆ ಏನೋ ದೊಡ್ಡದೊಂದು ಸಾಧನೆ

ಮಾಡಿದಂತೆ ಆಡಿದ. "ಋತುಮತಿ ಆದ ಮಾರನೇ ದಿನ, ಕೈಯಾಗ ಜೋಳಗಿ ಕೊಟ್ಟ ತಾಯಿ ಮಾಲೆ ಹಾಕಿ ಪುಟ್ಟಿ ಕೊಟ್ಟುಬಿಡ್ತಿನಿ." ಗಂಗಮಾಳಿ ಮಂದಿಗೆಲ್ಲಾ ಹೇಳುತ್ತಾ ತಿರುಗಾಡಿದ್ದಳು. ಚಿಂಚಮ್ಮ ಏನು ಅರಿಯದ ಮುಗ್ಧ ಹುಡುಗಿ ತಂದೆ ತಾಯಿಯ ಮೌಢ್ಯದಿಂದ ಬದುಕನ್ನೇ ಕಳೆದುಕೊಂಡು ಬಸವಿಯಾದಳು.

ಅವಾಗಿನಿಂದ ಜನರ ನಡುವೆ ತನ್ನ ನೋವನ್ನ ಹಂಚಿಕೊಳ್ಳುವುದಕ್ಕೆ ಆಗದೆ ತನ್ನದೆ ಒಳಜಗತ್ತನ್ನ ಸೃಷ್ಟಿ ಮಾಡಿಕೊಂಡಳು. ಆ ಜಗತ್ತಿನಲ್ಲಿ ಹಾಡುವುದು, ಕುಣಿಯುವುದು, ಜನರ ಮೆಚ್ಚಿಗೆ, ಚಪ್ಪಾಳೆ, ಶಬ್ಬಾಷ್‌ಗಿರಿ ಇವುಗಳ ಹಿಂದೆ ಬಿದ್ದಳು. ಹೊರಗಿನ ಕ್ರೂರ ಪ್ರಪಂಚ, ದೇವರಿಗೆ ಬಿಟ್ಟವಳನ್ನೂ ಬಿಡದೆ ಅವಳ ಸಹವಾಸಕ್ಕೆ ಹಾತೊರೆಯುವ ಗಂಡಸರು, ಅವರ ನಡುವೆ ಬದುಕು ಅಸಹನೀಯವಾದಾಗ, ಸೋಬಾನೆ ಪದಗಳನ್ನು ಕಲಿತು ಹಾಡಿ ತನಗಾಗದ ಸೋಬಾನವನ್ನ ಹಾಡಿನ ಮೂಲಕವೇ ಹಾಡಿ ತೃಪ್ತಿ ಪಡುವ ಪ್ರಯತ್ನವಾಗಿತ್ತು. ಮುಂದೆ ಬಸವಿಹೋಗಿ ಜೊಗತಿಯಾದಳು. ಊರೂರು ಅಲೆಯತೊಡಗಿದಳು. ತಮ್ಮೊರಲ್ಲೂ ಇಂತಹ ಅನಿಷ್ಟ ಪದ್ಧತಿ ಇದೆ ಎನ್ನುವುದನ್ನು ಹುಲಿಯೂರ ಕಂಡು ಹೈರಾಣಾಗಿದ್ದ. ಲಮಾಣಿಗರಲ್ಲಿ ದೇವರಿಗೆ ಬಿಡುವುದಾಗಲಿ, ಬಸವಿ, ಜೋಗತಿ ಇಲ್ಲವೆ ಇಲ್ಲ. ಯಾವಾಗ ಸಂಸ್ಕೃತಿಕರಣಗೊಂಡು ಅವರ ಸಂಸ್ಕೃತಿಯಂತೆ ಘೆಟಿಯಾ(ಸೀರೆ) ಕಾಂಚಳಿ(ಕುಪ್ಪಸ) ಹೋಗಿ ಬೇರೆ ಜನದಂತೆ ಸೀರೆ ಬಂತೊ, ಮೆಲ್ಲಗೆ ಸೇವಾಭಾಯ, ಮರಿಯಮ್ಮನ ಬಿಟ್ಟು ಆಂಜನೇಯನನ್ನ, ಆಂಜನೇಯನ ಜೊತೆಗೆ ರಾಮನನ್ನ, ರಾಮನ ಅವತಾರವೇ ಆದ ಕೃಷ್ಣ, ಕೃಷ್ಣನ ಅವತಾರವಾದ ತಿರುಪತಿ ತಿಮ್ಮಪ್ಪ, ಶಿವ ಹೀಗೆ ಹಿಂದೂ ದೇವರುಗಳ ಪೂಜೆ ಆರಂಭವಾಗಿ ಸೀರೆ ಉಟ್ಟವರೂ ಕೆಲವರು ರೇಣುಕಾ ಎಲ್ಲಮ್ಮನನ್ನ ಹೊತ್ಕೊಂಡಿದ್ದರು. ಹುಲಿಯೂರ ಇದರ ಹಿನ್ನೆಲೆ ಏನಾದರೂ ಇರಬಹುದು ಎನ್ನುವ ಆಲೋಚನೆಯಲ್ಲಿ ಮುಳುಗಿದ್ದ. ಆದರೆ ಅವನಿಗೆ ಏನೊ ಗೋಚರಿಸಲಿಲ್ಲಾ, ಏಕೆಂದರೆ ಇದರ ಬೇರುಗಳು ಭೂಮಿಯಾಳಕ್ಕೆ ಇಳಿದು ಅಗೋಚರವಾಗಿವೆ. ಆದರೆ ಚಿಂಚಮ್ಮನ ಸೋಬಾನೆ ಹಾಡು, ಬೀಸುವ ಕಲ್ಲಿನ ಹಾಡು, ಕುಟ್ಟುವ ಹಾಡಿಗೆ ಮಂದಿ ಮಾತ್ರ ಬೆಕ್ಕಸ ಬೆರಗಾಗಿದ್ದರು. ಚಿಂಚಮ್ಮನ ನೆನಪಿನ ಶಕ್ತಿ, ಹಾಡುಕಟ್ಟುವ ಚಾಣಾಕ್ಷತೆ ಇನ್ನಾರಿಗೂ ಇರಲಿಲ್ಲಾ. ಹಿಂದೆ ಸೋ ಎನ್ನುವ ಗುಂಪಿನಲ್ಲಿ, ಕಾಳಿ, ಹನುಮಿ, ಮಂಜಿ, ಮಾಳಿ ಯಾವಾಗಲೂ ಸೋ ಎನ್ನುವುದ ಬಿಟ್ಟರೆ ಮುಂದೇನು ಹೊಳೆಯುತ್ತಿರಲಿಲ್ಲಾ ಅವಕ್ಕೆ. ಚಿಂಚಮ್ಮ ಮಾತ್ರ ಒಂದು ಮದುವೆಯನ್ನು ಬಿಟ್ಟುಬಿಡದೆ ಹಾಡುತ್ತಿದ್ದಳು, ಹಾಡುವುದು ಅನಿವಾರ್ಯವೊ ಇಲ್ಲ ಅವಶ್ಯಕತೆ ಎನ್ನುವುದು ಗೊತ್ತಾಗದಾಗಿತ್ತು. ಭಿಕ್ಷೆ ಬೇಡುವುದು, ಕೂಲಿ ಮಾಡುವುದೆ ಅವಳ ಬದುಕಾಗಿತ್ತು. ಭದ್ರಾನಾಯ್ಕನ ತಾಂಡದ ಜೋಗತಿ ಅಂತ ಮಂದಿ ಚಿಂಚಮ್ಮನನ್ನ ಗುರುತಿಸುತ್ತಿದ್ರು. ಯಾರ ಗುರುತಿಸಿದರು ಯಾರು ಯಾರು

ಗುರುತಿಸದೆ ಇದ್ದರು ಕಾಯಕಯೋಗಿ ಚಿಂಚಮ್ಮ ಬರ್ತಿನಿ ಅಂದರೆ ಏನೆ ಆಗಲಿ ಅಲ್ಲಿ ಇರುತ್ತಿದ್ದಳು. ಬಾಲ್ಯದಲ್ಲಿ ನಾನು ಚೆನ್ನಾಗಿದಿದ್ದರೆ ಇವತ್ತು ನನ್ನದು ಸಂಸಾರ ಇರುತ್ತಿತ್ತೇನೋ ಎನ್ನುವ ಕೊರಗಾಗಲಿ, ತಾನು ಹೀಗೇಕೆ ಎನ್ನುವ ಬೇಸರವಾಗಲಿ ಅವಳಿಗಿರಲಿಲ್ಲಾ. ಎಲ್ಲವನ್ನೂ ಮೀರಿ ಬೆಳೆದಿದ್ದಳು. ಆದರೆ ಆ ಆಹಾಂ, ಸುತರಾಂ ಅವಳಲ್ಲಿ ಇಲ್ಲ. ಮಂದಿ ದೃಷ್ಟಿಯಲ್ಲಿ ಚಿಂಚಮ್ಮ ಕೆಲಸಕ್ಕೆ ಬಾರದ ಜೋಗತಿ ಏನೊ ನಾಕು ಸೋಬಾನೆ ಪದ ಹಾಡಿಕೊಂಡು ಜೀವನ ನಡೆಸುತ್ತಿದ್ದಾಳೆಂದು ಹಗುರವಾಗಿ ತೆಗೆದುಕೊಂಡಿದ್ದರು.

* * *

48. ಸೊಟ್ಟಬಾಯಿ ನಜೀರನ ವಿಮಾನ ಪ್ರಸಂಗ

ಭದ್ರನಾಯ್ಕನ ತಾಂಡದಲ್ಲಿ ಶಾಲೆ ಇರಲಿಲ್ಲ. ಬಹಳಷ್ಟು ಜನ ಕೆರೆ ಏರಿ ಮೇಲೆ ಎರಡು ಮೈಲಿ ನಡೆದು ಹೋಗಿ ಕೋದಂಡಪುರದಲ್ಲಿ ಸಾಲಿ ಕಲಿಯಬೇಕಿತ್ತು. ದೊಡ್ಡ ಊರಾದ ಭದ್ರಾನಾಯ್ಕ ತಾಂಡದಲ್ಲೇ ಸಾಲಿ ಯಾಕಿಲ್ಲ? ಸುತ್ತಲ ಹಳ್ಳಿಗಳಿಗೆ ತಾಂಡವೆ ಮಧ್ಯದಲ್ಲಿತ್ತು. ಆದರೆ ಸಾಲಿಯಾಕೆ ಕೋದಂಡಪುರಕ್ಕೆ ಹೋಯಿತೋ ಗೊತ್ತಿಲ್ಲ. ನಂತರ ಬಂದ ಶಿಕ್ಷಣ ಅಧಿಕಾರಿ ಕೋದಂಡಪುರದಲ್ಲಿ ಶಾಲೆ ಇರುವುದು ಅವೈಜ್ಞಾನಿಕ, ಅದು ಮೂಲೆಯಲ್ಲಿದೆ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಇಲ್ಲದಿರುವುದು ಒಂದು ಕಾರಣ. ನಿತ್ಯ ಶಾಲೆಗೆ ಬರುವವರ ಸಂಖ್ಯೆ ಕೂಡ ಭದ್ರನಾಯ್ಕತಾಂಡ, ಕಂಡಳಿ, ಇಳಂಗೋವಿಯಿಂದ ಆಗಿರುವುದರಿಂದ ಶಾಲೆ ನ್ಯಾಯಯುತವಾಗಿ ಭದ್ರನಾಯ್ಕನ ತಾಂಡದಲ್ಲಿರುವುದು ಸೂಕ್ತ ಎಂದು ಸುದೀರ್ಘ ಪತ್ರ ಬರೆದು ಭದ್ರನಾಯ್ಕನ ತಾಂಡಕ್ಕೆ ವರ್ಗಾವಣೆ ಮಾಡಿಸಿದರು. ಶಾಲೆಯನ್ನು ಈ ಊರಿಗೆ ವರ್ಗಾವಣೆ ಮಾಡುವುದಕ್ಕೆ ಮುಖ್ಯ ಕಾರಣ ಕೋದಂಡಪುರಕ್ಕೆ ಹೋಗಬೇಕಾದರೆ ಕೆರೆ ಏರಿ ಮೇಲೆ ಹೋಗಬೇಕು, ರಸ್ತೆ ತಗ್ಗುದಿನ್ನೆಯಿಂದ ಕೂಡಿದೆ ಮೊದಲೆ ಭದ್ರನಾಯ್ಕನ ತಾಂಡಕ್ಕೆ ವಾಹನಗಳಿರಲಿಲ್ಲಾ, ದುರ್ಗಪುರಕ್ಕೆ ಇಳಿದು ಐದು ಮೈಲಿ ನಡೆಯಲೇ ಬೇಕಿತ್ತು. ಆದರೆ ಅಷ್ಟು ದೂರ ಹೆಂಗ ಹೋಗಬಹುದು ಮುಂದೆ ಎರಡು ಕಿಲೋಮೀಟರ್‌ನಷ್ಟು ದೂರ ಈ ಐದು ಮೈಲಿಗಿಂತ ಕಷ್ಟವಾಗಿತ್ತು. ಹಾಗಾಗಿಯೆ ಶಾಲೆಯನ್ನ ವರ್ಗಾವಣೆ ಮಾಡಿಸುವುದು ಆವಾಗಿನ ಶಿಕ್ಷಣಾಧಿಕಾರಿ ಸುಂದರಸ್ವಾಮಿಯ ಮೊದಲ ಆದ್ಯತೆಯಾಗಿತ್ತು. ಹಳೇ ದೇವಸ್ಥಾನದಲ್ಲಿ ಗುರುಪಾದಪ್ಪ ಮಾಸ್ತರ ಕೋದಂಡಪುರದಿಂದ ಹಳೇ ಪೆಟಾರಿ, ಕರಿ ಬೋರ್ಡು, ನಾಕು ಸೀಮೆಸುಣ್ಣಗಳ ತುಂಡು ಒಂದೆರಡು ಪುಸ್ತಕಗಳು ಒಂದು ರೂಲ್‌ದೊಣ್ಣೆಯನ್ನ ತೊಪುನಾಯ್ಕನಿಗೆ ಹೇಳಿಯೆ ಬಂಡಿ ಕಟ್ಟಿಸಿಕೊಂಡು ಹೇರಿಕೊಂಡು ಬಂದಿದ್ದ. ಅಲ್ಲಿ ಶಾಲೆಗೆ ಬರುವವರ ಸಂಖ್ಯೆಯೂ ಅಷ್ಟಕಷ್ಟೆ ಇತ್ತು. ಶಾಲೆ ವರ್ಗಾವಣೆಯಾದ ಮೇಲೆ ಬಹಳ ಹುರುಪಿನಿಂದ ಹಳೆ ಪೆಟಾರಿಗಳಲ್ಲಿದ್ದ ನೂರು ಕಡೆ ಪಿಸಿದಿದ್ದ ಅಂಗಿಗಳನ್ನು

ತೇಪೆ ಹಾಕಿ ತೊಡುವಂತೆ ಸರಿ ಮಾಡಿರುವವನ್ನ ಹುಡುಕಾಡಿ ತೊಟ್ಟು, ಹುಸೇನಿ ಮಗ ಸೊಟ್ಟಬಾಯಿ ನಜೀರ, ಜೇವ್ಲನ ಮಗ ಹಾಲ್ಯಾನಾಯ್ಕ, ಮೊಟ್ಲನ ಮಗ ಭಗನ್ಯಾ, ಹುಲ್ಲಪ್ಪನ ಮಗ ಚಿಮಣ, ಸಂತ್ರಿ, ಸುಣಗಾರ ಮಾಲಿಂಗ, ಯಂಕ, ನಾಣಿ, ಸೀಗ, ತೋಪ, ಹಾಬು, ಯಬಡಿ, ಬುರಡ ಹತ್ತು ಹದಿನೈದು ಹುಡುಗರು ತಯಾರಾದರು. ಮದಲನೇ ದಿನ ತಾಂಡದವರೆಲ್ಲಾ ಸಿಂಬಳ ಸೋರುತ್ತಿರುವ ಮೂಗುಗಳನ್ನ ಸ್ವಚ್ಚಗೊಳಿಸಿ ಮೈ ತೊಳೆಯದಿದ್ದರು ಮಕ ತೊಳಿಸಿ ಕೂದಲಿಗೆ ಎಣ್ಣೆ ಇಲ್ಲದಿದ್ದರೂ ನೀರು ಹಾಕಿ ತಿದ್ದಿ ತೀಡಿ, ಕರ್ಕೊಂಡ ಬಂದಿದ್ರು ಗುರುಪಾದಪ್ಪ ಮಾಸ್ತರ ಹುಡುಗರು ಇಲ್ಲದ ಶಾಲೆಯೊಳಗೆ ಮಂದಿ ಕುಡ ಹರಟೆ ಹೊಡೆದು ಮಧ್ಯಾಹ್ನದ ಊಟ ಉಂಡು ಸಂಜೆಗೆ ಊರ ಕಡೀಗ ಹೊರಟು ಅಭ್ಯಾಸವಾಗಿತ್ತು ಗುರುಪಾದಪ್ಪ. ಎಲ್ಲಾ ಹದಿನೈದು ಇಪ್ಪತ್ತು ಜ್ಞಾನವೆ ಇಲ್ಲದ ಎಡವಟ್ಟುಗಳ ಜೊತೆಗೆ ತಲೆ ಚಚ್ಚಿಕೊಳ್ಳುವ ಬಗೆ ಆಲೋಚಿಸುತ್ತಿರುವಾಗಲೆ ಎಲ್ಲರಿಗಿಂತ ಎತ್ತರವಿದ್ದ ಚಿಮಣ, ಪಕ್ಕದಲ್ಲಿ ಕೂತಿದ್ದ ಭಗನ್ಯಾ ಕುಂಡಿ ಹಿಡಿದು ಗಿಂಡಿದ್ದಕ್ಕೆ, ಹಿಂದುಮುಂದು ನೋಡದೆ ಮಕ ಮುಸುಡಿ ನೋಡದಂಗೆ ತದುಕಿದ. ಅವನು "ಯವ್ವ ಸತ್ನೆ" ಅಂತ ಲಬಲಬ ಹೊಯ್ಕೊಳಾಕ ಸುರು ಮಾಡಿದ. "ಲೇ ಯಾವನಲೆ ಅಳೋನು, ಮುಚ್ಚಲೆ ಬಾಯಿ" ಅಂತ ರೂಲ್ ದೊಣ್ಣೆಯಿಂದ ಎರಡು ಬಾರಿಸಿದ.

ಮಾಸ್ತರ ಅವನ ಅಜ್ಜಿ ಹೇಳಿದ ಕತೆಯಲ್ಲಿ ಬರುವ ಬ್ರಹ್ಮರಕ್ಕಸನಂತೆ ಕಂಡಂಗಾಗಿ ಕುಂತಲೆ ಉಚ್ಚೆಹೊಯ್ಕೊಂಡಿದ್ದ ಭಗನ್ಯಾ. ನೆಲದ ಮಣ್ಣು ಇವನು ಹೊಯ್ದುಂಗೆಲ್ಲಾ ಬಿಟ್ಟು ಬಿಡದಂಗೆ ಹೀರಿಕೊಂಡಿತ್ತು. "ಲೇ ಯಾವನ್ಲೆ, ಆ ಮಗನ್ನ ಹೊಡದವನು, ಲೇ ನೀ ಎತ್ತರದವನೆ ಬಾರಲೆ ಇಲ್ಲಿ, ಯಾಕಲೇ ಬೇವರ್ಸಿ ಮಗನೆ ಬಗಲಾಗ ಹಲ್ಲ ಬಂದಾವ ನಿನಗೆ" ಅಂದವರೆ ರೂಲ್ ದೊಣ್ಣೆಯಿಂದ ಎರಡೂ ಕೈಗೆ ಎರಡೆರಡು ಬಾರಿಸಿದ್ರು. "ಚಿಮಣ, ಇಲ್ಲಾ ಸಾ ಹೊಡಿಲಿಲ್ಲಾ, ಅವನ ನನ್ನ ಕುಂಡಿ ಚಿವುಟಿದ. ಇಲ್ಲಾ ನಮ್ಮವ್ವನಾಣೆಗೂ ನಾ ಹೊಡ್ದಿಲ್ಲಾ" ಅಂತ ಹೊಡ್ತ ತಪ್ಪಿಸಿಕೊಳ್ಳೋದಕ್ಕೆ ನೋಡಿದ. ಮಾಸ್ತರ ಗುರಿಯಿಡುವುದರಲ್ಲಿ ನಿಸ್ಸೀಮನಾಗಿದ್ದರಿಂದಲೋ ಏನೋ ಅವನ ಕಿರುಬೆರಳಿಗೆ ಕಟ್ಟಂತ ಬಡದು, "ಯವ್ವ ಸತ್ನೆ" ಅಂತ ಲಬಲಬ ಹೊಡಕೊಂಡ. ಆಜುಬಾಜು ಮಂದಿ ತಮ್ಮ ಪಾಡಿಗೆ ಏನೂ ನಡೆಯುತ್ತಿಲ್ಲ ಎಂಬಂತೆ ಹೊರಟು ಹೋದರು.

ಮರುದಿನ ಮುಂಜಾನೆ ಚಿಮಣ ಮತ್ತು ಭಗನ್ಯಾ ಅವರ ಅಪ್ಪಂದಿರು ಬೆನ್ನತ್ತಿ ಹಿಡಿಯಾಕ ಹೋದ್ರು ತಪ್ಪಿಸಿಕೊಂಡು, "ನಾ ಒಲ್ಲೆಯಪ್ಪ ಸಾಲಿ ಓದಂಗಿಲ್ಲ, ಮಾಸ್ತರ ಮುಕ್ಕಾರ ಹೊಡಿತಾನ ಒಲ್ಲೆ ಅಂದ್ರೆ ಒಲ್ಲೆ" ಜಿಗದು ಓಡಿ ಹೋದವರು ಮಂಗಮಾಯ ಆಗಿದದ್ರು. ಅವರಿಗೆ ಬಿದ್ದ ಹೊಡೆತದಿಂದಲೇ ಜ್ವರ ಬರಿಸಿಕೊಂಡಿದ್ದ ಯಬಡ, ಯಂಕ, ನಾಣಿ, ಸೀನ, ಸಾಲಿಗೆ ಚಕ್ಕರ್ ಹೊಡೆದಿದ್ದಕ್ಕೆ ಸಂಖ್ಯೆ ಬಹಳ

ಇಳಿಮುಖವಾಗಿತ್ತು. ಮಾಸ್ತರಿಗೆ ಒಳಗೊಳಗೆ ಖುಷಿಯಾದರೂ, ಶಿಕ್ಷಣಾಧಿಕಾರಿ ಸುಂದರಸಾಮಿಗೆ "ಖಂಡಿತವಾಗಿಯೂ ಆ ತಾಂಡದಲ್ಲಿ ಇಪ್ಪತ್ತು ಮೂವತ್ತು ಹುಡುಗರ ಸಂಖ್ಯೆ ಹೆಚ್ಚಿಸಿಯೇ ತೀರುತ್ತೇನೆ" ಅಂತ ಮಾತುಕೊಟ್ಟಿದ್ದ ನೆನಪಾಯಿತು. ಈ ಮುಂಡೆಮಕ್ಕಳು ಮಾಂಸ ತಿಂದು ತಲಿಯೊಳಗೆ ಏನೂ ಇಲ್ಲದಂಗೆ ಕುಂತವೆ, ಈ ಲಮಾಣ್ಯರಿಗೆ ಸರಸ್ವತಿ ಎಲ್ಲಿ ಒಲಿದಾಳು ಅನ್ನೋದು ಮಾಸ್ತರ ಗುರುಪಾದಪ್ಪ ಅಂದುಕೊಂಡಿದ್ದ. ಆತ ಅರಳಾಪುರದ ಮಠದಸ್ವಾಮಿ ಗುರುಗೊಮ್ಮಟದೇವರ ಖಾಸ ಸಹೋದರನಾಗಿದ್ದರಿಂದ ಈ ಅತಿ ಶೂದ್ರ ಮುಂಡೇವು ಅಂದರೆ ಅಷ್ಟಕಷ್ಟೆ. ಪರಿಸ್ಥಿತಿ ಹೀಗಿರುವಾಗ ಶಾಲೆಗೆ ಬರುತ್ತಿರುವ ಕಡಿಮೆ ಹುಡುಗರನ್ನ ನೋಡಿ ಚಿಂತಿತನಾಗಿದ್ದ. ಒಬ್ಬರ ಹತ್ರನೂ ಪಾಟಿ, ಪೇಣಿ ಏನೂ ಇರಲಿಲ್ಲಾ. ಪ್ರತಿಯೊಬ್ಬರು ಮರಳಲ್ಲೇ ಓಂ ತಿದ್ದಿದ ನಂತರ ಅಆಇಈ ಕಲಿಯತೊಡಗಿದ್ದರು. ಆದರೆ ಅವು ನಾಕಕ್ಷರಗಳನ್ನು ಯಾರೊಬ್ಬರು ಕಲಿತಿರಲೇ ಇಲ್ಲಾ ಎಲ್ಲರು ಮಣ್ಣಲ್ಲಿ ತೀಡುತ್ತಿದ್ದರೆ ವಿನಃ ಯಾರು ಬರೆಯುವುದನ್ನ ಸಾಲಿಸುರುವಾಗಿ ವಾರಗಳೆ ಕಳೆದರು ಸಾಧ್ಯವಾಗಿರಲಿಲ್ಲಾ. ರಂಗೋಲಿ ಮಾರುತ್ತಿದ್ದ ರಾಮ ಮಾತ್ರ ವಾರ ಒಪ್ಪತ್ತಿಗೆ ದಾವಣಗೆರೆಗೆ ರಂಗೋಲಿ ಮಾರೋದಕ್ಕೆ ಹೋದವನು ಯಾರದೊ ಮನೆಯಲ್ಲಿ ರಂಗೋಲಿ ಕೊಟ್ಟ ಕಾಸು ಪಡೆದ ಮೇಲೆ "ಅವ್ವಾರ ಮನಿಯೊಳಗ ಹಳೆ ಸ್ಲೇಟು ಏನಾರ ಐತೇನ್ರಿ ಮಗನ್ನ ಸಾಲಿಗ ಸೇರ್ಸಿದಿನಿ" ಅಂತ ಕಿವಿವರಿಗೂ ಹಲ್ಲುಗಿಂಜಿದ. ಯಾರದೊ ಮನೆಯಲ್ಲಿದ ಹಳೆ ಪಾಟಿ ಕಟ್ಟು ಮುರದಿತ್ತು. ಆದರೂ ಕೊಳ್ಳೋದಕ್ಕೆ ಆಗದೆ ಅದನ್ನೇ ತಂದು ಅವನೆ ಕುಂತು ಕಟ್ಟನ್ನ ಸರಿಮಾಡಿ, ಹಳೆ ಹೈಬ್ರಿಡ್ ಜೋಳದ ಚೀಲದಲ್ಲಿ ಸೇರಿಸಿ ಮಗ ಸಕ್ರ್ಯಾ ನನ್ನ ಸಾಲಿಗೆ ಕಳುಹಿಸಿದ್ದ. ತೀಡಾಕೆ ಬಾರದ ಸಕ್ರ್ಯಾ ಇನ್ನೂ ಪಾಟಿ ಮೇಲೆ ಬರದಾನ? ಮಾಸ್ತರಿಗೆ ಸವಾಲಾಗಿತ್ತು. ಪಾಪ ಆಶೆಪಟ್ಟು ಪಟ್ಟಣದಿಂದ ಪಾಟಿ ತಂದಾನ ಅನ್ನೋ ಕಿಚ್ಚಿಗೆ ಸೀಮೆಸುಣ್ಣದಿಂದ ಎರಡು ಅಕ್ಷರಗಳನ್ನು ಬರೆದು ತೀಡುವಂತೆ ಹೇಳಿದ್ದ. ಆಡಿ ಆಡಿ ಮೈ ಉಂಡಿರೊ ಹುಡುಗರಿಗೆ ಒಂದೇ ಸಲ ತಂದು ಸಾಲಿ ಅಂತ ಕುಂದ್ರಿಸಿದರೆ ಸ್ಥಿತಿ ಏನಾಗಬೇಡ.

ಕುಂತಲ್ಲೆ ತೂಕಡಿಸುವರ್‍ಯಾರೊ "ಎಂಥ ಪಾಡು ಮಣ್ಣಾಗ, ಕಲ್ಲೊಳಗೆ, ಕಣಗಳ ಸಂದಿಯೊಳಗೆ ಕುತತ್ತಿಮರಿ, ಬಸ್ಸು, ಮರಕೋತಿ ಆಡ್ತಿದಿವಿ. ಇದ್ಯಾವ ಹಣೆಬರ" ದಿಬರ ಗೊಣಗಿದ್ದ. ಕೊಳಕು ಬಟ್ಟೆ ಸೋರುತ್ತಿರೋ ಮೂಗುಗಳನ್ನ ನೋಡಿಯೇ ಗುರುಪಾದಪ್ಪಗೆ ಮಧ್ಯಾಹ್ನದ ಊಟ ವಾಕರಿಕೆ ತರಿಸಿತ್ತು. ಆದರೂ ಅನಿವಾರ್ಯವಾಗಿ ವರ್ಗಾವಣೆಯಾಗುವವರೆಗೆ ಕೆಲಸ ಮಾಡಲೇಬೇಕಿತ್ತು. ಹಾಗಾಗಿ ಮನಸ್ಸಿಲ್ಲದಿದ್ದರೂ ಕೆಲಸ ಮಾಡಲೇ ಬೇಕಿತ್ತು ಮಾಡುತ್ತಿದ್ದ. "ಅಲ್ಲಿ ಹುಡುಗರು ಇಲ್ಲದಿದ್ದದ್ದೇ ಪಾಡಿತ್ತಲ್ಲ ತಂದೆ, ಈ ಲಮಾಣಿ ಹುಡುಗರು ಸ್ವಚ್ಛ ಇಲ್ಲ" ಒಬ್ಬನೆ ಗೊಣಗಿ ಕೊಳ್ಳುವುದನ್ನು ಬಿಟ್ಟರೆ ಬೇರೆ ದಾರಿನೆ ಇರಲಿಲ್ಲಾ.

ಮಧ್ಯಾಹ್ನದ ಸಾಲಿ ಸುರು ಆಗಿತ್ತು, ಮಾಮೂಲಿನಂತೆ ಕೆಲವರು ಬಂದಿದ್ದರು, ಇನ್ನೂ ಕೆಲವರು ಏಡಿ ಹಿಡಿಯಾಕ ಅಲ್ಲಿ ಇಲ್ಲಿ ಅಂತ ಚಕ್ಕರ್ ಹೊಡೆದಿದ್ದರು. ಮೇಷ್ಟ್ರು ಮಗ್ಗಿ ಹೇಳಿಸುತ್ತಿದ್ದರು, ಸೊಟ್ಟಬಾಯಿ ನಜೀರ ಪಕ್ಕದವನಿಗೆ ಚಿವುಟೋದು, ಹೊಡೆಯೋದು ಮಾಡುತ್ತಿದ್ದ. ಹುಸೇನಿಯ ಎಂಟನೇ ಸಂತಾನವಾದ ನಜೀರ. "ಜಾವೂ ಚಾರ ಅಕ್ಷರ ಸಿಕೊ ಅಂತ" ಹುಸೇನಿ ಒತ್ತಾಯದಿಂದ ಕಳುಹಿಸಿದ. ಆದರೆ ನಜೀರನಿಗೆ ಮಂದಿ ತನ್ನ ಅಣಕಿಸುತ್ತಾರೆ ಎನ್ನುವ ಮಾನಸಿಕ ಒತ್ತಡದಿಂದಾಗಿ ಅವನು ಎಲ್ಲೂ ಹೋಗಲು ತಯಾರಿರಲಿಲ್ಲಾ. ಹುಟ್ಟಿದಾಗ ಪಸಂದಾಗೆ ಎರಡೂ ತುಟಿಗಳು ಕುಡಿಯೇ ಇದ್ದವು. ಅವನು ಐದಾರನೇ ವರ್ಷದ ಮಗು ಇದ್ದಾಗ, ತಾನು ವಾಸವಾಗಿದ್ದ ಏರಿ ಹಿಂದಿನಿಂದ ಈಚೆಗೆ ಮಂದಿ ಕೆರೆದಾಟುವ ಜಾಗದಲ್ಲಿ ತೊಡಿಮಟ ನೀರಿತ್ತು, ನೀರಿಗಿಳಿದು ಇನ್ನೇನು ಆಚೆ ದಡಕ್ಕೆ ಬರಬೇಕು ಎನ್ನುವಾಗ ಪಾರ್ಶಿಹೊಡಿತು, ಬಾಯಿ ಸೊಟ್ಟ ಆಯಿತು, ಅಂತ ಮಂದಿ ಮಾತಾಡಿಕೊಳ್ಳುತ್ತಿದ್ದರು. ಹಾಗಾಗಿಯೇ ಅವನಿಗೆ ಸೊಟ್ಟಬಾಯಿ ನಜೀರ ಅಂತ ರೂಢಿನಾಮ ಬಿತ್ತು. ಆದರೂ ಕುಂತಲ್ಲೇ ಚಾಷ್ಟಿ ಮಾಡುತ್ತಿದ್ದ ನಜೀರನ ಎಬ್ಬಿಸಿದರು ಗುರುಪಾದಪ್ಪ. "ಲೇ ಏನು ಮಾಡುತ್ತಿದ್ದೆ" ನಜೀರನ್ನ ಕೇಳಿದರು. "ಏನೂ ಇಲ್ಲ ಸಾ" ಅಂದ. "ಕತ್ತೆ ಬಡವ ಸುಳ್ಳ ಬಗಳ್ತಿ" ಸಿಟ್ಟಿಂದ ಅವನ ಕಡೆಗೆ ಓಡಿದರು. "ಇಲ್ಲ ಸಾ ಏನೂ ಮಾಡಿಲ್ಲ" ಅಳತೊಡಗಿದ. "ಹೋಗಲಿ ದೊಡ್ಡವನಾಗಿ ಏನಮಾಡ್ತಿ," ಕೇಳಿದರು "ವಿಮಾನ ಓಡಿಸ್ತಿನಿ ಸಾ" ಅಂದ ನಜೀರ ಮೇಷ್ಟ್ರಿಗೆ ಕತ್ತಲು ಆವರಿಸಿದಂಗಾತು. ಏನುಮಾಡ್ತಿ ಜೋರಾಗಿ ಹೇಳಲೆ ಎಲ್ಲರೂ ಕೇಳಲಿ ಗದರಿಸಿದರು. "ಅದೇ ಸಾ ವಿಮಾನ ಓಡಿಸ್ತಿನಿ" ಅಷ್ಟೆ ಗಂಭೀರವಾಗಿ ಹೇಳಿದ. "ಹೌದಪ್ಪ, ವಿಮಾನ ಎಲ್ಲ ಓಡಸ್ತಿಯಾ, ರಸ್ತೆ ಮೇಲೋ" ಅವನ ಜಾಣ್ಮೆ ಪರೀಕ್ಷೆ ಮಾಡಿದ್ದ. "ಇಲ್ಲ ಸಾ ಆಕಾಶದಾಗ ಓಡಿಸ್ತಿನಿ" ಅಂದ. "ಅಲಾ ಮಗನ, ನಾ ಎಲ್ಲೊ ನೀರಾಗ ಓಡಸ್ತಿ ಅಂದ್ಕೊಂಡ್ನಲ್ಲಾ ಆಕಾಶದಾಗ ವಿಮಾನ ಓಡಿಸಿದೆ ಅಂತ ಇಟ್ಕೊ, ಅದನ್ನ ಎಲ್ಲಿ ಇಳಿಸ್ತಿಯಾ." ಮಾಸ್ತರ್‌ನ ಮತ್ತೊಂದು ಪ್ರಶ್ನೆ. ಬಹಳ ಸುಲಭವಾಗಿಯೇ ನಜೀರ ಉತ್ತರಿಸಿದ. "ನಮ್ಮೂರ ಕೆರಿಯ ನಡಕ ಇಳಸ್ತಿನಿ" ಅಂದುಬಿಟ್ಟ. ಅದನ್ನ ಕೇಳಿದ ಹುಡುಗರು ಸದ್ದು ಮಾಡ್ತಾ ಆಕಾಶದಾಗ ಓಡುವ ವಿಮಾನಗಳನ್ನು ನೋಡಿ ಕೂಗಿಕೊಂಡು ಕುಣಿದಾಡಿದ್ದರು. ಇವನು ಕೆರಿಯೊಳಗೆ ವಿಮಾನ ಇಳಿಸುತ್ತಾನೆ ಎಂಬುದ ಕೇಳಿ ಜೋರಾಗಿ ನಗತೊಡಗಿದರು. ಅವತ್ತಿನಿಂದ ಸೊಟ್ಟಬಾಯಿ ನಜೀರನ ಜೊತೆಗೆ ಮತ್ತೊಂದು ಹೆಸರು ಅಂಟಿಕೊಂಡಿತ್ತು. ಹುಡುಗರು ಅವನು ಎಲ್ಲೆ ಕಂಡರು. "ಲೇ ನಜೀರ ವಿಮಾನ ಎಲ್ಲಿ ಇಳಸ್ತಿ?" ಕೇಳುತ್ತಿದ್ದರು. ನಜೀರ ಒಳ್ಳೆಯ ಖುಷಿಯಲ್ಲಿದ್ದ ನಕ್ಕು ಸುಮ್ಮನಾಗುತ್ತಿದ್ದ. ಅವನಿಗೆ ಅವಮಾನ ಅನಿಸಿತು. "ನಿಮ್ಮವ್ವ...ನ ಹೊಗಲೆ" ಅಂತ ಗದರಿಸಿ ಬೆನ್ನತಿ ಹೊಡೆಯುತ್ತಿದ್ದ. ಯಾವಾಗ ಅವನು ಮಂದಿಯನ್ನು ಬೆನ್ನತ್ತಿ ಹೊಡೆಯೋದಕ್ಕೆ ಹೋದನೊ ಅದು ಅವನ ದೌರ್ಬಲ್ಯ ಅಂತ ತಿಳಿದುಕೊಂಡವರೆ,

ಅವನು ಕಂಡಾಗ ಮನೆಯ ಒಳಗಿನಿಂದಲೇ "ಲೇ ನಜೀರ, ವಿಮಾನ ಎಲ್ಲಿ ಇಳಸ್ತಿ" ಜೋರಾಗಿ ಕೂಗಿದವರೆ ಮನೆಯೊಳಗೆ ಸೇರಿಕೊಳ್ಳುತ್ತಿದ್ದರು. ಸುದ್ದಿ ಬಾಯಿಯಿಂದ ಬಾಯಿಗೆ ಪ್ರಚಾರವಾಗಿ ಇಡಿ ಊರಿನ ಸಣ್ಣವರು, ದೊಡ್ಡವರು ನಜೀರನ ವಿಮಾನ ನಡೊಕೇರಿಯೊಳಗೆ ಇಳಿತೈತೆ ಹುಷಾರು ಅಂತ ಹಾಸ್ಯ ಮಾಡತೊಡಗಿದರು. ಈ ಸುದ್ದಿ ನಜೀರನ ಮನೆಯಲ್ಲೂ ಚರ್ಚಿಸಲಾಯಿತು. "ಅಬ್ಬಾ ನಾನು ಇಸ್ಕೂಲಿಗೆ ಹೋಗೋದಿಲ್ಲ" ಅಂತ ಕುರಿಮೇಯಿಸೋದಕ್ಕೆ ಹೊರಟುಬಿಟ್ಟ. ಆದರೆ ಶಾಲೆ ತುಂಬ ಅವನು ಹೇಳಿದ ಕೆರಿನಡಕ್ಕ ವಿಮಾನ ಇಳಿಸುವುದು ಜಗಜನ್ನಿತವಾಗಿತ್ತು. ಹಿಂದಿನ ಹುಡುಗರು ನಜೀರನ ಮಾತು ಮುಂದಿನವರಿಗೂ ಹೇಳಿದರು. ನಜೀರನ ಈ ಮಾತು ಬರಿ ಶಾಲೆಯ ಗೋಡೆಗಳ ನಡುವೆ ಉಳಿಯದೆ ಊರಿನಡಕ್ಕೆ ಬಂದಿತ್ತು. ಊರ ಕೊನೆಯನ್ನು ತಲುಪಿತ್ತು ಅಷ್ಟೆ ಅಲ್ಲ, ಶಿಕ್ಷಣಾಧಿಕಾರಿ ಸುಂದರಸಾಮಿಗೂ ತಲುಪಿತ್ತು, ಯಾವತ್ತೊ ಒಂದು ದಿನ ಭದ್ರಾನಾಯ್ಕನ ತಾಂಡೆಕ್ಕೆ ಸಂದರ್ಶನ ಕೊಟ್ಟಾಗ, "ರೀ ಮೇಷ್ಟ್ರೆ ಎಲ್ಲಿ ನಿಮ್ಮ ಹುಡುಗ, ಅವನ್ಯಾರೊ ನಡೊ ಕೆರೆಯೊಳಿಗೆ ವಿಮಾನ ಇಳಿಸ್ತಿನಿ ಅಂದಿದ್ನಂತಲ್ಲಾ" ಅಂತ ಕೇಳಿ ಬಿಡಬೇಕೆ. ಗುರುಪಾದಪ್ಪಗೆ ಮುಜುಗರ ಒಂದ ಕಡೆಗೆ ಆಶ್ಚರ್ಯ ಮತ್ತೊಂದು ಕಡೀಗೆ. "ಅಲ್ಲಾ ಸಾ ಈ ವಿಷಯ ನಿಮ್ಮವರಿಗೂ ಹೆಂಗ ಬಂತು ಅಂತೀನಿ" ಹೈರಾಣಾಗಿ ಕೇಳಿದ್ದ ಮಾಸ್ತರ. "ಹೆಂಗೊ ಒಂದು ಬಂತು ನಿಮಗ್ಯಾಕೆ. ಎಲ್ಲಿ ಅವನು ತೊರಿಸ್ರೀ ನೋಡಮ" ಬೇಡಿಕೆ ಸಲ್ಲಿಸಿದರು ಸುಂದರಸಾಮಿ. "ಇಲ್ಲ ಸಾ ಈ ವಿಷಯ ಇಷ್ಟು ಬೇಗ ಹೊರಗೆ ಹರಡ್ತು ಅಂದರೆ ಗಲ್ಲಿ, ಮೂಲಿ ಒಂದು ಬಿಡದೆ, ಸಣ್ಣವರು, ದೊಡ್ಡವರು, ಮುದುಕರು ಅವನನ್ನ ನೋಡಿ ಇವನೆ ಏನು ನಮ್ಮೂರ ಕೆರಿಯೊಳಗೆ ವಿಮಾನ ಇಳಿಸೋನು ಅಂತ ಕೇಳಿ ಕೇಳಿ ಅವನಿಗೆ ಹಣ್ಣಗಾಯಿ ನೀರಗಾಯಿ ಮಾಡಿಬಿಟ್ರು ಪಾಪ ಅವನೇನೋ ಹೇಳೋದು ಹೇಳಿದ. ಹೇಳಿದ ಮೇಲೆ ಮುಟ್ಕೊಂಡು ನೋಡೊ ಹಂಗಾಯ್ತು ಸ್ಥಿತಿ. ಅದಕ್ಕ ಸಾಲಿನ ಬಿಟ್ಟ" ಅಂದು ನಿಟ್ಟುಸಿರು ಬಿಟ್ಟರು. "ಅಯ್ಯೊ ಪಾಪ, ಹೀಗಾಯ್ತ ಸ್ಥಿತಿ, ಈ ಮಂದಿ ಹಂಗೆ ಕಣ್ರಿ ಸಿಕ್ಕ ಒಂದು ಸಣ್ಣ ವಿಷಯವನ್ನ ದೊಡ್ಡದು ಮಾಡ್ತಾ ಮಾಡ್ತಾ ಸಂಬಂಧಪಟ್ಟವನ ಕುತ್ತಿಗೆಗೆ ನೇಣು ಕುಣಿಕೆ ಬಿಗಿತಾರ" ಅಂತ ಬೇಸರದಿಂದ ಹೇಳಿದ ಸುಂದರಸಾಮಿ. ಅವನ ಹೇಳಿಕೆ ಅವನು ಬೆಳೆಯುತ್ತಿದ್ದಂತೆ ಕಡಿಮೆಯಾಗಿತ್ತು. ಅವಾಗ ಅವಾಗ ಅವನನ್ನ ಅವಮಾನಗೊಳಿಸುವ ಅಸ್ತ್ರವಾಗಿ ಮಾರ್ಪಟ್ಟಿತ್ತು. ನಜೀರ ಮಾತ್ರ ಮೊದಮೊದಲು ಅವಮಾನ ಅನಿಸಿತ್ತು, ಬೇಸರ, ದುಗುಡ, ಕಿರಿಕಿರಿ ಅನಿಸಿತ್ತು. ಅವನು ದೊಡ್ಡವನಾಗುತ್ತಿದ್ದಂತೆ ಹೌದು ನಾನು ಹೇಳಿದ್ದು ನಿಜ ಆದರೇನಿಗ? ಪ್ರಶ್ನೆ ಮಾಡಿಕೊಂಡು ಅವನ ಓರಿಗೆಯವರು ನಗಚಾಟಿ ಮಾಡುವಾಗ "ಹೂಂ ಏನಪ್ಪ ನಜೀರ, ವಿಮಾನ ಎಲ್ಲಿ ಇಳಿಸ್ತಿಯಾ?" ಅಂತ ಕೇಳಿ. ತಾನು ಹೀರೋ ಆಗಲು ನೋಡಿದವರಿಗೆ ಸರಿಯಾಗಿ "ನಿಮ್ಮ ಮನಿ ಮೇಲೆ" ಅಂತ ಅವನೆ ಮದಲು ನಗುತ್ತಿದ್ದ. ಕೇಳಿದವನು ಕಡದಲ್ಲಿ ತುರಿಸಿಕೊಳ್ಳದಂತೆ ಮಾರಿಸಣ್ಣಗೆ

ಮಾಡಿಕೊಂಡಿದ್ದ. ಮತ್ತೆಂದು ಅವನ ಸಹವಾಸಕ್ಕೆ ಬರುತ್ತಿರಲಿಲ್ಲಾ. ಸೊಟ್ಟಬಾಯಿ ನಜೀರ ಮೊದಲು ಕುರಿ ಮೇಸುತ್ತಿದ್ದ, ಮುಂದೆ ಮನೆಯಲ್ಲಿ ಬಹಳ ಜನ ಆದ ಮೇಲೆ ಕೂಲಿ ಕೆಲಸಕ್ಕೆ ಹೊರಟ. ಕೂಲಿ ಕೆಲಸವೂ ಬೇಸರವಾದಾಗ ಇದ್ದಕ್ಕಿದ್ದಂತೆ ಅವನಿಗೆ ಒಂದು ಯೋಚನೆ ಬಂತು. ಐದಾರು ತಾಂಡಗಳನ್ನು ಗುರುತು ಮಾಡಿಕೊಂಡವನೆ ತಾಂಡಗಳಲ್ಲಾಗುವ ಹಬ್ಬಗಳಲ್ಲಿ ಕುರಿ ಕಡಿದಾಗ ಅದರ ಚರ್ಮವನ್ನ ಖರೀದಿಸಿ ಅದನ್ನ ಹರಿಹರದ ಸಾಬರ ಗಲ್ಲಿಯಲ್ಲಿ ಮಾರಾಟ ಮಾಡುವುದು. ಕುರಿ ಕಡಿದ ಊರಿಗೆ ಈ ಊರಿನವರು ಯಾರಾದರು ಒಬ್ಬ ಪರಿಚಿತರು ಸಿಕ್ಕರೆ, ಅವರ ಮೂಲಕ ಆ ಊರಿನ ಜನರ ಪರಿಚಯ ಮಾಡಿಕೊಂಡು ಸಣ್ಣ ಮರಿಚರ್ಮಕ್ಕೆ ಇಪ್ಪತ್ತು, ದೊಡ್ಡ ಟಗರಾದರೆ ನೂರಕ್ಕಿಂತ ಕಡಿಮೆ ಕೊಡುತ್ತಿರಲಿಲ್ಲಾ. ನಜೀರ ಮಾತಿನಮಲ್ಲ. "ಅರೆ ಧನುಭಾಯಿ, ನೀನು ಚರ್ಮ ತಗೊಂಡು ಹರಹರಕ್ಕೆ ಹೋಗ್ತಿಯ ಹತ್ತು ರೂಪಾಯಿ ಬಸ್ ಛಾರ್ಜು, ಚಹ ಅಂತ ಕುಡಿತಿಯ ಅದೊಂದು ಐದುರೂಪಾಯಿ, ಹಂಗೆ ವಾಪಾಸ ಬರ್ತಿಯ ಒಂದು ಬಾಟಲು ಬ್ರಾಂಡಿ ಅದಕ್ಕೆ ಇಪ್ಪತ್ತು ಮತ್ತೆ ಬಸ್ ಛಾರ್ಜ್ ಹತ್ತು ಲೆಕ್ಕ ಹಾಕು ನೂರ ರೂಪಾಯಿ ಚರ್ಮ ಮಾರಿದ್ರಾಗ ಅದೇಟು ಉಳಿತು." ಧನುನಾಯ್ಕ ಬಾಯಿ ಮುಚ್ಕೊಂಡು ತೊಂಭತ್ತಕ್ಕೆ ಚರ್ಮ ಕೊಟ್ಟಿದ್ದ, ತನ್ನ ಹಳೆ ಮೊಡ್ಕಾ ಸೈಕಲ್ ಮೇಲೆ ಹತ್ತಿಪತ್ತು ಚರ್ಮ ಹಾಕಿಕೊಂಡು ಬರುತ್ತಿದ್ದ. ಅವನ್ನ ಉಪ್ಪು ಹಾಕಿ ವಾಸನೆ ಬರದಂಗೆ ಚೀಲದಲ್ಲಿ ಕಟ್ಟಿ ಪೇಟೆಗೆ ಒಯ್ಯುತ್ತಿದ್ದ. ಅವನು ಅವತ್ತು ಹೇಳಿದ ವಿಮಾನದ ಮಾತಿನಿಂದಾಗಿ ಇವತ್ತಿಗೂ ಹೆಸರುವಾಸಿಯಾಗಿದ್ದ.

* * *

49. ಒಳ್ಳೆಣ್ಣೆ ಮಾರುವವನ ಹಳೆ ಸೈಕಲ್ಲು

ಮೊದಲ ಬಾರಿ ತಾಂಡಕ್ಕೆ ಒಳ್ಳೆಣ್ಣೆ, ಕೊಬ್ಬರಿ ಎಣ್ಣೆ ಹೇರಿಕೊಂಡು ಜಲಾನ್‌ಸಾಬಿ ಬಂದಾಗ ಮಂದಿ ನಗ ತೊಡಗಿದ್ದರು. ಯಾಕಂದರೆ ಮಂದಿ ಕೈಎಣ್ಣೆ ಭಟ್ಟಿ ಇಳಿಸಿಕೊಂಡು ಅದನ್ನೆ ತಲೆಗೆ ಹಚ್ಚಿಕೊಳ್ಳುತ್ತಿದ್ದರು. ಯಾವಾಗಾದರು ಒಗ್ಗರಣೆ ಕೊಡಬೇಕಾದ್ರೆ ತೊಟ್ಟುಬೆಣೆಯನ್ನ ಹಾಕಿ ಒಗ್ಗರಣೆ ಕೊಡುತ್ತಿದ್ದರು. ಅಷ್ಟಕ್ಕೂ ಎಣ್ಣೆ ತಿನ್ನಲೇ ಬೇಕಾದಾಗ ಅಗಲನ ಸಿಸೆಗಳನ್ನು ಒಯ್ದು ದಾವಣಗೇರಿಯ ಅಮರಾವತಿ ಹಾಲಪ್ಪನ ಅಂಗಡಿನೊ ಇಲ್ಲ ಕಲ್ಲೆಶಪ್ಪನ ಅಂಗಡಿಯಿಂದ ನೂರು ಗ್ರಾಮ, ಇನ್ನೂರು ಗ್ರಾಮ ಹಾಕಿಸಿಕೊಂಡು ಬರುತ್ತಿದ್ದರು. ಅದನ್ನ ತಿಂಗಳು, ಎರಡು ತಿಂಗಳವರೆಗೆ ಒಗ್ಗರಣೆ ಹಾಕಿ ಜೀವನ ಮಾಡುತ್ತಿದ್ದರು. ಬಡತನ, ದಾರಿದ್ರ್ಯ ಕಿತ್ತು ತಿನ್ನುವವರಿಗೆ ಎಣ್ಣೆಯ ಗೋಜಲು ಬೇಕಾಗಿರಲಿಲ್ಲ. ಅವರ ಜೀವನ ಪೂರ ಅವರು ಕೆಲಸಕ್ಕೆ ಹೋದಾಗ ಸಾಲಿನಲ್ಲಿ ಕಳೆ ತೆಗೆಯುವಾಗ, ಕೋಲಾಣಿಸಪ್ಪು, ನುಣಗ್ಯ, ನವಲೇರಿ (ಮದುಮಗಳು) ಸೊಪ್ಪು, ಸಣೇವುಹೂ, ಪುಂಡಿಪಲ್ಯ, ಹಕರ್ಕಿಸೊಪ್ಪು, ಬೆಲಿಯಲ್ಲಿ ಬೆಳೆದಿರುತ್ತಿದ್ದ ಕೆಲವು ಸೋಪುಗಳನ್ನು ಕಿತ್ತು ತಂದು ಚೆನ್ನಾಗಿ ತೊಳೆದು ತಳಿಸಿ ಒಮ್ಮೊಮ್ಮೆ ರಾಗಿ ಹಿಟ್ಟು, ಜೋಳದ ಹಿಟ್ಟು ಇಲ್ಲದಿದ್ದರೆ ಹೊಟ್ಟೆ ತುಂಬ ಬೇಯಿಸಿದ ಕೊಲಾಣಿ ಸೊಪ್ಪನ್ನ ತಿಂದು ಕಾಲ ಕಳೆಯುತ್ತಿದ್ದರು. ಅದಕ್ಕೆ ಕೆರೆಯಲ್ಲಿ ಸಿಗುತ್ತಿದ್ದ ಏಡಿ, ಮೀನುಗಳು ಸಾರಿಗೆ ಉಪಯೋಗಿಸುತ್ತಿದ್ದರು. ತಾಂಡದಲ್ಲಿ ಜನರ ನಡುವೆ ಎಷ್ಟೊಂದು ಅನ್ಯೋನ್ಯತೆ ಇತ್ತು ಎಂದರೆ ಯಾರದಾದರು ಮನೆಯಲ್ಲಿ ಕಾಳಿಲ್ಲ ಅಂದರೆ ಅಕ್ಕ, ಒಂದು ಸೇರು ಹಿಟ್ಟು ಕೊಡು ನಾಳೆ ಕೊಡ್ತಿನಿ ಅಂದರೆ ಸಾಕು ಮದಲು ಅಳದು ಕೊಡುತ್ತಿದ್ದರು. ಒಂದು ಒಡ್ಡಿಮೆಣಸಿನಕಾಯಿ, ಒಂದು ಲೊಟ ಉಪ್ಪು, ಒಂದು ಹಿಡಿ ಹುಣಸಿಹಣ್ಣು ಪ್ರತಿಯೊಂದು ಸಾಟಿ ಬದಲಿ ಮಾಡಿಕೊಳ್ಳುವುದು, ಕಡಕೊಟ್ಟು ವಾಪಾಸು ಪಡೆಯುವುದು ನಡೆಯುತ್ತಲೇ ಇತ್ತು. ಅಲ್ಲದೆ ಪ್ರತಿಯೊಬ್ಬರು ಮಾಂಸದ ಅಡುಗೆ ಮಾಡಿದಾಗ ಅವಶ್ಯವಾಗಿ ಥಾಕಣಿ ಸಾರು ಕೊಡುವ ಪದ್ಧತಿಯನ್ನು

* ಥಾಕಣಿ–ಸಾರಿನ ಬಟ್ಟಲು

ಪಾಲಿಸಿದ್ದರು. ಒಳ್ಳೆಣ್ಣೆ ಬಹುತೇಕ ಮಾಂಸ, ಮೀನು ಸಾರಿಗೆ ಹಾಕುತ್ತಿದ್ದರು ಬಿಟ್ಟರೆ ಉದಕಾ ಮುದ್ದಿ ಮಾಡಿದಾಗ ಉದಕಕ್ಕೆ ಒಗ್ಗರಣೆ ಕೊಡಲು ಬಳಸಲಾಗುತ್ತಿತ್ತು. ಯಾವಾಗಾದರೂ ಬೇಕೆಂದಾಗ ಚಹದಂಗಡಿಯಲ್ಲಿ ನಾಕಾಣಿಗೆ ಎಂಟಾಣಿಗೆ ಕಣ್ಣಿಗೆ ಬೀಳುವಷ್ಟು ಎಣ್ಣೆ ಬಿಟ್ಟು ಕಳುಹಿಸುತ್ತಿದ್ದರು. ಇವೆಲ್ಲ ಸನ್ನಿವೇಶಗಳನ್ನ ದಾಟಿ ಹಳೆ ಮೊಡ್ಕ ಸೈಕಲ್ ಮೇಲೆ ಆಕಡೆ ಈಕಡೆ ಒಂದು ಒಳ್ಳೆಣ್ಣೆ ಇನ್ನೊಂದು ಕೊಬ್ಬರಿ ಎಣ್ಣೆದು ಡಬ್ಬ ಹಾಕ್ಕೊಂಡು ಪ್ರತಿ ಊರು, ಕೇರಿ, ತಾಂಡ, ಹಟ್ಟಿ ಒಂದನ್ನೂ ಬಿಡದೆ ಅಡ್ಡಾಡುತ್ತಿದ್ದ ಜಲಾನ್‌ಸಾಬಿ. ಶುಕ್ರವಾರ ಸಂತೆಗೆ ಹೋಗುವವರು, ಮಂಗಳವಾರ ಹರಿಹರದ ಸಂತೆಗೆ ಹೋಗಾಕ ಆಗದವರು, ಸೋಮವಾರ ತೇಗೂರ ಸಂತೆಯನ್ನ ಯಾವುದೋ ಕಾರಣಕ್ಕೆ ಬಿಟ್ಟವರು ಕೈಯಲ್ಲಿ ಕಾಸಿದ್ದರೆ ದಾವಣಗೇರಿ ಸಂತೆಯನ್ನ ಯಾವ ಕಾರಣಕ್ಕು ಬಿಡುತ್ತಿರಲಿಲ್ಲಾ. ಮೊದಲ ಕಾರಣ ಬೆಣ್ಣೆದ್ವಾಸಿ, ಒಂದ ವೇಳೆ ಬೆಣ್ಣೆದ್ವಾಸಿ ತಿನ್ನಾಕ ಆಗದೆ ಇದ್ದವರು ಕೈಯಾಗ ಕಾಸಿಲ್ಲದಿದ್ದ ಪಕ್ಷದಲ್ಲಿ ಕಡೇ ಪಕ್ಷ ಮಂಡಕ್ಕಿ ಮಿರ್ಚಿನ್ನಾದರೂ ತಿಂದು ಚಹ ಕುಡಿಯುವ ಆಲೋಚನೆಯಿಂದ ಭಾನುವಾರದ ಸಂತೆಗೆ ಹೋಗೆ ಹೋಗುತ್ತಿದ್ದರು. ಆದರೆ ಕೂಲಿ ಮಾಡಿ ಜೀವನ ಮಾಡುವವರು, ದೂರದ ಎಮ್ಮಿ ಹನುಮಾಪುರ, ಕೋತಿರಾಮುಪುರ, ಕೆಂಚನೂರು, ಕಾಲಿಪುಟ್ಟಿ ಮುಂತಾದ ಊರುಗಳವರೆಗೆ ಹೋಗಿ ಕೂಲಿ ಮಾಡಿದರು ಹೊಟ್ಟೆ ತುಂಬದಾಗಿತ್ತು. ಈ ಊರುಗಳೆಲ್ಲಾ ಭದ್ರಾನಾಯ್ಕನ ತಾಂಡದಿಂದ ಬರೋಬರಿ ನಾಲ್ಕರಿಂದ ಆರು ಮೈಲಿ ದೂರದೊಳಗಿದ್ದವು. ಮುಂಜಾನೆ ಹೊತ್ತಾರೆ ತಲೆ ಮೇಲೆ ಬುತ್ತಿಗಂಟು, ಕೈಯಲ್ಲಿ ರೊಟ್ಟಿ ಚಟ್ನಿ ಹಿಡಿದುಕೊಂಡು ಕೂಲಿ ಮಾಡಲು ಹೋದರು ಕಾಸಿನ ಕಿಮ್ಮತ್ತಿಲ್ಲ ಎಮ್ಮಿ ಹನುಮಾಪುರದ ಅಂದಾನಯ್ಯಸ್ವಾಮಿ, ಕೋತಿರಾಮಪುರದ ಲಿಂಗಾಯತರ ಕೊತ್ತಾಲಪ್ಪ, ಕೆಂಚನೂರಿನ ಕೊದಂಡಯ್ಯ, ಕೆಂಚನೂರು ಕಾಣಿಂಗಪ್ಪ ಕಾಲಿಪುಟ್ಟಿಯ ಎಲಿಬಳ್ಳಿ ಮಲ್ಲಪ್ಪ ಆ ಕಾಲದ ದೊಡ್ಡ ಕುಳಗಳು. ಹದಿನೈದು ಎಕ್ಕರೆ ಐನಾತಿ ಭತ್ತ ಬೆಳೆಯುವ ಭೂಮಿ ಚಾನಲಿನ ನೀರು ಇಪ್ಪತ್ನಾಕು ತಾಸು ಹರಿತಿದ್ದರಿಂದ ಭತ್ತದ ನಾಟಿಗೆ, ಕಳೆ ತೆಗೆಯುವುದಕ್ಕೆ ಭತ್ತ ಕೊಯ್ಯುವುದಕ್ಕೆ ಆಳುಗಳು ಖಾಯಂ ಬೇಕಾಗಿದ್ದರಿಂದ ತಾಂಡದ ಒಂದೊಂದು ಗುಂಪುಗಳು ಒಬ್ಬೊಬ್ಬರ ಹತ್ತಿರ ಕೆಲಸ ಮಾಡುತ್ತಿದ್ದವು. ಯಾರು ಅವರು ಹೇಳಿದಕ್ಕೆ "ಹೂಂ" ಅಂತಿದ್ದರೋ ಅವರೆ ಆ ಗುಂಪಿನ ಮೇಸ್ತ್ರಿ. ಹಂಗಾಗಿ ಆಳುಗಳು "ಏ ಮೇಸ್ತ್ರಿ ಅಣ್ಣ, ಸಂತಿಗ ಹೋಗಾಕು ಅಡ್ವಾನ್ಸ್ ಕೊಡ್ಸು" ಅಂತೇಳಿ ಕಾಟೇವಾಳೆರೊ ನಿಂಗನಾಯ್ಕನ್ನ ಗೋಗರೆದ್ದಿದಳು ಮುಂದಿನ ಓಣಿಯ ಚಿಮ್ಮಿ. "ಅಲ್ಲವ ಚಿಮ್ನವ್ವ ಎಷ್ಟಸಲಾ ಅಡ್ವಾನ್ಸ್ ತಗೊಂತಿ ಹೇಳು? ಅಲ್ಲಾ, ದೀಪಾವಳಿಗ ನಮ್ಮದು ದೊಡ್ಡಹಬ್ಬ ಅಂತ ತಗೊಂಡೆ, ಯುಗಾದಿಗೆ ಮನಿಯಾಗ ಏನೂ ಇಲ್ಲಂತ ತಗೊಂಡೆ, ಬಸವ ಜಯಂತಿಗೆ ಹೋಳಿಗಿ ಮಾಡಾಕಂತ ತಗೊಂಡೆ, ನಮ್ಮ ಸಿತ್ಲಾ (ಕಾರುಣ್ಣಿಮೆಗೆ) ಕ್ಕೆ

ಮಾಂಸ ತರಬೇಕು ಅಂತ ತಗೊಂಡೆ, ಈಗ ಸಂತಿಗಂದ್ರ ಸಾಹುಕಾರ ಕೊಟ್ಟಾರ ಕೊಟ್ಟಾನೇನು? ಕೇಳಾಕು ನಮಗ ಒಂಚೂರು ಮಾನ ಮರ್ಯಾದಿ ಬೇಕು. ಅದು ಅಲ್ಲದೆ ಮನೆಯೊಳಗಿರೊ ನಾಕ ಮಂದಿ ಬರ್ತಿವಿ ಅಂತ ಹೇಳಿ ಅಡ್ವಾನ್ಸ್ ತಗೊಂಡಿ, ಕೆಲ್ಸಕ ಬರೋರು ತಾಯಿ ಮಗಳು. ನಿನಗಂಡ ನಿನಗೂ ಅವನಿಗೂ ಸಂಬಂಧ ಇಲ್ಲದೊರಂಗೆ ಕಣ್ಣ ಮುಂದೆ ಅವನ ಹರ್ತಿಟಿಗೆ ಬೇರೆಯವರ ಹೊಲಕ್ಕೆ ಹೊಕ್ಕಾನ. ನಿನ್ನ ಮಗ ಮನಿ ಖರ್ಚಿಗೆ ಮತ್ಯಾರದೊ ಹೊಲ್ದಾಗ ದುಡಿತಾನ. ಏನು ಆಟ ಹಚ್ಚಿಯಾ ಹೆಂಗೆ? ಅಲ್ಲಬೆ ಸಾಹುಕಾರನ ಮನಿಯಾಗ ದುಡ್ಡಿನ ಮರ ಐತಿ ಅಂದ್ಕೊಂಡಿಯೊ ಹ್ಯಾಂಗೆ?" ಮೇಸ್ತ್ರಿಕಾಟೇವಾಳೆರೊ ನಿಂಗನಾಯ್ಕ ಗರಂ ಆಗಿದ್ದ. ಹೀಗೆ ಅನೇಕರು ಸಂತಿಗೆ ಹೋಗಾಕ ಆಗದವರು ಇದ್ದೆ ಇದ್ದಾರೆ ತಾಂಡದೊಳಗೆ ಅವರ ಅನುಕೂಲಕ್ಕೆ ಅಂತ ತೇಗೂರಿನ ಜಲಾನಿ ಅಂಡುಬಗ್ಗಿಸಿ ಗೋಡಿಕಟ್ಟೋದು, ನಡಬಗ್ಗಿಸಿ ಹೊಲದಾಗ ಕೆಲಸ ಮಾಡೋದಕ್ಕಿಂತ ಇದೆ ಪಾಡು ಅಂದವನೆ, ಸೈಕಲ್ ಹತ್ತೆ ಬಿಟ್ಟಿದ್ದ. ಯಾರೋ ನಾಕಾಣಿದ, ಎಂಟಾಣಿದ, ಪಾವು ಜೋಳ, ಸೇರು ಜೋಳ, ರಾಗಿ ಹಾಕಿ ಎಣ್ಣೆ ಬಿಡಿಸಿಕೊಳ್ಳುತ್ತಿದ್ದರು. ಅಳೆಯೋದಕ್ಕೆ ನೂರಗ್ರಾಂ ಪಾವು ಇನ್ನೂರಗ್ರಾಂದು ಪಾವು, ಅರ್ಧ ಲೀಟರ್ ಅಳತೆಯ ಪಾವು ಇಟ್ಟಕೊಂಡಿದ್ದ. ನಾಕಾಣಿಗೆ ಒಂದು ತೊಟ್ಟು ಹನಿಕಿಸುತ್ತಿದ್ದ. ಎಂಟಾಣಿಗೆ ಅದಕ್ಕಿಂತ ಸ್ವಲ್ಪ ಜಾಸ್ತಿ, ಒಮ್ಮೊಮ್ಮೆ ಎಣ್ಣೆ ತಗೊಳಿ ಒಳ್ಳೆಣ್ಣೆ, ಕೊಬ್ಬರೆಣ್ಣೆ, ಪಾವು, ಅರ್ಪಾವು, ಲೀಟರು, ಅರ್ಧ ಲೀಟರು ಅಂತ ಇಡೀ ತಾಂಡ ಎಲ್ಲಾ ತಿರುಗಾಡಿದರೂ ಮಾತಾಡಿಸುತ್ತಿರಲಿಲ್ಲ. ಕೆಲವೊಮ್ಮೆ ಪುರುಸೊತ್ತಿಲ್ಲದೆ ಮಂದಿ ಖರೀದಿ ಮಾಡುತ್ತಿದ್ದರು. ಕೆಲವೊಮ್ಮೆ ಯಾರು ಕೇಳುವವರೆ ಇರುತ್ತಿರಲಿಲ್ಲ. ಕೆಲವೊಮ್ಮೆ "ಸಾಹೇಬಣ್ಣ ರಾಗಿ ಐತೆ ಎಣ್ಣಿ ಬಿಡ್ತಿಯಾ" ಅಂತ ಹೆಂಗಸರು ಪೀಡಿಸುವರು. "ಅರೇ ರಾಗಿ ಆದ್ರೇನು ಜಾರ್ ಆದರೇನು ತನ್ನಿ ನಾನು ಎಲ್ಲಾ ತಗೊಳ್ತಿನಿ" ಸಾಹೇಬು ಕೊಟ್ಟಿದ್ದನ್ನ ತಗೊಂಡವನೆ ಒಂದೆ ಒಂದು ತೊಟ್ಟು ಎಣ್ಣೆ ಹನಿಕಿಸುತ್ತಿದ್ದ. "ಅಲ್ಲ ಸಾಹೇಬಣ್ಣ ಇಷ್ಟೊಂದು ರಾಗಿ ಹಾಕಿನಿ, ನೀ ನೋಡಿದರೆ ಕಣ್ಣಿಗ ಬಿಳೊ ಆಟು ಎಣ್ಣೆ ಹನಿಕಿಸಿದಿಯಾ, ಹಾಕಬಾರದ ಇನ್ನೊಂದು ಸ್ವಲ್ಪ" ಹಾಕಿಸಿಕೊಂಡವರ ಕಂಪ್ಲೆಂಟ್. "ಅರೆ ತಾಯಿ, ನಿಂದು ರಾಗಿಗೆ ಇಷ್ಟೆ ಬರೋದು, ರಾಗಿಗೆ ಸಮನಾಗಿ ಎಣ್ಣೆ ಹಾಕಿದ್ರೆ ನಾನು ಯಾರದಾರು ಮನೆಯೊಳಗೆ ಆಳಾಗಿ ದುಡಿಬೇಕಾಗುತ್ತೆ ಅಷ್ಟೇಯ. ಎಣ್ಣೆ ಬಹಳ ತುಟ್ಟಿ ಆಗಿದೆ. ಯಾರು ರಾಗಿಗೆ ಕೊಟ್ಟಿದ್ದು ಉದಾಹರಣೆ ಐತಾ, ಏನೊ ಹೋಗಲಿ ಅಂತ ಕೊಟ್ಟಿನಿ" ದೊಡ್ಡ ಪುರಾಣವನ್ನೇ ಆರಂಭಿಸಿದ್ದ. "ಏಯ್, ಆಯಪ್ಪನ ಕುಟಾಗೇನು ನಡಿ ಅತ್ಲಗೆ, ಅದಕ್ಕೆ ಹೇಳಿದ್ದ ಸಂತಿಗ ಹೋದಾಗ ಒಂದು ಸೀಸ ತುಂಬಿಕೊಂಡು ಬಂದರೆ, ಯುಗಾದಿ ಮಟಾನು ಬರುತ್ತೆ" ಸಾಕವ್ವ ಹೇಳಿದಳು ಬಾಂಗಡಿ ಮೀನುಕಮಲಗೆ. "ಅಯ್ಯ ನಾನು ಹಂಗೆ ಅಂದ್ಕೊಂಡದ್ನೆ ನಮ್ಮವ್ವ ನಮ್ಮ ಸಾಹುಕಾರ ಅದಾನಲ್ಲ ಎಲಿಬಳ್ಳಿ ಮಲಣ್ಣ,

ದುಡ್ಡಿಲ್ಲವ್ವ ಭತ್ತ ಕೊಯ್ಯೊಗಂಟ ಏನೂ ಇಲ್ಲಾ ಕೇಳಾಕ ಹೋಗಬೇಡ್ರಿ ಅಂತ ಕಡ್ಡಿ ಎರಡು ತುಂಡು ಮಾಡಿದಂಗ ಹೇಳಿದ. ಅವನ ಒಸಡಗ, ಮಕಾಡ ಎತ್ತ ಒಂದ ತಿಂಗಳಾತು ಸಂತೀಗ ಹೋಗಿಲ್ಲ ನೋಡು" ಬಾಂಗಡಿಮೀನು ಕಮಲಿ ಸಾಕವ್ವಗೆ ಕಾರಣ ಕೊಟ್ಟು ಸ್ಪಷ್ಟೀಕರಿಸಿದಳು. ತಾಂಡದಲ್ಲಿ ಡಬ್ಬಿಗಟ್ಟಲೆ ಎಣ್ಣೆ ಬಳಸುವವರ ಸಂಖ್ಯೆ ಸೊನ್ನೆ, ಅಂತ ದೊಡ್ಡ ಕುಟುಂಬದ ತೊಪುನಾಯ್ಕನ ಮನೆಯವರೆ ದೊಡ್ಡ ಹಬ್ಬಗಳಾದ ದೀಪಾವಳಿ, ಪಂಚಮಿ, ಯುಗಾದಿಗೆ ಎರಡು ಲೀಟರ್ ಎಣ್ಣೆ ತಂದರೆ, ಸಣ್ಣಹೋಳಿಗೆ ಕರದು, ಕಟ್ಟಿನಸಾರು, ಪಲ್ಯೆ ಎಲ್ಲಾ ಮಾಡಿ ಮುಂದ ಹದಿನೈದು ದಿನದವರಿಗೂ ಉಳಿತಿತ್ತು. ಹೆಚ್ಚಾನ ಹೆಚ್ಚು ಬೆಣ್ಣೆ ಹಾಕಿ ಕರಿತಿದ್ದರು. ಅವರಿಗೆ ಎಣ್ಣೆ ಬೇಕಾಗಿದ್ದೆ ಮಾಂಸದಸಾರು, ಮೀನುಸಾರಿಗೆ ಒಗ್ಗರಣೆ ಕೊಡುವುದಕ್ಕೆ. ಹಾಗಾಗಿ, ಇಡೀ ಊರವರ ಬೇಡಿಕೆಗಳೇನು ಹೆಚ್ಚಾಗಿರಲಿಲ್ಲಾ. ಹಾಗಾಗಿ ಜಲಾನ್‌ಗೆ ಅಷ್ಟೇನು ವ್ಯಾಪಾರ ಆಗುತ್ತಿರಲಿಲ್ಲ. ಅವನು ತನ್ನ ಬಂಡವಾಳವನ್ನ ಬಿಟ್ಟು ಹತ್ತು ಹದಿನೈದು ರೂಪಾಯಿ ದುಡಿಮೆಯಾದರೆ ಬಹಳ ಖುಷಿಯಿಂದ ಮನಿಗೆ ಬೇಕಾದ ಸಾಮಾನು ಒಯ್ಯುತ್ತಿದ್ದ.

* * *

50. ಐಸ್‌ಕ್ಯಾಂಡಿಯವನು ತಾಂಡಕ್ಕೆ ಬಂದಿದ್ದು

ದಾವಣಗೇರಿಯಿಂದ ಕಡ್ಲೆಬಾಳು, ಅರಸಾಪುರ ದಾಟಿ ನುಗ್ಗೆನಹಳ್ಳಿ, ಜಂಗಮಪುರ, ರಂಗೇನಹಳ್ಳಿ ದಾಟಿ ಸೀದಾ ಭದ್ರಾನಾಯ್ಕನ ತಾಂಡಕ್ಕೆ ದಾರಿ ಇದಿದ್ದರಿಂದಾಗಿ, ದಾವಣಗೇರಿಯ ಅಳ್ಳಿಮರದ ಮಂಡಕ್ಕಿ ಭಟ್ಟಿಯ ಇಮ್ರಾನ್ ಎನ್ನುವ ಇಪ್ಪತ್ತೈದು ವರ್ಷದವನು ಮಂಡಕ್ಕಿ ಭಟ್ಟಿಯಲ್ಲಿ ಕೆಲಸ ಮಾಡಿ ಬೋರಾಗಿ, "ಇಸ್ಕಿ ಮಾಕಿ, ಈ ಕೆಲ್ಸ ಬೇಡಾ ಅಬ್ಬು ನನಗೆ" ಖಡಾಖಂಡಿತವಾಗಿ ಹೇಳಿದ್ದ. ಎಂಟು ಗಂಡು ನಾಕು ಹೆಣ್ಣುಗಳಲ್ಲಿ ಇಮ್ರಾನ್ ಒಂಭತ್ತೊ ಹತ್ತನೇಯವನು. ಬಹುತೇಕ ಎಲ್ಲರು, ಗ್ಯಾರೇಜ್, ಮಂಡಕ್ಕಿ ಭಟ್ಟಿ, ಹಮಾಲಿ, ಚಪ್ಪಲಿ ಅಂಗಡಿ, ಮಂಡಿ ಪೇಟೆಯಲ್ಲಿ ಸಣ್ಣ ಪುಟ್ಟ ವ್ಯಾಪಾರ ಮಾಡಿಕೊಂಡಿದ್ದರಿಂದ ತಿನ್ನಾಕೆ ಉಣ್ಣಾಕೆ ಕಮ್ಮಿ ಏನು ಇರಲಿಲ್ಲ ಹಾಗಾಗಿ ಇಮ್ರಾನ್‌ನ ಅಪ್ಪ ಖಲಂದರ್, "ಜಾ ನಿನಗೇನು ತಿಳಿಯುತ್ತೆ ಅದನ್ನ ಮಾಡುಬೇಟ" ಪರ್ಮಿಷನ್ ಕೊಟ್ಟ ನಂತರ ಸೀದಾ ತಮ್ಮ ಹಳೇಯ ಸೈಕಲ್ಲನ್ನು ರಿಪೇರಿ ಮಾಡಿಸಿಕೊಂಡವನೆ. ಬೇಸಿಗೆಯಲ್ಲಿ ಬಂದೂರ ಕ್ಯಾಂಪ್‌ನ ಮಸೀದಿ ಪಕ್ಕದ ಖತಾನಿ ಐಸ್‌ಕ್ರಿಂ ಕಂಪನಿಯಿಂದ ಐಸ್‌ಖರೀದಿ ಬಹಳ ಹೊತ್ತಿನವರೆಗೆ ನೀರಾಗದಂತೆ ಡಬ್ಬಿ ತಯಾರಿ ಮಾಡಿಕೊಂಡವನೆ ಹಿಂದಿನ ಕ್ಯಾರಿಯರ್‌ನಲ್ಲಿ ಟ್ಯೂಬ್‌ನ ಎರಡು ತುಂಡುಗಳನ್ನು ಜೋಡಿಸಿ ಬಿಗಿಯಾಗಿ ಕಟ್ಟುವ ವ್ಯವಸ್ಥೆ ಮಾಡಿಕೊಂಡ. ಆ ಕಡೆ ಈ ಕಡೆಗೆ ಎರಡು ಪ್ಲಾಸ್ಟಿಕ್ ಚೀಲಗಳನ್ನು ಕಟ್ಟಿಕೊಂಡವನೆ "ಹಳೆ ಖಾಲಿಸೀಸಾ, ಕಬ್ಬಿಣ, ಪಾಸ್ಟೀಕ್ ಸಾಮಾನು, ಐಸ್" ಅಂದವನೆ ಕೂಗುತ್ತ ಬಂದಿದ್ದ. ಅವನಿಗೆ ಯಾ ಊರು, ಯಾವ ಕೇರಿ ಏನು ಗೊತ್ತಿಲ್ಲ. ವ್ಯಾಪಾರ ಮಾಡಬೇಕಾದರೆ ಪ್ರಯತ್ನ ಮಾಡಲೇಬೇಕು. "ಆ ಬ್ರಿಟಿಷ್ ಮಂದಿನು ಹೀಗೆ ಬಂದಿದ್ದ ಮಗ, ಅವರಿಗೆ ಇಂಡಿಯಾ ಅಂದ್ರೆ ಗೊತ್ತಿರಾಕಿಲ್ಲ, ಹೆಂಗೊ ಹುಡುಕಿಕೊಂಡು ಬಂದರು. ಅವರಿಗೆ ನಮ್ಮ ಮಸಾಲೆ ಮೇಲೆ ಕಣ್ಣಿತ್ತು. ಬಂದವರೆ ಮೂರು ನೂರು ವರ್ಷಗಳವರೆಗೆ ಹೋಗಲಿಲ್ಲಾ" ಇಮ್ರಾನನ ಅಜ್ಜ ಸೌಕತ್ ಹೇಳಿದ್ದ. ಅದೆ ಅವನಿಗೆ ದಾರಿದೀಪವಾಗಿತ್ತು. ಅಜ್ಜನಿಗೆ ತನ್ನ ವ್ಯಾಪಾರದ

ಲಾಭವನ್ನ ತೋರಿಸಬೇಕೆಂದು ಬಹಳ ಶ್ರಮವಹಿಸಿ, ಜನರ ನಂಬಿಕೆ ಗಳಿಸುವ ಪ್ರಯತ್ನ ಮಾಡಿದ್ದ. ಯಾರೊ ಕಬ್ಬಿಣರಂಟಿಯ ಹಳೆ ಕುಳವನ್ನೆ ತಂದು ಕೆಂಪು ಐಸ್ ತಗೊಂಡು ಕಡ್ಡಿಹಿಡಿದು ಚೀಪುತ್ತ ಬಂದಿದ್ದ. ಗುಡಿಮುಂದ ಆಟ ಆಡುತ್ತಿದ್ದ ಸಣ್ಣಿ, ಜುಲ್ಪಾ, ಡೆಬರ, ಹಾಂಡ, ಬದಿಯಾ, ಬೊಳಿಯ, ಸಾಂಕೋಲ, ಚಪಲಚಂಡು, ಸಾಂಡು. "ಲೇ ಐಸನವನು ಬಂದಾನೇನ" ಉತ್ತರಕ್ಕೂ ಕಾಯದೆ ಓಡಿದರು. ಹಳೆ ಕುರ್ಚಿಗಿ, ಕುಡಗೋಲು, ಒಡೆದ ಪ್ಲಾಸ್ಟಿಕ್ ಕೂಡ ಏನನ್ನು ನೋಡದೆ ಬಾಚ್ಕೊಂಡು ಬಂದವರೆ ಐಸಿನವನಿಗೆ ಕೊಟ್ಟು "ಒಂದು ಕೆಂಪು ಕೊಡಣ್ಣ ಮತ್ತೊಂದು ಹಸರು ಕೊಡು" ಅಂತ ಎರಡೆರಡು ಒಮ್ಮಿಗೆ ತಗೊಂಡು ದಿಮಾಕಿನಿಂದ ಚೀಪುತ್ತಾ ಊರನಡಕ್ಕೆ ಹೋಗುತ್ತಿದ್ದರೆ ಅಳಿದುಳಿದ ಸಣ್ಣ ಹುಡುಗರು, "ಯವ್ವ ಐಸು ಕೊಡಿಸಬೆ" ಅಂತ ಅವರ ತಾಯಂದಿರಿಗೆ ಕೇಳಿದಂತೆ "ಹೋಗಲ ಬೇವರ್ಸಿ, ಮದವಿ ಮಾಡಿದ್ರ ಮೂರ ಮಕ್ಕಳಾಕ್ತಿದ್ವು, ಈಗ ಐಸ್ ತಿಂತಾನಂತ, ಮನಿ ತುಂಬ ಸಣ್ಣವು ತುಂಬಿದ್ದಾವೆ, ನೀನೊಬ್ಬ ತಂದೆ ಮನಿಯೊಳಗಿರೊ ಕಬ್ಬಿಣದ ರಂಟೆನೆ ಹಾಕಬೇಕಾದೀತು" ಅಂತ ಅವನ್ನ ಸಮಾಧಾನ ಮಾಡಾಕ ನೋಡಿದಳು. "ಅಜ್ಜಿ ಐಸ್ ಬೇಕು" ಅಂತ ಮೊಮ್ಮಗಳು ಜಮಣಿ ಹಠ ಹಿಡಿದಿದ್ದೇ ತಡ, ಮೊದಲನೇ ಮಗನವು, ಎರಡನೆ ಮಗನವು, ಮೂರನೆ ಮಗನ ಹುಡುಗರೆಲ್ಲ ರೊಚ್ಚಿಗಿಳಿದವು.

"ಲೇ ಹುಲಿಯೂರ ನಿನಗ ಮಾಡಾಕ ಕೆಲ್ಸ ಇಲ್ಲ, ಹೋಗು ಐಸ್‌ನವನ್ನ ಕರ್ಕೊಂಡ ಬಾ" ಅಂದವಳೆ ಎಲೆ ಅಡಿಕೆ ಚೀಲದಿಂದ ಹಳೆಯದಾದ ರೂಪಾಯಿ ನೋಟು ತಗದು ಎಲ್ಲರಿಗೂ ಒಂದೊಂದು ಐಸ್ ಕೊಡಿಸಿದಳು. ಇಮ್ರಾನ್ ವಾಪಾಸು ಹೊರಟಾಗ ಎರಡು ಪಕ್ಕದ ಚೀಲಗಳು ತುಂಬಿದ್ದವು. ಅವನು ಹಾಕಿದ ಬಂಡವಾಳ, ಹಳೆ ಕಬ್ಬಿಣ, ಪ್ಲಾಸ್ಟೀಕ್, ಸೀಸೆ ಮಾರಿದರೆ ತನಗೆ ಬರುವ ಆದಾಯ ತಾಳೆ ಹಾಕುತ್ತ ದಾವಣಗೆರೆ ಕಡೆಗೆ ಸೈಕಲ್ ತುಳಿದ. ಹದಿನೈದು ಮೈಲಿ ಸೈಕಲ್ ತುಳಿಯುವಾಗ ಖರೀದಿಸಿರುವ ಸಾಮಾನುಗಳು ಎಲ್ಲಾದರೂ ಬಿದ್ದುಹೋದಾವ ಅನ್ನೊ ಕಾಳಜಿಯನ್ನು ಮಾಡಬೇಕಾಗಿತ್ತು. ಆದ್ದರಿಂದಲೇ ಬಹಳ ಸೂಕ್ಷ್ಮವಾಗಿ ಸೈಕಲ್ ತುಳಿಯುತ್ತಿದ್ದ.

ಮತ್ತೆ ಮೂರನೆಯ ದಿನ ಮತ್ತೊಬ್ಬ ಐಸಿನವನು ಹಾಜರಾಗಿದ್ದ. ಐಸಿನ ಆಶೆಗೆ ಸಣ್ಣ ಹುಡುಗರು ಹಳೆಯದು, ಹೊಸದು ಅಂತ ನೋಡಿ ಪರಾಮರ್ಶೆ ಮಾಡದೆ ತಡ ಇಲ್ಲದೆ ಕೈಗೇನು ಸಿಗುತ್ತದೆಯೊ ಅದನ್ನ ತಗೊಂಡು ಹೋಗಿ ಐಸಿಗೆ ಹಾಕುತ್ತಿದ್ದರು. ಇಮ್ರಾನ್ ಹೊಸದು ಅಂತ ಕಂಡುಬಂದರೆ. "ಅರೆ ಹುಡುಗ ಇದನ್ನ ನಾನು ತಗೊಂಡೆ ಅನ್ನೊ, ನನ್ನ ಐಸು ಹೊಯ್ತು, ನಿಮ್ಮಪ್ಪ ಬಂದು ನನ್ನ ತಲೆಬುರುಡೆ ಹೊಡದು ನಮ್ಮ ಮನೆ ಇತಿಹಾಸನೆ ತಗಿತಾನೆ ಹೋಗು ಬೇರೆ ಏನಾರು ತಗೊಂಡು ಬಾ." ಬೈದು ಗದಮುತ್ತಿದ್ದ, ಇವನ್ಯಾರೊ ಬಂದವನಿಗೆ ಇದರ

ಪರಿವೆ ಇಲ್ಲದೆ ತಂದಿದ್ದನೆಲ್ಲಾ ತಗೊಂಡು ಮೆತ್ತಗೆ ಪಾರಾಗುವ ಯೋಚನೆಯನ್ನ ಮಾಡುತ್ತಿದ್ದ. ತಂದದ್ದನ್ನ ಆ ಕಡೆ ಈ ಕಡೆ ಮಂದಿ ಗಮನಿಸುತ್ತಿದ್ದಾರನೆಂತ ನೋಡಿ ಗಬಕ್ಕಂತ ಚೀಲದ ಅಡಿಗೆ ತುರುಕಿ ಮುರದಿರೋದು, ಇಲ್ಲ ಸೋರಿ ಬಣ್ಣ ಎಲ್ಲಾ ಹೋಗಿ ಬೆಳ್ಳಗಾಗಿರುವ ಐಸು ಕೊಟ್ಟ, "ತಮ್ಮ ಇಕ ನಿನಗ ಎರಡು ಕೊಡ್ತಿನಿ" ಅಂತ ಒಗ್ಗರಣೆ ಮಾತಾಡಿ ಹುಡುಗರಿಗೆ ಮೋಸ ಮಾಡುತ್ತಿದ್ದ. ಹಂದಿಜಾನ್ಯ ಅದೆ ಹೊತ್ತಿನ್ಯಾಗ "ಮುಂಗಾರು ಸುರು ಆಯ್ತು ಅಂದ್ರ ಮುಕಳಿತಿರುವೋದಕ್ಕೆ ಪುರಸತ್ತು ಇರಾಕಿಲ್ಲ, ರಂಟಿ ತಗೊಂಡು ಹೋಗಿ ಕುಳನಾದ್ರು ಕಟ್ಟಿಸಿಕೊಂಡು ಬಂದರಾತು" ಅಂತ ಆಲೋಚನೆ ಮಾಡಿ ಮನಿಯೊಳಗೆ ಬಂದು ತಾನು ಇಟ್ಟ ಜಾಗದಲ್ಲಿ ಕುಳಕ್ಕೆ ಕೈ ಹಾಕ್ತಾನೆ ಇಲ್ಲ. ಎದಿ ಧಸಕ್ಕಂತು, "ಹೊಸ ಕುಳ ಮನ್ನೆ ತಂದೀನಿ ಲೇ ಸಾಮಣಿ ಇಲ್ಲಿಟ್ಟಿದ್ದ ಕುಳ ಯಾರು ತಗೊಂಡ್ರು, ಇಟ್ಟ ಹತ್ರ ಒಂದ ಸಾಮಾನು ಇರಂಗಿಲ್ಲ" ಜೋರು ಬಾಯಿ ಮಾಡಿದ. ಸಾಮಣಿಬಾಯಿ, "ಐಯ್ಯೊ ನನ್ನ ಹಣೆಬರವೆ, ಇವತ್ತೊಂದಿನ ಕೆಲಸ ಇಲ್ಲಂತ ಮನಿಯಾಗದೀವಿ, ನನಗೇನು ಗೊತ್ತು ನಿಮ್ಮ ಕುಳ ಹೊತ್ತಾರೆ ಎದ್ದು ದುಡಿಯಾಕ ಹೋಗೋರು ರಾತ್ರಿ ಶಿವನೆ ಅಂತ ಮನಿ ಸೇರ್ತಿವಿ. ನಿಮ್ಮ ಕುಳತಗೊಂಡು ಮಾರಿಬಿಟ್ಟವ. ಸರಿಯಾಗಿ ಹುಡುಕ್ರಿ ಸಿಕ್ಕೀತು" ಪ್ರತ್ಯುತ್ತರ ನೀಡಿದಳು. "ಇಲ್ಲೇ ನಾಯಿಯಂತೊಳೆ ಇಲ್ಲೆ ಇಟ್ಟಿದ್ದೆ" ಎಲ್ಲಾ ಕಡೀಗ ಹುಡುಕಿ ಮತ್ತದೆ ಜಾಗಕ್ಕೆ ಬಂದಿದ್ದ. "ಓ ಇದು ನಿನಮಗನ ಕಾರಬಾರು ಬೋಳಿಮಗ ಕೈಗ ಸಿಕ್ಕಿದ ತಗೊಂಡು ಹೋಗಿ ಐಸಿನವನಿಗೆ ಹಾಕಿದ್ದಾನೆ ರಾಮ ಲೇ ರಾಮ" ಜೋರಾಗಿ ಒದರಿದ. ಹೊಸಕುಳ ಹಾಕಿದ್ದು ಗೊತ್ತಾಗಿ ರಾಮ ಕೆರಿ ಏರಿಹಿಂದ ಓಡಿ ಹೋಗಿ ಬಚ್ಚಿಟ್ಕೊಂಡಿದ್ದ. "ಎಲ್ಲಿ ಹಾಳಾಗಹೋದ, ಮಾಡೋದ ಮಾಡಿ ನನ್ನ ಕೈಗೆ ಸಿಗಲಿ ಅವನ ಚರ್ಮ ಸುಲಿತೀನಿ" ಅಂದವನೆ, ಐಸಿನವನನ್ನ ಹುಡುಕುತ್ತ ತಾಂಡದೊಳಗೆ ಓಡಿದ. ಹೊಸದಾಗಿ ಬಂದಿದ್ದ ಐಸಿನವನು ಇನ್ನೇನು ಸೈಕಲ್ ಹತ್ತಿ ಪೆಟ್ಲು ತುಳಿಬೇಕು "ಏಯ್ ಐಸು" ಹಂದಿಜಾನ್ಯ ಕೂಗಿದ, ಮತ್ತೆ ಯಾರೊ ಗಿರಾಕಿ ಬಂದ್ರು ಅಂತ ಕೆಳಗೆ ಇಳಿದ.

"ಅಲ್ಲ ಯಾರಮನಿ ಮುರಿಬೇಕು ಅಂದ್ಕೊಂಡಿ ನೀನು? ನಿನಗೇನಾರ ಮಾನ ಮರ್ಯಾದಿ ಐತೊ ಇಲ್ಲೋ? ಅಲ್ಲಪ ಯಾವೂರು ನಿಂದು. ಆ ಹುಡುಗರು ಏನೊ ಆಶೆಗೆ ಬಿದ್ದು ಹಳೇವು ಹೊಸವು ಕಬ್ಬಿಣದ ಸಾಮಾನು ತರ್ತಾರ. ಅಲ್ಲ ನೀನು ಮನುಷ್ಯನೇ ಆಗಿದ್ರೆ ಹಿಂಗ ಮಾಡ್ತಿರಾಕಿಲ್ಲ. ಅಲ್ಲೊ ಮಾರಾಯ ಒಂದು ಕುಳ ಹೋಯ್ತು ಅಂದ್ರ ಮತ್ತೊಂದು ತರಾಕ ಆಗೋದಿಲ್ಲ ತಿಳ್ಕ ಇದನ್ನ" ಒಳ್ಳೆ ಮಾತಿಂದಲೆ ಮಾತಾಡಿದ್ದ. "ಏಯ್ ನಿಂದೆನಣ್ಣ, ನನ್ನ ತಾವ ಯಾರು ಹೊಸದು ಸಾಮಾನು ತಂದಿಲ್ಲ. ನಾನು ಏನೆ ಇದ್ದರು ಮೊಡ್ಕಾ ತಗೊತೀನಿ, ನೋಡು ಅಂದವನೆ" ಮೇಲಿನ ಒಂದೆರಡು ಕಬ್ಬಿಣದ ಸಾಮಾನು ಪ್ಲಾಸ್ಟಿಕ್ ಸಾಮಾನುಗಳನ್ನು ಕೆದರಿದಂಗೆ

ಮಾಡಿ ಎಸ್ಕೆಪ್ ಆಗಾಕ ನೋಡಿದ. "ತಮ್ಮ ಒಳ್ಳೆ ಮಾತು ಯಾರ ಮೇಲೊ ಪ್ರಭಾವ ಬೀರುವುದಿಲ್ಲ. ನಿನ್ನ ಸಾಮಾನು ಕಿತ್ತು ಬಿಸಾಕೊ ಮದಲು ಮುಚ್ಕೊಂಡು ಕುಳತಗಿ, ನನಗೆ ಗೊತ್ತಿದೆ, ನನಮಗ ತಂದು ಹಾಕಿರಬೇಕು, ಏನೊ ಆಶೆಯಿಂದ ಗೊತ್ತಿಲ್ಲದೆ ಹಾಕಿದ್ದಾನೆ" ಉಲ್ಟಾ ಹೊಡದ. "ಮಂದಿ ಎಲ್ಲಾ ಸೇರಿ ದೊಡ್ಡರಂಪ ಆಗಾಕ ಮುಂಚೆ ಇವನದು ಕುಳ ಹುಡುಕಿ ಕೊಟ್ಟ ಓಡಿದ್ರಾತು" ಅಂದವನೆ, ಒಳಗ ಕೈಹಾಕಿ ಚೀಲದಿಂದ ಹೊಸ ಕುಳ ತಗದು "ತಗ ಐಸಿನ ದುಡ್ಡು ಕೊಡಬೇಡಾ" ಅಂದವನೆ ಸೈಕಲ್ ಹತ್ತಿದ. ಹಂದಿಜಾನ್ಯ ಕುಳಸಿಕ್ಕ ಖುಷಿಯಲ್ಲಿ ಒಂದು ನಿಮಿಷ ಮೈಮರೆತಿದ್ದೆ ತಡ, ಐಸಿನವನು ಸೈಕಲ್ ತುಳಿದುಕೊಂಡು ಪರಾರಿಯಾಗಿದ್ದ. ಅವನು ಮತ್ತೆಂದು ಭದ್ರಾನಾಯ್ಕನ ತಾಂಡಕ್ಕೆ ಹೊಳ್ಳಿ ಬರಲೇ ಇಲ್ಲ. ರಾಮಗೆ ಯಾರೊ "ಲೇ ನಿಮ್ಮಪ್ಪ ನೀ ಐಸಿಗೆ ಹಾಕಿದ್ದ ಕುಳ ವಾಪಾಸು ಇಸ್ಕೊಂಡಾನ, ಇವತ್ತು ಐತೆ ನಿನಗೆ ಮಾರಿಹಬ್ಬ" ಅಂತ ಅಂಜಿಕೆ ಹಾಕಿದ್ದ. ರಾಮ ರಾತ್ರಿ ಮಲಗಿರುವಾಗ ಮೆಲ್ಲಗೆ ಬಂದು ಗುಡಿಸಲ ಮೂಲೆಯಲ್ಲಿ ಬಿದ್ಕೊಂಡಿದ್ದ. ಅಷ್ಟೊತ್ತಿಗಾಗಲೇ ಅವನಪ್ಪನ ಸಿಟ್ಟ ಕಮ್ಮಿಯಾಗಿತ್ತು. ರಾತ್ರಿ ಬಿದ್ದ ಮಳಿ ಹಸಿಯಾಗಿದ್ದಕ್ಕೆ ಅವನು ರಂಟಿ ಕಟ್ಕೊಂಡು ಹೊಲಕ್ಕೆ ಹೋಗುವ ಹುರುಪಿನೊಳಗೆ ಎಲ್ಲವನ್ನು ಮರೆತ.

* * *

51. ಸಿಂಗಜ್ಜನ ಕೋಲಾಟದ ಪದಗಳು

ಈ ಬರೊ ಹೊಗೋರ ನಡುವೆ ತಾಂಡದ ಸಾಂಸ್ಕೃತಿಕ ಲೋಕನೂ ಬದಲಾಗತೊಡಗಿತ್ತು. ಹಳೆಯ ಪದ್ಧತಿಗಳು ಮರೆಯಾಗಿ ಹೊಸ ಆವಿಷ್ಕಾರಗಳು ತಾಂಡವನ್ನ ಪ್ರವೇಶ ಮಾಡಿದ್ದವು. ಆ ನಡುವೆ ತಾನು ಕಲಿತ ಕೋಲಾಟ, ಅದರ ಹಾಡುಗಳು ತನ್ನ ಜೊತೆಗೆ ಸಾಯಬಾರದು ಅಂತ ಸಿಂಗಜ್ಜ, ಎಷ್ಟೊ ದಿನಗಳಿಂದ ಹರೆಯದ ಹುಡುಗರ ಗುಂಪಿಗೆ ಆಗಾಗ್ಗೆ ಕಿವಿಮಾತು ಹೇಳಿದ್ದ. ಹಿಂದ್ಲೂರ ಬಂಗಾರನಾಯ್ಕ, ಮುಂದಿನ ಓಣಿಯ ದೇಮ, ಡ್ಯೆವರ ಕಲಮು, ಉಪ್ಪಾರ ಪೈಕಿ ನಂಜುಂಡಿ, ಏಕಾಂತ, ಸುಬ್ಬಿ, ಸಿಂಗಾರು, ಬಾರಿಕರ ಚೆಂಗಾಲ, ಜುಲ್ಪ, ಸಾಬರ ನಬಿ, ಬಾಷ, ಬಂದೇನವಾಜ್ ದೊಡ್ಡ ಗುಂಪೆ ಸೇರಿತ್ತು. ಸಿಂಗಜ್ಜ ಎಪ್ಪತ್ತರ ಹರೆಯದಲ್ಲೂ ಕೋಲು ಹಾಕುವ ಶೈಲಿಯಿಂದ ಆತ ಯುವಕನಾಗಿದ್ದಾಗ ಹೇಗಿದ್ದಿರಬಹುದು? ಎಂದು ಊಹಿಸಬಹುದಾಗಿತ್ತು. ಹುಲಿಯೂರನಿಗೆ ತಡಿಯೋದಕ್ಕೆ ಆಗದೆ ಕೇಳಿಯೆ ಬಿಟ್ಟ "ಸಿಂಗಜ್ಜ ನಿನಗೆ ವಯಸ್ಸು ಎಪ್ಪತ್ತಿರಬಹುದೆ?" ಅಂದ. "ಯಾಕ್ಲ ಹುಲಿಯೂರ, ನನ್ನ ವಯಸ್ಸು ತಗೊಂಡು ಏನ ಮಾಡಿಯ ಮತ್ತೊಂದು ಮದುವೆ ಏನಾರು ಮಾಡಿಸುವ ವಿಚಾರ ಐತೊ ಹೆಂಗೆ,? ಇರಬಹುದು, ಎಪ್ಪತ್ತು ಯಾಕಂದಿ ನಾವು ಹುಟ್ಟಿದ್ದು ಅಷ್ಟೆ ಗೊತ್ತು, ಯಾವಾಗ? ಹೆಂಗೆ? ಯಾಕೆ? ಒಂದು ಗೊತ್ತಿಲ್ಲಾ. ಅವಿದ್ಯಾವಂತ ಮಂದಿ, ಈ ಬ್ರಾಂಬರಂಗೆ, ತಿಥಿ, ನಕ್ಷತ್ರ, ಟೈಮು ಅಂತೇಳಿ ಬರದು ಇಟ್ಕೊಳಾಕ ಏನಿತ್ತು ಇವರತಾವ. ನಮ್ಮವ್ವಗ ಕೇಳಿದ್ರೆ, ನೀನು ಹುಟ್ಟಿದಾಗ ಮುಂಗಾರ ಮಳೆ ಆರ್ಭಟ ನಮ್ಮ ಗುಡಿಸಲುಗಳ ಮೇಲಿನ ಆಪು ಹಾರಿ ಬಟಾಬಯಲಾಗಿತ್ತು. ಯಾರದೊ ಪುಣ್ಯಾತ್ಮರ ಗುಡಿಸೊಳಗೆ ಹೆರಿಗೆ ಮಾಡಿಸಿದ್ರು ಅದು ಯಾವ ಮಳೆ ಅಂತ ಗೊತ್ತಿಲ್ಲ ಮಗ. ಈಗ ಹೇಳು ಎಷ್ಟು ವರ್ಷಗಳಾಗಿರಬಹುದು?" ಅವನಿಗೆ ಕೇಳಿದ. "ಅಲ್ಲ ನಾನು ವಯಸ್ಸು ಕೇಳಿದ್ದು ಅದಕಲ್ಲ ಸಿಂಗಜ್ಜ ಈ ವಯಸ್ಸಿನಲ್ಲೇ ಹಿಂಗದಿ ನೀನು ನಿನ್ನ ಹರೆಯದಾಗ ಹೆಂಗಿರಬೇಡ?" ತನಗೆ ಕಾಡುತ್ತಿರುವ ಸವಾಲನ್ನ ಬಿಚ್ಚಿಟ್ಟಿದ್ದ. "ಅಯ್ಯೊ, ಅದರ ಬಗ್ಗೆ ಮಾತಾಡಬೇಡ ಅದು ಸಬ್ಬನಗಾಲ, ಧೋ ಅಂತ ಮಳಿ ಸುರಿತಿತ್ತು, ನಮ್ಮವು ಮಳಲಹಾಸಗಿ ಜಮೀನು ಹೊಲದಾಗ ಬೆಳೆ ಫೀ ಅಂತ ಹಳದಿರೋಗಕ್ಕೆ ತುತ್ತಾಗಿ ಏನ ಹಾಕಿದರು ಆ ಮಳೆ ಹೊಡ್ತಕ್ಕೆ ಬೆಳಿ ನೆಲಬಿಟ್ಟ

ಮೇಲೆ ಏಳ್ತಿರಾಕಿಲ್ಲ. ಸುತ್ತಮುತ್ತಲ ಊರು ತಿರುಗಿದರು ಸೇರು ಕಾಳು ಸಿಗೋದು ಜಡ ಇತ್ತು. ಆ ಪರಿಸ್ತಿತಿ ಯಾಕ ತಗಿತಿಯಾ ಬಿಡು" ಅಂದವನೆ ಸುಮ್ಮನಾಗಿದ್ದ. ಹುಲಿಯೂರ ಮತ್ತೆ ಕೆದಕಲಿಕ್ಕೆ ಹೋಗಲಿಲ್ಲಾ. ಅಷ್ಟೊತ್ತಿಗಾಗಲೇ ಕೆಲವರು ಕಾಲಿಗೆ ಗೆಜ್ಜೆ ಕಟ್ಕೊಂಡು ಕೈಯಾಗ ಕೋಲು ತಲಿಗ ಟವೇಲು ಕಟ್ಟಿ ಹಾಜರಾಗಿದ್ದರು. ಹುಲಿಯೂರನು ಯಾರದೊ ಕೋಲು ಇಷ್ಕೊಂಡು ತಯಾರಿದ್ದ. ಗಾರಿಕಟ್ಟೆ ಮೇಲೆ ಮಂದಿ ತುಂಬಿದ್ರು. ಆ ಕಡೆ ಬಾವಿಕಟ್ಟೆ, ಈ ಕಡೆ ಮಟ್ಕೊದ ಮುಂದೆ ಅಲ್ಲಲ್ಲೆ ಕುಂತು, ನಿಂತು ಮಂದಿ ಕೋಲಾಟ ನೋಡತೊಡಗಿದ್ದರು. ಸಿಂಗಜ್ಜ ತನ್ನ ಎಂದಿನ ಧಾಟಿಯಲ್ಲಿ "ಕೋಲು ಕೊಲಣ್ಣ ಕೊಲು ಕೊಲೆ, ಎಕೊಲೆ ಕೊಲಣ್ಣಕೊಲೆ" ಅಂತ ರಾಗವಾಗಿ ಹಾಡನ್ನ ಆರಂಭ ಮಾಡಿದ್ದ. ಅದರ ಹಿಂದಿಂದೆ "ಮದಲು ನೆನಿತಿವಿ ಗಜಮುಖನ್ನ ದಯನಾ ಕೊಡುಸ್ವಾಮಿ ಕೋಲಿನ ಮತಿಗಳನ್ನ" ಅಂತ ಹಾಡತೊಡಗಿದ್ದ. ಸರಳಕೋಲು ಮದಲ ದಿನದ ಪಾಠ, ಇದೊಂದು ರೀತಿಯ ಕುತೂಹಲ ಹುಟ್ಟಿಸುವ ತಂತ್ರವಾಗಿತ್ತು. ಎರಡನೇಯ ದಿನ ತಮಗೆ ಅರಿವಿಲ್ಲದೆ ಹುಡುಗರು ಗುಡಿ ಮುಂದೆ ಬಂದು ಸೇರಿದ್ದರು. "ಇವತ್ತು, ಇದರಕೋಲು ಒಬ್ಬವ ಎದರು ಮತ್ತೊಬ್ಬ ಬಲಕ್ಕೆ ಇವನಿಗೆ ಕೊಲು ಕೊಟ್ಟು ಮುಂದಕ್ಕೆ ಹೋಗಬೇಕು, ಇದಾದ ಮೇಲೆ ಸುತ್ತಕೋಲು, ಜಡೆಕೋಲು" ನಾನಾನಮೂನಿ ಕೋಲುಗಳನ್ನ ಮುದುಕ ಹೇಳಿಕೊಡುವ ಪ್ರಯತ್ನ ಮಾಡಿದ್ದ. ಹುರುಪಿನಲ್ಲಿ ಕೆಲವರು ಸರಿಯಾಗಿ ಕಲಿತರು, ಇನ್ನೂ ಕೆಲವರು ಅರ್ಧಂಬರ್ಧ ಕಲಿತರು. ಒಂದು ವಾರ ಪ್ರತಿಯೊಬ್ಬರು ಗಂಭೀರವಾಗಿ ತೆಗೆದುಕೊಂಡು ಬರತೊಡಗಿದರು. ಒಂದು ವಾರ ಆದ ಮೇಲೆ, ಮುಂದಿನ ಓಣಿಯದೇಮ, ಡಾವೇರೊ ಕಲಮ ಕೈಕೊಟ್ರು. ಮರುದಿನ ನಂಜುಂಡಿ, ಏಕಾಂತ, ಬಂಗಾರನಾಯ್ಕ ಒಬ್ಬೊಬ್ಬರೆ ಕಡಿಮೆಯಾಗುತ್ತಿದ್ದಂತೆ ಹುಲಿಯೂರ ಸಣ್ಣ ಹುಡುಗರನ್ನ ಸೇರಿಸಿಕೊಂಡು ಕೋಲು ಕಲಿಸುವ ಪ್ರಯತ್ನ ಮಾಡಿದ. ಬರ್ತಾಬರ್ತಾ ಅವನಿಗೂ ಆಸಕ್ತಿ ಕಡಿಮೆಯಾಗಿತ್ತು. ಅವನ ಸ್ಕೂಲ ಆರಂಭ ಆಗಿದ್ದಕ್ಕೆ ಅವನು ದಾವಣಗೆರೆ ಹಾಸ್ಟೆಲ್ಲಿಗೆ ಹೋದ ಮೇಲೆ ಕೊಲಾಟದ ಗತಿ ಏನಾಯ್ತು ಅಂತ ಹೇಳುವವರು ಯಾರು ಇಲ್ಲದಂಗಾದರು. ಸಿಂಗಾರಜ್ಜನ್ನೂ ಅದಾಗಿ ಐದಾರು ವರ್ಷಕ್ಕೆ ದಮ್ಮು ಹೆಚ್ಚಾಗಿ ತೀರಿಕೊಂಡ ಅಂತ ಯಾರೊ ಹೇಳಿದರು. ಹುಲಿಯೂರನಿಗೆ ಮಾತ್ರ ಅವನ ಹಾಡು ಕಲಿಸುವ ವಿಧಾನ ನೆನಪಿನ ಆಳದಿಂದ ಹೋಗದಾಗಿತ್ತು. ಅವತ್ತು ಕಲಿತ ಹಾಡುಗಳನ್ನು ಹಾಸ್ಟೆಲಿನ ಬಾತ್‌ರೂಂನಲ್ಲಿ ಗುನಗುನಿಸುತ್ತಾ ತಣ್ಣೀರು ಮೈಗೆ ಹಾಕಿಕೊಳ್ಳುತ್ತಿದ್ದ ಥಂಡಿದೂರ ಓಡುವ ಅನುಭವವಾಗಿ ಸಿಂಗಾರಜ್ಜ ನೆನಪಾಗುತ್ತಿದ್ದ.

* * *

52. ಏನ್ ಕಾಟ ಕೊಡುತಾವ ಕಬ್ಬಕ್ಕಿ ನಾ ಹೊಲದಾಗ ಇರುವಾಕಿ ಒಬ್ಬಾಕಿ

ಭದ್ರಾನಾಯ್ಕನ ತಾಂಡದ ಭಜನಿ ಮಾಸ್ತರ ಬಗಲೇಶಿಗೆ ಬರ್‍ತಿದ್ದ ಹತ್ತು ಹದಿನೈದು ಹಾಡುಗಳು ಯಾವತ್ತು ಹೆಂಡ ಕುಡಿದು ತೇಲ್ಗಣ್ಣು ಮೇಲಗಣ್ಣು ಆಗದ ಹೊರತು ಹಾರ್ಮೋನಿಯಂ ಹಿಡಿಯುತ್ತಲೇ ಇರಲಿಲ್ಲ. ಕುಡಿದ ಅಮಲು ಹೆಚ್ಚಿದಂತೆ ಹಾಡಿನ ಲಯ, ಧಾಟಿ ಸರಿಯಾಗಿ ಬರುತ್ತಿತ್ತು. ಅವನ ಹಿಂದೆ ಅವನ ಗರಡಿಯಲ್ಲಿ ಪಳಗಿದ ಬಸವ, ಹನುಮೇಶಿ, ಕಾಶಿನಾಥ, ಕಮಂಗಿ ಮಂಜ. ಅವನಂತೆಯೇ ಎರಡು ಬಾಟಲು ಹೆಂಡ ಇಲ್ಲ ಸರ್ಕಾರಿ ಸರಾಯಿ ಕುಡಿದೆ ಭಜನೆಗೆ ಕೂಡುತ್ತಿದ್ದರು. ಪ್ರತಿದಿನ ರಾತ್ರಿ ಕತ್ತಲಾಗುತ್ತಿದ್ದಂತೆ ಆತನಿಗೆ ಮೂಡ್ ಬಂದಿರಬೇಕು, ಇಲ್ಲ ಯಾರಾದರು "ಮಾಸ್ತರ ಬಾ" ಅಂತ ಕರಿಬೇಕು, ಇಲ್ಲ ಅರ್ಧ ಬಾಟಲ್ಲು ಹೆಂಡ ಹೇಳಿ ರಾತ್ರಿ ಒಂದೀಟು ಕುಡಾನ ಅಂದ್ರೆ, ಚಾಚುತಪ್ಪದೆ ಸೇವಾಭಾಯನ ಗುಡಿಯೊಳಗೆ ಬುಡ್ಡಿದೀಪ ಹಚ್ಚಿ ಹಾರ್ಮೋನಿಯಂ ಹಿಡಿಯುತ್ತಿದ್ದ. ಆರಂಭದಲ್ಲಿ ಆತನಿಗೆ ಗೊತ್ತಿದ್ದ ಒಂದೇ ಒಂದು ದೇವರನಾಮ "ಶರಣುಸಿದ್ಧಿ ವಿನಾಯಕ, ಶರಣು ವಿದ್ಯ ಪ್ರದಾಯಕ." ಅದು ಆಗ್ತಿದ್ದಂಗೆ ಒಂದೆರಡು ಮೂರು ಹಾಡುಗಳು, ನಂತರ ಬರುವುದೇ ಏನ್ ಕಾಟಕೊಡತಾವ ಕಬ್ಬಕ್ಕಿ ನಾ ಹೊಲದಾಗ ಇರುವಾಕಿ ಒಬ್ಬಾಕಿ ಅಂತ ಶರೀಪರ ಹಾಡನ್ನ ಹಾಡುತ್ತಿದ್ದ. ಹುಲಿಯೂರನಿಗೆ, ಬಗಲೇಶಿ ಹಾಡಿದರೆ ಹಾಡು ಬಹಳ ಇಷ್ಟವಾಗುತ್ತಿತ್ತು. ಅವನು ಜಗತ್ತನ್ನು ಈಗ ನೋಡತೊಡಗಿದ್ದ. ಜಗತ್ತಿನ ರೀತಿ ರಿವಾಜು, ಜಗತ್ತಿನ ಆಗುಹೋಗುಗಳು, ಜಗತ್ತಿನ ಬೇಕು ಬೇಡಗಳನ್ನ ಒಂದೊಂದಾಗಿಯೇ ಅರಿಯುವ ಪ್ರಯತ್ನದಲ್ಲಿದ್ದ. ಹಾಗಾಗಿ ಶರೀಫ, ಗೋವಿಂದ ಭಟ್ಟ, ಪಕ್ಕಿರೇಶ, ಕನಕದಾಸ ಆಗಲಿ ಬಸವಾದಿ ಶರಣರ ಬಗ್ಗೆ ಏನೂ ತಿಳಿದಿರಲಿಲ್ಲ. ಅವನ ತಂದೆ ತೊಪುನಾಯ್ಕ ಮಹಾಜ್ಞಾನಿ. ನಾಕು ಕಡೆ ಅಡ್ಡಾಡಿ ನಾಕು ಜನರೊಂದಿಗೆ ಮಾತಾಡಿ, ಕತೆ ಹೇಳುವುದನ್ನ, ಚರ್ಚೆ ಮಾಡುವುದನ್ನ ಕರಗತ ಮಾಡಿಕೊಂಡಿದ್ದ.

ಆತನಿರುವ ಪಂಚಾಯ್ತಿಯಲ್ಲಿ ಜಯ ಯಾವಾಗಲೂ ನಿರಪರಾಧಿಗಳಿಗೆ ಆಗುತ್ತಿತ್ತು. ಮನಿಯೊಳಗೆ ಸನ್ನಿವೇಶ, ಸಂದರ್ಭಕ್ಕೆ ಒಂದೊಂದು ಒಳ್ಳೆಯ ಮಾತುಗಳನ್ನು ತಡಾಯಿಸುತ್ತಿದ್ದ. ಹುಲಿಯೂರ ಒಂದೊಂದೆ ಮಾತುಗಳನ್ನ, ಶಾಸ್ತ್ರಗಳನ್ನ, ಕಲೆಗಳನ್ನ ಅರ್ಥಮಾಡಿಕೊಳ್ಳತೊಡಗಿದ್ದ. ಶರೀಪನ್ನ ಅರ್ಥಮಾಡಿಕೊಳ್ಳುವುದು ಅಷ್ಟೇನು ಸುಲಭವಲ್ಲ. ಏನೇ ಆದರು, ಬಗಲೇಶಿ ಬಾಯಿಯಿಂದ 'ಗಡಗಿ ಜೋಕಿ ತಂಗಿ, ಬ್ರಹ್ಮ ಕೊಟ್ಟ ಗಡಗಿ ಜೋಕೆ ತಂಗಿ.' ಅನ್ನೊ ಹಾಡನ್ನ, ಒಳ್ಳೆ ರಾಗವಾಗಿ ಎತ್ತರದ ಧ್ವನಿಯಲ್ಲಿ ಹಾಡುತ್ತಿದ್ದರೆ. ಅರ್ಥ ಮಾಡಿಕೊಳ್ಳುವವರು ಅದರ ಅಂತರಾಳಕ್ಕೆ ಹೋಗಿ ಅರ್ಥೈಸಿ ಕೊಂಡಿದ್ದರು. "ಎಯ್ ಪೀರಪ್ಪ, ಅರ್ಥ ಆಯಿತ ಶರೀಪ ಸಾಹೇಬನ ಹಾಡು, ಎಂಥ ಅನುಭವದ ಮಾತ ಹೇಳ್ತಾನ ಶರೀಪ. ಗಡಗಿ ಅಂತಂದ್ರ ಶೀಲ ಏನಪ್ಪ. ಶೀಲನೆ ಹೋಯ್ತು ಅಂತಂದ್ರ ಹೆಣ್ಣು ಬದುಕಿದರೇಟು ಸತ್ರ ಎಷ್ಟು. ಅದಕ್ಕೆ ಹೇಳ್ತಾ ಗಡಿಗಿಯನ್ನ ಯಾರು ಮುಟ್ಟದಂಗೆ ಕಾಪಾಡವ್ವ ಅಂತಾನ ಶರೀಪಜ್ಜ." ಪೀರುಸಾಬಿಗೆ ಅರ್ಥ ಮಾಡಿಸುವ ಗೋಜಿಗೆ ಹೋಗಿದ್ದ ಕೆಂಚಜ್ಜ ಪೀರುಸಾಬಿಗೆ ಅದೇನು ಅರ್ಥ ಆಯ್ತೊ ಶರೀಫ್ ಅಂದ್ರ ಮುಸ್ಲಿಮ ಅನ್ನೋದು ಮಾತ್ರ ತಿಳಿತು. ಆದರೆ ಈ ಶರೀಪ ಸಾಹೇಬ ಉರ್ದುದೊಳಗೆ ಬರೆಯೋದು ಬಿಟ್ಟ ಕನ್ನಡದಾಗ ಯಾಕ ಬರದ ಅನ್ನೋದು ಪೀರುಸಾಬಿಯ ಪ್ರಶ್ನೆಯಾಗಿತ್ತು. ಬಹುಶಃ ಅವನು ನಮ್ಮ ಹಾಗೆ ನದಾಪ್ ಮುಸಲಮಾನ ಇರಬಹುದು. ನಾವು ಅನೇಕ ಆಚರಣೆಗಳನ್ನು ಈ ಜನರ ರೀತಿಯಲ್ಲೇ ಮಾಡುವುದಿಲ್ಲವೆ ಹಾಗೆ. ಮದುವೆ, ಹಬ್ಬಗಳು, ಕೆಲವು ರೀತಿ ರಿವಾಜುಗಳು ಸ್ಥಳೀಯರಂತೆ ಇರುತ್ತವೆ. ದೀಪಾವಳಿ ಅವರೊಟ್ಟಿಗೆ ಮಾಡ್ತಿವಿ, ಯುಗಾದಿ ಚಂದ್ರ ನೋಡ್ತಿವಿ, ನಾಗರಪಂಚಮಿಗೆ ಉಂಡೆ ಕಟ್ತಿಲ್ವೆ ಹಾಗೆ.

ಆದರೆ ಆ ಹಾಡು ಕೇಳಿದ ನಂತರ ಪೀರಸಾಬಿಗೆ ಶರೀಫನ ಮೇಲೆ ಹೆಚ್ಚಿನ ಆಸಕ್ತಿ ಮೂಡಿತು. ಆಗಾಗ್ಗ ಅವನು ಕೆಂಚಜ್ಜನ್ನ ಹತ್ತಿರ ಕೂತು ಶರೀಫ ಸಾಹೇಬನ ಹುಟ್ಟು, ಅವನ ಶಿಕ್ಷಣದ ಬಗ್ಗೆ ಅರಿಯುವ ಪ್ರಯತ್ನ ಮಾಡಿದ್ದ. ಬಗಲೇಶಿ ಮಾತ್ರ ಯಾವಾಗಲೂ ಹಾಡುತ್ತಿದ್ದ 'ಏನ್‌ಕಾಟ ಕೊಡತಾವ ಕಬ್ಬಕ್ಕಿ' ಹಾಡು ಕೇಳಿದ ಹುಲಿಯೂರನಿಗೆ ಏನೊ ವಿಚಿತ್ರವಾದ ಸನ್ನಿವೇಶ ನೆನಪಾಗಿತ್ತು. ಆ ವರ್ಷ ಹುಲಿಯೂರನ ಎರಡನೇ ಅಣ್ಣ ಹಾವೇರಿ ತಾಲೂಕು ಕಛೇರಿಯಲ್ಲಿ ದಿನಗೂಲಿ ನೌಕರನಾಗಿದ್ದ. ಅವನಿಗೆ ಅದೇನು ಅನಿಸಿತೊ ಪಂಚಾಯ್ತಿ ಎಲೆಕ್ಷನ್‌ಗೆ ನಿಲ್ಲಬೇಕು ಅಂತ ಊರಿಗೆ ಬಂದಿದ್ದ. ತಾಲೂಕ ಕಛೇರಿಯಲ್ಲಿ ಚೂರುಪಾರು ಕೆಲಸ ಮಾಡಿ ನಾಕು ರೂಪಾಯಿ ಮಾಡಿದಂಗಿತ್ತು. ಹೆಂಡತಿ ಮಕ್ಕಳೊಂದಿಗೆ ಠಿಕಾಣಿ ಹೂಡಿದ್ದ. ತೊಪುನಾಯ್ಕನ ಮನಿಯವರಿಗೆ ಗೆಲ್ಲಿಸಲೇ ಬಾರದು ಅಂತೇಳಿ ಮತ್ತೊಂದು ಗುಂಪು ಪೂಜಾರಿಯ ನೇತೃತ್ವದಲ್ಲಿ ತಯಾರಾಗಿತ್ತು. ಸಾಂಬಳೊಸಂತ್ರಿ, ಬದಿಯಾ, ಹಾಂಡೇರೊ ಲಚ್ಮ, ಕಾಂದಾವಾಳೊ ರಾಮ ಅವನಿಗೆ ಸಾತ್ ನೀಡಿದ್ದರು.

ದೇವ್ಲನಾಯ್ಕ ಮಾತ್ರ ಮಂದಿ ಮಾತು ನಂಬಿ ಹರಪನಹಳ್ಳಿಗೆ ಹೋಗಿ ನಾಮಪತ್ರ ಕೊಟ್ಟವನೆ ಊರಮನಿಮಂದಿ ಗುಂಪು ಕಟ್ಟಿದ್ದ. ಊರ ಮನಿ ಗುಂಪಲ್ಲಿ, ಕಳಸ, ನಜೀರ, ಹುಸೇನಿ ಧರ್ಮ, ಪಿಂಜಾರಿ ಮಾಬೂ, ಪಿಂಸಿರಾಧ, ಕೌಟೂರ ಮಂಜಪ್ಪ, ಮೇಗಲ ಓಣಿಯ ಶೇಕ್ರಿ, ಶಂಬೂನಿಂಗ, ಮುನಿಯ, ಮಾಂತಿ ಹುಡುಗರ ಗುಂಪು ಸಾಲಿ ಓದಿದೋನು, ಒಳ್ಳೆ ಮಾತುಗಾರ ಅಂತ ಅವನ ಹಿಂದೆ ಸುತ್ತಾಡುತ್ತಿದ್ದರು. ದೇವ್ಲನ ಗುಂಪಿನ ಆಕರ್ಷಣೆ ಅಂದ್ರೆ ಪಿಂಸಿರಾಧ. ನೋಡೋದಕ್ಕೆ ಚೆಂದುಳ್ಳ ಚಲುವಿಯಾದರೂ ಮೂಗಲ್ಲಿದುರ್ಮಾಸ ಬೆಳೆದು ಉಸಿರಾಟದ ತೊಂದರೆಯಿಂದ ಹೈರಾಣಾಗಿದ್ದಳು. ಆದರೂ ಜೀವನ ನಡಿಯಬೇಕಲ್ಲ, ಕೂಲಿನಾಲಿ ಮಾಡಿಕೊಂಡು ಬದುಕಿದ್ದಳು. ಆದರೆ, ಅವಳ ಒಂದು ನೋಟಕ್ಕೆ ಸಾಯುತ್ತಿದ್ದ ಶಂಭೂನಿಂಗ, ಧರ್ಮ, ಶೇಕ್ರಿ ಹುಚ್ಚ ನಾಯಿ ಹಂಗೆ ಅಕಿ ಹಿಂದೆ ಮುಂದೆ ಸುತ್ತಾಡುತ್ತಿದ್ದರು. ಅಕಿ ಮನಸ್ಸಿನೊಳಗೆ ಯಾರಿದ್ದಾರೊ ಏನೊ ಈ ಪೀಡೆಗಳ ಕಾಟವನ್ನ ತಾಳಿಕೊಂಡೆ ಬದುಕಿದ್ದಳು. ಇಡೀ ರಾತ್ರಿ ಗಲ್ಲಿಯಲ್ಲಿ ಹುಡುಗರು ಸೇರಿದ್ದರೆ ಅಲ್ಲಿ "ಏನಪ್ಪ, ಇವತ್ತು ಕಂಡಿದಳ ಪಿಂಸಿ" ಅವಳದೆ ಆಲೋಚನೆ. "ಲೇ ಸುಮ್ಮನಿರಲೆ ಇಲ್ಲೆ ಅಕಿ ಸಣಪ್ಪ ಅದಾನ ಮಗನೆ ಅಂಡಹರಿಯಂಗ ಒದ್ದಾನು" ಮತ್ತೊಬ್ಬ ಹೇಳಿದ. ಅಕಿ ಉದ್ದ, ಅಗಲ, ಆಳದ ಚರ್ಚೆ ಮಾಡಿದ ಮೇಲೆ ಅಕೀದ ಹ್ಯಾಂಗೋವರನೊಳಗೆ ಹಾಸಗಿ ಮೇಲೆ ಉಳ್ಳಾಡುತ್ತಿದ್ದರು. ರಾಧನ ಜೊತೆಗೆ ಯಾವಾಗಲೂ ಕೂಲಿಗೆ ಹೋಗುತ್ತಿದ್ದ ಧರ್ಮ, ಅಂಜೀನಿ, ಶೇಖ, ಶಂಬೂನಿಂಗ, ನಾ ಮುಂದೆ ನೀ ಮುಂದೆ ಅಂತ ಕಳೆ ತಗೆಯುವುದು, ರಾಗಿ ಸಾಲಿನಲ್ಲಿ ಅವರ ಸಾಲು ಮುಗಿಸಿ ಎದಿರು ಕೊಯ್ಯುವುದು, ಶೇಂಗ ಕೀಳುವಾಗ ಅವಳ ಸಾಲುಗಳನ್ನ ಕಿತ್ಕೊಂಡು ಅಕಿ ಜೊತಿಗೆ ತಡಾದರೆ, ಅಕಿ ಕೂಡ ಲೋಕಾಭಿರಾಮವಾಗಿ ಮಾತಾಡುವುದು ಮಾಡುತ್ತಿದ್ದರು. "ಏನೆ ಓಡಿಹೋಗಾನ ಬರ್ತಿಯಾ, ಅಂಗೈಯಾಗ ಇಟ್ಟು ರಾಣಿ ಹಂಗೆ ಸಾಕ್ತಿನಿ" ಅಂದ ಧರ್ಮ. ಅವನ್ನ ನೋಡಿ ಒಮ್ಮೆ ನಕ್ಕ ರಾಧ, "ಲೇ ಧರ್ಮ ಮದಲು ಊಟ ಮಾಡೋಣ ಹೊಟ್ಟಿ ತುಂಬ, ಓಡಿ ಹೋಗಿ ಏನ ಮಾಡಿ" ನಿರಾಕರಿಸಿದಳು. ಅವರ ಹಿಂದಿಂದೆ ತಡಾದ ಶೇಖರ, "ಆಯ್ತನಪ್ಪ ನಿಂದು" ಅಂದವನೆ ಅವಳನ್ನ ಕಚ್ಚಿಕೊಂಡ. "ಮದವಿ ಆಗ್ತಿ ಏನೆ ನಿಮ್ಮವ್ವ ಅಪ್ಪನ ಕುಟಾಗ ಮಾತಾಡ್ತಿನಿ ಏನಂದೆ" ಕೇಳಿದ. "ಹೋಗ ಸುಮ್ಮನೆ ಈ ಹಾಳ ತಾಂಡದಾಗ ಯಾರು ಇರ್ತಾರ?" ಅವಳ ಮನದ ಮಾತನ್ನ ಹೊರಹಾಕಿದಳು.

ಅವನ ಹಿಂದಿಂದೆ ಇದ್ದ ಶಂಬೂನಿಂಗ, "ಏನೆ ಮಾವನ ಮಗಳೆ ನಾನು ಹಾರಿಸಿಕೊಂಡು ಬರಬೇಕು ಅನ್ನೋದ್ರಾಗ ಮತ್ಯಾವನದೊ ಕುಟಾಗ ಬಂದಿಯಾ ಯಾರು ಏನೆ ಮಾಡಿದರೂ ನಾನೆ ನಿನ್ನ ಮದವಿ ಆಗೋದು ನೋಡ್ತಿರ" ಬಹಳ ದೃಢತೆಯಿಂದಲೇ ಹೇಳಿದ. "ಆಯ್ತು ಬಿಡೊ ಮಾವ, ಮದಲು ಹಿಡಿದ ಸಾಲು

ತಡಾದು ನಿನ್ನ ಸೊಂಟದಾಗ ಕಸು ಐತೆ ಅಂತ ನಿರೂಪಿಸು ಆಮ್ಯಾಕಿಂದ ಕನಸ ಕಾಣು." ಅಲ್ಲೆ ಅವನ ಮಾತನ್ನ ತುಂಡರಿಸಿದಳು. "ಸಾಲಿಗೂ, ಪ್ರೀತಿಗೂ ಏನೆ ಸಂಬಂಧ, ಮೂರ ಎಕ್ಕರೆ ಹೊಲ ಐತೆ, ಮನೆ, ಎತ್ತುಗಳು, ಇನ್ನೇನಬೇಕು? ಸೊಂಟದಾಗ ಕಸು ಇದ್ದೆ ಐತೆ" ನಂಬಿಸುವ ಹುಸಿ ಪ್ರಯತ್ನ ಮಾಡಿದ್ದ. ಅವನಂತರ ಬಂದ ಮಂಜ, ಮಾರ್ತಿ, ಮುಕ್ಕಣ್ಣ, ಮೂಗುರೇಶ ಅವಳ ಹಿಂದೆ ತಿರುಗಾಡತೊಡಗಿದರು. ಅವಳ ಪಕ್ಕದಲ್ಲೆ ಕೆಲಸ ಮಾಡುತ್ತಿದ್ದ ಗಂಗಮಾಳಿ, ಹನಮಂತ, ರೇಣಕಿ, "ಐಯ್ಯ ನನ್ನ ಶಿವನ, ನಮ್ಮ ತಾಗ ಇಲ್ಲದ ಅಂದ ಅವಳ ತಾಗೆ ಇದ್ದಿತೇನು, ಈ ಹಾಟಗಳ್ಳ ನನಮಕ್ಕಳು, ಸುಕಾಸುಮ್ಮನೆ ಅಕಿ ಹಿಂದ ಬಿದ್ದು ಹುಂಬರಾಗ್ಯಾರ" ಅಂತ ಎಲ್ಲರಿದಿರೂ ಬೊಯ್ಯ ತೊಡಗಿದಳು ಗಂಗಮಾಳಿ. ಹೇಳಬೇಕಂದ್ರ ಪಿಂಸ್ನಿ ರಾಧಳಿಗಿಂತ ನೂರ ಪಟ್ಟ ಸುಂದರವಾಗಿದ್ದಳು. ಆದರೆ ಒಂದ ಕುರಿಹಳ್ಳಕ್ಕ ಬಿದ್ರ ಎಲ್ಲಾ ಕುರಿಗಳು ಹಳ್ಳಕ್ಕೆ ಬೀಳುವಂತೆ, ಯಾವನೊ ಒಬ್ಬನ ಮಾತಿಂದ ಎಲ್ಲರೂ ಅವಳ ಹಿಂದೆ ಬೆನ್ನತ್ತಿದದರು. ಆದ್ರ ಎಲ್ಲರಿಗೂ ಚೆಳ್ಳೆ ಹಣ್ಣು ತಿನ್ನಿಸುತ್ತಿದ್ದಳು ರಾಧ.

ದೇವ್ಲನ ಎಲೆಕ್ಷನ್ ಪ್ರಚಾರ ಜೋರು ನಡೆದಿತ್ತು. ತಾಂಡದವರೆಲ್ಲ ಒಂದಲ್ಲ ಒಂದು ಕಾರಣಕ್ಕೆ ಒಂದಾಗಿ ಕಂಚಿಕಟ್ಟಿ ನಿಂತಿದ್ದರು. ಈ ಕಡೆ ಊರಮನಿಯವರು, ಸಾಬರು ಒಂದಾಗಿ ಅವರನ್ನ ವಿರೋಧಿಸಿದ್ದರು. ಎಲೆಕ್ಷನ್ ದಿನ ರಾತ್ರಿ ದೇವ್ಲ ಓಟು ಹಾಕುವವರಿಗೆಲ್ಲಾ ಹೋಳಿಗೆ ಊಟದ ಏರ್ಪಾಟು ಮಾಡಿದ್ದ. ಹೋಳಿಗೆ ಮಾಡೋದಕ್ಕೆ, ಬೇಯಿಸೋದಕ್ಕೆ ಊರ ಮನಿಯವರನ್ನ ಕರೆದಿದ್ದ. ಅದರಲ್ಲೂ ಪ್ರಮುಖವಾಗಿ ಪಿಂಸ್ನಿರಾಧ, ಧರ್ಮ, ಮಂಜ, ಶಂಬ, ಶೇಖ ಮುಂತಾದವರು. ಧರ್ಮ ಮಾಮೂಲಿನಂತೆ ತನ್ನ ಪ್ರೇಮವನ್ನ ಅವಳಿಗೆ ತಿಳಿಸುವ ನಾನಾ ಪ್ರಯತ್ನ ಮಾಡಿದ್ದ. ಇಡೀ ರಾತ್ರಿ ಅವಳ ಪಕ್ಕ ಕೂಡುವುದು, ಅವಳ ಹಿಂದೆ ಮುಂದೆ ತಿರುಗಾಡುವುದು ಮಾಡಿದ್ದ. ರಾಧ ಏನು ಬೇಕಂತಲೆ ನಾಟಕ ಮಾಡುತ್ತಿದ್ದಳು ಇಲ್ಲ ನಿಜವಾಗಿಯೂ ತಾನು ಬಹಳ ಗಂಭೀರ ಹೆಣ್ಣು ಅಂತ ನಿರೂಪಿಸುವ ಹುಸಿ ಪ್ರಯತ್ನವೊ ತಿಳಿಯದಾಗಿತ್ತು. ಹುಲಿಯೂರ ಮಾತ್ರ ಈ ಎಲ್ಲಾ ಕ್ರಿಯೆಗಳನ್ನು ಬಹಳ ಸೂಕ್ಷ್ಮವಾಗಿಯೇ ಗಮನಿಸಿದ್ದ. ಪಿಂಸ್ನಿಯ ಬಗ್ಗೆ ಊರಾಗ ನೂರೆಂಟು ಪುಕಾರುಗಳಿದ್ದವು. ಆದರೆ ಅವಳು ಯಾಕೆ ಆ ಧರ್ಮನ ಜೊತೆಗೆ ಹಿಂಗ ನಡ್ಕೊಳಾಕ ಹತ್ಯಾಳಂತ ಅರಿಯದಾಗಿತ್ತು. ಅವನ ಹಿಂದಿಂದೆ ಶೇಖ, ಶಂಖ ಹಂಗೆ ಗಂಟು ಬಿದ್ದಿದ್ದರು. ಅವತ್ತು ರಾತ್ರಿ ಯಾರು ಹೊರಗೆ ಕರೆದುಕೊಂಡು ಹೋಗಿದ್ದರೋ, ಯಾರಿಗೂ ಗೊತ್ತಾಗಲೇ ಇಲ್ಲ, ಧರ್ಮ ಮಾತ್ರ ಮರಳಿ ಯತ್ನವ ಮಾಡು ಎಂಬಂತೆ ಪ್ರಯತ್ನ ಮಾಡುತ್ತಲೇ ಇದ್ದ. ನಡುವೆ ಯಾರೊ ಹಾರಿಸಿಕೊಂಡು ಹೋಗಿದ್ದ ಏನೂ ನಡೆಯದಂತೆ ಸಹಜ ಸ್ಥಿತಿಯಲ್ಲಿದ್ದಳು ಪಿಂಸ್ನಿ ರಾಧ. ಆದರೆ

ಅವಳ ಹಿಂದೆ ನಾಯಿ ಬೆನ್ನತ್ತಿದ್ದಂತೆ ಬೆನ್ನತ್ತಿದ್ದ ಹುಡುಗರ ಕಂಡು ಮಮ್ಮಲ ಮರುಗಿದ್ದ ಹುಲಿಯೂರ. ಹೆಣ್ಣಿನ ಮನಸ್ಸು, ಸೃಷ್ಟಿಕರ್ತ ಬ್ರಮ್ಮನಿಗೆ ಅರ್ಥವಾಗಿಲ್ಲ, ಇನ್ನೂ ನಾವು ಮನುಷ್ಯರು ನಮಗೇನು ಅರಿವಾದೀತು. ಸೃಷ್ಟಿಕರ್ತ ಮನಸ್ಸು ಮತ್ತು ಮೆದಳು ಎರಡನ್ನೂ ಗೌಪ್ಯವಾಗಿ ಕೊಟ್ಟಿದ್ದಾನೆ. ಮನಸ್ಸಿನೊಳಗಿನ ವ್ಯಾಕುಲತೆ ಮೆದಳಿನೊಳಗಿನ ತಾಕಲಾಟ ಯಾರಿಗೂ ತಿಳಿಯದು. ಅವಳ ಮನಸ್ಸಿನೊಳಗಿನ ಮನೋವ್ಯಸಾರ ಧರ್ಮಗೆ ಅರ್ಥವಾಗಿದ್ದೆ ಆಗಿದ್ದರೆ ಅವನ್ಯಾಕೆ ಒಳ್ಳೆ ಬೆದಿಗೆ ಬಂದ ನಾಯಿಯಂತೆ ಹುಚ್ಚ ಹಿಡಿಸಿಕೊಂಡು ವ್ಯರ್ಥ ತಿರುಗಾಡುತ್ತಿದ್ದ. ಅವಳ ಮನಸ್ಸಿನೊಳಗೆ ಅವನ ಬಗ್ಗೆ ಪ್ರೀತಿ, ಮೋಹ, ಆಕರ್ಷಣೆ ಇದ್ದಿದ್ದೆ ಆಗಿದ್ದರೆ ಅವಳು ಇಷ್ಟು ತಡ ಮಾಡುತ್ತಿರಲಿಲ್ಲಾ ಅವನಿಗೆ ಒಲಿಯುತ್ತಿದ್ದಳು. ಅಥವಾ ಅವನ ಜೊತೆಗೆ ಮುಕ್ತವಾಗಿ ಮಾತನಾಡುತ್ತಿದ್ದಳು. ಈ ಯಾವ ಪ್ರಕ್ರಿಯೆಗಳು ಏರ್ಪಡುತ್ತಲೇ ಇಲ್ಲಿ ಅವಳ ಹಿಂದೆ ಬಿದ್ದಿರುವ ನೂರಾರು ಹುಡುಗರಲ್ಲಿ ಇವನು ಒಬ್ಬವ ಎಂದುಕೊಂಡಿದ್ದಳು. ಹುಲಿಯೂರನಿಗೆ ಮಾತ್ರ ಶರೀಪರ ಹಾಡು ಈಗ ಸಂಪೂರ್ಣ ಅರ್ಥವಾಗಿತ್ತು. ಕಬ್ಬಕ್ಕಿ ಕೊಡುವ ಕಾಟದಿಂದ ಬೇಸತ್ತ ಹೆಣ್ಣು ಯಾರಿಗೆ ಒಲಿಯಬೇಕೆಂಬುದು ಜಡವಾಗಿತ್ತು. ಇದು ಸುಂದರವಾಗಿರುವ ಪ್ರತಿಯೊಬ್ಬ ಹುಡುಗಿಯ ನಡುವಳಿಕೆಯೇ ಸರಿ.

* * *

53. ಗಂಡಸುತನಕ್ಕೆ ಎಸೆದ ಸವಾಲು

ಹುಡುಗ ಹುಡುಗಿಯರು ದನಮೇಯಿಸುವಾಗ ಕಳೆ ಕೀಳುವಾಗ, ರಾಗಿ ಕೊಯ್ಯುವಾಗ ಪಂಥ ಕಟ್ಟುವುದು, ಮಾಮೂಲು. ಆದರೆ ಟಗರು ಮೇಯಿಸಲು ಹೋದ ಕಮರಿ, ಕಾಪಿ, ಡಮರುನಾಯ್ಕ ಆಟ ಆಡುವ ಭರಾಟೆಯಲ್ಲಿ ಮೈಮರತು ಕಟ್ಟಿದ ಪಂತ ಜೀವಘಾತಕವಾಗಿತ್ತು. ಡಮರು ತನ್ನ ಪಾಡಿಗೆ ತಾನು ತನ್ನೆರಡು ಕುರಿಗಳನ್ನ ಮೇಯಿಸುತ್ತಿದ್ದ. ಕಮರಿ, ಕಾಪಿ "ಲೇ ತಡಿಯೆ ಕಾಪಿ, ಆ ಮಿಂಡ್ರಿಮಗ ಡಮರುನ್ನ ಕಾಡಿಸೋಣ" ಅಂದಾಕಿನ "ಲೇ ಹುಡುಗ, ಬಾರಲೆ, ನಮ್ಮದ್ರಾಗ ಬಿಡು ನಿನ್ನ ಕುರಿಗಳನ್ನ" ಕರೆದಳು. "ಏಯ್, ಬೇಡ ನನ್ನವೂ ಬಾರಿ ಹಾಯ್ತವ, ಕೊಂಬು ಚೂಪದಾವ ಮತ್ತು ನಿಮ್ಮ ಕುರಿಗಳಿಗೇನಾದರು ಹಾದ್ವು ಅಂದ್ರ ನಾನು ಜವಾಬ್ದಾರಿ ಅಲ್ಲ ನೋಡಮತ್ತ". ಸವಾಸ ಬೇಡ ಅಂತ ಹೇಳಿದ. "ಐ ಮಿಂಡ್ರಿಕೆ, ನಿನ್ನವಷ್ಟೆ ಟಗರು ನಮ್ಮವು ಕುರಿ ಅಂದ್ಕೊಂಡಿಯಾ ಹೆಂಗೆ ಬಿಡಲ ನೋಡೆ ಬಿಡಾನ" ಕಮರಿ ಕೂಗಿದಳು. "ನೋಡ ಕಮರಿ ನಿಮ್ಮಪ್ಪಗ ಹೇಳಿದೆ, ನಿಮ್ಮಣ್ಣಗ ಹೇಳ್ತಿನಿ ಅಂದ್ರ ಬಾಯಾಗ ಮೆಟ್ಟಿಡ್ತಿನಿ ನೋಡ ಮತ್ತ. ನನ್ನ ಪಾಡಿಗ ನಾನದೀನಿ, ನೀನ ಮೈಮಾಲ ಬರಾಕ ಹತ್ತಿ, ಪಾಡಿರಲ್ಲ ಸುಮ್ನೆ ಹೋಗತ್ಲಗೆ." ಸಮಜಾಯಿಸಲು ನೋಡಿದ. "ಇಲ್ಲಪ್ಪ ದುರ್ಗವ್ವನ ಮೇಲೆ ಆಣೆ, ಬನ್ನಿ ಮಾಂಕಾಳಿ ಮೇಲೆ ಆಣೆ ತುಂಬಿನ ಚೌಡವ್ವನ ಮೇಲೆ ಆಣೆ, ಬಿಡು ಹೇಳ್ತಿನಿ" ಅಂದಾಕಿನ ಬಿಟ್ಟುಬಿಡದೆ ಕಾಡತೊಡಗಿದಳು. "ಹೌದು ನೀಯಾಕಿಂಗೆ, ನಮ್ಮ ಸೇವಾಭಾಯನಿಗೆ ಮರಿಯಮ್ಮ ಗಂಟು ಬಿದಿದ್ಲಂತೆ ಹಂಗೆ ನನಗ್ಯಾಕ ಗಂಟು ಬಿದ್ದಿ ಅಂತ ತಿಳಿವಲ್ಲದು, ಇಷ್ಟು ಒತ್ತಡ ಹೇರಾಕ ಹತ್ತಿ ಅಂದ್ರ ಏನೋ ಇರಾಕ ಬೇಕು, ಏನು ಹೇಳು" ಡಮರು ಪರಿಪರಿಯಿಂದ ಕೇಳಿದ. "ಯಾಕು ಇಲ್ಲಪ್ಪ, ಸುಮ್ಮನೆ ನಾವಿಬ್ಬರೆ ಇದ್ದಿವಲ್ಲ, ನಿನಂದ್ರೆ ಗಂಡು ಹುಡುಗ ನಮ್ಮ ಜೊತೆಗೆ ಇದ್ರೆ ಹೆದರಿಕೆ ಆಗೋದಿಲ್ಲ ಅದಕ್ಕೆ ಹೇಳಿದೆ" ಕಮರಿ ಒಳಗಿನ ಮರ್ಮವನ್ನ ಬಿಟ್ಟುಕೊಡಲಿಲ್ಲ. ವಯಸ್ಸಿನಲ್ಲಿ ಒಂದೆರಡು ವರ್ಷ ದೊಡ್ಡವಳಿರಬಹುದಾದ ಕಮರಿ ಅಕಿಗಿಂತ ಸಣ್ಣವಳಾದ ರಾಮನ ಮಗಳು

ಕಾಪಿ ಹೊತ್ತಾರೆ ಕುರಿಮರಿಗಳನ್ನ ಹೊಡೆದುಕೊಂಡು ಗುಳ್ಳೆಪ್ಪನ ಹೊಲದಾಗ ಮೇಯಿಸುತ್ತಿದ್ದರು. ಶನಿವಾರ ದುರ್ಗಪುರದ ಕುರಿಸಂತೆಯಲ್ಲಿ ಮಾರಬೇಕಂತ ಸಾಕಿದ್ದ ಮರಿಗಳು ಮೇದು ದೊಡ್ಡವಾಗಬೇಕು. ತಾಂಡದಲ್ಲಿ ಲಮಾಣಿಗಳು, ಊರ ಮನಿಯವರು, ಸಾಬರು ಪ್ರತಿಯೊಬ್ಬರು ಕಾರ್ತಿಕ ಮಾಸದ ಮುಂದೆ ಹಿಂಗಾರಿನ ಆರಂಭಕ್ಕೆ ಹುಳ್ಳಿ, ತೊಗರಿ ಹೊಟ್ಟು, ಹಸಿಹುಲ್ಲು ಯಥೇಚ್ಛವಾಗಿ ಸಿಗುತ್ತಿತ್ತು. ಅಲ್ಲಲ್ಲೆ ನೀರಾವರಿ ಮಾಡಿದವರು ಬೇಸಿಗೆ ಶೇಂಗ ಹಾಕಿರುತ್ತಿದ್ದರಿಂದ ಮೇಲಿನ ತಪ್ಲ ತಿಂದರೆ ಯಾರು ಏನು ಹೇಳುತ್ತಿರಲಿಲ್ಲ ಹಂಗಾಗಿ ಸಾವಿರ, ಡೀಡ್‌ಸಾವಿರಕ್ಕೊಂದರಂತೆ ಮರಿಗಳನ್ನ ತಂದು ಸಾಬರ ರಂಜಾನ್‌ನ ಆಸುಪಾಸಿನವರೆಗೆ ಸಾಕಿದರೆ ಏನಿಲ್ಲಾಂದ್ರ ಹತ್ತು ಹದಿನೈದು ಸಾವಿರಕ್ಕೆ ಮಾರಾಟ ಆಗ್ತಿತ್ತು ಮರಿ. ಆರು ತಿಂಗಳಲ್ಲಿ ಐದಾರು ಸಾವಿರದ ಮುನಾಪ ಆಗ್ತಿದ್ದರಿಂದ ಮಂದಿ ಎಲ್ಲಾ ಈ ಕೆಲಸಕ್ಕೆ ತೊಡಗಿದ್ದರು. ಶೇಂಗಾ ಕೀಳಾಕ, ಹರಿಯಾಕ ಹೋದಾಗ ಕುರಿಗಳು ಹಿಂದೆ ಹೋಗುತ್ತಿದ್ದವು. ಸೊಪ್ಪು ಸೆದಿ ಹೊಟ್ಟೆ ತುಂಬ ತಿನ್ನುತ್ತಿದ್ದವು. ಈ ಕಡಿಗೆ ಕೂಲಿಗೆ ಕೂಲಿನು ಸಿಗುತ್ತಿತ್ತು. ನಾನು ನೀನು ಅನ್ನೋದ್ರಾಗ ಆರು ತಿಂಗಳು ಕಳೆದುಹೋಗುತ್ತಿದ್ದವು. ಹಂಗಾಗಿ ಮಂದಿ ಎಲ್ಲಾ ಲಾಭಕ್ಕಾಗಿ ಬಡಿದಾಡುತ್ತಿದ್ದರು. ಹಾಗಾಗಿ ಡಮರುನ ತಾಯಿ ಮಂಗಲಿಬಾಯಿ ಗಂಡನಿಗೆ ಗೊತ್ತಿಲ್ಲದೆ ಎರಡು ಮರಿಗಳನ್ನ ತಂದಿದ್ದಳು. "ಅಲ್ಲೆ ಹಡಬಿ, ಸರಾಯಿಗ ಹತ್ತು ರೂಪಾಯಿ ಇಲ್ಲ ಅಂದಾಕಿ ಮೂರ್‍ನಾಕ ಸಾವಿರ ಕೊಟ್ಟ ಮರಿ ತಂದಿಯಲ್ಲ ಈಗ ಯಾವ ಮಿಂಡಕೊಟ್ಟ" ಅಂತ ಕೆಂಡಮಂಡಲವಾಗಿದ್ದ. "ಏಯ್ ಬೇವರ್ಸಿ, ನಿನ್ನ ಇದ್ದ ಬದ್ದೋರ ಮಿಂಡ ಕೊಡಿಸ್ಯಾನ. ಸರಿಪಾಲಿಗೆ ಯಾರೊ ಪುಣ್ಯಾತ್ಮ ಕೊಡಿಸಿದಾನ, ಅವನ್ನು ನುಂಗಿ ನೀರು ಕುಡಿಯೊ ಇರಾಧೆ ಇಟ್ಕೊಬೇಡ, ಹಂಗೇನಾರ ಆದರೆ ಅಂಡ ಹರಿತಾನ ನೋಡು" ಧಮಕಿ ಹಾಕಿದಳು. ಕಡದ ಹತ್ರ ತುರಿಸಿಕೊಳ್ಳದಂಗೆ ಅಕಿಗಂಡ ರಾಮಗ ಮಾಯವಾಗಿದ್ದ. ಅಕಿ ಕೂಲಿಗೆ ಹೋಗದ ದಿನಗಳಂದು ಸಾಲಿ ಬಿಡಸಿ ಡಮರನನ್ನ ಮೇಯಿಸೋದಕ್ಕೆ ಕಳುಹಿಸುತ್ತಿದ್ದಳು. ಆದರೆ ಕಮರಿ ಮತ್ತು ಕಾಪಿ ಅಂತ ಹೆಣ್ಣುಗಳು ಅವನಿಗೆ ಗಂಟು ಬಿಳ್ತಾರಂತ ಅಕಿ ಕನಸು ಮನಸ್ಸಿನಲ್ಲೂ ಯೋಚಿಸಿರಲಿಲ್ಲಾ. "ಲೇ ಬಾರೊ ಡಮರು ಆಲಿಕಲ್ಲು ಆಡಾನು ಬಾ" ಅಂದಳು ಕಾಪಿ. "ಏಯ್ ಕಾಪಿ ಮುಚ್ಚೆಬಾಯಿ ಅಲ್ವೆ ಅವ ಹುಡುಗ, ಆಲೆಕಲ್ಲು ಹೆಂಗ ಆಡ್ತಾನ? ಆಲೆಕಲ್ಲು ಬರಿ ಹುಡುಗಿಯರಷ್ಟೆ ಆಡಬೇಕು" ಕಮರಿ ಪ್ರಶ್ನೆ ಮಾಡಿದಳು. "ಯಾಕೆ ಆಡಬಾರದು, ಬಾ ನಿನಗಿಂತ ಚೆನ್ನಾಗಿ ಆಡ್ತಿನಿ, ಹೆಣ್ಣು ಹುಡುಗಿಯರೆ ಆಡಬೇಕು ಅನ್ನೊ ನಿಯಮ ಏನಾದರು ಇದೆಯಾ? ಬೇಕಾದವರು ಆಡಬಹುದು ಹೆಣ್ಣಿಗೆ, ಗಂಡಿಗೆ ಅಂತ ಏನು ಇಲ್ಲ ನಡಿ" ಗದರಿದ. "ನಾನು ಒಪ್ಪಾಕಿಲ್ಲ, ನೀನು ಏನಾರು ಗಂಡಸರು ಮಾಡುವ ಕೆಲಸ ಮಾಡಿ ತೋರಿಸು ಹಂಗಾರ ನೀ ಗಂಡಸು ಅಂತ ಒಪ್ಕೊಂತಿನಿ" ಕಮರಿ ಮುಲಾಜಿಲ್ಲದೆ ಅವನ ಮರ್ಮಾಂಗಘಾತಗೊಳಿಸಿದಳು. "ಏಯ್, ನೀ ಹಂಗಂದೆಯಲ್ಲ,

ನನ್ನ ಗಂಡಸತನಕ್ಕೆ ಸವಾಲು ಹಾಕ್ತಿಯ, ಹೇಳೆ ಏನು ಮಾಡಬೇಕು? ಹೇಳು? ಹೂಂ ಗಡಾನ ಹೇಳು. ನೀ ಹೇಳಿದ ಕೆಲಸ ಮಾಡಲಿಲ್ಲಾಂತ ಇಟ್ಕೊ ನಾನು ಗಂಡಸಲ್ಲ ಅಂತ ಒಪ್ಕೊಂತೀನಿ. ನೀನು ಬೇಕಾದರೆ ತಾಂಡದಲ್ಲಿ ಎಲ್ಲರ ಮುಂದೆ ಏನುಬೇಕಾದ್ದ ಕರಿಬಹುದು" ಡಮರು, ಹುಂಬನೊ, ಶಾಣ್ಯಾನೊ ಅಕಿ ಹೇಳಿದಕ್ಕೆ ಹೂಂ ಅನ್ನತೊಡಗಿದ್ದ. ನಗೆ ಹೊಗೆಯಾದೀತು ಅಂತ ಅನಿಸಲೇ ಇಲ್ಲ. ಕಮರಿ ಮನಸ್ಸಲಿದಿದ್ದನ್ನ ಬೊಗಳಿದಳು "ನೋಡಲೆ ಡಮರು, ನೀ ನಿಮ್ಮಪ್ಪಗ ಹುಟ್ಟಿದ ಗಂಡು ಮಗನೇ ಆಗಿದ್ರೆ ಈ ಮರ ಹತ್ತಿ ತುದಿ ಮುಟ್ಟು ಹಂಗಾರ ನಾನಿನ್ನು ಗಂಡಸು ಅಂತ ಒಪ್ಪಿಕೊಳ್ತಿನಿ" ಫರ್ಮಾನು ಹೊರಡಿಸಿದಂತೆ ಅಂದಳು. ಕಾಪಿ, "ಲೇ ಬೇಡ ಕಣೊ ಮರ ಹಳೇದ್ಯೆ ಐತಿ, ನನ್ನ ಮಾತು ಕೇಳು, ನೋಡು ಆ ಬೋಸುಡಿಗೆ ಹುಚ್ಚ ಹಿಡದ್ಯೆತಿ, ಲೇ ಅಕಿ ಗಂಡಸು ಅಲ್ಲ ಅಂದ್ರೆ ಹುಡುಗಿ ಆಗೋದಿಲ್ಲ, ನೀ ಗಂಡಸೆ, ಬೇಡ ನೋಡು ಹತ್ತಬೇಡ ನಾನು ಜೋರಾಗಿ ಕೂಗಿ ದೊಡ್ಡವರನ್ನ ಕರದು ಇಬ್ಬರಿಗೂ ಶಾಸ್ತಿ ಮಾಡಿಸ್ತಿನಿ ನೋಡು ಡಮರು ಒಳ್ಳೆ ಮಾತಲ್ಲಿ ಹೇಳ್ತಿದ್ದೀನಿ. ನೀ ಸಣ್ಣವನು." ಗೋಗರದಳು ಕಾಪಿ. "ಎಯ್, ಸುಮ್ನ ಬಾಯಿ ಮುಚ್ಚು. ಅದೇನು ಆಕೈತಿ ನೊಡಮ", ಕಮರಿ ಹಠ ಮಾಡತೊಡಗಿದಳು. ಕಾಫಿ "ಬೇಡ ಹೇಳೆ, ಅವನಿಗೇನಾರು ಹೆಚ್ಚು ಕಮ್ಮಿಯಾದ್ರೆ ನಮ್ಮ ಮನಿಯೊಳಗೆ ನಾವು ಏಟು ತಿನ್ನಬೇಕು. ನಿನಗ ದಮ್ಮಯ್ಯಾ ಅಂತೀನಿ, ಜಾಣಿ ಹೇಳೆ ಆ ಬೇವರ್ಸಿ ಒಂಟಿ ಹಿಡ್ತಿದವನು. ನೀ ಗಲಾಗಲ ಮಾಡಿದ್ರ ಇಳಿತಾನ ಇಲ್ಲಂದ್ರ ಹತ್ತೆ ಬಿಡ್ತಾನ. ಯಾಕೆ ಹಿಂಗೆ ಇಲ್ಲದ ಮುಸಿಬತನ್ನ ಕೊಂಡ್ಕೊಳ್ಯಾಕ ಹತ್ತಿ ಕರಿ" ಗಲಾಗಲಾ ಅಂದಳು ಪ್ರಯೋಜನ ಆಗಲಿಲ್ಲಾ. "ನಿನ್ನ ಹಣೆಬರ, ಅವನ ಹಣೆಬರ" ಹೋಗ್ರೆ ನಾನು ಕುರಿ ಹೊಡ್ಕೊಂಡು ಪಕ್ಕದ ಹೊಲಕ್ಕ ಹೋಗ್ತಿನಿ" ಅಂದಾಕಿನ ತನ್ನ ಮರಿಗಳ ಹುಡುಕಾಟದಲ್ಲಿ ಓಡಿದಳು. "ಏಯ್ ಕಾಪಿ ಜೀವನದಾಗ ಇಷ್ಟು ಹೆದರಬಾರದು. ನಾನು ಗಂಡಸು ಅನ್ನೋದು ಕಮರಿಗೆ ಅನುಮಾನ ಬಂದಂಗ್ಯೆತೆ ತಡಿ ತೋರಿಸಿಬಿಡ್ತಿನಿ. ಗಾಬರಿ ಆಗಬೇಡ, ಅಂತಹದ್ದೇನು ಆಗಲ್ಲ ಸಾವಂತು ಮದಲೆ ಬರಲ್ಲ." ಅಂದವನೆ ಸರಸರ ಮರ ಹತ್ತ ತೊಡಗಿದ. "ಅಲ್ಲಲೆ ಹೆಂಗ ವಿಚಾರ ಮಾಡಿ ಮರದ ಕೊಂಬಿ ಮೇಲೆ ಕುಂತಕಾಗಿನ ಚಟ್ ಅಂತ ಬೀಳತೈತಿ. ನೀನು ಮನುಷ್ಯ ಹತ್ತಿದರ ಬೀಳಲ್ಲಿ ಕೆಳಗೆ? ನಾ ಒಲ್ಲೆ ನಾಳೆ ಹೆಚ್ಚು ಕಮ್ಮಿ ಯಾದ್ರ ಹೊಣೆ ಯಾರು? ನಡಿ ಅತ್ಲಗೆ, ನಿಮಗೆ ಜೀವ ಅಂದ್ರ ನಗಚಾಟಿ ಅನ್ನಾಕಹತ್ಯೆತಿ." ಕುರಿ ಹಿಡಿದು ಪಾರಾಗಲು ನೋಡುತ್ತಿದ್ದಂಗೆ. ಡಮರು ಸರಸರ ಹತ್ತಿ ರಂಬೆ ಹಿಡಿದು ಜೋತುಬಿದ್ದ. "ನೋಡೆ ಗಂಡಸು ನಾನು ಕಾಪಿ, ಕಮರಿ ಒಮ್ಮೆ ನೋಡ್ರಿ" ಜೋಕಾಲಿ ಆಡಿದ ಎರಡು ರೆಂಬೆ ಹಿಡಿದು. ಅವನ ಪುಣ್ಯ ನೆಟ್ಟಿಗಿತ್ತೊ ಏನೊ ದೇವರಿಗೆ ಗೊತ್ತು ರೆಂಬೆ ಮುರಿಲಿಲ್ಲ. ಜೋಕಾಲಿ ಆಡಿ ಕೆಳಗಿಳಿದ. ಕಮರಿಗೆ ಅವಮಾನ ಆದಂತಾಯಿತು. ಈ ಮಗನಿಗೆ ಒಂಚೂರು ಏನೂ ಆಗಲಿಲ್ಲಾ ಅಲ್ಲ, ಮನಸ್ಸಿನೊಳಗೆ ಅಂದುಕೊಂಡು ಕೆಳಗೆ ಇಳಿಲಿ ತಡಿ ಅಂತ

ಕಾಯ ತೊಡಗಿದಳು. "ನೀವು ದೊಡ್ಡೊರಪ್ಪೊ, ನಾ ಹೊಂಟೆ" ಅಂತ ಕಾಪಿ ಮರಿ ಹೊಡ್ಕೊಂಡು ಬೇರೆ ಹೋದಳು. "ಲೇ ನಿಲ್ಲೆ, ಏನು ಆಗಲಿಲ್ಲ" ಕಮರಿ ಕೂಗಿದಳು. "ಅಲ್ಲ ಏನಾರ ಆಗಲೇ ಬೇಕಿತ್ತೆನೆ ರಂಡಿ. ಆ ಊರಮುಂದ್ಲ ಹನುಮಪ್ಪ ಕಾಪಾಡಿದಾನ. ಮುಚ್ಕೊಂಡು ಮರಿ ಮೇಯಿಸು, ನಾ ಒಲ್ಲೆ ನನತಾಯಿ ನಿನ್ನ ಹಿಂದ ಮತ್ಯಾವಾಗಲೂ ಬರೋದಿಲ್ಲ ನಡಿ" ಅಂದಾಕಿನ ತಿರುಗಿ ನೋಡದಂಗೆ ಹೊರಟಳು. ಅವಳ ಇದಿನೊ, ಇಲ್ಲ ಅವನ ಇದಿಸರಿಗೆ ಇರಲಿಲ್ಲವೊ "ಲೇ ಡಮರು ಕಡೆ ಸಲ ಮರ ಹತ್ತಿ ಕೊನೆ ಕೊಂಬೆ ಮುಟ್ಟಪ್ಪ, ನೀ ಗಂಡಸು ಅಂತ ತಿಳ್ಕೊತೀನಿ, ಇಲ್ಲಾಂದ್ರೆ" ಅನುಮಾನದಿಂದಲೆ ಪೂರ್ಣಗೊಳಿಸಿದಳು. "ಒಂದು ಸಲ ಯಾಕ್ ನೂರ ಸಲ ಹತ್ತಿನಿ, ನೋಡ್ತಿರು" ಅಂದವನೆ ಹಿಂದೆ ಮುಂದೆ ಆಲೋಚನೆ ಮಾಡದೆ ಹುಂಬನಂತೆ ಸರಸರ ಮೇಲೆ ಹತ್ತಿ "ಲೇ ಕಮರಿ ನೋಡ್ತಾ ಇರು" ಅಂತೇಳಿ ಮೊದಲಿನಂತೆ ಜೋಕಾಲಿ ಆಡಾಕ ಎರಡೂ ಕೈಗಳಿಂದ ಎರಡು ಕೊನೆ ಟೊಂಗಿ ಹಿಡಿಯೋದಕ್ಕೂ ಅದು ಮುರಿಯುವುದಕ್ಕೂ ಮೇಲಿಂದ ದೂಪ್ಪಂತ ಹೆಣಬಿದಂಗಾತು. ಕಮರಿ ಅವನು ಏನಾದ ಅಂತ ತಿರುಗಿಯೂ ನೋಡದೆ ಓಡಿದ್ದಳು. ಗಂಟೆಯವರೆಗೆ ಮೂರ್ಛೆ ಹೋಗಿದ್ದ ಡಮರುನ ಬಲಗೈ ಸಂಪೂರ್ಣವಾಗಿ ಮುರಿದು ಎಲಬುಗಳು ಕಾಣತೊಡಗಿದವು ಯಾರೊ ಶಬ್ಧ ಕೇಳಿ ಓಡಿಬಂದಿದ್ದರು, ಡಮರುನ ಸ್ಥಿತಿ ನೋಡಿ, ನೀರು ಹಾಕಿ ಬದುಕಿರೋದನ್ನ ಖಾತ್ರಿಪಡಿಸಿ, "ಅಲ್ಲಲೆ ಈ ವಯಸ್ಸಿಗೆ ಸಾಯೊ ಯೋಚನೆ ಹೆಂಗ ಬಂತು" ನೀರು ಕೊಟ್ಟ ಬಸಣ್ಣ ಕೇಳಿದ. "ಎಯ್ ಬಸಣ್ಣ, ನಾಯಾಕ ಸಾಯಲಿ, ಆ ಕಮರಿ ಅದಾಳಲ್ಲ ನನ್ನ ಗಂಡಸುತನಕ್ಕೆ ಸವಾಲು ಹಾಕಿ ಗಂಡಸಾಗಿದ್ರೆ ಹತ್ತಲೆ ಅಂದ್ಲು ನಾನು ಗಂಡಸುತನ ತೋರಿಸುವುದಕ್ಕೆ ಹತ್ತಿಬಿಟ್ಟೆ" ಅಂತೇಳೀ ಹುಂಬನಂತೆ ಹ್ಯಾಪ್ ಮಾರಿ ಹಾಕ್ಕೊಂಡ.

* * *

54. ಸೋರುತಿಹುದು ಮನೆಯ ಮಾಳಿಗಿ ಅಜ್ಞಾನದಿಂದ

ತಾಂಡದಾಗ ಮಂದಿ ಹಗಲು ರಾತ್ರಿ ಒಂದ ಮಾಡಿ ದುಡಿಯುತ್ತಿದ್ದರೂ ಅವರ ಬೆಳೆಗೆ ಸರಿಯಾದ ಬೆಲೆ ಸಿಗದೆ ದಲ್ಲಾಳಿ ಅಂಗಡಿಯ ದಲ್ಲಾಳಿಗಳು ಮಾರಾಟ ಮಾಡುವಾಗ ಮಧ್ಯವರ್ತಿಗಳು ಬಂದು ಶಾಂಪಲ್ ನೋಡಿ, "ಭೇ ಮಾಲು ಹಸಿ ಐತೆ, ಭೇ ಮಾಲು ಅದಿದೆ, ಇದಿದೆ ಅಂತ" ಕಣಿ ಮಾಡಿ ತನ್ನ ಅನುಕೂಲಕ್ಕೆ ತಕ್ಕಂತೆ ರೇಟು ಮಾಡುತ್ತಿದ್ದ. ತಾಂಡದಲ್ಲಿರುವವರು ಮುಂಗಾರು ಆರಂಭ ಆಯ್ತು ಅಂದ ದಿನದಿಂದ ಹಿಡಿದು, ಕರಿಶಂಕರಿ ಅಂಗಡಿಯ ಶಾಣಪ್ಪ, ಅಲ್ಲಾಕಿ ದುವಾ ಅಂಗಡಿಯ ಹಮ್ಮಿರಸಾಬಿ, ಬನಶಂಕರಿ ಅಂಗಡಿಯ ನಂದೀಶಪ್ಪ, ಅರ್ಜುನಪ್ಪ, ಡೇವಿಡ್ ಸಾಹುಕಾರ ಅಂತ ತಮ್ಮವೆ ಕೆಲವು ಖಾಯಂ ಅಂಗಡಿಗಳನ್ನು ನೋಡಿಕೊಂಡಿದ್ದರು. ಮೂಢರಿಗೆ ಗ್ರಾಮೀಣ ಬ್ಯಾಂಕ್, ಸೊಸೈಟಿ, ಗೊಬ್ಬರ, ಬೀಜ, ಸಾಲದ ರೂಪದಲ್ಲಿ ಕೊಡುತ್ತವೆ ಅನ್ನುವ ಸ್ವಲ್ಪವೂ ಜ್ಞಾನವಿರಲಿಲ್ಲಾ. ಅದರಲ್ಲೆ ಕೆಲವರು ತಿಳುವಳಿಕೆದಾರರು, ಸೊಸೈಟಿಗೆ ಹೋದರೆ, ಮೇಲ್ಜಾತಿಯವರ ಹಿಡಿತದಲ್ಲಿದ್ದ ಸೊಸೈಟಿ "ಯಾರೊ ಭದ್ರಾನಾಯ್ಕನ ತಾಂಡದ ಲಮಾಣಿ ತೊಪುನಾಯ್ಕ ಈ ಕಡೆ ಬಂದಾನಲ್ಲ. ಸಾಲ ಕೇಳೋದಕ್ಕೆನಾದರು ಬಂದನೆ" ಅಂತೇಳಿ ಗುಮಾಸ್ತ ಕಮ್ ಪಿವನ್ ಆಗಿರೋ ಲಿಂಗಾಯತರ ಬಸಣ್ಣಿ ಗುಮಾನಿಯಿಂದ ಮಾರಿ ತಿರುವಿ ಕೂತ್ತಿದ್ದ. "ಬಸಣ್ಣ ಹ್ವಾದ ವರ್ಷ ಹೇಳಿದ್ದೆ ಮುಂದಿನ ವರ್ಷ ಬಾ ಅಂತಂದು. ಈ ವರ್ಷನಾರು ನಾಕ ಪಾಕೀಟು ಜ್ವಾಳ, ಏಂಟು ಕ್ವಿಂಟಲ್ ಗೊಬ್ಬರನಾರು ಕೊಡಪ್ಪ, ಕಿವಿಮಟ ಹಲ್ಲು ಗಿಂಜಿದ್ದ." ಹರಾಮ್‌ಕೋರ್ ಬಸಣ್ಣಿ, ಅವನಿಗೆ ಏನು ಸುಳ್ಳು ಪೋಣಿಸಬೇಕು ಅನ್ನೋದನ್ನ ತಲಿಯೊಳಗೆ ಆಲೋಚನೆ ಮಾಡಿ ಇಟ್ಕೊಂಡಿದ್ದ. "ಹಿಂದಿನ ವರ್ಷ ಏನೊ ಬಾ ಅಂದಿದ್ದೆ ಆದ್ರ ಒನ್ನೇದು ನಿಂದು ಷೇರಿಲ್ಲ ನಮ್ಮ ಸೊಸೈಟಿಯಲ್ಲಿ, ಎರಡನೆಯದು ಸರ್ಕಾರದವರು ಹೋದ ವರ್ಷದ ಪಟ್ಟಿಯನ್ನೆ ನೋಡಿ ಗೊಬ್ಬರ

ಬೀಜ ಕಳುಹಿಸಿದ್ದಾರೆ. ಹೆಚ್ಚು ಕಳಿಸಿಲ್ಲ ಕಮ್ಮಿನು ಕಳುಹಿಸಿಲ್ಲ. ಏನ ಮಾಡೋದು? ಆದರು ಎಲ್ಲಾ ಮುಗಿದ ಮೇಲೆ ಅಧ್ಯಕ್ಷರನ್ನು ಒಮ್ಮೆ ಬೇಕಾದರೆ ಕಾಣು, ಯಾರಾದರೂ ಪಾರ್ಟಿ ತಗೊಂಡು ಹೋಗದೆ ಹಾಗೆ ಉಳಿದಿರೆ ಕೊಡಲೂಬಹುದು." ಇಡೀ ಜಗತ್ತನ್ನೆ ಗಿರಿಗಿಟ್ಲೆಯಂತೆ ತಿರುಗಿಸಿದ್ದ. ಮೊದಲನೇಯದಕ್ಕೆ ಪ್ರತಿರೋಧಿಸಿ "ಏನ್ ಬಸಣ್ಣ ಹಿಂಗಂತಿಯಾ, ನಾನು ಷೇರು ತಗೊಂಡು ಬಹಳ ವರ್ಷಗಳಾದವು. ಯಾವಾಗಲೂ ಗೊಬ್ಬರ ಬೀಜ ಸಿಕ್ಕೆ ಇಲ್ಲ, ಏನು ಬೇಕಂತಲೆ ಮಾಡ್ತಿರೋ, ಇಲ್ಲ ಈ ಲಮಾಣಿಗಳಿಗೇನು ತಿಳಿಯೋದಿಲ್ಲಂತ ಅಂದ್ಕೊಂಡಿರೊ ದೇವರಿಗೆ ಗೊತ್ತು" ತೊಪುನಾಯ್ಕ ಸರಿಯಾಗೆ ಹೇಳಿ ವಾಪಾಸು ಬಂದಿದ್ದ. ಆದರೆ ಸೊಸೈಟಿಯವರು ಸುಧಾರಿಸಬೇಕಲ್ಲ, ಇನ್ನೂ ಗ್ರಾಮೀಣ ಬ್ಯಾಂಕಿನಲ್ಲಿ ಹೊಸದಾಗಿ ಬಂದ ಮ್ಯಾನೇಜರ್ ಕಾಳಪ್ಪನವರ್ ಇನ್ನೂ ವಿಚಿತ್ರ ಮನುಷ್ಯ. "ನೋಡ್ರಪ್ಪ ಎಷ್ಟ ಮಂದಿ ಸಾಲ ತಗೊಂಡಿರಿ, ಯಾರು ಕಟ್ಟಿಲ್ಲ, ಯಾಕ ಕಟ್ಟಿಲ್ಲ, ಕಾರಣ ಹೇಳಿ ಮುಂದಿಂದು ನಾನು ಆಲೋಚನೆ ಮಾಡ್ತಿನಿ" ಅಂದಿದ್ದ. ಅಷ್ಟೆ ಬೇಕಾಗಿತ್ತು ಭಗತ್‌ಬಂಡಾನಾಯ್ಕ, ಸಣ್ಣಮನಿ ಗಣಪನಾಯ್ಕ, ಲಚ್ಯಾ, ಮಂಜ, ಶಂಬು, ಶಂಕ್ರಿ ಬಗಲಾಗ ಚೀಲ ಹಿಡಿದು ಹೊರಟೆಬಿಟ್ಟರು. ಮ್ಯಾನೇಜರ್ ಕಾಳಪ್ಪನವರ್ ಒಂದೆರಡು ಹಳ್ಳಿ ಸುತ್ತಾಡಿ ತೇಗೂರು ತಲುಪುವ ಮುನ್ನ ಕ್ಯಾಷಿಯರ್ ಕಲ್ಲಪ್ಪಗೆ, "ಕಲ್ಲಪ್ಪಣ್ಣ ಮ್ಯಾನೇಜರ್ ಬರ್ಲಿಲ್ವಾ," ಭಗತ್ ಬಂಡಾ ಕೇಳಿದ "ಯಾಕೊ ಭಗತ್ ರೊಕ್ಕ ಕಟ್ಟಾಕ ಬಂದಿ ಏನು" ಕಲಪ್ಪ ಖುಷಿಯಿಂದ ಕೇಳಿದ. ಎಲ್ಲಿ ಕಟ್ತಿಯಾ ಮರಾಯ, ಮಳಿ ಅದ್ವಾನದ ಕಾಲದಾಗ, ಎಲ್ಲಾ ಎಡವಟ್ಟ ಆಗಿದೆ. ದಲ್ಲಾಳಿ ಅಂಗಡಿಯವರದೊಂದು ಕಾಟ. ಹೋದ ಸಲದ್ದೆ ತೀರಿಲ್ಲ ಏನೊ ಹರ್ತೀಟಿ ಆಗಿರ್ತಾವ. ಯಾವುದೂ ತುಂಬುವುದಕ್ಕೆ ಆಗುವುದಿಲ್ಲ, ಏನು ಮಾಡುವುದು. ಇರೊ ನಾಕು ಎಕ್ಕರೆ ಜಮೀನು ಅದೇ ಸಂಪ್ರದಾಯಿಕ ಬೆಳೆ ಹೈಬ್ರಿಡ್ ಜೋಳ, ತೊಗರಿ ಅಕ್ಕಡಿ, ಬಹಳ ಅಂದರೆ ಅಲಸಂದಿ, ಸೆಣಬು, ಮಡಿಕೆ, ಅಕ್ಕಡಿನಡುವೆ ಅವರೆಕಾಳ ನಾಕ್ಕೈದು ಬಳ್ಳಿ, ಜೋಳ ಕೊಯ್ದುಕೊಂಡ ಮೇಲೆ ಇವೆಲ್ಲವು ಬೆಳೆಯುತ್ತಿದ್ದವು ಅಷ್ಟೆ. ಅದನ್ನೇ ಮಾರಿ ಕುಡಿಯೋದಕ್ಕೆ, ಸಂತೆ ಖರ್ಚಿಗೆ ಮಾಂಸ, ಮೀನು, ಅಡ್ಡ ಖರ್ಚು, ಎಲ್ಲಿಂದ ಆದೀತು. ಮನೆಗೆ ಒಬ್ಬರು, ಇಬ್ಬರು ಕೂಲಿ ಕೆಲಸ ಮಾಡುವುದು ರೂಢಿಯಲ್ಲಿತ್ತು. ಬಾಡಿಗೆ ಗಳೆಗೆ ಹೋಗಿ ದುಡಿದರು. ಹಬ್ಬ, ಹರಿದಿನ ಬದುಕು ದುಸ್ಥರವಾಗಿತ್ತು. ತಾಂಡದಲ್ಲಿ ಸ್ಥಿತಿವಂತ ಅಂದ್ರೆ ತೊಪುನಾಯ್ಕನೆ. ಆದರೆ ಆರಂಭದ ದಿನಗಳಲ್ಲಿ ಅವನ ಪರಿಸ್ಥಿತಿಯೂ ಗಂಭೀರವಾಗಿತ್ತು. ತಾನೆ ಬೆಳೆದ ಕಾಳು ಹನ್ನೆರಡು ತಿಂಗಳ ಕಾಲ ಊಟ ಮಾಡಲು ಇಲ್ಲದಾಗಿತ್ತು. ಸರಿಯಾದ ಜ್ಞಾನವಿಲ್ಲ. ಈ ವರ್ಷ ಬೆಳೆ ಭಾರಿ ಬೆಳೆದು ನಿಂತಿದೆ ಅಂತ ಅಂದಾಜು ಮಾಡಿ ನೂರು ಚೀಲ ಆಗಬಹುದು ಅಂದುಕೊಂಡರೆ ಐವತ್ತು, ಅರವತ್ತು ಚೀಲ ಆದರೆ ಯಾವ ರೈತ ತಾನೆ ಉದ್ಧಾರ ಆದಾನು? ತೊಪುನ ಮನೆಯಲ್ಲೂ ಕಷ್ಟ ತಪ್ಪಿರಲಿಲ್ಲಾ. ಇದ್ದ ನಲವತ್ತು ಎಕ್ಕರೆ ಜಮೀನಿನಲ್ಲಿ ಒಂದಿಷ್ಟು ಎಳ್ಳು ಮುಂಗಾರಿಗೆ ಬಿತ್ತುತ್ತಿದ್ದ. ಒಂದಿಷ್ಟು

ಹೆಸರು, ಮೂರು ತಿಂಗಳಲ್ಲಿ ಬಂದುಬಿಡುತ್ತಿದ್ದವು. ಎಳ್ಳು ಕಿತ್ತು ಹಿಂಗಾರಿಗೆ ಸಣ್ಣತ್ತಿ ಹಾಕುತ್ತಿದ್ದ. ಹೆಸರು ತಗದು ರಾಗಿ ಬಿತ್ತುತ್ತಿದ್ದ. ಮಳೆ ಹೆಚ್ಚಾದರೆ ಹೆಸರು, ಎಳ್ಳು ಎರಡು ಸರಿಯಾಗಿ ಫಲ ಕೊಡುತ್ತಿರಲಿಲ್ಲ. ಲಡ್ಡ್ ಮೋಡ ಮುಚ್ಕೊಂಡ್ರೆ ಎಳ್ಳ ಒಣಗಲ್ಲ, ಹೆಸರು ಒಣಗೊಲ್ಲ. ಎಳ್ಳು ಕಾಳು ಒಳಗೆ ಗೂಡು ಕಟ್ಟಿಕೊಂಡು ಬೂಸ್ಟ್ ಹಿಡಿದು ಹಾಳಾಗಿ ಹೊಕ್ಕಾವ. ಹೆಸರು ಬೂದುಬಣ್ಣಕ್ಕೆ ತಿರುಗಿದರೆ ತಿನ್ನಾಕ ಬರದೆ ಗೊಬ್ಬರ ಆಗುತ್ತಿತ್ತು. ರೈತನ ಪರಿಸ್ಥಿತಿ ಹೇಳಿಕೊಳ್ಳಾಕ ಆಗದಂತಹದ್ದು. ಬೆಳಿ ಬಂದ್ರೆ ರೇಟಿಲ್ಲ, ರೇಟಿದ್ದಾಗ ಬೆಳಿ ಬಂದಿರಲ್ಲಾ. ಯಾರಿಗೆ ಹೇಳಬೇಕು? ಯಾರು ಪರಿಹಾರ ಕೊಟ್ಟರು. ಸಾಲ ಕೊಟ್ಟ ದಲ್ಲಾಳಿ ಅಂಗಡಿಯವನು, ಅಸಲಿಗೆ ಬಡ್ಡಿ, ಚಕ್ರಬಡ್ಡಿ ಜಡದು ಒಂದಕ್ಕೆ ನೂರು ಮಾಡಿ ಮತ್ತೆ ಯಾವಾಗಲೂ ಉದ್ದಾರನೆ ಆಗಿರಬಾರದು ಹಾಗೆ ಹಿಂಡಿ ಹಿಪ್ಪೆ ಮಾಡಿಬಿಡುತ್ತಾನೆ. ಆದರೂ ಮಾನ ಮರ್ಯಾದೆಗೆ ಅಂಜುವ ರೈತ ಮೊದಲು ಅವನ ಸಾಲ ತೀರಿಸುತ್ತಾನೆ. ಮಲ್ಯ, ಮೋದಿ, ಅಂತಹವನಲ್ಲ. ತಗೊಂಡು ಓಡಿ ಹೋಗೋದಕ್ಕೆ ಅವನು ಭೂಮಿತಾಯಿಯನ್ನ ನಂಬಿ ನಿಯತ್ತಿಂದ ಕೆಲಸ ಮಾಡುತ್ತಿರುವವನು. ಆ ನಿಯತ್ತು ಕಾಪಾಡುತ್ತದೆ ಎಂದು ನಂಬಿರುವವನು. ಹೀಗಾಗಿ ಯಾರಿಗೂ ಮೋಸ ಮಾಡುವುದಿಲ್ಲ. ಅವನಿಗೆ ಬ್ಯಾಂಕಿನಲ್ಲಿ, ಸೊಸೈಟಿಯಲ್ಲಿ, ದಲ್ಲಾಳಿ ಅಂಗಡಿಯಲ್ಲಿ ಜನ ಮೋಸ ಮಾಡುತ್ತಲೇ ಇರ್ತಾರ. ಅವೆಲ್ಲವನ್ನು ಮೆಟ್ಟಿ ನಿಂತು ಅವನು ಯಾವತ್ತು ನೆಮ್ಮದಿಯ ನಿಟ್ಟುಸಿರು ಬಿಡುವುದೇ ಇಲ್ಲ, ಯಾಕಂದ್ರೆ ರೈತ ಬಡವ, ಅಜ್ಞಾನಿ, ತಿಳುವಳಿಕೆ ಶೂನ್ಯ, ಮಂದಿ ಹೇಳಿದರೂ ಕೇಳುವ ಗೋಜಿಗೆ ಹೋಗುವುದಿಲ್ಲ ತನಗೇನು ತಿಳಿಯುತ್ತೆ ಅದನ್ನೆ ಮಾಡುವುದು. ಪಕ್ಕದವನು ಜೋಳ ಬಿತ್ತಿದರೆ ಜೋಳ, ರಾಗಿ ಬಿತ್ತಿದರೆ ರಾಗಿ, ಹೀಗೆ ಬೇರೆಯವರ ಅನುಕರಣೆ ಮಾಡುವುದೇ ಅವನ ಜೀವನ. ಸಾವಯವ ಕೃಷಿ, ಫೂಕೊವೊಕೋನ ನೈಸರ್ಗಿಕ ಕೃಷಿ ಪದ್ಧತಿ, ಪಾಳೆಕರ್, ನಾರಾಯಣರೆಡ್ಡಿ, ಮುಂತಾದವರ ಲಾಭದಾಯಕ ಕೃಷಿ ವ್ಯವಸ್ಥೆ ಬಗ್ಗೆ ಹೇಳಿದರೆ ಹಾಂ ಇಲ್ಲ, ಹೂಂ ಇಲ್ಲ. ಹುಲಿಯೂರನಿಗೂ ಬಹಳ ವರ್ಷಗಳಿಂದೆ ಇದೆ ಕಾಡುತ್ತಿತ್ತು. ಕೈತುಂಬ ಜಮೀನು ಮನಿ ತುಂಬ ಮಂದಿ ಇದ್ದಾಗ್ಯೂ ಕೃಷಿಯಿಂದ ಬರುವ ಉತ್ಪನ್ನ, ಮಾರಾಟ ಹಣ ಅಷ್ಟಕಷ್ಟೆ. ತೊಪುನಾಯ್ಕ ಸಾಲ ಅಂದರೆ ಹಿಂಜರಿಕೆಯ ಮನುಷ್ಯ. ಆದರೆ ಅನಿವಾರ್ಯ. ಮನಿ ನಡಿಬೇಕಾದ್ರ ಸಾಲ ಮಾಡಲೇಬೇಕು. ಅದಕ್ಕೆ ಹುಲಿಯೂರ ಓದಾಕ ಹೋಗುವಾಗ ಯಾವತ್ತು ಮಜಾ ಮಾಡುವ ಬಗ್ಗೆ ಆಲೋಚನೆ ಮಾಡಲೇ ಇಲ್ಲ. ರೆವ, ಜೌಗಳೆ, ಲಕ್ಷ್ಮಣ, ಸಂಕ್ಯಾ, ಉದಯ ಹಾಸ್ಟಲ್ ಸರ್ಕಲ್‌ನಲ್ಲಿದ್ದ ನೇತ್ರಾ ಹೋಟೆಲಿಗೆ ಹಾಸ್ಟೇಲಿನಿಂದ ರೊಟ್ಟಿ, ಅನ್ನ ತಗೊಂಡು ಮಾಂಸದ ಸಾರಿಗೆ ಅಂತ ಹೋದರೆ ರೆವ, ಜೌಗಳೆ, ಲಕ್ಷ್ಮಣ, ಸಂಕ್ಯಾ ಸರಾಯಿ ಕುಡಿಯುವಾಗ ಹುಲಿಯೂರನಿಗೂ ಒತ್ತಾಯ ಮಾಡುತ್ತಿದ್ದರು. ಹುಲಿಯೂರ, ಯಾವತ್ತು ಮನಸ್ಸು ಬದಲಾಯಿಸಿ ಕುಡಿಯುವ

ಚಟಕ್ಕೆ ಬಲಿಯಾಗಲಿಲ್ಲಾ. ಅವನು ತನ್ನ ತಂದೆ, ಸಹೋದರರು ಪಡುತ್ತಿದ್ದ ಕಷ್ಟವನ್ನು ನೆನಪು ಮಾಡಿಕೊಂಡಿದ್ದ.

ರೈತರು ಸಂಕಷ್ಟದಲ್ಲಿರುವುದು ಯಾಕೆ? ಯಾವಾಗಲೂ ಯೋಚಿಸುತ್ತಿದ್ದ. ಅದೆ ಬೆಳೆ, ಅವೆ ಅಂಗಡಿಗಳು ಆದರೆ ಲಾಭ ಯಾರಿಗೂ ಆಗಿರಲಿಲ್ಲಾ. ತಮ್ಮ ತಾಂಡಕಷ್ಟೆ ಅಲ್ಲ ಸುತ್ತ ಮುತ್ತಲ ಬೇರೆ ಊರುಗಳನ್ನ ನೋಡಿದ್ದ ಜನರು ಮಾತಾಡುವುದನ್ನ ಕೇಳಿದ್ದ. ಕಡಿಮೆ ಜನ ಇದ್ದು ದೊಡ್ಡ ಹಿಡುವಳಿ ಭೂಮಿ ಇದ್ದಂತವರು ಹಳೆಹೆಪ್ಪು ಇಟ್ಕೊಂಡವರು ಮಾತ್ರ ನೆಮ್ಮದಿಯಿಂದ ಭೂಮಿ ನಂಬಿ ಜೀವನ ಮಾಡುತ್ತಿದ್ದರು. ಸಣ್ಣ ಹಿಡುವಳಿದಾರರು, ಅವಿಭಕ್ತ ಕುಟುಂಬದವರ ಪರಿಸ್ಥಿತಿ ಗಂಭೀರವಾಗಿತ್ತು. ಕೂಡು ಕುಟುಂಬದಲ್ಲಿ ಕೆಲವರು ಕಳ್ಳ ನೆಪ ಮಾಡಿಕೊಂಡು ಕೆಲಸಕ್ಕೆ ಬಾರದೆ ದವಾಖಾನಿ ಅಲ್ಲಿ ನೋವು, ಇಲ್ಲಿ ನೋವು ಅಂತ ಮೈಗಳ್ಳತನ ಮಾಡುತ್ತಲೇ ಆರಾಮದಿಂದ್ದರೆ ಇನ್ನೂ ಕೆಲವರ ಹೆಗಲ ಮೇಲೆ ಕೆಲಸದ ಒತ್ತಡವಿತ್ತು. ತೊಪುನಾಯ್ಕ ಎಂಟೊಂಭತ್ತು ಮಕ್ಕಳು ಸೊಸೆಯಂದಿರಲ್ಲೆ ವಿಪರೀತ ತಾರತಮ್ಯ ಹೆಸರಿಗಷ್ಟೆ ಕೂಡುಕುಟುಂಬ, ಒಳಗೊಳಗೆ ತಟವಾಟ, ಕಾನಪೂಸಿ ನಡೆಯುತ್ತಿತ್ತು. ಯಾವಾಗ ಉರಿಯುತ್ತಿರುವ ಬೆಂಕಿ ಸ್ಫೋಟಗೊಳ್ಳುವುದೊ ಯಾರಿಗೂ ಅರಿಯದಾಗಿತ್ತು. ಈ ಎಲ್ಲಾ ಮೌಢ್ಯತೆಗಳಿಂದಾಗಿ ಅಜ್ಞಾನ, ಅಂಧಾನುಕರಣೆ, ಕಂದಾಚಾರ, ಮತಿಹೀನತೆ ತಾಂಡವವಾಡುತ್ತಿದ್ದರಿಂದಾಗಿ ಯಾರೊಬ್ಬರು ನೆಮ್ಮದಿಯಿಂದ ಇರಲಿಲ್ಲಾ. ತೊಪುನಾಯ್ಕ ಪದೇ ಪದೇ ರಾತ್ರಿ ಆರುವರೆ ಸುಮಾರಿಗೆ ಮುದ್ದೆ ಉಣ್ಣುವಾಗ ಒಂದು ಕತೆ ಹೇಳುತ್ತಿದ್ದ. "ಒಂದು ಗುಡಿಯೊಳಗೆ ತಿರುಪೆ ಎತ್ತಿ ತಿನ್ನುವ ಜೋಗಪ್ಪಗಳು, ಜೋಗಮ್ಮಗಳು ವಾಸವಾಗಿದ್ದರು. ತಮ್ಮ ಪಾಡಿಗೆ ತಾವು ಬೇಡ್ಕೊಂಡು ಬಂದು ಉಂಡು ಸಿಕ್ಕ ಜಾಗದಾಗ ಅಡ್ಡಾಗುತ್ತಿದ್ದರು. ಗುಡಿ ಬಹಳ ಪುರಾತನವಾದದ್ದು. ಸುತ್ತ ಗೋಡೆ ಮೇಲೆ ಮಣ್ಣು ಮುದ್ದೆ. ಮಳೆಗಾಲ ಬಂತು ಅಂದ್ರೆ ಎಲ್ಲಿ ಬೇಕಲ್ಲಿ ಸೋರುತ್ತಿತ್ತು. ಮಳೆ ಬಂತು ಅಂದ್ರೆ ಸೋರುವ ನೀರಿನಿಂದಾಗಿ ಎಲ್ಲರು ಎಚ್ಚರಾಗಿ, ಇಲ್ಲ, ನಾಳೆ ಮುಂಜಾನೆ ಮಾಳಗಿ ಹತ್ತಿ ಹುಲ್ಲು ಕಿತ್ತು ಮಣ್ಣು ಹಾಕಿ ಸೋರದಂತೆ ಮಾಡುವ ಅಂತ ಹೇಳಿ, ಮಳೆ ನಿಂತ ಮೇಲೆ ನಿದ್ದೆ ಮಾಡಿ ಮುಂಜಾನೆ ತಮ್ಮ ಪಾಡಿಗೆ ತಾವು ಒಬ್ಬರಿಗೂ ಗೊತ್ತಿಲ್ಲದಂತೆ, ರಾತ್ರಿ ವಿಷಯವೆ ತಮಗೆ ಅರಿವಿಲ್ಲ ಎನ್ನುವಂತೆ ಮಾಯವಾಗಿ ಬಿಡುತ್ತಿದ್ದರು. ಮತ್ತೆ ಮಳೆ ಬಂದಾಗ ಅದೆ ಹಳೆ ಚರ್ಚೆ. ಯಾರು ಮೇಲೆ ಹತ್ತಲಿಲ್ಲಾ, ಮಣ್ಣು ಹಾಕಲಿಲ್ಲಾ, ಸೋರುವುದನ್ನು ನಿಲ್ಲಿಸಲಿಲ್ಲ," ಕತೆ ನಿಲ್ಲಿಸಿದ್ದ. ಹಾಗೆ ಪರಂಪರೆ ಮುಂದುವರೆಯಿತು. ಆದರೆ ಚರ್ಚೆ ನಿಲ್ಲಲೇ ಇಲ್ಲ, ಕೆಲಸ ಆಗಲೇ ಇಲ್ಲ. ಇದು ಪ್ರತಿ ರೈತ, ಕೂಲಿ ಕಾರ್ಮಿಕನ ಪಾಡು, ಹಬ್ಬ ಮಾಡಿ ಮಾಂಸಕ್ಕೆ ಸರಾಯಿಗೆ ಮಾಡುವ ಖರ್ಚು ಬೇರೆ, ಪ್ರತಿದಿನದ ಕುಡಿತದ ಖರ್ಚು, ಜೊತೆಗೆ ಎಲೆ ಅಡಿಕೆ, ತಂಬಾಕು, ಬೀಡಿ ಇವೆಲ್ಲವು ಅವಶ್ಯವಾಗಿ ಬೇಕಾದ ವ್ಯಸನದ

ವಸ್ತುಗಳು. ದುಡಿಮೆಯಂತು ಶೂನ್ಯ, ಆದರೆ ಖರ್ಚು ನಿರಂತರ. ಹೀಗಿದ್ದಾಗ ರೈತ ಕೂಲಿ ಕಾರ್ಮಿಕ ಆರ್ಥಿಕವಾಗಿ ಸಶಕ್ತನಾಗುವುದು ಯಾವಾಗ? ಹುಲಿಯೂರ ಈ ಎಲ್ಲಾ ಸನ್ನಿವೇಶಗಳನ್ನು ಬಹಳ ಹತ್ತಿರದಿಂದ ಕಂಡುಂಡಿದ್ದ. ಸ್ವತಃ ತನ್ನ ಮನೆಯಲ್ಲಿ ನಡೆಯುತ್ತಿದ್ದದ್ದನ್ನೇ ಗಮನಿಸಿದ್ದ. ಅವನ ತಂದೆ ತೊಪುನಾಯ್ಕ ಘೈಜ್ ಬೀಡಿ ಸೇದುತ್ತಿದ್ದ, ಸಂಜೆ ಹೊತ್ತಿಗೆ ಕಮ್ಮಿ ಅಂದರು ಒಂದು ಬಾಟಲು ಹೆಂಡ, ಅದಾದ ಮೇಲೆ ಯಾರಾದರೂ ಒತ್ತಾಯ ಮಾಡಿದರೋ, ಇನ್ನೂ ಒಂದು ಅರ್ಧ ಕುಡಿಯುತ್ತಿದ್ದ. ಅದಾದ ಮೇಲೆ ಒಂದು ಬಾಟಲು ಹುಲಿಯೂರನ ತಾಯಿ ಜಾನಿಬಾಯಿಗೆ ಅಂತ ಖರೀದಿ ಮಾಡುತ್ತಿದ್ದ. ಜಾನಿಬಾಯಿಗೆ ಸಿಹಿ ಎಲೆ ಅಡಿಕೆ ಬೇಕು, ಕವಳಿಗೆ ಎಲೆ ಚೀಲದ ತುಂಬ ಅಡಿಕೆ, ಅವನ ಹಿರಿಯಣ್ಣ ಕದ್ದು ಮುಚ್ಚಿ ಬೀಡಿ ಸೇದುತ್ತಿದ್ದ. ಮತ್ತೂ ಎಲೆ ಅಡಿಕೆ ಹಾಕುತ್ತಿದ್ದ, ಮತ್ತೊಬ್ಬನು ನಶ್ಯಾಪುಡಿ ಹಲ್ಲಿಗೆ ತಿಕ್ಕುತ್ತಿದ್ದ. ತರಾವರಿ ಚಟಗಳು ಇದ್ದವು. ಇವರೆಲ್ಲರಿಗೂ ಕಾಸು ಬರುವುದಾದರೂ ಎಲ್ಲಿಂದ? ವಾರದಲ್ಲಿ ಅಡ್ಡಸಂತೆ, ರೈತರ ಸಂಕಟ ಹೇಳತೀರದು. ಅವನ ಆದಾಯನೂ ಅಷ್ಟಕಷ್ಟೆ. ತಾಂಡದೊಳಗೆ ಮನೆ ಮನೆ ಬ್ಯಾಟಿ ಕಡಿಯೋ ಹಬ್ಬ ಮಾಡಿದರಂತು ತಾಂಡಕ್ಕೆ ತಾಂಡವೆ ಸಾಲದಲ್ಲಿ ಮುಳುಗಿ ಹೋಗುತ್ತಿತ್ತು. ಮನೆಯಲ್ಲಿ ಮರಿ ಸಾಕಿದವರು ಪಾರಾದರು, ಆದರೆ ತೊಪುನಾಯ್ಕನಂತವರಿಗೆ ಮೂರು ನಾಕು ಕುರಿಗಳು ಬೇಕೇ ಬೇಕು. ಬೀಗರು ಬಿಜ್ಜರಿಗೆ ತಿನಿಸುವುದು, ಕುಡಿಸುವುದು ಸರ್ವೇಸಾಮಾನ್ಯ. ಸರಾಯಿ, ಹೆಂಡ, ಇಲ್ಲದೆ ಊಟಕ್ಕೆ ಕೂಡಿಸಿದ್ರೆ, "ಎಯ್ ಏನು ಊಟ ಖಾಲಿಪಿಲಿ, ಲೇ ತಮ್ಮ ತರ್‍ರಲೆ, ಒಂದ ಬಾಟಲು ಹೆಂಡವ, ಇದೇನು ಒಣಒಣ ಟಣಟಣ, ಸಪ್ಪೆ ಊಟ" ಮಕದ ಮೇಲೆನೆ ಹೇಳಿ ಬಿಡುತ್ತಿದ್ದರು. ಮುಂಜಾನೆ ಹೊತ್ತಾರೆ ಊಟಕ್ಕೆ ಕುಂತರು ದೇವಿ ಒಳಗೆ ಇಳಿಯದೆ ಗಂಟಲಲ್ಲಿ ಕೂಳು ಸೇರುತ್ತಿರಲಿಲ್ಲಾ. ಹಾಗಾಗಿಯೆ ಒಂದು ಕುರಿಯ ಹಿಂದಿನ ನೋವು, ಸಂಕಟ, ತಳಮಳ ಯಾರು ಅರ್ಥ ಮಾಡಿಕೊಳ್ಳದಾಗಿದ್ದರು. ಮಸಾಲೆ ಸಾಮಾನು, ಅರಿವೆ, ಭಟ್ಟಿ ಸರಾಯಿ, ಹೆಂಡ, ಎಲೆ ಅಡಿಕೆ, ಅಡ್ಡ ಖರ್ಚು, ಹಬ್ಬ ಆಚರಣೆ ಮಾಡಿದವನ ಹೆಣ ಬಿದ್ದು ಹೋಗುತ್ತಿತ್ತು.

ಹುಲಿಯೂರ ಮಾತ್ರ ವರ್ಷಕ್ಕೆ ಎರಡು ವರುಷಕ್ಕೆ ಆಚರಿಸುವ ಮನೆ ಮನೆಯ ಬ್ಯಾಟಿ ಕೊಡುವ ಹಬ್ಬದ ಕುರಿತು ಬಹಳ ಆಲೋಚನೆ ಮಾಡಿದ್ದ. ಮೊದಲೆ ಕಡುಬಡವರು, ಕೈಕಾಲ ಮೇಲೆ ದುಡಿದು ತಿಂಬೋರು ಯಾಕೆ ಈ ರೀತಿ ದುಂದು ವೆಚ್ಚವನ್ನ ಮಾಡುತ್ತಿದ್ದಾರೆ ಎಂದು ಮರುಗಿದ್ದ. ಅವನ ತಂದೆಗೆ ಕೇಳಿದ್ದ, "ಅಪ್ಪ, ಈ ಬಡವರು ಕಾಫಿ ತೋಟಕ್ಕೆ, ಗೋವಾ, ಕಾಸರಗೋಡು, ಮಂಡ್ಯ, ಮುಂಬಯಿಗೆ ಯಾವ ಪುರುಷಾರ್ಥಕ್ಕೆ ದುಡಿಯೋದಕ್ಕೆ ಹೋಗ್ತಾರೆ? ದುಡಿದು ತಂದ ನಾಕು ಕಾಸು ಮುಂದಿನ ಭವಿಷ್ಯಕ್ಕೆ ಇಟ್ಟುಕೊಳ್ಳದೆ ಒಂದು ಕುರಿ, ಅದು ಚೆನ್ನಾಗಿ ಕೊಬ್ಬಿರುವುದೇ

ಬೇಕು ಅದಕ್ಕೆ ಏನಿಲ್ಲಾ ಅಂದ್ರು ಹತ್ತು ಸಾವಿರ ರೂಪಾಯಿ. ಹೀಗೆ ಕುಡಿಯೋದಕ್ಕೆ ಹತ್ತು ಸಾವಿರ, ಅವಕ್ಕೆ ಜಮೀನಿಲ್ಲ, ರೇಷನ್ನಿಗೆ, ಬಟ್ಟೆ, ಅಡ್ಡ ಖರ್ಚು, ಹತತ್ರ ಐವತ್ತು ಸಾವಿರ ಕೈಬಿಡುತ್ತೆ. ಇದೆಲ್ಲಾ ಬೇಕಾ?" ಬಹಳ ಹೊತ್ತು ಆಲೋಚಿಸಿದ ತೊಪುನಾಯ್ಕ ಒಂದೆ ಮಾತು ಹೇಳಿದ. "ಇದು ಹಿಂದಿನಿಂದಲೂ ಬಂಜಾರ ಜನ ಸಮುದಾಯಕ್ಕೆ ಅಂಟಿದ ಮಹಾಶಾಪ ಕಣಪ್ಪ. ಕನ್ನಡದಲ್ಲಿ ಗಾದೆ ಇದೆ ಕೇಳು. 'ಲಮಾಣ್ಯರು ಮಾಡುವುದು ಕಂಡಕ್ಕ, ಹೆಂಡಕ್ಕ ಆದರೆ, ಲಿಂಗಾಯತರು ಮಾಡುವುದು ದಂಡಕಂತೆ' ನಮ್ಮ ದುಡಿಮೆ ನಮ್ಮ ಕೈಯಾಗ ಯಾವತ್ತು ನಿಲ್ಲಲ್ಲ. ಇದು ನಮ್ಮ ಜನಾಂಗಕ್ಕಿರುವ ಶಾಪ. ಎಷ್ಟೇ ದುಡಿದರು ಉದ್ದಾರ ಆಗೋದಿಲ್ಲ. ಬರಿ ಕುಡಿಯುವುದು, ಜಗಳ ಆಡುವುದು, ನ್ಯಾಯ ಪಂಚಾಯ್ತಿ ಮಡುವುದು, ಅಲ್ಲಿ ತೀರ್ಮಾನ ಆಗಲಿಲ್ಲಾಂದ್ರೆ ಕೋರ್ಟು ಕಛೇರಿ ವಿಷಯ ಏನು ಗಹನವಾದ್ದೇ ಬೇಕು ಅಂತಿಲ್ಲ. ಕ್ಷುಲ್ಲಕವಾದರೂ ಆಗಬಹುದು. ಇದು ಬಹಳ ತಳದಲ್ಲಿ ಬೇರೂರಿದೆ. ನೀನು ಚಿಕ್ಕವನು ಈ ವಿಚಾರಗಳ ಬಗ್ಗೆ ತಲೆ ಕೆಡಿಸಿಕೊಬೇಡ. ಚೆನ್ನಾಗಿ ಓದಿ ಈ ಶಾಪದಿಂದ ಪಾರಾಗು, ಯಾವತ್ತು ಈ ತಾಂಡಕ್ಕೆ ಬರಬೇಡ, ಬಂದರು ಈ ಮಂದಿ ಬಗ್ಗೆ ಮರುಕ ಪಡಬೇಡ. ಇವರು ಯಾರ ಮಾತನ್ನು ಕೇಳುವುದಿಲ್ಲ ಯಾರ ನಾಯಕತ್ವವನ್ನು ಒಪ್ಪುವುದಿಲ್ಲ. ತಾನೆ ದೊಡ್ಡ ಪೋತಪ್ಪನಾಯ್ಕ ಅಂತ ಅಂದುಕೊಳ್ಳುತ್ತಾರೆ ಮಗ." ತನ್ನ ಜೀವನದ ಅನುಭವದ ಗೌಪ್ಯವನ್ನೆಲ್ಲಾ ಮನಸ್ಸು ಬಿಚ್ಚಿ ಹುಲಿಯೂರನಿಗೆ ಹೇಳಿದಂತಿತ್ತು. ಆದರೆ ತಿಳುವಳಿಕೆಯ ಕೊರತೆಯಿಂದಾಗಿ ತಮ್ಮ ಬುದಕನ್ನ ಹಾಳು ಮಾಡಿಕೊಳ್ಳುತ್ತಿರುವ ಈ ಮಂದಿಯ ಬಗ್ಗೆ ಹುಲಿಯೂರ ಮಮ್ಮಲ ಮರುಗಿದ್ದ. ಕಾಫಿತೋಟದಲ್ಲಿ ದಿನದ ಕೂಲಿಗೆ ಸರಿದೂಗುವ ಕೆಲಸವಾದ ಮೇಲೆ ಕೈಕಾಸಿಗೆ ಅಂತ ಪ್ರತ್ಯೇಕ ಬೀಜದ ಚೀಲವನ್ನ ಹೊರುವ ಹೆಂಗಸರು ಚೂರುಪಾರು ಮಾಡಿ ಸಂಗ್ರಹಿಸಿದ್ದನ್ನು ಇಲಿ ಮನೆಯ ಬುನಾದಿಯನ್ನೆ ಕೊರೆದು ಮನೆ ಸಡಿಲಿಸುವಂತೆ ಅವರ ದುಡ್ಡಿಗೂ ಸಂಚಕಾರ ಹೂಡುವ ಕುಡುಕ ಜೂಜುಕೋರ ಗಂಡಸರಿಗೆ ಏನು ಹೇಳುವುದು?

ಬದುಕಿನ ನಕಾಶೆಯೆ ಬದಲಾಗಿ ಬರಿಬಡತನ, ದಾರಿದ್ರ್ಯ, ಅರ್ಥಹೀನವಾಗಿದ್ದು ಹಳಿ ತಪ್ಪಿರುವ ಈ ಬದುಕನ್ನು ಸರಿದಾರಿಗೆ ತರುವವರು ಯಾರು. ಅದ್ಯಾವೊದು ಊರಿಗೆ ದುಡಿಯಾಕ ಹೋಗಿದ್ದ ಚಿಂಗಾರುನಾಯ್ಕ, ಮನೆಮಗನಂತೆ ನಂಬಿ ಇಡೀ ಮನೆಯ ಜವಾಬ್ದಾರಿಯನ್ನೇ ಕೊಟ್ಟಿದ್ದ ಅ ಸಾವುಕಾರ. ಅವನ ಪ್ರವೇಶವನ್ನು ಎಲ್ಲಿಯೂ ಕೂಡ ನಿರ್ಬಂಧಿಸಿರಲಿಲ್ಲಾ. ಒಳಗೆ ಹೊರಗೆ ಅಷ್ಟೆ ಅಲ್ಲಾ ತಿಜೋರಿ ಇರುವ ಕೋಣೆಯೊಳಗೂ ಪ್ರವೇಶ ಕೊಟ್ಟಿದ್ದ ಮಲೆಯಾಳಿ. ಚಿಂಗಾರುಗೆ ಪರೀಕ್ಷೆ ಮಾಡಬೇಕಂತನೊ ಇಲ್ಲ ಮರೆತು ತಿಜೋರಿಬಾಗಲು ತೆರೆದು ಹೋಗಿದ್ದ ಮಾಲಿಕ. ಚಿಂಗಾರುನ ಮನಸ್ಸಿನೊಳಗೆ ದುರಾಸೆಯು ತನ್ನ ಪರಾಕಾಷ್ಠತೆಯ ಅವಸ್ಥೆಗೆ

ತಲುಪಿದೊಡನೆ ತಿಜೋರಿಯಲ್ಲಿದ್ದ ಎಲ್ಲಾ ಸಂಪತ್ತನ್ನ ಬಾಚಿಕೊಂಡು ಗಂಟುಕಟ್ಟಿದ್ದ. ಏನು ಅರಿಯದವನಂತೆ ಗಂಟನ್ನು ತನ್ನ ಸಾಮಾನಿನಲ್ಲಿ ಮುಚ್ಚಿಟ್ಟು ನಾಟಕ ಮಾಡಿದ್ದ. ಇನ್ನೇನು ಹಕ್ಕಿಯಂತೆ ಪರ್ರಂತ ಹಾರಬೇಕು ಮಾಲಿಕನಿಗೆ ಅನುಮಾನ ಬಂದು ಮಕಮುಸುಡಿ ನೋಡದೆ ಹೊಡೆಸಿದ. ಒಳಗೊಳಗೆ ಬಿದ್ದ ಪೆಟ್ಟ ಹೊರಗೆ ಕಾಣದಾಗಿತ್ತು. ಆವಾಂತರ ಆದ ಮೇಲೆ ಅವನು ಕೂಲಿ ಕೊಟ್ಟು ಗದುಮಿದ್ದ. ಚಿಂಗಾರು ತಾಂಡಕ್ಕೆ ಬಂದು ಆರಾಮ ಇಲ್ಲಂತ ಮಲಗಿದವನು ಮೇಲೇಳಲೇ ಇಲ್ಲ. ಅವನ ಹೆಂಡತಿ ರೂಕಿ ರಂಡಿಯಾದಳು. ಆರೇಳು ವರ್ಷದ ಮಕ್ಕಳು ಅನಾಥವಾದವು. ಮನುಷ್ಯನ ಮನಸ್ಸಿನೊಳಗೆ ಹುಟ್ಟುವ ಈ ದುರಾಸೆಗೆ ಕೊನೆ ಇಲ್ಲವೆ? ಆಶೆಯೆ ದುಃಖಕ್ಕೆ ಮೂಲ ಎನ್ನುವ ಬುದ್ಧನ ಮಂತ್ರ ಪ್ರತಿಯೊಬ್ಬರಿಗೂ ತಿಳಿಯಬೇಕು. ಆದರೆ ಕೇಳುವರ್‍ಯಾರು. ಮನುಷ್ಯನಿಗೆ ಗೊತ್ತು ತಾನು ಸತ್ತ ಮೇಲೆ ಏನನ್ನು ಒಯ್ಯುವುದಿಲ್ಲ ಎಂದು. ಆದರೂ, ಮಗನಿಗೆ ಹೆಂಡತಿಗೆ, ಮುಂದಿನ ಜನಾಂಗಕ್ಕೆ ಅಂತ ಸುಕಾಸುಮ್ಮನೆ ದುಡಿದು ಗುಡ್ಡೆ ಹಾಕುತ್ತಾನೆ. ಅದರಲ್ಲಿ ಬೇರೆಯವರ ಸ್ವತ್ತು ಸೇರಿರುತ್ತದೆ.

* * *

55. ರಂಕಿ ಢಾವಲೊ ಮಾಡಿದ್ದು

ಬಂಜಾರ ಸಮಾಜದಲ್ಲಿನ ಅತ್ಯಂತ ಮುಖ್ಯವಾದ ಆಚರಣೆ ಮುಂಜಾನೆ ಐದುಗಂಟೆಯ ಸುಮಾರಿಗೆ ಮದುವೆಯಾಗುವ ಸಂದರ್ಭದಲ್ಲಿ ಹುಡುಗಿ ತಾಂಡದ ಬಹುತೇಕ ಹಿರಿಯ ಹೆಂಗಸರು ಸೇರಿಕೊಂಡು ಏನು ಅರಿಯದ ಹುಡುಗಿಗೆ ತನ್ನ ದುಃಖವನ್ನ ತೋಡಿಕೊಳ್ಳುವುದು ಹೇಗೆ ಎನ್ನುವುದನ್ನು ಕಲಿಸುತ್ತಾರೆ. "ನಾಯಕ ಬಾಪುರೆ, ತಾರಿ ಹವೆಲಿ ಛೂಟಗಿರೆ ಆ ಹಿಂ ಹಾ" (ದೊರೆ ನನ್ನ ತಂದೆ ನಾಳೆ ನಿನ್ನ ಅರಮನೆಯಿಂದ ನಾನು ಹೊರಟು ಹೋಗುವೆ) ಅದನ್ನೆ ರಂಕಿ ಪುನರುಚ್ಚಿಸಿದಳು. ಈ ಪರಂಪರೆ ಆರಂಭವಂತು ಯಾರಿಗೂ ತಿಳಿಯದು. ಆದರೆ ಪ್ರತಿಯೊಬ್ಬ ಹೆಣ್ಣು ತಾಂಡದಲ್ಲಿ ಹುಟ್ಟಿ ಬೆಳೆದವಳಿಗೆ ಈ ಅಳುವ ಪ್ರಕ್ರಿಯೆ ತಿಳಿದೆ ಇರುತ್ತಿತ್ತು. ಮದುವೆಯ ಸಮಾರಂಭದ ಭಾಗವಾದ ಢಾವಲೊ ಅನೇಕ ಶಬ್ಧಗಳ ಉಚ್ಚಾರದೊಂದಿಗೆ ಹೆಣ್ಣು ಅಳುವಿನೊಳಗೆ ಹೇಳಿ ತನ್ನ ದುಃಖವನ್ನು ತೋಡಿಕೊಳ್ಳುತ್ತಾಳೆ. ಈ ಸಂಪ್ರದಾಯ ಬಹುಶಃ ಬುಡಕಟ್ಟು ಜನಾಂಗದಲ್ಲಿಯೇ ಅತ್ಯಂತ ಹಳೆಯ ಬುಡಕಟ್ಟಾದ ಬಂಜಾರ ಸಮುದಾಯದಲ್ಲಿ ಮಾತ್ರ ಕಂಡುಬರುತ್ತದೆ. ಹುಲಿಯೂರ ತಾಯಿಯಿಲ್ಲದ ತಬ್ಬಲಿ ಬಾಣೋತ ಕುಲದ ರಂಕಿಯ ಢಾವಲೊ ಕೇಳಿದ ತಕ್ಷಣ ದಳದಳಂತ ಕಣ್ಣುಗಳಿಂದ ನೀರು ಸುರಿಸಿದ್ದ. ತಂದೆ, ತಾಯಿ, ಸಹೋದರರು, ಹಿರಿಯರು ಎಲ್ಲರನ್ನು ಸಂಭೋದಿಸಿ ಅವಳು ಅನುಭವಿಸಿದ ದುಃಖವನ್ನ ಹೇಳಿ ಅಳತೊಡಗಿದಳು. ಅವಳು ಹೇಳುವ ದುಃಖದ ಮಾತುಗಳು ನೇರವಾಗಿ ಹೃದಯಕ್ಕೆ ನಾಟಿ, ನೆರದ ಹೆಂಗಸರು ಮೂಗು ಎಳೆಯುತ್ತ ತಮ್ಮ ಸೆರಗುಗಳಿಂದ ಕಣ್ಣೀರು ಒರೆಸಿಕೊಳ್ಳತೊಡಗಿದರು. ಹೆಂಗರುಳಿನ ಗಂಡಸರು ಕೂಡ ಹೆಗಲ ಮೇಲಿನ ತಮ್ಮ ಟವೆಲುಗಳಿಂದ ಒದ್ದೆಯಾದ ಕಣ್ಣುಗಳನ್ನು ತಿಕ್ಕಿಕೊಂಡರು. ತಂದೆಯ ಮನೆಯಲ್ಲಿ ಸ್ವತಂತ್ರಳಾಗಿ ಅಣ್ಣ, ತಮ್ಮಂದಿರ ಜೊತೆಗೆ ಮಲತಾಯಿಯ ಜೊತೆಗೆ ಕಷ್ಟ ಆದರೂ ತಂದೆ ಜುಂಜನಾಯ್ಕನ ಧೈರ್ಯದ ಮೇಲೆ ತಾಯಿಯ ಕೊರತೆಯನ್ನು ಮರೆತಿದ್ದ ರಂಕಿಬಾಯಿ ಈಗ ಪರಮನೆಗೆ ಹೋಗುವ ಸಂದರ್ಭದಲ್ಲಿ, ಗಂಡ ಎಂಥವನು? ಅವನ ಸೋದರರು,

* ಢಾವಲೊ–ಮದುವೆ ಸಂದರ್ಭದಲ್ಲಿ ಹುಡುಗಿ ಅಳುವ ಪದ್ಧತಿ

ಸೋದರಿಯರು, ತಾಯಿ, ತಂದೆ, ಅತ್ತಿಗೆ ಹೇಗೆ? ಯಾವುದೂ ಅರಿಯದೆ ಅಪರಿಚಿತ ಜಗತ್ತಿಗೆ ಹೊಂದಿಕೊಳ್ಳುವುದು ಹೇಗೆ ಎನ್ನುವ ತಾಕಲಾಟ. ಅವಳ ರೆಕ್ಕೆ ಕತ್ತರಿಸಿ ಪಂಜರದೊಳಗೆ ಇಡುವ ಹುನ್ನಾರ, ದೈಹಿಕವಾಗಿ, ಮಾನಸಿಕವಾಗಿ ಅವಳ ಗಂಡನ ಮನೆಯಲ್ಲಿ ಆಗಬಹುದಾದ ಅನಾಹುತವನ್ನ ನೆನಪಿಸಿಕೊಂಡೆ ನಡುಗಿ ಹೋಗಿದ್ದಳು.

ಆದರೂ ಹೆಣ್ಣಿನ ಅನಿವಾರ್ಯತೆಯನ್ನು ಅರ್ಥಮಾಡಿಕೊಳ್ಳುವ ಪ್ರಯತ್ನ ನಡೆಸಿದ್ದಳು. ಬೆನ್ನಲ್ಲೇ ಅವಳ ಚಿಕ್ಕಮ್ಮ ಚೌವಲಿಬಾಯಿ, "ಎಯ್, ಸೀಮೆಯೊಳಗಿಲ್ಲದ ಮದುವೆ ನೀನೆ ಆಗಿ ಏನೆ ರಂಕಿ, ಬಾಯಿ ಮುಚ್ಚು. ಅಲ್ಲಾ ನಿನ್ನ ಮದುವೆ ಆಗಿರೋನು ನಿನ್ನ ಕೊಲ್ಲಾಕ ಆಗುತ್ತಿದ್ದಾನೆ ಅಂದ್ಕೊಂಡಿ ಏನು?" ಸಮಾಧಾನದಿಂದ ಹೇಳಬಹುದಾದ ಮಾತುಗಳನ್ನ ಪೀಡೆತೊಲಗಿದರೆ ಸಾಕು ಎನ್ನುವಂತೆ ತಡಾಯಿಸಿದಳು. ಈ ಸಂದರ್ಭದಲ್ಲಿ ಮಾತುಗಳು ಸಹಜ ಎಂದುಕೊಂಡರು ಮಂದಿ. ಆದರೆ ರಂಕಿ ಮಾತ್ರ ತನ್ನ ಎದೆಯಾಳದ ನೋವು ಸಂಕಟ, ತಳಮಳ, ಆತಂಕವನ್ನು ಬಿಟ್ಟುಬಿಡದೆ ಹೊರಹಾಕಿದ್ದಳು. ಜುಂಜನಾಯ್ಕ ಮಗಳ ಎದೆಯೊಳಗೆ ಎದ್ದಿರಬಹುದಾದ ಬಿರುಗಾಳಿಯ ಅಂದಾಜು ಮಾಡದಾಗಿದ್ದ. ಆದರೆ ವಿದಾಯ ಅನಿವಾರ್ಯವಾಗಿತ್ತು. ಮೇಗಲ ಓಣಿಯ ರಾಮಜ್ಜಿ, "ಈ ಹುಡುಗಿಗೆ ಏನಾಗೈತೆ, ಮೂರ್ಛೆ ಹೋದಳು ಯಾರಾದರು ನೀರ ಹಾಕ್ರಿ, ಗಾಳಿ ಬಿಡ್ರಿ" ಗಡಿಬಿಡಿಯಿಂದ ಬಾಯಿಗೆ ನೀರು ಬಿಟ್ಟು ನೆತ್ತಿಕೂದಲು ಎಳೆದು ಎಚ್ಚರಿಸಿದಳು.

"ನೋಡು ತಾಯಿ ನಿನ್ನ ಸಂಕಟ ಅರ್ಥ ಆಗುತ್ತೆ. ಗೊತ್ತಿಲ್ಲದ ಮನೆ, ಗೊತ್ತಿಲ್ಲದ ಜನ, ಅಪರಿಚಿತ ವಾತಾವರಣ ಹೊಂದಿಕೊಳ್ಳುವುದು ಬಹಳ ಕಷ್ಟ. ಆದರೆ ಹೆಣ್ಣಾಗಿ ಹುಟ್ಟಿದ ಪಾಪಕ್ಕೆ ಬಂದಿದ್ದನ್ನ ಅನುಭವಿಸಲೇಬೇಕು. ತಂದೆ ಮನೆಯಲ್ಲಿ ಇದ್ದುಬಿಡೋದಕ್ಕಾಗುತ್ತ? ಹೇಳು. ನಾವು ನಿನ್ನಂಗೆ ಗೊತ್ತಿಲ್ಲದ ಊರಿಗೆ ಬಂದವರು ಕಣೆ ಹುಚ್ಚವ್ವ. ನಾವು ಹೆಂಗಸರು ಬಾಳಿ ಬದುಕಿ ಸಾಯಬೇಕಾಗಿರೋದೆ ಗಂಡನ ಮನೆಯಲ್ಲಿ. ಅದೇನಮ್ಮ ಅಸ್ತಿತ್ವ, ಅದೇ ನಮ್ಮ ಹಣೆ ಬರಹ?." ಜಾನಿಬಾಯಿ ಬಂದ ದುಃಖವನ್ನು ನುಂಗಿಕೊಂಡು ರಂಕಿಗೆ ಧೈರ್ಯ ಹೇಳಿದಳು. ಬಹುಶಃ ಇದೆ ಧೈರ್ಯ, ಕುಡಕ, ಪೀಡಕ, ಹಿಂಸೆ ಕೊಡುವ ಗಂಡನ ಜೊತೆಗೆ ಹೊಂದಾಣಿಕೆ ಮಾಡಿಕೊಂಡು ಬದುಕು ಕಟ್ಟಿಕೊಳ್ಳುವಂತೆ ಹೆಣ್ಣನ್ನು ಪ್ರೇರೇಪಿಸುತ್ತಿರುವುದು ಅಂತ ಕಾಣುತ್ತೆ. ತನ್ನ ತಾಯಿಯ ಮಾತು ಕೇಳಿ ಹುಲಿಯೂರ ಮತ್ತಷ್ಟು ಬಿಕ್ಕಳಿಸಿದ.

ರಂಕಿ ಮೂರು ಮಕ್ಕಳ ತಾಯಿ. ಅವಳ ಚಿಕ್ಕಮ್ಮ ಚೌವಲಿ ಮಗಳು ಸಾಮಕಿ ಮದುವೆಗೆ ಬಂದಾಗ ಕಾಲ ಬಹಳ ಬದಲಾಗಿತ್ತು. ಮದುವೆಯ ರೂಪರೇಷೆಗಳೇ ಬದಲಾಗಿದ್ದವು. ಗುಡಿಸಲ ಮುಂದೆ ಎತ್ತಿನ ಗೊಂದ್ಲಿಯೊಳಗೆ ಗ್ರಾಮಪೋನು ತಿರುಗುವ ಪ್ಲೇಟು ರಾಜ್‌ಕುಮಾರ್‌ನ ಸಿನಿಮಾದ ಹಾಡು "ಯಾರೇ ಕೂಗಾಡಲಿ

ಊರೇ ಹೋರಾಡಲಿ ಎಮ್ಮೆ ನಿನಗೆ ಸಾಟಿ ಇಲ್ಲ" ಜೋರಾಗಿ ಒದರಿಕೊಳ್ಳುತ್ತಿತ್ತು. 45 ಆರ್. ಪಿ. ಎಂ ನ ಡಿಸ್ಕನ್ನು 33½ ಆರ್. ಪಿ. ಎಂ ಗೆ ಹಾಕಿದ್ದಕ್ಕೆ ಹಾಡು ನಿಧಾನಕ್ಕೆ "ಯಾ......ರೆ.......ಕೂ.......ಗಾ.......ಡ" ಅಂತ ಹಾಡತೊಡಗಿತು. ಕೇಳಿದವರೆಲ್ಲ ನಗತೊಡಗಿದರು. ತೆಗೂರಿನ ರಂದಾಕರಿಸಾಬಿ 33½ ಆರ್. ಪಿ. ಎಂ ಅನ್ನು 45ಕ್ಕೆ ತಿರುಗಿಸಿದಾಗ ಹಾಡು ಸರಿಯಾಗಿ ಕೇಳಿಸಿತು. ಸಾಮಕಿಗೆ ಮದುವೆಯ ಬಗ್ಗೆ ಹೆದರಿಕೆಯಾಗಲಿ, ಆತಂಕವಾಗಲಿ ಕಂಡುಬರದ್ದನ್ನು ನೋಡಿ ರಂಕಿ ದಂಗಾದಳು. ಅವಳು ಪಟ್ಟ ಆತಂಕ, ಸಂಕಟ, ತಳಮಳ ನೋವು ಅಸಹನೀಯವಾಗಿತ್ತು. ಮದುವೆ ಅಂದ ಒಂದು ತಿಂಗಳಿಂದಲೇ ಹೊಟ್ಟೆ ನೋವು ಸುರುವಾಗಿ "ಬಾಪು ನಾನು ಮದುವೆ ಮಾಡ್ಕೊಳಲ್ಲಾ, ಬೇಡಾ" ಅಂತ ಹಠ ಮಾಡಿದಳು. ಆದರೆ ಅವಳ ಚಿಕ್ಕಮ್ಮ ಚೌವಲಿ "ಯವ್ವ ತಾಯಿ ಮದಲು ಮನಿಬಿಡು, ನನ್ನವು ಮೂರು ಹೆಣ್ಣ ಅದಾವು, ನಾಳೆ ಅವನ್ನ ಮದುವೆಯಾಗಾಕ ಯಾರು ಬರಾಕಿಲ್ಲ" ಅಂತ ಚಿಕ್ಕ ವಯಸ್ಸಲ್ಲೇ ರಂಕಿಯನ್ನ ಮನೆ ಬಿಟ್ಟು ಹೊರಹಾಕಿದ್ದಳು. ಆದರೆ ಅವಳ ಮಗಳು ಸಾಮಕಿಗೆ ಮದುವೆಯ ಬಗ್ಗೆ ದುಗುಡವಾಗಲಿ, ಹೆದರಿಕೆ ಏನೂ ಇಲ್ಲದಾಗಿತ್ತು. ಮೆದಿಪೀಟಿ ತಿಕ್ಕಿಯಾದ ಮೇಲೆ (ಅರಿಷಿಣ) ಅವಳಿಗೆ ಢಾವಲೊ ಹೇಳಿಕೊಡಲು ತಾಂಡದ ಹಿರಿಯ ಹೆಂಗಸರೊಂದಿಗೆ ರಂಕಿ ಸೇರಿಕೊಂಡಿದ್ದಳು. ಸಾಮಕಿ ಮಾತ್ರ ಅವರು ಹೇಳುವ ಯಾವ ಶಬ್ಧಗಳನ್ನು ಹೇಳದೆ ಕೊನೆಗೆ "ಆಂ ಹಿಂ ಯಾ" ಅನ್ನತೊಡಗಿದಳು. "ಈ ಹುಡುಗಿಗೆ ಢಾವಲೊ ಬೇಕಿಲ್ಲಂತ ಕಾಣುತ್ತೆ ಕಣ್ರೆ ಯಾಕೆ ಜುಕ್ಕ ಜುಲುಮಿಯಿಂದ ಹೇಳಿಸೋದಕ್ಕೆ ಹತ್ತಿರಿ" ಅಂದೇ ಬಿಟ್ಟಳು ಹಿರಿಯ ರಾಮಜ್ಜಿ. "ಹೊಗಲಿ ಬಿಡು ದೊಡವ್ವ, ನೀ ಯಾಕ ಬೇಜಾರ ಆಗೀಯೆ ಕಾಲ ಬದಲಾಗ್ತಿದಂಗೆ ಜನಾನು ಬದಲಾಗ್ತಾರೆ." ತನ್ನ ತಂಗಿಗೆ ಕೆಟ್ಟ ಹೆಸರು ಬಂದೀತು ಅಂತೇಳಿ ರಂಕೀನ ಅವಳ ಪರವಹಿಸಿ ಮಾತಾಡಿದಳು. ರಾತ್ರಿ ಊಟವಾದ ಮೇಲೆ ಬೇರೆ ಕಾರ್ಯವೂ ಆರಂಭಕ್ಕು ಮುಂಚೆ ಹೆಂಗಸರು ಮೈಕಿನಲ್ಲಿ ಹುಡುಗಿಗೆ ಢಾವಲೊ ಕಲಿಸಲು ಸುರು ಮಾಡಿದರು. ರಂಕಿಯ ಧನಿಯೊಳಗಿನ ದುಃಖ ಸಂಕಟ ಅವಳ ತಂಗಿ ಸಾಮ್ಕಿಯ ಧನಿಯಲ್ಲಿ ಇಲ್ಲದಿರುವುದನ್ನು ಅವಳ ಆವಾಜ್ ಕೇಳಿದ ಪ್ರತಿಯೊಬ್ಬರು ಗಮನಿಸದೆ ಇರದಾದರು. "ಯಾವ ಸೀಮಿ ಢಾವಲೊ ಕಲಿಸ್ತಿದ್ದಾರಂತ, ಹುಡುಗಿ ಧನಿನೇ ಎತ್ತುತ್ತಿಲ್ಲಾ ಹಿಂದ ಅತ್ತು ಅತ್ತು ಧ್ವನಿ ಹೊಡೆದು ಹೋಗಿ ಮಾತಾಡಲಿಕ್ಕೂ ಆಗುತ್ತಿರಲಿಲ್ಲಾ, ಈಗಿನವಕ್ಕೆ ಅದೇನಾಗಿದೆಯೊ ಬರಿ ಆ ಹಿಂ ಯಾ ಅಂತವಳೆ" ಧ್ವನಿ ಕೇಳಿದ ಕಾರಭಾರಿ ಹೆಂಡತಿ ಹೇಳಿದಳು. "ಕಾಲ ಬದಲಾಗುತ್ತಿದ್ದಂತೆ ಹುಡುಗಿಯರ ನಡತೆ ಕೂಡ ಬದಲಾಗ್ತಿದೆ, ಆಗಲಿ ಬಿಡಿ ಎಲ್ಲಾ ನಮ್ಮಂಗೆ ಇರಬೇಕಂತಿದೆ ಏನು? ನಾನು ಮದುವೆ ಆದಾಗ ನನ್ನ ವಯಸ್ಸು ಒಂಭತ್ತು ವರ್ಷ. ಇನ್ನೂ

* ಮೆದಿಪೀಟ = ಅರಿಷಿಣ

ಖುತುಮತಿಯಾಗಿರಲಿಲ್ಲ. ನಿಮ್ಮವ್ವ ಕಸಮುಸರಿ, ಪಾತ್ರೆ ಪಡಗ ಬೆಳಗತಾಳ ಕಳಸು ಅಂತ ನಮ್ಮಪ್ಪಗ ಹೇಳಿ ಕರ್ಕೊಂಡು ಬಂದಳು. ನಿಮ್ಮ ಮನಿಯೊಳಗ ದೊಡ್ಡಾಕಿ ಆಗಿ ಇವತ್ತಿನಮಟ ಇಲ್ವೆ?" ತನ್ನ ಇಡೀ ಕತೆಯನ್ನ ಹೇಳಿದಕ್ಕೆ ಕಾರಬಾರಿ ಬಾಯಿ ಮುಚ್ಕೊಂಡಿದ್ದ. ಬಹಳ ಜನರು ಮೈಕಿನಲ್ಲಿ ಖಾಲಿ ಥಾವಲೊ ಕೇಳಿ ಹೈರಾಣ ಆಗಿದ್ರು. ರಂಕಿಗೆ ಬಾಯಿ ಬಿಟ್ಟು ಏನು ಹೇಳಾಕು ಆಗದ ತಳಮಳಗೊಂಡು ಅರ್ಧಕ್ಕೆ ಯಾರು ಕರದಂತಾಗಿ ಎದ್ದುಹೋಗಿದ್ದಳು. ಬೇರೆ ಹೆಂಗಸರು ತಮ್ಮ ಮರ್ಯಾದಿ ಯಾಕೆ ತಕ್ಕೊಳೋದು ಅಂತಂದು ಹಾಡು ಹಾಕಲು ಹೇಳಿ ಮೈಕ ಬಿಟ್ಟು ಬೇರೆ ಕಾರ್ಯಕ್ಕೆ ಅಣಿ ಮಾಡಿದ್ದರು.

ಸಾಮ್ಕಿ ಮಾಡಿದ ಅವಾಂತರ ಚರ್ಚೆಗೆ ಗ್ರಾಸವಾಗಿತ್ತು. ಕೂಲಿಗೆ ಹೋಗೊ ತಾಂಡದ ಹೆಂಗಸರು ಇಡಿ ದಾರಿ ತುಂಬ ಸಾಮ್ಕಿಯ ಥವಲೊದ ವಿಷಯವನ್ನೇ ಸಂಪೂರ್ಣವಾಗಿ ಚರ್ಚೆ ಮಾಡುತ್ತ ಹೊರಟಿದ್ದರು. "ಏನ ಕಾಲ ಬಂತೆ ನಮ್ಮವ್ವ, ಅಲ್ಲಾ ತಂದೆ ತಾಯಿ ಮನಿ ಬಿಡ್ತಿನಿ ಅನ್ನೊ ಆತಂಕ ಇಲ್ಲ, ದುಃಖನೆ ಇಲ್ಲಾ ಹುಡುಗಿಗೆ, ಮುಂದಿನ ಮನಿಯಾಗ ಆರಾಮ ಮಡಾಕ ಹೊಂಟೈಂಗ್ಯೆತೆ" ಅಂದಳು ಹಾಲವ್ವ. "ಹುಡುಗಿಯದು, ಭಾರಿ ದಿಮಾಕಿನಾಕಿ ಬಿಡೆ ಸಣವ್ವ, ಅಕಿದೇನ ತಗಿತೀಯ. ಅದೇನು ದಿಮಾಕು ಜಗತ್ತಿನ್ಯಾಗಿಲ್ಲದ ಹುಡುಗ ಅವಳಿಗೆ ಸಿಕ್ಕಾನ ಮದವಿ ಮುಗಿದು ಅಂಡಹರಿತಾರಲ್ಲ ಆಗ ತಿಳಿತೈತೆ ಲೌಡಿಗೆ ಬಿಡು" ಸಾಮ್ಕಿ ಮನಿಪಕ್ಕದ ಮನೆಯ ಗುಲಾಬಿ ಹೇಳಿದಳು. ಊರ ಹೊಲಗಳಿಗ ಹೋದ ತಾವ ಅದೇ ವಿಷಯ ಚರ್ಚೆಯಾಗಿತ್ತು. ಮಾತುಗಳಿಗೆ ಹಾಗೆ ರೆಕ್ಕೆ ಪುಕ್ಕ ಬಂದು ಪರ ತಾಂಡಗಳ ಮಟಾನು ತಲುಪಿತ್ತು. ಅಂತು ಸಾಮ್ಕಿ ಬಾಯಿ ಮಂದಿ ಬಾಯಿಗೆ ಆಹಾರವಾಗಿದ್ದಳು. ಅದೇ ತಾಂಡದಲ್ಲಿ ಆದ ಮೂರ್ನಾಕು ಮದುವೆಗಳಲ್ಲಿ ಹುಡುಗಿಯರು ಸಾಮ್ಕಿಯಂತೆ ಮಾಡದೆ ಥಾವಲೊ ಕಲಿತು ಚೆನ್ನಾಗಿಯೇ ಅತ್ತಿದ್ದರು. ಕಾಲಕ್ರಮೇಣ ಮಂದಿಗೆ ಸಾಮ್ಕಿಬಾಯಿಯ ಮದುವೆ ಮರೆತು ಹೋಯಿತು. ಅದಾಗಿ ಎಷ್ಟೊ ಮದುವೆಗಳು ನಡೆದವು, ಎಷ್ಟೊ ಹುಡುಗಿಯರು ವಿದಾಯಗೊಂಡರು. ತಾಂಡದ ಮಂದಿನೂ ಬದಲಾಗಿದ್ದರು, ಎಷ್ಟೊ ವರ್ಷಗಳ ಹಿಂದೆ ಭದ್ರಾನಾಯ್ಕನ ತಾಂಡ ಬಿಟ್ಟು ಬೆಂಗಳೂರು ಸೇರಿದ ಬಂದಾಡಿನಾಯ್ಕ, ಸಣ್ಣ ಪುಟ್ಟ ಕೆಲಸ ಮಾಡ್ಕೊಂತ, ತರಗಾರ ಆದ ಸೆಂಟ್ರಿಂಗ್ ಹಾಕೋದು ಮಾಡಿದ, ಟೈಲ್ಸ್ ಕೂಡಿಸುವ ಕೆಲಸ ಮಾಡಿದ, ಮನೆ ಕಟ್ಟುವ ಎಲ್ಲಾ ಕೆಲಸಗಳಲ್ಲಿ ನಿಸ್ಸೀಮನಾಗಿ ಮೇಸ್ತ್ರಿ ಆದ, ಮುಂದೆ ಬರ್ತಾ ಬರ್ತಾ ತಾನೆ ಖುದ್ದು ಕಾಂಟ್ರಕ್ಟ್ ಹಿಡಿದು ಮನೆ ಕಟ್ಟತೊಡಗಿದ. ವರ್ಚಸು ಬೆಳಿತು, ನಾಕು ಕಾಸು ಕೈಸೇರಿತು, ಮಕ್ಕಳನ್ನು ಸ್ಕೂಲಿಗೆ ಹಾಕಿದ, ಬೆಂಗಳೂರಂತ ನಗರದಲ್ಲಿ ಓದಿದವಕ್ಕೆ ಭದ್ರನಾಯ್ಕನ ತಾಂಡ ಏನು ಗೊತ್ತು. ಅಲ್ಲಿಯ ರೀತಿ, ರಿವಾಜು ಏನು ಗೊತ್ತು.

ಯಾವಗಾದರೂ ಒಮ್ಮೆ ಹಬ್ಬಕ್ಕೆ ಬರುವ ಬಂದಾಡಿಗೆ ಅರ್ಥ ಅವನ ಸಮಾಜದ ನಡಾವಳಿಗಳು ಮರೆತು ಹೋಗಿದ್ದವು. ಇನ್ನು ಮಕ್ಕಳಿಗೆ ಏನು ಹೇಳಿಕೊಡಾಕ ಸಾಧ್ಯವಾದೀತು. ಅವನ ನಾಲ್ಕು ಮಂದಿ ಸೂರದ್ರೂಪಿ ಹುಡುಗಿಯರು ತಾಂಡದ ಕಡಿಗೆ ಬರುವ ಮಾತೆ ತಗಿಯದಾಗಿದ್ದರು. ಪಟ್ಟಣದ ಹವಾ ತಿಂದು ಬೆಳೆದವಕ್ಕೆ ಭದ್ರಾನಾಯ್ಕನತಾಂಡ ಅಂದ್ರೆ ಅಲರ್ಜಿಯಾಗಿತ್ತು. ಬಂದವರು ಒಂದು ದಿನ ಉಳ್ಕೊಂಡರೆ ಹೆಚ್ಚಾದೀತು. ವಾಪಾಸು ಬೆಂಗಳೂರಿಗೆ ಓಡುತ್ತಿದ್ದರು. ಬಂದಾಡಿಗೆ ತನ್ನ ಮಕ್ಕಳ ಮದುವೆ ಬಂಜಾರ ರೀತಿ ರಿವಾಜಿನಂತೆ ಮಾಡುವ ಆಸೆಯಿತ್ತು. ಹಾಗಾಗಿ, ಅವನ ಹಿರಿಮಗಳು ಸಾಕಮ್ಮನ ಮದುವೆಯನ್ನ ಭದ್ರಾನಾಯ್ಕನ ತಾಂಡದಲ್ಲೆ ಮಾಡಲು ಅವನ ತಮ್ಮ ಹೀರ್ಯಾನಾಯ್ಕನಿಗೆ ಹೇಳಿದ. ಪಾಪ ಹೀರ್ಯಾನಾಯ್ಕನಾದರೂ, ಅಣ್ಣ ಹೇಳಿದ ಅಂತ ಎಲಿತೋಟದಮಲ್ಲಪ್ಪನ ತ್ವಾಟದಿಂದ ತೆಂಗಿನಗರಿ, ಹಂದರಗಾಯಿ, ನೂರ ಕವಳಗಿ ಎಲೆ ತಂದು ಇಟ್ಟ. ಊರವರ ಹತ್ತಿರ ಕಾಡಿಬೇಡಿ ಹಂದರಕ್ಕೆ ಬೇಕಾಗುವ ಗಳಗೂಟದ ವ್ಯವಸ್ಥೆ ಮಾಡಿ ಹಂದ್ರಾನೂ ಹಾಕಿಸಿದ. ಹುಡುಗ ಯಾವೂರನವನು ಅಂತ ಗೊತ್ತಿಲ್ಲ, ಮದುವೆ ಕಾರ್ಯ ಯಾವಾಗ ಆರಂಭ ಆಗಬೇಕು ತಿಳಿದಿಲ್ಲ, ಮದುವೆ ಮುಂಚೆ ಬೆಲ್ಲದ ಶಾಸ್ತ್ರ ಆಗಬೇಕು, ನಂತರ ಹುಡುಗನ ಕಡೆಯವರು ಹೊಸ ಸ್ವಾರಿ, ಮಡಿಕೆ, ಕುಡಿಕೆ ಕೊಡಿಸುವ ಶಾಸ್ತ್ರವಾಗಬೇಕು, ಹೀರ್ಯಾ ಆತಂಕದಲ್ಲಿದ್ದ. ಆದರೆ ಅವನ ಅಣ್ಣ ಬಂದಾಡಿಗೆ ಸಂಪ್ರದಾಯ ನೆನಪಿದ್ದರಿಂದ ಸಂಜೆ ಮೂರರ ಹೊತ್ತಿಗೆ ಕಾರಲ್ಲಿ ಬಂದು ಇಳಿದ. ಯಾವುದೊ ದೊಡ್ಡ ಆಸ್ಪತ್ರೆಯೊಂದರಲ್ಲಿ ನರಸಮ್ಮ ಆಗಿರೊ ಸಾಕಿಗೆ, ಇದೆಲ್ಲಾ ಸುತಾರಾಂ ಇಷ್ಟವಿರಲಿಲ್ಲಾ. ಆದರೆ ತಂದೆಯ ಬಯಕೆ ಈಡೇರಿಸುವ ಸಲುವಾಗಿ ಹೂಂ ಅಂದಿದ್ದಳು. ಅದರಂತೆ ಭದ್ರಾನಾಯ್ಕನ ತಾಂಡಕ್ಕೂ ಬಂದಿದ್ದಳು. ಲಮಾಣಿ ಡ್ರೆಸ್ಸು ಹಾಕಬೇಕೊ ಬೇಡವೋ ಎನ್ನುವುದು ಅವಳಿಗೆ ತಿಳಿಯದಾಗಿತ್ತು. ಲಮಾಣಿ ರೀತಿ ರಿವಾಜಿನಿಂದ ಮದುವೆಯಾಗುತ್ತಿದ್ದರಿಂದ, ಹೀರ್ಯಾ ತಂದಿದ್ದ ಅವನ ಹೆಂಡತಿಯ ಧಾರೆ ಸೀರೆಯನ್ನ ಹಳೆ ಪೆಟಾರಿಯಿಂದ ತೆಗೆಸಿದ್ದ. ಕುಪ್ಪಸ, ತಲೆಮೇಲೆ ಛಾಂಟೀಯ (* ಛಾಂಟೀಯ– ತಲೆಮೇಲಿನ ಒಡ್ನಿ) ಹೊದ್ದು ಹೊಸಅನುಭವ ಪಡೆದಿದ್ದಳು ಸಾಕಿ. ಹೊಸ ತಲೆಮಾರಿನ ಹುಡುಗಿ, ಕೈಯೊಳಗೆ ಮೊಳುದ್ದ ಮೊಬೈಲು ಫೋನು, ಹಳೆ ಕಾಲದ ಮೈಕ್ ಸಿಸ್ಟಂ ಹೋಗಿ ಇಡೀ ಊರಿಂದೂರೆ ನಡುಗುವಂತಹ ಡಿ.ಜೆ.ಸೆಟ್ಟು ಬಂದಿತ್ತು. ಹುಡುಗ ಸರ್ಕಾರಿ ಇಂಜಿನಿಯರ್ ಅವನ ಹಿಂದೆ ಬಂದವರು ಅರ್ಥಂಬರ್ಥ ತಾಂಡ ಸಂಸ್ಕೃತಿ ಬಲ್ಲವರಾಗಿದ್ದರಿಂದ "ಛೋರಿ ನಾಚೆ ಚಮ್ಮಕ ಚಮ್ಮಕ" ಎನ್ನುವ ಹಾಡಿಗೆ ಹುಡುಗ, ಹುಡುಗಿ ಸಮೇತವಾಗಿ ಕುಣಿದು ಕುಪ್ಪಳಿಸಿದ ಮೇಲೆ ಶಾಸ್ತ್ರಕೆ ಅವಳಿಗೆ ಢಾವಲೊ ಕಲಿಸಲು ಬಂದಿದ್ದ

* ಛಾಂಟೀಯ– ತಲೆಮೇಲಿನ ಒಡ್ನಿ

ಹೆಂಗಸರು, ಸಾಕಿಗೆ ಹೇಳಿಕೊಡಲು ಮುಂದಾದರು ಅವರ ಮುಖ ನೋಡುತ್ತ ಅವರು ಹೇಳುವುದು ತಿಳಿಯದೆ ನಗತೊಡಗಿದಳು. ಅವಳ ತಂಗಿಯರು "ಲೇ ಸಾಕಿ, ಶಾಸ್ತ್ರ ಕಣೆ, ಅವರು ಹೇಳಿದಂಗೆ ಮಾಡು" ಬಡ್ಕೊಂಡ್ರು. ಆದರೆ ಅವಳು ಮಾತ್ರ ದರಕಾರ ಮಾಡದೆ, "ಹೋಗ್ರೆ, ಎಲ್ಲಿ ಹಚ್ಚಿರಿ, ನಾನು ಹುಟ್ಟಿದಾಗಿನಿಂದ ಅತ್ತೆ ಇಲ್ಲ, ಇವರು ಗೋರ್‌ಮಾಟಿಯಲ್ಲಿ ಏನೇನೊ ಅಂತವೆ ನನಗೆ ಅರ್ಥನೇ ಆಗ್ತಾ ಇಲ್ಲ" ಅವರ ಅನಿಸಿಕೆಯನ್ನ ನಿರಾಕರಿಸಿದಳು. ಹಿರಿಯ ಹೆಂಗಸರು "ನೋಡಿದ್ರೆನವ್ವ ಎಂಥ ಕಾಲಬಂತು, ಇವರಪ್ಪ ಇಲ್ಲೆ ಕೂಲಿ ಮಾಡ್ತಿದ್ದ, ಬೆಂಗಳೂರಿಗೆ ಓಡಿಹೋಗಿ ನಾಕ ಕಾಸು ಮಾಡಿದ, ಹೆಣ್ಣು ಮಕ್ಕಳಿಗೆ ಸಂಸ್ಕಾರ ಕೊಡಲಿಲ್ಲಾ, ಮುಂದ ಇವರ ಬಾಳೇವು ಹೆಂಗಂತಿನಿ" ರಾಮಜ್ಜಿ ಹಣಿಹಣಿ ಬಡಕೊಂಡಳು. "ಎಲ್ಲಿ ಸರಿರವ್ವ ಆಟು ಲೇ ಹುಡುಗಿ, ನೀ ಢಾವಲೊ ಮಾಡಲ್ವೇನೆ?" ಕೇಳಿದಳು. "ಎಯ್, ಎಲ್ಲಿ ಹಚ್ಚಿ ಹೋಗಬೆ, ನೀವು ನಿಮ್ಮ ಭಾಷೆಯೊಳಗೆ ಏನೇನೊ ಹೇಳ್ತಿರಾ, ನನಗೆ ಅರ್ಥನೆ ಆಗವಲ್ದು" ತಲೆ ಕೊಡವಿದಳು. "ಅಲ್ಲೆ ಇದು ನಿನ್ನ ಭಾಷೆ ಅಲ್ವಾ, ನೀ ಏನು ಕೋರ್‌ಗೆ (* ಕೋರ್–ಬಂಜಾರ ಅಲ್ಲದವರು) ಹುಟ್ಟಿಯಾ? ಗೋರ್ (* ಗೋರ್–ಬಂಜಾರರು) ಆದ ಮೇಲೆ ಇವೆಲ್ಲಾ ನಾವು ಮಾಡಲೇಬೇಕು" ರಾಮಜ್ಜಿ ಜಾಡಿಸಿದಳು. "ಇಲ್ಲಾಂದ್ರೆ ಇಲ್ಲ, ನನಗೆನು ಬರೋದಿಲ್ಲ ನಾ ಒಲ್ಲೆ ಬಿಡು" ಅಂದಾಕಿನ ಎದ್ದು ಹೊರಟಳು. "ಆಯ್ತು ನಡಿರೆ ಬೇರೆ ಏನಾದರೂ ಶಾಸ್ತ್ರಗಳಿದ್ದರೆ ಮಾಡ್ರಿ" ರಾಮಜ್ಜಿ ಎದ್ದಳು. ಮರುದಿನ ಮುಂಜಾನೆ ಇಡೀ ಊರ ತುಂಬ ಬಂದೇಡಿನಾಯ್ಕನ ಮಗಳು ಸಾಕಿಯದ್ದೆ ಚರ್ಚೆ, "ಏನು ಕಾಲ ಬಂತೆ ನಮ್ಮವ್ವ, ಮದುವೆ ಹುಡುಗಿ, ಮದುಮಗಳ ಕಣ್ಣಾಗ ಒಂದ ಹನಿನೀರು ತಗಿಲಿಲ್ಲಾ ಎಂಥ ಗಟ್ಟಿಗಿತ್ತಿ ಅಂತೀನಿ. ಹೆಣ್ಣಂದ್ರ ಹಿಂಗಿರಬೇಕ ನೋಡು" ಚಾಂದಿ ಹಿಂದು ಮುಂದು ನೋಡದೆ ಹೇಳಿದಳು. ಒಂದು ತಿಂಗಳ ಕಾಲ ಅವಳದ್ದೆ ಚರ್ಚೆ ತಾಂಡಗಳಲ್ಲೆಲ್ಲಾ ಹರಡಿದ್ದೆ, ಕೆಲವು ಜನರಲ್ಲಿ ಆತಂಕವನ್ನು ಉಂಟು ಮಾಡಿತ್ತು. "ಅಲ್ಲಾ ಈ ಹುಡುಗಿಯರು ಒಂದೊಂದೆ ಆಚರಣೆಯನ್ನು ಮರೆಯುತ್ತ ಹೋದರೆ ನಾವೆ ಬಂಜಾರರು ಎನ್ನುವ ಅಸ್ಥಿತ್ವ ಉಳಿದೀತೆ" ಹಟ್ಟಿನಾಯ್ಕ ಅಣ್ಣಾನಾಯ್ಕ ಆತಂಕಗೊಂಡಿದ್ದ. ಏನು ಮಾಡೋದು ಹೇಳಿ ಹಟ್ಟಿನಾಯ್ಕಪ್ಪ ದೊಡ್ಡ ಸಿಟಿಯೊಳಗೆ ಬೆಳದವೆ, ಟಸ್‌ಪುಸ್ಸಂತ ನಾಕು ಇಂಗ್ಲಿಷ್ ಮಾತು ಕಲ್ತವೆ ಎಡಬಿಡಂಗಿಗಳು, ಆಕಡೆ ಪಾಶ್ಚತ ಸಂಸ್ಕೃತಿಯನ್ನು ಅನುಕರಣಿ ಮಾಡುತ್ತಿಲ್ಲ, ಈ ಕಡೆ ಕನ್ನಡದ ಬದಕನ್ನೂ ಬದುಕುತ್ತಿಲ್ಲ. ಇನ್ನೂ ನಮ್ಮ ತಾಂಡದ ಬದುಕು ಗೊತ್ತೆ ಇಲ್ಲ. 'ಸಳೋಯಿ' (*ಸಳೋಯಿ– ಬಂಜಾರರಲ್ಲೆ ಇರುವ

*** ಕೋರ್–ಬಂಜಾರ ಅಲ್ಲದವರು**

*** ಗೋರ್–ಬಂಜಾರರು**

*** ಸಳೋಯಿ– ಬಂಜಾರರಲ್ಲೆ ಇರುವ ಮಾಂಸದಡುಗೆ**

ಮಾಂಸದಡುಗೆ) ಅಂದ್ರೆ ಮೂಗ ಮುರಿತವ್ರೆ, ತಲೆಕಾಲು ತಿನ್ನಲ್ಲ ಅಂತಾರೆ ಮಟನ್ ತಿನ್ನಲ್ಲ, ಏನಿದ್ದರು ಬಾಯ್ಲರ್ ಕೋಳಿಬೇಕು ಅಂತವೆ, ಇನ್ನೂ ಭಾಷೆ ಸಂಸ್ಕೃತಿ ದೂರ ಉಳಿತು. ರೊಟ್ಟಿ ಅಗಿಯೋದಕ್ಕೆ ಆಗಲ್ಲ, ಮುದ್ದೆ ನುಂಗಾಕ ಆಗಲ್ಲ, ಹಲ್ಲು ಗಟ್ಟಿ ಇಲ್ಲ, ಗಂಟಲೊಳಗೆ ದೊಡ್ಡ ರಂಧ್ರವಿಲ್ಲ, ಕೋಳಿ ತಿನ್ನುವಂತೆ ಅನ್ನ ತಿಂತವೆ. ನವ ನಾಗರೀಕ ಬಂಜಾರರ ಬದುಕಿನ ಅನಾವರಣಗೊಳಿಸಿದ್ದ ಬಂದೋಡಿನಾಯ್ಕ. ಅವನು ಮಕ್ಕಳಿಗೆ ತನ್ನ ಸಂಸ್ಕೃತಿ ಕೊಡುವ ಪ್ರಯತ್ನ ಮಾಡಿದ್ದ, ಆದರೆ ಭಾಷೆ ಮತ್ತು ಸಂಸ್ಕೃತಿಯ ಕೊಂಡಿ ಕಳಚಿಕೊಂಡಿತ್ತು. ಬಂದೋಡಿ ಒಳಗೊಳಗೆ ನೊಂದುಕೊಂಡಿದ್ದ ಹಾಗಾಗಿ ವಾಪಾಸು ತಾಂಡಕ್ಕೆ ಬರು ಆಲೋಚನೆಯನ್ನ ಮಾಡಿದ್ದ. ಆದರೆ ಮಕ್ಕಳು ಮಾತು ಕೇಳದ್ದಕ್ಕೆ ಅನಿವಾರ್ಯವಾಗಿ ಬೆಂಗಳೂರಲ್ಲೇ ಉಳಿಯಬೇಕಾಯಿತು. ಬೆಂಗಳೂರಿಗೆ ದುಡಿಯಲು ಬಂದ ಅವನ ತಾಂಡದವರಿಗೆ ತಮ್ಮ ಬೇರುಗಳನ್ನು ಕಡಿದುಕೊಳ್ಳದಂತೆ ತಿಳುವಳಿಕೆ ಹೇಳುತ್ತಿದ್ದ. ಹುಲಿಯೂರ ಇವೆಲ್ಲಾ ಹೇರುಪೇರುಗಳನ್ನು ಬಹಳ ಹತ್ತಿರದಿಂದ ನೋಡಿ ವಿಶ್ಲೇಷಣೆಗೆ ತೊಡಗಿದ್ದ. ನಾವು ಎಷ್ಟೆ ಬೇಡವೆಂದರೂ ಸಂಸ್ಕೃತಿ, ನಾಗರೀಕತೆಯ ಬದಲಾವಣೆ ಆಗುತ್ತಲೆ ಇರುತ್ತದೆ, ನಮಗೆ ತಿಳಿಯುವುದೇ ಇಲ್ಲ, ಆದರೆ ತಮ್ಮ ಅಸ್ತಿತ್ವದ ಪ್ರತೀಕವಾದ ಭಾಷೆಯನ್ನು ಮರೆತ ದಿನ ಸಂಸ್ಕೃತಿಯ ಸಾವು ನಿಶ್ಚಿತ ಎನ್ನುವುದನ್ನು ಬಂದೇಡಿನಾಯ್ಕನ ಹಿರಿಮಗಳು ಸಾಕಮ್ಮನ ಮದುವೆಯಿಂದ ಕಂಡುಕೊಂಡಿದ್ದ. ಅವಳಿಗಿಂತ ಮೊದಲು ಮದುವೆಯಾಗಿದ್ದ ಸಾಮ್ಕಿಯ ಮದುವೆಯಿಂದಲೇ ಒಂದಿಷ್ಟು ಬದಲಾವಣೆ ಕಂಡಿತ್ತು. ಆದರೆ ಇದು ಸಂಸ್ಕೃತಿಗೆ ಬಂದೊದಗಿದ ಗಂಡಾಂತರವೆ ಸರಿ ಅಂತ ತಾಂಡದ ಜನರ ಆತಂಕ.

* * *

56. ಸೂಕಿಯ ತಾಂಗಡಿ ಬಂದದ್ದು

ಬೊತನಾಯ್ಕನ ಮಗ ಜೆಮು ಹಳದಿಪುರ ತಾಂಡದ ಸಂಕ್ರಿನಾಯ್ಕನ ಮಗಳನ್ನ ಮದುವೆಯಾದ. ಹಳದಿಪುರ ಹದಿನೈದು ಮೈಲಿ ದೂರ ಇದಿದ್ದರಿಂದ ಸೂಕಿ ಮತ್ತು ಜೇಮುರ ತಾಂಗಡಿ (*ತಾಂಗಡಿ–ದಿಬ್ಬಣ) ಹೊತ್ತಾರೆ ಬಿಟ್ಟು ಸರಿಯಾದ ಸಮಯಕ್ಕೆ ಬಂದು ಸೇರಿತು. ಸಂಪ್ರದಾಯದಂತೆ ಸೇವಾಭಾಯನ ಗುಡಿ ಮುಂದೆ ಮದುಮಗ, ಮದುಮಗಳು, ಅವರ ಹಿಂದೆ ಬಂದ ಎಲ್ಲಾ ಅತಿಥಿಗಳು, ಹುಡುಗಿಗೆ ಕೊಡಲು ತಂದಿದ್ದ ಎಲ್ಲಾ ಸಾಮಾನುಗಳೊಂದಿಗೆ ಕುಳಿತಿದ್ದರು. ಶಾಸ್ತ್ರದ ಪ್ರಕಾರ, ಹಳದಿಪುರ ತಾಂಡದ ಹುಡುಗಿಯರು ಮತ್ತು ಭದ್ರಾನಾಯ್ಕನ ತಾಂಡದ ಹುಡುಗಿಯರ ನಡುವೆ ಬೊಯ್ಯುವುದರ ಸಂಘರ್ಷ ನಡಿಬೇಕು. ಹಳದಿಪುರದ ಹುಡುಗಿಯರ ಗುಂಪು ಮದುಮಗ, ಅವನ ತಾಯಿ, ತಂದೆ, ಸಹೋದರಿ, ಸಹೋದರರನ್ನು ಸರಿಯಾಗಿ ಮಂಗಳಾರತಿ ಮಾಡುತ್ತಿದ್ದರು. ಹೋದತಕ್ಷಣ ಹುಡುಗಿಯರು ಕಾಣಲಿಲ್ಲ, ಬೊಯ್ಯುವುದರೊಂದಿಗೆ ಸ್ವಾಗತಿಸಲಿಲ್ಲ ಸುರು ಆಯ್ತು ನೋಡಿ. "ಸೀರೆ ಹೊತ್ಕೊಂಡು ಮಲಗಿರೇನೆ ನನ್ನ ಸೌತಿಯರ ನಿಮಗೆ ನಾಚಿಕೆ, ಮಾನಮರ್ಯಾದಿನೆ ಇಲ್ಲ" ಹುಡುಗಿಯರನ್ನೇ ಮೊದಲು ತರಾಟೆಗೆ ತೆಗೆದುಕೊಳ್ಳಲಾಗುತ್ತಿತ್ತು. ಈ ತಾಂಡದ ಹುಡುಗಿಯರೇನು ಕಮ್ಮಿ ಅವರು ಹಾಡು ಸುರು ಮಾಡುವುದನ್ನೇ ಕಾಯುತ್ತಿದ್ದವರಂತೆ "ಹಳ್ಳ ಕೊಳ್ಳದಲ್ಲ, ಉಳ್ಳಾಡಿ ಬಂದ್ರೆನ್ರೆ, ನಿಮಗೆ ನಾಚಿಕೆ, ಮರ್ಯಾದೆ ಇಲ್ಲ" ಕಲಕಲ ಸುರುವಾಗುತ್ತಿತ್ತು. ಒಂದೆರಡು ಗಂಟೆಗಳ ಕಾಲ ಬೊಯ್ಯಗಳ ಚಕಮಕಿ, ತಾರಕಕ್ಕೆ ಏರುತ್ತಿತ್ತು. ಅವರು ಯಾರು ಅಂತ ಇವರಿಗೆ ಗೊತ್ತಿಲ್ಲ ಈ ಹುಡುಗಿಯರು ಯಾರು ಅಂತೇಳಿ ಆ ಹುಡುಗಿಯರಿಗೆ ಗೊತ್ತಿಲ್ಲ, ಆದರೆ ಸಂಪ್ರದಾಯದಂತೆ ಬೊಯ್ಯುವುದು ರೂಢಿಯಲ್ಲಿತ್ತು. "ಮದುಮಗನ ತಾಯಿ ಕರಿ ಹೆಗ್ಗಣ, ಅವನ ತಂಗಿ ಕೋತಿ, ತಮ್ಮ ಕತ್ತೆ, ತಂದೆ ಬುದ್ಧಿ ಹೀನ ಮದುಮಗನವ್ವವು ಇಲಿಯಂತ

* ತಾಂಗಡಿ–ದಿಬ್ಬಣ

ಕಿವಿಗಳು, ಸೊಟ್ಟ ಮೂಗು" ಬೊಯ್ದು ಹಣ್ಣಗಾಯಿ ನೀರುಗಾಯಿ ಮಾಡುತ್ತಿದ್ದರು. ಹುಡುಗನ ಕಡೆಯವರು. "ಮದುಮಗಳು ಅರೆಪ್ರಜ್ಞೆಯವಳು, ಅವಳ ತಾಯಿ ದಡ್ಡಿ ಏನು ಕಲಿಸಿಲ್ಲ, ಅಪ್ಪ ಪೆದ್ದ ತಂಗಿಯರು ಸೋಗಲಾಡಿಗಳು" ಅವಳ ಮುಖದ ಮೇಲೆ ಹುಡುಗಿಯರು ಮಂಗಳಾರತಿ ಎತ್ತುತ್ತಿದ್ದರು. ಇದರಿಂದಾಗಿ ಹುಡುಗಿಯ ಕಡೆಯವರಾಗಲಿ, ಹುಡುಗನ ಕಡೆಯವರು ವಿಚಲಿತರಾಗುತ್ತಿರಲಿಲ್ಲಾ. ಇದೊಂದು ಶಾಸ್ತ್ರವೆಂದು ಮಾತ್ರ ಪರಿಗಣಿಸಲಾಗುತ್ತಿತ್ತು. ಒಂದೆರಡು ಗಂಟೆ ಕಾಲ ಮುಂಜಾನೆ ಹೊತ್ತಾರೆ ಗೂಡು ಬಿಡುವ ಮೊದಲು ಹಕ್ಕಿಗಳು ಹಲರವ ಮಾಡುವಂತೆ ಕಲರವ ಮಾಡಿದ ಮೇಲೆ ಹಟ್ಟಿನಾಯಕನ ಹೆಂಡತಿ, ಇಲ್ಲಾಂದ್ರೆ ಊರ ಹಿರಿಯ ಹೆಂಗಸು ಬಂದು "ಸುಮ್ಮನಿರ್ರೆ" ಎಂದು ಸುಮ್ಮನಿರಿಸುವ ಪ್ರಯತ್ನ ಮಾಡುತ್ತಿದ್ದಳು. ಆದರೆ ಅವಳಮಾತಿಗೆ ಸುಮ್ಮನಿರಬೇಕು ಅಂತೇನು ಇಲ್ಲ. ಅದನ್ನ ಧಿಕ್ಕರಿಸಿ ಬೊಯ್ಯುವ ಚಟ ಇರುವವಳು, ಬಹಳ ದಿನಗಳಿಂದ ಮನೆಯೊಳಗೆ ತಂದೆ, ತಾಯಂದಿರು, ಸೋದರರು ಬೊಯ್ದು ಹಿಂಸಿ ಮಾಡಿದ್ದರೆ ಆ ಸಿಟ್ಟು ಹೊಸದಾಗಿ ಮದುವೆಯಾದ ಹೆಂಗಸರೂ ಕೂಡ ಸೇರಿಕೊಳ್ಳುತ್ತಿದ್ದರು. ಮನೆಯೊಳಿಗೆ ಅತ್ತೆ ಮಾವಂದಿರು, ನಾದಿನಿಯರು, ಮೈದುನರು ಕೊಟ್ಟ ಹಿಂಸೆ ಬಹಳ ದಿನಗಳಿಂದ ಎದೆಯೊಳಗೆ ಕಿಚ್ಚಾಗಿ ಉರಿಯುತ್ತಿರುತ್ತೆ. ಎಲ್ಲೂ ತಗಿಯಲು ಆಗದ್ದು ಈ ಸಂದರ್ಭದಲ್ಲಿ ಸುಲಭವಾಗಿ ಹೊರಹಾಕುವ ಸಮಾರಂಭ ಇದಾಗಿರುವುದರಿಂದ ಎಲ್ಲರೂ ಸುಮ್ಮನಿದ್ದರು. ಇಂತಹ ಹೆಂಗಸರು ಅವಮಾನಿತರು ಮಳೆ ಹನಿ ನಿಂತರು ಮರದ ಹನಿ ನಿಲ್ಲದಂತೆ ಸುರು ಇಟ್ಕೊಂಡಿರುತ್ತಿದ್ದರು. ತಾರಮಾರ ಬೊಯ್ಯಗಳು ನಾನ್‌ಸ್ಟಾಪ್ ಸುರಿಮಳೆಯಂತೆ ಹೆಣ್ಣಿನ ಕಡೆಯವರು, ಗಂಡಿನ ಕಡೆಯವರು ದಿಬ್ಬಣಕ್ಕೆ ಅಂತ ಇಡಿ ಊರಿನ ಹಿರಿಕಿರಿಯ ಹುಡುಗಿಯರು ಬೆಳಂಬೆಳಗ್ಗೆನೆ ತಯಾರಾಗಿ ಬಂಡಿ ಯಾವಾಗ ಕಟ್ಟಿಯಾರು ಅಂತ ದಾರಿ ಕಾಯುತ್ತಿದ್ದರು. ಮುಂದಿನ ಕಾರ್ಯಕ್ರಮಗಳು ಬಹಳ ಇರುವುದರಿಂದ ಯಾರಾದರೂ ಒಬ್ಬರು "ಎಯ್ ಸಾಕಮಾಡ್ರಿನ್ನ ಹೊತ್ತಾಗಿದೆ ಇನ್ನೂ ಬಹಳ ಕೆಲಸ ಇದ್ದಾವೆ" ರಾಮಜ್ಜಿ ಮೊದಲನೇ ವಾರ್ನಿಂಗ್ ಕೊಟ್ಟಳು. ಹುಡುಗಿ ಕಡೆಯವರು ಧ್ವನಿ ತಗ್ಗಿಸಿದ್ದೆ ತಡ ಪಕ್ಕದ ಬೀದಿನಾಯಿ ಬಾರ್ಡರ್ ಕ್ರಾಸ್ ಮಾಡಿದ ನಾಯಿಯ ಮೇಲೆ ಮುಗಿಬಿದ್ದಂತೆ ಮುಗಿ ಬಿದ್ದ ಗುಂಪುಗಳು, ಎರಡು ನಾಯಿಗಳಲ್ಲಿ ಯಾವುದಾದರೂ ಧ್ವನಿ ತಗ್ಗಿಸಿದರೆ ಮತ್ತೊಂದು ನಾಯಿ ನೆರೆದ ಹೆಣ್ಣು ನಾಯಿಗಳ ಮೇಲೆ ಪೌರುಷ ತೋರಿಸಲು ವಿಕಾರ ರೂಪದಲ್ಲಿ ಶಬ್ಧ ಮಾಡುತ್ತ ಧ್ವನಿ ಏರಿಸುವಂತೆ ಗಂಡಿನ ಕಡೆಯವರು ಕಲಕಲ ಮಾಡಿದರು. "ಗೊತ್ತು ಬಿಡ್ರೆ ನೀವು ಬೊಯ್ಗಳನ್ನ ಚೆನ್ನಾಗಿ ಬೊಯ್ತಿರಿ ಅಂತ, ಗಪ್ಪಾಗ್ರಿ ರಾತ್ರಿ ಬಹಳ ಆಗ್ಯೆತೆ, ಹುಡುಗಿ ತಾಯಿ ಕಟ್ಟಿರುವ ಸಿಹಿಯನ್ನು ಯಾರಾದರು ಕೊಡ್ತಿರ" ರಾಮಜ್ಜಿ. ಹುಡುಗಿ ಕಡೆಯವರಿಗೆ ಕೇಳಿದಳು. ಸೂಕಿಯ ತಾಯಿ ಚಾಂದಿಬಾಯಿ ಬಿಳಿ ಬಟ್ಟೆಯಲ್ಲಿ ಕಟ್ಟಿದ್ದ ಅಕ್ಕಿಹಿಟ್ಟಿಗೆ ಬೆಲ್ಲ ಹಾಕಿ ಕಲಿಸಿದ ಗುಲ್ಲರ್ (ಸಿಹಿ)ಯನ್ನ ಸೂಕಿಯ ಚಿಗವ್ವ ಬಲಿಯಾರಿ

ದೊಡ್ಡ ಕಟ್ಟಿಗೆಯ ಪೆಟಾರಿಯನ್ನ ತೆಗೆದು ಅದರಿಂದ ಗಂಟು ತಂದುಕೊಟ್ಟಳು. ಎರಡನೇಯ ವಾರ್ನಿಂಗ್ ಕೂಡ ಯಾವ ಪ್ರತಿಕ್ರಿಯೆ ಮಾಡದಾಗಿತ್ತು. "ನಂದು ಹರಕಬಾಯಿ ದೊಡ್ಡ ದೊಡ್ಡ ಶಬ್ಧಗಳನ್ನು ಬಿಡಾಕ ಮುಂಚೆ ಬಾಯಿ ಮುಚ್ರಿ, ನಿಮ್ಮದೇನೆ, ಪರ ಊರಿಂದ ಬಂದವರು ಸುಮ್ಮನಾಗಿಲ್ಲ." ಕೊಡವಿದ ಮೇಲೆ ಕೊಂಯಿ ಕೊಂಯಿ ಅಂತ ನಾಯಿಮರಿ ಸದ್ದು ಮಾಡಿದಂತೆ ಮಾಡಿ ಹುಡುಗನ ಕಡೆಯವರು ಸುಮ್ಮನಾದರು. ಮುದುಕಿ ಸಿಹಿ ಹಂಚುತಿದ್ದಂತೆ, ಹೀರಿ, ಚಾವಳಿ ಅಂತ ಹುಡುಗನ ತಾಂಡದ ಹುಡುಗಿಯರು ಹುಡುಗಿಯ ಹಿಂದೆ ದಿಬ್ಬಣಕ್ಕೆ ಬಂದ ಹುಡುಗಿಯರ ಗುಂಪಿನಲ್ಲಿ ಇವರ ಜೊತೆಗೆ ಕಾಫಿ ತೋಟಕ್ಕೆ ಬೀಜ ಹರಿಯಲು ಹೋದವರು, ಮಂಡ್ಯಕ್ಕೆ ಕಬ್ಬು ಕಡಿಯಲು ಹೋದಾಗ ಸ್ನೇಹ ಬೆಳೆಸಿಕೊಂಡವರು "ಬಂದೆ ಕಣಕ್ಕ, ಎಷ್ಟು ದಿನಗಳಾದವು ನಿನ್ನ ನೋಡಿ, ಚೆನ್ನಾಗಿದ್ದೀಯಾ, ಅಲ್ಲ ನೀ ಒಸಿ ದಪ್ಪ ಆಗಿಲ್ಲ, ಇಲ್ಲ, ಯಾಕೊ ಸೊರಗಿಯವ್ವ, ಅಲ್ಲ ಏನಾತು ಅಂತದ್ದು" ಪ್ರಶ್ನೆಗಳ ಮೇಲೆ ಪ್ರಶ್ನೆ. "ಈಗ ಮನಿಗ ಹೊಕ್ಕಿನಿ, ಮದುಮಗನ ಮನಿಯಾಗ ಊಟ ಮಾಡಿ ಮಕ್ಕೊ ಮುಂಜಾನೆ ಬಂದು ನಮ್ಮ ಮನಿಗ ಕರ್‍ಕೊಂಡ ಹೊಕ್ಕೀನಿ" ಅಂತ ಹೇಳಿ ಒಂದಾಗಿ ಬಿಡುತ್ತಿದ್ದರು. ಇವರು ಸೇಡಂತ ತಿಳಿಯುವುದಿಲ್ಲ, ಅವರು ಅದನ್ನ ಸೇಡು ಅಂತ ಬಗೆಯುವುದಿಲ್ಲ, ಇದೊಂದು ಸಂಪ್ರದಾಯ ನಡಿಬೇಕು ಅಷ್ಟೆ. ಮದುಮಗ, ಅವನ ಸಹಚರ ಎಲ್ಲರನ್ನು ಸಜ್ಜಾಗಿ ಸೋಪು ಹಾಕಿ ತೊಳೆದಂತೆ ಬೈಯ್ಗಳಲ್ಲಿ ತೊಳೆಯುವುದು ಅಷ್ಟೆ. ಮುಂದಿನ ಕ್ಷಣದಲ್ಲಿ ಎಲ್ಲವೂ ಸಹಜವಾಗಿರುತ್ತಿದ್ದವು. ಹುಡುಗನ ದಿಬ್ಬಣವನ್ನ ಅವರ ಚಿಗಪ್ಪ, ದೊಡಪ್ಪ, ಪಕ್ಕದ ಮನೆಯವರು ಯಾರು ಬೇಕಾದರು ಅವತ್ತು ರಾತ್ರಿಯ ಬೋಜನದ ಏರ್ಪಾಟು ಮಾಡುತ್ತಿದ್ದರು.

ಯಾರೊ, ಹುಗ್ಗಿ, ಇನ್ಯಾರೊ ರೊಟ್ಟಿ ಪಲ್ಯೆ ಮಾಡಿ ಬಂದ ಬೀಗರಿಗೆ ಒಳ್ಳೆಯ ರೀತಿಯ ಏರ್ಪಾಟು ಮಾಡಲಾಗುತ್ತಿತ್ತು. ಊಟ ಮುಗಿದೊಡನೆ ಹಂಚಿನ ಮನೆ ಇದ್ದವರು ಬಾಗಿಲಿಗೆ ಸಾಸಾನು ಹೊಸಲು ಹಾಕಿರುತ್ತಿದ್ದರು. ಹೊಸಲಿಗೆ ನವವಧು ಎರಡು ಪೈಸದ್ದೊ, ಮೂರು ಪೈಸದ್ದೊ ತಾಮ್ರದ ಬಿಲ್ಲಿ, ಇಲ್ಲ ಸಿಲಾವರಿ ನಾಣ್ಯದೊಳಗೆ ಸೇರಿಸಿ ಮಳಿ ಬಡಿದು ಒಳಗೆ ಬರಬೇಕು. ಯಾಕಂದ್ರೆ ಮಳಿ ಬಡಿದು ಒಳಗೆ ಹೋದಾಗ ಮಾತ್ರ ನಾಳೆ ಯಾವಗಲಾದರು ಗಂಡ ಹೆಂಡತಿಗೆ ಮನೆ ಬಿಟ್ಟುಹೋಗು ಅಂದರೆ "ಯಾಕೆ ನಾ ಯಾಕ ಹೋಗಲಿ, ಮಳಿಬಡದು ಬಂದೀನಿ" ಅಂತ ಅಂಜಿಸಬಹುದು. ಸೂಕಿಯನ್ನು ಕೂಡ ಅದೇ ರೀತಿ ಮಳಿಬಡದು, ಒಳಗೆ ಸೇರ್ಸಿದ ಮೇಲೆ ಎಲ್ಲಾ ಸಂಪ್ರದಾಯಿಕ ಶಾಸ್ತ್ರಗಳು ಮುಗದಂಗಾಗಿ ಅವಳು ಆ ಮನೆಯವಳೆ ಆದಂಗಾದಳು. ಸೂಕಿಯ ನಂತರ ಸಾಕಷ್ಟು ಹೆಣ್ಣುಗಳು ಭದ್ರಾನಾಯ್ಕನ ತಾಂಡಕ್ಕೆ ಬಂದವು. ಸಾಕಷ್ಟು ದಿಬ್ಬಣಗಳು ಆಗಮಿಸಿದವು. ಆದರೆ ಅವುಗಳಲ್ಲಿ ಅನೇಕ

ಮಾರ್ಪಾಟುಗಳಾಗಿದ್ದವು. ಬರ್ತಾ ಬರ್ತಾ ಮದುಮಗಳ ಹಿಂದೆ ಹುಡುಗಿಯರು ಬರುವುದು ಕಡಿಮೆಯಾಗಿತ್ತು. ಅದಕ್ಕೆ ಮೊದಲನೇ ಕಾರಣ ಹರೆಯದ ಹುಡುಗಿಯರು ಮದುವೆಯಾಗಿ ಹೋಗಿದ್ದು, ಎರಡನೇಯದ್ದು ಕೂಲಿನಾಲಿಗೆ ಹೋಗೊ ಮಂದಿ, ಎರಡ ದಿನ ಯಾರು ಬರ್ತಾರ ಹೋಗು ಅಂತ ತಪ್ಪಿಸಿಕೊಂಡದ್ದು, ಮೂರನೆಯದ್ದು ದಿಬ್ಬಣಕ್ಕೆಂತ ಹೋದವು ಯಾವನ್ನೊ ಕರ್ಕಂಡು ಓಡಿಹೋಗಿದ್ದವು. ಹೀಗೆ ನಾನ ನಮೂನಿ ಬದಲಾವಣೆಗಳು, ಬಂದಿದ್ದರಿಂದ ಮತ್ತು ಬರ್ತಾ ಬರ್ತಾ ಹುಡುಗಿಯರಿಗೆ ಏನು ಬೊಯ್ಯಬೇಕು? ಯಾಕೆ ಬೊಯ್ಯಬೇಕು ಎನ್ನುವುದೇ ಸವಾಲಾಗಿತ್ತು. ಬೊಯ್ಯುವಾಗ ವರನ ತಂದೆ ತಾಯಿಗೆ ಯಾಕ ಸೇರಿಸಿಬೇಕು, ಪಾಪ ಹುಟ್ಟಿಸಿದ ತಪ್ಪಿಗೆ ಬೊಯ್ಯಿಸ್ಕೊಬೇಕ? ಅನೇಕ ಹೊಸ ಆಲೋಚನೆಗಳು ಬರತೊಡಗಿದವು. ಯಾರೊ "ಎಯ್, ಹೋಗಲಿ ಬಿಡ್ರಿ, ಯಾಕಿಂಗೆ ಎರಡು ಕಡೆಯವರು ಒಳ್ಳೆ ನಾಯಿ ಕಚ್ಚಾಡೋ ಹಂಗೆ ಕಚ್ಚಾಡ್ತಿರಿ, ಇದರಿಂದ ಏನು ಪ್ರಯೋಜನ?" ಏನೂ ತಿಳಿಯದ ಹುಡುಗಿಯರಿಗೆ ಕೇಳಿದ್ದ. ಪಾಪ ಅವಕ್ಕೇನು ಗೊತ್ತು, "ಹಿಂದಿನವರು ಬೊಯ್ಯುತ್ತಿದ್ದರು ಅದಕ್ಕೆ ನಾವು ಬೊಯ್ಯುತ್ತಿದ್ದೇವೆ ಕಾಕ, ನೀನು ಹಿರಿಯ ನಿನಗ ಗೊತ್ತಿರಬೇಕು ಈ ಮದುವೆ ಸಂಪ್ರದಾಯದ ಬಗ್ಗೆ ನೀನು ಹೋಗಿ ಹೋಗಿ ನಿನಗಿಂತ ಎಷ್ಟೋ ವರ್ಷ ಚಿಕ್ಕವರು ನಾವು ನಮ್ಮನ್ನ ಕೇಳಿದರೆ?" ಹುಡುಗಿಯ ಮಾತು ಕೇಳಿ ಅರಗಾಗಿದ್ದ ಮನುಷ್ಯ.

ಸೂಕಿಬಾಯಿಯ ದಿಬ್ಬಣ ಆದ ಮೇಲೆ ಝುಮಲಿ, ಸಿಗಡಿ ತಾಂಡದದಿಂದ ಮದುವೆ ಮಾಡಿಕೊಂಡು ದಿಬ್ಬಣ ಬಂದಿತ್ತು. ಬಂಡಿ ಆಗಲೆ ಅಪ್ರಸ್ತುತಗೊಂಡಿತ್ತು. ಝುಮಲಿ ಮನೆಯವರು ಸ್ಥಿತಿವಂತರಾಗಿದ್ದರಿಂದ ಮೂರ್ನಾಕು ಬಂಡಿಗಳನ್ನ ಕಟ್ಟೋದೆಲ್ಲಿ ಅಂದವರೆ ಹೊಸದಾಗಿ ಚಾಲ್ತಿಗೆ ಬಂದಿದ್ದ ಟ್ರಾಕ್ಟರ್ ತುಂಬಿ ಕಳುಹಿಸಿದ್ದರು. ಸಿಗಡಿ ತಾಂಡ ಹದಿಮೂರು ಮೈಲಿ ಅರ್ಧ ಗಂಟೆ ಅಂತ ತಡಮಾಡಿ ರಾತ್ರಿ ಒಂಭತ್ತಕ್ಕೆ ಬಂದಿತ್ತು. ತಾಂಡದ ಹುಡುಗಿಯರು ಈಗ ಬಂದಿತ್ತು ಆಗ ಬಂದಿತ್ತು ಅಂತ ಸೇವಾಬಾಯನ ದೇವಸ್ಥಾನದ ಎದರು ಕಾದು ಕಂಗಾಲಾಗಿ ಇನ್ನೇನು ಅವರು ಬಂದಾಗ ಬಂದರಾಯ್ತು ಅಂತೇಳಿ ಕಾಲು ಕೀಳೋದಕ್ಕು ಟ್ರಾಕ್ಟರ್ ಸದ್ದು ಆಗೋದಕ್ಕೂ ಕಾದಿರೊ ಸಿಟ್ಟು ಎಷ್ಟು ತಾರಕಕ್ಕೆ ಹೋಗಿತ್ತು ಅಂದರೆ ಬೊಯ್ಯುತ್ತಲೇ ಹುಡುಗಿಯರು ಸಿಗಡಿ ತಾಂಡದ ಹುಡುಗಿಯರ ಗುಂಪಿನ ಮೇಲೆ ಹರಳು, ಮಣ್ಣು ಬಾಚಿ ಬಿಸಾಕಿ ಅವರಿಗೂ ಇವರಿಗೂ ದೊಡ್ಡ ಸಂಘರ್ಷವೆ ಆಯಿತು. ಆ ಊರ ಹಿರಿಯರು, ಯುವಕರು ಎದ್ದು "ಏನ್ರವ್ವ ನಿಮ್ಮೂರಾಗ ಹಿಂಗೆ ಮಾಡ್ತಾರೇನು? ಅಲ್ಲ ಪರ ಊರಿಂದ ಬಂದ ಅತಿಥಿಗಳಿಗೆ ಹಿಂಗೆ ಏನು ನೀವು ಗೌರವ ಕೊಡೋದು. ನೀವು ಹುಡುಗಿಯರೆ ಇಲ್ಲಿ ಬೊಯ್ಯುತ್ತಿರುವವರು ಹುಡುಗಿಯರೆ, ಇದು ಸರಿಯಲ್ಲ, ಎಯ್, ನಡಿರಿ, ಅವರ ವಸ್ತು ಅವರಿಗೆ ತಲುಪಿಸಿದ್ದೀವಿ, ಹೊಗನಾ ನಡೀರಿ" ಅಂತ

ಎದ್ದುಬಿಟ್ಟರು. ಭದ್ರಾನಾಯ್ಕನ ತಾಂಡದ ಕಾರಬಾರಿ ಡಾವೊ ಓಡಿಬಂದವರೆ "ಅಲ್ಲ ಕಣ್ರವ್ವ ಅವರು ಮನುಷ್ಯರೆ, ಅದು ಅಲ್ಲದೆ ನಮ್ಮೂರಿಗೆ ಬಂದ ಬೀಗರು, ಅವರನ್ನ ಹೀಗೆ ಅಗೌರವ ತೋರಿಸಿದರೆ ಹೇಗೆ? ಯಾರು? ಯಾರದು ಮಣ್ಣು ಹಾಕಿದು" ಡಾವೊ ಜೋರು ಬಾಯಿ ಮಾಡಿ ಬುದ್ಧಿ ಹೇಳಿದ ಮೇಲೆ ಸಿಗಡಿ ತಾಂಡದವರ ಹತ್ತಿರ ಕ್ಷಮೆ ಕೇಳಿ ಅವರನ್ನ ರಾಜಿ ಮಾಡುವುದರೊಳಗೆ ರಾತ್ರಿ ಒಂದು ಗಂಟೆಯಾಗಿತ್ತು. ಬೊಯ್ದು ಹುಡುಗಿಯರು, ಮಣ್ಣು ಚೆಲ್ಲಿದವರೆನೊ ಹೋಗಿದ್ದರು. ಅವತ್ತಿನಿಂದ ಹುಡುಗಿಯರು ಗುಡಿ ಮುಂದೆ ಸೇರುವುದು ಕಡಿಮೆಯಾಗುತ್ತಾ ಬಂತು. "ಹೊಗ್ರೆ ನೀವು ಯಾರೊ ಮರ್ಯಾದಿಗೆಟ್ಟವರು ಮಾಡೊ ಹಲ್ಕಾ ಕೆಲ್ಸಕೆ ನಾವು ಮರ್ಯಾದಿ ತಕ್ಕೊಳ್ಳೋದು ಏನ ಬಂದೈತೆ" ಮೆಗಲ ಓಣಿಯ ಜಿಗಳಿ ಕರಿಯೋದಕೆ ಬಂದ ಸಾಂತಿ ಮುಂದ ಹೇಳಿದಳು. "ಆದ್ರೂ ನಮ್ಮ ಕುಲದ ಸಂಪ್ರದಾಯ ಅಲ್ವೇನೆ ಹುಡುಗಿ, ಅದು ನಮ್ಮಿಂದಲೆ ಯಾಕೆ ಕೊನೆಗಾಣಬೇಕು? ನಾವು ಅದರ ಅಳಿವಿಗೆ ಯಾಕೆ ಕಾರಣರಾಗಬೇಕು? ಎದ್ದ ಬಾ ಅವು ಇರೋವೆ" ಸಾಂತಿಯ ಮಾತುಗಳು ನೇರವಾಗಿದ್ದವು. "ಯಾರ ಸಂಪ್ರದಾಯ ಯಾವ ಕುಲ ಹೊಗೆ ನಮ್ಮವ್ವ, ನಮದ ನಮಗ ರಗಡಾಗೈತಿ." ಜಿಗಳಿ ಜಾರಿಕೊಳ್ಳಾಕ ನೋಡಿದಳು "ಹಂಗ ಅನ್ನಬ್ಯಾಡೆ ಜಿಗಳಿ, ತಾಂಡ ಅಂದಾಗ ವಿಣಸಿವಿಗಡಿ (* ವಿಣಸಿವಿಗಡಿ–ಭಿನ್ನತೆ) ಇರೋವ ಅದನ್ನ ಯಾಕ ಮನಸಿಗೆ ಹೆಚ್ಕೊಂತಿ, ಎದ್ದ ಬಾ ದಿಬ್ಬಣ ಬರೊ ಹೊತ್ತಾತು" ಸಾಂತಿ ಬಿಡಲಿಲ್ಲಾ. "ಕಾಲಬದಲಾಗೈತೆ ಹುಡುಗಿ, ಮಂದಿ ಏನೆಲ್ಲಾ ನಡಸ್ಯಾರ ನೋಡು, ಮನ್ನೆ ನಮ ಚಿಗವ್ವನ ಮಗಳು ದಾವಣಗೇರಿಯಿಂದ ಬಂದಿದ್ದಳು ಇಟೆ ಚಣ್ಣ ಹಾಕೊಂಡು ಬಂದಿದ್ದಳು, ಈ ಎದಿಗಳು, ನಾಚಿಕೆ ಆಗಲ ಬಿಂದಾಸ ಇದ್ಲು, ನಾವಿನ್ನು ಒಬ್ಬರಿಗೊಬ್ಬರು ಬೊಯ್ಯುತ ಮನಸ್ತಾಪ ಮಾಡ್ಕೊಂತ ಅದೀವಿ" ಬದಲಾವಣೆಯನ್ನ ಸೂಕ್ಷ್ಮವಾಗಿಯೇ ಗ್ರಹಿಸಿದ್ದಳು ಜಿಗಳಿ. "ಆಯ್ತು ಬಿಡೆ ಜಿಗಳಿ ಅಕ್ಕ, ನಿನ್ನ ಮದವಿಯೊಳಗ ಇದರ ಬದಲಿಗೆ ಅದೇನೊ ಡಿಜೆ ತರಸ್ತಾರಂತಲ್ಲಾ ಅದನ್ನ ತರಸುವಿಯಂತೆ" ಸಾಂತಿಗೆ ಅದೇನು ಹೊಳಿತೊ ಹೇಳಿದಳು. ಇದಾಗಿ ವಾರದಲ್ಲೆ, ಚೊಕ್ಲನ ಮಗ ಚಂದ್ರನ ಮದವಿ ಸಾಂಕ್ಲಪುರದಾಗ ಆಗಿತ್ತು. ಚಂದ್ರ ಸರ್ಕಾರಿ ನೌಕರಿಯಲ್ಲಿದ್ದ, ಮದಲೆ ಈಟಿದ್ದರೆ ಇಷ್ಟುದ್ದ ಎಳಿತಿದ್ದ ಚೊಕ್ಲ ಮಗನ ಮದುವೆಯನ್ನ ಅಷ್ಟು ಸುಲಭವಾಗಿಯೇ ಬಿಟ್ಟಾನ. ಮೊದಲ ಸಲ ತಾಲೂಕು ಗಡಿದಾಟಿ ಬೇರೆ ತಾಲೂಕಿನ ಹುಡುಗಿ ತಂದಿದ್ದ. ಎರಡನೆಯದು ಅನೇಕ ಬಂಜಾರ ಸಂಪ್ರದಾಯಗಳನ್ನ ಬಿಟ್ಟಿದ್ದ, ಬೀಗರಿಂದ ಸರಿಯಾಗೆ ವಸೂಲಿ ಮಾಡಿದ್ದ. ಅದಕ್ಕ ಅವನು "ನೋಡ್ರಿ ಬೀಗರೆ ನನ್ನ ಮಗನ ಮದುವೆ ಒಂದ ಥರ ಭಿನ್ನವಾಗಿಯೆ ಮಾಡಬೇಕು ಅಂದ್ಕೊಂಡೀನಿ. ಅದಕ್ಕೆ ಈಗ ದಿಬ್ಬಣಕ್ಕೆ ಬರೋರ ಖರ್ಚು

* ವಿಣಸಿವಿಗಡಿ–ಭಿನ್ನತೆ

ಸವಾಕರ್ದ ಇದೆಯಲ್ಲ ಕಳುಸುವಾಗ ದೊಡ್ಡ ಲಾರಿ ತುಂಬಿ ಕಳಸ್ರಿ ಅವರನ್ನ ಬಿಡಾಕ ನಾ ಬೇರೆ ವ್ಯವಸ್ಥೆ ಮಾಡ್ತಿನಿ, ಲಾರಿಯೊಳಗೆ ಅದೇನೊ ಕುಣಿಯೋದ ಇರತೈತಲ್ಲ, ಇಡಿ ಊರ್ನಾಗ ಮಂದಿ ಎದಿಯಾಗ ಡವಡವ ಅನ್ನಬೇಕು ಅದನ್ನ ತರಸ್ರಿ, ಅದರ ಖರ್ಚು ನಾಕೊಡ್ತಿನಿ." ಬೀಗರಿಗೆ ತಾಕತ್ತು ಮಾಡಿದ್ದ.

ಅವನ ಬೀಗರು ಹಡಗಲಿ ತಾಲೂಕು ಜಮೀನ್ದಾರರಾಗಿದ್ದರಿಂದ "ಏನೊ ಆಶೆ ಪಡ್ತಿದ್ದಿ ಆಯ್ತು" ಅಂತ ಒಪ್ಪಿಕೊಂಡಿದ್ದರು. ಅದರ ಬೆನ್ನಲ್ಲೇ ದೊಡ್ಡ ಲಾರಿ, ಲಾರಿಯೊಳಗೆ ಮಗಳಿಗೆ ಬೇಸರ ಬರಬಾರದು ಅಂತ ಡಿಜೆ ಹಾಕ್ಸಿ ಕಳುಹಿಸಿದ್ದ.

ಹುಡುಗಿ ಸ್ವಂತ ಮನೆ ಬಿಟ್ಟಿದ್ದಕ್ಕೆ ದುಃಖ, ದುಗುಡದಿಂದ ಬರಬೇಕು, ಇಲ್ಲಿ ಉಲ್ಟಾ ಆಗಿತ್ತು, ಕುಣ್ಕೊಂತ ಬಂದಿದ್ದಳು.

ಮಂದಿ ಹೈರಾಣಿಗಿದ್ದರು. "ಏನ್ರಪ್ಪ ಇದು, ಕಾಲ ಎಲ್ಲಿಗ ಬಂತು ಅಂತೀನಿ" ಬಾಯಿ ಮೇಲೆ ಕೈಯಿಟ್ಟು ಮಂದಿ ಮಾತಾಡಿಕೊಂಡರು. ಚೊಕ್ಲನ ಮಗ ಚಂದ್ರ ತಾಂಡಕ್ಕೆ ಹೊಸದೊಂದು ಯುಗವನ್ನೆ ಆರಂಭ ಮಾಡಿದ್ದ. ಗುಡಿ ಮುಂದೆ ಬೊಯ್ಯುವುದಕ್ಕೆ ಯಾವ ಹುಡುಗಿಯರು ಇರಲಿಲ್ಲಾ. ಬಂದವರೆಲ್ಲ ಬೊಯ್ಯೋದಕ್ಕೆ ಬಾಯಿ ತಗದವರು ಡಿ.ಜೆ. ಸದ್ದಿಗೆ ಕುಣಿಯ ತೊಡಗಿದರು. ಗುಡಿ ಮುಂದ ಕುಂತಿದ್ದ ಹಳೆಕಾಲದ ಸಕ್ರನಾಯ್ಕ, ನಾಗ್ಯನಾಯ್ಕ ತಮ್ಮ ಕಾಲದ ವೈಭವದ ಮದುವೆಯ ಮೆಲಕು ಹಾಕ ತೊಡಗಿದರು. "ಲೇ ನಾಗು ನೀ ನನಗಿಂತ ವರ್ಷ ಚಿಕ್ಕವನು, ನಾನು ಮದುವೆಯಾದಾಗ ಅದೇನು ಸಡಗರ ಅಂತಿಯಾ, ಒಂದು ತಿಂಗಳ ಕಾಲ ಮಾವನ ಮನೆಯಲ್ಲಿದ್ದೆ. ದಿನಕೊಂದು ಕಾರ್ಯವೊ, ದಿನಕೊಂದು ಆಚರಣೆ, ನನಗ ಹೊಲಮನಿದ ಚಿಂತೆ ಆದ್ರ ಶಾಸ್ತ್ರಗಳನ್ನ ಕಟ್ಟುನಿಟ್ಟಾಗಿ ಆಚರಿಸುತ್ತಿದ್ದ ನಮ್ಮ ಮಾವ ವಾಮಿನಾಯ್ಕ. ಇದೇನಲೆ, ದಿಬ್ಬಣ ಬಂದೈತೆ ಹುಡುಗಿಯರು ಕುಣಿತವ್ರೆ, ಮದುಮಗಳು ಡಾನಿಸ್ ಮಾಡಾಕ ಹತ್ಯಾಳ ಹೆಂಗ" ಗಾಬರಿಯಿಂದ ಕೇಳಿದ. ಸಕ್ರ್ಯಾನಾಯ್ಕ "ಹಿಂದಿನ ಕಾಲದಾಗ ಮಂದಿ ನಡಕೊಂಡು ಹುಡಿಗ ಕಳಸಾಕ ಬರ್ತಿದ್ರು, ಕಾಲಕ್ರಮೇಣ ಚಕ್ಕಡಿಗಾಡಿ ಬಂತು, ಇತ್ತೀಚಿಗೆ ಟ್ರಾಕ್ಟರ್, ಈಗ ಲಾರಿ ಮುಂದ ಬಸ್ಸು, ತಲಿ ಕೆಡಸ್ಕೊ ಬ್ಯಾಡ, ಇದು ಕಲಿಯುಗ ಏನಪ, ಬದಲಾಗುತ್ತಿದ್ದಂತೆ ಎಲ್ಲಾನು ಹಿಂಗೆ ನೋಡ್ತಿಯಾ ನೋಡು ಹೆಂಗ ಮೈಕೈ ಅಲಗಾಡಸುತ್ತವೆ, ಇಲ್ಲ ಎದ್ದು ಹೊಲದ ಕಡೀಗ ಹೋಗಬಿಡು ನೋಡಾಕ ಆಗಲಿಲ್ಲಾಂದ್ರು ನೋಡೊ ಮಂದಿನಾರು ನೋಡಿ ಆನಂದ ಪಡ್ತಾರ. ಅಲ್ಲಪ್ಪ ನನ್ನ ನಿನ್ನಂತೊರು ಅಯ್ಯೋ ಹಿಂಗಾತು ಅಂತೇಳಿ ಆತಂಕ ಪಡ್ತಿವಿ ಸರಿ. ಇನ್ನು ಕೆಲವರು ಇವನೇನೊ ಹೊಸದನ್ನ ಬಳಸಿದ್ದಾನೆ ಅನ್ನುವ ಕುತೂಹಲಕ್ಕೆ ನೋಡ್ತಾನೆ, ಹಿಡಸಲಿ ಹಿಡಸದೆ ಇರಲಿ ಮಾತಾಡೋದಿಲ್ಲ. ಇನ್ನೂ ಕೆಲಮಂದಿ ಒಳಗಡೆ ಏನೂ ಇರೋದಿಲ್ಲ ಸುಮ್ಮನೆ ವೀಕ್ಷಿಸುತ್ತಾರೆ. ಕೆಲವರು ಹೊಸದು ಸ್ವಾಗತಿಸಬೇಕು ಅನ್ನುವರು ಇರ್ತಾರ, ಯಾಕೆ ಇವತ್ತು ಇದ್ದಿದ್ದನ ಕಳ್ಕೊಂಡು ಹಿಂದೆ

ಹೋಗಿರುವುದರ ಸಲುವಾಗಿ ವ್ಯಥೆ ಪಡ್ತಿಯಾ" ನಾಗ್ಯನಾಯ್ಕ ತನ್ನ ಅನುಭವದ ಮಾತನ್ನ ವಾಖ್ಯಾನದ ರೂಪದಲಿ ಹೇಳಿದ. ಜಗತ್ತಿನ ಬದಲಾವಣೆಗೆ ಯಾರು ಅಡ್ಡಿ ಆಗಲಾರರು, ಅನೇಕ ಆಚರಣೆಗಳು ನಮಗೆ ಗೊತ್ತಿಲ್ಲದೆ ನಮ್ಮಿಂದ ದೂರವಾಗಿ ಅವುಗಳ ಬಗ್ಗೆ ತಲೆ ಕೆಡಿಸಿಕೊಂಡರೆ ಪ್ರಯೋಜನವಿಲ್ಲ ಬಾರದು ಬಪ್ಪದು, ಬಪ್ಪದು ತಪ್ಪದು ಅಂದ್ಕೊಂತ ಜೀವನ ಮಾಡುವವನೆ ಜಾಣ. ಅಯ್ಯೊ ಹಿಂದೆ ಹಿಂಗಿತ್ತು ಈಗ ಹಿಂಗಾಯ್ತು ಅದೇ ಪಾಡಿತ್ತು ಇದು ಖರಾಬಿದೆ. ನೋಡುವ ನಮ್ಮ ದೃಷ್ಟಿ ಮತ್ತು ಮನಃಸ್ಥಿತಿಯನ್ನು ಬದಲಿಸಿಕೊಂಡು ಬದುಕಿದರೆ ಮಾತ್ರ ಬದುಕು ಕೈಗೆ ಸಿಗುತ್ತದೆ. ಇಲ್ಲದಿದ್ದರೆ ಬರಿ ಗೋಳಾಡಿ ಸಾಯುವುದೇ ಆಗುತ್ತದೆ. ನಾಗ್ಯನಾಯ್ಕ ಬಹಳ ಹೊತ್ತು ಆಲೋಚಿಸಿದ್ದ.

* * *

57. ರೂಕಿಯ ಹವೇಲಿಯೂ

ಮುದ್ದಾಗಿ ಸಾಕಿದ ಮಗಳನ್ನು ತಂದೆತಾಯಿ, ಸಹೋದರರು, ಚಿಕ್ಕಮ್ಮ, ಚಿಕ್ಕಪ್ಪಂದಿರು ವಿದಾಯ ಮಾಡುವಾಗ ಬಹಳ ದುಃಖದಿಂದ ಹವೇಲಿ(* ಹವೇಲಿ–ವಿದಾಯದ ಹಾಡು) ಮಾಡಿ ಕಳುಹಿಸುತ್ತಿದ್ದರು. ಶಾಸ್ತ್ರಗಳೆಲ್ಲ ಮುಗಿದ ಮೇಲೆ ಹೆಂಗಸರು ಹಾಡನ್ನು ಹೇಳುತ್ತ, ಮದುಮಗಳ ಮನೆಯೊಳಗೆ ಸೇರಿರುವ ಮದುಮಗನನ್ನು ಹೊರಗೆ ತರುತ್ತಾರೆ. ನಂತರ ಅತ್ಯಂತ ರೋಚಕವಾದ ಸನ್ನಿವೇಶ ಶಾಶ್ವತವಾಗಿಯೇ ತನ್ನ ತಂದೆ ತಾಯಿಯನ್ನು ತೊರೆಯಲಿರುವ ಮಗಳ ವಿದಾಯ. ಅದೊಂದು ಬಹಳ ವಿಶಿಷ್ಟವಾದದ್ದು ಮತ್ತು ಕರುಣಾಜನಕವಾದದ್ದು. ಹುಡುಗಿಯನ್ನ ಹೊರಗೆ ತೆಗೆಯುವಾಗ ಇಡೀ ಮನೆಯಲ್ಲಿ ದುಃಖದ ವಾತಾವರಣ, ಆಡಿ ಬೆಳೆದ ಮನೆ, ಅಣ್ಣಂದಿರು, ತಂದೆ ತಾಯಿಯ ನೆರಳಲ್ಲಿ ಸುಖವಾಗಿ ಬೆಳೆದ ಕೂಸು ದುಃಖದ ಸಾಗರಕ್ಕೆ ಹೋಗುತ್ತಿರುವ ಸಂದರ್ಭ, ತಾಂಡದಲ್ಲಿ ಹಾಯದಿರುವ ಸಾಧು ಎತ್ತನ್ನು ತಂದು ಅದರ ಮೇಲೆ ಮದುಮಗಳನ್ನು ಕೂಡಿಸಿ ಹೆಂಗಸರು ವಿದಾಯದ ಹಾಡನ್ನು ಹಾಡುತ್ತ ಕರೆತರುತ್ತಿದ್ದರು. ರೂಕಿ ಮದುವೆಯಲ್ಲೂ ಈ ಸಂಪ್ರದಾಯ ಮುಂದುವರೆದಿತ್ತು. ರೂಕಿಯ ಹಿರಿಯ ಅಣ್ಣ ಯಂಕ ಒಂದು ಕಡಿಗೆ, ಅವನ ಸಹೋದರ ಜಾತು ಮತ್ತೊಂದು ಕಡೆಗೆ ಪ್ರೀತಿಯಿಂದ ತಂಗಿಯನ್ನ ಹವೇಲಿ ಮಾಡಿಸುತ್ತಾ ಹೊರಗೆ ತರುತ್ತಿದ್ದರು. ಸಣ್ಣ ಹುಡುಗರು, ದೊಡ್ಡವರು ಎಲ್ಲಾ ಕಿಚೊ ಅಂತ ಅಳುತ್ತಿದ್ದರು. "ಅರೆ ಹುಡುಗಿ ಮೂರ್ಛೆ ಹೋದಳು, ನೀರು ಹಾಕ್ರಿ" ಯಾರೊ ಕೂಗಿದ್ದಕ್ಕೆ ಅವಳನ್ನು ಮೇಲಿಂದ ಇಳಿಸಿ, ಗಾಳಿ ಬೀಸುವರ್‍ಯಾರೊ ಬಿಗಿಯಾಗಿ ಹಲ್ಲು ಕಚ್ಚಿರುವ ರೂಕಿ ಹಲ್ಲುಗಳನ್ನು ಬಿಡಿಸಿ ನೀರು ಹಾಕುವರ್‍ಯಾರೊ, ನೆತ್ತಿಗೆ ಚುಟ್ಕೆ ಕೊಡಿ ಅಂತ ಬೆಂಕಿಯಿಂದ ನೆತ್ತಿ ಸುಟ್ಟಾಗ "ಹಾ" ಅಂದಳು ರೂಕಿ. ನಿಜವಾದ ದುಃಖ, ಪ್ರೇಮ, ಮಮಕಾರ ಅಭಿವ್ಯಕ್ತಿಯಾಗಿತ್ತು. ಮತ್ತೆ ಅವಳನ್ನು ನಿಧಾನಕ್ಕೆ ಎತ್ತಿ ಎತ್ತಿನ

* ಹವೇಲಿ–ವಿದಾಯದ ಹಾಡು

ಮೇಲೆ ಕೂಡಿಸಿ ಹೆಂಗಸರು ಹಾಡು ಹೇಳುತ್ತಾ, "ಹವೇಲಿಯೆ, ಆ ಹಿಂಯಾ" ಅಂತ ಹೇಳಿಸುತ್ತಾ ಮನೆಗೆ, ಮನಸ್ಸುಗಳಿಗೆ ವಿದಾಯ ಹೇಳಿಸುವ ಯತ್ನ ನಡೆದಿತ್ತು. ಹೊರಗೆ ಹಾಕಿದ ಹಂದ್ರಕ್ಕೆ ಬಂದಾಗ ಅದಕ್ಕೆ ಕಟ್ಟಿದ ಹಗ್ಗ ಹಿಡಿದು ಹೋಗಲು ನಿರಾಕರಿಸತೊಡಗಿದಳು. ಅವಳ ಅಣ್ಣಂದಿರಾದ ಯಂಕ, ಜಾತು ತೆಕ್ಕ ಮಾರಿಬಿದ್ದ, "ಇಲ್ಲ ತಾಯಿ ಹಂಗ ಮಾಡಬಾರದವ್ವ ಈ ಮನಿ ಶಾಶ್ವತ ಅಲ್ಲ ಕಣವ್ವ, ನೀನು ಹೊಂಟಿರುವ ಮನಿನೆ ನಿನಗೆ ಶಾಶ್ವತ" ತಡಿಯಲಾರದ ದುಃಖದಲ್ಲಿ ಯಂಕ ಹೇಳಿ ಜುಕ್ಕ ಜುಲಿಮಿಯಿಂದ ಕೈ ಬಿಡುಸುವುದಕ್ಕೆ ಪ್ರಯತ್ನಿಸಿದ. ಆದರೆ ರೂಕಿ ಸುಲಭವಾಗಿ ಬಿಡಾಕ ತಯಾರಿರಲಿಲ್ಲಾ. "ಲೇ ಶಕ್ತಿ ಇಲ್ಲೇನೊ ಗಡವ, ಬಿಡಸು ಮಂದಿ ಹೊರಗ ಕಾಯಾಕ ಹತ್ಯಾರ" ಭೀಮಣಿಬಾಯಿ ಯಂಕಗೆ ಜಾಡಿಸಿದಳು. ತಂಗಿಯ ಕೈಯನ್ನು ಒತ್ತಾಯದಿಂದ ಬಿಡಿಸಿ ಕರೆದುಕೊಂಡು ಬಂದು ಅಂತಿಮ ವಿದಾಯ ಹೇಳಿ ತಯಾರಾಗಿ ನಿಂತಿದ್ದ ಚಕ್ಕಡಿಯಲ್ಲಿ ಕೂಡಿಸಿದ. ಹುಡುಗಿ ಅಳುತ್ತಲೇ ಇದ್ದಳು, ಅವಳು ಅಳುವಾಗ ಹೇಳುತ್ತಿದ್ದ ಒಂದೊಂದು ನುಡಿಗಳು ಕೇಳುಗನ ಎದಿಯೊಳಗೆ ಹೊಕ್ಕು ಕಣ್ಣುಗಳನ್ನು ತೇವಗೊಳಿಸಿದ್ದವು. ಚಕ್ಕಡಿ ಗಾಡಿ ನಿಧಾನಕ್ಕೆ ಸಾಗಿದ್ದವು. ಮದುಮಗನ ಸಹಚರ ತನ್ನ ಟವೇಲು ಬೀಸಿ ಎಲ್ಲರಿಗೂ ಹೊರಡ್ತಿವಿ ನಡೀರಿ ಅಂತ ಸನ್ನೆ ಮಾಡಿದ.

ರೂಕಿ ನಿಜವಾಗಿ ಬಹಳ ನೊಂದುಕೊಂಡಿದ್ದಳು. ಹವೇಲಿ ಮಾಡುವಾಗ ಅವಳ ನಿಜವಾದ ಅಂತರಾಳ ಹೊರಬಂದಿತ್ತು. ಅವಳ ಅಳು ನೋಡಿಯೆ ನೆರೆದ ಮಂದಿ ಗೊಳೋ ಅಂದಿದ್ದರು. ಆಗಿನ ಹುಡುಗಿಯರ ನಡೆ, ನಡತೆ ಹಾಗೆಯೇ ಇತ್ತು. ಮಂದಿನು ಕೂಡು ಬಸವಣ್ಣನ ಮೇಲೆ ಕೂಡಿಸಿ ಹವೇಲಿ ಮಾಡಿಸಬೇಕಾದರೆ ಅವಳ ಪವಿತ್ರತೆಗೆ ಹೆಚ್ಚಿನ ಆದ್ಯತೆ ಕೊಡುತ್ತಿದ್ದರು. ಈ ಸಂಪ್ರದಾಯ ಯಾಕೆ ಆರಂಭವಾಗಿರಬಹುದು ಅಂತ ಯಾರಿಗೂ ಗೊತ್ತಿಲ್ಲ. ಆದರೆ ಹುಲಿಯೂರ ಮಾತ್ರ ತಿಳಿದುಕೊಳ್ಳುವ ಕುತೂಹಲದಿಂದ ಅವರಪ್ಪ ತೊಪುನಾಯ್ಕನಿಗೆ ಕೇಳಿದ್ದ. ಏಕೆಂದರೆ ತೊಪುನಾಯ್ಕ ನಾಕು ಕಡೀಗ ಅಡ್ಡಾಡಿದವ ನಾಕು ವಿಷಯಗಳನ್ನು ತಿಳಿದವನಾಗಿದ್ದ. ನಾಕು ಊರುಗಳಿಗೆ ಹೋಗಿ ಪಂಚಾಯ್ತಿ ಮಾಡಿದ್ದ ತಿಳುವಳಿಕೆ ಹೇಳಿದ್ದ. ಹಂಗಾಗಿ ಅವನು ಆತನ ಊಹೆಗೆ ತೋಚಿದ್ದನ್ನ ಮಗ ಹುಲಿಯೂರನಿಗೆ ಹೇಳಿದ್ದ. "ಬಹುಶಃ ಮಗ ಈ ಗೋವಿನ ಸಂಸ್ಕೃತಿ ನಮಗೆ ಹತ್ತಿರವಾಗಿರುವುದರಿಂದ ಎತ್ತುಗಳು ನಮ್ಮ ಜೀವಾಳವಾಗಿದ್ದವು. ಅವುಗಳ ಮೇಲೆ ನಮ್ಮ ಮಂದಿ ದಿನಸಿ ಸಾಮಾನು ಉಪ್ಪು ಹೇರಿಕೊಂಡು ಮಾರಾಟ ಮಾಡಿದ್ದಕ್ಕೆ ಏನೊ ಒಳ್ಳೆಯ ಎತ್ತಿನ ಮೇಲೆ ಹುಡುಗಿಯನ್ನ ಕೂಡಿಸಿಯೇ ವಿಧಾಯ ಹೇಳುತ್ತಿದ್ದರು. ಆದರೆ ಕೇಳು, ಆ ಹುಡುಗಿಯ ಚರಿತ್ರೆ ಶುದ್ಧವಾಗಿರಬೇಕು, ಅವಳ ನಡೆ ನುಡಿ, ಆಚಾರ ವಿಚಾರಗಳು ಶುದ್ಧವಾಗಿದ್ದು ಪವಿತ್ರಳಾಗಿದ್ದರೆ ಮಾತ್ರ ಅವಳನ್ನ ಎತ್ತಿನ ಮೇಲೆ

ಕೂರಿಸುತ್ತಿದ್ದರು." ಹುಲಿಯೂರ ಬಹಳ ಚಿಕ್ಕವನಿದ್ದಾಗ ಈ ಹವೇಲಿಯನ್ನು ಕಂಡಿದ್ದ ಅದಾಗಿ ಕೆಲವೇ ವರ್ಷಗಳಲ್ಲಿ ಅದು ನಿಂತುಹೋಗಿತ್ತು. ಬಹುತೇಕ ರೂಕಿ ಬಾಯಿ ಆದ ಮೇಲೆ ಒಂದಿಷ್ಟು ಹುಡುಗಿಯರದ್ದು ನಡೆದಿತ್ತು. ಆಮೇಲೆ ಬರ್ತಾ ಬರ್ತಾ ನಿಂತೇ ಹೋಗಿತ್ತು. ಆವಾಗಿನಿಂದ ಅವನಿಗೆ ಅದು ಕಾಡತೊಡಗಿತ್ತು. ಅದಕ್ಕೆ ಕೇಳಿಯೆ ಬಿಟ್ಟ. "ಅಲ್ಲಪ್ಪ, ಅದ್ಯಾವಾಗಲೊ ಹಿಂದೆ ಆ ಪದ್ಧತಿ ಇತ್ತು ಈಗ ಯಾಕೆ ಮಾಡ್ತಿಲ್ಲ ಏನಾತು? ಒಂದು ಆಚರಣೆ ನಿಲ್ಲಬೇಕಾದರೆ ಬಲವಾದ ಕಾರಣ ಬೇಕಲ್ವೆ, ಇದ್ದಕ್ಕಿದ್ದಂಗೆ ಸುಕಾಸುಮ್ಮನೆ ನಿಲ್ಲಾಕ ಆಗೋದಿಲ್ಲ." ಹುಲಿಯೂರ ಉತ್ತರಕ್ಕಾಗಿ ಕಾದು ಕುಳಿತ. ತೊಪುಗೆ ಪೇಚಿಗಿಟ್ಟುಕೊಂಡಿತು. ಆದರು ಎದಿಮಟ ಬೆಳದಿರೊ ಮಗನ ಕುತೂಹಲಕ್ಕೆ ಸಹಜ ಉತ್ತರ ಕೊಡಲೇಬೇಕಲ್ಲ ಅಂತ. "ಅದು ದೊಡ್ಡ ಕತೆ ಇದೆ, ಕಾಲ ಬದಲಾದಂತೆ ಮಂದಿಯ ಮನಸ್ಸು ಬದಲಾಗಿತ್ತು. ಹಿಂದಿದ್ದ ನೈತಿಕತೆ, ವೈಯುಕ್ತಿಕ ಜೋಪಾನ ಉಳಿಲಿಲ್ಲಾ, ಅದೇನು ಬದಲಾದ ಸನ್ನಿವೇಶವೋ, ಊಟದ ವ್ಯತ್ಯಾಸವೋ, ಕಾಲರಾಯನ ಮಹಿಮೆಯೋ ಗೊತ್ತಾಗಲಿಲ್ಲ. ಬದಲಾವಣೆಯಂತು ಆಗಿತ್ತು, ಒಂದಸಲ ಹೀಗೆ ತಾಂಡದಲ್ಲಿ ಮದುವೆ ನಡಿತು ಹುಡುಗಿಯನ್ನ ಎತ್ತಿನ ಮೇಲೆ ಕೂಡಿಸಿ ಹವೇಲಿ ಮಾಡಿಸಿ ಬೀಳ್ಕೊಟ್ಟರು, ಆ ಎತ್ತಿಗೆ ಇದ್ದಕ್ಕಿದ್ದಂತೆ ಕಾಯಿಲೆ ಕಾಣಿಸಿಕೊಂಡು ಒಳ್ಳೆ ಗಡದ್ದಾಗಿದ್ದ ಹೋರಿ ಸೊರಗಿ ನೀರಾಗಿ ಹೋಯ್ತು. ಮಂದಿ ಆಲೋಚನೆ ಮಾಡಿದರು. ಬಸವಣ್ಣ ಬಾಯಿ ಇಲ್ಲದವನು ಆತನಿಗೆ ಹಿಂಸೆ ಕೊಡೋದು ಬೇಡ, ಯಾ ಹುಡುಗಿ ಹೆಂಗಿರ್ತಾಳೊ ಕಂಡವರಾರು, ನಾಳೆ ಎತ್ತು ಸತ್ತಮೇಲೆ ಹುಡುಗಿ ಮೇಲೆ ಗೂಬೆ ಕೂರಿಸುವುದು ಸರಿಯಲ್ಲ, ಅವರವರ ವೈಯಕ್ತಿಕ ವಿಚಾರ ನೀವು ಯಾಕೆ ತಲೆ ಕೆಡಿಸಿಕೋಬೇಕು? ಎತ್ತಿನ ಮೇಲಿನ ಹವೇಲಿಯನ್ನ ನಿಲ್ಲಿಸುವುದು ಬಹಳ ಒಳ್ಳೆಯದು ಅಂತ ಅದನ್ನು ಕಡಿಮೆ ಮಾಡ್ತಾ ಮುಂದೆ ಸ್ವಲ್ಪ ದಿನದಾಗ ಅದನ್ನು ಬರ್ತಾ ಬರ್ತಾ ಕಾಲಕ್ರಮೇಣ ಹವೇಲಿ ಬಂದಾಯ್ತು. ಮುಂದೆ ಬಂದ ಹುಡುಗಿಯರಲ್ಲೂ ಅಳುವ ಆಸಕ್ತಿ ಉಳಿಯಲಿಲ್ಲಾ. ಎಲ್ಲರೂ ಗಂಡನ ಮನಿ ಅಂದರೆ ಖುಷಿ ಖುಷಿಯಾಗಿ ಹೋಗ ತೊಡಗಿದರು. ಆಗಿನಂತೆ ಈಗ ಕೂಡು ಕುಟುಂಬಗಳಿಲ್ಲ. ಮದುವೆ ಆಯ್ತು ಅಂದರೆ ವರ್ಷಗಟ್ಟಲೆ ಮುಖದ ಮೇಲೆ ಸೆರಗು ಹಾಕಿಕೊಂಡು ಸೊಸೆ ರಾತ್ರಿ ಗಂಡನಿಗೆ ಬಿಟ್ಟರೆ ಯಾರೊಬ್ಬರಿಗೂ ಮಾರಿ ತೋರಿಸುತ್ತಿರಲಿಲ್ಲಾ. ಅತ್ತೆಯಂದಿರು ಬಹಳ ಕಟ್ಟನಿಟ್ಟಾಗಿದ್ದರು. ಹೊತ್ತಾರೆ ಎದ್ದು ಸಗಣಿಕಸ, ರಾಗಿ ಬೀಸೋದು, ಭತ್ತ ಕುಟ್ಟೋದು ಮಾಡಬೇಕಿತ್ತು." ತೊಪುನಾಯ್ಕ ಸುದೀರ್ಘವಾದ ಬದಲಾವಣೆಯ ಪರಿಚಯ ಮಾಡಿಕೊಟ್ಟಿದ್ದ. ಹುಲಿಯೂರನಿಗೆ ಕಾಲದ ಬದಲಾವಣೆಯ ಅರಿವಾಗಿತ್ತು. ಅವನೆ ಕಂಡಂತೆ ಹುಡುಗಿಯರು ಮದುವೆ ಅಂದ ತಕ್ಷಣ ತುದಿಗಾಲ ಮೇಲೆ ನಿಂತಿರುವುದನ್ನು ಗಮನಿಸಿದ್ದ. ಅವನ ತಾಯಿ ಜಾನಿಬಾಯಿ ಹೇಳಿದ ಕಷ್ಟದ ಸನ್ನಿವೇಶ ಕೇಳಿ ಬಹಳ ನೊಂದಿದ್ದ. "ಹಿರಿಮಗ ಜಾತುನಾಯ್ಕನ ಸಮಯದಾಗ ಮುದಕಿ ಕೊಟ್ಟ ತ್ರಾಸು ಅಷ್ಟಿಷ್ಟಲ್ಲಾ, ಕೂಡು

ಕುಟುಂಬ ನಿಮ್ಮತ್ತೆಯಂದಿರು, ಚಿಕ್ಕಪ್ಪಂದಿರು, ಒಂದೊಂದು ಖಂಡಗ ಉಣ್ಣೋರು ಮುಂಜಾನೆ ನಾಲ್ಕಕ್ಕೆ ಬೆಳ್ಳಿ ಚುಕ್ಕಿ ಮೂಡೋದಕ್ಕೂ ಮುಂಚಿತವಾಗಿ ಎದ್ದು ಜೋಳ ಬೀಸಬೇಕು. ಮೂರ ಸೇರು ನಾಕಸೇರು ಒಮ್ಮೆಲೆ ಬೀಸಿ ಆದ ಮೇಲೆ ಒಲಿಯಾನ ಬೂದಿ ತಗದು ಒಲೆ ಹೊತ್ತಿಸಿ ಒಂದಕಡೀಗ ಅಂಬ್ಲಿ ಮತ್ತೊಂದ ಕಡೀಗ ರೊಟ್ಟಿಗ ವ್ಯವಸ್ಥೆ ಮಾಡಬೇಕು. ಹರೆಯದ ಹುಡುಗಿಯರು ನಿಮ್ಮ ಅತ್ತೆಯಂದಿರು ಅಡಗಿ ಆದ ಮೇಲೆ ಎದ್ದು ಮಕ ತೊಳದು ಉಣ್ಣಾಕ ಕೂಡ್ತಿದ್ವು, ಅವರ ಮಕಾಡ ಎತ್ತ, ಹೆಣ್ಣು ಜೀವ ಕಷ್ಟ ಅನುಭವಿಸಾಕ ಹತ್ಯೆತಿ ಅಂತ ಒಮ್ಮೆನಾರು ಮರುಗಿದ್ದು ಆಗ ನನ್ನ ವಯಸ್ಸು ದೊಡ್ಡದೇನಲ್ಲ. ಬರಿ ಹನ್ನೆರಡ ಹದಿಮೂರು, ಅದಕ್ಕೆ ನೋಡು ಅವರ ಒಸಡಗ ಒಬ್ಬಾಕಿಗ ಮಕ್ಕಳೆ ಕೊಡಲಿಲ್ಲಾ, ಒಬ್ಬಾಕಿ ಗಂಡನ್ನ ಕಸ್ಕೊಂಡ. ಅದಕ್ಕೆ ಕಣಪ್ಪ ಹೆಣ್ಣು ತೌರು ಬಿಡುವಾಗ ಅಷ್ಟೊಂದು ದುಃಖದಿಂದ ಜೋರಾಗಿ ಅಳೋದು. ಹವೇಲಿ ಮಾಡುವಾಗ ಅಷ್ಟೊಂದು ವೇದನೆ ಕಠಿಣತೆ ತೋರಿಸುವುದು ಅದಕ್ಕೆ." ಹುಲಿಯೂರನ ಮನಸ್ಸು ಮದುಡಿಹೋಗಿತ್ತು. ದೇವರು ಈ ಹೆಣ್ಣು ಅನ್ನೊ ಜೀವಿಯನ್ನ ಯಾಕೆ ಸೃಷ್ಟಿಸಿದ? ಯೋಚಿಸಿದ. "ಎಲ್ಲಾರು ನಮ್ಮಂಗೆ ತಲಿಬಗ್ಗಿಕೊಂಡು ಹೂಂ ಅಂತ ಕೆಲಸ ಮಾಡ್ತಾರೆ ಅಂತ ತಿಳಿಬೇಡ. ನಮ್ಮದು ದೊಡ್ಡ ಮನಿತನ, ಮರ್ಯಾದಸ್ಥ ಕುಟುಂಬ. ನಾನು ಚಿಕ್ಕವಳಿದ್ದಾಗಲೇ ತಾಯಿ ತೀರ್‍ಕೊಂಡಳು, ನನ್ನ ಮದುವಿ ಆದ್ರ ಒಲಿಮುಂದ ರೊಟ್ಟಿ ಸುಡಾಕ ಹೆಂಗಸರು ಇಲ್ಲದಕ್ಕ ಅಪ್ಪ ಮತ್ತೊಂದು ಮದುವಿ ಆದ, ಚಿಕ್ಕಮ್ಮನ ಕೂಟಾಗ ಮಾತ ಹೇಳಿಸಿಕೊಳ್ಳಾಕ ಯಾಕ ಹೋಗಬೇಕು ಅಂತೇಳಿ ಕಷ್ಟನೋ ಸುಖಾನೊ ಒದೆ ತಿಂದು ಹೇಳಿದ ಕೆಲ್ಸ ಮಾಡಿಕೊಂಡು ಬಿದ್ದಿನಿ" ಅವಳ ಹೊಟ್ಟೆಯೊಳಗಿನ ಮಾತುಗಳೆಲ್ಲ ಹೊರಗ ಬಂದಿದ್ದವು. ಆದರೆ ಇನ್ನೊಂದು ಕಡೆಗೆ ಗಂಡ ಅನ್ನೊ ಪ್ರಾಣಿಗೆ ಕೌವಡಿ ಕಿಮ್ಮತ್ತು ಕೊಡದೆ ನಾನೇ ಎಲ್ಲಾ ನಿಂದುಹುಂಬತನ ಅಂದು ಬದುಕಿರೊ ಖಾಲಿ ಹೆಂಗಸರು ಬದುಕಿದ್ದಾರೆ ಅವನ ಆಲೋಚನೆ ಸಾಗಿಯೇ ಇತ್ತು. ಆದರೆ ಹವೇಲಿಯ ನಿಲ್ಲುವಿಕೆಯ ಹಿಂದಿನ ಪರಿವರ್ತನೆಗಳು ಪಾಖಂಡಿ ಆಲೋಚನೆಗಳು ಲೋಕದ ಪರಿವರ್ತನೆ, ಹೆಂಗಸರಲ್ಲಾದ ಮಾರ್ಪಾಡುಗಳು ಅವನನ್ನು ಹೈರಾಣ ಮಾಡಿದ್ದವು.

* * *

58. ಕುತೂಹಲ ಕೆರಳಿಸಿದ ಮಹಾಸತಿ ಕಲ್ಲುಗಳು ಮತ್ತ ಒಳಂಗ್

ಹುಲಿಯೂರನ ತಂದೆ ತೊಪುನಾಯ್ಕನ ಸಹೋದರರಾದ ಹೀರಣ್ಯಾ, ಜಂಗೀರ ಬದ್ಯಾ ಮೂವರು ಊರನಡಕ ಹುಡೇವಿನ ಆಸುಪಾಸಿನೊಳಗೆ ನಾಕು ಮಾಳಗಿ ಮನಿ ಹಾಕ್ಸಿದ್ರು, ಎಲ್ಲರ ಗೋಡಿಗಳು ಅಂಟಿಕೊಂಡೆ ಇದ್ದವು, ಈ ಮನಿಂದ ಆ ಮನಿಗ ನಡುವೆ ಗೋಡೆ. ಗೋಡೆಯ ನಡಕ್ಕೆ ಒಂದು ಗೂಡು ಈ ಕಡಿಂದ ನೋಡಿದ್ರ ಆ ಮನಿಯಾಗ ನಡೆಯೊ ಕರಾಮತ್ತೆಲ್ಲಾ ಕಾಣುತ್ತಿತ್ತು. ಅವನ ಚಿಕ್ಕಪ್ಪ, ಜಂಗೀರ, ಜಗಳ ಗಂಟ, ಅವನ ಜಗಳ ಕೇಳಿ ಕೇಳಿ ತೊಪುನಾಯ್ಕ "ಥು ನಿನ್ನ ಮನಿ ಹಾಳಾಗ ಹೋಗತ್ಲಗೆ" ಅಂದವನೆ ಕಣದಾಗ ದೊಡ್ಡದೊಂದು ಗುಡಿಸಲು ಹಾಕಿಕೊಂಡು ಹರೆಯದ ಮಕ್ಕಳು, ಮೈ ಮರತು ಹೊಡಿಯಾಕ ನಿಂತ್ರ ಯಾರು ಉಳಿಯಾಕಿಲ್ಲ ಅಂತೇಳಿ ಕಷ್ಟ ಆದ್ರೂ ಚಿಂತೆ ಇಲ್ಲ ಅಂದವನೆ ಬ್ಯಾರೆ ಹೋದ. ಮಾಳಗಿ ಮನಿ ಕೋಣೆಯ ಕಿಟಕಿಯಲ್ಲಿ ಹೂರ್ಮಂಜು ಹಚ್ಚಿದ ಏಳು ಕಲ್ಲುಗಳಿದ್ದವು. ಪ್ರತಿ ದೀಪಾವಳಿಗೆ, ಹೋಳಿಹಬ್ಬ, ಯುಗಾದಿ, ನಾಗರಪಂಚಮಿಗೆ ದೇವರ ಮುಂದೆ ಎಡೆಹಿಡಿದ ಮೇಲೆ ಗುಜಾಸತ್ತಿಗೆ ಎಡೆಹಿಡದು ಬಾ ಅಂತ ಯಾರಾರು ಮುಂಜಾನೆ ಮೈತ್ಕೊಂಡಿರೊನ್ನ ಕಳುಹಿಸುತ್ತಿದ್ದರು. ಮನೆಯೊಳಗೆ ಏನೇ ಕಾರ್ಯ ನಡೆದರು ಮದಲು ಗುಜಾಸತ್ತಿಗೆ ಒಳಂಗ್ (*ಒಳಂಗ್–ಪ್ರಾರ್ಥನೆ) ಹೇಳಿಯೆ ಮುಂದಿನ ಕೆಲಸ ಮಾಡಲಾಗುತ್ತಿತ್ತು. ಕರ್ನಾಟಕದಲ್ಲಿರುವ ಅನ್ನೋದಕ್ಕಿಂತ ಭಾರತ ದೇಶದೊಳಗಿರುವ ಒಟ್ಟು ಏಳು ಸತಿಗಳಲ್ಲಿ ತೊಪುನಾಯ್ಕನ ವಂಶದವಳಾದ ಗುಜಾಸತ್ತಿ ಒಬ್ಬಾಕಿ ಅಂತ ಆಗಾಗ ಹೇಳುತ್ತಿದ್ದ. ಹಾಗಾಗಿಯೇ ಏಳು ಸತಿಗಳ ಪೂಜೆ ನಡಿವಾಗ ಗುಜಾಸತಿಗೆ ಅಗ್ರಸ್ಥಾನ ಕೊಟ್ಟು ಹುಲಿಯೂರನ ಮನೆತನವಾದ ರಾಠೋಡ್ ಕುಟುಂಬಸ್ಥರು ಮೊದಲ ಆದ್ಯತೆ ಕೊಟ್ಟಿದ್ದರು. ಜಾನಿಬಾಯಿ ಬಹಳ

* ಒಳಂಗ್–ಪ್ರಾರ್ಥನೆ

ಶ್ರದ್ಧೆಯಿಂದ ಅವಳ ಅತ್ತೆಯಿಂದ ಕಲಿತ ಗೋರ್‌ಬೋಲಿಯಲ್ಲಿನ ಪ್ರಾರ್ಥನೆ ಮಾಡುತ್ತಿದ್ದಳು. ಅವನ ಐದಾರು ಸೊಸೆಯಂದಿರು ಬಂದ ಮೇಲೆ ಪ್ರತಿಯೊಬ್ಬರಿಗೂ ಅದನ್ನ ಕಲಿಯುವಂತೆ ತಾಕೀತು ಮಾಡಿದ್ದಳು. ಕಲಿತವರು ಕಲಿತರು ಉಳಿದವರು. ಹಿಂದೆ 'ಸೋ' ಅನ್ನೋದನ್ನ ರೂಢಿ ಮಾಡಿಕೊಂಡರು. ಅವರ ಹಿರಿಮಗ ಜಾತು ಮಂಜಲಿ ತಾಂಡದಲ್ಲಿ ಮೆಕಳಿ ಬಾಯಿಯನ್ನು ಮದುವೆಯಾಗಿ ಬಂದಾಗ, ವಧು ಮನೆಗೆ ಬರುತ್ತಿದ್ದಂತೆ ದಿಬ್ಬಣದವರು ಇನ್ನೂ ಮನೆಯಲ್ಲಿ ಇರುವಾಗಲೆ ಎರಡು ಕೊಬ್ಬರಿ ಬಟ್ಟಲು ಒಂದಿಷ್ಟು ಬೆಲ್ಲ ತಗೊಂಡು, ತಾಂಡದ ಹಿರಿಯ ಹೆಂಗಸರಾದ ರಾಮಜ್ಜಿ, ಸೋಮ್ಲವ್ವ, ಲೋಕಿ, ಥಾವರಿ, ರತ್ನಿ, ಕಾಳಿ, ಪೀಕಿ, ಹನ್ಮಂತಿ ಮುಂತಾದ ಇಡಿ ತಾಂಡದ ಹಿರಿಯರನ್ನ ಒಟ್ಟು ಮಾಡಿದ್ದಳು. "ನೋಡ್ರವ್ವ ರಾಮಿಬಾಯಿ, ಥಾವರಿಬಾಯಿ. ಇದು ನಮ್ಮ ಮನಿಯೊಳಗ ನಡಿತಿರೊ ಚೊಚ್ಚಲ ಮದುವೆ ನನ್ನ ಮಗ ಸೊಸಿ ಚೆನ್ನಾಗಿರಬೇಕು, ಒಂದು ಡಜನ್ ಮಕ್ಕಳನ್ನ ಹೆರಬೇಕು, ನಮ್ಮವ್ವ ಗೂಜ ಸತಿಯಾಗಿ ಕುಂತಾಳ ಅಕಿ ಆಶೀರ್ವಾದ ಬೇಕು ಅದಕ್ಕ ನೀವು ಹಿರಿಕರು ಚೆನ್ನಾಗಿ ಪ್ರಾರ್ಥನೆ ಮಾಡ್ರಿ" ಅಂದಳು. "ಅಲ್ಲೇ ಜಾನಿ, ನಿಮ್ಮ ಸತ್ತಿದ ಪ್ರಾರ್ಥನೆ ನಿಮ್ಮ ಅತ್ತೆಯಿಂದ ನೀ ಕಲ್ತಿಯವ್ವ ನಮಗೇನು ಬಂದೀತು, ನಾವು ಹಿಂದ ಸೋ ಅನ್ನೋರು ಸುರು ಮಾಡ ಬಾ" ಥಾವರಿಬಾಯಿ ಜಾನಿಬಾಯನ್ನ ಕರಿದಳು. ಜಾನಿಬಾಯಿ ತನಗೆ ಗೊತ್ತಿದ್ದ ಒಂದು ದೀರ್ಘವಾದ ಪ್ರಾರ್ಥನೆ ಹಾಡನ್ನು ಗೊರ್‌ಬೋಲಿಯಲ್ಲಿ ಗುನಗುನಾಯಿಸಿದಳು. ಹಿಂದಿದ್ದವರು ಅದನ್ನ ರಾಗವಾಗಿ ಹಾಡಿ ಮುಗಿಸಿದ ಮೇಲೆ ಕೊಬ್ಬರಿ ಬಟ್ಟಲುಗಳನ್ನು ಸಣ್ಣ ತುಂಡುಗಳನ್ನಾಗಿ ಮಾಡಿ ಒಂದೊಂದು ಚೂರು ಬೆಲ್ಲದ ಜೊತೆಗೆ ಹಂಚೋದಕ್ಕೆ "ಎಯ್‌ದರಗಿ ನೀನ ಏಳೆ, ನೀ ಎಲ್ಲಾನೂ ನಿಭಾಯಿಸ್ತಿಯ, ಹುಡುಗರು ಬಹಳ ಅದಾವ, ನೀನ ಸರಿಕಣೆ" ಸೋಮ್ಲವ್ವ ಹೇಳಿದಳು. "ಎಯ್ ನಾ ಒಲ್ಲೆ ಸಣವ್ವ, ಜಾನಿಗ ಹೇಳು ಹಂಚತಾಳ, ಅಕೀನು ಎಲ್ಲಾ ಕಲ್ತಾಳ ತಗೊ" ಅಂತ ಹೇಳಿದಳು. ಆದರೆ ಎಲ್ಲರೂ ಒತ್ತಾಯ ಮಾಡಿ ಕಡೀಗ ದರಗಿಗೆ ಎಬ್ಬಿಸಿದರು. ದರಗಿ ಕುಡುಗೋಲಿನಿಂದ ಮಾಡಿದ ತುಂಡು ಕೊಬರಿ, ತುಣುಕು ಬೆಲ್ಲ ಒಂದೊಂದೆ ಎಲ್ಲರಿಗೂ ಹಂಚತೊಡಗಿದಳು. "ದೊಡವ್ವ ಇಲ್ಲಿ, ಚಿಗವ್ವ ಇಲ್ಲಿ, ಅಜ್ಜಿ, ಅತ್ತೆ, ಎಯ್" ಹುಡುಗರು ಸಂಬಂಧ ಜೋಡಿಸುತ್ತ ಮೈಮೇಲೆ ಏರತೊಡಗಿದರು. "ಲೋ ಹಾಟ್ಗಳ್ರ ಸರಿರಿ, ಕೊಡ್ತಿನಿ, ಎಲ್ಲರಿಗೂ ಕೊಡ್ತಿನಿ ಸುಮ್ಮನಾಗ್ರಿ, ದೂರ ಸರಿರಿ" ತಳ್ಳಿದರೂ ಸರಿಯದೆ ಸುಮ್ಮನೆ ಮುಕ್ಕರಿದ್ರು. "ಲೇ ತಗೊಂಡೋರು ಎಡಗೈ ಯಾಕ ಒಡ್ಡಾಕತ್ತಿರಿ, ನಡೀರಿ ಮುಂದೆ, ಹೂಂ, ನಡೀರಿ ಎಲ್ಲರಿಗೂ ಸಿಗಬೇಕೋ ಬ್ಯಾಡೊ, ನಡಿರಿ" ಜಾನಿಬಾಯಿ ಗದರಿಸಿಂದ ತಗೊಂಡವರು ಮತ್ತೊಂದು ಕೈ ಒಡ್ಡದೆ ಓಡಿದ್ದರು. ಅದ್ರಾಗ ಮಹಾಪುಡಾರಿಗಳು, ಹೊರಗ ಬಂದು, "ಅಲ್ಲ ಅವರೆ ಬುದ್ಧಿವಂತರು ಅಂತ ಅಂದುಕೊಂಡಾರ, ನೋಡಿಲ್ಲ, ಎರಡ ಸಲ ಇಸ್ಕೊಂಡೆ" ಅಂತ ಮತ್ತೊಬ್ಬನನ್ನು ಪ್ರಚೋದಿಸುತ್ತಿದ್ದ

ಒಬ್ಬ. ಕೊಬ್ಬರಿ ಹಂಚಿ ತಾವು ತುಂಡು ತಗೊಂಡ ಮೇಲೆ ಗುಜಾಸತಿಯ ಪ್ರಾರ್ಥನೆ ಮುಗಿದಿತ್ತು.

ಜಾತುನಾಯ್ಕನ ಹೆಂಡತಿ ಮೆಕಳಿ ಗರ್ಭವತಿಯಾದಳು. ಗರ್ಭ ನಿಂತು ಎಂಟನೆ ತಿಂಗಳಲ್ಲಿ "ತಾಯಿ ಗುಜಾಸತಿ, ನನ್ನ ಸೊಸೆಯನ್ನ ಯಾವುದೂ ಕಷ್ಟ ಕೊಂಡದಂಗೆ ಕಾಪಾಡು ತಾಯಿ, ಸುಸೂತ್ರವಾಗಿ ಎರಡ ಕಡೆ ಮಾಡು" ಅಂತೇಳಿ ಜಾನಿಬಾಯಿ ಪ್ರಾರ್ಥನೆ ಸಲ್ಲಿಸಿದಳು. ಆವಾಗಲೂ ಎರಡು ಒಣಕೊಬ್ಬರಿ ಗಿಟಕಗಳನ್ನು ಕೊಯ್ದು ಹಂಚಿದ್ದಳು. ಒಂಭತ್ತನೇ ತಿಂಗಳಲ್ಲಿ ಮೆಕಳಿಗೆ ಗಂಡುಮಗು ಹುಟ್ಟಿದಾಗ ಜಾನಿಬಾಯಿಗೆ ಎಲ್ಲಿಲ್ಲದ ಖುಷಿ. ಕ್ಷಣಾರ್ಧದಲ್ಲಿ ತಾಂಡನೆಲ್ಲಾ ಒಂದ ಮಾಡಿದ್ದಳು. ಸೋನ್ಕಿ ಬಾಯಿ, ಥಾವರಜ್ಜಿ, ರಾಮಜ್ಜಿ ಹಿಂದಲೂರ ಲೋಕವ್ವ, ಒಬ್ಬರನ್ನೂ ಬಿಟ್ಟು ಬಿಡದಂಗೆ ಸೇರಿಸಿದ್ದಳು. "ಎಯ್ ಕುಲ ಬೆಳಗೋನು ಬಂದವ್ವನೆ ಕಣ್ರವ್ವ ತಾಯಿ ಗೂಜಸತಿಗೆ ಸರಿಯಾಗಿ ಬೇಡ್ಕೊಬೇಕು ನಮ್ಮದೇನೈತೆ ಕರಿತಲಿ ಮನುಷ್ಯರು. ಸಾವಿರ ಕಣ್ಣವಳು ಅಷ್ಟದಿಕ್ಕುಗಳನ್ನು ಬಲ್ಲವಳು. ಪ್ರತಿಯೊಬ್ಬರ ಕಷ್ಟಸುಖವನ್ನು ತಿಳಿದವಳು. ಅಕಿ ಕೃಪಕಟಾಕ್ಷ ಇಲ್ಲದೆ ನಾವು ಬಾಳೇವು ಮಾಡಾಕ ಆದೀತೇನು." ಹೇಳಲಾಗದ ಸಂತೋಷ ಗೂಜಸತಿಯನ್ನ ಹೊಗಳಿದ್ದೇ ಮಾಡಿದಳು ಜಾನಿಬಾಯಿ. "ಆ ಮಾತಾಯಿ ಒಲದಾಳ ಬಿಡೆ ನಿನಗ, ಮಗಳ ಮದವಿ ಮಾಡಿದೆ, ಮಗನ್ನ ಮಾಡಿದೆ, ಇನ್ನೂ ಒಂದೆರಡು ಮದವಿ ವಯಸ್ಸಿಗೆ ಬಂದವೆ, ಹೊಲದಾಗ ಒಳ್ಳೆ ದುಡಿಮೆ ಐತೆ. ಗೂಜಸತಿ ಭರಪೂರ ಆಶೀರ್ವಾದ ಮಾಡ್ಯಾಳ ತಗೊ" ರಾಮಜ್ಜಿ ಸಹಜವಾಗಿಯೇ ಹೇಳಿದಳು. ಇಡೀ ತಾಂಡದ ಹೆಂಗಸರು "ಹೌದು ಬಿಡು" ಅಂತ ಒಪ್ಪಿಕೊಂಡರು. ಮಗ ಹುಟ್ಟಿದ್ದಕ್ಕೆ ಅವನ ಹೆಸರಲ್ಲಿ ಮತ್ತೊಂದು ಪ್ರಾರ್ಥನೆ ಸಲ್ಲಿಸಿ ಕೊಬ್ಬರಿ ಬೆಲ್ಲ ಹಂಚಿದ ಮೇಲೆ ಇಡೀ ತಾಂಡದ ಹೆಂಗಸರಿಗೆ ಒಂದೊಂದು ಬಾಟಲಿ ಹೆಂಡ, ನೆಂಚ್ಕೋಳಾಕ ಬಾಂಗಡಿ ಮೀನು ಹುರಿದು ಕೊಟ್ಟಳು ಜಾನಿಬಾಯಿ. ಮೊಮ್ಮಗ ಹುಟ್ಟಿದಕ್ಕೆ ಸಣ್ಣದೊಂದು ಪಾರ್ಟಿ ಆಯೋಜಿಸಿದ್ದಳು. ಸೂಲಗಿತ್ತಿಯರಿಗೆ ಅವತ್ತೊಂದು ಬಾಟಲಿ ಕುಡಿಸಿದ್ದಳು. ಮತ್ತ ಈಗೊಂದು ಖುಷಿಗೆ ಬಾಟಲಿ ಕೊಟ್ಟು ಮರ್ಯಾದೆ ಮಾಡಿದಳು.

ಹುಲಿಯೂರನಿಗೆ ಅಚ್ಚರಿಯಾಗಿದ್ದು, ಅವರು ಮನೆ ಬಿಟ್ಟು ಹೋದ ನಂತರ, ಮಾಳಿಗಿ ಮನೆಯನ್ನ ಹಾಗೆ ಬಿಡಬಾರದು ಅಂತ ಮಲಗಕೆ ಪ್ರತಿದಿನ ಕಳುಹಿಸುತ್ತಿದ್ದರು. ಆಗ ಅವನಿಗೆ ಕುತೂಹಲ ಕೆರಳಿಸಿದ್ದು ತಮ್ಮ ಮನೆಯ ಕಿಟಕಿಯಲ್ಲಿ ಸಾಲಿಗೆ ಜೋಡಿಸಿದ ಒಂದೇ ತರಹದ ಒಂದೇ ಆಕಾರ, ರೂಪದ ಈ ಏಳುಕಲ್ಲುಗಳು. ಹೂರ್ಮಂಜು ಬಳದು ಅವುಗಳ ನೆತ್ತಿಗೆ ಕುಂಕುಮ ಹಚ್ಚಿ 'ಮಹಾಸತಿ' ಎಂದು ನಾಮಕರಣ ಮಾಡಲಾಗಿತ್ತು. ಅವನ ಮನೆಯಲ್ಲಿ ಇಲ್ಲ ಪಕ್ಕದ ಅವನ ಚಿಕ್ಕಪ್ಪಂದಿರ ಮನೆಗಳಲ್ಲಿ ಏನೇ ಮುಖ್ಯ ಕಾರ್ಯವು ಜರುಗಿದರೂ ಅವುಗಳಿಗೆ ಸಾಕ್ಷಿಯಾಗಿ ಏಳು

ಮಹಾಸತಿಗಳು ಇದ್ದವು ಎನ್ನುವುದಕ್ಕೆ ಅಲ್ಲಿ ನಡೆಯುತ್ತಿದ್ದ ಒಳಂಗ್ ಸಾಕ್ಷಿಯಾಗಿತ್ತು. ಮುಂದೆ ಬರ್ತಾ ಬರ್ತಾ ಹುಲಿಯೂರನ ತಾಯಿ ಜಾನಿಬಾಯಿ ತೀರಿಕೊಂಡ ಮೇಲೆ, ಯಾರಿಗೊ ಒಬ್ಬರ ಪಾಲಿಗೆ ಮಾಳಿಗೆ ಮನೆಹೋಯ್ತು. ಯಾವಗೋ ಕಟ್ಟಿದ್ದ ಮಾಳಿಗೆ ಮನೆ ಸೋರಿ ಸೋರಿ ಒಳಗೆ ಕುಸೆಬಿದ್ದಿತ್ತು. ಮನುಷ್ಯ ವಾಸಕ್ಕೆ ಯೋಗ್ಯವಾಗಿರದ ಕಾರಣ ಅದನ್ನ ಸಂಪೂರ್ಣವಾಗಿ ಕೆಡವಿ ಹಂಚಿನ ಮನೆ ಹಾಕ್ಸಿದ್ದ. ಅವಾಗಿನಿಂದ ಮುಂದೆ ಗುಜಾಸತಿಯ ಬಗ್ಗೆ ಯಾರ ಬಾಯಲ್ಲೂ ಚಕಾರ ಶಬ್ಧ ಬರಲಿಲ್ಲಾ. ಮುಂದಿನ ತಲೆಮಾರಿನ ಮಕ್ಕಳು, ಸೊಸೆಯಂದಿರು ಯಾರಿಗೂ ಗುಜಾಸತಿಯ ಬಗ್ಗೆ ಸರಿಯಾಗಿ ತಿಳಿಯದಿರುವುದು ಮತ್ತೊಂದು ದುರಂತ. ಹುಲಿಯೂರ ಮಾತ್ರ ಅವನಿಗೆ ತಿಳಿದಾಗಿಂದ ಇದ್ದ ಕಲ್ಲುಗಳು ಎಲ್ಲ ಹೋದವು ಅಂತ ಹುಡುಕಾಡಿದ್ದ.

* * *

59. ಚಾಂದಿಯ ದವಳಧೋಕಾಯೆರೊ

ಚಾಂದಿ ಹುಲಿಯೂರನ ಮೂರನೆ ಅಣ್ಣ ಜಗನನ ಹೆಂಡತಿ. ಮೊದಲು ಇಬ್ಬರು ಅತ್ತಿಗೆಯಂದಿರುಗಳ ಹೆರಿಗಿಗೆ, ಹೋಗಿ ಅವರು ವಾಪಾಸು ಬಂದಿದ್ದು ಅವನಿಗೇನು ತಿಳಿದೆ ಇರಲಿಲ್ಲಾ. ಆದರೆ ಬೇಸಿಗೆ ರಜೆಯಲ್ಲಿ ತಾಂಡದಲ್ಲೇ ಇದಿದ್ದರಿಂದ ಜನಂಕಾಲಕ್ಕೆ ತೊಪಾಪುರ ತಾಂಡಕ್ಕೆ ಹೋಗಿದ್ದ. ಚಾಂದಿಬಾಯಿಯನ್ನು ಕರ್ರೊಂಡು ಅವಳ ತಾಯಿ, ಚಿಕ್ಕಮ್ಮಂದಿರು, ಯಾರ್‍ಯಾರೊ ಚಕ್ಕಡಿ ಕಟ್ಕೊಂಡು ಬಂದಿದ್ದರು. ಹೆರಿಗೆಯಾಗಿ ಮೂರು ತಿಂಗಳು ಆಗಿತ್ತು. ಬಂದವರಿಗೆ ನೀರು ಕೊಟ್ಟು, ಕುಶಲೋಪರಿ ವಿಚಾರಿಸಿದ ಮೇಲೆ "ಎಷ್ಟ ತಿಂಗಳಾದ್ವು" ಜಾನಿಬಾಯಿ ಕೇಳಿದಳು. ಚಾಂದಿಯ ತಾಯಿ ಗೋಮ್ಲಿ "ಮೂರು ತಿಂಗಳು ಆಗಾಕ ಬಂದ್ವೆಯಕ್ಕ" ಅಂದ್ಲು "ಹಾಗಾದರೆ ನಾಳೆ ಮುಂಜಾನೆ ಬೆಂಕಿ ಸ್ಪರ್ಶ ಕಾರ್ಯಕ್ರಮ ಇಟ್ಕೊಬಹುದೇನೊ. ಬಹಳ ಮಂದಿ ಕುಟುಂಬ, ಹೊಲಮನಿ ಕೆಲಸಗಳು, ಏನೊ ಆಟು ಒಲಿ ಮುಂದ ಕೆಲಸ ಮಾಡಿದ್ರ ಬೇರೆಯವರಿಗೂ ಆಟು ಇಟು ಆಸರ ಅಕ್ಕೈತಿ" ಗೋಮ್ಲಿಬಾಯಿ ಮಾರಿ ನೊಡಿದಳು. "ಅಯ್ಯೊ ತಾಯಿ, ನಿಮ್ಮ ಸೊಸಿ, ನಿಮ್ಮ ಇಷ್ಟ ಬಿಟ್ಟಹೊಕ್ಕಿವಿ ಏನಾರು ಮಾಡಿಸಿಕೊಳ್ಳಿ. ನಾವು ಮಗಳಿಗೆ ಅದು ಹಚ್ಚಬೇಡ್ರಿ, ಇದು ಮಾಡಿಸಬೇಡ್ರಿ ಅಂತಂದು ಚಾಡಿ ಮಾಡೋದು, ಚುಚ್ಚೋದು, ತಾರಾತಿಗಡಿಬಾರ ವಿದ್ಯೆ ಗೊತ್ತಿಲ್ಲದ ಮಂದಿ. ನಿಮ್ಮ ಮನುಷ್ಯಳು ಕಣವ್ವ ನಿಮ್ಮಿಷ್ಟ" ಅಂದಳು. ಜಾನಿಬಾಯಿಗೆ ಬೀಗತಿ ಮೇಲೆ ಗೌರವ ಮೂಡಿತ್ತು. ಚಾಂದಿನು ಸೊಂಬೇರಿ ಏನು ಆಗಿರ್ಲಿಲ್ಲಾ ಎಲ್ಲಾ ಓರಗಿತ್ತಿಯರ ಜೊತೆಗೆ ಅನ್ಯೋನ್ಯತೆಯಿಂದಿದ್ದಳು.

ಮೂರು ತಿಂಗಳ ಹೆಣ್ಣು ಕೂಸು ಒದರುತ್ತಿತ್ತು. ಯಾಕೆ ಏನೂಂತ ಯಾರಿಗೂ ತಿಳಿವಲ್ಲದಾಗಿತ್ತು. ಅದರಲ್ಲೇ ಅಗ್ನಿಸ್ಪರ್ಶ ಕಾರ್ಯ ಹಮ್ಮಿಕೊಂಡಿದ್ದರು. ಹೆರಿಗೆ ಮಡಿ ಮೈಲಿಗೆ, ಮುಟ್ಟು, ಚಟ್ಟು, ರಕ್ತ ಮಾಂಸದಿಂದ ಪೂರ ಮೈಲಿಗೆಯಾದ ದೇಹವನ್ನು

* ದವಳಧೋಕಾಯೆರೊ–ಅಗ್ನಿಸ್ಪರ್ಶ ಮಾಡಿಸುವುದು

ಅಗ್ನಿಗೆ ಸ್ಪರ್ಶ ಮಾಡೋಕೆ ಮುಂಚೆ ಅಗ್ನಿ ದೇವನಿಗೆ ಪೂಜೆ ಮಾಡಿ ಸಗಣಿಯನ್ನು ಮುಟ್ಟಿ ಪವಿತ್ರಳಾಗಿ ಒಲೆಮುಂದೆ ಹೋಗುವುದು ಲಮಾಣಿಗಳಲ್ಲಿ ವಾಡಿಕೆ ಇತ್ತು. ಪ್ರತಿ ದೀಪಾವಳಿಯಲ್ಲೂ ಹಿರಿಯರಿಗೆ ಎಡೆಯನ್ನು ಅವರು ವಾಸವಾಗಿರುವ ಮೂಲ ಮನೆಯ ಒಲೆಯಲ್ಲಿ ಕೊಡುತ್ತಿದ್ದರಿಂದ ಆ ಒಲೆ ಅಪವಿತ್ರವಾಗಬಾರದು ಎನ್ನುವುದೂ ಮತ್ತೊಂದು ಕಾರಣನೂ ಇತ್ತು. ಹಾಗಾಗಿ ಮುಂಜಾನೆ ಐದು ಗಂಟೆಗೆ ಜಾನಿಬಾಯಿ ಸುಡೊ ಸುಡೋ ನೀರನ್ನ ಚಾಂದಿಯ ಮೇಲೆ ಹೊಯ್ದು ಆರು ಗಂಟೆಗಾಗಲೆ ಅಕ್ಕಿ ಅನ್ನಕ್ಕೆ ಬೆಲ್ಲ ಸೇರಿಸಿ ಹುಗ್ಗಿಯ ಎಡೆ ತಯಾರು ಮಾಡಿದ್ದಳು. ತಾಂಡದ ಹಿರಿಯ ಹೆಂಗಸರನ್ನ ಕರೆಕಳುಹಿಸಿದ್ದಳು. ಕರೆಯೋದಕ್ಕೆ ಹೋದ ಹುಲಿಯೂರ "ಅಜ್ಜಿ ನಮ್ಮ ಅತ್ತಿಗೆಯದು ಅಗ್ನಿಸ್ಪರ್ಶ ಕಾರ್ಯ ಇದೆ ಬರಬೇಕಂತೆ" ಅಂತನೆ ಕರೆದಿದ್ದ. "ಓ ಬಂದ್ಲೇನೊ ನಿಮ್ಮತ್ತಿಗೆ ಚಾಂದಿ, ಬಂದೆನಡಿ" ಅಂದು ಅವನ ಹಿಂದೆಂದೆ ಬಂದಿದ್ದಳು ರಾಮಜ್ಜಿ. ಗೋರಬೋಲಿಯಲ್ಲಿ, ಮನೆಯ ಹೊರಗೆ ಬೀದಿಯಲ್ಲಿ ಒಲೆ ಅಂತ ಮೂರು ಕಲ್ಲುಗಳನ್ನು ಇಟ್ಟು, ಬೆಂಕಿ ಹಚ್ಚಿದ ಜಾಗದಲ್ಲಿ ಒಂದು ಒತ್ಲ ಸಗಣಿ ಇಡಲಾಗಿತ್ತು. ಉರಿಯುತ್ತಿರುವ ಬೆಂಕಿಯಲ್ಲಿ ಮಾಡಿದ ಸಿಹಿಯ ಎಡೆ ನೈವೇದ್ಯ ಮಾಡಿ ಬೆಂಕಿಗೆ ಅರ್ಪಣೆ ಕೊಟ್ಟ ನಂತರ ಹೆಂಗಸರು ತಮ್ಮ ಭಾಷೆಯಲ್ಲಿ ಪ್ರಾರ್ಥನೆ ಮಾಡಿ ಅಗ್ನಿದೇವತೆಗೆ ಎಲ್ಲವನ್ನು ಒಪ್ಪಿಸಿ ಶಾಂತಿ ಮಾಡಿದ ಮೇಲೆ ಹೆರಿಗೆಯಾದವಳು ಶುದ್ಧಳಾದಳು. ಈಗ ಅವಳು ಬೆಂಕಿಯನ್ನು ಮುಟ್ಟಲು, ಅಡುಗೆ ಮನೆಯಲ್ಲಿ ಕೆಲಸ ಮಾಡುವುದಕ್ಕೆ ಬೇಕಾದ ಶುದ್ಧತೆಯನ್ನು ಪಡೆದುಕೊಂಡಳು ಎಂದರ್ಥ. ಒಬ್ಬ ಹೆಂಗಸು ಎಷ್ಟು ಸಲ ಹೆರಗೆಯಾದರೂ ಅವಳಿಗೆ ಪ್ರತಿಸಲ ಶುದ್ಧಿ ಮಾಡಿಯೇ ಮುಂದಿನ ಕೆಲಸ. ಪೂಜೆ ಮುಗಿದ ಮೇಲೆ ಎಡೆಗೆ ತಂದಿದ್ದ ಅಕ್ಕಿ ಹುಗ್ಗಿಯನ್ನು ನೆರೆದ ಹುಡುಗರಿಗೆಲ್ಲಾ ಹಂಚಲಾಗುತ್ತಿತ್ತು. ಹುಲಿಯೂರನು ಕೈ ಮಾಡಿದ ಅವನ ಕೈಯಲ್ಲಿ ಬಿದ್ದ ಪ್ರಸಾದವನ್ನು ಸ್ವೀಕರಿಸಿ ಎಲ್ಲಾ ಹುಡುಗರಂತೆ ಅವನು ಕೈ ತೊಳೆದು ಆಟಕ್ಕೆ ಹೊರಟ.

ತಾಂಡದಲ್ಲಿ ಈ ಕಾರ್ಯ ಬಹಳಷ್ಟು ನಡೆಯುತ್ತಿತ್ತು. ಅಗ್ನಿದೇವನಿಗೆ ಎಡೆಯನ್ನು ಸ್ಥಿತಿವಂತರು ಬಡವರು ಯಾವುದೇ ಅಂತರವಿಲ್ಲದೆ ಮಾಡುತ್ತಿದ್ದರು. ಒಂದು ಕಾಲಘಟ್ಟದ ನಂತರ ಈ ಪದ್ಧತಿ ಮಾಯವಾಗಿತ್ತು. ತಾಂಡದ ಹಿರಿಯ ಹೆಂಗಸರ ಸಂಖ್ಯೆ ದಿನೇ ದಿನೇ ಕಡಿಮೆಯಾಗಿತ್ತು. ತದನಂತರ ಈ ಆಚರಣೆಯು ತಾಂಡದಲ್ಲಿ ಕಾಣಸಿಗಲಿಲ್ಲ. ಅದಕ್ಕೆ ಕಾರಣ ಏನು ಅಂತ ತಿಳಿಯಲಿಲ್ಲ.

* * *

60. ರಕ್ತಗತವಾದ ವ್ಯಾಪಾರ

ಬಂಜಾರರ ರಕ್ತದಲ್ಲಿಯೇ ವ್ಯಾಪಾರ ಅಡಗಿತ್ತು. ಕಾಲರಾಯನ ಕೈಗೆ ಸಿಕ್ಕು ಎಲ್ಲವು ನುಚ್ಚು ನೂರಾಗಿ, ಈಗ ಸಣ್ಣ ಸಣ್ಣ ವ್ಯಾಪಾರಿಗಳು, ಬೆಡ್‌ಸೀಟ್, ವಾಚು, ಸ್ವೆಟರ್, ಚಾದರ್, ಬಟ್ಟೆ ಗಂಟನ್ನು ತಲೆ ಮೇಲಿಟ್ಟು ಬೀದಿ ಬೀದಿ ಕೂಗಿ ದಿನಕ್ಕೆ ಒಂದೋ ಎರಡೋ ವ್ಯಾಪಾರ ಕುದುರಿದರೆ ಅದೇ ದೊಡ್ಡ ಖುಷಿಯ ಸಂಗತಿ. ತಾಂಡದ ಮಾರಾನಾಯ್ಕ, ಗಣೇಶಿ, ಸೀಮ್ಲ, ಜಗನ, ಸಂದೇಶಿ, ರೂಪ್ಲ, ಸೋಮ್ಲ, ಕಾಳು, ಕಂಬೇಡಿ ಮುಂತಾದವರು ಒಂದೊಂದು ಟೀಮ್. ತಮಿಳುನಾಡು, ಆಂಧ್ರದ ಗಡಿ, ಮಹಾರಾಷ್ಟ್ರದ ಕಡೆಗೆ ಹೊರಟು ಬಿಡುತ್ತಿದ್ದರು. ಹೊತ್ತಾರೆ ಎದ್ದವರೆ, ಚಾದರ್ ವ್ಯಾಪಾರಿ, ಅರೇ ಬರೆ ತೆಲಗಲ್ಲಿ "ಚದ್ದರ್‌ವು. ಚದ್ದರ್, ಕಾವಲಮ್ಮ, ಸಸ್ತಾ ಉಂದಮ್ಮ" ಕನ್ನಡಮಯ ತೆಲಗಲ್ಲಿ ಮಾತಾಡಿ ಗಿರಾಕಿ ಕುದುರಿಸಿಕೊಂಡು ನೂರು ರೂಪಾಯಿ ಚಾದರ್, ಮುನ್ನೂರಕ್ಕೆ ಮಾರಿ, ದಿನದ ದುಡಿಮೆ ಆಯ್ತು ಅಂತ ತೃಪ್ತಿ ಪಡುತ್ತಿದ್ದ. ಆದರೆ ಹೆಂಗಸರು ಮೊದಲೆ ಚೌಕಿಸಿಯ ಚತುರೆಯರು "ಎಯ್, ಎಮಪ್ಪ ನೂವು, 150 ಇಸ್ತಾನು ಈ" ಅಂದ್ರೊ ಅದನ್ನ ಬಿಟ್ಟು ಮೇಲೆ ಬರುತ್ತಲೆ ಇರಲಿಲ್ಲಾ. ನೀನು ಅದೇನೆ ಹೇಳಿದರು ಒಪ್ಪುತ್ತಿರಲಿಲ್ಲಾ. "ಥತ್ ಇವನವ್ವನ ಮುಂಜಾನೆ ಮುಂಜಾನೆ ಯಾವ ದರಿದ್ರ ಮುಂಡೆ ಸಿಕ್ಕಳು. ಅಲ್ಲಾ ಗಂಡನ ಕೂಡ ಜಗಳ ಮಾಡಿದ್ದಳೊ ಏನೊ ನನ್ನ ವ್ಯಾಪಾರ ಹಾಳು ಮಾಡಿದಳು. ತಲ್ಲಿ ಒಕಫಿಪ್ಟಿ ರೂಪಿಸು ಜಾಸ್ತಿ ಈಯಮ್ಮ ನೇನು ನೀ ಬಿಡ್ಡ ಕದ" ಮಾನಸಿಕವಾಗಿ ಬ್ಲಾಕಮೆಲ್ ಮಾಡಾಕ ನೋಡಿದ. "ಸೂಡ್ ಬಾಬು 180 ಲಾಸ್ಟು, ಇಸ್ತಾವ ಪೊತಾವ." ಕಡ್ಡಿ ತುಂಡು ಮಾಡಿದಂತೆ ನುಡಿದಳು. ಇನ್ನೂ ಗಾಳಿಗೆ ಮೈಗುದ್ದಿ ಪ್ರಯೋಜನ ಇಲ್ಲ ಅಂದ್ಕೊಂಡ ಸೊಮ್ಲ, ಕೊಟ್ಟವನೆ ಕಾಸು ಪಡೆದು ಊರೊಳಗೆ ಪ್ರವೇಶ ಮಾಡಿದ.

ತಮಿಳುನಾಡು ಗಡಿಪ್ರದೇಶದಲ್ಲಿ ಮುರುಗೇಶನದ್ದು ಮತ್ತೊಂದು ಅಪರೂಪದ ಅನುಭವ. ಅವನು ಗೋಡಿ ಗಡಿಯಾರ, ಕೈಗೆ ಕಟ್ಟುವ ಮಿಣಿಮಿಣಿ ಅನ್ನೊ ಗಡಿಯಾರಗಳು, ಪರ್ಸ್, ಕುಂಕುಮ ಡಬ್ಬ, ಲೇಡಿಸ್ ಐಟಮ್‌ಗಳನ್ನು

ತುಂಬಿಕೊಂಡು ಹೋಗಿ ವ್ಯಾಪಾರ ಮಾಡುತ್ತಿದ್ದ. ಕೈಮೇಲೆ ಕಟ್ಟುವ ಗಡಿಯಾರ ಐವತ್ತು ರೂಪಾಯಿಗೊಂದರಂತೆ ಖರೀದಿಸಿ ಕನಿಷ್ಠ ನಾಲ್ಕು ನೂರರಿಂದ ಐನೂರು ರೂಪಾಯಿಗೆ ಮಾರದೆ ಬರುತ್ತಿರಲಿಲ್ಲಾ. ಕಟ್ಟಿಕೊಂಡವನ ಅದೃಷ್ಟ ಚೆನ್ನಾಗಿತ್ತು ಆರುತಿಂಗಳು, ಆರು ವರ್ಷಗಳವರೆಗೆ ನಡೆಯುತ್ತಿತ್ತು. ಅವನ ಅದೃಷ್ಟ ಕೆಟ್ಟದಿದ್ದರೆ ಮೂರೆ ದಿನದಲ್ಲಿ ಬಂದ್ ಬೀಳುತಿತ್ತು. ಹೌಹಾರದಿ ಹೆಂಗಸರು ಹುಡುಗಿಯರು, ಹೈರಾಣಾಗಿ, ಯಾರಿಗಾದರು ಹೇಳಿದರೆ ಹೋಗೋದು ತಮ್ಮಮರ್ಯಾದೆ ಅಂದವರೆ ನಾಕಾರು ತಿಂಗಳು ಮುಚ್ಚಿಕೊಳ್ಳುತ್ತಿದ್ದರು. ಮುರುಗೇಶಗೆ ತಮಿಳು ಬರುತ್ತಿದ್ದರಿಂದ "ಇಲ್ಲ ಅಕ್ಕ ಹಾಗಲ್ಲ, ಅದರ ಮೂಲ ಬೆಲೆನೆ ಸುಮಾರು ಮೂರುನೂರ ಎಪ್ಪತ್ತು ಏನೋ ನಾನು ಗಲ್ಲಿಗಲ್ಲಿ ಅಲಿತಿದ್ದಿನಿ ಅಲ್ಲ ಅಕ್ಕ, ತಿರುಗಾಡಿದ ಕೂಲಿ ಒಂದು ಮೂವತ್ತು ರೂಪಾಯಿ ಬೇಡವೆನಕ್ಕ" ಕೇಳಿದವಳು ಕರಗಿ ನೀರಾಗುವಂತೆ ಮಾತನಾಡಿದ್ದ. ಅವಳು ತಮಿಳಿನಲ್ಲಿ ನೆರೆದ ಎಲ್ಲಾ ಹೆಂಗಸರಿಗೂ ಎಚ್ಚರಿಸಿ "ಹೌದಲ್ವ ಪಾಪ ಬಿಸಲಾಗ ನಾಯಿ ಹಂಗೆ ತಿರುಗಾಡತವೆ. ದಿನಕ್ಕೆ ಎರಡು ಮೂರು ಗಿರಾಕಿ ಖರೀದಿಸುತ್ತಾರೆ. ಇವರಿಗೂ ಕೂಲಿ ಗೀಟುವುದು ಬೇಡವಾ?" ಚರ್ಚೆ ಮಾಡಿ ಒಂದೆ ಹತ್ತಿರ ಐದಾರು ಐಟಮ್ ಖಾಲಿ ಮಾಡುತ್ತಿದ್ದರು.

ಮೂರು ನಾಕು ಐಟಮ್‌ಗಳನ್ನು ಮಾರಿದವನೆ ಹಿಂದೆ ತಿರುಗಿ ನೋಡದಂತೆ ಮುಂದೆ ಸಾಗಿದ್ದ. ಏಕೆಂದರೆ ಅವನು ಮಾರಿದ ಐವತ್ತು ರೂಪಾಯಿಗಳ ವಾಚುಗಳನ್ನು ಮುನ್ನೂರು ರೂಪಾಯಿಗೆ ಒಂದರಂತೆ ಮಾರಿದ್ದ. ಅವು ಯಾವ ಕ್ಷಣದಲ್ಲಿ ವಾಚು ನಿಲ್ಲಬಹುದು. ಬೆಲ್ಟ್ ಹರಿಯಬಹುದು, ಏನಾದರೂ ಆಗಬಹುದು. ಹಾಗಾಗಿ ಆ ಗಲ್ಲಿಗೆ ಅವನು ಎರಡು ವರ್ಷಗಳ ನಂತರವೆ ಪ್ರತ್ಯಕ್ಷನಾಗುತ್ತಿದ್ದ. ಮುರಗೇಶಿ ವ್ಯಾಪಾರದಲ್ಲಿ ಬಲೆ ಬುದ್ಧಿವಂತ. ಇಂತಹವರಿಗೆ ಇಂತಹ ಸಾಮಾನು ಕಂಡರೆ ಇಷ್ಟ ಅಂತ ಅವನಿಗೆ ಗೊತ್ತಿತ್ತು. ಹಾಗಾಗಿ ಅವರ ಮನಸ್ಸಿನೊಂದಿಗೆ ಆಟ ಆಡುತ್ತಿದ್ದ. ಎಲ್ಲಿ ಬಡಿಯಬೇಕು, ಎಲ್ಲಿ ಬಗ್ಗಿಸಬೇಕು ಎನ್ನುವುದು ಅವನಿಗೆ ಗೊತ್ತಿತ್ತು. ಅದಕ್ಕೆ ಅವನು ಗಂಡಸರು ಮನೆಯಿಂದ ಹೊರಗೆ ಹೊಲಗಳಿಗೆ ಹೋದಾಗ, ಹೆಂಗಸರು ಮಾತ್ರ ಮನೆಯಲ್ಲಿದ್ದಾಗ ಹೆಂಗಸರು ಎಷ್ಟೆ ಚೌಕಾಸಿ ಚತುರೆಯಾಗಿದ್ದರೂ ಸುಲಭವಾಗಿಯೆ ಮೋಸ ಹೋಗುತ್ತಿದ್ದರು. ಜಗತ್ತಿನ ಅತ್ಯಂತ ತಿಳುವಳಿಕೆ ಉಳ್ಳವರು, ಉಳಿತಾಯ ಮಾಡುವವರು, ವ್ಯವಹಾರ ಜ್ಞಾನ ಉಳ್ಳವರು ಎಂದು ತಿಳಿದುಕೊಂಡು ತಲೆಹರಟೆ ಮಾಡುತ್ತಿರುತ್ತಾರೆ. ಆದರೆ ಸಹಜವಾಗಿಯೇ ಅವರು ವ್ಯವಹಾರ ಜ್ಞಾನ ಶೂನ್ಯರು. ಅದನ್ನು ಅರ್ಥೈಸಿಕೊಂಡಿರುವುದರಿಂದಲೇ ಪುರುಷ ಬೀದಿ ವ್ಯಾಪಾರಿಗಳು ಗಲ್ಲಿಗಳಿಗೆ ವ್ಯಾಪಾರಕ್ಕೆ ಇಳಿಯುವುದು. ಅದೇ ರೀತಿ ಅವರು ಕೂಡಿಟ್ಟ ಚೂರುಪಾರು ಕಾಸು ಲಪಟಾಯಿಸಿ ಪರಾರಿಯಾಗುವುದು. ಹಾಗಾಗಿಯೇ ಆರುತಿಂಗಳ ವ್ಯಾಪಾರದಲ್ಲಿ ಒಂದಿಷ್ಟು ಮುನಾಪ ಮಾಡಿಕೊಂಡು ತಾಂಡಕ್ಕೆ ಬರುತ್ತಿದ್ದರು. ತಾಂಡಕ್ಕೆ ಬಂದವರೆ

ಸೇಂದಿ, ದಾರು ಕುಡಿದು ತಂದ ಮೊತ್ತವನ್ನು ಖರ್ಚು ಮಾಡಿ ಮತ್ತೆ ಸಾಲ ಮಾಡಿ ವ್ಯಾಪಾರಕ್ಕೆ ಓಡುತ್ತಿದ್ದರು. ಇದು ಸರ್ವೇಸಾಮಾನ್ಯವಾಗಿತ್ತು. ಊರಾಗ ಮನಿಯಿಲ್ಲ ಅಡವ್ಯಾಗ ಹೊಲ ಇಲ್ಲ ಗಾದೆಮಾತಿನಂತಾಗಿತ್ತು. ಸಣ್ಣಪುಟ್ಟ ವ್ಯಾಪಾರಿಗಳ ಬಾಳೇವು. ಎಷ್ಟೇ ದುಡಿದರು, ಎಷ್ಟೇ ಉಳಿಸಬೇಕಂದರೂ ಏನೊ ಒಂದು ಸಮಸ್ಯೆ ಧುತ್ ಅಂತ ಪ್ರತ್ಯಕ್ಷವಾಗಿ ಬಿಡುತ್ತಿತ್ತು. ಈ ಸನ್ನಿವೇಶದಲ್ಲಿ ಯಾರು ತಾನೆ ಮುಂದೆ ಬರೋಕೆ ಸಾಧ್ಯ. ಸಿಗೊ ಮುನಾಪವನ್ನ ಉಳಿಸಿಕೊಳ್ಳಬೇಕೆಂಬ ಹಂಬಲ. ಆದರೆ ಅದು ಉಳಿಯುತ್ತಲೇ ಇರಲಿಲ್ಲಾ, ಮಗಳಿಗೆ ಏನಾದರೂ ಆಗುವುದು, ಮಗನದ್ದೇನೋ ಸಮಸ್ಯೆ, ಹೆಂಡತಿದ್ದು ಬರಿ ಗೋಳಾಟದ ಬದುಕು. ಆದರೂ ವ್ಯಾಪಾರದ ಕಲೆ ಸಿದ್ಧಿಸಿತ್ತು. ಮುರುಗೇಶಿ ಮಾತಾಡುವ ಪರಿ, ಅವನು ವ್ಯವಹಾರ ಕುದುರಿಸುವ ರೀತಿ ಮನೋಜ್ಞವಾಗಿತ್ತು. ಮುರುಗೇಶಿ ತಲಿಯೊಳಗೆ ಗೋಡೆ ಗಡಿಯಾರ ಕಟುಕುತ್ತಿತ್ತು. ತಮಿಳುನಾಡಿನ ಗಡಿಯ ಹಳ್ಳಿ, ಯಾರೊ ಪುಣ್ಯಾತ್ಮ ಸಾವಿರ ರೂಪಾಯಿಗೆ ಗೋಡೆ ಗಡಿಯಾರ ಮಾರಿ ಹೋಗಿದ್ದ. ಒಂದು ತಿಂಗಳು ಸರಿಯಾಗಿ ಓಡಿದೆ, ಅದಾದ ಮೇಲೆ ನಿಂತು ಹೋಗಿತ್ತು. ಮುರುಗೇಶಿಗೆ ಗಡಿಯಾರ ತೋರಿಸಿ ಏನೇನೊ ಹೇಳಿದಳು ಹೆಣ್ಣುಮಗಳು. ಮುರುಗೇಶಿ ತರಿಸಿ ನೋಡಿ, "ರಿಪೇರಿಗೆ ಎಂಟುನೂರು ಆಗುತ್ತೆ, ಬದಲಿಗೆ ಬೇಕಾದರೆ ರೇಟಿಗೆ ನನ್ನತ್ರ ಹೊಸದಿದೆ" ತಗೊತಿನಿ ಎಂದಿನ ಧಾಟಿಯಲ್ಲಿ ಹೇಳಿದ. ಅವಳು ಸ್ವಲ್ಪ ಹೊತ್ತು ಆಲೋಚನೆ ಮಾಡಿದಳು. "ಎಯ್ ಒಂದೂವರೆ ಜಾಸ್ತಿ ಆಯ್ತು ಹನ್ನೆರಡು ನೂರು ಕೊಡ್ತಿನಿ ಹಳೇದು ಬೇಕಾದ್ರ ನಿನೆ ತಗೊ" ಅಂದಳು ಹೆಂಗಸು. ಎರಡು ಮುಟ್ಟು ಜಾಸ್ತಿ ಸಾಕು ಅಂದವನೆ "ಬೇರೆ ಕಡೆಗೆ ಹೀಗೆ ಮಾರಲ್ಲ ಕಣವ್ವ ನೀ ಏನೊ ಕೇಳ್ತಿದ್ದಿಯಾ ಅಂತ ಕೊಡ್ತಿದ್ದಿನಿ" ಅಂತ ಹೇಳಿ ಹಳೆಯದನ್ನು ಪ್ಯಾಕ್ ಮಾಡಿಕೊಂಡವನೆ ಹೊಸದಕ್ಕೆ ಸೆಲ್ ಹಾಕಿ ನಡೆಯುವಂತೆ ಮಾಡಿ ಜಾಗ ಖಾಲಿ ಮಾಡಿದ.

* * *

61. ಕಾಫಿಬೀಜ ಹರಿಯುವವರು

ತಾಂಡದಲ್ಲಿ ತೊಪುನ ಕುಟುಂಬವೆ ದೊಡ್ಡದು. ಹಿಂದೆ ಇರಬಹುದಾದ ಮನೆತನಗಳು ಯಾವ ಯಾವದೊ ಕ್ಷುಲ್ಲಕ ಕಾರಣಕ್ಕೆ ಹಾಳಾಗಿ ಹೋಗಿ ಒಂದು ಇಪ್ಪತ್ತೊಂದು ಮನೆಗಳಾಗಿದ್ದವು. ಇದ್ದ ಆಸ್ತಿ ಕೂಡಿದ್ದಾಗ ಬಹಳ ಇತ್ತು ಹೊರಗೆ ಹೋದ ಮೇಲೆ ತುಂಡು ತುಂಡಾಗಿ ಹೋಯ್ತು. ಯಾರದೊ ಒಂದ ಎಕ್ಕರೆ ಆದರೆ ಮತ್ಯಾರದೊ ಅರ್ಧ ಎಕ್ಕರೆ. ಮನಿ ತುಂಬ ಮಕ್ಕಳು ಜೀವನ ಸಾಗೋದು ಹೇಗೆ? ಕುಂತನಳ್ಳಿ, ಸುಳ್ಳಾಪುರ, ಮಂಡಲಳ್ಳಿ ಸುತ್ತಾಡಿ ಕೂಲಿ ಮಾಡಿದರೂ ತುಂಬದ ಹೊಟ್ಟೆ. ಅದಕ್ಕೆ ಚಿಕ್ಕಮಗಳೂರು, ಮೂಡಗೆರೆ, ಬಾಳೆಹೊನ್ನೂರು, ಸಕಲೇಶಪುರದ ಸುತ್ತ ಇರುವ ಜಾನೆಖಾನ, ಕೊಂಬಳಿಖಾನ, ಖಾದರಗುಡ್ಡು, ಇನ್ಯಾವುದೋ ಕಾಫಿ ತೋಟಗಳಲ್ಲಿ ವರ್ಷವಿಡೀ ಕೆಲಸ. ಮಳೆಗಾಲಕ್ಕೆ ಕಾಫಿ ಗಿಡಗಳ ನಡುವೆ ಹುಲ್ಲು, ಕಾಫಿ ಮರಗಳ ರೆಕ್ಕೆ ಕತ್ತರಿಸುವುದು, ಉಳಿದ ದೊಡ್ಡ ಮರಗಳಿಗೆ ಹಬ್ಬಿರುವ ಕರಿಮೆಣಸಿನ ಬಳ್ಳಿ ಕಟ್ಟುವುದು ನೂರೆಂಟು ಕೆಲಸ. ಆದರೆ ಮಳೆಗಾಲದಲ್ಲಿ ಬೀಳುವ ಜಿಟಿ ಜಿಟಿ ಮಳೆಗೆ ಗಿಡಗಳಲ್ಲಿ ಇರುವ ಜಿಗಣಿ ಕಾಟಕ್ಕೆ ಮಂದಿ ಹೋಗುತ್ತಿರಲಿಲ್ಲ. ತೋಟದ ಮಾಲಿಕನ ಕೈಕೆಳಗೆ ಒಬ್ಬ ಮೇಸ್ತ್ರಿ ಇರುತ್ತಿದ್ದ. ಅವನ ಅನುಕೂಲಕ್ಕೆ ಮ್ಯಾನೇಜರ್, ರೈಟರ್‌ಗಳು ಇರುತ್ತಿದ್ದರು. ತೋಟದ ಬಂಗಲೆಯಿಂದ ಮೈಲು ಎರಡು ಮೈಲಿ ದೂರದಲ್ಲಿ ಸಾಲಿಗೆ ಹಂಚಿನ ಮನಿಗಳು ಆಳುಗಳಿಗೆ ಅಂತ ಕಟ್ಟಿಸಲಾಗುತ್ತಿತ್ತು. ಒಮ್ಮೆ ಗೇಟಿನ ಒಳಗೆ ಪ್ರವೇಶಿಸಿದರೆ ಮುಗಿತು ಯಾರು ಮಿಸಕಾಡುವ ಹಾಗಿಲ್ಲ ಮುಂಜಾನೆ ಏಳು ಗಂಟೆಗೆ ಹಾಜರಿ ನಂತರ ಸಾಲು ಹಿಡಿದು ಬೀಜ ಹರಿಯಲು ಸುರು ಹಚ್ಕೊಂಡ್ರೆ, ಸೊಂಟಕ್ಕೆ ಕಟ್ಟಿದ ಚೀಲ ಭಾರ ಆಗುವವರೆಗೆ ಬೀಜ ಹರಿಯಬೇಕು. ನಂತರ ಅದನ್ನು ಮತ್ತೊಂದು ಚೀಲಕ್ಕೆ ಸುರಿದು ಸಂಜೆ ನಾಕು ಗಂಟೆಯವರೆಗೆ ಹರಿಯುವುದೇ ಕೆಲಸ. ದೊಡ್ಡ ಮರಗಳಲ್ಲಿ ನುಸುಳಿ, ನುಗ್ಗಿ, ಸಂದಿಗೊಂದಿಯಲ್ಲಿ ತಿರುಗಾಡಿ ಬೀಜ ಹರಿದು ಚೀಲ ತುಂಬಿ, ಜೀಪು ಬಂದರೆ ಅದಕ್ಕೆ ಹಾಕಬೇಕು ನಂತರ ತೂಕ ಮಾಡಿಸಿ, ದಿನಗೂಲಿಯ ಅರವತ್ತು ಎಪ್ಪತ್ತು

ಕೆಜಿ ಮೇಲಿದ್ದರೆ ಕೈಕಾಸು. ಹೆಣ್ಣು, ಗಂಡು ಅನ್ನದೆ ಮಾಡಿರೊ ಸಾಲಕ್ಕೆ ಮೈಬಗ್ಗಿಸಿ ದುಡಿಯಲೇಬೇಕು. ಸಾಲದ ಬಾಬ್ತು ಬಿಟ್ಟು ಶನಿವಾರ ರಾತ್ರಿ ವಾರವಿಡಿ ಹರಿದ ಬೀಜದ ಲೆಕ್ಕಮಾಡಿ ಕೂಲಿಯ ಇಪ್ಪತ್ತು ಪ್ರತಿಶತ ಹಣವನ್ನು ಕೊಡಲಾಗುತ್ತಿತ್ತು. ಆ ಇಪ್ಪತ್ತು ಪರ್ಸೆಂಟ್ ಅಲ್ಲದೆ ಕೈಕಾಸು ಸಿಕ್ಕರೆ ಎಲ್ಲಾ ಸೇರಿ ನಾನೂರು ಐನೂರು ರೂಪಾಯಿ ಮಾಮೂಲಾಗಿ ಬರುತ್ತಿತ್ತು. ಅದರಲ್ಲಿ ಸಂತೆ ಖರ್ಚು, ವಾರಕ್ಕೆ ಬೇಕಾದ ದಿನಸಿ, ಭೂತಾಯಿ ಮೀನು, ಸರಾಯಿ ಮಜವೋ ಮಜ.

ಕುಡದು ಕುಡದು ಎಚ್ಚರವಿಲ್ಲದೆ ಮಲಗಿದವನ ಹೆಂಡತಿ, ಇಲ್ಲ ವಯಸ್ಸಿಗೆ ಬಂದ ಮಗಳಿದ್ದರೆ ಪಕ್ಕದವನ ಪಾಲು. ಕಾಫಿ ತೋಟ ಎಲ್ಲಾ ಅವ್ಯವಹಾರಗಳ ಗೂಡಾಗಿತ್ತು. ಒಂದೇ ಸಾಲಿಗೆ ಮಲಗಿ ರಾತ್ರಿ ಕಳೆಯುವಾಗ ಯಾರಿಗೆ ಯಾರಂತಲೆ ತಿಳಿಯುತ್ತಿರಲಿಲ್ಲ. ದೀಪಾವಳಿಯ ಕರಿ ಮುಗಿಸಿ ಸಂಜೆ ಮನೆಯಲ್ಲಿ ಮುದುಕರನ್ನ ಬಿಟ್ಟು ಮನೆಗೆ ಮನೆನೇ ಖಾಲಿಯಾಗಿ ಬಿಡುತ್ತಿತ್ತು. ಇಲ್ಲದಿದ್ದರೆ ಸಾಲ ಕೊಟ್ಟ ಮೇಸ್ತ್ರಿ ಹೆಂಡತಿ ಅಕ್ಕ ತಂಗಿಯರನ್ನ ಒಬ್ಬರನ್ನೂ ಬಿಡದೆ ಬಾಯಿಗೆ ಬಂದಂಗೆ ಬೊಯ್ಯುತ್ತಿದ್ದ. ಅದಕ್ಕೆ ಅರ್ಥ ಅಂಜಿ ಜನರು ಸಾಲತಗೊಂಡಿವಿ ಯಾಕ ಬೇಕು ಅಂತ, ಆರು ತಿಂಗಳಿಗೆ ಬೇಕಾಗುವಷ್ಟು ಜೋಳ, ರಾಗಿ, ರೊಟ್ಟಿ ಕಟ್ಕೊಂಡು ಮೇಸ್ತ್ರಿ ತಂದು ನಿಲ್ಲಿಸುವ ಲಾರಿಯನ್ನ ಹತ್ತುತಿದ್ದರು. ಆರು ತಿಂಗಳ ಕಾಲ ತಂದೆ ತಾಯಿ ಮಾರಿ ನೋಡದ್ದಕ್ಕೆ ಅತ್ತು ಕರದು ರಂಪ ಮಾಡುತ್ತಿದ್ದರು. ಇನ್ನೂ ಕೆಲವರಿಗೆ ನಾವು ವಾಪಾಸು ಬದುಕಿ ಬರ್ತಿವೊ ಇಲ್ಲ ಅನ್ನುವ ಅನುಮಾನ. ಹೀಗಾಗಿ ತಾಂಡದಲ್ಲಿರುವವರ ಕೊರಳು ಹಿಡಿದು ರೋಧಿಸುತ್ತಿದ್ದರು. "ನಡಿಯೆ ನಮ್ಮವ್ವ ನೀನೇನು ಶಾಶ್ವತವಾಗಿ ಹೊಂಟಿಲ್ಲ, ಏನೊ ನಾಕ ದಿನ ದುಡಿಯಾಕ ಹೊಂಟಿ" ಗಂಭೀರಿ ಅವಳ ಸೊಸೆ ಜಾನಕಿಗೆ ಬೊಯ್ದಳು. ಚೀಲಗಳು, ಬುತ್ತಿಗಂಟು, ಬಟ್ಟೆ ಎಲ್ಲವನ್ನು ಕಟ್ಟಿ ತಮ್ಮ ತಮ್ಮ ಗುರುತಿಗೆ ಜೋಡಿಸಿಕೊಂಡು, ಆ ಚೀಲಗಳಿಗೆ ಆತುಕೊಂಡು ಕೂಡುತ್ತಿದ್ದರು. ಸಂಜೆ ಬಿಟ್ಟ ಲಾರಿ ಮುಂದೆ ಊಟಕ್ಕೆ ನಿಲ್ಲಿಸಿದರೆ ನಂತರ ಸೀದಾ ದೂರಕ್ಕೆ ತಕ್ಕಂತೆ ಮುಂಜಾನೆನೂ ಇಲ್ಲ ನಡುರಾತ್ರಿ ತೋಟ ತಲುಪುತ್ತಿತ್ತು. ಅವತ್ತು ಕೆಲಸಕ್ಕೆ ಹೋಗದೆ, ತಮ್ಮ ತಮ್ಮ ಜಾಗ ಹಿಡಿದು ಸ್ವಚ್ಚ ಮಾಡಿ ಒಲೆಗೆ ಬೇಕಾದ ಕಟ್ಟಿಗೆ ನೀರು ವ್ಯವಸ್ಥೆ ಮಾಡಿಕೊಂಡು ಮರುದಿನ ಕೆಲಸಕ್ಕೆ ಹಾಜರಾದರೆ ಆರು ತಿಂಗಳ ಕಾಲ ಬಿಡುವೆ ಇರುತ್ತಿರಲಿಲ್ಲ. ಭಾನುವಾರ ಒಂದು ದಿನ ಸಂತೆ ಬಿಟ್ರೆ ಬಟ್ಟೆ ಒಗೆಯುವುದು, ಜೋಳ ಹಸನು ಮಾಡಿ ಗಿರಣಿ ಮಾಡಿಸುವುದು ಇವಕ್ಕೆ ಸಮಯ ಸಾಕಾಗುತ್ತಿರಲಿಲ್ಲ. ಹೆಂಗಸರಿಗಂತು ಯಮಯಾತನೆ, ಬೆಳಂಬೆಳಗೆ ಚಹ ಮಾಡು, ಏಳು ಗಂಟೆಯೊಳಗೆ ರೊಟ್ಟಿ ಮಾಡು, ಪಲ್ಯ ಮಾಡಬೇಕು, ಗಂಡಸರ ಜೊತೆಗೆ ಹೋಗಿ ಹಾಜರಿಗೂ ನಿಲ್ಲಬೇಕು. ತಡವಾಗಿ ಹೋದರೆ ಮುಲಾಜಿಲ್ಲೆ ಗೈರುಹಾಜರು ಹಾಕುವ ರೈಟರ್, ಮುಂಜಾನೆ ಐದು ಗಂಟೆಗೆ ಎದ್ದರೂ ಮುಗಿಯದ ಕೆಲಸ

ಕಾರ್ಯ ಒಮ್ಮೊಮ್ಮೆ ಹುಚ್ಚು ಹಿಡಿಯುವಂತೆ ಆಗುತ್ತಿತ್ತು. ಅದರಲ್ಲಿ ಗಂಡಸರ ಕಾಟ ಎಲ್ಲವನ್ನೂ ಸಹಿಸಿಕೊಂಡು ಬೀಜದ ಉಡಿ ಹೊತ್ತು ಏರು, ಇಳಿವಿನಲ್ಲಿ ಸಾಗಬೇಕು. ಯಾರಿಗೂ ಹೇಳುವಂತಿಲ್ಲ ಬಿಡುವಂತಿಲ್ಲ. ಶೋಷಣೆ, ದಬ್ಬಾಳಿಕೆ, ಸ್ವತಂತ್ರ್ಯವೇ ಇಲ್ಲದೆ ಗುಲಾಮರಂತೆ ಬದುಕಬೇಕು. ಕೈಗೆ ನಿಲುಕದ ಕೊಂಬೆಯನ್ನ ಮರಹತ್ತಿ ಬಗ್ಗಿಸಿ ಹರಿಯಬೇಕು, ಅದನ್ನ ಮರೆತರೆ ರೈಟರ್‌ನ ಕಿರಿಕಿರಿ. ಕಷ್ಟದ ಕೆಲಸ ಆದರೂ ಮಾಡಿರುವ ಸಾಲದ ಬಡ್ಡಿಗೆ ಕೆಲಸ ಮಾಡಲೇಬೇಕು. ಸಾಲ ಚುಕ್ತ ಮಾಡಬೇಕು, ಯಾವುದೊ ಹರ್ತಿಟಗೆ ಮೇಸ್ತ್ರಿ ಹತ್ತಿರ ಇಸ್ಕೊಂಡ ದುಡ್ಡಿಗೆ ಅವತ್ತಿನಿಂದಲೇ ಎಡರು ರೂಪಾಯಿ ಮೀಟರ್ ಬಡ್ಡಿ. ಮುಂದಿನ ತಿಂಗಳಿಂದ ಬಡ್ಡಿಗೆ ಬಡ್ಡಿ. ಅನಿವಾರ್ಯ ಅಡ ಇಡದೆ ಯಾರು ಸಾಲ ಕೊಡುತ್ತಿರಲಿಲ್ಲ. ನಂಬಿಕೆ, ವಿಶ್ವಾಸ ಬೇಕು ಅಂತಾರೆ ಸಾಲ ಕೊಡುವವರು, ಮೇಸ್ತ್ರಿಗೆ ಏನೂ ಬೇಕಾಗಿಲ್ಲ. ಎಷ್ಟು ಮಂದಿ ಹೊರಡ್ತಿರಿ ಅಷ್ಟು ಸಾಕು. ಕೇಳಿದಷ್ಟ ಕೊಡ್ತಾನೆ. ದೀಪಾವಳಿ ಮರುದಿನ ಹೊರಡದಿದ್ದರೆ ಹುಡುಕಾಡಿ ಯಾವ ಸ್ಥಿತಿಯಲ್ಲಿದ್ದಾನೊ ಅದೇ ಸ್ಥಿತಿಯಲ್ಲಿ ಲಾರಿ ಹತ್ತಿಸುತ್ತಾನೆ. ಅದು ಪುಗಸಟ್ಟೆ ಅಲ್ಲ, ಕಾಫಿ ತೋಟದ ಸಾಹುಕಾರನ ಕಡೆಗೆ ಪ್ರತಿಯೊಬ್ಬ ಕೂಲಿ ಆಳಿಗೂ ಲೆಕ್ಕಾಚಾರ ಮಾಡಿ ಒಬ್ಬ ಆಳು ಅವನ ಅವಲಂಬಿತರು ಎಲ್ಲಾ ಸೇರಿಸಿ ತಲೆ ಲೆಕ್ಕ ಕೊಟ್ಟು ಬಸ್ಸ್ ಛಾರ್ಜ್ ವಸೂಲಿ ಮಾಡಿಕೊಳ್ಳುತ್ತಿದ್ದ. ಪ್ರತಿ ಹಾಜರಿಗೆ ಕೂಲಿಯಲ್ಲಿ ಸಾಹುಕಾರ ಹತ್ತು ರೂಪಾಯಿ ಮುರ್ಕೊಂಡು ತೊಂಭತ್ತು ಕೊಡುತ್ತಿದ್ದ. ಕೊನೆಗೆ ಲೆಕ್ಕ ಮಾಡುವಾಗ ಲೆಕ್ಕ ಬರದವರಿಗೆ ನೂರು ಇನ್ನೂರು ರೂಪಾಯಿ ಮೋಸ ಮಾಡಿ ಬಿಡುತ್ತಿದ್ದ. ಬಸ್‌ಛಾರ್ಜ್, ಕಮಿಷನ್, ಬಡ್ಡಿ ಮೂರನ್ನು ಆಳುಗಳಿಂದ ವಸೂಲಿ ಮಾಡಿಕೊಳ್ಳುತ್ತಿದ್ದ ಮೇಸ್ತ್ರಿ. ತೋಟದ ಮಾಲೀಕನಿಗೆ ಕೆಲಸ ಆದರೆ ಆಯ್ತು, ಕಾಫಿಬೀಜ ಹರಿಸಿ ಮನೆಯೊಳಗೆ ಶೇಖರಣೆ ಆಯ್ತೊ ಕೋಟಿಗಟ್ಟಲೆ ದುಡ್ಡು ಬಂದಂತೆಯೇ ಹಾಗಾಗಿ ಕೂಲಿಗಳ ಬಗ್ಗೆ ಅವನೇಕೆ ಆಲೋಚನೆ ಮಾಡಿಯಾನು?

* * *

62. ಇವನ್ ಬಿಟ್, ಇವನ್ ಬಿಟ್ ಇವನ್ಯಾರು?

ತೋಟಕ್ಕೆ ಹೋಗುವವರು ಬಹುತೇಕ ಜಮೀನು ಇಲ್ಲದವರು, ದುಡ್ಡು ಇಸ್ಕೊಂಡವರು ಬದುಕಿನ ಅನಿವಾರ್ಯತೆ ಇರುವವರೆ. ಲೈನಿನಲ್ಲಿ ವಾಸ ಮಾಡುವಾಗ ಯಾರು? ಯಾರು ಅಂತ ಬೇರೆ ಬೇರೆ ಜಾಗವೆ ಇಲ್ಲ. ಸಾಲಿಗೆ ಅಲ್ಲೆ ಮೂಲೆಯಲ್ಲಿ ಸಾಮಾನು ದನಗಳು, ಕುರಿಗಳು ಬಿದ್ಕೊಂಡಂತೆ ಹೆಂಗಸರು ಗಂಡಸರು ಬಿದ್ಕೊಂಡಿರುತ್ತಿದ್ದರು. ಮುಂಜಾನೆಯಿಂದ ಸಂಜೆಯವರೆಗೆ ಅಂಡು ಹರಿಯೊ ಮಟ ಬೀಜ ಹರದು, ಹೊತ್ತು, ತೂಕ ಮಾಡಿಸಿ, ಲೆಕ್ಕಕಿಷ್ಟು, ಉಳಿದರೆ ಕೈ ಕಾಸಿಗೆ ಅಂತ ಬರೆಸಿ ಬರುವುದರಲ್ಲಿ ಕತ್ತಲು ಆವರಿಸಿರುತ್ತಿತ್ತು. ಅದರಲ್ಲೆ ಹೆಂಗಸರು ರೊಟ್ಟಿ ಸುಡಬೇಕು, ಗಂಡಂದಿರಿಗೆ ಒಣಮೀನು, ಚಟ್ನಿ, ಪಲ್ಯೆ ಏನು ಕೇಳ್ತಾರೊ ಮಾಡಿ ಉಣಿಸಬೇಕು. ಅವರಂತೆ ಹೊತ್ತಾರೆ ಇವರು ಕೆಲಸಕ್ಕೆ ಹೋದವರು, ಹಾಸಿಗೆ ಸಿಕ್ಕರೆ ಸಾಕಪ್ಪ ಶಿವನೆ ಅಂತ ಜೀವಕ್ಕೆ ಅನಿಸಿರುತ್ತದೆ. ಆದರೆ, ಒಂದೇ ಹಾಸಿಗೆ ಮೇಲೆ ಈ ಕಡೆಗೆ ಗಂಡ, ಆ ಕಡೆ ಹೆಣ್ಣು ಇದ್ದರೆ ತನ್ನ ಗಂಡ ಆ ಕಡೆಗೆ ತಿರುಗಿ ಅದೇನು ಮಾಡುತ್ತಾನೊ ಇವಳು ನಿದ್ದೆ ಹೋದಾಗ ಶಿವನೊಬ್ಬನೆ ಬಲ್ಲ. ಆ ಕಡೆಗೆ ಗಂಡಸು ಮಲಗಿದ್ದರೆ ಇವಳ ಗಂಡನಿಗೆ ನಿದ್ದೆ ಬಂದಾಗ ಅವನ ಕೈಗಳು ಇವಳ ಮೈತುಂಬ ಅಡ್ಡಾಡಿ, ನಿದ್ದೆ ಬರದಂತೆ ತೊಂದರೆ ಮಾಡುತ್ತಿದ್ದವು. ಗಾಢ ನಿದ್ರೆಯಲ್ಲಿ ಮಲಗಿರುವ ಗಂಡನನ್ನ ಎಬ್ಬಿಸುವಂತಿಲ್ಲ, ಯಮಯಾತನೆ ತಡ್ಕೊಳ್ಳೊ ಹಾಗೂ ಇಲ್ಲ, ಒಂದು ವೇಳೆ ಗಂಡನನ್ನ ಎಚ್ಚರಿಸಿಯಾ "ಎಯ್, ಸುಮ್ಮನೆ ಮಲಗೆ ಮಹರಾಯ್ತಿ ಮುಂಜಾನಿಂದ ಸಂಜಿಮಟ ದಗದ ಮಾಡಿ ಸಾಕಸಾಕ ಆಗ್ಯೆತೆ, ನಿಂದೇನು ಹಚ್ಚೆ" ಅಂದು ಅಂಡು ತಿರುಗಿಸಿಕೊಂಡು ಮಕ್ಕೊಂತಾನ, ಮರ್ಯಾದಿ ಪ್ರಶ್ನೆ, ಮನಸ್ಸು ಒಪ್ಪದಿದ್ದರೂ ಪರಪುರುಷನ ಸಂಘ ಮಾಡಲೇಬೇಕಾದ ಸನ್ನಿವೇಶ.

ಹುಲಿಯೂರನ ಖಾಸದೊಸ್ತ ಚೆನ್ನಿಂಗ ತಾಂಡದಾಗ ಅಂಗಡಿ ಇಟ್ಟಿದ್ದ. ಒಂದು ಅಳತಿಗೆ ಅಂಗಡಿ ಏನೊ ನಡಿತಾ ಇತ್ತು, ಅವನ ಹೆಂಡತಿ ಸುವಾಲಿನೂ ಹೊಲದ್ದು, ಮನಿದು ಅಂಗಡಿದು ಕೆಲಸ ಮಾಡಿ ಏನಾರು ಮಾಡೋದಂತ ಹುರುಪಿನಲ್ಲಿದ್ದಳು.

ಕೈಯೊಳಗೆ ನಾಕು ಕಾಸು ಕಂಡ ಚೆನ್ನಿಂಗನ ತಲಿಯೊಳಗೆ ಹೊಸದೊಂದು ಆಲೋಚನೆ ಬಂತು. ಇರೊ ಎರಡು ಎಕ್ಕರೆ ಹೊಲದಾಗ ಒಂದು ಬೋರ್ ಕೊರಸಿದರೆ? ಅವನ ಪಕ್ಕದಲ್ಲೇ ಇದ್ದ ಶಿವನಾಯ್ಕನಿಗೂ ಕೇಳದೆ, ತಾನೇ ನಿರ್ಣಯ ತಗೊಂಡು ಮನೆಯಲ್ಲಿ ಅವನ ಅಕ್ಕ ಚಾವಳಿಯನ್ನ ಬಿಟ್ಟು ಒಂದು ಆರು ತಿಂಗಳು ಕಾಫಿ ತೋಟಕ್ಕೆ ಹೋದರೆ ದುಡ್ಕೊಂಡು ಬರ್ತಿನಿ ಬಿಡು ಎನ್ನುವ ಭಂಡಧೈರ್ಯದ ಮೇಲೆ ಮೇಸ್ತ್ರಿ ಶಿವನಾಗನಾಯ್ಕನ ಹತ್ರ ಇಪ್ಪತ್ತೈದು ಸಾವಿರ ಸಾಲ ಎತ್ತಿದ. ಹೆಂಡತಿ ಸುವಾಲಿಗೆ ಯಾಕೊ ಗಾಬರಿಯಾಯಿತು. ಪಕ್ಕದಲ್ಲಿದ್ದ ಅವಳ ಅಕ್ಕ ರಾಮಿ ಹತ್ತಿರ ಹೋಗಿ ಎಲ್ಲಾನೂ ಹೇಳಿದಳು. “ಲೇ ರಾಮಿ ನನಗೆ ಯಾಕೊ ಗಾಬರಿ ಆಗಾಕ ಹತ್ಯೆತಿ ನೀನಾರು ಹೇಳೆ ಮಾಮನಿಗೆ” ಗೋಗರದಳು. “ನಿಮ್ಮ ಮನಿ ವಿಷಯ, ನಾ ಹೆಂಗ ಹೇಳಾಕ ಆದೀತು ನಾ ಏನಾರು ಅಂದೆ ಅಂತಿಟ್ಕೊ, ನೋಡಪ್ಪ ಬೋರ್ ಕೊರಸೋದು ಬೇಡ ಆಗಿದೆ ಇವರಿಗೆ. ನಾವು ದುಡಿಬಾರದು? ಮುಂದಕ್ಕೆ ಬರಬಾರದೆ? ಅಂತ ಕೇಳ್ತಾನ. ನಾ ಏನು ಜವಾಬ್ ಕೊಡಲಿ ಹೇಳು?” ತಂಗಿಗೆ ಸಮಾಧಾನ ಮಾಡಾಕ ನೋಡಿದಳು. “ಅಲ್ಲ ಕಣೆ, ಇಪ್ಪತ್ತೈದು ಸಾವಿರಕ್ಕೆ ಬಡ್ಡಿ ಎಷ್ಟು, ಬಾಚಿ ಎಷ್ಟು, ಒಂದೇ ಹತ್ರ ಸಾಲ ಮಾಡಿಲ್ಲ ದಲ್ಲಾಳಿ ಅಂಗಡಿಯೊಳಗೂ ಎತ್ತಿದ್ದಾನೆ. ನಾಳೆ ಏನಾರು ಆದರೆ ತೀರಿಸೋದು ಹೇಗೆ” ಸುವಾಲಿ ತನ್ನ ಸಂಕಟ ತೋಡಿಕೊಂಡಿದ್ದಳು. ಏನೆ ಆದರೂ ಚೆನ್ನಿಂಗನಾಯ್ಕ ಅಂಗಡಿ ಆತು ಈಗ ಬೋರಿಗೆ ಕೈಹಾಕಿದ್ದ. ದಾವಣಗೇರಿಗೆ ಹೋಗಿ ನಂದಿ ಬೋರ್‌ವೆಲ್ ಲಾರಿಯವನಿಗೆ ವಿಚಾರಿಸಿ ಬಂದಿದ್ದ. ನೆಲದೊಳಗೆ ನೀರು ನೋಡುವುದಕ್ಕೆ ಐದಾರು ಮಂದಿಯನ್ನ ಕರಿಸಿದ್ದ. ಯಾರೊ ಪೂಜಾರಿ ಕಡ್ಡಿಹಿಡಿದು “ಇಲ್ಲಿ ಸಿಕ್ಕಂಗ ನೀರೈತೆ ಇಲ್ಲೆ ಕೊರಸು” ಅಂದಿದ್ದ. ಮತ್ತೊಬ್ಬ ತೆಂಗಿನಕಾಯಿ ನಿಲ್ಲಿಸುವವನು ತೆಂಗಿನಕಾಯಿ ಸೀದಾ ನಿಲ್ಲಿಸಿ. “ಅಣ್ಣಿ ಸಿಕ್ಕಾಪಟ್ಟೆ ನೀರೈತೆ. ನಿನ್ನ ಅದೃಷ್ಟ ಬಹಳ ಚೆಲೊ ಐತೆ. ಇಲ್ಲೆ ಹಾಕ್ಸು” ಒಂದೊಂದು ಎರಡೆರಡು ಸಾವಿರ ಕಿತ್ಕೊಂಡ ಹೋದರು. ಸುವಾಲಿ ದಿನ ಮಂದಿ ಚಾ ಕುಡಿದ ಗ್ಲಾಸುಗಳನ್ನು ತೊಳದು, ಎಂಜಲು ಬಿಸಾಕಿದ್ದನ್ನು ಎತ್ತಿ ದುಡಿದ ದುಡ್ಡು ನೀರು ನೋಡುವವರಿಗೆ ಹೋಗಿತ್ತು. ನಂದಿ ಬೋರ್‌ವೆಲ್ ವೇಲು, “ನೋಡು ನಾಯಕಪ್ಪ ಏನು ಮಾಡ್ತಿಯೊ ಏನಿಲ್ಲೊ ಗೊತ್ತಿಲ್ಲ, ನೀನು ಎಷ್ಟು ಸಾವಿರ ಅಡಿನಾರು ಕೊರಸು ನಾವು ರಡಿ ಅದೀವಿ, ಆದ್ರ ಒಮ್ಮೆ ಕೊರೆಯೋದಕ್ಕೆ ಸುರುಮಾಡಿ ಮುಗಿಸಿ ಹೊರಗ ತಗದ್ವಿ ಲೆಕ್ಕ ಮಾಡಿ ಕೈಮೇಲೆ ಕೊಟ್ಟು ಬಿಡಬೇಕು”. ಮುಲಾಜಿಲ್ಲದೆ ಹೇಳಿದ್ದ. ಚೆನ್ನಿಂಗನಿಗೆ ದಿಗಲು ಸುರು ಆತು. “ಇಪ್ಪತ್ತು ಸಾವಿರ ತೋಟದ್ದು, ಒಂದ ಐದಾರು ಅಂಗಡಿಯಿಂದ ಎತ್ಕೊಬಹುದು, ಏನಾರು ಹೆಚ್ಚು ಕಮ್ಮಿಯಾದರೆ ಕಮ್ಮತಿ ಬಡ್ತಿಗೆ ಒಂದಿಷ್ಟು ಜಾಸ್ತಿ ದುಡ್ಡು ಬೇಕಲ್ಲ?” ಆಲೋಚಿಸಿ ಮಾರ್ಗ ಕಾಣದೆ ದುರಗಮ್ಮ ಟ್ರೇಡರ್ಸ್‌ನ ಕಪನಿಪತಿಯ ಹತ್ತಿರ ಹೋದ. “ಅಣ್ಣ, ಏನೊ ನಿಮ್ಮ ದಯೆ ಹೊಲಕ್ಕೆ ಬೋರು ಕೊರಸಬೇಕಿತ್ತು” ಸುಮ್ಮನಾದ.

"ಏನೊ ಬೋರು" ಕಪನಿಪತಿ ಮಹಾ ಹರಾಮಿ ಗೊತ್ತಿದ್ದು ಸುಮ್ಮನೆ ಪರೀಕ್ಷೆ ಮಾಡಿದ್ದ. "ಅದೇ ಕಣಣ್ಣ ನೀರಾವರಿ ಮಾಡೋಕೆ ಹೊಲದಾಗಿ ಬೋರ್‌ವೆಲ್ ಹಾಕಿಸ್ತಿದ್ದೀನಿ ಒಂದು ಇಪ್ಪತ್ತೈದು ಸಾವಿರ ಕೊಟ್ರೆ?" ಹಣಿಮಟ ಹಲ್ಲು ಗಿಂಜಿದ. "ಲೇ ನಾಯ್ಕ ಹಳೇದೆ ಖಾತೆಯೊಳಗೆ ಕೊಳಿಯಾಕ ಹತ್ಯೆತಿ, ಮತ್ತ ಕೊಡಂತ ಬಂದಿಯಲ್ಲ ಏನು ಹೇಳೋದು ನಿನಗ. ಅಲ್ಲ ಅಲ್ಪಸ್ವಲ್ಪ ತೀರಿಸಿದ್ದಿಯಾ, ಅದು ಇಲ್ಲ ಹೆಂಗಪ್ಪ ನಿನ್ನ ನಂಬಿ ಇಪ್ಪತ್ತು ಸಾವಿರ ಕೊಡೋದು" ತಣ್ಣೀರು ಎರೆಚಿದ. "ಎ ಹಂಗ ಮಾಡಬೇಡಣ್ಣ, ಎಲ್ಲಾ ಏರ್ಪಾಟು ಮಾಡಿಸಿ ನೀರು ಬಿದ್ರೆ ಎರಡ ಬೆಳಿ ಕಣಣ್ಣ, ಎರಡ ವರ್ಷ ನಿನ್ನ ಸಾಲ ತೀರಿಸಿಬಿಡ್ತಿನಿ, ನಮ್ಮಂತಹವರಿಗೆ ನೀವೇ ಕಣಣ್ಣ ದೇವರು. ಯಾರದಾರ ಹತ್ರ ಹೋಗಿ ಹೆಂಗೆ ಕೇಳಾಕ ಆದೀತು. ನಮ್ಮಪ್ಪನ ಕಾಲದಿಂದಲೂ ದುರ್ಗಮ್ಮ ಟ್ರೇಡರ್ಸ್ ಬಿಟ್ರೆ ಎಲ್ಲೂ ಹೋಗಿಲ್ಲ ಹೋಗೋದು ಇಲ್ಲ, ಇನ್ನೂ ಧರ್ಮಕರ್ಮ ನಿನ್ನ ಕೈಯಲ್ಲಿ" ಭಾವನಾತ್ಮಕವಾಗಿ ಹೊಡದ. ಅವನು ಎಷ್ಟೆ ವ್ಯವಹಾರಿಕ ಬುದ್ಧಿಯವನಾದರು ಈ ಮಾತು ಕೇಳಿದ ಮೇಲೆ ದುಡ್ಡು ಕೊಡದೆ ಇರಲ್ಲ ಅನ್ನೋದು ಚೆನ್ನಿಂಗನಾಯ್ಕನ ವಾದ. ಅದ್ಯಾವ ನನ ಮಗ ಇಟ್ಟಿದ್ನೊ ಹೆಸರು ಚೆನ್ನಿಂಗ ಅಂತ. ಒಳ್ಳೆ ಕತ್ತಿ ಇದ್ದಂಗಿದ್ದ. ಅಂತು ಚೆನ್ನಿಂಗನ ಮಾತುಗಳು ಕಪನಿಪತಿಯ ಮೇಲೆ ನಿಧಾನಕ್ಕೆ ಪ್ರಭಾವ ಬೀರತೊಡಗಿದ್ದವು. ಅವನೇನು ಸುಮ್ಮನೆ ಕುಂತ ಏನ ಇಡಿ ಕರ್ನಾಟಕದಲ್ಲೇ ದೊಡ್ಡ ಬೆಳೆ ಮಾರುಕಟ್ಟೆಯಲ್ಲಿ ಅಡ್ತಿ ಅಂಗಡಿ ತಕ್ಕೊಂಡು? ಚೆನ್ನಿಂಗನಂತ ಸಾವಿರಾರು ಮಂದಿ ಯಾಮಾರ್ಸಾಕ ಬಂದರೂ ನಿಧಾನಕ್ಕೆ ಜಾರಿಕೊಂಡು ಬಂದವನಿಗೆ ಮೂರು ನಾಮ ಹಾಕಿ ಕಳುಹಿಸುವ ಪೈಕಿ. ಅವತ್ತು ಅದೇನು ಅನಿಸಿತೊ ಏನೋ ಗಲ್ಲಾಪೆಟ್ಟಿಗೆಯಿಂದ ರೊಕ್ಕ ಎಣಿಸಿ ಇಪ್ಪತ್ತು ಸಾವಿರ ಕೊಟ್ಟಿದ್ದ. "ಧಣಿ ನಿಮ್ಮ ಋಣ ಈ ಜನ್ಮ ಅಲ್ಲ ಮುಂದಿನ ಜನ್ಮದಾಗಾದ್ರು ತೀರಿಸ್ತಿನಿ ನೀವೇನು ಕಾಳಜಿ ಮಾಡಬ್ಯಾಡ್ರಿ. ಎಯ್, ಭೂಮಿತಾಯಿ ಕೊಟ್ರೇನು, ನಿಮ್ಮ ಸಾಲ ಒಂದೇ ಬೆಳಿ?".

ಕಪನಿಪತಿಗೆ ಆಸಕ್ತಿ ಇಲ್ಲ ಅಂತ ತಿಳಿದವನೆ ಮೆಲ್ಲಗೆ ಟವೇಲಿನಿಂದ ಮುಖ ಒರೆಸುತ್ತ ಅಲ್ಲಿಂದ ಹೊರಗ ಬಂದಿದ್ದ. ಅವನು ಅಂದುಕೊಂಡಂತೆ ದುಡ್ಡಿನ ವ್ಯವಸ್ಥೆಯಾಗಿತ್ತು. ಬೋರಿನ ಲಾರಿ ಹೊಲದೊಳಗೆ ಬರುವುದು ಒಂದೇ ಬಾಕಿ ಇತ್ತು. "ದಾವಣಗೇರಿಗೆ ಬಂದೀನಿ ಬಂದೀನಿ ನಂದಿ ಬೋರ್‌ವೆಲ್ ಆಫೀಸಿಗೆ ಆಟು ಹೋಗಿ ಮನಿಗ ಬಂದ್ರಾತು" ಅಂದವನೆ ಶಾಂತಿ ಟಾಕೀಜಿನ ಮುಂದೆ ಬಿ.ಟಿ. ಯವರ ಪೆಟ್ರೋಲ್ ಬಂಕ್ ಪಕ್ಕ ಡಬಗಳ್ಳಿ ಕಾಂಪೋಡಿನಲ್ಲಿದ್ದ ಸಾಲು ಬೋರ್‌ವೆಲ್ ಆಫೀಸುಗಳಲ್ಲಿ ನಂದಿಯನ್ನ ಹುಡುಕುತ್ತ ಹೊರಟ. ಒಳಗಡೆ ಯಾರೊ ಒಬ್ಬ ಹುಡುಗ ಕುಂತಿದ್ದ. "ತಮ್ಮ ಇದು ನಂದಿ ಬೋರ್‌ವೆಲ್ ಏನಪ್ಪ" ಅಂದ ಅವನು "ಹೂಂ" ಅನ್ನೋದಕ್ಕೂ ಮೊದಲು ಒಳಗೆ ಹೋಗಿದ್ದ. "ಹೌದು

ನಂದಿನೆ, ಏನಾಗಬೇಕಿತ್ತು ಹೇಳಿ, ಸಾಹುಕಾರ್ರು ಉಣ್ಣಾಕ ಹೋಗಿದ್ದಾರೆ. ಅವರನ್ನ ಬೆಟ್ಟಿಯಾಗಬೇಕಂದ್ರೆ ಮೂರುವರೆಗೆ ಬನ್ನಿ ಸಿಗ್ತಾರ" ಅಂದ. "ಆಯ್ತು ಬಿಡು ಮೂರುವರೆಗೆ ಹೊಳ್ಳಿ ಬರ್ತಿನಿ" ಅಂದವನೆ ಪಂಜೆಯೊಳಗೆ ಹಾಕಿದ್ದ ಪಟಾಪಟಿ ಚೆಣ್ಣದ ಬಕ್ಕಣದಲ್ಲಿ ಭದ್ರವಾಗಿ ಹಾಕಿಕೊಂಡಿದ್ದ ದುಡ್ಡು ಭದ್ರವಾಗಿದೆಯೇ ಒಂದು ಸಲ ಮುಟ್ಟಿ ದೃಢಪಡಿಸಿಕೊಂಡ.

ಶುಕ್ರವಾರ ಮುಂಜಾನೆ ಎಂಟು ಗಂಟೆಗಾಗಲೆ ಬೋರ್‌ವೆಲ್ ಆರಂಭವಾಗಿತ್ತು. ಧಡ್ ಧಡ್ ಸದ್ದು ಕಲ್ಲು ಪುಡಿಪುಡಿಯಾಗಿ ಮಣ್ಣಾಗಿ ಮೇಲೆ ಹಾರಿತ್ತು. "ಅಲ್ಲ ಪೂಜಾರಿ ಹೇಳಿದ ಪಾಯಿಂಟ್ ಇದೇನ ಇಲ್ಲ, ಇನ್ನೊಬ್ಬ ಕಟ್ಟಿಗೆಯಿಂದ ನೋಡಿದ್ದ?" ಚೆನ್ನಿಂಗನಿಗೆ ಸ್ಪಷ್ಟವಾಗಲಿಲ್ಲಾ. ಮನಸ್ಸು ಗೊಂದಲದ ಗೂಡಾಯಿತು. ಇಷ್ಟೊಂದು ದುಡ್ಡು ನೀರು ಬೀಳದಿದ್ದರೆ? ಗಾಬರಿ, ಆತಂಕ, ತಳಮಳ ಬೋರಿನ ಲಾರಿಯವನ ಜೊತೆಗೆ ಮಾತ್ರ ಬಹಳ ಖುಷಿ ಪಟ್ಟವನಂತೆ ನಟನೆ ಮಾಡಿದ್ದ. ಮಧ್ಯಾಹ್ನ ಒಂದು ಗಂಟೆಯಾದರೂ ಕಲ್ಲಿನ ಹುಡಿ ಹಾರುವುದು ನಿಲ್ಲಲೇ ಇಲ್ಲ. ಇನ್ನೂ ಒಳಗೆ ಹೋಗಲಿ ಅಂತ ಸನ್ನೆ ಮಾಡಿದ್ದ. ಸುವಾಲಿಗೆ ಇಲ್ಲಿ ನೀರಿಲ್ಲ ಅನ್ನೋದು ಖಾತ್ರಿಯಾಯ್ತು. "ಮಾವ ಬುದ್ಧಿ ನೆಟ್ಟಗೈತಿಲ್ಲ ಇಲ್ಲಿ ನೀರಿಲ್ಲ ಬೋರು ನಿಲ್ಲಿಸು, ಯಾಕ ಸುಮ್ಮನೆ ದುಡ್ಡು ವೇಸ್ಟ್ ಮಾಡ್ತಿ" ಅಂದಾಕಿನ "ಎಯ್ ನಿಲ್ಸಿಬಿಡು ಇಲ್ಲಿ ನೀರಿಲ್ಲ" ಅಂದಳು. ಮತ್ತೊಂದು ಲೆಂತ್‌ನ ಪೈಪು ಜೋಡಿಸುತ್ತಿದ್ದ ಹುಡುಗ ಅನುಮಾನದಿಂದ ನೋಡಿದ. ಅವನಿಗೂ ನೀರು ಬೀಳಲ್ಲ ಅನ್ನೋದು ಖಾತ್ರಿಯಾಗಿತ್ತು. ಇನ್ನೊಂದು ಲೆಂತ್ ಹೋದರೆ ಬರೋಬರಿ ನಾಲ್ಕುನೂರು ಅಡಿಯಾಗುತ್ತೆ. ನಾಲ್ಕು ನೂರು ಅಡಿಗೆ ಇವನಿಗೆ ಬೋನಸ್ ಪಾಯಿಂಟ್ ಸಿಗುತ್ತೆ. "ಅಕ್ಕ, ಇದೊಂದು ಲೆಂತ್ ಕೊರೆಯೋಣ, ಹೆಂಗೈತೊ ನಿಮ್ಮ ಅದೃಷ್ಟ, ನೀರು ಬಿದ್ರೆ?" ಅವಳ ಮಾನಸಿಕ ಗೊಂದಲದಲ್ಲಿ ಹುಳಿ ಹಿಂಡಿದ. ಅವರು ಮತೆ ಗೊಂದಲದಲ್ಲಿ ಬೀಳುವಷ್ಟರಲ್ಲಿ ಒಂದು ಲೆಂತ್ ನೆಲ ಕೊರೆದಿದ್ದ. ಸುಶ್ಕ ಹವೆ ಹೊರಗೆ ಬಂತೆ ವಿನಃ ನೀರಿನ ಜಲ ಉಕ್ಕಲೇಇಲ್ಲ. "ಅಣ್ಣ ಪೇಮೆಂಟು" ಅಂದಾಗಲೆ, ಚೆನ್ನಿಂಗ ವಾಸ್ತವಕ್ಕೆ ಬಂದಿದ್ದ. ಮೇಸ್ತ್ರಿ ದುಡ್ಡು, ದಲ್ಲಾಳಿ ಅಂಗಡಿಯಿಂದ ದುಡ್ಡಿನ ಹೊಸ ಕಡಕ್ ನೋಟುಗಳನ್ನು ನೋಡಿ ನೋವುಪಟ್ಟಿದ್ದ. ನಲವತ್ತು ಸಾವರಿದ ಪೆಂಡಿ ಅವನ ಕೈಗೆ ಕೊಟ್ಟು ಮನೆಗೆ ವಾಪಾಸಾಗಿದ್ದ.

ಚೆನ್ನಿಂಗ, ಸುವಾಲಿ ಇಬ್ಬರು ದೊಡ್ಡ ಹುಡುಗಿಯರನ್ನು ಕಟ್ಕೊಂಡು ಲಾರಿಹತ್ತಿದ್ದ. ಜಾನೆ ಖಾನ ತಲುಪಿದಾಗ ಮುಂಜಾನೆ ಎಂಟು ಗಂಟೆಯಾಗಿತ್ತು. ಅವರಿಗಿಂತ ಮೊದಲೇ ಬಂದಿದ್ದ ಬೇರೆ ಬೇರೆ ತಾಂಡದ ಮಂದಿನೂ ಇತ್ತು. ಲಾರಿ ಇಳಿದವರೆ ಮಂದಿ ಲೈನಿನಲ್ಲಿ ಜಾಗ ಹಿಡಿಯಲು ನಾಮುಂದೆ ನೀ ಮುಂದೆ ಅಂತ ಅರಬಾಡಿಸತೊಡಗಿದರು. ಚೆನ್ನಿಂಗ ಆರಾಮದಿಂದ ಇಳಿದು ಮಂದಿ ಖಾಲಿ

ಮಾಡಿದ ಮೇಲೆ ಲಗೇಜು ತಗೊಂಡು ಹೊರಟ. ಇಡೀ ಲೈನು ತುಂಬ ಟ್ರಂಕು, ಮೂಟೆ, ಪೆಟಾರಿಗಳು ರಾರಾಜಿಸುತ್ತಿದ್ದವು. ಇವನ ಪ್ಲಾಸ್ಟೀಕ್ ಚೀಲದ ಗಂಟುಗಳು, ಬಟ್ಟೆ ತುಂಬಿದ ಚೀಲ ಇಡಲು ಹೆಣಗಾಡ ತೊಡಗಿದ.

ಯಾರೊ ಪುಣ್ಯಾತ್ಮ, "ಯಾವೂರಣ್ಣ" ಕೇಳಿದ. ಚೆನ್ನಿಂಗ ಅವನಿಗೆ ತನ್ನ ಊರ ಹೆಸರು ಹೇಳಿದ "ಭದ್ರಾನಾಯ್ಕನ ತಾಂಡ ಕಣಪ್ಪ" ಅಂತ. "ಅಯ್ಯೊ ಪಾಪ ನಿಮ್ಮ ಮಂದಿ ಅರಬಾಡಿಸಿ ಜಾಗ ಹಿಡದಾಗ ನೀನು ಸುಮ್ಮನೆ ನಿಂತಿದ್ದನ್ನ ನೋಡಿದೆ. ನನ್ನ ಹೆಸರು ನರಸನಾಯ್ಕ ಅಂತ. ತುಂಬಿನತೂರು ತಾಂಡದಿಂದ ಬಂದೀವಿ. ಇಗೋ, ನನ್ನ ಟ್ರಂಕ್‌ಪಕ್ಕ ಜಾಗ ಮಾಡ್ತಿನಿ. ನಿಮ್ಮ ಸಾಮಾನು ಇಲ್ಲೇ ಮಡಗರಿ" ಅಂದವನೆ ತನ್ನ ಸಾಮಾನುಗಳನ್ನು ಸರಿಸಿ ಜಾಗ ಮಾಡಿದ. "ಪುಣ್ಯ ಬರಲಪ್ಪ, ನಮ್ಮ ತಾಂಡದವರು ನೋಡು ಬೇವರ್ಸಿಗಳು ತಮ್ಮ ತಮ್ಮದಷ್ಟೆ ನೋಡಿಕೊಂಡರು ಪರಸ್ಥಳ ಪರಸಂಕಟ, ನಮ್ಮ ಸಂಕಟ ಅರ್ಥ ಮಾಡಿಕೊಂಡು ಜಾಗ ಮಾಡಿಕೊಟ್ಟೆ, ದೇವರು ಒಳ್ಳೆದ ಮಾಡಲಿ". ಚೆನ್ನಿಂಗ ಕೃತಜ್ಞತೆ ಸಲ್ಲಿಸಿದ. "ಅಯ್ಯೊ ಅಣ್ಣ, ಅಂದಂಗ ನಿನ್ನ ಹೆಸರೆ ಹೇಳಲಿಲ್ಲಾ?" ಅವನ ಕಡೆ ನೋಡಿದ "ಚೆನ್ನಿಂಗ ನಾಯ್ಕ ಅಂತೇಳಿ. ನಮ್ಮದು ಚವ್ಹಾಣ್ ಪಂಗಡ, ಇಕಿ ನನ್ನ ಹೆಣ್ತಿ ಸುವಾಲಿ, ಇವು ನನ್ನ ಎರಡು ಹೆಣ್ಣು ಹುಡುಗಿಯರು" ಸಣ್ಣ ಪರಿಚಯನೆ ಮಾಡಿಕೊಟ್ಟ. "ಹೌದಾ, ಅಯ್ಯೊ ನಾನು ಚವ್ಹಾಣ್ ಪಂಗಡಾನೆ ಕಣೊಯಣ್ಣ" ಅಂದವನೆ ಬಂದು ತೆಕ ಮಾರಿಬಿದ್ದ. ಕಟ್ಟೆಗೆ ತರೋದಕ್ಕೆ ಹೋಗಿದ್ದ ನರಸನಾಯ್ಕನ ಹೆಂಡತಿ ಚೌಲಿಬಾಯಿ ಬಂದು ಅಪರಿಚತರು ತಮ್ಮ ಪಕ್ಕಕ್ಕೆ ಬಂದಿರುವುದನ್ನು ಗಮನಿಸಿದಳು. ನರಸನಾಯ್ಕ ಪೀಚು, ನರಪೇತಲನಂತಹವನು. ಎದುರಿಗೆ ನಿಂತಿದ್ದ ಪಗಡುದಸ್ತಾದ ಗಂಡಸು ಚೆನ್ನಿಂಗನ್ನ ಒಮ್ಮೆ ಕಣ್ಣಿನಲ್ಲೆ ಸ್ಕ್ಯಾನ್ ಮಾಡಿಕೊಂಡಳು ಚೌಲಿ. ಚೆನ್ನಿಂಗನ ಕಡಿಗೆ ನೋಡುತ್ತಲೆ ಅವನ ಹೆಂಡತಿ ಸುವಾಲಿಗೆ "ಯಾವೂರೊ?" ಕೇಳಿದಳು. "ಭದ್ರಾನಾಯ್ಕನ ತಾಂಡ" ಅವನೇ ಹೇಳಿದ. ಅಲ್ಲೆ ಅವಳಿಗೆ ಅವನ ಮೇಲೆ ಮನಸಾಗಿತ್ತು. ಒಮ್ಮೆ ಅವನ ಉದ್ದ, ಅಗಲ, ಆಳವನೆಲ್ಲಾ ಅಳೆದು ತೂಗಿದಳು. ಪಕ್ಕದಲ್ಲೇ ಇರ್ತಾರಲ್ಲ ಒಂದು ಕೈ ನೋಡೆ ಬಿಡಾನ ಅನ್ನೊ ವಿಚಾರದಲ್ಲಿದ್ದಳು ಚೌಲಿ. ನರಸನಾಯ್ಕ ಚೌಲಿದು ಮದುವೆಯಾಗಿ ಎಂಟತ್ತು ವರ್ಷಗಳೇ ಆಗಿದ್ದವು. ಅವಳು ಒಳ್ಳೆ ಮೈಕಟ್ಟು ಹೊಂದಿದ್ದಳು. ಎರಡು ಮಂದಿ ಕೆಲಸವನ್ನ ಒಬ್ಬಳೆ ಮಾಡುವಂತಹ ತಾಕತ್ತು, ನರಸ ಹುಟ್ಟುತ್ತಲೇ ನರಪೇತಲ. ಗಂಡಸು ಹೇಗಿದ್ದರು ನಡಿಯುತ್ತೆ ಅನ್ನೊ ತಾತ್ವಿಕತೆಯ ಸಮಾಜದಲ್ಲಿ ಬದುಕಿರುವುದರಿಂದ ಅವನು ಪೀಡಕನೊ, ತಾಕತ್ತುಳ್ಳವನೊ, ಹೆಣ್ಣಿಗ್ಯನೋ, ಕಂಡವರ್‍ಯಾರು? ಚೂರುಪಾರು ಆಸ್ತಿ ಆಸೆಗೆ ಬಿದ್ದ ಚೌಲಿ ಅಪ್ಪ ಜಾಂಬುವಂತ ನಾಯ್ಕ ಮಗಳನ್ನು ಕೊಟ್ಟು ಮದುವೆ ಮಾಡಿದ. ಚೌಲಿಗೆ ಮನಸ್ಸಿರಲಿಲ್ಲ, ಅವಳ ಎದುರಿಗೆ ಅವನು ಸೊಳ್ಳೆ ಕಂಡಂಗೆ. ಆದರೂ

ಅವನ ಜಮೀನಿಗೆ ಗಂಟುಬಿದ್ದು ಅವಳಪ್ಪ ಮಾಡಿದ ತಪ್ಪಿಗೆ ಒಪ್ಪಿಕೊಳ್ಳಲೇಬೇಕಾದ ಅನಿವಾರ್ಯತೆ ಒಪ್ಪಿ ಮದುವೆಯಾದಳು. ಯೌವ್ವನದ ಹಸಿ ಹಸಿ ಕನಸುಗಳು ಕಮರಲೇ ಇಲ್ಲ. ಹೇಗೊ ಎರಡು ಮಕ್ಕಳಾದವು. ಅವನ್ನೆ ಸಾಕಿಕೊಂಡು ನಡೆದಿದ್ದಳು ಚೌಲಿ. ಆದರೆ ಅವಳ ಮನದ ಕನ್ನಡಿ ಮಾತ್ರ ನೂರು ಸುಂದರ ಗಂಡಸರ ಮುಖಗಳನ್ನು ಕಾಣಲು ಆತುರಗೊಂಡಿತ್ತು. ಚೆನ್ನಿಂಗ ಚಹ್ವಾಣ್ ಅಂತ ಗೊತ್ತಾದದ್ದೆ ಒಳಗೊಳಗೆ ಖುಷಿಪಟ್ಟಳು. ಅದು ಅಲ್ಲದೆ ಚೆನ್ನಿಂಗನ ಹೆಂಡತಿ ಸುವಾಲಿನೂ ಅಷ್ಟಕಷ್ಟೆ. ಅವನ ವ್ಯಕ್ತಿತ್ವಕ್ಕೆ ಸಮನಾಗಿರಲಿಲ್ಲಾ. ಆದರೂ ಅನಿವಾರ್ಯ, ಅವಳು ಹೊಂದಾಣಿಕೆ ಮಾಡಿಕೊಂಡಿಲ್ಲವೆ ಹಾಗೆ. ಬದುಕಿನ ಅನಿವಾರ್ಯತೆಗಳು ಪ್ರತಿಯೊಬ್ಬ ಮನುಷ್ಯನ ಚಲನವಲನಗಳನ್ನು ಕಟ್ಟಿಹಾಕಿ ಬಿಡುತ್ತವೆ. ನಮ್ಮ ಮದುವೆಯ ಸಂದರ್ಭದಲ್ಲೂ ಆದದ್ದು ಹಾಗೆನೆ ಅಂತ ಚೌಲಿ ಅಂದುಕೊಂಡಳು.

ಮಾತುಗಳನ್ನು ಕಟ್ಟಿಹಾಕಬಹುದು, ಆದರೆ ಮನಸ್ಸಿನ ವೇಗವನ್ನು, ಕನಸಿನ ಲೋಕವನ್ನು ಮಾತ್ರ ಕಟ್ಟಿಹಾಕಲು ಆಗದೆ ಚಲನಶೀಲವಾಗಿದ್ದ ಬದುಕನ್ನ ಚಲನಗೊಳ್ಳದಂತೆ ಮಾಡುವ ಪ್ರಯತ್ನ ಒಬ್ಬೊಬ್ಬರಿಗೆ ಒಂದೊಂದು ಬಗೆಯ ಅನಿವಾರ್ಯತೆಗಳು. ಅವಳು ಬಹಳ ಹೊತ್ತು ಆಲೋಚನೆ ಮಾಡಿದ್ದಳು.

ಆರಕ್ಕೆ ಕತ್ತಲು ಆವರಿಸಿತ್ತು. ಮೈಕೊರೆವ ಛಳಿ, ಒಲೆಯೊಳಗಿನ ಬೆಂಕಿನೆ ಅವಳ ಮನಸ್ಸಿನೊಳಗೆ ಉರಿದಂತೆ ಭಾಸವಾಗಿತ್ತು ಚೌಲಿಗೆ. ಅವನ ಪ್ರತಿಯೊಂದು ನಡೆಗಳನ್ನು ಅಭ್ಯಾಸ ಮಾಡತೊಡಗಿದಳು. ಅವಳು ಅಡುಗೆ ಮಾಡಿ ಬಾಂಗಡಿ ಮೀನು ಸುಟ್ಟು, ಇವರಿಗೂ ಊಟಕ್ಕೆ ಕರೆದಳು. ಇವರು ತಾಂಡದಿಂದ ತಂದಿದ ರೊಟ್ಟಿ ಚಟ್ನಿ ಬಿಚ್ಚಿದರು. ಎಲ್ಲಾ ಕೂಡೆ ಊಟ ಮುಗಿಸಿ ಹಾಸಿಗೆ ತಯಾರಿ ಮಾಡಿದರು. ಚೆನ್ನಿಂಗನಿಗೂ ಅವಳನ್ನ ನೋಡಿದ ಮೇಲೆ ನಾನಾ ನಮೂನಿಯ ಕನಸುಗಳು ಚಿಗುರಿದ್ದವು. ಅವಳ ಮನಸ್ಸಿನೊಳಗಿನ ತಳಮಳವನ್ನು ಅರ್ಥ ಮಾಡಿಕೊಂಡಿದ್ದ. ಹೆಂಡತಿ ಪಕ್ಕದಲ್ಲಿದ್ದರಿಂದ ಹೆಚ್ಚು ಹಾರಾಡಲು ಹೋಗಲಿಲ್ಲ, ಮಕ್ಕಳನ್ನು ಅವರ ಮತ್ತು ಇವರ ನಡುವೆ ಹಾಕಿಕೊಂಡು ಒಂದೇ ಮಗಲಲ್ಲಿ ಮಲಗಬೇಕು. ಚಾದಾರ್‌ಗಳನ್ನು ಒಂದರ ಮೇಲೆ ಒಂದು ಸೇರಿಸಿಕೊಂಡೆ ಮಲಗಬೇಕು, ಸುವಾಲಿ ಚಾಲು ಇದಿದ್ದರಿಂದ ಅವಳ ಆಶೆ ಈಡೆರಲು ಸಮಯ ಹಿಡಿದಿತ್ತು. ಈಗಲ್ಲದಿದ್ದರೂ ಸಾಲಿನಲ್ಲಿ ಸಿಗ್ತಾನೆ ಎನ್ನುವ ಬಯಕೆ, ಈ ಕಡೆ ಅವನಿಗೂ ಅದೇ ಆಲೋಚನೆ, ಮಂದಿಗೆ ನಿದ್ದೆ ಬಂದು ಗೊರಕೆ ಆರಂಭವಾಗಿದ್ದವು. ಚೌಲಿ ಮತ್ತು ಚೆನ್ನಿಂಗನ ಆಲೋಚನೆಗಳು ಕತ್ತಲಲ್ಲಿ ಒಂದಾಗಲು ಹುಡುಕಾಟ ನಡೆಸಿದ್ದವು. ಅವಳು ಆ ಕಡೆ ಮಗ್ಗಲು ಹೊರಳಿಸಿದರೆ ಇವನು ಈ ಕಡೆಗೆ, ಯಾಕೊ ನಿದ್ದೆ ಸುಳಿಯದಾಗಿತ್ತು. ಎದ್ದವಳೆ ಕಾಲ್ಮಡಿಯಾಕಂತ ಹೊರಬಿದ್ದಳು ಅದಕ್ಕಾಗಿಯೇ ಕಾದಿರುವವನಂತೆ ಇವನು ಚಾದರಿಂದ ಹೊರಬಂದು ಅವಳನ್ನು ಅನುಸರಿಸಿದ.

ಇಬ್ಬರು ಬಂದು ಮಲಗಿದಾಗ ಮನಸ್ಸು ಪ್ರಶಾಂತವಾದ ಕೊಳದಂತಾಗಿತ್ತು. ಚೆನ್ನಿಂಗನ ರೀತಿನೆ ಬದಲಾಗಿತ್ತು. ಕೆಲಸ ಮಾಡುವುದರಲ್ಲಿ ಹೆಚ್ಚು ಹುರುಪು-ಹುಮ್ಮಸ್ಸು, ಅವರ ಕುಟುಂಬ ಇವರ ಕುಟುಂಬ ಕೂಡಿಸಿ ಸಂತೆ ಮಾಡುವುದು, ಕುಡಿಯುವುದು, ವಾರದ ಕೊನೆಗೆ ಮಾಂಸವನ್ನು ಒಂದೆ ಪಾತ್ರೆಯಲ್ಲಿ ಬೇಯಿಸುವುದು ಮಾಡತೊಡಗಿದ್ದರು. ಅನ್ಯೋನ್ಯತೆಯ ಕಾರಣ ಸುವಾಲಿಗಾಗಲಿ ನರಸನಾಯ್ಕನಿಗೆ ಅರಿವಾಗಲೇ ಇಲ್ಲ, ಚೌಲಿನೆ ಮಾಂಸದಡುಗೆ ಮಾಡಿದಾಗ ನರಸನಿಗೆ ಒಂದೆರಡು ತುಂಡು ಹಾಕಿದರೆ ಚೆನ್ನಿಂಗನಿಗೆ ಸೌಟಿನ ತುಂಬ ಸುರಿಯುತ್ತಿದ್ದಳು. ಆವಾಗಲೂ ಸುವಾಲಿ ತುಟಿ ಬಿಚ್ಚಲಿಲ್ಲಾ, ಸಮಯಕ್ಕಾಗಿ ಕಾಯುತ್ತಿದ್ದಳು, ಅವಳು ಒಪ್ಪಿಕೊಂಡಿದ್ದಳು ಚೌಲಿ ಅವಳಿಗಿಂತ ಆರೋಗ್ಯವಾಗಿದ್ದಾಳೆ, ಸುಂದರವಾಗಿದ್ದಾಳೆ, ಗುಣವಂತೆಯಾಗಿದ್ದಾಳೆ. ಆದರೆ ತನ್ನ ಗಂಡನನ್ನ ಅವಳ ಹಿಂದೆ ತಿರುಗುವಂತೆ ಮಾಡಿರುವುದನ್ನು ಹೇಗೆ ತಾನೆ ಸಹಿಸಿಕೊಂಡಾಳು. ಈಗ ವಿಷಯವನ್ನು ಯಾರಿಗೂ ಹೇಳುವಂತಿಲ್ಲ, ಬಿಡುವಂತಿಲ್ಲ, ಒಳಗೊಳಗೆ ನೊಂದುಕೊಂಡಿದ್ದಳು, ಅಳುತ್ತಿದ್ದಳು ಎಲ್ಲಿ ತನ್ನ ಗಂಡನನ್ನ ತಗೊಂಡು ಓಡಿಹೋಗಿ ಬಿಡುತ್ತಾಳೊ ಎನ್ನುವ ಆತಂಕ ಮೂಡಿತ್ತು. ಪ್ರತಿರಾತ್ರಿ ಅದೇ ಆಲೊಚನೆ ಮಾಡುತ್ತಲೇ ಯಾವಾಗ ನಿದ್ದೆಗೆ ಜಾರಿ ಬಿಡುತ್ತಿದ್ದಳೋ ಗೊತ್ತಾಗುತ್ತಿರಲಿಲ್ಲಾ. ಈ ಎಲ್ಲ ಪ್ರಕ್ರಿಯೆ ಘಟಿಸುವುದರಲ್ಲೇ ಜಾನೆ ಖಾನದಿಂದ ಕೆಲವರು ಹೋಗಿಯಾಗಿತ್ತು. ಉಳಿದ ಕೆಲವೇ ಕೆಲವು ಕುಟುಂಬಗಳಲ್ಲಿ ನರಸನಾಯ್ಕ, ಅವನ ಹೆಂಡತಿ, ಮಕ್ಕಳು, ಚೆನ್ನಿಂಗನ ಕುಟುಂಬ ಇಡಿ ಲೈನ್‌ನಲ್ಲಿ ಉಳಿದುಕೊಂಡರು. ಮೇಸ್ತ್ರಿ ಶಿವನಾಗನಾಯ್ಕ ಬಂದಾಗ ಎರಡೂ ಕುಟುಂಬದವರು ಹೋಗಲು ಆಸಕ್ತಿ ತೋರಿಸಲಿಲ್ಲಾ. ಸಾವಿರಾರು ಎಕ್ಕರೆ ಕಾಫಿ ತೋಟದಲ್ಲಿ ಕೆಳಗೆ ಬಿದ್ದ ಬೀಜ ಆರಿಸುವ ಆಳುಗಳು ಮುಂದಿರಬಹುದಾದ ರೊಬೊಸ್ಟೊ ಕಾಫಿ ಗಿಡದ ರೆಕ್ಕೆಗಳನ್ನು ಕೀಳುವ ಕೆಲಸ ನಡೆದಿತ್ತು. ಆದರೆ ಹೋಳಿ ಹಬ್ಬ ಹತ್ತಿರ ಬಂದಿತ್ತು, ಅದಾಗಿ ಹದಿನೈದು ದಿನಗಳಲ್ಲಿಯೇ ಯುಗಾದಿ ಇದಿದ್ದರಿಂದ ತಾಂಡಕ್ಕೆ ವಾಪಾಸು ಆಗುವ ಅನಿವಾರ್ಯತೆ ಇತ್ತು. ಅವನ ಲೆಕ್ಕ ಮಾಡಿಸಿ ಉಳಿದಿದ್ದನ್ನು ಲೆಕ್ಕದಲ್ಲಿ ಬರೆದುಕೊಂಡು ಖರ್ಚಿಗೆ ಒಂದೀಟು ಕಾಸು ಕೊಟ್ಟು ಹೊರಗೆ ಹಾಕಿದ್ದ. ಎರಡು ಕುಟುಂಬಗಳು ಬಾಳೆಹೊನ್ನೂರಿನಿಂದ ಶಿವಮೊಗ್ಗಕ್ಕೆ ಬಂದರು, ಅಲ್ಲಿಯವರೆಗೆ ಚೌಲಿಗೆ ಒತ್ತಡವಾಗಿರಲಿಲ್ಲ, ಶಿವಮೊಗ್ಗಕ್ಕೆ ಬಂದಾಗ ಅವಳಿಗೆ ನಿರ್ಣಯ ಮಾಡುವುದು ಅನಿವಾರ್ಯವಾಗಿತ್ತು. ಅವರ ಊರ ಕಡೆಗೆ ಹೊರಟಿದ್ದ ಬಸ್ಸು ಹತ್ತಿ ಗಂಡ ಮತ್ತು ಒಬ್ಬ ಮಗನನ್ನು ಬಿಟ್ಟವಳೆ ಚೆನ್ನಿಂಗನ ಹಿಂದೆ ಕಣ್ಣುಮುಚ್ಚಿ ನಡೆದುಬಿಟ್ಟಳು. ಅಲ್ಲಿತಡೆದುಗೊಂಡಿದ್ದ ಸಿಟ್ಟು ಜ್ವಾಲಾಮುಖಿಯಂತೆ ಹೊರಹೊಮ್ಮಿ "ನನ ಗಂಡನ ಹಿಂದ ಯಾಕೆ ಬಿದ್ದಿಯೆ ನನಸೌತಿ, ಎಲ್ಲಾದ್ರು ಹಾಳಾಗಿ ಹೋಗು" ಅಂದವಳೆ ಬಸ್ಸಿನಲ್ಲೆ ದೊಡ್ಡ ನಾಟಕ ಸುರು ಮಾಡಿದಳು. ಚೌಲಿ ಬಸ್ಸು ಎನ್ನುವ ಕಾರಣಕ್ಕೆ ಬಾಯಿ ಬಿಡದಂತೆ ಸುಮ್ಮನಾಗಿದ್ದಳು. ಅವನೆ ಒಂದು ಕಪಾಳಕ್ಕೆ ಕೊಟ್ಟು

ಸುವಾಲಿ ಬಾಯಿ ಬಂದ್ ಮಾಡಿದ್ದ. ಮನೆಗೆ ಬರುತ್ತಿದ್ದಂತೆ ಮಾರಾಮಾರಿ ಜಗಳ ಸುರು ಆಗಿತ್ತು. ಚೌಲಿಗೆ ಬಾಣಲಿಯಿಂದ ಬೆಂಕಿಗೆ ಬಿದ್ದಂತಾಗಿತ್ತು, ಚೆನ್ನಿಂಗನಿಗೆ ಬದುಕು ನರಕ ಅನಿಸಿತ್ತು.

ಹೆಂಡತಿ, ಅವನ ತಾಯಿ ಇಬ್ಬರಿಗೂ ಹೇಳಿ, ಅವತ್ತೆ ಸಂಜೆ ಚೌಲಿ ಮತ್ತು ಮಗನ್ನ ಕರ್ಕೊಂಡು ವಾಪಾಸು ಜಾನೆ ಖಾನಕ್ಕೆ ಬಂದಿದ್ದ. ಈಗ ಇಡೀ ಲೈನ್‌ನಲ್ಲಿ ಇಬ್ಬರೆ, ಚೌಲಿಗೆ ಸ್ವರ್ಗ ಅನಿಸಿತ್ತು. ಆದರೆ ಕೊಂಗ ರೈಟರ್ ಕಣ್ಣು ಅವಳ ಮೇಲೆ ಬೀಳುತ್ತಿದ್ದಂತೆ, ಚೆನ್ನಿಂಗನು ಸಪ್ಪೆಯಾಗಿ ಕಾಣತೊಡಗಿದ್ದ. ಅವಳ ನಡೆನುಡಿ, ಬದಲಾದವು, ವರ್ತನೆ ಬದಲಾಗುತ್ತಿದ್ದಂತೆ ಇಬ್ಬರಲ್ಲೂ ಜಗಳ ಆಗಿತ್ತು, ಹಳಸಿದ ಸಂಬಂಧ ಬಹಳ ದಿನ ಉಳಿಯಲಿಲ್ಲಾ ಕೊಂಗ ರೈಟರ್, ರಾಜರೋಸಾಗಿ ಯಾವಾಗ ಬರತೊಡಗಿದನೊ, "ಎಯ್ ನಿನ್ನ ಸಲುವಾಗಿ ನೆಮ್ಮದಿಯನ್ನ ಕಳ್ಕೊಂಡು, ಹೆಂಡತಿ ಮಕ್ಕಳನ್ನು ಬಿಟ್ಟು ಬಂದನಲ್ಲೆ" ಅಂದವನೆ ಮಕಾಮುಸುಡಿ ನೋಡದೆ ಬಾರಿಸಿದ್ದ. "ಎಯ್, ಹಿಂಗೆ ಇರು ಅನ್ನೋದಕ್ಕೆ ನೀ ಯಾರು? ಮದುವೆ ಮಾಡಿಕೊಂಡ ಗಂಡನೆ ಏನೂ ಕೇಳಲಿಲ್ಲಾ, ಹೋಗ ನೀ ಯಾರು?" ಜೋರಾಗಿಯೇ ದಬಾಯಿಸಿದಳು. ಚೆನ್ನಿಂಗನಿಗೆ ಭೂಮಿನೆ ಕುಸಿದಂಗಾಗಿತ್ತು. ಈ ಕಡೆ ಇವಳು ಸಿಗಲಿಲ್ಲಾ, ಆ ಕಡೀಗ ಅವಳು ಸಿಗಲಿಲ್ಲಾ, ಸಿಟ್ಟಲ್ಲಿ ಅವಳ ಚೀಲದೊಳಗಿದ್ದ ಮಚ್ಚನ ತಗೊಂಡು ಅವಳ ಕೊಂದೆ ಬಿಡಬೇಕು ಎಂದು ಅವಳ ಮೇಲೆ ಬೀಳುವುದಕ್ಕೂ ಕೊಂಗ ರೈಟರ್ ಅವನ ತಲೆಗೆ ಬಲವಾಗಿ ಹೊಡೆಯುವುದಕ್ಕೂ ಸರಿಹೋಗಿತ್ತು.

ಚೆನ್ನಿಂಗ ಹಾದಿ ಹೆಣವಾಗಿದ್ದ. ಮೇಸ್ತ್ರಿ ಶಿವನಾಗನಾಯ್ಕ ಅರೆಬರೆ ಬೆಂದು ಬಿದ್ದಿದ್ದ ಅವನ ಹೆಣವನ್ನು ಅಲ್ಲೆ ಕಟ್ಟಿಗೆ ಆರಿಸಿ ಅದರ ಮೇಲಿಟ್ಟು ತೋಟದಿಂದ ಅಣತಿ ದೂರದಲ್ಲಿ ಸುಟ್ಟು ಕೋಳಿ ಕೊಯ್ದು ಕರ್ಮ ಮಾಡಿ, ಅವನ ಹೆಂಡತಿಗೆ ಸುದ್ದಿ ತಲುಪಿಸಿದ. ಚೌಲಿ ಮತ್ತ ಅಕಿ ಮಗ ಎಲ್ಲಿ ಹಾಳಾಗಿ ಹೋದರು ಅನ್ನೋದ ತಿಳಿಯಲಿಲ್ಲಾ. ಆದರೆ ಸುಕಾಸುಮ್ಮನೆ ಜೀವ ಕಳ್ಕೊಂಡ ಚೆನ್ನಿಂಗ ಆತ್ಮಹತ್ಯೆ ಮಾಡಿಕೊಂಡನೋ, ಇಲ್ಲಾ ಕೊಲೆ ಎನ್ನುವ ರಹಸ್ಯ ಮಾತ್ರ ಹೊರ ಜಗತ್ತಿಗೆ ಗೊತ್ತಾಗಲೇ ಇಲ್ಲ. ಜಗತ್ತು ಮಾಮೂಲಾಗಿಯೇ ನಡೆಯುತ್ತಿತ್ತು. ಶಿವನಾಗನಾಯ್ಕನ ಉಳಿದ ಬಾಕಿಯ ಚಿಂತೆ ಗಾಢವಾಗಿ ಕಾಡತೊಡಗಿತ್ತು.

ಪ್ರಕರಣ–ಎರಡು

ಶಿವನಾಗನಾಯ್ಕ ಹಿಂಗೆ ಸತ್ತೋರು, ಓಡಿ ಹೋದವರು ಹಾಕ್ಕೊಂಡ ಹೋದವರ ಲೆಕ್ಕವನ್ನ ಬರ್ಕೊಂಡಿಟ್ಟುಕೊಂಡಿದ್ದ. ಕೇಳಿಕೇಳಿ ಸಾಕಾಗಿದ್ದ. ಈಗ, ನಾಳೆ ಬಾ, ನಾಡಿದ್ದು, ತಿಂಗಳು ಬಿಟ್ಟು ಬಾ ಅಂತ ಸತಾಯಿಸಿ ಜೀವ ಹಿಂಡಿದ್ದರು. ಇವನ ಹಿಂದೆ ತಿಂದದ್ದು ಸಾಕು ಅಂತ ಮಂದಿ ಮತ್ತೊಬ್ಬ ಮೇಸ್ತ್ರಿ ಪೊಲೀಸ್ ಭಗನಾ, ಮಾಸ್ತರ

ಶಿವನಾರನ ಹತ್ರ ಶಿವನಾಗ ಕೊಟ್ಟಿದ್ದಕ್ಕಿಂತ ಹೆಚ್ಚು ದುಡ್ಡು ಇಸ್ಕೊಂಡು ಇವನಿಗೆ ಟೋಪಿ ತೊಡಿಸಿದ್ದರು. ಶಿವನಾಗ ಸಾಲದ ಹೊರೆ ತಾಳಲಾರದೆ ಹೊಲಮನಿನೆ ಮಾರಬೇಕಾಗಿ ಬಂತು. ಸಿಟ್ಟಿನೊಳಗೆ ಒಮ್ಮೆಜಾಡೇರೊ ಉಮ್ಲನಾಯ್ಕ ಅನ್ನೋನಿಗೆ. "ಎಲ್ಲಿದಿಯಪ್ಪ" ಅಂತ ಪೋನು ಮಾಡಿದ. ಇವನ ಹತ್ರ ಇಲ್ಲದ ಮೊಬೈಲ್ ಪೋನುಗಳು ಕೂಲಿ ಮಾಡುವವರ ಕೈಯೊಳಗಿದ್ದವು. ಆ ಕಡೆಯಿಂದ ಉಮ್ಲ, "ನೀ ಎಲ್ಲಿದಿಯಪ್ಪ" ಅಂತ ಕೇಳಿದ. "ಅಲ್ಲಲ್ಲೇ ಸೂಳಿಮಗನ, ನನಂತಾವ ಕಾಸ ಇಸ್ಕೊಂಡು ಮತ್ತೊಬ್ಬನ ಹೆಣ್ತಿ ತೊಮ್ಲ ತಿನ್ನಾಕ ಹೋಗಿಯಲ್ಲ ನನ್ನ ದುಡ್ಡು ಕೊಡು ಬೊಳಿಕೆ" ಸಿಟ್ಟಿಂದ ಒದರಿದ. ಉಮ್ಲಾನು ಅದೇ ಧಾಟಿಯಲ್ಲಿ, "ಲೇ ಸೂಳಿಮಗನೆ ಕೊಡೊಮಟ ಸುಮ್ಕರಿಲೆ" ಅಂದು ಪೋನು ಇಟ್ಟ. "ಥತ್, ಇವ್ನವ್ವನ, ನಿಯತ್ತಿನ ಕಾಲ ಅಲ್ಲ" ಅಂದವನೆ, ಹೆಚ್ಚಾದ ಸಾಲ ತೀರಿಸೋಕೆ ಶಿವನಾಗನಮಗ ಸಂಥಾಳಿನಾಯ್ಕನ್ನ ಮತ್ತ ಅವನು ಮೆಚ್ಚಿಮದವಿಯಾಗಿದ್ದ ಚಿಪ್ಲಿಬಾಯಿನ ಅವನ ಊರಿನವನೆ ಆದ್ರ ಮೇಸ್ತ್ರಿ ಆಂದೊ ಮಂಗಾಳನಾಯ್ಕನ ಹಿಂದೆ, ಅವನು ಹಿಂದೆ ಆಳು ಕಟ್ಟುತ್ತಿದ್ದ ಜಾನೆಖಾನಕ್ಕೆ ಕಳುಹಿಸಿದ. ಸಂಥಾಳಿಯೂ ಬಹಳ ಹುರುಪಿನೊಳಗೆ ತೋಟಕ್ಕೇನೊ ಹೋದ. ಮಂಗಾಳನಾಯ್ಕ ಅವನ ಸಂಬಂಧಿಯಾಗಿದ್ದರಿಂದ ಅವನ ಬಲಾಬಲಕಿ ಮ್ಯಾಲ, ಹಾರಾಡೋದಕ್ಕೆ ಸುರು ಮಾಡಿದ. ಅವರಿಗಿಂತ ಮೊದಲೆ ಬಂದಿದ್ದ ಬಹದ್ದೂರಿ ತಾಂಡ, ಬಂಡವಾಳತಾಂಡ, ಕಾಡಾಪುರ ತಾಂಡದವರು ಲೈನ್‌ನಲ್ಲಿ ಜಾಗ ಹಿಡಿದುಕೊಂಡು ಕೆಲಸ ಮಾಡುತ್ತಿದ್ದರು. ಸಂಥಾಳಿನೂ, ನೋಡಾಕ ಪಾಡ್ತಾಗೆ ಇದ್ದಿದಕ್ಕೆ ಕಾಡಾಪುರ ತಾಂಡದ ಮಿಟಕಲಾಡಿಮಂಗಲಿ ವಯ್ಯಾರ ಮಾಡುತ್ತ, ನೀವು ಬೇಕಾರ ನಮ್ಮ ಪಕ್ಕದಾಗ ಇರಬಹುದು ಅಂತ ಅವಳ ಶತ್ರು ಬಹದ್ದೂರಿ ತಾಂಡದ ನಾಗಿ ಟ್ರಂಕು, ಸಾಮಾನು ಸರಿಸಿ ಜಾಗ ಮಾಡಿಕೊಟ್ಟಳು. "ಅಲೆಲೆ ಮಿಕಾ ತಿನ್ನಾಕ ತಯಾರೈತೆ" ಅಂದುಕೊಂಡ ಸಂಥಾಳಿ. ಅವನು ಅವಳ ರೀತಿ ನೂಲಿಯುತ್ತ, "ಯಾಕೆ ಆಗವಲ್ದು" ಅಂತ ಅವನ ಹೆಂಡತಿ ಚಿಪ್ಲಿ ಬ್ಯಾಡ ಅಂದಾಳಂತ ಹಿಂದುಮುಂದು ನೋಡದೆ ಸಾಮಾನುಗಳನ್ನ ನಡಕ್ಕೆ ತೂರಿಸಿಯೆಬಿಟ್ಟ. ಅವಳು ಸರಿಸುವ ನೆಪ ಮಾಡಿ ಅವನ ಕೈಗೆ ಕೈ, ಮೈಗೆ ಮೈ ತಾಕಿಸುವುದನ್ನ, ಒಯ್ಯಾರ ಮಾಡುವುದನ್ನ ಸುಮ್ಮನೆ ಗಮನಿಸುತ್ತಿದ್ದ ಚಿಪ್ಲಿಬಾಯಿ, ಅವಳ ಗಂಡನನ್ನ ಹುಡುಕಾಡ ತೊಡಗಿದಳು. ಅಲ್ಲೆ ಚಣ್ಣದ ಮೇಲೆ ಕುಂತು ಬೆಂಕಿ ಕಾಸುತ್ತಿದ್ದ ಜೊಬರ್ದಗೇಡಿಯಂತ ಕಾಪುನಾಯ್ಕ ಅವಳ ಗಂಡ ಅಂತ ತಿಳಿದಾಗ, "ಪಾಪ, ಅಕಿನಾರು ಏನು ಮಾಡ್ಯಾಳಬಿಡು" ಅಂದಳು. ಆದ್ರ, ಅಕಿಗಂಡ ಸಂಥಾಳಿ, ಇಷ್ಟುಬೇಗ ಅವಳ ಮೇಲಿನ ಪ್ರೀತಿಯನ್ನು ಆಕರ್ಷಣೆಯನ್ನ ಕಳ್ಕೊಂಡಾನು ಅಂತ ಕನಸು ಮನಸ್ಸಿನಲ್ಲೂ ಅಂದುಕೊಂಡಿರಲಿಲ್ಲಾ. ಶಿವನಾಗ ನಾಯ್ಕನ ಹತ್ರ ಅವರ ಮೂವರು ಮಕ್ಕಳನ್ನು ಬಿಟ್ಟುಬಂದಿದ್ದರು. ಯಾಕೊ ಚಿಪ್ಲಿಗೆ ಮೂರು ಮಕ್ಕಳ ನೆನಪು ಕಾಡತೊಡಗಿತು. ಇದೇ ಲೈನಿನಲ್ಲಿ ಇವರಿಬ್ಬರ ಪ್ರೀತಿ ಅರಳಿದ್ದು, ಹತ್ತು ವರ್ಷದ ಕೆಳಗೆ

ಸಂಥಾಳಿ ಅಪ್ಪ ಶಿವನಾಗನಾಯ್ಕಂದು ಭಾರಿ ದರ್ಬಾರು. ಭದ್ರನಾಯ್ಕನ ತಾಂಡದಲ್ಲಿ ತೊಮ್ಮುನಾಯ್ಕನ ಕೂಡು ಕುಟುಂಬ ಬೇರೆಯಾಗಿತ್ತು. ಇಪ್ಪತ್ತು ಎಕ್ಕರೆ ಜಮೀನಿರೊ ಸಪೂಳಿಯ ನಾಯ್ಕನ ಇಬ್ಬರು ವಿಧವೆಯರದ್ದೇ ದರ್ಬಾರು ಅಂದುಕೊಂಡಿದ್ದರು. ಆದರೆ ಇದ್ದಕ್ಕಿದ್ದಂಗೆ ಇನ್ನೂರು ಮುನ್ನೂರ ಮಂದಿ ಆಳುಗಳನ್ನು ಕಾಫಿ ತೋಟಕ್ಕೆ ಕಳುಹಿಸಿ ಕಮಿಷನ್ ಪಡೆಯುತ್ತಿದ್ದ ಶಿವನಾಗನ ಮುಂದೆ ಯಾರು ಲೆಕ್ಕಕ್ಕೆ ಇಲ್ಲದಾಗಿದ್ದರು. ಏಸು ಅವನ ಹೀರೊಹೊಂಡಾ ಬೈಕು ಮಸರೈಜ್ ಪಂಚೆ, ಕೈಯಾಗ ಹೆಚ್‌ಎಂಟಿ ವಾಚು, ಯಾವಾಗಲೂ ಮಳ ಉದ್ದದ ಮೊಬೈಲ್ ಫೋನು, ಇಷ್ಟೆ ಅಲ್ಲ ಅವನು ಮೆರದದ್ದು ಇಡೀ ಭದ್ರನಾಯ್ಕನ ತಾಂಡಕ್ಕೆ ಮೊದಲು ಬಿ.ಎಸ್.ಎನ್. ಎಲ್ ಫೋನು ಹಾಕಿಸಿದವನೆ ಅವನು ಕೊನೆಯವನು ಅವನೆ. ಯಾವಾಗಲೂ ದಾರು ಮಾಂಸದೂಟ, ಮೀನು ತಪ್ಪಿದಿಲ್ಲಾ. ಅವನ ಹೆಂಡತಿ ಪಗಲಿಬಾಯಿಗೆ ಅದೇನು ದಿಮಾಕು ಅಂತಿಯಾ, ಮಂದಿ ಅಕಿ ಕಣ್ಣಿಗೆ ಕಾಣ್ತಾನೆ ಇರಲಿಲ್ಲಾ. ದುಡ್ಡಿನ ದರ್ಪ ಮಂದಿನ ಏಕವಚನದಿಂದಲೇ ಮಾತಾಡಿಸುತ್ತಿದ್ದಳು. ಯಾವಾಗ ಮಂದಿ ಉಲ್ಟಾ ಹೊಡದರೊ, ಇವರು ಸಿದಾ ಆಗಿದ್ದರು. ಆವಾಗಲೆ ಶಿವನಾಗನ ಹಿಂದೆ ಜಾನೆಖಾನಕ್ಕೆ ಒಬ್ಬಂಟಿಯಾಗಿ ಬಂದಿದ್ದಳು ಚಿಪ್ಲಿ. ಶಿವನಾಗನ ಜನ ಹೆಚ್ಚಾಗಿ ಕೆಲಸ ಸರಿಗೆ ಆಗ್ತಿಲ್ಲ ಅಂದಿದ್ದಕ್ಕೆ ಮಗ ಸಂಥಾಳಿನಾಯ್ಕನನ್ನ ಕರ್ಕೊಂಡು ಹೋಗಿದ್ದ. ಒಂದೇ ಊರಿನವಳು, ಚಿಗಪ್ಪ, ಚಿಗಪ್ಪ ಅಂತಿದ್ದಳು ಚಿಪ್ಲಿ. ಅವರಿಗೂ ಊಟಕ್ಕೆ ತೊಂದರೆ ಆಗುತ್ತಿದ್ದಿದ್ದರಿಂದ ಅಕೀನ "ನಾನೆ ಮಾಡಿ ಹಾಕಿನಿ ಬಿಡು, ಕಾಕ ನೀ ಯಾಕೆ ಯೊಚ್ನೆ ಮಾಡ್ತಿ" ಅಂದು ಅವರ ರೇಷನ್ ಅವಳ ಹತ್ರ ಇಟ್ಕೊಂಡಳು. ಮೇಸ್ತ್ರಿ ಶಿವನಾಗ ಏನೋ ಕೆಲಸದ ಮ್ಯಾಲೆ ತಾಂಡಕ್ಕೆ ವಾಪಾಸು ಬಂದು ಹದಿನೈದು ದಿನ ಬಿಟ್ಟು ವಾಪಾಸು ಹೋಗುವಷ್ಟರಲ್ಲಿ ಚಿಪ್ಲಿ ಮುಟ್ಟ ನಿಂತಿತ್ತು. ಅವಳು ಚವ್ಹಾಣ್ ಪಂಗಡದವಳೆ ಆಗಿದ್ದರು, ಸಂಥಾಳಿಯ ವಡ್ತ್ಯಾ ಕುಲದವನು ರಾಠೋಡ್ ಇಲ್ಲ ಚವ್ಹಾಣ್ ಎರಡರಲ್ಲೂ ಮದುವೆಯಾಗಬಹುದಾಗಿದ್ದರಿಂದ ಕೇವಲ ಹದಿನೈದು ದಿನಗಳ ಅಂತರದಾಗ ಮಾವನಾಗಿದ್ದ ಶಿವನಾಗ.

ರಂಪ, ರಾದ್ಧಾಂತ ದಾವಣಗೇರಿಯಿಂದ ಚಿಪ್ಲಿಯ ಚಿಕ್ಕಪ್ಪಂದಿರು ಹೊಡಿಯಾಕ ಬಂದು ಅದನ್ನ ಒಳ್ಳೆಯ ರೀತಿಯಿಂದಲೇ ಮಾತುಕತೆ ಆಡಿ "ಮಾಡಿದವನು ಉಣ್ಣತಾನ ಮಣಿಯಂತ ಕಡಬು" ಶಿವನಾಗನ ಮಾತಾಗಿತ್ತು. ಅಲ್ಲೆ ಮನಿಮುಂದ ಹಾರಬದಲಿಸಿ ಮನಿಯೊಳಗೆ ಕರ್ಕೊಂಡಿದ್ದ. ಸಾಲದ್ದಕ್ಕೆ ಮುಂದೆ ಎಂಟೊಂಭತ್ತು ತಿಂಗಳಿಗೆ ಗಂಡು ಮಗು ಹಡದಳು, ಅದಾಗಿ ಮತ್ತೊಂದು ಎಂಟು ತಿಂಗಳಿಗೆ ಹೆಣ್ಣು, ಮುಂದಿನದು ಗಂಡು. ಅವನ ತಂದೆ ತಾಯಿ ಹತ್ರ ಬಿಟ್ಟು ಇಬ್ಬರು ಗಂಡ ಹೆಂಡತಿ ಹಳೆ ನೆನಪುಗಳ ತಡಕಾಟದಲ್ಲಿ ಜಾನೆಖಾನಕ್ಕೆ ಬಂದಿದ್ದರು. ಆದರೆ ಇಲ್ಲಿ ನಡದದ್ದೇ ಬೇರೆ. ಮಂಗಲಿಯ ಬಣ್ಣದ ಮಾತಿಗೆ ಸಂಥಾಳಿನಾಯ್ಕ ಪೂರ

ಶರಣಾಗಿದ್ದ. ಚಿಪ್ಲಿ ಪಕ್ಕದಾಗೆ ಗಂಡ ಕಾಪುನಾಯ್ಕನಿ ಮಲಗಿದ್ದರು. ಆ ಕಡೆ ಮಗ್ಗಲು ಹೊರಳಿಸಿ ಸಂಥಾಳಿಯ ಪಕ್ಕ ಮಕ್ಕೊಂಡಿದ್ದಳು ಮಂಗಲಿ. ತನ್ನ ಹೆಂಡತಿ ಕಡೆ ಮಾರಿ ಮಾಡಿಕೊಂಡು ಮೂರು ವರ್ಷದ ನೆನಪಿಗೆ ಜಾರಬೇಕು ಅನ್ನುತ್ತಿರುವಾಗಲೆ ಮಂಗಲಿ ಅವನ ಬೆನ್ನಿಗೆ ತನ್ನ ಎದೆಯಾನಿಸಿದ್ದಳು. ಹಳೆಯ ನೆನಪುಗಳು ಹಳೆ ಕಬ್ಬಿಣ ತುಕ್ಕು ಹಿಡಿದಾಗ ಉದರುವ ಜಂಗಿನಂತೆ ಉದುರಿ ಹೋಗಿದ್ದವು. ಅವಳ ಮೇಲಿಂದ ಕೈ ತಗದು ಮೊಳಕೈಯಿಂದ ಎದೆಗೆ ಅಮುಕಿದ. ಮಂಗಲಿ ಯಾವುದೋ ಅವ್ಯಕ್ತ ಲೋಕದೊಳಗೆ ಲೀನಳಾಗಿದ್ದಳು. ಕಾಪುನಾಯ್ಕ ಗೊರಕೆ ಹೊಡೆಯುತ್ತಿದ್ದ. ಇಡಿ ದಿನ ಕೆಲಸ ಮಾಡಿ ದಣಿದಿದ್ದ ಚಿಪ್ಲಿ ಹಂಗೆ ನಿದ್ದೆಗೆ ಜಾರಿದ್ದಳು. ಸಂಥಾಳಿ ಮಗ್ಗಲು ಹೊರಳಿಸಿದ. ಇಬ್ಬರು ಎದ್ದು ಕಾಲ್ಮಡಿಯುವ ನೆಪ ಮಾಡಿ ಸೌರಾತ್ರಿ ಮಟ ಹೊರಗೆ ಇದ್ದು ಯಾರಿಗೂ ಗೊತ್ತಾಗದಂತೆ ಒಳಗೆ ಬಂದಿದ್ದರು. ಪ್ರತಿದಿನ ಇದೆ ಆಟ ಆರಂಭವಾಗಿತ್ತು. ಬೆಕ್ಕು ಕಣ್ಣುಮುಚ್ಚಿ ಹಾಲು ಕುಡಿದರೆ ಜಗತ್ತಿಗೆ ಕಾಣುವುದಿಲ್ಲವೆ? ಎಷ್ಟು ದಿನ ಮುಚ್ಚಿಡಲು ಸಾಧ್ಯವಾದೀತು. ಒಮ್ಮೆ ಕಾಪುಗೆ ಎಚ್ಚರವಾಗಿ ಪಕ್ಕದಲ್ಲಿ ಹೆಂಡತಿ ಇಲ್ಲ, ಅವಳ ಪಕ್ಕದಲ್ಲಿ ಸಂಥಾಳಿನೂ ಇಲ್ಲ, ಇದೇ ಸರಿಯಾದ ಸಮಯ ಅಂದವನೆ ಎರಡು ಸಲ ಉರುಳಿ ಚಿಪ್ಲಿ ಹತ್ತಿರ ಬಂದು ಅಕಿ ಮೇಲೆ ಕೈ ಇಟ್ಟ. ಗಂಡನ ವ್ಯವಹಾರ ಗಮನಿಸಿದ್ದ ಅವಳು "ನಿನಗೆ ನೂರ ಹೆಣ್ಣಾದರೆ ನನಗ ಒಬ್ಬ ಗಂಡಸಾದರು ನೋಡ್ತಾನೆ ಮಗನೆ ನಿನ್ನ ಮಾನ ತಗದ್ರೆ ಹಂಗಿಂಗ ತಗಿಯಲ್ಲ" ಅಂದ್ಕೊಂಡವಳೆ ಕಾಪುನ ತೋಳುಗಳೊಳಗೆ ಬಂದಿಯಾಗಿದ್ದಳು. ಕಾಪು ಇದೆ ಸಮಯ ಕಾಯುತ್ತಿದ್ದವನಂತೆ ಸುರು ಮಾಡಿದ್ದ.

ಆರು ತಿಂಗಳ ಕಾಲ ಕಳೆದದ್ದೇ ಗೊತ್ತಾಗಲಿಲ್ಲಾ, ಮಂದಿ ಲೆಕ್ಕ ಮಾಡಿಸುವುದರಲ್ಲಿ ತೊಡಗಿಸಿಕೊಂಡಿದ್ದರು. ಕಾಪು ಮೊದಲನೇ ದಿನವೆ ಮಾಡಿಸಿಕೊಂಡು, ಎಲ್ಲಾ ಯೋಜನೆಗಳನ್ನು ಚಿಪ್ಲಿಗೆ ಹೇಳಿದ್ದ. ಮರುದಿನ ಸಂಥಾಳಿ ಎದಿಸೆಟಿಸಿಕೊಂಡು ಕಾಪುನಾಯ್ಕನ ಹೆಂಡತಿ ಮಂಗಲಿನ ತಕ್ಕೊಂಡು ಓಡಿಹೋಗುವ ಯೋಜನೆ ರೂಪಿಸಿದ್ದ. ಮಂಗಲಿನೂ ಕೂಡ, "ನೋಡು ಸಂಥಾಳಿ, ನಿನ್ನ ಹೆಂಡತಿ ಕಾಪುನ ಜೊತೆ ಸಂಬಂಧ ಇಟ್ಕೊಂಡವಳೆ, ಅಕೀನ ತಗೊಂಡ ಏನು ಮಾಡ್ತಿಯ, ಕೈಲಾಗದವನು ಕಾಪು ಜೊಬರ್ದಗೇಡಿ, ನಂಗೊತ್ತೈತೆ ಅವನ ಕೈಯಿಂದ ಏನು ಕಡದು ಕಿಸಿಯೋದಕ್ಕೆ ಆಗೋದಿಲ್ಲಾಂತ. ನೀ ಯೋಚನೆ ಮಾಡಬೇಡ." ಮುಂದಿನದ್ದನ್ನ ಕೇಳಲಿಲ್ಲಾ. ಸಂಥಾಳಿ ತನ್ನ ಗಂಡಸುತನದ ಬಗ್ಗೆ ಹೆಮ್ಮೆ ಪಟ್ಟುಕೊಂಡಿದ್ದ. ಅವಳು ಈ ಮಾತು ಹೇಳಿದ ರಾತ್ರಿನೆ ಅವಳನ್ನು ಬೆಟ್ಟಿಯಾಗಿ, "ನೋಡು ಅವನು ಚಿಪ್ಲಿನ ಕರ್ಕೊಂಡು ಹೋಗ್ಲಿ ಬಿಡ್ಲಿ, ನೀ ಮಾತ್ರ ಸಜ್ಜಾಗಿರು, ನಾಳೆ ಹೊತ್ತಾರೆ ಲೆಕ್ಕ ಮಾಡಿಸಿಕೊಂಡು ಬರಬೇಕಾದ್ದು ತಗೊಂಡು ತಯಾರಿಯಾಗಿರ್ತಿನಿ, ಸೀದಾ ಧರ್ಮಸ್ಥಳ, ಮತ್ತೊಮ್ಮೆ ನಿನ್ನ ಕೊಳ್ಳಿಗೆ ತಾಳಿಕಟ್ಟಿ ಮುಂದೆ ನಮ್ಮ ತಾಂಡಕ್ಕೆ ಹೋಗಾನಂತೆ. ಏನಂತೀಯಾ" ಅವಳ

ಮಾರಿ ನೋಡಿದ. "ಹೇಳಿದ್ನಲ್ಲಾ ನಾನು ತಯಾರಿದ್ದೀನಿ, ಇನ್ನು ನಿನ್ನ ಗಂಡಸ್ಥನ, ಒಯ್ಯುತ್ತಿಯೊ, ಇಲ್ಲ ನಿನ್ನವಳನ್ನೇ ಕರ್‍ಕೊಂಡು ಓಡಿಹೋಗ್ತಿಯೊ ಗೊತ್ತಿಲ್ಲ" ಅವನಿಗೆ ಉಲ್ಟಾ ಹೊಡೆದಳು. "ಸರಿಸರಿ ಸಂಜಿ ಮುಂದ ನಮ್ಮ ಮಾಮೂಲ ಜಾಗದಲ್ಲಿ ಕಾಯ್ತಿರ್‍ತಿನಿ ಬಂದುಬಿಡು, ನಡಕೊಂಡು ಬಾಳೆಹೊನ್ನೂರು ರಾತ್ರಿ ಬಸ್ಸಿಗೆ ಸೀದಾ ಧರ್ಮಸ್ಥಳ" ಅವಳಿಗೆ ಮತ್ತೆ ಮತ್ತೆ ಜ್ಞಾಪಿಸಿದವನೆ ಸೀದಾ ಸರಾಯಿ ಅಂಗಡಿಗೆ ಹೋಗಿ ಮುಕ್ಕಾರೆ ಸರಾಯಿ ಕುಡಿದು ವಾಲಾಡುತ್ತ ಬಂದಿದ್ದ. ಮಾರನೆ ದಿನ ಸಂಜೆ ನಡೆಯುವ ಘಟನೆಯನ್ನು ನೆನಪಿಸಿಕೊಂಡು ಪುಳುಕಿತನಾಗಿದ್ದ. ತೇಲಾಡುತ್ತ ಲೈನಿಗೆ ಬಂದು ತಾವಿರುವ ಜಾಗದಲ್ಲಿ ಹೆಂಡತಿ ಮತ್ತು ಪ್ರೇಯಸಿಯನ್ನು ನೋಡಿ ಖುಷಿಯಾದ. "ಕಾಪು ಲೇ ಕಾಪು, ದೊಸ್ತ ಇವತ್ತೊಂದೆ ದಿನ ನಾಳೆ ನಾನು ನಮ್ಮ ತಾಂಡಕ್ಕೆ ನೀನು ನಿಮ್ಮ ತಾಂಡಕ್ಕೆ" ಬೇಕಂತ್ಲೆ ಅವನ ಎದುರೆ ಅವನ ಹೆಂಡತಿ ಮಂಗಲಿ ಬಾಯಿ ಮೇಲೆ ಮುಗ್ಗರಿಸಿಬಿದ್ದ. ಕಾಪು ಸಿಟ್ಟು ಮಾಡಿಕೊಳ್ಳದೆ, "ಲೇ ಮಂಗಲಿ ಎಬ್ಬಿಸೆ ಸಂಥಾಳಿನ. ಪಾಪ ಬಹಳ ಕುಡಿದಿರುವಂತೆ ಕಾಣುತ್ತೆ" ಅಂದವನೆ ಅವಳ ಪ್ರತಿಕ್ರಿಯೆಗೆ ಕಾದ. ಮಂಗಲಿ ಮಾತಾಡಿದರೆ ಎಲ್ಲಾನೂ ಮೈಮೇಲೆ ಬರುತ್ತೆ ಅಂದವಳೆ ಊಟಕ್ಕೆ ಅಣಿ ಮಾಡಿದಳು. ಚಿಪ್ಲಿ ಮೇಲುನೋಟಕ್ಕೆ ಅವನ್ನ ಹಿಡಿದು ತಂದು ಸಿಲಾವರಿ ತಾಟಿನಲ್ಲಿ ಒಂದು ರೊಟ್ಟಿಯನ್ನು ಇಕ್ಕಿದಳು. ಒಣಮೀನು ಹಾಕಿ ಮಾಡಿದ ಬದ್ನೆಕಾಯಿ ಪಲ್ಯ ಬಡಿಸಿದಳು. ಸಂಥಾಳಿ ಮೂರುವರೆ ರೊಟ್ಟಿ ತಿಂದು ಮೂಲೆಯಲ್ಲಿ ಮುದುರಿಕೊಂಡ.

ಮುಂಜಾನೆ ಬಹಳ ಹೊತ್ತಿನ ಮಟಮಲಗಿದ್ದ. ಯಾಕಂದ್ರೆ ಕೆಲಸ ಮುಗಿದು ಊರಿಗೆ ಹೋಗುವವದರಿಂದ ಏನೂ ಕೆಲಸ ಇಲ್ಲದಿರುವುದರಿಂದ ಮುಂಜಾನೆ ಏಳೆಂಟು ಗಂಟೆ ಮಟಾನು ಮಲಗುವುದು ರೂಢಿ. ಸಂಥಾಳಿ ಕಣ್ಣು ಬಿಟ್ಟಾಗ ಏನೊ ಎಡವಟ್ಟು ಆಗಿರುವುದು ಕಂಡುಬಂತು. ಅವನ ಚೀಲದ ಗಂಟು ಬಿಚ್ಚಿತ್ತು. ಸಾಮಾನುಗಳು ಕಂಗಳ ಮಂಗಳ ಆಗಿದ್ದವು. ಮಂಗಲಿ ಸುಳಿವೆ ಇಲ್ಲ ಅರಬಾಡಿಸಿ ಎದ್ದವನೆ ಅವರು ಸೇರುತ್ತಿದ್ದ ಜಾಗದ ಕಡೆಗೆ ಓಡಿದ. ಸುತ್ತ ಮರಗಳ ನಡುವೆ ಅವಿತುಕೊಂಡಿರ ಬಹುದೆಂದು ತಡಕಾಡಿದ. ಮನಸ್ಸಿನೊಳಗೆ ಕತ್ತಲು ಆವರಿಸಿತು "ನಂಬಿಸಿ ಮೋಸ ಮಾಡಿದೆಯಾ ನಂಬಿಕೆ ದ್ರೋಹಿ" ಒಬ್ಬನೆ ಮಾತಾಡಿಕೊಂಡ. ಮತ್ತೆ ಲೈನಿನಗೆ ಬಂದ, ಮಂದಿ ತಮ್ಮ ಲಗೇಜುಗಳನ್ನು ಎತ್ಕೊಂಡು ಪಕ್ಕದ ಹಳ್ಳಿಗೆ ಹೊರಟಿದ್ದರು. ಅಲಿಂದ ಬಸ್ಸು, ವ್ಯಾನು, ಏನಾರು ಸಿಕ್ಕಿರು, ಅಜ್ಜಂಪುರ, ಬಾಳೆಹೊನ್ನೂರು, ಯಾವುದಾದರೂ ಕಡೆಗೆ ಹೋದರು ಅಲ್ಲಿಂದ ಶಿವಮೊಗ್ಗಕ್ಕೆ ಬಸ್ಸುಸಿಗುತ್ತಿತ್ತು. ಯೋಚಿಸುತ್ತ ಒಮ್ಮೆ ನನ್ನ ಹೆಂಡತಿ ಎಲ್ಲಿ? ಮಂದಿ ಕೇಳುವಂತೆ ಹೇಳಿದ. ಯಾರು ಇವನು ಮೆರದಿದ್ದನ್ನ ಮನಸ್ಸಿನೊಳಗೆ ಇಟ್ಕೊಂಡಿದ್ದ ಅಂತ ಕಾಣುತ್ತೆ. "ಕಾಪುನ ಹಿಂದ ಓಡಿಹೋದಳು" ಅಂದುಬಿಟ್ಟ ಇವ ಸುಮ್ಮನಿರದೆ

“ಮತ್ತೆ ಅವನ ಹೆಂಡತಿ?” ಯಾರು ಕ್ಷಣ ಮಾತಾಡಲಿಲ್ಲ. ಯಾರೊ “ಮತ್ತೊಬ್ಬನಿಂದೆ ಓಡಿಹೋದಳು.” ಅಂದು ಸುಮ್ಮನಾದ. “ಮತ್ತೊಬ್ಬ ಯಾರು?” ಯೋಚಿಸತೊಡಗಿದ. “ನನ್ನ ಜೊತೆಗೆ ಮಜಮಾಡಿ, ನನ್ನ ದುಡ್ಡು ಕಾಸು ಖರ್ಚು ಮಾಡಿಸಿ, ನನಗೆ ಗೊತ್ತಿಲ್ಲದೆ ಮತ್ತೊಬ್ಬನ ಜೊತೆಗೆ ಓಡಿಹೋಗೋದಂದರೆ? ಯಾರವನು, ನನಗೆ ಗೊತ್ತಿಲ್ಲದವನು?” ಹುಚ್ಚನಂತೆ ಈ ಕಡೆಯಿಂದ ಆ ಕಡೆ ಒಬ್ಬನೆ ತಿರುಗಾಡುತ್ತ ಮಾತಾಡಿಕೊಳ್ಳತೊಡಗಿದ. “ಯಾರವನು?” ಯಾರೊ ಅಮಾಯಕನ ಕೊರಳಪಟ್ಟಿ ಹಿಡಿದು ಕೇಳಿದ. ಈ ತಿಕ್ಕಲು ನನಮಗ ಕೇಳಿದ ಹೊಡ್ತಕ್ಕೆ ಅವನು ಗಾಬರಿಯಾದ. “ಗೊತ್ತಿಲ್ಲಣ್ಣ, ಬಿಡು ಕೈ” ಅಂದ. ತಲಿಕೆಟ್ಟಿರೋ ನನಮಕ್ಕಳು ಹೋಗೊ ಮುಂದ ಹೊಡದು ಹೋದಾರಂತ ಹೆದರಿ ಅಂಗಿ ಬಿಟ್ಟು, ಕಂಡ ಕಂಡವರಿಗೆ ಕೇಳತೊಡಗಿದ. ಕಾಪು, ಮಂಗಲಿ ಸಂಥಾಳಿ ಹೆಂಡತಿ ಚಿಪ್ಲಿ ಅವನಿಗೆ ಚಳ್ಳೆಹಣ್ಣು ತಿನ್ನಿಸಿ ಓಡಿಹೋಗಿದ್ದರು. ಯಾವಾಗ ಹೋದರು? ಯಾವ ದಾರಿಗೆ ಹೋದರು? ಹೆಂಗ ಹೋದರು? ಯೋಚನೆ ಮಾಡಿ ಮಾಡಿ ಸಂಥಾಳಿ ತಲಿ ಅನ್ನೋದು ಮಸರ ಗಡಗಿಯಾಗಿತ್ತು. “ಅಲ್ಲಾ ಅವನವ್ವನ ಹಡಬಿ ಹೆಂಗಸು ಮಂಗಲಿ ಒಳ್ಳೆ ಗಿಲಿಟ್ ಮಾತುಗಳನ್ನಾಡಿ ಯಾರದೊ ಜೊತೆಗೆ ಓಡಿಹೋದಳು? ಇಲ್ಲಿ ಇರೊಮಟ ನನ್ನ ಬಿಟ್ಟು ಯಾವ ನನಮಗನ ಮೇಲೆ ಕಣ್ಣಾಕಿದವಳಲ್ಲಾ. ನನ್ನ ಬಿಟ್ಟು ಸಲುಗಿಯಿಂದ ಯಾರ ಕೂಡ ಮಾತಾಡಿದಾಕಿನೂ ಅಲ್ಲಾ. ಇಲ್ಲಿ ನನ್ನ ತಾವ ಆಟ ಆಡಿ ಮತ್ತೊಬ್ಬನ ಜೊತೆ ಸಲುಗೆ ಬೆಳೆಸಿಕೊಂಡಿದ್ಲಾ. ಅಯ್ಯೊ ದೇವರೆ ನನ್ನ ಜೊತೆಗೆ ಹಿಂಗ್ಯಾಕ ಮಾಡಿದೆ. ಅಕೀನ ನಂಬಿ ಪ್ರೀತಿಸಿದ ನನ್ನ ಹೆಂಡತಿ ಚಿಪ್ಲಿಗೂ ದೋಖಕೊಟ್ಟೆ. ಈಗ ಊರಿಗೆ ಹೆಂಗ ಹೋಗಲಿ, ಊರಾಗ ಮಕ ಹೇಗೆ ತೋರಿಸಲಿ?” ಬರುತ್ತಿರುವ ಆಲೋಚನೆಗಳನ್ನು ನಿಲ್ಲಿಸಲು ಆಗದೆ ಪರದಾಡ ತೊಡಗಿದ.

ಎಲ್ಲಾ ಲೆಕ್ಕ, ಕಮಿಷನ್ನು, ಆಳು ತಂದ ಲಾರಿ ಖರ್ಚು ಹಾಳಮೂಳ ಅಂತ ಲೆಕ್ಕ ಮಾಡಿಸಿಕೊಂಡು ತನಗಾಗಿ ಕಾಯುತ್ತಿರಬಹುದೆಂದು ಸಹೋದರ ಸಂಬಂಧಿ ಸಂಥಾಳಿಯನ್ನು ಕರೆದುಕೊಂಡು ಹೋಗಿ ಮೊದಲು ಎಣ್ಣೆ ಹೊಡೆದು ಗಂಡ ಹೆಂಡತಿಯರೊಂದಿಗೆ ಹೋದರೆ ತಾನು ಸುರಕ್ಷಿತ ಅಂದುಕೊಂಡು ಮಂಗಾಳನಾಯ್ಕ ಲೈನ್ ಕಡೆಗೆ ಹೋದ. “ಸಂಥಾಳಿ, ಲೇ ತಮ್ಮ ಸಂಥಾಳಿ, ಎಲ್ಲಿದಿಯೊ? ಅಯ್ಯೊ ನಿನ್ನ ಮಹರಾಯ, ಯಾಕಿಂಗೆ ಕತ್ತಲೊಳಗೆ, ಹೆಂಡತಿ ಓಡಿಹೋಗಿರುವಂತೆ ಬಿದ್ಕೊಂಡಿಯ, ಎಲ್ಲಿ ನಿನ್ನ ಹೆಂಡತಿ ಚಿಪ್ಲಿ” ಕೇಳಿದ. ನೇಣಿಗೆ ಶರಣಾಗಬೇಕು ಎಂದುಕೊಂಡಿದ್ದ ಸಂಥಾಳಿಗೆ ಮಂಗಾಳನಾಯ್ಕ ಬಂದದ್ದ ಎಡವಟ್ಟಾಗಿತ್ತು. ಬಹಳ ಹೊತ್ತಿನವರೆಗೆ ಮಾತಾಡದಾಗಿದ್ದ. “ಲೇ ಏನಾರು ಮಾತಾಡು, ಏನಾರ ಅನಾಹುತ ಮಾಡಿದೆ ಏನೊ? ಮಾತಾಡು, ಚಿಪ್ಲಿ ಎಲ್ಲಿ? ನನ್ನ ಭರವಸೆ ಮೇಲೆ ನಿಮ್ಮಪ್ಪ

ಶಿವನಾಗನಾಯ್ಕ ಕಳುಹಿಸಿದ್ದಾನೆ, ಏನಾರ ಹೆಚ್ಚು ಕಮ್ಮಿ ಆದ್ರೆ" ಬಡ ಬಡಿಸಿದ. "ಯಣ್ಣಾ, ಚಿಪ್ಲಿ ಓಡಿಹೋಗಿದ್ದಾಳೆ" ಬಿಕ್ಕಳಿಸಿದ. "ಏನಂದೆ? ನಿನ್ನ ಹೆಂಡತಿ ಚಿಪ್ಲಿ ಓಡಿ ಹೋದಳೆ? ಯಾರ ಕೂಡ? ಹೇಳು, ಯಾ ಸೂಳಿಮಗ ಓಡಿಸಿಕೊಂಡು ಹೋದ. ಅವನು ಪಾತಾಳದಾಗ ಇದ್ದಾರು ಬಿಡೋದ ಬೇಡ" ಮಂಗಾಳ ಆವೇಷದಲ್ಲಿದ್ದ. ಒಳಗೊಳಗೆ ಅವನಿಗೆ ಖುಷಿ ಇತ್ತು. "ಈ ಸೂಳಿಮಗ ಮಾಡಿಕೊಂಡಿರೊ ಹೆಂಡತಿ ಮುಂದೆನೆ ಮತ್ತೊಬಾಕಿನ ತಗೊಂಡು ಮಲಗಿದರೆ ಯಾರು ತಾನೆ ಸುಮ್ಮನೆ ಇರೋದಕ್ಕೆ ಸಾಧ್ಯ, ಇವನೇನು ಮಹಾಗಂಡಸು, ಎಣ್ಣೆ ಹೊಡದು ಮಲಗಿದರೆ ಮುಂಜಾನೆ ಮಟಾನು ಹೆಂಡತಿ ಪಕ್ಕ ಯಾರು ಮಲಗಿದ್ದಾನೆ ಎನ್ನುವ ಪರಿವೆಯೇ ಇರುವುದಿಲ್ಲಾ. ಅಂತಾದ್ರಲ್ಲಿ ರಾಜರೋಸು ಅದ್ಯವಳ್ದೊ ಜೊತೆಗೆ ಮಾಡಬಾರದ್ದು ಮಾಡಿದರ ಫಲಿತಾಂಶ ಇದೇನೆ." ಒಳಗೆ ಅಂದುಕೊಂಡು ಸಾಂತ್ವಾನ ಹೇಳೋದಕ್ಕೆ ಪ್ರಯತ್ನಪಟ್ಟಿದ್ದ. "ಆದದ್ದು ಆಯ್ತು, ಏಳು ಮೇಲೆ, ಅಕಿ ಹೋದ್ರೆನಾತು ಅಂತಾರು ಸಾವಿರ ಮಂದಿ" ಅಂದವನೆ ರಟ್ಟಿಗೆ ಕೈ ಹಾಕಿ ಮೇಲೆ ಎಬ್ಬಿಸಿ, ಸಾಮಾನುಗಳ ಚೀಲ ಎತ್ತಿ ಅವನ ತಲೆ ಮೇಲಿಟ್ಟು ಹೊರಗಡೆ ಕರೆದುಕೊಂಡು ಬಂದ.

ಪ್ರಕರಣ ಮೂರು

ಹುಲಿಯೂರನ ವಯಸ್ಸಿನವನೆ ಆದ ಬಂದೋಡಿನಾಯ್ಕ ಅವನ ಮನೆಯಿಂದ ಹತ್ತನೇ ಮನೆಯಲ್ಲಿ ವಾಸವಾಗಿದ್ದ. ಆ ಕಾಲದಲ್ಲಿ ಅವನ ತಂದೆ ಸುಣ್ಣ ಮಾರುತ್ತಿದ್ದ. ಸುಣ್ಣ ಹೇರುವುದಕ್ಕೆ ಒಂದು ಹೆಣ್ಣು ಕತ್ತೆಯನ್ನು ಇಟ್ಕೊಂಡಿದ್ದ. ಬಂದೋಡಿ ಹಿರಿಯಣ್ಣ ಬಂಗ್ಲಾ ಕತ್ತೆ ಜೊತೆ ಸಂಸಾರ ಮಾಡಿದ್ದ ಅಂತ ಮಂದಿ ಮಾತಾಡಿಕೊಳ್ತಿದ್ರೆ ಅವನ ಇನ್ನೊಬ್ಬ ಅಣ್ಣ ಕಪಾಳೊ ಎಮ್ಮೆ ಜೊತೆಗೆ ಸಂಸಾರ ಮಾಡಿದ್ದ ಅಂತೇಳಿ ತಾಂಡದಾಗೆಲ್ಲಾ ಗುಲ್ಲೇಗುಲ್ಲು. ಬಂದೋಡಿ ಅವರಿಗಿಂತ ಭಿನ್ನವಾಗಿರಲಿಲ್ಲಾ. ಅವನು ಕೋಳಿಯನ್ನೆ ಬಿಟ್ಟಿಲ್ಲ ಅಂತ ಮಾತಾಡಿಕೊಳ್ಳುತ್ತಿದ್ದರು. ಅವನು ಹುಲಿಯೂರನ ಕೂಡ ನಾಕೆ ದಿನ ಪಾಟಿ ತಗೊಂಡು ಅ ಆ ಇ ಈ ಕಲ್ತಿದ್ದ. ಮುಂದೆ ಪಾಂಡಪ್ಪ ಮಾಸ್ತ್ರರ ಬಂದ ಮೇಲೆ ಆತನ ಹೊಡ್ತಾ, ಸಿಟ್ಟು ತಡಿಯಾಕ ಆಗದೆ ಅರ್ಧ ಸಾಲಿ ಹುಡುಗರು ಕೂಲಿನೆ ಪಾಡು ಅಂತ ಬಿಟ್ಟು ಓಡಿದ್ದರು. ಆಗ ಸಾಲಿ ಬಿಟ್ಟವರಲ್ಲಿ ಬಂದೋಡಿನೂ ಒಬ್ಬನು. ಮನೆ ತುಂಬ ಮಕ್ಕಳು ಅವನ ತಂದೆ ಕೆಲವರಿಗೆ ಮದುವೆ ಮಾಡಿಸಿದ ಕೆಲವರು ಯಾವಳನ್ನೊ ಓಡಿಸಿಕೊಂಡು ಬಂದರು, ಯಾರೊ ಒಂದಿಬ್ಬರು ಹುಡುಗಿಯರು, ಯಾರ್ಯಾರನ್ನೋ ತಕ್ಕೊಂಡು ಓಡಿಹೋಗಿದ್ದರು. ಬಂದೋಡಿ ವಯಸ್ಸಿಗೆ ಬಂದರು ಅವನ ತಂದೆ ತಾಯಿ ಮದುವೆ ಸುದ್ದಿ ತಗಿಯದ್ದಕ್ಕೆ ಪಕ್ಕದ ಊರಿನ ಪರಂಗಿನಾಯ್ಕನ ಮಗಳು ಹಾಕಲಿಬಾಯಿಯನ್ನ ಓಡಿಸಿಕೊಂಡು ಹೋಗಿದ್ದ. ತಾಂಡದ ತುಂಬ ಬಂದೇಡಿ ಹಾಕಲಿಯನ್ನು ಓಡಿಸಿಕೊಂಡು ಹೋದ

ಎನ್ನುವ ವಿಷಯವನ್ನ ಮಂದಿ ಮರೆತಿರಲಿಲ್ಲಾ. ಕರ್‍ಕೊಂಡು ತಾಂಡಕ್ಕೆ ಬಂದಿದ್ದ, ಪರಂಗಿನೂ, ಮದುವೆ ಮಾಡಿಕೊಡುವಷ್ಟು ಸ್ಥಿತಿವಂತನಾಗಿರದೆ ಇದಿದ್ದರಿಂದ ಹೋದ್ರಹೋಗಲಿ ಬಿಡು ಅಂತೇಳಿ ಸುಮ್ಮನಾಗಿದ್ದ ಬಂದೋಡಿನಾಯ್ಕನ ತಂದೆ. ಆದದ್ದು ಆಯ್ತು ಬಿಡು ಅಂತೇಳಿ ಖರ್ಚಿಲ್ಲದ ಮದುವೆಯನ್ನ ಸಿಂಧು ಮಾಡಿಕೊಂಡು ಹಾಕಲಿಬಾಯಿಯನ್ನು ಸೊಸೆ ಅಂತೇಳಿ ಮನೆ ತುಂಬಿಕೊಂಡಿದ್ದ. ಕಾಲಕಳದಂತೆ ತಾಂಡದ ಮಂದೀನು ಮರೆತರು ಇವರಿಗೂ ಮೇಲಿಂದ ಮೇಲೆ ಸುರದ್ರೂಪಿ ಹೆಣ್ಣು ಹುಡುಗಿಯರು ಹುಟ್ಟಿದ್ದರು. ಅವರಲ್ಲಿ ದೊಡ್ಡವಳೆ ಸಿಂಗಾರಿ. ದಿನೆದಿನೆ ಕಸುಕಿತ್ತು ಅಂದವಾಗಿ ಬೆಳೆಯುತ್ತಿದ್ದ ಸಿಂಗಾರಿ ಎಂಟೋಂಭತ್ತು ವರ್ಷದವಳಿದ್ದಾಗಲೆ ಕಾಫಿತೋಟಕ್ಕೆ ಕರ್‍ಕೊಂಡು ಹೋಗಿದ್ದ ಬಂದೋಡಿ ಹಾಕಲಿಗೆ ಮಲೆನಾಡಿನ ಮತ್ತೊಂದು ಕುಟುಂಬ ಅವರ ತೋಟಕ್ಕೆ ಬಂದಿತ್ತು. ಹುಡುಗಿಯ ಚೆಂದ ನೋಡಿ "ಬಂದೋಡಿ ಅಣ್ಣಯ್ಯ, ಹೆಂಗೂ ನೀನು ಚವ್ಹಾಣ್ ಪಂಗಡದವನು, ನಾನು ರಾಠೋಡ್ ಪಂಗಡಕ್ಕೆ ಸೇರಿದವನು, ಯಾಕೆ ನಾವು ಬೀಗರಾಗಬಾರದು?" ಸಾಂಕೋಲನ ತಾಯಿ ಲಕುಮಿಬಾಯಿ ಪ್ರಸ್ತಾಪಿಸಿದ್ದಳು. ಆಗ ಸಾಂಕೋಲನು ಹೆಚ್ಚು ಕಮ್ಮಿ ಸಿಂಗಾರಿ ವಯಸ್ಸಿನವನು. "ಅಯ್ಯೊ, ಲಕುಮಿಬಾಯಿ, ಇದಕ್ಕಿಂತ ದೊಡ್ಡ ಭಾಗ್ಯ ಯಾವುದೈತೆ? ಆ ದೈವಿಚ್ಛೆ, ಆತನಿಗೆ ಒಪ್ಪಿಗೆಯಾದರೆ ಹಾಗೆ ಆಗವಲ್ದು ಬಿಡು ತಾಯಿ ಯಾಕೆ ತಲಿ ಕೆಡಿಸ್ಕೊಂತಿಯಾ. ಬದುಕಿದ್ರೆ ಮುಂದೆ ನೋಡೋಣ" ಅಂದು ತಾಂಡಕ್ಕೆ ಬಂದಿದ್ದ ಬಂದೋಡಿ. ಪ್ರತಿವರ್ಷ ದೀಪಾವಳಿ ಮುಂದೆ ಜಾನೆಖಾನಕ್ಕೆ ಶಿವನಾಗನಾಯ್ಕ ಹಿಂದೆ ಕಾಫಿತೋಟಕ್ಕೆ ಹೋಗಿ ದುಡದು ತಮ್ಮ ಮನೆಯ ಪಕ್ಕದಲ್ಲಿದ್ದ ನೀರು ಹೋಗುವ ಜಾಗದಲ್ಲಿ ಮನೆ ಕಟ್ಟಿಕೊಂಡ. ಲಕುಮಿಬಾಯಿ ಮತ್ತೆ ಅವಳ ಗಂಡ ಜೀವ್ಲನಾಯ್ಕ ಅವರು ಹೋದಾಗಲೆಲ್ಲ ಅವರ ಪಕ್ಕದಲ್ಲೇ ಜಾಗ ಮಾಡಿಕೊಂಡು ಇರುತ್ತಿದ್ದರು. ಅದರ ಫಲವೆಂಬಂತೆ ಹುಡುಗಿ ಸಿಂಗಾರಿ ಮೈನೆರತು ಮೂರೇ ತಿಂಗಳಲ್ಲಿ ಮದುವೆ ಮಾತುಕತೆ ಮುಗಿಸಿ ಮದುವೆ ತಯಾರಿಗೆ ಬಂದೋಡಿ ಅನುಮಾನ ವ್ಯಕ್ತಪಡಿಸಿದ್ದಕ್ಕೆ ಜೀವ್ಲ ನಾಯ್ಕನೆ ಮುಂದೆ ಬಂದು ಪೂರ ಮದುವೆ ಖರ್ಚು, ಬೀಗರೂಟಕ್ಕೆ ಎರಡು ಟಗರು ಕೊಡಿಸುವುದಾಗಿ ಒಪ್ಪಿಕೊಂಡ ಮೇಲೆ ದಾವಣಗೇರಿ ಚೆನ್ನಬಸಪ್ಪನ ಅಂಗಡಿಯಲ್ಲಿ ಹುಡುಗಿಗೆ ಮದುವೆ ಸೀರೆ ತರೋದಕ್ಕೆ ತಾಂಡದ ನಾಯಕ, ಡಾವೊನ ಕರ್‍ಕೊಂಡು ಹೋಗಿದ್ದ.

ಸಿಂಗಾರಿಗೆ ತಕ್ಕ ಗಂಡನಾಗಿದ್ದ ಸಾಂಕೋಲ. ಮಲೆನಾಡಿನ ಮುಟಗಳ್ಳಿ ತಾಂಡದ ವಾಸಿಯಾಗಿದ್ದ ಅವನಿಗೆ ಒಂದೆರಡು ಎಕ್ಕರೆ ಜಮೀನು ಇತ್ತು. ಒಂದೆ ವರ್ಷಕ್ಕೆ ಒಂದು ಗಂಡು ಎರಡನೇ ವರ್ಷಕ್ಕೆ ಹೆಣ್ಣು ಮಗುವಾಗಿತ್ತು. ಮತ್ತೊಂದು ಗಂಡು ಮಗುವಾಗಲಿ ಅಂತೇಳಿ ಜೀವ್ಲ ಲಕುಮಿ ಜುಕ್ಕ್ ಜುಲಮಿ ಮಾಡಿದ್ದಕ್ಕೆ ಆಪರೇಷನ್ ಮಾಡಿಸಿದೆಬಿಟ್ಟಿದ್ದ. ಆದರೆ ಮೂರನೇಯದು ಹೆಣ್ಣಾದರೆ ಅನುಮಾನಗಳಿದ್ದವು.

ಹುಟ್ಟಿದ ಮಗು ಗಂಡಾಗಿದ್ದರಿಂದ ಸರ್ಕಾರಿ ಆಸ್ಪತ್ರೆಯಲ್ಲಿ ಆಪರೇಷನ್ ಮಾಡಿಸಿದ್ದ ಸಾಂಕೋಲ. ಈ ಎಲ್ಲಾ ಸಂಸಾರ ಖರ್ಚು ಹೆಚ್ಚಾಗುತ್ತಿರುವಾಗಲೆ ಜೀವ್ಲ ಅದ್ಯಾವೊದೋ ಕಾಯಿಲೆಯಿಂದ ಹಾಸಿಗೆ ಹಿಡಿದ. ತಂದೆಯನ್ನ ಉಳಿಸಿಕೊಳ್ಳುವುದಕ್ಕೆ ಸಾಲಸೂಲ ಮಾಡಿಕೊಂಡು ಹೆಂಡತಿ ಜೊತೆಗೆ ಜಾನೆಖಾನಕ್ಕೆ ಬಂದಿದ್ದ ಸಾಂಕೋಲ. ಅವನ ಅತ್ತೆ ಮಾವ, ಸೊಸೆಯಂದಿರು, ಅಳಿಯಂದಿರು ಒಂದೇ ಲೈನಿಗೆ ಒಬ್ಬರಪಕ್ಕ ಒಬ್ಬರು ಇರುವಾಗಲೆ ಸಿಂಗಾರಿ ಕಣ್ಣು ಬೇರೆ ಗಂಡಸರ ಕಡೆಗೆ ವಾಲುತ್ತಿರುವುದನ್ನು ಗಮನಿಸಿದ್ದ ಸಾಂಕೋಲ. ಅವಳ ಮೈದಾಹಿಟ್ಟಿನಂತಹ ಬಿಳಿ ತೊಗಲು ಎಷ್ಟೊ ಮಂದಿಯ ನಿಯತ್ತು ಕೆಡಸಿತ್ತು. ಎಷ್ಟೊ ಮಂದಿ ಅವಳನ್ನ ಹಾರಿಸಿಕೊಂಡು ಹೋಗುವ ಯೋಚನೆ ಮಾಡಿ ಅಸಫಲರಾಗಿದ್ದರು. ಅದ್ದೆಂಗೆ ಕೊಂಗ ರೈಟರ್ ಅರ್ಮುಗಂ ಕಣ್ಣಿಗೆ ಬಿದ್ದಳೊ, ಲಂಬಾಣಿ ಹೆಂಗಸರ ಘಾಟುವಾಸನೆಯನ್ನ ಚೆನ್ನಾಗಿ ಅನುಭವಿಸಿದ್ದ ಆರ್ಮುಗಂ ಸಿಂಗಾರಿಯನ್ನ ಬಿಡಲಿಲ್ಲಾ. ಆರ್ಮುಗಂ ಸಹವಾಸದಿಂದ ಸಂತೋಷಗೊಂಡಿದ್ದ ಸಿಂಗಾರಿ ಬೇರೆಯವರಿಗೆ ಧೋಖ ಮಾಡಿದ್ದಳು.

ಅವರೆಲ್ಲ ಹಲ್ಲು ಮಸಿಯುವುದನ್ನ ಬಿಟ್ಟರೆ ಮತ್ತೇನನ್ನು ಮಾಡಲು ಆಗಲಿಲ್ಲಾ. ಆದರೆ ಸಿಂಗಾರಿಯ ಗಂಡ ಸಾಂಕೋಲ ತಡೆಯಲಾಗದ ದುಃಖವನ್ನು ಅವತ್ತು ಭಾನುವಾರ ಸಂತೆಗೆ ಹೋದವನು ಮುಕ್ಕಾರೆ ಕುಡಿದು "ಲೇ ಆರ್ಮುಗಂ, ಕೊಂಗನನಮಗನೆ, ನನ್ನ ಹೆಂಡತಿ ಬೆಕೇನಲೆ ನಿನಗೆ, ಬಡವರ ಹೆಣ್ಣು ಮಕ್ಕಾದ್ರೆ ಏನಂತ ತಿಳಿದಿಯೊ" ಅಂತ ಅವರ ಕ್ವಾಟ್ರಸ್‌ಗೆ ಹೋಗಿ ಆವಾಜ ಹಾಕಿದ್ದ. ಮ್ಯಾನೇಜರ್ ಜೋಸೆಫ್‌ನ ಮೇಲೆ ಅನುಮಾನ ಬಂದಿದ್ದರಿಂದ ಸಾಹುಕಾರ, ಜೋಸೆಫ್‌ನ ಬದಲಿಗೆ ಆರ್ಮುಗಂ ನನ್ನ ಮ್ಯಾನೇಜರ್ ಮಾಡುವುದರಲ್ಲಿದ್ದ. ಅವನಿಗೆ ಈ ವಿಷಯ ತಿಳಿದರೆ ಎಲ್ಲಾ ಎಡವಟ್ಟು ಆಗುವುದೆಂದು ಅಂದುಕೊಂಡವನೆ "ಲೇ ಲಮಾಣ್ಯ, ಎಲ್ಲರ ಮುಂದೆ ಮರ್ಯಾದಿ ತಗಿತಿಯಾ" ಅಂದವನೆ ಕಸುಕಿತ್ತು ಪೈಲ್ವಾನ್‌ನಂತ ಸಾಂಕೋಲಾನನ್ನ ಕಾಫಿ ತೋಟಕ್ಕೆ ಎಳ್ಕೊಂಡು ಹೋಗಿ ಮುಚ್ಚಿಂದ ರುಂಡ ಚಂಡಾಡಿದ್ದ.

* * *

63. ಮಳಾವೊ

ಲಮಾಣಿಗರು ಹಳೆಕಾಲದಿಂದಲೂ ಮಾನ ಮರ್ಯಾದೆಗೆ ಅಂಜುತ್ತಲೆ ಬದುಕಿದವರು. ಆದರೆ ಭಟ್ಟಿಸರಾಯಿ ಕುಡಿದು ಕಾಲ್ಮಾರಿಯಿಂದ ಹೊಡೆದಾಡುವುದು, ಯಾರು ದುರ್ಬಲನಿರುತ್ತಾನೊ ಅವನ ಹೆಂಡತಿಯನ್ನು ಇಟ್ಕೊಳ್ಳುವುದು ಸರ್ವೇಸಾಮಾನ್ಯವಾಗಿದ್ದವು. ಓಡಿಸಿಕೊಂಡು ಹೋಗುವುದು, ಓಡಿಸಿಕೊಂಡು ಬರುವುದು ರೂಢಿಯಲ್ಲಿತ್ತು. ಸಾಲದಕ್ಕೆ ಅಣ್ಣ ಸತ್ತರೆ ಅವನ ಹೆಂಡತಿಯನ್ನು ತಮ್ಮನಿಗೆ ಗುಗರಿ (*ಗುಗರಿ–ತೊಂಡ್ಲ ಹಾಕುವ) ಹಾಕುವ ಶಾಸ್ತ್ರ ಒಂದಿತ್ತು. ಇದು ವಾಲಿ ಸುಗ್ರೀವರ ಕಾಲದಿಂದಲೂ ಚಾಲ್ತಿ ಇರುವುದರಿಂದ ಕೆಲ ಹಿರಿಯರು ನಾವು ವಾಲಿ ಮತ್ತ ಸುಗ್ರೀವನ ವಂಶಸ್ಥರು. ಸುಗ್ರೀವ ಅವನ ಅಣ್ಣ ವಾಲಿ ಹೆಂಡತಿಯನ್ನ ಮದುವೆಯಾಗಿದ್ದನಂತೆ. ಅದೆ ನಮ್ಮಲ್ಲೂ ಮುಂದುವರೆದಿದೆ ಅಂತ ವಾದ ಮಾಡುತ್ತಿದ್ದರು. ಇಂತಹ ನೂರಾರು ನ್ಯಾಯ ಪಂಚಾಯ್ತಿ ತಾಂಡದ ಮಳಾವೊ(*ಮಳಾವೊ–ನ್ಯಾಯ ಪಂಚಾಯ್ತಿ) ದಲ್ಲಿಯೇ ಇತ್ಯರ್ಥವಾಗುತ್ತಿದ್ದವು. ಒಮ್ಮೆ ಹುಲಿಯೂರ, ಕಡಬಗೇರಿಗೆ ಶೇಂಗ ಆರಿಸಲು ಹೋದಾಗ ಅನಾಥನಾದ ಅವನ ಅತ್ತೆಗಂಡ ಗಬರೂನಾಯ್ಕ ಓಡಿಸಿಕೊಂಡು ಬಂದಿದ್ದ ಧಾಸಣಿ(*ಧಾಸಣಿ–ಓಡಿಬಂದವಳು) ವಾಲಿಯ ಮಗ ಜಿಂಗಾಳುನು ಆಟ ಆಡ್ತಾ ಮೈಮರತು ಚಪ್ಪಲಿಯಿಂದ ಹೊಡದಿದ್ದ. ಅದಕ್ಕೆ ನ್ಯಾಯ ಪಂಚಾಯ್ತಿಗೆ ಹಾಕಿದ್ದಳು ಹುಲಿಯೂರನ ಸ್ವಂತ ಅತ್ತೆ ರಾಬಡಿ. ರಾಬಡಿಗೆ ಮಕ್ಕಳಿರದಿದ್ದರೂ ಅಣ್ಣನ ಮೇಲಿನ ಸೇಡಿಗೆ ನ್ಯಾಯ ಪಂಚಾಯ್ತಿಗೆ ಸುಕಾಸುಮ್ಮನೆ ಖರ್ಚು ಮಾಡಿಸಿದ್ದಳು. ಪಂಚಾಯ್ತಿಗೆ ಹೆಸರುವಾಸಿಯಾದ ತೊಪುನಾಯ್ಕನೆ ಅಪರಾಧಿಯಂತೆ ನಾಯಕ, ಡಾವೊ, ಕಾರಬಾರಿಗಳ ಮುಂದೆ ತಲೆತಗ್ಗಿಸಿ ಕುಳಿತಿದ್ದ. ಅವನ ದುಡಿಮೆಯನ್ನ

* **ಮಳಾವೊ–ನ್ಯಾಯ ಪಂಚಾಯ್ತಿ**

* **ಗುಗರಿ–ತೊಂಡ್ಲ ಹಾಕುವ**

* **ಧಾಸಣಿ–ಓಡಿಬಂದವಳು**

ಸಹಿಸಲಾಗದ ಅವನ ತಮ್ಮಂದಿರಾದ ಹೀರ್‍ಯ, ಜಂಗೀರ, ಬದ್ಯಾ ಬುದಿಯಾರ ಜೊತೆಗೆ ಸೇರಿಕೊಂಡಿದ್ದು ರಾಬಡಿ ಎಲ್ಲೆಲ್ಲಿ ಸಾಧ್ಯವೊ ಅಲ್ಲಲ್ಲಿ ಸಿಗಸಿಹಾಕಿ ಅವನ ದುಡಿಮೆಯನ್ನ ಕಡಿಮೆ ಮಾಡಬೇಕು ಅಂತ ಮೂವರು ಕರಾಮತ್ತು ಮಾಡಿದ್ದೆ ಮಾಡಿದ್ದು.

ಎಲ್ಲರಿಗೂ ಪಂಚಾಯ್ತಿ ಹೇಳುವ ತೊಪು ಅಪರಾಧಿ ಸ್ಥಾನದೊಳಗೆ ಕುಂತಾನಂತ ಹಟ್ಟಿನಾಯ್ಕ ಗೊಬರನಾಯ್ಕನಾಗಲಿ, ಕಾರಭಾರಿ ತಿಪ್ಪನಾಯ್ಕ ಹೆಚ್ಚೇನು ಮಾತಾಡಕ ಹೋಗಲಿಲ್ಲ. ಆದರೆ ಡಾವೊ ಚಂದಿಯಾ ಹೀರ್‍ಯ, ಜಂಗೀರ ಕುಡಿಸಿದ್ದ ಹೆಂಡದ ಬಾಟಲಿಗೆ ಮತ್ತು ರಾಬಡಿ ಕೊಟ್ಟಿದ್ದ ಐದು ರೂಪಾಯಿಗೆ ಗಂಟುಬಿದ್ದ. "ಎಕ್ಕಡ ಅಂದ್ರ ಎಕ್ಕಡಾನೆ, ಅದನ್ನ ಕೈಯಾಗ ಹೀಡದ್ರೆನೆ ಅಪರಾಧ ಅಂತ ನಮ್ಮಮಂದಿ ತಿಳಿತಾರ. ಯಾರಾದರೂ ಅದನ್ನ ಕೈಯಾಗ ಎತ್ಕೊಂಡ್ರೇನೆ ದಂಡ ಹಾಕುವಾಗ ಸಣ್ಣವನಾಗಲಿ ದೊಡ್ಡವನಾಗಲಿ ತಪ್ಪು ತಪ್ಪೇನೆ ಹಾಗಾಗಿ ಅವನಿಗೆ ಜಾತಿಯೊಳಗ ಸೇರಿಸಬೇಕು. ಹೊಡದೊನ ನಾಲಿಗೆ ಸುಟ್ಟು ಜಾತಿಗೆ ಸೇರಿಸಬೇಕು" ಏನೇನೊ ಮಾತಾಡಿದ. ಆದರೆ ಅವನ ಮಾತು ಗಂಭೀರವಾಗಿ ಪರಿಗಣಿಸದೆ ಹಟ್ಟಿನಾಯಕ ಗೋಬರನಾಯ್ಕ "ಲೇ ಡಾವೊ ಚಂದಿಯಾನಾಯ್ಕ ಸುಟ್ರ ಹೋಗಲಿಲ್ಲಾ ಹಳೆ ಚಾಳಿ ಅನ್ನೊ ಹಂಗಾತು. ಅಲ್ಲಪ್ಪ ಆ ಹುಡುಗ ದ್ವೇಷದಿಂದ ಬೇಕಂತ ಚಪ್ಪಲಿಯಿಂದ ಹೊಡದಾನ? ಇಲ್ಲ, ಆಟ ಆಡೋ ಮುಂದ ಮಾತಿಗೆ ಮಾತು ಬೆಳೆದಿರಬೇಕು. ಅವನು ಏನೊ ಅಂದಾನ, ಇವನು ಏನೊ ಅಂದಾನ ಹುಲಿಯೂರ ಕಾಲಗ ಚಪ್ಪಲಿ ಮೆಟ್ಕೊಂಡಾನ ಅನ್ನೊ ಖಬರಿಲ್ಲದೆ ಹೊಡದಾನ, ಅದೂ ಅಲ್ಲದೆ ಅವನ ಮೆಟ್ಟೇನೂ ಚರ್ಮದವಲ್ಲ, ಟೈಯರಿನವು ಏನಪ್ಪ. ಆದರೂ ಕಾಲಾಗ ಮೆಟ್ಟೋದು ಎಕ್ಕಡನೆ ಆದ್ದರಿಂದ ತಪ್ಪು ಸಂಭವಿಸಿದೆ. ನೋಡು ತೊಪು ನಾಳೆ ಮಂಗಳವಾರ ಒಂದ ಪಾಲು ಕಳ್ಳು ಪಚ್ಚಿ ತರಸು, ಒಂದು ಜೊತೆ ಕುರಿದ ತಲಿಕಾಲು ತರಿಸಿ, ಸಳೋಯಿ ಒಂದ ಕಡೀಗ, ತಲಿಕಾಲು ಒಂದಕಡಿಗ ಮಾಡ್ಸಿ ಹೆಂಡ ತರಿಸಿ ದೈವದವರಿಗೆ ಕುಡಿಸಿ ಕುಲದಾಗ ಸೇರ್‍ಸು ಹೋಗತ್ಲಗೆ" ಗೋಬರನಾಯ್ಕ ಶಾಲು ಕೊಡವಿ ಮೇಲೆದ್ದ.

ಪ್ರತಿಯೊಬ್ಬರ ದೌರ್ಬಲ್ಯ ತೊಪುನಾಯ್ಕನಿಗೆ ಗೊತ್ತಿರುವುದರಿಂದ ಅವನ ಮೇಲೆ ಆರ್ಥಿಕ ಹೊರೆ ಬೀಳಲಿಲ್ಲಾ. ಇಲ್ಲಿಕ್ರ ಮಕ್ಕಳು ಮೂವರು ಸೇರಿ ಬಡವರ ಮನಿ ಅಗಳಿ ತಗಿಯೋರು. ನಲವತ್ತು ರೂಪಾಯಿ ದಂಡ ತುಂಬಿದ್ದ, ಹೆಂಡಕ್ಕೆ ಇಪ್ಪತ್ತು ಮಂಗಳವಾರದ ಹರಿಹರ ಸಂತಿಯಿಂದ ಕುರಿಕಳ್ಳು ಪಚ್ಚಿ, ತಲಿಕಾಲು ತರಿಸಿ ಅವತ್ತೆ ಸಂಜೆ ಇಬ್ಬರು ಹುಡುಗರನ್ನು ಕರದು ಸಾರು, ಸಳೋಯಿ ಆದ ಮೇಲೆ ಎಡೆ ಮಾಡಿ ಚರಗಿಯೊಳಗಿನ ನೀರು ಚಿಮುಕಿಸಿ, ಶುದ್ಧಿ ಮಾಡಿ ಇಬ್ಬರಿಗೂ ಎಡಿಮಾಡಿದ ಮಾಂಸದ ಸಾರು ತಿನ್ನಿಸಿ ಮನಿಗೆ ಕಳುಹಿಸಿದ ಮೇಲೆ ಊರ ದೈವದವರು ಸೇರಿ ಸರಿಯಾಗಿ ಹೆಂಡ ಕುಡಿದು ಮಾಂಸದ ಭೋಜನ ಮಾಡಿದ ಮೇಲೆ ಎಲ್ಲಾ

ಮುಗೀತು. ಇದು ಅವರು ರಾಜಸ್ಥಾನ ಬಿಟ್ಟಾಗಿನಿಂದಲೂ ನಡೆದುಬಂದ ಒಂದೇ ಪದ್ಧತಿ. ಅದು ಕುರಿ ಕಡಿಯುವುದರಿಂದ ಮಾತ್ರ ಮುಗಿತಿತ್ತು. ಆದರೆ ಕಾಲ ಬದಲಾದಂತೆ ಪ್ರಮಾಣ ಕಡಿಮೆಯಾಗಿತ್ತು. ಏಕೆಂದರೆ ನಡುವೆ ಹಟ್ಟಿನಾಯ್ಕ ನೂರು ರೂಪಾಯಿ ಮೂರ್‍ಕಾಕು ಬಾಟಲು ಹೆಂಡ ಕುಡಿದು ಒಬ್ಬನ ಪರವಾಗಿ ಪಂಚಾಯ್ತಿ ತಿರುಗಿಸಿಬಿಡುತ್ತಿದ್ದ. ಅಪರಾಧಿಗೆ ತಕ್ಕ ಶಿಕ್ಷೆ ಆಗದೆ ಹೋಗುತ್ತಿತ್ತು. ಹಾಗಾಗಿ ಕಾಲ ಬದಲಾದಂತೆ ಮಳಾವೂ ತನ್ನ ಪ್ರಾಮುಖ್ಯತೆ ಕಳೆದುಕೊಂಡಿತ್ತು.

ಹಟ್ಟಿನಾಯ್ಕ ಗೋಬರನಾಯ್ಕ ಸತ್ತ ಮೇಲೆ ಅವನ ಮಗ ಶಕುನಿ ನಾಯ್ಕನಿಗೆ ಅವನ ಪಟಗ ಕೊಟ್ಟು ಇಡೀ ತಾಂಡದ ಹಿರಿಯನ ಜವಾಬ್ದಾರಿ ಹೊರಿಸಲಾಯಿತು. ಶಕುನಿ, ಮಹಾಭಾರತದ ಶಕುನಿಯಂತೆ ಖಚಡ ಬುದ್ಧಿವನಿದ್ದ. ಅವನಿಗೆ ನಾಯಕಿ ಬಂದ ಮೇಲೆ ಸಣ್ಣೋರು, ದೊಡ್ಡೋರು ಅನ್ನೋದನ್ನೆ ಮರತುಬಿಟ್ಟಿದ. ತಾಂಡದಲ್ಲಿ ಚವ್ಹಾಣ್ ಪಂಗಡಕ್ಕೆ ಸೇರಿದ ಜಾಟೋತ್, ಮೂಡ್, ವಡ್ತ್ಯಾ, ವಿಸಳಾವತ್, ಕೊರ್‍ರಾ, ಬಾಣ್ಣೋತ್ ಮುಂತಾದವರು ಇದ್ದರು. ರಾಠೋಡ್ ಪಂಗಡದಲ್ಲಿ, ಕರಮ್‌ತೋಟ್, ಖೋಲಾ, ರಾಮವತ್, ಖೇತಾವತ್ ಮುಂತಾದ ಅನೇಕರಿದ್ದರು. ತನ್ನ ಕುಲಸ್ಥರಾದ ಖೋಲದವರಿಗೆ ಪ್ರಾಮುಖ್ಯತೆ ಕೊಟ್ಟಿದ್ದ. ಅವರು ಏನೆ ಮಾಡಿದರು ದಂಡ ಬೀಳದಂಗೆ ನೋಡಿಕೊಳ್ಳುತ್ತಿದ್ದ. ಬೇರೆ ಪಂಗಡದವರು ಸಣ್ಣತಪ್ಪು ಮಾಡಿದರು ಸರಿಯಾಗಿ ದಂಡ ಹಾಕಿ ಮೇಲೇಳದಂತೆ ಮಾಡಿಬಿಡುತ್ತಿದ್ದ. ಅನ್ಯಾಯಕ್ಕೊಳಪಟ್ಟವರು "ಅಲ್ಲ ತೊಪು ಭೀಯಾ, ನಿಮ್ಮಂತಹ ಸತ್ಯವಂತರು ನೀತಿವಂತರು ಮಳಾವೊದಲ್ಲಿದ್ದರೂ ಪರಿಸ್ಥಿತಿ ಹೇಗಿತ್ತೊ ಹಾಗೆ ಇದೆ. ಸೂಳಿಮಗ ಹಟ್ಟಿನಾಯ್ಕ ನಮ್ಮ ಮನಿತನಾನೆ ತಗದು ಬಿಟ್ಟ. ಈ ಅನ್ಯಾಯಕ್ಕೆ ಕೊನೆ ಅನ್ನೋದೆ ಇಲ್ವಾ" ತಮ್ಮ ಗೋಳನ್ನ ತೊಪುನಾಯ್ಕನ ಹತ್ತಿರ ಬಂದು ಮಂದಿ ಹೇಳಿಕೊಂಡು ನೋವನ್ನ ಕಮ್ಮಿ ಮಾಡಿಕೊಳ್ಳುವ ಪ್ರಯತ್ನ ಮಾಡುತ್ತಿದ್ದರು. ತೊಪು ಒಬ್ಬನೆ ಎಷ್ಟು ನಿಷ್ಠುರನಾಗೋದು ಅಂತ ಕೇಳಿ ಕೇಳಿ ಸಾಕಾಗಿ ಸುಮ್ಮನಾಗಿದ್ದ. ಹಟ್ಟಿನಾಯ್ಕ ಶಕುನಿಯ ಜೊತೆಗೆ ಅವರದೆ ಪಂಗಡದವನಾದ ಸಾಮಿನಾಯ್ಕ ಅವನ ಅತ್ತೆ ಗಂಡ ಕಾರಭಾರಿ ತಿಪ್ಪನಾಯ್ಕ ತೊಪು ಏನಾದರು ನ್ಯಾಯವಾಗಿ ಮಾತಾಡೋದಕ್ಕೆ ಸುರು ಮಾಡಿದ್ದೆ ಆದ್ರೆ ಅವನ ಮಾತುಗಳು ನಡೆಯದಂತೆ ಅಡ್ಡ ಮಾತನಾಡಿ ಕೆಡಿಸುವ ಪರಿಪಾಠ ಇಟ್ಕೊಂಡಿದ್ದರು. ಅದಕ್ಕೆ ಅನ್ಯಾಯಕ್ಕೊಳಗಾದವನು ಯಾವತ್ತಾರು ಒಂದು ದಿನ ಈ ಮೂವರಿಗೂ ಕಾಲ್ಮಾರಿ ಬಿಚ್ಚಿಹೊಡದರೆ ಬುದ್ದಿಬರುತ್ತೆ, ಆ ಕಾಲ ಬರೋ ಮಟಾನು ಕಾಯಬೇಕು ಅಂತ ಸುಮ್ಮನಾಗಿದ್ದ ತೊಪು.

ತೊಪುನಾಯ್ಕನ ಮಾತು ದೇವರು ಕೇಳಿಸಿಕೊಂಡನೋ ಏನೋ, ಶಕುನಿ ಮೂವರು ಹೆಂಡಿರಕಾಟ ತಡಿಯಲಾರದೆ ಹೆಂಡ, ಸರಾಯಿ, ಬ್ರಾಂದಿ ಕುಡಿದು ಸತ್ತುಹೋಗಿದ್ದ. ಅವನ ದಾಯಾದಿಗಳು ಯಾರು ನಾಯಕ ಸ್ಥಾನಕ್ಕೆ ಪೈಪೋಟಿ

ಮಾಡಲಿಲ್ಲಾ. ಅವನ ಮೊದಲನೆ ಹೆಂಡತಿಯ ಮಗ ಮಕೋಡಿ ನಾಯ್ಕನಿಗೆ ಸಣ್ಣ ವಯಸ್ಸಿನಲ್ಲೇ ನಾಯಕನ ಜವಾಬ್ದಾರಿ ಹೊರಿಸಿ ಅವನ ಅಜ್ಜನ ಪಟಗ ಕಟ್ಟಿದ್ದರು. ಅಷ್ಟೊತ್ತಿಗಾಗಲೇ ತಾಂಡದ ತುಂಬ ಶಾಣ್ಯ ಮಂದಿ ತುಂಬಿಕೊಂಡಿದ್ದರು. ನೀ ಅಂದ್ರೆ ನಿಮ್ಮಪ್ಪ ಅಂತಿದ್ರು ಮಕೋಡಿ ಅನುಭವ ಸಾಲದೆ ಅವನ ದೊಡ್ಡಪ್ಪ ಗಾಂಟಾಳಿನಾಯ್ಕನ ಮಾತಿನಂತೆ ಕುಣಿಯುತ್ತಿದ್ದ. ಗಾಂಟಾಳಿ ಶಕುನಿಯ ದೊಡಪ್ಪನ ಮೂರನೆ ಹೆಂಡತಿ ಮಗ. ಗಾಂಟಾಳಿ ಚಿಕ್ಕವನಿರುವಾಗಲೇ ಅವನ ತಾಯಿ ತೀರಿಹೋದಳು. ಅವರಿವರ ಹತ್ತಿರ ತಿಂದುಂಡು ಬೆಳೆದಿದ್ದ ಗಾಂಟಾಳಿ ಮಾತು ಕಮ್ಮಿ, ಆದರೆ ಸಿಕ್ಕರೆ ಹೊರಗ ಬರದಂತ ಮನೆ ಹಾಳು ಮಾತುಗಳನ್ನ ಮಾತಾಡುತ್ತಿದ್ದ. ಇನ್ನ ಮಕೋಡಿ ಇವನ ಮುಖವಾಣಿಯಾಗಿ ಒಂದೆರಡು ಪಂಚಾಯ್ತಿಯಲ್ಲಿ "ಅದೇನು? ಅದೆಂಗಾಗುತ್ತೆ?" ಅಂತ ಮಾತಾಡಿದ ಹಿರಿಯರ ವಿರೋಧಿಸಿದ. ಯಾರೊ ಹತ್ನೆ ಕ್ಲಾಸು ಓದಿಕೊಂಡು ತಾಂಡ ಸೇರಿದವನು "ಲೇ ಹಟ್ಟಿನಾಯ್ಕ ಅಯೋಗ್ಯ ನನಮಗನೆ ನಿಮ್ಮಂತಹವರು ಹಟ್ಟಿನಾಯಕರಾಗಿದ್ದರಿಂದ ಕಾಣುತ್ತೆ ತಾಂಡಗಳು ಉದ್ದಾರನೆ ಆಗಿಲ್ಲ. ಬರಿ ತಿನೋದು, ಕುಡಿಯೋದು, ತಲಿ ಹಿಡಿಯೋದು ಇವೆ ಆದವು ನೋಡು. ಯಾವ ತಾಂಡನೂ ನೆಟ್ಟಗೆ ಉದ್ಧಾರ ಆಗಿಲ್ಲ, ನೆಟ್ಟಗೆ ಮಾತಾಡು ಇಲ್ಲ ಆಗಲ್ಲ ಅಂತ ಒಪ್ಪಿಕೊಂಡು ಜಾಗ ಖಾಲಿಮಾಡು" ಜೋರಾಗಿಯೇ ಮಾತಾಡಿದ್ದ. "ಎಯ್ ಮಂದಿ ಎಲ್ಲದಕ್ಕೂ ತಯಾರದರಪ್ಪ. ದೊಡಮ್ಮ ಏನಬೆ ನಾನೇನೊ ಹೇಳಾಕ ಹೋದೆ ಮತ್ತೊಬ್ಬ ನನ್ನ ಮಾತಿಗೆ ವಿರೋಧ ಮಾಡಿ ನಾಯಕ ಪದವಿ ಬಿಡು ಅಂತ ಧಮಕಿ ಕೊಟ್ಟ" ಧ್ವನಿ ತಗ್ಗಿಸಿ ಮಾತಾಡಿದ. "ಯಾವನೋ ಅವನು ನನ್ನ ಹಾಟಗಳ್ಳ. ಅವನ ಔಸಡಗ, ಅವನ ಕದಕಟ್ಲಿ, ಅವನೇನು ಕಿತ್ಕೊಳ್ತಾನ, ಬಾ ಅನ್ನು ಆ ಬೇವರ್ಸಿಗೆ, ಇದು ತಲೆ ತಲಾಂತರದಿಂದ ಬಂದಿರೋದು, ಕಸ್ಕೊಳೋದಕ್ಕೇನು ಶುಂಠಿಪೆಪ್ಪರಮೆಂಟ?" ಅರ್ಧ ಊರು ಕೇಳುವಂತೆ ಬಾಯಿ ಮಾಡಿದಳು. ಅವಳ ಮಾತುಗಳು ಯಾರ ಮೇಲು ಪ್ರಭಾವ ಬೀರಿದಂತೆ ಕಾಣಲಿಲ್ಲ. ಕಾಲಬಹಳ ಮುಂದೆ ಬಂದಿದೆ, ಹಿಂದೆ ಅವನೆ ನ್ಯಾಯಾಧೀಶ. ಅವನು ಹೇಳಿದ್ದೆ ವೇದವಾಕ್ಯ. ಮಂದೀನೂ ಹಂಗೆ ನಂಬಿದರು. ನಾಯಕನ ಮಾತಿಗೆ ಒಂದು ತೂಕವಿತ್ತು. ನಾಯಕರಾದರೂ ಸತ್ಯವನ್ನು ಮಾತನಾಡುವುದನ್ನು ರೂಢಿ ಮಾಡಿಕೊಂಡಿದ್ದ. ನ್ಯಾಯ ನ್ಯಾಯನೆ, ಹೆಂಡತಿಗೊಂದು, ಮಕ್ಕಳಿಗೊಂದು ಮಾಡದೆ ಯಾವುದು ಸರಿಯೋ ಅದನ್ನ ಅನುಸರಿಸುತ್ತಿದ್ದರು. ಕಾರಬಾರಿ, ಡಾವೊ ನಾಯಕನಿಗೆ ಗೌರವ ಕೊಡುತ್ತಿದ್ದರು.

ಕಾಲ ಬದಲಾತು, ಮಂದಿ ಬದಲಾದರು ಸನ್ನಿವೇಶಗಳು ಬದಲಾಗುತ್ತಿದ್ದಂತೆ ಆಚಾರ, ವಿಚಾರಗಳು, ನೀತಿ ನಿಯಮಗಳು, ಮಾತಿನ ವರಸೆ ಸಂಪೂರ್ಣ ಬದಲಾವಣೆಗೊಂಡಿದ್ದವು. ಮಂದಿ ನಂಬಿಕೆಯನ್ನ ಕಳೆದುಕೊಳ್ಳಲು ಮೂಲಕಾರಣ ಮೂವರು ಕರಪ್ಟ್ ಆಗಿಹೋಗಿದ್ದರು, ಪಕ್ಷಪಾತ ಮಾಡುವುದು, ಬೇಕಾದವರಿಗೆ

ಒಂದು ರೀತಿಯ ದಂಡ, ಬೇಡವಾದವರಿಗೆ ಮತ್ತೊಂದು ರೀತಿಯ ದಂಡ ವಸೂಲಿ ಮಾಡುವುದು ಆಚರಣೆಗೆ ಬಂದವು. ಯಾರಿಗೆ ಬೆಂಬಲವಿಲ್ಲವೋ ಅವರಿಗೆ ಹಾಕ್ಕೊಂಡು ಜಡಿದು ಬಿಡುತ್ತಿದ್ದರು. ಅವನು ಮತ್ತೆ ಯಾವತ್ತು ಮೇಲೇಳಬಾರದು ಹಂಗೆ ದಂಡ ಹಾಕಿ ಮನೆ ಮುರಿಯುವ ಕೆಲಸ ಮಾಡಿದ್ದಕ್ಕೆ ಮಂದಿ ಪರ್ಯಾಯವಾಗಿ ಆಲೋಚಿಸತೊಡಗಿದರು. ಒಂದಿಷ್ಟು ಪ್ರಕರಣಗಳು ನ್ಯಾಯ ಪಂಚಾಯ್ತಿ ಬೇಡ ಅಂತೇಳಿಯ ನೇರವಾಗಿ ಪೋಲೀಸರ ಹತ್ತಿರ ಹೋದವು. ತಾಂಡದ ಮಳಾವಿನಲ್ಲಿ ನಾಯಕನ ಮಾತು ಕೇಳಬೇಕು ಡಾವೊ, ಕಾರಬಾರಿ ಅದೇನು ಮಾತಾಡ್ತಿವಿ ಅಂತ ತಿಳಿಯದೆ ಏನೇನೊ ಖಾಲಿಪಿಲಿ ಮಾತಾಡಿ ಕೇಳುವವರ ಮನಸ್ಥಿತಿಯನ್ನು ಹಾಳು ಗೆಡವಿದ್ದರು. ನ್ಯಾಯ ಕೇಳಿ ಬಂದವರನ್ನು ನಗೆ ಪಾಟಲಿಗೆ ಈಡು ಮಾಡಿದ್ದರು. ಇಲ್ಲಿ ಮಾನಸಿಕ ಹಿಂಸೆ ಅನುಭವಿಸಿ, ಕಾಸನ್ನೂ ಕಳೆದುಕೊಂಡು ತಮ್ಮ ದೊಡ್ಡಸ್ಥಿಕೆ ತೋರಿಸುವ ಇವರಿಗಿಂತ ನೂರೊ ಇನ್ನೂರೋ ಬಿಸಾಕಿದರೆ ಹಾಲಿಂದು ಹಾಲಿಗೆ ನೀರಿಂದು ನೀರಿಗೆ ಅನ್ನೊ ಹಂಗೆ ಆಗಿಬಿಡುತ್ತಲ್ಲ. ಮಂದಿ ಮಳಾವೊದ ಕಡೆಗೆ ತಿರುಗಿಯೂ ನೋಡದಂಗಾಗಿದ್ದರು. ಆದರೆ ಅವರನ್ನ ಹಬ್ಬ ಹರಿದಿನಗಳಲ್ಲಿ ಹಂಚಿಕೆ ಎಲೆಕ್ಷನ್ ಸಮಯದಲ್ಲಿ ದುಡ್ಡು ಕಾಸು ಕೊಡುವುದನ್ನ ಇಸ್ಕೊಳಾಕ ಮಜೌಮಾಡಾಕ ಸಭೆಗಳು ಸೇರಿಸುವುದಕ್ಕೆ ಮುಂದೆ ಬಿಟ್ಟಿದ್ದರು. ಅಲ್ಲಿಯೂ ನೂರು ಮಂದಿ ಅರ್ಥಂಬರ್ಥ ಓದಿದವರು ತಾವೆ ದೊಡ್ಡ ಪಂಡಿತರು ಅಂದ್ಕೊಂಡಿರುವಾಗ ಯಾವನದು ನಡಿಯದಾಗಿತ್ತು. ನಾಯಕ ಮಾತಾಡಾಕ ಹೆದರಿದ್ದ. "ನೀವೆ ದೈವ ಅದಿರಲಪ್ಪ, ನೀವು ಹೆಂಗಂತಿರೊ ಹಾಂಗ ಆಗವಲ್ಲದ್ಯಾಕೆ" ಅಂತ ದೈವದ ಮೇಲೆ ಹಾಕಿ ಹಿಂದೆ ಸರಿಯತೊಡಗಿದ. ತಾಂಡದಲ್ಲಿ ಏನಾದರೂ ಮಾಡಬೇಕು ಅಂತ ಆಲೋಚನೆ ಮಾಡಿದರೆ ಅರೆಬರೆ ಓದಿ ಸಾಲಿ ಬಿಟ್ಟವರದ್ದೇ ನೆನಪು ಕಾಡಿತ್ತು ಎಳಪು ಮಕೋಡಿನಾಯ್ಕನಿಗೆ ಅವರು ದುಖಾನ್ ಬಂದ ಮಾಡಿಸಿದ್ರು.

ಮಳಾವೊ ಅಂದ್ರೆ ಸುತ್ತ ತಾಂಡದ ಮಂದಿ ಅಂಜುತ್ತಿದ್ದ ಕಾಲ ಒಂದಿತ್ತು. ಅವಾಗ ಹೆಚ್ಚಾಗಿ ಮನೆ ಬಿಟ್ಟು ಓಡಿಬಂದ ಸೊಸೆ, ಕಿರುಕುಳ ಮಾಡಿ ಗದುಮಿದ್ದ ಸೊಸೆಯಂದಿರ ಕೇಸುಗಳು ಹೆಚ್ಚಾಗಿದ್ದವು. ಒಂದೊಂದು ಸಲ ಎಂಟೆಂಟು ತಾಂಡದ ನಾಯಕರು ಒಂದು ತಾಂಡದಾಗ ಸೇರಿ ಸಮಸ್ಯೆ ಬಗೆಹರಿಸಿದ ಉದಾಹರಣೆಗಳು ಅದಾವ. ಹಟ್ಟಿನಾಯಕ ಒಬ್ಬನೇ ಮಾತಾಡಬೇಕು ಅಂತಿಲ್ಲ, ಮಾತು ಬರೋ ಶಾಣ್ಯ ಯಾರೆ ಮಾತಾಡಿದರೂ ಆತನಿಗೆ ಗೌರವ ಇತ್ತು, ಆ ಮಾತಿಗೆ ಮನ್ನಣೆನೂ ಇತ್ತು. ಎಂಟು ಹತ್ತು ದಿನ ಕುಂತ ನ್ಯಾಯ ಪಂಚಾಯ್ತಿಯನ್ನ ಒಂದೊಂದೆ ಮಾತಿನಲ್ಲಿ ಪರಿಹಾರ ನೀಡಿ ಹೆಣ್ಣು ಮಕ್ಕಳ ಬಾಳನ್ನ ಕೂಡಿಸಿದ ಬುದ್ಧಿವಂತ ನಾಯಕ, ಕಾರಬಾರಿ, ಡಾವೊ ಇದ್ದರು. ಅವರು ನಿಸ್ವಾರ್ಥಿಗಳಾಗಿದ್ದರು. ನ್ಯಾಯ ಎನ್ನುವುದು ಸತ್ಯದ ಮೇಲೆ ನಿಂತಿದೆ ಎನ್ನುವ ಪರಿಕಲ್ಪನೆ ಆವರಿಸಿತ್ತು. ಕಾಲ ಸರಿಯುತ್ತಿದ್ದಂತೆ

ಮನುಷ್ಯನ ಮನಸ್ಸಿನೊಳಗೆ ಸ್ವಾರ್ಥ, ತಮ್ಮವರಿಗೆ ಒಂದು ಮತ್ತೊಬ್ಬರಿಗೆ ಒಂದು ಎನ್ನುವ ಆಲೋಚನೆಗಳು ಒಳಗೆ ಪ್ರವೇಶ ಮಾಡಿದವು. ಯಾವಾಗ ಅವು ಹೆಚ್ಚಾಗತೊಡಗಿದವೋ ನ್ಯಾಯಕ್ಕೆ ಬೆಲೆ ಇಲ್ಲದಾಯಿತು. ಹೆಂಗೆ ಬೇಕಾದರು ಮಾತಾಡ್ತಿನಿ ಅನ್ನೋರ ಸಂಖ್ಯೆ ಹೆಚ್ಚಾಯ್ತು ವಿನಃ ಹಿಂಗೆ ಮಾತಾಡಬೇಕು ಎನ್ನುವವರ ಸಂಖ್ಯೆ ಬಹಳ ವಿರಳವಾಗಿತ್ತು. ಅದರಲ್ಲಿ ಅಪರೂಪದ ವ್ಯಕ್ತಿ ತೊಪುನಾಯ್ಕ. ತೊಪು ಕುಂತಲ್ಲಿ ನ್ಯಾಯ ಇದೆ ಎಂದು ಮಂದಿ ತಿಳಿಯುತ್ತಿದ್ದರು. ಆದರೆ ಅವನ ಮಾತಿಗೆ ಬೆಂಬಲವೇ ಇಲ್ಲದಾಗಿ, ಕಕ್ಕೋರಬಾಯಿ ನೆಕ್ಕುವ ಬರಿ ಒಂದು ಬಾಟಲಿ ಹೆಂಡಕ್ಕೆ ಸತ್ಯವನ್ನು ತಿರಚುವ, ನಿಜವನ್ನ ಮರೆಮಾಚುವ ಮಂದಿ ಹುಟ್ಟಿಕೊಂಡಿದ್ದರು. ಅವರ ಎದುರಿಗೆ ಮತ್ತೊಬ್ಬರದು ಒಂದು ಸಿಂಗಲ್ ಚಹ ಕುಡಿಯದ ತೊಪುಗೆ ಹಿನ್ನಡೆಯಾಗಿತ್ತು. ಗಾಂಟಾಳೊನಾಯ್ಕನ ಮಾತು ಕೇಳಿಕೊಂಡು ತಾಂಡದ ಬಗ್ಗೆ ಮಾತಾಡೋದಕ್ಕೆ ಆಗುತ್ತ? ಅನ್ನೋ ಪ್ರಶ್ನೆ ಬಹಳ ಮಂದಿಗೆ ಕಾಡಿತ್ತು. ಹಳೆಕಾಲದ ಮಂದಿ ಮಾತಿನ ಎಳೆಯನ್ನು ಹಿಡಿದುಕೊಂಡು ಹೋಗುತ್ತಿದ್ದರು. ಅಲ್ಲಿ ಸತ್ಯಾಸತ್ಯತೆಯ ಪರವಿರೋಧವಾದ ಚರ್ಚೆ ನಡೆಯುತ್ತಿತ್ತು. ಆ ಮಂದಿ ಈಗ ಇಲ್ಲ ಎಲ್ಲರೂ ತಮ್ಮ ಮೂಗಿನ ನೇರಕ್ಕೆ ಆಲೋಚನೆ ಮಾಡುವಂತಹವರೆ ತುಂಬಿಕೊಂಡಿದ್ದರು ತಾಂಡದಲ್ಲಿ.

ಮಾಳವೊದಲ್ಲಿ ಕೇವಲ ಬಂಜಾರರಿಗೆ ಮಾತ್ರ ಸ್ಥಾನವಿತ್ತೆ ವಿನಃ ಭದ್ರನಾಯ್ಕನ ತಾಂಡದಲ್ಲಿ ಒಂದಿಷ್ಟು ಮಂದಿ ಊರ ಮನಿಯವರಿದ್ದಿದ್ದರಿಂದ ಅವರು ಆಗಾಗ ಮಾಳವೊದಲ್ಲಿ ಪ್ರವೇಶ ಪಡೆದಿದ್ದರು ಎನ್ನುವ ಅನುಮಾನಗಳಿದ್ದವು. ಯಾವತ್ತು ಇದನ್ನ ಜಾರಿಗೊಳಿಸಲೇ ಇಲ್ಲ. ಇದು ಕೇವಲ ಬಂಜಾರರ ನ್ಯಾಯ ಪಂಚಾಯ್ತಿ ಆದ್ದರಿಂದ ಯಾರಿಗೂ ಇದ್ರಲ್ಲಿ ಪ್ರವೇಶವಿರಲಿಲ್ಲ. ಆದರೆ ಆ ಕಡಿಮನಿ ಮುನಿಯನ ಮಗಳು ಶಿವಲಿಲಾ, ಲಮಾಣಿ ಮೊಟ್ಲೆನಾಯ್ಕನ ಮಗ ಪಿತಾಂಬರಿಯನ್ನ ಪ್ರೀತಿಸಿದ್ದಳು ಅಂತ ಅವನನ್ನ ಮದುವೆಯಾದಾಗ ಮುನಿಯನಿಗೆ ಅವನ ಕಡಿಯವರೆ ಹೇಳಿ ಜಗಳ ಹಚ್ಚಿದ್ರು, ಸಾಲದ್ದಕ್ಕೆ "ಹೆಂಗ ಮದವಿಯಾಗತಾನೆ ನೋಡೆಬಿಡೋಣ" ಅಂತ ಮಂದಿನ ಸೇರ್ಸಿ ಗಲಾಟೆ ಮಾಡಸಿದ್ದ. "ಎಷ್ಟೋ ಲಮಾಣಿ ಹುಡುಗಿಯರನ್ನು ಊರ ಮನಿಯವರು ಕರ್ಕೊಂಡು ಓಡಿಹೋದರು. ಯಾ ಮಗಾನು ತುಟಿ ಪಿಟಕ್ ಅಂದಿರಲಿಲ್ಲಾ. ಆದ್ರು ಇವಾಗ ಲಮಾಣಿ ಹುಡುಗ ಒಂದೇ ಒಂದು ತೆಪ್ಪು ಮಾಡಿರೋದನ್ನ ಭೂಮಿಗೂ ಆಕಾಶಕ್ಕೂ ಏಕ ಮಾಡ್ತಾರ ಅಂದ್ರೆ ಒಂದಗತಿ ಕಾಣಿಸಲೇಬೇಕು ಅಂದವರೆ ತಪ್ಪು ಸರಿ, ಕೆಟ್ಟದ್ದ ಒಳ್ಳೆಯದು ಆಮೇಲೆ ಯೋಚನೆ ಮಾಡಾನ. ಮದಲು, ನಡದಿರೋ ಘಟನೆಯನ್ನು ತಮಾನಿ ಮಾಡನ" ಅಂತ ನ್ಯಾಯ ಪಂಚಾಯ್ತಿ ಕೂಡಿಸಿ ಮುನಿಯನ್ನ ಕರೆಸಿದರೆ, ಮುನಿಯ, "ಎಯ್ ನಿಮ್ಮದೇನು ದೊಡ್ಡನ್ಯಾಯ ಪಂಚಾಯ್ತಿ. ನಾನು ಸೀದಾ ಸ್ಟೇಷನ್ನಿಗೆ ಹೋಗಿ ಎಷ್ಟು

ಮಂದಿನ ಎಳಸ್ತೀನಿ ನೋಡ್ರಿ, ಇಲ್ಲೇನ ಮಾತಾಡ್ತಿರಿ ನೀವು." ಆರು ಕೊಟ್ರೆ ಅತ್ತಿ ಕಡಿ ಮೂರ ಕೊಟ್ರೆ ಸೊಸೆ ಕಡೆ, ನಿಮ್ಮ ಪಂಚಾಯ್ತಿ ಏನು ಅಂತ ನನಗೆ ಗೊತ್ತಿಲ್ವ ಅಂತ ಮಾಳಾವೊವನ್ನ ಬಹಳ ಕೀಳಾಗಿ ಕಂಡಿದ್ದ ಮುನಿಯ. ಲಮಾಣ್ಯ ಆದ್ರೆನೂ ಯಾವನಾದ್ರೇನು ಖರ್ಚಿಲ್ಲದೆ ಮನೆ ಬಿಟ್ಟು ಹೋಗಿ ಲಗ್ನ ಆದ್ಲಲ್ಲಾ ಅಷ್ಟೇ ಸಾಕು ಅಂದುಕೊಂಡಿದ್ದ. ಆದ್ರೂ ಮಂದಿ ಸಲುವಾಗಿಯಾದರೂ ನಾಟಕ ಮಾಡಬೇಕಲ್ಲ ಅಂತೇಳಿ ನಾಟಕ ಆಡಿದ್ದ.

ಊರ ಮನಿ ವಿಷಯಗಳು ಎಷ್ಟೋ ಚರ್ಚೆಗೆ ಬಂದಾವು ಆದ್ರ ಅವರನ್ನು ಲೆಕ್ಕಕ್ಕೆ ತಗೊಂಡಿರಲಿಲ್ಲಾ. ಯಾಕಂದಿ ಬಂಜಾರ ಸಮುದಾಯ, ಅಂತರ್ಮುಖಿಯಾದ ಸಮಾಜ ಅದಕ್ಕೆ ತಮ್ಮವರನ್ನ ಗೋರ್ ಎಂದೆ ಕರೆಯುವುದು. ಹೊರಗಿನವರನ್ನು ಸಾರಸಗಟಾಗಿ ಕೋರ್ ಅಂತಂದು ಸಂಭೋದಿಸಲಾಗುವುದು. ಹೇಗೆ ತಾನೆ ಅವರನ್ನು ಒಳಪ್ರವೇಶ ಮಾಡಿಕೊಂಡಿತು. ಆದರೆ ಸ್ವಾತಂತ್ರ್ಯ ಸಿಕ್ಕ ನಂತರ ತಮ್ಮ ವ್ಯಾಪಾರ ವ್ಯವಹಾರವನ್ನೆಲ್ಲಾ ಕಳೆದುಕೊಂಡು ಬ್ರಿಟಿಷರ ಗುಲಾಮರಾಗಿ ಅವರೆ ತೋರಿಸಿದ ರಸ್ತೆಗಳು ಅವರಿಗೆ ಮುಚ್ಚಿದ್ದವು. ಹೀಗಾಗಿ ನೆಲೆ ಕಳೆದುಕೊಂಡು ಬದುಕುವುದು ಅನಿವಾರ್ಯವಾಗುತ್ತಿದ್ದಂತೆ ಅಲ್ಪಸ್ವಲ್ಪ ಜನರೊಂದಿಗೆ ಬೆರೆಯುವುದು, ಆರ್ಥಿಕವಾಗಿ ಸಂಪೂರ್ಣ ನೆಲೆಕಚ್ಚಿದ್ದರಿಂದ ಇರಬೇಕು ಅನಿವಾರ್ಯವಾಗಿ ಈ ನೆಲದ ಭಾಷೆ ಕಲಿಯುವುದು ಅನಿವಾರ್ಯವಾಗಿತ್ತು. ಆದರೆ ತಮ್ಮ ಸಂಪ್ರದಾಯವನ್ನ ತಿರುಚುವ ಪ್ರಯತ್ನ ಮಾಡಿರಲಿಲ್ಲ.

ಆದರೆ ಹೊಸನೀರು ಬಂದಾಗ ಹಳೆ ನೀರು ಕೊಚ್ಚಿಹೋಗುವಂತೆ ಯಾವುದೋ ಒಂದೆರಡು ಕೇಸುಗಳಲ್ಲಿ ಪೋಲೀಸರು ತಾಂಡದೊಳಗೆ ಪ್ರವೇಶ ಮಾಡಿದ್ದರು. ಹಿಂದೆ ಎಷ್ಟೋ ಭಟ್ಟಿ ಸರಾಯಿ ಭಟ್ಟಿಗಳಿದ್ದರು ತಾಂಡದೊಳಗೆ ಪ್ರವೇಶ ಮಾಡಲು ಪೋಲೀಸರು ಹಿಂದೆ ಮುಂದೆ ನೋಡುತ್ತಿದ್ದರು. ಏನೆ ಕೇಳಬೇಕೆಂದರು ತಾಂಡದ ಯಜಮಾನ ಹಟ್ಟಿನಾಯಕನನ್ನ ಸಂಪರ್ಕಿಸುತ್ತಿದ್ದರು. ಹೀಗೆ ಬೇಕಾಬಿಟ್ಟಿ ಪೋಲೀಸರು ಒಳಗೆ ನುಗ್ಗಿ ದಾಂಧಲೆ ಮಾಡಿದ್ದರು. ಅದಕ್ಕೆ ಬಹುಮುಖ್ಯವಾಗಿ ಕಾರಣಕರ್ತರು ತಾಂಡದ ಯಂಕ, ನಾಣಿ, ಸೀನ ರಂತಹವರೆ. ಹಟ್ಟಿನಾಯಕ ಏನು ಮಹಾ? ಕಾರಬಾರಿಗೆ ಏನ ಗೊತ್ತು? ಡಾವೊಗೆ ಬುದ್ಧಿ ಇದೆಯೆ? ಇನ್ನೂ ಅಲ್ಲಿ ಬರುವ ಮಂದಿನಾರು ಎಂಥೋರು ಸಾಲಿಬಿಟ್ಟವರು. ಅವರ ಒಣವಾದ ಯಾವಾಗ ಸುರು ಆಯ್ತೊ. ಮಳಾವೊ ಹಿನ್ನೆಡೆ ಕಂಡಿತ್ತು, ಎಷ್ಟೋ ಜನ ಬಡವರು ಪೋಲೀಸರ ಹತ್ತಿರ ಹೋದರೆ ಸುಕಾಸುಮ್ಮನೆ ಕೇಸು ಜಡದು, ಅವರು ಕಾಸು ಕಿತ್ಕೊಂಡು ಕೇಸನ್ನು ಮುಂದಕ್ಕೆ ಕೋರ್ಟಿಗೆ ಹಾಜರು ಪಡಿಸಿ ಯಮಯಾತನೆ ಕೊಡುತ್ತಿದ್ದರು. ಅದರ ಬದಲಿಗೆ ತಮ್ಮ ಪಂಚಾಯ್ತಿಯಲ್ಲೇ ಕಾಲು ಕೈ ಹಿಡಿದು ಮಾಡಿದ ತಪ್ಪು ಒಪ್ಪಿಕೊಂಡು ಹೆಂಗೊ ಬದುಕ ಸಾಗಿಸಿದ್ದರು. ಆದ್ರೆ, ನ್ಯಾಯ

ಪಂಚಾಯ್ತಿಯಲ್ಲೂ ಲಂಚ, ಪಕ್ಷಪಾತ ಸುರು ಆಯ್ತು, ಮಂದಿ ಅದರ ಮೇಲಿನ ನಂಬಿಕೆಯನ್ನು ಕಳೆದುಕೊಂಡರು.

ತೊಪುನಾಯ್ಕನಂತಹ ನಿಯತ್ತಿನ ಮನುಷ್ಯರು ಬಾಯಿ ಬಿಡದಂತಾದರು. ತಲೆಯಲ್ಲಿ ಜ್ಞಾನದ ಗುರುತೆ ಇಲ್ಲದ ಗಾಂಟಾಳೊ, ಪೂರ್ಯ, ಚಂದು, ಲಸಣು, ಕಿಟ್ಟಿ, ಕಾನಾಬಾಜ್ ನಂತವರು ಸುಮ್ಮನೆ ವಿಷಯವನ್ನು ವಿಷಯಾಂತರಗೊಳಿಸಿ ಗದ್ದಲ ಆರಂಭ ಮಾಡಿದ್ದೆ ಸಂಜೆ ಸಿಗುವ ಹೆಂಡಕ್ಕೆ ನ್ಯಾಯದ ಕಗ್ಗೊಲೆಯಾಗತೊಡಗಿತ್ತು. ಇವರು ಅನುಕೂಲ ಸಿಂಧು ರಾಜಕಾರಣ ಮಾಡುವಂತಹ ಅನಿಷ್ಠ ಮಂದಿ. ಒಮ್ಮೆ ನಾಯಕನ ಪರವಾಗಿದ್ದರೆ ಮತ್ತೊಂದು ಪಂಚಾಯ್ತಿಯಲ್ಲಿ ನಾಯಕನ ವಿರೋಧಿಸುತ್ತಿದ್ದರು. ಹೆಂಡದ ಅಂಗಡಿಯಲ್ಲಿ ಎಲ್ಲರೂ ಏನೂ ಆಗಿಲ್ಲ ಎನ್ನುವಂತೆ ಬಾಟಲು ಹಂಚಿಕೊಂಡು ಕುಡಿಯುತ್ತಿದ್ದರು. ಇಂತಹ ಮತಿಹೀನರು ಒಂದು ಕಡೆಯಾದರೆ ಹೊಸದಾಗಿ ತಾಂಡ ಸೇರಿದ ಹುಡುಗರದ್ದು ಒಂದು ತಂಡ ಅಧಿಕಾರವನ್ನು ತಮ್ಮ ಕೈಯಲ್ಲಿ ಪಡೆಯಲು ಹಪಹಪಿಸುತ್ತಿತ್ತು. ಏನೇ ನಿರ್ಣಯ, ಹಂಚಿಕೆಗೆ ತಾವು ಮುಖಂಡರಾಗಬೇಕು ಅದರಲ್ಲಿ ಉಳಿಯುವ ಕಿಲಬುಕಾಸು ಸಂಜಿಗೆ ವ್ಯವಸ್ಥೆಯಾದೀತು ಎನ್ನುವ ಆಲೋಚನೆ ಮಾಡಿದಾಗ ಯಾವ ಮಾಳಾವೊ ಉಳಿಯಲು ಸಾಧ್ಯವಾದೀತು.

* * *

64. ಚಾಪ್ಲಬಾವ ವಾಜ ಕಲಿಸಿದ್ದು

ಲಂಬಾಣಿಗರು ವಲಸೆಗಾರರಾಗಿದ್ದು ದುರ್ಗಮಕಾಡು, ಬೆಟ್ಟ ಗುಡ್ಡಗಳಲ್ಲಿ ಹಾದು ಬರುವಾಗ ಕಾಡು ಪ್ರಾಣಿಗಳ ಹಾವಳಿ ಹೇಳತೀರದು. ಹಾಗಾಗಿಯೇ ಅವರು ಅಲ್ಲಲ್ಲಿ ಡೇರೆಗಳನ್ನು ಹಾಕಿ ದೇವರ ಭಜನೆ ಮಾಡುವಾಗ ಶಬ್ದ ಮಾಡುವ ಉಪಕರಣಗಳನ್ನೆ ಬಳಸುತ್ತಿದ್ದಿರಬೇಕು ಎಂದು ಹುಲಿಯೂರನ ವಾದವಾಗಿತ್ತು. ಆನೆ ಬಂತು ಅಂದ್ರೆ ಅದಕ್ಕೆ ಸದ್ದೇ ಮದ್ದು. ಹಾಗಾಗಿಯೇ ನಗಾರಿ, ಕಂಚಿನ ತಟ್ಟೆಗಳು ಮತ್ತು ಜಾಂಜ್ ಸಾಲದಕ್ಕೆ ಎತ್ತರ ಧ್ವನಿಯಲ್ಲಿ ಬಹುಶಃ ಸ್ವರದ ಸ್ಯಾರ್ಪ್ ನಾಕರಲ್ಲಿ ಧ್ವನಿ ಹೊರಡಿಸುತ್ತಿದ್ದರು. "ಹಾಂಕೆ ಮಾರುಚು ಸೇವಾತೋನ ಆಜೊ ಆಜೋನಿರ" (ಕೂಗಿ ಕರೆಯುವ ಸೇವಾಲಾಲ್ ನಿನಗೆ ಬಾ ತಂದೆ) ಅಂತ ಮುಖ್ಯ ಹಾಡುಗಾರ ಹಾಡು ಸುರು ಮಾಡಿದರೆ ಅವನ ಹಿಂದೆ ಗುಂಪು ಅದನ್ನೆ ಸೋ ಅನ್ನುತ್ತಿತ್ತು. ಮುಖ್ಯ ಹಾಡುಗಾರ ಮಾತ್ರ ಒಳ್ಳೊಳ್ಳೆ ಹಾಡುಗಳು, ಕತೆಗಳನ್ನು ಹಾಡಿನ ಮೂಲಕವೇ ಹೇಳುತ್ತಿದ್ದ. ಆ ಹಾಡು, ಶಬ್ದ ಕೇಳಿದ ಕಾಡಾನೆ, ಹುಲಿ, ಸಿಂಹಗಳು ದಿಕ್ಕಾಪಾಲಾಗಿರಬಹುದು. ಈ ಸಂಪ್ರದಾಯ ಭಜನೆ ಆಯ್ತು, ಪ್ರಾಣಿಗಳನ್ನು ಓಡಿಸುವ ಅಸ್ತ್ರವೂ ಆಯ್ತು. ಹೀಗೆ ಆರಂಭವಾಗಿರಬಹುದಾದ ಈ ವಾಜ ಎನ್ನುವುದು ಮುಂದೆ ಲಮಾಣಿಗರು, ತಾಂಡದಲ್ಲಿ ವಾಸ ಮಾಡುವುದನ್ನು ಆರಂಭಿಸಿದನಂತರ ಡೇರೆಗಳನ್ನು ಬಿಟ್ಟು ಗುಡಿಸಲು ಕಟ್ಟಿಕೊಂಡರು. ಕ್ರಮೇಣ ಗುಡಿಸಲುಗಳು ಮಂಗಳೂರ ಹಂಚಿನ ಮನೆಗಳಾದವು. ಬರ್ತಾ ಕಾಲ ಬದಲಾತು ಭದ್ರವಾದ ಗೋಡೆಗಳು ಎದ್ದವು. ಮೇಲೆ ರೀಪರು, ತೊಲೆಗಳು ಅದಕ್ಕೆ ಹೊದಿಸಿದ ಕೆಂಪಂಚು, ಕರಿ ಹಂಚಿನ ಉತ್ಪಾದನೆ ಕಮ್ಮಿಯಾಗಿತ್ತು, ಸಣ್ಣ ಹಂಚನ್ನ ಜೋಡಿಸುವುದು ಕಷ್ಟಸಾಧ್ಯವಾಗಿದ್ದರಿಂದ ಮಂದಿ ಹೆಂಗೂ ಸಾಲ ಮಾಡ್ತಿವಿ ಕಸುಕಿತ್ತೆ ಮಾಡಿದ್ರಾತು ಅಂತ ಸಾಲಮಾಡಿ ಕೆಂಪಂಚು ತರಿಸಿ ಹಾಕಿದ್ರು. ತಾಂಡದಾಗ ಸರ್ಕಾರದ ಸ್ಕೀಮ್ ಬಂದು ಬಡವರಿಗೆ ಕಾಸು ಕೈಗೆ ಬಂದಾಗ ಗುಡಿಸಲುಗಳು ಮರೆಯಾಗಿದ್ದವು.

ಆದರೆ ಬಡತನ ಮಾತ್ರ ಹೋಗಿರಲಿಲ್ಲಾ, ಕಾಫಿ ತೋಟ, ಮಂಗಳೂರು, ಕೇರಳ, ಗೋವ, ಮಹಾರಾಷ್ಟ್ರ, ಸುತ್ತಮುತ್ತಲ ಊರುಗಳಾದ ಕೆಂದೂರು, ಬಲಿಜಪುರ, ಸೊಂಡಮನೆಹಳ್ಳಿ, ಸಾತನೂರು ಕಟ್ಟೆ, ತೆಗೂರು ವರೆಗೂನಡೆದು ಹೋಗಿ ಕೂಲಿ ಮಾಡಿದರೂ ಭದ್ರನಾಯ್ಕನ ತಾಂಡದ ಜನರ ಹಸಿವು ಹಿಂಗಿರಲಿಲ್ಲ. ಇರೋ ಕಾಲೆಕ್ಕರೆ, ಮುಕ್ಕಾಲೆಕ್ಕರೆ ಜಮೀನು, ಸರ್ಕಾರದ ಪರಾಂಪೋಕ್ ಜಮೀನು ಕಾಡಿದ್ದನ್ನ ಸ್ವಚ್ಛಮಾಡಿ ಜಮೀನು ತಗದರು. ಆದರೆ ಆ ಜಮೀನು ಬೆಳೆಬೆಳೆಯಾಕ ಯೋಗ್ಯವಾಗಿರದೆ ಬರಿ ಹುಲ್ಲು ಬೆಳೆಯುತ್ತಿತ್ತು. ಅಣಬೆ, ಜೇಕು, ಕೊಲಾಣಿ ಸೊಪ್ಪು, ಬಿಳಿಕಸ, ಜಿಗಳಿ ಬೆಳೆದು ಬೆಳೆದು ಹೊಲ ಅನ್ನೋದು ಕಾಡಾಗಿರುತ್ತಿತ್ತು. ತಾಂಡದ ಮುಂದೆ ಪೂರ್ವಕ್ಕೆ ಹೋದಂತೆ ಬಹುತೇಕ ಪರಾಂಪೋಕ್ ಜಮೀನು ಸುಮಾರು ತಾಂಡದ ನಾಕು ನೂರು ಎಕ್ಕರೆಯಲ್ಲಿ ನೂರೈವತ್ತು ಎಕ್ಕರೆ ಜಮೀನಿಗೆ ಸರ್ಕಾರವೆ ಪಟ್ಟಾ ಕೊಟ್ಟಿತ್ತು. ಉಳಿದ ಜಮೀನು ಬಗರ್ ಹುಕುಂ ಆಗಿದ್ದರಿಂದ ಅದರ ಮೇಲೆ ಅವರಿಗೆ ಯಾವ ಹಕ್ಕು ಇರಲಿಲ್ಲಾ. ಆದರೂ, "ಇಲ್ಲಿಬಂದು ಯಾ ಮಗ ಕೇಳ್ತಾನ ಬರ್ಲಿ. ಅರವತ್ತು ಎಪ್ಪತ್ತು ವರ್ಷಗಳಿಂದ ಸಾಗುವಳಿ ಮಾಡಿರುವ ಜಮೀನನ್ನ ಇದ್ದಕ್ಕಿದ್ದಂತೆ ಯಾವನೋ ಬಂದು ಕಸ್ಕೊಳೋದಕ್ಕೆ ನಾವು ಸುಮನೆ ಬಿಡ್ತಿವ" ಬಜೂರಿನಾಯ್ಕ ತನ್ನ ರೋಷವನ್ನ ಹೊರಗೆ ಹಾಕಿದ್ದ.

ಈ ಎಲ್ಲಾ ಗೊಂದಲಗಳ ನಡುವೆ ಬದುಕಿರುವ ಈ ಮಂದಿಗೆ, ಆಗಾಗ ತಮ್ಮ ಕುಲದಲ್ಲಿ ಬಳುವಳಿಯಾಗಿ ಬಂದ ವಾಜ ಹಾಕುವುದೆಂದರೆ ಬೋ ಇಷ್ಟ. ಮನೆಯಲ್ಲಿ ಪ್ರತಿಯೊಬ್ಬ ಗಂಡಸು ನಗಾರಿ ನುಡಿಸುವುದು, ದಡಂ ಹಾಕುವುದು ಕಲಿತಿರುತ್ತಿದ್ದ. ಅಲ್ಪಸ್ವಲ್ಪ ಜ್ಞಾನ ಮಕ್ಕಳಿಗೂ ಇತ್ತು. ಆದರೆ ನಗಾರಿಯನ್ನು ತಾಳಕ್ಕೆ ತಕ್ಕಂತೆ ಹಾಡಿಗೆ ಸರಿಯಾಗಿ ನುಡಿಸಲು ತೊಡುಗೆ ಬಿಟ್ಟರೆ ಮತ್ತೊಂದಿಬ್ಬರು ಮೂವರು ಹಿರಿಯರಿಗೆ ಬಿಟ್ಟು ಉಳಿದಂತೆ ವಾಜ ಮುಗಿದೆ ಹೋಯ್ತು ಎನ್ನುವ ಸ್ಥಿತಿ ತಲುಪಿದಾಗ ಹಾಡಿನಲ್ಲಿ ಪಾಂಡಿತ್ಯ ಪಡೆದು, ಹಾಡನ್ನೆ ವೃತ್ತಿ ಮಾಡಿಕೊಂಡ ಬಾವ ತಾಂಡ ತಾಂಡಗಳಿಗೆ ಹೋಗಿ ತಿಂಗಳು, ಎರಡು ತಿಂಗಳು, ಸೇವಾಬಾಯ ಮರಿಯಮ್ಮನ ದೇವಸ್ಥಾನದಲ್ಲಿಯೆ ವಾಸಮಾಡಿ, ಕರೆದವರ ಮನೆಗೆ ಹೋಗಿ ಊಟಮಾಡಿ ಬಂಜಾರರ ಹಾಡುಗಳನ್ನು ಪ್ರತಿದಿನ ರಾತ್ರಿ ವಾಜ ಹಾಕಿಸುವುದನ್ನ ರೂಢಿ ಮಾಡುತ್ತಿದ್ದರು. ಅವರಲ್ಲಿ ಚಾಪ್ಲಬಾವ, ನತ್ತುಬಾವ, ಜಗನ್ಯ ಬಾವ, ಕಾಂದಾಳಿ ಬಾವ ಪ್ರಮುಖರು. ಇವರು ಯಾವೂರಿನವರು, ಯಾವ ಪಂಗಡದವರು, ಮದುವೆ, ಮಕ್ಕಳು ಯಾವುದು ಯಾರಿಗೂ ಗೊತ್ತಿಲ್ಲದ ಗೌಪ್ಯ ಇತಿಹಾಸ. ಆದರೂ ಬಹಳ ವಿಶ್ವಾಸದಿಂದ ತಮ್ಮ ಜನಾಂಗದಲ್ಲಿ ಪೇನಾದಿಂದ (*ಪೇನಾ–ಪರಂಪರೆ) ಬಂದಿರುವ

* **ಪೇನಾ–ಪರಂಪರೆ**

ಹಾಡುಗಾರಿಕೆ, ವಾದ್ಯ ನುಡಿಸುವುದನ್ನ ಮುಂದುವರೆಸುವ ಜವಾಬ್ದಾರಿಯನ್ನ ಹೊತ್ತಿದ್ದರು.

ಚಾಪ್ಲಬಾವ ಯಾವೂರಂತ ಯಾರಿಗೂ ಗೊತ್ತಿಲ್ಲ. ಯಾರೋ ಒಬ್ಬರು ಭದ್ರನಾಯ್ಕನ ತಾಂಡದಿಂದ ಮೂರು ಕಿಲೋಮೀಟರ್ ದೂರದ ನಾನ್ಕ್ಯ ನಾಯ್ಕನ ತಾಂಡದಲ್ಲಿ ಕಲಿಸುವಾಗ ಹೇಳಿ ಬಂದಿದ್ನಂತೆ. ಅದೆ ಆಮಂತ್ರಣ ಅಂತ ಜಾಡು ಹಿಡಿದು ಬಂದಿದ್ದ. ತಾಂಡದವರು ಬಂದ ಅತಿಥಿಗೆ, ದೇವಸ್ಥಾನದಲ್ಲಿ ಉಳಿಯುವ ವ್ಯವಸ್ಥೆ, ಪ್ರತಿಯೊಬ್ಬರು ತಾವು ಊಟ ಮಾಡುವುದನ್ನೆ ಆತನಿಗೂ ಊಟ ಮಾಡಿಸುತ್ತಿದ್ದರು. ದಿನಾ ಸಂಜೆ ಬಾಟಲು, ಎರಡು ಬಾಟಲು ಹೆಂಡ ಮಾತ್ರ ಬೇಕಿತ್ತು. ಯಾರದಾದರೂ ಮನೆಯಲ್ಲಿ ವಿಶೇಷ ಅಡುಗೆ ಮಾಡಿದ್ದರೆ ವಿಶ್ವಾಸದ ಮೇಲೆ ಬಾವನನ್ನ ಬಿಡದೆ ಕರೆದೊಯ್ದು ಊಟ ಹಾಕುತ್ತಿದ್ದರು. "ಅಯ್ಯೊ ಬನ್ನಿ ಬಾವ, ನೀವೇನು, ರೊಟ್ಟಿ ಏನು ಯಾಲಕ್ಕಿ ಹಿಟ್ಟಲ್ಲ ಬನ್ನಿ ನೀವಂತು. ನಿಮಗಾಗಿ ನಾವೇನು ಪೆಸಲ್ ಮಾಡಿವ ಏನೋ ನಮ್ಮಾಕಿ ಮಂಗಳವಾರ ಹರಿಹರ ಸಂತೆಗೆ ಹೋಗಿದ್ಲು, ಕಳ್ಳು ಪಚ್ಚಿ ತಂದಿದ್ಲು ಸಳೋಯಿ ಮಾಡಿವಿ ಬನ್ನಿ" ಚೋಕ್ಲ ಬಿಟ್ಟುಬಿಡದೆ ಕರ್‍ಕೊಂಡು ಹೋಗಿದ್ದ. ಮಾರನೆ ದಿನ ಪಿಪರೂ ಮತ್ತೊಂದು ದಿನ ಪರಮ ಹಿಂಗೆ ತಾಂಡದ ಎಲ್ಲಾ ಮಂದಿ ಕರದು ಊಟಕ್ಕೆ ಬಡಿಸುತ್ತಿದ್ದರು. ಬಾವ ಅಲ್ಲದೆ ಗೋರ್ ಬೋಲಿ ಮಾತಾಡುವ ಯಾರೆ ಬಂದರೂ ಅದೇನು ಪ್ರೀತಿನೊ ಈ ಮುಂಡೇವಕ್ಕೆ "ಲೇ ತಮ್ಮ, ಯಾವೂರಿಂದ ಬಂದಿಯೊ, ಯಾವಾಗ ಊಟ ಮಾಡಿಯೊ ಅಯ್ಯೋ ಪಾಪ, ಬಾ ಒಂದ ರೊಟ್ಟಿ ತಿನ್ನು" ಮನೆಯಲ್ಲಿ ಇದೆಯೋ ಇಲ್ಲವೋ ಲೆಕ್ಕಿಸದೆ ಆಹ್ವಾನ ಕೊಡುತ್ತಿದ್ದರು. ಮಜ್ಜಿಗೆ, ಮೊಸರು ಎಲ್ಲಾ ಸವಲತ್ತು ಮಾಡಿಕೊಟ್ಟು ಆತನ ನೆನಪಿನ ಖಜಾನೆಯಲ್ಲಿರುವ ಬಹುತೇಕ ಕತೆಗಳನ್ನ, ಹಾಡುಗಳನ್ನ ಕಲಿಯುತ್ತಿದ್ದರು. ಪ್ರತಿದಿನ ಸಂಜೆ ಏಳುವರೆಗಾಗಲೆ ದೇವಸ್ಥಾನದ ಎದುರಿಗಿದ್ದವರು ಊಟ ಮುಗಿಸಿ ಸೀಮೆ ಎಣ್ಣೆ ದೀಪ, ಲಾಟೀನು ತೆಗೆದುಕೊಂಡು, ಎಲೆ ಅಡಿಕೆ, ತಂಬಾಕು, ಬೀಡಿ ಸಮೇತವಾಗಿ ಹೆಣ್ಣು, ಗಂಡು, ಹುಡುಗರು, ಜಾಗ ಸಿಕ್ಕವರು, ಒಳಗೆ ಮತ್ತೆ ಕೆಲವರು ಪಡಸಾಲೆ, ಜಗಲಿ ಮೇಲೆ ಕುಳಿತು, ಹೆಂಡ ಕುಡಿದು ಬಂದು ಜೋಲಿ ಹೊಡೆಯುವವರನ್ನ ನೋಡುತ್ತ ನಗುತ್ತಿದ್ದರು. ಬಾವ ಮಾತ್ರ ಕುಡಿದ ಅಮಲಿನಲ್ಲೆ ಮೂರುನಾಕು ಝೂರ್ಮಕಿ, ಒಂದು ಕತೆ ಹೇಳುತ್ತಿದ್ದ. ಹಿಮ್ಮೇಳದವರು ಆತನ ಹೊಸ ಹಾಡುಗಳನ್ನು ಹಿಡಿಯಲು ಒದ್ದಾಡುತ್ತಿದ್ದರು. ಅದ್ರಲ್ಲೆ ಕೆಲ ಶಾಣ್ಯಮಂದಿ, ಮದಲು ಕೇಳಿದ್ದರೆ ಸಹಜವಾಗಿಯೆ ಧ್ವನಿ ಕೂಡಿಸಿದರೆ ಉಳಿದವರು "ಅರೆ ಏನ ಹಾಡಿದ್ನಪ್ಪಾ ಈವಯ್ಯ" ಅಂತ ಮುಲುಕಾಡಿದ್ದರು. ಮೊದಲನೇಯದಿನ ಹೇಳಿದ ಕೆಲವು ಹಾಡುಗಳು ಕೆಲವರಿಗೆ ಕಂಠಸ್ಥವಾಗಿದ್ದವು. ಇನ್ನು ಕೆಲವರು ಸುಮ್ಮನೆ

ಹಾಡು ಹೇಳಿ ಅಲ್ಲೆ ಮರೆಯುವವರೂ ಇದ್ದರು. ಅವರಿಗೆ ಯಾವ ಹಾಡುಗಳು ನೆನಪಿಲ್ಲದಾಗಿದ್ದವು. ಕೆಲ ಹೆಂಗಸರು ಕೇಳಿ ಕೇಳಿಯೇ ಅರ್ಧಂಬರ್ಧ ಹಾಡುಗಳನ್ನ ಕಲಿತಿದ್ದರು. ಮುಂದೆ ಯಾವತ್ತಾದರೂ ಈ ಹಾಡು ಕೆಲಸಕ್ಕೆ ಬಂದೀತು ಎನ್ನುವುದು ಅವರ ವಾದವಾಗಿತ್ತು.

ಬಾವ ಹಾಡಿ ಹಾಡಿ ಧ್ವನಿ ಒಡೆಯುತ್ತಿತ್ತು. ಪಾಪ ಚಾಪ್ಲ ಬಾವ ಎಲೆಯನ್ನು ಅಗೆದು ಧ್ವನಿ ಒಡೆಯದಂತೆ ಕಾಪಾಡಿಕೊಳ್ಳುವ ಪ್ರಯತ್ನ ಮಾಡಿದ್ದ. ಒಂದೊಮ್ಮೆ ಗಂಟಲು ನೋವು ಬಂದಾಗ ಬೇರೆಯವರು ಹಾಡಲು ಹೇಳುತ್ತಿದ್ದ. ಈ ಜನ ಹಾಡುತ್ತಿದ್ದ ಹೊಸ ಹಾಡನ್ನ ಬಾವ ಮುಂದಿನ ಪ್ರದೇಶದಲ್ಲಿ ಕಲಿಸುವ ಸಲುವಾಗಿಯೆ ಕಲಿಯುತ್ತಿದ್ದ. ಹೀಗೆ ಕಲಿತೆ ಆತ ದೊಡ್ಡ ಹಾಡುಗಾರನಾಗಿದ್ದ. ಇಡೀ ಕರ್ನಾಟಕ, ಆಂಧ್ರಪ್ರದೇಶ, ಮಹಾರಾಷ್ಟ್ರದ ಕೆಲವು ಭಾಗಗಳಲ್ಲಿ ತಿರುಗಾಟ ನಡೆಸಿ ಕೆಲವು ಹಾಡುಗಳನ್ನ ಕಲಿತಿದ್ದ. ಆ ಪ್ರದೇಶದ ಹಾಡುಗಳು ಈ ಭಾಗದಲ್ಲಿ ಹೊಸದಾಗಿದ್ದವು. ಈ ಪ್ರದೇಶದ ಹಾಡುಗಳನ್ನ ಅಲ್ಲಿ ಹೋಗಿ ಹೇಳಿದಾಗ ಅಲ್ಲಿಯಮಂದಿ “ವ್ಹಾ... ವ್ಹಾ” ಅಂತ ಮೆಚ್ಚುಗೆಯನ್ನು ಸೂಚಿಸುತ್ತಿದ್ದರು. “ಈ ಬಾವಗೆ ಜವಾಬ್ದಾರಿ ಅನ್ನೋದೆ ಇಲ್ಲವೆ ಹೆಂಡತಿ, ಮಕ್ಕಳು, ಮನೆ–ಮಠ, ಹೊಲ–ಗದ್ದೆ, ಈ ತಾಂಡ ಆದ ಮೇಲೆ ಪಕ್ಕದ ತಾಂಡ ಹಿಂಗೆ ಈತನ ಜಾತ್ರೆ ಹೊಂಟು ಬಿಟ್ಟದೆ? ಅಲ್ಲಾ ಬರಿ ಇದೇ ಇವನ ಜೀವನ ಆದ್ರೆ ಖಂಡಿತ ಬಹಳ ಕಷ್ಟ.” ಹುಲಿಯೂರ ಒಬ್ಬನೆ ಯೋಚನೆ ಮಾಡಿದ “ಪಾಪ ಬಂದಾಗಿಂದ ಒಂದು ಹಸರು ಅಂಗಿ ತೊಡೋದು ಬಿಟ್ರೆ ಬಿಳಿ ಅಂಗಿ, ದೇವಸ್ಥಾನದ ಮೂಲೆಯಲೆ ಹಗಲು ಗೂಬೆ ಮಲಗಿದಂಗೆ ಮಲಗುತ್ತಾನೆ” ತಲೆಯೊಳಗೆ ನಡೆಯುತ್ತಿರುವ ವಿಚಾರವನ್ನ ಯಾರ ಹತ್ರ ಕೇಳಿ ಪರಿಹಾರ ಪಡೆಯೋದಕ್ಕೆ ಸಾಧ್ಯ? ಅವನ ಪ್ರಶ್ನೆಗಳು ಹಾಗೆ ಉಳ್ಕೊಂಡವು. ಚಾಪ್ಲ ಬಾವ ಮಾತ್ರ ಈ ಸಲ ಹೋದವನು ಮತ್ತೆಂದು ಬರಲಿಲ್ಲಾ. ಆತ ಭದ್ರನಾಯ್ಕನ ತಾಂಡಕ್ಕೆ ಬಂದಾಗಲೆ ವಯಸ್ಸಾಗಿತ್ತು. ಮುಂದೆ ಎಲ್ಲಿ ಏನಾಯ್ತು ಅನ್ನೋದು ಹೇಳುವವರು ಯಾರು? ಅಸಲಿಗೆ ಅವನು ಯಾವೂರು, ಅನ್ನೋದೆ ಈ ಮಂದಿಗೆ ಗೊತ್ತಿರಲಿಲ್ಲಾ, ಏನೋ ಪಕ್ಕದ ತಾಂಡದವರು ಭಾರಿ ಹಾಡು ಹಾಡ್ತಾನೆ ಅಂತಂದು ವೈಭವೀಕರಿಸಿದ್ದರಿಂದ ಆತನನ್ನ ಕರಿಬೇಕು, ನಮ್ಮ ತಾಂಡದವರು ಕಲಿಯೋರು ಇದ್ದರೆ ಕಲಿಯಲಿ ಅನ್ನೋದು ಇವರ ವಾದವಾಗಿತ್ತು.

ಹಿಂದೆ ಕಾಲು ನಡಿಗೆಯಲ್ಲಿ ನಡೆದು ಬರುವಾಗ ಬೇಕಾದಷ್ಟು ಮಂದಿ ಬರುತ್ತಿದ್ದರು. ಈಗ ತಾಂಡಕ್ಕೆ ಟಾರ್ ರೋಡ್ ಬಂದು ತಾಂಡದ ದಾರಿಗೆ ನಿಂತರೆ ಕಬ್ಬು ಹೇರುವ ಖಾಲಿ ಟ್ರಾಕ್ಟರ್‌ಗಳು, ಆಟೋಗಳು, ಬೈಕ್‌ಗಳು ಹೇಳತೀರದು. ಆದರೆ ಕಾಲ ಬದಲಾದಂತೆ, ಮಂದಿ ಆಸಕ್ತಿ, ಪ್ರವೃತ್ತಿ ಬದಲಾಗಿ ಯಾರು ಹಾಡು ಕೇಳಲು,

ಹಾಡು ಹಾಡಲು ಬರದಹಾಗಾಗಿತ್ತು. ಏನೂ ತಿಳಿಯದಿದ್ದರು ಟಿ.ವಿ. ತಂದು ಅದಕ್ಕೆ ಚಾನಲ್ ಬಾಕ್ಸು ಹಾಕಿಸಿ ಸುತ್ತ ಮನೆಯವರು ಬಂದು ಕೂತು ನೋಡಿದಾಗ ಮನೆ ಮಾಲಿಕನಿಗೆ ದೊಡ್ಡ ಹೆಮ್ಮೆ. ಯಾಕೆ ಗುಡಿಗೆ ಹೋಗಬೇಕು? ಯಾರೊ ನಾಕಮಂದಿ ಹಳೆ ಕಾಲದವರು ಆಸಕ್ತಿಯಿಂದ ಕೂಡ್ತಾರಲ್ಲ ಸಾಕ ಬಿಡು. ನಮಗೇನು ಹೋಗಬೇಕಂತಿಲ್ಲ, ಕೇಳಬೇಕಂತಿಲ್ಲ. ಕೇಳುವವರು ಕೇಳಲಿ, ಹಾಡುವವರು ಹಾಡಲಿ ಮಂದಿ ಮನಸ್ಸಿನಲ್ಲಿ ಆಲೋಚನೆಗಳು ಬದಲಾಗುತ್ತಿದ್ದಂತೆ ಸಂಸ್ಕೃತಿ ದಿಕ್ಕು ತಪ್ಪಿತ್ತು.

* * *

65. ತಾಂಡದ ಮುಂದೊಂದು ಮಠವ ಕಟ್ಟಿದೊಡೆ

ಲಮಾಣಿಗರು ಮೂಲತಃ ಪ್ರಕೃತಿ ಆರಾಧಕರು. ಮರ, ಗಾಳಿ, ಸೂರ್ಯ, ಚಂದ್ರ ಇವರುಗಳೆ ಇವರ ದೇವರು. ಭಾರತದಲ್ಲಿದ್ದರೂ ಸೇವಾಭಾಯಿ ತನ್ನ ಲೀಲೆಯನ್ನು ಸಿರ್ಸಿಯ ಮಾರಿಕಾಂಬ ದೇವಿಯ ಜೊತೆಗೂಡಿ ತೋರಿಸುವವರೆಗೂ ಅದ್ಯಾವ ದೇವರನ್ನ ಪೂಜಿಸುತ್ತಿದ್ದರೊ ದೇವರಿಗೆ ಗೊತ್ತು. ಹುಲಿಯೂರ ಮಾತ್ರ ಅವರ ಮನೆಯಲ್ಲಿದ್ದ ಸತಿ ಕಲ್ಲುಗಳು, ತುಳಜಾಭವಾನಿ, ಶಿತ್ಲ ಮಾತ ಆದಿಯಾಗಿ ಏಳು ದೇವತೆಗಳ ಆರಾಧಕರು ಎನ್ನುವುದನ್ನ ಮನಗಂಡಿದ್ದ. ಇವರ ತಾಂಡಗಳಲ್ಲಿ ಸೇವಾಭಾಯ ಮತ್ತು ಮರಿಯಮ್ಮ ಕ್ರಿಸ್ತ ಧರ್ಮದ ಮೇರಿಯಮ್ಮ ಅಲ್ಲ ಸಿರ್ಸಿಯ ಮಾರಿಕಾಂಬಳೆ ಬಂಜಾರ ಪುರಾಣದಲ್ಲಿ ಮರಿಯಮ್ಮಳಾಗಿ ಅವತರಿಸಿದ್ದಾಳೆ. ಆದರೆ ಬಹುತೇಕ ಕ್ರಿಸ್ತ ಪಂಡಿತರು ನೋಡಿ ನಮ್ಮ ದೇವರು, ನಿಮ್ಮ ದೇವತೆ ಮರಿಯಮ್ಮ ಒಂದೇ ಹಾಗಾಗಿ ನೀವು ನಮಗೆ ಸಮೀಪ ಯಾಕೆ ಮತಾಂತರಗೊಳ್ಳಬಾರದು ಎನ್ನುವ ತಲೆತಿರುಕ ವಿಚಾರವನ್ನು ತುಂಬುವ ಪ್ರಯತ್ನ ಹುಲಿಯೂರನಿಗೆ ಆಗಿತ್ತು. ಕಡ್ಡಿ ತುಂಡು ಮಾಡಿದಂತೆ ಜವಾಬ ಕೊಟ್ಟು ಬಂದಿದ್ದ. ತಮ್ಮದೇ ಸೇವಾಲಾಲ್ ಪುರಾಣ ಹೊಂದಿರುವ ಈ ಜನಸಮುದಾಯ ಕಾಲಕ್ರಮೇಣ ಶಿವನ ಆರಾಧಕರಾಗಿ ಕೆಲವರು ಹೊರಹೊಮ್ಮಿದರೆ, ವಿಷ್ಣುಭಕ್ತರಾಗಿ ಕೆಲವರು ಪೂಜೆ, ಬೋಗ್ ಹಚ್ಚುವ ಪ್ರಕ್ರಿಯೆ ಮುಂದುವರೆಸಿದ್ದರು. ಹುಲಿಯೂರನ ತಂದೆ ತೊಪುನಾಯ್ಕ, ಹೆಂಡತಿ ಜಾನಾಬಾಯಿಯೊಂದಿಗೆ ಪ್ರತಿವರ್ಷ ತಿಮ್ಮಪ್ಪನ ದರ್ಶನಕ್ಕೆ ತಿರುಪತಿಗೆ ಹೋಗಿ ಬಂದವನೆ ಶುಕ್ರವಾರ ಮನೆ ಎದುರು ಮಡಿ ಉಟ್ಟು ಪೂಜೆ ಸಲ್ಲಿಸುತ್ತಿದ್ದ. ಅನ್ನ, ಸಾರು, ಚೂರ್ಮೊ (*ಚೂರ್ಮೊ- ಗೋದಿರೊಟ್ಟಿ ಮತ್ತು ಬೆಲ್ಲದ ಮಿಶ್ರಣ) ಮಾಡಿ ಎಡೆ ಮಾಡುತ್ತಿದ್ದ. ತಾಂಡದ ಲಂಬಾಣಿಗರು, ಊರ್ಮನಿಯವರು ಬಂದು ಅನ್ನಸಾರು ಉಂಡಾದ ಮೇಲೆ ಆತನನ್ನ ಪ್ರಶಂಸೆ ಮಾಡಿ ಹೋಗುತ್ತಿದ್ದರು.

ಆದರೆ ಅದ್ಯಾವಾಗ, ಸ್ವಾಮೀಜಿಗಳನ್ನು ಸೃಷ್ಟಿಮಾಡುವ ಕಂಪನಿ ಆರಂಭವಾಗಿ ಬಂಜಾರರಿಗೂ ಮಟ್ಟೊ ಬಿಟ್ಟು ಮಠ ತಯಾರಿಯಾಯಿತೊ ಗೊತ್ತಾಗಲಿಲ್ಲ. ಅಂತು ಬಂಜಾರ ಜನಾಂಗದ ಸ್ವಾಮಿಯೊಬ್ಬ ತಾಂಡದ ಮುಂದೆ ಪವಡಿಸಿದ್ದ. ಯಾರೊ

*** ಚೂರ್ಮೊ- ಗೋದಿರೊಟ್ಟಿ ಮತ್ತು ಬೆಲ್ಲದ ಮಿಶ್ರಣ**

ದನ ಕಾಯೊ ಹುಡುಗರು ಎಂದಿನಂತೆ ಹೊಸ ವಿಷಯವನ್ನ ತಾಂಡಕ್ಕೆ ತಂದಿದ್ದರು. "ತಾಂಡದಿಂದ ಸರಿ ಸುಮಾರು ಕಿಲೋಮೀಟರ್ ದೂರದ ತಾಳಿ ಮರದ ದುರ್ಗವನ್ನ ಬನ್ನಿ ಮರದ ಕೆಳಗೆ ಗಂಟೆಯಿಂದ ಕಣ್ಣುಮುಚ್ಚಿ ಕಾವಿಧಾರಿಯೊಬ್ಬ ಕುಂತವ್ನೆ" ಹುಡುಗರು ನಾಕು ಮೂಲೆಯಲ್ಲಿ ಒಮ್ಮಿಂದೊಮ್ಮೆಗೆ ಸುದ್ಧಿ ಹಬ್ಬಿಸಿದರು. ದುಡ್ಡು ಕೊಟ್ಟರೆ ಟಿ.ವಿ.ಮಂದಿ ತೋರಿಸಿದ ಸುದ್ದಿಯನ್ನೆ ಬಿಟ್ಟು ಬಿಟ್ಟು ಹೈರಾಣು ಮಾಡುವಂತೆ ಮಂದಿ ಸುದ್ದಿ ಮಾತಾಡುತ್ತ ಗುದ್ದಮ್ಮನ ಕಟ್ಟೆಗೆ ಬಂದೆ ಬಿಟ್ಟಿದ್ದರು. "ಅರೇ ಇಸ್ಕಿ ಯಾರೋ ದಾರಿಹೋಕನಿರಬಹುದು. ನೀವು ಯಾಕೆ ಆತನ ವಿಷಯವನ್ನ ಗಂಭೀರವಾಗಿ ತಗೊಂಡಿರ?" ಮಾರಿ ಮೇಲೆ ಮೀಸೆ ಮೂಡದ ಮಕೋಡಿನಾಯ್ಕ ಪ್ರಶ್ನಿಸಿದ. "ಹಂಗಂದ್ರ ಆದೀತೆ ನಾಯ್ಕಪ್ಪ, ಇದು ತಾಂಡದ ಪ್ರಶ್ನೆ, ಬಂದವರು ಸುಳ್ಳಸ್ವಾಮಿನೊ, ಕಳ್ಳಸ್ವಾಮಿನೊ, ಕಾವಿಧಾರಿ ಮದಲು ಆತನನ್ನ ನೋಡಬೇಕು, ತಿಳಿಬೇಕು ನಂತರದ ಮಾತುಗಳು ಆಮೇಲೆ" ದೈವಿ ಭಕ್ತನಾದ ಹಿರಿಯ ಡಾವೊ ಚಂದಿಯಾನಾಯ್ಕ ಹೇಳುವುದು ಹೇಳಿ ಗಲ್ಲ ಮುಟ್ಟಿಕೊಂಡಿದ್ದ. ಕಾರಬಾರಿ ತಿಪ್ಪನಾಯ್ಕ ಅವನ ಮನೆ ದೇವಿ ಮಾಂಕಾಳಿಯನ್ನ ಬಿಟ್ಟರೆ ಯಾರನ್ನೂ ನಂಬುವವನಲ್ಲಾ ಆದರೂ ಸ್ವಾಮೀಜಿ ಜೊತೆ ಸೇರಿದರೆ ಗಾಂಜಾ ಹೊಡಿಯೋದಕ್ಕೆ ಸಿಕ್ಕಿತು ಅಂದವನೆ "ಅಯ್ಯೊ ಶಿವ ಶಿವ, ಕಾವಿಧಾರಿ ಅಂದ್ರೆ ಒಮ್ಮೊಮ್ಮೆ ಸಾಕ್ಷ್ಯಾತ್ ಪರಶಿವನೆ ಬಂದಿರಬಹುದು" ಬಿಸಾಡಿದ ಒಂದು ಮರ್ಮದ ಮಾತು. ನಾಯ್ಕ ಕಿಮಕ್ ಅನ್ನ ದಂಗಾದ. "ಏನೋ ಅಪ್ಪ ನೀವೆಲ್ಲ ಹೋಗೋಣ ಅಂದರೆ ನನ್ನದೇನು ಅಭ್ಯಂತರವಿಲ್ಲ. ಮದಲು ಕರ್‍ಕೊಂಡು ಬರೋನು. ಆಮೇಲೆ ಅವರವರ ಹರಿಯೋ ಪಂಥಿಯಂತಾಗಲಿ" ಮಾತು ಮುಗಿಸಿದ. "ಅಕಲಿ ಅಂಬಾನಂದ ಸ್ವಾಮಿ ಕೀ ಜೈ" ಅಂತ ಒಂದು ತಂಡ ಸ್ವಾಮೀಜಿಯ ಹೆಸರಿನಲ್ಲಿ ಜೈ ಕಾರ ಹಾಕತೊಡಗಿದರು. ಆದರೆ ಕೆಲಮಂದಿಗೆ ಇದು ಮ್ಯಾಚ್ ಫಿಕ್ಸಿಂಗ್ ಅಂತ ಗೊತ್ತಾಗತೊಡಗಿತು. ಭದ್ರನಾಯ್ಕನ ತಾಂಡದ ಮುಂದಿರುವ ನೂರಾರು ಎಕ್ಕರೆ ಪರಾಂಪೊಕ್ ಗೋಮಾಳದ ಜಮೀನು ಹಡಪುವ ಹುನ್ನಾರ. ಅಂತಂದು ಕೆಲವರು ಊಹೆ ಮಾಡಿಯೇ ಬಿಟ್ಟರು. ಮಠ ಕಟ್ಟುವುದರಿಂದ ಲಂಬಾಣಿ ಕೋಮು ಒಂದಾಗುತ್ತದೆ. ಬೇರೆ ಕನ್ನಡದ ಮಂದಿಯಂತೆ ನಮಗೂ ಒಂದು ಮಠ, ಮಠಕ್ಕೆ ಒಬ್ಬ ಗುರು ಸುತ್ತ ತಾಂಡಗಳಿಂದ ಮಂದಿ ಬರ್ತಾರೆ. ತಾಂಡ ಉದ್ಧಾರ ಆಗಿ ಅಕಲಿ ಅಂಬಾನಂದ ಸ್ವಾಮಿ ಮಠ ಬೆಳೆದು ದೊಡ್ಡ ಸಂಸ್ಥೆಗಳು, ನೌಕರಿ, ಕೆಲವರ ಕನಸುಗಳು ಮುಗಿಲು ತಲುಪಿದ್ದವು. ಹಕೀಕತು ಗೊತ್ತಿರುವವರು ಮಾತ್ರ ದೂರನಿಂತು ತಮಾಷೆ ನೋಡುತ್ತಿದ್ದರು. ಸ್ವಯಂಘೋಷಿತ ಅಕಲಿ ಅಂಬಾನಂದಸ್ವಾಮಿ ಮಂದಿ ಬಂದಾಗಲೂ, ಗಟ್ಟಿಯಾಗಿ ಕಣ್ಣು ಮುಚ್ಚಿಕೊಂಡು ಪ್ರಾರ್ಥನೆ ಮಾಡುತ್ತಿದ್ದ. ಈಗಾಗಲೆ ಸ್ವಾಮೀಜಿಯ ಚೇಲಾಗಳು ಅಂತ ಘೋಷಿಸಿಕೊಂಡಿದ್ದ ಸಕ್ರನಾಯ್ಕ, ಸಿಂಗಾರು ನಾಯ್ಕ "ಸ್ವಾಮಿ ಅಕಲಿ ಅಂಬಾನಂದ ಜೀ ಕಿ ಜೈ" ಅಂತ ಒಬ್ಬರಿಗೊಬ್ಬರು ಹೇಳಿಕೊಂಡರು.

ಅವರು ಘೋಷಣೆ ಕೂಗಿದ ನಂತರ ಕೆಲವರಿಗೆ ಈ ಸ್ವಾಮೀಜಿಯ ಹೆಸರು ಕೇವಲ ಡಾವೊ ಚಂದಿಯಾ, ಸಕ್ರ, ಸಿಂಗಾರುಗೆ ಮಾತ್ರ ಹೇಗೆ ಗೊತ್ತು ಈ ಸ್ವಾಮೀಜಿ ಹೆಸರು? ಮಂದಿ ಒಳಗೊಳಗೆ ಆಲೋಚನೆ ಮಾಡತೊಡಗಿದರು. ಈ ಮೂವರು ಮಂದಿಗೆ ಸರಿಯಾಗಿ ಯಾಮಾರಿಸಿದ್ವಿ ಅಂದುಕೊಂಡು ಖುಷಿ ಪಡತೊಡಗಿದ್ದರು. ವಿಷಯ ಬೂದಿ ಮುಚ್ಚಿದ ಕೆಂಡದಂತಿತ್ತು. ಮಾತನಾಡಿ ನಿಷ್ಠುರವಾಗಲೂ ಯಾರೊಬ್ಬರು ಸಿದ್ಧರಿರಲಿಲ್ಲ. ವಾಜ, ಹತ್ತಿಪ್ಪತ್ತು ಹೆಂಗಸರ ನೃತ್ಯದೊಂದಿಗೆ ಅಕಲಿ ಅಂಬಾನಂದಸ್ವಾಮೀಜಿಯನ್ನ ಕರೆತರುತ್ತಿದ್ದಾರೆ. ಬದ್ಯನಾಯ್ಕನ ಕೆರೆ ಅಂಗಳದ ಹೊಲದ ಹತ್ತಿರ ಕೆರೆ ಹತ್ತಿಕೊಂಡು ನೂರಿನ್ನೂರು ಎಕ್ಕರೆ ಗೋಮಾಳ ಕಂಡೊಡನೆ ಡಾವೊ ಚಂದಿಯ ಸಿಗ್ನಲ್ ಕೊಟ್ಟ. ಸಕ್ರನಾಯ್ಕ, ಸಿಂಗಾರು ಗಕ್ಕಂತ ನಿಂತರು. ಸ್ವಾಮೀಜಿ ಮೂರ್ತಿಯಂತೆ ಗಟ್ಟಿಗೊಂಡಿದ್ದ. ಹಾಡುವವರು, ವಾಜ ಮೇಳದವರು, ನೃತ್ಯ ಮಾಡುತ್ತಿದ್ದ ಹೆಂಗಸರಿಗೆ ಏನಾಯ್ತು ಎನ್ನುವ ಆಘಾತ. ನಾಯಕ, ಕಾರಬಾರಿ, ಡಾವೊ ಸ್ವಾಮೀಜಿ ಬಳಿಗೆ ಓಡಿದರು. ಸ್ವಾಮೀಜಿ ಹಾಂ ಅನ್ನವಲ್ಲ, ಹೂಂ ಅಂತಾನು ಅನ್ನವಲ್ಲ. ದೂಪ್ಲನಾಯ್ಕ ಸ್ವಾಮಿ ಪಕ್ಕಕ್ಕೆ ಬಂದವನೆ, "ಯಾ ಮಗ ಅವನು ಸ್ವಾಮೀಜಿಗೆ ಅಪಚಾರಗೈದವನು? ಹುಟ್ಟಿಲ್ಲಾಂತ ಅನಿಸಿಬಿಡ್ತಿನಿ." ಹೆಂಡದ ಅಮಲು, ಸ್ವಾಮೀಜಿ ಕದಲಲಿಲ್ಲಾ. ಅಣತಿ ದೂರದಲ್ಲಿ ಸಣ್ಣ ಮಕ್ಕಳನ್ನ ಹೂಣುವ ಸ್ಮಶಾನ ಆ ಕಡೆಗೆ ತಾಂಡದ ಜನರ ಬಯಲು ಸಂಡಾಸು, ಸ್ವಲ್ಪ ಮುಂದೆ ಹೋದರೆ ಕೆರೆನೀರು ಕಡಿಮೆಯಾದಂತೆ ಬಿಟ್ಟಕೊಳ್ಳುವ ಗುಂಡಿಯಮಣ್ಣು ನೀರು ಹದವರ್ತಿಗೆ ಕಲಿಸಿದಕೆ ಹೈನಾದ ಇಟ್ಟಂಗಿಗಳಾಗುತ್ತಿರುವ ಮಾಹಿತಿ ಸ್ವಾಮೀಜಿಗೆ ಇದ್ದಿದ್ದರಿಂದ ಇದೇ ಜಾಗ ಸೂಕ್ತವಾದದ್ದು ಅಂದುಕೊಂಡು, ಜೊಲ್ಲು ಸುರಿಸುತ್ತಾ ನಿಂತಿದ್ದ. ಒಂದು ಸುಡಗಾಡು ಹತ್ತಿರ ಇರುವುದರಿಂದ ಮಂದಿ ಈ ಕಡೀಗ ತಲಿ ಹಾಕಿ ಮಲಗಲ್ಲ. ಮತ್ತೊಂದು ಸಂಡಾಸಿಗೆ ಬರುವ ಹೆಂಗಸರು ಎಲ್ಲಿ ಬೇಕಾದಲ್ಲಿ ಕೂಡ್ತವೆ. ವಿಕಾರ ಮನಸ್ಸಿನ ಆಲೋಚನೆಗಳು ವಿಕಲ್ಪಗೊಂಡಿದ್ದವು. ತಾಂಡದ ಸದ್ಯದ ಹಿರಿಯ ಮತ್ತ ಹಟ್ಟಿನಾಯ್ಕನ ಬಲಗೈಯಂತಿರುವ ಅವನ ಕುಲಸ್ಥನಾದ ಪೂರ್ಯನಾಯ್ಕ ತಾನು ದೊಡ್ಡ ಲೀಡರ್ ಅಂತ ದಾಖಲಾಗಬೇಕಿತ್ತು. ಸ್ವಾಮೀಜಿ, ಪ್ರತಿದಿನ ಭಕ್ತಾದಿಗಳು ಬರ್ತಾರೆ, ದೊಡ್ಡ ದೊಡ್ಡ ಸಾಲುಗಳಲ್ಲಿ ನಿಂತು ಕಾಣಿಕೆ ಕೊಡ್ತಾರೆ, ಸ್ವಾಮೀಜಿ ಹಿಂದೆ ಚೇಲಗಳಾದರೆ ಅವನಿಗಿಂತ ಚೇಲಗಳಿಗೆ ಪರಮ ಸುಖ. ಲಿಂಗಾಯ್ತ ಸ್ವಾಮೀಜಿಗಳ ಹಿಂಬಾಲಕರನ್ನ ನೋಡಿದ್ದ ಅವರ ಜೊತೆಗೆ ಮಾತನಾಡಿದ್ದ ಕೂಡ. ಹಾಗಾಗಿ ಸರಿಯಾದ ಸಮಯ ಕಬ್ಬಿಣ ಕಾವಿಗೆ ಬಂದಿದ್ದೆ ಅನಿಸಿದೆ ಬಡಿಯೋದಕ್ಕ ಆರಂಭಿಸಿದ. "ಮಾ ಪ್ರಭುಗಳು ಏನೊ ಕಂಡವರೆ ದಯವಿಟ್ಟು ನಿಲ್ಲಿ. ಪ್ರಭು ತಮ್ಮ ಒಳ ಮನಸ್ಸು ಅರ್ಥ ಮಾಡಿಕೊಳ್ಳುವ ಶಾಣ್ಯಮಂದಿ ಬದುಕಿದ್ದಿವಿ. ತಾವು ಸರ್ವಾಂತರ್ಯಾಮಿ, ನಭೂತೋ ನಭವಿಷ್ಯತ್. ನಾವು ಕೇವಲ ನರ ಮನುಷ್ಯರು, ತಾವು ಹಿಂದಿನ, ಮುಂದಿನ ಕಾಲಜ್ಞಾನ ಪಡೆದವರು. ಮಿಗಿಲಾಗಿ ಸಂತ ಸೇವಾಭಾಯನ ಪರಮ

ಭಕ್ತರು. ತಮಗೆ ಅರಿಯದ್ದು ಏನಿದೆ ಈ ಭೂಮಿ ಮೇಲೆ, ತಾವು ಪವಡಿಸಬೇಕು." ಸ್ವಾಮೀಜಿ ಪೂರ್ಯನ ಚಾಲಾಕಿ ಮಾತಿಗೆ ಮರಳಾಗಿದ್ದ. ಇಂತಹ ಹಲಾಲ್ ಆಗೋದಕ್ಕೆ ನಿಂತಿರುವ ಇನ್ನೊಂದು ಬಕರಾ ಸಿಕ್ಕರೆ ಇಡೀ ಊರಿಂದೂರೆ ನನ್ನ ಕಪಿಮುಷ್ಠಿಯಲ್ಲಿ, ಆಲೋಚಿಸುತ್ತಿರುವಾಗಲೆ ಪೂರ್ಯನ ಚಮಚ ಜಾಂಬು "ಏ ಮಹಾಮಹಿಮನೆ ಎಲ್ಲವನ್ನು ಬಲ್ಲವನು ನೀನು, ಕಾಲಾತೀತನಾದವನು, ಕಲ್ಪನೆಯನ್ನು ಮಾಡಿಕೊಳ್ಳದಂತ ಶಕ್ತಿ ನೀ ಹೊಂದಿದ್ದಿಯಾ. ಅಪ್ಪಣೆ ಪ್ರಭು" ಆತನನ್ನ ಹೊಗಳಿ ಹೊನ್ನಶೂಲಕ್ಕೇರಿಸಿದ್ದ. ಸ್ವಾಮೀಜಿ ಮಾತ್ರ ಜಾಗನೋಡಿ ಹೆಜ್ಜೆ ಹಾಕಿದ್ದ. ಡಾವ್ಯೊ ಚಂದಿಯಾ ಮಾತ್ರ ಗುರುಗಳಿಗೆ "ಬಹುಶಃ ಈ ಜಾಗ ಇಷ್ಟವಾಗಿರಬೇಕು. ಅದ್ಕೆ ನಮ್ಮ ದೈವವಾದ ಶ್ರೀ ಮರಿಯಮ್ಮ ಸೇವಾಭಾಯರನ್ನ ಪ್ರತಿಷ್ಠಾಪ ಮಾಡಲು ಯೋಚನೆ ಮಾಡಿರಬೇಕು. ಎಲ್ಲರೂ ಒಪ್ಪಿದರೆ ಸ್ವಾಮೀಜಿ ಈ ಜಾಗದ ಮೇಲೆ ಪೂಜೆ ಮಾಡ್ತಾರೆ" ಅಂದುಬಿಟ್ಟ. ಅವನು ಹೇಳಿದ್ದೆ ಶಿವ, ಸ್ವಾಮಿ ಯಾರ ಮರ್ಜಿ ಮುಲಾಜಿಗೂ ಕಾಯದೆ ಪೂಜೆ ಮಾಡಿಯೇ ಬಿಟ್ಟ. "ಯಾರಾದರೂ ಹೋಗಿ ಗಳ, ಗೂಟ ತಂದು ನಮಗೆ ವಾರಿಚಪ್ಪರ ಹಾಕಿ ಬಿಸಲು ತಡೆಯುವ ವ್ಯವಸ್ಥೆ ಮಾಡಿಕೊಡಬಹುದೆ?" ಸ್ವಾಮೀಜಿ ಮಾತಾಡಿದ್ದ. ಅಷ್ಟು ಬೇಕಾಗಿತ್ತು ಎನ್ನುವಂತೆ ಸಕ್ರನಾಯ್ಕ, ಸಿಂಗಾನಾಯ್ಕ ಅರ್ಧದೂರ ಓಡಿಯಾಗಿತ್ತು. ಆಗಿಂದಾಗಲೆ ಗಳ, ಗೂಟ, ಬಂಬೂ, ಹುರಿಕೊನಿ ತಂದು ಬಿಸಲು ಬಡಿಯದಂತೆ ವಾರಿಚಪ್ಪರ, ಮೇಲೆ ಆಪಿನ ಹುಲ್ಲು, ಕಾಡಿನ ದೊಡ್ಡ ಹುಲ್ಲು ಹೊದಿಸಿಯೇ ಬಿಟ್ಟರು.

ಮಾರನೇಯ ದಿನ ಹೊತ್ತಾರೆ ತಂಬಗಿ ತಗೊಂಡ ಹೋದ ಹೆಂಗಸರಿಗೆ ಮಿಕ ಮಿಕ ಕಣ್ಣು ಬಿಡುವ ಬಿಕನಾಸಿ ಯಾರಿರಬಹುದು ಅನ್ನೋದು ಸವಾಲಾಗಿತ್ತು. ಆದರು ಬರ್ಹಿದೆಸೆಗೆ ಹೋದವರು ಅಲ್ಲೆ ಮರೆಯಾಗುವಂತಹ ಪೊದೆಗಳ ಸಂದುಗಳಲ್ಲಿ ಕೂತು ನಾಳೆ ಬೇರೆ ಕಡೆಗೆ ಹೋಗಬೇಕೆನ್ನುವ ಯೋಚನೆಯನ್ನ ಮಾಡಿ ಮನೆಗೆ ವಾಪಾಸಾಗಿದ್ದರು. ಅಲ್ಲಿ ಯಾರೊ ಸ್ವಾಮಿ ಬಂದು ವಾಸವಾಗಿರುವ ವಿಷಯ ನಿಧಾನಕ್ಕೆ ಪ್ರಸ್ತಾಪ ಆಗುತ್ತಿದ್ದಂತೆ ಯಾರು ಆಕಡೆ ಹೋಗದೆ ಊರ ಹಿಂದೆ ಹಳ್ಳವನ್ನ ಹಿಡ್ಕೊಂಡ್ರು. ಸ್ವಾಮೀಜಿಗೆ ಮೊದಲದಿನದ ಆನಂದ ಮತ್ತೆ ಸಿಗದಕ್ಕೆ, "ಅಯ್ಯೊ ಈ ಪಾಪಿ ಹೆಂಗಸರು ನನ್ನ ಕಣ್ಣುಗಳಿಂದ ತಪ್ಪಿಸಿಕೊಂಡು ಬೇರೆ ಕಡೆಗೆ ಪಲಾಯನ ಮಾಡಿರುವಂತಿದೆ." ಮುನಿಸಿಕೊಂಡು ಹೇಳಿದ. "ಅಯ್ಯೋ ಸ್ವಾಮೀಜಿ ಸ್ವಲ್ಪ ಬೇರು ಬಿಟ್ಟು ವಿಶ್ವಾಸ ಗಳಿಸಿ, ಇಂತಹವು ನೂರೆಂಟು ಬಂದುಬೀಳುತ್ತವೆ. ನೀವು ಬೇಡಾಂದ್ರುಬಿಡೊದಿಲ್ಲ. ಈಗ ಯಾಕೆ ಬರಿ ಜೊಲ್ಲು ಸುರಿಸೀರಿ. ಒಸಿ ಗಂಭೀರವಾಗಿರಿ, ಯಾರಿಗಾರು ನಿಮ್ಮ ಯೋಜನೆ ತಿಳಿದಾತು. ಏನಾದರು ಎಡವಟ್ಟಾಗೋದಕೂ ಮದಲು ಎಚ್ಚರಗೊಳ್ಳಿ" ಅವನ ಚೇಲ ಸಕ್ರನಾಯ್ಕ ಮನವರಿಕೆ ಮಾಡಿದ್ದ. ಇನ್ನೊಬ್ಬವ ಹೂವಿನ ಸಸಿ ನೆಡುತ್ತಲೆ "ಅಯ್ಯೊ ಶಿವ ಸುಮ್ಮನಿರಿ ಅಷ್ಟೆಯ

ಇಡಿ ತಾಂಡವನೆ ಆಳ್ತಿರಾ, ಇಲ್ಲಿ ಯಾವ ಗಂಡಸವ್ನೆ ಅಂತೀನಿ" ಹಲ್ಲು ಕಿರಿದಿದ್ದ. ಅಂತು ಸ್ವಾಮೀಜಿಯ ಬಾಲಬಡುಕರು ದುಡ್ಡಿನ ಹೊಳೆ ಹರಿಯುತ್ತೆ ನಾವು ಉದ್ದಾರ ಆಗಿಬಿಡ್ತಿವಿ ಅಂತ ಭಾರಿ ಭಾರಿ ಕನಸು ಕಾಣುತ್ತಿದ್ದರು. ಆದರೆ ವಾಸ್ತವಾನೇ ಬೇರೆ ಇತ್ತು. ಅದಂಗಾಗಲಿ ನಾಕಜನ ಆಲೋಚನೆ ಮಾಡಿದ್ದು ಒಳ್ಳೆಯದಾಗಿರುತ್ತೆ ಅಂತಂದು ಹಟ್ಟಿ ನಾಯಕಪ್ಪ ಹೂಂ ಅಂತ ಹೇಳಿದ್ದ. ತಾಂಡದ ಹಿರಿಯರನ್ನ ಯಾರು ಪರಿಗಣನೆಗೆ ತೆಗೆದುಕೊಂಡಿರಲಿಲ್ಲ. ತುರ್ತಿಗೆ ಅಕಲಿ ಅಂಬಾನಂದ ಸ್ವಾಮೀಜಿ ಗುಡಿಸಲು ಆಯ್ತು. ಮುಂದೆ ಆವರಣ ಆಯ್ತು ಮುಳ್ಳಿನ ಬೇಲಿ ಆಯ್ತು. ಸುಡಗಾಡನ್ನ ಸೇರಿಸಿ ಮುಂದಿನ ಹಾಸಿಗಿಗೆ ಹೋಗುವ ಬಂಡಿ ಜಾಡನ್ನ ಒತ್ತುವರಿ ಮಾಡಿಕೊಂಡು ಜಾಲಿ ಮುಳ್ಳನ್ನ ನೆಡಿಸಿದ್ದ ಸ್ವಾಮೀಜಿ. ಮರುದಿನ ಗಳೆ ಕಟ್ಕೊಂಡು ಹೊಂಟವರಿಗೆ "ಅರೇ ಇವ್ನ ರಾತ್ರಿ ಇದ್ದ ದಾರಿ ಹೊತ್ತಾರೆ ಬಂಡಿಜಾಡು ಹೋಗಿ ಕಾಲ್ದಾರಿ ಆಗ್ಯೆತಲ್ಲಾ" ಅನಿಸಿತು. ಮಂದಿ ಸುಮ್ನೆ ಬಿಟ್ಟಾರ? ಯಾವನೊ ತಲೆತಿರಕ ಮುಳ್ಳಿನ ಕಂಟೆಯನ್ನ ಕಿತ್ತ ಕಿತ್ತು ಬಿಸಾಕಿ ಬಂಡಿ ಹೊಡ್ಕೊಂಡ ಹೋಗಿದ್ದ. ಯಾರೊ ದಾರಿಹೋಕ "ಏಯ್, ಯಾಕ ಕಿಳ್ತಿದ್ದಿಯಾ, ಇದೆಲ್ಲಾ ಮಠಕ್ಕೆ ಸೇರಬೇಕಾಗಿರೊ ಜಾಗೇವು" ಅಂದಿದ್ದ. "ಲೇ, ಇದೇನು ನಿಮ್ಮಪ್ಪಂದ ಇಲ್ಲ ಸ್ವಾಮೀಜಿ ಅಪ್ಪಂದ ಹೇಳು? ಬಂದಬಿಟ್ಟ ದಾರಿಯೊಳಗೆ ಮಠ ಕಟ್ಟೋದಕ್ಕೆ. ದಾರಿ ಮಾಡಿತಿದ್ದಿನಿ ನಡಿ ಅತ್ಲಾಗೆ" ಗದರಿಸಿದ್ದ. ಹೇಳಿದವನಿಗೆ ಬಿತ್ತು ಗೂಸ ಅಂದುಕೊಂಡಿದ್ದರು. ಈ ದೊಡ್ಡ ಮಠಗಳಲ್ಲಿ ನಡೆಯುವಂತೆ ಇಲ್ಲೂ ಆಗಬಹುದು ಎಂದು ಮಂದಿ ನಿರೀಕ್ಷೆ ಮಾಡಿದ್ದರು. ನಿರೀಕ್ಷೆ ಹುಸಿ ಪಟಾಕಿಯಾಯ್ತು. ಮಂದಿಯಂತು ದಾರಿ ಮಾಡಿಕೊಂಡು ಆರಾಮದಿಂದ ಅಡ್ಡಾಡತೊಡಗಿದರು. ಸ್ವಾಮೀಜಿಯಾಗಲಿ, ಅವನ ಚೇಲಾಗಳಾಗಲಿ ಚಕಾರವೆತ್ತಲಿಲ್ಲ.

ಸ್ವಾಮೀಜಿಯ ಪ್ರವೇಶ ತಾಂಡದೊಳಗೆ ಬಹಳ ತಡವಾಗಿಯೆ ಆಯ್ತು ಅದಕ್ಕೆ ನೂರೆಂಟು ಕಾರಣಗಳಿದ್ದವು. ಒಂದು ಸ್ವಾಮೀಜಿಯನ್ನ ಸೇವಾಲಾಲ್‌ರ ಅವತಾರ ಎಂದು ಪ್ರತಿಬಿಂಬಿಸಲಾಯ್ತು. ಅನೇಕ ಬಂಜಾರರು ಇದನ್ನ ಒಪ್ಪುವುದಕ್ಕೆ ತಯಾರಿಲ್ಲ. ಸ್ವಾಮೀಜಿಯೆ ಖುದ್ದಾಗಿ ನಾನು ಈ ಲೋಕದವನಲ್ಲಾ ಯಾವುದೋ ಹೊಸದೊಂದು ಲೋಕದಿಂದ ಬಂದವನು ಎಂಬಂತೆ ಪ್ರದರ್ಶನ ಮಾಡಿಕೊಳ್ಳುತ್ತಿರುವಾಗ ಮಂದಿ ಅವನ ಹತ್ತಿರ ಹೋಗಲು ಸಾಧ್ಯವೆ. ಹಾಗಾಗಿಯೆ ಕೆಲವರು ಆತನನ್ನ ಹೊರಗೆ ತಡೆದಿದ್ದರು. ಸ್ವಾಮೀಜಿಯ ಎಂಟ್ರೆನೂ ಬಹಳ ಜಬರ್‌ದಸ್ತ್ ಇತ್ತು. ಕಾಲಿಗೆ ಬೀಳುವವನು ಕಡ್ಡಾಯವಾಗಿ ರೂಪಾಯಿ, ಮಾಲೆ ಹಾಕುವವನು ಎರಡು ರೂಪಾಯಿ, ಮನೆ ಪ್ರವೇಶಕ್ಕೆ ಹದಿನೈದು ಹೀಗೆ ದರವನ್ನ ನಿರ್ಧರಿಸಿದ್ದ. ಖಾಲಿಮಠ, ಖಾಲಿ ಮನಸ್ಸು ಮಾಡುವುದಾದರು ಏನು? ಇಂತಹ ಹಲ್ಕಾ ಕೆಲಸವನ್ನ ಮಠದೊಳಗೆ ಬಂದಾಗ ಬೇರೆ ರೀತಿಯ ದರಪಟ್ಟಿ, ಐಟಮ್ಮಿಗೆ ಇಷ್ಟು ಅಂತ ಫಿಕ್ಸ್

ಆಗಿತ್ತು. ಮುಗ್ದಮಂದಿಗೆ ಸ್ವಾಮೀಜಿಯ ದುಡ್ಡಿನ ಮರ್ಮಾ ಅರಿಯದೆ, ಯಾರೊ ನಾಕಣೆ, ಎಂಟಣೆ ಕೊಟ್ಟು ತಮ್ಮ ಗೌರವ ಸೂಚಿಸಿದರು. ಸ್ವಾಮೀಜಿನು ಮಾತಾಡದೆ ಸುಮ್ಮನಿದ್ದ. ಕೊಟ್ಟಿದ್ದನೆಲ್ಲಾ ಅವನ ಚೇಲಾಗಳಾದ ಶಿಂಗಾನಾಯ್ಕ, ಶಕ್ರನಾಯ್ಕ ದುಡ್ಡಿನ ಕಡೆಗೆ ಆಶೆ ತುಂಬಿದ ಕಣ್ಣುಗಳಿಂದ ನೋಡುತ್ತಿದ್ದರು. ಹಿಂದೆ ನಿಂತು ಗಾಳಿ ಬೀಸುವುದು, ನೀರು ಕೊಡುವುದು ಮಾಡುತ್ತಿದ್ದರು. ಸ್ವಾಮೀಜಿ ಬಂದ ಸುದ್ದಿ ಸುತ್ತಲ ತಾಂಡಗಳಿಗೆ ಹಬ್ಬಿದ್ದೆ ತಮ್ಮ ತಾಂಡಕ್ಕೆ ಕರೆಯೋದಕ್ಕೆ ಬಂದರು. ಸ್ವಾಮೀಜಿಯ ಬುಕ್ಕಿಂಗ್ ಮ್ಯಾನೇಜರ್ ಚಂದಿಯಾನಾಯ್ಕ ದಿನಾಂಕ, ಸಮಯ, ಕಾರ್ಯಕ್ರಮ, ಸ್ವಾಮೀಜಿಯ ದರಪಟ್ಟಿಯನ್ನು ಬಂದವರಿಗೆ ಸರಿಯಾಗಿ ಹೇಳುವುದರಲ್ಲಿ ಮಾಹೀರ್ ಆಗಿದ್ದ. ಎಲ್ಲವನ್ನು ಚಾಚು ತಪ್ಪದೆ ಹೇಳಿದ "ನೋಡಪ್ಪ ಹೆಸರೇನು ಅಂದೆ?" ಚಂದಿಯಾ ಕೇಳಿದ "ಹೆಸರು ನೀ ಕೇಳಲೂ ಇಲ್ಲ ನಾನು ಹೇಳಿಲ್ಲ" ಅಂದ ಬಂದವನು "ಶಿವನೆ ಇಷ್ಟು ದೊಡ್ಡ ಹೆಸರು" ಚಂದಿಯಾ ಸುಸ್ತಾದ. "ಯಾರ ಹೆಸರು" ಆಸಾಮಿ ಮಾತಾಡಿದ. "ಅದೇ ನೀ ಹೇಳಲಿಲ್ಲಾ. ನಾ ಕೇಳಲಿಲ್ಲಾ." "ವಿಚಿತ್ರ ಐತಿ ಬಿಡಪ್ಪ ನಿನ್ನ ಹೆಸರು" ಅಂದ ಚಂದಿಯಾ "ಇದ್ರೂ ಇದ್ದೀತು ಬಿಡು" ಅಂದ ಅವನು ಅವನಿಗೆ ಮಾತಾಡುವ ಅವಶ್ಯಕತೆ ಇಲ್ಲದ್ದಿದ್ದರಿಂದ, ಸುಮ್ಮನಾದ. "ಲೇ ತಮ್ಮ ನೀ ಕೇಳಲಿಲ್ಲಾ" ಕೂಗಿದ. ಆಸಾಮಿ ಚಂದಿಯಾನ ಕಡೆ ನೋಡಲಿಲ್ಲಾ. ಯಾರನ್ನೋ ಕರೆಯುತ್ತಿರಬಹುದು. ಎಂದವನೆ ಗಪ್ಪಾದ. "ಕೆಪ್ಪ ಅದೀಯ, ಏಯ್, ಯಾವ ತಾಂಡ" ಹಕನ್ಯಾ ನಾಯ್ಕಗೆ ಸಿಟ್ಟು ನೆತ್ತಿಗೇರಿತ್ತು. ಸಂಬಾಳಿಸಿಕೊಂಡವನೆ "ಏಯ್ ಮುದಕಪ್ಪ ನನ್ನ ಹೆಸರು ಹಕನ್ಯನಾಯ್ಕ, ನಮ್ಮೂರು ಕೆಮ್ಮತಾವೆಮ್ಮಿತಾಂಡ ಹೇಳು" ಅಂದ "ಹಿಂಗ ಹೇಳ ಮತ್ತ. ಆಗಲೆಯಿಂದ ಕೇಳ್ತಿದ್ದಿನಿ, ಏನೂ ಮಾತಾಡವಲ್ಲೆ. ಅಂದಂಗ ಸ್ವಾಮೀಜಿಗೆ ಮುಂಜಾನೆ ತಿಂಡಿಗೆ ಏನಾದರು ಒಳ್ಳೆ ಫಲಾರ ಆಗಬೇಕು ಏನಪ್ಪ ಐದಾರು ಮಾವಿನಹಣ್ಣು, ಎಳೆನೀರು. ಮಧ್ಯಾಹ್ನ ತರಕಾರಿ ಪಲ್ಯೆ., ಚಪಾತಿ, ಅನ್ನಸಾರು, ಊಟತಿಂಡಿ. ಈಗ ಅವರು ಬರಾಕ ಐನ್ನೂರು ಭಕ್ತಾದಿಗಳು ಕೊಟ್ಟದ್ದು ಅವರು ತಗೋತಾರ. ಅದೆಲ್ಲಾ ನಮ್ಮವರಿಗೆ ಕೊಡಬೇಕು." ಪಟ್ಟಿ ಉದ್ದವಾಗಿತ್ತು ಕೆಮ್ಮತಾವೆಮ್ಮಿ ತಾಂಡದ ಹಟ್ಟಿನಾಯಕ ಹಳದೂ ನಾಯ್ಕನಿಗೆ ತಲೆ ತಿರುಗಿತ್ತು. "ಅಲ್ಲಪ್ಪ, ಸ್ವಾಮೀಜಿ ಏನೂ ಭೂಮಿ ಮೇಲದಾನೊ ಇಲ್ಲ ಸ್ವರ್ಗದಿಂದ ಇಳದು ಬರ್ತವ್ನೆ ಅಂತೀನಿ. ಅವನ ಬೇಡಿಕೆಯ ಪಟ್ಟಿ ಹನುಮಂತನ ಬಾಲಬೆಳದಂಗೆ ಬೆಳಿತಾ ಇದೆ. ಏನು ಮಾಡುವುದು? ಬಾ ಅಂತ ಹೇಳೋದೊ ಇಲ್ಲ, ಬ್ಯಾಡ ಸ್ವಲ್ಪ ದಿನ ತಡಿಯೋಣ" ಅವನ ಹಿಂದಿದ್ದ ಕಾರಬಾರಿ ಖಜೂರಿನಾಯ್ಕ ಡಾವೊ ಡವಲಾನಾಯ್ಕನ್ನ ಕೇಳಿದ. ಅವರು ಸರಿಯಾದ ಉತ್ತರ ಕಾಣದೆ ಮಕ ಮಕ ನೋಡಿಕೊಳ್ಳತೊಡಗಿದರು. ಹೇಗೊ ಆದಂಗಾಗಲಿ ಹಾಟಗಳ್ಳನ ಮದ್ವಿ ಅನ್ನೊ ಗಾದೆಯಂತೆ. ಹಳದೂ ಬಂದರ ಬರ್ಲಿ ಅಂದ "ಆಯ್ತು ಮುಂದಿನ ಅಮಾಸಿದಿನ ತಪ್ಪದಂಗೆ ಕರ್ಕೊಂಡು ಬಂದುಬಿಡಪ್ಪ" ಅಂದು ಬಿಟ್ಟ.

ತಾಂಡಗಳನ್ನ ಸುತ್ತಿ, ಕುಡಿತದ ವಿರುದ್ಧ ದೊಡ್ಡ ಆಂದೋಲನ ನಡೆಸುವ ತಯಾರಿ ಮಾಡಿದ. ಆತ ಹೇಗಾದರು ಮಾಡಿ ಪ್ರಚಾರ ಗಿಟ್ಟಿಸಿಕೊಳ್ಳಬೇಕಿತ್ತು. ಅದರ ಪೂರಾ ತಯಾರಿ ನಡೆದಿತ್ತು. ಶತಮಾನಗಳಿಂದ ಭಟ್ಟಿ ಇಳಿಸುವ ಕ್ರಿಯೆಯಲ್ಲಿ. ಮಾಹಾರ ಆದ ಮಂದಿಗೆ ಇದೇನು ದೊಡ್ಡದು? ಯಾವ ಪ್ರಮಾಣದಲ್ಲಿ ಕೊಳೆ ಹಾಕಬೇಕು. ಮರದ ಚುಕ್ಕೆ ನವಸಾಗರ, ಬ್ಯಾಟರಿಶೆಲ್ಲು, ಹಳೆ ಎಕ್ಕಡ, ಹಾಕಿ ಕೊಳೆಮಾಡಿ, ಭಟ್ಟಿ ಇಳಿಸಿ ಮಾರಾಟ ಮಾಡುವುದು ಬಂಜಾರರಿಗೆ ಕರಗತವಾಗಿತ್ತು. ಪ್ರತಿಯೊಂದು ಮನೆಯಲ್ಲೂ ಭಟ್ಟಿ ಸರಾಯಿ ಮಾಡುವ ಪರಿಣಿತರು, ವಿಶೇಷಜ್ಞನರು ಇದ್ದೆ ಇದ್ದರು. ಹಾಗಾಗಿ ಕುಡಿತ ಸಹಜವಾಗಿತ್ತು. ದುರಂತವೆಂದರೆ ಮನೆಮಂದಿ ಎಲ್ಲಾ ಕುಡಿಯುವುದು ಸಹಜವಾದ ಪ್ರಕ್ರಿಯೆ. ತಂದೆಯೆ ಸ್ವತಃ ಹೆಂಡತಿ, ಮಕ್ಕಳಿಗೆ, ಸೊಸೆಯಂದಿರಿಗೆ ದೀಪಾವಳಿಯ ಅಮಾವಾಸ್ಯೆಯ ಸಂಜೆ ಪ್ರತಿಯೊಬ್ಬರಿಗೂ ಸರಾಯಿ, ಹೆಂಡ, ಬ್ರಾಂದಿ ಯಾವುದಾದರೊಂದನ್ನ ತಾನೆ ಕೈಯಾರೆ ಹಂಚುತ್ತಿದ್ದ. ಚಿಕ್ಕಮಕ್ಕಳಿಗೆ ಸದ್ಯಕ್ಕೆ ವರ್ಜ್ಯವಾಗಿತ್ತು. ಮಿಕ್ಕೆಲ್ಲರು ಸಮನಾಗೆ ಕುಳಿತು ಸುರಪಾನ ಮಾಡುವ ಒಂದು ಅವಕಾಶವಿತ್ತು. ಅದೇನು ಹೆಚ್ಚುಗಾರಿಕೆಯಂತಿಲ್ಲ ಅಥವಾ ಕೀಳರಿಮೆಯೂ ಅಲ್ಲ. ಬಂಜಾರ ಸಮಾಜದ ಸಮಾನತೆಯ ಪ್ರತೀಕ. ಬಂಜಾರ ಸಮುದಾಯ ಮಹಿಳೆಯರಿಗೆ ಕೊಡುತ್ತಿದ್ದ ಸಮಾನತೆ, ಗೌರವದ ಪ್ರತೀಕವಾಗಿತ್ತು. ಬೇರೆ ಸಮಾಜಗಳಲ್ಲಿ ನಡೆಯುವ ದ್ವಂದ್ವ, ಎರಡು ಬಗೆಯ ಧೋರಣೆಗಳು ಬಹಳ ಕಡಿಮೆ. ಮಹಿಳೆ ಬಹಳಷ್ಟು ಸ್ವತಂತ್ರಳು. ಹೀಗಾಗಿಯೆ ಇಡೀ ಕುಟುಂಬ ಅವಳ ಸಾತಿಗಿತ್ತು. ಆದರೆ ಗಂಡು ಕುಡಿದು ಚಟಕ್ಕೆ ದಾಸನಾದ ಮೇಲಂತು ವಾಸ್ತವತೆಯನ್ನ ಮರೆತುಬಿಡುತ್ತಿದ್ದ. ಕೆಲಸ ಬಗಸಿ ಬಿಟ್ಟು ಕಟ್ಟೆಗೆ ಅಂಡೂರಿ ಹೆಂಡತಿ ದುಡಿಮೆಯ ಮೇಲೆ ಜೀವನ ಸಾಗಿಸುವ ಪ್ರವೃತ್ತಿಯನ್ನ ಅನುಸರಿಸಿದ್ದ. ಸಂಜೆಗೂ ಕುಡಿದು ಮುದುರಿಕೊಂಡರೆ ಅವಳ ಬಯಕೆಗಳು, ಸುಖದ ಕ್ಷಣಗಳು? ಅದಕ್ಕೆ ಅವಳು ನಾನಾ ನಮೂನಿಯ ಅಡ್ಡದಾರಿಗಳನ್ನ ಹಿಡಿದಿದ್ದಳು.

ಇದೇ ಸಮಯಕ್ಕೆ ಸರಿಯಾಗಿ ಅಕಲಿ ಅಂಬಾನಂದ ಸ್ವಾಮೀಜಿಯ ಅವತಾರವಾಗಿತ್ತು. ಕುಡಿಯುವರು ಬಿಡಲೇಬೇಕು. ಕುಡುಕರೆಲ್ಲಾ ಸ್ವಾಮೀಜಿಯನ್ನ ಕಂಡರೆ ದುಃಸ್ವಪ್ನದಂತೆ ಆಡುತ್ತಿದ್ದರು. ಹೇಗಾದರು ಮಾಡಿ ವ್ಯಸನಮುಕ್ತ ಸಮಾಜ ನಿರ್ಮಾಣ ಮಾಡುವ ಪಣ ತೊಟ್ಟಿದ್ದ. ಕುಡಿದು ಹೆಚ್ಚಾಗಿ ಜಗಳ ತಕ್ಕೊಂಡು ಪೋಲೀಸು ಕಛೇರಿಗೆ ಅಲಿಯುವವರ ಕೇಸುಗಳನ್ನ ಲಪಾದಪಾ ಮಾಡಿದ್ದ. ಹಾಳಾಗುತ್ತಿರುವ ಕುಟುಂಬಗಳನ್ನ ಒಂದುಗೂಡಿಸುವ ಪಣತೊಟ್ಟಿದ್ದ. ಆದರೆ ದುರಂತವೆಂದರೆ ಯಾರು ಫಲಾನುಭವಿಗಳಿದ್ದರೊ ಅವರೆ ಈ ಹೋರಾಟದಿಂದ ದೂರ ಸರಿದಿದ್ದರು. ಆದರೂ ಸ್ವಾಮೀಜಿ ತನ್ನ ಪ್ರಯತ್ನವನ್ನ ಕೈಬಿಡಲಿಲ್ಲ. ತನ್ನ ಮಠದ ಆರ್ಥಿಕ ಪರಿಸ್ಥಿತಿ ಸುಧಾರಣೆಗೆ ಮಹಾರಾಷ್ಟ್ರದ ಕಡೆಗೆ ಹೋಗಿ ಅಲ್ಲಿನ

ಶ್ರೀಮಂತರ ಹತ್ತಿರ ದೇಣಿಗೆ ಪಡೆಯುತ್ತಿದ್ದ. ಇನ್ನೂ ಕೆಲವರು ಹೇಳುವಂತೆ ಆತ ಶ್ರೀಮಂತರಿಗೆ ಮೋಸ ಮಾಡಿ ಅವರ ಹಣವನ್ನೆಲ್ಲಾ ಲಪಟಾಯಿಸಿಕೊಂಡು ಬರುತ್ತಿದ್ದ ಎನ್ನುವ ಪ್ರತೀತಿಯೂ ಇದೆ. ಮಠದಲ್ಲಿದ್ದಾಗ, ಬೇರೆ ಊರುಗಳಿಗೆ ಹೋಗುವಾಗ ಮಾತ್ರ ಕಾವಿ. ಬೇರೆ ಕಡೆ ಹೋದನೆಂದರೆ ಕಣ್ಣಿಗೆ ತಂಪು ಚಾಳೀಸು, ಧೋತ್ರದ ಬದಲಿಗೆ ಜೀನ್ಸ್‌ಪ್ಯಾಂಟು, ಬಣ್ಣಬಣ್ಣದ ಷರ್ಟ್‌ಗಳು. ಅವತಾರವೆ ಬೇರೆಯಾಗಿ ಬಿಡುತ್ತಿದ್ದವು. ಕೆಲವೇ ಮಂದಿ, ಆತನ ಅವತಾರವನ್ನ ಕಂಡವರಿಗೆ ಹಿಂದಿಯ ಹಳೆನಟ ದೇವಾನಂದನ ಹಿಂದಿ ಸಿನಿಮಾ ಸ್ವಾಮಿದಾದದಲ್ಲಿ ದೇವಾನಂದನ ಪಾತ್ರದಂತೆ ಕಂಡು ಬಂದಿತ್ತು. ಮಠದಲ್ಲಿ ಸ್ವಾಮಿಯೂ ಪರ ಊರಿನಲ್ಲಿ ದಾದನಂತೆ ವೇಷ ಬದಲಿಸಿದ್ದ ಅಕಲಿ ಅಂಬಾನಂದ ಪ್ರಭು.

ಘಟನೆ, ಸನ್ನಿವೇಶ ಏನಾಗಿತ್ತು ಪ್ರತ್ಯಕ್ಷಸಾಕ್ಷಿಗಳಿಲ್ಲ. ಸ್ವಾಮೀಜಿ ಅಕಲಿ ಅಂಬಾನಂದರ ಕಗ್ಗೊಲೆಯಾಗಿ, ಹೆಣ ಹಾದಿಯಲ್ಲಿ ಹದ್ದು ಕಾಗೆಗಳ ಪಾಲಾಗಿತ್ತು. ಯಾರೊ ಅಪರಿಚಿತರು ಕೆಲವು ಫೋಟೋಗಳನ್ನ ಕ್ಲಿಕ್ಕಿಸಿ ಮಠಕ್ಕೆ ಕಳುಹಿಸಿದ್ದರು. ಮಠ ಮೂರು ಪಾಲಾಗಿತ್ತು. ಅವನ ಹಿಂದಿದ್ದವರು ವ್ಯಸನಿಗಳಾಗಿದ್ದರು. ಗೌಪ್ಯವಾಗಿ ಸ್ವಾಮೀಜಿಯ ಜೊತೆಗೆ ಎಲ್ಲಾ ರೀತಿಯ ಅವ್ಯವಹಾರಗಳಾಗಿದ್ದ ಗಾಂಜಾ, ಚಿಕನ್, ಸರಾಯಿ, ಹೆಣ್ಣು, ಎಲ್ಲಾ ವ್ಯವಹಾರದಲ್ಲಿ ತಾಂಡದ ಮುಖಂಡರು ಅನೇಕರು ಸಮಪಾಲನ್ನ ಹೊಂದಿದ್ದರು. ಆದರೆ ಸ್ವಾಮೀಜಿಯ ಕೊಲೆಯಾಗುವವರೆಗೆ, ಒಂದು ಸುಳಿವು ಹೊರಬಂದಿರಲಿಲ್ಲ. ಆತನ ನಿಜಭಕ್ತರಿಗೆ ದೇವರಾಗಿದ್ದ. ಸ್ವಾಮೀಜಿ ಇಲ್ಲದೆ ಮಠ ಖಾಲಿ ಖಾಲಿ, ಅದರ ಜವಾಬ್ದಾರಿ ಯಾರು ಹೊರಲು ಮುಂದಾಗದೆ. ಬೇಲಿ ಎಲ್ಲಾ ಕಿತ್ತೊಗದು, ದನಕರುವಿನವರು, ಕುರಿ ಮೇಯಿಸುವವರು ಕೆಲವೆ ದಿನಗಳಲ್ಲಿ ಸ್ವಾಮಿ ಸಾಕಿದ್ದ ಮರಬಳ್ಳಿಗಳನ್ನೆಲ್ಲಾ ಧ್ವಂಸಮಾಡಿದ್ದರು.

* * *

66. ಸುವಾಲಿಯ ಆಂತರಿಕ ಸಂಘರ್ಷ

ಪಡ್ಡೆ ಹುಡುಗರು ಅನೇಕ ವಿಷಯಗಳನ್ನು ಕಲಿಯುವುದು, ಅವುಗಳನ್ನು ವಿನಿಮಯ ಮಾಡಿಕೊಳ್ಳುವುದು ರಾತ್ರಿ ಹನ್ನೊಂದರ ನಂತರವೆ. ಮಂಕಾಳಿ ನಾಯ್ಕನೂ ಹೊರತೇನೂ ಅಲ್ಲ. ದೀಪಾವಳಿಯ ಆಸುಪಾಸು ಸೆಪ್ಟೆಂಬರ್ ಮುಗಿದು ಅಕ್ಟೋಬರ್ ತಿಂಗಳಲ್ಲಿ ಒಳ್ಳೆ ರಾಗಿ ಕೊಯ್ಲು, ರಾತ್ರಿ ಬೆಳದಿಂಗಳಲ್ಲೆ ರಾಗಿ ಕೊಯ್ಯಲು ಮಂದಿ ಗುತ್ತಿಗೆ ಹಿಡಿದು, ಕೊಯ್ಯಲು ಹೋಗುತ್ತಿದ್ದರು. ಹರೆಯದ ಹುಡುಗ ಹುಡುಗಿಯರಿಗೆ ತುಂಬಿದ ವಯಸ್ಸು ಹಗಲ್ಯಾವುದು? ರಾತ್ರಿಯಾವುದು ಎನ್ನುವ ಪರಿಕಲ್ಪನೆಯೆ ಇರಲಿಲ್ಲಾ. ಹತ್ತುಮಂದಿಯ ಗ್ಯಾಂಗ್ ಎರಡು ಎಕ್ಕರೆ ಹೊಲವನ್ನು ಕೊಯ್ದು ಚಪಾಟಿ ಮಾಡಿ ಬಂದು ಬಿಡುತ್ತಿದ್ದರು. ರಾಗಿ ಕೊಯ್ಲು ಮುಗಿತಿದ್ದಂತೆ ತಾಂಡದ ಮನೆ ಮನೆಯ ಹುಡುಗಿಯರು ಕೈಯಾಗ ಬಟ್ಟಲು ಹಿಡಿದು ಎಣ್ಣೆ ಸುರಿದು ಕುಣಿಯುವುದನ್ನ ಅಭ್ಯಾಸ ಮಾಡಿದರೆ ಹುಡುಗರು ಯಾವ ಮನೆಯ ಕಟ್ಟೆ ಖಾಲಿ ಇದೆಯೊ ಅಲ್ಲಿ ಕುಳಿತು ಹರಟೆ ಹೊಡೆಯುವುದು. ಟಿ.ವಿ.ಇಲ್ಲ, ಪೋನಿಲ್ಲ. ಅವೇ ಮಾತುಗಳು ಮನರಂಜನೆ ಕೊಡುತ್ತಿದ್ದವು. ಅವು ಬರಿ ಅವನು–ಅವಳ ಸಂಬಂಧ. ಸುವಾಲಿಯ ಮದುವೆ ತಡವಾಗಿ, ಎರಡನೆಯ ಸಂಬಂಧದಲ್ಲಾಗಿತ್ತು. ಸುವಾಲಿ ನೋಡುವುದಕ್ಕೆ ಅಂತಹ ಸುಂದರಿಯಾಗಿರದಿದ್ದರೂ ತಿರಸ್ಕರಿಸುವಂತೇನು ಇರಲಿಲ್ಲಾ. ಅವತ್ತು ದೀಪಾವಳಿ ಅಮವಾಸ್ಯೆ ಅವಳ ಸಂಬಂಧ ಕೂಡಿಬಂತು. ತಾಂಡದ ಜಕಣಾ ನಾಯ್ಕನಿಗೆ ಅದ್ಯಾವ ಕಾಲದೊಳಗೆ ಮೈಮೇಲೆ ದೇವರು ಬಂದಿತ್ತೊ "ಹಾಂ, ಹೂಂ" ಅಂತೇಳಿ ಮುಲಕಾಡಿದ್ದೆಶಿವ ತಾಂಡದ ಮಂದಿ ಪೂಜಾರಿ ಅಂದುಬಿಟ್ಟರು. ಮುಂದೆ ಬರ್ತಾ ಬರ್ತಾ ಕೊಳಕ ಪುಜಾರಿ ಹಟಮಾರಿ ದೇವರು ಅಂತೇಳಿ ಮಂದಿ ಮಾತಾಡಿಕೊಳ್ಳತೊಡಗಿದರು. ಅದ್ಯಾವದೊ ತಾಂಡದಿಂದ ಮದುವೆ ಮಾಡಿಕೊಂಡು ಬಂದಿದ್ದ ಅವನ ಹೆಂಡತಿ ರುಕಿ ಒಂದು ಗಂಡು ಒಂದು ಹೆಣ್ಣಿಗೆ ಜನ್ಮ ಕೊಟ್ಟಳು. ಸಂಸಾರ ಏನೊ ಚೆನ್ನಾಗಿಯೆ ನಡೆದಿತ್ತು. ಆದರೆ ಮಧ್ಯದಾಗ ಏನಾಯ್ತೊ ಹಾಳಮನಿ ರುಕಿ ನೇಣು ಹಾಕಿಕೊಂಡು ಸತ್ತುಹೋಗಿದ್ದಳು. ಹಿಂದಿನ

ಮನಿ ತೊಪ, ಅವನ ಮೊದಲನೇ ತಮ್ಮ ಹೀರ್ಯಾನಾಯ್ಕ ಮೂರನೆಯವನಾದ ಬದಿಯಾನಾಯ್ಕನ್ನ ಅವರ ಹೆಂಡಿರನ್ನ ಪೊಲೀಸರು ಕರ್ಕೊಂಡು ಹೋಗಿದ್ದರು. ಮಡಿಲಲ್ಲಿ ಚಿಕ್ಕ ಮಗು ದಮ್ಮೂರನ್ನ ಕಟ್ಟಿಕೊಂಡು ಹೋಗುವುದು, ಪೋಲೀಸರ ಹೇಳಿಕೆಗೆ ಉತ್ತರ ಕೊಡುವುದು ಜಾನಿಬಾಯಿಗೆ ಸಾಕಾಗಿತ್ತು. ಅವಳ ಮೈದುನ ಹೀರ್ಯಾನಾಯ್ಕ, ದಮ್ಮೂರನನ್ನ ಜೋರಾಗಿ ಜಿಗಟಿ ಅಳಿಸುತ್ತಿದ್ದ. ಅವನ ಅತ್ತಿಗೆ ಜಾನಿಬಾಯಿ ಹೊರಗೆ ಬಂದಾಗ ಅವಳ ಹಿಂದಿಂದೆ ಅವನು ಪಾರಾಗಿ ಬೀಡಿ, ಚಾ ಕುಡಿದು ಹೊರಗೆ ಸ್ವಲ್ಪ ಹೊತ್ತು ಅಡ್ಡಾಡಿ ಒಳಗೆ ಹೋಗುತ್ತಿದ್ದರು. ಆಗಿನ ಕಾನೂನು ಬಹಳ ಕಟ್ಟುನಿಟ್ಟು. "ಆಕಿ ನೇಣು ಹಾಕಿಕೊಂಡಾಗ ಎಷ್ಟು ಗಂಟೆ" ಹೆಡ್‌ಕಾನ್ಸ್‌ಟೇಬಲ್ ನಾರಪ್ಪನವರ್ ಕೇಳಿದ. "ನಮ್ಮ ತಾವ ಯಾ ಗಡಿಯಾರ ಐತ್ರೆಯಪ್ಪ ಟೇಮು ನೋಡಾಕ" ಬದಿಯಾನ ಹೆಂಡತಿ ಚಾಪ್ಲಿ ಬಾಯಿ ಹೇಳಿದಳು. "ಬೆ ನಿಮ್ಮವ್ವನ ನಾಯಿಜಾತಿಯವಳ ನಮ್ಮನ್ನೆ ಕೇಳ್ತಿ ಏನೈತೆ ಅಂತಂದು. ಟೈಂ ಎಷ್ಟಿತ್ತು ಅಂದ್ರ ಮುಂಜಾನಿನೊ, ಹೊತ್ತು ನೆಟ್ಟಗಿತ್ತೊ, ಹೊತ್ತು ವಾಲಿತ್ತೊ, ಉಣ್ಣೊ ಹೊತ್ತಾಗಿತ್ತೊ, ಸಂಜೆಯಾಗಿತ್ತೊ, ಗೋಧೂಳಿ ಹೊತ್ತೊ ಇಲ್ಲ ಮಕ್ಕರಗೌಳ ಆಗಿತ್ತು" ಅಂತ ಬ್ಯೊತ ಬೊಯ್ದು ಒಂದು ಹೇರಿದ ಬೆನ್ನಿಗೆ.

ಜೊಗಡ ಜಕಣಾನಾಯ್ಕನ ಅವಸ್ಥೆ ನೋಡಲಾಗದ ಅವನ ತಾಯಿ ಸೀತಬಾಯಿ ವಾರ ಒಪ್ಪತ್ತಿಗೆ ಮತ್ತೊಂದು ಹುಡುಗಿಯನ್ನ ನೋಡಿದ್ದಳು. ಸುವಾಲಿಗೂ ತೆಳ್ಳಗೆ ಬೆಳ್ಳಗೆ ಚೆಂದಿದ್ರು ಹಲ್ಲು ಮುಂದಿರೋದಕ್ಕೆ ಯಾರು ವರಗಳು ಒಪ್ಪಲಿಲ್ಲಾ. ನಾಯಿ ಹಸದಿತ್ತು-ಅನ್ನ ಹಳಸಿತ್ತು ಅನ್ನೋಹಂಗ ಜಕಣ ನಾಯ್ಕಗ ಮದುವೆ ಮಾಡಿಸಿ ಮನೆಗೆ ಕಳುಹಿಸಿದರು. ಹಬ್ಬ ಮುಗಿದಿರಲಿಲ್ಲಾ ಮಂದಿ ಹಬ್ಬಕ್ಕೆ ಮನಿ ಬಳಿಯೋದು, ಬಟ್ಟೆ ಖರೀದಿ ಮುಂತಾದ ಕೆಲಸದಲ್ಲಿ ತೊಡಗಿದ್ದರು. ಸುವಾಲಿಯ ಹಳೆಗೆಳೆಯ ಬಾಲ್ಯದೊಳಗೆ ಹತ್ತಿಪ್ಪತ್ತು ಸಲ ಗಂಡ ಹೆಂಡತಿ ಆಟ ಆಡಿದವನು ಸುಕ್ಲಾನಾಯ್ಕ ಪಟ್ಟಣದಲ್ಲಿ ಹತ್ತೊ, ಹನ್ನೊಂದನೆ ಕ್ಲಾಸಿನಲ್ಲಿ ಓದುತ್ತಿದ್ದವನು ತಾಂಡಕ್ಕೆ ಬಂದಿದ್ದ. ಜೋಗಡನ ಹೊಲದ ಮೂಲೆಯಲ್ಲೆ ಸುಕ್ಲಾನ ತಂದೆ ಜಂಬನಾಯ್ಕನ ಮರಳುಹೊಲ ಯಾವಾಗ ನೋಡಿದರು ಜೇಕು. ವೇಲಾಳೊ (*ವೇಲಾಳೊ-ಹೂವಿರುವ ಹುಲ್ಲು.) ಹುಲ್ಲು ಮೆತ್ತಿಕೊಂಡಿರುತ್ತಿತ್ತು. ಜೀವಮಾನದಾಗ ಗಿದ್ನ ಹುಳ್ಳಿಕಾಳು ಒಂದು ಮಣ ಜ್ವಾಳ ಬೆಳಿಲಿಲ್ಲಾ. ಆದರೂ ಹೊಲ ನೋಡಾಕ ಬಂದಿದ್ದ ಸುಕ್ಲನಾಯ್ಕ. ಸುವಾಲಿ ಒಬ್ಬಳೆ ಹೊಂಟಾಳಂತ ಹಿಂದಿಂದೆ ಬಂದಿದ್ನೊ, ಇಲ್ಲ ನಿಜವಾಗಿಯೂ ಹೊಲದ ಕಡಿಗೆ ಅಡ್ಡಾಡಿ ಬರುವಂತೆ ಸ್ವತಃ ಇರಾದೆಯಿಂದ ಬಂದಿದ್ದ ಅನ್ನೋದನ್ನ ಸುಕ್ಲನಾಯ್ಕನೆ ಹೇಳಬೇಕು. ಸುವಾಲಿ ಜೋಳಕೊಯ್ದು ಬಿಟ್ಟಿದ್ದ ತೊಗರಿ ಸಾಲಿನಲ್ಲಿ ಸೆಣಬಿನ ಹೂವು ಬಿಡುಸುತ್ತಿದ್ದಳು. ಅವಳ ಅತ್ತೆ ಸೀತಾಬಾಯಿ "ಎಯ್ ತಂಗಿ

* ವೇಲಾಳೊ-ಹೂವಿರುವ ಹುಲ್ಲು

ಹೊಲದ ಕಡೀಗಹೋಗಿ ಸೆಣಬಿನ ಹೂವಾರು ತತ್ತಾರವ್ವ ಮುದ್ದಿಮೇಲೆ ಉದಕ ಮಾಡಾಕ ಏನೂ ಇಲ್ಲ ಮನಿಯಾಗ" ಅಂತ ಗೋಗರೆದಿದ್ದಳು. "ಬೇ ಒಬ್ಬಾಕಿನ ಎಲ್ಲಿ ಕಳಸಬ್ಯಾಡ, ಅಮಾಸಿಮುಂದ್ಯೆತೆ, ಹಸಿ ಮೈ ಬೇರೆ ಐತೆ" ಜಕಣಾನಾಯ್ಕ ಕೂಗಿ ಹೇಳಿದ್ದ. ಹೊತ್ತು ವಾಲಿತ್ತು ಅಷ್ಟು ದೂರ ನಡದು ಹೋಗಿ ಹೂ ತಂದು ಬೇಯಿಸಿ ಹಾಕಾಕ ಆಗೋದಿಲ್ಲ. ಅವರ ಬಾಳೇವು ಹೆಂಗಾನ ಮಾಡ್ಲಿ ಅಂತ ಹೇಳಿ ಮುದುಕಿ ಮನಿ ಮುಂದಿನ ಬೇವಿನ ಮರದ ಕಟ್ಟೆಗೆ ಕುಂತಳು. ಸುವಾಲಿಗೆ ಹೋಗುವುದು ಅನಿವಾರ್ಯವಾಗಿತ್ತು. ಎದ್ದವಳೆ, ಇನ್ನೂ ಮಂದಿ ಅಡ್ಡಾಡುತ್ತಿದ್ದರು. ಮದಲೆ ಉದ್ದನಮೂಳಿ ನಾಕ ಹೆಜ್ಜಿ ರಪ ರಪ ಒಗದ್ರ ಬಂಡಿಹೊಲ ಬರುತ್ತೆ ಅಂತೇಳಿ ಅವಸವಸರವಾಗಿ ಹೊಂಟಿದ್ದಳು. ಕೆಳಗಡೆಯಿಂದ ಹೂವನ್ನ ಹರಿತಾ ಮೇಲೆ ಹೋಗುವುದಕ್ಕು ಸುಕ್ಲ ಕಾಣೋದಕ್ಕು ಸರಿಹೋಯ್ತು. ಮದುವೆಯಾಗಿ ಹದಿನೈದು ದಿನ ಆಗಿಲ್ಲ. "ಊಹೂಂ" ಅಂತ ಮನಸ್ಸಿಗೆ ಸಂದೇಶ ಕಳುಹಿಸಿದಳು. "ಆವಾಗ ಆದದ್ದಾಯ್ತು ಈಗ ನಾನು ಮದುವೆಯಾಗಿ ಮತ್ತೊಬ್ಬನ ಸ್ವತ್ತು ಈಗ ಪರಪುರುಷನ ಕಡೆಗೆ ನೋಡಲುಬಾರದು" ಸತತವಾಗಿ ತನ್ನೊಳಗೆ ಪುಟಿಯುತ್ತಿದ್ದ ಭಾವನೆಗಳನ್ನ ಹತ್ತಿಕ್ಕುವ ಪ್ರಯತ್ನ ಮಾಡಿದಳು. ಮತ್ತೊಂದುಕಡೆ, ಸಣ್ಣವನಿದ್ದಾಗ, ಎತ್ತು ಮೇಯಿಸುವ ನೆಪದಲ್ಲಿ, ದನಕಾಯುವ ನೆಪದಲ್ಲಿ ಬರಿ ಅವಳ ಹಿಂದಿಂದೆ ಸುತ್ತಿ ಮದುವೆ ಆಟ ಆಡುವಾಗ "ನೀವು ಯಾರು ಬೇಕಾದ್ರು ಆಡ್ರಿ ನಾನು ಮಾತ್ರ ಸುವಾಲಿಯನ್ನೆ ಮದುವೆಯಾಗುವುದು" ಸುಕ್ಲನಾಯ್ಕ ಖಡಾಖಂಡಿತವಾಗಿ ಅವಳ ಪರ ವಹಿಸಿದ್ದ. ಒಮ್ಮೆ ಹಿಂದಲ ಓಣಿಯ ಪಾರಿ ಅನ್ನಾಕಿ, ತೆಳ್ಳಗೆ, ಉದ್ದಕಿದ್ದ ಸುಕ್ಲನ ನೋಡಿ, ಅವಳ ಓಣಿಯವ ಬೇರೆ, ಅವನನ್ನ ಬುಟ್ಟಿಗೆ ಹಾಕ್ಕೊಂಡ್ರೆ ಓಣಿಯೊಳಗೆ ಆಟ ಆಡಬಹುದು ಅನ್ನೊ ಚೂಲಿನಿಂದ "ಲೇ ಸುಕ್ಲ ಇವತ್ತು ನೀನು ನನ್ನ ಕಡಿ" ಅಂದ್ಲು. "ಏಯ್ ಹೋಗೆ ನಿನ್ನವ್ವನ ಹೊಟ್ಟೆ ಪರಕಿ, ನಾನು ಆಟ ಆಡಿದ್ರ ಸುವಾಲಿ ಕೂಡ, ಇಲ್ಲಕ್ರ ನೀವು ಆಡ್ಕೊಳ್ರಿ, ನಾ ಸುಮ್ಮನಿರ್ತಿನಿ" ಸುತಾರಾಂ ಒಪ್ಪಲಿಲ್ಲ "ಆಯ್ತುಬಿಡೊ" ಅಂದಿದ್ದಳು. ಚೆನ್ನಿ ದನ ಕಾಯೋ ಹುಡುಗರ ಲೀಡರ್. ಮುಂದ ನಾಕ ವಾರ ಇಬ್ಬರುಸಾಲಿಗೂ ಹೋದರು. ಅದೇನಾಯ್ತೊ ಸುವಾಲಿ ಒಂದೆರಡು ತರಗತಿ ಓದುವವರೆಗೆ ಏನೊ ಕಳುಹಿಸಿದರು. ಹುಡುಗಿಯರು ಸಾಲಿ ಕಲೀಬಾರದು ಅಂತ ಹೇಳಿ ಅವಳನ್ನ ಬಿಡಿಸಿ ಮತ್ತೆ ದನ ಮೇಯಿಸೋದಕ್ಕೆ ಕಳುಹಿಸಿದ ಮೇಲೆ ಸುಕ್ಲ ಸುವಾಲಿ ದೋಸ್ತಿ ಮರದಿತ್ತು. ಆದರೂ ದೀಪಾವಳಿ ಹಬ್ಬಕ್ಕೆ ಬಂದಾಗ ಅವಳ ದೀಪದಲ್ಲಿ ನಾಕಾಣಿ ಇಲ್ಲಾ ಎಂಟಾಣಿ ಹಾಕೋದನ್ನ ಅಂವ ಮರಿತಿರಲಿಲ್ಲ.

ಅವನು ಮೇರೆ ಮೇಲೆ ಬಂದು ಸನ್ನೆ ಮಾಡುತ್ತಿದ್ದ. ಸುವಾಲಿ ಅವನನ್ನ ನಿರಾಕರಿಸುತ್ತಿದ್ದಳು. ಅಮಾಸೆ ಮುಂದೆ ಐತೆ, ಎಲ್ಲಾ ಮಂದಿ ಮನಿ ಕಡಿಗೆ ಮಕ ಮಾಡ್ಯಾರ. ಈಗ ಯಾವಾನಾರು ನೋಡಿದ್ರೆ ಮಾನ ಕಾಸಿನ ಪಂಚೇರು

ಆಗೋದಲ್ಲದೆ ಮದುವೆಯಾದ ಜೀವನ ಹಾಳಾಗಿ ಹಳ್ಳ ಹಿಡಿದು ಹೋಗುತ್ತೆ ಅಂತ ಅವಳಿಗೆ ಮನವರಿಕೆಯಾಗಿತ್ತು. ಹಂಗಾಗಿ ಅವನೇನೆ ದೊಂಬರಾಟ ಆಡಿದ್ರು ಜುಪ್ ಅನ್ನಲಿಲ್ಲ. ಒಮ್ಮೊಮ್ಮೆ ಮನಸ್ಸು ಪಿಸಿದು ಬಿಡುತ್ತಿತ್ತು. ಸಣ್ಣವನಿದ್ದಾಗಿನಿಂದ ನನ್ನ ವಹಿಸಿಕೊಂಡ ಮಾತಾಡುವುದು, ವಿಶೇಷ ಕಾಳಜಿ, ಕೂಲಿಗೆ ಹೋದಾಗ ತನ್ನ ಸಾಲು ಮುಗಿಸಿ ನನ್ನ ಸಾಲು ಹಿಡಿಯುವುದು. ಹುಡಿಕಿಕೊಂಡು ನಮ್ಮ ಓಣಿಗೆ ಬಂದು ಒಮ್ಮೊಮ್ಮೆ ಮದುವೆ ಗಂಡಾದರೆ ಒಮ್ಮೊಮ್ಮೆ ಗಂಡನಾಗಿ ಆಟ ಆಡುತ್ತಿದ್ದ. ಕರೆದು ಬಿಡಲೆ, ಜೋಗಡನಿಗಿಂತ ಐನಾತಿ ಅದಾನ, ಬೆನ್ನು ಮೂಳೆ ಮುರಿದು ಬಿಡ್ತಾನಂತ ಆಲೋಚನೆ ಬಂತು ಆದರೆ ಸಮಯ, ಸಂದರ್ಭ, ಸನ್ನಿವೇಶ ನೋಡುವುದಲ್ಲವೆ. ಅವನ ಮೇಲೆ ನನಗೂ ಪ್ರೀತಿಯಿದೆ. ನನ್ನ ಗಂಡ ಜಕಣನಾಯ್ಕನಿಗಿಂತ ಚೆಂದ ಅದಾನ, ಓದಿದವನು... ಮನಸ್ಸು ಹಾತೊರೆಯುತ್ತಿತ್ತು. ಆದರೂ ಮಂದಿ ಅಡ್ಡಾಡುತ್ತಿರುವುದರಿಂದ ಹಿಂಜರಿಕೆ, ಆತಂಕ, ಗೊಂದಲ. ಎದಿ ಡವಡವ ಹೊಡೆದುಕೊಳ್ಳೊದಕ್ಕೆ ಸುರು ಮಾಡಿತ್ತು. ಏನಾಗಬಹುದು? ದೇವರೆ ಕಾಪಾಡು ನನ್ನ ಪರೀಕ್ಷೆ ಮಾಡಬೇಡ ಅಂತ ಬೇಡಿಕೊಳ್ಳತೊಡಗಿದಳು ಸುವಾಲಿ. ಒಂದುಕಡೆ ಅವನು ಒತ್ತಡ ಹೇರುತ್ತಿದ್ದಾನೆ. ಮತ್ತೊಂದು ಕಡೆ ಜೊಗಡನ ಸಹೋದರ ಸಂಬಂಧಿ ನಾಣ್ಯಾನಾಯ್ಕ ಎತ್ತು ಮೇಯಿಸುತ್ತ ಗುರಾಯಿಸುತ್ತಿದ್ದಾನೆ. ಅವಕಾಶ ಸಿಕ್ಕರೆ ಏನೆಲ್ಲಾ ಮಾಡಿಬಿಡಬಹುದು ಎಂದು ಕನಸು ಕಾಣುತ್ತ ಇಡೀ ದೇಹದ ತುಂಬ ಕಣ್ಣು ಹರಿದಾಡಿಸುತ್ತಿದ್ದಾನೆ. ಈ ಕಡೆ ಸುಕ್ಲ ತಾನು ನೋಡಿದ ಸಿನಿಮಾಗಳ ನಾಯಕನಂತೆ ಹರಸಾಹಸ ಮಾಡಲು ಬೆಕ್ಕು ಕಣ್ಣು ಮುಚ್ಚಿಕೊಂಡು ಹಾಲು ಕುಡಿದರೆ ಜಗತ್ತು ನೋಡಾಕಿಲ್ಲ ಅಂತ ತಿಳಿದುಕೊಂಡು ಅವಳ ಹೊಲದ ಮೇರೆ ಮೇಲೆ ನಿಂತು ಕೂಗುತ್ತಿದ್ದಾನೆ, ಸನ್ನೆ ಮಾಡುತ್ತಿದ್ದಾನೆ. ಅವನಿಗೆ ಏನು ಮಾಡಬೇಕಂತ ತೋಚ್ತಾಯಿಲ್ಲ. ಕಾಮಾತುರನಿಗೆ ಮಾನ ಮರ್ಯಾದೆ, ಲಜ್ಜೆ ಇರುವುದಿಲ್ಲವಂತೆ ಹಾಗಾಗಿದೆ ಅವನ ಸ್ಥಿತಿ. ಅವಳ ಆತಂಕ, ಭಯ ಗಾಬರಿಯಲ್ಲಿ ಬೆವತು ನೀರಾಗುತ್ತಿದ್ದಾಳೆ. ಇವನ ಕಡೆ ಸನ್ನೆ ಮಾಡಿ ತೋರಿಸೋದಕೆ ಹೇಳೋದನ್ನ ನಾಣ್ಯಾನಾಯ್ಕ ಬಿಟ್ಟು ಬಿಡದೆ ನೋಡುತ್ತಿದ್ದಾನೆ. ಸುಕ್ಲನಾಯ್ಕ ಮೇರಿ ಇಳಿದು ಅವಳನ್ನ ಬಂದು ಹಿಡಿಯಬೇಕು. ಬಹಳ ಸಮಯದಿಂದ ಅವರ ನಡುವಿನ ಮಾನಸಿಕ ಸಂಘರ್ಷವನ್ನ ಅವನ ಸನ್ನೆಯನ್ನ ಗಮನಿಸುತ್ತ ಎತ್ತುಗಳನ್ನ ಮೇಯಿಸುತ್ತಿದ್ದ ನಾಣ್ಯಾಗೆ ರಕ್ತದೊತ್ತಡ ಜಾಸ್ತಿಯಾಯಿತು. ಕುಲದ ಪ್ರಶ್ನೆ, ಜೋಗಡ ತನ್ನ ಸಹೋದರ ಸಂಬಂಧಿ. "ಮೂರನ್ನು ಬಿಟ್ಟವಳು ನನ್ನ ಕಡೆ ನೋಡದೆ ಅವನನ್ನ ನುಂಗುವಂತೆ ನೋಡುತ್ತಿದ್ದಳು ಮಾಡ್ತಿನಿ ತಡಿ" ಅಂದವನೆ ಎತ್ತುಗಳನ್ನ ಮೇರಿ ಮೇಲೆ ಕಟ್ಟಿ ತೊಗರಿಸಾಲುಗಳಲ್ಲಿ ಅಡ್ಡಬಿದ್ದ. ತಾನು ಅಂದುಕೊಂಡಂತೆ ಏನೊ ಕೆಟ್ಟ ಘಟನೆಯೊಂದು ಸಂಬವಿಸುತ್ತಿದೆ ಅಂದುಕೊಂಡಳು ಸುವಾಲಿ ಅವನು ಮೇರೆ ದಾಟಿದ್ದ ಸುಕ್ಲಾ ಹತ್ರ ಬಂದಿದ್ದ ಒಂದು ಕ್ಷಣ ಎಲ್ಲಾ ಮರೆತು "ಏನೋ ಭಾಡಕೌ ನನಮಗನೆ, ಅಕ್ಕತಂಗಿ ಯಾರು ಇಲ್ಲ ಏನಲೇ ನಿನಗೆ

ನನ ಹಾಟಗಳ್ಳ, ಹೋಗಿ ಮದುವೆಯಾಗು ಹೋಗು. ಕಂಡವರ ಹೆಣ್ಣ ಕಂಡು ನಾಯಿ ಹಾಗೆ ಬೆನ್ನು ಹತ್ತಿಯಾ?" ತಾರಮಾರ ಬೊಯ್ಯತೊಡಗಿದಳು. ಸುಕ್ಲನಿಗೆ ಏನೋ ಎಡವಟ್ಟು ಆದಂತೆ ಕಂಡು ಗಿರ್ರಕ್ಕನೆ ಹಿಂದಕ್ಕೆ ತಿರುಗಿದ. ಸುವಾಲಿಯ ಕಣ್ಣಿಗೆ ನಾಯಕನಾಗಲು ಬಂದಿದ್ದ ನಾಣ್ಯಾನಾಯ್ಕ "ಲೇ ನಿಲ್ಲೊ ಹಲ್ಕಟ್, ಹೆಂಗಸರುಅಂದ್ರೆ ಅಷ್ಟು ಸಲಿಗೆ ಏನಲೇ? ಇಡೀ ತಾಂಡದಾಗ ನಮ್ಮದೆ ಬೆಡಗು ಜಾಸ್ತಿ ಇರೋದು. ನಾವೆ ತಾಂಡ ಆಳ್ತಾ ಇದ್ದೀವಿ. ನನ ಮಕ್ಕಳ್ಳ ನಮ್ಮನ್ನೇನು ಅಷ್ಟು ಹಡ್ ಅಂತ ತಿಳಿದರೇನು?" ಅವನನ್ನ ಹಿಡಿಯೋದಕ್ಕೆ ಓಡಿದ. ಪರಿಸ್ಥಿತಿ ಅರ್ಥ ಮಾಡಿಕೊಂಡ ಸುವಾಲಿ ಜೋರಾಗಿ ಅಳೋದು, ಕರಿಯೋದು ಹಣಿ ಹಣಿ ಬಡಿದುಕೊಳ್ಳೋದಕ್ಕೆ ಆರಂಭ ಮಾಡಿದಳು. "ವಾರ ಆತು ಮದುವೆಯಾಗಿ, ಸೂಳಿಮಗ ಹಿಂಗ ಹೆಂಡತಿ ಕರದಂಗ ಕರಿತಾನಲ್ಲಪ್ಪ. ಏನು ಅಂದ್ಕೊಂಡಾನ. ಬೇವರ್ಸಿ ನನಮಗ" ಬೇಕು ಅಂತಲೆ ಅವನ ಮೇಲೆ ತಪ್ಪು ಹಾಕಲು ನಾಣ್ಯಾನ ಎದುರು ಸಾಚಾ ಆಗಲು ರಂಪರಾಡಿ ಮಾಡಿದಳು. ಅಕ್ಕಪಕ್ಕದ ಹೊಲದವರು ಗಲಾಟೆ ಕೇಳಿ ಓಡಿ ಬಂದಿದ್ದರು. "ಯಾರು? ಏನಾತು?" ನೂರೆಂಟು ಪ್ರಶ್ನೆ ಒಬ್ಬೊಬ್ಬರು ಒಂದೊಂದು ರೀತಿಯಿಂದ ತಾವೆ ಕಂಡವರಂತೆ, ತಾವೆ ಹಿಡಿದವರಂತೆ ರೆಕ್ಕೆ ಪುಕ್ಕ ಕಟ್ಟಿ ಹೊಸದೆ ಒಂದು ಕತೆಯನ್ನು ಕಟ್ಟಿದರು. ಸುವಾಲಿಯನ್ನ ಸುಕ್ಲ ನಾಯ್ಕ ಬಲಾತ್ಕಾರ ಮಾಡುವಾಗ ನಾಣ್ಯಾನಾಯ್ಕ ಹಿಡಿದು ಹೊಡೆದು ಎಳೆದುಕೊಂಡು ಹೋಗುವಾಗ ತಪ್ಪಿಸಿಕೊಂಡು ಓಡಿಹೋದ.

ಸುವಾಲಿ ಮನಿಗ ಹೋದಾಗ ಅವಳಿಗಿಂತ ಮುಂಚೆ ಸುದ್ದಿ ಹೋಗಿತ್ತು. ಗಂಡ ನಿಗಿ ನಿಗಿ ಕೆಂಡದಂತಾಗಿದ್ದ. ಸಂಶಯಪಟ್ಟ ಮದಲನೇಯ ಹೆಂಡತಿ ನೇಣಿಗೆ ಶರಣಾಗಿದ್ದಾಳೆ. ಈಗ ಸ್ಥಿತಿ ಇವಳನ್ನು ಕಳೆದುಕೊಳ್ಳುವಂತಿದೆ. ಸುಕ್ಲನ ಗುಡಿಸಲಿಗೆ ಹೋಗಿ "ನನ್ನ ಹೆಂಡತಿ ಮೇಲೆ ಕಣ್ಣು ಹಾಕಿದ ಆ ಮಗ ಎಲ್ಲಿ ಅಡಗಿದ್ದಾನೆ.? ಹೊರಗ ಕಳುಹಿಸಿ" ರಂಪರಾಡಿ ಮಾಡಿದ. ಅವನ ಹೆಂಡತಿ ಮರ್ಯಾದೆ ಅವನೆ ತಾಂಡದಾಗ ತಗದಿದ್ದ. ಇವಳಿಗೆ ಬೊಯ್ದರೆ, ಹೊಡದ್ರೆ ಇವಳು ನಾಳೆ ನೇಣು ಹಾಕ್ಕೊಂಡ್ರೆ ಪೋಲೀಸರು ನನ್ನ ಗಲ್ಲಿಗೆ ಹಾಕುವುದರಲ್ಲಿ ಎರಡು ಮಾತಿಲ್ಲ. ಅವಳು ಅಳುತ್ತಾ ಬಂದಾಗ "ಎಕ್ಕಡ ತಗೊಂಡು ಹೊಡಿಬೇಕಲ್ಲ ಆ ಮಗನಿಗೆ ಸುಮ್ಮನೆ ಅತ್ತರೆ ಏನು ಪ್ರಯೋಜನ?" ಗಂಡ ಸಮಾಧಾನ ಮಾಡಿದ. ಊರ ತುಂಬ ಅವನನ್ನ ಹುಡುಕಾಡಿದ. ಎಲ್ಲಿ ಅವಿತುಕೊಂಡಾನೊ ಇಲ್ಲ ತಾಂಡ ಬಿಟ್ಟ ಓಡಿಹೋದನೊ ಯಾರು ನೋಡಿದವರಿಲ್ಲ. ಜಕಣಾನಾಯ್ಕ ಮಾತ್ರ ದಿನ ಕುಡಿಯುವುದಕ್ಕಿಂತ ಹೆಚ್ಚು ಕುಡಿದ. "ಲೇ ನಿನ ಹಿರದವಳ, ನನ್ನ ಹೆಂಡತಿಗೆ ಕರಿತಿಯ. ಬಾರಲೆ ಹೊರಗೆ" ಅಂತ ಕುಡಿದದ್ದು ಹೆಚ್ಚಾಗಿ ಸುಕ್ಲಾನ ಗುಡಿಸ ಮುಂದಿದ್ದ ಕಟ್ಟೆಗೆ ಕಾಲು ತಾಗಿ ದಡ್ಡಂತ ಬಿದ್ದ. ಗುಡಿಸಲ ಮುಂದೆ ಯಾರು

ಇರಲಿಲ್ಲ. ಯಾವಾಗ ಸುಕ್ಲನ ಬಗ್ಗೆ ಊರಾಗಮಂದಿ ಮಾತಾಡಿಕೊಳ್ಳತೊಡಗಿದರೊ ಸಿಬಿಬಾಯಿ ಸುಕ್ಲನಾಯ್ಕ ಮರೆಯಾಗಿದ್ದರು. ಅರ್ದರಾತ್ರಿ ಮಟ ಖಾಲಿ ಗುಡಿಸಲಿನ ಮುಂದೆ ತನ್ನ ಪ್ರತಾಪವನ್ನುತೋರಿಸಿ ಕುಡಿದಿದ್ದು ನಿಧಾನಕ್ಕೆ ಇಳಿಯುತ್ತಿದ್ದಂತೆ ಅಲ್ಲೆ ಮುದುಡಿಕೊಂಡು ಮಲಗಿಬಿಟ್ಟ. ಜಕಣಾನಾಯ್ಕ. ಸುಕ್ಲನ ಹೆಣ್ಣಾಯಿ ಚೆನ್ನಿ ಮೂಸಿನೋಡಿ, ಕಾಲೆತ್ತಿ ಅವನ ಮೇಲೆ ಉಚ್ಚೆ ಹೊಯ್ದು ಮುಂದೆ ಹೋಗಿತ್ತು.

ಸುವಾಲಿಗೂ ಏಟು ಬೀಳುವುದು ತಪ್ಪಲಿಲ್ಲಾ. ಜಕಣಾನಾಯ್ಕ ಅನುಮಾನ ತಡಿಯಾಕಾಗದೆ ನೇಣಿಗೆ ಶರಣಾಗಿದ್ದ ಮದಲನೆ ಹೆಣ್ತಿ, ಈಗ ಸುವಾಲಿಯ ಸರದಿ ಬರುತ್ತದೆ ಎಂದು ಅಕ್ಕಪಕ್ಕದ ಮನೆಯವರು ಗುಲ್ಲೆಬಿಸಿದರು. ಆದರೆ ಸುವಾಲಿಗೆ ದೊಡ್ಡ ಕುಟುಂಬದ ಹಿನ್ನೆಲೆ ಇದ್ದಿದ್ದರಿಂದ ಅದು ಅಲ್ಲದೆ ಅವರೆಲ್ಲ ಅದೇ ತಾಂಡದಲ್ಲಿದ್ದಿದ್ದರಿಂದ ಜಕಣಾನಾಯ್ಕನ ಹೆಡಮುರಿಗೆ ಕಟ್ತಾರ ಅವನೇನಾದರು ಅವಳಿಗೆ ಹೇಳಿದರೆ? ಹೊಡದರೆ ಅಂತ ಅವನಿಗೂ ಗೊತ್ತಾಗಿತ್ತು. ಸುಕ್ಲನ ವಿಷಯದಾಗ ಅವರಾಗಲೆ ಅವನನ್ನ ಹುಡುಕಿಸಿದ್ದರು. ಸುಕ್ಲ ಸಿಕ್ಕರೆ ಜಕಣಾನಾಯ್ಕನ ಮನೆಯವರು ಹೊಡಿತಾರ, ಆ ಕಡೆ ಸುವಾಲಿ ಮನಿಯವರು ಸೇರಿ ಮೈದಾಹಿಟ್ಟ ನಾದಿದಂಗೆ ನಾದತಾರ ಅಂದವನೆ ತಾಂಡದ ಹಿಂದಿನ ಹೊಲಗಳಲ್ಲಿ ಮರೆಯಾಗಿ ಓಡಿಹೋಗಿದ್ದ. ಅವನು ಮತ್ತೆಂದು ಹೊಳ್ಳಿಬರಲಿಲ್ಲಾ. ಬಂದಾಗ ಸರ್ಕಾರಿ ನೌಕರಿ ಹಿಡಿದು ಪಕ್ಕದಲ್ಲಿ ಮದುವೆಯಾಗಿದ್ದ ಸುಂದರ ಹುಡುಗಿಯೊಂದಿಗೆ ಪ್ರತ್ಯಕ್ಷನಾಗಿದ್ದ. ಸುವಾಲಿ ಅವನ ನೋಡಿ ಗಾಬರಿಯಾಗಿದ್ದಳು. "ಹೋಗಲಿ ಬಿಡು ನನ ಮಗ ಚೆಂದಾಗಿ ಬಾಳೇವು ಮಾಡಿಕೊಂಡು ಬದಕಲಿ" ಅಂತ ಮನಸ್ಸಿನೊಳಗೆ ಅಂದುಕೊಂಡು ಅಲ್ಲಿಂದ ಕಾಲು ಕಿತ್ತಿದ್ದಳು.

* * *

67. ರಾಮಗನೊ ಹರದನಳ್ಳಿ ಭಟ್ಟರೊ

ಈ ರಾಮಗ ಅನ್ನೋನು ತಾಂಡಕ್ಕೆ ಯಾವಾಗ? ಹೇಗೆ? ಏಕೆ? ಬಂದ ಎನ್ನುವ ಯಾವ ದಾಖಲೆಗಳು ಇಲ್ಲ. ಆದರೆ ಭದ್ರಾನಾಯ್ಕನ ತಾಂಡ ಸೇರಿದಾಗ ಭಾರತದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿರಲಿಲ್ಲಾ. ಅವನ ಊರು ಬಿಟ್ಟಾಗ ಎಂಥಾ ಸ್ಥಿತಿಯಲ್ಲಿ ಮನೆ ಬಿಟ್ಟಿದ್ದ, ಬಿಡಾಕ ಕಾರಣ ಏನೂ? ಯಾರು ತಿಳಿಯಾಕ ಹೋಗಲಿಲ್ಲಾ. ಅಲ್ಲಿದ್ದ ಬೇರೆಮಂದಿ ಪೈಕಿ ಯಾರೊ ಹುಡುಗಿ ಕೊಟ್ಟು ಗುಡಿಸಲು ಹಾಕಿಕೊಟ್ಟರು. ರಾಮಗ ಮಹಾ ಜಾಬಾಬೂ ಮನುಷ್ಯ ಹಂಗೆ ಒಂದ ನಮೂನಿ ಆಲೋಚನೆ ಮಾಡುತ್ತಿದ್ದ. ಕೈಯಾಗ ಕಾಸಿಲ್ಲ ಮೈಯಾಗ ಉಸರಿಲ್ಲ ಅನ್ನೋ ಹಾಗಿತ್ತು ಬಂದಾಗ ಅವನ ಸ್ಥಿತಿ. ಅವನು ಒಂದ ತರಹ ಬ್ರಿಟಿಷರಂತೆ, ಭಾರತಕ್ಕೆ ಬ್ರಿಟಿಷರು ಬ್ರಿಟನ್ನಿನಿಂದ ಬಂದಾಗ ಖಾಲಿ ಕೈಯಿಂದ ಬಂದಿದ್ದರು. ಬಂದವರೆ ರಾಜನಿಗೆ ಹೇಳಿದರು. ನೋಡಿ ಬುದ್ದಿ ನಾವು ವ್ಯಾಪಾರಿಗಳು ವ್ಯಾಪಾರ ಮಾಡಾಕ ಬಂದೀವಿ ಅಂದಿದ್ದರು. "ಏನು ಮಾಡ್ತೀರಿ? ನಿಮ್ಮ ಬಂಡವಾಳ ಏನು? ಎತ್ತ" ಮಹಾರಾಜ ಮರು ಪ್ರಶ್ನೆ ಹಾಕಿದ್ದ "ನಮ್ಮತಾವ ಯಾವ ಬಂಡವಾಳ ಒಡೆಯ, ನಿಮ್ಮದೆ ವಸ್ತು ತಗೊಂಡು, ನಿಮಗೆ ಮಾರಿ ಉಳಿದ ಲಾಭದಲ್ಲಿ ನಿಮಗೂ ವಸಿ ಕೊಡ್ತೀವಿ" ಅಂದಾಗ ರಾಜನಿಗೆ ಅಚ್ಚರಿ. ರಾಮಗನೂ ಅದೇ ಜಾತಿಯವನು. ಬೀಗರು ಕಟ್ಟಿದ್ದ ಸಣ್ಣ ಗುಡಿಸಲನ್ನ ಸರಿಸಿ, ಸರಿಸಿ ಎರಡು ಮೂರು ಆಗುವಷ್ಟು ದೊಡ್ಡದು ಮಾಡಿದ. ಅಲ್ಲಿ ಇಲ್ಲಿ ಕೂಲಿ ಮಾಡಿದ, ಯಾರ್‍ಯಾರದೊ ಹೊಲ ಕೋರಿಲೆ ಕೊಡೊದಕ್ಕೆ ಗೋಗರೆದ. ದುಡಿದಿದ್ದನ್ನ ಪೈಸೆ ಪೈಸೆ ಸೇರಿಸಿ ಕೋಳಿ ಸಾಕಿದ. ಕೋಳಿ ಮಾರಿ ಕುರಿ ತಂದ ಕುರಿ ತಂದವನೆ ವಾರ ಹದಿನೈದಯ ದಿನ ಮೇಯಿಸಿ ತಂದ ದುಡ್ಡಿಗೆ ಅರ್ಧದಷ್ಟು ಲಾಭ ಬಂದವನ್ನ ಮಾತ್ರ ಕೊಟ್ಟ. ಹದಿನೈದು ದಿನದಲ್ಲಿ ಹಾಕಿದ ಅಸಲಿಗೆ ಅರ್ಧಲಾಭ ಬಂದು ಬಿಟ್ಟರೆ ಯಾಮಗ ಉದ್ಧಾರ ಆಗೋದಿಲ್ಲ? ಈ ಬುದ್ಧಿ ರಾಮಗನಿಗೆ ಬಿಟ್ಟರೆ ಬೇರೆಯವರಿಗೆ ಬರೋದು ಕಷ್ಟಸಾಧ್ಯವೆ. ಹಿಂಗಾಗಿ ರಾಮಗ ತಾಂಡದೊಳಗೆ ತಾನೆ ಶಾಣ್ಯ ಅಂತ

ಮೆರದಾಡಿದ. ಲಾಭ ಸಿಗುತ್ತಿರುವಾಗಲೆ ಹಾಲು ಬೆಣ್ಣೆಯಲ್ಲಿ ಸಕ್ಕತ್ತಾಗಿ ಲಾಭ ಇದೆ ಅಂತಂದು ಯಾರೊ ಹೇಳಿದಂಗಾಗಿ ಎರಡು ಐನಾತಿ ಎಮ್ಮೆಗಳನ್ನ ತಂದ. ಕುರಿದಂಥೆ ನಡೆದೆ ಇತ್ತು. ಎಮ್ಮೆಗಳು ಗಬ್ಬಾಗಿದ್ದವು. ಇಳಿದರೆ, ಹಾಲು, ಮೊಸರು, ಬೆಣ್ಣೆ, ತುಪ್ಪ, ಮಜ್ಜಿಗೆ ಪ್ರತಿದಿನ ಕನಸು ಕಾಣತೊಡಗಿದ. ಸಾಲದಕ್ಕೆ ದಿನಗಣನೆ ಸುರು ಮಾಡಿದ್ದ. ಅವನ ಹೆಂಡತಿ ಸುನಾಮಿ ತೆಗೂರಿಗೆ ಹೋಗಿ ಕುಂಬಾರ ಭೀಮಣ್ಣಗೆ ಹೇಳಿದಳು "ಯಣ್ಣ ನನ್ನ ಎಮ್ಮಿ ಇವತ್ತೊ ನಾಳೆ ಇಳಿಯೊಹಂಗಾಗಿವೆ, ಹಾಲು ಕಾಸೋದಕ್ಕೆ ಎರಡು, ಮಜ್ಜಿಗೆ ಕಡಿಯೋದಕ್ಕೆ ದೊಡ್ಡದು, ಬೆಣ್ಣೆ ಇಡೋದಕ್ಕೆ ಮತ್ತೊಂದು ಒಟ್ಟು ನಾಕೈದು ಸ್ವಾರಿ ಕೊಡು" ಅಂತ ಗಂಟು ಬಿದ್ದು ದನ ಹೊರೊಹಂಗೆ ಹತ್ಕೊಂಡು ಬಂದಿದ್ದಳು. ನೆತ್ತಿ ಉರಿಕಿತ್ತಿತ್ತು, ಯಾವಾಗ ಇಳಿಸೇನೊ ಶಿವನೆ ಅದ್ಕೊಂತಲೆ ಮನಿಮಟಾನು ಬಂದಿದ್ದಳು. ಮನಿಗ ಬಂದು, ಗಡದ್ದಾಗಿ ಕುಂತ್ತಿದ್ದ ಗಂಡನ ಮೇಲೆ ನಿಂತ್ಕೊಂಡೆ ಹರಿಹಾಯತೊಡಗಿದಳು "ಏಯ್ ನಿನ್ನ ಮಕಾಡ ಎತ್ಲಿ, ಸ್ವಾರಿ ತರಾಕ ಹೊಂಟೇನಿ ಅಂತ ಹೇಳಿ ಹೋಗಿದ್ದೆ, ಒಜ್ಜಿ ಇದ್ದಾವು ಸ್ವಾರಿಗಳು ಆಟು ಮುಂದಿನವರಿಗೆ ಹೋಗೋನು ಅನ್ನೋ ಖಬರಿಲ್ಲಾ ನಿನಗೆ. ಮಕ ಏನು ನೋಡಾಕ ಹತ್ತಿ ಇಳಸ ಬಾ, ನೆತ್ತಿ ಕುದಲೂ ಉದುರಿ ಹೋದವು" ರಾಮಗನಿಗೆ, ಏಕಾಏಕಿ ಬಂದ ಮಾತುಗಳನ್ನ ಜೀರ್ಣಿಸಿಕೊಳ್ಳಾಕ ಆಗದೆ "ಎ. ನಿಮ್ಮಮ್ಮನ ದೆವ್ವಗುಟ್ಟಿದವಳ, ಹರ ಇಲ್ಲಾ ಶಿವ ಇಲ್ಲಾ ಬಡದಾಡಕತ್ತಿ. ಇಷ್ಟಗಡಾನ ಅವಸರನಾರು ಏನಿತ್ತು ಅಂತೀನಿ" ಬಾಯಿಗ ಬಂದಂಗೆ ಉಗದ. "ಹುಂ ಅವಸರ ಅಂತೀಯ, ತಂದಿಲ್ಲಾಂತ ಇಟ್ಕೊ, ಮನಿಯಾಗ ಕುಂತೇನು ನೆಟ್ಟಿಕಡಿತ್ತಿದೆ. ಎಮ್ಮಿ ಇಳಿಯುತ್ತೆ ಅಂತ ಗೊತ್ತಿದ್ದು ಹೂಡಮಾಡ್ಕೊಂಡಿಲ್ಲಾಂತ ಆಮ್ಯಾಲ ಬೊಯ್ಯೋದು. ನೀವು ಗಂಡಸರೆ ಹಿಂಗ, ಹಿಂಗ ಬಂದ್ರ ಹಿಂಗೂ ಸೈ, ಹಂಗ ಬಂದ್ರ ಹಂಗೂ ಸೈ ಹೆಂಗಸರ ತೆಪ್ಪು ಹುಡುಕೋದು ಬಿಟ್ಟು ಏನ್ಮಾಡಿರಿ ಹೇಳು? ಜಗ್ತಿನ ಯಾವ ಗಂಡಸಾದರೂ, ಹೌದು ಹೆಣ್ತಿ ಸ್ವಾರಿ ತರ್ತಿನಂತ ಹೇಳಿ ಹೋಗ್ಯಾಳ, ಒಜ್ಜಿ ಇದ್ದೀತು, ಅರ್ಧದಾರಿ ಮಟಾನೂ ಹೋಗಿ ಬರೋನ, ಪಾಪದ ಜೀವ ಅಂತ ಹೇಳಿ ಬಂದಾರ? ಇಲ್ಲ, ಕತ್ತೆ ಹೊತ್ತಂಗೆ ಹೊತ್ತು ಸಾಯಲಿ ಅಂತೇಳಿ, ಶಾಲಿ ಕಟ್ಟೆಗೂ ಇಲ್ಲಾ, ಸೇವಾಬಾಯನ ಮಟ್ಕೊ ಇಲ್ಲಿಕ್ರ ಸಿದ್ದಮಲ್ಲನ ಚಾದಂಗಡಿ ಕಟ್ಟಿ ಹಿಡುದ ಕೂಡೋದು ಅಷ್ಟೆ ನಿಮ್ಮ ಹಣೆಬರಹ" ಸರಿಗೆ ನೀರಿಳಿಸಿದಳು. "ಆಯ್ತು ಹೋಗಿ ಕೈಕಾಲು ಮಕ ತೊಳಿ ಹೋಗು ಮನಿಗ ಬಂದಿಯಲ್ಲಾ ಸಾಕು ನಡಿ" ಕೊಂಕು ಆಡೋದ ಬಿಡಲಿಲ್ಲ. "ನೀನು ಬದಲಾಗಲ್ಲ ಬಿಡು" ಅಂದಾಕಿನ ನೀರ ತರಾಕ ಒಳಗ ಹೋದಳು.

ಅವರ ಈ ತಿಕ್ಕಾಟ, ತಿಟುವಾಟಿದೊಳಗೆ ಎಮ್ಮಿ ಈದಿದ್ದೆ ಗೊತ್ತಾಗಲಿಲ್ಲಾ. ರಾಮಗನಿಗೆ ಜಗತ್ತು ಗೆದ್ದ ಅನುಭವವಾಗತೊಡಗಿತು. ಹೆಣ್ಣಗರು ಹಾಕಿತ್ತು. ಕರು

ಗಡದ್ದಾಗಿಯೆ ಇತ್ತು. ಎಮ್ಮೆಗೆ, ಕರುವಿಗೆ ಬಿಸಿನೀರು ಕಾಸಿ ಚೆನ್ನಾಗಿ ಸ್ನಾನಮಾಡಿಸಿ, ತಾಳೆಯ ಹಣ್ಣು, ಈಚಲು ಬಗೆದು ಅದರ ಕಂದನ್ನ ತಂದು ತಿನಿಸಿದ. ಎಮ್ಮೆ ಗಟ್ಟಿ ಹಾಲು ಕೊಡಲಿ ಅಂತ. ಮೊದಲು ಮೂರು ದಿನ ಕರುಗೆ ಸ್ವಲ್ಪ ಕುಡಿಸಿ ಗಿಬದ ಹಾಲು ಸಂಪೂರ್ಣವಾಗಿ ಹಿಂಡಿ ಕೆಚ್ಚಲು ಖಾಲಿ ಮಾಡುತ್ತಿದ್ದ. ಗಿಬದ ಹಾಲಿನ ಚರಗಿಗಳನ್ನ ಸುತ್ತಲ ಮನಿಯವರಿಗೆ, ಬೀಗರಿಗೆ, ಬೇಕಾದವರಿಗೆ ಹಂಚಿದ ಮೇಲೆ ಅವರಿಬ್ಬರೆ ಗಂಡ ಹೆಣ್ತಿ ಬೇಕಾದ್ದ ಮಾಡಿ ಉಂಡ್ರು. ಎಮ್ಮಿ ಹಾಲು ಮುಂಜಾನೆ ಹೊತ್ತಾರೆ ಹಿಂಡಿಕೊಂಡು ಸುತ್ತಲ ಊರುಗಳಿಗೆ ಹೋಗಿ ಚಹದುಕಾನ್‌ಗಳಿಗೆ ಕೊಟ್ಟು ಬರುವುದು ಮಾಡತೊಡಗಿದ ರಾಮಗ. ಮಾತಿನಲ್ಲಿ ಯಾಮಗನನ್ನು ಬಿಡುತ್ತಿರಲಿಲ್ಲ ಹಂಗಾಗಿ ಮಾತಾಡ್ತ, ತೇಗೂರು ನಾಗನ ಮಾತಾಡಿಸಿದ್ದ. ನಾಗ ರಾಮಗನ ಮಾತಿಗೆ ಮಳ್ಳಾಗಿ ಬಾಳೆವಸ್ತ ಕಂಡಂಗ ಕಾಣ್ತಾನ ಅಂದವನೆ “ಏನಪ್ಪ ತಮ್ಮ, ನಿನ್ನ ಮಾತು ಕೇಳಿದರೆ ಭಾರಿ ಕಷ್ಟಗಾರ ಅಂತ ಕಾಣುತ್ತೆ. ನಿಮ್ಮ ತಾಂಡದ ಹಾಸಗಿಯೊಳಗೆ ನನ್ನದೊಂದು ಐದು ಎಕ್ಕರೆ ಜಮೀನು ಐತೆ ಕೋರಿಗೆ ಮಾಡು. ಈ ಹಾಸಿಗಿವೆ ನನಗೆ ನಿಗ್ತಾ ಇಲ್ಲ” ಅಂದ. ರಾಮಗನಿಗೆ ನಿಲ್ಲಾಕ ಆಗದ ಖುಷಿ. ಕನಸ್ಸಿನೊಳಗೆ ಎತ್ತುಗಳು, ಅವನು ರಂಟೆ ಹೂಡಿರುವಂತೆ ನೆನಪಿಸಿಕೊಂಡಿದ್ದ. ತೆಗೂರು ನಾಗ ಮರುದಿನ ಖುದ್ದಾಗಿಯೆ ರಾಮಗನ ಹತ್ತಿರ ಬಂದಿದ್ದ “ನೋಡಪ್ಪ ಮತ ನನ್ನ ಐದೆಕ್ಕರೆ ಜಮೀನು ನಿನಗ ಕೊಡ್ತಿನಿ, ಕೊರಿಗೆ ಮಾಡ್ಕೊಳ್ಳಪ್ಪ. ಯಾಕಂದಿ, ನಮ್ಮೂರ ಆಜುಬಾಜಿಗವೆ ಜಮೀನು ನನಗೆ ಮಾಡಾಕ ಆಗ್ತಿಲ್ಲ. ಗೊಬ್ಬರ, ಬೀಜ, ಆಳು ಕಾಳು ಎಲ್ಲಾ ಸಮನಾಗಿ ಮಾಡುವ ಕೋರಿಪಾಲಿಂದ ಮಾಡ್ಕೊ ಹೋಗು” ಅಂದ. ರಾಮಗ ಅದನ್ನೆ ಕಾಯ್ತಿದ್ದ. “ಆಯ್ತು ಕಣಣ್ಣ ನಂದು ಅಂತ ಜಮೀನಿಲ್ಲಾ ನಿನ್ನ ಹೊಲದಾಗ ನಾನು ಏನ್ಮಾಡಿದ್ರು, ಏನು ಬೆಳದ್ರು, ನೀನು ಚಿಂತೆ ಬಿಡು ಹೊಲನಾ ನೋಡ್ಕೊಂತೀನಿ” ಅಂದು ಚಾ ಮಾಡಿಸಿ ಕುಡಿಸಿ ಕಳುಹಿಸಿದ್ದ.

ಮುಂಗಾರು ಆರಂಭ ಆದಾಗ ಅವನಿಗೆ ಎತ್ತುಗಳ ಚಿಂತೆಯಾಯಿತು. ಯಾವಾದರೂ ಒಂದು ಜೊತೆ ಎತ್ತು ಬೇಕೆ ಬೇಕು ಅನಿಸಿ ದೊಡ್ಡೆಗೌಡನ ತಾವ ಸಾಲ ತಂದು ಎರಡು ಕರುಗಳನ್ನ ತಗೊಂಡು ಬಂದೆ ಬಿಟ್ಟ. ಹೊತ್ತಾರೆ ಹಾಲು ಕೊಟ್ಟು ಬಂದು ರಂಟೆ ಹೊಡೆಯೋದಕ್ಕೆ ಕಟ್ಟುತ್ತಿದ್ದ ಹೊತ್ತು ನೆತ್ತಿಗ ಬಂದಾಗ ಕೊಳ್ಳ ಹರದು ಎತ್ತುಗಳ ಮೈಮೇಲೆ ಎರಡ ಚರಗಿ ನೀರು ಹಾಕಿ ಒಣಮೇವು ಹಾಕಿ ಕಟ್ಟುತ್ತಿದ್ದ. ವ್ಯವಸಾಯ ಒಳ್ಳೆ ಹುರುಪಿನಿಂದ ಏನೊ ಆರಂಭಿಸಿದ್ದ. ತೆಗೂರು ನಾಗನುವೆ ಮುಂಗಾರು ಆರಂಭ ಆಗುತ್ತಿದ್ದಂತೆ, ಚಕ್ಕಡಿ ಗಾಡಿಯಲ್ಲಿ, ಏನು ಬೀಜ ಹಾಕಬೇಕು ಅಂದ್ಕೊಂಡಿದ್ನೊ ಆ ಬೀಜಗಳ ಪಾಕೇಟು, ರಾಸಾಯನಿಕ ಗೊಬ್ಬರ ಕಳುಹಿಸುತ್ತಿದ್ದ. ಹಿರೆಪುಶ್ಯಮಳಿ ಮೊದಲ ಪಾದ ಹದವಾಗಿ ಬಿತ್ತು ಸರಿ ಕೂರ್ಗಿ ಕಟ್ಟೆ

ಬಿಟ್ಟ. ಯಾಕಂದಿ ಊರ ಪ್ರಗತಿಪರ ರೈತ ತೊಪು ನಾಯ್ಕ ಆಗಾಗ್ಗೆ ಹೇಳುತ್ತಿದ್ದ ಮಾತು ನೆನಪಾಗುತ್ತಿತ್ತು ಅವನಿಗೆ. "ಕಾಲಸುಮಾರ್ರೈತಪ್ಪ, ಈಗ ಹೆಂಗ್ಯೆತೆ ಅಂತಂದ್ರ, ಹಿಡಿಯಾನ ಕಾಳು ಮುಂದ, ಉಡಿಯಾನ ಕಾಳು ಹಿಂದೆ. ಮುಂದ ಹಾಕಿದಂವ ಬದುಕಿದ. ಹಿಂದ ಹಾಕಿದಂವ ಸತ್ತ ಅಂತ. ಒಮ್ಮೊಮ್ಮೆ ಉಲ್ಟಾನೂ ಆಗಬಹುದು. ಆರಂಭದ ಮಳೆ ಮುಂದೆ ಬರದೆ ಇರಬಹುದು. ಮಳೆಗಾಲನೆ ನಂಬೊ ಹಂಗಿಲ್ಲ" ಅದು ರಾಮಗನ ಮನಸ್ಸಿನಾಳದಾಗ ನಾಟಿತ್ತು. ದುಬಾರಿ ಬೀಜ, ಗೊಬ್ಬರ ಕಳುಹಿಸಿದ್ದ ತೆಗೂರು ನಾಗ. ರಾಮಗನೂ ಬಿತ್ತೊವಷ್ಟು ಬಿತ್ತಿದ. ಮೇಲಿಂದು ಅಷ್ಟು ಉಳಿಸಿ ಮಂದಿಗ ಮಾರಿ ಕಾಸು ಮಾಡಿಕೊಂಡ. "ಬೇರೆ ಜಮೀನು ಇದ್ದಿದ್ದರೆ? ಇಲ್ಲಿದನ್ನೆಲ್ಲಾ ಅಲ್ಲಿಗೆ ಹಾಕಬಹುದಿತ್ತು" ಅಂತೇಳಿ ಕೈಕೈ ಮುರಿದುಕೊಂಡಿದ್ದ. ಆದರೂ ಗೋಲ್‌ಮಾಲ್ ಮಾಡೋದನ್ನ ಬಿಡಲಿಲ್ಲ. ಎಲ್ಲದ್ರಲ್ಲೂ ತನ್ನ ಮುನಾಫ ನೋಡಿದನೆ ವಿನಃ ಹೊಲ ಬೆಳೆಯಲ್ಲಿ ಎನ್ನುವ ಪರಿಕಲ್ಪನೆ ಇರಲಿಲ್ಲ ಅವನಲ್ಲಿ. ತೆಗೂರು ನಾಗನಿಗೆ ಆ ಹೊಲದ ದೆಕರ್ಕಿ ಇಲ್ಲದಕ್ಕ, ಮಳೆ ಹೆಚ್ಚಾಗಿ, ಹುಲ್ಲು ಆಗಿ ಬೆಳೆ ಬೆಳಿತಿರಲಿಲ್ಲ. ಇವನು ಏನೆ ಮಾಡಿದ್ರು, ಉಸ್ತುವಾರಿ ಮಾಡಿ ಲಾಸ್ ಮಾಡಿದ್ರು ಬೆಳೆ ಕುಂತಿದ್ದಕ್ಕೆ ಸಂತೋಷಪಟ್ಟಿದ್ದ.

ರಾಮಗ ಮುಂದಿನ ಸಾರಿ ಹರಿಪುರದ ಸಾಹುಕಾರನ ಎಂಟು ಎಕ್ಕರೆ ಜಮೀನು ಮಾಡಿದ. ಆ ಆಸಾಮಿ ಬಂದು ನೋಡುವವನೆ ಅಲ್ಲ. ಅಂದಮೇಲೆ ಇವನದ್ದೆ ಕಾರುಬಾರು. ಸಾವುಕಾರ ದೊಡ್ಡ ವಕೀಲ, ಸುಳ್ಳು ಸಾಕ್ಷಿಗಳನ್ನ ಹೇಳಿಸಿ ನಿಜವಾದ ಕೇಸುಗಳನ್ನು ಕೆಳಗೆ ಮಾಡಿ ಕೆಳಗಿನ ಕೇಸನ್ನ ಮೇಲೆ ಮಾಡಿ ಸಿಕ್ಕಾಪಟ್ಟೆ ಕಾಸು ಮಾಡಿಟ್ಟಿದ್ದ. ಅವನಿಗೇನು ಯಾರಿಗೊ ಹೇಳಿದರೆ ರಸಗೊಬ್ಬರ, ಬೀಜ ಹೇರಿ ಮನಿ ಮಟ ಕಳುಹಿಸುತ್ತಿದ್ದ. ರಾಮಗನಿಗೆ ಹಬ್ಬವೊ ಹಬ್ಬ. ಗೊಬ್ಬರದಾಗ ಗೊಬ್ಬರ, ಬೀಜದಾಗ ಬೀಜ ಕದ್ದು ಮತ್ತೊಂದು ಹೊಲಕ್ಕೆ ಹಾಕೊದು, ಅದರದು ಮತ್ತೊಂದು ಹೊಲಕ್ಕೆ ಹಾಕುತ್ತಿದ್ದ. ಹಿಂಗೆ ತಾರತಿಗಡಿ ಬಾರ ವಿದ್ಯೆಯಲ್ಲಿ ನಿಪುಣ ರಾಮಗ ದುಂಡಗಾಗಿದ್ದ. ಮೂರುನೂರು ಕುರಿ, ಊರಮುಂದೆ ಐದು ಎಕ್ಕರೆ ಸ್ವಂತ ಜಮೀನು, ದೊಡ್ಡಮನೆ ಮಾಡಿಕೊಂಡಿದ್ದ. ಬಹಳ ವರ್ಷಗಳವರೆಗೆ ಮಕ್ಕಳಾಗಿರಲಿಲ್ಲ ಆಮೇಲೆ ಆದರೆ ಒಂದರ ಹಿಂದೆ ಐದಾರು ಸಾಲಿಗೆ ಹುಟ್ಟಿದವು. ಅವರ ಮದುವೆ, ಗಂಡು ಮಕ್ಕಳಿಗೆ ಒಳ್ಳೆ ಕಡೆಯಿಂದ ಹೆಣ್ಣು ತಂದು ಏನೂ ಇಲ್ಲದೆ ಸಂಪಾಗಿ ಬೆಳೆದಿದ್ದ. ಅವರಿವರ ಹತ್ತಿರ ಒಡ್ಡಿ ಮೆಣಸಿನಕಾಯಿ ಇಸ್ಕೊಂಡು ಅಡುಗೆ ಮಾಡುತ್ತಿದ್ದ ಸುನಾಮಿ ಮನೆಯೊಳಗೆ ಚೀಲ ಗಟ್ಟಲೆ ಮೆಣಸಿನಕಾಯಿ ಒಟ್ಟಿಕೊಂಡಿದ್ದಳು. ಅವರಿವರ ಮನೆಯಿಂದ ಒಂದು ಸೇರು ಹಿಟ್ಟು ತಂದು ಮುದ್ದೆ ಮಾಡಿಕೊಂಡು ಉಣ್ಣುತ್ತಿದ್ದವಳಿಗೆ ದೊಡ್ಡ ದೊಡ್ಡ ಸ್ವಾರಿಗಳ ತುಂಬ ಜೇನು ಮಾಡಿಸಿ ತುಂಬಿರುವ

ಹಿಟ್ಟು ಮನೆ ತುಂಬ ಪಣತ, ಹಗೇವು, ಕರ್ಚಿಗಳನ್ನ ಇರಿಸಿದ್ದಳು. ಯಾವಾಗಲೂ ಬೇರೆಯವರ ಕೂಲಿ ಮಾಡುತ್ತಿದ್ದ ಗಂಡ ಹೆಂಡತಿ ಈಗ ಆರೇಳು ಮನೆಯವರನ್ನ ಕೆಲಸಕ್ಕೆ ಇಟ್ಟುಕೊಂಡಿದ್ದರು. ಅಂತು ರಾಮಗ ಊರೊಳಗೆ ತೊಪು ನಾಯ್ಕನಿಗೆ ಪ್ರತಿಸ್ಪರ್ಧಿಯಾಗಿ ಬೆಳೆಯತೊಡಗಿದ. ಮಂದಿ ಮುಂದೆ "ಅವನೇನು ತೊಪುನಾಯ್ಕ, ಮುಂದಿನ ಬೆಳೆಗೆ ಅವನನ್ನ ಹಿಂದಕ್ಕ ಹಾಕಿ ನಾನೆ ತಾಂಡದೊಳಗೆಲ್ಲಾ ಶ್ರೀಮಂತ ಅನಿಸಿಕೊಳ್ತೀನಿ ನೋಡ್ತಿರಿ" ಅಂತ ಹೇಳ್ತಾ ಅಡ್ಡಾಡುತ್ತಿದ್ದ. ಕೊಟ್ಟವ ಬಡವನಾಗಿದ್ದ ತಂದವ ಶ್ರೀಮಂತನಾಗಿದ್ದ.

* * *

68. ಸುಂದರಿ ಬಾಯಿಯೊ ಬರದನಹಳ್ಳಿ ಟ್ರಾಕ್ಟರ್ ಡ್ರೈವರ್

ಭದ್ರಾನಾಯ್ಕನ ತಾಂಡದಿಂದ ಬರೋಬರಿ ನಾಕು ಮೈಲಿದೂರ ಬರದನಹಳ್ಳಿ, ಬಾಕೊಳು, ಕೊಂಡಳ್ಳಿ, ಕಾಪೊಳಿ ಮುಂತಾದ ಹಳ್ಳಿಗಳು. ಅಲ್ಲಿಯ ಜಮೀನುಗಳು ಬಹುತೇಕ ಜಮಿನ್ದಾರರವು. ಬ್ರಿಟಿಷರು ಹೋಗುವಾಗ ಬಿಟ್ಟುಹೋದ ಪಳಿಯುಳಿಕೆಗಳಲ್ಲಿ ಇವರು ಒಂದು ಭಾಗ ಜಮೀನು ಒತ್ತುವರಿ ಮಾಡಿಕೊಂಡು ತಮ್ಮ ಹೆಸರಿಗೆ ಬರೆಯಿಸಿಕೊಂಡಿದ್ದರು. ಬುದ್ಧಿ ಇಲ್ಲದ ಕೆಳವರ್ಗವೆ ಅಸ್ತಿತ್ವದ ಹೋರಾಟ ನಡೆಸಿತ್ತು. ಉಳಿದವರು ತಮಗೆ ಬೇಕಾದ ರೀತಿಯಲ್ಲಿ ಬದುಕಿದ್ದರು. ಕೊಂಡಳ್ಳಿಗೆ ದೊಡ್ಡಕೆರೆ ತುಂಗಭದ್ರಾ ಡ್ಯಾಂ ನಿಂದ ನೀರು ಬಂದು ಶೇಖರಣೆಯಾಗುತ್ತಿತ್ತು. ಮೇಲೆ ದಾವಣಗೇರಿಯ ಚರಂಡಿ ನೀರು ಹರಿಯುತ್ತಿತ್ತು. ಈ ಎರಡು ರೀತಿಯ ನೀರಿನ ನಡುವೆ ಇದ್ದಿದ್ದೆ ಬರದನಹಳ್ಳಿ. ಬಾಕೊಳು ಬರದನಹಳ್ಳಿಯ ದೊಡ್ಡಣ್ಣ, ಪಂಪಾಪತಿ, ಚಿಕ್ಕಯ್ಯ, ರುದ್ರೇಶಿ, ದಲಿತರು, ಲಮಾಣಿ, ಕೊರಚರನ್ನ ಹೊಲದ ಕೆಲಸಕ್ಕೆ ಕರ್‍ಕೊಂಡು ಬರುತ್ತಿದ್ದರು. ಜೊತೆಗೆ ಅವರಿಂದ ದೂರವಿದ್ದು ಅವರ ಮನೆ ಆಸುಪಾಸು ಇವರನ್ನ ಬಿಟ್ಟುಕೊಳ್ತಿರಲಿಲ್ಲಾ. ಆದರೆ ಇವರ ಹೆಂಗಸರ ಮೇಲೆ ಮಾತ್ರ ಕಣ್ಣಿತ್ತು. ದೊಡ್ಡಣ್ಣನ ಅಣ್ಣನ ಮಗ ಲೇಪಾಕ್ಷಿ ಅನ್ನೋನು ಅವರದೆ ಫರ್ಗಿಷನ್ ಟ್ರಾಕ್ಟರಿಯ ಚಾಲಕ. ಕಾಲ ಬದಲಾಗುತ್ತಿದ್ದಂತೆ ಮಾಲಿಕ ದೊಡ್ಡಣ್ಣನಿಗೆ ಲಮಾಣಿ ಹುಡುಗಿಯರ ಮಾರಿ ನೋಡುವ ಹಂಬಲವೊ, ಇಲ್ಲ ನಾಕು ಮೈಲಿ ದೂರದಿಂದ ನಡೆದು ಬರ್ತಾರ ಅನ್ನೊ ಕನಿಕರನೊ. ಮಂದಿ ತರಾಕ ಟ್ರಾಕ್ಟರ್ ಕಳುಹಿಸುತ್ತಿದ್ದ. ಹುಡುಗರು, ಹುಡುಗಿಯರು, ಹರೆಯದವರು, ವಯಸ್ಸಾದವರು ಟ್ರಾಕ್ಟರ್ ಹತ್ತಿ ಒಬ್ಬರ ಸಂದಿಯೊಳಗೆ ಒಬ್ಬರಂತೆ ಕುಂತು ಅದರ ಧಡಕಿಗೆ ಆ ಕಡೆಯಿಂದ ಈ ಕಡಿಗೆ, ಈ ಕಡೆಯಿಂದ ಆ ಕಡಿಗೆ ಜೋಕಾಲಿ ಆಡಿಸಿದಂಗಾಗಿ ಮೈ ಕೈ ನೋವು ಮಾಡಿಕೊಂಡು ಭತ್ತದಾಗ ಕಳೆ ಕೀಳೋದಕ್ಕೆ ಹೋಗುತ್ತಿದ್ದರು. ಲೇಪಾಕ್ಷಿ ಮತ್ತು ಅವನಿಂದೆ ಅವನ

ಚೇಲ ಚೆನ್ನ ಅನ್ನೋರು ಮಾಳಿಬಾಯಿ ಮಗಳು ಸುಂದರಿಬಾಯಿ ಬೆನ್ನು ಬಿದ್ದಿದ್ದರು. ಮಾಳಿಬಾಯಿ ಮದುವೆ ಮಾಡಿಕೊಂಡು ಗಂಡನ್ನ ಬಿಟ್ಟು ಯಾರದೊ ಹಿಂದೆ ಹೋದವಳು ಮೂರು ಸುಂದರ ಹುಡುಗಿಯರನ್ನ ಕರ್‍ಕೊಂಡು ತಾಂಡ ಸೇರಿದ್ದಳು. ಇಟ್ಕೊಂಡವನು ಮಾಳಿಬಾಯಿಗೆ ಸಾಕಷ್ಟ ಬಂಗಾರ ಐಷಾರಾಮಿ ಜೀವನ ಕೊಟ್ಟಿದ್ದ. ಅವಳ ಬಳಿಯ ಹಣ ಮತ್ತು ಬಂಗಾರ ಕ್ರಮೇಣ ಕರಗಿಹೋಗಿ ಖಾಲಿಯಾದ ಮೇಲೆ ಕೂಲಿನೆ ಗತಿಯಾಗಿತ್ತು. ಅಷ್ಟ ದೂರ ಹೋಗಿ ಬರೋದು ಕಷ್ಟಆಗಾಣ ಹಿರಿಯಳಾದ ಸುಂದರಿ, ಎರಡನೆಯವಳು ಚಂದ್ರಿ, ಮೂರನೆಯವಳಾದ ಬಂದೇರಿ ಯರನ್ನ ಕೆಲಸಕ್ಕೆ ಬಿಟ್ಟಳು. ಆಗ ತಾನೆ ಪ್ರಾಯಕ್ಕೆ ಕಾಲಿಟ್ಟಿದ್ದ ಸುಂದರಿಬಾಯಿನ ಕಂಡು ತಾಂಡದ ಪಡ್ಡೆ ಹೈಕಳು ಜೊಲ್ಲು ಸುರಿಸುತ್ತಾ ಹಿಂದೆ ಮುಂದೆ ಅಡ್ಡಾಡುತ್ತಿದ್ದರು. ಆದರೆ ಯಾರಿಗೂ ಮಣಿ ಹಾಕದೆ ಯಮಕಿಲೆ ಅಡ್ಡಾಡುತ್ತಿದ್ದ ಸುಂದರಿಬಾಯಿಗೆ ಚೋಳನಾಯ್ಕ "ನೋಡು ನೀ ಚಂದದಿ ಅಂತ ದಿಮಾಕ ತೋರಿಸಬೇಡ, ನಿನ್ನ ಮ್ಯಾಲ ಮನಸಾಗ್ಯೆತಿ ಒಪ್ಕೊ, ಮದವಿ ಆಗಾನ" ಅಂದಿದ್ದ. "ಲೇ ಬೇವರ್ಸಿ ನನ್ನವರಿಗ ಬಂದ ಇದನ್ನ ಹೇಳಾಕ ಎಷ್ಟ ಪೊಗರಲೇ" ಅಂದಿದ್ದಳು. ಆಕಿ ಸಂಬಂಧ ಪ್ರಕಾರ ಹೋದರೆ ರಾಠೋಡ ಕುಲದವಳಾಗುತ್ತಾಳೆ. ಆದರೆ ಹುಟ್ಟಿನ ಬೆನ್ನು ಹತ್ತಿದರೆ ಸಾಬಿ ಮಗಳು. ಆದರೆ ಬಂಜಾರ ರೀತಿ ರಿವಾಜಿನ ಪ್ರಕಾರ ಸುಂದರಿ ರಾಠೋಡ್, ಅವಳನ್ನ ಚವ್ಹಾಣ್ ಪಂಗಡದವರೆ ಮದುವೆಯಾಗಬೇಕು. ಹಾಗಾಗಿ ಚೋಳ ಧೈರ್ಯದಿಂದ ಕೇಳಿದ್ದ. ಆದರೆ ಲೇಪಾಕ್ಷಿಯ ಬೆಂಬಲದಿಂದಾಗಿ ಅವನನ್ನ ನಾಯಿಗಿಂತ ಕಡೆ ಎಂದು ಪರಿಗಣಿಸಿ ಛಿಮಾರಿ ಹಾಕಿದ್ದಳು. ದೊಡ್ಡ ಜಾತಿಯವನ ಸಹವಾಸ ಮಾಡಿದರೆ ತಾವು ದೊಡ್ಡವರಾಗ್ತೀವಿ ಅಂತ ಅಂದ್ಕೊಂಡಿದ್ರೊ ಏನೋ ಬರಿ ದೊಡ್ಡ ಜಾತಿಯವರ ಹಿಂದೆ ಬಿದ್ದಿದ್ದವು ತಾಂಡದ ಹುಡುಗಿಯರು. ಸ್ವಾಮಿ ಸೊಲಬಕ್ಕಪ್ಪಾಜಿ ಒಮ್ಮೆ ಪ್ರವಚನದಲ್ಲಿ "ಸಣ್ಣ ಮನುಷ್ಯನೊಬ್ಬ ದೊಡ್ಡ ಅಂಗಿ ತೊಟ್ಟು ನಾನು ದೊಡ್ಡವನಾದೆ ಅಂದುಕೊಂಡರೆ ಅವನು ದೊಡ್ಡವನಾಗುವುದಿಲ್ಲಾ" ಹುಲಿಯೂರನಿಗೆ ನೆನಪಾಯಿತು. ಭದ್ರನಾಯ್ಕನ ತಾಂಡದ ಹುಡುಗಿಯರನ್ನ ಈ ಮೇಲ್ಜಾತಿ ಕಾಮುಕರಿಂದ ಉಳಿಸಿ ಅನ್ನೊ ಆಂದೋಲನದ ಸದಸ್ಯನಾಗಿದ್ದ ಹುಲಿಯೂರ. ಲೇಪಾಕ್ಷಿ ಮತ್ತ ಅವನ ಚೇಲ ಪ್ರತಿದಿನ ಸಾಯಂಕಾಲ ತಡವಾಗಿ ಕೆಲಸ ಬಿಡುವಂತೆ ಆಳುಗಳಿಗೆ ತಾಕಿತು ಮಾಡಿ ಹೊತ್ತು ಮುಳುಗಿ ಕತ್ತಲಾದ ಮೇಲೆ ಬರದನ ಹಳ್ಳಿ ಬಿಡುತ್ತಿದ್ದ. ತಾಂಡಕ್ಕೆ ಬರುವುದರೊಳಗೆ ರಾತ್ರಿ ಕತ್ತಲಾಗಿರುತ್ತಿತ್ತು. ತಾಂಡದ ಮುಂದಿನ ಹನುಮಪ್ಪನ ಗುಡಿತಾವ ಮಂದಿ ಇಳಿಸಿ, ಮೆಲ್ಲಗೆ ಸುಂದರಿಬಾಯ ಮನಿ ಕಡಿಗ ಕಾಲು ತಗಿತ್ತಿದ್ದ. ರಾತ್ರಿ ಅವಳ ಮನಿಯೊಳಗ ವಸತಿ. ಯಾರಿಗೂ ಕ್ಯಾರೆ ಅನ್ನದಂಗೆ ಹಾಲ್ಟ ಮಾಡುವುದು ಆಕಿ ಜೊತೆ ಸಲುಗೆಯಿಂದಿರುವುದು ಮಾಡುತ್ತಿದ್ದ. ಸುಂದರಿಬಾಯಿಯನ್ನ ಮನಸ್ಸಿನಲ್ಲಿಟ್ಟುಕೊಂಡಿದ್ದ ಭಗ್ನಪ್ರೇಮಿಗಳೆಲ್ಲರು ಲೇಪಾಕ್ಷಿ ಅಂದರೆ ಉರಿದು ಬೀಳುತ್ತಿದ್ದರು. ಆದರೆ ನೇರವಾಗಿ ಅವನಿಗೆ ಹೇಳುವ ಧೈರ್ಯ

ಯಾಮಗನಿಗೂ ಇರಲಿಲ್ಲಾ. ಹಿಂದೆ ಮಾತ್ರ "ಏನು ಮೆರಿಯಾಕ ಹತ್ಯಾನಪ್ಪ ಮಗ, ಅಲ್ಲ ಈಕೀನು ನೋಡು, ಜಾತಿಯಲ್ಲ, ಜಮಾನ ಅಲ್ಲದವನ ಜೊತಿಗೆ ಸಂಬಂಧ ಇಟ್ಕೊಂಡಾಳ, ತಾಂಡದಗ ಒಬ್ಬರಿಗಿಂತ ಒಬ್ಬರು ಹುಲಿ ಹಂಗವ್ರೆ ಅವರನ್ನ ನೋಡ್ಕೊಳಾಕ ಏನಾಗಿರಬೇಕು ಇಕೀಗ ಅಂತೀನಿ" ಪಾತ್ಲೇರೊ ಚಂದಿಯಾನಾಯ್ಕ ಕ್ರೋಧಿತನಾಗಿ ಭಾವನೆಯನ್ನ ವ್ಯಕ್ತಪಡಿಸಿದ್ದ. ಅವನಿಗೆ ಬೆಂಬಲವಾಗಿ "ಅಲ್ರಪ್ಪಾ ನೀವೇನು ಮಾಡಾಕ ಹತ್ತೀರಿ? ಕೆಲಸಕ್ಕ ಹೋಗೊವಾಗ ಅವಳನ್ನ ಅವರಿಂದ ದೂರ ಮಾಡಬೇಕು. ಅವರ ನೆಳ್ಳ ಬೀಳದಂಗೆ ನೋಡಬೇಕ್ರಪ್ಪ" ಸಾಲಿಗ ಹೋಗ್ತಿದ್ದ ಧಣಿಯಾನಾಯ್ಕ ಹೇಳಿದ. "ಹೋಗಲಿ ಬಿಡ್ರಲೆ ಯಾಕ ಈ ಪರಿ ಯೋಚನೆ ಮಾಡಿರಿ. ಅವರವರ ಮನಸ್ಸು, ಯಾರು ಎಲ್ಲಿ, ಯಾವಾಗ ಏನಾಗ್ತಾರ ಗೊತ್ತಿಲ್ಲ. ಏನೊ ಆಕಿ ಮನಸು ಅವನ ಶ್ರೀಮಂತಿಕೆ, ದೊಡ್ಡ ಜಾತಿ ಅನ್ನೋದನ್ನ ನೋಡಿ ಮಾರುಹೋಗಿರಬೇಕು ಸುಮ್ನೆ ಒಣ ಒಣ ಯೋಚನೆ ಮಾಡಿ ಏನು ಮಾಡಿರಿ ಸುಮ್ಮನಿರ್ರಿ" ಅಂದಿದ್ದ. "ಆಯ್ತಪ್ಪ ಹೋಗಲಿ ಅಂತ ಬಿಟ್ಟೆ ಅಂತ ಇಟ್ಕೊ, ಒಂದು ಪುಟ್ಟಿಯಲ್ಲಿ ಬದನೆಕಾಯಿನೊ, ಟೊಮೊಟೆ ಇಟ್ವಿ ಅಂತ ಇಟ್ಕೊ ಅದರಾಗ ಒಂದು ಕೊಳತರೆ, ಕಾಲಕ್ರಮೇಣ ಇಡೀ ಬುಟ್ಟಿನೆ ಕೆಟ್ಟು ಹೊಕ್ಕೈತೆ. ಹಂಗೆ ಇಡಿ ತಾಂಡದ ಹುಡುಗಿಯರು ಕೆಡುವ ಮೊದಲು ಇದಕ್ಕೊಂದು ಕಡಿವಾಣ ಹಾಕಬೇಕು. ಏನಂತಿರಿ" ಹುಲಿಯೂರ ಆವೇಶಭರಿತನಾಗಿದ್ದ. "ಹುಲಿಯೂರನ ಮಾತು ಬರೊಬರಿ ಐತೆ. ಇವತ್ತು ನಾವು ಮಾಡ್ಲಿಲ್ಲಾಂತ ಇಟ್ಕೊ ಈ ಮಕ್ಕಳು ದೊಡ್ಡ ಜಾತಿಯವರು ತಾಂಡದ ಎಲ್ಲಾ ಹುಡುಗಿಯರನ್ನ ಕೆಡಿಸಿಬಿಡ್ತಾರ" ಕಡಿಮನಿ ಜಗನ್ಯಾನಾಯ್ಕ ಅದೆ ಹುರುಪಿನಲ್ಲಿ ಹೇಳಿದ. ಈ ಹಿಂದೆ ಕುಡಿಯುವವರ ವಿರುದ್ಧ ಹೋರಾಟ ಮಾಡಿದ ಗುಂಪೆ ಮತ್ತೊಮ್ಮೆ ತಾಂಡದಲ್ಲಿ ನಡೆಯುತ್ತಿರುವ ಮೇಲ್ಜಾತಿಯವರ ದಬ್ಬಾಳಿಕೆಯನ್ನ ಕಡೆಗಾಣಿಸುವುದಕ್ಕೆ ತಯಾರಾಗಿತ್ತು. ಸರಾಯಿ ಆಂದೋಲನ ಬೇರೆನೆ ಇತ್ತು. ಅದು ಇಡಿ ಊರಿಗೆ ಸಂಬಂಧ ಪಟ್ಟಿದ್ದು, ಅದರಿಂದ ಯಾರಿಗೂ ತೊಂದರೆಯಾಗಲಿ ಹೊಣೆಗಾರಿಕೆ ಇರಲಿಲ್ಲಾ. ಆದರೆ ಇಲ್ಲಿ ಒಬ್ಬ ಹೆಣ್ಣು ಮಗಳ ಪ್ರಶ್ನೆ ಎದ್ದಿರುವುದರಿಂದ ಬಹಳ ಸೂಕ್ಷ್ಮವಾಗಿಯೆ ಇದನ್ನ ನಿರ್ಣಯಿಸಬೇಕಾಗುತ್ತದೆ, ಬಹಳ ತಾಳ್ಮೆ ಮತ್ತು ಧೈರ್ಯದಿಂದ ನಿಭಾಯಿಸಬೇಕಿರುವುದರಿಂದ ಹುಂಬರಂತೆ ಏಕಾಏಕಿ ಹೋದರೆ ಸುಂದರಿಬಾಯಿ ತಾಯಿ ಮಾಳಿಬಾಯಿ "ಏನ್ರಲೇ ಬೋಳಿ ಮಕ್ಕಳ್ರ, ನನ್ನ ಮಗಳು ಶೀಲಗೆಟ್ಟವಳು ಅಂತ ಹೇಳಾಕೆ ಎಷ್ಟು ಧೈರ್ಯ ನಮಗೇನು ನೀವು ದುಡದು ಹಾಕ್ತಿರೆನ್ರೊ ಭಾಡಕೌ ನನ ಮಕ್ಕಳ ಅಂತಲೆ ಬಾಯಿ ತಗೀತಾಳ, ಯಾಕ ಊರ ಉಸಾಬರಿ ಬೇಕು ಸುಮ್ನೆ ನಿಮ್ಮ ನಿಮ್ಮ ಪಾಡು ನೊಡ್ಕೊ ಹೋಗ್ರಿ" ಅವರಲ್ಲೆ ಹಿರಿಯನಾದ ಬೊಂದ್ಯಾಲುನಾಯ್ಕ ಬುದ್ಧಿ ಹೇಳಿದ. "ಆದರೆ ತಾಂಡ ಎಕ್ಕುಟ್ ಹೊಕ್ಕೈತೆ ಮಾವ, ಇಗಾಗಲೆ ಬಹಳ ಬದಲಾವಣೆ ಕಾಣಾಕ ಹತ್ಯೆತಿ. ಅಲ್ಲಪ ದೀಪಾವಳಿಗೆ ಗುಡಿ ಮುಂದೆ ಎಷ್ಟ ಹುಡುಗಿಯರು ಇರ್ತಿದ್ರು ಮಂದಿ ಯೋಚನೆ

ಮಾಡಾಕ ಹತ್ಯಾರ. ಯಾಕ ಒಣಉಸಾಬರಿ ಅಂತಂದು. ಹಿಂಗ ಮುಂದುವರಿತು ಅಂತಿಟ್ಕ ನಾಳೆ ಯಾವ ಕುಣಿತ ಇಲ್ಲಾ, ನಗಾರಿ ಇಲ್ಲ, ಬ್ಯಾಟಿ ಇಲ್ಲ ತಾಂಡದ ಜನ ಹೋಗಿ ಊರಮಂದಿ ಅಕ್ಕೀವಿ ಅಷ್ಟೆ" ಹುಲಿಯೂರ ಸ್ಪಷ್ಟವಾಗಿಯೆ ಹೇಳಿದ್ದ. ಅವರ ಯೋಚನೆಗಳು ವಿಚಾರಗಳು ಸರಿದಿಕ್ಕಿನ ಕಡಿಗೆ ಹೊಂಟಿದ್ದವು. ಆದರೆ ಕಾಲ ಬದಲಾಗುತ್ತಿದ್ದಂತೆ ಮಂದಿ ಮನಸ್ಸಿನೊಳಗೆ ಆಲೋಚನೆಗಳು ಬದಲಾಗುತ್ತಿದ್ದವು.

ಈ ಫಜೀತಿ ಸಾಲದು ಅಂದುಕೊಳ್ಳುತ್ತಿದ್ದಂತೆ ದುರ್ಗಾಪುರದ ಸಮೀಪ ಆರಂಭವಾಗುತ್ತಿದ್ದ ಫ್ಯಾಕ್ಟರಿಯಲ್ಲಿ ಕೆಲಸ ಮಾಡೋದಕ್ಕೆ ರಾತ್ರಿ ಪಾಳೆಯದಲ್ಲಿ ಕೆಲಸ ಮಾಡಲು ಹರೆಯದ ಯುವತಿಯರಿಗೆ ಮಾತ್ರ ಅವಕಾಶ ಅಂದಾಗ ತಾಂಡದ ಮಂದಿ ಹೌಹಾರಿದರು. ದಿನವಿಡಿ ಅಂಡೂರಿ ಯಾರ ತಂದು ಹಾಕಿದರೂ ತಿಂದು ಹಾಕುವ ಗಂಡಸರೆ ಹೆಚ್ಚಿದ್ದ ಭದ್ರಾನಾಯ್ಕನ ತಾಂಡದಲ್ಲಿಗ ಅಲ್ಲೋಲಕಲ್ಲೋಲವಾಗಿತ್ತು. ಹಂಚಿನಮನಿ ಸಾಂಬನಾಯ್ಕ, ಎಲೆ ಅಡಿಕೆ ರೋಡೀರನಾಯ್ಕ, ಧಗಡು ಡೌಲನಾಯ್ಕ, ಮೂಲಿಮನಿ ಕಿಷ್ಣನಾಯ್ಕ, ಹೆಂಡದಂಗಡಿ ಮುಂದೆ ಬಾಟಿಲು ಏರಿಸಿ, ಒಂದೊಂದು ಕೈಯಾಗ ಹಿಡ್ಕೊಂಡು ದುಂಡು ಮೇಜಿನ ಪರಿಷತ್ತು ನಡೆಸಿದ್ದರು. "ಅಲ್ರಪ್ಪ ಎಲ್ಲಿಗ ಬಂತು ತಾಂಡದ ಪರಿಸ್ಥಿತಿ ಅಂತಿನಿ, ಅವನ್ಯಾವನೊ ಮುದುಕಿಯರು ಸೈಡಿಗ ಬರ್‍ರಿ ಅಂತಂದು, ಬರಿ ಹರೆಯದ ಹುಡುಗಿಯರನ್ನ ಆರಿಸಿ ಆರಿಸಿ ಟ್ರಾಕ್ಟರ್ ಹತ್ತಸ್ತಾನ. ಅವು ಹುಡುಗಿಯರು ಏನು ಕಲೆಕ್ಟರ್ ನೌಕರಿಗೆ ಹೊಂಟಿರುವಂಗೆ ಮಾಡ್ತವ್ರೆ. ಅಲ್ಲಿ ಏನು ನಡೆಯುತ್ತೆ ಅನ್ನೋದು ಯಾವನ ಬಲ್ಲ?" ಎಲೆ ಅಡಿಕೆ ರೋಡೀರನಾಯ್ಕ ತಾನು ಗಮನಿಸಿದನ್ನ ತೋಡಿಕೊಂಡ. "ಅಯ್ಯೋ ಅವರ ದಿಮಾಕು ಏನೂ ಕೇಳಿಯ, ರಾತ್ರಿ ಅದೇನು ಮಾಡಿ ಬರ್‍ತಾವೊ, ಬಂದು ಮಕ್ಕೊಂಡ್ರೆ ಮತ್ತೆ ಸಂಜೆ ಏಳೋದು ಮರಿಯಮ್ಮಗೆ ಗೊತ್ತು ಅಲ್ಲಿಯ ಹಕೀಕತ್ತು" ಸಾಂಬನಾಯ್ಕ ಗೊಣಗಿದ.

ಸ್ವಲ್ಪ ದಿನ ಹಿಂಗ ನಡದ್ರ ಪ್ಯಾಕ್ಟರಿ ಪಕ್ಕ ಶಿಶುಪಾಲನ ಕೇಂದ್ರ ಆರಂಭ ಮಾಡೋದಾದಿತು ಅಂತ ಅಂದುಕೊಂಡ ಮಾಲಿಕ ರಾತ್ರಿಪಾಳೆಯನ್ನು ಬಂದ್ ಮಾಡಿದ್ದ. ಅಷ್ಟೆ ಅಲ್ಲಾ ಯಾವುದೇ ಕಾರಣಕ್ಕೂ ತಾಂಡದಿಂದ ಕೂಲಿ ಆಳುಗಳನ್ನ ತರುವುದನ್ನ ನಿಲ್ಲಿಸಿದ್ದ. ಅಷ್ಟರಲ್ಲಾಗಲೆ ಆಗಬಾರದ ಅನಾಹುತಗಳು ಆಗಿ ಹೋಗಿದ್ದವು. ಚಿಂತರಪಲ್ಲಿ, ಸುವಾಲಿ, ಸಂಕಿ, ಗೋರಿ, ಸಾಂಬಳಿ ಅಲ್ಲಿ ನಡೆದದ್ದನ್ನ ಅರೆತರೆಯಿಂದ ತೋಡಿಕೊಂಡರು. ದೊಡ್ಡ ಹುದ್ದೆಯವನು, ಹುಡುಗರು, ಮಧ್ಯವಯಸ್ಸಿನವರನ್ನ ಒಂದುಕಡೆಗೆ ಗದುಮುತ್ತಿದ್ದ. ಉಳಿದ ಹರೆಯದ ಹುಡುಗಿಯರೊಳಗೆ ಚೆನ್ನಾಗಿರುವವು ಒಂದು ಕಡೀಗ, ಅದ್ರಾಗೆ ಖರಾಬ್ ಫಿಗರ್‌ಗಳನ್ನ ಒಂದು ಕಡೀಗ ಮಾಡಿ ಕೆಲಸಕ್ಕೆ ಬಿಡುತ್ತಿದ್ದ. ಅಲ್ಲೇನು ಆಗ್ತಿತ್ತು ಇಲ್ಲಿಯವರಿಗೆ ಗೊತ್ತಾಗುತ್ತಿರಲಿಲ್ಲಾ. ಇಲ್ಲಿ ಏನಾಗುತ್ತೆ ಅಲ್ಲಿಯವರಿಗೆ ತಿಳಿಯುತ್ತಾ ಇರಲಿಲ್ಲ. ಅಂತು ಸಾಹುಕಾರ ಏನು ಮಾಡಿದರೂ ಮುಚ್ಕೊಂಡು ಹೋಗುತ್ತೆ

ಅನ್ನೋದಕ್ಕೆ ಇದೊಂದು ಒಳ್ಳೆಯ ಉದಾಹರಣೆಯಾಗಿತ್ತು. ಯಾಕಂದ್ರಿ, ಸರಕಾರ ಅವರದ್ದು, ಕಾನೂನು ಅವರದ್ದು, ನ್ಯಾಯಾಲಯದಿಂದ, ನ್ಯಾಯಾಧೀಶನವರೆಗೂ ಖರೀದಿಸುವ ತಾಕತ್ತು ಕೇವಲ ದುಡ್ಡಿಗೆ ಮಾತ್ರ ಇರುವುದರಿಂದ ಕೂಲಿಯ ಮಾತು, ಕೂಲಿ ಮಾನ ಮರ್ಯಾದೆಗೆ ಬೆಲೆ ಎಲ್ಲಿ ಸಿಗಬೇಕು. ಹಾಗಾಗಿ, ಯಾವ ಯಾವ ಹುಡುಗಿಯರಿಗೆ, ಯಾರು ಏನು ಮಾಡಿದರೂ ತಿಂಗಳ ಕೊನೆಗೆ ಕೈತುಂಬ ದುಡ್ಡಂತು ಬಂದಿತ್ತು. ಅದರಲ್ಲಿ ಯಾರು ಯಾವಾಗ ಎಲ್ಲಿ ಏನು ಮಾಡಿಕೊಂಡ್ರೊ ಆ ಗುಡಿಯೊಳಗೆ ಮೂಕನಾಗಿ ಕುಳಿತಿರುವ ಸೇವಾಬಾಯನಿಗೆ ಮಾತ್ರ ಗೊತ್ತು. ಈ ಎಲ್ಲಾ ವಿಷಯಗಳು ಕಣ್ಣಮುಂದೆ ನಡೆಯುತ್ತಿದ್ದರು, ಕುಡಿತಕ್ಕೆ, ತುಂಡುಮಾಂಸಕ್ಕೆ ಕಾಸು ಸಿಕ್ಕರೆ ಏನಾದರೂ ಮಾಡ್ಕೊ ಹೋಗು ಅನ್ನೊ ಅಪ್ಪಂದಿರು, ದುಡ್ಡಿಗಾಗಿ ಸ್ವತಃ ಮಗಳ ತಲೆ ಹಿಡಿಯೊ ತಾಯಂದಿರಿಗೆ ಇದೇನು ಹೆಚ್ಚುಗಾರಿಕೆ ಅನಿಸಲಿಲ್ಲ. ಮರ್ಯಾದಸ್ತರು "ಎಯ್ ನೀನು ರಾತ್ರಿ ದುಡಿದು ನನ್ನ ಮನಿ ನಡಸೊ ಅಂತ ಬರಗಾಲ ಏನು ಬಂದಿಲ್ಲ ಮುಚ್ಕೊಂಡು ಮನಿ ಕೆಲಸ ಬಗಸಿ ನೋಡಿಕೊಂಡು ಬಿದ್ದಿರು" ಅಂತ ಗದರಿಸಿ ಕೆಲಸ ಬಿಡಿಸಿದ್ದರು. ವಯಸ್ಸಾದವರು, ಮೂಲೆಯೊಳಗೆ ಕುಳಿತು "ನಮ್ಮ ತಾಂಡ ಭಾರಿ ಬದಲಾತು ಬಿಡಪ್ಪ ಗಂಡಸರೆ ರಾತ್ರಿ ಕೆಲಸ ಮಾಡೋದಕ್ಕೆ ಹಿಂದೆ ಮುಂದೆ ನೋಡೊ ಹೊತ್ನಾಗ ಇವರು ಕೆಲ್ಸಕ ಹೊಂಟಾರ. ಭಾರಿ ಸುಧಾರಿಸಿದೆ ಬಿಡು" ಅಂತೇಳಿ ಕೈಲಾಗದ ಸ್ಥಿತಿಯನ್ನ ತಲುಪಿದರು. ಬಾಯಿ ಸುಮ್ಮನಿರದೆ ಏನೇನೊ ಬಡ್ಕೊಳ್ಳುತ್ತಿತ್ತು. ನಡೆಯುತ್ತಿರುವ ಅನಾಹುತಕ್ಕೆ ತಾವೂನು ಸಾಕ್ಷಿಯಾಗಿ ಬದುಕಿದ್ದಿವಲ್ಲಾ ಅನ್ನೋದೆ ಕೆಲವರಿಗೆ ಸಹಿಸದಾಗಿತ್ತು. ತೊಪುನಾಯ್ಕ, ಚಮನ್ ಚಾಚ, ಹನುಮನಾಯ್ಕ, ಮಾತಾಡಬೇಕು ಈ ವಿಷಯದ ಮೇಲೆ ಅಂತ ಅಂದ್ಕೊಂಡ್ರು. ಬಾಯಿ ಬಿಟ್ರ ಬಣ್ಣಗೇಡು ಅಂತೇಳಿ ಸುಮ್ಮನೆ ಮಾರಿ ತಿರುಗಿಸಿಕೊಂಡು ತಮ್ಮ ಪಾಡಿಗೆ ತಾವು ಇರತೊಡಗಿದರು. ತಾಂಡದಲ್ಲಿ ಯಾರ ಮಾತು ಯಾರು ಕೇಳದಾಗಿದ್ದರು. ಒಗ್ಗಟ್ಟು ಯಕ್ಕುಟ್ಟಿ ಹೋಗಿತ್ತು. ಒಬ್ಬರಮಾತು ಒಬ್ಬರಿಗೆ ಆಗದು, ಒಬ್ಬರ ವಿಚಾರ ಒಬ್ಬರಿಗೆ ಹಿಡಿಸದು. ಮಕಕ್ಕೆ ಮಕ ಕೊಟ್ಟು ಮಾತಾಡದ ಸ್ಥಿತಿ ನಿರ್ಮಾಣವಾಗಿತ್ತು.

ಸುತ್ತ ಊರಮಂದಿ, "ಏನ್ರಲೇ ನಿಮ್ಮೂರ ಹುಡುಗಿಯರು ಪಾಕ್ಟರಿ ಕೆಲ್ಸಕ್ಕೆ ಹೊಕ್ಕಾರಂತ" ಅಂತೇಳಿ ಆರಂಭಿಸಿ, "ಹೂಂ, ರಾತ್ರಿಪಾಳಿ ಮಾಡ್ತಾರಂತ. ಹೆಂಗಲೆ ಇನ್‌ಕಮ್ಮು" ಅಂತಂದು ವ್ಯಂಗ್ಯವಾಗಿ ಮಾತಾಡುತ್ತಿದ್ದರು. ಬೊಯ್ಯೋದಕ್ಕೆ ಬಾಯಿ ಇಲ್ಲದೆ ಹ್ಯಾಪ್‌ಮಾರಿ ಹಾಕ್ಕೊಂಡು ಮುಚ್ಕೊಂಡು ತಾಂಡಕ್ಕ ವಾಪಾಸಾಗುತ್ತಿದ್ದರು ಗಂಡಸರು. ಯಾವತ್ತು ಮಾನ ಮರ್ಯಾದೆಯಿಂದ ಬದುಕಿದ ಲಮಾಣಿಗರಿಗೆ ಇದೊಂದು ಕಪ್ಪು ಚುಕ್ಕೆಯಾಗಿತ್ತು. ಆದರೆ ಯಾರಿಗೆ ಯಾರು ಹೇಳುವಂತಿಲ್ಲ. ಏನಾರ ಅಂದಿಯಾ "ಯಾಕಪ್ಪ, ನಾವೇನು ಭಿಕ್ಷೆ ಬೇಡ್ತಿದ್ದಿವ, ಕಷ್ಟಪಟ್ಟು ದುಡಿತೀವಿ,

ಅಷ್ಟ ನಿನ್ನ ಮರ್ಯಾದಿ ಕಮ್ಮಿಯಾಗೋದಾದರ ನಿಮ್ಮ ಮನಿ ಹೆಂಗಸರನ್ನ ಹುಡುಗಿಯರನ್ನ ಮನಿಯೊಳಗೆ ಇಟ್ಕೊ ಹೋಗಯ್ಯ, ಬಂದ ಬಿಟ್ಟ ಭಾಷಣ ಹೊಡಿಯೋದಕ್ಕೆ. ಹೌದು ನನಗೆ ರೊಕ್ಕದ ಅವಶ್ಯಕತೆ ಐತೆ, ನೀ ಕೊಡ್ತಿಯ ಹೇಳು ಕೆಲಸ ಬಿಟ್ಟು ನಿಮ್ಮ ಮನಿಯಾಗ ದುಡಿತಿನಿ. ಸಾಹುಕಾರ ಏನ ಕೂಲಿ ಕೊಡ್ತಾನ ನೀ ಕೊಟ್ಟು ಬಿಡು ಆ ಕಡೀಗ ತಲಿ ಹಾಕಲ್ಲ" ನೇರವಾಗಿ ಕೇಳುವ ಗೋಜಿಗೆ ಹೋಗದೆ ಒಳಗೊಳಗೆ ಮಾತಾಡಿಕೊಳ್ಳುತ್ತಿದ್ದರು. ಒಂದು ಕಡೆ ಕಾಲೇಜು ಹುಡುಗರು ಮತ್ತೊಂದು ಕಡೆ ಮರ್ಯಾದಸ್ಥರು ದೇವರೆ ಯಾವಾಗ... ತಾಂಡ ಸುಧಾರಿಸುವುದೊ ಅಂತೇಳಿ ಒಂದು ಗುಂಪು ಮಾತ್ರ ದೇವರ ಮೊರೆಹೋಗಿತ್ತು.

* * *

69. ಡೆಬರಿಬಾಯಿ

ಡೆಬರಿಬಾಯಿಯ ಸಂಬಂಧಿಕರು ತಾಂಡದಲ್ಲಿದ್ದರು. ಅವರು ಎಲ್ಲಿಂದ ಗುಳೆ ಬಂದವರಂತ ಯಾರಿಗೂ ಗೊತ್ತಿಲ್ಲ. ಯಾವಾಗ ಬಂದರು ಅಂತಾನು ಗೊತ್ತಿಲ್ಲ. ಆದರೆ ತಾಂಡದಲ್ಲಿ ಜಾಗ ಹಿಡಿದು ಗುಡಿಸಲು ಹಾಕಿಕೊಂಡಿದ್ದರು. ಈಗಿನಂತೆ ಹಳೆ ಕಾಲದ ಮಂದಿ ಕಾಸಿಗೆ ಬೆಲೆಕೊಟ್ಟವರಲ್ಲ, ಮಾತಿಗೆ ಬೆಲೆ ಕೊಟ್ಟವರು. ಡೆಬರಿಯ ಅಣ್ಣನ ಮಕ್ಕಳು, ತಮ್ಮನ ಮಕ್ಕಳು ಬದುಕಿದ್ದರು. ಒಬ್ಬನು ಮೀನು ಮಾರುತ್ತಿದ್ದ, ಒಬ್ಬ ತರಗಾರ ಕೆಲಸ, ಇನ್ನೊಬ್ಬ ತುಂಡು ಭೂಮಿಯನ್ನೆ ಸಾಗುವಳಿ ಮಾಡಿಕೊಂಡಿದ್ದ. ಡೆಬರಿ ಮತ್ತು ಮಂಗಲಿ ಪೂರ್ವ ಅಸ್ಪಷ್ಟವಾಗಿತ್ತು. ದೀಪಾವಳಿಗೆ ಮನೆಮನೆಯ ಬ್ಯಾಟಿ ಹಬ್ಬಕ್ಕೆ, ಓಕಳಿ ಉಚ್ಚಾಯಕ್ಕೆ ತಪ್ಪದೆ ಬರುತ್ತಿದ್ದರು. ಸಿಟಿಯಲ್ಲಿ ಎಲ್ಲಿದ್ದರು, ಏನು ಮಾಡುತ್ತಿದ್ದರು ಯಾರಿಗೂ ಗೊತ್ತಿಲ್ಲ. ಕೆಲವರು ಹಂಗದಾರ, ಹಿಂಗದಾರ ಅಂತ ಊಹೆ ಮಾಡಿಕೊಂಡು ಕತೆ ಕಟ್ಟುತ್ತಿದ್ದರು. ಆದರೆ ಹಕೀಕತ್ತು ಮಾತ್ರ ಗೊತ್ತಿರಲಿಲ್ಲ. ಹಿಂಗಾಗೆಯ ಡೆಬರಿ ತಾಂಡಕ್ಕೆ ಬಂದಾಗ ಹುಡುಗರಿಗೆ, ಹಿರಿಯರಿಗೆ ಒಳ್ಳೆ ಕಾಮಿಡಿ ಮಾಡುತ್ತಿದ್ದಳು. ಖುದ್ದು ಒಳ್ಳೆಯ ಕಾಮಿಡಿ ಪೀಸ್‌ನಂತೆ ಕಾಣುತ್ತಿದ್ದಳು. ಅವಳ ತಂಗಿ ಮಗಳು ಮಂಗಲಿ ನೋಡಲು ಕುರೂಪಿ ಯಾಗಿದ್ದಕ್ಕೆ ಯಾರು ಮದುವೆಯಾಗಲು ಮುಂದೆ ಬರದಕ್ಕೆ ಹಾಗೆ ಉಳ್ಕೊಂಡಿದ್ದಳು. ಅವಳು ಚಿಕ್ಕಮ್ಮ ಡೆಬರಿಬಾಯಿ ಬಳಿ ಸಿಟಿಯಲ್ಲಿದ್ದವಳು. ಕಡೆ ಕಡೆಗೆ ತಾಂಡ ಸೇರಿ ಕೂಲಿ ಮಾಡಿಕೊಂಡು ಬದುಕಿದ್ದಳು. ಒಂದು ವಾರಿ ಚಪ್ಪರ, ಅದರೊಳಗೆ, ಒಲೆ, ಅದಕ್ಕೇನು ದುಡ್ಡು ಕಾಸು ಬೇಕಿಲ್ಲ. ಈಶಾನ್ಯ ಮೂಲೆಯೊಳಗೆ ನೆಲ ಬಗದು ಮೂರು ದುಂಡನ ಕಲ್ಲು ಇಟ್ಟು ಮಣ್ಣು ಮೆತ್ತುವವರು ಮೆತ್ತುತ್ತಿದ್ದರು. ಮಣ್ಣಿಂದನೆ ಗುಂಡುಕಲ್ಲು ಮಾಡಿಕೊಂಡವರು ಇದ್ದರು. ರೊಟ್ಟಿ ಸುಡುವ ಹೆಂಚು, ರೊಟ್ಟಿ ಹಿಟ್ಟ ಕಲಿಸಲು ಒಂದು ಕಟ್ಟಿಗೆ ಕಾಟೋಟಿ, ಒಂದು ಸಿಲಾವರಿ ತಾಟು, ಒಂದು ಸ್ಟೀಲ್

ಕಾಟೋಟಿ= ರೊಟ್ಟಿ ತಟ್ಟುವ ಕಟ್ಟಿಗೆಯ ವಸ್ತು

ಜರಗಿ, ಒಂದೆರೆಡು ಸಿಲಾವರಿನವು ಪಾತ್ರೆಗಳು. ಇಷ್ಟ ಮಂಗಲಿಯ ಐಶರಾಮ ಬದುಕಿನ ಸಾಮಾನುಗಳು. ಹಳೆಕಾಲದ ಪೆಟಾರಿಯೊಳಗೆ ಹರಿದ ಒಂದೆರೆಡು ಸೀರೆಗಳು, ಒಂದು ದುಬಟಿ, ಒಂದು ಈಚಲ ಚಾಪೆ. ಮುಂಜಾನೆ ಹೊತ್ತಾರೆ ರೊಟ್ಟಿ ಸುಟ್ಕೊಂಡು, ನಾಕು ಸುಟ್ಟ ಮೆಣಸಿನಕಾಯಿ ಕಿವುಚಿಕೊಂಡು ಎರಡು ರೊಟ್ಟಿ ತಿಂದು ಗ್ಲಾಸು ನೀರು ಕುಡಿದು ಕೂಲಿಗೆ ಹೊಂಟರೆ ಮತ್ತೆ ರಾತ್ರಿ ವಾಪಾಸು. ದುಡಿದು ದಣಿವಾದರೂ ತಾನೆ ಬಂದು ದೀಪ ಹಚ್ಚಿ, ಒಲೆಯ ಮೇಲೆ ಎಸರಿಟ್ಟು, ಪಕ್ಕದಲ್ಲೆ ಇದ್ದ ಅಣ್ಣ ತಮ್ಮಂದಿರ ಮನೆಗೆ ಹೋಗಿ ಕುಶಲೋಪರಿ ಮಾತಾಡಿ ಬಂದು ಕುದಿಯುತ್ತಿರುವ ನೀರಿಗೆ ಹಿಟ್ಟು ಹಾಕಿ ಮುದ್ದೆ ಕೂಡಿಸಿಕೊಂಡು, ಕೈ ಹಿಂಡಿ ಮಾಡಿ ಉಂಡರೆ ರಾತ್ರಿ ಊಟವು ಮುಗಿತು. ತಟ್ಟೆ ಲೋಟ ತೊಳದು ಮುದ್ದಿ ಪಾತ್ರೆಗೆ ನೀರು ಸುರಿದು, ಚಾಪೆ ಹಾಸಿ ಮಲಗಿದರೆ, ಶಿವಶಿವಂತ ಕಣ್ಣಲ್ಲೆ ತುಂಬಿದ ನಿದ್ರಾದೇವಿ ತನ್ನ ತೋಳತೆಕ್ಕೆಯಲ್ಲಿ ಬಂಧಿಸಿ ಬಿಡುತ್ತಿದ್ದಳು. ಬದುಕಿನ ಬಗ್ಗೆ, ಶ್ರೀಮಂತಿಕೆಯ ಬಗ್ಗೆ, ಗಂಡ, ಸಂಸಾರ, ಒಳಗಿನ ಬೇಗುದಿ, ಗಂಡಿಸಿನ ಸಹವಾಸ, ಊಹೂಂ. ಯಾವುದು ಇಲ್ಲ ನಿಶ್ಚಿಂತ, ನಿರಾಳ ಬದುಕು ನೆಮ್ಮದಿಯ ನಾಳೆ, ಕಾಸಿದ್ದಾಗ ಒಂದು ಬಾಟಲಿ ಹೆಂಡವೊ, ಪಾಕೀಟು ಸರಾಯಿ ಕುಡಿದು ಜೀವನದ ರಸವತ್ತಾದ ಘಳಿಗೆಯನ್ನ ಕಳೆದು ಮಂದಿಯಂತೆ ಹಿಂದೆ ಅವಳ ತಾಯಿ ಬದುಕಿದ್ದಾಗ ಅನುಭವಿಸಿದ ಕುಡಿತದ ಮೋಜನ್ನ ಒಮ್ಮೆ ಅನುಭವಿಸುತ್ತಿದ್ದಳು. ಅವಳ ಚಿಕ್ಕಮ್ಮ ಡೆಬರಿಯಾದರು ದಷ್ಟ ಪುಷ್ಟ ಹೆಣ್ಣು ಬಣ್ಣ ಕಪ್ಪಿದ್ದರು ನಾಕು ಗಂಡಸರನ್ನ ಆಕರ್ಷಣೆ ಮಾಡುವ ಯೌವನದ ಕಾಲದಲ್ಲಿ ಅನುಭವಿಸಿದ ಸುಖವನ್ನ ಬರಿ ನೆನಪು ಮಾಡಿಕೊಂಡು ಮಂಗಲಿಯ ಪಾಲಾಗಿದ್ದಳು. ಅಣ್ಣ ತಮ್ಮ ಏನೆ ಇದ್ದರು ಸಲುಗೆಯಿಂದ ಹೋಗಿ ಅತ್ತಿಗೆಯರಿಗೆ ಅದು ಕೊಡ್ರಿ, ಇದು ಕೊಡ್ರಿ ಅಂತ ಕೇಳಿದವಳೆ ಅಲ್ಲ. ತಾನಾಯ್ತು ತನ್ನ ದುಡಿಮೆಯಾಯ್ತು. ತನ್ನ ಕುರೂಪಿಯಾದ ಮುಖವನ್ನ ನೆನಪಿಸಿಕೊಂಡು ಹೆಣ್ಣಿಗಿರುವ ಯಾವ ಭಾಗ್ಯವನ್ನು ದೇವರು ನನಗೆ ಯಾಕೆ ಕೊಡಲಿಲ್ಲಾ ಅಂತ ಆಲೋಚಿಸುತ್ತ ಮುದುಡಿಕೊಂಡು ಮಲಗಿಬಿಡುತ್ತಿದ್ದಳು. ಜಗತ್ತು, ಪುರುಷರು ತನ್ನನ್ನ ಅಸಹ್ಯವಾಗಿ ಕಾಣುವ ಹೆಂಗಸರು ಒಂದು ಸಲ ಕಣ್ಣಮುಂದೆ ಬಂದು ಹಾದು ಹೋಗಿದ್ದರು. "ಏಯ್ ಕ್ರೂರಿ ದೇವರೆ ನಾನೇನು ತಪ್ಪು ಮಾಡಿದ್ದೆ? ಯಾಕಿಂಗೆ ಅರ್ದಂಬರ್ದ ರೂಪ ಕೊಟ್ಟೆ? ಇಲ್ಲ ಮನುಷ್ಯರೊಳಾದರೂ ಸೃಷ್ಟಿಸಬೇಕಿತ್ತು, ಇಲ್ಲ ಕೋತಿಯಲ್ಲಿ. ಈ ರೂಪ ತಗೊಂಡು ನಾನೇನು ಮಾಡಲಿ. ಏನು ಮಾಡಲಿ" ಅತ್ತು ಅತ್ತು ಹಾಸಿಗೆ ಮೇಲೆ ಮಲಗಿ ಬಿಡುತ್ತಿದ್ದಳು. ಯಾರಿಗೂ ತೊಂದರೆ ಮಾಡಿರಲಿಲ್ಲಾ, ಯಾರಿಗೂ ಬಿರುನುಡಿ ತಗದವಳಲ್ಲ ಮಂಗಲಿ. ಕೂಲಿಗೆ ಕರೆಯಲು ಬಂದವರಿಗೆ, "ಆಯ್ತು ಕಣಣ್ಣ, ಆಯ್ತು ಕಾಕ, ಆಯ್ತು ಅಯ್ಯ" ಇಷ್ಟನ್ನ ಬಿಟ್ಟು ಬೇರೆ ಮಾತಾಡಿದವಳಲ್ಲ. ಈಗ ಅವಳೊಂದಿಗೆ ಅವಳ ಚಿಕ್ಕಮ್ಮ

ಡೆಬರಿಬಾಯಿಯೂ ಇರಲು ಬಂದಾಗ ಖುಷಿಯಾಗಿತ್ತು. ಒಂಟಿ ಬದುಕು ಸಾಕಾಗಿತ್ತು. ಅಣ್ಣತಮ್ಮಂದಿರು ಪಕ್ಕದಾಗಿದ್ದರು ಏನು ಕೊರತೆ ಇತ್ತು. ತಿಳುವಳಿಕೆ ಬಂದಾಗಿನಿಂದ ಮಂಗಲಿಗೆ ಅವಳ ಚಿಕ್ಕಮ್ಮ ಡೆಬರಿ ತೋರಿಸಿದ ಪ್ರೀತಿ, ಮಮತೆ ಸ್ವತಃ ತನ್ನ ತಾಯಿಯೇ ತೋರಿಸಿರಲಿಲ್ಲ. ಹಾಗಾಗಿ, ಅವಳೆಂದರೆ ಒಂದು ಜಗತ್ತಿದ್ದಂತೆ. "ಚಿಕ್ಕಿ ನೀ ಹೆದರಬೇಡ, ನೀ ಸಾಯೊಮಟಾನು ನಾನು ದುಡದು ಹಾಕ್ತಿನಿ. ನನ್ನ ತಾಯಿ ಇದ್ದಿದ್ದರೆ ಸಾಕುತ್ತಿರಲಿಲ್ಲವೆ? ಹಂಗೆ ನೀನೆ ನನ್ನ ತಾಯಿ. ಸುಮ್ಮನಿರು ಅಳಬೇಡ" ಸಮಾಧಾನ ಮಾಡಿದ್ದಳು. "ಅಲ್ಲೆ ಮಂಗಲಿ, ನೀನು ಹುಟ್ಟಿ, ಆಡಿ ನನ ಕೈಯಾಗೆ ಬೆಳೆದ ಮಗಳು, ನನ್ನ ಬಾಳು ನಾನು ಆರಿಸಿಕೊಂಡಿದ್ದು. ಯಾವಾಗ ನನ್ನ ನೋಡಾಕ ಬಂದವನು ಕರ್‍ರಗದಾಳ ಒಲ್ಲೆ ಅಂದು ಹೋದನೊ ಅವತ್ತೆ ಮನೆ ಬಿಟ್ಟು ಓಡಿದೆ. ಇವತ್ತು ಆದದ್ದು ಮುಂದೆ ಆಗೋದಿಲ್ಲ ಅನ್ನೋದು ಏನು ಗ್ಯಾರಂಟಿ ಅಂದಾಕಿನ, ಈ ಹಾಳ ಗಂಡಸರು ಅದೆಂಥ ಹಾಳಮನಿ ಸುಂದರಿಯನ್ನ ಮದುವೆಯಾಗಿ ಸುಖಪಡ್ತಾರಂತ ನೋಡಾಕ ಸಿಟಿಯೊಳಗೆ ಗುಡಿಸಲು ಕಟ್ಟಿದೆ. ಅಲ್ಲಿ ಬರ್ತಿದ್ದವರೆಲ್ಲಾ ಕೆಂಪು ಹೆಣ್ಣನ್ನ ಮದುವೆಯಾದವರೆ. ಆದರೆ ಈ ಯಾವ ಜಂಜಡವೂ ಇಲ್ಲದೆ, ಯಾರ ಹಂಗು ಇಲ್ಲದೆನೆ ಬದುಕ್ತಿದ್ದಿಯಲ್ಲಾ ಬಹಳ ದೊಡ್ಡ ಯೋಚನೆ ಕಣವ್ವ" ಗಳಗಳನೆ ಅತ್ತುಬಿಟ್ಟಳು.

ಡೆಬರಿಯ ಅಸ್ತಿತ್ವೇ ಇಲ್ಲದಾಗಿತ್ತು. ಏಕೆಂದರೆ ಡೆಬರಿಗೆ ಮದುವೆ ಇಲ್ಲ. ಗಂಡ ಇಲ್ಲ, ತನ್ನವರು, ತನ್ನದು ಅಂತ ಇರೋದು ಅಕ್ಕನ ಮಕ್ಕಳು ಮಾತ್ರ. ಅವರು ತುಂಡು ಜಮೀನಿನ ಸಲುವಾಗಿ ಸಿಟಿಯ ಕೊಳಚೆ ಪ್ರದೇಶದಲ್ಲಿದ್ದ ಗುಡಿಸಲು ಮಂಗಳವಾರದ ಸಂತೆ ದಿನ ಹೆಗಲಿಗೆ ಜೋಳಿಗೆ ಹಾಕಿಕೊಂಡು, ತರಕಾರಿ ಆರಿಸುವುದು, ಬೇಡುವುದು, ಮಾಲೀಕ ಆಕಡೆ ನೋಡುತ್ತಿದ್ದರೆ ಕದ್ದು ಓಡುವುದು. ಸಾಕು ಸಾಕಾಗಿ ಹೋಗಿತ್ತು. "ಥು! ಇದೊಂದು ಜೀವನಾನ?" ಒಬ್ಬೊಬ್ಬರಾಗಿಯೆ ಬಂದು ತಾಂಡ ಸೇರಿ, ತಮ್ಮ ಜಮೀನನ್ನ ಪತ್ತೆಮಾಡಿ, ಸಾಗುವಳಿ ಮಾಡಿಕೊಂಡು ನೆಮ್ಮದಿಯ ಜೀವನ ಬದುಕಿದ್ದರು. ಡೆಬರಿಗೆ ಅಡವಿಯೊಳಗೆ ಹೊಲ ಇಲ್ಲ. ತಾಂಡದಾಗ ಮನಿ ಇಲ್ಲ. ಅನ್ನೊ ಸ್ಥಿತಿ. ಮಂಡಲ ಪಂಚಾಯ್ತಿ ಮೆಂಬರ "ಬೇ ಸಣವ್ವ ಅರ್ಜಿ ಕೊಡಬೆ, ನಿನಗೂ ಒಂದು ಮನಿ ತರ್ತಿನಿ" ಅಂತ ಒತ್ತಾಯ ಮಾಡಿದ್ದ. "ಲೇ ತಮ್ಮ ರುಕ್ಮ, ನಾನು ಎಷ್ಟು ವರ್ಷ ಬದುಕಬಹುದು ಹೇಳು? ಬಹಳ ಅಂದ್ರ ಐದು ವರ್ಷ, ಹತ್ತ ವರ್ಷ ಅಂತಾನೆ ಇಟ್ಕ ಮನಿ ಕಟ್ಕೊಂಡು, ಸಂಸಾರ ಹೂಡಿ ಫಜೀತಿ ಪಡೋದಕ್ಕಿಂತ ನನ್ನ ಮಗಳ ಅದಾಳ ಮಂಗಲಿ. ಆಕಿ ಜೋಡಿನ ಇರೊಗಂಟ ಬದುಕಿ ಸತ್ತು ಹೊಕ್ಕಿನಿ. ಹೆಗಲಕೊಟ್ಟ ಹೆಣ ಸಾಗಸು ಅಷ್ಟೆ ಸಾಕು" ಕಡ್ಡಿ ಎರಡು ತುಂಡು ಆದಂಗ ಮಾತಾಡಿದ್ದಳು. "ಎಂಥ ಮಾತ ಹೇಳಿದೆ ಸಣವ್ವ ನೀನು. ಅಲ್ಲಾ ಮಂದಿ ತಲಿಯೊಳಗೆ ಇಂಥ ವಿಚಾರ ಯಾಕ ಬರವಲ್ಲದು

ಅಂತೀನಿ. ಇದ್ದೋರು, ಇಲ್ಲದವರ ಹೆಸರಿಗೆ ಮನೆ ಕಟ್ಟಿಸಿಕೊಂಡು ಅದಾರ" ಅವನ ಅನುಭವಕ್ಕೆ ಬಂದ ಮಾತುಗಳನ್ನ ಹೇಳಿದ.

ನಾನು ನಾನು ಅಂತ ಹೊಲದ ಮೇರೆಗೆ ಗುದ್ದಾಡುವವರಿಗೆ, ಮನೆ ಮುಂದೆ ಎಮ್ಮೆ ಹಾಕಿದ ಸಗಣಿ ಒತ್ಲ ತನ್ನದು ಅಂತೇಳಿ ಜಗಳ ಆಡುವವರಿಗೆ ಡೆಬರಿಬಾಯಿ "ಅಲ್ಲಲೆ, ಇಡಿ ಹೊಲದಾಗ ಬೆಳೆಯದ್ದು ಮ್ಯಾರಿಮೇಲೆ ಬೆಳೆದೀತೇನು? ಯಾಕಿಂಗ ಅರ್ಥ ಇಲ್ಲದಂಗ ಬಡದಾಡಾಕ ಹತ್ತಿರಿ. ಇಬ್ಬರು ಅನುಸರಿಸಿಕೊಂಡು ಹೋಗ್ರಿ. ಜಗಳ ಮಾರಾಮಾರಿ, ತಲೆಹೊಡ್ಕೊಂಡು ಪೋಲೀಸ್‌ಕೇಸು ಮಾಡಿಕೊಂಡು ಫಜೀತಿ ಪಡೋದಕ್ಕಿಂತ ಅಕ್ಕಪಕ್ಕದವರು ಅನುಸರಿಸಿಕೊಂಡು ಹೋಗಿ" ತನಗೆ ತೋಚಿದ್ದನ್ನ ಹೇಳಿದ್ರೆ ಬುದ್ಧಿ ಇರೋರು ಹೌದಲ್ಲ, ಸಂಸಾರ ಮಾಡದ ಡೆಬರಿಗೆ ಇರೊ ತಲಿ ನಮಗಿಲ್ಲಾಂತ ಸುಮ್ಮನಾದರೆ, ತಲೆಹರಟೆ ನನ ಮಕ್ಕಳು "ಹೋಗಬೆ ನಿಂದೇನು ಹಚ್ಚಿ, ಹಿಂದಿಲ್ಲಾ, ಮುಂದಿಲ್ಲ. ಅಲ್ಲಾ ಎಷ್ಟು ಜಮೀನು ಐತೆ ನಿಂದು?" ಅವಮಾನಮಾಡಿ, ಕೇಸು ಪಾಸು ಅಂತ ಸುತ್ತಾಡಿದವರನ್ನು ನೋಡಿದ್ದಳು. ಡೆಬರಿಬಾಯಿ ತನ್ನ ಬದುಕಿಗೆ ತಾನೆ ಕಡಿವಾಣ ಹಾಕಿಕೊಂಡಿದ್ದಳು. ಮಂಗಲಿ ದುಡಿದು ತಂದಿದ್ದರಲ್ಲೆ ರೊಟ್ಟಿನೋ, ಮುದ್ದೆ ಮಾಡಿಕೊಂಡು ತಿನ್ನುವುದು. ಯಾರಾದರು ಕೆಲಸಕ್ಕೆ ಕರೆದರೆ ಮಂಗಲಿಯ ಜೊತೆಗೆ ತಾನು ಕೆಲಸಕ್ಕೆ ಹೋಗುವುದು ಸಂಜೆ ಬಂದಾಗ "ತಾಯಿ, ಕೆಲಸಮಾಡಿ ಮೈ ಕೈ ನೋವು ಕಣೆ" ಅಂದ್ಲು ಅಂದ್ರೆ ಮಂಗಲಿಗೆ ಅರ್ಥ ಆಗಿ ಬಿಡುತ್ತಿತ್ತು. ಕೆಲಸಕ್ಕೆ ಹೋಗಿದ್ದ ವ್ಯಕ್ತಿಯ ಮನೆಗೆ ಹೋಗಿ ದಿನದ ಕೂಲಿಗಾಗಿ ಗೊಗೆರದು ಇಸ್ಕೊಂಡ ಬಂದು ಒಂದು ಪಾಕೀಟು ಸರಾಯಿ ತಂದು "ಸಣವ್ವ ತಗಳ ಬೆ. ನಾನು ಸಣ್ಣಾಕಿ ಇರುವಾಗ ಸೀರೆ ಸೆರಗಿನೊಳಗೆ ವಡಿ, ಮಿರ್ಚಿ, ವಗ್ಗರಣಿ ಮಂಡಕ್ಕಿ ಬಚಿಟ್ಕೊಂಡು ತಂದು ಕೊಡುತ್ತಿದ್ದೆ. ತಗೊಳ ಬೇ ನಾನಾದರೂ ಗಳಸಿ ಯಾರಿಗೆ ಕೊಡಾಕಿ ಅದೀನಿ. ನನ್ನ ಹಿಂದ ಮುಂದ ಅಳೋರು ಯಾರು?" ಕಣ್ಣಂಚಿನ ನೀರನ್ನ ಒರೆಸಿಕೊಂಡಿದ್ದಳು. ಡೆಬರಿಗೆ ಕರಳು ಕಿತ್ತು ಬಂದಂಗಾಗಿ "ಪಾಪಿ ದೇವರು ಮೋಸ ಮಾಡಿದ, ಕುರೂಪಿಯಾಗಿ ಹುಟ್ಟಿಸಿ ಯಾವ ಗಂಡಸು ಒಪ್ಪದಂತೆ ಮಾಡಿದ್ನವ್ವ, ಹಾಳಮನಿಯೋನು. ಹೋಗಲಿ ಬಿಡು, ನೋಡು ನಾನು ಮದುವಿ ಇಲ್ಲದಂಗ ಅರವತ್ತೈದು ವರ್ಷ ಬದುಕಿಲ್ವೆ? ಏನ್ಯೆತೆ ನನ್ನ ಬದುಕಿಗೆ ಅರ್ಥ. ಹಿಂದ ಅಳೋರಿಲ್ಲ, ಮುಂದ ಬೆಳೆಯೋರಿಲ್ಲ. ಗಂಡ ಮಕ್ಕಳು, ಹೊಲ, ಮನಿ ಯಾವ ಜಂಜಾಟನೂ ಇಲ್ಲ. ನನ್ನಜೊತೆ ಮಲಗಿದ ಎಷ್ಟೊ ಗಂಡಸರಿಗೆ ನನ್ನ ನೆನಪು ಇಲ್ಲ. ಬದುಕೆ ಇಷ್ಟೆ ತಾಯಿ. ಯಾಕ ಸಂಕಟಪಡ್ತಿಯಾ. ಎಲ್ಲಾನೂ ಸುಳ್ಳು, ಸಂಸಾರ ಅನ್ನೋದೆ ಸುಳ್ಳು. ಎಲ್ಲಾ ಮುಖವಾಡ ಹಾಕೊಂಡು ಬದುಕಿದ್ದಾರೆ. ಹಂಗ ನಾವು ಕೂಡ" ಅವಳ ಕೈ ಹಿಡಿದು ಎಳೆದು ಕೂಡಿಸಿದಳು. ಪಾಕೇಟಿನ ಮೂಲೆಯನ್ನ ಹಲ್ಲಿಂದ ಕತ್ತರಿಸಿ ಎರಡು ಸಿಲಾವರಿ ಗ್ಲಾಸುಗಳನ್ನ ತಂದು ತಾನು ಮುಕ್ಕಾಲು ಸುರುವಿಕೊಂಡು ಅವಳಿಗೆ

ಕಾಲುಭಾಗ ಹಾಕಿದಳು. "ನಿನಗ ಆಗಲ್ಲ, ಕುಡದ ಬಿಡಬಾರ್ದ" ರಾಗ ಎಳೆದಳು. "ನನ್ನಂತೆ ನೀನು ಇಡಿ ದಿನ ಹೊಲದಾಗ ಹ್ವಾರೆ ಮಾಡಿಯ. ನಿನ್ನ ದೇಹಾನೂ ದಣದಿರುತ್ತೆ ಗುಟಕು ಕುಡಿ ರಾತ್ರಿ ಪಾಡಾಗೆ ನಿದ್ರೆ ಬರುತ್ತೆ" ಅವಳ ಕೈಗೆ ಗ್ಲಾಸು ಕೊಟ್ಟು ತನ್ನ ಗ್ಲಾಸನ್ನ ಎಡಗೈಯೊಳಗೆ ಹಿಡ್ಕೊಂಡು ಬಲಗೈ ಬೆರಳಿಂದ ಸರಾಯಿ ಒಂದು ಹನಿಯನ್ನ ತಗದು ಭೂಮಿತಾಯಿಗೆ ಸಮರ್ಪಿಸಿ ಒಂದೆ ಗುಟುಕಿಗೆ ಕುಡಿದು ಮುಖ ಸಿಂಡರಿಸಿದಳು. ಅಲ್ಲೆ ಇದ್ದ ಹಸಿ ಖಾರದ ಚಟ್ನಿ ಮುಂದು ಮಾಡಿದಳು ಮಂಗಲಿ ರಾತ್ರಿ ಒಂದು ಮುದ್ದೆ, ಚಟ್ನಿ ತಿಂದು ಗಡದ್ದಾಗ ಮಲಗಿ ಮುಂಜಾನೆ ಹೊತ್ತಾರೆ ಎದ್ದು ಮತ್ತದೆ ಬದುಕಿನ ಸಂಘರ್ಷ. ಇದು ಅವರಿಬ್ಬರ ಬಾಳಿನ ಪ್ರತಿಕ್ಷಣದ ಪ್ರಾತ್ಯಕ್ಷತೆಯಂತಿತ್ತು.

* * *

70. ಸೀತ್ಕಿ ಬಾಯಿಯ ದೇಜು

ಭದ್ರನಾಯ್ಕನ ತಾಂಡದಿಂದ ಹದಿನೈದು ಮೈಲಿ ದೂರದ ಛತ್ರನಾಯ್ಕನ ತಾಂಡದ ಕುಣಬಿನಾಯ್ಕನ ಹಿರಿ ಮಗಳು ಸೀತ್ಕಿಯನ್ನ ತಾಂಡದ ಜೇಮ್ಲನಾಯ್ಕನಿಗೆ ಕೊಡು ತಗಳೋದು ಅಂತ ಎಲೆ ಶಾಸ್ತ್ರ ಮುಗಿದಿತ್ತು. ದೀಪಾವಳಿಯ ಅಮಾವಾಸ್ಯೆ ಕಳೆದಮೇಲೆ ಮದುವೆ ಮಾಡಿಕೊಡುವ ಮಾತು ಕೂಡ ಆಗಿತ್ತು. ಹುಡುಗಿಯ ಮನೆ ಮುಂದೆ ಬೆಲ್ಲ ಹಂಚುವ ಶಾಸ್ತ್ರವನ್ನ ತಿಂಗಳ ಮುಂಚೆ ಮಾಡಿಯಾಗಿತ್ತು. ಸೀತ್ಕಿ ಮೈ ನೆರತು ಆರೇಳು ತಿಂಗಳುಗಳಾಗಿದ್ದವು. ಆಗಲೆ ತಾಂಡದ ಮಂದಿ "ಮುದಕಿಯಾದ್ಲು, ನೋಡಾಕ ಒಬ್ಬ ಹುಡಗಾನು ಬರಲಿಲ್ಲಾಂತ" ಹಿಯಾಳುಸುತ್ತಿದ್ದರು. ಈ ಮಾತಿಗೆ ಅರ್ದ ಬೇಸತ್ತು ಕುಣಬಿನಾಯ್ಕ ಹುಡುಗ ಕುರಡನೋ, ಕುಂಟನೋ ನೋಡದೆ ಮದುವೆ ಮಾಡಿಸಿದ.

ದಿಬ್ಬಣದ ಚಕ್ಕಡಿ ಗಾಡಿ ಹಿಂದಿಂದೆ ಜೇಮ್ಲನಾಯ್ಕನ ಅಳಿಯ ಸೊಂಪುನಾಯ್ಕ ಅವನ ಅಕ್ಕ ಸೀತ್ಕಿಗೆ ಕೊಟ್ಟಿದ ಉಡಗೊರೆ ಗಬ್ಬದ ಹಸು ಹೊಡ್ಕೊಂಡು ಬರ್‍ತಾಯಿದ್ದ. ಆಗಿನ್ನು ಹೊಸ ಕಾಲ ಬಂದಿರಲಿಲ್ಲ. ವರದಕ್ಷಿಣೆ ಅನ್ನೊ ಸೊಲ್ಲೆ ಇಲ್ಲವಾಗಿತ್ತು. ಮದುವೆಗಂಡು ಹುಡುಗಿಗೆ ವಧುದಕ್ಷಿಣೆ ಕೊಡುವುದು ವಾಡಿಕೆ. ರಾಠೋಡ್ ಕುಲದ ವಧುವಿಗೆ ಆ ಕಾಲದಲ್ಲಿ ಎರಡು ರೂಪಾಯಿ ಕೊಡಬೇಕು. ಅದೇ ಚವ್ಹಾಣ್ ಹುಡುಗಿಯಾಗಿದ್ದರೆ ವಧುವಿನ ಬಾಬ್ತು ಕರ ಒಂದೂವರೆ ರೂಪಾಯಿ ಕೊಟ್ಟ ಮೇಲೆನೆ, ಮಡಕೆ ತರುವ ಶಾಸ್ತ್ರ. ಕುಂಬಾರಣ್ಣಗೆ ಕೊಡುವ ಒಂಬತ್ತು ರೂಪಾಯಿ ಕಾಸು ವರನೆ ಕೊಡಬೇಕು. ಜೊತೆಗೆ ಮಡಿಕೆ ತರಲು ಹೋದ ಹುಡುಗಿಯರಿಗೆ, ತಿಂಡಿ, ಚಹ ಹಿರಿಯರಿಗೆ ಸೆರೆ ಕುಡಿಸಿ ಅವರನ್ನ ಕರ್ಕೊಂಡ ಬರೊ ಜವಾಬ್ದಾರಿ ಗಂಡಿನ ಕಡಿಯವರದ್ದಾಗಿತ್ತು. ಸೊಂಪುನಾಯ್ಕ ಒಳ್ಳೆ ಐನಾತಿ ದೇಸಿ ಹಸುವಿನ ಹೆಣ್ಣಗರು ಹೊಡ್ಕೊಂಡ ಬರಾಕ ಹತ್ತಿದ್ದ. "ಏನಲೆ ತಮ್ಮ ನಿಮ್ಮಕ್ಕಗೆ ಮಗಳು

* ದೇಜು–ತವರುಮನೆಯ ಕಾಣಿಕೆ

ಹುಟ್ಟಿದರೆ ನಿನಗೆ ಕೊಡ್ಲಿ ಅಂತ ಕರ ಹೊಡ್ಕೊಂಡ ಬಂದೀಯಾ" ಸಾಂಬಳೂ ಮುದುಕ ಕೇಳಿದ. ಹುಡುಗನಿಗೆ ಏನು ಹೇಳುವುದು ಅರ್ಥ ಆಗದೆ "ಹೂಂ ಅದಕ್ಕ ಹೊಡ್ಕೊಂಡ ಬರಾಕ ಹತ್ತೀನಿ" ಅಂದ ಬಿಟ್ಟ. ಮಂದಿ ಎಲ್ಲಾ ಗೊಳ್ ಅಂತ ನಕ್ಕುಬಿಟ್ಟರು. ಸೊಂಪು ತಲಿ ಕೆಡಿಸಿಕೊಳ್ಳಲಿಲ್ಲ. ಬಂಡಿ ಹಿಂದೆ ಕಟ್ಟು ಅಂದಿದ್ರು. ಪಾಪ ಕರು ಕೊಸರಾಡುತ್ತೆ ಅಂತೇಳಿ ಸೊಂಪುನ ಅಜ್ಜ ತೊತ್ಯನಾಯ್ಕ ಹೇಳಿದ ಅಂತೇಳಿ ಕರುವನ್ನ ಹಿಡಿದುಕೊಂಡು, ಹಗ್ಗದಿಂದ ಅದರ ಬೆನ್ನಿಗೆ ಆಗಾಗ ಬಾರಿಸುತ್ತ ಎಳ್ಕೊಂಡು ಹೊರಟಿದ್ದ. ಅದರ ತಾಯಿಯನ್ನ ನೆನೆದು ಒಮ್ಮೆ 'ಅಂಬಾ' ಅಂತ ಕರು ಕೂಗಿದರೂ ಕೇಳುವರಾರು, ಅವನ ಅಕ್ಕ ಸೀತ್ಕಿಗೆ ಅಪರಿಚಿತ ಜಾಗ, ಅವರಿಬ್ಬರು ಜನರ ಜೊತೆಗೆ ಹೊರಟಿರುವಾಗ ಅವಳಿಗೆ ಉಡುಗೊರೆಯಾಗಿ ಕೊಟ್ಟ ಹಸು ಸುಮ್ಮನೆ ಹೋಗಬೇಕು ತಾನೆ. ಇದ್ದಕ್ಕಿದ್ದಂತೆ ಸೊಂಪುಗೆ ಒಂದು ಆಲೋಚನೆ ಬಂದಿತ್ತು. ಹಿಂದೆ ಕರುವಿನ ಕಾಲಿಗೆ ತಗರಿ ಪುಳ್ಳಿಯಿಂದ ಹೊಡೆಯುತ್ತಿದ್ದ ಮುದಕ ತೊತ್ಯನಾಯ್ಕನಿಗೆ ಕೇಳಿದ "ಯಜ್ಜ, ಅಕ್ಕಗೆ ಈ ಹೆಣ್ಣಗರು ಬದಲಾಗಿ ನಮ್ಮ ಹೋರಿ ಕರ ಕೊಡಬಹುದಾಗಿತ್ತಲ್ಲಾ ಯಾಕೆ ಈ ಹೆಣ್ಣಗರು ಕೊಡಾಕ ಹತ್ಯಾರು?" ಅಂದ. "ಅದು ಶಾಸ್ತ್ರದೊಳಗೆ ಗಂಡ ಕರು ಕೊಡುವ ಹಾಗಿಲ್ಲ ಅದಕ್ಕೆ ಕೊಟ್ಟಿಲ್ಲ" ಅಂದ, ಯಾಕೊ ಸೊಂಪುಗೆ ಸಮಾಧಾನ ಆಗಲಿಲ್ಲ. "ಹೌದು ಅದನ್ನ ಯಾಕೆ ಬರದಿಲ್ಲ ಮತ್ತ ಹೆಣ್ಣು ಕರವನ್ನೆ ಕೊಡಲು ಯಾಕೆ ಬರೆದಿದ್ದಾರೆ" ಮರುಪ್ರಶ್ನೆ. "ಮಗ ಗಂಡ ಕರು ಹಾಕುತ್ತ?" ಮುದುಕ ಕೇಳಿದ. "ಇಲ್ಲ, ಹಾಕಲ್ಲ" ಸೊಂಪು ಉತ್ತರಿಸಿದ. "ನಿಮ್ಮಕ್ಕನ ಮನಿಗ ಹೋಗುವ ಈ ಕರು ಐದಾರು ಕರುಗಳಾಗಿ ತೌರಿಂದ ಕೊಟ್ಟ ಉಡುಗೊರೆ ಸಂಪತ್ತಾಗಲಿ, ಅದು ಬೆಳಿಲಿ ಅಂತ ಹೆಣ್ಣುಗರು ಕೊಡ್ತಾರೆ ಕಣೊ ಹುಚ್ಚಪ್ಪ" ಸವಿಸ್ತಾರವಾಗಿಯೆ ತಿಳಿಸಿದ. "ಹೌದೇನು" ಅಂತ ಬಾಯಿ ಮುಚ್ಕೊಂಡ ಸೊಂಪುನಾಯ್ಕ.

ಭದ್ರಾನಾಯ್ಕನ ತಾಂಡ ಸೇರಿದಾಗ ರಾತ್ರಿ ಆರೂವರೆಗಂಟೆಯಾಗಿತ್ತು. ಒಂದೊಂದಾಗೆ ಶಾಸ್ತ್ರಗಳು ಆರಂಭವಾದವು. ಬೊಯ್ಯುವುದು, ಹುಡುಗಿ ತವರಿಂದ ಕಳುಹಿಸಿದ ಸಿಹಿ ಹಂಚುವುದು, ಕೊಬ್ಬರಿ ಗಿಟಕ ಹೊಡೆದು ಬೆಲ್ಲದ ಜೊತೆಗೆ ತುಂಡು ಹಂಚುವುದು. ನಂತರ ಹುಡುಗನನ್ನ ಒಳಗೆ ಕರೆದು ಊಟ ಹಾಕಿದರೆ ಮುಗಿತು. ಸೊಂಪು ಅವರ ಮನೆಗೆ ಹೋಗಿ, ಮನೆ ಮುಂದಿನ ಗೂಟಕ್ಕೆ ಕರುವನ್ನ ಕಟ್ಟಿದ. ತನ್ನವರು ಇಲ್ಲದೆ ಒಂಟಿಯಾಗಿದ್ದ ಕರು "ಅಂಬಾ" ಅಂತ ಕೂಗಿಕೊಳ್ಳತೊಡಗಿತು. ಇಡಿ ದಿನ ಉಪವಾಸ ಬೇರೆ. ಯಾರೊ ಒಂದು ಹಿಡಿ ಹುಲ್ಲು ಬಿಸಾಡಿದರು. ಹುಲ್ಲು ತಿನ್ನುತ್ತಿರುವ ನಡುವೆಯೂ ಶಬ್ದ ಮಾಡುತ್ತಿತ್ತು. ಗೂಟದ ಮೇಲೆ ಇಡೀ ರಾತ್ರಿ ಕರು ಅಂಬಾ ಅಂತ ಕೂಗಿದ್ದೆ ಕೂಗಿದ್ದು. ಸುತ್ತಲ ಮನೆಯವರು ಪರಿಷಾನ್ ಆಗಿದ್ದರು. "ಎಯ್, ಯಾರ ಕರು ಯಾಕೆ ಈ ಪರಿ

ಒದರಾಕ ಹತ್ಯೆತಿ" ಬಾಜುಮನಿ ಎಂಕಾನಾಯ್ಕನ ಸಿಟ್ಟು. "ಅಯ್ಯಾ ಎಷ್ಟು ಸಲ ಹೇಳಬೇಕು ಬಾಜುಮನಿ ಜೇಮ್ಲನಾಯ್ಕ ಮದುವೆಯಾಗಿದ್ದಾನಲ್ಲ, ಅವನ ಹೆಂಡತಿ ಸೀತ್ಕಿ ಬೋಜಾಯಿಗೆ ಅವರ ತವರು ಮನೆಯವರು ಮಗಳು ಹಾಲು ಹೈನು ಉಣ್ಣಲಿ ಅಂತಂದು ಒಂದು ಕರುನ ತೌರಿನ ಕಾಣಿಕೆ ನಮ್ಮ ಮಾತಿನ್ಯಾಗ ದೇಜು ಅಂತಾರಲ್ಲ ಕೊಟ್ಟಾರ ಪಾಪ ಒಂಟಿ ಆಗ್ಯೆತೆ ಒದರಾಕ ಹತ್ಯತಿ, ಎರಡ ದಿನ ಈ ಪರಿಸರ, ಈ ಮಂದಿ ಕೂಡ ಹೊಂದ್ಕೊಬೇಕು" ಅವನ ಹಿರಿಮಗ ಪೀರ್ಯಾನಾಯ್ಕ ಸಣ್ಣದೊಂದು ಲೆಕ್ಚರ್ ಮಾಡಿದ್ದ. "ಓ ಹಂಗಾ, ಅಲ್ಲಲೆ ಪೀರೂ ಹೆಣ್ಣಗರಾನ, ಇಲ್ಲಾ ಹೋರಿಕರ?" ಎಂಕಾನಾಯ್ಕ ಕೇಳಿದ. "ಅಲ್ಲ ಯಾರಾದರು ಹೋರಿಕರ ಕೊಡೋದನ್ನ, ನೋಡಿಯಾ? ಇಲ್ಲ ಕೇಳಿಯ?" ಮಗನ ಉತ್ತರ. ಎಂಕ್ಯಾನಾಯ್ಕನ ತಲಿಯೊಳಗೆ ಗೊಂದಲ ಎದ್ದಿತ್ತು. ಆದರು ಮಗ ಪೀರ್ಯಾ ನಿಧಾನಕ್ಕೆ ಹೊರಟು ಬಿಟ್ಟ.

ಸೀತ್ಕಿಯ ಜೊತೆಗೆ ಅವಳಿಗೆ ಕೊಟ್ಟ ಹೆಣ್ಣಗರೂನೂ ನಿಧಾನಕ್ಕೆ ಹೊಂದಿಕೊಳ್ಳತೊಡಗಿತ್ತು. ಆರಂಭ ಹಾಗೆ ಇರುತ್ತೆ. ಹುರುಪು, ಸಂತೋಷ, ಖುಷಿ ಸೀತ್ಕಿಗೂ ಹಾಗೆ ಅನಿಸಿತ್ತು ವಾಸ್ತವ, ಭ್ರಮೆಯ ನಡುವೆ ಸ್ಪಷ್ಟವಾಗಿರಲಿಲ್ಲ. ಅವಳ ಕರು ಗೌರಿಗೂ ಅಷ್ಟೆ, ತನ್ನವರಲ್ಲದ ಹಸುಗಳು, ಅದರ ವಯಸ್ಸು ನೋಡಿ ಬಾಲ ಮೂಸುತ್ತ ಬಂದ ಗೂಳಿ ಕರುಗಳು ಅವುಗಳಿಂದ ತಪ್ಪಿಸಿಕೊಳ್ಳಲಾಗದೆ ಬಲಿಯಾಗಬೇಕಾಯಿತು. ಗೌರಿ ಹೆಣ್ಣುಗರುವಿನಲ್ಲಿ ದಿನೆ ದಿನೆ ಬದಲಾವಣೆ ಮತ್ತೆ ಒಂಭತ್ತು ತಿಂಗಳಿಗೆ ಹೆಣ್ಣಗರು ಹಾಕಿತ್ತು. ಜೇಮ್ಲನ ಮನೆಯಲ್ಲಿ ಸಂಭ್ರಮ, ದೇಜು ಕೊಟ್ಟ ಹೆಣಗರು ಇಳಿಯಿತು ಅಂತ, ಇನ್ನೇನು ಹಾಲು ಮೊಸರಿಗೆ ಕೊರತೆ ಇಲ್ಲ, ದಿನ ಬೆಳಕು ಹರದ್ರ ಜೋಳದ ನುಚ್ಚು ಉಣ್ಣಾಕ ಮಜ್ಜಿಗಿ ಸಲುವಾಗಿ ಮನಿ ಮನಿ ಸುತ್ತೊದು ತಪ್ಪಿತು. "ನನ್ನ ಸೊಸಿ ಕಾಲ್ಗುಣ ಪಾಡ್ಯೆತಿ ನೋಡು. ಬರ್ತಿದಂಗೆ ನಮ್ಮ ಮನಿಯೊಳಗ ಹಾಲು, ಹೈನ ಬಂತು" ಸೀತ್ಕಿ ಅತ್ತೆ ಸೋಮ್ಲಿಬಾಯಿ ಬೀದಿಯಲ್ಲಿ ತನ್ನ ಓರಿಗೆಯವರ ಎದುರಿಗೆ ಸಂಭ್ರಮದಿಂದ ಹೇಳುತ್ತಿದ್ದಳು. "ಅಲ್ಲೆ ಸೋಮ್ಲಿ, ಇದು ಒಪ್ಪೊ ಮಾತೇನೆ ನಿನ್ನ ಮಂಜಾಳಾಗ ಅಲ್ಲ. ಅಕಿಗ ಕೊಟ್ಟ ದೇಜು ಹೆಣ್ಣು ಕರುವೆ ಹೊಟ್ಟಿಲೆ ಆಗಿ, ಒಂದು ಕರು ಹಾಕ್ತು. ಮದುವಿಯಾಗಿ ವರ್ಷ ದೀಡ ವರ್ಷ ಆಗಾಕ ಬಂದತು, ನಿನ್ನ ಸೊಸಿ ಹೊಟ್ಟೆಯೊಳಗ ಒಂದ ಹುಳಾನು ಆಗವಲ್ದು" ಪಕ್ಕದಮನಿ ಪೀಕಿಬಾಯಿ ಮಕಕ್ಕೆ ರಪ್ ಅಂತ ಹೊಡದಂಗೆ ಹೇಳಿದಳು. "ಅಯ್ಯೊ ಅದೇನೊ ನಾ ಕಾಣೆ ನನ್ನಂತಾಯಿ, ನಮಗ ವರ್ಷ ಕಳಿಯೋದ್ರಾಗ ಮಕ್ಕಳಾಗಿದ್ವು ಅದೇನು ತೊಂದ್ರಿನೊ ಗೊತ್ತಿಲ್ಲ. ಯಾ ವಿಷಯಾನು ಗೊತ್ತಾಗಿಲ್ಲ ಬಿಡು" ಸೊಸಿ ಪರವಾಗಿ ಮಾತಾಡಿದಳು. ಸೀತ್ಕಿ ತಂದ ಕರು ಮತ್ತೊಂದು ಹೆಣ್ಣುಗರುವಿಗೆ ಜನ್ಮಾನೂ ಕೊಡ್ತು ಆದರೆ ಸೀತ್ಕಿ ಹೊಟ್ಟೆಯೊಳಗ ಯಾವ ಬದಲಾವಣೆ ಕಾಣದ ಅವಳ ಅತ್ತೆ ಸೋಮ್ಲಿಗೆ ಆಲೋಚನೆಯಾಗಿತ್ತು ಈಗ ಮಾತ್ರ ಸುಮ್ಮನಾಗಲಿಲ್ಲ "ಅಲ್ಲಾ ಆಕಿ

ಜೊತಿಗ ತಂದ ಆಕಳಕರು ಎರಡು ಹೆಣ್ಣು ಕರುಗಳನ್ನ ಇಯಿತು. ಆದ್ರ ಈ ಲೌಡಿ ಗೇನಾಯ್ತು? ಏನು ಬಂಜೆ ಅದಾಳೊ ಏನೊ ನನ್ನ ಮಗನ ಹಣಿಬರಹ ನೋಡು ಬಂಜೆ ಹೆಂಡತಿ ಸಿಕ್ಕಾಳ ನಾವು ಮಾಡಿದ ಕರ್ಮನೊ ಏನೊ" ಸೋಮ್ಲಿಬಾಯಿ ಕಂಡ ಕಂಡವರ ಮುಂದೆ ಸೊಸಿ ಮರ್ಯಾದಿ ತಗದಿದ್ದಳು.

ದೇಜು ತಂದಿದ್ದ ಹಸುವಿನ ದೊಡ್ಡ ಕರು ಮತ್ತೆ ಕರು ಹಾಕಿದಾಗ ಸೋಮ್ಲಿ ಬಾಯಿಯ ತಾಳ್ಮೆಯ ಕಟ್ಟೆ ಹೊಡೆದು ಹೋಗಿತ್ತು. ಹಿಂದೆ ಅಲ್ಲಿ, ಇಲ್ಲಿ, ನಾಯಿ ಮೇಲಿಂದ, ಬೆಕ್ಕಿನ ಮೇಲಿಂದ ಮಾತುಗಳನ್ನ ತಡಾಯಿಸಿದ್ರೆ ಈಗ ನೇರವಾಗಿಯೆ "ಎಲ್ಲಿ ಅಡ್ಡದಾರಿಗೆ ಕುಂತಿದ್ದೆ ಗೊಡ್ಡಿ, ನೀನು ತಂದ ಕರುವಿನ ಕರು ತಾಯಿಯಾಯಿತು. ನಿಂದೇನು ಹಕಿಕತ್ತು, ಮೂರ್ನ್ನಾಕು ವರ್ಷಗಳಾದರೂ ಒಂದ ಬಯಕೆ ಅನ್ನಲಿಲ್ಲಾ. ಅದೆಂತ ಗರ್ಭಚೀಲ ನಿಂದು" ನೇರವಾಗಿಯೆ ಪ್ರಹಾರ ಮಾಡಿದಳು. ಸೀತ್ಕಿ ತುಟಿಪಿಟಕ್ ಅನ್ನಲಿಲ್ಲ. "ಥು ನಿನ್ನ ಜನ್ಮಕ್ಕ ಆಟು. ಮನಿಗ ಹಿರಿಮಗ, ಮೊಮ್ಮಕ್ಕಳು ಬಂದಾವು ನಮಗೂ ಅವುಗಳ ಜೊತಿಗ ಆಟ, ಖುಷಿ ಅಂತ ಕನಸು ಕಂಡಿದ್ವಿ, ನಿನ್ನ ಓಸಡಗಲಿ ಎಲ್ಲಾನೂ ಬರಿ ಕನಸಾಗೆ ಮಾಡಿದೆಯಲ್ಲಾ. ಇಲ್ಲ, ನನ್ನ ಮಗನಿಗೆ ಮತ್ತೊಂದು ಮದುವೆ ಮಾಡ್ತಿನಿ, ನೀ ಮನಿ ಬಿಡು, ಜಾಗ ಖಾಲಿ ಮಾಡು" ಜೋರಾಗಿ ಬಾಯಿ ಮಾಡಿದಳು. ಸೀತ್ಕಿಗೆ ಸಹಿಸಿ ಸಾಕಾಗಿತ್ತು. "ನನ್ನ ಕರುಗೆ ತಾಕತ್ತಿರೊ ಬೀಜದ ಹೋರಿ ಏರ್ತು ಗರ್ಭ ಕಟ್ಟಿತು, ಆಕಳ ಆಯ್ತು ಆದ್ರ" ಮುಂದಿಂದು ಹೇಳಾಕ ಮನಸ್ಸು ಒಪ್ಪಲಿಲ್ಲ. "ಅಂದ್ರ ನನ್ನ ಮಗ ಕೈಲಾಗದವನ? ಷಂಡನಾ? ಏನು ಹೇಳಾಕತ್ತಿ, ಬಾಯಿಗ ಬಂದಂಗ ಮಾತಾಡಬೇಡ ಗಂಡಸಿನ ಬಗ್ಗೆನೆ ಮಾತಾಡ್ತಿ ಅಂದ್ರ ಎಷ್ಟು ಹದ್ದ ಮೀರಿ ನೋಡು" ಅಂದಾಕಿನ ಜಡಿ ಹಿಡಿದು ಗ್ವಾಡಿಗ ನೂಕಿದಳು. "ಅಲ್ಲಾ ನಂದೆ ತಪ್ಪು ಅಂತ ಯಾಕ ಅನಸ್ತು? ನಿಮ್ಮ ಮಗನೊಳಗು ತಪ್ಪಿರಬಹುದಲ್ವಾ? ಅದನ್ನ ಯಾಕೆ ನೀವು ಒಪ್ಪಿಕೊಳ್ಳುವುದಕ್ಕೆ ತಯಾರಿಲ್ಲ" ಸೀತ್ಕಿ ಬಾಯಿ ಬಿಟ್ಟಳು. ಸೋಮ್ಲಿ ಬಾಯಿ ಬಂದಾಯ್ತು. ಮನಿತನದ ಮರ್ಯಾದಿ ಕಳಿತಾಳ ಇಕಿ ಅಂದಾಕಿನ, ಅವಳ ಊರಲ್ಲಿ ಯಾವುದೋ ಸಣ್ಣ ಹಬ್ಬಕ್ಕೆ ಕಳುಹಿಸಿ ಬಂದವರು ವಾಪಾಸು ಕರ್ಕೊಂಡು ಬರಲೆ ಇಲ್ಲ. ಇಲ್ಲಿ ಅವಳು ತಂದ ದೇಜು ಹಸು ಎಂಟೊಂಬತ್ತು ಕರುಗಳನ್ನ ಹಾಕಿತ್ತು. ಮನೆ ಅಂಗಳದ ತುಂಬ ಹಸುಗಳಾಗಿದ್ದವು. ಮನಿಯೊಳಗೆ ಆಡೋದಕ್ಕೆ ಒಂದು ಹಸುಗೂಸು ಇಲ್ಲದಾಗಿತ್ತು.

* * *

71. ಕೂಡು ಕುಟುಂಬದಲ್ಲಿ ನೆವಕಾತಿ ಸಾಕಿಬಾಯಿ

ತೊಪುನಾಯ್ಕ ಜಾನಿಬಾಯಿ ಜಾತುನಾಯ್ಕನಿಗೆ ಅನಿವಾರ್ಯವಾಗಿ ಹದಿನೈದನೇ ವರ್ಷಕ್ಕೆ ಮದುವೆ ಮಾಡಲೇಬೇಕಿತ್ತು. ಏಕೆಂದರೆ ಅವನ ಹಿರಿಮಗಳು ಸಕ್ರಿಬಾಯಿ ಮದುವೆ ಮಾಡುತ್ತಿದ್ದಂತೆ ಸುಕ್ಲಿದು ಮದುವೆಗೆ ಬೀಗರು ಒತ್ತಡ ತಂದಿದ್ದರು. ಮನೆಯಲ್ಲಿ ಅಡುಗೆ ಮಾಡಾಕ, ಹೊಲಮನಿ ಕೆಲಸಕ ಬಡವರ ಮನಿದೆ ಹುಡುಗಿ ಇರಲಿ ಅಂತ ಸಾತೇನಳ್ಳಿ ತಾಂಡದಿಂದ ಸಾಕಿಬಾಯಿನ ಮದುವೆ ಮಾಡಿಕೊಂಡು ಬಂದರು. ತೊಪುನಾಯ್ಕ ರಾಠೋಡ್ ಕುಲಸ್ಥನಾಗಿದ್ದರಿಂದ ಅವನ ಮಗ ಜಾತುಗೆ ಜಾತ್ ಕುಲಸ್ಥಳೆ ಬೇಕಾಗಿತ್ತು. ಆ ಜಾತ್‌ನಲ್ಲಿ ಬಾಣೊತ್, ಸಬಾವಟ್, ವಿಸಳಾವತ್, ಮೂಡ್, ಕೊರ್ರಾ, ವಡ್ತ್ಯಾ ಮುಂತಾದ ಅನೇಕ ಒಳಪಂಗಡಗಳು ಸಾಕಿಬಾಯಿ ತಂದೆ ಸಕಣುನಾಯ್ಕ ವಡ್ತ್ಯಾ ಪಂಗಡದವನಾಗಿದ್ದ. ಹಾಗಾಗಿ ಒಳ್ಳೆಯ ಮಂದಿ ಅಂತ ಮದುವೆ ಏನೊ ಮಾಡಿಕೊಂಡು ಬಂದ. ಆದರೆ ಹುಡುಗಿ ಅಂತ ವಿಶಾಲವಾದ ಮನಸ್ಸಿನವಳೇನು ಅಲ್ಲ. ಜಾನಿಬಾಯಿ ಏನಾದರು ಹೆಚ್ಚು ಕೆಲಸ ಹೇಳಿದಳೊ "ಇಲ್ಲತ್ತೆ ನನಗೆ ಯಾಕೊ ಹುಷಾರಿಲ್ಲಾ" ಮುಖದ ಮೇಲೆ ಹೇಳುವುದು. ಹೊತ್ತಾರೆ ಎದ್ದು "ಲೇ ಸಾಕಿ ಏಳೆ ಮೇಲೆ ರಾಗಿ ಬೀಸು, ರಾಗಿ ಬೀಸಿ ರೊಟ್ಟಿ ಯಾವಾಗ ಮಾಡ್ತಿರಿ? ಹೊಲಕೆ ಯಾವಾಗ ಹೊಕ್ಕಿರಿ? ಏಳೆ ಮ್ಯಾಲೆ ಒದರ್ತಿರೋದು ಕೇಳಿಸುತ್ತಿಲ್ವಾ ಹೆಂಗೆ. ಲೇ ಜಾತು ಎದ್ದೇಳೊ ಮೇಲೆ ಬೇವರ್ಸಿ ನನ ಮಗನೆ ಆರು ಎತ್ತಿಂದ ಸಗಣಿ ಕಸ, ಹಿಂಡು ದನದ ಸಗಣಿ ಯಾರು ನಿಮ್ಮಪ್ಪ ಬಳದಾನ?" ಆಕಿಗ ಹೇಳಾಕ ಆಗದ್ದನ್ನ ಮಗನ ಮೇಲೆ ಹೇಳಿ ತನ್ನ ಕ್ರೋದವನ್ನ ಕಡಿಮೆ ಮಾಡಿಕೊಳ್ಳುತ್ತಿದ್ದಳು. ಆದರು ಹಠಮಾರಿ ಮಿಸಕಾಡುತ್ತಿರಲಿಲ್ಲ "ನಿನ್ನ ಚಿಕ್ಕಮಗಳು ದಿಣ್ಣೆ ಅದಾಳ, ಪೀಕಿ ಅದಾಳ ಅವರಿಗ ಎಬ್ಬಿಸು, ನನ್ನೇನು ಆಳು ಅಂದ್ಕೊಂಡಿರ ಹೆಂಗೆ. ಕೈಲಾದಷ್ಟು ಮಾಡ್ತೀನಿ. ಇಲ್ಲಂದ್ರ ಕಳಸಿಬಿಡ್ರಿ ನಮ್ಮಪ್ಪನ ಮನಿಗೆ" ಒಲೆ ಮೇಲೆ ಅಳ್ಳ ಹುರದಂಗಿದ್ದು ಮಾತುಗಳು. "ಏನು ಮಾತಾಡ್ತಾಳ ಆ ಹೆಂಗಸು, ಹಿಂಗಾರ ಯಾ ಮನಿ ಉದ್ದಾರ ಆದೀತು. ಅವನೆಲ್ಲದಾನ ಜೋಗಮ್ಮನ ಹಿಂದೆ ಜೋಳ ಹೊರೋನು" ತೊಪು

ಸೂಕ್ಷ್ಮವಾಗಿಯೆ ವಿಷಯದ ಗಂಭೀರತೆಯನ್ನ ಅರಿತು ಬಾಯಿ ಮಾತಿಂದಲೆ ಹೆದರಿಸುವ ಪ್ರಯತ್ನ ಮಾಡಿದ್ದ. ಸಾಕಿಬಾಯಿ ಮಹಾಘಾಟಿ ಹೆಂಗಸು ಹೈರಾವಣ, ಮೈರಾವಣ ಬಂದ್ರು ಜುಪ್ ಅನ್ನಾಕಿಲ್ಲ ಬಿಡು ಅನುವ ಪ್ರವೃತ್ತಿಯವಳಾಗಿದ್ದರಿಂದ ಯಾರಿಗೂ ಮೈಟ್ ಮಾಡ್ತಿರಲಿಲ್ಲ.

ಜಾನಿಬಾಯಿಗೆ ತಲೆನೋವಿಗಿಟ್ಕೊಂಡಿತ್ತು ಇವತ್ತು ಸುಧಾರಿಸಿಯಾಳು, ನಾಳೆ ಸರಿಹೋಗಬಹುದು ಅಂದ್ರೆ ಅವಳ ಸೊಂಬೇರಿತನ, ಮೈ ಸಬರಿಕಿ ಹೆಚ್ಚಾಗತೊಡಗಿತು. ಆ ನಡುವೆ ಆಕಿ ಮೂರು ಮಕ್ಕಳ ತಾಯಿಯಾಗಿದ್ದಳು. ಇನ್ನೇನು ಮಕ್ಕಳಾದವಲ್ಲ ಇನ್ನಾದರೂ ಪಾಡಾದಳು ಅಕಿ ಹಿಂದ ಬರುವ ಒರಗಿತ್ತಿಯವರನ್ನ ಸುಧಾರಿಸಿಕೊಂಡು ಮನಿ ಮರ್ಯಾದಿ ಕಾಪಾಡಿ ಮನಿ ಅಖಂಡತನೆಯನ್ನ ಒಗ್ಗಟ್ಟನ್ನು ಮುಂದುವರಿಸಬಹುದು ಅಂತ ಆಶಾವಾದಿಯಾಗಿದ್ದಳು ಜಾನಿಬಾಯಿ. ದೇವ್ಲನ ಮದುವೆಯಾಗಿ, ಧಣಿಯ, ದಮ್ಮಡಿ ಮದುವೆನೂ ಆಗಿಹೋಗಿತ್ತು. ಸಾಕಿಬಾಯಿ ಅಷ್ಟರಲ್ಲಿ ಮೂರುಸಾರಿ ಜಗಳ ಆಡಿ, ಗಂಡ ಮಕ್ಕಳನ್ನ ಕಟ್ಕೊಂಡು ಕಾಫಿತೋಟಕ್ಕೆ ಹೋಗಿದ್ದಳು. ಮತ್ತೆ ವಾಪಾಸು ಬಂದಾಗ, ಯಾರದೊ ಕೈಕಾಲು ಹಿಡಿದು ತೊಪುನಾಯ್ಕನ ಹತ್ರ ಆಟ ನಡೆಯಲ್ಲ ಅಂತ ಗೊತ್ತಾಗಿ, ಜಾನಿಬಾಯಿ ಮೂಲಕ ಕಾಲಿಗೆ ಬಿದ್ದು ತಪ್ಪಾತು ಅಂತ ಹಿಂದಿನ ಬಾಗಿಲಿನಿಂದ ಎಂಟ್ರಿ ಹೊಡೆದಿದ್ದಳು. ಮಮ್ಮಕ್ಕಳು ದಿಕ್ಕಾಪಾಲು ಆಗ್ತಾವ ಜಪ್ಪಯ್ಯ ಅಂತ ಕರಗದ ತೊಪು ತುಂಡ ನೆಲ ಕೊಡಾಕಿಲ್ಲ ಅಂತ ಗೊತ್ತಾಗಿ ಅವು ಉಪವಾಸ ಬಿದ್ದಾವು ಅಂತ ಜಾನಿಬಾಯಿ ತೊಪುನಾಯ್ಕನ ಕೂಡ ಬೊಯ್ಯಿಸಿಕೊಂಡಾದರು ಮಗನನ್ನ ಒಳಗೆ ಸೇರಿಸಿಕೊಂಡಿದ್ದಳು. “ಹಿರಿಯಕ್ಕನ ಚಾಳಿ ಮನೆ ಮಂದಿಗೆಲ್ಲಾ” ಅನ್ನೊ ಹಂಗ ಕಿರಿಯ ಸೊಸೆಯರು ದೊಡ್ಡವಳನ್ನ ನೋಡಿ ಮನಿ ಒಡದಾರು ಎನ್ನುವ ಆತಂಕ ಇದ್ದೆ ಇತ್ತು. ಆದರೂ ಅನಿವಾರ್ಯ ನಡೆಯೋ ಆಟ ದಿನ ನಡಿಲಿ, ಒಂದ ದಿನ ಕೊಳ್ಳರಿಯೋದೆ ಅಂತ ಮಾತಾಡಿಕೊಂಡಿದ್ದರು ಗಂಡ ಹೆಂಡತಿ.

ಸಾಕಿ ಅದ್ಯಾವ ಘಳಿಗೆಯಲ್ಲಿ ತೊಪುನಾಯ್ಕನ ಮನಿಯೊಳಗೆ ಕಾಲಿಟ್ಟಳು ಜಗಳ, ಕದನ ಆರಂಭವಾಗಿತ್ತು. ಕೆಲ್ಸಕ್ಕೆ ಕರಿಬೇಡ ಊಟಕ್ಕೆ ಮರಿಬ್ಯಾಡ ಅನ್ನೋದು ಸಾಕಿಯ ಸಿದ್ಧಾಂತವಾಗಿತ್ತು. ಸಾಲದಕ್ಕೆ ವರ್ಷಕ್ಕೆ ಒಂದರಂತೆ ಐದೊ ಆರೊ ಮಕ್ಕಳನ್ನ ಪುಸ್ಸು ಪುಸ್ಸು ಝೆರಾಕ್ಸ್ ಮಿಷಿನಿನಂತೆ ಬೇರೆ ತೆಗದಿದ್ದಳು. ಅದರಲ್ಲಿ ಕೆಲವನ್ನ ಬಿಟ್ಟ ಬೇರೆ ಹೋಗಿದ್ದಳು. ಅವಳಿಗೆ ಗೊತ್ತಿತ್ತು ಜಾನಿಬಾಯಿಗೆ ಮೊಮ್ಮಕ್ಕಳಂದ್ರೆ ಪ್ರಾಣ ಅಂತ. ಅದಕ್ಕೆ ಸರಿಯಾಗಿ ಆಟ ಆಡುತ್ತಿದ್ದಳು. ದೇವ್ಲನ ಮದುವೆಯಾತು ಅಂವ ಹೆಂಡತಿ ಕಟ್ಕೊಂಡು ಪ್ಯಾಟಿ ಸೇರಿದ. ಕೂಡು ಕುಟುಂಬ ಈ ಸೋಗಲಾಡಿ ಹೆಂಗಸಿನಿಂದ ನಡಿಯಾಕಿಲ್ಲ ಅಂತ ಗೊತ್ತಾಗಿ, ಮೂರನೆಯವನಾದ ಧಣಿಯನಿಗೆ ಜಾನಿಬಾಯಿಯ ದೊಡ್ಡಪ್ಪನ ಮಗ ಹಂಡೂನಾಯ್ಕನ ಮಗಳು ಸಾವಿ ಜೊತೆ ಮದ್ವೆ ಮಾಡಿಕೊಂಡು

ಬಂದಳು. ಸಾವಿ ಬಂದು ವಾರದಲ್ಲಿ "ನೋಡಿದ್ರ ನಾನು ಮದುವಿಯಾಗಿ ಬಂದಾಗ ಯಾರದೊ ಮೂಗು ಸೋರುತಿತ್ತು, ಯಾರದ ತಿಕ ಸೋರತ್ತಿತ್ತು ನಾನು ಒಪ್ಪಮಾಡಿ ದೊಡ್ಡವರನ್ನ ಮಾಡಿದೆ. ಮನ್ನೆ ಮನ್ನೆ ಬಂದಾಕಿಗ ಇರೊ ಬೆಲೆ ನನಗಿಲ್ಲ ಈ ಮನಿಯಾಗ. ನಾ ಇರಾಕಿನ ಅಲ್ಲ ನಾ ಮನಿಬಿಟ್ಟು ಹೋಗಾಕಿ. ನೀ ಬೇಕಾರ ನಿಮ್ಮವ್ವನ ಮಕ ನೋಡ್ಕೊಂಡಿರು" ಅಂತ ಸಣ್ಣ ಯುದ್ಧವನ್ನೆ ಮಾಡಿ ಐದಾರು ರೊಟ್ಟಿಗಳನ್ನ ಬುತ್ತಿಗಂಟಿಗೆ ಸೇರಿಸಿ ಕಟ್ಕೊಂಡು, ಎಮ್ಮಿ ಬಿಟ್ಕೊಂಡು ಮೇಯಿಸೋದಕ್ಕೆ ಹೊಂಟಳು. "ಯಾಕ ಹೋಗವಲ್ಲಳು ಬಿಡು, ಹೊಲಮನಿ ಕೆಲಸ ಮಾಡೋದು ಅಷ್ಟರಲ್ಲೆ ಐತಿ" ಜಾನಿಬಾಯಿ ಜಾತುಗೆ ಸಮಾಧಾನ ಮಾಡಿದಳು. ಸಂಜೆ ಮನೆಗೆ ಬಂದವಳೆ "ಯವ್ವ ನನ ಹೊಟ್ಟೆ ಅಯ್ಯೊ ಸತ್ತೆ ಇಲ್ಲಿ ನೋವು ನೋವು" ಉಳ್ಳಾಡಿದಳು. ಜಾನಿಬಾಯಿ ಗಾಬರಿಯಾದಳು. "ಎಂಥಪಾಡು ದನ ಮೇಯಿಸೋದಕ್ಕೆ ಹೋದವಳು ಈಗ ಹೊಸ ಅವತಾರ ಅದೇನಾತಪ್ಪ ಶಿವನೆ. ಯಾಕಿಂಗೆ ಈ ಹೆಂಗಸು ನಡಿತಿರೊ ಮನಿ ಮುರಿಯೋದಕ್ಕೆ ಏನೆಲ್ಲಾ ಪ್ರಯತ್ನ ಮಾಡ್ತಿದ್ದಾಳೆ." ಮಂದಿ ಮುಂದ ಹೇಳಾಕ ಆಗದೆ ಒಳಗೊಳಗೆ ನೊಂದುಕೊಂಡು ಗಪ್ಪಾಗಿದ್ದಳು. ಸಾಕಿಯ ಹೊಸ ಅವತಾರ ಹೊಸದಾಗಿ ಬಂದ ಸಾವಿ ಸಂಜೆ ಮುಂಜಾನೆ ಎರಡೂ ಹೊತ್ತು ಬೆಂಕಿ ಮುಂದೆ ಬೇಯಿಬೇಕು. ಮುಂಜಾನೆ ಹೊತ್ತಾರೆ ಒಲೆಯೊಳಗಿನ ಬೂದಿ ತಗದು ಒಲೆ ಹೊತ್ತಿಸಿದರೆ ಮದ್ಯಾಹ್ನ ಹನ್ನೆರಡರ ಮಟ ರೊಟ್ಟಿ ಸುಡುವುದೆ ಆಗುತಿತ್ತು. ಮತ್ತೊಂದು ಒಲೆಯ ಮೇಲೆ ದೊಡ್ಡ ಸ್ವಾರಿ ತುಂಬ ಜೋಳದ ನುಚ್ಚು ಬೇಯಿಸಿ ಕೆಳಗೆ ಇಳಿಸಿದ ಮೇಲೆ ಬೇಳೆಸಾರು, ಹೀರೆಕಾಯಿ, ಸೋರೆಕಾಯಿ, ಕುಂಬಳಕಾಯಿ, ಸೆಣಬಿನ ಹೂವು, ಕೊಲಾಣಿ ಸೊಪ್ಪು, ಹೊಲದಲ್ಲಿ ಸಿಕ್ಕ ಅಣಬೆ ಯಾವುದಾದರು ಪಲ್ಯೆ ಆಗಬೇಕು. ಜಾನಿಬಾಯಿ ಕುಂತಲ್ಲಿಂದಲೆ, "ಹುಡುಗರು ಸಗಣಿ ಕಸ ಬಳದು ಬರೋದ್ರಾಗ ಮಜ್ಜಿಗಿ ಕಡದು ಬೆಣ್ಣಿ ತಗದಿರಬೇಕ್ರವ್ವ, ಯಾರವ್ರು ಖಾಲಿ ಕುಂತವರು ಕಡಗೋಲು ತಗೊಂಡು ಕಡಿಬಾರದ" ಬಡ್ಕೊಳ್ಳುತ್ತಿದ್ದಳು. ಯಾಕಂದ್ರೆ ಇಡೀ ಮನೆ ಒಂದು ಸ್ವರದ ಮೇಲೆ ನಡಿತಿರುತ್ತದೆ. ಆ ಸ್ವರ ಒಂದೇ ಆಗಿರಬೇಕು. ಮಜ್ಜಗಿಯಿಂದ ಬೆಣ್ಣಿ ತಗದು ಎರಡು ತಂಬಿಗೆ ನೀರು ಸೇರಿಸಿ ತೆಳ್ಳಗೆ ಮಾಡುತ್ತಿದ್ದಂತೆ ಸಗಣಿ ಕಸ ಹೊಡದು ಎಮ್ಮೆಗೆ ಹೋಗುವವರು, ಹುಲ್ಲು ಕೊಯ್ಯೋದಕ್ಕೆ ಹೋಗುವವರು, ಗಳೆ ಕೆಲಸಕ್ಕೆ ಹೋಗುವವರು ಒಂದೊಂದು ತಟ್ಟೆ ತುಂಬ ಬಿಸಿ ಬಿಸಿ ಜೋಳದ ನುಚ್ಚು ಮಜ್ಜಿಗೆ ಸೇರಿಸಿ ಕುಡಿದು ಹೊಟ್ಟೆಗೆ ಆಧಾರ ಮಾಡಿಕೊಂಡೆ ಹೋಗುತ್ತಿದ್ದರು. ಒಂದರ್ಧ ಗಂಟೆ ತಡ ಆದದ್ದೆ ಆದರೆ ಹುಲ್ಲು ತಂದು ಹೊರಿ ಬಿಸಾಕಿ ಬೇರೆ ಕೆಲಸಕ್ಕೆ ಹೋಗುವುದು ತಡ ಆಗುತ್ತೆ. ನೀರು ಸೇದಿ ಸಾಲಿಗೆ ಹೋಗುವುದು ತಡ ಆಗುತ್ತೆ. ಬಿಸಲು ನೆತ್ತಿ ಮೇಲೆ ಬರೋದರೊಳಗೆ ಹೊಲದಲ್ಲಿ ಆಗಬೇಕಾಗಿರುವ ಕೆಲಸ ಉಳಿಯುತ್ತದೆ. ಅದಕ್ಕೆ ಐದು ಮುಕ್ಕಾಲಿಗೆ ಮಜ್ಜಿಗಿ ಕಡಿದು ಬೆಣ್ಣೆ ಹೊರಗೆ ತಗದಿರಲೇ ಬೇಕು ರೊಟ್ಟಿ ತಟ್ಟುವವರು ತಟ್ಟುತ್ತಿದ್ದಂತೆ ಖಾಲಿಯಿರುವ ಒಲೆಯ

ಮೇಲೆ ನುಚ್ಚ, ಪಲ್ಯೆ ನಡೆಯುತ್ತಿರಬೇಕು. ಈ ಸ್ವರ ತಪ್ಪಿದರೆ ಮನೆಯ ದಿಕ್ಕೆ ತಪ್ಪುತ್ತದೆ. ಐದುಗಂಟೆಗೆ ಎದ್ದ ಜಾನಿ, ತೊಪು ಎಲ್ಲರನ್ನು ಎಬ್ಬಿಸಿ ಆಯಾ ಕೆಲಸಕ್ಕೆ ಅಣಿ ಮಾಡುತ್ತಿದ್ದರು. ಚಿಕ್ಕವರಿಗೂ ಸೊಂಬೇರಿಗಳಂತೆ ಆರು ಏಳು ಗಂಟೆಗೆ ಮಲಗುವ ಅವಕಾಶ ಇಲ್ಲ. ಆದರೆ ಸಾಕಿ ಮಾತ್ರ ಒಮ್ಮೊಮ್ಮೆ ಯಾರ ಮಾತು ಕೇಳದೆ ಮೂಲೆ ಹಿಡಿಯುತ್ತಿದ್ದಳು. "ಏನಾಯ್ತು ಮಜ್ಜಿಗೆ ಕಡಿಯೋರು" ಜಾನಿಬಾಯಿಗೆ ಅರ್ಥ ಆಗಿ ಬಿಡುತ್ತಿತ್ತು. ಆಗ ಯಾರಾದರು ಗಂಡಸರು ಎರಡು ಸ್ವಾರಿಯೊಳಗಿಂದ ಮುಂಜಾನೆ ಹೆಪ್ಪು ಹಾಕಿದ ಹಾಲು, ಸಂಜೆ ಹೆಪ್ಪು ಹಾಕಿದ ಹಾಲನ್ನ ದೊಡ್ಡದೊಂದು ಸ್ವಾರಿಗೆ ಸುರುವಿ ಕಡಿಯುತ್ತಿದ್ದರು.

ಹಿಂಗಾದರೆ ಜಡ ಆದೀತು ಅಂತ ಧಣಿಯನಿಗೂ ಮದುವೆ ಮಾಡಿಸಿದರೆ, ಧಣಿಯನ ಹೆಂಡತಿ ಹೇಮ್ಲಿ ಮತ್ತ ಸಾಕಿ ಒಂದ ಕಡೆಯಾಗಿ ಸಾವಿಯನ್ನ ಬೆಂಕಿ ಮುಂದೆ ಶಾಶ್ವತಗೊಳಿಸುವ ಹುನ್ನಾರ ಮಾಡತೊಡಗಿದರು. "ಯವ್ವ ರೊಟ್ಟಿ ಕೊಡ್ರೆ, ಮುದ್ದಿನುಂಗಾಕ ಆಗೋದಿಲ್ಲ" ಅಂತ ಅವಳ ಮಾವ ತೊಪು ಗೆ ರೊಟ್ಟಿ ಮಾಡಿಕೊಡುವಾಗ ಅಕೀಗೂ ರೊಟ್ಟಿನೆ ಕೊಡುವಂತೆ ನೆಪ ಮಾಡಿದ್ದಳು. ಹಾಳ ಮನಿಯವಳು ನಿಜ ಹೇಳ್ತಾಳೊ, ನೆಪ ಮಾಡ್ತಾಳೊ ಆ ಶಿವನಿಗೆ ಗೊತ್ತು. ಹಾಳಾಗಿ ಹೋಗಲಿ ಬಿಡು ಅಂತ ಹೆಚ್ಚ ತಲಿ ಕೆಡಿಸಿಕೊಳ್ಳದೆ ಮಾಡೊಮುಂದ ಎರಡು ಜಾಸ್ತಿ ಮಾಡಿ ಅಕೀಗೂ ರೊಟ್ಟಿ ಕೊಡತೊಡಗಿದರು. ಹೀಗೆ ಜಾನಿಬಾಯಿಗಿಲ್ಲದ ಸವಲತ್ತು ಸೊಸೆ ಸಾಕಿಗೆ ಸಿಗುವಂತೆ ನಿರ್ಮಾಣ ಮಾಡಿಕೊಂಡಳು. ಮನೆಗೆ ಹಿರಿ ಸೊಸೆ ಎನ್ನುವ ದಿಮಾಕು. ಅಷ್ಟೆ ಅಲ್ಲಾ ಮನೆ ಆರ್ಥಿಕವಾಗಿ ಇಷ್ಟೊಂದು ಸುಧಾರಣೆ ಕಾಣಬೇಕಾದರೆ ಅವಳದೆ ಹೆಚ್ಚಿನ ಕೊಡಿಗೆ ಇದೆ ಎನ್ನುವಂತೆ ಸುತ್ತ ಮುತ್ತಲು ಪ್ರತಿಬಿಂಬಿಸಿಕೊಂಡಿದ್ದಳು. ಮಂದಿಗೇನು ನಡಿತಿರೊ ಮನಿ ಮುರಿಬೇಕು ಅವರು ತಮ್ಮಂಗೆ ಕೂಲಿ ಮಾಡಿತಿನ್ನುವವರಾದರೆ ಖುಷಿ ಅದಕ್ಕೆ ಏನು ಬೇಕಾದರು ಮಾಡಲು ತಯಾರಿರುತ್ತಾರೆ. ಇಲ್ಲದ್ದನ್ನ ಸೃಷ್ಟಿ ಮಾಡಿ ಹದಗೇಡು ಮಾಡುವವರೆ ವಿನಃ ಏನೊ ದುಡದು ತಿನ್ನುತ್ತಿದ್ದಾರೆ. ಹೋಗಲಿ ಬಿಡು ದುಡಿಯಲಿ ಎನ್ನುವ ಭಾವನೆ ಯಾರಲ್ಲೂ ಇರಲಿಲ್ಲ. ತಾಂಡದಾಗ ಯಾರು ಜಗಳ ಆಡ್ಯರು, ಯಾರ ಮನಿ ಮುರದೀತು, ಯಾರು ಏನಾದರು ಅಂತ ಮಂದಿ ಕಾಯುತ್ತಿದ್ದರೆ ವಿನಃ ತಮ್ಮ ಪಾಡಿಗೆ ತಾವು ದುಡಿಬೇಕು ಅನ್ನೊರೆ ಇಲ್ಲ. ಸಾಕಿಯಂತ ಹೆಂಗಸು ಮಂದಿ ಮಾತು ಕೇಳಿ ಮನಿ ಮುರಿಯೋದಕ್ಕೆ ಎಷ್ಟೆ ಸಂಚು ಮಾಡಿದರು ತೊಪುನಾಯ್ಕ ಜಾನಿಬಾಯಿ ಗಟ್ಟಿ ಇದ್ದಿದ್ದರಿಂದಾಗಿ ಅಷ್ಟು ಸುಲಭವಾಗಿ ಮನಿ ಮುರಿಯೋದಕ್ಕೆ ಆಗೋದಿಲ್ಲ ಅಂತ ಸಾಕಿಗೆ ಗೊತ್ತಾಯಿತು.

* * *

72. ಹೆಂಡಹೋಗಿ ಸರಾಯಿ ಬಂತು, ಸರಾಯಿ ಹೋಗಿ ಬ್ರಾಂದಿ ಬಂತು ಡುಂ ಡುಂ

ಈ ಕುಡಿಯೊ ಚಟ ಮನುಷ್ಯನಿಗೆ ಹೇಗೆ ಬಂತು ಅಂತ ಯಾ ಮಗನಿಗೂ ಗೊತ್ತಿಲ್ಲ. ಬಹುಶಃ ಪುರಾಣದ ಕತೆಯಲ್ಲಿ ದೇವತೆಗಳು ಸೋಮರಸ ಕುಡಿತಾರೆ ಅನ್ನೊ ಪರಿಕಲ್ಪನೆಯಿಂದ ಭೂಮಿ ಮೇಲೆ ಕುಡಿತದ ನಾನಾ ಪ್ರಕಾರಗಳು ಆರಂಭಗೊಂಡಿರಬೇಕು. ಈ ಲಂಬಾಣಿಗಳಿಗೆ ಕುಡಿಯುವುದು ಅಂದರೆ ಹಬ್ಬ. ಕುಡಿದು ಕುಡಿದು ಅಲ್ಲೆ ಬಕ್ಕ ಬರ್ಲೆ ಬೇಕಾದರೆ ಮಲಗಿ ಬಿಟ್ಟಾರು. ಕುಡಿಯುವುದನ್ನ ಬಿಡಾಕಿಲ್ಲ. ಹಿಂದೆ ಕಾಡಲ್ಲಿ ವ್ಯಾಪಾರ ಮಾಡುತ್ತ ವಲಸೆ ಹೋದ ಸಂದರ್ಭದಲ್ಲಿಮನೆ, ಮಕ್ಕಳು, ಆಯಾಸ, ದಣಿವು ಮರೆಯೋದಕ್ಕೆ ಕಾಡಿನಲ್ಲೆ ಬೆಲೆ, ಗಿಡದ ಚಕ್ಕಿ ಹಾಕಿ ಕೊಳತ ಮೇಲೆ ಇಪ್ಪತ್ತೊಂದನೆಯ ದಿನಕ್ಕೆ ಭಟ್ಟಿ ಇಳಿಸುವ ಪ್ರಕ್ರಿಯೆಯಲ್ಲಿ ತೊಡಗುತ್ತಿದ್ದರು. ಭಟ್ಟಿ ಇಳದಿದ್ದನ್ನ ಸರಾಯಿ ಅಂತ ಕುಡಿಯುತ್ತಿದ್ದರು. ಹಾಗೆ ಕಾಡಲ್ಲಿ ಸಿಗಬಹುದಾದ ಈಚಲು ಗಿಡಗಳಿಗೆ ಮಡಿಕೆಗಳನ್ನ ಕಟ್ಟಿ ನೀರ ಇಳಿಸುತ್ತಿದ್ದರು. ಇವು ಅನಾದಿಕಾಲದಿಂದಲೂ ರೂಢಿಯಲ್ಲಿದ್ದ ಅದ್ಭುತ ಕಲೆಗಳು. ಲಮಾಣಿಗರು ಇಳಿಸಿದ ಭಟ್ಟಿ ಕಲಬೆರಿಕೆ ರಹಿತ ಆರೋಗ್ಯಕ್ಕೆ ಹಾನಿ ಉಂಟು ಮಾಡುವುದಾಗಿರಲಿಲ್ಲ ಹಾಗಾಗಿಯೆ ಬಂಜಾರರಲ್ಲದವರು ತಾಂಡಗಳಿಗೆ ಸರಾಯಿ ಕುಡಿಯಲು ಬರುತ್ತಿದ್ದರು. ತೊಪು ಕಿಟ್ಟಣ್ಣ ಭಟ್ಟ, ಸರ್ವತಪ್ಪನ ಗದ್ದೆಯಲ್ಲಿ ಬೆಳದ ಕಬ್ಬನ್ನ ಆಲೆಮನೆಯಲ್ಲಿ ಬೆಲ್ಲ ಮಾಡುತ್ತಿದ್ದ. ಒಂದೊಂದುಸಾರಿ ಏನೊ ಹೆಚ್ಚು ಕಡಿಮೆಯಾಗಿ ಒಂದೊಂದು ಬಾನಿ ಬೆಲ್ಲ ಕೆಟ್ಟು ಹೋದದ್ದನ್ನ ಅಂಟು ಬೆಲ್ಲ ಅಂತ ಕರೆಯುತ್ತಿದ್ದರು. ಅಂಟುಬೆಲ್ಲ ಗಟ್ಟಿಯಾಗಿ ಅಚ್ಚುಗಳಾಗಿ ರೂಪಾಂತರಗೊಳ್ಳದೆ ನೀರಂತೆ ಇದ್ದಿದ್ದನ್ನ ಸುತ್ತಲು ಸರಾಯಿ ಮಾಡುವವರು ಬಂದು ಸೋವಿರೇಟಿಗೆ ಒಯ್ಯುತ್ತಿದ್ದರು.

ಕ್ರಮೇಣ ಸರ್ಕಾರ ಕುಡುಕರ ಸಂಖ್ಯೆ ಹೆಚ್ಚಾಗಣ, ಸರ್ಕಾರಕ್ಕೂ ಫಾಯಿದೆ ಬರಲಿ ಅಂತ ಅಬಕಾರಿ ವಿಭಾಗವನ್ನ ತಗದು ಮೊಟ್ಟ ಮೊದಲಿಗೆ ಹೆಂಡವನ್ನ

ಮಾರಾಟ ಮಾಡುವ ಕ್ರಿಯೆ ಆರಂಭಮಾಡಿತು. ಆಗ ಹೆಂಡ ಈಚಲು ಗಿಡಗಳಿಗೆ ಮಣ್ಣಿನ ಕುಂಬ ಕಟ್ಟಿ ಈಚಲ ಗಿಡದ ಹೊಂಬಾಳೆಗೆ ತೂತುಮಾಡಿ ರಾತ್ರಿಯಿಡಿ ಹನಕುವ ಅದರ ರಸವೆ ಹೊತ್ತಾರೆ ಕುಡಿದರೆ ನೀರವಾಗಿರುತಿತ್ತು. ಯಾವಾಗ ಸೂರ್ಯ ಉದಯಿಸಿದನೊ ಆವಾಗ ರಾಸಾಯನಿಕ ಪ್ರಕ್ರಿಯೆ ಆರಂಭಗೊಂಡು ಅದು ನೀರ್ರಾಹೋಗಿ ಹೆಂಡವಾಗಿ ಬಿಡುತಿತ್ತು. ಆರಂಭದಲ್ಲಿ ಪರವಾಗಿಲ್ಲ ಅದಕ್ಕೆ ಒಂದಿಷ್ಟು ನೀರು ಸೇರಿಸಿ ಪ್ರಮಾಣ ಹೆಚ್ಚು ಮಾಡಿ ಕೊಡುತ್ತಿದ್ದರು. ಮುಂದೆ ಬೇಡಿಕೆ ಹೆಚ್ಚಾಗುತ್ತಿದ್ದಂತೆ ಈಚಲ ಹೆಂಡಕ್ಕೆ ಬದಲಾಗಿ, ರಸಾಯನಿಕ ಪೌಡರ ಬಂತು. ಅದನ್ನ ದೊಡ್ಡ ಹೊಂಡಗಳಲ್ಲಿ ಸುರಿದು ಚೆನ್ನಾಗಿ ಈಜಾಡಿ ಹೆಂಡಮಾಡಿ ಬಾಟಲಿ ತುಂಬುವ ಕ್ರಿಯೆ ಆರಂಭವಾಯಿತು. ಭದ್ರಾನಾಯ್ಕನ ತಾಂಡದಲ್ಲಿ ಗಣಪನಾಯ್ಕನ ಕತ್ತೆ ಇತ್ತು. ದುರ್ಗಾಪುರದಿಂದ ಒಂದಕಡೆ ಇಪ್ಪತ್ತು ಮತ್ತೊಂದು ಕಡೆ ಇಪ್ಪತ್ತು ಒಟ್ಟ ನಲವತ್ತು ಬಾಟಿಲುಗಳನ್ನ ತಂದರೆ, ತಾಂಡದೊಳಗೆ ಹಿರಿಯ ಗಂಡಸರು ಹೆಂಗಸರು ಅನ್ನದೆ ಹೆಂಡದ ಪೆಂಟದ ಮೇಲೆ ಬಂದು ಹೆಂಡ ಕುಡಿಯುವ ಸೊಳಗಿಗೆ ಬಾಟಲು ಸುರುವಿ, ರೂಢಿಯಂತೆ ಭೂಮಿತಾಯಿಗೆ ಒಂದು ಹನಿ ಅಷ್ಟದಿಕ್ಪಾಲಕರಿಗೆ ಒಂದೊಂದು ಹನಿ ಹೆಂಡ ಚಿಮುಕಿಸಿ ಎತ್ತಿದರೆ ಒಂದೇ ಗುಟುಕಿಗೆ ಖಾಲಿಮಾಡಿ, ಒಣ ಬಂಗಡೆ, ಖಾರ, ಉಪ್ಪು ಏನಾದರು ಒಂಚೂರು ಬಾಯಿಗೆ ಹಾಕ್ಕೊಂಡ್ರೇನೆ ಸಮಾಧಾನ. ಹಬ್ಬ ಹರಿದಿನಗಳಲ್ಲಿ ಹೆಂಡ ಯಾವುದಕ್ಕೂ ಸಾಲುತ್ತಿರಲಿಲ್ಲ. ಅದರಲ್ಲೆ ಕೆಲಮಂದಿ ಕಾಸಿಲ್ಲದವರು ಬೇಲದ ಮರದ ಚಕ್ಕಿಯನ್ನ ಸುಲಿದುಕೊಂಡು ಬಂದು, ತೊಪುನಾಯ್ಕನ ಮನಿಯಿಂದ ಜಿನಗು ಬೆಲ್ಲ ಖರೀದಿಸಿ ಭಟ್ಟಿ ಸರಾಯಿ ಮಾಡುವುದನ್ನ ರೂಢಿಯಲ್ಲಿಟ್ಟುಕೊಂಡಿದ್ದರು. ಹಾಗಾಗಿಯೆ ಹೆಂಡದ ಪ್ರಮಾಣ ಕಡಿಮೆಯಾದರೆ ಮಂದಿ ಕದ್ದು ಮುಚ್ಚಿ ಭಟ್ಟಿ ಸರಾಯಿ ಕುಡಿದು ತಮ್ಮ ರಾತ್ರಿಗಳನ್ನ ಕಳೆಯುತ್ತಿದ್ದರು. ಆವಾಗ ಕುಡಿಯುವುದಕ್ಕೆ ಒಂದು ವಯಸ್ಸಿತ್ತು. ವಯಸ್ಸಾದವರು ಹೊಲಮನಿಯ ಕೆಲಸಮಾಡಿ, ಕಾಲು ಕೈ ಸೆಳತ ಹೆಚ್ಚಾಗಿ ನಿದ್ದೆ ಬಾರದಕ್ಕೆ, ಮನೆ ತಾಪತ್ರೇಯ, ಚಿಂತೆ, ಮರಿಯೋದಕ್ಕೆ ಹೆಂಡ ಕುಡಿಯುತ್ತಿದ್ದರು. ಗಂಡಂದಿರೆ ತಾವು ಒಂದು ಬಾಟಲು ಕುಡಿದು ಒಂದು ಬಾಟಲು ಹೆಂಡತಿಗೆ ಅಂತ ತಂದು ಇಳಿದ ನಿಶೆಗೆ, "ಥು ಅವನವ್ವನ ಇಳಿದೆ ಹೋಯ್ತು ಕಣೆ, ಅರ್ದ ನೀ ಕುಡಿ, ಅರ್ದ ನಾ ಕುಡಿತಿನಿ" ಅಂತೇಳಿ ಮುಲಾಜಿಲ್ಲದೆ ಅಲ್ಲಿನೂ ಬಂದು ಅರ್ಧ ಹೊಡಿತಿದ್ದರು. ಅದಕ್ಕೆ ಹೆಂಗಸರು "ಹೂಂ" ಅಂತಿರಲಿಲ್ಲ "ಊಹೂಂ" ಅಂತಿರಲಿಲ್ಲ, ಮುಂದೆ ಬರ್ತಾ ಬರ್ತಾ ಗಂಡನಿಗಿಂತ ಮುಂಚೆ ಮನಿಯಾಗಿದ್ದಿದ್ದನ್ನ ಒಡ ಸುಟ್ಟು ಒಂದು ಬಾಟಲು ಕುಡಿದು ಅವನು ತರುವ ಅರ್ಧ ಬಾಟಲಿಗೆ ಕಾಯುತ್ತಿದ್ದರು.

ಒಮ್ಮೊಮ್ಮೆ ಹೆಂಗಸರು ವಾತಾ ತಂದಿರುವ ಕಾಳನ್ನ ಅಂಗಡಿಗೆ ಹಾಕಿ ಹೆಂಡ ಕುಡಿಯುತ್ತಿದ್ದರು. ಹೆಂಡ ಕುಡಿಯುವವರ ಪ್ರಮಾಣ ಹೆಚ್ಚಾಗುತ್ತಿದ್ದಂತೆ ಸರ್ಕಾರ

ಜನರ ಅವಶ್ಯಕತೆಯನ್ನ ಪೂರೈಸಲು ಸರಾಯಿಯನ್ನ ಜಾರಿಗೆ ತಂದಿತ್ತು. ಮತ್ತೊಂದು ವರ್ಗಕ್ಕೆ ಕುಡಿಯಲು ಖೋಡೆ ಬ್ರಾಂದಿಯ ಕಂಪನಿ ಆರಂಭವಾಗಿತ್ತು. ಬ್ರಾಂದಿ ಕೇವಲ ಮಧ್ಯಮ ವರ್ಗದವರಿಗೆ, ಮೇಲ್ವರ್ಗದವರಿಗೆ, ದುಡ್ಡಿರುವವರಿಗೆ ಮಾತ್ರ ಸಿಗುವ ಸವಲತ್ತಾಗಿತ್ತು. ಕ್ರಮೇಣ ಜನರು ಸರಾಯಿ ಬ್ರಾಂದಿಯನ್ನ ತಾಂಡದಲ್ಲಿ ತಂದು ಮಾರುತ್ತಿದ್ದಂತೆ ಮಂದಿ ಮಜದಲ್ಲಿದ್ದರು. ಇನ್ನು ನಾವು ಸುಧಾರಿಸಿಲ್ಲ ಎನ್ನುವವರು ಹೆಂಡದಂಗಡಿಗೆ ಹೋದರೆ ಸರಾಯಿಯನ್ನ ಖರೀದಿಸುವ ತಾಕತ್ತಿರುವವರು ಸರಾಯಿ ಖರೀದಿಸಿ ಕುಡಿದರೆ, ಬ್ರಾಂದಿಯನ್ನು ಖರೀದಿಸುವಷ್ಟು ತಾಕತ್ತಿರುವವರು ಬ್ರಾಂದಿ ಖರೀದಿಸಿ ಕುಡಿದು ಮಜ ಉಡಾಯಿಸುತ್ತಿದ್ದರು. ಡಾಕು, ಮತ್ರ್ಯಾ, ಮಂಗು, ಮಾಂಕಾಳು, ಹೆಳವ ರಂಗೀಲ, ಡಾವಳೊ ಪಕ್ಕೀರ, ದುಬಳೊ ಜಂತಕಲ್ಲ ಒಂದು ದೊಡ್ಡ ಗುಂಪು ಹಗಲು ಕೂಲಿ ಮಾಡುವುದು, ರಾತ್ರಿ ಬೆಳದಿಂಗಳಲ್ಲಿ ಗುತ್ತಿಗೆ ಹಿಡದು ಶೇಂಗಾ ಕೀಳುವುದು, ರಾಗಿ ಕೊಯ್ಯುವುದು ಮಾಡುತ್ತಿದ್ದರು. ಕೈಗೆ ಯಾವಾಗ ದುಡ್ಡು ಬರುತ್ತೊ ಅವತ್ತು ಹೆಂಡ ಒಂದ ಬಾಟಲು, ಸರಾಯಿ ಒಂದ ಬಾಟಲು, ಬ್ರಾಂದಿ ಒಂದ ಬಾಟಲು ಕುಡಿದು ಬಕ್‌ಬರ್ಲೆ ಮಲಗುತ್ತಿದ್ದರು. ದುಡ್ಡು ಖಾಲಿಯಾದಾಗ ಮತ್ತದೆ ಕೆಲಸ.

ಯಾರು ಎಷ್ಟೆ ಕುಡಿಲಿ, ಯಾರು ಎಷ್ಟೆ ಖರ್ಚ ಮಾಡಲಿ ತೊಪುನಾಯ್ಕ ಮಾತ್ರ ಒಂದು ಬಾಟಲಿ ತಾನು ಕುಡಿದು ಒಂದನ್ನ ತನ್ನ ಹೆಂಡತಿ ಜಾನಿಬಾಯಿಗೆ ಅಂತ ಕೈಯಾಗ ಹಿಡ್ಕೊಂಡೆ ಬರ್ತಿದ್ದ. ಅವನ ಪಕ್ಕದಲ್ಲೆ ಡೊಳಾಳೊ ಹನುಮನಾಯ್ಕ, ಎರಡು ಬಾಟಲು ಇಟ್ಕೊಂಡು ಮೂರನೇಯದು ತರಿಸಿದ "ಮಾವ ಒಂದ ಅರ್ಧ ನನ್ನ ಪರವಾಗಿ" ಅಂತ ತೊಪುನಾಯ್ಕನಿಗೆ ಒತ್ತಾಯಿಸಿದ. "ಬ್ಯಾಡಪ್ಪ ನಾನು ಕುಡಿಯೋದೆ ಒಂದು" ತನ್ನ ಸಾಮರ್ಥ್ಯವನ್ನ ಹೇಳಿಕೊಂಡ, ಆದರೆ ಹನುಮ ಕೇಳಾಕ ತಯಾರಿಲ್ಲ. "ಲೇ ತಮ್ಮ ಹೆಂಡದಂಗಡಿ ಮಾಲಿಕ ನಿನ್ನ ಹೆಸರು ಏನೊ ಐತಲ್ಲಾ, ದ್ಯಾಮನೋ, ಹನ್ಮಂತನೊ ಏನೋ ಒಂದು. ನೋಡು ನಮ್ಮ ಮಾವ ಭದ್ರಾನಾಯ್ಕನ ತಾಂಡದಾಗೆ ನಂಬರ್ ಒನ್ ಕುಳ, ಹೌದಪ್ಪ ನಂಬರ್ ಒನ್, ಆದ್ರೆ ಯಾವತ್ತು ಎರಡ ಬಾಟಲು ಕುಡಿಲಿಲ್ಲ. ನನ್ನ ಪರವಾಗಿ ಒಂದು ಬಾಟಲ್ಲು ಹೂಂ, ಕೊಡಂದ್ರೆ" ಒತ್ತಾಯಿಸಿದ. ತೊಪು ಅವನು ಜಪ್ಪಯ್ಯ ಅಂದರು ಕೇಳಲಿಲ್ಲ "ಲೇ ಹನುಮ ನೋಡು ಕುಡಿತದಾಗ ಒತ್ತಾಯ ಒಳ್ಳೆದಲ್ಲ. ನಾನು ಕುಡಿತಿನಿ, ಜೇಬಲ್ಲಿ ಎಷ್ಟು ಕಾಸಿದೆ, ನನಗೆ ಎಷ್ಟು ತಾಕತ್ತಿದೆ. ನನಗೆ ಗೊತ್ತಿದೆ. ನಾನು ಕುಡಿಯಲ್ಲ ದಯಮಾಡಿ ಒತ್ತಾಯಿಸಬೇಡ" ಕೇಳಿಕೊಂಡ. ತೊಪುನಾಯ್ಕನ ಮಾತು ಕೇಳುವ ಪರಿಸ್ಥಿತಿಯಲ್ಲಿರಲಿಲ್ಲ. ಮಂದಿ ಮುಂದೆ ಸುಮಾರಾಗುವುದು ಪಾಡಲ್ಲ ಅಂದವನೆ "ಲೇ ತಮ್ಮ ಹನಮನಾಯ್ಕ ಇಷ್ಟು ಪ್ರೀತಿ ತೊರ್ಸಾಕ ಹತ್ಯಾನ. ಅರ್ಧ ಕೊಡಲೆ ಹೋಗ್ಲಿ" ಅಂದ ತೊಪುನಾಯ್ಕ. ಯಾವಾಗಾದರೊಮ್ಮೆ ಇಂತಹ ಗಿರಾಕಿಗಳು

ಅಂಟ್ಕೊಂತಾರ ಅಂತ ಅವನಿಗೆ ಗೊತ್ತಿತ್ತು. ಅದಕ್ಕೆ ಅವನು ಕೊಡಿಸಿದ ಅರ್ಧ ಮುಗಿಸಿ, "ನೋಡಪ್ಪ ಹನುಮನಿಗೆ ನನ್ನ ಪರವಾಗಿ ಒಂದು ಪೂರಾ ಬಾಟಲು ಕೊಟ್ಟಿರು ಮುಂಜಾನೆ ದುಡ್ಡು ಕೊಡ್ತಿನಿ" ಅಂದು ಎದ್ದು ಮಾಮೂಲಿನಂತೆ ಒಂದು ಬಾಟಲು ಕೈಯಾಗ ಹಿಡ್ಕೊಂಡು ಮನಿಗ ಬಂದ.

ತೊಪುನಾಯ್ಕ ಹೆಂಡತಿಗೆ ಪೂರಾಬಾಟಲು ಹೆಂಡ ಸುರಿದು ಏಡಿ ಸಾರು, ಮುದ್ದಿ ಮಾಡಿರೋದನ್ನ ತಟ್ಟೆಯಲ್ಲಿ ಕೈಹಾಕಿ ಗುಕ್ಕು ಮುರಿಯೋದಕ್ಕೂ ಯಾರೊ ಡೊಳಾಳೊ ಹನುಮ ಸತ್ತ ಅಂತ ಸುದ್ದಿ ತಂದ. "ಅಲೆ ಇವ್ನ ಮಂಜಾಳಾಗ ಈಗ ಅರ್ಧ ತಾಸಿನ ಮುಂಚೆ ನಗಚಾಟಿ ಮಾಡ್ತಾ ಒತ್ತಾಯದಿಂದ ಅರ್ಧ ಬಾಟಲು ಅವನ ಪರವಾಗಿ ಕುಡಿಯೋದಕ್ಕೆ ಒತ್ತಾಯಮಾಡಿ ಕುಡಿಯೊ ಮಟಾನು ಬಿಡದೆ ಕುಡಿಸಿದ್ದ" ಮುದ್ದಿ ಗಂಟಲೊಳಗೆ ಇಳಿಯದಾಗಿತ್ತು. ಆದರೂ ಅನಿವಾರ್ಯ. ಊಟದ ತಾಟಿನ ಮುಂದಿಂದ ಏಳಬಾರದಂತ, ಹಾಕಿದ ಮುದ್ದೆ ಮುಗಿಸಿ ಕೈ ತೊಳದ. ಹನುಮನಿಗೆ ಬರಿ ಮೂವತ್ತೈದು ವರ್ಷ ಆದರ ನಾಡ ಚಟ ಅಂಟಿಸಿಕೊಂಡಿದ್ದ ತಾಂಡದ ಮಂದಿ ಬೇರೆ ಯಾರನ್ನೋ ಕುಡದು ಸಾಯುತ್ತಾನಂತ ಲಕ್ಷದಲ್ಲಿಟ್ಟುಕೊಂಡಿದ್ದರು. ಆದರೆ ವಿಧಿ ಇವನನ್ನ ತಗೊಂಡು ಹೊಕ್ಕಾಳಂತ ಅಂದುಕೊಂಡಿರಲಿಲ್ಲ. ಕೆಲವೆ ದಿನಗಳಿಂದ ಕುಡಿಯೋದನ್ನ ಹೆಚ್ಚು ಮಾಡಿಕೊಂಡದ್ದ ಹನುಮನೆ ಹೋಗಿದ್ದ. ಮನೆ ಒತ್ತಡಾನೊ, ಹೆಂಡತಿ ಕಾಟವೊ, ಸಾಲದ ಬಾದೆ ಹೆಚ್ಚಾಗಿತ್ತೊ, ಕಾರಣ ಏನೆ ಇರಲಿ, ಬೆಳಕು ಹರಿದಾಗಿನಿಂದ ಕುಡಿಯಾಕ ಆರಂಭಿಸಿ ಕತ್ತಲಾದರು ನಿಲ್ಲಿಸುವ ಮಾತೆ ತಗಯದೆ, ಮೆದಳು ಸಂಪೂರ್ಣ ನಿಷ್ಕ್ರಿಯಗೊಂಡು ಉಸಿರಾಟ ನಿಂತುಹೋಗಿತ್ತು. ತೊಪುಗೆ ಬಹಳ ಬೇಸರವಾಗಿತ್ತು. ಅವನ ಕಣ್ಣಮುಂದೆ ಆಡಿ ಬೆಳದ ಹನುಮನಾಯ್ಕನಿಗೆ ಈ ಸ್ಥಿತಿ ಬರುತ್ತೆ ಅದು ಅವನನ್ನ ಮಾತಾಡಿಸಿ ಎರಡು ಬುದ್ಧಿಮಾತು ಹೇಳಾನಂತ ಸುರು ಮಾಡಿ, ಕೇಳುವ ಸ್ಥಿತಿಯಲ್ಲಿಲ್ಲ ಅನ್ನೋದನ್ನ ಖಾತ್ರಿ ಪಡಿಸಿಕೊಂಡು ಜಾಗ ಖಾಲಿ ಮಾಡಿದ್ದ. ಅದಾಗಿ ಸ್ವಲ್ಪ ಹೊತ್ತಿನಲ್ಲೆ ಉಸಿರುನಿಂತು ಹೆಣವಾಗಿದ್ದ.

ಅದಾಗಿ ತಿಂಗಳು, ಎರಡು ತಿಂಗಳಿಗೆ ಬಾಳೇಶಿನಾಯ್ಕ, ರೂಪ್ಲನಾಯ್ಕ, ಜಿಂಗಾರಿ ನಾಯ್ಕ ಒಬ್ಬರಾದ ಮೇಲೆ ಒಬ್ಬರಂತೆ ಥಡ್ ಅಂದಿದ್ದರು. ಹರೆಯದ ವಯಸ್ಸಿನ ಅವರ ಹೆಂಡಂದಿರಿಗೆ ಕೆಟ್ಟ ಹೆಸರು "ಅಲ್ರಪ್ಪ ಈ ವಯಸ್ಸಿನೊಳಗೆ ಇವರು ಎಲ್ಲಿಗೆ ಹೋಗಬೇಕು ಅಂತೀನಿ. ಸಣ್ಣ ವಯಸ್ಸು, ಮಕ್ಕಳು ಅನ್ಯಾಯ ಮಾಡಿಬಿಟ್ರು" ಚಂಪನಾಯ್ಕ ಮರುಗಿದ್ದ. "ಅಲ್ಲ ನಾವು ಕುಡಿತೀವಿ, ನಮಗೂ ಚಟ ಐತೆ, ನಮಗೂ ತೊಂದರೆಗಳ ಅದಾವ, ಯಾರಿಗೆ ಸಮಸ್ಯೆ ಇಲ್ಲ? ಯಾರು ಸಂಪೂರ್ಣ ಮನುಷ್ಯ ಅದಾನಿಲ್ಲ?" ಚಂದಿಯಾನಾಯ್ಕ ಸತ್ತವರನ್ನೆಲ್ಲಾ ಸರ್ಫ್ ಹಾಕಿ ತೊಳೆಯತೊಡಗಿದ. "ಹೋಗಲಿ ಬಿಡು ಚಂದು ನಮ್ಮಂಗ ಉಪವಾಸ,

ವನವಾಸ ಬಿದ್ದು ಬಾಳು ಕಟ್ಟಿದ್ರ ಗೊತ್ತಾಗುತಿತ್ತು. ಬಾಳ ಕಟ್ಟೋದು ಆಟು ಹಡ್ಡಲ್ಲಪ್ಪ. ಒಮ್ಮೆ ಸೋಲು, ಒಮ್ಮೆ ಅವಮಾನ ಹೆಂಡತಿಗೆ ಖುದ್ದು ಹೆಳ್ತಾಳ ನೀ ಗಂಡಸ ಅಲ್ಲಾ ಅಂತ. ಇಪ್ಪತ್ತೈದು ವರ್ಷ, ಮೂವತ್ತೈದು ವರ್ಷ ಜೊತೆಗೆ ಬಾಳಿ ಬದುಕಿ, ಸ್ಥಿತಿ ಬಂದಿದಕ್ಕೆ ಮಾತನಾಡುತ್ತಾರೆ. ಇನ್ನೂ ಬೇರೆಯವರು ಹೇಳುವುದರಲ್ಲಿ ಹೆಚ್ಚುಗಾರಿಕೆ ಏನೂ ಇಲ್ಲ" ಅಂದ ಚಂಪನಾಯ್ಕ. ಇದ್ದಕ್ಕಿದ್ದಂತೆ, ಸರ್ಕಾರ ಹೆಂಡ ಮಾರಾಟ ಮಾಡುವುದನ್ನ ನಿಷೇಧ ಮಾಡಿ ಬಿಡ್ತು. ಬಹಳ ನೋವು, ದುಃಖ ಆಗಿದ್ದು ತಾಂಡದ ಹೆಂಗಸರಿಗೆ ಸೇಂದಿ ಬಹಳ ಕಡಿಮೆ ದರದಲ್ಲಿ ಮತ್ತೆ ಬಹಳ ಸುಲಭವಾಗಿ ಸಿಗತಿತ್ತು. ಈಗ ಒಂದೇ ಸರಾಯಿ ಅಂಗಡಿಯಾಗುವುದರಿಂದ ಗಂಡಸರೆ ತುಂಬಿಕೊಳ್ತಾರೆ. ಹೆಂಗಸರಿಗೆ ಒಳಗೆ ಹೋಗುವುದಕ್ಕೆ, ಖರೀದಿ ಮಾಡುವುದಕ್ಕೆ ಜಡ ಆಗಬಹುದು ಎನ್ನುವ ವಾದನೂ ಇತ್ತು. ತಾಂಡದ ಮಂದಿಗೆ, ಪೇಟೆ ಜನರಿಗೆ ಇರುವಂತೆ ರಕ್ತದೊತ್ತಡ, ಸಿಹಿಮೂತ್ರರೋಗಗಳ ಬಗ್ಗೆ ಮಾಹಿತಿ ಇರಲಿಲ್ಲ, ಏಕೆಂದರೆ ಅವರು ಹೊಲಮನಿಗಳಲ್ಲಿ ಸಂಪೂರ್ಣವಾಗಿ ತಮ್ಮ ಶಕ್ತಿಯನ್ನ ವ್ಯಯ ಮಾಡುತ್ತಿದ್ದರಿಂದ ಇಲ್ಲ ಅಂದುಕೊಂಡಿದ್ದರು. ಜಾನಿಬಾಯಿ ತನ್ನ ಹತ್ತುಮಂದಿ ಮಕ್ಕಳು ಹುಟ್ಟಿದಮೇಲೆ ಬಹುತೇಕರದ್ದು ಮದುವೆನೂ ಆದಮೇಲೆ ದೇಹ ದಪ್ಪವಾಗಿ, ಏಳಲು ಕೂರಲು ಕಷ್ಟ ಅನಿಸತೊಡಗಿತು. ಹೆಂಡ ಇರುವವರೆಗೆ ರಕ್ತದೊತ್ತಡ ಅಷ್ಟೇನು ಕೆಟ್ಟದಾಗಿ ಕಾಡಿರಲಿಲ್ಲಾ. ಹೆಂಡ ಹೋದಮೇಲೆ ಅಂಟಿದ ಚಟ, ನಿದ್ದೆಬಾರದ ದಿನಗಳು ಕಠಿಣವಾಗತೊಡಗಿದವು. ಆದ್ದದ್ದು ಆಗಲಿ ಶಿವ ಇದ್ದಾನೆ ಅಂತೇಳಿ, ಸರಾಯಿ ಸುರುಮಾಡಿದ್ದಳು. ಕಡೆಮನಿ ತಿಮ್ಮನಾಯ್ಕ ತಾಂಡದ ಪಂಚಾಯ್ತಿಯಲ್ಲಿ ಹರಾಜು ಕೂಗಾಕ ತಯಾರಾಗಿದ್ದ. ಮಂದಿ ಯಾರ ಸರಾಯಿ ಮಾರ್ತಾನ ಅವನು ದೇವಸ್ಥಾನಕ್ಕೆ ದುಡ್ಡ ಕೊಡಬೇಕು ಅಂತೇಳಿ ಕರಾರುಮಾಡಿ ಬೋಲಿ ಕೂಗಿಸಿದರು. ಆ ವರ್ಷ ಸುಮಾರು ಲಕ್ಷದವರೆಗೆ ಹರಾಜು ಆಗಿತ್ತು. ಆ ದುಡ್ಡನ್ನ ಹಿರಿಯರಾದ ರಾಂಜಿನಾಯ್ಕ, ಜುಮ್ಮಾಣಿನಾಯ್ಕ, ಹರಜಪ್ಪ ಮಾಸ್ತರ ನಡುವೆ ಪೈಪೋಟಿ ಆರಂಭವಾಯ್ತು. ಹಳೇದು ಗೂಳಿ ಹರಾಜಿನದ್ದ, ಪೇಟೆ ಬಸವಿ ಹರಾಜಿನದ್ದ, ನ್ಯಾಯ ಪಂಚಾಯ್ತಿಯಲ್ಲಿ ದಂಡ ಹಾಕಿದ್ದ ಅದು ಇದು ಅಂತ ದೈವದ್ದ ಸುಮಾರು ಆರೇಳು ಲಕ್ಷ ರೂಪಾಯಿ ಮೊತ್ತವನ್ನ ಹರಿಜಪ್ಪ ಮಾಸ್ತರ ಹತ್ರ ಬಡ್ಡಿ ಇಲ್ಲಾ ಬಾಚಿ ಇಲ್ಲದಂಗೆ ಕಟ್ಟಿಸಿದ್ದಾರೆ. ಅವನು ಬಡ್ಡಿ ಮೇಲೆ ಅದೆ ದುಡ್ಡನ್ನ ಕೊಟ್ಟ ದುಡ್ಡು ದುಡಿಯ ತೊಡಗಿದ್ದ. ಮಂದಿಗೆ ವಿಷಯ ಗೊತ್ತಾಗಿ "ಎಯ್ ದೈವದ ದುಡ್ಡು ಮಕ್ಕಳಿಲ್ಲದ ಬಂಜೆ ನನಮಗ ಹರಿಜಪ್ಪ ಮಾಸ್ತರ ಯಾವ ಮುಲಾಜು, ಅಂಜು ಅಳುಕಿಲ್ಲದೆ ರಾಜಾರೋಷವಾಗಿ ತನಗೆ ಬೇಕಾದಂತೆ ಮಾಡ್ತಾನೆ" ವಿರೋಧ ಬಂದಿತ್ತು. "ಯಾರು ಪಾಡದರಪ್ಪ ಈ ಜನರೊಳಗೆ, ಸಿಕ್ಕರೆ ಮನಿ ಖರ್ಚಿಗೆ ಬಿನಾ ಬಡ್ಡಿದು ಕಾಸು ಸಿಗುವುದಾದರೆ ಯಾರಿಗೆ ಬೇಡ? ನೀವು

ಎಲ್ಲರಿಗೂ ಬೇಡ ಅಂದರೆ ಆಗಲ್ಲ ಯಾರದಾದರೂ ಕೈಯಲ್ಲಿ ಕೊಡ್ರಿ" ಅಂತೇಳಿ ಜುಮ್ಮಾಣಿ ಹೇಳಿದ. "ದೈವ ಒಪ್ಪಿದರೆ ನನ್ನ ಹತ್ರ ಇರ್ಲಿ" ರಾಂಜಿನಾಯ್ಕ ಮುಂದೆ ಬಂದಿದ್ದ "ಅವನ ಹತ್ರ ಯಾಕೆ? ನಾನು ತಯಾರಿದ್ದಿನಿ. ನನ್ನ ತಾವ ದುಡ್ಡು ಬಿದ್ದಿರುತ್ತೆ. ಕೇಳಿದಾಗ ಬಂದು ತಗೊಂಡು ಹೋಗ್ರಿ" ಪಾಮಡಿ ಬಾಯಿ ಹಾಕಿದ. ವಾದ ವಿವಾದ ಆಗಿ ಕಡೀಗ ಮಾಸ್ತರನ ತಿಜೋರಿ ಸೇರಿತ್ತು ದುಡ್ಡು. ಮಾಸ್ತರನಿಗೆ ಎಲ್ಲಾ ಗೊತ್ತಿದ್ದರಿಂದ "ಹಾರಾಡ್ರಿ ಮಕ್ಕಳ್ರ" ಅಂತ ಸುಮ್ಮನೆ ನೋಡ್ತಾ ಕುಂತಿದ್ದ.

ಆದ್ರೆ ಸರಾಯಿ ಕುಡಿದು ರಕ್ತದೊತ್ತಡ ಹೆಚ್ಚಾಗಿ ಜಾನಾಬಾಯಿಗೆ ಪಾರ್ಶ್ವವಾಯು ಹೊಡೆದಿತ್ತು. ತಾಂಡದ ಮಂದಿಗೆ ಇದು ಸಾಮಾನ್ಯ ಎಂದು ತಿಳಿದಿದ್ದರೂ, ಇದರ ನರಕಯಾತನೆ ಬಗ್ಗೆ ಯಾರಿಗೂ ತಿಳಿಯದೆ ಸುಕಾಸುಮ್ಮನೆ ಬಲಿಯಾಗಿದ್ದರು. ಮಂದಿ ಆರೋಗ್ಯ ಹಾಳಾಗ್ತಿದೆ. ಸರಾಯಿ ಒಳ್ಳೆಯದಲ್ಲ ಅದನ್ನ ನಿಷೇಧಿಸಬೇಕು ಅಂತೇಳಿ ಸರ್ಕಾರ ಆಲೋಚನೆ ನಡೆಸಿದ್ದೆ ಒಂದುದಿನ ಸರಾಯಿಗೆ ಸಂಚಕಾರ ಬಂದಿತ್ತು.

ಕುಡಿಯುವವನಿಗೆ ಸರಾಯಿ ಇಲ್ಲದಿದ್ದರೇನು ಎಷ್ಟಾದರೂ ದುಡ್ಡಾಗಲಿ ಬ್ರಾಂದಿ ಹೊಡಿಯೋಣ ಅಂತ ಅದಕ್ಕೂ ಸಜ್ಜಾಗಿದ್ದರು. ಬ್ರಾಂದಿ ಅಂಗಡಿಯನ್ನ ಕಲ್ಲೂರನ ಹೆಂಡತಿ ಮುಲಾಜಿಬಾಯಿ ಎರಡುವರೆ ಲಕ್ಷಕ್ಕೆ ಹಿಡಿದಾಗ ಗಂಡಸರೆಲ್ಲಾ ತಲೆ ಮೇಲೆ ಟವೇಲು ಹಾಕಿಕೊಂಡು "ಎಂಥ ಧೈರ್ಯ ಮಾರಾಯ ಯಾವ ಗಂಡಸರು ಮುಂದೆ ಬರಲಿಲ್ಲ, ನೀರು ಕುಡಿದಂಗೆ ಒಮ್ಮೆಗೆ ಎರಡು ವರಿ ಲಕ್ಷ ರೂಪಾಯಿಗೆ ಅಂಗಡಿ ಒಪ್ಕೊ ಬೇಕಾರ ಲಾಭ ಎಷ್ಟಿರಬೇಡ? ಇರೋದಕ್ಕೆ ತಾನೆ ಮುಲಾಜಿಬಾಯಿ ಬೋಲಿ ಕೂಗಿದ್ದು ಪಂಚಾಯ್ತಿಯೊಳಗೆ ಅಡ್ವಾನ್ಸ್ ಇಟ್ಟಿದ್ದು" ಅಂಗಡಿ ತಮಗೆ ಸಿಗದಿದ್ದಕ್ಕೆ ಮಾಂಕಳು, ಮಂಜ್ಯಾ, ನಾಗನಾಯ್ಕ ಮಾತಾಡಿಕೊಳ್ಳ ತೊಡಗಿದರು. "ಎಂಥ ಕಾಲ ಬಂತ್ರಲೇ ಹೆಣ್ಣ ಮಕ್ಕಳು ಮನಿ ಬಿಟ್ಟು ಹೊರಗ ಬರೋದಂದ್ರೆ ದೊಡ್ಡ ಅನಾಹುತ ಅಂತ ನಂಬಿದ್ದ ಕಾಲ ಒಂದಿತ್ತು. ಮುಂದ ಬರ್ತಾ ಬರ್ತಾ ಗಂಡಸರ ಸಮಕ್ಕೆ ಬಂದು ಹೆಂಡದಂಗಡಿಗೆ ಬಂದು ಕುಡಿದರು, ಪರವಾಗಿಲ್ಲ. ಬ್ರಾಂದಿ ಟೈಮ್‌ನಾಗೆ ಅವರೆ ಹರಾಜಿನಲ್ಲಿ ಕೂಗ್ತಾರೆ. ಅಂದ್ರೆ ಕಾಲ ಎಷ್ಟು ಬದಲಾವಣೆಗೊಂಡಿದೆ ಅಂತ" ರಾಂಜಿನಾಯ್ಕ ತಾನು ಕಂಡುಂಡ ಅನುಭವ ಹಂಚಿಕೊಂಡಿದ್ದ. "ಮುಲಾಜಿ ಗಂಡ ಇಲ್ಲದ ಮುಂಡೆ ಆದರೂ ಮೂವರು ಚಿಕ್ಕ ಹೆಣ್ಣು ಹುಡುಗಿಯರನ್ನ ಸಾಕುವ ಜವಾಬ್ದಾರಿ ಇದ್ದಿದ್ದರಿಂದ, ಪಡ್ಡೆ ಹೈಕಳನ್ನ ಬುಟ್ಟಿಗೆ ಹಾಕೊಂಡಾಳ, ಆಕಿದೇನು ಬೇವರ್ಸಿ ಮುಂಡೇದು ಅಂತ ಮಾತಾಡಿದ್ರೆ. ಹೆಂಡತಿ ಹತ್ರ ಮಲಗಿ ತೃಪ್ತಿಗೊಳ್ಳದ ಆತ್ಮಗಳು ಮುಲಾಜಿಬಾಯಿ ಸುತ್ತ ತಿರುಗಾಡ್ತವೆ" ಅಂತೇಳಿ ಮತ್ತೊಂದಿಷ್ಟು ಮಂದಿ ಪ್ರಚಾರ ಮಾಡಿದ್ರು. ಇನ್ನೂ ಒಂದಿಷ್ಟ ಜನ, "ಏ ಅಕಿ ಯಾರೊ ಗಟ್ಟುಳ್ಳ

ಡಾಕ್ಟರ್‌ಗ ನೋಡಿಕೊಂಡಾಳ ಅವನೆ ಇಕೀದೆಲ್ಲಾ ಖರ್ಚು ನೋಡಿಕೊಳ್ತಾನ" ಅಂತಾನೂ ಮಾತಾಡುತ್ತಿದ್ದರು. ಅದೇನೆ ಇದ್ದರು ಅವಳ ವೈಯುತ್ತಿಕ ತೆವಲು ಆದರೂ, ತಾಂಡದೊಳಗೆ ಬ್ರಾಂದಿ ಅಂಗಡಿ ಇಟ್ಟು, ಸುಳ್ಳ, ತಾರತಿಗಡಿ, ದಗಲ್ಬಾಜಿ ಮಾಡೊ, ಶಂಬ, ಲಿಂಗಾನಂದ, ಗಬಡು, ಚಿಂಗು ಮುಂತಾದವರು, ತಾಯಿ, ಅಜ್ಜಿ, ಮಕ್ಕಳು ಮುಕ್ಕೋಟಿ ದೇವರನ್ನು ಬಿಡದಂತೆ ಆಣೆಮಾಡಿ ಕುಡಿದಾಗಿತ್ತು. ಆಣೆ ಮಾಡಕೆ ದೇವರಿಲ್ಲ ಉದ್ರಿ ಕೇಳಾಕ ಬಾಯಿ ಇಲ್ಲದಂಗಾಗಿ ಕೂಲಿ ಕೆಲಸಕ್ಕೆ ಹೋಗತೊಡಗಿದರು, ನೂರೈವತ್ತು ಕೂಲಿ ಮಾಡಿದ್ರೆ ಅರ್ಧ ಕ್ವಾರ್ಟರ್ ಕುಡಿದು ಮನೆ ಸೇರತೊಡಗಿದರು. ಸರಾಯಿ ಆಗಿದ್ರೆ ಹತ್ತು ರೂಪಾಯಿಗೆ ಒಂದು ಪಾಕೇಟು, ಮುಂದೆ ಇಪ್ಪತ್ತೈದು ರೂಪಾಯಿ ಆಗಿತ್ತು. ಆದರೆ ಬ್ರಾಂದಿ ಆರಂಭ ಆಗಿದೆ ನಲ್ವತ್ತು ರೂಪಾಯಿಯಿಂದ ಅರ್ಧ ಕ್ವಾರ್ಟರ್ ತಗೊಂಡ್ರೆ ನಲವತ್ತು, ಪೂರ ಬಾಟಲು ಎಂಬಂತು. ಮಂದಿ ಬ್ರಾಂದಿ ಅಂಗಡಿಗೆ ಹೋಗೋದಕ್ಕೆ ನೂರ ಸಲ ವಿಚಾರ ಮಾಡತೊಡಗಿದರು.

* * *

73. ನಾರ್‍ಯನಾಯ್ಕ ಸೊಸೆಯ ನೇಣಿನ ಪ್ರಸಂಗ

ನಾರ್‍ಯನಾಯ್ಕ ಹತ್ತು ಇಪ್ಪತ್ತು ಎಕ್ಕರೆ ಆಸ್ತಿವಂತ. ಐದು ಜನ ಮಕ್ಕಳಂದಿಗ ಮೂವರು ಹುಡುಗಿಯರನ್ನ ಮದುವೆ ಮಾಡಿಕೊಟ್ಟಿದ್ದ. ಒಬ್ಬ ಮಗ ಓದುತ್ತಿದ್ದರಿಂದ ಮನೆಕೆಲಸ, ಅಡಿಗಿ ಮಾಡಾಕ ಒಬ್ಬನ್ನ ಮದುವೆ ಮಾಡಿದ. ನಾರ್‍ಯ ಅಂತಹ ಏನು ಭಾರಿ ಗಂಡಸು ಅಲ್ಲದಿದ್ದರು ಹೊರಗ ಇಣಕುವ ಚಾಳಿ ಇತ್ತು ಅಂತ ಮಂದಿ ಮಾತಾಡುತ್ತಿದ್ದರು. ತಾಂಡಗಳಲ್ಲಿ ಒಮ್ಮೆ ದಾಖಲಾದರೆ ಮುಗಿತು ಅವನ ಬಗ್ಗೆ ಮಂದಿಗೆ ಎಲ್ಲಾನು ತಿಳಿದು ಬಿಡುತ್ತದೆ. ನಾರ್‍ಯನಾಯ್ಕ ಅವನ ಅಣ್ಣನ ಹೆಂಡತಿ ಕಾಮಿಬಾಯಿ ಜೊತೆಗೆ ಸಂಬಂಧ ಇಟ್ಕೊಂಡಿದ್ದ. ಅದು ಗೊತ್ತಾಗಿ ಕುಡದು ಕುಡುದು ಸತ್ತ ಅಂತ ಕೆಲವರು ಮಾತಾಡಿದರೆ, ಇನ್ನೂ ಕೆಲವರು ಇಲ್ಲ ನಾರ್‍ಯನಾಯ್ಕನೆ ಹೊಡದು ಕೊಂದ ಅಂತಿದ್ರು. ಮಂದಿ ಬಾಯಿಗೆ ಒಮ್ಮೆ ಆಹಾರ ಆದ್ರ ತಳ ಬುಡಾನೆಲ್ಲಾ ತಗದು ಬಿಡ್ತಾರ. ಸಿಗಬಾರದು ಸಿಕ್ರ ಮುಚ್ಕೊಂಡಿರಬೇಕು ಅನ್ನೋದು ತಾಂಡದವರ ಸಂಗತಿಯಾಗಿತ್ತು. ನಾರ್‍ಯ ಯಾರ ಕೈಗೂ ಸಿಗದೆ ಇದ್ರು ಮಂದಿಯಂತು ಮಾತಾಡಿಕೊಳ್ಳುತ್ತಿತ್ತು. ಅವನು ಹಂಗೆ ಅವನು ಹಿಂಗೆ ಅಂತಂದು. ನಾರ್‍ಯ ಮಾತ್ರ ಯಾವುದಕ್ಕೂ ತಲೆ ಕೆಡಿಸಿಕೊಳ್ಳಲಿಲ್ಲ ಅವನ ಹೆಂಡತಿಗೂ ಇದೇನು ಪರ್ಕ ಬೀಳಲಿಲ್ಲ.

ಚಿಕ್ಕ ಮಗ ಸಂತಾಳಿ ಹಠಮಾರಿ, ಅವನು ಹೇಳಿದ್ದೆ ಆಗಬೇಕು ಅವನು ಮಾಡೋದಕ್ಕೆ ಅವರಪ್ಪ ಒಪ್ಪಬೇಕು. ಅವನ ಮದುವೆ ಮಾಡಿ ಮನಿತನ ಉದ್ಧಾರ ಆದೀತು ಒಕ್ಕಲುತನ ಪಾಡು ಆದೀತು ಮಗ ಹೊಲ ಮನಿ ಅಂತಂದು ದುಡದಾನು ಆಶೆಯಿಂದ ಮದುವೆ ಮಾಡಿಸಿದ. ವರ್ಷಕ್ಕ ಒಂದರಂತೆ ಎರಡು ಮಕ್ಕಳೂ ಆದವು. ಆದರೆ ಆಮೇಲೆ ಸಂತಾಳಿಯ ನಿಜವಾದ ಆಟ ಸುರು ಆಗಿದ್ದವು. ಇದ್ದಕ್ಕಿದ್ದಂಗೆ ಯಾರದೊ ಹತ್ರ ನಮ್ಮಪ್ಪನ ಗ್ಯಾರಂಟಿ ಮೇಲೆ ಕೊಡ್ರಿ ಅಂತ ಸಾಲ ತಗೊಂಡು ಕುಡಿದು ಅಡ್ಡಾಡಿದ. "ಲೇ ನನ್ನ ಹೆಸರು ಹೇಳಿ ಸಾಲ ಹೆಂಗ ತಂದೆ" ನಾರ್‍ಯ ಕೇಳಿದ "ಇಲ್ಲ ನಿಮ್ಮಪ್ಪನ ಹೆಸರ ಹೇಳಬೇಕಿತ್ತ? ನನ್ನ ಹುಟ್ಟಿಸಿದವನು ನೀನು ನನ್ನ

ಪಾಲಿನ ಆಸ್ತಿ ಕೊಡು ಇಲ್ಲ ನಾ ಮಾಡಿದ ಸಾಲ ನನ್ನ ಆಸ್ತಿಯ ಪಾಲು ಸುಮ್ಮನೆ ತೀರಿಸು" ಅಂದ. ಕಡದ ಹತ್ರ ತುರಿಸಿಕೊಳ್ಳದಂತೆ ವಾಪಾಸು ಬಂದಿದ್ದ. ಸಾಲದಕ್ಕೆ ಬೇರೆ ಆಗಿ ಅಂಗಡಿ ಹಾಕ್ತಿನಿ ಅಂತ ಕುಂತ. "ಲೇ ಬೇವರ್ಸಿ ಹೊಲ ಮನಿ ಬೀಳ ಬಿದ್ದಾವ, ಕೆಲಸ ಮಾಡು, ಗಳೇಕ ಹೋಗು ದುಡಿ, ನಿನಗ, ನಿನ್ನ ಹೆಂಡತಿಗ, ನಿನ್ನ ಮಕ್ಕಳಿಗೆ ಕುಂದ್ರಿಸಿ ಉಣ್ಣಾಕ ಹಾಕಾಕ ಆಗಂಗಿಲ್ಲ ನೋಡು" ಅವನ ಅವ್ವ ಹೇಮ್ಲಿ ಬಾಯಿ ಬಿಟ್ಟು ಹೇಳಿದಳು. "ನಿನ್ನ ಕುಟಾಗೇನವ್ವ ಮಾತು, ನಿನಗ ಕಳಿಸ್ಯಾನಲ್ಲ ನಿನಗಂಡ ಕೈಲಾಗದವ ಅವನ್ನ ಕಳಸು ನಾನು ಮಾತಾಡ್ತೀನಿ. ನನ್ನ ಪಾಲು ನನಗ ಮರ್ಯಾದಿಯಿಂದ ಕೊಟ್ಟರೆ ನಾನು ಬೇರೆ ಮನಿ ಮಾಡಿಕೊಂಡು ನೆಮ್ಮದಿಯಿಂದ ಇರ್ತಿನಿ, ಇಲ್ಲಾ ಅಂಗಡಿಗೆ ಐವತ್ತು ಸಾವಿರ ರೊಕ್ಕ ಕೊಡ್ರಿ ಅಷ್ಟೆ" ಕಡಕ್ ಆಗಿಯೆ ಹೇಳಿದ. "ಏನು ಬೇಕಾದ್ದ ಮಾಡಾಕ ತಯಾರಿ ಅದಾನ ಈ ಮಗ" ಅಂದ್ಕೊಂಡವನೆ ಅಂಗಡಿಯೊಳಗೆ ಸಾಲಮಾಡಿ ಐವತ್ತು ಸಾವಿರ ಕೊಟ್ಟು ಅಂಗಡಿ ಏನೊ ಮಾಡಿದ, ತಿಂಗಳು ಎರಡು ತಿಂಗಳಲ್ಲಿ ಅಂಗಡಿ ಬಂದ್ ಆತು. ಮತ್ತೆ ಐವತ್ತು ಸಾವಿರ ಕೊಟ್ಟು ಬ್ರಾಂದಿ ಅಂಗಡಿ ಇಡುವ ಯೋಜನೆ ಸಲ್ಲಿಸಿದ.

ಈಗ ಅಪ್ಪ ಮಗ ಮುಖಾಮುಖಿ ಯಾದರು "ಲೇ ನೀ ಏನು ಅಂದ್ಕೊಂಡಿಯಾ? ಮದಲು ಹೇಳು, ನೋಡು ಹೊಲ ಹೊಡದು ಉತ್ತಿ, ಬಿತ್ತಿ ಬೆಳೆದರೆ ನನಗ ಸಿಗೋದು ಐದು ಹತ್ತು ಸಾವಿರ ಲಾಭ ನನಗ ಇರೊ ಇಪ್ಪತ್ತು ಎಕ್ಕರೆಯೊಳಗೆ ಅಬ್ಬಬ್ಬಾ ಅಂದ್ರೆ ಯಾವತ್ತೊ ನಲವತ್ತು ಸಾವಿರ ಬಂದೀತು. ಅದ್ರಾಗ ನೀನ ಹಿಂಗೆ ಸರ್ತಿಗೊಮ್ಮೆ ಬಾಯಿಗ ಬಂದಂಗೆ ಕೇಳಿದ್ರೆ ಎಲ್ಲಿಂದ ಕೊಡಾಕ ಆದೀತು. ಸುಮ್ಮನೆ ಬಂದು ಹೊಲಮನಿ ಕೆಲ್ಸ ಮಾಡು ಎರಡು ಹೊತ್ತು ಊಟ, ನಡುವೆ ಚಹ, ಬೀಡಿ ಏನೆಲ್ಲಾ ಬೇಕು ಅದನ್ನ ಕೊಡಿಸ್ತೀನಿ. ನನ ಮಾತ ಕೇಳು" ಅಂಗಲಾಚಿದ. "ನೋಡು, ನೀ ಪುರಾಣ ಓದಬೇಡಾ ತಾಂಡದಾಗ ಐದು ರೂಪಾಯಿ ಹತ್ತು ರೂಪಾಯಿಗೆ ಸಾಲ ಕೊಟ್ಟೆಯಲ್ಲ ಯಾವನಾದರೂ ಪ್ರಾಮಾಣಿಕವಾಗಿ ಅಸಲು ಬಡ್ಡಿ ಕೊಟ್ಟಾರ? ಮತ್ತೆ ಯಾಕೆ ಕೊಡ್ತಿ ಅವರಿಗೆ? ಅದರ ಬದಲು ಹುಟ್ಸಿದಿಯಾ ಮಗ ಅಂತ ನನ್ನ ದುಡಿಮೆಗೆ ದಾರಿ ಮಾಡಿಕೊಡು, ಬೇರೆ ಮಾತೆ ಇಲ್ಲ" ಮಾತುಗಳು ದೀರ್ಘಕ್ಕೆ ಹೋದವು. ಸಾಲಿಗೆ ಹೋಗಿದ್ದ ಅವನ ತಮ್ಮ ಚಿಂತಾಮಣಿ ಬಂದ. ಬಂದವನೆ ಅವನು ಮಾಡುತ್ತಿರುವ ಘನಂದಾರಿ ಕೆಲಸಗಳ ಜಾತಕವನ್ನೆ ತಗದು ದೊಡ್ಡ ರಾದ್ಧಾಂತ ಸೃಷ್ಟಿ ಮಾಡಿದ. ನಾರ್ಯನಾಯ್ಕ ಮತ್ತ ಚಿಂತಾಮಣಿ ಸೇರಿಕೊಂಡು ಸುಕಾಸುಮ್ಮನೆ ಜಗಳ ತಗದು ಸಂತಾಳಿಯನ್ನ ಹಣ್ಣುಗಾಯಿ ನೀರಗಾಯಿ ಮಾಡಿದರು. ಒಂದು ವಾರ ಮನೆಯಲ್ಲಿ ಮಲಗಿದ, ಒಂದು ವಾರ ದವಾಖಾನೆಗೆ ತೋರಿಸಿದ, ಮದಲೆ ಹರಮಾರಿ ಸಂತಾಳಿ ತನ್ನ ಹಳೆ ರಾಗವನ್ನೆ ಹಾಡಿದ.

ಸ್ವಂತ ಅಣ್ಣನ ಮೇಲೆ ಕೈ ಮಾಡಿದ್ದಕ್ಕೆ ಬೇಸರವಾಗಿತ್ತು. "ನೋಡು ಅವನು ನಿನಗೆ ಹುಟ್ಟಿರೋದು ಇದೊಂದು ಸಲ ಐವತ್ತು ಸಾವಿರ ಕೊಟ್ಟು ನೋಡು"

ಚಿಂತಾಮಣಿ ನಾರ್ಯನಾಯ್ಕನಿಗೆ ಹೇಳಿದ. "ಇಲ್ಲ ನಿನಗೆ ಅವನ ಚಾಳಿಗೊತ್ತಿಲ್ಲ.. ದುಡಿಯೋರು ನಾವು, ಖಾಲಿ ಪುಗ್ಸಟ್ಟೆ ಮಜಾ ಉಡಾಯಿಸೋದು ಅವನ? ನನ್ನ ದೌರ್ಬಲ್ಯನ ನೋಡಿಕೊಂಡಾನ ಅವನು. ಬೇಕಾದಾಗ ಬೇಕಾ ಬಿಟ್ಟಿಯಾಗಿ ನನ್ನನ್ನ ಭಾವನಾತ್ಮಕವಾಗಿ ಅತ್ಯಾಚಾರ ಮಾಡಿ ದುಡ್ಡು ಕೇಳ್ತಾನ. ಅವನ ಹೆಂಡತಿ ಮಕ್ಕಳನ್ನ ಢಾಳಿನಂತೆ ಬಳಸ್ತಾನ" ನಾರ್ಯನಾಯ್ಕ ಭಾವುಕನಾಗಿದ್ದ. "ಅಪ್ಪ ನಾ ಒಂದ ಮಾತು ಹೇಳಲ, ನೀನು ದುಡದಿರೋದು ಯಾರ ಸಲುವಾಗಿ ಹೇಳು? ನಾಕು ಮಂದಿ ಗಂಡ ಮಕ್ಕಳದಾರ ನಾಳೆ ಕಷ್ಟಾನೊ ಸುಖಾನೊ ಅವರಿಗೆ ಇರಲಿ ಅಂತತಾನೆ? ಈಗ ಅವನ ಕೆಲಸಕ್ಕೆ ಬಾರದ ನಿನ್ನ ಸಂಪತ್ತು ಸವಲತ್ತು ನಾಳೆ ಏನಕ್ಕೆ? ನೀನು ಸತ್ತ ಮೇಲೆ ನಿನ್ನ ಈ ಆಸ್ತಿ, ಸಂಪತ್ತು ಉಳಿಯುತ್ತೆ ಅನ್ನೋದು ಏನು ಗ್ಯಾರಂಟಿ? ನನಗೆ ಅವಶ್ಯಕತೆ ಇದೆ ಅಂದಾಗ ನಾನೆ ಮಾರ್ತಿನಿ ಒಂದು ಐದು ಎಕ್ಕರೆ ಹೊಲ, ಆಗ ನೀನೇನು ನೋಡಾಕ, ಕೇಳಾಕ ಬದುಕಿರುತ್ತಿಯಾ? ಇಲ್ಲ. ದೊಡ್ಡೋರು ಒಂದು ಗಾದೆ ಹೇಳ್ತಾರ ನೀ ಕೇಳಿದಿಯೊ ಇಲ್ಲವೊ ಗೊತ್ತಿಲ್ಲ, ಹಳ್ಳಿ ಹಾಳಾದ್ರೇನು, ದಿಲ್ಲಿ ಪಟ್ಟಣ ಆದ್ರೇನು?" ಚಿಂತಾಮಣಿ ಮಾರ್ಮಿಕವಾಗಿಯೆ ಹೇಳಿದ್ದ. ಆದರೆ ನಾರ್ಯನಾಯ್ಕನದ್ದು ಒಂಟಿ ಹಿಡತ ಹಳೆ ಕಾಲದ ಆಲೋಚನೆಗಳು, ಮಕ್ಕಳು ದುಡಿಬೇಕು. ಈಗ ಪರಿಸ್ಥಿತಿಯಂತೆ ಆಲೋಚನ ಮಾಡಬಾರದು, ದುಡಿಮೆ ಅಂದರೆ ಬರಿ ಹೊಲದಲ್ಲಿ ರಂಟೆ ಹೊಡಿ, ಕುಂಟೆ ಹೊಡಿ, ಎಡೆ ಹರಗು, ಕಳೆ ತಗಿ, ಬೆಳೆ ಬಂದಾಗ ಗುಬ್ಬಿ ಓಡಿಸು, ಮಧ್ಯಾಹ್ನದಿಂದ ಎತ್ತು ಮೇಯಿಸು. ಏಕತಾನತೆಯ ಉದ್ಯೋಗ. ಹೊಸ ತಲೆಮಾರಿನ ಹುಡುಗರು ಈ ಏಕತಾನತೆಯಿಂದ ಹೊರಗೆ ಬರೋದಕ್ಕೆ ನರಳಾಡ್ತಿದ್ದಾರೆ ಆದ್ರೆ ಯಾವ ತಂದೆ ತಾಯಿನೂ ಅವರಿಗೆ ಅವಕಾಶ ಕೊಡೋದಕ್ಕೆ ತಯಾರಿಲ್ಲ. ಅದೇ ಆಲೋಚನೆ ನಾರ್ಯಂದು ಕೂಡ. ಅವರಿಬ್ಬರಿಗೆ ಬಡ್ಡಿಲೆ ಕಾಸು ಕೊಟ್ಟು ನಾಕು ಕಾಸು ಮಾಡಿಕೊಂಡಿದ್ದಾನೆ. ಆದರೆ ಕೈ ಬಿಟ್ಟ ಕೊಡಬೇಕೆಂದರೆ ಮನಸ್ಸು ಒಪ್ಪಲ್ಲ. ಧೈರ್ಯ ಸಾಲಲ್ಲ ಅಲ್ಲಾ ಹಾಕಿದ ದುಡ್ಡು ವಾಪಾಸು ಬರದಿದ್ದರೆ? ಅಕಸ್ಮಾತ್ ಅದರ ಹೆಸರಲ್ಲಿ ಇವನೆ ಕುಡಿದು ತಿಂದು ಮಜಾ ಮಾಡಿದ್ರೆ? ಈ ಅರೆಗಳು ಅವನನ್ನ ಕಾಡತೊಡಗಿದವು. ಹಾಗಾಗಿಯೆ ದುಡ್ಡು ಬಿಚ್ಚಲು ಸಾವಿರ ಸಲ ಆಲೋಚನೆ ಮಾಡುತ್ತಿದ್ದ. ಅಂಗಡಿ ಇಟ್ಟವರು, ಬ್ರಾಂದಿ ಅಂಗಡಿ ಹರಾಜಿಗೆ ಮಾಡಿಕೊಂಡವರನ್ನ ಬಹಳ ಮಂದಿಯನ್ನ ಅವನು ನೋಡಿದ್ದ. ಅನುಭವಿಸಿದ್ದ. ನಾಕೆ ದಿನ, ದೀಪಾವಳಿ, ದಸರಾದ ಒಳ್ಳೆ ದಿನದಲ್ಲಿ ಅಂಗಡಿ ಏನೊ ತಾಂಡದಲ್ಲಿ ಆರಂಭಗೊಳ್ಳುತ್ತಿತ್ತು. ಬೇರೆ ಅಂಗಡಿಗಳಲ್ಲಿನ ಗಿರಾಕಿಗಳು ಹೊಸ ಅಂಗಡಿ ಇವನದ್ದು ರುಚಿ ನೋಡೆ ಬಿಡಮ ನಡಿರಲೆ ಅಂತ ಹುರುಪಿನಿಂದ ಬಂದು ನಾಕು ದಿನ ತಿಂದಂಗೆ ಮಾಡಿ ಮೆಲ್ಲಕ ಲೇ ತಮ್ಮ ನಂದು ಐದು ರೂಪಾಯಿ, ಉದ್ರಿ ಬರ್ಕೊ ನಾಳೆ ಕೊಟ್ಟಬಿಡ್ತಿನಿ ಅಂತ ಆರಂಭವಾಗಿ ನೂರಿನ್ನೂರು ಆಗ್ತಿದ್ದಂಗೆ ಈ ಅಂಗಡಿ ಬಿಟ್ಟು ಏನಾರು ಖ್ಯಾತೆ ತಗದು, "ಲೇ ನಿಂದ ಒಂದೇ ಏನು ಚಾದಂಗಡಿ,

ಬಿಡು ಕೊಡ್ತಿನಿ," ಅಂತ ಮೆಲ್ಲಗೆ ಹಳೆ ಗಂಡನ ಪಾದನೆ ಗತಿ ಎನ್ನುವಂತೆ ಸಿದಾ ಹಳೆ ಅಂಗಡಿ ಕಡೆಗೆ ಪಯಣ ಬೆಳಸುತ್ತಿದ್ದರು. ಇದೆಲ್ಲಾ ಸತ್ಯ ನಾರ್‍ಯನಾಯ್ಕನಿಗೆ ಕರಗತವಾಗಿತ್ತು. ಅವನೆ ಖುದ್ದಾಗಿ ಎಷ್ಟೊ ಅಂಗಡಿಯವರಿಗೆ ಹೀಗ ಟೋಪಿ ಹಾಕಿದ್ದ. ಇವನ ಕೈಯಿಂದ ಮೋಸ ಮಾಡಿಸಿಕೊಂಡವರು ಸುಮ್ಮನಿರ್ತಾರ "ಬಾ ಮಗನ ನಿಮ್ಮಪ್ಪ ನನ್ನ ಹತ್ರ ಇನ್ನೂರು ಸಾಲ ಮಾಡಿದ್ದ. ಈಗ ನಾನು ಸಾಲಮಾಡಿ ಚುಕ್ತ ಮಾಡ್ತೀನಿ" ಅಂದುಕೊಳ್ಳುವವರೆ ಒಂದು ಹತ್ತುಮಂದಿ ಇರಬಹುದು. ಈ ತಿಕ್ಕಾಟದಲ್ಲಿ ಅವನು ಕಾಸು ಕೊಡಲು ತಯಾರಾಗಲಿಲ್ಲ.

ಸಂತಾಳಿಯ ಜಗಳ ಜೋರಾಯಿತು. ಏಕವಚನದಲ್ಲಿ ಮಾತಾಡುವುದನ್ನ ಆರಂಭಮಾಡಿದ "ಲೇ ನಾರ್‍ಯ ಮಗನೆ ನಂದ ನನಗ ಕೊಡಲೆ." ಕುಡದು ನಿಲ್ಲಾಕ ಆಗದೆ ಸಂತಾಳಿ ಅವನ ಮೈಮೇಲೆ ಬಿದ್ದ. ನಾರ್‍ಯನಾಯ್ಕ ಅವನ ಸಾವಾಸ ಬೇಡ ಅಂತ ದೂರ ಹೋಗಿ ಕುಂತ. ಸಂತಾಳಿ ಹೆಂಡತಿ, ಅವನ ತಾಯಿ "ಲೇ ಸಂತಾಳಿ ಹಿಂಗ್ಯಾಕ ಮನಿ ಮರ್ಯಾದಿ ತಗಿತಿಯೋ ನಿಮ್ಮಪ್ಪಗೆ ಊರಾಗ ಒಂದ ಮರ್ಯಾದೆ ಐತೆ. ನೀ ಎಂಥ ಮಗ ಹುಟ್ಟಿದಿಯೊ" ಅಂತ ಬಾಯಾನ ಮಾತು ಬಾಯಿಯೊಳಗೆ ಇತ್ತು ಜಾಡಿಸಿ ಎದೆಗೆ ಒದ್ದುಬಿಟ್ಟ ಸಂತಾಳಿ "ನಿಮ್ಮವ್ವನ ಬೇವರ್ಸಿ ಮುಂಡೆ, ಬರಿ ನಾಟಕ ಮಾಡ್ತಿ, ಮರ್ಯಾದಿ ಇರೋರು ತಗದು ಬಿಸಾಕಬೇಕು" ಅಂತ ದಡ್ ಅಂತ ಕಟ್ಟೆಗೆಯಲ್ಲಿ ಬಿದ್ದ. ಆ ಕಡೆಗೆ ಅವನ ತಾಯಿ ಮೂರ್ಛೆ ಹೋದಳು. ಕಿರಿ ಕಿರಿ ಸಹಿಸೋದಕ್ಕೆ ಸಾಕು ಸಾಕಾಗಿ ನಾರ್‍ಯ ದಪ್ಪ ಕಟ್ಟಿಗೆಯೊಂದ ಹಿಡಿದು ಮುಂದೇನು ಆಗಬಹುದು ಅನ್ನೊ ಆಲೋಚನೆ ಕೂಡ ಮಾಡದೆ ಸ್ವಂತ ಮಗನ ತಲೆಗೆ ಬಲವಾಗಿ ಹೊಡೆದ. ಮೊದಲೆ ಕುಡಿದ ನಷೆ ನಿಷ್ಕ್ರಿಯಗೊಂಡಿದ್ದ ಮೆದಳು ನಿಂತು ಹೋಯಿತು. ಹೆಂಗೊ ಸುಧಾರಿಸಿಕೊಂಡು ಎದ್ದ ಅವನ ಹೆಂಡತಿ ಮಗ ರಕ್ತದ ನಡುವೆ ಬಿದ್ದಿರುವುದನ್ನ ನೋಡಿ "ಅಯ್ಯೋ ಪಾಪಿ ನನ ಮಗನ್ನ ಸಾಯಿಸಿಬಿಟ್ಟೆ ಅಲ್ಲೊ" ಅಂತ ಚೀರಾಡಿ ಅಳತೊಡಗಿದಳು. ಸಂತಾಳಿ ಹೆಂಡತಿ, ಮಕ್ಕಳ ಗೋಳು ನೋಡತೀರದು. ಅಕ್ಕಪಕ್ಕದವರೆಲ್ಲಾ ಸೇರಿದರು.

ಸುದ್ದಿ ಪೊಲೀಸರಿಗೆ ಹೋಗಲಿಲ್ಲ, ಏನೋ ಒಂದಿಷ್ಟು ಕಾಸು ಕೊಟ್ಟು ಸರಿಮಾಡಿಕೊಂಡ. ಮಗ ಸತ್ತು ವರ್ಷ ಆಯ್ತು, ಜೀವನ ಮಾಮೂಲಿಯಾಗೆ ನಡಿಯುತಿತ್ತು. ಆದರೆ ಅದು ಹಾಗೆ ಇರಲ್ಲ ಸಂತಾಳಿಯ ಇಬ್ಬರು ಮಕ್ಕಳು ಅನಾಥರಾಗುವುದನ್ನ ನಾರ್‍ಯ ತಪ್ಪಿಸಬಹುದಾಗಿತ್ತು. ಸಂತಾಳಿಯ ನಂತರ ಅವನ ಹೆಂಡತಿಯನ್ನ ಚೆನ್ನಾಗಿ ನೋಡಿಕೊಳ್ಳುವ ಜವಾಬ್ದಾರಿ ಚಿಂತಾಮಣಿಯದಾಗಿತ್ತು. ಅಣ್ಣನ ಹೆಂಡತಿ ಅಷ್ಟೆ ಅಲ್ಲಾ ಸ್ವಂತ ಸೋದರಮಾವನ ಮಗಳು ಆಗಿದ್ದರಿಂದ ಅವಳಿಗೆ ಗಂಡನ ಚಿಂತೆ ಬರದಿರಲಿ ಅಂತ ಸಲುಗೆಯಿಂದ ವರ್ತಿಸುತ್ತಿದ್ದ. ಮುದಿಯ ನಾರ್‍ಯನಿಗೆ ಅದು ಸಹಿಸೋದಕ್ಕೆ ಆಗಲಿಲ್ಲ. ಒಂದುದಿನ ಹೊಲಕ್ಕೆ

ಕೆಲಸಕ್ಕೆ ಅಂತ ಕರೆದುಕೊಂಡು ಹೋಗಿ ಬಲಾತ್ಕಾರ ಮಾಡಿದ್ದ. "ನನ್ನ ಜೊತೆ ಚೆನ್ನಾಗಿದ್ರೆ ಆಸ್ತಿ ನಿನಗೆ ಕೊಡ್ತಿನಿ" ಅಂದಿದ್ದ. ಗಂಡನ ಬಿಟ್ಟು ಪರಪುರುಷರ ಉಸಿರು ತಾಗಿಸಿಕೊಳ್ಳದ ಸಂತಾಳಿ ಹೆಂಡತಿ ಮರುದಿನ ಹೆಣವಾಗಿದ್ದಳು. ತಾಂಡದ ತುಂಬ ಪುಕಾರುಗಳು, ಗುಲ್ಲುಗಳು ಎದ್ದವು. ಯಾರ ಬಾಯಿಯನ್ನ ಯಾರು ಮುಚ್ಚೋದಕ್ಕೆ ಸಾದ್ಯವಾದೀತು. ಒಸಿಮಂದಿ ಚಿಂತಾಮಣಿದೆ ಕೆಲಸ ಅಂದುಕೊಂಡು ಅವರಿಬ್ಬರ ಅನೈತಿಕ ಸಂಬಂಧದ ಬಗ್ಗೆ ದಿನಗಟ್ಟಲೆ ಮಾತಾಡಿದರೆ ಮತ್ತೆ ಕೆಲವರು ಮುದಿಯ ನಾರ್‍ಯನಾಯ್ಕ ಬಲಾತ್ಕಾರ ಮಾಡಿದ್ದ ಅನ್ನೋದನ್ನು ಸಮರ್ಥಿಸುತ್ತಿದ್ದರು. ನಾರ್‍ಯನಾಯ್ಕನ ನೀಚವರ್ತನೆಯಿಂದ ಘಾಸಿಗೊಂಡಿದ್ದ ಇಪ್ಪತ್ತೆರಡರ ಹರೆಯದ ಹುಡುಗಿ, ಎರಡು ಮಕ್ಕಳ ತಾಯಿ ಸಂತಾಳಿಯ ಹೆಂಡತಿ ರಾತ್ರಿ ಮನೆಯ ತೊಲೆಗೆ ಹಗ್ಗ ಬಿಗಿದು ನೇಣಿಗೆ ಶರಣಾಗಿದ್ದಳು.

ಎರಡು ಚಿಕ್ಕ ಮಕ್ಕಳು ಒಮ್ಮೆ "ಅಮ್ಮ" ಅಂತಲೂ, ಒಮ್ಮೆ "ಅಪ್ಪ" ಅಂತ ಕರಳು ಕಿತ್ತು ಬರುವಂತೆ ಅಳುವುದನ್ನ ಕಂಡ ಹುಲಿಯೂರ "ಥತ್ ಇವನವ್ವನ ವಿಧಿ ಯಾಕೆ ಹಿಂಗೆ ಮುಗ್ಧ ಮಕ್ಕಳ ಜೀವನದಲ್ಲಿ ಆಟ ಆಡುತ್ತೆ?" ಯೋಚಿಸಿದ. ಅಲ್ಲಾ ಸಂತಾಳಿ ಹೆಂಡತಿ ಬದುಕಬಹುದಾಗಿತ್ತು. ತನ್ನೆರಡು ಮಕ್ಕಳನ್ನ ಕರ್‍ಕೊಂಡು ತೌರಿಗೆ ಹೋಗಿ ನೆಮ್ಮದಿಯಿಂದ ಇರಬಹುದಿತ್ತು. ಹುಚ್ಚು ಹುಡುಗಿ ಯಾಕಿಂಗ ಮಾಡಿಕೊಂಡಳು. ಬಹಳ ಹೊತ್ತಿನವರೆಗೆ ಅವನ ಮನಸ್ಸು ಅಲ್ಲೋಲಕಲ್ಲೋಲಗೊಂಡಿತ್ತು. ಭಾವನೆಗಳು ತಿಳಿಯಾಗಲು ಬಹಳದಿನಗಳು ಬೇಕಾದವು. ಸಂತಾಳಿ ಚಿಕ್ಕವನಿದ್ದಾಗಿನಿಂದ ಅವನಿಗೆ ಗೊತ್ತು. ಅವನು ಓದಲು ತಾಂಡ ಬಿಟ್ಟು ಬಹಳ ದಿನಗಳೆ ಆದರೂ ಬಂದಾಗ ಒಮ್ಮೆ "ಏನಣ್ಣ ಹುಲಿಯೂರಣ್ಣ ಚೆನ್ನಾಗಿದ್ದಿಯಾ" ಅಂತ ಬಾಯಿತುಂಬ ಮಾತಾಡಿಸುತ್ತಿದ್ದ. ಹುಡುಗ ನಿನ್ನೆ ಮನೆಯವನು ಇಷ್ಟು ಬೇಗನೆ ಬದುಕ ಪಯಣ ಮುಗಿಸಿ ಹೋಗಿ ಬಿಟ್ಟನೆ? ಅನ್ನೋದೆ ಒಂದು ಯಕ್ಷಪ್ರಶ್ನೆಯಾಗಿತ್ತು. ಆದರೂ ಸತ್ಯವನ್ನ ಅರಗಿಸಿಕೊಳ್ಳಲೆಬೇಕಲ್ಲ. ಈ ಘಟನೆಯಿಂದ ನಾರ್‍ಯ ಕಿಂಚಿತ್ತು ವಿಚಲಿತನಾಗಿರಲಿಲ್ಲ. ಅವನ ಹೆಂಡತಿ ಮಾತ್ರ ಮಗ, ಸೊಸೆಯನ್ನ ನೆನಪಿಸಿಕೊಂಡು ಅಳುತ್ತಿದ್ದಳು. ತಾಂಡದ ಮಂದಿಗೆ ಮಾತ್ರ ನಡೆದ ಘಟನೆಗಳ ಕಿಂಚಿತ್ತು ಮಾಹಿತಿ ಸಿಗದೆ ಅವರವರ ಮನೆಯಲ್ಲಿ ಏನೇನೊ ಬಾಯಿಗೆ ಬಂದಂತೆ ಮಾತಾಡಿಕೊಳ್ಳತೊಡಗಿದ್ದರು.

* * *

74. ಕಳ್ಳರ ಬಂಗಾರ ಹಿತ್ತಾಳೆಯಾದದ್ದು

ಭದ್ರಾನಾಯ್ಕನ ತಾಂಡದ ಸುತ್ತಲ ಹಳ್ಳಿಗಳಲ್ಲಿ ಅನೇಕ ಊಹಾಪೋಹಗಳಿದ್ದವು. ಅವುಗಳಲ್ಲಿ ಚಾಲಾಕಿ ಕಳ್ಳರು, ಧರೋಡೆಕೋರರು ಅಂತ. ದೂರಹೋಗಿ ಮನೆಗಳಲ್ಲಿ ಕನ್ನ ಹಾಕಿ ದೋಚಿಕೊಂಡು ಬಂದ ಬಂಗಾರವನ್ನಗೌಪ್ಯವಾಗಿ ಹಳ್ಳಿಮಂದಿಗೆ ಅಗ್ಗದ ದರದಲ್ಲಿ ಕೊಟ್ಟು ಹೋಗ್ತಾರೆ ಅನ್ನೋದು ಜಗಜ್ಜಾಹಿರಾತು ಆಗಿತ್ತು. "ಆ ಕಸಲವಾಡೆ ಗೌಡರ ಲಕ್ಕಪ್ಪಗೆ ಒಂದ ಮಣ ಬಂಗಾರ ಕೊಟ್ಟವರಂತೆ" ಒಬ್ಬ ಹೇಳಿದರೆ ಮತ್ತೊಬ್ಬ "ಅಷ್ಟುದೂರ ಹೋದೆ ನೀನು, ಮನ್ನೆ ಮನ್ನೆ ಇಲ್ಲೆ ತಾಂಡದ ಪಕ್ಕದ ಜಂಬಣ್ಣನಹಳ್ಳಿಯ ತಿಮ್ಮಪ್ಪಗೆ ಐದು ಕೆ.ಜಿ. ಬಂಗಾರ ಮಾರಿದ್ದಾರೆ ಅಂತ ಸುದ್ದಿ." ಅಂತ ಯಾರೊ ಹೇಳಿದ. "ಅದೇ ಆ ಮೂಲಿಮನಿ ಡಿಳ್ಳಿ ಅದಾನಲ್ಲ ಅವನಿಗೆ ನಿನ್ನೆ ಒಂದುವರೆ ಕೆ.ಜಿ. ಬಂಗಾರ ಕೊಟ್ಟು ಹೋಗ್ಯಾರಂತೆ" ಮತ್ಯಾರೊ ಹೇಳಿದ. ಬಂಗಾರ ನೋಡಿದವರಾಗಲಿ ಅದನ್ನ ಪ್ರಮಾಣಿಕರಿಸಿದವರು ಯಾರು ಇಲ್ಲ. ಆದರೆ ಕೆ.ಜಿ.ಗಟ್ಟಲೆ ಚಿನ್ನದ ಸುದ್ದಿಗಳು ಹೆಂಗಸರ ನಡುವೆ, ಗಂಡಸರ ನಡುವೆ ನಡೆಯುತ್ತಿದ್ದದಂತು ಸತ್ಯ. ಹೆಂಗಸರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ "ಅಲ್ಲೆ ಯಕ್ಕ, ಈ ಎರಡು ಕೆ.ಜಿ. ಬಂಗಾರದಾಗ ಏನೇನು ಇರಬಹುದು" ಅಂದ್ಲು ಒಬ್ಬಾಕಿ. "ಇನ್ನೇನು ಇರತೈತಿ ಸೊಂಟದ ಡಾಬು, ರಟ್ಟೆಬಳಿ, ಜುಂಕಿ, ಬೆಂಡೋಲೆ, ಮುಕ್ರ ಕಿವಿ ತೊಡೇವ, ಅವಲಕ್ಕಿ ಸರ, ವಂಕಿ ಉಂಗ್ರ ಇನ್ನೇನಾರು ಇದ್ದಾವು" ಅಕೀಗ ತಿಳಿದಿದ್ದನ್ನ ಉಸುರಿದಳು. ಗಂಡಸರ ನಡುವೆ ಚರ್ಚೆ ಬಂದಾಗ "ಇನ್ನೇನು ಇರುತಪ್ಪ ಒಂದು ಎಳೆ ಹಗ್ಗದ ಚೈನ ಸರ, ಉಂಗರಗಳು, ಕಿವಿಯೋಲೆಗಳು, ಡಾಬುಪಾಬು ಇದ್ದಾವು ಬಿಡಲೆ" ಅಂದು ಸುಮ್ಮನಾಗಿದ್ರು. ಆದರೆ ಹೆಣ್ಣುಮಕ್ಕಳು ಬಂಗಾರ ಅಂದ್ರೆ ಪ್ರಾಣವನ್ನೆ ಬಿಡೊ ಹೊತ್ನಾಗ ಸದರಿ ಸುದ್ದಿ ಹಬ್ಬಿದ್ದರಿಂದ ಮೂಲೆಮೂಲೆಯಲ್ಲಿ ಅವೆ ಚರ್ಚೆಗಳು. ಹುಲಿಯೂರನಿಗೆ ಚಿಕ್ಕವನಿರುವಾಗಿನಿಂದಲೂ ಕೊರಚರ ಹಟ್ಟಿ ಅಂದ್ರೆ ಇಲ್ಲದ ಭಯ ಅವನಜ್ಜನ ಊರಿಗೆ ಹೋಗುವಾಗ ಎಂಟು ಮೈಲಿ ದೂರ ಕಾಲ್ನಡಿಗೆಯಿಂದಲೆ ಹೋಗಬೇಕು. ಪ್ರತಿಸಲ ಸಾಯಂಕಾಲನೆ ಆಗಿ ಬಿಡುತ್ತಿತ್ತು.

ಕುರಚಲ ಕಾಡು, ಹಳ್ಳ ಬಂದು ಹೊಡದಾರು, ಹತ್ರ ಇದ್ದಿದ್ದೆನನ್ನುದು ಕಸ್ಕೊಂಡಾರು ಅನ್ನುವ ಭಯವಿತ್ತು.

ಅಷ್ಟೆ ಅಲ್ಲಾ ಆ ವರ್ಷ ಅವರ ಹೊಲಗಳಲ್ಲಿ ತಗರಿ ಅಕ್ಕಡಿ ಹಾಕಿದವನದ್ದು ಅದೃಷ್ಟವೊ ಅದೃಷ್ಟ. ಹುಲಿಯೂರನ ತಂದೆ ತೊಪುನಾಯ್ಕ ಹತ್ತು ಚೀಲ ತಗರಿ ಬೆಳೆದಿದ್ದ ಎಂಟು ಚೀಲ ತಗರಿ ದಾವಣಗೇರಿ ಮಾರ್ಕೆಟಿನಲ್ಲಿಮಾರಿಯೂ ಬಂದಿದ್ದ. ಎರಡು ಚೀಲ ತಗರಿಯನ್ನ ನೆನೆಹಾಕಿ ಕೆಮ್ಮಣ್ಣು ಮಾಡಿ ಚೆನ್ನಾಗಿ ಕಲಿಸಿ ಒಣಗಿಸಿ ಚೀಲ ತುಂಬಿ ಇಟ್ಟಿದ್ದು ಒಂದು ರಾತ್ರಿ ಮನಿಮಂದಿ ಬೇಸಿಗೆ ಸೆಕೆ ತಡಿಯಾಕ ಆಗದೆ ಆಟವಾಳಿಗೆಯಲ್ಲಿ ಮಲಗಿರುವಾಗ, ಕಳ್ಳ ಒಳಗೆ ನುಗ್ಗಿ ಉಳದಿದ್ದು ಪಳದಿದ್ದು ಉಂಡು ಕಣ್ಣಿಸರು ತಗದು ಇದ್ದಬದ್ದನ್ನ ಹುಡುಕಾಡುವಾಗ ತೊಪುನಾಯ್ಕ ಹಣ ಅಷ್ಟು ಸುಲಭವಾಗಿ ಸಿಗಾಕ ಸಾಧ್ಯವೆ ಇಲ್ಲ. ಕಳ್ಳರಿಗೂ ಊಹೆ ಮಾಡಾಕ ಸಾಧ್ಯವಿಲ್ಲ, ಅಂತಹ ಜಾಗದಾಗ ಕೈಯಾಗಿದ್ದ ಸಾವಿರ ಎರಡು ಸಾವಿರವನ್ನ ಅವಿಚಿಡುತ್ತಿದ್ದ. ಹಾಗಾಗಿ ಕಳ್ಳರು ಹುಡುಕಿದ್ದರೆ ಏನೂ ಸಿಗದಕ್ಕೆ ತೊಗರಿ ಚೀಲವನ್ನೆ ಎತ್ಕೊಂಡು ಪರಾರಿಯಾಗುವಾಗ, ಯಾರಿಗೊ ಎಚ್ಚರವಾಗಿ ಗಂಡುಮಕ್ಕಳು, ಹೆಣ್ಣು ಮಕ್ಕಳು ಎದ್ದು ಕಳ್ಳ, ಕಳ್ಳ ಅಂತ ಕೂಗಿಕೊಂಡು ಅರಚಾಡಿ ಬೆನ್ನು ಹತ್ತಿದ್ದಾರೆ. ಎಲ್ಲಾ ತಯಾರಿಯಲ್ಲಿ ಬರುವ ಕಳ್ಳರು ಅಷ್ಟು ಸುಲಭವಾಗಿ ಕೈಗೆ ಸಿಕ್ಕಾರೆ? ಎದುಸಿರ ಬಿಡುತ್ತ ಅವರ ಧೈರ್ಯ ತಾಕತ್ತಿನ ಬಗ್ಗೆ ಮಾತಾಡಿಕೊಳ್ತಾ ವಾಪಾಸು ಬಂದಿದ್ದರು ಅಂತಹ ನಿಸ್ಸೀಮ ಕಳ್ಳರು.

ಬರಿ ಕಳ್ಳತನ ಒಂದೇ ಅವರ ವೃತ್ತಿಯಲ್ಲ, ಮೋಸ ಮಾಡುವುದು ಅವರ ಪ್ರವೃತ್ತಿ. ಸುಮ್ಮನಿರುವವರು ಅವರ ಬಣ್ಣ, ಗಿಲೀಟ್ ಮಾತಿಗೆ ಹಂಗೆ ಮಳ್ಳಾಗಬೇಕು. "ಅಯ್ಯಾ ಯಕ್ಕ ಏನಂದ್ಕೊಂಡಿಯಾ ಹಾಂ! ದ ಇದು ಟ್ವಂಟಿಫೋರ್ ಕ್ಯಾರೇಟ್ ಗೋಲ್ಡು. ಬೇಕಿದ್ರೆ ತಗೊ ಬ್ಯಾಡಿದ್ರೆ ಕೊಡು ಮುಂದ ಮಂದಿ ಕಾಯಾಕ ಹತ್ಯಾರ" ಅಂದ್ರೆ ಹೆಣ್ಣು ಮಕ್ಕಳಿಗೆ ಇನ್ನೂ ವಿಶ್ವಾಸ ಬರುತ್ತದೆ ಅನ್ನುವ ವಿಷಯ ಕಳ್ಳರಿಗೆ ಗೊತ್ತಿದೆ. ಹುಲಿಯೂರನ ಹಿರಿ ಅಣ್ಣ ಜಾತು ನ ಹೆಂಡತಿ ಸಾಕಿಬಾಯಿ ಮಹಾ ಆಶೆಬುರುಕಿ, ಅಷ್ಟೆ ಅಲ್ಲ, ಗಂಡನಿಗೆ ದಿಕ್ಕು ತಪ್ಪಿಸಿ "ಎಷ್ಟು ದಿನ ಅಂತ ನಿಮ್ಮವ್ವ ಅಪ್ಪನ ಸಲುವಾಗಿ, ಈ ತಿಕ ತೊಳಿಯಾಕ ಬರದ ತಮ್ಮಂದಿರು ತಂಗಿಯಂದಿರ ಸಲುವಾಗಿ ದುಡದೀಯಾ? ನಾಳೆ ನಿನಗೂ ಮಕ್ಕಳಂತ ಆಗ್ತಾವ, ನಿನಗೂ ಜವಾಬ್ದಾರಿ ಬರತೈತಿ. ಆಗ ಏನ್ಮಾಡಿಯಾ? ಬೊಗಳು, ಅದಕ್ಕೆ ನಾ ಹೇಳೋದು ಮನಗಂಡು ಜೋಳ, ರಾಗಿ, ನವಣಿ, ಸಜ್ಜಿ, ಅಕ್ಕಡಿಕಾಳು, ಮೆಣಸಿನ ಕಾಯಿ ಬೆಳಿಯಾಕ ಹತ್ತೈತಿ. ನೀ ಏನು ಮಾಡಬೇಕು ಅಂದ್ರೆ ಕಣದಾಗ ರಾಶಿಮೇಲೆನೆ ಒಂದ ಚೀಲ, ಎರಡ ಚೀಲ ತುಂಬಿ ಕಳಸಬೇಕು." ಜಾತುನಾಯ್ಕನ ಕಿವಿ ತುಂಬಿದಳು. ಮೊದಮೊದಲಿಗೆ ಬೆಂಕಿಯಂತ ತೊಪ ನಾಯ್ಕನ ಆಡಳಿತದಾಗ ಈ ಕೆಲಸ ಸಾಧ್ಯವೆ ಇಲ್ಲ ಅನಿಸಿತು.

ಮುಂದೆ ಅವಳ ಮಾತುಗಳು ಮತ್ತೆ ಮತ್ತೆ ಪುನರಾವರ್ತನೆಯಾಗಾಣ, ಕಂತ್ರಿ ದಂಧೆ ಸುರು ಆಯಿತು. ಕಳ್ಳತನ ಮಾಡಿ ಮಾರಿದ ಮಾಲಿನ ರೊಕ್ಕ ತಂದು ಹೆಂಡತಿ ಬಧ್ಧಿ ಮೇಲೆ ಕಟ್ಟಿಸತೊಡಗಿದ.

ಸಾಕಿಬಾಯಿಗೆ ತಾನು ಶ್ರೀಮಂತೆಯಾಗಬೇಕು ಎನ್ನುವ ದುರಾಶೆ, ಒಟ್ಟ ಮಾಡಿದ ಕಾಸನ್ನೆಲ್ಲಾ ಅವರಪ್ಪಗೆ ಕೊಟ್ಟು ಆತನ ಕುರಿಯಲ್ಲಿ ಒಂದಿಷ್ಟು ಮರಿಗಳನ್ನ ಬಿಟ್ಟುಕೊಳ್ಳಲು ಹೇಳಿದ್ದಳು. ಇನ್ನು ಒಂದು ಹೆಜ್ಜೆ ಮುಂದೆ ಹೋಗಿ ಮಂದಿ ಮಾತಾಡುವುದನ್ನ ಕೇಳಿ ಕೇಳಿ “ಅಲ್ಲಾ ಹಾಟಗಳ್ಳರು, ಬರಿ ಮಂದಿ ಹತ್ರ ಹೊಕ್ಕಾರ ಬಂಗಾರ ಕೊಡಾಕ ಒಮ್ಮೆ ನಮ್ಮ ಕಡೀಗೂ ಬರಬಾರದ?” ಹಳಹಳಿಸಿದಳು. ಅವಳ ಮನದ ಮಾತು ಕಳ್ಳರ ತಮ್ಮಾಡಿಗೆ ಹೆಂಗೆ ಗೊತ್ತಾಯಿತೊ ಏನೊ, ಒಂದು ದಿನ ಮಧ್ಯಾಹ್ನ ಸಾಕಿಬಾಯಿ ಹೊಲದಾಗ ಒಬ್ಬಾಕಿನ ಸೊಪ್ಪಿ ಕಡಿತ್ತಿದ್ದಳು. ತಮ್ಮಾಡಿ ಅಕಡಿ ಸಾಲಲ್ಲಿ ಪ್ರತ್ಯಕ್ಷನಾಗಿ “ಅಕ್ಕ ಒಂದು ಬಂಗಾರದ ಸರ ಐತೆ ನೋಡ್ತಿಯಾ, ಪಕ್ಕ ಟ್ವಂಟಿಫೋರ್ ಕ್ಯಾರೇಟು ಬಂಗಾರದಕ್ಕ. ಮೂಡಲಸೀಮೆಯ ಜಮೀನ್ದಾರರ ಹೆಂಡತಿ ಕೊಳ್ಳಾಗಿಂದು. ನಮ್ಮಮಂದಿ ಲೂಟಿ ಮಾಡುವಾಗ ತಂದಿರೋದು.” ಮೆಲ್ಲಗೆ ಪಂಚೆ ಎತ್ತಿ ಚಡ್ಡಿ ಜೇಬಿಂದ ತಗದು ಸ್ವಲ್ಪ ತೋರಿಸಿ ಒಳಗ ಹಾಕಿದ. “ಏಯ್ ನಿನ್ನ ಮಕಕ್ಕೆ, ತೋರ್ಸಂಗಿದ್ರ ಪೂರ ತೋರಿಸು ಅದೇನು ಎಳದು ಒಂಚೂರು ತೋರಿಸಿ ಒಳಗೆ ಇಟ್ಕೊಂತಿಯಾ.” ಕುತೂಹಲ ವ್ಯಕ್ತಪಡಿಸಿದಳು. ಆಕಿ ಮನಸ್ಸನ್ನ ಅರಿಯುವ ಹುನ್ನಾರ ನಡೆಸಿದ್ದ ಕಳ್ಳ ತಮ್ಮಾಡಿ. “ಅಲೆಲೆ ಮಿಕ ಬಿತ್ತಲೆ” ಅಂದ್ಕೊಂಡು. “ಇಲ್ಲಕ್ಕ ನಾವು ಕಳ್ಳಮಾಲು ವ್ಯಾಪಾರ ಮಾಡೋರ. ರಾಜಾರೋಷಾಗಿ ತೋರಿಸುವುದಕ್ಕೆ ಆಗೋದಿಲ್ಲ. ನಿಮಗ ಬೇಕ ಕೊಡ್ತಿನಿ. ಆದ್ರ ಬೆಲೆ ಚೂರು ಜಾಸ್ತಿ ಆದೀತು” ಅಂದು ಸುಮ್ಮನಾದ. ಸಾಕಿಬಾಯಿಯ ತಲೆಯೊಳಗೆ ನೂರೆಂಟು ಆಲೋಚನೆಗಳು. ಮುಂದಿನ ಹಬ್ಬಕ್ಕೆ ತನ್ನೂರಿಗೆ ಹೋಗುವಾಗ ಹಾಕ್ಕೊಂಡು ಹೋದರೆ ಮೆರಿಬಹುದು. ಅಂದಾಕಿನೆ “ಅಲ್ಲಪ್ಪ ಎಷ್ಟು ಅಂತೀಯಾ ಹೇಳು. ಕೈಯಾಗ ಕಾಸಿದ್ದರೆ ಹೂಂ ಅಂತೀನಿ. ಇಲ್ಲಾಂದ್ರೆ ಮುಂದಕ್ಕೆ ಹೋಗು ಅಂತೀನಿ” ದೃಢವಾಗಿಯೆ ಹೇಳಿದಂತಿತ್ತು. ಕಳ್ಳ ತಮ್ಮಾಡಿಗೆ ಯಾಕೊ ಗಾಡಿ ರಿವರ್ಸ್ ಬಂದಂಗೆ ಅನಿಸಿತು. “ನೋಡವ್ವ ಇದನ್ನ ದೊಡ್ಡ ಜಮಿನ್ದಾರರ ಹೆಂಡತಿಯರು ಹಾಕ್ಕೊಂಡಿದ್ದು. ನಿನ್ನ ಅದೃಷ್ಟದೊಳಗೆ ಐತೆ, ಒಂದು ಹತ್ತುಸಾವಿರ ಕೊಡು ಸವರನ್ ಸರ, ಏನಿಲ್ಲಾ ಅಂದ್ರ ಐವತ್ತು, ಅರವತ್ತು ತೊಲೆ ಇರಬೇಕು” ಅಂತ ಸುಮ್ಮನಾದ. “ಐವತ್ತು ತೊಲ” ಒಳಗೆ ಖುಷಿ ಪಟ್ಟಳು ಸಾಕಿ. ಆದರೂ ತೋರಗೊಡದೆ “ನಿಂಗ ಹತ್ತುಸಾವಿರ ಯಾರ ಕೊಡ್ತಾರೆ ಯಪ್ಪ, ನಂತಾವ್ ದುಡ್ಡಿಲ್ಲಾ ನಡಿ” ಅಂದಳು. ಆಮೇಲೆ ಯಾಕಾದರು ಅಂದೆ ಕಳ್ಳ ತಮ್ಮಾಡಿ ಮುಂದೆ ಹೋದ್ರೆ ಕೆಲ್ಸ ಕೆಡುತ್ತಲ್ಲಾ ಅಂದ್ಕೊಳ್ತಿದ್ದು. ಅಷ್ಟರಲ್ಲಿ ತಮ್ಮಾಡಿನೆ “ಬೆ ಲಮಾಣಿ ಎಷ್ಟೈತೆ ಅಷ್ಟು ಕೊಡು ಪೊಲೀಸರು ತಿರುಗಾಡ್ತಿರ್ತಾರ, ನಾನು

ಹೊತ್ತಾರೆ ನಮ್ಮ ಹಟ್ಟಿ ಸೇರ್ಕೊಬೇಕು" ಅಂದ. ಸಾಕಿಗೆ ರೊಟ್ಟಿ ಜಾರಿ ತುಪ್ಪದಾಗ ಬಿದ್ದಂಗಾತು. "ನನ್ನ ಹತ್ರ ಬರಿ ಮೂರ ಸಾವಿರ ಅದಾವ್‌ರೆಯಪ್ಪ", ಅಂದಾಕಿನ ತನ್ನ ಸೀರೆಯ ಪಕ್ಕದಲ್ಲಿ ಕಟ್ಟಿದ ಗಂಟನ್ನ ಬಿಚ್ಚಿ ರೊಕ್ಕ ತಗದು ಎಣಿಸಿ ಅವನ ಮುಂದೆ ಹಿಡಿದಳು. ತಮ್ಮಾಡಿ ಸಿಗೋವಷ್ಟು ಸಿಗಲಿ ಅಂತ ಕಾಯ್ತಿದ್ದ. "ಆಯ್ತು ಗಡಾನ ಕೊಡು" ಅಂದವನೆ ಕೈಯ್ಯಾಗಿಂದ ಕಾಸು ಕಸ್ಕೊಂಡವನೆ ಸರ ಆಕಿ ಕಡಿಗ ಎಸದು ಮಾಯ ಆಗಿದ್ದ.

ಹಗ್ಗದ ಗಡತರ ಇರುವ ಸರವನ್ನ ಖುಷಿಯಿಂದ ಮುಟ್ಟಿ ರೊಕ್ಕ ಕಟ್ಟಿದ್ದ ಜಾಗದಲ್ಲಿ ಜೋಪಾನವಾಗಿ ಕಟ್ಟಿಕೊಂಡು ಒಮ್ಮೆ ಇದೆ ಎನ್ನುವುದನ್ನ ಖಾತ್ರಿ ಪಡಿಸಿಕೊಂಡು ಮಾಡುತ್ತಿದ್ದ ಕೆಲಸದಲ್ಲಿ ಆಸಕ್ತಿ ಬಾರದೆ ಜುಲಮಿಯಿಂದಲೆ ಕೆಲಸ ಮುಗಿಸಿ, ಗಂಡನಿಗೆ ತನ್ನ ಆತ್ಮೀಯ ಹೆಂಗಸರಿಗೆ ಯಾವಾಗ ವಿಷಯ ತಲುಪಿಸುವೆ ಎನ್ನುವ ಕಾತರ, ಕೌತುಕದಲ್ಲಿ ಮನೆ ಸೇರಿದಳು. ನೇರವಾಗಿ ಅವಳ ಸಂಬಂಧಿಕಳಾಗಬೇಕಿದ್ದ ಕಾನಿ ಬಾಯಿ ಹತ್ರ ಹೋದಳು. "ಅಕ್ಕ ಅದಿಯಾ ಮನಿಯೊಳಗ" ಅನ್ಕೊಂತ ಒಳಗೆ ಹೋದಳು. ಸೀಮೆ ಎಣ್ಣೆ ದೀಪದ ಬತ್ತಿ ಸರಿ ಮಾಡುತ್ತಿದ್ದ ಕಾನಿಬಾಯಿ "ಏನೆ ಸಾಕಿ ಬಹಳ ದಿನದ ನಂತರ ಬಂದೀಯಾ ಮನಿಕಡಿ, ಅಲ್ಲಾ ಸಂಬಂಧಿಕಳು ಒಂದೇ ತಾಂಡದಾಗಿದ್ದರೂ ಒಂದೀಟು ಪುರುಸತ್ತ ಮಾಡಿಕೊಂಡ ಬರಬೇಕು ಅನ್ನೊ ಖಬರಿಲ್ಲ ನಿನಗೆ" ಕೇಳಿದಳು ಕಾನಿ. "ಅಯ್ಯೋ ಅಕ್ಕ, ನಿನಗೆ ಗೊತ್ತಲ್ಲ ಹಾಳಾದ ನರಕದಾಗ ದೂಕಿದ್ದಾನೆ ನಮ್ಮಪ್ಪ. ಅಲ್ಲವ್ವ, ಬೇಸಿಗೆ ಮುಗಿತ್ತಿದ್ದಂಗೆ ಹೊಲದ ಕೆಲಸಕ್ಕೆ ಓಡಬೇಕು. ಮುದುಕ ಐದುಗಂಟೆಗೆ ಎದ್ದು ಸಾಲಿಗೆ ಹೆಸರು ಹಿಡಿದು ಕರಿತಾನೆ, ಲೇ ನೀ ಏಳು, ನೀ ಏಳು ಅಂತ. ಏಳಲಿಲ್ಲಾ ಅಂತಿಟ್ಕೊ, ಸುಮ್ಮನೆ ಬಿಟ್ಟಾನ ಜೀವ ಜಾಲಾಡಿಸಿ ಬಿಡ್ತಾನ. ಅಂತಾದ್ರಾಗ ಪುರಸತ್ತು ಎಲ್ಲಿದೆ" ತನ್ನ ಹರಿಕತೆ ಹೇಳಿದಳು. "ಆಯ್ತು ಈಗಾರು ಬಂದಿಯಲ್ಲಾ ಏನು ವಿಷಯ ಹೇಳು" ಅಂದಳು ಕಾನಿ. "ಏನಿಲ್ಲಕ್ಕ, ಕಳ್ಳ ಮೊನ್ನೆ ಎಲ್ಲೊ ಕೈ ಹೊಡೆದಿದ್ದನಂತೆ, ದೂರದಾಗ ಜಮೀನ್ದಾರನ ಮನಿಗೆ ಕನ್ನ ಹಾಕಿ ಕದ್ದ ಬಂಗಾರ ಮಾರುವಾಗ ನನಗೆ ಈ ಬಂಗಾರದ ಸರ ಕೊಟ್ಟಾನ ಬೇ, ಅದು ಅಸಲಿನಾ ಇಲ್ಲ ನಕಲಿ ಅಂತ ನೋಡು ಒಮ್ಮೆ" ಅಂತ ಅಕಿ ಕೈಯ್ಯಾಗ ಕೊಟ್ಟಳು. "ಅಯ್ಯೊ ತಂಗಿ, ಕಳ್ಳರು ತಾರಾತಿಗಡಿ ಮಂದಿ ಬಾರಿ ಎಚ್ಚರಿಕೆಯಿಂದ ವ್ಯವಹಾರ ಮಾಡಬೇಕು. ಸುಮ್ಮನೆ ಬಂಗಾರ ಅಂತೇಳಿ ಹಿತ್ತಾಳೆ ಸರನೊ ಮೋಸದಿಂದ ಮಾರಿ ಬಿಡ್ತಾರ. ಅದಕ್ಕೆ ಮೈ ತುಂಬ ಎಚ್ಚರಿಕೆಯಿಂದ ಇರಬೇಕು" ಅಂದಳು.

ಮೂರುಸಾವಿರ ದುಡ್ಡು ಹೊಳಿಯಾಗ ಹುಣಸಿ ಹಣ್ಣು ತೊಳದಂಗಾಯಿತೆನ್ನುವ ಆಲೋಚನೆ ಮಾಡ್ತಾ ಸಾಕಿ ಮಿಣಿ ದಪ್ಪದ, ಪಳಪಳ ಹೊಳಿತಿದ್ದ ಬಂಗಾರದ ಸರ ತಗದು ಅಕಿ ಕೈಯ್ಯಾಗ ಕೊಟ್ಟಳು. "ನೋಡಾಕ ಬಂಗಾರ ಕಾಣತೈತಿ" ಕಾನಿ

ಅಂದುಕೊಳ್ತಾನೆ ಬಾಯಾಗ ಹಾಕಿ ಅಗಿದಳು, ಗಟ್ಟಿಯಾಗಿತ್ತು, ಬಂಗಾರದ ಅನುಭವ ಬರಲಿಲ್ಲಾ. "ಹಾಟ್‌ಗಳ್ಳ ಯಾಮಾರಿಸಿದ್ದಾನೆ" ಮನಸ್ಸಿನೊಳಗೆ ಅಂದುಕೊಂಡು. ಈಗ ಇದ್ದ ವಿಷಯ ಪೂರಾ ಹೇಳಿಯ ಸಾಕಿಗೆ ನೋವಾಗುತ್ತೆ. ನಾನು ಯಾಕೆ ಇಕೀಗೆ ಹೇಳಲಿ ಅಂದಾಕಿನ "ತಂಗಿ ಸಾಕಿ ಒಂದ ಕೆಲ್ಸ ಮಾಡು, ಇವತ್ತು ಯಾವಾರ ಹೇಳು" ಅವಳನ್ನೆ ಕೇಳಿದಳು. "ಇವತ್ತು ಭಾನುವಾರ" ಅಂದಳು ಸಾಕಿ, "ನೋಡು ಒಂದು ಕೆಲ್ಸ ಮಾಡು, ನಾಳೆ ಸೋಮವಾರ, ನಾಡಿದ್ದು ಮಂಗಳವಾರ ಹರಿಹರದ ಸಂತೆ, ನಾನು ಹೊಂಟೀನಿ, ನೀ ಏನಾದರು ಸುಳ್ಳ ಹೇಳಿ ಹರಿಹರಕ್ಕೆ ಬಂದರೆ ನನಗೆ ಪರಿಚಯವಿರೊ ಸೋನಾರ ಅದಾನ, ಅವನ ಹತ್ರ ತೋರಿಸಿ ಖಾತ್ರಿ ಪಡಿಸಿಕೊ" ಅಂತ ತಲಿಯೊಳಗೆ ಹುಳಬಿಟ್ಟು ಕಳಿಸಿದ್ದಳು ಕಾನಿ.

ಕಾನಿ ಮನಿಯಿಂದ ಸೀದಾ ಮನಿಗ ಬಂದ ಸಾಕಿ ಗಂಡನಿಗೆ ಕುತೂಹಲ ಕೊಡುವ ಇರಾದೆ ಬದಲಿಸಿದಳು. ಒಮ್ಮೆ ಸೊನಾರ ಹತ್ರ ಪರೀಕ್ಷಿಸಿಯೆ ಹೇಳಿದ್ರಾತು ಅಂತ ಮಂಗಳವಾರದ ಆಲೋಚನೆಯಲ್ಲಿ ಮುಳುಗಿದಳು. ಇದ್ದಕ್ಕಿದ್ದಂತೆ "ಯವ್ವ ಸತ್ನೆ ಹೊಟ್ಟೆ ಹೊಟ್ಟೆ, ಅಯ್ಯೊ ನನ್ನ ತ್ರಾಸ, ನನ್ನ ಕಲೇಜ, ಸಾಯ್ತಿನವ್ವ, ಯವ್ವಾ, ಯಪ್ಪ" ಅಲ್ಲೆ ಅಡಗಿ ಮನಿ ಮೂಲೆಯೊಳಗೆ ಗೋಣಿ ತಟ್ಟು ಹಾಸಿಕೊಂಡು ಬಿದ್ಕೊಂಡಳು. ಅವಳು ಮಲಗಿದ್ದನ್ನ ನೋಡಿದ ಜಾನಿಬಾಯಿ "ಹೂಂ ಮತ್ತೇನು ರಾಮಾಯಣ ಸುರುವಾಯ್ತೊ" ಅಂದಳು. "ಹೊಟ್ಟೆಯೊಳಗೆ ಹಿಂಡಿದಂಗಾಗಿ ಸಾಯ್ತಿದ್ರೆ ರಾಮಾಯಣ ಅನಿಸುತ್ತಾ ಇವರಿಗೆ" ಮರು ಉತ್ತರ ಕೊಟ್ಟಳು. "ಲೇ ಜಾತು ಏನೊ ಇದು ಹೊಸ ನಾಟಕ. ಅಲ್ಲಾ ಉಳಿದವರು ಏನು ಅನ್ಕೊಬೇಡ, ವಾರದಾಗ ಹತ್ತ ಸಲ ಸಂಜೆ ಅಡುಗೆ ಮಾಡದೆ ಹಿಂಗಿ ಹೊಟ್ಟೆ ಹಿಡಿದು ಮಲಗ್ತಾಳ. ಉಳಿದ ಇಬ್ಬರು ಒರಗಿತ್ತಿಯರ ಮನಸ್ಸಿನ ಮೇಲೆ ಪ್ರಭಾವ ಬೀರುತ್ತೊ, ಇಲ್ಲವೊ, ಮಂಗಳವಾರ ಬೇಕಾರ ಆಸ್ಪತ್ರೆಗೆ ಹೋಗನ್ನು, ನಿಮ್ಮಪ್ಪನ ತಾವ ಐದ್ರೂಪಾಯಿ ನಾನು ಇಸ್ಕೊಡ್ತಿನಿ" ಅಂದಳು. ಸಾಕಿಬಾಯಿ ಅದಕ್ಕಾಗಿಯೆ ನಾಟಕ ಮಾಡಿದ್ದಳು. ಒಳಗೊಳಗೆ ಖುಷಿಯಾಗಿ, ಎಲ್ಲಾರೂ ಉಣ್ಣುವ ಮೊದಲು ಮುಂಜಾನೆವು ರೊಟ್ಟಿಗಳನ್ನು ತಿಂದು ಅಟವಾಳಿಗೆಗೆ ಹೋಗಿ ಹಾಸಿಗೆ ಹಾಕಿದಳು.

ಮಂಗಳವಾರ ಹೊತ್ತಾರೆ ಎದ್ದು ಮೊದಲು ಐದುರೂಪಾಯಿ ಕೈಗೆ ಬಂದಮೇಲೆ ಹಾಲಿನ ಮಡಿಕೆ, ಮಜ್ಜಗೆ ಕಡಿಯೊ ಮೇಲಿನ ಕೆಲಸಗಳನ್ನೆಲ್ಲಾ ನಿಬಾಯಿಸಿದಳು. ಅಷ್ಟರಲ್ಲಿ ಒಮ್ಮೆ ಕಾನಿಬಾಯಿ ಮನಿಗೂ ಹೋಗಿ ಬಂದಳು. ಗಂಡನಿಗೆ ಸನ್ನೆ ಮಾಡಿ, ಒಂದು ಐದಾರು ಸೇರು ಜೋಳಮಾರಿ ಮತ್ತೊಂದು ಐದು ರೂಪಾಯಿ ಜೋಡಿಸುವಂತೆ ಹೇಳಿದಳು. ಯಾಕಂದ್ರೆ ಕಾನಿಬಾಯಿ ಸಾಕಿ ಸಲುವಾಗೆ ಸಂತೆಗೆ ಬರುತ್ತಿದ್ದಿದ್ದರಿಂದ ಅವಳ ಬಸ್ ಛಾರ್ಜು ಇಕೀನ ತಗಸಬೇಕಿತ್ತು. ಮೂರು ರೂಪಾಯಿ ಅಲ್ಲಿಗೆ ಹೋಯ್ತು. ಒಂದು ಸಿಂಗಲ್ ಚಾ ಕುಡಿಸೋದು ಬೇಡವೆ.

ಹೆಗಡೆ ಡಾಕ್ಟರ್ ಒಮ್ಮೆ ಒಳಗೆ ಹೋದರೆ ಒಂದರಿಂದ ಒಂದೂವರೆ ರೂಪಾಯಿ ಕೇಳ್ತಾನ. ಇದ್ದದ್ದು ಬದ್ದದ್ದನ್ನೆಲ್ಲಾ ಕಳ್ಳನಿಗೆ ಕೊಟ್ಟು ಹುಚ್ಚ ಪ್ಯಾಲಿ ಆಗಿದ್ದಳು ಸಾಕಿ.

ದುರ್ಗಪುರದವರೆಗೆ ನಡೆದು ಹೋಗಿ ಅಲ್ಲಿಂದ ಬಸ್ಸು ಬಂತು ಸರಿ, ಇಲ್ಲದಿದ್ದರೆ ಹರಪನಹಳ್ಳಿಯಿಂದ ಕಲ್ಲು ಹೇರಿಕೊಂಡು ಬರುವ ಲಾರಿಗಳು ಮನಗಂಡಿದ್ದವು. ಅವುಗಳ ಬಾಡಿ ಎತ್ತರ ಇದ್ದರು ಪ್ರಯತ್ನ ಪಟ್ಟು ಮೇಲೇರುತ್ತಿದ್ದರು ಹೆಂಗಸರು. ಗಂಡಸರಿಗೇನು ತೊಂದರೆ ಇಲ್ಲ, ಕ್ಲೀನರ್ "ಹೊಲ್ಡೆ ಹೊಲ್ಡೆ, ಇನ್ನೂ ಹತ್ತಿಲ್ಲ, ಬೆಲಮಾಣಿ ಗಡಾನ ಹತ್ತು ಟೈಂ ಆಯ್ತು" ವದರಿದ್ದ. ಸಾಕಿಗೆ ಹತ್ತಾಕ ಆಗವಲ್ದು ಕ್ಲೀನರ್ ಬೇರೆ ಒದರಾಡ್ತವ್ನೆ ಬಂದ ಸಿಟ್ಟನ್ನ ಮೊದಲು ಹತ್ತಾಕ ತೋರಿಸಿದಳು. ಮೇಲೆ ಹತ್ತಿದಮೇಲೆ "ಅಲಪ, ನಿಂದು ಗಾಡಿ ಇಷ್ಟು ಎತ್ತರ ಇದೆ, ಹೆಣಮಕ್ಕಳು ಹೆಂಗ ಹತ್ತಬೇಕು" ಕೋಪದಿಂದಲೆ ಹೇಳಿದಳು. "ಬೇ ಇದು ಮಾಲ ತುಂಬೋದು, ಮನುಷ್ಯರನ್ನ ತುಂಬೋದಲ್ಲ. ಏನೋ ಅನಿವಾರ್ಯ, ಖರ್ಚಗೆ ನಾಕ ರೂಪಾಯಿ ಸಿಗುತ್ತೆ ಅಂತ ಹತ್ತಿಸ್ತಿವಿ" ಅವಳ ಪೊಷಾಕು ನೋಡಿ ಲಮಾಣಿ ಹೆಂಗಸು ಹೆಂಗಬೇಕಾದರೂ ಮಾತಾಡಬಹುದು ಅಂದ್ಕೊಂಡಿದ್ದ. ಆದರೆ ಸಾಕಿ ಸರಿಯಾಗೆ ಉತ್ತರ ಕೊಟ್ಟಳು. ಹರಪನಹಳ್ಳಿ ಸರ್ಕಲ್ಲಿಗೆ ಲಾರಿ ನಿಂತಿತು. "ಸಾಕಿ ಹರಿಹರ ಬಂತು ಇಳಿಯೆ, ಬಂಗಾರದಂಗಡಿ ಇಲ್ಲೆ ಮುಂದೆ ಬಾ" ನಿಧಾನಕ್ಕೆ ಬಾಡಿ ಮೇಲಿಂದ ಕಾಲು ಹೊರಗಡೆ ಇಟ್ಟು, ಬಾಡಿಯನ್ನ ಗಟ್ಟಿಯಾಗಿ ಹಿಡಿದು,. ಸೀರೆ ಎಲ್ಲೂ ಸಿಕ್ಕೊಳದಂಗೆ ನಿಗಾ ವಹಿಸಿ ಲಾರಿ ಇಳಿದಳು ದಾನಿಬಾಯಿ. ಅವಳ ಹಿಂದೆನೆ ಸಾಕಿ ನಿಧಾನಕ್ಕೆ ಸೂಕ್ಷ್ಮವಾಗಿಯೆ ಕೆಳಗಿಳಿದು "ಥು! ಇದರ ಮನಿ ಹಾಳಾಗ, ಏನು ಎತ್ತರ ಐತೆ ನಮ್ಮವ್ವ, ಮತ್ತೊಂದ ಸಲ ಸತ್ತರೂ ಲಾರಿ ಹತ್ತಾಕಿಲ್ಲ ನೋಡು, ಹಾಳಮನಿದು. ಇಳಿಯೋದ್ರಾಗೆ ಹೆಣಬಿದ್ದು ಹೊಕ್ಕೈತೆ ನಮವ್ವ" ಕೆಳಗೆ ಕಾಲಿಟ್ಟಾಗ ಏನೋ ಸಾಧನೆ ಮಾಡಿದ ಅನುಭವ.

ಇಬ್ಬರು ಬಹಳ ಉಮ್ಮೆದಿನಿಂದಲೆ ಬಂಗಾರದಂಗಡಿ ಕಡೆಗೆ ಹೊರಟಿದ್ದರು, ದಾರಿಯಲ್ಲೆ ಉಡುಪಿ ಬೆಣ್ಣೆದ್ವಾಸಿ ಹೊಟೇಲು ಬಂತು. "ಅಲ್ಲೆ ಸಾಕಿ, ಮನೆಯೊಳಗೆ ಏನಾರು ತಿಂದ ಬಂದಿಯ ಹೆಂಗ, ನಾನಂತು ಏನೂ ತಿಂದಿಲ್ಲ" ಅವಳ ಮಾರಿ ನೋಡಿದಳು. "ಎಲ್ಲಿ ತಿಂತಿ ಅಕ್ಕ, ಅಷ್ಟೊತ್ತಿಗೆ ಯಾವಾಕಿ ಮಾಡಿರ್ತಾಳ? ನಾನೆ ಎದ್ದು ಹಾಳ ಕಸ ಹೊಡದು, ಒಲೆಯೊಳಗಿನ ಬೂದಿ ತಗದು ಅಂಗಳದಾಗ ನೀರು ಚಿಮುಕಿಸಿ, ಮಾಡಿ ಆದ ಮೇಲೆ ಎರಡನೆಯವಳು ಎದ್ದಳು. ಅವಳು ಎದ್ದು ಸ್ವಾರಿ ತಿಕ್ಕಾಕ ಹೊರಗ ಇಟ್ಟಂದ ಮೂರನೆಯವಳು ಎದ್ದಳು. ಏನಾರು ಮಾಡ್ಕಳ್ಳಿ ಅಂದಾಕಿನ ನಮ್ಮತ್ತಿ ಜಾನಿಬಾಯಿಗೆ ಕೇಳಿದೆ. ಯತ್ತಿ ಹೋಗಲ ಆಸ್ಪತ್ರಿಗ ಅಂತ, ಮುಖ ಈಟ್ ದೊಡ್ಡದ ಮಾಡಿಕೊಂಡಿದ್ದಳು, ಹೂಂ ಅನ್ನಲಿಲ್ಲ ಊಹೂಂ ಅನ್ನಲಿಲ್ಲ. ಹೋಗಿ ಬರ್ತಿನಿ ಯಾಕೊ ಹೊಟ್ಟೆಯೊಳಗ ನೋವು ವಿಪರೀತ

ಆಗಾಕ ಹತ್ಯತಿ ಅಂದಾಕಿನ ಹಿಂದೆ ಮುಂದೆ ನೋಡದಂಗೆ ತಾಂಡದ ಅಗಸಿ ಬಾಗಲು ದಾಟಿದ್ದೆ" ದೊಡ್ಡ ಕತೆಯನೇ ಹೇಳಿದಳು. ಕಾನಿಬಾಯಿಗೆ ಹರಿಹರ ಚಿರಪರಿಚಿತವಾಗಿದ್ದರಿಂದ ಅಷ್ಟೇನು ಕಷ್ಟ ಅನಿಸಲಿಲ್ಲ. ಎರಡು ಕಪ್ಪು ನೀರು ಹಿಡಿದು ಬಂದ ಮಾಣಿ "ನಿಮಗ?" ಅಂದ, "ಏನು ಕೊಡ್ತಿ" ಕಾನಿ ಕೇಳಿದಳು. "ನಿಮಗೇನು ಬೇಕು?" ಮಾಣಿ, "ಏನು ಬೇಡ, ಎರಡು ಬೆಣ್ಣಿ ಮಸಾಲ ಕೊಡು ಮದಲು" ಕಾನಿ ಹೇಳಿ ಪಕ್ಕದ ಟೇಬಲಿನಲ್ಲಿ ತಿಂತಿರುವವನ ಕಡಿಗೆ ನೋಡಿದಳು. ಮಸಾಲೆ ಬೆಣ್ಣೆ ದೋಸೆಯ ವಾಸನೆ, ಅವನ ಪಕ್ಕದವನು ತಿನ್ನುತ್ತಿರುವ ಪರಿಯನ್ನ ನೋಡಿ ಬಾಯಿಯೊಳಗೆ ಬಂದ ನೀರನ್ನ ನುಂಗಿಕೊಂಡಳು. ಸಾಕಿಬಾಯಿಗೆ ಇದು ಹೊಸ ಅನುಭವ ಲಂಬಾಣಿ ಉಡುಗೆ-ತೊಡಿಗೆಯಲ್ಲಿ ಹೆಣ್ಣು ಮಕ್ಕಳು ಹೀಗೆ ಬಂದು ಹೊಟೇಲಲ್ಲಿ ಕೂಡುವುದೇ ಅಪರೂಪವಾದ್ದರಿಂದ. ಎಲ್ಲಾ ಟೇಬಲಿನ ಮಂದಿ ಅವಳನ್ನ ಮಿಕ ಮಿಕ ನೋಡತೊಡಗಿದ್ದರು. "ಕಾನಿ ಅಕ್ಕ ಈ ಮಂದಿ ಹಿಂಗ್ಯಾಕ ಮಂದಿ ನೋಡದವರಂಗೆ ನೋಡಾಕ ಹತ್ಯಾರಂತಿನಿ" ಅಂದಳು. "ಸುಮ್ಮನಿರು, ನಾವಿಬ್ಬರು ಲಂಭಾಣಿಗಳಂತ ಗೊತ್ತಾಗಿ ಹಿಂಗ ನೋಡಾಕ ಹತ್ಯಾರ. ಅವನು ತಂದು ಕೊಡವಲ್ಲ ನೋಡು ಅತ್ಲಗೆ ತಿಂದು ಎದ್ದು ಹೋಗಾನಂದ್ರೆ" ಅಂದು ಅಕಿಗೆ ಸುಮ್ಮನಿರುವಂತೆ ಹೇಳಿದಳು.

ದ್ವಾಸಿ ತಿಂದು ಎದ್ದವರೆ ಸೀದಾ ಕಾನಿಬಾಯಿಗೆ ಪರಿಚಯವಿದ್ದ ಮಾರ್ವಾಡಿ ರಮಣಿ ಸೇಠ್ ಅಂಗಡಿಗೆ ಹೋದರು. "ಅರೆ ಲಮಾಣಿದು ಕೆ ಬಾಯಿ, ಆವೊ, ಏನು ನಮ್ದು ಕಡೆಗೆ ಬಂದಾರೆ, ಬೈಟೊ, ಬೈಟೊ" ಅಂತ ಸಲುಗೆಯಿಂದ ಹೇಳಿದ. "ಏನಿಲ್ಲಾ ಸೇಠು ಈ ಸರ ಬಂಗಾರದ್ದ ಅಲ್ವಾ ಅಂತ ಸ್ವಲ್ಪ ನೋಡಿ ಹೇಳಿ" ಹಾರ ಅವನ ಕೈಗೆ ಕೊಟ್ಟಳು. "ಅರೆ ಲಮಾಣಿ, ನಿಮ್ದುಕೆ ಎಲ್ಲಿ ತಂಗೊಂಡಾರೆ. ಇಷ್ಟು ದಪ್ಪದು ಬಂಗಾರದ್ದ ಸರ. ಕಳ್ಳರು ಕೊಟ್ಟಾರೆ" ಕನ್ನಡಕ ಕೆಳಗೆ ಮಾಡಿ ನೋಡಿದ ತಕ್ಷಣ "ಅರೆ ಬಾಯಿ ನಿಮ್ದುಕೆ ಮೋಸ ಮಾಡವ್ರೆ, ಇದು ಬಂಗಾರ ಅಲ್ಲ ಹಿತ್ತಾಳೆ" ಅಂತ ಕಲ್ಲಿಗೆ ತಿಕ್ಕಿದ, ಅಲ್ಲಿ ಖಾತ್ರಿಯಾಯಿತು. "ಮಾಫ ಮಾಡಿ ಬಾಯಿ, ಇದು ಪಕ್ಕ ಹಿತ್ತಾಳೆ ಯಾರೊ ನಿಮಗೆ ಮೋಸ ಮಾಡಿದ್ದಾರೆ." ವಾಪಾಸು ಕೊಟ್ಟ, ಸಾಕಿಗೆ ದುಃಖ ತಡೆದುಕೊಳ್ಳುವುದಕ್ಕೆ ಆಗದೆ ಕಾನಿಗೆ ಗೊತ್ತಿಲ್ಲದೆ ಮಕ ತಿರುಗಿಸಿ ಅಳತೊಡಗಿದಳು. "ನನ ಗಂಡ ಯಾರಿಗೂ ಗೊತ್ತಾಗದಂಗೆ ಮನೆಯಲ್ಲಿ ಮೂರ್ನಾಕು ಚೀಲ ಜ್ವಾಳ ಕದ್ದು ಮಾರಿ ದುಡ್ಡು ತಂದಿದ್ದ. ಭಾಡಕೌ ನನ ಮಗ ಎಲ್ಲಿಂದ ಬಂದಿದ್ನೊ ಅವನ ಕದ ಕಟ್ಲಿ, ಅವನ ಮನಿ ಹಾಳಾಗಲಿ" ಶಾಪ ಹಾಕತೊಡಗಿದಳು.

ಕಾನಿಬಾಯಿಗೂ ಮನಸ್ಸಿಗೆ ಬೇಜಾರಾಯಿತು, "ಅಲ್ಲೆ ತಂಗಿ ನೋಡಿ ತಗೊಬಾರದ ಕಮ್ಮಿ ರೇಟಿಗೆ ಕೊಡ್ತಾನಂತ ಆಸೆಯಿಂದ ತಗೊಂಡೆ ಈಗ ನೋಡು" ಮಾತಾಡಲಿಲ್ಲ. "ಏನು ಮಾಡಲಿ, ಅವತ್ತು ಎಲ್ಲಿಂದ ಬಂದನೊ ಹಾಳ ಮನೆಯವನು. ತೋರಿಸೊ

ಮುಂದೆ ಭಾರಿ ನಾಜೂಕಿನಿಂದ ತೋರಿಸಿದ, ನಾನು ತಾಂಡದ ಸುತ್ತ ಮಂದಿ ಕೊರಚರ ಹತ್ರ ಬಂಗಾರ ತಗೊಂಡ್ರು, ಬೆಳ್ಳಿ ತಗೊಂಡ್ರು ಅಂತ ಮಾತಾಡೋದು ಕೇಳಿ, ಹೆಣ್ಣು ಬೊಳಿಯರು ಅದಾರ, ನಾಳೆ ಕೆಲಸಕ್ಕೆ ಬಂದೀತು ಅಂದುಕೊಂಡಿದ್ದೆ. ಆದರೆ ಹಿಂಗ ಮೋಸ ಮಾಡ್ತಾನ ಅಂತ ಯಾರಿಗೆ ಗೊತ್ತವ್ವ" ಅಂತ ತಾನು ಮಾಡಿದ್ದಕ್ಕೆ ಪಶ್ಚಾತ್ತಾಪ ಪಡತೊಡಗಿದಳು.

ತಾಂಡಕ್ಕೆ ಬಂದಾಗ ಸಾಕಿಬಾಯಿ ಮೆತ್ತಗಾಗಿದ್ದಳು. ಗಂಡನಿಗೆ ಹೇಳಿದರೂ ಕಷ್ಟ, ಹೇಳದೆ ಇದ್ದರೂ ಕಷ್ಟ ಎನ್ನುವಂತಿತ್ತು ಅವಳ ಪರಿಸ್ಥಿತಿ. "ಹೋದ ಕೆಲಸ ಏನಾತು, ಸರ ಬಂಗಾರದ್ದೆ ತಾನೆ" ಯಾರಿಗೂ ಕೇಳದಂತೆ ಪಿಸುಮಾತಿನಲ್ಲೆ ಕೇಳಿದ. ಸಾಕಿ ಮಾತಾಡಲಿಲ್ಲ "ಮಾತಾಡೆ ಏನಾಯ್ತು" ಜೋರು ಮಾಡಿದ. "ಸುಮ್ಮನಿರು ಮಾನಮರ್ಯಾದಿ ತಗಿಬೇಡ, ಬಂಗಾರದಲ್ಲ ಹಿತ್ತಾಳೆದು. ಕಳ್ಳ ಮೋಸ ಮಾಡಿ ಹೋಗ್ಯಾನ" ಮುಂದೆ ಮಾತು ಬರಲಿಲ್ಲ. ಅವರಿಬ್ಬರ ಮಾತನ್ನ ಯಾರು ಕೇಳಿಸಿಕೊಂಡರೊ ಏನೋ, ಮನಿ ಮಂದಿಗಲ್ಲದೆ ಇಡೀ ತಾಂಡಕ್ಕೆ ಗೊತ್ತಾಗಿತ್ತು. ಒಂದುವಾರ ಸಾಕಿಬಾಯಿನ ನೋಡಿ ನಗಲಾರದವರೆಲ್ಲಾ ನಕ್ಕಿದ್ದರು.

* * *

75. ಅತ್ತಿಗೆ ಮೋಸಕ್ಕೆ ಪ್ರಾಣಬಿಟ್ಟ ಮೀನಾಕ್ಷಿ

ಆಗತಾನೆ ದೊಡ್ಡವಳಾಗಿದ್ದು ನೋಡುವುದಕ್ಕೆ ಸುಂದರಿಯಾಗಿದ್ದ ಮೀನಾಕ್ಷಿ ತಂದೆ ತಾಯಿಯ ಮುದ್ದಿನ ಮಗಳು. ಜಂಪಾನಾಯ್ಕನಿಗೆ ಮೀನಾಕ್ಷಿ ಅಂದ್ರೆ ಪಂಚಪ್ರಾಣ. ಹದಿಮೂರು ಮಕ್ಕಳಲ್ಲಿ ಏಳು ಗಂಡು ಆರು ಹೆಣ್ಣು ಎಲ್ಲರೂ ಬದುಕಿದ್ದರು, ಹಿರಿಯ ಮಗಳ ಮದುವೆ ಮಾಡಿದ್ದ ಎರಡನೆಯವಳು ಓದುತ್ತಿದ್ದರಿಂದ ಅವಳಿಗೆ ಮದುವೆ ಮಾಡದೆ ಮೂರನೆಯವಳ ಮದುವೆ ಮಾಡಿ ದೊಡ್ಡ ಮಗನ ಮದುವೆ ಮಾಡಿದ್ದ. ಜಾಂಪಾನಾಯ್ಕನ ಹೆಂಡತಿ ಸೋಮ್ಲಿಬಾಯಿ ಎಷ್ಟು ಬೇಡ ಅಂದರೂ, ಸಂಬಂಧದಲ್ಲಿ ಅಂದ್ರೆ ಅವಳ ಸ್ವಂತ ಅಣ್ಣನ ಮಗಳು ಚಿಂಗ್ಲಿಯನ್ನ ತರುವ ಯೋಚನೆ ಮಾಡಿದ್ದ ಜಾಂಪಾನಾಯ್ಕ. ಅವನ ಅಳಿಯ ಜಿಂಗನಾಯ್ಕ ಕುಡಿಯುವಾಗ ಅದೇನು ಹೇಳಿದ್ನೊ "ನಿನ್ನ ಮಗಳನ್ನೆ ಕಣಯ್ಯ ನನ್ನ ಹಿರಿಮಗನಿಗೆ ಸೊಸೆಯಾಗಿ ತರೋದು ನೀ ಚಿಂತೆ ಮಾಡಬೇಡ" ಅಂದಿದ್ದ. ನಿಶೆದಾಗಿನ ಮಾತು ಕಿಸೆದಾಗ ಇರೋದಿಲ್ಲ ಅಂತ ಮಂದಿ ಅಂತಾರ, ಆದ್ರ ಜಾಂಪಾ ಮಾತ್ರ ನಿಶೆದೊಳಗೆ ಹೇಳಿದ್ದನ್ನ ಯಾವತ್ತು ಮರೆಯಲೇ ಇಲ್ಲ. ಚಿಂಗ್ಲಿ ಸ್ವಲ್ಪ ಜೋರು, ಜೀವನದ ಅನುಭವ ಉಂಡವಳು, ಗಾಳಿ ಸಕ ತಗೊಂಡಾಳ ಅಂತ ಮಂದಿ ಮಾತಾಡಿಕೊಳ್ಳುತ್ತಿದ್ದದ್ದು ಸೋಮ್ಲಿಗೆ ಗೊತ್ತಿತ್ತು. ಇಂಥ ಹುಡುಗಿಯನ್ನ ಮನೆಗೆ ತಂದರೆ ಮದುವೆಯಾಗದೆ ಇರುವ ಐದು ಹುಡುಗಿಯರ ಮೇಲೆ ಪ್ರಭಾವ ಬೀಳುವುದು ನಿಶ್ಚಿತ ಅನ್ನೋದು ಸೋಮ್ಲಿಬಾಯಿಯ ವಾದಕೂಡಆಗಿತ್ತು. "ಹುಡುಗಿ ಸ್ವಂತ ಅಣ್ಣನ ಮಗಳಾಗಿದ್ರು ನನಗೆ ಬೇಡ. ನನ್ನ ಮಗ ಬಂಗಾರದಂತೋನು ಅಂತೋನಿಗೆ ನಾಕ ರೂಪಾಯಿ ವರದಕ್ಷಿಣಿ ಸಂಬಂಧಮನಿತನವನೆ ಪಣಕ್ಕ ಇಡಬೇಡ. ಹುಡುಗಿ ನಮಗೆ ಹೊಂದಲ್ಲ. ಅದು ಅಲ್ಲದೆ ಆಕಿದು, ಪಕ್ಕದ ಊರಿನ ಹುಡುಗನ ಜೊತೆ ಸಂಬಂಧ ಇದೆ ಅಂತ ಮಂದಿ ಮಾತಾಡ್ತಾರೆ. ಯಾಕೆ ಹಗಲು

ಕಂಡ ಬಾವಿಯೊಳಗೆ ರಾತ್ರಿ ಹೋಗಿ ಬೀಳಾಕ ಹತ್ತಿರೊ ಅರ್ಥ ಆಗ್ತಿಲ್ಲಾ" ಗಿಳಿಗೆ ಹೇಳಿದಂಗೆ ಸೋಮ್ಲಿಬಾಯಿ ಸ್ವಂತ ಅಣ್ಣನ ವಿರೋಧ ಕಟ್ಟಿಕೊಂಡರು ಪರವಾಗಿಲ್ಲ ಅಂತ ಜಾಂಪಾನಾಯ್ಕನ ಎದಿರು ನಿಷ್ಠುರವಾಗಿಯೆ ಹೇಳಿದಳು. ಜಂಪಾನಾಯ್ಕನಿಗೆ ಆ ಸಂದರ್ಭದಲ್ಲಿ ಯಾವ ಮಾತುಗಳು ತಲೆಯೊಳಗೆ ಬರದಂತೆ ಮೆದುಳಿನ ಭಾಗವನ್ನ ನಿಷ್ಕ್ರಿಯಗೊಳಿಸಿಕೊಂಡಿದ್ದ.

ಮದುವೆ ಭರ್ಜರಿಯಾಗೆ ಆಯಿತು. ಚಿಂಗ್ಲಿಯ ಕೆಟ್ಟ ಮನಸ್ಸು ಜಾಗ್ರತಗೊಂಡಿತ್ತು. "ಲೇ ಅತ್ತೆ ನನ್ನ ಗುಣ, ಚಾರಿತ್ರ್ಯದ ಬಗ್ಗೆ ಮಾತಾಡಿದ್ದೆ ಅಲ್ವಾ, ಮಾಡ್ತಿನಿ ನೋಡು ನಿನಗೆ, ಬದುಕಿರುವವರೆಗೂ ನರಳಿ ನರಳಿ ಸಾಯಬೇಕು." ಒಳಗೊಳಗೆ ಕತ್ತಿ ಮಸೆಯತೊಡಗಿದಳು. ಸಂಜೆಯಾಗುತ್ತಿದ್ದಂತೆ "ಅತ್ತೆ ಕಾಲು ಒತ್ಲ, ನನ್ನ ಸೋದರತ್ತೆ ನಿನಗಾಗಿ ನಾನು ಏನು ಬೇಕಾರು ಮಾಡೋದಕ್ಕೆ ಸಿದ್ಧ ಹೇಳು ಏನು ಮಾಡಲಿ" ಗಿಲೀಟಿನ ಮಾತುಗಳ ಹಿಂದಿನ ವ್ಯಂಗ್ಯವನ್ನ ಗುರುತಿಸಿದ ಸೋಮ್ಲಿಬಾಯಿ "ಆಯ್ತು ನಡಿಯೆ, ನಂದೇನು ಸೇವೆ ಮಾಡಬೇಡ ನಿಮ್ಮ ಮಾವನಿಗೆ ಬೇಕಾರ ಮಾಡು. ಎಲ್ಲೆಲ್ಲಿ ಏನೇನು ಸೇವೆ ಮಾಡಿ ಬಂದಿಯ ಅಂತ ಗೊತ್ತೈತೆ ನನ್ನ ಎದುರು ಗಾಂಚಾಲಿ ಮಾಡಾಕ ಹೋಗಬೇಡ" ಒಳಗೆ ಅದುಮುವ ಪ್ರಯತ್ನ ಮಾಡಿದಳು ಸೋಮ್ಲಿ. "ಆತು ಬಿಡತ್ತೆ ಬೇಜಾರು ಆಗಬೇಡ ಯಾವ ಸೇವೆ ಎಲ್ಲಿ ಮಾಡಬೇಕು ಗೊತ್ತೈತೆ ಎಲ್ಲದಕ್ಕೂ ಕಾಲ ಬರುತ್ತೆ ಅವತ್ತು ಮಾತಾಡ್ತಿನಿ" ಸೇರಿಗೆ ಸವ್ವಾಸೇರು ಅನ್ನೊ ಹಂಗೆ ಉತ್ತರಕ್ಕೆ ಪ್ರತ್ಯುತ್ತರ ಕೊಟ್ಟಿದ್ದಳು ಚಿಂಗ್ಲಿಬಾಯಿ. ಸೋಮ್ಲಿಗೆ ಮಾತ್ರ ಅವಳ ಮಾತುಗಳು ನಿದ್ದೆ ಗೆಡಿಸಿದ್ದವು. ಮಗ ಮೆಲ್ಲಗೆ ಕೈ ಜಾರುತ್ತಿದ್ದಾನೆ ಅನ್ನೋದು ಖಾತ್ರಿಯಾಗಿತ್ತು. ಅವಳ ಗಂಡ ಜಾಂಪಾ ಯಾವತ್ತು ಏನು ಅನ್ನದವನು ಕೈ ತುತ್ತು ತಿನಿಸಿದವನು ಜೊತೆ ಬಿಟ್ಟು ಇಲ್ಲದವನು ಯಾಕೊ ಬದಲಾದಂತೆ ಅನಿಸಿತು ಯಾಕೆ? ಇವಳು ಅಸಾಮಾನ್ಯದವಳು, ಏನಿರಬಹುದು ಇವಳ ಮುಂದಿನ ನಡೆ ಯೋಚಿಸಿ ತಲೆನೋವು ಬಂದಿತು. ಸೋಮ್ಲಿಗೂ ಚಿಂಗ್ಲಿಗೂ ಇಪ್ಪತ್ತು ವರ್ಷಗಳಷ್ಟು ಅಂತರ. ಅದು ಅಲ್ಲದೆ ಅವಳ ತಾಂಡದ ಪಕ್ಕ ಊರುಗಳಿದ್ದವು. ಅಲ್ಲಿಯ ಹುಡುಗರ ಸಂಪರ್ಕ ಇತ್ತು ಚಿಂಗ್ಲಿಗೆ ಎನ್ನುವುದು ಗುಲ್ಲೆದ್ದಿತು. ಅದರ ಬಗ್ಗೆ ಸ್ವತಃ ಚಿಂಗ್ಲಿಯ ಅಪ್ಪ ಅಮ್ಮ, ಅವಳ ಸಹೋದರರೆ ತಲೆ ಕೆಡಿಸಿಕೊಂಡಿರಲಿಲ್ಲ. ಮದುವೆಗೆ ಮುಂಚೆ ಅವಳು ಸ್ವಂತ ಜಾಂಪಾನ ಹಿರಿಯಣ್ಣನ ಮಗನ ಜೊತೆಗೆ ಓಡಾಡಿದ್ದಳು. ಇಷ್ಟು ಜೋರು ಹುಡುಗಿ ಏನು ಬಾಳೇವು ಮಾಡ್ತಾಳೊ ಶಿವನಿಗೆ ಗೊತ್ತು ಅಂತ ಮಂದಿ ಅಂಬೋಣವಾಗಿತ್ತು.

ಚಿಂಗ್ಲಿ ಮಾತ್ರ ಸೇಡಿನ ಕಿಡಿಯಲ್ಲಿ ಸುಡುತ್ತಿದ್ದಳು. ಮುಂದಿನ ತನ್ನ ನಡೆಯನ್ನ ಬಹಳ ಎಚ್ಚರಿಕೆ ಮತ್ತು ನಾಜೂಕಿನಿಂದಲೆ ಇಡುತ್ತಿದ್ದಳು. ಮನೆಯಲ್ಲಿ ಎಲ್ಲರ ಪ್ರೀತಿಯನ್ನ ಗಳಿಸಿದ್ದಳು, ಯಾರೊಬ್ಬರು ಚಿಂಗ್ಲಿಯ ಬಗ್ಗೆ ಕಂಪ್ಲೆಂಟ್ ಮಾಡಿರಲಿಲ್ಲ.

ಅಕ್ಕಪಕ್ಕದವರು ಕೂಡ "ಹುಡುಗಿ ಭಾರಿ ಒಳ್ಳೆಯವಳು, ದೊಡ್ಡ ಶ್ರೀಮಂತರ ಮನೆಯೊಳಗೆ ಹುಟ್ಟಿದರೂ, ಒಂಚೂರು ದಿಮಾಕಿಲ್ಲ, ಗರ್ವ ಇಲ್ಲ. ಸೊಕ್ಕು ಸೇಡವಿಲ್ಲವ್ವ ಬಂಗಾರದಂತಾಕಿ." ಯಾರಿಗೆ ಕೇಳಿದರು ಇವೇ ಮಾತುಗಳು. "ಅಲ್ಲೆ ಚಿಂಗ್ಲಿ ಒಳಗೆ, ಹೊರಗೆ ಎಲ್ಲಾ ಕೆಲ್ಸ ನೀನ ಮಾಡ್ತಿಯಾ ಮನಿ ತುಂಬ ಹೆಣ್ಣು ಹುಡುಗಿಯರಿದ್ದಾರೆ. ಯಾವತ್ತು ಮನೆ ಕೆಲಸ ಮಾಡಿದ್ದನ್ನೆ ನೋಡಲಿಲ್ಲ. ಇದ್ರ ನಿನ್ನಂತ ಸೊಸೆ ಇರಬೇಕು ನೋಡವ್ವ, ನಮ್ಮವೂ ಅದಾವ ಒಂದ ಕೆಲಸ ಮಾಡಿದ್ರೆ ಮತ್ತೊಂದನ್ನ ನಾ ಯಾಕೆ ಮಾಡಬೇಕು? ಏನು ಎಲ್ಲಾ ನನಗೆ ಕೊಟ್ಟು ಬಿಡ್ತಿರಾ? ಮಾತಿಗೊಮ್ಮೆ ಪ್ರಶ್ನೆ ಮಾಡ್ತಾರವ್ವ" ಪಕ್ಕದ ಮನಿ ಮುದುಕಿ ಪಾರಿಬಾಯಿ ಹೊಗಳಿದ್ದೆ ಹೊಗಳಿದ್ದು. ಚಿಂಗ್ಲಿ ಮಾತ್ರ ತನ್ನ ನಡೆಯನ್ನ ನಡೆಯಲು ಸಮಯ ಸಾಧಿಸುತ್ತಿದ್ದಳು. ಯಾರು ಮಾನಸಿಕವಾಗಿ ಸ್ವಲ್ಪ ದುರ್ಬಲರದಾರ ಅನ್ನೋದನ ಅಧ್ಯಯನ ಮಾಡುತ್ತಿದ್ದಳು. ಅದೇ ಸಂದರ್ಭಕ್ಕೆ ಮೀನಾಕ್ಷಿ ಹೊರಗಾದಳು. ಅವಳ ಹತ್ತಿರ ಹೋಗಿ ಅವಳ ಮನಸ್ಸನ್ನ ಸಂಪೂರ್ಣವಾಗಿ ಓದುವ ಪ್ರಯತ್ನ ಮಾಡಿದಳು. ಸೋಮ್ಲಿಬಾಯಿ ಸಾಧ್ಯವಾದಷ್ಟು ತನ್ನ ಮಗಳು ಮೀನಾಕ್ಷಿಯನ್ನ ಅವಳಿಂದ ದೂರವಿಡಬೇಕು ಅಂದುಕೊಂಡಳು. ಒಂದೇ ಮನೆ ಎಲ್ಲಿ ಏನು ನಡೆಯುತ್ತೊ ತಿಳಿಯದಾಗಿತ್ತು. ಹಾಗಾಗಿ ನಿಗಾವಹಿಸುವುದು ಜಡವಾಗಿತ್ತು. ಆದರೂ ಮಗಳಿಗೆ "ತಾಯಿ ಇನ್ನುಮೇಲೆ ಬಹಳ ಎಚ್ಚರಿಕೆಯಿಂದ ಇರವ್ವ, ಯಾರನ್ನು ನಂಬಬೇಡ, ನಿನ್ನ ನಂಬಿಕೆಯನ್ನ ಬಿಡಬೇಡ. ಹೆಣ್ಣು ಕನ್ನಡಿ ಇದ್ದಂತೆ ಹೊಡೆದರೆ ನೂರು ಬಿಂಬಗಳಾಗುತ್ತವೆ." ಬದುಕಿನ ಮರ್ಮವನ್ನು ಸೂಕ್ಷ್ಮವಾಗಿಯೆ ಹೇಳಿದಳು. ಹದಿಮೂರು ವರ್ಷದ ಮೀನಾಕ್ಷಿ ಎಂಟನೆಯ ತರಗತಿಯಲ್ಲಿ ಓದುತ್ತಿದ್ದಳು ತಾಯಿಯ ಮಾತು ಅರ್ಥಮಾಡಿಕೊಳ್ಳಲಿಲ್ಲ "ಹೂಂ" ಅಂದವಳೆ ಹೊಸ ಆಕರ್ಷಣೆಯ, ಹೊಸ ಜಗತ್ತಿನ ಮಾತುಗಳನ್ನ ಹೇಳುತ್ತಿದ್ದ ಅವಳ ಅತ್ತಿಗೆ ಚಿಂಗ್ಲಿ ಅಂದರೆ ಪಂಚಪ್ರಾಣ. "ಅಲೆಲೆಲೆ, ಹಿಂಗೊ ವಿಷಯ, ನನ್ನ ಮಗಳ ಮೂಲಕ ನನ್ನ ಅಂತ್ಯವನ್ನ ಹಾಡುವ ಯೋಚನೆ ಮಾಡುತ್ತಿದ್ದಾಳೆ. ಈ ಹಾಳಮನಿಯವಳು" ಯಾರಿಗೂ ಹೇಳದ ಸಂಕಟ. ಮೀನಾಕ್ಷಿಯ ದೇಹರಚನೆಯಲ್ಲಾದ ಬದಲಾವಣೆ ಪಕ್ಕದ ಮನೆಯ ಜಂಕ್ಲಿನಾಯ್ಕನಿಗೆ ಕುತೂಹಲ ಕೆರಳಿಸಿತು. ಅವಳು ತಾಂಡಕ್ಕೆ ಬಂದಾಗ ಸೀದ ಟ್ರಾಕ್ಟರ್ ತಗೊಂಡು ಎದುರು ಬೇಕಂತಲೆ ದಿಮಾಕಿನಿಂದ ಓಡಿಸುತ್ತಿದ್ದ. ಪಕ್ಕದ ಮನೆಯವನು ಮೆಲ್ಲತ್ತು ಒಂದೆ ಕುಲದವನು ಅಣ್ಣನಾಗಬೇಕು ಅಂತ ಸಲುಗೆಯಿಂದ "ಏನು ಬಾರಿ ಡೌಲು ಮಾಡ್ತಿದ್ದಿಯಾ" ಮಿನಾಕ್ಷಿ ಬಾಯಿ ಸುಮ್ಮನಿರದೆ ಕೇಳಿದಳು. "ಮತ್ತ ನೀನು? ದೊಡ್ಡಾಕಿ ಆಗಿ ಅಂತ ಇಲ್ಲದ ಜಂಬ ನಿನಗೆ" ಜಂಕ್ಲಿ ಹೇಳಿದ್ದ ಕದ್ದು ಕೇಳಿಸಿಕೊಂಡ ಚಿಂಗ್ಲಿ ಇಬ್ಬರು ಹತ್ತಿರ ಬರುವುದಕ್ಕೆ ಮಾರ್ಗೋಪಾಯಗಳನ್ನು ಹುಡುಕತೊಡಗಿದಳು. "ಪರವಾಗಿಲ್ಲ ನನ್ನ ನಾದನಿಗೆ ಗಂಡಸರನ್ನ ಮಾತಾಡಿಸುವಷ್ಟು ಧೈರ್ಯ ಇದೆ ಅಂತ ಗೊತ್ತಿರಲಿಲ್ಲ" ಕೊಂಕು

ನುಡಿದಳು. "ಏನಿಲ್ಲ ಹಾಗೆ ದಿಮಾಕು ಮಾಡ್ತಿದ್ದ ನನ್ನ ಹತ್ರ ನಡಿಯಲ್ಲ ಅಂದೆ" ಅಂದಳು. "ಏಯ್ ಹುಚ್ಚಕೋಡಿ ಹಂಗೆಲ್ಲಾ ಅನ್ನಬಾರದು ಹುಡುಗರಿಗೆ ಸಿಟ್ಟು ಬರುತ್ತೆ ಆಮೇಲೆ ನಿನ್ನ ಮಾತಾಡಿಸುವುದಿಲ್ಲ. ಹುಡುಗ ಚೆಂದ ಅದಾನ, ಟ್ರಾಕ್ಟರ್ ಓಡಿಸುವಾಗ ಅವನನ್ನ ನೋಡಬೇಕು ಎಂಥ ಹುಡುಗಿಯಾದರು ಅವನ ಮೇಲೆ ಮನಸ್ಸು ಬರುತ್ತೆ" ತಲೆಯೊಳಗೆ ಹುಳ ಬಿಟ್ಟಳು. "ಛೆ ಅವನು ನಮ್ಮ ಕುಲದವನೆ ಅವನ ಮೇಲೆ ಮನಸ್ಸಿಟ್ಟು ಏನ ಮಾಡೋದೈತೆ" ಅಂದು ಸುಮ್ಮನಾದಳು ಮೀನಾಕ್ಷಿ. "ಹಾಂ, ನಿಮಗೂ ಅವರಿಗೂ ಸಂಬಂಧ ಆಗುತ್ತೆ. ಅವರು ನಮ್ಮ ಕುಲದಲ್ಲಿ ಅಂದ್ರೆ ರಾಠೋಡ್ ಹುಡುಗಿಯರನ್ನಾದರೂ ಮದುವೆ ಆಗಬಹುದು ಇಲ್ಲಾ ನಿಮ್ಮ ಚವ್ಹಾಣ್ ಕುಲದಲ್ಲಾದರೂ ಆಗಬಹುದು. ಅದಕ್ಕೆ ಅವನು ನಿನ್ನ ಹತ್ರ ಬರಾಕ ಪ್ರಯತ್ನ ಮಾಡ್ತಿದ್ದಾನೆ." ಅಂದು ಅವಳ ಮಕ ನೋಡಿದಳು. ಮೀನಾಕ್ಷಿಯ ಮುಖದಲ್ಲಿ ಏನೂ ಬದಲಾವಣೆ ಆಗದ್ದನ್ನ ಕಂಡ ಚೆಂಗ್ಲಿ ಮಿಕ ತಪ್ಪಿಸಿಕೊಳ್ಳುವ ಹಾಗೆ ಕಾಣ್ತಿದೆಯಲ್ಲ. ಆ ಹುಡುಗನಿಗೆ ಹೇಳಬೇಕು ಇವಳ ಅಸ್ತಿತ್ವವನ್ನೆ ನಿರ್ನಾಮ ಮಾಡಲು ಅಂದುಕೊಂಡಳು.

ಅವನು ಅವಳನ್ನ ಪ್ರೀತಿಸುತ್ತಿದ್ದ, ಅವಳಿಗಾಗಿ ಏನು ಬೇಕಾದರು ಮಾಡಲು ಸಿದ್ಧ ಎಂಬುದನ್ನ ವಯಸ್ಸಲ್ಲದ ವಯಸ್ಸಿನ ಮೀನಾಕ್ಷಿಯ ಮನಸ್ಸಿನೊಳಗೆ ಬಿಜಾಂಕುರ ಮೂಡಿಸಿದ್ದ. ಸಾಲದ್ದಕ್ಕೆ ಅವಳ ಅತ್ತಿಗೆಯೆ ಅವಳ ಸಹಾಯಕ್ಕೆ ನಿಂತು ಅವಳ ಮೆದಳು ಮತ್ತು ಮನಸ್ಸಿನೊಳಗೆ ಜಂಕ್ಲಿನಾಯ್ಕನೆ ತುಂಬಿಕೊಳ್ಳುವಂತೆ ಮಾಡಿ ಅದರ ಸೂತ್ರವನ್ನ ತನ್ನ ಕೈಯೊಳಗೆ ಹಿಡಿದುಕೊಂಡಿದ್ದಳು. ಮೊಟ್ಟಮೊದಲ ಬಾರಿಗೆ ಜಂಕ್ಲಿ ಮತ್ತು ಮೀನಾಕ್ಷಿ ಅವರ ಕೊಟ್ಟಿಗೆಯಲ್ಲಿ ಸೋಮ್ಲಿಬಾಯಿಗೆ ಕೇಳಿಸುವಂತೆ ಹಾಗೂ ಕಾಣುವಂತೆ ಜೋರಾಗಿ ನಗುವುದು, ಮಾತಾಡುವುದು, ಅವಳ ಎದೆ ಮತ್ತು ಇತರೆ ಭಾಗಗಳನ್ನ ಜಂಕ್ಲಿ ಮುಟ್ಟುವಂತೆ ಚೆಂಗ್ಲಿ ಹೇಳಿ "ನಾನು ಇಲ್ಲೆ ಕಾಯುತ್ತೇನೆ ನೀವು ಸುರುಮಾಡ್ರಿ" ಅಂದು ಸೋಮ್ಲಿಬಾಯಿ ಹೊಲದಿಂದ ಬರುವುದನ್ನ ನೋಡಿ ಮುಸಕ್ಕನೆ ಕೊಟ್ಟಿಗೆ ಬಿಟ್ಟು ಮನೆ ಸೇರಿಕೊಂಡಳು. ಬಿಸಿಲಲ್ಲಿ ಬಳಲಿ, ದಣಿದು ಹೈರಾಣಾಗಿ ಬಂದಿದ್ದ ಸೋಮ್ಲಿಬಾಯಿಗೆ ತನ್ನ ಮಗಳು ಮೀನಾಕ್ಷಿಯ ಧ್ವನಿ ಕೇಳಿಸಿತು. ಪಕ್ಕದಲ್ಲಿ ಮತ್ತೊಬ್ಬ ಗಂಡು ಯಾರಿರಬಹುದು. ತಮ್ಮಂದಿರ ಜೊತೆ ಹೀಗೆ ಮಾತಾಡುವುದಿಲ್ಲ. ಅವಳ ರಕ್ತದೊತ್ತಡ ಹೆಚ್ಚಾಯಿತು. ಅವಳಿಗೆ ಅರಿವಿಲ್ಲದೆ ಕಾಲುಗಳು ಕೊಟ್ಟಿಗೆಯ ಕಡೆಗೆ ಹೊರಟಿದ್ದವು "ತಂದೆ ಯಾವುದೇ ಅಹಿತಕರ ಘಟನೆ ನೋಡದಂತೆ ಮಾಡಪ್ಪ. ತಾಯಿ ಮರಿಯಮ್ಮ ಏನವ್ವ ಇದು ನಿನ್ನ ಲೀಲೆ. ಮನೆಯ ಮುಂದೆ ಜನರ ನಡುವೆ. ಎಂಥ ಕಾಲ ಬಂತಪ್ಪ ಅದು ನನ್ನ ಸ್ವಂತ ಮಗಳು ಶಿವ ಶಿವ" ಅವರ ಮಾತು ಕೇಳಿ ಹೃದಯ ಬಾಯಿಗೆ ಬಂದಂಗಾಗಿತ್ತು. "ಸಣ್ಣವಳು ಬುದ್ದಿ ಹೇಳಿದರೆ ಸರಿಹೋಗುತ್ತಾಳೆ" ಅಂದ್ಕೊಂತ ಒಳಗೆ ಇಣುಕಿದಳು.

ಜಂಕ್ಲಿ ಅವಳನ ಬಿಟ್ಟು ಸರಸರನೆ ಹೊರಗೆ ಓಡಿದ. ಸೋಮ್ಲಿಬಾಯಿಗೆ ಮಾತುಗಳೆ ಹೊರಡದಾದವು. ಆ ಕ್ಷಣದಲ್ಲಿ ಏನನ್ನು ಮಾತಾಡಲಿಲ್ಲ. ರಾತ್ರಿ ಊಟವಾದ ಮೇಲೆ ಅವಳೊಬ್ಬಳನ್ನೆ "ತಾಯಿ ಮೀನಾಕ್ಷಿ ಬಾ ಮಗಳೆ" ಕರೆದಳು ಸೋಮ್ಲಿ "ಏನಬೆ, ಏನಾಯ್ತು ನಾ ಬರಲ್ಲ" ಅಂದಳು. ಹಠಮಾರಿ, ತಾನು ಹೇಳಿದ್ದೆ ಆಗಬೇಕು ಎನ್ನುವ ಜಿದ್ದಿ ಸ್ವಭಾವ ಹೇಳಿದ್ದನ್ನ ಕೇಳುವುದಿಲ್ಲ ಎನ್ನುವುದು ಸೋಮ್ಲಿಬಾಯಿಗೆ ಗೊತ್ತು ಹಾಗಂತ ಹೀಗೆ ಬಿಟ್ಟರೆ ಮಾನಮರ್ಯಾದೆ ತಗದು ಬೀದಿಪಾಲು ಮಾಡ್ತಾಳ. "ಬಾರವ್ವ ಕೆಲಸ ಇದೆ" ಒತ್ತಾಯದಿಂದ ಕರೆದಳು. ಮಂದಿ ಯಾರು ಇಲ್ಲದ ಜಾಗಕ್ಕೆ ಕರೆದುಕೊಂಡು ಹೋದಳು. ಘಟನೆಯ ಸೂತ್ರಧಾರಿ ಚಿಂಗ್ಲಿ ತನ್ನ ತಾಯಿ ಕೇಳಿದರೆ ಏನು ಉತ್ತರ ಹೇಳಬೇಕು ಎನ್ನುವ ಪಟ್ಟಿಯನ್ನ ಕಲಿಸಿದ್ದಳು. ಹಾಗಾಗಿ ಅದೇ ವಿಷಯ ಎನ್ನುವುದನ್ನ ಖಾತ್ರಿ ಪಡಿಸಿಕೊಂಡೆ "ಏನವ್ವ ಹೇಳು? ಅದೆ ತಾನೆ ನಾನು ಜಂಕ್ಲಿ ಕೊಟ್ಟಿಗೆಯೊಳಗೆ ಮಾತಾಡುತಿದ್ದದ್ದು. ಅವನು ಏನೊ ಕೇಳಾಕ ಬಂದಿದ್ದ ಅಲ್ಲಿ ಮಾತಾಡ್ತ ನಿಂತಿದ್ವಿ ಅಷ್ಟೆ" ಗಿಳಿಪಾಠ ಒಪ್ಪಿಸಿದಳು. "ನೋಡು ಮಗಳೆ ನೀ ಇನ್ನೂ ಬಹಳ ಚಿಕ್ಕವಳು, ಓದುತ್ತಿದ್ದಿಯಾ, ಚೆನ್ನಾಗಿ ಓದಿ ಒಳ್ಳೆ ನೌಕರಿ ಮಾಡಿಕೊಂಡ್ರೆ ನಮ್ಮಂಗೆ ಬಿರಿಬಿಸಿಲೊಳಗೆ ಹೊಲದಾಗ ಕತ್ತೆ ದುಡದಂಗೆ ದುಡಿಯೋದು ತಪ್ಪುತ್ತದೆ. ನೋಡವ್ವ ನಮ್ಮದು ಮರ್ಯಾದಸ್ಥ ಕುಟುಂಬ, ಆರಮಂದಿ ದೊಡ್ಡಪ್ಪಂದಿರು, ಚಿಕ್ಕಪ್ಪಂದಿರು ಅದಾರ, ನೀನು ಮಾಡೊ ಸಣ್ಣ ವಿಷಯದಿಂದ ನಿನ್ನ ದೊಡ್ಡಪ್ಪ, ಚಿಕ್ಕಪ್ಪಂದಿರ ಘನತೆಗೆ, ಗೌರವಕ್ಕೆ ಧಕ್ಕೆ ಬರುತ್ತೆ. ಹೆಣ್ಣು ಒಮ್ಮೆ ಗುಣ ಕೆಡಿಸಿಕೊಂಡರೆ ಇದ್ದರೂ ಸತ್ತಂತೆ" ತನ್ನ ಪಾಡಿಗೆ ಹೇಳುತ್ತಲೆ ಇದ್ದಳು. ಮೀನಾಕ್ಷಿ ಕೇಳಿಸಿಕೊಳ್ಳುವ ನಾಟಕ ಮಾಡಿದ್ದಳು. "ಆಯ್ತು ನಾ ಹೋಗಲ" ಅಂದಳು. "ಏಯ್ ಚಿನಾಲಿ ರಂಡಿ ನಾನು ಬೊಗಳ್ತಾ ಅದೀನಿ ನೀನು ಮನಸ್ಸಿಗೆ ಬಂದಂಗೆ ಮಾತಾಡ್ತಿ, ಅಷ್ಟು ಚಟಾನ ನಿನಗೆ" ಅಂದವಳೆ ಕಪಾಳಕ್ಕೆ ಬಾರಿಸಿದಳು. "ಏಯ್, ನಾ ಏನು ಮಾಡ್ದೆ ಅಂತ ಹೊಡಿತಿಯಾ. ನಾನೇನು ಮಾಡಬಾರದ ಮಾಡಿದೆ. ಆ ಹುಡುಗ ಏನೋ ಕೇಳಿದ ಹೇಳ್ತಿದ್ದೆ. ಇನ್ನ ಮೇಲೆ ನೋಡು ಏನು ಮಾಡ್ತಿನಿ ಅಂತ" ಅಂದವಳೆ ಓಡಲು ನೋಡಿದಳು. "ಲೇ ಬೇವರ್ಸಿ ನಿಮ್ಮಣ್ಣ ಈರಗ ವಿಷಯ ಗೊತ್ತಾದ್ರ ನಿನ್ನ ಜೀವಾನೆ ತಗಿತಾನ" ಕೂದಲು ಹಿಡಿದು ಬಿಸಾಕಿದಳು. "ನೀನು ಅವನು ಏನು ಹರ್ಕೊಂತಿರೊ ಹರ್ಕೊಳ್ಳಿ" ಅಂದವಳೆ ತಪ್ಪಿಸಿಕೊಂಡು ಓಡಿದಳು.

ಸೋಮ್ಲಿಬಾಯಿ ಬಹಳ ನೊಂದುಕೊಂಡಿದ್ದಳು. ಜಾಂಪಾನ ಮುದ್ದಿನ ಮಗಳು ಅಂಗೈಯೊಳಗಿಟ್ಟು ಗಿಳಿ ಸಾಕಿದಂಗೆ ಸಾಕಿದ್ದ. ಅವನಿಗೆ ಗೊತ್ತಾದರೆ ಮೊದಲು ಅವನೆ ಸಾಯುತ್ತಾನೆ ಎನ್ನುವ ಅಂಜಿಕೆಯಿಂದ ಅವನ ಕಿವಿಗೆ ಮುಟ್ಟಿಸಲಿಲ್ಲ. ಅವಳು ಜಂಕ್ಲಿಯ ಜೊತೆಗೆ ಮಾತಾಡುವುದನ್ನ ಅವನು ಮೀನಾಕ್ಷಿ ಮೈ ಮುಟ್ಟುವದನ್ನ ಕಣ್ಣಾರೆ ಕಂಡಿದ್ದ ಈರನಾಯ್ಕ ಸಿಟ್ಟಿಂದ ಕುದಿಯತೊಡಗಿದ. ಅವಳು ಕಂಡಲ್ಲೆ

ಕೂದಲ ಹಿಡುದು ಜಾಡಿಸಿ ಒದ್ದು "ಯಾರ ಮರ್ಯಾದೆ ತಗಿಯಾಕ ಹತ್ತಿ, ಮೈಮೇಲೆ ಕಬರೈತ, ಬೇವರ್ಸಿ ಮುಂಡೆ" ದೊಡ್ಡ ಕಲ್ಲಿಂದ ಬೆನ್ನ ಮೇಲೆ ಹೇರಿದ. ಹೊರಗಾಗಿದ್ದ ಮೀನಾಕ್ಷಿ ತಗೊಂಡಿದ್ದ ಅರಿವೆಯಿಂದ ರಕ್ತ ಹೊರಗೆ ಚೆಲ್ಲಿತ್ತು ಆದರೂ ಕರುಣೆ ತೋರದೆ ಈರನಾಯ್ಕ ರಾಕ್ಷಸನಂತೆ ವರ್ತಿಸಿದ್ದ. "ಕೊಲ್ತಿಯ ಕೊಂದು ಬಿಡು ನಾನು ಅವನ ಜೊತೆಗೆ ಓಡಿಹೋಗ್ತೀನಿ ಏನು ಮಾಡ್ತಿಯೊ?" ಜೋರಾಗಿ ಚೀರಿದಳು. ಬಿಟ್ರೆ ಮಾಡೆ ಬಿಡುವ ಯೋಚನೆಯಲ್ಲಿದ್ದಳು. ಜಂಕ್ಲಿ ಏನು ಆಗದವನಂತೆ ಟ್ರಾಕ್ಟರ್ ಓಡಿಸುತ್ತಾ ಆರಾಮದಿಂದಿದ್ದ.

ಈರ ಅವನಿಗೂ ವಾರ್ನಿಂಗ್ ಕೊಟ್ಟಿದ್ದ, "ಲೇ ಜಂಕ್ಲಿ ನೋಡು ನೀನು ಅಕಿ ಅಣ್ಣ ತಂಗಿ ಆಗ್ತಿರಿ. ನೀನೇನಾದರು ರಾಠೋಡ್ ಆಗಿದ್ದರೆ ನಿನ್ನ ಮದುವೆ ಆಗಿದ್ದರು ಎರಡನೇಯ ಹೆಂಡತಿಯಾಗಿ ಇಟ್ಕೊ ಅಂತಿದ್ದೆ. ನಮ್ಮ ಮನಿತನದ ಪ್ರಶ್ನೆ ಸುಮ್ಮನೆ ದೂರಾಗು ತಮ್ಮ" ಧಮಕಿ ಹಾಕಿದ್ದ. "ಅಲ್ಲ ಈರ ನಾನಾಗಿ ಯಾವತ್ತು ಮೀನಾಕ್ಷಿ ಮಾತಾಡಿಸಿಲ್ಲ, ಆಕೀನ ನನ್ನ ಹುಡುಕಿಕೊಂಡು ಬಂದು ಮಾತಾಡಿಸುತ್ತಾಳೆ. ನಾ ಏನು ಮಾಡಲಿ ಹೇಳು" ಅಂದ. "ಲೇ ಬೇವರ್ಸಿ ನನ ಮಗನೆ ಅವಳು ಬರೊಹಂಗೆ ಮಾಡಿದವರು ಯಾರು? ನೋಡ ತಮ್ಮ ಇದೆಲ್ಲಾ ಸರಿ ಅಲ್ಲ ಹಿಂಗ ಮುಂದವರದರೆ ಒಂದು ನಿನ್ನ ತಗಿತೀನಿ, ಇಲ್ಲಾ ಅವಳನ್ನ ಕೊಂದು ಹಾಕ್ತೀನಿ" ಅಂದು ಬಂದಿದ್ದ. ಜಂಕ್ಲಿ ಜನಬಲ, ಹಣಬಲ ಇದಿದ್ದರಿಂದ ಅದು ಅಲ್ಲದೆ ಅವನ ಚಿಕ್ಕಪ್ಪಂದಿರು ಇಂತಹ ನೂರಾರು ಕೇಸುಗಳನ್ನ ಮಾಡಿದ್ದರಿಂದ ಅವರೆ ಅವನಿಗೆ ಆದರ್ಶ. ಹಾಗಾಗಿ ಅವನ ಮಾತುಗಳು ಅವನ ಮನಸ್ಸಿನ ಮೇಲೆ ಯಾವ ಪರಿಣಾಮ ಬೀರಲಿಲ್ಲ. "ಹೋಗು ನಿಮ್ಮ ಹುಡುಗಿನ ಹದ್ದುಬಸ್ತಿನೊಳಗೆ ಇಡು, ನಾನು ಗಂಡಸು ಬಂದರೆ ನೂರೆಂಟು ಮಂದಿಯನ್ನ ಆಳ್ತೀನಿ" ಅಂದ.

ಚಿಂಗ್ಲಿ ಶಕುನಿಯಂತೆ ಒಳಗೊಳಗೆ ಖುಷಿ ಪಟ್ಟಿದ್ದಳು. ತಾನು ಎಸೆದ ದಾಳಗಳು ಸರಿಯಾಗೆ ಬಿದ್ದಿದ್ದಕ್ಕೆ ಬಹಳ ಖುಷಿಯಾಗಿತ್ತು ಅವಳಿಗೆ ಒಂದೆ ಕಲ್ಲಿಗೆ ಇಡೀ ಮನೆಯ ನೆಮ್ಮದಿ ಹಾಳಾಗಿತ್ತು. ಪ್ರತಿದಿನ ಬೈಗಳು, ಹೊಡೆದಾಟ, ಚೀರಾಟ ಚಿಂಗ್ಲಿಗೆ ವಿಕೃತ ಸಂತೋಷ. ಅದು ಎಲ್ಲಿಗೆ ಹೋಯಿತು ಅಂದರೆ ಈರ ಸ್ವಂತ ತಂಗಿ ಒಡಹುಟ್ಟಿದವಳು ಅನ್ನೋದನ್ನ ನೋಡದೆ ಕತ್ತು ಹಿಸುಕಿ ಸಾಯಿಸಿದ್ದ ಅವಳು ಸತ್ತ ಮೇಲೆ ಸೋಮ್ಲಿಗೆ ನೋವು ಆರಂಭವಾಗಿ ಮಗಳು ಸತ್ತ ಆರೇ ತಿಂಗಳಲ್ಲಿ ಅವಳು ಸತ್ತಳು. ಜಾಂಪಾನಾಯ್ಕ ಪ್ರತಿದಿನ "ಹೊಲಕ್ಕೆ ಹೋದರು ಜೋಡಿಯಾಗಿದ್ದ ಜನುಮದ ಜೋಡಿ ಹಕ್ಕಿ ಹೋದಮೇಲೆ ಒಂಟಿ ಜೀವ ಯಾಕೆ ಬೇಕು?" ಗೋಳಾಡುತ್ತಿದ್ದ.

ಅದಾಗ ಸುಮಾರು ವರ್ಷಗಳೇ ಕಳೆದವು ಮೀನಾಕ್ಷಿ ಅಕ್ಕಂದಿರು ಒಳ್ಳೆ ನೌಕರಿ ತಗೊಂಡು ಮದುವೆ ಮಾಡಿಕೊಂಡು ನೆಮ್ಮದಿಯಿಂದ ಗಂಡನೆ ಮನೆಯಲ್ಲಿದ್ದಾರೆ.

ಜಂಕ್ಲಿಗೆ ಮೂರು ಮಕ್ಕಳು ಕಿಂಚತ್ತು ಪಾಪ ಪ್ರಜ್ಞೆ ಇಲ್ಲದೆ ಅಪ್ಪಿತಪ್ಪಿಯೂ ತಾನು ಮಾಡಿದ ತಪ್ಪಿನ ಪ್ರಜ್ಞೆ ಇಲ್ಲದೆ ಆರಾಮದಿಂದಿದ್ದಾನೆ. ಇಡೀ ಕುಟುಂಬದ ಬೇರುಗಳನ್ನೆ ಅಲುಗಾಡಿಸಿದ ಚಿಂಗ್ಲಿ ಈರನಾಯ್ಕ ಪ್ರಾಣಸಖಿ ಅವಳಾಡಿದ ಸಂಪೂರ್ಣ ನಾಟಕ ಈರನಾಯ್ಕನೆ ತಿಳಿದಿದೆಯೊ ಇಲ್ಲವೊ ಆರೇಳು ಮಕ್ಕಳನ್ನ ಹೆತ್ತು ಅವು ದುಡಿಮೆ ಮಾಡುತ್ತಿವೆ. ಹುಲಿಯೂರ ಮಾತ್ರ ಮೀನಾಕ್ಷಿಗಾದ ಸ್ಥಿತಿ ಕಂಡು ಆಗಾಗ ಮರಗುತ್ತಾನೆ.

* * *

76. ಸಾಯದ ದೇಹವನ್ನ ದಹಿಸಿದ ಜಾನ್ಯ

ತಾಂಡಗಳಲ್ಲಿ ಮಮತೆ, ಕರುಣೆ, ಪ್ರೀತಿ ಮನೆ ಮಾಡಿತ್ತು. ಕ್ರೌರ್ಯ, ಮೋಸ, ವಂಚನೆ ಬಹಳ ಅಪರೂಪ ಮೂಲತಃ ವಲಸೆಗಾರರಾಗಿದ್ದ. ಬಂಜಾರರು ಜನರನ್ನ ಪ್ರೀತಿಸುವುದನ್ನ ಕಲಿತಿದ್ದಾರೆ ವಿನಃ ದ್ವೇಷಿಸುವುದನ್ನಲ್ಲ. ತಾಂಡಗಳಲ್ಲಿ ನೆಲಸಿದ ಮೇಲೆ ಅಲ್ಲಿಯ ಮಣ್ಣಿನ ಸಹವಾಸ, ಅಲ್ಲಿ ಸಂಸ್ಕೃತಿಯ ಪ್ರಭಾವ ಅವರ ಮೇಲಾಗಿತ್ತು. ಕ್ರಮೇಣ ನಾಗರೀಕತೆಯ ಹೊಸ ಅವಾಂತರಗಳಿಗೆ ತೆರೆದುಕೊಳ್ಳುತ್ತಿದ್ದಂತೆ ಒಳ್ಳೆಯದರೊಂದಿಗೆ ಕೆಟ್ಟದ್ದು ಪ್ರವೇಶ ಮಾಡಿತ್ತು. ಜಾನ್ಯನಾಯ್ಕ ಭದ್ರಾಯ್ಕನ ತಾಂಡದ ಪಕ್ಕದ ಮೊಕಲೂರು ತಾಂಡದ ಮತ್ತೊಂದು ಕೂಡು ಕುಟುಂಬವಾಗಿದ್ದ ಲಸಣುನಾಯ್ಕನ ಒಂಬತ್ತನೆಯ ಮಗ. ತಮ್ಮ ಪಾಡಿಗೆ ತಾವು ದುಡಿದು ತಿನ್ನುವ ಮಂದಿ, ಆದರೆ ಜಾನ್ಯ ಶೋಕಿಲಾಲ, ಚವ್ಹಾಣ್ ಪಂಗಡದವನಾಗಿದ್ದರಿಂದ ರಾಠೋಡ್ ಹುಡುಗಿಯರನ್ನ ಬಹಳ ಸಲುಗೆಯಿಂದಲೆ ಮಾತಾಡಿಸುತ್ತಿದ್ದ. ಸ್ವಯಂ ಉದ್ಯೋಗಿಯಾಗುವ ಬಯಕೆಯಿಂದ ಹಿಟ್ಟಿನ ಗಿರಣಿಯನ್ನ ತಾಂಡಕ್ಕೆ ತರುವ ಮೊದಲ ಪ್ರಯತ್ನ ಮಾಡಿ ಯಶಸ್ಸು ಕಂಡಿದ್ದ.

ಗಿರಣಿಗೆ ಬರುವ ಹುಡುಗಿಯರನ್ನ ಕೀಟಲೆ ಮಾಡುತ್ತ ಜುಂಜನ ಮಗಳು ಗಿರಜಿಯನ್ನ ಅದೇನು ಮೋಡಿ ಮಾಡಿದನೋ ಅವನೆ ಗಂಡ ಅಂತ ತಾಂಡದಲ್ಲೆಲ್ಲಾ ಹೇಳುತ್ತ ಅಡ್ಡಾಡತೊಡಗಿದಳು. ಮೊದಲೆ ಮದುವೆಯಾಗಿ ಮೂವರು ಮಕ್ಕಳಿರುವ ಜಾನ್ಯನಾಯ್ಕನ ಬಗ್ಗೆ ಗಿರಜಿ ತಲೆ ಕೆಡ್ಸಿ ಕೊಂಡಿರುವುದನ್ನ ಕೇಳಿ ಅವನ ಮೊದಲನೆಯ ಹೆಂಡತಿ ಪೀರಿಬಾಯಿ, "ಅದ್ಯಾವಳು ನನ ಸೌತಿ ನನ ಗಂಡನ್ನ ಮದುವೆಯಾಗ್ತಿನಿ ಅಂದವಳು. ನಾನು ಬದುಕಿರೊವರಿಗೂ ಸಾಧ್ಯನೆ ಇಲ್ಲ" ಅಂತ ಮಂದಿ ಮುಂದೆ ಬೊಯ್ಯುತ್ತಿದ್ದಳು. "ನಮ್ಮದು ಮದುವೆ ಆಗಿ ಸಂಸಾರನು ಆಗಿದೆ. ಆರು ತಿಂಗಳು ಹೊಟ್ಟೆಲೆ ಅದೀನಿ, ಇನ್ನೊಂದು ಮೂರು ತಿಂಗಳು ತಡ್ಕ ಅನ್ನು ಮಗುವಿನ ದಾಖಲೆ ಸಮೇತ ಮನಿಗ ಬರ್ತಿನಿ" ಅಕಿ ಚಾಪೆ ಕೆಳಗೆ ನುಗ್ಗಿದ್ರ, ಇಕಿ ರಂಗೋಲಿ ಕೆಳಗೆ ನುಸುಳಿದ್ದಳು. ಹಂಗಂತ ಗಿರಜಿ ಸುಳ್ಳು ಹೇಳಿರಲಿಲ್ಲ. ಗಿರಣಿ

ಜಾನ್ಯನಿಗೆ ಗಿರಜಿಯನ್ನ ಕಟ್ಟಿಕೊಳ್ಳುವುದು ಅನಿವಾರ್ಯವಾಗಿತ್ತು. ಆದರೆ ಮೊದಲನೇ ಹೆಂಡತಿ ಪೀರಿಬಾಯಿಯಿಯನ್ನ ಒಪ್ಪಿಸುವುದು ಅಷ್ಟು ಸುಲಭವಾಗಿರಲಿಲ್ಲ. ಎರಡು ಗಂಡು ಒಂದು ಹೆಣ್ಣು ಹಳಿಮೇಲೆ ಹೊಂಟಿದ್ದ ಸಂಸಾರ ಇದ್ದಕ್ಕಿದ್ದಂಗೆ ಹಳಿ ತಪ್ಪಿದ್ದ ಪೀರಿಗೆ ಯಾಕೊ ಅಸಮಾಧಾನ, ಕಳವಳ ಉಂಟಾಗಿತ್ತು. ಮಂದಿ ಮಾತಾಡೋದು, ಗಂಡನ ಕೇವಲವಾಗಿ ನೋಡುವುದು. ಅವನ ವೃತ್ತಿ ಮೇಲೆ ಪರಿಣಾಮ ಬಿದ್ದೀತು ಅನ್ನೋ ಕಾರಣಕ್ಕೆ "ಭಾರಿ ಗಂಡಸು, ಒಂದನ್ನೇ ಬಗ್ಗಿಸೋದಕ್ಕೆ ಆಗಲ್ಲ ಇನ್ನೊಂದು ತಂದು ಅದ್ಯಾರ ಪಾಲ ಮಾಡ್ತಿಯೊ ನಾನು ನೋಡ್ತೀನಿ, ಹೋಗು ಅದೇನ ಮಾಡ್ತಿಯೊ ಮಾಡ್ಕೊ" ಸಿಟ್ಟಲ್ಲಿ ಒದರಿದ್ದಳು, ಆದರೆ ಮನಸ್ಸು ಮಡುಗಟ್ಟಿತ್ತು. ಒಳಗೆ ನಡೆಯುತ್ತಿದ್ದ ಅಲ್ಲೋಲ ಕಲ್ಲೋಲ ಯಾರಿಗೆ ಹೇಳುವಂತಿಲ್ಲ. ಅಸಹಾಯಕತೆ, ಅಧೀರತೆ, ಅಭದ್ರತೆ ಒಮ್ಮಿಂದೊಮ್ಮಿಗೆ ಒಳನುಗ್ಗಿ ಪೀರಿಬಾಯಿಯಿಯನ್ನ ಒಂದು ಘಳಿಗೆ ನಿಸ್ತೇಜಗೊಳಿಸಿದ್ದವು.

ಭಂಡ ಗಂಡ ಜಾನ್ಯನಾಯ್ಕನಿಗೆ ಎರಡೂ ದಡಗಳ ಮೇಲೆ ಕಾಲಿಡುವುದು ಕಷ್ಟಸಾಧ್ಯವಾಗಿತ್ತು. ಮೆಚ್ಚಿ ಮದುವೆಯಾಗಿದ್ದ ಮೊದಲನೆಯ ಹೆಂಡತಿ ಪೀರಿಬಾಯಿ ಸಂಪೂರ್ಣವಾಗಿ ಅರ್ಪಿಸಿಕೊಂಡು ಮೂವರು ಮಕ್ಕಳ ತಾಯಿಯಾಗಿದ್ದಳು. ಗಿರಜಿ ಅದೇನು ಮಸಲತ್ತು ಮಾಡಿ ಅವನನ್ನ ಕೆಡವಿದ್ದಳೊ ಅಂತು ಮದುವೆಯಾಗಿ ಮೂರೆ ತಿಂಗಳಿಗೆ ಗಂಡುಮಗುವನ್ನ ಹಡೆದಿದ್ದಳು. ವರ್ಷ, ಎರಡು ವರ್ಷ ಪೀರಿಬಾಯಿ ನೋಡಿದಳು, ಸಹಿಸಿಕೊಂಡಳು. ಯಾವಾಗ ಆಗುವುದೇ ಇಲ್ಲ ಅಂತ ತಿಳಿತೊ ಆಗ ಕಿರುಕುಳ ಆರಂಭವಾದವು. ಹತ್ತುವರ್ಷಗಳ ಕಾಲ ಹಾಗೆ ನೂಕಿದಳು. ಅವಳಿಗೂ ಎರಡು ಮೂರು ಮಕ್ಕಳು, ಇವಳವೂ ಮೂರು ಮಕ್ಕಳು, ಆಟದಲ್ಲಿ ಜಗಳ ಸಹಜವಾಗಿತ್ತು. ಆದರೆ ಮನೆಯಲ್ಲಿ ಇಬ್ಬರು "ಅವಳೇನು ಮಹಾ ಲೇ ಮದುವೆಗೆ ಮುಂಚೆನೆ ಪಿಂಡ ಕಟ್ಟಿಕೊಂಡು ಬಂದವಳೆ, ಮತ್ತೊಂದು ಹೆಣ್ಣಿನ ಬಾಳನ್ನ ಹಾಳ ಮಾಡಿದೆಯಲ್ಲೆ" ಪೀರಿಬಾಯಿ ಹೇಳಿದರೆ, "ನೀನೇನು ಗರತಿ ಗಂಗಮ್ಮ ನೀನು ಓಡಿ ಬಂದಾಕಿನ, ನನಗೆ ಏನು ಹೇಳ್ತಿಯೆ ನೀನು" ಏಕವಚನದಲ್ಲೆ ಇಬ್ಬರು ಸೆಡ್ಡು ಹೊಡೆದು ನಿಂತಿದ್ದರು.

ಹಿಟ್ಟಿನ ಗಿರಣಿ ಜಾನ್ಯಗೆ ಜೀವನದ ಅನುಭವ ಈಗ ಆಗಾಕ ಹತ್ತಿತ್ತು. ಬಹಳಮಂದಿ ಹೇಳಿದರು "ಲೇ ಹುಚ್ಚ ಏನೊ ಆದದ್ದು ಆಗಿದೆ, ಒಂದಿಷ್ಟು ದುಡ್ಡು ಬಿಸಾಕು ಡಾಕ್ಟರ ಹತ್ರ ಹೋಗಿ ಕೆಡವಿಕೊಂಡು ಬರ್ತಾಳ. ಎರಡನೇ ಮದುವೆ ಜಂಜಾಟದಾಗ ಮಾತ್ರ ಬೀಳಬೇಡ. ನಮ್ಮಂತಹವರಿಗಲ್ಲ" ಅಂತ ಗಲಗಲ ಮಾಡಿದ ಅವನ ಗೆಳೆಯ ಅಂದಾನಿನಾಯ್ಕ. ಆದ್ರ "ದೊಡ್ಡ ಮನಿತನ, ಆಸ್ತಿವಂತ ಸರಿಗ ಗಾಣ ಹಾಕಿ ಮಗಳೆ, ನಿನಗೆ ನಾನು ಮದುವೆ ಮಾಡಿಕೊಟ್ರು ಇಂತಹ ಮನಿತನ

ಸಿಗಲ್ಲ. ಯಾವನೊ ಕಾಫಿತೋಟಕ್ಕೆ ಬೀಜ ಹರಿಯೋದಕ್ಕೆ ಹೋಗುವವನು, ಮಂಗಳೂರು, ಉಡುಪಿ, ಕೇರಳಕ್ಕೆ ಹೋಗಿ ಕೂಲಿ ಮಾಡೋನು ಬಹಳ ಅಂದ್ರೆ ಕಬ್ಬು ಕಟಾವು ಮಾಡುವ ಹುಡುಗ ಸಿಗಬಹುದು ಅಷ್ಟೆ ನೋಡು" ಜುಂಜನಾಯ್ಕ ಮಗಳಿಗೆ ಪ್ರೋತ್ಸಾಹಿಸಿದ್ದ. ಗರ್ಬ ಕಟ್ಟಿ ಐದಾರು ತಿಂಗಳು ಸುಮ್ಮನಿದ್ದು ಒಮ್ಮಿಂದೊಮ್ಮಿಗೆ "ಮಾವ ಆರ ತಿಂಗಳಾತು ಹೊರಗ ಆಗಿಲ್ಲ, ಹೆದರಿಕೆ ಆಗಾಕ ಹತ್ಯತಿ" ಒಮ್ಮೆಲೆ ಅವನ ಭಾವನೆಗಳಿಗೆ ಬೆಂಕಿ ಇಡೊ ಪ್ರಯತ್ನ ಮಾಡಿದಳು. "ಲೇ ಬೇವರ್ಸಿ, ಏನೊ ಹಲ್ಲ ಕಿರಿತಾಳ, ಸಲುಗೆಯಿಂದ ಮಾತಾಡ್ತಾಳಂತ ಒಂದ ಸಲ ಮುಟ್ಟಿದರೆ ಹಿಂಗಾ ಮಾಡೋದು. ನೀನು ನಿಮ್ಮಪ್ಪ ಸೇರಿಕೊಂಡು ಬೇಕಂತ ನಮ್ಮ ಮನಿತನದ ಮರ್ಯಾದೆ ತಗಿಬೇಕಂತ ಮಾಡಿರೊ ಹುನ್ನಾರ ಅಲ್ವಾ ಇದು. ಆರ ತಿಂಗಳಾದರೂ ಪರವಾಗಿಲ್ಲಾ ತಗೊ ದುಡ್ಡು ಹೋಗಿ ಮದಲು ಹೊಟ್ಟೆಯೊಳಗಿನ ಕೂಸು ತಗಸು. ಆಮೇಲೆ ನಾನೆ ಒಬ್ಬ ಹುಡುಗನ್ನ ನೋಡಿ ಮದುವೆ ಮಾಡಿಸ್ತಿನಿ" ಬುದ್ಧಿ ಹೇಳಿದ. "ಮುಟ್ಟಾಕ ಮುಂಚೆ ಯೋಚನೆ ಮಾಡಬೇಕಿತ್ತು. ಜೀನಿಗೆ ಬರೊ ಅದೆಷ್ಟು ಹುಡುಗಿಯರನ್ನ ಹಿಂಗ ಮಾಡಿಲ್ಲ ಹೇಳು, ನಂಬಿಸಿ ಅವರ ಭಾವನೆಗಳ ಜೊತೆಗೆ ಆಟ ಆಡಿಯ. ಈಗ ನೋಡು ಸರಿಗೆ ಸಿಗಾಕಿಕೊಂಡೆ, ಇನ್ನು ಮುಂದೆ ನೀನು ಉದ್ಧಾರ ಆಗೋದಿಲ್ಲ" ಧಮಕಿ ಹಾಕಿ ಮದುವೆಯಾಗಿದ್ದಳು. ಅದೇ ದರ್ಪ, ಮೊಂಡುತನ ಮನಿಯೊಳಗೂ ನಡೆಸಿದ್ದಳು. ಇಬ್ಬರದೂ ಬಗಿಹರಿಯಲ್ಲ ಅಂತ ತಿಳಿದು ಬೇರೆ ಮನೆಗಳನ್ನ ಮಾಡಿದ ಜಾನ್ಯನಾಯ್ಕ. ಬೆಳಿಗ್ಗೆ ಒಬ್ಬಳ ಮನೆಗೆ ಹೋದರೆ, ಸಂಜೆ ಮತ್ತೊಬ್ಬಳ ಮನೆ. ಹೀಗೆ ಕಣ್ಣ ಮುಚ್ಚಾಲೆ ಆಟ ನಡೆದಿತ್ತು. ಆದರೆ ಅದು ಬಹಳ ದಿನಗಳ ಕಾಲ ನಡೆಯುವ ಸೂಚನೆ ಕಾಣಲಿಲ್ಲ. ಪೀರಿಬಾಯಿಗೆ ಯಾಕೊ ಒಂಟಿತನ ಕಾಡಿಸತೊಡಗಿತ್ತು.. ಉದ್ವೇಗದಿಂದ ಅವನ ಜೊತೆಗೆ ಜಗಳಕ್ಕೆ ನಿಂತಳು. "ನನ್ನ ಬದುಕನ್ನೇ ಮುಗಿಸಿಬಿಟ್ಟೆ, ನಾನು ಬದುಕಿ ಏನು ಮಾಡಲಿ, ನಿನ್ನ ಒಸಡಗ, ನಿನ್ನ ಕದ ಕಟ್ಲಿ" ಅವಳ ಬಾಯಿ ಹಿಡಿದು ಸುಮ್ಮನಾಗಿಸಲು ನೋಡಿದ. ಮತ್ತೊಂದು ಘಳಿಗೆಯಲ್ಲಿ "ಬರ್ರಿ ಊಟಮಾಡ್ರಿ ಮುಂಜಾನೆಯಿಂದ ಗಂಟುಗಳನ್ನ ಬೀಸಿ ಸಾಕಿಗಿಲ್ವ" ಪ್ರೀತಿಯಿಂದ ಮಾತಾಡಿಸುತ್ತಿದ್ದಳು. ಏನಾಗಿದೆ ಅವಳಿಗೆ, ನಾನೇನು ಮಾಡಬೇಕು ಅನ್ನೊ ತಾಕಲಾಟದಲ್ಲಿದ್ದ ಜಾನ್ಯನಾಯ್ಕ. ಹಿಂದೆ ಇದ್ದ ಪ್ರೀತಿ, ಸ್ನೇಹ ಮನೆಯೊಳಗೆ ಸಿಗದಾಗಿತ್ತು. ಅದರಲ್ಲಿ ಜಾನ್ಯನಾಯ್ಕನ ಸ್ವಯಂಕೃತ ಅಪರಾಧವೂ ಒಂದಾಗಿತ್ತು. ಹೀಗಿರುವಾಗ ಒಳ್ಳೆಯ ವಾತಾವರಣ ಸಿಗಲು ಸಾಧ್ಯವೆ? ಪೀರಿಬಾಯಿಗೆ ಗಂಡನ್ನ ಕಂಡರೆ ಇದ್ದಕ್ಕಿದ್ದಂತೆ ಸಿಟ್ಟು. ಅದು ಎಲ್ಲಿಗೆ ಬಂತು ಅಂದರೆ ಅವನ ಎರಡನೆಯ ಹೆಂಡತಿ ಗಿರಜಿಬಾಯಿಯನ್ನ ಪ್ರೀತಿಯಿಂದ ಮಾತಾಡಿಸಿ ಅವನಿಗೂ ಅವಳಿಗೂ ನಡುವೆ ಸಂಬಂಧ ಬಿರಕು ಬಿಡುವಲ್ಲಿಗೂ ಹೋಯಿತು. "ಬೇವರ್ಸಿ ನನಮಗನೆ ಎರಡು ಕಡೆಗೆ ನಾಟಕ ಮಾಡ್ತಿಯಾ ಆಡು, ಆಡು ನೋಡ್ತಿನಿ ಎಷ್ಟುದಿನ

ನಡೆಯುತ್ತದೆ ನಿನ್ನ ಬಯಲಾಟ ಅಂತ. ಅವಳು ನಿನ್ನ ಮನೆಯಿಂದ ಹೊರಗೆ ಹಾಕಬೇಕು ಹಂಗಮಾಡ್ತಿನಿ" ಜಿದ್ದಿಗಿಳಿದಿದ್ದಳು. ಹೆಣ್ಣು ಮನಸ್ಸು ಮಾಡಿದರೆ ಏನು ಬೇಕಾದರೂ ಸಾಧಿಸುತ್ತಾಳೆ ಅನ್ನೋದಕ್ಕೆ ಪೀರಿಬಾಯಿನೆ ಸಾಕ್ಷಿ.

"ನೋಡೆ ಗಿರಿಜಿ ಮದಲು ನನ್ನ ಪ್ರೀತಿಸಿ ಮದುವೆ ಮುಂಚೆ ಆಟ ಆಡಿ ಕೈಯಾಗ ಒಂದು ಮಗು ಕೊಟ್ಟ. ನಾನು ಎಲ್ಲಿಗೆ ಹೋಗಬೇಕು? ಹೇಳು, ಈ ಸಮಾಜದಾಗ ಹೆಣ್ಣಿಗೆ ಕಿಮ್ಮತ್ತ ಇಲ್ಲ, ಹೊಡದ ಸ್ವಾರಿ ಇದ್ದಂಗೆ ನಮ್ಮ ಬಾಳು, ಸರಿಗಿತ್ತು ಸರಿನವ್ವ, ಇಲ್ಲದಿದ್ರ ನಾಯಿ ಮುಟ್ಟಿದ ಮಡಿಕೆ. ನಂದೇನೊ ಬಾಳೆವು ಹಾಳಾಗಿ ಹೋಯ್ತು. ಮಾಡಿದಕ್ಕೆ ಹೆಂಗೊ ಮದುವೆಯಾದನಲ್ಲಾ ಅಂತ ಖುಷಿ ಪಟ್ಟಿದ್ದೆ. ನಿನ್ನ ಕೆಡಸಿದ ಪರಿಣಾಮ? ಈಗ ಅದ್ಯಾರೊ ಸುಕಲಿ ಅಂತ ನೋಡು. ಈ ಗಂಡಸರೆ ಹಂಗೆ ಕಣೆ ನಾಯಿ ಬುದ್ಧಿಯವರು, ಮಾನಸಿಕ ರೋಗ ಅದಕ್ಕೆ, ತಾನು ಗಂಡಸು ಅನ್ನೋದನ್ನ ಪ್ರಯತ್ನಪೂರ್ವಕ ನಿರೂಪಿಸೊದಕ್ಕೆ ನೋಡ್ತಾರೆ. ಅದರ ಪರಿಣಾಮ ನಮ್ಮ ಮೇಲೆ ಬರುತ್ತೆ" ನಿಧಾನಕ್ಕೆ ಅವಳ ತಲೆಯೊಳಗೆ ಅನುಮಾನದ ಹುಳ ಬಿಟ್ಟು ಬಂದಳು. ಅದು ಬೆಳೆಯುತ್ತಾ ಅನುಮಾನದ ಹುತ್ತವನ್ನೆ ಮಾಡಿತ್ತು. "ಎಯ್, ಆ ಸುಕಲಿ ಯಾರು?" ಗಂಟುಗಳು ಹೆಚ್ಚಾಗಿ ಮಂದಿ ಜೋಡಿ ಬಡದಾಡಿ ಬಂದಿದ್ದ ಜಾನ್ಯನಾಯ್ಕ ಇದ್ದಕಿದ್ದಂಗೆ ಬಂದ ಹೊಸ ಹೆಸರು ಕೇಳಿ ದಂಗಾದ. ನೀರು ಕೊಡೊದಕ್ಕೆ ಬಂದ ಗಿರಜಿಯನ್ನ "ಏನಂದೆ? ಯಾವಳೆ ಅವಳು ಸುಕಲಿ" ಒಂದು ಹೊಡ್ತ ಹೊಡದ, ಅಷ್ಟೆ, "ಏಯ್ ನೀನು ಹೇಳಿದಂಗೆ ಗುಲಾಮಳಾಗಿ ಇರಾಕೆ ನಾನೇನು ನಿನ್ನ ಮೊದಲನೆ ಹೆಂಡತಿ ಅಲ್ಲಾ. ಇನ್ನೊಂದಸಲ ನನ್ನ ಮೈ ಮುಟ್ಟಿದರೆ ಏನ್ಮಾಡ್ತಿನಿ ನೋಡು" ಕೆಂಡಮಂಡಲವಾಗಿದ್ದಳು. ಜಾನ್ಯನಿಗೆ ತಲೆ ಕೆಟ್ಟುಹೋಯಿತು. ಮಂದಿ ಸಹವಾಸ ಸಾಕಾಗಿ ನೆಮ್ಮದಿಯಿಂದ ಒಂದ ಗಂಟೆ ಕಾಲ ಕಳಿಯೊಣ ಅಂತ ಬಂದರೆ, ಅದ್ಯಾವಳೊ ಸುಕಲಿ ಹೆಸರು ಹೇಳಿ ತಲೆ ತಿಂತಾಳಲ್ಲ, "ಏನೆ ಮಾಡ್ತಿಯಾ? ಆಂ, ಏನ್ಮಾಡ್ತಿ" ಸಿಟ್ಟಿಂದ ಅವಳ ಎರಡೂ ರಟ್ಟೆಗಳನ್ನ ಹಿಡಿದು ಅಲುಗಾಡಿಸಿದ. "ಸಾಯಿ ನಿನ್ನಮ್ಮನ ನಾಯಿಯಂತವಳೆ" ಅಂತ ದೂಕಿದವನೆ ಹೊರಗೆ ಬಂದ.

ಅವಳಿಗೆ ಅದೇನು ಅನಿಸಿತೊ, ಮೂಲೆಯಲ್ಲಿ ಬಿದ್ದಿದ್ದ ಸೀಮೆಎಣ್ಣೆ ಡಬ್ಬವನ್ನ ಮೈಮೇಲೆ ಸುರಿದುಕೊಂಡು ಬೆಂಕಿ ಗೀಚಿದಳು. ಬೆಂಕಿಯ ಕಿಡಿ ಸುಮ್ಮನೆ ಇದ್ದಿತೆ, ಸೆರಗಿಗೆ ತಾಗಿ ಬೆಂಕಿಯ ಕೆನ್ನಾಲಿಗೆ ಚಾಚಿತ್ತು. ಅಂಗಳದಿಂದ ಕಾಲಿಟ್ಟಿದ್ದ ಜಾನ್ಯ ಬೆಂಕಿ ಸುಟ್ಟ ವಾಸನೆಯಿಂದ ಒಳಗೆ ಇಣುಕಿದ. "ಅಯ್ಯೊ ಸತ್ತೆ" ಅಂತ ಗಿರಜಿ ಕೂಗಿದಳು. ಏನು ಮಾಡಲು ತಲೆ ಓಡದೆ ಮೂಲೆಯಲ್ಲಿದ್ದ ಕಂಬಳಿಯಿಂದ ಅವಳ ಬೆಂಕಿಯನ್ನ ನಂದಿಸುವ ಯತ್ನ ಮಾಡಿದ. ಬೆಂಕಿ ಏನೊ ಆರಿತ್ತು. ಆದರೆ ಅದರ ಭೀಕರತೆ ಭಯಾನಕವಾಗಿತ್ತು. ಕ್ಷಣಾರ್ಧದಲ್ಲಿ ತಪ್ಪು ನಿರ್ಣಯ ತೆಗೆದುಕೊಂಡಿದ್ದಳು

ಗಿರಜಿ. ಪರಿಣಾಮವಾಗಿ ಎಪ್ಪತ್ತೈದು ಭಾಗ ಸುಟ್ಟು ಹೋಗಿದ್ದಳು. ನೈಲಾನ್ ಸೀರೆ ಬೆಂಕಿ ಹತ್ತಿದ ಜಾಗದಲ್ಲಿಯೆ ದೇಹವನ್ನು ಸುಟ್ಟು ಕರಕಲ್ಲಾಗಿಸಿತ್ತು. ತನ್ನ ಕಣ್ಣ ಮುಂದೆ ನಡೆದು ಹೋದ ಘಟನೆಯಿಂದ ಜಾನ್ಯನಾಯ್ಕನ ಹೃದಯವೆ ಸತ್ತು ಹೋದ ಅನುಭವ ಗಿರಜಿಯನ್ನ ಪ್ರೀತಿಸಿ ಎರಡನೇ ಹೆಂಡತಿಯಾಗಿ ಸ್ವೀಕರಿಸಿ ಅವಳಿಗೆ ಹತ್ತು ಹದಿನೈದು ವರ್ಷದ ಮಕ್ಕಳು ಇದ್ದವು. ಮೊದಲನೇ ಹೆಂಡತಿ ಮೇಲೆ ರೇಗುತ್ತಿದ್ದ, ಆದರೆ ಯಾವತ್ತು ಗಿರಜಳ ಮೇಲೆ ಕೋಪ ಮಾಡಿಕೊಂಡಿರಲಿಲ್ಲ ಅಂತಹದ್ದರಲ್ಲಿ ಒಂದು ಮಾತಿಗೆ ಹೀಗೆ ಮಾಡಿಕೊಳ್ತಾಳೆ ಅಂತ ಊಹೆ ಕೂಡ ಮಾಡಿರಲಿಲ್ಲ.

ಜಾನ್ಯನ ಅಣ್ಣತಮ್ಮಂದಿರು ಒಂದು ನಿರ್ಣಯಕ್ಕೆ ಬಂದಿದ್ದರು. "ನೋಡು ಇದು ಪೊಲೀಸ್ ಕೇಸು, ತಾಂಡದಾಗ ಮಂದಿ ಇದೇ ಅವಕಾಶಕ್ಕೆ ಬಾಯಿ ಬಿಟ್ಕೊಂಡು ಕಾಯುತ್ತಿದ್ದಾರೆ. ನೀನು ಮಾಡಿದ ಘನಂದಾರಿ ಕಾರನಾಮಕ್ಕೆ ಮನೆ ಮರ್ಯಾದೆ ಬಿದಿಪಾಲು ಮಾಡಾಕ ನಾವು ತಯಾರಿಲ್ಲ. ಆದದ್ದಾಯಿತು." ಅವರು ಹೇಳಿದ್ದು ಅವನ ತಲೆಯೊಳಗೆ ಹೋಗಲಿಲ್ಲ. ಗಿರಜಿ ಮಾತ್ರ ಉರಿತಡಿಯಲಾಗದೆ ಒದ್ದಾಡುತ್ತಿದ್ದಳು, "ಸತ್ತೆ ಕಾಪಾಡಿ, ಕಾಪಾಡಿ" ಜಾನ್ಯ "ನಡಿರಿ ಮದಲು ದವಾಖಾನಿಗೆ ಒಯ್ದು ನನ್ನ ಹೆಂಡತಿನ ಬದುಕಿಸೋಣ" ಅಂಗಲಾಚಿದ. "ಲೇ ತೆಪರ ಹುಚ್ಚ ಹಿಡಿದಿದೆ ನಿನಗೆ ಮುಕ್ಕಾಲು ಪಾಲು ದೇಹ ಸುಟ್ಟಿದೆ, ಜೀವ ಹೋಗೋದು ಬಾಕಿ ಇದೆ. ಇಂತಹದ್ದರಲ್ಲಿ ದವಾಖಾನಿಗೆ ಒಯ್ದುರೆ ಹೋದವರೆಲ್ಲಾ ಜೈಲಿನ ಪಾಲಾಗ ಬೇಕಾಗುತ್ತೆ. ತಿಳಿತ" ಅವನ ಬಾಯಿ ಮುಚಿಸಿದರು. ಗಿರಜಿಯ ಜೀವ ಟುಕು ಟುಕು ಅನ್ನುತಿತ್ತು. ಇಷ್ಟು ದೊಡ್ಡ ದೇಹ ಸುಟ್ಟು ಮುದುಡಿಕೊಂಡಿತ್ತು. ಕಣ್ಣಲ್ಲೆ ಜೀವ ಹಿಡಿದು ತನ್ನ ಮಕ್ಕಳನ್ನ ನೋಡುವ ಸಲುವಾಗಿ ಪರಿತಪಿಸುತ್ತಿದ್ದಳು. ಆದರೆ ರಾಕ್ಷಸರು ಮಕ್ಕಳನ್ನ, ಅವಳ ಸೌತಿ, ಹೀರಿಯನ್ನ ಒಳಗೆ ಬಿಡದಾಗಿದ್ದರು. ಗಂಡ ಮಾತ್ರ ಮೂಲೆಯಲ್ಲಿ ಮಕಕ್ಕೆ ಟವೇಲು ಅಡ್ಡಹಿಡಿದು ಅಳುವ ನಾಟಕ ಮಾಡಿದ್ದ. ಏನು ನಡಿತಿದೆ ಅನ್ನೋದು ಅವಳ ತವರು ಮನೆ ಅಲ್ಲೆ ಇದ್ದರು ಸುದ್ದಿ ತಿಳಿಸಲು ತಯಾರಿಲ್ಲ.

ಎಲ್ಲವೂ ಮುಗಿದು ಹೋಗಿತ್ತು. ಅವಸರದಿಂದಲೆ ಚಟ್ಟ ಕಟ್ಟಿ ಜೀವಂತ ಹೆಣವನ್ನ ಹಾಕಿಕೊಂಡು ಅವಸರದಿಂದ ರಾಶಿ ಕಟ್ಟಿಗೆ ಒಟ್ಟಿ, ಕಿರಿಚಲಾಗದೆ ಒದ್ದಾಡುತ್ತಿದ್ದ ಹೆಂಡತಿಯನ್ನ ಜೀವಂತ ಸುಡುತ್ತಿದ್ದವರಿಗೆ ಏನು ಹೇಳಲಾಗದೆ ಜಾನ್ಯ ಮೂಲೆಯಲ್ಲಿ ಕುಳಿತ. ಯಾವ ಪಾಪ ಪ್ರಜ್ಞೆಯೂ ಇಲ್ಲದೆ ಜಾನ್ಯಾನ ಸಹೋದರರ, ಅವನ ಅಣ್ಣತಮ್ಮಂದಿರ ಮಕ್ಕಳು ನಲವತ್ತು ಜನರು ಸೇರಿ "ನಾನು ಸತ್ತಿಲ್ಲ" ಬಾರದ ಧ್ವನಿಯಲ್ಲಿ ಗಿರಜಿ ಚಿರಾಡುತ್ತಿದ್ದಳು, ಅವಳು ಉಸಿರಾಡುತ್ತಿದ್ದಳು. ಜಾನ್ಯ ಅಸಹಾಯಕನಾಗಿದ್ದನೋ ಇಲ್ಲಾ ಇಬ್ಬರ ಕಾಟ ತಡಿಯೋದಕ್ಕೆ ಆಗದೆ ಸಾಯುತ್ತಿರುವವಳು ಹಾಳುಮನಿಯವಳು ಸತ್ತುಹೋಗಲಿ ಅತ್ಲಾಗ ಅಂತ

ಸುಮ್ಮನಿದ್ದನೊ ಆ ಭಗವಂತನಿಗೆ ಗೊತ್ತು. ಪ್ರೀತಿ ಎಂಬ ನಾಟಕ ಆಡಿದ ಜಾನ್ಯಾನಾಯ್ಕನ ಎರಡನೆಯ ಹೆಂಡತಿ ಗಿರಜಿಯ ಹೆಣ ಬಕ್‌ಬರ್‍ಲಿ ಇಟ್ಟು ಮೇಲೆ ಕಟ್ಟಿಗೆ ಒಟ್ಟುವುದಕ್ಕೂ, ಅವಳ ತಂದೆ ತಾಯಿ ಓಡಿ ಬರುವುದಕ್ಕೂ, "ಎಯ್ ನಿಲ್ಲಿಸಿ, ನನ ಮಗಳು ಸತ್ತಿಲ್ಲ" ಅವಳ ತಾಯಿ ಕೂಗಿದಳು. ಪ್ರಯೋಜನವಾಗಲಿಲ್ಲ. ಸೀಮೆಎಣ್ಣೆ ಸುರಿದು ಬೆಂಕಿ ಹಚ್ಚಿದರು. ಅವರು ಹತ್ತಿರ ಬಂದರೆ ಗೊತ್ತಾದೀತು ಅಂತ ಸತ್ಯವನ್ನ ಮರೆಮಾಚಲು ಇವರೆ ಅವರ ಬಳಿ ಹೋಗಿ "ಮಾವ ಆದದ್ದು ಆಯ್ತು, ನಡಿರಿ, ಎರಡು ಮೊಮ್ಮಕ್ಕಳು ಅದಾವ ಅವನ ನೋಡ್ಕೊಂಡು ಇರ್‍ರಿ" ಸಮಾಧಾನ ಮಾಡಿದ ಜಾನ್ಯನಾಯ್ಕ.

* * *

77. ಸತ್ತ ಮಗನ ದೆವ್ವ ನೋಡಲು ಕಾದ ತಾಯಿ

ಭದ್ರನಾಯ್ಕನ ತಾಂಡದಲ್ಲೆ ಒಳ್ಳೆ ದುಡಿಮೆ ಮಾಡುತ್ತಿದ್ದ ರುದ್ರೇಶಿನಾಯ್ಕ, ಅಪ್ಪ ಸಾಲಿ ಮಾಸ್ತರ ಏಳೆಂಟು ಮಂದಿ ಅಣ್ಣ ತಮ್ಮಂದಿರನ್ನ ಸಾಕುವುದು. ಅವರಿಗಾಗಿ ಜಮೀನು ಹಿಡಿಯುವುದರಲ್ಲೇ ಜೀವನ ಸಾಗಿಸಿದ್ದ ಚೆನ್ಯಾನಾಯ್ಕ ಮಾಸ್ತರ್. ಆದರೆ ಮಗಳ ಮದುವೆ ಮಾಡಿ ಮುಗಿಸಿದ ಮೇಲೆ ಉಳಿದಿದ್ದ ಇಬ್ಬರು ತಮ್ಮಂದಿರು ಪಾಲು ಬೇಕು ಅಂತ ಕುಂತಾಗ, ಸ್ವತಃ ಚೆನ್ಯಾನಾಯ್ಕ ಮಾಸ್ತರ್, ಅವರ ಪಾಲು ಕೊಟ್ಟು ಅವನಿಗೆ ಉಳಿದ ಇಪ್ಪತ್ಮೂರು ಎಕ್ಕರೆ ಜಮೀನನ್ನ ನೋಡಿಕೊಂಡು ಹೋಗೋದಕ್ಕೆ ಸ್ಕೂಲಲ್ಲಿ ದಡ್ಡನಾಗಿದ್ದ ರುದ್ರೇಶಿಯನ್ನ ಬಿಡಿಸಿ ವ್ಯವಸಾಯ ಮಾಡೋದಕ್ಕೆ ಇಟ್ಟ. ಉಳಿದವರು ಓದಿ ಸಣ್ಣ ಪುಟ್ಟ ನೌಕರಿ ತಗೊಂಡು ಅಲ್ಲಲ್ಲೆ ಜೀವನವನ್ನ ಕಟ್ಟಿಕೊಳ್ಳುವ ಪ್ರಕ್ರಿಯೆಯಲ್ಲಿ ತೊಡಗಿಕೊಂಡ ಸಂದರ್ಭ. ರುದ್ರೇಶಿ ಹೆಂಡತಿ ಆತ್ಮಹತ್ಯೆ ಮಾಡಿಕೊಂಡಿದ್ದಳು. ರುದ್ರೇಶಿಯ ತಾಯಿ ಜೀವ್ಲಬಾಯಿ ತಾನು ಮಾಡದ ತಪ್ಪಿಗಾಗಿ ಪರಿತಪಿಸಿದ್ದಳು. ರುದ್ರೇಶಿ ಹೆಂಡತಿ ಕಡೆಯವರು ಅತ್ತೆ ಮಾಡಿರಬೇಕು, ಗಂಡ ಮಾಡಿರಬೇಕು. ಊಹಾಪೋಹಗಳಲ್ಲೆ ಅವಳನ್ನ ಮಣ್ಣು ಮಾಡಿದ್ದರು. ಆದರೆ ಹರಿಕತೆ ಬೇರೆ ಇತ್ತು. ಹುಡುಗಿಯ ತಾಯಿ ಹೆದರಿಸೋಕೆ ವಿಷ ಕುಡಿ ಅಂದಿದ್ದು ಎಲ್ಲೂ ದಾಖಲಾಗದೆ ಇರುವುದರಿಂದ, ರುದ್ರೇಶಿಗೆ ಘನಘಜೀತಿ ಆಗಿತ್ತು.

ಸತ್ತವಳು ಹೆದರಿಸುವ ಆಟದಲ್ಲಿ ಸೋತು, ಸ್ವರ್ಗ ಸೇರಿದರೆ ಹಿಂದಿನ ಬದುಕು ಭೀಕರವಾಗಿತ್ತು. ಶಾಲೆಗೆ ಹೋಗುತ್ತಿದ್ದ ರುದ್ರೇಶಿಯ ಮೂರು ಮಕ್ಕಳು, ವೃದ್ಧಾಪ್ಯದಲ್ಲಿ ಒಲೆ ಮುಂದೆ ಮಾಡಲಾಗದ ರುದ್ರೇಶಿಯ ತಾಯಿ ಜೀವ್ಲಿಬಾಯಿ, ಚೆನ್ಯಾನಾಯ್ಕ ಮಾಸ್ತರ್ ಮಾತ್ರ ಅವನ ಎರಡನೇ ಮದುವೆಗೆ ಏರ್ಪಾಟು ಮಾಡಿಯೇ ಬಿಟ್ಟಿದ್ದ.

ಎಂಟು ಒಂಭತ್ತು ವರ್ಷಗಳ ಎರಡು ಗಂಡು ಮಕ್ಕಳನ್ನ ಬಿಟ್ಟು ಕ್ಷುಲ್ಲಕ ಜಗಳಕ್ಕೆ ಹೆದರಿಸುವ ಆಟ ಆಡಿದ ರುದ್ರೇಶಿ ಹೆಂಡತಿ ಸಾವಿಬಾಯಿ, ವಿಷ ತನ್ನ ಕ್ರಿಯ ಆರಂಭಮಾಡಿ, ಉರಿ ಹೆಚ್ಚಾಗುತ್ತಿದ್ದಂತೆ ಬದುಕಬೇಕು ಅನಿಸಿ ಬದುಕುವ ಬಯಕೆಗಾಗಿ ಹಾತೊರೆಯ ತೊಡಗಿದಳು. ಆದರೆ ದೇವರು ಸುಳ್ಳಾಟವನ್ನ ಸತ್ಯ ಮಾಡಿಬಿಟ್ಟಿದ್ದ. ಚೆನ್ನಾಗಿ ನಡೆಯುತ್ತಿದ್ದ ಮನೆ ಒಂದೇ ಸಲಕ್ಕೆ ನಿಂತಂಗಾಯಿತು. ತಾಂಡದಲ್ಲಿ ಹುಬ್ಬ

ಮಂದಿ ಅವರ ಮನೆಯನ್ನ ಬಿಟ್ಟು ಹಬ್ಬ ಮಾಡಿ ಉಂಡರೆ ಇವರು ಮಾತ್ರ ಘಟಿಸಿದ ಘಟನೆಯನ್ನ ಅನುಭವಿಸಲು ಸಾಕು ಸಾಕಾಗಿ ಹೋಗಿದ್ದರು. ಮನೆಯೊಳಗೆ ಹೊರಗೆ ಕೆಲಸ ಜಡವಾಗಿತ್ತು. ರುದ್ರೇಶಿ ತಾಯಿ ಜೇವ್ಲಿಬಾಯಿಗೆ ಚಿಕ್ಕವಯಸ್ಸಿನಲ್ಲೆ ಮಗನ ಜೀವನದಲ್ಲಿ ಘಟಿಸಿದ ಘಟನೆಯಿಂದ ವಿಚಲಿತಗೊಂಡಿದ್ದಳು. "ಹಾಳಮನಿಯವಳು ನನ್ನ ಕೈಲೆ ಆಗೊಲ್ಲ ಅಂತಂದು, ಮಗನ್ನ ಕರೆದುಕೊಂಡು ಹೋಗಿದ್ದರೆ ಎಲ್ಲೊ ಬದುಕಿಕೊಂಡಿರುತ್ತಿದ್ದಳು. ಸುಕಾ ಸುಮ್ಮನೆ, ಅತ್ತೆ ಕಾಟ, ಮಾವನ ಕಾಟ, ಗಂಡನ ಕಾಟ. ಮಂದಿ ಬಾಯಿ ಮುಚ್ಚಿಸೋರು ಯಾರು?" ನೊಂದು ಅಭಿವ್ಯಕ್ತಿಪಡಿಸಿದಳು. "ಅವಳ ಮನಿತನ ಸರಿ ಇಲ್ಲ, ಕಾಲುಗುಣ ಅಷ್ಟು ಪಾಡಿಲ್ಲಾ ಅಂದ್ರೆ ನೀನು ಕೇಳಲಿಲ್ಲ. ನನ್ನ ಮನಿನೆ ಮುರಿದು ಬಿಟೆ" ಚಿನ್ಯಾಮಾಸ್ತರ್ ಹೆಂಡತಿ ಮಾಡಿದ ತಪ್ಪನ್ನು ಎತ್ತಿ ಎಣಿಸತೊಡಗಿದ. "ಅವರ ಹೊಟ್ಟೆಯೊಳಗೆ ಹೋಗಿ ನೋಡೋದಕ್ಕೆ ಸಾಧ್ಯನ? ಅವರು ಹೀಗಿರಬಹುದೆ? ಅಂತ ತಿಳಿಯೋದಕ್ಕೆ ಸಾಧ್ಯನೆ ಇಲ್ಲ" ತನ್ನ ವಾದವನ್ನ ಮುಂದಿಟ್ಟಳು. "ಹೋಗಲಿ ಬಿಡು, ಆದದ್ದು ಆಯಿತು. ಮುಂದ ಮನಿ ನಡಿಬೇಕು. ಹೊಲಮನಿ ಕೆಲಸ. ಒಬ್ಬನಿಗೆ ಆಗೊಲ್ಲ, ಒಳ್ಳೆ ಹುಡುಗಿ ನೋಡಿ ಲಗ್ನ ಮಾಡಿದ್ರಾತು, ಮಕ್ಕಳು ಓದಿಕೊಳ್ತಾರೆವ. ಏನಂದೆ" ಹೆಂಡತಿ ಪ್ರತಿಕ್ರಿಯೆಗೆ ಕಾದ.

ಇಡೀ ಭದ್ರನಾಯ್ಕನ ತಾಂಡದ ಮಂದಿಗೆ ರುದ್ರೇಶಿ ಹೆಂಡತಿ ಸಾವಿಯ ಸಾವು ಒಂದು ಪ್ರಶ್ನೆಯಾಗಿತ್ತು. "ಅಲ್ಲ ನಮ್ಮಂಗೆ ಮನಿ ಬಿಟ್ಟು ಹೊತ್ತಾರೆ ಕೂಲಿ ಕೆಲಸಕ್ಕೆ ಹೋಗಿ ದುಡಿಯೊ ಹಾಗಿಲ್ಲ. ಏನಿಲ್ಲ, ಕೈತುಂಬ ಸಂಬಳ ತರೊ ಮಾಸ್ತರ್, ಬಾಯಿಯಿಂದ ಬಿರ್‌ನುಡಿ ತಗಿಯದ ಮಹಾತಾಯಿ ಜೇವ್ಲಿಬಾಯಿ, ತಾನಾಯ್ತು ಸಾಲಿ, ಮನಿ ದುಡಿಮೆ ಅನ್ನೋ ಮಾಸ್ತರ್, ಕಾಟ ಕೊಡಾಕ ನಾದನಿ ಇಲ್ಲ, ಮೈದುನರೂ ಇಲ್ಲ ಇಂತಾದ್ರಾಗ ಅದೆಂತ ಕಷ್ಟ ಬಂದಿರಬಹುದು ಆ ಹುಡುಗಿಗೆ ಅಂತೀನಿ. ಅಲ್ಲಾಮನಿತನ ಮುರಿಯೊ ಕೆಲಸ ಅಲ್ವಾ? ನಮ್ಮಂಗೆ ಹೊತ್ತಾರೆ ಎದ್ದು ಐದಾರು ಸೇರು ಜೋಳ, ರಾಗಿ ಬೀಸಿ, ರೊಟ್ಟಿ ಸುಟ್ಟು, ಪಲ್ಯ ಮಾಡಿ, ಎಲ್ಲರಂಗೆ ಕೂಲಿಗೂ ಹೊರಡಬೇಕು. ಹಿಂಗೇನಾದರೂ ಮಾಡಿದ್ರೆ" ಕೆಸಲಿಬಾಯಿ ತಮ್ಮ ದಿನಗಳನ್ನ ನೆಪ್ಪು ಮಾಡಿಕೊಂಡಿದ್ದಳು. ಸಾವಿಯ ಸಾವು ಹೇಡಿತನದ ಒಂದು ಉದಾಹರಣೆ ಅಂತ ತಾಂಡದಾಗಲೆಲ್ಲಾ ದೊಡ್ಡ ಸುದ್ದಿಯಾಗಿತ್ತು.

ಆದರೆ ಕೆಲವರು ಹೊಟ್ಟೆಕಿಚ್ಚಿನವರು, "ಮಾಸ್ತರ ತಾಂಡಕ್ಕೆ ಶ್ರೀಮಂತ ಅನಿಸಿಕೊಳ್ಳೊದಕ್ಕೆ ಹೊಂಟಿದ್ದ. ದೇವರು ಸರಿಗ ಮುರದ ನೋಡು". ದುಡಿಮೆಯೊಳಗೆ ಪಾಡಾಗಿದ್ದ ವಕೀಲ ಪರಕಾಶನಾಯ್ಕ ತನಗಿಂತ ಮುಂದೆ ಯಾರ ಹೋಗಬಾರದು ಅಂತ ಎಲ್ಲರ ಮುಂದೆನೂ ಹೇಳಿದ್ದ. ತೊಪು ಮಾತ್ರ ಯಾರೆ ಮುಂದೆ ಹೋಗಲಿ, ದೊಡ್ಡವರಾಗಲಿ ಎಂದು ಹೊಟ್ಟೆ ಕಿಚ್ಚ ಪಡಲಿಲ್ಲ. ಮಾಸ್ತರ್ ಮನೆಯೊಳಗೆ ಘಟಿಸಿದ ಘಟನೆಗೆ ಖುದ್ದು ಸಾಕ್ಷಿಯಾಗಿ ಹೇಳಿದ್ದ. "ಏಯ್ ಚಿನ್ಯ

ಮಾಸ್ತರ್ ಬಗ್ಗೆ ನೀವು ಯಾವ ಕೋರ್ಟಿಗೆ ಬೇಕಾದ್ರು ಕರಿರಿ ನಾ ಬಂದು ಸಾಕ್ಷಿ ಹೇಳ್ತೀನಿ. ಅಲ್ರಪ್ಪ, ಮನಿ ಅಂದ ಮೇಲೆ ಒಳ್ಳೆಯದು, ಕೆಟ್ಟದ್ದು ಇದ್ದೆ ಇರುತ್ತೆ, ಮಾತುಗಳು ಅದಲಾಬದಲಿ ಆಗ್ತಿರ್ತಾವ. ಆ ತಾಯಿ ಜೀವ್ಲಿಬಾಯಿ ತಾನೆ ಎಲ್ಲಾ ಕೆಲಸ ಮಾಡ್ತಿರ್ತಾಳ. ಆ ತಾಯಿ ಮೇಲೆ ಇಲ್ಜಾಮ ಮಾಡೋದು ತಪ್ಪು" ಕಡ್ಡಿ ತುಂಡು ಮಾಡಿದಂತೆ ಹೇಳಿದ. ಹುಲಿಯೂರಗೂ ಚಿನ್ನ್ಯಾನಾಯ್ಕ ಮಾಸ್ತರನ ಸೊಸೆ ತೀರಿಕೊಂಡಿದ್ದು ಬೇಸರ ತಂದಿತ್ತು. "ಪಾಪ ಒಳ್ಳೆ ಮೇಷ್ಟ್ರು ಆತಗೆ ಹಿಂಗಾಗಬೇಕೆ?" ಮರುಗಿದ್ದ. ಯಾಕಂದ್ರೆ ಮಂದಿ ಸುಮ್ಮಸುಮ್ಮನೆ ಲಂಗುಲಗಾಮಿಲ್ಲದೆ, ತಾವೆ ಖುದ್ದಾಗಿ ನೋಡಿದವರಂತೆ ಮಾತಾಡತೊಡಗಿದ್ದರು. "ಮಾಸ್ತರ್ ಭಲೆ ಜುಗ್ಗಾ ಮನುಷ ದುಡ್ಡುಕಾಸು ಅಂದ್ರೆ ಪ್ರಾಣ ಬಿಡ್ತಾನೆ, ಆತನೆ ಏನೊ ಹೇಳಿರಬೇಕು" ಅಂತ ಯಾರೊ "ಇಲ್ಲಾ ಜೀವ್ಲಿಬಾಯಿ ನೋಡಾಕ ಹಂಗಿದ್ರು ಭಾರಿ ಕಾಟ ಕೊಡ್ತಿದ್ಲಂತೆ" ಅನ್ನೋರು ಯಾರೋ, ಅದು ಅಲ್ಲಾ, ರುದ್ರೇಶಿ ಯಾರೋ ತಾಂಡದಲ್ಲಿ ಒಂದು ಹುಡುಗಿಯ ಜೊತೆಗೆ ಅದಾನಂತೆ ಅದಕ್ಕೆ ಅಂತೇಳಿ ತಮಗೆ ಯಾವುದು ಸುಲಭವೋ ಅದನ್ನ ಮಾತಾಡಿಕೊಳ್ಳತೊಡಗಿದರು. ತಾಂಡದಮಂದಿ ಯಾವುದಕ್ಕೂ ತಳಬುಡಾನೆ ಇರಲಿಲ್ಲ. ನಿಜವಾದ ಕಾರಣ ಏನು ಅಂತ ಹೇಳದೆ ವಿಷ ತಗೊಂಡು ಸತ್ಲಲ್ಲಾ ಸಾವಿಬಾಯಿ ಆಕಿ ಜೊತೆಗೆ ನಿಜವಾದ ಸತ್ಯನೂ ಸತ್ತು ಹೋಗಿತ್ತು. ಈಗ ಖಾಲಿ ಪೀಲಿ ಮಂದಿ ಮಾತ್ರ ಹಂಗಾತು, ಹಿಂಗಾತು ಅಂತ, ಬರಿ ಸುಳ್ಳಿನ ಬುನಾದಿಯ ಮೇಲೆ ದೊಡ್ಡ ದೊಡ್ಡ ಮನೆಗಳನ್ನ ಕಟ್ಟೋದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ.

ಆದರೆ ತನ್ನ ಮನೆ ನಡಿಬೇಕು, ಒಂದೆರಡು ರೊಟ್ಟಿ ಸುಟ್ಟುಹಾಕೋದಕ್ಕಾದರು ಮಗನಿಗೆ ಎರಡನೆಯ ಸಂಬಂಧ ಮಾಡಬೇಕಂತ ಚಿನ್ನ್ಯಾ ಮಾಸ್ತರ ವರ್ಷದೊಳಗೆ ಮದುವೆ ಮಾಡಿಸಿದ. ಅದಾಗಿ ಮತ್ತೊಂದು ವರ್ಷಕ್ಕೆ ಒಂದು ಮಗುವೂ ಆಯಿತು. ಸಾವಿಬಾಯಿ ತೀರಿಕೊಂಡ ಎರಡನೆಯ ವರ್ಷ ತುಂಬುತ್ತಿದ್ದಂತೆ ರುದ್ರೇಶಿ ಬೈಕ್ ಯಾಕ್ಸಿಡೆಂಟಲ್ಲಿ ತೀರಿಕೊಂಡಿದ್ದ. ಚಿನ್ನ ಮಾಸ್ತರ್ ಮತ್ತೆ ಜೀವ್ಲಿಬಾಯಿ ಸಂಪೂರ್ಣವಾಗಿಯೆ ಕುಸಿದು ಹೋಗಿದ್ದರು. ಮಾಸ್ತರ್ ಏನೊ ಅಲ್ಲಿ ಇಲ್ಲಿ ಸುತ್ತಿ ಮಂದಿ ಕೂಡ ಮಾತಾಡಿಕೊಂಡು ಟೈಂಪಾಸ್ ಮಾಡುತ್ತಿದ್ದ. ಆದರೆ ಜೀವ್ಲಿಬಾಯಿ, ಮಂದಿನೆ ಕಾಣದಂತ ಬಾಗಿಲಿನ ಮನೆ ಮುಂದೆ ದೊಡ್ಡ ಗೋಡೆ ಒಬ್ಬಳೆ ಎಷ್ಟಂತ ಮನೆಕೆಲಸ ಮಾಡೊದಕ್ಕೆ ಸಾಧ್ಯ? ಎಷ್ಟೇ ಕೆಲಸ ಮಾಡಿದರು, ಮಗನ ನೆನಪು ಕಾಡುತ್ತಿತ್ತು.

ಇಬ್ಬರು ಹುಡುಗಿಯರದು ಮದುವೆಯಾಗಿತ್ತು, ಉಳಿದ ನಾಲ್ಕು ಮಂದಿ ಗಂಡು ಮಕ್ಕಳು ದೂರ ಕೆಲಸ ಮಾಡುತ್ತಿದ್ದರು. ಅವಳ ಬಳಿ ಇದ್ದವನು ಒಬ್ಬನೆ ರುದ್ರೇಶಿ. ಇಪ್ಪತ್ಮೂರು ಎಕ್ಕರೆ ಜಮೀನು ನೋಡಿಕೊಂಡು ಬಹಳ ಅನ್ಯೋನ್ಯವಾಗಿದ್ದ. ವಿಧಿ ಅವನ ಬಾಳಿನಲ್ಲೆ ಹುಳಿ ಹಿಂಡಿದ್ದಳು. ರುದ್ರೇಶಿ ಎರಡನೆ (ಹೆಂಡತಿಯ

ವರ್ತನೆಯ ಬೇಸರಗೊಂಡಿದ್ದ. ಅದಕ್ಕಾಗಿಯೇ ಸತ್ತ ಎಂದು ಕೆಲವರು ಹೇಳಿದರೆ ಮತ್ತೆ ಕೆಲವರು ಮೊದಲನೆಯ ಹೆಂಡತಿ ಕಡೆಯವರು ಹೊಡೆದು ಕೊಂದಿದ್ದಾರೆ ಎಂದು ಹೇಳುತ್ತಿದ್ದರು. ಈ ಮಾತುಗಳು ಸ್ವಲ್ಪ ಅಸಮಾಧಾನ ಉಂಟು ಮಾಡಿದರೆ ಇಡೀ ದಿನ "ಅವ್ವ, ಅವ್ವ" ಆಕಡೆಯಿಂದ, ಈ ಕಡೆಯಿಂದ ಬಂದಾಗ ಒಂದುಸಲ ಮಾತಾಡಿಸುವುದು, ಏನನ್ನಾದರು ಕೇಳುವುದು ಮಾಡುತ್ತಿದ್ದ. ಅದೆಲ್ಲಾ ಅವಳಿಗೆ ನೆನಪಿಗೆ ಬರತೊಡಗಿತು. ಹದಿಹರೆಯದ ವಯಸ್ಸಿನ ಮಗ ಕೈ ಬಿಟ್ಟಿದ್ದು ಜೀವ್ಲಿಬಾಯಿಗೆ ಹೇಳಿಕೊಳ್ಳಲಾಗದ ಸಂಕಟ, ನೋವು ತಂದಿತ್ತು. ಅದನ್ನ ಸಹಿಸಿಕೊಳ್ಳಲಾಗದೆ, ರಾತ್ರಿ ನಿದ್ದೆ ಬರದಂತಾಗಿತ್ತು. ಹಾಗಾಗಿ ಕುಡಿಯಲು ಆರಂಭಿಸಿದ್ದಳು. ಬ್ರಾಂಡಿ ಕುಡಿದರೆ ನಿದ್ದೆನಾದರೂ ಬರುತ್ತೆ ಎನ್ನುವುದು ಜೀವ್ಲಿಬಾಯಿಯ ವಾದವಾಗಿತ್ತು.

ಈ ನಡುವೆ ಮಂದಿ "ರುದ್ರೇಶಿ ದೆವ್ವ ಆಗ್ಯಾನ್ರೋ, ಎಯ್, ನಿನಗ ಹೇಳ್ತಿನಿ, ಮನ್ನೆ ನಾನೊಬ್ಬನೆ ಹಳ್ಳ ದಾಟಿ ಬರ್ತಿದ್ದಿನಿ. ಮುಂದೆ ಬಿಳಿ ಬಟ್ಟೆ ತೊಟ್ಕೊಂಡು ನನ್ನ ಮುಂದೆ ನಿಂತವ್ನೆ" ಅಲ್ಲಿ ಕಂಡ, ಇವ್ನಿಗ ಹಿಡ್ಕೊಂಡ ಅಂತ ಪುಕಾರೆದ್ದಿತು. ಜೀವ್ಲಿಬಾಯಿಗೆ ಬಹಳ ನೋವಾಗಿತ್ತು. "ತಾಂಡದ ಮಂದಿಗೆ ಕಾಣ್ತಾನಂತೆ ದೆವ್ವವಾಗಿ ನನ ಮಗ ನನಗೆ ಕಂಡಾನ?" ಅಂದಾಕಿನೆ ರಾತ್ರಿ ಎದ್ದು ಮನೆ ಹೊರಗೆ ಬಂದು ನೋಡತೊಡಗಿದಳು. "ರುದ್ರೇಶ ಮಗ ಎಲ್ಲರಿಗೂ ಕಾಣುವಂತೆ ನನಗೂ ಒಮ್ಮೆ ಕಾಣಬಾರದ" ಮಧ್ಯರಾತ್ರಿ ಒಬ್ಬಳೆ ಜೋರಾಗಿ ಅತ್ತರೆ ಮಂದಿಗೆ ಗೊತ್ತಾದೀತು ಅಂತ ಒಳಗೊಳಗೆ ಅತ್ತಿದ್ದಳು. ಅದು ಪ್ರತಿದಿನ ರೂಢಿಯಾದಂಗಾಗಿ ಅದೇ ಸಮಯಕ್ಕೆ ಹೊರಗೆ ಬರುತ್ತಿದ್ದಳು. "ರುದ್ರೇಶ, ರುದ್ರೇಶ" ಕನವರಿಸುತ್ತಿದ್ದಳು. "ಅಲ್ಲ ಹಾಳಮಂದಿ ಅಲ್ಲಿ ಬಂದ, ಇಲ್ಲಿ ಬಂದ ಅಂತಾರ, ಅವನನ ಮನಿದಾರಿ ಮರತು ಹೋತೇನು ಅವನಿಗೆ, ಹೆತ್ತ ತಾಯಿ, ಅವನ ಎರಡು ಮಕ್ಕಳು ಮರತು ಹೋದವೇನು?" ತನ್ನೊಳಗೆ ಮೂಡಿ ಬಂದ ಜಿಜ್ಞಾಸೆಯನ್ನ ಪರಿಹರಿಸಿಕೊಳ್ಳುವುದು ಹೇಗೆ ಅಂತ ಒದ್ದಾಡುತ್ತಿದ್ದಳು.

ಜೀವ್ಲಿಬಾಯಿ ಒಳಗೊಳಗೆ ಒದ್ದಾಡಿ, ಯಾವುದೊ ಕಾಯಿಲೆಗೆ ಬಲಿಯಾದಳು. ಮಕ್ಕಳು ಅಲ್ಲಿ ಇಲ್ಲಿ ತೋರಿಸಿದರು. ಪ್ರಯೋಜನವಾಗಲಿಲ್ಲ. ಕೊನೆಯ ಉಸಿರು ಬಿಡುವಾಗಲು "ರುದ್ರೇಶ, ಹಠಮಾರಿಯಾಗಿ ಬಿಟ್ಟೆಯ ಮಗನೆ, ದೆವ್ವ ಆಗಿ ತಾಂಡದ ಎಷ್ಟೊ ಮಂದಿಗೆ ಕಂಡಿಯಂತೆ ನನಗೆ ಕಾಣಲಿಲ್ಲಾ. ನಿನ್ನ ಕೊರಗಿನಲ್ಲಿ, ನಿನ್ನ ಮಕ್ಕಳ ಆರೈಕೆ ಮಾಡದೆ ನೀನು ಹೋದ ಜಾಗಕ್ಕೆ ಬರ್ತಾ ಅದೀನಿ" ಜೀವ್ಲಿಬಾಯಿ ಕಣ್ಣು ಮುಚ್ಚಿದಳು. ಮಗನ ದೆವ್ವವನ್ನ ಕಾಣುವ ಅವಳ ಮನೊಕಾಮನೆ ಕೂಡ ಈಡೇರಲಿಲ್ಲ. ಹಾಗಾಗಿ ಸಂಕಟಪಟ್ಟು, ನಿದ್ದೆಬಾರದ ರಾತ್ರಿಗಳ ಹಂಗನ್ನ ತೊರೆದು ಶಾಶ್ವತ ನಿದ್ದೆಗೆ ಜಾರಿದ್ದಳು.

* * *

78. ತಾಳಿ ಕಟ್ಟಿದವರಿಗೆ ಕೈಕೊಟ್ಟವರು

ಪ್ರಕರಣ ಒಂದು

ಭದ್ರನಾಯ್ಕನ ತಾಂಡದಲ್ಲಿ ಪ್ರೀತಿಸಿದವರು, ತಮ್ಮ ಪ್ರೀತಿಗಾಗಿ ಏನೆಲ್ಲಾ ಪ್ರಯಾಸಪಟ್ಟರು ಎನ್ನುವುದಕ್ಕೆ ಸಾಕಷ್ಟು ಪ್ರಕರಣಗಳಿದ್ದವು. ಈ ಪ್ರೀತಿ ಅನ್ನುವುದು ಹೇಗೆ, ಯಾವಾಗ, ಯಾರೊಂದಿಗೆ ಆಗುತ್ತದೆ ಎನ್ನುವುದೆ ತಿಳಿಯುವುದಿಲ್ಲ. ರಾಜಾನಾಯ್ಕ ಎನ್ನುವವನು ಬಂಜಾರ ಸಮುದಾಯದ ಎರಡು ಮೂಲ ಕುಲಗಳಾದ, ರಾಠೋಡ್ ಮತ್ತು ಚವ್ಹಾಣ್‌ಗಳಿಗಿಂತ ಭಿನ್ನ ಪಂಗಡಕ್ಕೆ ಸೇರಿದವನು. ಅವರ ಕುಲದವರು ಈ ಕಡೆ ರಾಠೋಡ್‌ನಲ್ಲೂ ಮದುವೆಯಾಗಬಹುದು, ಆ ಕಡೆಗೆ ಚವ್ಹಾಣ್‌ನಲ್ಲೂ ಮದುವೆ ಮಾಡಿಕೊಳ್ಳಬಹುದು. ಈ ಕಡೆಗೆ ಹೆಣ್ಣು ಕೊಡಬಹುದು, ಯಾರಾದರೂ ಆಸಕ್ತಿ ತೋರಿಸಿದರೆ ಚವ್ಹಾಣ್ ಪಂಗಡಕೂ ತಮ್ಮ ಹೆಣ್ಣನ್ನು ಕೊಡಬಹುದಾಗಿತ್ತು. ಇದು ಪರಂಪರೆಯಿಂದ ನಡೆದು ಬಂದ ರಿವಾಜು ರಾಜಾನಾಯ್ಕ ನೋಡದಕ್ಕೇನು ಸುಂದರವಾಗಿರದಿದ್ದರೂ ಪರವಾಗಿಲ್ಲ ಯಾವ ಹೆಣ್ಣು ನೋಡಿದರೂ ತಿರಸ್ಕರಿಸುವಂತೆ ಇರಲಿಲ್ಲ. ಅವನಿಗೂ ಸುವಾಲಿಗೂ ಅದೆಂಗೆ ಪ್ರೀತಿ ಹುಟ್ಟಿತೋ ಗೊತ್ತಿಲ್ಲ. ಒಳಗೊಳಗೆ ಗಾಢವಾಗಿಯೆ ಬೆಳೆದಿತ್ತು. ರಾಜಾನಾಯ್ಕನಿಗೆ ಕಿವಿಸೋರಿದ್ದರಿಂದ ಕಿವುಡು ಬಂದಿತ್ತು. ಆದರೆ ಸುವಾಲಿ ಅತಿ ಸುಂದರಳಾಗಿದ್ದಳು. ಇಬ್ಬರು ಚವ್ಹಾಣ್ ಪಂಗಡದವರೆ ಆದರೂ ರಾಜಾನಾಯ್ಕ ಎರಡು ಕಡೆಗೆ ಮದುವೆಯಾಗಬಹುದಾದ್ದರಿಂದ ಧೈರ್ಯದಿಂದಲೆ ಸುವಾಲಿಯೊಂದಿಗೆ ಪ್ರೀತಿಮಾಡಿದ್ದ. ಎರಡೂ ಕುಟುಂಬಗಳು ಕೂಲಿ ಮಾಡುವವೆ ಆಗಿದ್ದರಿಂದ, ಕಲ್ಲೆಳ್ಳಿ ಕುರಂದೂರುಗಳವರೆಗೆ, ಗುತ್ತಿಗೆ ಹಿಡಿದು ಭತ್ತದ ನಾಟಿ, ಕಳೆ ತೆಗೆಯುವುದು, ಭತ್ತ ಕೊಯ್ಯುವುದು, ಈಗಿನಂತೆ ಹಾರ್ವೆಸ್ಟ್ ಮಿಷನ್ ಇಲ್ಲದರಿಂದ ನೂರು ಚೀಲಗಳಷ್ಟು ಭತ್ತ ಬಡಿಯುವುದು, ಒಣಗಿಸಿ ಚೀಲ ತುಂಬುವವರೆಗೂ ಇವರದ್ದೆ ಕೆಲಸವಾಗಿತ್ತು. ಇಬ್ಬರದು ಹರೆಯದ ವಯಸ್ಸು ಭತ್ತ ಕೊಯ್ಯುವಾಗ ಪಂತ ಕಟ್ಟುವುದು ಸಹಜವಾಗಿತ್ತು. "ನಾ ಮುಂದೆ ಕೊಯ್ಯುತ್ತಿನಿ" ಅಂತ ಸುವಾಲಿ,

"ಬಿಡು ಬಿಡು ನನ ಮುಂದ ನೀ ಯಾವ ಲೆಕ್ಕ" ರಾಜಾನಾಯ್ಕ ಈ ಪಂತದಿಂದ ಆರಂಭವಾದ ಪ್ರೀತಿ, ಕಾಲ್ನಡಿಗೆಯಿಂದ ತಾಂಡಕ್ಕೆ ಬರುವಾಗ ಎಲ್ಲರಿಗಿಂತ ಮುಂಚೆ ನಡೆಯುವುದು ಗುಡ್ಡದ ಮೂಲೆಯಲ್ಲಿ ಸರಸ ಸಲ್ಲಾಪ ಆರಂಭವಾಗಿತ್ತು. "ಎಷ್ಟೆ ಜನ್ಮ ಬರಲಿ ನಾ ನಿನ್ನ ಹೆಂಡತಿಯಾಗಬೇಕು" ಸುವಾಲಿಯ ನಿರ್ಧಾರ, ಸಂಪೂರ್ಣ ಮನಸ್ಸು, ದೇಹ, ಆತ್ಮವನ್ನ ಕೆಪ್ಪ ರಾಜಾನಾಯ್ಕನಿಗೆ ಸಮರ್ಪಿಸಿದ್ದಳು. "ನಿನ್ನಂತ ಸುಂದರಿ ಪುಣ್ಯಮಾಡಿದವನಿಗೆ ಮಾತ್ರ ಸಿಗುವುದು ಕಣೆ, ನೂರ ಜನ್ಮ ಬರಲಿ ನಾ ನಿನ್ನ ಕೈ ಬಿಡುವುದಿಲ್ಲ." ರಾಜಾನಾಯ್ಕನ ಮನದಾಳದ ಮಾತಾಗಿತ್ತು. ಬಹುತೇಕ ಈ ವಾಸನೆ ಅವರ ಸಹ ಕೂಲಿಗರಿಗೆ ಗೊತ್ತಾಗಿತ್ತು. ಅವರವರ ಮನೆಯೊಳಗೂ ಇದು ಅಲ್ಪಸ್ವಲ್ಪ ತಿಳಿದಿತ್ತು. ಸುವಾಲಿಯ ತಾಯಿ ಜಾವಳಿಬಾಯಿ "ನೋಡು ಅವನು ಚವ್ಹಾಣ್ ಪಂಗಡದವನು, ಆದರೂ ನಡೆಯುತ್ತೆ, ನಿಮ್ಮಪ್ಪ, ನಿಮ್ಮ ಚಿಕ್ಕಪ್ಪಂದಿರು, ದೊಡ್ಡಪ್ಪಂದಿರು ಒಪ್ಪುವುದಿಲ್ಲ, ನೀನೊಬ್ಬಳೆ ಪಶ್ಚಾತ್ತಾಪ ಪಡಬೇಕು. ಯೋಚನೆ ಮಾಡು. ಈ ಮದುವೆಯನ್ನ ನಮ್ಮ ಖಾನದಾನ್ ತಿರಸ್ಕರಿಸುತ್ತೆ" ಕಡ್ಡಿ ತುಂಡು ಮಾಡಿದಂತೆ ಹೇಳಿದಳು. "ನೋಡು, ನಾನು ನೀರಿಗೆ ಇಳಿದಿನಿ, ಬದಕೊದಕ್ಕೆ ಈಜತೀನಿ" ಅಷ್ಟೇ ಮಾರ್ಮಿಕವಾಗಿ ಉತ್ತರಿಸಿದ್ದಳು.

ಅದಾಗಿ ಆರೇ ತಿಂಗಳು ಸುವಾಲಿಯ ತಂದೆ ಜುಲ್ಪಾನಾಯ್ಕ ಸುವಾಲಿ ಮದುವೆಯನ್ನ ಅವನ ತಂಗಿ ಮಗ ಡಿಂಗಾನಾಯ್ಕನ ಜೊತೆಗೆ ನಿಶ್ಚಯ ಮಾಡಿಯೇ ಬಿಟ್ಟ.

ರಾಜಾನಾಯ್ಕನಿಗೂ ಬೇರೆ ಹುಡುಗಿಯ ಜೊತೆಗೆ ಮದುವೆ ಮಾಡಿಸಿದರು. ಆದರೆ ಎಲ್ಲೊ ಎಡವಟ್ಟಾಗಿತ್ತು. ಸುವಾಲಿ ಮದುವೆಯಾಗಿ ಮೂರೇ ದಿನಕ್ಕೆ ಮನೆ ಸೇರಿದ್ದಳು. ಸೋದರತ್ತೆ ಬಹಳ ಪ್ರೀತಿಯಿಂದ ಸಂಭಾಳಿಸಿಯೇ "ಅಲ್ಲವ್ವ, ನಿಮ್ಮಮನಿಗಿಂತ ಹೆಚ್ಚು ಅಪರೂಪದಿಂದ ನೋಡ್ತಿನಿ ನಿನಗೆ ಏನಾಯ್ತು ಅಂತ ಹಿಂಗ ಬಂದು ಕುಂತಿಯಾ ಹುಚ್ಚಿ, ಜೀವನ ಅಂದ್ರೇನೆ ಹೀಗೆ, ನಾವು ಅಂದುಕೊಂಡಂಗೆ ಆಗೋದಿಲ್ಲ, ಅದೆಂಗೆ ಬರುತ್ತೋ ಹಂಗೆ ನಡಿಲೆಬೇಕು. ಮೈ ಕೊಡವಿ ಎದ್ದು ಬಾ. ನಿನ ಗಂಡ ವಾರದಿಂದ ಸರಿಗೆ ಉಂಡಿಲ್ಲ, ಯಾರ ಕೂಡ ಮಾತಾಡ್ತಿಲ್ಲ" ತನ್ನೊಳಗಿನ ಭಾವನೆಯನ್ನ ವ್ಯಕ್ತ ಪಡಿಸಿದ್ದಳು. ಎಲ್ಲಾ ಕೇಳಿದ ಮೇಲೆ ನ್ಯಾಯ ಕೊಟ್ಟಂತೆ "ಇಲ್ಲ ನಾ ಬರಲ್ಲಾಂದ್ರೆ ಬರಲ್ಲಾ" ಸುವಾಲಿಯ ಮೊಂಡುವಾದ.

ಇದೆಲ್ಲಾ ಘಟಿಸುವುದಕ್ಕೆ ಒಂದುವರ್ಷ ಪೂರ್ಣಗೊಂಡಿತ್ತು. ರಾಜಾನಾಯ್ಕ ಹೆಂಡತಿಯನ್ನ ಮುಟ್ಟದೆ ತೌರಿಗೆ ಕಳುಹಿಸಿದ್ದ. ಅವಳ ಬಾಳು ಹಾಳು, ಸುವಾಲಿ ಗಂಡನ ಬಾಳು ಹಾಳು ಮಾಡಿ ಇಬ್ಬರು ಮಾತಾಡಿಕೊಂಡು ಮನೆ ಬಿಟ್ಟಿದ್ದರು. "ಯಾರೊ ತೊಪುನಾಯ್ಕನ ಕಬ್ಬಿನೊಳಗೆ ಇದ್ದಾರೆ" ಅಂದ್ರು, ಇನ್ನೊ ಯಾರೊ "ಇಲ್ಲ ಬ್ರಾಂಬರ ಹೊಲದ ಸರದಾಗ ಅಡಗಿ ಕುಂತಾರ" ಅಂದ್ರು. ಹಿಂಗೆ

ತಿಂಗಳೊಪ್ಪತ್ತು ನಾನಾ ನಮೂನಿ ಸುದ್ದಿಗಳು ಎದ್ದವು. ಕಡೆಗೆ ಯಾರೊ ಬಾಣೂರು ದವಾಖಾನೆಗೆ ದಾಖಲಾಗಿದ್ದರು, ಅವರಿಗೆ ಗಂಜಿ, ಬಿಸಿನೀರು, ಊಟ ಮಾಡಿಕೊಟ್ಟು ಆರೈಕೆ ಮಾಡಿದರು ಸುವಾಲಿ ಮತ್ತ ರಾಜನಾಯ್ಕ ಅಂತ ಸುದ್ದಿ ತಂದ್ರು. ಅಲ್ಲಿಂದ ಮುಂದೆ ರಾಜಾರೋಷವಾಗಿ ರಾಜಾನಾಯ್ಕ ಮನೆಗೆ ಬಂದು, ತನ್ನ ಪಾಲಿಗೆ ಬಂದ ಜಮೀನು ಮಾಡಿಸತೊಡಗಿದ. ಸುವಾಲಿ ಮನೆಯವರು, ಮೊದಲನೆಯ ಮದುವೆ ತನ್ನ ಸಂತ ಅಕ್ಕನ ಮಗ, ಅವನ ಮನಿ ಮುರದಳು ಅನ್ನೋದನ್ನ ಬಿಟ್ಟರೆ ಬೇರೆ ಯಾವ ದ್ವೇಷವು ಇರಲಿಲ್ಲ., ಒಮ್ಮೊಮ್ಮೆ ಸುವಾಲಿಬಾಯಿಯ ತಾಯಿನೂ ಕೂಡ ಮಗಳ ಮನೆಗೆ ಹೋಗಿ ಬಂದು ಮಾಡುತ್ತಿದ್ದಳು.

ಬಾಣೂರಿಗೆ ಹೋದ ತಕ್ಷಣ ಕಟ್ಟಡ ನಿರ್ಮಾಣದ ಕಾಮಗಾರಿಯಲ್ಲಿ ತೊಡಗಿಕೊಂಡಿದ್ದ ರಾಜಾನಾಯ್ಕ ಅವನಿಗೆ ಇರಲು ಮನೆ ಇಲ್ಲ ಅಂತ ಗೊತ್ತಾಗಿ ಬಿಲ್ಡಿಂಗ್ ಕಾಯಲು ಹೇಳಿ ಒಂದು ತಗಡಿನ ಮನೆ ಮಾಡಿಕೊಟ್ಟ. ಮುಂದೆ ಮಾಲಿಕನ ಕೃಪೆ ಮುಂದುವರೆಯಿತು. ಯಾವುದೋ ಒಂದು ಶಾಲೆಯ ವಾಚ್‌ಮನ್ ಹುದ್ದೆಗೆ ಅವನನ್ನ ನೇಮಿಸಿದರೆ ಅಲ್ಲಿಯ ಸ್ವಚ್ಛತೆಗೆ ಅವಳನ್ನ ನೇಮಿಸಲಾಯಿತು. ವರ್ಷಕ್ಕೆ ಒಂದರಂತೆ ಆರೇಳು ಹೆಣ್ಣು ಹುಡುಗಿಯರು ಹುಟ್ಟಿದರು. ಅವುಗಳ ಪಾಲನೆ ಪೋಷಣೆಯಲ್ಲಿಯೆ ರಾಜಾನಾಯ್ಕ ಹೈರಾಣಾಗಿ ಹೋದ.

ಪ್ರಕರಣ ಎರಡು

ಗಾಂಗ್ಲಿಬಾಯಿ ಭದ್ರನಾಯ್ಕನ ತಾಂಡದ ಗಟ್ಟಿನಾಯ್ಕನ ಮೊಮ್ಮಗಳು. ಆದರೆ ಮುದಿಯ ಯಾವಾಗಲೊ ಸತ್ತುಹೋಗಿದ್ದ, ಅವನ ಹಿಂದಿಂದೆ ಅವನ ಒಬ್ಬನೆ ಮಗನೂ ಕುಡಿದು ಸತ್ತು ಹೋಗಿದ್ದ. ಅವನ ಎರಡನೇ ಹೆಂಡತಿ ಮಗ ಈಗ ದೊಡ್ಡವನಾಗಿದ್ದ. ಆದರೆ ಪೂರ ಕಾರುಬಾರು ಗಾಂಗ್ಲಿಬಾಯಿಯ ತಾಯಿ ಸಾಂಕೋಲಿ ಕೈಯಾಗಿತ್ತು. ಆಗಲೇ ತಾಂಡದಲ್ಲಿ ಇದ್ದಂತಹ ಕೂಡು ಕುಟುಂಬಗಳೆಲ್ಲವೂ ವಿಭಜನೆಗೊಂಡಿದ್ದವು. ತೊಪುನಾಯ್ಕನ ಮನಿತನವು ಈಗ ಆಗ ಎನ್ನುವಂತಿತ್ತು. ಮಕ್ಕಳೊಳಗೆ ಹೊಂದಾಣಿಕೆ, ಸೊಸೆಯಂದಿರಲ್ಲಿ ಹೊಂದಾಣಿಕೆ ಇಲ್ಲದಾಗಿತ್ತು. ಹುಲಿಯೂರ ಆಗಲೆ ಸಾಕಷ್ಟ ದೊಡ್ಡವನಾಗಿ ಎಂ.ಎ. ಓದುತ್ತಿದ್ದ ಆಗಾಗ ತಾಂಡಕ್ಕೆ ಬಂದಾಗ ನಡೆದ ಘಟನೆಗಳ ವಿವರ ಅವನ ಕಿವಿಗೆ ಬೀಳುತಿತ್ತು ಕೇಳಿ ಬೇಸರಗೊಂಡು ಯಾಕೆ ಹೀಗೆ? ಯೋಚನೆ ಮಾಡುತ್ತಿದ್ದ.

ಈ ಪ್ರಕರಣವಂತು ಅವನನ್ನ ಹೈರಾಣಗೊಳಿಸಿತ್ತು. ಗಾಂಗ್ಲಿ ನೋಡೊದಕ್ಕೆ ಚೆನ್ನಾಗಿಯೆ ಇದ್ದಳು. ಸಾಂಕೋಲಿಯ ಆರು ಹೆಣ್ಣುಗಳಲ್ಲಿ ಗಾಂಗ್ಲಿ ಮೂರನೆಯವಳು. ಮನೆತುಂಬ ಹೆಣ್ಣಿರುವಾಗ ಹಿಂದು ಮುಂದು ವಿಚಾರ ಮಾಡದೆ, ಕೇಳಿದವರಿಗೆ ಮದುವೆ ಮಾಡಿಕೊಟ್ಟಿದ್ದಳು. "ನೋಡ್ರವ್ವ, ಎರಡ ಮದುವೆ ಆದ, ನನಗ ಆರು ಆಕೀಗ

ಮೂರು ಒಟ್ಟು ಎಷ್ಟು ಆದವು ಒಂಬತ್ತು. ಅವನೇನು ಅಂತಾ ಪರಿ ಶ್ರೀಮಂತನಿದ್ದನಾ? ಭಾಡಕೌ ನನ ಮಗ, ಕುಡದು ಕುಡುದು ನನ್ನ ರಂಡಮುಂಡಿಯನ್ನಾಗಿ ಮಾಡಿ ಹೋದ, ಕೈಲಾದಪನ್ನ ಮಾಡ್ತಿನಿ. ಮನಿತನದ ಮರ್ಯಾದೆ ಕಾಪಾಡುವ ಜವಾಬ್ದಾರಿ ನಿಮ್ಮ ಕೈಯಾಗಿದೆ ಉಪದೇಶ ಮಾಡಿದ್ದಳು ಸಾಂಕೋಲಿ. ಈಗ ತಾಂಡದಲ್ಲಿ ಹೆಚ್ಚಿನ ಜಮೀನುಳ್ಳವಳು ಅನ್ನೊ ದರ್ಪ ಇತ್ತು ಇಪ್ಪತ್ತು ಎಕ್ಕರೆ ಜಮೀನು. ನೂರು ಇನ್ನೂರ ಚೀಲ ಮಕ್ಕೆಜೋಳ ಬೆಳೆಯತೊಡಗಿತು. ಅದನ್ನೇ ಮಾರಿ ಸಾಲ ಮಾಡಿ ಮೊದಲ ಇಬ್ಬರನ್ನ ತಡಾಯಿಸಿದಳು. ಮೊದಲನೆಯ ಗಂಗಿ ಅದ್ಯಾರೊ ತಾಂಡದಲ್ಲೆ ಇದ್ದ ಹುಡುಗನ ಪ್ರೀತಿ ಮಾಡಿದ್ದಳು. ದಿನಾ ಕದ್ದುಮುಚ್ಚಿ ಭೆಟ್ಟಿಯಾಗುತ್ತಿದ್ದಳು. ಅಂತಾ ಮಂದಿ ಸುದ್ಧಿ ಮಾಡಿದ್ದರು. ಆದರೆ ಅದನ್ನ ಕೇಳಿಯೂ ಅವರದೆ ಮನೆತನದ ಹುಡುಗ ಬಂದು ಅವಳನ್ನ ಮದುವೆಯಾದಾಗ ಮೊದಲನೆ ಹುಡುಗ ಬಚಾವಾಗಿದ್ದ. "ನಮ್ಮ ಪ್ರೀತಿ ಅಜರಾಮರ ಆಯ್ತು ಬಿಡು ಗಂಗಿ" ಅಂದಿದ್ದ. ಅವಳ ತಂಗಿ ಕಾಳಿಯನ್ನ ಪಕ್ಕದ ತಾಂಡಕ್ಕೆ ಕೊಟ್ಟು ಮದುವೆ ಮಾಡಿದಳು. ಮೂರನೆಯವಳಿಗೆ ಅವರ ಹಳೇ ಸಂಬಂಧಿ ಗಾಂಗ್ಲಿಯ ಸೋದರತ್ತೆ ಮಗ ಸಂಕ್ರನಾಯ್ಕನಿಗೆ ಕೊಟ್ಟು ಮದುವೆ ಮಾಡಿದ್ದಳು.

ಮದುವೆ ಮಾತುಕತೆ ಆಯಿತು, ಅದಾಗಿ ಆರು ತಿಂಗಳಲ್ಲಿ ಮದುವೆ ಶಾಸ್ತ್ರನೂ ಮುಗಿತು. ದಿಬ್ಬಣ ಹೋಗಿ ಅವಳನ್ನ ಭದ್ರಾನಾಯ್ಕನ ತಾಂಡದಿಂದ ನಾಕು ಮೈಲಿದೂರದ ಸೋಮ್ಲಾಪುರ ತಾಂಡಕ್ಕೆ ಕಳುಹಿಸಿ ಬಂದರು. ಹದಿನೈದು ದಿನ ಹೊಂದಿಕೊಂಡು ಬದುಕನ್ನ ಮಾಡಿದ್ದಳು. ಆದರೆ ಇದ್ದಕ್ಕಿದ್ದಂಗೆ ಹಳೆಗಾಯದ ನೋವು ಅದು ಹೇಗೆ ಕಾಣಸಿಕೊಂಡಿತೊ ಆ ದೇವರೆ ಬಲ್ಲ. ಶಾಸ್ತ್ರದ ನೆಪ ಒಡ್ಡಿ ಹದಿನೈದು ದಿನಕ್ಕೆ ವಾಪಾಸು ಏಳೆಂಟು ಹೆಂಗಸರೊಂದಿಗೆ ಬಂದವಳು "ಅತ್ತೆ, ನಾನು ಒಂದುವಾರ ಬಿಟ್ಟು ಬರ್ತಿನಿ ನೀವು ಹೊರಡಿ" ಅಂದು ಅವರನ್ನೆಲ್ಲಾ ಕಳುಹಿಸಿದಳು ಗಾಂಗ್ಲಿ. ಪಾಪದವು "ನೋಡವ್ವ ನೀನಿಲ್ಲದೆ ನಿನ ಗಂಡನಿಗೆ ತ್ರಾಸ ಆಗುತ್ತೆ, ಅವನ ಹೊಟ್ಟೆ ಬಟ್ಟೆ ನೋಡೋರು ಯಾರು? ತಡ ಮಾಡದಂಗೆ ಗಡಾನ ಬಂದುಬಿಡು. ನಾನೇನು ಹೊರಗಿನವಳಲ್ಲ, ನಿಮ್ಮಪ್ಪನ ಹಿರಿಯಕ್ಕ" ತನ್ನ ಮಗನ ಪರ ವಹಿಸಿ ಅವಳ ಎದೆಯೊಳಗೆ ಸಂತೋಷದ ಬೀಜ ಬಿತ್ತಲು ನೋಡಿದ್ದಳು. ಆದರೆ ಗಂಡನ ವಿಷಯದಲ್ಲಿ ಅವಳೆದೆ ಬಂಜರು ಭೂಮಿಯಾಗಿರುವುದು ಅವಳ ಅತ್ತೆಗೆ ಕಾಣಲಿಲ್ಲ. ಅಲ್ಲಿ ಯಾರೊ ಬೇರೆಯವನು ಫಸಲು ಬಿತ್ತಿ ಬೆಳೆದದ್ದು ಗೊತ್ತಾಗಲೇ ಇಲ್ಲ.

ಅವರು ಮುಂಜಾನೆ ಹೊರಟು ತಾಂಡ ಸೇರಿದಾಗ ಒಂದು ಗಂಟೆ ಮಧ್ಯಾಹ್ನವಾಗಿರಬಹುದು. ಹಿಂದಿಂದೆ ಸಂಜೆ ನಾಕು ಗಂಟೆಯ ಸುಮಾರಿಗೆ ಗಾಂಗ್ಲಿ ಯಾರೊ ಬೇರೆ ಜಾತಿಯ ಹುಡುಗನ ಜೊತೆಗೆ ಓಡಿಹೋಗಿದ್ದಾಳೆ ಎನ್ನುವ ಸುದ್ದಿ ಬಂತು. ಗಾಂಗ್ಲಿಯ ಗಂಡ ಜಾನ್ಯಾನಾಯ್ಕನಿಗೆ ಆಕಾಶವೆ ಕುಸಿದು ಬಿದ್ದಂತಾಗಿತ್ತು.

ಅವನು ಎಲ್ಲವನ್ನು ಬಿಟ್ಟು ಅವನ ತಾಯಿಯ ಹಳೆ ಪೆಟಾರಿಯನ್ನ ಪರೀಕ್ಷೆ ಮಾಡಿದ. ಅವನ ಬಂಗಾರದ ಚೈನ್ಸರ, ಅವಳ ಬಂಗಾರದ ಸಾಮಾನುಗಳನ್ನ ವ್ಯವಸ್ಥಿತವಾಗಿಯೆ ತೆಗೆದುಕೊಂಡು ಪರಾರಿಯಾಗಿದ್ದಳು. "ಅಲ್ಲಬೆ ನಿನ್ನ ತಮ್ಮನ ಕುಟುಂಬ ಹೀಗೆನಾ ನಂಬಿಸಿ ಮೋಸ ಮಾಡುವುದು. ಆ ಹೆಂಗಸಿಗೆ ಏನು ಕಮ್ಮಿಯಾಗಿತ್ತು?" ಆವೇಶದಲ್ಲಿ ಏನೇನೋ ಮಾತಾಡಿದ.

"ಮಗ ನೀನು ಹುಡುಗ ನಿನಗೆ ಯಾರು ಹೆಣ್ಣು ಕೊಡಲ್ಲ ಹೇಳು, ಅವಳು ಹೋದರೇನಾತು, ಮತ್ತೊಂದು ಮದುವೆ ಮಾಡೋನ, ನೀ ಯಾಕೆ ತಲೆ ಕೆಡಿಸಿಕೊಳ್ತಿಯಾ ಸುಮ್ಮನಾಗು" ಅವಳ ಕರಳು ತಡಿಯದೆ ಸಮಾಧಾನ ಮಾಡಲು ನೋಡಿದಳು. "ಅವ್ವ ನನಗೆ ಗೊತ್ತು. ನಿನಗೆ ಎಷ್ಟು ನೋವಾಗಿದೆ, ಅವಮಾನವಾಗಿದೆ ಅಂತ. ನೀನು ಯಾರು ಯಾರಿಗೆ ಉತ್ತರ ಕೊಡಬೇಕು ಅಂತಾನು ಗೊತ್ತು. ಆದರೂ ನನಗೆ ಸಮಾಧಾನ ಮಾಡ್ತಾ ಇದ್ದಿಯಾ?" ಅವಳು ಮುಂದುವರಿದು "ಅನಾಥ ಮಕ್ಕಳು ಏನೊ ಚೆನ್ನಾಗಿ ಬಾಳುವೆ ಮಾಡಿಕೊಂಡು ಹೋಗಲಿ, ನಮ್ಮ ಹುಡುಗಿಯರು ನಮ್ಮ ಮನೆಯಲ್ಲಿ ಇರಲಿ ಅಂತ ಅವಳು ಬೆಳೆಸಿದ ಸಂಬಂಧವಾಗಿತ್ತು. ಇವ್ಯಾವನ್ನೂ ನೋಡದೆ ಹಕ್ಕಿ ಪುರ್ರಂತ ಹಾರಿಹೋಗುವಂತೆ ಯೋಚನೆ ಮಾಡದೆ ಪರಾರಿಯಾಗಿದ್ದಾಳೆ ಮತಿಹೀನ ಹುಡುಗಿ" ಒಳಗೊಳಗೆ ಕುದಿಯುತ್ತಿದ್ದ ಜಾನ್ಯ.

ಅದು ಓಡಿಹೋದವಳು ನಮ್ಮ ಲಮಾಣಿ ಹುಡುಗನ ಜೊತೆಗೂ ಅಲ್ಲ. ಯಾರೊ ಅನ್ಯ ಜಾತಿಯವನು "ಕಾಲ ಕೆಟ್ಟು ಹೋತು ನಾವು ಎಂಥೆಂಥ ಹುಡುಗಿಯರನ್ನ ನೋಡಿವಿ. ಎಂಥೆಂಥ ಗಂಡಸರನ್ನ ಕಂಡೀವಿ ಹಿಂಗ ಮದುವೆ ಮಾಡಿಕೊಂಡು ಗಂಡನ್ನ ಬಿಟ್ಟು ಓಡಿ ಹೋದವಳನ್ನ ನೋಡಿಲ್ಲ. ನಾನು ಬಡಕಂಡೆ ಬ್ಯಾಡಕಣೆ, ನಿಮ್ಮ ಮನಿತನ ಮದಲೆ ಸರಿ ಇಲ್ಲಾ, ಬರಿ ಓಡಿಹೋಗಿ ಗಂಟು ಹಾಕ್ಕೊಂಡೋರದಾರ, ನನ್ನ ಮೊಮ್ಮಗನ ಬಾಳು ಹಂಗೆ ಆದೀತು ಅಂದಿದ್ನೊ ಇಲ್ಲೊ ಹೇಳು" ಜಾನ್ಯನಾಯ್ಕನ ಅಜ್ಜಿ ಅವನ ತಾಯಿಯ ಮೇಲೆ ಕೆಂಡ ಕಾರತೊಡಗಿದಳು. "ನನಗೇನು ಗೊತ್ತವ್ವ ಈಕೀನು ಹಿಂಗೆ ಓಡಿಹೋಗ್ತಾಳೆ ಬೇವರ್ಸಿಮುಂಡೆ ಅಂತೇಳಿ. ಏನೊ ನನ ತಮ್ಮ ಸತ್ತು ಹತ್ತು ವರ್ಷಗಳಾದವು, ದಿಕ್ಕಿಲ್ಲದವು ಆರಾಮದಿಂದ ಬಾಳೇವು ಮಾಡ್ತಾವ ಅಂದ್ಕೊಂಡಿದ್ದೆ. ನಾನು ಯಾವ ಕರ್ಮಕ್ಕೆ ಹೇಳಿದ್ನೊ ಏನೊ, ನನ್ನ ಇಡೀ ಕುಟುಂಬದ ಮರ್ಯಾದೆ ನಾನೆ ಕೈಯಾರೆ ತಗದಂಗಾತೀಗ" ಜಾನ್ಯಾನ ತಾಯಿ ರೋಧಿಸತೊಡಗಿದಳು.

ಗಾಂಗ್ಲಿ ಕತೆ ಕೇಳಿದ ಹುಲಿಯೂರ ಹೌಹಾರಿಹೋದ "ಅಲ್ಲಾ ಕಾಣೋದಕ್ಕೆ ಎಷ್ಟು ಮುಗ್ದಳಾಗಿ ಕಾಣತಿದ್ದಳು, ಪಾಪಿ ಇಡಿ ತಾಂಡದ ಮರ್ಯಾದೆ ತಗದಳು. ಅವಳ ಅಜ್ಜ ಇದ್ದಾಗ ಹೆಂಗಿತ್ತು ಮನಿತನ ದಪ್ಪಮೀಸೆ ಆಜಾನುಬಾಹು ಮೈಕಟ್ಟು ನೋಡಿದರೆ ಹೆದರಿಕೆಯಾಗುತ್ತಿತ್ತು. ಅವನ ಮಗ ಆಗಲೆ ಪೀಚು ಇಬ್ಬರು ಹೆಂಡಿರ

ಕಾಟ ತಡಿಲಾರದೆ ಕುಡಿತಕ್ಕೆ ಶರಣಾದ. ಹಿಂದಿನ ಕಾಲದ ರಾಜ ಮಹಾರಾಜರನ್ನ ಅನುಕರಣೆ ಮಾಡಿದರೆ ಆದೀತೆ? ಅರಮನೆಯಲ್ಲಿ ಸೈನಿಕ, ಸೇನಾಪತಿಗಳಿದ್ದರು, ರಾಣಿಗೊಂದು ಅರಮನೆ, ಎಷ್ಟಾದರೂ ಮದುವೆ ಮಾಡಿಕೊ ನಿನ್ನ ತಾಕತ್ತು. ತಿನ್ನಾಕ ಸರಿಯಾಗಿ ಕೂಳಿಲ್ಲ ದಿಮಾಕು ಮಾಡಿದರೆ ಆದೀತೆ?" ಹುಲಿಯೂರ ತಾನು ಹತ್ತಿರದಿಂದ ಕಂಡಿದ್ದ ಗಾಂಗ್ಲಿ ಬಗ್ಗೆ ಕಳಕಳಿ ತೋರಿಸಿದ. ಈಗ ಅವಳು ಎಲ್ಲಿದ್ದಾಳೆ? ಹೇಗಿದ್ದಾಳೇ? ಎನ್ನುವುದು ಯಾರಿಗೂ ತಿಳಿಯದ ವಿಷಯ ಒಳ್ಳೆ ಹೊಲ, ಮನಿ, ಒಳ್ಳೆ ಹುಡುಗ ಎಲ್ಲ ಬಿಟ್ಟುಕೊಟ್ಟು ಖಾಲಿ ಪೀಲಿ ಜೋಳಿಗೆ ಹಾಕಿಕೊಂಡ ಜೋಗಿಯ ಹಿಂದೆ ಓಡಿಹೋಗಿ ಕೂಲಿ ಮಾಡುವುದನ್ನ ಆಯ್ಕೆ ಮಾಡಿಕೊಂಡಿದ್ದಾಳೆ ಹುಚ್ಚು ಹುಡುಗಿ ಮಂದಿ ದಿನಾ ಮಾತಾಡಿಕೊಂಡಿದ್ದರು. ಆದರೆ ಗಾಂಗ್ಲಿಯ ಧೈರ್ಯ ಪ್ರೀತಿಗೆ ಅವಳು ತೋರಿದ ತ್ಯಾಗ ಮೆಚ್ಚಲೇ ಬೇಕು. ಮನಸ್ಸು ಒಬ್ಬನಿಗೆ ಕೊಟ್ಟು ಪ್ರೀತಿ ಮತ್ತೊಬ್ಬನಿಗೆ ಹೇಗೆ ಕೊಡುವುದು. ಮತ್ತೆ ಮತ್ತೆ ಪ್ರೀತಿಸಿದವನೆ ಕಾಣತೊಡಗಿದ್ದ. ಅವನನ್ನ ಬಿಟ್ಟು ಒಂದು ಅರೆಘಳಿಗೆಯು ಬದುಕಲು ಆಗುವುದಿಲ್ಲ ಎಂದು ಯಾವಾಗ ತಿಳಿಯಿತೊ ಎಲ್ಲವನ್ನು ತೊರೆದಳು.

ಪ್ರಕರಣ ಮೂರು

ಚಂಪಾಲಿನಾಯ್ಕನ ಹಿರಿಮಗಳು ಚಮೇಲಿಬಾಯಿ. ನೋಡಲು ಎಂಥ ಒಳ್ಳೆಯ ಹುಡುಗಿ. ಚಂಪಾಲಿ ತಾನು ಕಪ್ಪು ತೊಳೆದು ನಾಕು ಕಾಸು ಮಾಡಿ ಮಗಳನ್ನ, ಗಂಡು ಹುಡುಗರನ್ನ ಓದಿಸಿದ. ದೊಡ್ಡವನು ಓದು ತಲೆಗೆ ಹತ್ತದೆ ಸಹವಾಸದೋಷದಿಂದ ಬೆಂಗಳೂರು ಸೇರಿದ್ದ. ಚಂಪಾಲಿಯ ಎರಡನೇ ಮಗ "ನಾನು ಸ್ಕೂಲಿಗೆ ಹೋಗುವುದೇ ಇಲ್ಲ" ಅಂತ ಹೇಳುತ್ತಿದ್ದವನು ಓದಿ ಬಿ.ಎ.ಮಾಡಿ ಕಂಪನಿಯಲ್ಲಿ ಏನೊ ಕೆಲಸಕ್ಕೆ ಸೇರಿದ. ಚಮೇಲಿಬಾಯಿ ಪರವಾಗಿಲ್ಲ ಒಂಬತ್ತನೆಯ ತರಗತಿವರೆಗೂ ಓದಿದಳು. ಯಾವಾಗ ಜಗತ್ತಿನ ವಾಸ್ತವಿಕ ಜ್ಞಾನದ ತಿಳುವಳಿಕೆ ಮೂಡಿತೊ ಓದು ತಲೆಯೊಳಗೆ ಹೋಗದೆ ಲೌಕಿಕ ಪ್ರಪಂಚದ ಸುಖಕ್ಕಾಗಿ ಹಾತೊರೆಯ ತೊಡಗಿದಳು. ಯಾರಾರನ್ನೊ ಪ್ರೀತಿ ಮಾಡಿ, ಅವಳ ಸೋದರಮಾವ ದಿಣ್ಣನಾಯ್ಕನ ಕೈಗೆ ಸಿಗಾಕಿಕೊಂಡು ಫಜಿತಿ ಪಟ್ಟಳು.

"ನೋಡು ಚಂಪಾಲಿ ಹಿಂಗೆ ಬಿಟ್ರೆ ನಿನ್ನ ಮರ್ಯಾದೆ ಜೊತೆಗೆ ನಮ್ಮದು ಮರ್ಯಾದೆ ತಗಿತಾಳ ಏನಾರು ಮಾಡು ನಿನ್ನ ಹಿರಿಮಗಳು ಚಮೇಲಿನ ದಾಟಿಸು" ಸೂಕ್ಷ್ಮವಾಗಿಯೆ ಹೇಳಿದ್ದ ದಿಣ್ಣ. "ಇಲ್ಲಲೆ ದಿಣ್ಣ ನಾನು ಪ್ರಯತ್ನ ಮಾಡಾಕ ಹತ್ತೀನಿ, ಸರಿಯಾದ ಹುಡುಗ, ಒಳ್ಳೆ ಮನೆತನ ಯಾರು ಮುಂದಾಗವಲ್ರು. ಇಲ್ಲ ನಾನು ಬಹಳ ಕಂಪ್ಲೆಂಟ್ ಕೇಳಿನಿ. ಏನು ಮಾಡೋದು ಹೊಡಿ ಬಡಿ ಮಾಡಿಯ ಜಿದ್ದಿಗೆ ಬೀಳ್ತವೆ. ಕಾಲ ಕೆಟ್ಟು ಕೆರ ಹಿಡಿದು ಹೋಗಿದೆ. ಕಂಡ್ರು ಕಾಣದಂಗಿರಬೇಕು ಕಣಪ್ಪ. ಇದು

ಕಲಿಗಾಲ" ಸಣ್ಣದೊಂದು ಹರಿಕತೆನೆ ಆರಂಭ ಮಾಡಿದ್ದ ಚಂಪಾಲಿ ತನ್ನ ಎಂದಿನ ಧಾಟಿಯಲ್ಲಿ. ಯಾವುದೊ ಸೀಮೆಯಿಂದ ಬಂದು ಭದ್ರಾನಾಯ್ಕನ ತಾಂಡದಲ್ಲಿ ಅವರಿವರ ಕಾಲು ಹಿಡಿದು, ಕೂಲಿನಾಲಿ ಮಾಡ್ತಾ ಜೀವನ ಆರಂಭಮಾಡಿ, ಮುಂದೆ ದಿಣ್ಣನಾಯ್ಕನ ತಂಗಿ ಹೀರಿಬಾಯಿಯನ್ನ ಕೂಲಿಕೆಲಸ ಮಾಡುವ ಜಾಗದಲ್ಲಿ ಪ್ರೀತಿಸಿ, ಮುಂದ ಅವರ ಮನಿಯವರಿಗೆ ಹೇಳಿ ಮದುವೆಯಾಗಿದ್ದ. ಹೀರಿಬಾಯಿಗೂ ವರ ಸಿಗೋದು ಅನುಮಾನನೆ ಇತ್ತು. ಅಕೀನ ರಡಿ ಮಾಡಿಕೊಂಡು ಕರ್ಕೊಂಡ ಬಂದಾಳ ಅಂದಾಗ ಒಳ್ಳೆದಾಯ್ತು ಅಂತ ನಾಕು ಅಕ್ಕಿಕಾಳು ಹಾಕಿ ಮನಿಯಿಂದ ವಿದಾಯ ಮಾಡಿದ್ದಳು ಹೀರಿಬಾಯಿಯ ತಾಯಿ.

ತಮ್ಮ ಬುದ್ಧಿವಂತಿಕೆಯಿಂದಲೆ ಯಾರಿಗೂ ನೂರು ರೂಪಾಯಿ ಸರಾಯಿ ಕುಡಿಸಿ ಊರ ನಡಕ್ಕೆ ಒಂದು ಖಾಲಿಜಾಗವನ್ನ ಕಬ್ಜಾ ಮಾಡಿಕೊಂಡ. ನಿಧಾನಕ್ಕೆ ಒಂದು ಗುಡಿಸಲು ಹಾಕಿಕೊಂಡ, ತಾಂಡದ ನಟ್ಟ ನಡಕ್ಕೆ ಇದ್ದಿದ್ದರಿಂದ, ನಾಕ ಮೂಲಿಯಿಂದ ಮಂದಿ ಅವನಿರುವ ಸರ್ಕಲ್ಲಿಗೆ ಬರಬೇಕಿತ್ತು. ಹಂಗಾಗಿ ಹೊಟೇಲು ಆರಂಭಿಸಿದ್ದ. ಕಷ್ಟಪಟ್ಟು ಮಕ್ಕಳನ್ನ ದೊಡ್ಡವರನ್ನಾಗಿ ಮಾಡಿದ. ದೊಡ್ಡವರಾದ ಮೇಲೆ ಮಕ್ಕಳು ಎಡವಟ್ಟು ಮಾಡಿಕೊಂಡು ಬದುಕನ್ನ ನರಕ ಮಾಡಿಕೊಂಡಿದ್ದರು. ಅದರಲ್ಲಿ ಮೊದಲನೆಯ ದುರಂತ ಚಮೇಲಿಬಾಯಿದು. ಯಾರ ಬಾಯಲ್ಲಿ ಕೇಳಿದರು ಅವಳವೆ ಸುದ್ಧಿ. ಕೇಳಿಕೇಳಿ ರೋಷಿ ಹೋಗಿದ್ದ ಚಂಪಾಲಿ. ಕಾಟೆನಟ್ಟ ತಾಂಡದಲ್ಲಿ ತಮ್ಮ ಹಳೆ ಸಂಬಂಧಿಕರ ರಾಠೋಡ್ ಹುಡುಗನ ಜೊತೆ ಚಂಪಾಲಿಯ ಮದುವೆ ಮಾಡಿಕೊಟ್ಟ. ಒಂದು ವರ್ಷದವರೆಗೆ ಗಂಡನ ಜೊತೆಗೆ ಪಸಂದಾಗಿಯೆ ಇದ್ದಳು. ಚಮೇಲಿ ಎರಡೊ ಮೂರ ಸಲ ಭದ್ರನಾಯ್ಕನ ತಾಂಡಕ್ಕೂ ಬಂದು ಹೋಗಿದ್ದಳು.

ಇದಕ್ಕಿದ್ದಂತೆ ಒಂದು ದಿನ ಚಮೇಲಿಬಾಯಿಯ ಗಂಡ ಗಣಪತನಾಯ್ಕ ಯಾರದೊ ಟಿ ವಿ ಎಸ್ ತಗೊಂಡು ಹೊತ್ತಲ್ಲದ ಹೊತ್ತಿನೊಳಗೆ ಚಂಪಾಲಿಯ ಮನೆಗೆ ಬಂದಿದ್ದ. ಹೌಹಾರಿದ್ದ. ಬಾಯಿಂದ ಮಾತುಗಳೆ ಬರದಂಗಾಗಿದ್ದವು. "ಏನಾಯ್ತು? ಯಾಕೆ ಗರಬಡದವರಂತೆ ಆಗಿರಿ ಅಳಿಯಂದಿರೆ ಮನೆಯಲ್ಲಿ ಎಲ್ಲಾ ಸೌಕ್ಯತಾನೆ" ಚಂಪಾಲಿಯ ಹೆಂಡತಿ ಕೇಳಿದಳು. "ಎಲ್ಲಾ ಸರಿ ಇದೆ ಅತ್ತೆ ಆದರೆ, ನಿಮ್ಮ ಮಗಳು ಚಮೇಲಿಬಾಯಿ ನಿನ್ನೆ ರಾತ್ರಿಯಿಂದ ಪತ್ತೆನೆ ಇಲ್ಲಾ. ಎಲ್ಲಿಗೆ ಹೋಗ್ಯಾಳಂತ ಗೊತ್ತಿಲ್ಲ. ಅವ್ವ, ಅಪ್ಪ ಪರಿಷಾನ್ ಆಗಿ, ತೌರಮನಿಗೆ ಹೋಗಿರ್ತಾಳ ಹೋಗಿ ನೋಡಿಕೊಂಡು ಇದ್ದರೆ ನಾಕದಿನ ಆರಾಮದಿಂದಿದ್ದು ಬರಾಕ ಹೇಳಿಬಾ ಅಂದ್ರು" ಗಿಳಿಪಾಠ ಒಪ್ಪಿಸುವಂತೆ ಹೇಳಿದ ಪಾಪ.

ಅವನ ಮಾತು ಕೇಳಿ ಮನಿಮಂದಿನೆ ಸೇರಿಕೊಂಡರು. "ಏನಂದ್ರಿ ಚಮೇಲಿ ಮನಿಯೊಳಗೆ ಇಲ್ಲವ? ಇಲ್ಲ, ಇಲ್ಲಿಗೂ ಬಂದಿಲ್ಲಾ ಅಳಿಯಂದ್ರೆ" ಹೀರಿಬಾಯಿ ಗಾಬರಿಯಿಂದ ಒದರಿದಳು. "ಹಂಗಾರ ಎಲ್ಲಿಗೆ ಹೋದಳು? ಅತ್ತೆ ಅವಳ

ಸಂಬಂಧಿಕರು, ಅಂದರೆ ಅವಳ ಚಿಕ್ಕಮ್ಮನ ಮಕ್ಕಳು, ದೊಡಮ್ಮನ ಮಕ್ಕಳು ಯಾವೂರಲ್ಲಿದ್ದಾರೆ ಸುದ್ದಿ ತಗಿರಿ ಅಲ್ಲೇನಾರು ಹೋಗ್ಯಾಳೇನಂತ" ಆಕಿ ಮಾರಿ ನೋಡಿದ. "ಛೆ ಛೆ ಯಾವತ್ತು ಹಾಗೆ ಮಾಡಿದವಳಲ್ಲಾ ನನ ಮಗಳು" ಅವರೆ ಏನೊ ಮಾಡಿ ಹುಡುಕಾಡುವ ನಾಟಕ ಮಾಡುತ್ತಿದ್ದಾರೆ ಅನ್ನೊ ಧಾಟಿಯೊಳಗೆ ಹೇಳಿದಳು ಹೀರಿಬಾಯಿ. "ಹಂಗಾರ ಇದ್ದಕ್ಕಿದ್ದಂಗೆ ಎಲ್ಲಿಗೆ ಹೋಗಿರಬಹುದು" ಗಣಪತನಾಯ್ಕ ಅವಳಿಗೆ ಕೇಳಿದ. "ಎಲ್ಲಿಗೆ ಹೋಗಿರಬಹುದು ಅಂತ ನನಗೆ ಹೇಗೆ ಗೊತ್ತಾಗುತ್ತೆ ಅಳಿಯಂದಿರೆ ಏನು ನಡಿತು ಅಂತ ಹೇಳಿ?" ಮೊದಲೆ ಬಾಯಿ ಬೊಂಬಾಯಿ ಹೀರಿಬಾಯಿದು. ಹುಡುಗ ಹಿಂಜರಿಯತೊಡಗಿದ. "ನಡಿಯೋದೇನು ಯಾವತ್ತು ನಮ್ಮಪ್ಪ, ಅಮ್ಮ, ತಂಗಿಯಂದಿರು ಚಕಾರ ಶಬ್ದ ಎತ್ತಿಲ್ಲ. ಅವಳೆ ನನಗೆ ಅದು ಬರಲ್ಲ, ಇದು ಬರಲ್ಲ ಅಂತ ಕುಂಟನೆಪ ಹೇಳಿ ಉಂಡು ಅಡ್ಡಾಡುತ್ತಿದ್ದಳು. ಆದ್ರೂ ನಮ್ಮ ಮನಿಯಲ್ಲಿ ಸಹಿಸಿಕೊಂಡು ಹೊಂಟಿದ್ರು" ಸವಿಸ್ತಾರವಾದ ವರದಿಯನ್ನೇ ಒಪ್ಪಿಸಿದ್ದ. "ಹಾಸಗಿ ಪತ್ತೆ" ಒಮ್ಮಿಂದೊಮ್ಮೆಗೆ ಅರ್ಥವಾಗದಂತೆ ಬಂದ ಪ್ರಶ್ನೆಗೆ ಕಕ್ಕಾಬಿಕ್ಕಿಯಾದ ಗಣಪತನಾಯ್ಕ. "ಅಂದ್ರೆ" ಅವಳ ಕಡೆಗೆ ನೋಡಿದ. ಅವಳು ಬಿಡಿಸಿಕೊಳ್ಳಲಾಗಿದೆ, ತನ್ನ ಮಗಳ ಮಾನಸಿಕ ಸ್ಥಿತಿ ಗೊತ್ತಿದಿದ್ದರಿಂದಲೇ ಕೇಳಿದಳು. ಮುಗ್ಧ ಗಣಪತ್‌ಗೆ ಅರ್ಥವಾಗದೆ ಸುಮ್ಮನಾಗಿದ್ದ.

ಹೀರಿಬಾಯಿಗೆ ಪರಿಸ್ಥಿತಿ ಅರ್ಥವಾಗಿತ್ತು. ಗಣಪತ್‌ನಾಯ್ಕ ಸಂಭಾಯಿತ ಅವಳಿಗೆ ಇಂತಹ ಮೃದುಸ್ವಭಾವದವನು ಬೇಕಿಲ್ಲ. ಹೆಣ್ಣು ಕುದುರೆಯಂತೆ ಅದನ್ನು ಪಳಗಿಸಿ, ಗುಲಾಮನನ್ನಾಗಿ ಮಾಡುವ ಗಂಡಸಿಗೆ ಅಡಿಯಾಳಾಗಿರುತ್ತೆ. ಇಲ್ಲದಿದ್ದರೆ ಅದರ ಮೇಲೆ ಸವಾರಿ ಮಾಡುವವನನ್ನೇ ತನ್ನ ಗುಲಾಮನನ್ನಾಗಿ ಮಾಡಿಕೊಳ್ಳುತ್ತದೆ. ಚಮೇಲಿ-ಗಣಪತ್‌ನ ನಡುವೆ ಹೀಗೆ ಆಗಿದೆ. ಅಕಿ ಪರಿಣಿತಳು, ಎಲ್ಲಾ ಕಲೆಯನ್ನು ಬಲ್ಲವಳು, ಇವನು ಅವಳನ್ನ ಆಳೋದಕ್ಕೆ ಸಾಧ್ಯವಾಗಿಲ್ಲ, ಅದಕ್ಕೆ ಅವಳೇ ಇವನನ್ನ ಆಳೋದಕ್ಕೆ ಪ್ರಯತ್ನ ಮಾಡಿದ್ದಾಳೆ. ಇದರ ನಡುವೆ ಏನೊ ಎಡವಟ್ಟು ಆದಂಗಾಗಿ ಹಕ್ಕಿ ಗೂಡುಬಿಟ್ಟು ಹಾರಿಹೋಗಿದೆ. "ಆಯ್ತು ಬೆಳಕು ಹರಿಲಿ, ನೀ ಆಟು ಅಡ್ಡಾಗು ಅಕಿ ಎಲ್ಲು ಹೋಗಲ್ಲ. ಯಾರದಾದರೂ ಸಂಬಂಧಿಕರ ಮನೆಗೆ ಹೋಗಿರ್ತಾಳ. ಮುಂಜಾನೆ ಹೊತ್ತಾರೆ ಇಲ್ಲಿ ಯಾರಿಗೂ ಮಕ ತೋರಿಸದಂಗೆ ನಿಮ್ಮೂರಿಗೆ ಹೋಗು." ಅವನಿಗೆ ಹೀರಿಬಾಯಿ ಮಾತುಗಳು ಒಗಟಿನಂತೆ ಕಂಡವು. ಅವಳು ಕೊಟ್ಟ ಗೋಣಿ ತಟ್ಟು ಹಾಸಿಕೊಂಡು ಅಡ್ಡಾದ. ಯಾಕೊ ನಿದ್ದೆ ಬರದಂಗಾಗಿತ್ತು. ಅಕಿ ಮಲಗೋದಕ್ಕೆ ಹೋದಳು. ಆದರೆ ಅವಳು ಹೇಳಿದ ಮಾತು ತಲೆಯೊಳಗೆ ಕೊರೆಯತೊಡಗಿತ್ತು. ಗಣಪತ್ ನಾಯ್ಕನಿಗೆ ಥಟ್ ಅಂತ ಹೊಳೀತು. ತಿಂಗಳ ಹಿಂದೆ ಯಾರೊ ಒಬ್ಬ ಅನ್ಯ ಜಾತಿಯವನು ತಾಂಡಕ್ಕೆ ಆಟೊ ತಗೊಂಡೆ ಬಂದಿದ್ದ. ಅವನ ಜೊತೆಗೆ ಮಾತಾಡುತ್ತಿದ್ದಳು. ಸಲಿಗೆಯಿಂದ ವರ್ತಿಸುತ್ತಿದ್ದಳು. ಅಂತ ಯಾರದೊ

ಬಗ್ಗೆ ಮಾತಾಡೋದು ಅವನ ಕಿವಿಗೂ ಬಿದ್ದಿತ್ತು. ಆ ಹೆಣ್ಣು ತನ್ನ ಹೆಂಡತಿನೆ ಅನ್ನೊ ಸತ್ಯ ಅರಿವಿಗೆ ಬಂದಿದ್ದೆ ಅವನ ಅತ್ತೆ ಹೀರಿಬಾಯಿ ಹಾಸಿಗೆ ಮೇಲೆ ಅಡ್ಡಾದ ತಕ್ಷಣ ಅವನು ಮೇಲೆದ್ದಿದ್ದ. ನಿಧಾನಕ್ಕೆ ಬಾಗಿಲವರೆಗೆ ಬಂದು ಕದ ಸರಿಸಿ ಹೊರಗೆ ಕಾಲಿಟ್ಟ. "ತಮ್ಮ ಊರಿಗೆ ಹೊಂಟ್ಯಾ" ಕೇಳಿದಳು ಹೀರಿಬಾಯಿ. ಹೆದರಿ ಹೃದಯ ಬಾಯಿಗೆ ಬಂದಂಗಾಗಿತ್ತು. "ಹೂಂ ಅತ್ತೆ. ನಿನ್ನ ಮಾತು ಅರ್ಥ ಆತು ನನಗೆ. ಇನ್ನೇನು ವ್ಯರ್ಥ ಹುಡುಕಲಿ. ಮನಿಗೆ ಹೋಗಿ ನನ್ನ ಬಾಳೆವಾದ್ರೂ ನೋಡ್ತಿನಿ" ಅಂದ. "ಅಷ್ಟ ಮಾಡ ಹೋಗು" ಮೌನ ಆವರಿಸಿತು. "ಥತ್ ಇವ್ನವನ ಕೆಟ್ಟ ಹೆಂಗಸು. ಮದಲೆ ಗೊತ್ತಾಗಿದ್ರೆ ಈ ಕಡಿಗ ತಲಿ ಹಾಕಿನೂ ಮಲಗುತ್ತಿರಲಿಲ್ಲ. ನನ್ನ ಜೀವನಾನೆ ಹಾಳ ಮಾಡಿದ್ರು ತಾಯಿ ಮಗಳು ಸೇರಿ. ಮಂದಿ ಏನು ಮಾತಾಡ್ಕೊಬೇಡಾ. ಬಿಟ್ಟು ಹೋಗ್ಯಾಳಂದ್ರ ಈ ಮಗನದ್ದೆ ತಪ್ಪು, ನನ್ನ ಬಗ್ಗನೆ ಅನುಮಾನ ಪಡ್ತಾರ" ಒಳಗಿನ ತುಮುಲ ಯಾರಿಗೂ ಹೇಳಾಕು ಆಗದೆ, ಒಳಗೆ ನುಂಗೋದಕ್ಕು ಆಗದೆ ತನ್ನ ಟಿ ವಿ ಎಸ್ ನ್ನು ತುಸು ದೂರ ತಳ್ಳಿ ಕಿಕ್ ಹೊಡೆದು ಚಾಲು ಮಾಡಿಕೊಂಡು ಮತ್ತೆ ಹೊಸ ಬದುಕಿನ ಹುಡುಕಾಟಕ್ಕೆ ನಡೆದು ಬಿಟ್ಟ.

* * *

79. ಕಲಾವಿದ ಮಾಸ್ತರ

ಅವನು ಅದೇಗ ಸಂಪರ್ಕಕ್ಕೆ ಬಂದನೊ ಮುಗ್ದ ಮೀಟ್ಯಾನಾಯ್ಕ ಬಾಳಲ್ಲಿ ದೊಡ್ಡ ಖಳನಾಯಕನಾಗಿದ್ದ. ಮೀಟ್ಯಾನಾಯ್ಕ ಏನೊ ಓದಿದ್ದಿನಿ ಅಂತ ಮಂದಿಯನ್ನ ನಂಬಿಸಿದ. ಇರೊ ಇಬ್ಬರೆ ಮಕ್ಕಳು ಚೆನ್ನಾಗಿರಲಿ ಅಂತ ತಂದೆ ತಾಯಿಗೂ ಅವರ ಪಾಡಿಗೆ ಬಿಟ್ಟಿದ್ದಕ್ಕೆ ಅವನು ಅಡ್ಡದಾರಿ ಹಿಡಿದಿದ್ದ. ಹುಲಿಯೂರನಿಗೆ ದೂರದ ಸಂಬಂಧಿ, ಚಿಕ್ಕಪ್ಪ ಅಂತ ಕರೆಯುತ್ತಿದ್ದ ಮೀಟ್ಯಾ. ಮೀಟ್ಯಾ ಸುರದ್ರೂಪಿ ಹುಡುಗ. ಹುಲಿಯೂರನಿಗೂ ಅವನ ಕಂಡು ಪ್ರೀತಿ ಇತ್ತು. ಬಡವರ ಹುಡುಗ ಓದುತ್ತಿದ್ದಾನೆ. ಏನಾದರು ಸಾಧನೆ ಮಾಡ್ತಾನೆ ಅಂತ ಭರವಸೆ ಹೊಂದಿದ್ದ. ಆದರೆ ಅವನು ಎಂ.ಎ. ಓದುತ್ತಿದ್ದಾಗ ತಾಂಡಕ್ಕೆ ಬಂದರೆ, ಮೀಟ್ಯಾನಾಯ್ಕ ಮದುವೆಯಾದ ಅನ್ನುವ ಸುದ್ಧಿ ತಿಳಿತು. ಹುಲಿಯೂರ ಹೆಚ್ಚೇನು ಆಲೋಚನೆ ಮಾಡಲಿಲ್ಲ.

ಮೀಟ್ಯನಾಯ್ಕ ಅದೇಗೆ ಅವನ ಹೆಂಡತಿ ರೇವಿ ಅಪ್ಪ ಅಮ್ಮನಿಗೆ ಪರಿಚಯ ಮಾಡಿಕೊಂಡು ಅವರ ಆರು ಹೆಣ್ಣು ಹುಡುಗಿಯರಲ್ಲಿ ಮೊದಲನೇಯವಳಾದ ರೇವಿ ಬಾಯಿಯನ್ನ ಮದುವೆ ಮಾಡಿಕೊಂಡಿದ್ದನೊ ಯಾರಿಗೂ ಗೊತ್ತಿಲ್ಲ. ರೇವತಿಯ ತಂದೆ ಭದ್ರಾನಾಯ್ಕನ ತಾಂಡದವನೆ ಪಕ್ಕದ ಬತ್ಯನ ತಾಂಡದಿಂದ ಮದುವೆಯಾದವಳನ್ನ ಗಂಡನ್ನ ಬಿಡಿಸಿ ಓಡಿಹೋಗಿ ಹುಬ್ಬಳ್ಳಿಯಲ್ಲಿ ಅವರು ಮನೆ ಕಟ್ಟುವ ಕೆಲಸ, ಬಿಲ್ಡಿಂಗ್‌ಗೆ ನೀರು ಬಿಡುವ ಕೆಲಸ ಮಾಡಿದರೆ ಅವಳು ಶ್ರೀಮಂತರ ಮನೆಗಳಲ್ಲಿ ಮುಸುರಿ ತಿಕ್ಕುವ ಕೆಲಸ ಮಾಡುತ್ತಿದ್ದಳು. ಅವರ ಆರು ಹೆಣ್ಣು ಒಬ್ಬರಿಗಿಂತ ಒಬ್ಬರು ಸುರಸುಂದರಿಯರು. ಮೀಟ್ಯಾ ಒಮ್ಮೆ ರೇವತಿಯನ್ನ ಸ್ಕೂಲಿಗೆ ಹೋಗುವಾಗ ನೋಡಿ "ಮದುವೆ ಅಂತಾದರೆ ಇವಳನ್ನೆ" ಮನಸ್ಸಿನೊಳಗ ಅಂದುಕೊಂಡಿದ್ದ. ರೇವತಿಯ ತಂದೆ ತಾಯಿಗೂ ಪರಿಚಯಸ್ಥರು ಬಂದು ಕೇಳಿದರೆ ಮದುವೆ ಮಾಡಿಬಿಡುವ ಆಸೆಯಿತ್ತು. 'ಅನ್ನ ಹಳಸಿತ್ತು, ನಾಯಿ ಹಸದಿತ್ತು' ಎನ್ನುವಂತೆ ಮೀಟ್ಯಾ ಖುದ್ದಾಗೆ ಹೆಣ್ಣು ಕೇಳಾಕ ಹೋದಾಗ ಬಲಿಯ ಬಕರನಂತೆ ಕಂಡಿದ್ದ. ರೇವತಿಯ ಅಪ್ಪ, ಅಮ್ಮ ಹಲಾಲ್ ಮಾಡೋದಕ್ಕೆ ಸಿದ್ಧರಾಗಿ ಮಚ್ಚು

ಹಿಡಿದೆ ನಿಂತಿದ್ದರು. ಅವನು ಕೇಳಿದ್ದೆ ತಡ "ತಮ್ಮ ನೀ ಸಣ್ಣವ ಆಗ್ತಿ ನಿಮ್ಮಪ್ಪ ಅಮ್ಮನ ಕಳುಹಿಸು" ಅಂತೇಳಿ ಕಳುಹಿಸಿದ್ದ ರೇವತಿ ಅಪ್ಪ. ಮೀಟ್ಯಾನ ತಾಯಿ "ಲೇ ಮಗ ಅದೇನ ಕಂಡಿಯೋ ಆಕಿ ತಾವ, ಜಗತ್ತಿನ್ಯಾಗ ಅವಳ ಅಪ್ಪನಂತ ಹುಡುಗಿಯರಾದ. ನಾನು ಹುಡುಕಿ ಮದುವೆ ಮಾಡ್ತೀನಿ. ಅವರ ಸವಾಸಕ್ಕ ಹೋಗಬೇಡಾ" ಅಂಗಲಾಚಿದ್ದಳು. ಮೀಟ್ಯಾನ ಅಪ್ಪ ಸಿಟ್ಟಿಂದ ಮಾತೆ ಆಡಲಿಲ್ಲಾ. ಮಗನ ಜಿದ್ದಿನ ಮುಂದೆ ತಂದೆತಾಯಿ ಸೋತಿದ್ದರು. "ಏನೊ ಮಗ ಆಸೆ ಪಟ್ಟಾನ ಹೋಗಲಿ ಬಿಡು" ಮೀಟ್ಯಾನಾಯ್ಕನ ತಾಯಿನೆ ಗಂಡನಿಗೆ ಹೂಂ ಅನಿಸಿ ದೀಪಾವಳಿಯ ಮುಹೂರ್ತದಾಗ ಅವನ ಮದುವೆನೂ ಮಾಡಿದರು.

ಹುಬ್ಬಳ್ಳಿಯಂತ ದೊಡ್ಡ ಪಟ್ಟಣದಲ್ಲಿ ಐದಾರು ಮನೆ ಅಡ್ಡಾಡಿ ಮನೆ ಕೆಲಸ ಮಾಡಿ ಅವರಿವರ ಮನೆಯಲ್ಲಿ ಉಳಿದದ್ದು ಪಳಿದದ್ದನ್ನ ತಂದು ಕೊಟ್ಟಿದ್ದನ್ನ ತಿಂದು ರುಚಿಕಂಡಿದ್ದ ನಾಲಿಗೆ ತಾಂಡದಲ್ಲಿ ಒಲೆ ಮುಂದೆ ಕುಂತು ಕೆಲಸ ಮಾಡೋದಕ್ಕೆ ಬಾರದ ರೇವತಿ ವಾರದಲ್ಲೆ "ನೀ ಅಲ್ಲೆ ಬಂದ್ರೆ ಸರಿಹೊಯ್ತು, ಇಲ್ಲಾಂದ್ರೆ ಇಲ್ಲೆ ಸಾಯಿ" ತಾಯಿ ಮನೆ ಸೇರಿದಳು. ಮದಲೇ ಓಡಿಹೋದವಳು ತನ್ನ ಮಕ್ಕಳಿಗೆ ಅವಳೇನು ಬಾಳುವೆ ಮಾಡುವುದನ್ನ ಕಲಿಸ್ಯಾಳು? ಮೀಟ್ಯಾನಾಯ್ಕನಿಗೆ ಆರಂಭದಲ್ಲಿ ಅವನ ಸ್ವಾಭಿಮಾನ ಅಡ್ಡ ಬಂದಿತ್ತು. ತಾಂಡದಿಂದ ಹೋದವರಿಗೆಲ್ಲಾ ಹೇಳಿ ಕಳುಹಿಸಿದ "ನೋಡು ಒಳ್ಳೆ ಮಾತಿಂದ ಹೇಳಾಕತ್ತಿನಿ, ಮರ್ಯಾದೆಯಿಂದ ಮಗಳನ್ನ ಕರ್ಕೊಂಬಂದು ಬಿಟ್ರು ಸರಿ. ಇಲ್ಲಾಂದ್ರೆ ಏನ್ಮಾಡ್ತಿನೊ ನನಗೆ ಗೊತ್ತಿಲ್ಲಾ" ಮಂದಿ ರೇವತಿ ತಾಯಿ ತಂದಿಗ ಹೇಳಿದರು. ಅವರು ಕೇಳಿಕೇಳಿ ಬೇಜಾರಾಗಿ ಮಗಳಿಗೆ "ನೋಡು ಹಿಂಗ ಮಾಡಬಾರದು ಹೋಗಿ ಗಂಡನ ಕೂಡ ಚೆಂದಾಗಿ ಬಾಳೇವು ಮಾಡು ನೀನು ಗಂಡನ್ನ ಬಿಟ್ಟು ಹಿಂಗ ಬಂದ್ರೆ ಇನ್ನೂ ಆರು ತಂಗಿಯರನ್ನ ಯಾ ಮಗ ಮದುವೆ ಆಗ್ತಾನ?" ರೇವತಿ ತಾಯಿ ಹೇಳಿದಳು. ಮೊಂಡು ರೇವತಿ ತಲಿಯೊಳಗೆ ಈ ಮಾತು ಹೋಗಲೆ ಇಲ್ಲಾ. "ಅವ್ವ ನಾನೆ ಹೋಗಿ ಅವನನ್ನ ಹುಬ್ಬಳ್ಳಿಗೆ ಬರೊ ಹಂಗ ಮಾಡ್ತಿನಿ ನೋಡ್ತಾಯಿರು" ಎಂದು ತಾಯಿಗೆ ಸಮಾಧಾನ ಮಾಡಿದಳು. ತಾಂಡದಿಂದ ಬಂದು ಅವರಿವರ ಕಾಲು ಕೈ ಹಿಡಿದು ಬಿಲ್ಡಿಂಗ್ ಕಾಯೋ ಕೆಲಸ, ಕಸಮುಸರಿ ಬಳಿಯೋ ಕೆಲಸ ಮಾಡ್ತಾ ಗಂಡ ಮಗು ಆಗುತ್ತೆ ಅಂತ ಬಿಟ್ರೆ ಏಳು ಹೆಣ್ಣು ಆಗೊವರೆಗೂ ಆಪರೇಷನ್ ಮಾಡಿಸದ ಗಂಡನ ಮೇಲೆ ಬೇಸರವಿತ್ತು ರೇವತಿಯ ತಾಯಿಗೆ. ಗಂಡನಕೂಡ ಓಡಿ ಬಂದರು ತನ್ನ ಮಕ್ಕಳ ಬಾಳು ಚೆನ್ನಾಗಿರಬೇಕಂತ ಎಲ್ಲರನ್ನೂ ಸ್ಕೂಲಿಗೆ ಹಾಕಿದ್ದಳು. ತಾಂಡದಲ್ಲಿ ತಾನು ಅನುಭವಿಸಿದ ನೋವು ಅವಮಾನ ತನ್ನ ಮಕ್ಕಳಿಗೆ ಬರಬಾರದು ಅಂತ ಕಷ್ಟಪಟ್ಟರು ಅವರಿಗೆ ಕಷ್ಟ ಕೊಡಲಿಲ್ಲ. ಆದರೆ ಪಟ್ಟಣದಲ್ಲಿ ಬೆಳೆದ ತನ್ನ ಮಗಳು ರೇವತಿಗೆ ಮನುಷ್ಯ ಸಂಬಂಧದ ಬಗ್ಗೆ ತಿಳಿಯದೆ ವರ್ತಿಸುತ್ತಿರುವ ರೀತಿಗೆ ಮರುಗಿದಳು.

ರೇವತಿ ತಾಂಡಕ್ಕೆ ಬಂದಾಗ ದೃಢವಿಶ್ವಾಸದಿಂದೆಲೆ ಬಂದಿದ್ದಳು. ಪಕ್ಕದಲ್ಲಿ ಮಲಗಿ ಎರಡು ದಿನಗಳಲ್ಲಿ ಅವನನ್ನೆ ಬದಲು ಮಾಡಿಬಿಟ್ಟಳು. "ಅಪ್ಪಾ ನಾನು ತಾಂಡದೊಳಗೆ ಇದ್ದು ಏನು ಮಾಡಲಿ? ನಾಕು ಅಕ್ಷರ ಕಲಿತು ಸ್ವಾಭಿಮಾನಾನೊ, ದುರಭಿಮಾನ ಬೆಳೆಸಿಕೊಂಡು ಹಾಳಾಗಿ ಹೋಗಿನಿ. ಆರಂಭದಲ್ಲೆ ಒದ್ದು ಹೊಲದಾಗ ಕೆಲ್ಸ ಮಾಡಾಕ ಹಚ್ಚಿದ್ರೆ ಪಾಡಿತ್ತೇನೊ, ಈಗ ಆಗವಲ್ದು ಅಲ್ಲೆ ಹೋಗಿ ಏನಾರು ಮಾಡ್ತಿನಿ" ಒಗಟಿನಂತೆ ಹೇಳಿ ಹೆಂಡತಿ ಜೊತೆಗೆ ಮನೆ ಖಾಲಿ ಮಾಡಿದ. ಮೀಟ್ಯಾನ ತಾಯಿ ಅವನು ಹೋದ ಮೇಲೆ ಪ್ರೀತಿಯಿಂದ ಸಾಕಿದ ಮಗ ಹೆಣ್ತಿ ಮಾತು ಕೇಳಿಕೊಂಡು ತನ್ನನ್ನ ತೊರೆದು ಹೋದ್ನಲ್ಲಾ ಅಂತ ಗೊಳೊ ಅಂತ ಅತ್ತಳು. ಮೀಟ್ಯಾನಾಯ್ಕನ ತಾಯಿ ಅತ್ತದರಲ್ಲಿ ಅತಿಶಯೋಕ್ತಿ ಏನು ಇರಲಿಲ್ಲ. ಮುಂಜಾನೆ ಐದು ಗಂಟೆಗೆ ಎದ್ದು ಗಂಡ ಅಂಡು ಮೇಲೆ ಮಾಡಿಕೊಂಡು ಮಲಗಿದ್ದರು, ಬಲ್ರ್ಜು ತಗೊಂಡು ಪರ ಪರ ಅಂತ ಅಂಗಳ ಗುಡಿಸಿ, ಸಗಣಿ, ಕಸ ಬಳದು ತಿಪ್ಪೆಗೆ ಹಾಕಿ, ನೀರು ಸೇದಿ, ಅಡಿಗೆ ಮಾಡಿಕೊಂಡು ಮಂದಿ ಏಳೊದಕ್ಕೆ ಮುಂಚೆ ಹೊಲದೊಳಗೆ ಕೆಲಸ ಮಾಡೋದಕ್ಕೆ ಹೊಕ್ಕಿದ್ಲು. ಗಂಡ ಸೊಂಬೇರಿ, ಹುಟ್ಟಿದ ಮಕ್ಕಳು ಸೊಂಬೇರಿ ಆಗಿದ್ದಕ್ಕೆ ಮನೆಯೊಳಗೆ ಕೂಳಿಗೂ ಬರ ಬಂದಿತ್ತು. ಆದರೂ ಮಕ್ಕಳನ್ನ ಕರುಣೆಯಿಂದ ಸಾಕಿದ್ದಳು. ಮೀಟ್ಯಾನಾಯ್ಕ ಚಿಕ್ಕವನಾಗಿದ್ದರಿಂದ ಸರ್ವೆ ಸಾಮಾನ್ಯವಾಗಿ ಅವನನ್ನ ಬಹಳಷ್ಟು ಪ್ರೀತಿ ಮಾಡುತ್ತಿದ್ದಳು.

ಮೀಟ್ಯಾ ಏನೊ ಪ್ಯಾಟಿ ಸೇರಿದ. ಅಲ್ಲಿ, ಇಲ್ಲಿ ಕೆಲಸ ಹುಡುಕಿಯಾರೊ ಫೈನಾನ್ಸ್ ಮಾಡೊ ಸಾವುಕಾರನ ಕಡೆಗೆ ಲೆಕ್ಕ ವಸೂಲಿ ಕೆಲಸಕ್ಕೆ ಸೇರಿಕೊಂಡ. ತಿಂಗಳಿಗೆ ಐದಾರು ಸಾವಿರ ದುಡಿಯತೊಡಗಿದ, ಅವನ ಹೆಂಡತಿ ರೇವತಿನೂ ಖುಷಿಯಿಂದಿದ್ದಳು. ಅತ್ತೆ ಮಾವಂದಿರು ಅಂತು "ಅಳಿಯ ಅಂದ್ರೆ ಹಿಂಗಿರಬೇಕು, ಸ್ವಂತ ಮನಿ ಮಗನಂತೆ ಆಲೋಚನೆ ಮಾಡ್ತಾನ. ಪ್ರತಿ ಭಾನುವಾರ ಕೆ.ಜಿ., ಎರಡ ಕೆ.ಜಿ. ಕುರಿಬಾಡು ತರ್ತಾನ. ತಪ್ಪಿದರೆ ಕೋಳಿ ತಂದು ಕೊಡ್ತಾನ. ಅಂತು ಹೆಣ್ಣು ಹುಟ್ಟಿಸಿದಕ್ಕೆ ಸಾರ್ಥಕ ಆಯ್ತು" ತಾರೀಪು ಮಾಡತೊಡಗಿದರು. ಮೀಟ್ಯಾನಾಯ್ಕ ಅವರ ಮನೆಗೆ ಬೇಕಾದ ಸಣ್ಣಪುಟ್ಟ ಕೆಲಸ ಮಾಡುವುದರಲ್ಲೆ ಸುಸ್ತಾಗಿದ್ದ. ಅವನ ತಂದೆ ಅಪರೂಪಕ್ಕೆ ಬಂದು "ಮಗ, ಮನೆಯೊಳಗೆ ಬಹಳ ತೊಂದರೆ ಇದೆ, ನಿಮ್ಮವ್ವಗೂ ವಯಸ್ಸಾಯಿತು, ಕೂಲಿ ಮಾಡಾಕ ಆಗವಲ್ದು, ನಿಮ್ಮಣ್ಣ, ಅತ್ತಿಗೆ ಹೆಚ್ಚು ಕಮ್ಮಿ ಮಾತಾಡಿದರೆ ಬೇರೆ ಕಡೆಗೆ ಹೋಗ್ತಿವಿ ಅಂತ ಧಮಕಿ ಹಾಕ್ತಾರ. ಒಂದು ಹತ್ತ ಸಾವಿರ ಕೊಡು" ಮಗ ದೊಡ್ಡ ಡಿಸಿ ಆಗಿದ್ದಾನೆ ಅನ್ನೊ ಹಾಗೆ ಕೇಳ್ತಿದ್ದ. "ಅಪ್ಪಾ ನನಗೂ ಖರ್ಚಿದೆ. ಹೆಂಡತಿ ಹೊಟ್ಟೆಲಿ ಅದಾಳ, ಅವಳಿಗೂ ನಾನು ನೋಡಿಕೊಳ್ಳಬೇಕು" ಅಂತ ನೂರೆಂಟು ಕತೆ ಕಟ್ಟಿ ತಾನೇನು ಅನ್ನೋದನ್ನ ಮರೆಮಾಚಲು ನೋಡಿದ್ದ. ಕೈಗೆ ಸಾವಿರ, ಎರಡು ಸಾವಿರ ಕೊಟ್ಟು ಎರಡು ತಿಂಗಳು

ಬಿಟ್ಟು ಬಾ ಅಂತ ಕಳುಹಿಸುತ್ತಿದ್ದ. ಅವನೇನು ಬಂದಾನು ಅಂತ ಮೀಟ್ಯನಾಯ್ಕ ಮೈಸಬ್ಬರ್ಕಿ ಮಾಡಿದ್ನೊ ಮುಗಿತು ಅವನ ಕತೆ. ಎರಡು ತಿಂಗಳು ತುಂಬುತ್ತಿದ್ದಂತೆ ಮೀಟ್ಯಾನಾಯ್ಕನ ತಂದೆ ಮತ್ತೆ ಹಾಜರ್. "ಮಗ ಏನೂಂತ ಹೇಳಲಿ ಯಾಕೊ ನನಗೆ ಆರೋಗ್ಯ ಸರಿ ಇಲ್ಲ. ಮನೆಯೊಳಗೆ ಕಿರಿಕಿರಿ. ನಿಮ್ಮವ್ವನೂ ಮೈಯಾಗ ಪಾಡಿಲ್ಲ ದವಾಖಾನಿಗ ಹೋಗಾನಂದ್ರ ಕಿಲಬು ಕಾಸಿಲ್ಲ." ಮತ್ತೆ ಅದೆ ಹಳೆ ಪುರಾಣ. ಜೇಬಿಗೆ ಕೈ ಹಾಕಿ ಇದ್ದಷ್ಟನ್ನ ತಗದು ತಂದೆಗೆ ಕೊಡುತಿದ್ದ. ಅಪ್ಪ ಖುಷಿಯಿಂದ ಮುಖ ಅರಳಿಸಿಕೊಂಡು ಹೋಗುವುದನ್ನೆ ದಿಟ್ಟಿಸುತ್ತಿದ್ದ. ಮಗನಾಗಿ ಅಪ್ಪನ ಹೆಗಲಿಗೆ ಹೆಗಲ ಕೊಟ್ಟು ನಿಲ್ಲಲು ಆಗಲಿಲ್ಲ. ನಾನು ಕೊಡುವ ಎರಡು ಮೂರು ಸಾವಿರ ರೂಪಾಯಿಯನ್ನೆ ನಿಧಿ ಸಿಕ್ಕವನಂತೆ ಸಂತೋಷದಿಂದ ಮುಖ ಅರಳಿಸಿಕೊಂಡು ಹೋಗುತ್ತಾನೆ. "ಓ ವಿಧಿಯೆ ನಮ್ಮಪ್ಪನ ಖುಷಿಗಾದರೂ ನನ್ನ ಶ್ರೀಮಂತನನ್ನಾಗಿ ಮಾಡು" ಒಬ್ಬನೆ ಹೇಳಿಕೊಳ್ಳುತ್ತಿದ್ದ.

ರೇವತಿಗೆ ಗಂಡುಮಗುವಾಗಿ ಆರೇಳು ತಿಂಗಳು ಕಳೆದವು. ಮೀಟ್ಯಾನಾಯ್ಕ ಫೈನಾನ್ಸ್‌ನಲ್ಲಿ ಸರಿಯಾಗಿ ಲೆಕ್ಕ ತೋರಿಸದೆ ವಸೂಲಿ ಮಾಡಿದ ಅದೆಷ್ಟೋ ಹಣ ಹೆಂಡತಿಯ ಖುಷಿಗೆ ಮತ್ತು ಅವನಪ್ಪನ ಖುಷಿಗೆ ಖರ್ಚು ಮಾಡಿದ್ದ. ಸಾವುಕಾರಗೆ ಗೊತ್ತಾದರೆ ಚರ್ಮ ಸುಲಿತಾನ ಅನ್ನೊ ಆತಂಕ ಒಳಗೆ ಕಾಡುತ್ತಿತ್ತು. ಆಗಲೆ ಅವನ ಬದುಕಲ್ಲಿ ಖಳನಾಯಕನ ಪ್ರವೇಶವಾಗಿತ್ತು. ಅವನು ತಾಂಡಕ್ಕೆ ಹೋಗಿದ್ದಾಗ. ಅವನ ಮಾವನ ಮನೆಗೆ ಬಂದಿದ್ದ ಚಿಮ್ನನಾಯ್ಕ ಯಾವುದೊ ಸ್ಕೂಲಿನಲ್ಲಿ ಮಾಸ್ತರ ಆಗಿದ್ದ. ಬಣ್ಣದ ಗಿಲಿಟ್ ಮಾತುಗಳಿಗೆ ಮಾಹಿರ್ ಆಗಿದ್ದ ಚಿಮ್ನಾ ಮಾಸ್ತರ ರೇವತಿಯ ಆರುಜನ ತಂಗಿಯರ ಮೇಲಿತ್ತು. ಆದರೆ ಅವರು ಯಾರು ಅವನಿಗೆ ಕ್ಯಾರೆ ಅನ್ನದಕ್ಕೆ ರೇವತಿಯನ್ನೆ ಪಟಾಯಿಸುವುದು ಸೂಕ್ತ ಅಂದುಕೊಂಡಿದ್ದ. ರೇವತಿಯ ತಾಯಿಗೆ ಹತ್ತಿರದ ಸಂಬಂಧಿ ಕೂಡ. ರೇವತಿಯ ತಾಯಿಗೆ ಚಿಮ್ನಾ ಮಾಸ್ತರನ ತಾಯಿ ಸೋದರತ್ತೆ ಹಾಗಾಗಿ ರೇವತಿಯ ತಾಯಿಗೆ ನನ್ನ ಸಂಬಂಧಿಕರು ಹತ್ತಿರವಾಗುತ್ತಿದ್ದಾರಲ್ಲ ಎನ್ನುವ ಖುಷಿ. ಅವನು ಹೋದಾಗೆಲ್ಲ "ಬಾರಪ್ಪ ಒಳಗೆ ಬಾ. ಲೇ ಅವಳೆ, ಲೇ ಇವಳೆ ಮಾಮ ಬಂದಾನ ಕಾಲಿಗೆ ನೀರು ಕೊಡ್ರೆ. ಒಳಗೆ ಕೂತ್ಕೊಂಡು ಏನು ಮಾಡಾಕ ಹತ್ತೀರಿ" ಅಂತ ಎಲ್ಲಿಲ್ಲದ ಆದರ ತೋರುತ್ತಿದ್ದಳು. ಯಾವ ಹುಡುಗಿಯರು ಪೀಚು ದೇಹದ ಚಿಮ್ನ ಮಾಸ್ತರ್‌ಗೆ ಸೊಪ್ಪು ಹಾಕಲಿಲ್ಲಾ.

ಮೀಟ್ಯಾ ಇಲ್ಲದ ಸಮಯುದಾಗೆಲ್ಲಾ ಚಿಮ್ನ ಮಾಸ್ತರ್ ರೇವತಿ ಜೊತೆಗೆ ಮಸಲತ್ತು ನಡೆಸಿದ್ದ. ರೇವತಿ ತಾಯಿ ತಲೆ ಹಿಡಿಯುವುದರಲ್ಲಿ ನಂಬರ್ ಒನ್ ಆಗಿದ್ದಳು ಹಾಗಾಗಿ "ಹೋಗಲಿ ಬಿಡೆ ಅವನ ಬಗ್ಗೆ ಯಾಕೆ ಕಾಳಜಿ ಮಾಡಿಯ, ಅವನಿಲ್ಲಾಂದ್ರೆ ಮತ್ತೊಬ್ಬ" ಅಂತ ಚಿಮ್ನ ಮಾಸ್ತರ್ ಜೊತೆ ಸಿನಿಮಾ ನೋಡೊದಕ್ಕೆ, ಪೇಟೆಯೊಳಗೆ ಸುತ್ತಾಡುವುದಕ್ಕೆ ಕಳುಹಿಸಿದ್ದಳು. ಹತ್ತಿರದ ಸಂಬಂಧಿ, ಮೇಲಾಗಿ ಅದೇನೊ

ಮಾಸ್ತರ್ ಅದಾನಂತ ಪಗಾರನು ಸರ್ಕಾರದಂತೆ ಏನಾದರೂ ಮಾಡಿಕೊಳ್ಳಬಹುದು ಅನ್ನೋದು ಅವಳ ಕೆಟ್ಟ ಇರಾದೆ ಆಗಿತ್ತು. "ನೀ ಮದ್ಲೆ ಬರಬಾರದೇನೊ ಹುಡುಗ, ಅವನ ಬದಲಿ ರೇವತಿ ನಿನ್ನ ಹೆಂಡ್ತಿಯಾಗಿರುತ್ತಿದ್ದಳು" ಅಂದಳು ರೇವತಿ ತಾಯಿ. "ಈಗೇನಾತು ಮದುವೆ ಅವನಾಗಿದ್ದಾನೆ, ಆದರೆ ನಿನ್ನ ಮಗಳನ್ನು ಸುತ್ತಾಡಿಸುತ್ತಿರೋದು ನಾನು ತಾನೆ" ಚಿಮ್ನ ಮಾಸ್ತರ್ ಮಾತಿನ ಮಲ್ಲ. ಮಾತಲೆ ಜಗತ್ತು ತೋರಿಸುತ್ತಿದ್ದ. ಅವನ ತಾಯಿ "ಲೇ ಮಗ ನಿಮ್ಮಪ್ಪನಿಗೆ ವಯಸ್ಸಾಯಿತು. ನಿಮ್ಮಣ್ಣ ಮದುವಿಯಾದ, ನಿನ್ನ ತಮ್ಮ ಆದ, ಅವನಿಗಿಂತ ಚಿಕ್ಕವನಾದ ನೀಯಾಕ ಮದುವಿಯಾಗವಲ್ಲೆ" ಕೇಳಿದಳು. "ನಾ ಮದವಿ ಆಗಲ್ಲಂತ ಯಾರಂದ್ರು ಅಕ್ಕೀನಿ. ಆದ್ರ ಗಂಡ ಸತ್ತವರನ್ನ" ಅವನ ತಾಯಿ ಮಾತ ಕೇಳಿ ಗಪ್ಪಾದಳು. "ತತ್ತಾರ ಒಂದ ಸಾವರ ಅದಕ್ಕೂ ಎಳ್ಳನೀರು ಬಿಟ್ಟಿಯಾ" ಅಂತ ಆಕಿ ಮಾಮೂಲು ಇಸ್ಕೊಂಡು ಅವತ್ತೆ ಕೊನೆ ಅವನ ಮದುವೆ ವಿಷಯ ಮಾತಾಡಲಿಲ್ಲಾ.

ಮೀಟ್ಯಾನಾಯ್ಕನಿಗೆ ಬಹಳ ಬೇಸರವಾಗಿತ್ತು. ಅವನ ಕಣ್ಣೆದುರೆ ಚಿಮ್ನ ಮಾಸ್ತರ್ ಅವನ ಹೆಂಡತಿಯ ಜೊತೆ ಅನುಚಿತ ವರ್ತನೆ ಮಾಡುವುದು, ರೇವತಿಯೂ ಕೂಡ ಅವನು ಮಾಡಿದ್ದಕ್ಕೆ ಹಲ್ಲು ಕಿರಿಯುತ್ತಿದ್ದಳು. ಅವಳ ತಾಯಿ ಕಂಡರು ಕಾಣದಂತೆ ಗಪ್ಪಾಗುತ್ತಿದ್ದಳು. ಅವನ ಸೊಸೆಯಂದಿರು "ಲೇ ರೇವತಿ ಹಿಂಗ ಮಾಡಿದರೆ ಭಾವನ ಮನಸ್ಸಿಗೆ ಭೇಸರ ಆಗುವುದಿಲ್ವೇನೆ, ಮುಚ್ಕೊಂಡು ಅವನ್ನ ಮನಿಂದ ಓಡಿಸು" ವಾರ್ನಿಂಗ್ ಮಾಡಿದರು. ರೇವತಿ ಕೇಳುವ ಸ್ಥಿತಿಯಲ್ಲಿರಲಿಲ್ಲ. ನೋಡೊ ಮಟ ನೋಡಿ ಮೀಟ್ಯಾನಾಯ್ಕ ಸರಿಗೆ ಕೊಟ್ಟ. ಹಠಮಾರಿ ರೇವತಿಗೆ ಅದೇನು ಫರಕ್ ಬೀಳಲಿಲ್ಲ, ಈಗ ರಾಜಾರೋಷವಾಗಿ ಮಾಡತೊಡಗಿದಳು. ಮೀಟ್ಯಾನಾಯ್ಕನ ಸ್ವಾಭಿಮಾನಕ್ಕೆ ಧಕ್ಕೆ ಬಂತು. ಆಕಡೆ ಅವಳ ಆಸೆ ಈಡೇರಿಸಲು, ಫೈನಾನ್ಸ್ ಕಲೆಕ್ಷನ್‌ನಿಂದ ಎತ್ತಿದ್ದು ಲಕ್ಷದ ಮೇಲಾಗಿತ್ತು. ಸಾವುಕಾರ ಲೆಕ್ಕ ಕೇಳಿ ಬಾಯಿಗೆ ಬಂದಂತೆ ಹೀನಾಮಾನವಾಗಿ ಬೋಯ್ದು ದುಡ್ಡು ವಾಪಾಸು ಕಟ್ಟಲು ಹೇಳಿದ್ದ.

ಹಣಾನು ಹೋತು, ನೆಣಾನು ಹೋಯ್ತು ಅನ್ನೊ ಸ್ಥಿತಿಯಾಗಿತ್ತು. ಬಾಯಿಬಿಟ್ಟು ಯಾರಿಗೂ ಹೇಳಿಕೊಳ್ಳಲಾಗದೆ ಅಡ್ಕೊತ್‌ನಲ್ಲಿ ಸಿಕ್ಕೊಂಡ ಅಡಕಿಯಂತಾಗಿತ್ತು ಅವನ ಸ್ಥಿತಿ. ಈ ಕಡೆ ಹೆಂಡತಿ, ಬೇಕಂತಲೆ ಇವನ ಮನಸ್ಸಿಗೆ ಘಾಸಿ ಮಾಡಲು ಚಿಮ್ನ ಮಾಸ್ತರ್ ಜೊತೆಗೆ ಸಲುಗೆಯಿಂದ ವರ್ತಿಸುತ್ತಾ, ಶಾಸ್ತ್ರೋಕ್ತವಾಗಿ ಮದುವೆ ಮಾಡಿಕೊಂಡ ಗಂಡನನ್ನೆ ಕಡೆಗಣಿಸುತ್ತಿದ್ದಳು.

ಮೀಟ್ಯಾನಾಯ್ಕ ಯಾರಿಗೂ ಹೇಳದೆ, ಕೇಳದೆ, ಮಗ, ಹೆಂಡತಿ ಅನ್ನೊ ಮಮಕಾರ ತೊರೆದು ತಂದೆ ತಾಯಿ ಹತ್ತಿರ ಬಂದಿದ್ದ. ಅವನ ಮಾನಸಿಕ ಸ್ಥಿತಿ ಸರಿಯಾಗಿರಲಿಲ್ಲ. ಮನೆಯಲ್ಲಿ ಯಾರೊಂದಿಗೂ ಮಾತಾಡುತ್ತಿರಲಿಲ್ಲ. "ಮಾತಾಡು ನಿನ್ನ ಮನಸ್ಸಿನ ಒತ್ತಡ ಕಡಿಮೆಯಾಗುತ್ತೆ, ಮನಸ್ಸು ಹಗುರಾಗುತ್ತೆ" ಅವನ ತಾಯಿ

ಗೊಗರೆದಳು, ಅತ್ತಳು, ಕಾಡಿದಳು, ಬೇಡಿದಳು ಪ್ರಯೋಜನವಾಗಲಿಲ್ಲ. ಅವನ ತಂದೆ, ಅಣ್ಣ, ಅಕ್ಕ ಎಲ್ಲರೂ ಪ್ರಯತ್ನ ಮಾಡಿ ವಿಫಲರಾದರು. ಯಾರಿಗೂ ಮನಸ್ಸು ಬಿಚ್ಚಿ ಹೀಗಿದೆ ಅಂತ ಏನೂ ಹೇಳಲೇ ಇಲ್ಲ. ಒಂದು ವರ್ಷ ಅವನದೆ ಲೋಕದಲ್ಲಿದ್ದ. ಇದ್ದಕ್ಕಿದಂಗೆ ಅದೇನು ಅನಿಸಿತೊ. ಮಧ್ಯಾಹ್ನ ಹನ್ನೆರಡು ಗಂಟೆಯ ಸುಮಾರಿಗೆ ತಾಂಡದ ಪಕ್ಕದ ಮಾವಿನ ಮರದ ಕೆಳಗೆ ಜೊಳದ ನುಸಿ ಸಾಯಲು ಇಡುವ ವಿಷದ ಎರಡು ಗುಳಿಗೆಗಳನ್ನು ನುಂಗಿ ಸಾವು ಬದುಕಿನ ನಡುವೆ ಹೋರಾಡುತ್ತಿರುವುದನ್ನ ಕಂಡವರು ಅವನ ತಂದೆ ತಾಯಿಗೆ ಸುದ್ದಿ ಮುಟ್ಟಿಸಿದರು. ಇಡಿ ಮನೆಯವರೆಲ್ಲಾ "ಅವತ್ತು ಬಡಕೊಂಡ್ವಿ ಬೇಡ ಅವಳ ಸಹವಾಸ ನಿನ್ನ ಜೀವಾನೆ ತಗಿತಾಳ ಅಂತ, ನನ ಮಾತು ಕೇಳಲಿಲ್ಲಾ" ಒಂದೆ ಸಮನೆ ತಾಯಿ ಆಳುತ್ತಿದ್ದಳು. ಅವನು ಸಂಘರ್ಷ ನಡೆಸಿದ್ದ. ಯಾರೊ ದವಾಖಾನೆಗೆ ಒಯ್ಯುವುದು ಒಳ್ಳೆಯದು. ಬದುಕಿದರೂ ಬದುಕಬಹುದು ಅಂದರು. ಒಂದು ಪ್ರಯತ್ನ ಅಂತ ಚಕ್ಕಡಿ ಬಂಡಿಯಲ್ಲಿ ಹೇರಿಕೊಂಡು ದುರ್ಗಾಪುರದವರೆಗೆ ಹೋಗುವ ದಾರಿ ನಡಕ್ಕೆ ಪ್ರಾಣ ಬಿಟ್ಟಿದ್ದ.

* * *

80. ತಾಂಡದಲ್ಲಿ ಪ್ರೀತಿಗಾಗಿ ಪ್ರಾಣಾರ್ಪಣೆ ಮಾಡಿದವರು

ಪ್ರಕರಣ ಒಂದು

ಹುಲಿಯೂರ ಆವಾಗತಾನೆ ತನ್ನ ಸ್ನಾತಕೋತ್ತರ ಪದವಿಯನ್ನ ಸಮಾಜಶಾಸ್ತ್ರದಲ್ಲಿ ಪಡೆದಿದ್ದ. ಉದ್ಯೋಗಕ್ಕಾಗಿ ಅರ್ಜಿ ಗುಜರಾಯಿಸುವ ಕೆಲಸದಲ್ಲಿ ನಿರತನಾಗಿದ್ದ. ಇದ್ದಕ್ಕಿದ್ದಂತೆ ಅವನು ಭದ್ರಾನಾಯ್ಕನ ತಾಂಡಕ್ಕೆ ಹೊರಡುವ ಪ್ರಸಂಗ ಬಂದಿತು. ಧಾರವಾಡದಿಂದ ನೇರ ಬಸ್ಸು ಹಿಡಿದು ತಾಂಡಕ್ಕೆ ಬಂದಿದ್ದ. ಅವನು ಯಾವಾಗಲೂ ಕುಳಿತುಕೊಂಡು ನಾಡಿನ ವಿಷಯವನ್ನೇ ಹರಟುತ್ತಿದ್ದ ಜಾಗ ಇಲ್ಲದಾಗಿತ್ತು. ಆ ಗುಡಿಸಲು, ಆ ಕಟ್ಟೆ, ಆ ಗುಡಿಸಲಿನ ಮಾಲಿಕಳಾಗಿದ್ದ ಯಮನಜ್ಜಿ ತೀರಿಕೊಂಡು ತಿಂಗಳುಗಳು ಆಗಿದ್ದವು. ಅವನು ಆ ಬೇಸರದಲ್ಲಿದ್ದರೆ ಕಡೆಮನಿ ಪಿತಾಂಬರಿನಾಯ್ಕ ವಿಷ ತಗೊಂಡು ಸತ್ತಿರುವುದು ಕೇಳಿ ಬೇಸರ ಇಮ್ಮಡಿಸಿತ್ತು. ಯಾಕೆ? ಹೇಗೆ? ವಿಚಾರಗಳು ಅವನ ತಲೆಯೊಳಗೆ ಕೊರೆಯತೊಡಗಿದ್ದವು. ಅವನು ಬೇಸಿಗೆಯಲ್ಲಿ ಮನೆಯೊಳಗೆ ಸೆಕೆ ಹೆಚ್ಚಾಗಿದ್ದರಿಂದ ಮುಂದಿನ ದೇವಸ್ಥಾನದಲ್ಲಿ ಗಾಳಿ ಬೀಸುತ್ತಿದ್ದರಿಂದ ಅಲ್ಲಿ ಮಲಗುತ್ತಿದ್ದ ಆಗ ಪಿತಾಂಬರಿಯೂ ಕೂಡ ತನ್ನ ಹಾಸಿಗೆ ತಂದು ಅಣತಿ ದೂರದಲ್ಲಿ ಹಾಸಿಕೊಂಡು “ಮಾವ ಈ ವಿಜ್ಞಾನದ ವಿಷಯವನ್ನ ಓದುವುದು ಹೇಗೆ? ಅರ್ಥ ಮಾಡಿಕೊಳ್ಳುವುದು ಹೇಗೆ? ಅದಕ್ಕಿಂತ ಮುಖ್ಯವಾಗಿ ತಲೆಯೊಳಗೆ ನೆನಪಿಟ್ಟುಕೊಳ್ಳುವುದಾದರು ಹೇಗೆ?” ಒಮ್ಮಿಂದೊಮ್ಮಿಗೆ ನೂರು ಪ್ರಶ್ನೆ ಕೇಳಿದ್ದ. ಆಗ ಪೀತಾಂಬರಿ ಮೆಟ್ರಿಕ್‌ನಲ್ಲಿದ್ದ. ಅವನ ತಂದೆ ಅವಿದ್ಯಾವಂತ, ಅವನ ದೊಡ್ಡಪ್ಪ ಆ ಕಾಲದಲ್ಲಿ ಮೇಷ್ಟ್ರು ಆಗುವ ಕೋರ್ಸ್ ಮುಗಿಸಿ ಮಾಸ್ತರ ಆಗಿದ್ದ. “ಲೇ, ಓದಿದ್ದರೆ ವಿಜ್ಞಾನ ಓದಬೇಕು. ಆದರೆ ಡಾಕ್ಟರ್ ಇಲ್ಲ ಇಂಜಿನೀಯರ್ ಆಗಬೇಕು. ಇಲ್ಲಾಂದ್ರೆ ಬಿಟ್ಟ ದನಕಾಯಿ” ತಾಂಡಕ್ಕೆ ಬಂದಾಗೊಮ್ಮೆ ವಾರ್ನಿಂಗ್ ಮಾಡಿದ್ದ. ಅಲ್ಪ ಸ್ವಲ್ಪ ಬುದ್ಧಿ ಇತ್ತು ಹೇಗೊ ತಿಣುಕಾಡಿ ಮೆಟ್ರಿಕ್ ಪಾಸಾದ.

ಅವನ ಜೊತೆಗೆ ಓದುತ್ತಿದ್ದ ಗಾಣ, ಗುಂಡ, ಗಟಿಡಿ, ಹನುಮ, ಯಂಕ, ಸೀನಾ ಯಾರೊ ಮೂರು, ಯಾರೊ ಎಲ್ಡು, ಯಾರೊ ಆರಕ್ಕೆ ಆರೂ ಸ್ವಚ್ಛಗೊಳಿಸಿದ್ದರು. ಪಿತಾಂಬರಿ ಅಪ್ಪ ಹಾಣೂನಾಯ್ಕ "ನನಗ ಗೊತ್ತಿತು ನನಮಗ ಬುದ್ಧಿವಂತ ಪಾಸು ಆಗೆ ಆಗತಾನಂತ. ಹನುಮಪ್ಪನ ದಯಾ, ಗುದ್ದಮ ತಾಳಿಮರದ ದುರಗವ್ವನ ಆಶೀರ್ವಾದ ತಡಾದು ಬಿಟ್ಟ. ಮಂದಿ ಮಕ್ಕಳಂಗೆ ಸೊಕ್ಕು ದಿಮಾಕು ಇಲ್ಲ. ಏನೊ ಸೇವಾಭಾಯ್‌ನ ದಯಾ" ಮಂದಿ ಮುಂದೆ ತನ್ನ ಖುಷಿ ಹಂಚಿಕೊಂಡಿದ್ದ ಸಂಜೆ ಮುಂದ ಹಾಣು ಎರಡ ಬಾಟಲು ಹೆಂಡವನ್ನ ಜಾಸ್ತಿನೆ ಏರಿಸಿಕೊಂಡು ಬಂದಿದ್ದ.

ಮೊದಲನೇಯ ವರ್ಷ ಹೇಗೊ ತಡಾಯಿಸಿಕೊಂಡಿದ್ದ. ಎರಡನೇ ವರ್ಷಕ್ಕೆ ಕನ್ನಡ, ಇಂಗ್ಲಿಷ್ ಎರಡನ್ನ ಬಿಟ್ಟು ನಾಕಕ್ಕೆ ನಾಕು ಬಕಬರ್ಲೆ ಬಿದಿದ್ದವು. ಮೊದಲ ಪ್ರಯತ್ನದಲ್ಲಿ ಆಗಲಿಲ್ಲ. ಎರಡರಲ್ಲಿ ಊಹೂಂ. ನಿಧಾನಕ್ಕೆ ಕೂಲಿಗೆ ಹೋಗತೊಡಗಿದ. ಅಲ್ಲಿ ಅವನಿಗೆ ಭಗನ್ಯಾನಾಯ್ಕನ ಮಗಳು ಚೇನಿಬಾಯಿಯ ಜೊತೆಗೆ ಸಲುಗೆಯಾಗಿ ಅದು ಪ್ರೀತಿಗೆ ತಿರುಗಿತ್ತು. ಮುಂದೆ ಪ್ರತಿದಿನ ಅವಳು ಹೋಗುವ ಸಾವುಕಾರನ ಕೆಲಸಕ್ಕೆ ಹೋಗತೊಡಗಿದ. ಸುದ್ದಿ ಮುಚ್ಚಿಡಲು ಆದೀತೆ ನಿಧಾನಕ್ಕೆ ರೆಕ್ಕೆ ಪುಕ್ಕ ಪಡೆದುಕೊಳ್ಳತೊಡಗಿತ್ತು. ಅರವತ್ತು ಎಪತ್ತು ಮನೆಗಳಿರುವ ತಾಂಡ, ಅದರಲ್ಲಿ ಐವತ್ತು ಲಮಾಣಿ ಮನೆಗಳಿದ್ದರೆ ಉಳಿದ ಹತ್ತಿಪ್ಪತ್ತು ಊರ ಮಂದಿವು. ಪೀತಾಂಬರಿ ಅವಳನ್ನ ಹೃದಯಾಂತರಾಳದಿಂದ ಪ್ರೀತಿಸಿದ್ದ. ಹುಂಬನಿಗೆ ಅದರ ಪರಿಣಾಮ ಏನಾಗಬಹುದೆಂಬುದರ ಅರಿವೆ ಇಲ್ಲವಾಗಿತ್ತು. "ಲೇ ಹುಡುಗ ನೀ ಹಿಂಗ ನನ್ನ ಹಿಂದ ಬರಾಕ ಹೋಗಬೇಡ, ಮಂದಿ ಸರಿ ಇಲ್ಲ. ಏನೇನೊ ಸುಳ್ಳು ಸುದ್ದಿ ಹರಡ್ತಾರೆ" ಅಂದಿದ್ಲು ಚೇನಿಬಾಯಿ. "ಅಲ್ಲ ಚೇನಿ, ನಾನು ನಿನ್ನ ಎಷ್ಟು ಪ್ರೀತಿಸ್ತಿನ ಅನ್ನೊ ಅಂದಾಜಿದೆಯ ನಿನಗೆ. ನೋಡು ನಾನು ಮದುವೆ ಆದರೆ ನಿನ್ನನ್ನೆ. ಅಲ್ಲಾ ನಾನು ಚವಾಣ್, ನೀನು ರಾಠೋಡ್, ಕುಲದ್ದು ಕ್ಲಿಯರ್ ಐತೆ. ನಮ್ಮ ಮನೆ ಪರಿಸ್ಥಿತಿ, ನಿಮ್ಮ ಮನೆ ಪರಿಸ್ಥಿತಿ ಒಂದೇ ಅದಾವ. ಇನ್ನೇನು ಬೇಕು. ನೋಡು ಬೇಕಾದ್ರ ನಿಮ್ಮವ್ವ, ಅಪ್ಪನ ಹತ್ರ ಮಾತಾಡ್ತಿನಿ. ನೀ ಮಾತ್ರ ನನ್ನ ಕೈ ಬಿಡಬೇಡ" ಅವನ ಪ್ರೀತಿಯನ್ನ ಅಭಿವ್ಯಕ್ತಿಪಡಿಸಿದ್ದ. ಯಾವ ಪ್ರೀತಿ ಪ್ರೇಮ ಒಂದು ಅರ್ಥ ಗೊತ್ತಿಲ್ಲದ ಹುಚ್ಚು ಹುಡುಗಿ ಚೇನಿಬಾಯಿಯನ್ನ ಯಾಕಾದರೂ ಪೀತಾಂಬರಿ ಹಚ್ಕೊಂಡಾನೊ ಅಂತ ಕೆಲವರ ಅಂಬೋಣ. ಚೇನಿಬಾಯಿಯ ತಾಯಿ, ತಂದೆ ಜೊತೆಗೆ ಕೂಲಿಗೆ ಹೋಗುವವರು ಅವರ ಇಡಿ ಕುಟುಂಬದ ರಹಸ್ಯವನ್ನೆ ತಿಳಿದುಕೊಂಡಿದ್ದರು. ಸಿಂಬಲೂರಿನ ಹೆಗಡೆಸ್ವಾಮಿ ಮಹಾ ಕಚ್ಚೆ ಹರಕ. ಮೊದಲು ಚೇನಿಬಾಯಿಯ ತಾಯಿಯ ಜೊತೆಗೆ ಮೆರದಾಡಿದ. ಚೇನಿಬಾಯಿ ಅಕ್ಕ ಪಾಪಿ ಮೈ ನೆರಿತ್ತಿದಂಗೆ ಹೆಗಡೆಸ್ವಾಮಿ ಕಣ್ಣು ಅಕಿ ಮೇಲೆ ಬಿತ್ತು. ದುಡ್ಡು, ಆಸ್ತಿ ಅಮಲು ಎಲ್ಲವನ್ನು ಮಾಡಿಸುತ್ತೆ. ಅವಳಕ್ಕನ ಮೇಲಿನ ಆಕರ್ಷಣೆ ಕಡಿಮೆಯಾಗುತ್ತಿದ್ದಂತೆ ಚೇನಿಬಾಯಿ

ಕೈಗೆ ಬಂದಿದ್ದಳು. ಅಕ್ಕನ್ನ ಬಿಟ್ಟು ತಂಗಿನ ಇಟ್ಕೊಂಡಿದ್ದ. ಇದು ಗೊತ್ತಿರುವ ಸೇಣಬಿಬಾಯಿ "ಲೇ ಪಿತಾಂಬರಿ ಮಗನೆ, ಯಾಕಿಂಗೆ ಆ ಬೇವರ್ಸಿ ಹುಡುಗಿ ಹಿಂದೆ ಕಂಗಾಲಾಗಿಯ, ಆಕಿ ಚಾಳಿ ಸರಿ ಇಲ್ಲ. ಸುಮ್ಮನೆ ನಿನ್ನ ಪಾಡಿಗ ನೀ ಇರು ಇಲ್ಲ ತಾಂಡದಲ್ಲಿ ಇನ್ನೂ ಬೇಕಾದಷ್ಟು ರಾಠೋಡ್ ಹುಡುಗಿಯರದಾರ, ಅವರನ್ನ ನೋಡಿಕೊ" ಅಂದ್ಲು. "ಬೇ ನಿಮ್ಮಮ್ಮನ ಸೇಣಬಿ ಪ್ರೀತಿ ಅಂದ್ರೆ ಅರ್ಥಾನಾದರೂ ಗೊತ್ತ ನಿನಗೆ? ಅದೊಂದು ಅವ್ಯಕ್ತ ಭಾವನೆ. ನಿಮ್ಮಂತೋರಿಗೆ ಅರ್ಥ ಆಗೊದಿಲ್ಲ. ಅವಳು ಏನು ಬೇಕಾದರೂ ಮಾಡ್ಲಿ ಅವಳ ನಗು, ಅವಳ ನೋಟ ಅವಳು ಒಮ್ಮೆ ನನ್ನೆದುರಿಗೆ ನಿಂತರೆ ಮನಸ್ಸಿಗೆ ಆಗುವ ಖುಷಿ ಹೇಳತೀರದು" ತನ್ನ ಪ್ರೀತಿಯ ಹುಚ್ಚನ್ನ ಹೇಳಲು ಹೋದ. "ಖರೇನ ನಿನಗ ಹುಚ್ಚು ಹಿಡದೈತೆ. ಏನೊ ಕಂಡದ್ದನ್ನ ಹೇಳಿದೆ. ಕೇಳುವುದು ಬಿಡೋದು ನಿನಗ ಬಿಟ್ಟದ್ದ" ಅಂದಾಕಿನ ತನ್ನ ಪಾಡಿಗೆ ತಾನು ಕೆಲಸಕ್ಕೆ ಹೋದಳು. "ಹೋಗ ಹೋಗು ಕೇಳಿಯಾದರೂ ಏನ್ಮಾಡಿಯಾ ನೀನು ಅಷ್ಟೆ ಅಲ್ಲಾ ನನ್ನ ಚೀನಿಯ ಬಗ್ಗೆ, ನಾನು ಪ್ರೀತಿಸಿರೊ ಹುಡುಗಿ ಬಗ್ಗೆ ಮಂದಿ ಹೇಳುವ ಹಾಗೆ ಆಯ್ತಲ್ಲ" ಜೋರಾಗಿ ಒದರಿದ. "ಎಯ್ ತಪ್ಪಾಯ್ತೊ ಮಾರಾಯ ಹಿಂಗ ಬಾಯಿ ಮಾಡಬೇಡ. ಮಾನಮರ್ಯಾದಿಗೆ ಅಂಜೊ ಮಂದಿ ನಾವು. ಯಾರಾದರೂ ಕೇಳಿಸಿಕೊಂಡ್ರೆ ಚೀನಿಬಾಯಿಯ ತಾಯಿಗೆ ಸುದ್ದಿ ತಿಳಿತಂದ್ರ ನನ್ನ ಸೀರಿನ ಬಿಚ್ಚುತ್ತಾಳೆ" ಹೇಳೋದ ಹೇಳಿ ಸೇಣಬಿಬಾಯಿ ಹಿಂಗ ತಿಂದ ಮಂಗ್ಯಾನಂಗಾದಳು.

ಅವತ್ತು ಅವನು ಪೂರಾ ತಯಾರಿಯಲ್ಲಿ, ಎಲ್ಲಾ ಸಿದ್ಧತೆ ಮಾಡಿಕೊಂಡು ಬಂದಿದ್ದ. ಅವಳು ಕೈಯಾಗ ರೊಟ್ಟಿ ಚಟ್ನಿ ತಗೊಂಡು ತಿನ್ಕೊಂತ ಮುಂದೆ ಹೊರಟಿದ್ದಳು. ಇದೆ ಸರಿಯಾದ ಸಮಯ ಅಂದವನೆ "ಚೀನಿ, ಏನು ಬಹಳ ಕೆಲಸದಲ್ಲಿ ಮಗ್ನಳಾಗಿರುವ ಹಾಗಿದೆ. ಮಾತಾಡಿಸೊದಿಲ್ಲ. ಕರದರೆ ಕೇಳುವುದಿಲ್ಲ. ಅಲ್ಲಾ ಹಿಂಗಾದರೆ ನಾಳೆ ನಮ್ಮ ಸಂಸಾರದ ಗತಿ ಏನು?" ನೇರ ಪ್ರಶ್ನೆ "ಯಾವ ಸಂಸಾರ? ನಿಂಗೆಲ್ಲೊ ಬ್ರಾಂತಿ ಹಿಡದೈತೆ. ಮತ್ತೊಂದ ಸಲ ಹಿಂಗೆ ಪ್ರೀತಿ, ಪ್ರೇಮ ಅಂತ ನನ್ನ ಹಿಂದೆ ತಿರುಗಾಡಬೇಡ" ಕಡ್ಡಿ ಎರಡು ತುಂಡು ಮಾಡಿದಂಗೆ ಹೇಳಿದಳು. "ನೋಡು ಮದುವೆ ಆಗೋಣ ನಾನು ನಿನ್ನ ತುಂಬ ಇಷ್ಟಪಡ್ತಿನಿ, ಪ್ರೀತಿ ಮಾಡ್ತಿದ್ದಿನಿ. ಹಿಂಗ ಅನ್ನಬೇಡ. ನನ್ನ ಬದುಕೇ ನೀನು" ಏನೇನೊ ಹೇಳಿದ ಅವಳು ಕೇಳುವ ಮನಸ್ಥಿತಿಯಲ್ಲಿರಲಿಲ್ಲ. ಅವಳ ಮನಸ್ಸು ಮೆದುಳಲ್ಲಿ ಹೆಗಡೆಸ್ವಾಮಿ ಬಿತ್ತಿರುವ ವಿಷ ಬೀಜವೆ ಬೆಳೆದಿತ್ತು. ಸ್ವಚ್ಛಂದ, ನಿಷ್ಕಾಮಕ ಪ್ರೀತಿ ಪ್ರೇಮದ ಅರಿವೆ ಅವಳಿಗೆ ಆಗದಾಗಿತ್ತು. ಇಂತ ಸಂದರ್ಭದಲ್ಲಿ ಅವನಾದರು ಏನು ಮಾಡಲು ಸಾಧ್ಯ. ಅವಳು ಭುಜ ಮುಟ್ಟಿಸಲು ತಯಾರಿರಲಿಲ್ಲ. ಪಿತಾಂಬರಿ ಬಹಳ ದೂರದವರೆಗೆ ಅವಳ ಹಿಂದೆ ಹಿಂದೆ ಹೋಗಿದ್ದ. "ನೋಡು ನನಗೆ ಮೂರು ಎಕ್ಕರೆ ಜಮೀನಿದೆ, ನಾನು

ಓದಿದ್ದಿನಿ. ಎಲ್ಲಾದರೂ ಪಟ್ಟಣಕ್ಕೆ ಹೋಗಿ ಸಣ್ಣಪುಟ್ಟ ನೌಕರಿ ಮಾಡಿ ಸುಖವಾಗಿ ಸಾಕ್ತಿನಿ" ಅವಳ ಮುಂದೆ ಅಧೀರನಾಗಿದ್ದ. ಅದೇಗೆ ಅವಳ ಹಿಂದೆ ಬಿದ್ದನೊ ಅವಳ ಯಾವುದೊ ಸಲಿಗೆಯ ಮಾತನ್ನ ಪ್ರೀತಿ ಅಂತ ಭಾವಿಸಿದನೊ ದೇವರೆ ಬಲ್ಲ. "ಅಲ್ಲಾ ನಾನೇನು ನಿನ್ನ ಪ್ರೀತಿ ಮಾಡ್ತಿದ್ದಿನಿ ಅಂದ್ನಾ ಅವತ್ತು ಏನೊ ಬಾಯಿ ತಪ್ಪಿ ಹೇಳಿದ ಮಾತು. ಏನೊ ಚವಾಣ ಪಂಗಡದ ಹುಡುಗ ಅಂತ ನಗಚಾಟಿ ಮಾಡಿದ್ನಪ್ಪ. ನೀನು ಹಿಂದೆನೆ ಬಿಳೋದ. ನೋಡು ನಮ್ಮ ಮನೆಯಲ್ಲಿ ಒಪ್ಪಲ್ಲ. ನನಗೂ ಇಷ್ಟ ಇಲ್ಲ" ಅಂದವಳೆ ಕೊಸರಿಕೊಂಡು ಹೋಗಲು ನೋಡಿದಳು. "ಇದೆ ಕೊನೇನಾ? ನಾನು ಬದುಕಿದರೆ ನಿನ್ನ ಜೊತೆ ಮಾತ್ರ ಕಣೆ, ನನ್ನ ತಾಳ್ಮೆ ಪರೀಕ್ಷೆ ಮಾಡಬೇಡ. ಇವತ್ತು ಯಾವುದಾದರೂ ಒಂದು ನಿರ್ಧಾರ ಆಗಬೇಕು. ಒಂದು ಕೊನೆ ಕಾಣಬೇಕು" ಗಟ್ಟಿಯಾಗಿ ನಿಂತ. ಅವಳ ಮನಸ್ಸಿನಲ್ಲಿ ನಿಜವಾಗಿಯೂ ಇದ್ದದು ಪ್ರೀತಿನಾ? ಕಾಮದ ವಾಸನೇನಾ? ಬರಿಮೋಹ? ಅನ್ನುವ ಪ್ರಯತ್ನ ಮಾಡದೆ ಧಿಡೀರ್ ನಿರ್ಣಯಕ್ಕೆ ಬಂದಿದ್ದ ಪಿತಾಂಬರಿ. ಅದು ಅವಳ ಜೊತೆಗೆ ಹದಿನೈದು ದಿನ ಕೆಲಸ ಮಾಡಿದ್ದ, ನಕ್ಕಿದ್ದ, ಅವಳು ಅವನ ಕಡೆ ನೋಡಿದ್ದಳು ಏನೊ ಕೈಸನ್ನೆ, ಕಣ್ಣು ಸನ್ನೆ ಸಲುಗೆಯಿಂದ ಮಾಡಿದ್ದಾಳು ಅದೇ ಪ್ರೀತಿ ಅಂದ್ರೆ. "ನೋಡು ಹುಡುಗ, ನಮ್ಮನೆಯಲ್ಲಿ ಇಂತಹದ್ದಕ್ಕೆಲ್ಲ ಅವಕಾಶಾನೆ ಇಲ್ಲ. ಸುಮ್ಮನೆ ಹೋಗು. ತಲಿಕೆಡಿಸಿಕೊ ಬೇಡಾ" ತಾಳ್ಮೆಯಿಂದಲೆ ತಿಳಿಹೇಳಿದಳು ಚೀನಿ. ಗಂಡು ಹುಡುಗನಿಗೆ ಮಕದ ಮೇಲೆನೆ ನಾನು ನಿನ್ನ ಇಷ್ಟ ಪಡ್ತಾಯಿಲ್ಲ ಅಂತ ಹೆಣ್ಣು ಹೇಳಬೇಕಾದರೆ ಅವಳ ಧೈರ್ಯವನ್ನ ಮೆಚ್ಚಲೇಬೇಕು ಚೀನಿ ಮನಸಿತ್ತೊ, ಯಾರಾದರೂ ಒತ್ತಡ ಹೇರಿದ್ದರೊ, ಇಲ್ಲಾ ಹೆಗಡೆಸ್ವಾಮಿಯ ಕುಟೀಲ ನಾಟಕ ತಿಳಿಯುವರಾರು?

ಒಂದಿಷ್ಟು ದಿನ ಹಾಗೆ ಸುಮ್ಮನೆ ಅವಳ ಹಿಂದೆ ದೇವದಾಸನಂತೆ ಅಡ್ಡಾಡಿದ. ಮನಸ್ಸು ಬದಲಿಸಬಹುದು ಎಂದು. ಅವಳ ಮನಸ್ಸಿನಲ್ಲಿ ಇವನ ಬಗ್ಗೆ ನಿಜವಾಗಿಯೂ ಪ್ರೀತಿ ಇದಿದ್ದೆ ಆಗಿದ್ದರೆ ಖಂಡಿತವಾಗಿಯೂ ಒಂದಲ್ಲಾ ಒಂದು ರೀತಿಯ ಸನ್ನೆ ಮಾಡುತ್ತಿದ್ದಳು. ಅವಳು ಮಾಡಿದ ಮಂಗ್ಯಾನ ಚೇಷ್ಟೆಯನ್ನೆ ಇಂವ ಪ್ರೀತಿ ಅಂದ್ಕೊಂಡ ಬಿಟ್ಟಿದ್ದ. ಅದು ಉಲ್ಟಾ ಆಗಿತ್ತು. ಇಪ್ಪತ್ತರ ಹರೆಯ ನಿರ್ಣಯ ತಗೊಳೋದು ಕಷ್ಟವಾಗಿತ್ತು. ಅವಳ ಹಿಂದೆ ಕಾಣದ ಕೈಗಳು ಸಾಕಷ್ಟಿದ್ದವು. ಅವಳ ತಾಯಿ, ಅವಳನ್ನ ಇಟ್ಕೊಂಡಿದ್ದ ಹೆಗಡೆಸ್ವಾಮಿ ಸೂತ್ರದ ಗೊಂಬೆಯಂತೆ ಆಟ ಆಡಿಸುತ್ತಿದ್ದರು. ಇವನು ಏಕಾಂಗಿಯಾಗಿದ್ದ. ತಂದೆ ತಾಯಿಗೆ, ಸ್ನೇಹಿತರಿಗೆ ಹೇಳದ ಸ್ಥಿತಿ. ಇವನ ಪಿಯುಸಿ ನಪಾಸಾಗಿರುವುದು ಒಂದು ಕಾರಣವಾಗಿರಬಹುದು. ನಾಲ್ಕು ವಿಜ್ಞಾನದ ವಿಷಯಗಳು ಬೆಟ್ಟಗಳಂತೆ ಎದುರು ನಿಂತಿದ್ದವು. "ನಾನು ಪಾಸಾಗೋದು ಅಸಾಧ್ಯ" ಮನಸ್ಸಿನೊಳಗೆ ತುಂಬಿಕೊಂಡು. ಒಂದು ನೆಪ ಕಾಯುತ್ತಿದ್ದ. ಚೀನಿಬಾಯಿಯನ್ನ ನಾಟಕೀಯವಾಗಿ ಪ್ರೀತಿಸುತ್ತಿರುವುದಾಗಿ ಮಂದಿಗೆ

ನಂಬಿಸಿದ್ದ. ಅವಳಾದರೂ ಹೂಂ ಅಂದರೆ ಮದುವೆ ಮಾಡಿಕೊಂಡು ಓದುವುದನ್ನೆ ಬಿಟ್ಟು ನೆಮ್ಮದಿಯಿಂದ ಇರಬಹುದು ಎನ್ನುವ ಒಂದು ಆಲೋಚನೆಯೂ ಕೂಡ ಇತ್ತು. ಎಲ್ಲಾ ಕೂಡಿಬಂದವು. ಯಾವತ್ತು ಕುಡಿಯದವನು ಬ್ರಾಂದಿ ಬಾಟಲಿಯಲ್ಲಿ ಜೋಳದ ನುಸಿಗೆ ಹಾಕುವ ವಿಷದ ಗುಳಿಗೆ ಹಾಕಿಕೊಂಡವನೆ ಕುಡಿದು ನಿಶ್ಚಿಂತನಾಗಿ ಮಲಗಿಬಿಟ್ಟಿದ್ದ.

ಪ್ರಕರಣ ಎರಡು

ಅವನು ಊರಮನಿ ಹುಡುಗ, ಅಕಿ ಲಮಾಣಿ ಹುಡುಗಿ. ಅವಳೇನು ಅಷ್ಟು ಗಂಭೀರ ಹುಡುಗಿಯೇನು ಅಲ್ಲ. ಬರುಕಾನಳ್ಳಿಯಲ್ಲಿ ಪಿಯುಸಿ ಓದುವಾಗ ಅವಳನ್ನ ಕಳುಹಿಸುವುದಕ್ಕಂತೇಳಿ ಒಂದು ಹಿಂಡು ಹುಡುಗರು ದುರ್ಗಪುರದವರೆಗೆ ಬರುತ್ತಿದ್ದರು. ಆದರೆ ಅವಳಿಗೆ ಖಾಸ ಆಗಿರುವವನು ಭದ್ರಾನಾಯ್ಕನ ತಾಂಡದವರೆಗೆ ಮೂರು ಕಿಲೋಮೀಟರ್ ದೂರ ಕಾಲ್ನಡಿಗೆಯಲ್ಲೆ ಕ್ರಯಿಸಿ ಅವಳನ್ನ ಮನೆ ಮುಟ್ಟಿಸಿ ಬರುತ್ತಿದ್ದ. ಬಂದವನಿಗೆ ಮನೆಯಲ್ಲಿ ಪರಿಚಯಿಸಿ, ಊಟಮಾಡಿಸಿ ಅರ್ಧದಾರಿಗೆ ಹೋಗಿ ವಿದಾಯ ಹೇಳಿ ಬರುತ್ತಿದ್ದಳು. ಅವಳ ಈ ಎಲ್ಲಾ ಸುದ್ದಿ ತಿಳಿದು ತಿಳಿದು ಊರಮನಿ ಹುಡುಗ ಚಿಕ್ಕಣ್ಣ ಬಕರಾ ಆಗಿದ್ದು ಹೇಗೆ? ಎನ್ನುವ ಸತ್ಯ ತಾಂಡದವರಿಗೆ ಅರ್ಥನೆ ಆಗಿರಲಿಲ್ಲಾ. ಚಿಕ್ಕಣ್ಣನ ಗೆಳೆಯ ಕಿಷ್ಣನಾಯ್ಕ ಚಿಕ್ಕಣ್ಣನಂತೆ ಪಿಯುಸಿಯಲ್ಲಿ ಗೊತಾಹೊಡದು ಬೇಕಾರ ತಿರುಗುತ್ತಿದ್ದ. ಅವನು ಚಿಕ್ಕಣ್ಣನ ಪತ್ರ ವ್ಯವಹಾರದ ದೂತನಾಗಿ ಕೆಲಸ ಮಾಡುತ್ತಿದ್ದ. ಆದರೆ ಅವಳು ನೂರು ಹುಡುಗರನ್ನ ಮರಳು ಮಾಡಿ ಅವರನ್ನ ಹುಚ್ಚರನ್ನಾಗಿ ಮಾಡಿ ಬೀದಿಗೆ ಬಿಡುವುದರಲ್ಲಿ ಮಹಿರ್ ಆಗಿದ್ದಳು. ಹದಿ ಹರೆಯದಲ್ಲಿ ಹುಡುಗಿಯ ನಗು ಕೂಡ ಅವರ ಎದೆಯೊಳಗೆ ತರಂಗಗಳನ್ನ ಎಬ್ಬಿಸುತ್ತಿದ್ದವು. ಅದೆ ಸತ್ಯ ಎಂದು ಭ್ರಮಿಸಿ ಹುಚ್ಚರಂತೆ "ಲೇ ಅವಳು ನನ್ನ ಪ್ರೀತಿಸುತ್ತಿದ್ದಾಳೆ" ಹೇಳಿಕೊಂಡು ತಿರುಗಾಡಿ, ತಾಂಡದಲ್ಲಿ ಸುಮ್ಮನೆ ಗಾಳಿ ಸುದ್ದಿ ಹಬ್ಬಿ ಹುಡುಗಿಗೆ ಮನೆಯವರು ಯಾರ ಜೊತೆಗೂ ಮಾತಾಡದಂತೆ ಮಾಡಿ ಬಿಡುತ್ತಿದ್ದರು. ಈ ಚಿಮ್ನಾನಳ ಕತೆನೆ ಬೇರೆ. ತಂದೆ ಇಲ್ಲದ ಹುಡುಗಿ, ತಾಯಿಯ ಆಶ್ರಯದಲ್ಲಿ ಬೆಳೆಯುತ್ತಿದ್ದಳು. ತಾಯಿ ಕೂಲಿ ಮಾಡಿ ಜೀವನ ಮಾಡಬೇಕು. ಏನೊ ಚಿಮ್ನಾಳ ಅಜ್ಜಿ – ತಾತ ಪರವಾಗಿರಲಿಲ್ಲವಾದ್ದರಿಂದ ನಡಿತಿತ್ತು.

ಚಿಕ್ಕಣ್ಣ ಮಾತ್ರ ಚಿಮ್ನಾಳನ್ನ ಪ್ರಾಣಕ್ಕಿಂತ ಹೆಚ್ಚು ಪ್ರೀತಿಸುತ್ತಿದ್ದ. ಚಿಕ್ಕಣ್ಣ ಬಾಲ್ಯಸ್ನೇಹಿತ ಕಿಷ್ಣನಾಯ್ಕ ಅವನ ಸಹಾಯಕ್ಕೆ ನಿಂತಿದ್ದ. "ಲೇ ಚಿಕ್ಕ ಹೆದರಬೇಡಲೆ, ನಾ ಅದೀನಿ. ಯಾ ಮಗ ಬರ್‍ತಾನ ನೋಡುವ" ಅಂತ ಭರವಸೆ ಕೊಟ್ಟಮೇಲೆ ಚಿಕ್ಕ ಇನ್ನೊಂದಿಷ್ಟು ಧೈರ್ಯ ಮಾಡಿದ್ದ. ಬರುಕಾನಹಳ್ಳಿಯಲ್ಲಿ ಜಗತ್ತನ್ನೆ ಅಲ್ಲಾಡಿಸಿದ ಚಿಮ್ನಾಗೆ ಚಿಕ್ಕ ಯಾವ ಲೆಕ್ಕ. ಚಿಕ್ಕನಂತ ಪುಟಗೋಸಿಗಳು ನೂರಾರು ಮಂದಿ ಅವಳ ಹಿಂದೆ,

ಮುಂದೆ ಅಡ್ಡಾಡುತ್ತಿದ್ದರು. "ಅಲ್ಲ ನೀ ಹಿಂಗ ಮೇಲ್ಮುಚ್ಚಿ ಮಾಡಬೇಡ ನೋಡು ಸೀದಾ ಸೀದಾ ಹೇಳಿಬಿಡು ಐತಿ ಅಂದ್ರೆ ಹೂಂ ಅನ್ನು ಇಲ್ಲಾಂದ್ರೆ ಇಲ್ಲಾ ಅನ್ನು" ಒಬ್ಬಳೆ ದುರ್ಗಾಪುರದ ದಾರಿಯಲ್ಲಿರುವ ಅವಳ ಅಜ್ಜನ ಹೊಲದಿಂದ ಬರುವಾಗ ನಾಗರಹಾವು ಸಿನಿಮಾದ ಖಳನಾಯಕ ಜಲೀಲ ಕೇಳುವಂತೆ ಕೇಳಿದ್ದ ಚಿಕ್ಕಣ್ಣ. ಏನಾದರೂ ಮಾಡಿ ಮದಲು ಪಾರಾಗಾನ ಆಮೇಲೆ ನೋಡಿದ್ರಾಯ್ತು ಅಂತಾನೊ, ಟೈಂಪಾಸ್‌ಗೆಬೇಕು ಅಂತಾನೊ, ಬಕರಾ ಮಾಡಾನು ಅಂತ "ಹೂಂ" ಅಂದಿದ್ದಳು, ಚಿಕ್ಕ ಹುಚ್ಚನಾಗಿದ್ದ. "ಆತಲೆ ಅಕಿ ಹೂಂ ಅಂದಾಳಲ್ಲಾ ಪತ್ರ ಬರಿ, ನಿಮ್ಮಿಬ್ಬರ ನಡುವೆ ನಾನೆ ಪಾರಿವಾಳ, ಸಂಸ್ಕೃತ ಕವಿಯ ಮೇಘಧೂತ ನಾನೆ. ಹೂಂ ಬರಿ" ಒತ್ತಡದಿಂದ ಚಿಕ್ಕನಿಂದ "ಪ್ರೀಯ ಚಿಮ್ನಾ, ಫಸ್ಟು ಐ ಲವ್ ಯೂ ನಮ್ಮೂರಾಗ ನೀನೊಬ್ಬಳೆ ಚೆಲುವೆ. ನಾನು ಚಿಕ್ಕಣ್ಣ ನಿನ್ನ ಗುಲಾಮ, ದಾಸ, ಕರುಣಿಸು ಆವತ್ತು ಸಿಕ್ಕಿದ್ದೆಯಲ್ಲಾ ಅಲ್ಲೆ ಕಾಯುವೆ." ಅಷ್ಟನ್ನೆ ಬರೆದು ಅವನ ಚೇಲ ಕಿಷ್ಣನಾಯ್ಕನಿಗೆ ಕೊಟ್ಟಿದ್ದ. ಕಿಷ್ಣನಾಯ್ಕ ಹಾಗೆ ಅವರ ಓಣಿ ಕಡೆಗೆ ಹೋದವನೆ "ಏನು ಚಿಗವ್ವ ಪಾಡದಿ ಏನಬೆ ಬಹಳ ದಿನಗಳಾದವು ಕೆಲಸಕ್ಕೆ ಹೋಗ್ತಿರಬೇಕು. ಕಾಣಲೇ ಇಲ್ಲಾ" ಮಾತಾಡಿಸುತ್ತ ಅವಳಿಗೆ ಸನ್ನೆಮಾಡಿ ಚೀಟಿ ಬಿಸಾಕಿದ. ಅದು ಅವನ ಮಾವ ಜಿಂಗಾಡಿನಾಯ್ಕನ ಕೈಗೆ ಸಿಕ್ಕಿತ್ತು. ಅಷ್ಟೊತ್ತಿಗಾಗಲೆ ಕಿಷ್ಣನಾಯ್ಕ ಪರಾರಿಯಾಗಿದ್ದ. ಆದರೆ ಜಿಂಗಾಡಿ, ಏನೊ ಕಾಗದದ ತುಂಡು ಅರಿಸಿ ಬಿಸಾಡದೆ ಬರೆದಿರುವುದನ್ನ ಬಿಡಿಸಿ ಓದಿದ. ಮದಲು ಚಿಮ್ನಾಗೆ ನಾಕು ಬಾರಿಸಿದ "ಕಾಲೇಜಿಗೆ ಹೋಗ್ತಿಯಾ, ಇಲ್ಲಾ ದಂದೆ ಮಾಡ್ತಿ, ತಂದೆ ಇಲ್ಲದ ಮಗಳು ಅಂತ ಕಣ್ಣಾಗ ಕಣ್ಣಿಟ್ಟು ಸಾಕ್ತಿದ್ದಿವಿ. ನೀ ಹಿಂಗ ಕಣ್ಣಾಗ ಬೆಳ್ಳಿಟ್ರೆ ಹೆಂಗ" ಕೆಂಡಾಮಂಡಲವಾಗಿದ್ದ. "ಲೇ ಜಂಬ, ಸೀನಬರ್‍ಲೇ" ಅಂತ ನಾಕು ಜನರನ್ನ ಕರ್ಕೊಂಡು ಸಾಲಿಗುಡಿ ತಾವ ಕುಂತ್ಕೊಂಡು ಅವಳದ್ದೆ ಮಾತಾಡುತ್ತಿದ್ದ ಚಿಕ್ಕ ಮತ್ತು ಕಿಷ್ಣರನ್ನ ಸುತ್ತುವರಿದರು. "ಲೇ ಮಂದಿ ಹೆಂಗಸರಿಗೆ ಲವ್‌ಲೆಟರ್ ಕೊಡೊ ಅಷ್ಟು ದೊಡ್ಡವರಾದ್ರೇನ್ರಲೇ" ಅಂದವನೆ ಜಿಂಗಾಡಿ ಕಿಷ್ಣನಾಯ್ಕನಿಗೆ ನಾಕು ಬಾರಿಸುತ್ತಿದ್ದಂಗೆ ಚಿಕ್ಕಣ್ಣ ಮೆಲ್ಲಗೆ ತಪ್ಪಿಸಿಕೊಂಡು ಪಾರಾಗಿದ್ದ. ಕಿಷ್ಣನಾಯ್ಕ ಮನಿಯಾಗ ಗೊತ್ತಾದ್ರ ಹೆಡಮುರಗಿ ಕಟ್ತಾರ ಅಂದವನೆ "ಇಲ್ಲ ಮಾವ ನಾ ಏನೂ ಮಾಡಿಲ್ಲ, ನಾನಲ್ಲ ಬರದವನು" ಅಂದ್ರು, ತಲೆಗೆರಡು ಏಟು ಬಿಟ್ಟಿದ್ದ. ಏನೊ ತಪ್ಪಾಗಿದೆ ಆಂತ ಕಿಷ್ಣ ಸುಧಾರಿಸಿಕೊಂಡು ಸುಮ್ಮನಾಗಿದ್ದ. ಅವನ ಚಿಕ್ಕಪ್ಪಂದಿರು ಜೋರಾಗಿರೊದಕ್ಕೆ ವಿಷಯವನ್ನ ಬೆಳಸಲಿಲ್ಲ.

ಚಿಕ್ಕಣ್ಣ ಅವತ್ತೆನೊ ಪಾರಾಗಿದ್ದ. ಮುಂದೆ ಅವಳ ಪ್ರೀತಿಯನ್ನ ಗೆಲ್ಲಬೇಕು, ಅವಳಿಲ್ಲದೆ ಜಗತ್ತೆ ಇಲ್ಲ ಎನ್ನುವಂತೆ ಕುಂತ್ರು, ನಿಂತ್ರು, ಮಲಗಿದರು ಚಿಮ್ನು, ಚಿಮ್ನಾ ಧ್ಯಾನ ಮಾಡುತ್ತಿದ್ದ. ಚಿಮ್ನಾನೂ ಹಾಗೆ ಕಂಡಕಂಡವರಿಗೆ ಮುಗಳ್‌ನಕ್ಕು ಅರ್ಥವಾಗದಂತೆ ವರ್ತನೆ ಮಾಡುತ್ತಿದ್ದಳು. ಹಿಂಗಾದ್ರ ಗಿಟೊದಿಲ್ಲ

ಅಂದುಕೊಂಡವನೆ ಚಿಕ್ಕ ಏಕ್‌ಮಾರ್ ದೋ ತುಕಡಾ ಆಗಾಬೇಕು ಅಂತ, ಅಕಿ ತಾಂಡದಾಗ ಕಾಣದಾದಾಗ ಬರುಕಾನಹಳ್ಳಿಗೆ ಓದಾಕ ಹೋಗಿರುವುದನ್ನ ಖಾತ್ರಿ ಮಾಡಿಕೊಂಡವನೆ ಯಾರಿಗೂ ಹೇಳದೇ ಕೇಳದೆ ಹೊತ್ತಾರೆ ಬರುಕಾನಹಳ್ಳಿಗೆ ಲಾರಿ ಹತ್ತಿದ್ದ. ಅವಳ ಕಾಲೇಜು, ಹಾಸ್ಟಲ್ಲು ಹುಡುಕುವುದೇನು ಕಷ್ಟಸಾಧ್ಯವಾಗಿರಲಿಲ್ಲ. ಅವಳು ಊಟಮಾಡಿ ತಟ್ಟೆ ತಗೊಂಡು ಒಳಗೆ ಹೋಗುತ್ತಿದ್ದಂಗೆ ಗೇಟಿನೊಳಗೆ ಯಾರೊ ಬಂದಂಗಾಗಿ ಹೊರಗೆ ಇಣುಕಿದಳು, ಚಿಕ್ಕಣ್ಣ. "ಅಯ್ಯೊ ಶಿವನೆ ಈ ಹುಚ್ಚ ಇಲ್ಲಿಗೂ ಬಂದೆ ಬಿಟ್ನಾ. ನಮ್ಮಾವನಿಗೆ ಗೊತ್ತಾದರೆ ಚರ್ಮಾನೆ ಸುಲಿತಾನ" ಅಂದ್ಕೊಂಡಾಕಿನ ಅವಸರದಿಂದಲೇ ತನ್ನ ರೂಂನೊಳಗೆ ಹೋಗಿ ಅವಿತುಕೊಳ್ಳೊದಕ್ಕೆ ಪ್ರಯತ್ನಿಸಿದಳು. ಗೇಟಿನಲ್ಲಿದ್ದ ಹೆಂಗಸು "ಯಾರಬೇಕು" ಕೇಳಿದಳು "ಚಿಮ್ನಾ" ಚಿಕ್ಕಣ್ಣ ಹೇಳಿದ್ದ. "ನೀವು ಏನಾಗಬೇಕು" ಕೇಳಿದಳು ಹೆಂಗಸು. "ಅತ್ತೆಮಗ" ಅಂತ ಸುಳ್ಳ ಬೊಗಳಿದ. ಅವಳು ನೆಟ್ಟಗೆ ಚಿಮ್ನಾಳ ರೂಂಗೆ ಹೋದವಳೆ "ಚಿಮ್ನಾ ನಿಮ್ಮೂರಿಂದ ನಿಮ್ಮ ಅತ್ತೆ ಮಗ ಬಂದಾನ" ಜಗಜಾಹಿರಾತು ಮಾಡಿದವಳೆ ವಾಪಾಸು ಹೋಗಿದ್ದಳು. ಮತ್ತೊಮ್ಮೆ ಬಾಯಿಗೆ ಬಂದದ್ದನ್ನ ಬೊಗಳಿಯಾನಂತೆ, "ಮಾಡ್ತಿನಿ ತಡಿ ಭಾಡ್‌ಕೌನನ ಮಗನಿಗೆ" ಗೊಣಗಿಕೊಳ್ಳುತ್ತಲೆ ಹೋದಳು. ಅವನು ಅವಳನ್ನೆ ಕಾಯುತ್ತಿದ್ದ. ಇವಳಿಗೆ ಸಿಟ್ಟು, ಮನೆಯಲ್ಲಿ ಗೊತ್ತಾದರೆ ಓದುವುದೆ ನಿಲ್ಲುತ್ತದೆ ಎನ್ನುವ ಆತಂಕ. "ಏನು ಬಂದಿದ್ದು, ಅಲ್ಲಾ ನಾನು ಹೇಳಲಿಲ್ವಾ, ಈ ಲವ್ವು ಗಿವ್ವು ನನ್ನಿಂದ ಆಗಲ್ಲ. ನೋಡು ನಮ್ಮಪ್ಪ ಇಲ್ಲ, ನಮ್ಮನ್ನ ಸಾಕುತ್ತಿರುವುದೆ ನಮ್ಮ ಮಾವಂದಿರು. ಅವರ ವಿರುದ್ಧ ನಾವು ಹೋಗಲ್ಲ, ಸುಮ್ಮನೆ ನನ್ನ ಮೇಲೆ ಆಸೆ ಇಟ್ಕ ಬೇಡ" ಇದ್ದ ವಿಷಯವನ್ನ ಹೇಳಿದಳು. "ಚಿಮ್ನು ನೀನಿಲ್ಲದೆ ಬದುಕಿಲ್ಲ. ಮತ್ತೆ ಅವತ್ತು ಹೂಂ ಅಂದಿದ್ದೆ, ನನ್ನ ನೋಡಿದಾಗೆಲ್ಲ ನಕ್ಕಿದ್ದು ಪ್ರೀತಿ ಅಲ್ವಾ ಚಿಮ್ನು? ನನಗೆ ಮೋಸ ಮಾಡಿದ್ಯಾ ಹಂಗಾರ. ಕಿಷ್ಣನೂ ಅದೇ ಹೇಳಿದ್ದ ನೀನು ನಕ್ಕಿ ಅಂದರೆ, ಹೂಂ ಅಂದೀಯಾ ಅಂದರೆ ಅದು ಪ್ರೀತಿ ಅಂತಲೆ ಅರ್ಥ ಅಂತ ಅವನು ಹೇಳಿದ್ದ. ನಾನು ಅದೆ ಮೆಸೆಜ್ ಹೃದಯಕ್ಕೆ ಕಳುಹಿಸಿದ್ದೆ ಕಣೆ. ಈಗ ಮೋಸ ಮಾಡಬೇಡ" ಬೇಡಿಕೊಂಡಿದ್ದ. "ನೋಡು ಚಿಕ್ಕ ಇದು ಪರಸ್ಥಳ ಹುಡುಗಿಯರ ಹಾಸ್ಟೇಲು, ಸ್ವಲ್ಪ ಹೆಚ್ಚು ಕಮ್ಮಿಯಾದರೆ ಸುಮ್ಮನೆ ಹೆಸರು ಕೆಡುತ್ತೆ. ನಿನ್ನ ನಾನು ಯಾವ ಕೆಟ್ಟದೃಷ್ಟಿಯಿಂದ ನೋಡಿಲ್ಲ. ನಾನು ನಕ್ಕ ತಕ್ಷಣ ನೀನು ಅದನ್ನೆ ಪ್ರೀತಿ ಅಂದುಕೊಂಡರೆ ತಪ್ಪಲ್ವಾ, ನಿನಗೆ ತಂಗಿ ಇಲ್ಲಾ ಒಮ್ಮೆ ನನ್ನ ಜಾಗದಲ್ಲಿ ನಿಂತು ನೋಡು" ಒಳ್ಳೆ ಮಾತಿಂದಲೆ ಹೇಳೊ ಪ್ರಯತ್ನ ಮಾಡಿದ್ದಳು. ಚಿಕ್ಕಣ್ಣ ವಿಲಿವಿಲಿ ಒದ್ದಾಡಿ ಹೋಗಿದ್ದ. "ನೋಡು ಕೊನೆ ಸಲ ಹೇಳಾಕತ್ತೀನಿ. ನನಗ ಬೇಕು ಅಂದ್ರೆ ಬೇಕು. ಯಾರಿಗೂ ಹೆದರಬೇಡ. ನಿನ್ನ ಮನಸ್ಸಿನೊಳಗೆ ಏನೈತೊ ಅದನ್ನ ಬಿಡಿಸಿ ಹೇಳು. ಈ ಜಗತ್ತಿನಲ್ಲಿ ಯಾವನ್ನ ಬೇಕಾದರೂ ಬರಲಿ ಎದುರಿಸ್ತಿನಿ ಕಣೆ. ನೀನು ಮಾತ್ರ ಇಲ್ಲ ಅನ್ನಬೇಡ" ಮನಸ್ಸಿನ ವ್ಯಾಕುಲತೆಯನ್ನ ಅಭಿವ್ಯಕ್ತಗೊಳಿಸಿದ್ದ.

ಸಣ್ಣವಯಸ್ಸಿನ ಚಿಮ್ನಾಗೆ ಅದು ಅರ್ಥ ಆಗಲೇ ಇಲ್ಲ. ಜಾತಿ ಬೇರೆ ಬೇರೆ, ಅವರ ಕುಟುಂಬದಲ್ಲಿ ಇದಕ್ಕೆಲ್ಲಾ ಮಾನ್ಯತೆ ಇಲ್ಲ. ಅದು ಅಲ್ಲದೆ ಕಿಷ್ಣನಾಯ್ಕನನ್ನ ಇದೆ ವಿಷಯದ ಮೇಲೆ ಹೊಡದು ಬಡದು ತಾಂಡಕ್ಕೆ ವಿಷಯ ಗೊತ್ತಾಗಿದ್ದರಿಂದ ಅದರ ಗಂಭೀರತೆಯು ಅಷ್ಟೆ ಮುಖ್ಯವಾಗಿತ್ತು. "ನೋಡು ಚಿಕ್ಕಣ್ಣ, ವಯಸ್ಸಿನೊಳಗ ನೀ ದೊಡ್ಡವನು ನನ್ನ ಕುಟಾಗ ನೀನು ಹೇಳಿಸಿಕೊಳ್ಳಬಾರದು. ಸುಮ್ಮನೆ ಹೋಗು" ಹಾಸ್ಟೇಲಿನೊಳಗೆ ನಡೆದುಬಿಟ್ಟಳು.

ಅವತ್ತು ಸಂಜೆ ಚಿಕ್ಕಣ್ಣ ಒಬ್ಬನೆ ಭದ್ರಾನಾಯ್ಕನ ತಾಂಡದ ಕೆರೆ ಏರಿ ಮೇಲೆ ಹೋದ. ಸಂಜೆ ಸೂರ್ಯಾಸ್ತದ ಸಮಯ ಅವನ ಅಸ್ತಿತ್ವವೂ ಅವತ್ತೆ ಕೊನೆಗೊಳ್ಳುವ ಸಮಯ, ಒಮ್ಮೆ ಎಲ್ಲವನ್ನು ಹಿಂದೆ ಹೋಗಿ ನೋಡಿದ. ಚಿಮ್ನಾಳ ಮಾತು, ಅವಳ ಸಲುಗೆ, ಅವನ ಬಾಲ್ಯದ ಗೆಳೆಯರು, ಅವನ ತಾಯಿ, ತಂದೆ, ಕಿಷ್ಣನಾಯ್ಕ ಯಾರಿಂದಲೂ ತನಗೆ ಬದಕುವ ಭರವಸೆ ಸಿಗಲಿಲ್ಲ ತಂದ ವಿಷದ ಬಾಟಲನ್ನು ಬಿಚ್ಚಿಟ್ಟು ಸರಾಯಿ ಕುಡಿದು ಮದಲು ಮನಸ್ಥಿತಿಯನ್ನ ಗಟ್ಟಿಗೊಳಿಸವ ಪ್ರಯತ್ನ ಮಾಡಿದ. ಇಷ್ಟು ಬೇಗ ತನ್ನ ಕೊನೆ ಬಂದೀತು ಅಂದುಕೊಂಡಿರಲಿಲ್ಲ "ನಾನು ಸತ್ತಮೇಲೆ ಗೊತ್ತಾಗಲಿ ಅವಳಿಗೆ ನನ್ನ ಪ್ರೀತಿ" ಕುಡಿದು ಮಲಗಿದ. ಹತ್ತು ನಿಮಿಷ ಸಂಕಟ ತಳಮಳ ಜೀವ ಬಡದಾಡಕೊಂಡಿತ್ತು. ಚಿಕ್ಕಣ್ಣನ ತಂದೆ ತಾಯಿ ರಾತ್ರಿ ಏಳು ಗಂಟೆಗೆ ಮುದ್ದೆ ಉಣ್ಣೊ ಸಮಯ ಚಿಕ್ಕಣ್ಣನ ಅಣ್ಣ ಪಾಪುಗ, ತಮ್ಮ ಚಲುವನಿಗೆ ಹೇಳಿದರು "ಲೋ ಚಿಕ್ಕ ಎಲ್ಲಿ ಹೋದ?" ಯಾರೊ ದೂರದಿಂದ ಕೆರೆ ಏರಿ ಹಿಂದೆ ಹೆಣವಾಗಿರುವ ಚಿಕಣ್ಣನ ಮಾಹಿತಿ ಕೊಟ್ಟರು. ಇಡಿ ಮನೆ ಕಿಚೊ ಅನ್ನುವಂತೆ ಅಳುವಿನ ಆಕ್ರಂದನ, ಪೊಲೀಸು ಕೇಸು, ವಿಚಾರಣೆ, ಮಗ ಸತ್ತಿರುವುದಲ್ಲದೆ ನೂರೆಂಟು ಪ್ರಶ್ನೆ ಕೊಳ್ಳೆಯಂತೆ ರಕ್ತಹೀರುವ ಪೋಲಿಸರು ಸವಾಸವೆ ಬೇಡ ಅಂತ ತಾಂಡದ ಹಿರಿಕರೆ ದೇಹವನ್ನ ತಂದು ಹೂಣಿದರು.

ಚಿಮ್ನಾ ವಿಚಲಿತಳಾಗದೆ ಏನೂ ಆಗಿಲ್ಲ ಎನ್ನುವಂತೆ ತಾಂಡದ ತುಂಬ ಅಡ್ಡಾಡತೊಡಗಿದಳು. ಸತ್ಯ ಗೊತ್ತಿದ್ದವರು ಮಾತ್ರ "ಲೋ ನಡಿಯಲಾ ಇನ್ನೂ ಎಷ್ಟು ಹುಡುಗರ ಜೀವ ತಗಿಯಾಕ್ಕ ಬಂದಾಳೊ" ಅಂತ ಅವಳಿಗೆ ಕೇಳುವಂತೆ ಹೇಳಿದರು ಅವಳೇನು ಬದಲಾಗಲಿಲ್ಲ.

ಪ್ರಕರಣ ಮೂರು

ಅವನು ಕರಿಕೆಚ್ಚು ಕಂಡಂತೆ ಕಾಣುತ್ತಿದ್ದ. ಅಂತು ಮನೆತನ ಉದ್ದಾರ ಮಾಡುವುದಕ್ಕೆ ಹುಟ್ಟಿದ ಮಗ ಅಂತ ಮಂದಿ ತಾಂಡದಲ್ಲಿ ಮಾತಾಡಿಕೊಳ್ಳುತ್ತಿದ್ದರು. ದೊಡ್ಡವನು ಅರೆ ಪೆದ್ದ ಒಂದು ಹೇಳಿದರೆ ಇನ್ನೊಂದು ಮಾಡುತ್ತಿದ್ದ. ಹಾಗಾಗಿ ಕಾಶನಾಯ್ಕನ ತಂದೆ ಬಾಣಾನಾಯ್ಕ ಸಾಲದಲ್ಲಿಯೆ ಮುಳುಗಿ ಹೋಗಿದ್ದ. ತೋಪುನಾಯ್ಕನ

ಕಟ್ಟವೈರಿ ಬಾಣಾನಾಯ್ಕ ತೊಪುನಾಯ್ಕ ಗ್ರಾಮ ಪಂಚಾಯ್ತಿ ಚುನಾವಣೆಯಲ್ಲಿ ಸೋಲಿಸಲು ಪಣತೊಟ್ಟಿದ್ದ. "ನನ್ನ ವಿರೋಧಿ ನನ್ನ ಎದುರು ತಲೆ ಎತ್ತಬಾರದು ಎನ್ನುವುದೆ ನನ್ನ ಸಿದ್ಧಾಂತ" ಅವನು ಹೇಳಿದ್ದಕ್ಕೆಲ್ಲಾ ಹೂಂಗುಟ್ಟುವ ಗುಂಪಿನಲ್ಲಿ ಈ ಮಾತುಗಳನ್ನು ಆಡಿದ್ದ. ತಾಂಡದಲ್ಲಿ ಯಾರೆ ಕೇಳಿದರೂ ಒಬ್ಬನೆ ಬಾಣಾನಾಯ್ಕನ ಹೆಸರು ಹೇಳಬೇಕು. ಯಾರೆ ಬರಲಿ ಮೊದಲು ಬಾಣಾನಾಯ್ಕನ ಕರೀರಿ ಅಂತ ಹೇಳಬೇಕು ಹಾಗೆ ತನ್ನ ಖ್ಯಾತಿ ಬೆಳೆಯಬೇಕು ಎನ್ನುವುದು ಅವನ ಇರಾದೆಯಾಗಿತ್ತು. ಆದರೆ ಸ್ಥಿತಿ ಉಲ್ಟಾ ಆಗಿಹೋಗಿತ್ತು. ಅದೇ ಬೇಸರದಲ್ಲಿ ಕುಡಿಯಲು ಆರಂಭಿಸಿದ್ದ. ಐದುಮಂದಿ ಗಂಡು ಮಕ್ಕಳು "ನೋಡ್ರಲೇ ಆ ತೊಪುನಾಯ್ಕನ ಮಗ ಹುಲಿಯೂರ ಧಾರವಾಡಕ್ಕ ಹೋಗಿ ಓದುತ್ತಿದ್ದಾನೆ ಬರಿ ಕೂಳು ಕತ್ತಿರಿಸುವುದೆ ಆಯ್ತು ನಿಮ್ಮದು." ಪ್ರತಿದಿನ ಅವನ ಉದಾಹರಣೆ ಕೊಡುವುದೆ ಆಗಿತ್ತು. ಈ ಎಲ್ಲಾ ಸಮಸ್ಯೆಗಳ ಪರಿಹಾರ ಸರಾಯಿಯಲ್ಲಿದೆ ಎಂಬುದನ್ನ ಕಂಡುಕೊಂಡಿದ್ದ ಬಾಣಾನಾಯ್ಕ. ದುಡಿಯುವವರು ಕಡಿಮೆ, ಖರ್ಚು ಹೆಚ್ಚು ಹೊಲಗಳಲ್ಲಿ ಬೆಳೆನೂ ಅಷ್ಟಕಷ್ಟೆ. ಸಿಕ್ಕಲ್ಲಿ ಕೈಗಡಾ–ಕಟ್ಟಗಡಾ ಅಂತ ತಗದ ಸಾಲ ಅಲ್ಲದೆ ಎಲ್ಲಿ ಸಿಗುತ್ತೆ ಯಾರು ಕೊಡ್ತಾರ ಅವರ ಹತ್ತಿರ ಎತ್ತಿ ಎತ್ತಿ ಸಾಲದಲ್ಲಿಯೆ ಮುಳುಗಿ ಹೋಗಿದ್ದ. "ಇರ್ಲಿ ನಾಳೆ ಮಕ್ಕಳು ಓದಿ ಉದ್ಯೋಗ ಮಾಡ್ತು ಅಂದ್ರೆ ಒಂದೆರಡು ತಿಂಗಳ ಸಂಬಳ" ಹೇಳ್ಕೊಂತ ತಿರುಗಾಡಿದ್ದ. ಮೊದಲನೇಯವನು ಕಮ್ಮಿ ತಿಳುವಳಿಕೆಯವನು ಸಾಲಿನೂ ಸರಿಗೆ ಕಲಿಯಲಿಲ್ಲಾ ಅರ್ಧಕ್ಕೆ ಬಿಟ್ಟ ವ್ಯವಸಾಯವೆ ತನ್ನ ವೃತ್ತಿ ಅಂದುಕೊಂಡು ದಿನದ ಹೆಚ್ಚು ಸಮಯ ಹೊಲದಲ್ಲಿ ಕಳೆದರು ಬೆಳೆ ಸರಿಯಾಗಿ ಬರದಾಗಿತ್ತು.

ಕಾಶ ನಾಯ್ಕಗೆ ತಿಳುವಳಿಕೆ ಬಂದಾಗ ಎಲ್ಲರನ್ನೂ ಸೇರಿಸಿ ದುಡಿಮೆಗೆ ತಂದಿದ್ದ. ಎರಡುವರ್ಷ ಬೆಳೆ ಏನೂ ಪರವಾಗಿಲ್ಲ ಬಾಣಾನಾಯ್ಕ ಎಲ್ಲರ ಬಡ್ಡಿಯನ್ನ ಚೂರು ಪಾರು ತೀರಿಸಿದ. ಯಾವಾಗ ಕಾಶನಿಗೆ ಅವರ ಒಣಿಯಲ್ಲಿದ್ದ ಹತ್ತನೇಯ ತರಗತಿಯ ಊರ್ಮನಿಯ ಹುಡುಗಿ ಬಿಕ್ಕಮ್ಮನ ಜೊತೆಗೆ ಲವ್ ಆಗಿತ್ತೊ ಗೊತ್ತೆ ಆಗಲಿಲ್ಲ. ಬಿಕ್ಕಮ್ಮ, ರುದ್ರಮ್ಮ ತಾಯಿ ಇಲ್ಲದ ತಬ್ಬಲಿ ಮಕ್ಕಳು. ಚಿಕ್ಕವಳು ಓದಿನಲ್ಲಿ ಆಸಕ್ತಿ ತೋರದೆ ಕೂಲಿ ಮಾಡತೊಡಗಿದಳು, ಅವರು ಹುಟ್ಟಿದ್ದು ಬೇರೆ ಯಾವುದೊ ಊರಾದರೂ ತಿಳುವಳಿಕೆ ಬಂದಿದ್ದು ಭದ್ರಾನಾಯ್ಕನ ತಾಂಡದಲ್ಲಿ. ಬಿಕ್ಕಮ್ಮ ಓದಿನಲ್ಲಿ ಅಂತ ಹೇಳಿಕೊಳ್ಳುವ ಬುದ್ಧಿವಂತೆ ಅಲ್ಲದಿದ್ದರು ಅವಳ ತಂದೆ ಮತ್ತೊಬ್ಬಳನ್ನ ಮದುವೆಯಾಗಿ ಅವಳ ಹಿಂಸೆ ನೋವು ತಡಿಯಲು ಆಗದೆ ಅಜ್ಜನ ಮನೆಗೆ ಬಂದಿದ್ದು ನೆನಪು ಮಾಡಿಕೊಂಡವಳೆ ಜೀವನದಲ್ಲಿ ಏನನ್ನಾದರೂ ಸಾಧಿಸಲೇಬೇಕು ಎನ್ನುವ ಹಠದಿಂದ ಓದಿನ ಕಡೆ ಗಮನ ಹರಿಸಿದ್ದಳು. ಅವಳ ಕ್ಲಾಸ್‌ಮೆಟ್ ಕಾಶನೂವೆ ಅವಳಂತೆ ದಡ್ಡನಾದರೂ ಕಾಪಿ ಹೊಡೆದು ಮೆಟ್ರಿಕ್ ಪಾಸು ಮಾಡಿದ್ದ. ಅವನ ಸ್ನೇಹಿತ ರತ್ನಾನಾಯ್ಕನೂ ಅದೇ ವರ್ಷ ಮೆಟ್ರಿಕ್ ಮುಗಿಸಿದ್ದ. ಎಲ್ಲರೂ ಒಟ್ಟೊಟ್ಟಿಗೆ

ಕಾಲೇಜಿಗೆ ಸೇರಿಕೊಂಡಿದ್ದರು. ತಾಂಡದಲ್ಲಿ ನಡೆದ ಎರಡು ಮೂರು ಘಟನೆಗಳನ್ನು ಕಂಡರು ಕಾಶ ಬಿಕ್ಕಮ್ಮನನ್ನ ಬಹಳ ಹಚ್ಕೊಂಡಿದ್ದ. ಪ್ರತಿದಿನ ಅವಳನ್ನ ನೋಡದೆ ಮಾತಾಡಿಸದಿದ್ದರೆ ಅವನಿಗೆ ನೆಮ್ಮದಿಗೆ ಸಿಗುತ್ತಿರಲಿಲ್ಲ. ಎಷ್ಟೊ ಸಲ ಒತ್ತಡ ಹೇರಿದ್ದ. "ಅಲ್ಲೆ ನಾನು ಎಷ್ಟಸಲ ಹೇಳಬೇಕು ನಿನಗೆ, ಮುಚ್ಕೊಂಡು ಐ ಲವ್ ಯು ಹೇಳು" ಅಂದಿದ್ದ. "ಅದನ್ನ ಒಂದು ಬಿಟ್ಟ ಬೇರೆ ಬೇಕಾದ್ದು ಹೇಳು" ಖಡಾಖಂಡಿತವಾಗಿಯೆ ನಿರಾಕರಿಸಿದ್ದಳು. ಬಿಕ್ಕಮ್ಮ ದೃಢ ನಿರ್ಧಾರ ಮಾಡಿದ್ದಳು ಜೀವನದಲ್ಲಿ ಏನಾದರೂ ಸಾಧನೆ ಮಾಡಬೇಕು ಅಂತ. ಆದರೆ ಅನಾಥ ಮಗು, ಹೇಳುವರು ಕೇಳುವರು ಯಾರು ಇಲ್ಲಂತ ಅವಳು ಒಂಬತ್ತನೆ ತರಗತಿಯಲ್ಲಿರುವಾಗಲೆ ಬರುಕಾನ ಹಳ್ಳಿಯಲ್ಲಿ ಸರ್ಕಾರಿ ಕಛೇರಿಯೊಂದರಲ್ಲಿ ಅಟೆಂಡರ್ ಆಗಿದ್ದ ಊರ್ಮನಿ ಹುಡುಗ, ಹುಡುಗ ಅಂದ್ರೆ ಹುಡುಗ ಅಲ್ಲ ಮದುವೆಯಾಗಿ ಹೆಂಡತಿ ಮೂರನೆ ಹುಡುಗಿಯ ಜನಂಕಾಲಕ್ಕೆ ಹೋದ ಸಂದರ್ಭ. ಹಾಸ್ಟೇಲಿಗೆ ಹೊರಟಿದ್ದ ಬಿಕ್ಕಮ್ಮಳನ್ನ ಕಂಡು "ಏಯ್ ಹುಡುಗಿ, ಬಿಕ್ಕಮ್ಮ" ಅಂತ ಕೂಗಿದ. ಊರ್ನವನು, ಯಾಕೊ ಕರಿತಾನ ಅಂತ ನಿಂತು "ಏನು ಮಾಮ ಅರಾಮದಿಯ" ಅಂದಳು. ತಾಂಡದಲ್ಲಿ ಯಾವ ಜಾತಿ, ಯಾವ ಕುಲ ಅನ್ನದೆ, ಯಾರೊ ಚಿಗಪ್ಪ, ಯಾರೊ ಸಣಪ್ಪ, ಯಾರೊ ದೊಡ್ಡಪ್ಪ, ಇನ್ಯಾರೊ ಮಾವ, ಅರಿಗೆ ಸಂಬಂಧ ಜೋಡಿಸಿಕೊಂಡಿದ್ದರು. "ಏನೂ ಇಲ್ಲ, ನೀನು ಬರುಕಾನ ಹಳ್ಳಿ ಹಾಸ್ಟಲಲ್ಲಿ ಓದಾಕತ್ತಿ, ಒಂದ ಸಲಾನು ಮನೆಗೆ ಬಂದಿಲ್ಲಾ. ಹತ್ತು ಸೈಕಲ್ಲು ಮನೆಗೆ ಹೋಗುವ" ಕೈ ಹಿಡಿದು ಹತ್ತಿಸಲು ಪ್ರಯತ್ನಿಸಿದ. ಬಿಕ್ಕಮ್ಮಗೆ ಏಕಾಏಕಿ ಅವನ ಆಹ್ವಾನ, ಕೈ ಹಿಡಿದು ತುಂಬಿದ ಬಜಾರಿನಲ್ಲಿ ಎಳಿಯುವುದು ಯಾಕೊ ಸರಿಕಾಣಲಿಲ್ಲಾ, ಯಾಕೊ ಪರಿಸ್ಥಿತಿ ಎಡವಟ್ಟ ಕಾಣಿಸ್ತಿದೆ ಅಂದಾಕಿನೆ "ಆಯ್ತು ನಡಿಯಪ್ಪ, ಅಕ್ಕನ್ನು ಮಾತಾಡಿಸಿಲ್ಲ, ಮಾತಾಡಿಸಿದಂಗೂ ಆಗುತ್ತೆ" ಒಂದೇ ಮನಸ್ಸಿನಿಂದ ಸೈಕಲ್ ಹತ್ತಿದ್ದಳು. ಸುಣಗಾರ ಓಣಿ ದಾಟಿ, ಕುರುಬರ ಓಣಿ ಸಂದಿಯೊಳಗಿಂದ ಕೆ.ಇ.ಬಿ. ಕಡೆಗೆ ಹೋದರೆ ನಾಕನೆ ಮನೆಯೊಗೆ ಬಾಡಿಗೆ ಇದ್ದ ಅಟೆಂಡರ್ ಛತ್ರಪ್ಪ. ಆಫೀಸಿಂದ ಹೊರಟಾಗಲೆ ಅವತ್ತು ಸಿಕ್ಕಿದ್ದ ಲಂಚದ ಕಾಸಿನಲ್ಲಿ ಎರಡು ಸರಾಯಿ ಪಾಕೇಟುಗಳನ್ನು ಕತತರಿಸಿ ಗಟಗಟಾಂತ ಕುಡಿದು ಬಂದಿದ್ದ. "ಹೆಂಗೂ ಹೆಂಡತಿ ಇಲ್ಲ, ಮೈ ಕೈ ತುಂಬಿಕೊಂಡಿರುವ ಬಿಕ್ಕಮ್ಮನ ಜೊತೆ ಸರಸ ಆಡಿದರೆ" ಮನಸ್ಸಿನೊಳಗೆ ಮಂಡಿಗೆ ತಿನ್ನುತ್ತ ಬರುತ್ತಿದ್ದ. ಬಿಕ್ಕಮ್ಮಗೆ ಯಾಕೊ ಗಾಬರಿ, ಆತಂಕ ಆಗಿತ್ತು. "ಊರಿನವನು ಅದು ಅಲ್ಲದೆ ಮನೆಯೊಳಗೆ ಹೆಂಡತಿ ಮಕ್ಕಳು ಇರ್ತಾರ ಹೆದರೊದು ಏನಿದೆ" ಮನಸ್ಸಿನೊಳಗೆ ಹೇಳಿಕೊಂಡು ಮನಸ್ಸನ್ನು ಗಟ್ಟಿಮಾಡಿಕೊಳ್ಳುವ ಪ್ರಯತ್ನ ಮಾಡಿದಳು.

ಛತ್ರಪ್ಪ ಸೈಕಲ್ ಇಳಿದು "ಬಾ ಸೊಸೆ" ಅಂದವನೆ ಬೀಗದ ಕೈ ಯಾವಾಗ ಹುಡುಕಾಡತೊಡಗಿದನೊ "ಅಕ್ಕ ಇಲ್ವಾ" ಕೇಳಿದಳು ಬಿಕ್ಕಮ್ಮ. "ಆಂ" ಅಂದವನೆ

ಚಾವಿ ತಗದು ಒಳಗೆ ಸೇರಿದ್ದ. "ಬಾ ಒಳಗೆ ಬಾ" ಒತ್ತಾಯ ಮಾಡಿದ. ಗಟ್ಟಿ ಇರಾದೆಯಿಂದಲೆ ಅಂಜುತ್ತಾ ಒಳಗೆ ನಡೆದಳು ಬಿಕ್ಕಮ್ಮ. ಅವಳ ಪಕ್ಕ ಬಂದವನೆ "ಕೂಡು ಯಾಕೆ ಗಾಬರಿ ಆಗಿಯ" ಮೈ ಮುಟ್ಟಿದ. ಬಿಕ್ಕಮ್ಮಗೆ ಹೆದರಿಕೆಯಾಗಿ ಎದೆ ಡವಡವ ಅಂತ ಹೊಡೆದುಕೊಳ್ಳತೊಡಗಿತು. ಕಾಶನಾಯ್ಕ ಇದ್ದಿದ್ದರೆ? ಅನಿಸಿತು. ಕುಳಿತಂತೆ ನಾಟಕ ಮಾಡಿದಳು. ಅವನು ಏನಕ್ಕೊ ಒಳಗೆ ಹೋದ. "ಮಾವ ನಾ ಮತ್ತೊಮ್ಮೆ ಬರ್ತಿನಿ" ಅಂದಾಕಿನೆ ಹಿಂದೆ ನೋಡದಂತೆ ಓಡಿದಳು. ಹಾಸ್ಟಲಿಗೆ ಬಂದಾಗ ಎದೆಯೊಳಗೆ ಉರಿಯತೊಡಗಿತ್ತು. "ಏನೇ ಆಗಲಿ ರಾಕ್ಷಸನ ಕೈಯಿಂದ ಬಚಾವಾದೆ, ಹನುಮಪ್ಪ ದೊಡ್ಡೋನು ತಂದೆ ನನ್ನ ಕಾಪಾಡಿದೆ" ಅಂದುಕೊಂಡು ಘಟನೆಯನ್ನು ಯಾರಿಗೂ ಹೇಳದಂತೆ ಮೌನ ವಹಿಸಿದ್ದಳು. ಅದಾಗಿ ಬರೊಬರಿ ವರ್ಷಕ್ಕೆ ಕಾಶನ ಕಾಟ ಸುರು ಆಗಿತ್ತು. ಬಿಕ್ಕಮ್ಮಗೆ ಆ ಘಟನೆಯ ನಂತರದಿಂದ ಗಂಡಸರು ಅಂದರೆ ಅಲರ್ಜಿ ಸುರು ಆಗಿತ್ತು. ಅದೊಂದೆ ಅಲ್ಲ ಅವಳ ತಾಯಿ ತೀರಿಕೊಂಡನಂತರ ಅಪ್ಪ ಎನ್ನುವ ಜೀವಿ ಹೌದು ಮಗಳು ಅದಾಳ, ಅವಳ ಕಷ್ಟ ಏನು, ಸುಖ ಏನು ಅಂತ ಯಾವತ್ತು ಬಂದು ವಿಚಾರಿಸಲಿಲ್ಲಾ. "ಥತ್, ಈ ಗಂಡಸು ಎನ್ನುವ ಸ್ವಾರ್ಥಿ, ಮೋಸಗಾರ, ನಯವಂಚಕರು ಎನ್ನುವ ಪ್ರತಿಬಿಂಬ ಅವಳ ತಲೆಯೊಳಗೆ ಫಿಕ್ಸ್ ಆಗಿತ್ತು. ಹಾಗಾಗಿಯೆ ಕಾಶನಾಯ್ಕ ಎಷ್ಟೆ ಪ್ರಯತ್ನ ಪಟ್ಟು ಅವಳ ಎದೆಯೊಳಗೆ ಪ್ರವೇಶ ಪಡೆಯಬೇಕೆಂದರೆ ಸಾಧ್ಯವಾಗದಾಗಿತ್ತು. ಚಿಕ್ಕಣ್ಣನ ಆತ್ಮಹತ್ಯೆಯ ನಂತರ ರತ್ನಾನಾಯ್ಕ ಕಾಶನಾಯ್ಕ ಸಹವಾಸದಲ್ಲಿದ್ದ. ಇಬ್ಬರು ಒಂದೆ ಕೊಠಡಿಯಲ್ಲಿ ಅಭ್ಯಾಸ ಮಾಡುತ್ತಿದ್ದರು. ಕಾಶ ಆಗಾಗ ಬಿಕ್ಕಮ್ಮನ ಬಗ್ಗೆ ಹೇಳುತ್ತಿದ್ದ. "ಲೇ ರತ್ನ ಏನು ಮಾಡಲಿ, ಬಿಕ್ಕಮ್ಮ ನನ್ನ ಪ್ರೀತಿಯನ್ನ ಸ್ವೀಕರಿಸುತ್ತಿಲ್ಲ ದಯವಿಟ್ಟು ಏನಾದರು ದಾರಿ ತೋರಿಸು" ಗೊಗರೆದಿದ್ದ. "ಲೇ ಕಾಶ ಈ ವಿಷಯ ಬಹಳ ಸೂಕ್ಷ್ಮ, ಆದಷ್ಟು ಬೇಗನೆ ಬಗೆರಿಸಿಕೊಂಡು ಬದುಕೋದನ್ನ ಕಲಿ" ಬುದ್ಧಿ ಹೇಳಿನೋಡಿದ. "ಇಲ್ಲಲೆ ಅಕೀನ ಮರಿಯಾಕ ಆಗ್ತಿಲ್ಲ, ಅಕಿ ಸಿಗದಿದ್ದರೆ ಖಂಡಿತ ನಾ ಬದಕಲ್ಲ" ಅಂದ. "ಲೇ ಹುಚ್ಚ ನನಮಗನೆ, ಮೂರ ದಿನದ ಹಿಂದೆ ಕಂಡವಳು ಅದೆಂಗೆ ನಿನ್ನ ಮೆದಳು, ಹೃದಯವನ್ನ ಆವರಿಸಿದಳು? ನಿನ್ನ ಹೆತ್ತು ಹೊತ್ತು ಸಾಕಿದ ತಾಯಿ, ತಂದೆ, ಅಣ್ಣಂದಿರು, ತಂಗಿಯರು, ಅಕ್ಕ ಒಮ್ಮೆ ಆಲೋಚಿಸು, ಅವರೆಲ್ಲರ ಪ್ರೀತಿ, ಮಮತೆಯ ಮುಂದೆ ಬಿಕ್ಕಮ್ಮನ ಸಿಗದ ಪ್ರೀತಿ ಏನು ಮಹಾ. ಸುಮ್ಮನೆ ಇಲ್ಲದ ವಿಚಾರ ತಲೆಗೆ ಹಚ್ಕೊಬೇಡಾ. ಅವಳಲ್ಲಾಂದ್ರೆ ಜಗತ್ತೇನು ಮುಳಗಲ್ಲ. ಅಂತಹವರು ನೂರೆಂಟು ಮಂದಿ ಅದಾರ ಹೋಗ ನಿನ್ನ" ಅವನ ಮನಸ್ಸಿನಿಂದ ಆ ಹುಡುಗಿಯನ್ನ ತೆಗೆಯುವ ಮತ್ತು ಬೇರೆಯವರು ಸಿಗುತ್ತಾರೆ ಎನ್ನುವ ಭರವಸೆ ಉಂಟುಮಾಡಲು ನೋಡಿದ. "ಇಲ್ಲಪ್ಪ ನನ್ನ ಮನಸ್ಸಿನ ತುಂಬ, ಹೃದಯ ತುಂಬ, ಮೆದುಳಿನ ತುಂಬ ಅವಳೆ ತುಂಬಿದ್ದಾಳೆ. ಅವಳನ್ನ ಮರೆಯುವುದು ಅಸಾಧ್ಯದಮಾತು" ಅವನ ಮನಸ್ಥಿತಿ ಹೇಳಿಕೊಂಡಿದ್ದ.

ಕಾಶ ನಾಯ್ಕ ಬಿಕ್ಕಮ್ಮಳನ್ನ ಒಪ್ಪಿಸುವ ಪ್ರಯತ್ನದಲ್ಲಿ ನಪಾಸಾಗಿದ್ದ. ಹಠಮಾರಿ ಹುಡುಗಿ ಸಾಧನೆಯ ನೆಪದಲ್ಲಿ ನಿಜವಾದ ಪ್ರೀತಿಯ ಕೊಲೆ ಮಾಡಿದ್ದಳು. ಅವಳದು ಅದೇನು ಮಜಬೂರಿ ಇತ್ತೊ ಏನೊ ಕಾಶನನ್ನು ಹತ್ತಿರ ತಗೊಳೊ ಗೋಜಿಗೆ ಹೋಗಲಿಲ್ಲ. "ನೋಡು ನೀನು ಪದೆ ಪದೆ ಹಿಂಗ ನಿರಾಕರಿಸಿದರೆ ನಾನು ಸಾಯ್ತಿನಿ" ಭಾವನಾತ್ಮಕವಾಗಿ ಹೆದರಿಸುವ ಪ್ರಯತ್ನ ಮಾಡಿದ್ದ. "ಸಾಯಿ" ಅಂದಳು. "ನಿನ್ನ ಕೊನೆ ಮಾತ" ಮತ್ತೊಮೆ ಕೇಳಿದ. "ಹೌದು" ಅಂದಳು. "ನೋಡೆ ನಾನು ಸುಳ್ಳ ಹೇಳುವುದಿಲ್ಲ ಯೋಚನೆ ಮಾಡಿ ಹೇಳು" ಮತ್ತೊಂದು ಅವಕಾಶ ಕೊಟ್ಟ. ಹೃದಯವನ್ನ ಕಲ್ಲು ಮಾಡಿಕೊಂಡಿದ್ದ ಬಿಕ್ಕಮ್ಮ "ನೀನು ನೂರ ಸಲ ಕೇಳಿದರು ನನ್ನ ಉತ್ತರ ಒಂದೇ ನೀ ಏನು ಬೇಕಾದರು ಮಾಡಿಕೊ" ಮನಸ್ಸು ಬದಲಿಸಲಿಲ್ಲಾ. "ನಾಳೆ ನನ್ನ ಮಣ್ಣಿಗೆ ಬಾ" ಅಂದವನೆ ಭರಭರನೆ ಹೊರಟಿದ್ದ. ಅವನು ಹೊರಟಿದ್ದ ರೀತಿ ನೋಡಿದರೆ ಸಾಯುವುದು ದಿಟವಾಗಿತ್ತು. ಬಿಕ್ಕಮ್ಮ ಮನಸ್ಸು ಮಾಡಿದ್ದರೆ ಒಂದು ಜೀವ ಉಳಿಸಬಹುದಾಗಿತ್ತು. ಅವನು ಸತ್ರೆಷ್ಟು, ಬಿಟ್ಟರೆಷ್ಟು ಅಂದುಕೊಂಡಳು.

ಅವನು ಔಷಧಿ ಅಂಗಡಿಯಲ್ಲಿ ಜೊಳಕ್ಕೆ ಹಾಕುವ ಗುಳಿಗೆಯನ್ನು ಖರೀದಿಸಿದ. ಅವನ ಮನಸ್ಸು ಖಾಲಿಯಾಗಿತ್ತು. ಇಡೀ ಭವಿಷ್ಯವೆ ಕತ್ತಲೆಯಾದಂತೆ. ಹುಚ್ಚು ಹುಡುಗ ಎಲ್ಲಾ ಸಂಬಂಧಗಳನ್ನು ಮೀರಿ, ಇಲ್ಲ ಎಂದ ಸಂಬಂಧದ ಸಲುವಾಗಿ ಸಾಯಲು ಸಿದ್ಧವಾಗಿದ್ದ. "ಅವಳು ಮೊದಲಿನಿಂದಲೂ ನಿರಾಕರಣೆ ಮಾಡುತ್ತಲೇ ಬಂದಿದ್ದಳು. ಅಂದಮೇಲೆ ಅವಳಮೇಲೆ ಇಷ್ಟೊಂದು ವ್ಯಾಮೋಹ ಬೇಕಿತ್ತ. ಒಳಗಿನ ತಾಕಲಾಟ ಹೆಚ್ಚಾಗಿತ್ತು. ಒಂದೇ ಮಾತು 'ಸಾಯಿ' ಅಂದಳಲ್ಲಾ, ಹಾಗಾದರೆ ಅವಳಿಗೆ ನನ್ನ ಮೇಲೆ ಪ್ರೀತಿ ಇಲ್ವಾ?" ದೊಡ್ಡ ಪ್ರಶ್ನೆ ಎದುರಾಗಿತ್ತು. "ಥತ್ ನನ ಮ್ಗನ ಜೀವನ ಯಾರಿಗಾಗಿ ಬದುಕಬೇಕು? ಎಷ್ಟೊ ವರ್ಷಗಳಿಂದ ಬಡ್ಕೊಳಾಕ ಹತ್ತೀನಿ ಬಿಕ್ಕಮ್ಮ ಅಂತ. ಇನ್ನೂ ಅವಳಿಗೆ ನನ್ನ ಪ್ರೀತಿನೆ ಅರ್ಥವಾಗಿಲ್ಲ ಅಂದ್ರೆ ಹೇಗೆ? ಹೊಲಕ್ಕೆ ನನ್ನ ಹಿಂದೆ ಬಂದದ್ದು ಏನು? ಚಿಕ್ಕವಳಿರುವಾಗ ನನ್ನ ಜೊತೆಗೆ ಇರುತಿದದ್ದ ಯಾಕೆ?" ಹಳೆಯ ನೆನಪುಗಳು ಒಮ್ಮೆಲೆ ಒಳನುಗ್ಗಿದವು. "ಆಯ್ತು ನೀನು ಸುಖವಾಗಿರು" ಅಂದವನೆ ಗುಳಿಗೆ ನುಂಗಿದ ಮೇಲೆ ಹೊಟ್ಟೆಯೊಳಗೆ ಸಂಕಟ ಹೆಚ್ಚಾಗಿ ಒದ್ದಾಡತೊಡಗಿದ. "ಗೆಳೆಯ ರತ್ನಾನಾಯ್ಕ ಒಮ್ಮೆ ನೀನು ಸಿಕ್ಕಿದ್ದರೆ?" ಅಂದುಕೊಳ್ಳುತ್ತಲೆ ಜೀವ ಬಿಟ್ಟಿದ್ದ.

* * *

81. ಅಪಘಾತ

ಭದ್ರಾನಾಯ್ಕನ ತಾಂಡದಲ್ಲಿ ಹೊಸ ಯುಗದ ಅಘಾತಗಳು ಬಹಳ ಕಡಿಮೆ. ಇರುವ ಅರುವತ್ತು ಎಪ್ಪತ್ತು ಮನಿಗಳು ಹುಲಿಯೂರ ಓದಿ, ಬೆಳದು ದೊಡ್ಡವನಾಗಿ ಮದುವೆಯೂ ಆಗಿ ಅವನಿಗೆ ಮಕ್ಕಳು ಅವು ಯೌವ್ವನಕ್ಕೆ ಬಂದಾಗ ಅವನ ಕೂಡು ಕುಟುಂಬ ಯಾವಾಗಲೋ ಬೇರೆಯಾಗಿ ಅವನ ಒಂದೆ ಮನೆಯಿಂದ ಹತ್ತಿಪ್ಪತ್ತು ಮನೆಗಳಾಗಿದ್ದವು. ಹಾಗೆ ತಾಂಡದಲ್ಲಿ ಇಬ್ಬಿಬ್ಬರು ಮೂವರು, ನಾಲ್ಕುಜನ ಸರ್ವೆಸಮಾನ್ಯವಾಗಿತ್ತು. ಅವರಿಗೆ ಒಂದೊಂದಾದರೂ ಮನೆ ಬೇಡವೆ ಹೀಗೆ ತಾಂಡದ ಹಿಂದೆ ಮುಂದೆ ಜಾಗವೆ ಉಳಿಯದೆ ಲಂಭಾಣಿವೆ ಹೆಚ್ಚು ಕಡಿಮೆ ಇನ್ನೂರೈವತ್ತು ಮನೆಗಳಾಗಿದ್ದವು. ಕಾಲ ಬದಲಾದಂತೆ ಮಂದಿ ಆಚಾರ ವಿಚಾರಗಳು, ಆಲೋಚನೆಗಳು ಬದಲಾಗತೊಡಗಿದವು. ಆಧುನಿಕ ಜಗತ್ತಿನ ಅಭಿವೃದ್ಧಿ ರೈತ, ಕೂಲಿ ಯಾರನ್ನು ಬಿಡಲಿಲ್ಲಾ. ಹಳೆ ಪದ್ಧತಿಯ ಬಾವಿಗಳು, ಮೆಟ್ಟಿಲ ಬಾವಿಗಳು ಮಾಯವಾಗಿದ್ದವು. ನೂರಡಿ ಅಂತರದಲ್ಲಿ ಒಂದೊಂದು ಕೊಳವೆ ಬಾವಿ. ನಾಕು ಇಂಚು, ಮೂರು ಇಂಚು ನೀರು ಬಿದ್ದರೆ ಐದಾರು ಎಕ್ಕರೆ ಜಮೀನಿನಲ್ಲಿ ಬೆಕ್ಕಾದ್ದು ಬೆಳೆಯಬಹುದಾಗಿತ್ತು. ತಾಂಡದಲ್ಲಿ ಮೊಟ್ಟ ಮೊದಲ ಕೊಳವೆ ಬಾವಿ ತೊಪು ನಾಯ್ಕನದ್ದೆ ಆಗಿತ್ತು. ಅದಾಗಿ ಹತ್ತು ವರ್ಷಗಳಾದ ಮೇಲೆ ಬೇರೆ ಬೇರೆಯವರು ತಮ್ಮ ಆರ್ಥಿಕ ಸ್ಥಿತಿಯನ್ನ ನೋಡಿಕೊಂಡು ಕೊಳವೆ ಬಾವಿಗಳನ್ನ ತೋಡಿಸಿದ್ದರು. ಕೆಲವೆ ಗಂಟೆಗಳಲ್ಲಿ ನೆಲ ಬಗೆದು ನೀರು ಹೊರಹಾಕುವ ಯಂತ್ರಗಳು ಬಂದಿದ್ದವು. ಹೀಗಾಗಿ ಇದ್ದವರು, ಇಲ್ಲದವರು ಕೊಳವೆ ಬಾವಿಗಳನ್ನ ಕೊರೆಸಿಕೊಂಡಿದ್ದರು. ಕೆಲವು ನೀರಿಲ್ಲದೆ ಒಣನೆಲ ಗೆಬರಿ ತೆಗದರು ನೀರು ಬಿಳದೆ ಕಂಗಾಲಾಗಿದ್ದರು.

ಅದ್ಯಾವಾಗಲೊ ಬಾಲಬಸವ ತ್ರಿಕಾಲಜ್ಞಾನಿಯೊಬ್ಬ ಕೂಲಿ ಮಾಡುವ ಕುದುರೆ ಹತ್ತಿದ ಹೊಲಮಾಡುವವ ನೆಲಕಚ್ಚಿದ ಅಂದುಹೋಗಿದ್ದ. ಅದು ಹಾಗೆ ಆಗಿತ್ತು. ಹುಲಿಯೂರನ ಹತ್ತುಮಂದಿ ಸಹೋದರರು ಕಿತ್ತಾಡಿ ತಂದೆ ತಾಯಿಗಳ ಮೇಲೆ ಕೈಮಾಡಿ ಅರಗಾಗಿದ್ದರು. ಜಾತು, ದೇವ್ಲ, ದಮ್ಮೂರ, ಧಣಿಯ, ದಮ್ಮಡಿನಾಯ್ಕ,

ಹುಲಿಯೂರ, ಜಗನ, ಖೀರ್‍ಯ, ಕಮಡಿನಾಯ್ಕ ಮದುವೆಯಾಗಿ ಅವರ ಮಕ್ಕಳು ತಿರುಗಿ ಮದುವೆಯಾಗಿದ್ದರು. ಅವರವರ ದುಡಿಮೆ, ಅವರ ದೌಲತ್ತು. ಪ್ರತಿಯೊಬ್ಬರು ಹಂಚಿನ ಮನೆಗಳನ್ನ ಕಟ್ಟಿಕೊಂಡು ಅವರ ಮಕ್ಕಳು ಮದುವೆಯಾದ ಮೇಲೆ ಯಾರು ಒಟ್ಟಿಗೆ ಉಳಿಯದೆ ಅವರ ಮನೆಗಳನ್ನ ಮಾಡಿಕೊಂಡಿದ್ದರು. ಹುಲಿಯೂರ ಮತ್ತು ಅವನ ತಮ್ಮಂದಿರ ಮಕ್ಕಳು ಚಿಕ್ಕವರಾಗಿದ್ದರು ಮದಲಿನವರಾದ ಜಾತು, ದೇವ್ಲ ದಮ್ಲೂರ, ಧಣಿಯಾ ಅವರ ಮಕ್ಕಳ ಮಕ್ಕಳು ಮದುವೆ ವಯಸ್ಸಿಗೆ ಬಂದಿದ್ದರು. ಕೆಲವರ ಮದುವೆಯೂ ಆಗಿತ್ತು. ಅಷ್ಟೊತ್ತಿಗಾಗಲೆ ಹೊಸ ವೈಜ್ಞಾನಿಕ ಆವಿಷ್ಕಾರಗಳಾದ ಟಿ.ವಿ. ತಾಂಡ ಸೇರಿದ್ದವು. ರೇಡಿಯೊ ಕೇಳಾಕ ಆಗದ ತಾಂಡದಲ್ಲಿ ಮನೆಗೊಂದು ಚಿಕ್ಕ ಬಣ್ಣದ ಟಿ.ವಿ. ಅದಕ್ಕೆ ಟಾಟಾ ಸ್ಕೈ ಅಳವಡಿಸಿಕೊಂಡು ತಿಂಗಳಿಗೊಮ್ಮೆ ರಿಚಾರ್ಜ್ ಮಾಡುವ ಕೆಲಸ ನಡೆದಿತ್ತು. ಅದಾದ ನಂತರ ದೊಡ್ಡ ಕ್ರಾಂತಿ ಮೊಬೈಲ್ ಫೋನಿನದ್ದು. ಪ್ರತಿಯೊಬ್ಬ ಕಾಫಿತೋಟಕ್ಕೆ ಹೋದವರ ಕೈಯಲ್ಲಿ, ಪ್ರತಿಯೊಬ್ಬ ಕಬ್ಬು ಕಡಿಯುವವನ ಕೈಯಲ್ಲಿ ಮೊಬೈಲು. ಬರಿ ಮೊಬೈಲಿದ್ದರೆ ಸಾಕೆ ಅದು ನಡೆಯಲು ವ್ಯವಸ್ಥೆ ಬೇಡವೆ, ತಲೆ ಇಲ್ಲದ ಸರ್ಕಾರ ಬಂದಾಗ ಜಿಯೊ ಎನ್ನುವ ಕಂಪನಿಯೊಂದು ಸರ್ಕಾರದ ಕಂಪನಿಯನ್ನ ಮಲಗಿಸಿ ನೆಟ್‌ವರ್ಕ್ ಕೊಡಲು ಯಾವಾಗ ಆರಂಭಿಸಿತು ಪ್ರತಿಯೊಬ್ಬರು ಟಿ.ವಿ.ಬಿಟ್ಟು ಮೊಬೈಲು ಹಿಡಿದರು. ಒಟ್ಟಿಗೆ ಹಾಲಿನಲ್ಲಿ ಕೂಡುತ್ತಿದ್ದ ಕುಟುಂಬ ಚದುರಿಹೋಗಿತ್ತು. ತಮ್ಮ ತಮ್ಮ ಮೊಬೈಲಿನ ಲೋಕದಲ್ಲಿ ಮುಳುಗಿ ಹೋಗಿ ಬೇರೆ ಬೇರೆಯಾಗಿದ್ದರು.

ವಿಜ್ಞಾನದ ವಿಕಾಸದಲ್ಲಿ ಆಟೊಮೊಬೈಲ್ ಕೂಡ ಒಂದು. ಸೆಕಂಡ್ ಹ್ಯಾಂಡ್ ಬೈಕುಗಳು ತಾಂಡದ ಪ್ರತಿಯೊಂದು ಮನೆಯಲ್ಲೂ ಇದ್ದವು. ಯಾವ ಮೋಟಾರು ಬೈಕಿಗೂ ದಾಖಲಾತಿ ಪತ್ರಗಳಿಲ್ಲ. ಅದನ್ನ ಓಡಿಸುವವನಿಗೆ ಪರವಾನಿಗೆಯೆ ಇಲ್ಲ. ಕುರುಡು ಲೆಕ್ಕದಲ್ಲಿ ಓಡಿಸುವುದೊಂದೆ. ಬೈಕನ್ನ ಹೇಗೆ ಓಡಿಸಬೇಕು ಎನ್ನುವ ಪರಿಜ್ಞಾನವಿಲ್ಲದೆ ಒಂದೇ ಬೈಕಿನ ಮೇಲೆ ಇಬ್ಬರು ಕೂಡುವ ಜಾಗದಲ್ಲಿ ಮೂವರು, ನಾಲ್ವರು, ಒಮ್ಮೊಮ್ಮೆ ಐದು ಜನರು ಸವಾರಿ ಮಾಡಿದ್ದುಂಟು. ಟೈಂ ಸರಿ ಇತ್ತು ನಡೆದುಹೋಯ್ತು. ಟೈಂ ಸುಮಾರಿದ್ದಾಗ ಮನುಷ್ಯನ ಪ್ರಾಣವನ್ನೆ ತೆಗೆಯುತ್ತದೆ ಎನ್ನುವ ಪರಿಕಲ್ಪನೆ ಇಲ್ಲದೆ ಜನ ಅಡ್ಡಾಡುತ್ತಿದ್ದರು. ಶಾಂತವಾಗಿದ್ದ ತಾಂಡದಲ್ಲಿ ಈಗ ಬರಿ ಬೈಕು, ಕಾರುಗಳದ್ದೆ ಹಾವಳಿ 'ನೀ ಅಂದ್ರ ನಿಮ್ಮಪ್ಪ' ಅನ್ನೊ ಹಂಗ ಮಂದಿ ದುಡದಿರುವಾಗ ಯಾರು ಯಾರಿಗೂ ಕೇಳದಾಗಿದ್ದರು. ಭದ್ರಾನಾಯ್ಕನ ತಾಂಡ ಬಿಟ್ಟು ಬಾಂಬೆ ಸೇರಿದವರು ಮಂಗಳೂರು, ಗೋವಾ, ಬೆಂಗಳೂರಿಗೆ ದುಡಿಯಲು ಹೋದವರ ಹತ್ತಿರ ಕನಿಷ್ಠ ಒಂದೆರಡು ಕಾರುಗಳಿದ್ದವು. ಈ ವಿಷಯ ಕೇಳಿದ ಹುಲಿಯೂರ ಹೈರಾಣಾಗಿದ್ದ. ಅರೆ ಸರ್ಕಾರಿ ಕಛೇರಿಯಲ್ಲಿ ನೌಕರನಾಗಿರುವ ಅವನಿಗೆ ಸಾಧ್ಯವಾಗದ್ದು ಅವರ ಮನೆತನವನ್ನ ಬಿಟ್ಟು ಉಳಿದೆಲ್ಲರಿಗೂ ಸಾಧ್ಯವಾಗಿರುವುದು

ಅವನಿಗೆ ಸೋಜಿಗ ತಂದ ವಿಷಯ. ಪಿಂಗನ ಮಗ ತಾಂಬರಗುಂಡಿ, ಬೆಂಗಳೂರಿನ ಶ್ರೀಮಂತನ ಮನೆಯಲ್ಲಿ ಕೆಲಸಮಾಡ್ತಾ ಅವನ ವಿಶ್ವಾಸಗಳಿಸಿ ಹದಿನೈದು ಇಪ್ಪತ್ತು ಕೋಟಿ ರೂಪಾಯಿ ದುಡ್ಡು ಮಾಡಿಕೊಂಡಿದ್ದಾನೆ ಎನ್ನುವುದು ಖಾಲಿಪುಗಸಟ್ಟೆ ಗಾರಿ ಕಟ್ಟೆಯಮೇಲೆ, ನಿಂಗಿ ಚಹಾದಂಗಡಿ ಎದುರು, ಕುಳಿತು ಹರಟೆ ಹೊಡೆಯುವ ಗುಂಪಿನಲ್ಲಿ ನಡೆದ ಘನ ಚರ್ಚೆಯಾಗಿತ್ತು. "ಲೇ ತಮ್ಮ ಈ ಗೌರ್ಮೆಂಟ್ ನೌಕರಿ ತಗೊಂಡಾರಲ್ಲ ನಮ್ಮೂರಾಗ ಅವರೆಲ್ಲಾ ನಮ್ಮ ಪಿಂಗನ ಮಗ ತಾಂಬರಗುಂಡಿಯ ಕಾಲಾನ ಕಸ. ಅಲ್ಲಪ್ಪ, ನಮ್ಮ ತೊಪುನಾಯ್ಕನ ಮಗ ಹುಲಿಯೂರ ಅದೇನೊ ಡಬ್ಬಲ್ ಡಿಗ್ರಿ ಅಂದ್ರ ಹದಿನೇಳನೆ ಕ್ಲಾಸು ಮುಗಿಸಿ ಮತ್ತ ನಾಕು ವರ್ಷ ಓದ್ಯಾನಂತಪ್ಪ. ಅಲ್ಲಾ ಅವನು ನೌಕರಿಗೆ ಸೇರಿ ಎಷ್ಟು ವರ್ಷಗಳಾದವು ಹೇಳು ಮತ್ತ ಮನಿಕಡಿಗ ನೋಡ್ಯಾನ ಬಿಡಪ್ಪ ಅನ್ನೊ ಹಂಗಿಲ್ಲಾ ನಮ ತಾಂಬರಗುಂಡಿಯಂಗ ಕಾರು ತಗೊಂಡು ಬರಂಗಿಲ್ಲಾ ಏನಿಲ್ಲ" ಒಬ್ಬ ಹೇಳಿದರೆ "ಸರ್ಕಾರಿ ನೌಕರಿಯೊಳಗ ಏನೈತಿ ಬಿಡ್ರಲೆ, ನಾವು ಆರ ತಿಂಗಳ ಕಾಯ್ತಿವಿ, ಅವರು ಏನೂ ಇಲ್ಲದೆ ತಿಂಗಳ ಕೊನೆದಿನದ ಮಟಾನೂ ಕಾಯಬೇಕು" ಇನ್ನೊಬ್ಬ ಹೇಳಿದ್ದ. ಹಿಂಗ ಮಾತಾಡಿ ಬಂದೊರು ಚಾಹ ಕುಡಿಸಿಯಾರಂತ ಮಕಮಕ ನೋಡಿ ಸಂಜಿ ಮುಂದ ಬಂದ ದಾರಿಗೆ ಸುಂಕವಿಲ್ಲ ಎನ್ನುವಂತೆ ಎದ್ದು ಮನಿಕಡೆಗೆ ಹೊರಟು ಹೋಗುತ್ತಿದ್ದರು. ತೊಪುನಾಯ್ಕನ ಮೂರನೆ ಮಗ ದಮ್ಮೂರನ ಮಗ ಚೆನ್ನಿಂಗನಾಯ್ಕ ತಾನೇನು ಮಂದಿಗಿಂತ ಕಮ್ಮಿ ಅದಿನ ಅಂತ ಸೆಕೆಂಡ್‌ಹ್ಯಾಂಡ್ ಬೈಕು ತಂದಿದ್ದ. ಚೆನ್ನಿಂಗ ಮದುವೆಯಾದಾಗ ಹದಿನಾರು, ಹದಿನೇಳು ವರ್ಷ. ಮದುವೆ ಅಂದರೇನು, ಸಂಸಾರ ನಿಭಾಯಿಸುವುದು ಹೇಗೆ ಎನ್ನುವ ಸಮಯದಲ್ಲೆ ಮೊದಲಿನ ಎರಡು ಮಕ್ಕಳು ಹುಟ್ಟಿದ್ದವು. ಅವುಗಳ ಜೊತೆಗೆ ಮಕ್ಕಳು ಹುಟ್ಟಲಿ ಎನ್ನುವ ಅಭಿಲಾಸೆಯಿಂದ ದಮ್ಮೂರನಾಯ್ಕ ಮಗನಿಗೆ ಬೊಯ್ದು ಸುಮ್ಮನಾಗಿಸಿದ್ದ. ಅದರ ಫಲವೆಂಬಂತೆ ಮತ್ತೆ ನಾಕೈದು ಮಕ್ಕಳು ಹುಟ್ಟಿದ್ದವು. ಅಷ್ಟೊತ್ತಿಗಾಗಲೆ ಅವನ ಇನ್ನಿಬ್ಬರು ಮಕ್ಕಳ ಮದುವೆಯಾಗಿ ಮೂರುಜನ ಹೆಂಗಸರು ಒಬ್ಬರ ಜಡೆ ಒಬ್ಬರ ಕೈಯಲ್ಲಿ ಯಾವಾಗ ಹಿಡಿದುಕೊಂಡರೊ ದಮ್ಮೂರನಾಯ್ಕ ಎಲ್ರನ್ನು ಹೊರಗೆ ಓಡಿಸಿದ. ಹಿರಿಮಗ ಚೆನ್ನಿಂಗನ ದೊಡ್ಡ ಸಂಸಾರ ಅವನ ಪಾಲಿಗೆ ಬಂದ ಒಂದೇ ಒಂದು ಎಕ್ಕರೆ ಬೆದ್ಲು ಭೂಮಿಯಲ್ಲಿ ಏನು ಮಾಡಲಾಗದೆ ಪರದಾಡತೊಡಗಿದ. ಮಕ್ಕಳನ್ನ ಸಾಕುವ ಸಲುವಾಗಿ ಪ್ರತಿದಿನ ಗಂಡ ಹೆಂಡತಿ ಕೂಲಿ ಮಾಡತೊಡಗಿದರು. ಅದರ ನಡುವೆ ಎಲ್ಲೊ ಸಾಲ ತಂದು ಹಳೆ ಬೈಕು ಖರೀಧಿಸಿದ್ದ.

ಚೆನ್ನಿಂಗ ಅಂತಹ ಕಟ್ಟಾಳೇನು ಅಲ್ಲ. ಪುಡಿಯಾಳು, ಬೈಕ್ಮೇಲೆ ಹೊರಟರೆ ಅರವತ್ತು ಮೈಲಿ ವೇಗದಲ್ಲೆ ಚಲಿಸುತ್ತಿದ್ದ. ಮಂದಿ ಬಹಳ ಸಲ "ಲೇ ತಮ್ಮ ನಿಧಾನಕ್ಕ ಓಡಿಸಲೇ, ನೀ ಒಬ್ಬನೆ ಅಲ್ಲ ಬೈಕ್ ತಂದಿರೋದು" ಬುದ್ಧಿವಾದ ಹೇಳಿದರೂ

ಪ್ರಯೋಜನವಾಗಲಿಲ್ಲಾ. ಒಮ್ಮೊಮ್ಮೆ ಕುಡಿದು ಗಾಡಿಯನ್ನ ಓಡಿಸುವುದು ಉಂಟು. "ಇವನು ಯಾವತ್ತಾದರೂ ಸಾಯ್ತಾನಪ್ಪ" ಬೇಸರದಿಂದ ತಾಂಡದ ಹೆಂಗಸರು ಹೇಳಿದ್ದರು. ಅದರ ಬಗ್ಗೆ ಅವನು ತಲೆ ಕೆಡಿಸಿಕೊಂಡಿರಲಿಲ್ಲ. ಆದರೆ ಅವತ್ತು ಯಾರು ಹೇಳಲಿ, ಹೇಳದಿರಲಿ ವಿಧಿ ದಾರಿ ಕಾಯುತ್ತಿದ್ದಳು ಅನಿಸುತ್ತೆ ಚೆನ್ನಿಂಗ ಹೊತ್ತಾರೆ ಎದ್ದು ಗೌರಿಪುರದಲ್ಲಿ ಕೆಲಸ ಇದೆ ಅಂತ ಹೆಂಡತಿಗೆ ಹೇಳಿ ತಾಂಡದ ಬಗಟನ ಅಂಗಡಿಯಲ್ಲಿ ಸಿಕ್ಕ ಬ್ರಾಂದಿಯ ಪಾಕೇಟು ಕತ್ತರಿಸಿ ಹಾಗೆ ಕುಡಿದು, ಗಾಡಿ ಹತ್ತಿ ತನ್ನ ಎಂದಿನ ವೇಗದಲ್ಲಿ ಓಡಿಸತೊಡಗಿದ. ಸೋಮಲಾಪುರ ಕ್ರಾಸ್ ತಡಾದು ಗೌರಿಪುರದ ಹಾದಿಯಲ್ಲಿ ಕೆಳಗಿಳಿದು ಇಳಿಜಾರಿನಲ್ಲಿ ಅದೇ ವೇಗದಲ್ಲಿ ಹೊರಟಿದ್ದ. ಅವನ ಎಡದಿಂದ ಅದೇನು ಅಡ್ಡ ಬಂತೊ ಏನೊ ಗಾಡಿ ವೇಗದಲ್ಲಿ ಮೂರ್ನಾಕು ಪಲ್ಟಿ ಹೊಡೆದಿತ್ತು. ಹಿಮ್ಮಾರಿಯಾಗಿ ಬಿದ್ದ ಚೆನ್ನಿಂಗನಾಯ್ಕನ ತಲೆಬುರುಡೆ ಹೊಡೆದು ರಕ್ತವೆಲ್ಲಾ ಸೋರಿ ಹಾದಿ ಹೆಣವಾಗಿದ್ದ.

ಬಹಳ ಚಿಕ್ಕವಯಸ್ಸಿನಲ್ಲೆ ಎಂಟು ಮಕ್ಕಳನ್ನ ಬಿಟ್ಟು ಕೈಲಾಸ ಸೇರಿದ್ದ. ಹುಲಿಯೂರನಿಗೆ ಬಹಳ ನೋವಾಗಿತ್ತು. ಅವಿದ್ಯಾವಂತ ಅಣ್ಣ, ಅರ್ಧಂಬರ್ಧ ತಿಳಿದಿರುವ ಅವನ ಇಬ್ಬರು ಮಕ್ಕಳು, ಮನೆಯಲ್ಲಿ ಕಿಚೊ ಎನ್ನುತ್ತಿರುವ ಮಕ್ಕಳು, ಕಿತ್ತು ತಿನ್ನುವ ಬಡತನ. ಹುಲಿಯೂರ ಅಸಹಾಯಕನಾಗಿದ್ದ ಏನು ಮಾಡಬೇಕೆಂದು ತಿಳಿಯದೆ ಅವತ್ತು ಸಂಜೆ ಅವನ ಅಂತ್ಯ ಸಂಸ್ಕಾರವಾದ ಮೇಲೆ ವಾಪಾಸಾಗಿದ್ದ. ಕೂಡು ಕುಟುಂಬದಲ್ಲಿದ್ದಾಗ ಹುಟ್ಟಿದ ಚೆನ್ನಿಂಗನನ್ನ ಎತ್ತಿ ಆಡಿಸಿದ ಕೈಗಳಿಂದ ಅವನ ಚಟ್ಟ ಎತ್ತಿದಾಗ ಒಂದುಕ್ಷಣ ನಲುಗಿಹೋಗಿದ್ದ.

* * *

82. ಕೊಟ್ಟಿದ್ದು ತನಗೆ ಬಚ್ಚಿಟ್ಟಿದ್ದು...?

ಭಗನ್ಯಾನಾಯ್ಕ ಸತ್ತಾಗ ಮಂದಿಗೆ ಮರುಕವೆ ಆಗಲಿಲ್ಲ. ಅವನು ಬದುಕಿದ್ದಾಗಲೂ ನಿಷ್ಪ್ರಯೋಜಕನಾಗಿದ್ದ ಎನ್ನುವುದು ತಾಂಡ ಮಂದಿಯ ಅಂಬೋಣ. ಕೆಲವರ ಅಭಿಪ್ರಾಯದ ಪ್ರಕಾರ ಅವನ ಸಹೋದರನನ್ನ ಅವನೆ ಕೊಲೆಮಾಡಿದ್ದ ಎನ್ನುವುದಾಗಿತ್ತು. ಆದರೆ ಮಂದಿ ಮಾತ್ರ ಯಾವುದೆ ನಿಖರವಾದ ಪುರಾವೆ ಇಲ್ಲದ ಕಾರಣ "ಮಾಡ್ದೋರ ಪಾಪ ಆಡ್ದೋರ ಬಾಯಲ್ಲಿ ನಮಗ್ಯಾಕ ಬೇಕು" ಅಂತ ಅಲ್ಲಲ್ಲೆ ತಮಾನಿಯಾಗಿದ್ದರು. ಆದರೆ ಉಗುಳು ನುಂಗಿ ಹೊಟ್ಟೆ ತುಂಬಿಕೊಳ್ಳುತ್ತಿದ್ದನೆ ವಿನಃ ಒಳ್ಳೆಯದು ಮಾಡಿ ಉಣ್ಣಲಿಲ್ಲ. ಯಾರಿಗೂ ಒಂದ ಅಗಳು ದಾನ ಮಾಡಲಿಲ್ಲ. ಅದರಂತೆ ಅವನ ಕೊನೆ ಕೂಡ ಆಗಿತ್ತು. ಅವನ ತಾಯಿ ಬದುಕಿದ್ದಾಗ ಹೊತ್ತಾರೆ ಜೋಳದ ನುಚ್ಚು ಉಂಡರೆ ಮದ್ಯಾಹ್ನ ಎರಡು ರೊಟ್ಟಿ ಸಿಗುವವು. ಅದಕ್ಕೆ ಭೂರಿಬಾಯಿ ಒಂದುಮನಿ ಬಿಡದೆ ಮಜ್ಜಿಗೆಗೆ ಚರಗಿ ತಗೊಂಡು ಗೊಗರೆಯುತ್ತಿದ್ದಳು. ಹುಲಿಯೂರನ ಮನೆಯೊಳಗೆ ಹೈನು ಯಾವತ್ತು ತಪ್ಪಿರಲಿಲ್ಲ. ಹುಟ್ಟಿದ ಕರು ಚಿಕ್ಕದಿದ್ದಾಗ, ಮಂದಿ ಮಜ್ಜಿಗೆ ಉಂಡು ಬಟ್ಟೆಗೆ ಕೈ ಒರೆಸಿದರೆ ಬಟ್ಟೆ ತಿನ್ನುವುದನ್ನ ರೂಢಿ ಮಾಡಿಕೊಳ್ಳುತ್ತದೆ ಎನ್ನುವ ವಾಡಿಕೆಯಿಂದ ಮತ್ತು ದಂಡ್ಯಮ್ಮಗೆ ತುಪ್ಪದ ಮೀಸಲು ಕಟ್ಟುತ್ತಿದ್ದರಿಂದಾಗಿ ಮಜ್ಜಿಗೆ ಹೊರಗೆ ಹಾಕುತ್ತಿರಲಿಲ್ಲ ಹಾಗಾಗಿ ಹುಲಿಯೂರ ತಾಯಿ ಜಾನಿಬಾಯಿ ಬಲೆ ಕಟ್ಟುನಿಟ್ಟು ಮಾಡಿದ್ದಳು. ಹಾಗಾಗಿ ಭೂರಿಬಾಯಿ ಆ ವಯಸ್ಸಿನಲು ಸಿಲಾವರಿ ತಾಟಿನ ತುಂಬ ಜೋಳದ ನುಚ್ಚನ್ನ ಹಾಕ್ಕೊಂಡು ಮಜ್ಜಿಗೆ ಸಲುವಾಗಿ ಅವರ ಮನೆಗೆ ಬರುತ್ತಿದ್ದಳು. "ಎಯ್ ತಾಯಿ ದಿವಾನಿ, ದುನಿ, ದಿಣ್ಣಿ ಆಟು ಮಜ್ಜಿಗೆ ಬಿಡ್ರೆ ಜೋಳದ ನುಚ್ಚು ಉಣ್ತಿನಿ" ದೈನಾಸು ಬಿದ್ದುಕೇಳುತ್ತಿದ್ದರೆ "ಬೇ ದೊಡ್ಡವ್ವ ಇರು ಇನ್ನೂ ಬೆಣ್ಣಿ ತಗದಿಲ್ಲ ಆಟು ಕೂತ್ಕ ತರ್ತಿನಿ" ಅಂತ ಒಂದು ಗ್ಲಾಸಿನ ತುಂಬ ಮಜ್ಜಿಗೆ ಸುರಿದರೆ "ಸುರ್‌ಸುರ್" ಅಂತ ಆವಾಜ್ ಮಾಡ್ತಾ ತಾಟಿನ ತುಂಬ ತುಂಬಿದ್ದ ಜೋಳದ ನುಚ್ಚನ್ನ ಮುಗಿಸಿ "ತಾಯಿ ಒಸಿ ನೀರು ಕೊಡವ" ಅಂತ ನೀರು ತರಿಸಿಕೊಂಡು ತಾಟು ತೊಳದು ಅಲ್ಲೆ ಚೆಲ್ಲಿ ಮನೆಗೆ ಹೋಗುತ್ತಿದ್ದಳು.

ಭಗನ್ಯನಾಯ್ಕಗೆ ಮಜ್ಜಿಗೆ ಇರಲೇ ಬೇಕಂತ ಇಲ್ಲ. ಸಿಕ್ಕರೆ ಸೈ, ಸಿಗದಿದ್ದರೂ ಸೈ. ಹೊಟ್ಟೆ ತುಂಬ ಒಂದು ತಟ್ಟೆ ಜೋಳದ ನುಚ್ಚು ತಿಂದು ಹೊಲಕ್ಕೆ ಗಳೆ ತಗೊಂಡು ಹೋಗುತ್ತಿದ್ದ. ಮದ್ಯಾಹ್ನ ಸೂರ್ಯ ನೆತ್ತಿಮೇಲೆ ಬಂದಾಗ ಎತ್ತುಗಳನ್ನನ ಕೊಳ್ಳರೆದು, ಅವುಗಳ ಮೈಮೇಲೆ ನಾಕು ಚರಗಿ ನೀರು ಹಾಕಿ ಕೈಕಾಲು ಮುಖ ತೊಳೆದು ನಾಕು ರೊಟ್ಟಿ ಚಟ್ನಿನೊ, ಬ್ಯಾಳಿಸಾರಿಂದ ಕಿವುಚಿಕೊಂಡು ಉಂಡು ಏಳುತ್ತಿದ್ದ. ಅವನ ಬದುಕಿನಲ್ಲಿ ಇಂತಹದೆ ಊಟಬೇಕು. ಹೀಗೆ ಇರಬೇಕು ಅನ್ನೋದಿರಲಿಲ್ಲ. ಹಿಂಗತೇಳಿನೆ, ತೋಪುನಾಯ್ಕನ ಕುಟುಂಬ ಸ್ವಲ್ಪ ಸಂಕಷ್ಟದಲ್ಲಿದ್ದಾಗ ಅವರ ಗದ್ದೆಯ ಪಕ್ಕನೆ ಎರಡು ಎಕ್ಕರೆ ಗದ್ದೆ ತಗೊಂಡಿದ್ದ. ದುರ್ಗಪುರದ ರಸ್ತೆಗೆ ಐದು ಎಕ್ಕರೆ ಎರೆ ಜಮೀನು ಖರೀದಿಸಿದ್ದ. ತೊಪುನಾಯ್ಕನ್ನ ಬಿಟ್ಟರೆ ಹೆಚ್ಚು ಜಮೀನು ತನ್ನದಾಗಬೇಕು ಎನ್ನುವ ಜಿದ್ದಿಗೆ ಬಿದ್ದಿದ್ದ. ಯಾರ ಸಹವಾಸ ಮಾಡದೆ ತಾನಾಯ್ತು ತನ್ನ ದುಡಿಮೆಯಾಯಿತು. ಅವನ ಹತ್ತಿರ ಬೀಡಿ ಇದ್ದರು ಪಕ್ಕದ ಹೊಲಕ್ಕೆ ಹೋಗಿ "ಲೇ ತಮ್ಮ ಒಂದು ಬೀಡಿ ಕೊಡಲೆ ಮುಂಜಾನೆ ಬರುವಾಗ ಬೀಡಿ ಪೆಟ್ಟಿಗೆ ಮನಿಯೊಳಗೆ ಮರತು ಬಂದೀನಿ" ಸುಳ್ಳನ ಸತ್ಯದ ತಲೆ ಮೇಲೆ ಒಡದಂಗೆ ಹೇಳುತ್ತಿದ್ದ. ಎದುರಿನವನಿಗೆ ಗೊತ್ತು ಭಗನ್ಯನಾಯ್ಕ ಹೇಳುತ್ತಿರುವುದು ಶುದ್ಧ ಸುಳ್ಳು ಅಂತ. ಆದರೆ ಕೇಳಿದರೆ ಕೊಡಬೇಕು. "ಅಲ್ಲೊ ಭಗನ್ಯಪ್ಪ ಅವನವ್ವ ಮನಿ ತುಂಬ ದುಡ್ಡು ಇಟ್ಟಿಯ ಎಂಟಣಿದು ಬೀಡಿ ತಗೊಂಡ ಬರಕ ಆಗಲ್ಲ ಅಂದ್ರ ಹೆಂಗೆ ಅಂತೀನಿ" ಎದುರಿನವನು ಏನು ಹೇಳಿದರು ಬೇಸರ ಮಾಡಿಕೊಳ್ಳದೆ ಬೀಡಿ ಇಸ್ಕೊಂಡೆ ಸೇದುತ್ತ ಜಾಗ ಖಾಲಿ ಮಾಡುತ್ತಿದ್ದ.

ಹಳೆಬಟ್ಟೆ ಯಾವಾಗ ತೊಳೆದಿತ್ತೊ ಹೆಗಲ ಮೇಲಿನ ಟವಲು "ಅಲ್ಲ ಭಗನ್ನಪ್ಪ ಸೋಪು ಸವೆಯುತ್ತೆ ಅಂತ ಸ್ನಾನ ಮಾಡಂಗಿಲ್ವ, ಇಲ್ಲಾ ನೀರು ಖಾಲಿಯಾಗುತ್ತೆ ಅಂತನಾ" ಅಂತ ಕೇಳಿದರೆ "ಅಲ್ಲಲೇ ತಮ್ಮ ದಿನ್ನಾ ಸ್ನಾನ ಮಾಡಿ ಏನು ಮಾಡಿ? ಸೋಮವಾರ ಬಸವಣ್ಣನ ವಾರ ಎತ್ತುಗಳು ತೊಳೆಯುವ ಜಾಗದಲ್ಲಿ ನಾವು ಎರಡದಪ ಮುಳುಗಿ ಎದ್ದು ಬಂದರಾತು. ಕೇಳಿಲ್ಲಿ ನಾನು ಸೋಪು ಹಚ್ಚುವುದೇ ಇಲ್ಲ. ಈ ಸೌಳ ಮಣ್ಣು ತಂದು ಇಟ್ಕೊಂಡಿನಿ ಅರವಿನೂ ಅದ್ರಾಗ ತೊಳಿಯೊದು ಮೈಗೂ ಅದನ್ನೆ ಉಜ್ಜಿಕೊಳ್ತಿನಿ" ಕೇಳಿದವನಿಗೆ ಮೂರ್ಛೆ ಬಂದಿತ್ತು. ಎಂತ ದುರಂತ, ತಾಂಡದ ಮುಂದೆ ಮಾಳಿಗಳ ಪಕ್ಕ ನೀರು ಬಿದ್ದು ಬಿದ್ದು ಭೂಮಿ ಉಪ್ಪು ಉಪ್ಪು ಆಗಿ ಸೌಳಾಗುತ್ತಿತ್ತು. "ಛೆ ಅದನ್ನು ಬಿಟ್ಟಿಲ್ಲಾ ಅನ್ನು. ಥು ನಿಮ್ಮಪ್ನ ನೀನೇನು ಮನುಷ್ಯ ಅದಿಯೋ ಏನೊ, ಐದು ರೂಪಾಯಿ ಉಳಿಸೋದಕ್ಕೆ ಹೋಗಿ ಸೌಳುಮಣ್ಣು ತಿಕ್ಕುತೀನಿ ಅಂತೀಯಲ್ಲ ನಿನಗೇನು ಅನಿಸೊದಿಲ್ವಾ" ಅಂದ್ರೆ "ಏನು ಅನಿಸಬೇಕು, ನನ್ನ ಬದುಕು ನನ್ನ ಸಂಸಾರ ನನಗೆ ಸೋಪಿಲ್ಲಾಂದ್ರೆ ನೀನು ತಂದು ಕೊಡ್ತಿಯಾ? ಮನೆಯಲ್ಲಿ ಸಕ್ಕರೆ, ಚಾಪುಡಿ, ಬೆಲ್ಲಾ ದಿನಸಿ ಇಲ್ಲಾಂದ್ರೆ ತಂದು

ಹಾಕ್ತಿಯಾ? ನನ್ನ ಸಂಸಾರ, ನನಗೆ ಹೇಗೆ ಬದುಕಬೇಕು ಅನಿಸುತ್ತೊ ಹಾಗೆ ಬದುಕಬೇಕು" ದೊಡ್ಡ ಭಾಷಣ ಬಿಗದಿದ್ದ. ಕೇಳಿದವನು ತುರಸಿದ ಹತ್ರ ಕೆರ್‍ಕೊಳ್ಳದೆ ಸುಮ್ಮನಾಗಿದ್ದ.

ಭಗನ್ಯ ಶ್ರೀಮಂತ ಅಂತ ಅವನ ಮೂವರು ಹೆಣ್ಣು ಹುಡುಗಿಯರನ್ನ ಮದುವೆ ಮಾಡಿಕೊಂಡು ಹೋದವರ ತಲೆ ಮೇಲೆ ಮಣ್ಣು ಹಾಕಿದ್ದ. ಮದುವೆಗೆ ಮುಂಚೆ ಅದು ಕೊಡ್ತಿನಿ, ಇದು ಕೊಡ್ತಿನಿ ಅಂದವನು ಮದುವೆ ದಿನಾನು ಕೊಡದೆ, ಮದುವೆ ಮುಗಿದ ಮೇಲೆನೂ ಕೊಡದೆ ಓಡಿಸಿದ್ದ. "ಏನು ಮಾವ ನೀನು ಏನೇನೊ ಹೇಳಿದ್ದೆ ಮತ್ತ ಕೊಡಲಿಲ್ಲ" ಅಳಿಯನ ಪ್ರಶ್ನೆಗೆ "ಅದು ಅಳಿಯಂದಿರೆ ನನಮಗ ಸಂಕ್ರಿಗೆ ಹೇಳಿದ್ದೆ ಏನೊ ಎಡವಟ್ಟು ಮಾಡಿದಂಗಿದೆ. ವಾಪಾಸು ಬರ್‍ತಿರಲ್ಲ ಆವಾಗ ನನ್ನ ತಾಯಿ ಆಣೆಗೂ ಕೊಟ್ಟ ಬಿಡ್ತಿನಿ" ಮನೆ ಬಿಟ್ಟ ಹೋಗಾಕಿಲ್ಲ ಅಂತ ಆಣೆ ಪ್ರಮಾಣ ಮಾಡಿ ಬಿಡುತ್ತಿದ್ದ. ವಾಪಾಸು ಬಂದಾಗ ಒಂದು ಬಿರು ನುಡಿಯನ್ನು ಬಾಯಿಯಿಂದ ತಗೆಯದೆ ಕಲ್ಲಾಗಿ ಬಿಡುತ್ತಿದ್ದ. ಹೆಂಡತಿಯರ ಮಕ ನೋಡಿಕೊಂಡು ಗಂಡಂದಿರು ಸುಮ್ಮನಾಗಿದ್ದರು. ಹಿಂಗ ಮಾಡಿಮಾಡಿನೆ ಭಗನ್ಯಾನಾಯ್ಕ ದುಡ್ಡು ಮಾಡಿದ್ದ. ಬೆಳೆದ ಎಲ್ಲಾ ಜಮೀನಿನ ಬೆಳೆ ಒಮ್ಮೆ ಮಾರಿ ಬಂದ ದುಡ್ಡನ್ನ ಹೊಲ ಸಿಗದಿದ್ದರೆ ಅವನ ಹೆಂಡತಿ ತೌರಿನಲ್ಲಿ, ಸಂಬಂಧಿಕರಿಗೆ, ಪರಿಚಯಸ್ಥರನ್ನ ನೋಡಿ ಮೂರು ರೂಪಾಯಿ, ನಾಕು ರೂಪಾಯಿ ಬಡ್ಡಿಗೆ ಸಾಲಕೊಟ್ಟ ಹದಿನೈದು ಲಕ್ಷದಷ್ಟು ದುಡ್ಡು ಮಾಡಿದ್ದ. ಅವನ ಮೂರನೆ ಮಗ ದಮಡಿನಾಯ್ಕ ಹೊರಗಡೆ ಹೋಗಾಕ ನೋಡಿದ. ಹೊಡದು ಬಡದು, ಹೆದರಿಸಿ ಕೊನೆಗೆ ನೇಣು ಹಾಕ್ಕೊಂಡು ಸಾಯುವಂತೆ ಮಾಡಿಬಿಟ್ಟ. ಅದಾಗಿ ವರ್ಷಕ್ಕೆ ಇಬ್ಬರು ಚಿಕ್ಕಮಕ್ಕಳನ್ನ ಬಿಟ್ಟು ಅವನ ಹೆಂಡತಿಗೆ ಭಗನ್ಯ ಅದೇನು ಮಾಡಿದನೊ ಅವಳು ನೇಣು ಬಿಗಿದುಕೊಂಡು ಸತ್ತುಹೋದಳು.

ಯಾರ ಶಾಪ ತಗಲಿತೊ ಏನೊ ಜಗತ್ತಿನ ತುಂಬಾ ಕರೋನಾ ರೋಗ ಹರೆಯದವರನ್ನ, ವಯಸ್ಸಿನವರನ್ನ ಬಿಡದೆ ಬಾಚಿಕೊಂಡು ಹೋಗುತ್ತಿರುವಾಗ ಭಗನ್ಯನಾಯ್ಕನಿಗೆ ಅದೇನೊ ದೊಡ್ಡ ಕಾಯಿಲೆ ಬಂದು ದೊಡ್ಡ ಆಸ್ಪತ್ರೆಗೆ ಸೇರಿದ. ಬಂದ ಕಾಯಿಲೆಗೆ ತಿರುಗಿ ಉಸಿರಾಡಲು ಆಗದೆ ಪರಿಸ್ಥಿತಿ ಗಂಭೀರಗೊಂಡಿತ್ತು. ಸಾಯುವ ಮೊದಲು ತನ್ನ ಸಂಪತ್ತನ್ನ ಉಳಿದ ಇಬ್ಬರು ಮಕ್ಕಳಿಗೆ ಮತ್ತು ಸತ್ತ ಎರಡನೇಯ ಮಗ ದಮಡಿನಾಯ್ಕನ ಮಕ್ಕಳಿಗೆ ಹೇಳಿ ಸಾಯುವ ಆಶೆಯಿಂದ ತಾಂಡಕ್ಕೆ ಕರೆದುಕೊಂಡು ಹೋಗಲು ಹೇಳಿದ್ದ. ತಾನು ಮಾಡಿದ ಪಾಪಕ್ಕೆ ಪ್ರಾಯಶ್ಚಿತ್ತವೆಂಬಂತೆ ಅವನ ತಲೆದಿಂಬನ್ನ ತಾನೆ ಕತ್ತರಿಯಿಂದ ಕೊಯ್ದು ಅದರಲ್ಲಿದ್ದ ನಾಕೈದು ಲಕ್ಷ ರೂಪಾಯಿಗಳನ್ನ ಇಬ್ಬರು ಮಕ್ಕಳು ಮತ್ತು ಮೊಮ್ಮಕ್ಕಳಿಗೆ ಸಮನಾಗಿ ಹಂಚಿದ. ಯಾರ್‍ಯಾರು ಎಷ್ಟು ರೊಕ್ಕ ಕೊಡಬೇಕಿದೆ ಎನ್ನುವುದನ್ನ ತೋರಿಸಿದ. ಎರಡೆ ದಿನ ಬದುಕಿ ಕಣ್ಣು ಮುಚ್ಚಿದ.

ನೂರಾರು ಮಂದಿ ಬೀಗರು, ಅಕ್ಕತಂಗಿಯರು, ಅಳಿಯಂದಿರು ಕರೋನಾದಿಂದ ಸತ್ತಿರಬಹುದು ಎಂದು ಶಂಕೆ ಪಟ್ಟು ಹತ್ತಿರ ಬಾರದಾದರು. ಅನಿವಾರ್ಯವೆಂಬಂತೆ ಅವನ ಇಬ್ಬರು ಮಕ್ಕಳು, ಅಣ್ಣಂದಿರ ಮಕ್ಕಳು ಸೇರಿ ಬೆಂಕಿ ಕೊಟ್ಟು ಬಂದಿದ್ದರು. "ಪಾಪ ಇದ್ದಾಗ ಬಾಯಿಕಟ್ಟಿ ಬದುಕಿದ್ದ. ಒಂದು ಅಡಿಕೆಯನ್ನು ಉದ್ರಿ ಹೊಡಿತ್ತಿದ್ದ. ಯಾವತ್ತು ಹೊಟ್ಟೆತುಂಬಾ ಉಣ್ಣಲಿಲ್ಲ. ಸರಿಕರ ಜೊತೆಗೆ ಬೆರಿಲಿಲ್ಲ. ಬರಿ ದುಡ್ಡು, ಜಮೀನು, ಅಂತ ದುಡದು, ದುಡದು ಹೆಣ ಆದ" ಅವನ ಚಿಕ್ಕಪ್ಪ ಲಂಗಡಾನಾಯ್ಕ ಮಂದಿ ಮುಂದ ಹೇಳಿ ಮರಗುತ್ತಿದ್ದ. ಮನುಷ್ಯನ ಆಶೆಗೂ ಒಂದು ಕೊನೆ ಅನ್ನೋದಿದೆ. ಆದರೆ ಭಗನ್ಯಾ ದುರಾಸೆಯಿಂದಲೆ ಸತ್ತುಹೋದ. ಯಾರು ಬಿತ್ತದ ಮುಂಚೆ ಹೊಲ ಬಿತ್ತುತಿದ್ದ. ಯಾರು ಕೊಯ್ಯದ ಮೊದಲೆ ಕೊಯ್ಯುತ್ತಿದ್ದ. ಯಾರಿಗೂ ಹೇಳದೆ ಮಾರ್ಕೆಟಿಗೆ ಬಿಟ್ಟು ಲಾಭ ಮಾಡಿಕೊಳ್ಳುತ್ತಿದ್ದ. ತಾಂಡದಮಂದಿ ಸಾಲ ಸೂಲ ಮಾಡಿ ಬೀಜಗೊಬ್ಬರ ತಂದರೆ ಅವನು ಮನೆಯಲ್ಲಿಟ್ಟಿದ್ದ ದುಡ್ಡಿನಿಂದಲೆ ತಂದು ನಗದು ಪಟ್ಟಿ ಮಾಡಿಸಿಕೊಳ್ಳುತ್ತಿದ್ದ. ಬನಶಂಕರಿ ಅಂಗಡಿಯ ಬನ್ನಿಂಗಪ್ಪ "ಏನ್ರಲೇ ನಿಮ್ಮ ತಾಂಡದಾಗ ಒಬ್ಬನೆ ನೋಡಪ್ಪ ಸಾಲ ಕೇಳದವನು ಭಗನ್ಯನಾಯ್ಕ. ಮಗ ತೂಕ ಆದ ತಕ್ಷಣ ಪಟ್ಟಿಗ ನಿಂತು ಬಿಡ್ತಾನ. ದಲ್ಲಾಳಿ ಹಮಾಲಿ ನಾಯಾಕ ಕೊಡ್ಲಿ ಅಂತ ಜಗಳಕ್ಕೆ ಬಿಳ್ತಾನ. ಹಮಾಲಿಗಳದ್ದು ಬಾಚಿಕೊಂಡು ಬಿಡ್ತಾನ" ಆತನ ಮೇಲೆ ಅಸಮಾಧಾನಗೊಂಡಿದ್ದ. "ಹೋಗಲಿ ಬಿಡ್ರಿ ಸಾವುಕಾರ್ರ, ಅವನ ಬಗ್ಗೆ ಯಾಕ ಮಾತಾಡ್ತಿರಿ ಉಗಳು ನುಂಗಿ ಹೊಟ್ಟೆ ತುಂಬಿಸಿಕೊಳ್ಳೊ ಮನುಷ್ಯ. ಒಂದು ಬೀಡಿ ಖರೀದಿ ಮಾಡಲ್ಲ, ಯಾವಾಗಾದರೂ ಎಲಿ ಅಡಕಿ ತಿನ್ನಬೇಕು ಅನ್ನಿಸಿದರೆ ಯಾರಾದರು ಮುದುಕಿಯರ ಹತ್ರಹೋಗಿ ಕೈ ಒಡ್ತಾನೆ. ಅವನ್ದೆನು ಹಚ್ಕೊರಿ" ಅಂದ ಜಾಮನಾಯ್ಕ.

ಹುಲಿಯೂರ ಬಹಳ ವಿಚಲಿತನಾಗಿದ್ದ, ಅವನ ಬಗ್ಗೆ ಕೇಳಿರಲಿಲ್ಲ, ಆಗಾಗ "ಏನಪ್ಪ ತಮ್ಮ ಆರಾಮದಿ, ಯಾವಾಗ ಬಂದಿ? ಅಂದಂಗ ಏನ ನೌಕರಿ ಮಾಡ್ತಿ, ಏಟು ಸಂಬಳ ನಿಂದು?" ಕೇಳುತ್ತಿದ್ದ. "ಏನ ಬಿಡಣ್ಣಾ ನಿನ್ನ ಹೊಲದ ಮೇರೆಯಲ್ಲಿ ಬೆಳದಷ್ಟು ಒಂದು ವರ್ಷದ ಸಂಬಳ ಬರುತ್ತೆ" ಅಂದಿದ್ದ ಹುಲಿಯೂರ. "ಹಿಂಗ್ಯಾಕಂತಿಯಪ್ಪ ಮೈ ಮುರಿಯದೆ ಸೊಂಟ ಬಗ್ಗಿಸದೆ, ಮಳೆಯೊಳಗೆ ತೊಯ್ಯದೆ ಪಗಾರ ತಗೊಂತೀರಿ" ಅನ್ನಬೇಕೆ. ಅವನ ತಿಳುವಳಿಕೆ ಬಗ್ಗೆ ಅನುಕಂಪ ಪಟ್ಟು ಸುಮ್ಮನಾಗಿದ್ದ ಹುಲಿಯೂರ. ಇಂಥಹವರು ಇದ್ದಾರ ಭೂಮಿ ಮೇಲೆ ಅಂತ ಬೇಸರಗೊಂಡಿದ್ದ.

* * *

83. ಹೆಂಗಸೊಬ್ಬಳು ಬಾವಿಗೆ ಜಿಗಿದಾಗ

ಹುಲಿಯೂರ ಅವನ ಅಣ್ಣ ಜಾತು ನಾಯ್ಕ ಮತ್ತೆ ಒಂದಿಬ್ಬರು ಹೊಲದಲ್ಲಿ ಶೇಂಗಾ ಕಿತ್ತಿದ್ದನ್ನ ಕಾಯೋದಕ್ಕೆ ರಾತ್ರಿ ಹೊಲದಲ್ಲೆ ಮಲಗಿದ್ದರು. ಆಗಿನ್ನು ಛಾರ್ಜಿಂಗ್ ಲೈಟು ಬಂದಿರಲಿಲ್ಲ. ಪಕ್ಕದಲ್ಲಿ ಯಾರಾದರು ಹೊಡೆದು ಹೋದರು ಕಾಣದಂತ ಲಾಟೀನು, ಕಾಲ ಬುಡದಲ್ಲೇನಿದೆ ಅನ್ನೊದು ಕಾಣುತ್ತಿರಲಿಲ್ಲ. ಶೇಂಗಾ ಕಿತ್ತಮೇಲೆ ಅದರ ಹೊಟ್ಟು ಉದುರಿ ನೆಲದಲ್ಲಿ ಹಾವು, ಚೇಳುಗಳಿದ್ದರು ಕಾಣದ ಸ್ಥಿತಿ ಇರುತ್ತಿತ್ತು. ರಾತ್ರಿಯ ನಿರವತೆಯಲ್ಲಿ ಯಾರಾದರು ಕೂಗಿದರೆ ಸಾಕು ಎದುರಿಗೆ ಕೂಗಿದಂತಾಗುತಿತ್ತು. ಎತ್ತರದಲ್ಲಿ ರಾಶಿಗಳಿದ್ದರಿಂದ ಮೇಲೆ ಗೋಣಿತಟ್ಟು ಹಾಸಿಕೊಂಡು ಹಳೆ ಕಮಟು ವಾಸನೆ ಹೊಡೆಯುತ್ತಿರುವ ದುಬಟಿ ಹೊತ್ಕೊಂಡು ಮಲಗಿದ್ದ ಹುಲಿಯೂರ. ಯಾರೊ ಕೂಗಿದಂಗಾಗಿ ಅರಬಾಡಿಸಿ ಎದ್ದ. ಸುತ್ತಲು ಗೌವ ಅನ್ನುತ್ತಿರುವ ಕತ್ತಲು ದುಬುಕ್ಕನೆ ಹಾಸಿಗೆ ಮೇಲೆ ಬಿದ್ದು "ಅಣ್ಣ, ಏಯ್, ಅಣ್ಣ ಯಾರೊ ಕೂಗ್ತಿದ್ದಾರೆ. ಮೇಲೇಳು" ಅಂದ. "ಏನಾತಲೆ ಹುಲಿಯೂರ. ಮುಂಜಾನೆಯಿಂದ ಸಂಜಿ ಮಟ ಸೊಂಟ ಬಗ್ಗಿಸಿ ಶೇಂಗಾ ಕಿತ್ತಿದ್ನಲ್ಲಾ ನಿದ್ದೆ ಬಂದಿತ್ತು" ಅಂದ. "ಇಲ್ಲೆ ನಮ್ಮ ಆ ಹೊಲದ ಪಕ್ಕ ಯಾರೊ ಸಾಯೋರಂಗೆ ಕಿರುಚುತ್ತಿದ್ದಾರೆ" ಅಂದು ಸುಮ್ಮನಾದ. "ಯಪ್ಪ ಸತ್ನೊ ಯಾರದಿರೊ ಕಾಪಾಡ್ರಿ" ಯಾರೊ ಚೀರಿದ್ದು ಕೇಳಿಸ್ತು. "ಗಪ್ಪಾಗು ಯಾರದೊ ಪರಿಚಿತ ಧ್ವನಿ ಇದ್ದಂಗೈತೆ." ಅಂದವನೆ ಒಮ್ಮೆ ನಾಲಿಗೆ ಮಡಿಚಿ ನಾಕು ಬೆರಳು ತೂರಿಸಿ ಸಿಳ್ಳು ಹೊಡೆದ. ಕೂಗುತ್ತಿದ್ದ ವ್ಯಕ್ತಿ ಹತ್ತಿರದಲ್ಲೆ ಹಾಕಿದ ಸಿಳ್ಳನ್ನ ಗುರುತಿಸಿ. "ಲೇ ಜಾತನಾಯ್ಕ ನಾನು ಬಸ್ಯಾ ಕಣೊ" ಅಂತ ವಾಪಾಸು ಕೂಗಿದ. "ಯ್ಯೊ ಬಸವಾ ಏನಾತಲೆ ನಿನಗೆ ಕುಡದ ಬಂದಿ ಏನೂ, ಇಲ್ಲೆ ಮೇಲದ್ದಿವಿ ನಿನ್ನ ನೇರಕ್ಕೆ ಹಂಗೆ ಬಾ" ಲಾಟೀನು ಮೇಲೆ ಹಿಡಿದ. ಮೊದಲೆ ಮುಕ್ಕಾರೆ ಕುಡಿದಿದ್ದ ಬಸ್ಯಗೆ ಆ ಬೆಳಕು ದೂರದಲ್ಲಿ ಹತ್ತಿಪತ್ತು ಮೈಲಿ ದೂರದಲ್ಲಿ ಕಂಡಂಗಾಗಿತ್ತು ಜಾತನಾಯ್ಕ "ಹೇ ಹೊ. ಅಲೆಲೆ" ಅಂತ ಜೋರಾಗಿ ಕೂಗಿದ. ಹೊತ್ತಾರೆ ಇಂಗಳೂರಿಗೆ ಹೋಗಿದ್ದ ಬಸವ ಕುಡಿದು ತಾಂಡಕ್ಕೆ ಬರೋದನ್ನ ಮರತು ಹರಟೆ ಹೊಡೆಯುತ್ತ ಕುಳಿತವನಿಗೆ ಯಾರೊ ನೆನಪು ಮಾಡಿದಾಗ ಅರಬಾಡಿಸಿ ಎದ್ದವನೆ ಊರ ಕಡಿಗೆ ದಾರಿ ಹಿಡಿದಿದ್ದ.

ಅದಾಗಿ ಎಷ್ಟೊ ಹೊತ್ತಿನ ಮೇಲೆ ಹುಲಿಯೂರ, ಜಾತು ಮತ್ತಿಬ್ಬರು ಹುಡುಗರು ಹೆದರುತ್ತಲೆ ಮುದುಡಿಕೊಂಡು ಮಲಗಿದ್ದರು. "ಹುಲಿಯೂರ, ಹೆದರಬೇಡ ನಾ ಇಲ್ಲೆ ರಾಶಿಯ ಈ ಕಡಿಗ ಮಲಗಿನಿ ಮೂವರು ಅದಿರಿ ಯಾಕ ಹೆದರ್ತಿರಿ. ಹಳ್ಳಿಯೊಳಗ ಇವೆಲ್ಲ ಇರೊವ. ಮುಂಜಾನೆ ಬೆಳ್ಳಿಚುಕ್ಕಿ ಮೂಡುವುದರೊಳಗೆ ಒಣಗಿರುವ ಶೇಂಗಾ ಬಳ್ಳಿ ದುಂಡಗ ಮಾಡಿದ, ಶೇಂಗ ಉದರಂಗಿಲ್ಲ ಹರಿಯುವವರಿಗೂ ಪಾಡಾಗತೈತಿ ಸುಮ್ಮನೆ ಮಲಗ್ರಿನ್ನ" ಅಂದವನೆ ಮಲಗಿದ. ಬೆಳ್ಳಿ ಚುಕ್ಕಿ ಪೂರ್ವದಾಗ ಮೂಡಿತ್ತು ಆಗಲೆ ಜಾತುನಾಯ್ಕ ಎದ್ದವನೆ ಹುಲಿಯೂರ ಮತ್ತಿಬ್ಬರನ್ನ ಎಬ್ಬಿಸಿ. ಶೇಂಗಾಬಳ್ಳಿ ದುಂಡಗೆ ಮಾಡಲು ಹೇಳಿದ. ಚಂದ್ರನಿಂದ ಅಣತಿ ದೂರದಲ್ಲಿ ಚಂದ್ರನಷ್ಟೆ ಪ್ರಖರವಾಗಿ ಬೆಳಗುತ್ತಿದ್ದ ಅರುಂಧತಿ ನಕ್ಷತ್ರ ಅಲ್ಪ ಸ್ವಲ್ಪ ಬೆಳಕನ್ನ ನೀಡಿತ್ತು. ಮೂವರು ಒಂದೊಂದು ಸಾಲು ಮುಗಿಸಿ ಮತ್ತೊಂದೊಂದು ಸಾಲು ಹಿಡಿದಿದ್ದರೂ ಭದ್ರಾನಾಯ್ಕನ ತಾಂಡದ ಹಿಂದಲೂರಿನ ಜಂಬವ್ವನ ಕೋಳಿ "ಕೂ ಕೂ ಕೂ" ಅನ್ನೋದು ಕೇಳಿಸಿತು. ಅದಾಗಿ ಸ್ವಲ್ಪ ಹೊತ್ತಿಗೆ "ಓಡ್ರಲೆ, ಓಡ್ರಿ" ಅಂತ ಮಂದಿ ಕೂಗುತ್ತ ತೊಪುನಾಯ್ಕನ ಹೊಲದ ಕೆಳಗಿರುವ ತಹಸಿಲ್ದಾರ ಮಂಜಪ್ಪನ ಹೊಲದಾಗಿನ ಬಾವಿ ಕಡೆಗೆ ಓಡಿ ಬರುತ್ತಿರುವುದು ಕೇಳಿಸಿತು. "ಲೇ ಕಾಳ್ಯ, ಸಾಮ್ಯ ಏನು ಗಲಾಟೆ ನೋಡ್ರಲೆ" ಅಂದ ಹುಲಿಯೂರ. ಇಬ್ಬರು ಖಾಲಿಯಿದ್ದ ಪಕ್ಕದ ಹೊಲದಿಂದ ನೋಡಿದರು. ಮಂದಿ ತಹಶಿಲ್ದಾರ ಮಂಜಪ್ಪನ ಹೊಲದ ಬಾವಿ ಸುತ್ತಲು ಜಮಾಯಿಸ ತೊಡಗಿದರು. "ಅಣ್ಣ ಹುಲಿಯೂರಣ್ಣ, ತಹಸಿಲ್ದಾರರ ಬಾವಿಯೊಳಗೆ ಯಾರೊ ಬಿದ್ದಂಗೈತೆ ಕಣಣ್ಣ ಮಂದಿ ಬಾವಿ ಸುತ್ತಲು ಮುಗಿ ಬಿದ್ದವರೆ" ಅಂದ ಕಾಳ್ಯ. "ಓಡ್ರಲೆ ನೋಡುವ ಯಾರಿಗೆ ಏನಾತು" ಹುಲಿಯೂರ ಓಟಕಿತ್ತಿದ್ದ. ಕಲ್ಲು ಮುಳ್ಳ ಒಂದು ನೋಡದೆ ಬಾವಿದಡಕ್ಕೆ ಬಂದು ಉಸಿರು ಬಿಟ್ಟಿದ್ದ. ಏದುಸಿರು ಬಿಡುತ್ತಲೆ "ಏನಾಯ್ತು ಯಾರು ಬಿದ್ದಾರ, ಯಾವಾಗ ಬಿದ್ದಾರ" ಅಲ್ಲೆ ನಿಂತಿದ್ದ ಜಾಂಬುಗೆ ಕೇಳಿದ. "ಅದೆ ಊರಮನಿ ನಿಂಗಜ್ಜಿ ಸೊಸಿ ಭೀಮವ್ವ" ಅಂದು ಸುಮ್ಮನಾದ. ಜಾಂಬು ಮುಳುಗುವವರ ಮಾರಿ ನೋಡ್ತಾ ನಿಂತಿದ್ದ. "ಯಾರು, ಸಂಗನ ಹೆಂಡತಿ ಭೀಮಿ. ಅಯ್ಯೋ ಶಿವನ ಮಗು ಹಡಿದು ಆರು ತಿಂಗಳಾತಲ್ಲೊ ಶಿವ, ಆಕಿಗ ಏನಾತು ಅಂತಹದ್ದು" ಅಂದವನೆ ಬಾವಿಯೊಳಗೆ ಅವನ ಅಣ್ಣ ಧಣಿಯ ಇರೋದನ್ನ ಖಾತ್ರಿ ಪಡಿಸಿಕೊಂಡವನೆ ದಡದ ಮೇಲಿಂದ ಬಾವಿಯೊಳಗೆ ಜಿಗಿದ.

ಹುಲಿಯೂರ ಜಿಗಿಯೋದೇನೊ ಜಿಗದಿದ್ದ. ತಾಂಡದ ಕೆರೆಯೊಳಗೆ, ಅವನು ಓದಿದ ಬಂಜಾರ ಹಾಸ್ಟೆಲಿನಿಂದ ಹರಿಯುತ್ತಿರುವ ಚಾನಲಿಗೆ ಹೋಗಿ ಹಾರಿ ಈಜಾಡುವುದರಲ್ಲಿ ಪಕ್ಕ ಆಗಿದ್ದ. ಹರಿದಾಡುವ ನೀರಲ್ಲಿ ಈಜುವವನಿಗೆ ನಿಂತ ನೀರಲ್ಲಿ ಈಜುವುದೇನು ಕಷ್ಟವಲ್ಲ ಹಾಗಾಗಿ ಹಿಂದೆ ಮುಂದೆ ನೋಡದಂಗೆ ಜಿಗಿದಿದ್ದ.

ಅವನ ತಂದೆ ತೊಪುನಾಯ್ಕ ಒಮ್ಮೆ ಹೇಳಿದ ಮಾತು ಥಟ್ ಅಂತ ನೆನಪಿಗೆ ಬಂತು. "ಯಾವಾಗಲೂ ನೀರಲ್ಲಿ ಮುಳುಗಿರುವ ವ್ಯಕ್ತಿಯ ಹತ್ತಿರ ಹೋಗಬಾರದು. ಮೊದಲೆ ಹೆದರಿ ಕಂಗಾಲಾಗಿರುತ್ತಾನೆ. ಕೈಗೆ ಸಿಕ್ಕಿದ್ದನ್ನ ಹಿಡಿದುಕೊಳ್ಳಾಕ ಪ್ರಯತ್ನ ಪಡುತ್ತಿರುತ್ತಾನೆ, ಹಾಗಾಗಿ ಅವನನ್ನ ದೂರದಿಂದಲೆ ನಿಭಾಯಿಸಬೇಕು. ಇಲ್ಲದಿದ್ದರೆ ಕಾಲು ಕೈ ಅಲ್ಲಾಡಿಸದಂತೆ ಬಿಗಿಯಾಗಿ ಅಪ್ಪಿಕೊಂಡು ತಾನು ಮುಳುಗುವುದಲ್ಲದೆ ಕಾಪಾಡಲು ಬಂದವನನ್ನು ಮುಳುಗಿಸಿಬಿಡುತ್ತಾನೆ. ಹತ್ತಿರ ಬರದಂಗೆ ಅವನನ್ನ ಜಾಡಿಸಿ ಒದ್ದು, ನೀರು ಕುಡಿಯಾಕ ಬಿಟ್ಟು ಮುಳುಗುತ್ತಿರುವಾಗ ಕೂದಲು ಹಿಡಿದು ಮೇಲೆ ತರಬೇಕು" ಹುಲಿಯೂರನ ಧೈರ್ಯ ಸಾಲದಾಗಿತ್ತು. ಒಳಗೆ ಮುಳುಗಿದಾಗ "ಗಟ್ಟಿಯಾಗಿ ಹಿಡಿದುಕೊಂಡರೆ?" ಎಷ್ಟು ವೇಗದಿಂದ ಮುಳುಗಿದ್ದನೊ ಅಷ್ಟೇ ವೇಗದಿಂದ ಮೇಲೆ ಬಂದಿದ್ದ. ತಾಂಡದ ಈಜು ಬಲ್ಲ ಪಂಡಿತರೆಲ್ಲಾ ಹದಿನೈದು ಇಪ್ಪತ್ತಡಿ ಅಗಲದ ಬಾವಿಯೊಳಗೆ ಮುಳುಗಿ ಏಳತೊಡಗಿದರು. "ಎಲ್ಲು ಕಾಣವಲ್ಲಳು. ಬಿದ್ದಾಳ ಸುಕಾಸುಮ್ಮನೆ ದಣಿಸಾಕ ಹತ್ತಿರ" ಒಬ್ಬ ಕೇಳಿದ. ಯಾವಾಗಲೂ ಬಾವಿಯೊಳಗೆ ನೀರು ಸೇದುವಾಗ ಹಗ್ಗದ ಕುಣಿಕೆ ಸರಿಯಾಗಿ ಹಾಕದೆ ತಾಮ್ರದ ಕೊಡ ಬಿಟ್ಟಿದ್ದರೆ ಮೇಲೆ ಅರ್ಧಕ್ಕೆ "ಢಂ" ಅಂತ ಒಳಗೆ ಬಿದ್ದು ಬಿಡುತ್ತಿತ್ತು. ಕೊಡಪಾನವೆ ಇಲ್ಲದೆ ಪರದಾಡುವ ಸಂದರ್ಭದಲ್ಲಿ ನಂಜನಾಯ್ಕನಿಗೆ ಸೇರುಪಾವು ಧವಸ ಕೊಟ್ಟು ತೆಗೆಸುತ್ತಿದ್ದರು. ಹಾಗಾಗಿ ನಂಜನಾಯ್ಕ ಭಲೆ ಧೈರ್ಯವಂತ ಅಂತ ಮಂದಿ ಅಂದುಕೊಂಡಿದ್ದರು. ನಂಜನಾಯ್ಕ ಮುಳುಗಿ ಕಾಣದಕ್ಕೆ ಮೇಲೆಬಂದ.

ಅವನು ಒಳಗೆ ಮುಳುಗಿದರೆ ಸಿದಾ ತಳಕ್ಕೆ ಹೋಗಿ ಕಾಲು ಕೈ ಆಡಿಸಿಯೆ ಮೇಲೆ ಬರುತ್ತಿದ್ದ. ಬಾಕಿಯವರಿಗೆ ಧೈರ್ಯ ಸಾಲದೆ ಮೇಲೆ ಮೇಲೆ ಮುಳಗುವ ಪ್ರಯತ್ನ ಮಾಡಿದ್ದರು. "ಏಯ್ ಸುಳ್ಳ ಹೇಳಬೇಡ್ರಲೆ ಖರೆ ಹೇಳ್ರಿ ಬೀಮವ್ವ ಬಿದ್ದಿದ್ದನ್ನ ನೀವು ಕಂಡೀರ?" ಎಂಥ ರಭಸವಾಗಿ ನೀರು ಹರಿಯುತ್ತಿರಲಿ ಅದರ ವಿರುದ್ಧ ಈಜಾಡುವ ನಾಮದೇವನಾಯ್ಕ ಕೂಗಿದ. "ಹೌದು ಮಾರಾಯ ಓಡಿ ಬಂದ್ಲು, ಯಾಕೊ ಓಡ್ತಿರಬೇಕು ಅಂತ ಸುಮ್ಮನಾದೆ, ಬಾರಲೇ ತಮ್ಮ ನಿನ್ನ ಹೆಣ್ತಿ ತಾಸಿಲ್ದಾರನ ಬಾವಿ ಕಡೀಗ ಓಡಿದ್ಲು ಅಂತ ನಾನೆ ನನ್ನ ತಮ್ಮ ಸಂಗಣ್ಣನ ಕರದೆ ಇಬ್ಬರು ಅಕ್ಕತಮ್ಮ ಬರೋದ್ರಾಗ ಬಾವಿಯೊಳಗೆ ಯಾರೊ ಬಿದ್ದಂಗಾತು" ಮಾಳವ್ವ ಸವಿಸ್ತಾರವಾಗಿ ವರದಿ ಒಪ್ಪಿಸಿಂದ ನಂಜನಾಯ್ಕ ಒಳಗೆ ಮುಳುಗಿದ. ಒಂದು ಕಡೆಯಿಂದ ಸೋಸುತ್ತ ಹೋದ. ಬಾವಿಯ ಒಂದು ದಂಡೆಯೊಳಗೆ ಕಾಲಿಗೆ ಏನೊ ತಗಲಿದಂಗಾಗಿ ಅಂಜಿದ. ಧೈರ್ಯಮಾಡಿ ಮೆಲ್ಲಗೆ ಬಿದ್ದಿದ್ದ ವಸ್ತುವಿನ ಸಮೀಪ ಹೋಗಿ ಸಿಕ್ಕ ಒಂದು ಭಾಗವನ್ನ ಹಿಡಿದು ಮೇಲೆ ತಂದ. ನೀರಿನಲ್ಲಿ ಮುಳುಗಿದ ಯಾವುದೇ ವಸ್ತು ಹಗರವಾಗಿ ಬಿಡುವುದರಿಂದ ಸುಲಭವಾಗಿಯೆ ಭೀಮವ್ವನ ದೇಹ ತಗೊಂಡು ಮೆಟ್ಟಿಲಿರುವ ತುದಿಗೆ ತಂದಿದ್ದ. "ಯವ್ವ ನಿನ್ನ ಮಗನಿಗೆ ಏನು ಹೇಳಿ

ಹೋದೆ" ಅವಳ ನಾದಿನಿ ಮಾಳವ್ವ ಅರಬಾಡಿಸಿದಳು. ಸಂಗಣ್ಣ "ಒಂದಮಾತು ಹೇಳದಂಗೆ ನೋಡಿಕೊಂಡಿದ್ನಲ್ಲೆ, ಯಾರದೊ ಮಾತಿಗೆ" ಮೊಸಳೆ ಕಣ್ಣೀರು ಸುರಿಸಿದ್ದ. ಭೀಮವ್ವ, ಸಂಗಣ್ಣನ ನಡುವೆ ಅದೇನು ನಡೆದಿತ್ತು ಬರಿ ಆರುತಿಂಗಳ ಮಗನನ್ನ ಬಿಟ್ಟು ಅಕಿ ಬಾವಿಗೆ ಹಾರಿದ್ದಳು.

ಅವಳನ್ನ ದಂಡೆಗೆ ಎಳೆದು ತಂದು ಬಿಟ್ಟು ನಂಜನಾಯ್ಕ ದಡಹತ್ತಿ ಬೀಡಿ ಸೇದ ತೊಡಗಿದ "ಅಯ್ಯೊ ಶಿವನ ದೊಡ್ಡ ಜೀವ ಈಗ ಹೋತು" ಅಂತ ಊರಮನಿ ಶಂಬುಲಿಂಗನ ಮಗ ಹನ್ಮಂತ ಹೇಳಿದ. ಮಂದಿಗೇನು ಗೊತ್ತು ಕಂಡವರು ಕಂಡಂಗ ಮಾತಾಡತೊಡಗಿದರು. "ಹೌದು ಸಂಗನ ಹೇಣ್ತಿ ಯಾಕ ಸತ್ಲು?" ಪಕ್ಕದಮನೆ ಪಾರ್ವತಿ ಹಿಂದಿನ ಮನೆ ಜುಂಜಮ್ಮನ ಕೇಳಿದಳು. "ಅಯ್ಯೊ ಅದನೇನ ಕೇಳ್ತಿಯೆ ತಾಯಿ ಯಾ ಸೀಮೆ ಹೊಂಗಸೊ ಏನೊ ಬಂದಾಗಿನಿಂದ ಬರಿ ಬಾಯಿ ಮಾಡ್ತಿದ್ಲೆ ನಮ್ಮವ್ವ, ಅದೇನು ನಡಿತಿತ್ತೊ ಆ ಮನಿಯೊಳಗೆ ಗಲಾಟೆ ಅಂತು ಕೇಳಿಸುತ್ತಿತ್ತು" ಮೆಲ್ಲಗೆ ಹೇಳಿದ್ಲು "ಅಲ್ಲೆ ಜುಂಜಿ, ಮಂದಿ ಮಾತಾಡ್ತಿದ್ದಾರೆ ಸಂಗ ಗಂಡಸೆ ಅಲ್ವಂತೆ, ಪಾಪ ಯಾರ ಮನಿ ಮಕ್ಕಳಾದ್ರು ಅಷ್ಟೆ ನೋಡು. ಎಷ್ಟೆ ಕಷ್ಟ ಕೊಡ್ಲಿ ಸಹಿಸಿಕೊಳ್ತಾರವ್ವ, ಗಂಡ ಕೈಲಾಗದವನು, ನಾಮರ್ಧ ಅಂದ್ರ ಯಾವ ಹೆಂಗಸೂ ಸಹಿಸೋದಿಲ್ಲ" ಸಂಗನ ಬುಡಕ್ಕೆ ಕೈ ಹಾಕಿದ್ಲು. ಪಾರ್ವತಿ "ಅದೇನೊ ಪಾರಕ್ಕ ನನಗೇನು ಗೊತ್ತವ್ವ ಅಲ್ಲಾ ಆರ ತಿಂಗಳ ಮಗು ಬೇರೆ ಐತಲ್ಲೆ ನಮ್ಮವ್ವ, ಮತ್ತ ಅದ್ಯಾರ ಪಿಂಡ ಅಂತೀಯಾ?" ಜುಂಜಮ್ಮ ಕುತೂಹಲ ತಡಿಯಾಕೆ ಆಗದೆ ಕೇಳಿದಳು. "ಅದೇನೊ ಜುಂಜಿ, ದೇವರೊಬ್ಬನಿಗೆ ಗೊತ್ತು ಸತ್ತುಹೋದ ಭೀಮವ್ವಗೆ ಇಬ್ಬರಿಗೆ ಗೊತ್ತು ಆ ಮಗನ ರಹಸ್ಯ" ಅಂದ್ಲು ಪಾರ್ವತಿ.

ಮಂದಿ ಬಾಯಿಯೊಳಗೆ ಸುಳ್ಳು ಸತ್ಯ ಆಗುತ್ತೆ, ಸತ್ಯ ಸುಳ್ಳಾಗುತ್ತೆ ಅನ್ನೋದಕ್ಕೆ ಗರಿಗೆದರಿದ ಈ ಘಟನೆಯೆ ಸಾಕ್ಷಿಯಾಗಿತ್ತು. ಯಾರೊ "ಭೀಮವ್ವ ಸರಿ ಇರಲಿಲ್ಲ ಗಂಡನಿಗೆ ಭಾರಿ ಹಿಂಸೆ ಮಾಡುತ್ತಿದ್ದಳು. ತಡಿಯಾಕ ಆಗದೆ ಕುತಿಗೆ ಹಿಸಿಕಿ ಅವಳ ಅಕ್ಕ ಮಾಳವ್ವನ ಕೂಡ ಸೇರಿ ಬಾವಿಗೆ ಹೆಣ ಬೀಸಾಡಿದ್ದಾರೆ" ಅಂತೇಳಿ ಹೇಳುತ್ತಿದ್ದರು. ಆ ವಿಷಯ ಹಾಗಿರಲಿ "ಲೇ ಯಾರಾದರೂ ಪೋಲೀಸಿನವರು ಬಂದು ಕೇಳಿದರೆ ನಮ್ಮ ಹುಲಿಯೂರನೂ ಬಾವಿಯೊಳಗೆ ಹೆಣ ಹುಡುಕೋದಕ್ಕೆ ಬಂದಿದ್ದ ಅಂತ ಹೇಳಬೇಡ್ರಪ್ಪ. ಓದಾಕ ಹತ್ಯಾನ, ನಾಳೆ ಗೌರ್ಮೆಂಟ್ ನೌಕರಿ ಹಿಡಿಯೋನ ಅದಾನ, ಸುಮ್ಮನೆ ಕೋರ್ಟು, ಕಛೇರಿ ಅಂತ ತಿರುಗಾಡೊದಾದೀತು" ಧಣಿಯ ಎಲ್ಲರಿಗೂ ಹೇಳಿದ್ದ. ಮುಂದೆ ಕೇಸು ಏನಾಯ್ತು, ಸಂಗ ಜೈಲಿಗ ಹೋದನ ತಿಳಿಯೋದಕ್ಕೆ ಹುಲಿಯೂರ ತಾಂಡದೊಳಗ ಇರಲಿಲ್ಲ. ಅವನು ಓದಾಕ ಧಾರವಾಡಕ್ಕ ಹೊಂಟು ಹೋಗಿದ್ದ.

* * *

84. ಮೂಕ ಬಸವ ಸಂತಹ ಸಾವಕ್ಕನವರ ಭರಮ

ಹುಲಿಯೂರ ಹೆಚ್ಚಿನ ಸಮಯ ದಾವಣಗೇರಿ, ಹರಿಹರ, ಮೈಸೂರು, ಧಾರವಾಡದ ಹಾಸ್ಟೇಲುಗಳಲ್ಲೆ ಕಳೆದರು. ದಸರಾ ರಜೆ ಒಂದು ತಿಂಗಳು, ಬೇಸಿಗೆ ರಜೆಯ ಎರಡು ತಿಂಗಳು ತಾಂಡದಲ್ಲೆ ಕಳೆಯಬೇಕಾಗಿತ್ತು. ಹಾಗಾಗಿ ತಾಂಡದಲ್ಲಿದ್ದ ಹಿರಿಯರು, ಚಿಕ್ಕಮಕ್ಕಳು, ಅವನ ಓರಗೆಯವರು, ಮುದುಕರನ್ನ ಚೆನ್ನಾಗಿ ಬಲ್ಲವನಾಗಿದ್ದ. ಅವನು ಬಹಳ ಸೂಕ್ಷ್ಮಮತಿಯಾಗಿದ್ದ. ಪ್ರತಿದಿನ ಸಂಜೆ ಅವನ ಮನೆ ಮುಂದಿನ ದೇವಸ್ಥಾನದಲ್ಲಿ ಭಜನೆ ಮಾಡುವುದಕ್ಕೆ ತಾಂಡದ ಮಂದಿ ಊರ ಮಂದಿ ಬರುತ್ತಿದ್ದರು. ಹಾಡಹಗಲೆ ಹನ್ಮಂತ, ದೇವರ ದುಂಡಣ್ಣ, ಬಡಗಿ ದುಂದಪ್ಪ ಸಾವಕ್ಕನವರ ಬಸರಾಜ, ಸೋಮ್ಲಾಪುರದ ಪುರಂದರ ತಪ್ಪದೆ ಬರುತ್ತಿದ್ದರು. ಹುಲಿಯೂರ ಅವರೆಲ್ಲರನ್ನ ಬಹಳ ಸೂಕ್ಷ್ಮವಾಗಿಯೆ ಗಮನಿಸಿದ್ದ. ಭಜನೆ ಮಾಡುತ್ತಲೆ ಪ್ರತಿಯೊಬ್ಬರ ಬಗ್ಗೆ ತಿಳಿಯುವ ಪ್ರಯತ್ನ ಮಾಡಿದ್ದ. ಕೆಲವರು ಮಾತಾಡುತ್ತಿದ್ದರು, ಬೇರೆ ಬೇರೆ ಸುದ್ಧಿಗಳನ್ನ ತಕ್ಕೊಂಡು ಹರಟೆ ಹೊಡೆದರೆ ಸಾವಕ್ಕನವರ ಭರಮ್ಮ ಮಾತ್ರ ಬಾಯಿನೆ ಬಿಡುತ್ತಿರಲಿಲ್ಲ. ಹುಲಿಯೂರಗ ಹೈರಾಣಾತು. "ಭಜನೆ ಮಾಡೋದಕ್ಕೆ ಕನಿಷ್ಠ ಏಳೆಂಟ ಮಂದಿನಾರು ಬಂದಿರ್ತಾರ ಅದ್ರಾಗ ಈ ಭರಮನ್ನ ಬಿಟ್ಟು ಎಲ್ಲರೂ ಮಾತಾಡ್ತಾರ, ಕತಿ ಹೇಳ್ತಾರ ನಗ್ತಾರ ಈತ ಯಾಕೆ ಹೀಗೆ?" ಅವನ ಪಕ್ಕದ ಹನುಮಗ ಕೇಳಿದ್ದ. "ಯಾರಿಗೊತ್ತಲೆ ಹುಡುಗ, ನಾನು ಆತನ ಜೊತೆಗೆ ಕೂಲಿ ಕೆಲಸಕ್ಕೆ ಹೋಗಿನಿ, ಯಾರಾದರು ಹೆಣ್ಣು ಹುಡುಗಿಯರ ಜೊತೆಗೆ ನಗೆ ಚಾಟಕೆ, ಸರಸ ಸಲ್ಲಾಪ ಊಹೂಂ ಮನಿಯಿಂದ ಹೆಂಗ ಬಂದಿರ್ತಾನೊ ಕೆಲಸ ಮುಗಿದ ಮೇಲೆ ಹಾಗೆ ವಾಪಾಸು ಬರ್ತಾನ" ಮತ್ತೊಂದು ಅಘಾತದ ಸುದ್ದಿ ಕೊಟ್ಟ ಹನುಮ "ಅಲ್ಲಾ ಮಾತಾಡ್ತಾನ, ಇಲ್ಲ ಮೂಕ, ಕೆಪ್ಪ" ಹುಲಿಯೂರ ಅನುಮಾನಿಸಿದ. "ಹಂಗ ಅಂದಗಿಂದಿಯಲೆ ಭಾರಿ ಸಿಟ್ಟಿನ ಮನುಷ್ಯ ದೂರಿರು" ಹನುಮ ಎಚ್ಚರಿಸಿದ್ದ.

ಸಾವಕ್ಕನವರ ಭರಮನಿಗೆ ಮದುವೆ ಆಯ್ತು. "ಇನ್ನೂ ಮುಂದೆ ಏನು ಇವನ ಕತೆ ಹೆಂಡತಿ ಹತ್ರ ಮಾತಾಡ ಬೇಕಲ್ಲಾ" ಮಂದಿ ಮಾತು ಸುರು ಆಗಿತ್ತು.

ಮದುವೆಯಾಗಿ ಆರುವರ್ಷದಾಗ ಹೆಂಡತಿ ಜೊತೆಗೆ ಮೂರಸಲ ಮಾತಾಡಿದ್ನಂತೆ. ಜಂಬವ್ವ ದೇವರಂತವಳು. ಎರಡು ಮಕ್ಕಳ ತಾಯಿ. ಮೌನ ಆವರಿಸುವ ಮನೆ ಆಗಾಗ ಅಲ್ಪ ಸ್ವಲ್ಪ ಮಕ್ಕಳ ನಗು, ಅವಳೇ "ಅಯ್ಯೊ ನನಕೂಸೆ, ಕಂದ" ಅವಳೆ ಧ್ವನಿ ತಗದು ಆಟ ಆಡಿಸುತ್ತಿದ್ದಳು. ಒಮ್ಮೆ ದೊಡ್ಡ ಮಗನ್ನ ನೆಲದ ಮೇಲೆ ಹಾಕಿ ಮನೆಯಿಂದ ಹೊರಗ ಬಂದು ಕೇಳಿಸಿಕೊಳ್ಳುತ್ತಿದ್ದಳು. ಮಗುವನ್ನ ಎತ್ತಿ ಆಡಿಸ್ತಾನ? ಅತ್ತರೆ ಹೇಗೆ ಸಮಜಾಯಿಸ್ತಾನ ಅಂತ ನೋಡಲು ಕಾಯ್ದು ಕುಳಿತಳು. ಮಗು ಅಳಲು ಆರಂಭಿಸಿತು. ಅವನು ಸುಮ್ಮನೆ ಕುಳಿತಿದ್ದ. ಮಗು ಇನ್ನೂ ಜೋರಾಗಿ ಅಳಲು ಆರಂಭಿಸಿತು. ಅವನು ಹಾಗೆ ಕುಂತಿದ್ದ. ಸ್ವಲ್ಪ ಹೊತ್ತು ಆದ ಮೇಲೆ ಏನು ಅನಿಸಿತೊ ಏನೊ ಎತ್ಕೊಂಡು ಹೋಗಿ ಜೋಳಿಗೆಯೊಳಗೆ ಮಲಗಿಸಿ ತೂಗತೊಡಗಿದ. "ಅಲೆಲೊಲೊಲಾಯಿ" ಅಂತ ಜೋಗುಳ ಹಾಡುವುದಾಗಲಿ, ಮಗುವಿನ ಅಳುವಿನಿಂದ ಮನಸ್ಸಿಗೆ ಕಿರಿಕಿರಿಯಾಗಿ ವಿಚಲಿತಗೊಳ್ಳುವುದಾಗಲಿ ಮಾಡಲೆ ಇಲ್ಲ. ಹೇಗೆ ಶಿಲೆಯಂತೆ ಕುಳಿತಿದ್ದನೊ ಜೋಳಿಗೆಯಲ್ಲಿ ಹಾಕಿ ತೂಗುತ್ತ ಶೂನ್ಯವನ್ನ ದಿಟ್ಟಿಸುತ್ತಲೇ ಕುಳಿತಿದ್ದ. ಜಂಬವ್ವಗೆ ಆ ವ್ಯಕ್ತಿಯ ಬಗ್ಗೆ ಕರುಣೆ, ಮರುಕ ಏನು ಉಂಟಾಗುತ್ತಿರಲಿಲ್ಲಾ. "ಊಟಕ್ಕ ಬರ್ರಿ" ಅಂದಾಗ ಕೈ ತೊಳ್ಕೊಂಡು ತಟ್ಟೆ ಮುಂದೆ ಕೂರ್‍ತಾನ. ಊಟವಾದ ಮೇಲೆ ಹೊರಗ ಕಟ್ಟೆ ಮುಂದೆ ಕುಳಿತು ಒಂದು ಜೂರಿ ಬೀಡಿ ಸೇದಿ ಚಟ ತೀರಿಸಿಕೊಳ್ಳುವುದು ಇಷ್ಟೆ ಅವನ ಕೆಲಸ. "ಹೊತ್ತಾತು ಕೂಲಿಗೆ ಗಡಾನ ಹೋಗಬೇಕು ಮೇಲೇಳ್ರಿ" ಅಂದರೆ "ಹೂಂ" ಇಲ್ಲಾ "ಹಾಂ" ಅನ್ನದೆ ಎದ್ದು ಹಳ್ಳದ ಕಡಿಗೆ ಹೋಗಿ ಬಂದವನೆ ಖುದ್ದ ಒಲೆಯ ಹತ್ರ ಹೋಗಿ ಇಜ್ಜಲ ತುಂಡು ತಗೊಂಡು ಚೆನ್ನಾಗಿ ಅಗದು ಹಲ್ಲು ತಿಕ್ಕಿ ಬಾಯಿ ಮುಕ್ಕಳಿಸಿ ನಾಲಿಗೆ ಮೇಲಿನ ಇಜ್ಜಲಿನ ಕರಿಯನ್ನ ಚೆನ್ನಾಗಿ ತಿಕ್ಕಿ ಜಂಬಮ್ಮ ಮಾಡಿರಬಹುದಾದ ಡಿಕಾಕ್ಷನ್ ಒಂದು ಕಪ್ಪಿಗೆ ಸೊಸಿಕೊಂಡು ಕುಡಿದರೆ ಅವನ ಅವತ್ತಿನ ದಿನ ಆರಂಭವಾಯ್ತು. ಜಂಬಮ್ಮ ತಿಳಿದು "ಮಗುನ ಆಡ್ಸಿ ಅಡಿಗೆ ಮಾಡ್ತೀನಿ" ಅಂದಾಗ, ಎತ್ಕೊಂಡು ಕಟ್ಟೆಮೇಲೆ ಕೂಡುತ್ತಿದ್ದ. ಮಗು ತನ್ನ ಪಾಡಿಗೆ ತಾನು ಆಡುತಿತ್ತು ಅವನು ಕೊರಿಬೀಡಿ ತಗದು ಸೇದುತಿದ್ದ. ಯಾರಾದರೂ ಬೀಗರು, ಪರಿಚಿತರು ಬಂದ್ರ "ಏನಪ್ಪ ಭರಮಣ್ಣ ಪಾಡದಿಯ" ಅಂತ ಹೇಳಿದರೆ "ಹೂಂ ಪಾಡದಿನಿ" ಅಷ್ಟೆ ಆತನ ಜವಾಬು. "ನೀವು ಹೇಗಿದ್ದಿರಿ? ಯಾವಾಗ ಬಂದ್ರಿ, ಬರ್ರಿ ಚಹಾ ಕುಡಿರಿ" ಇವು ಅಸಾಧ್ಯದ ಮಾತುಗಳು. ಕೇಳಿದವನು ಕಡದ ಹತ್ರ ತುರಿಸಿಕೊಳ್ಳದಂತೆ ಸುಮ್ಮನೆ ವಾಪಾಸು ಆಗುತ್ತಿದ್ದ.

ಭರಮ್ಮ ಹುಟ್ಟಿನಿಂದಲೇ ಹೀಗೊ, ನಡಕ್ಕ ಏನಾದರೂ ತೊಂದರೆಯಾಯಿತು. ಯಾರಿಗೂ ಗೊತ್ತಿಲ್ಲ. ಆದರೆ ಪರಿಚಿತರಲ್ಲಿ ಆತನ ಮಾತಿನ ಬಗ್ಗೆ ಬಹಳಷ್ಟು ಮಂದಿಗೆ ಅವನು ಹಾಗೆ ಅಂತ ಗೊತ್ತಿತ್ತು. "ಅವನ ತಂದೆ ತಾಯಿ ಜೊತೆಗಾರರು

ಮಾತಾಡುತಿದ್ನ?" ಹುಲಿಯೂರಗೆ ಕಾಡಿದ ಪ್ರಶ್ನೆ ಆದರೆ ಬದುಕಿರುವ ಅವನ ತಾಯಿಗೆ ಸಾಕಷ್ಟು ವಯಸ್ಸಾಗಿತ್ತು. ಅದಕ್ಕೆ ಪ್ರಶ್ನೆ ಪ್ರಶ್ನೆಯಾಗಿಯೆ ಅವನ ಮನಸ್ಸಿನೊಳಗೆ ಉಳಿದಿತ್ತು. ಅವನ ವಯಸ್ಸಿನವರಾದ ಡಿಳ್ಳಿ, ಪುರಂದರ, ಹನುಮಂತ ಒಟ್ಟೊಟ್ಟಿಗೆ ಬೆಳದವರು. "ಅಲ್ಲ ಪುರಂದರಣ್ಣ ಭರಮಣ್ಣ ನಿಮ್ಮ ಜೊತೆಗೆ ಇರುವಾಗಲೂ ಹೀಗೆ ಸುಮ್ಮನಿರ್ತಾನ ಹೆಂಗೆ?" ಕೇಳಿದ ಹುಲಿಯೂರ. "ಆರಂಭದಲ್ಲಿ ನಾವೆಲ್ಲ ಗಿಚ್ಚಿ ಬಗರಿ, ಗೋಲಿ, ಮರಕೋತಿ ಆಡುವಾಗ ಸ್ವಲ್ಪ ಮಾತಾಡ್ತಿದ್ದ, ಮುಂದೆ ಬೆಳಿತ ಬೆಳಿತ ನಾವೆ ಏನಲೇ ಭರಮ್ಮ ಮೀನು ಹಿಡಿಯಾಕ ಬರ್ತಿಯಾ ಅಂದ್ರೆ ಏನು ಪ್ರತಿಕ್ರೀಯೆ ಕೊಡದೆ ನಾವು ನಮ್ಮ ಪಾಡಿಗೆ ಹಳ್ಳದ ಕಡಿಗೆ ಹೊರಟ್ವಿ ಅಂದ್ಕ ನಮ್ಮ ಹಿಂದಿಂದ ಬಂದು ನಮ್ಮನ್ನ ಸೇರ್ಕೊಂತಿದ್ದ" ಪುರಂದರ ಅವನ ಅನುಭವ ಹೇಳಿದ ಹುಲಿಯೂರನಿಗೆ. ಅವನ ತಮ್ಮ ಅಂದಾನಿದು ಅದೇ ಮಾತು. "ಎಯ್ ಅವನು ಹುಟ್ಟಿದಾರಭ್ಯ ಹಿಂಗ, ಯಾರಿಗೂ ಬಾಯಿ ಬಿಟ್ಟು ಜೋರಾಗಿ ಗದರಿಸಲಿಲ್ಲ, ಬೊಯ್ಯಲಿಲ್ಲಾ. ಬಿರುನುಡಿಯಾಡಿಲ್ಲ. ಪಾಪ ನಮ್ಮ ಅತ್ತೆಗೆಗಂತು ಇನ್ನೂ ಹಿಂಸೆ. ಒಂದು ಪ್ರೀತಿ ಮಾತಿಲ್ಲ, ಕೆಟ್ಟ ಮಾತಂತೂ ಮದಲೆ ಇಲ್ಲ. ಈತನೂ ದೇವರ ಸೃಷ್ಟಿನೆ ಆದರೆ ವಿಭಿನ್ನ ಸೃಷ್ಟಿ" ಅಂದವನೆ ಭಾವುಕನಾಗಿದ್ದ.

ಭರಮ ಮಾನಸಿಕ ಸ್ಥಿತಿ ಹೇಗಿರಬಹುದು, ಯಾವಾಗಲೂ ಮೌನವಾಗಿದ್ದರೆ ಜೀವನ ನಡೆಯುವುದಾದರೂ ಹೇಗೆ, ಜೀವನ ಅಂದರೆ ಸಂತೋಷ, ದುಃಖ, ನೋವು, ಅಳು, ವ್ಯಾಕುಲತೆ, ಕಕ್ಕುಲತೆ, ಒಬ್ಬರ ಕಾಲು ಎಳೆಯುವುದು ಏನೆಲ್ಲಾ ಇರುತ್ತವೆ ಅದರಲ್ಲಿ ಸ್ವಾರಸ್ಯವೆ ಇಲ್ಲದೆ, ಏರಿಳಿತವೆ ಇಲ್ಲದೆ ಐವತ್ತು ವರ್ಷದ ವರೆಗೆ ಬದುಕುವುದೆಂದರೇನು. ತಾರಕಕ್ಕಾದರೂ ಹೋಗಬೇಕು, ಜಗಳವಾದರೂ ಆಡಬೇಕು. ಯಾವುದೂ ಇಲ್ಲದ ನಿರ್ಲಿಪ್ತ ಬದುಕು, ಖಾರ ತಿಂದಾಗಲಾದರೂ ಈತನ ಭಾವನೆ ಬದಲಾಗುವುದೊ ಇಲ್ಲವೊ ಅನುಮಾನ. ಇಂತಹ ಭಾವರಹಿತ ಮನುಷ್ಯನ ಜೊತೆಗೆ ಬಾಳುವೆ ಮಾಡಿದ ಜಂಬವ್ವ ನಿಜವಾಗಿಯೂ ಮಹಾನ್ ಅನಿಸಿದ್ದಳು.

* * *

85. ನೆರೆಹೊರೆ ಹೊಲದವರ ಎಡಬಡಂಗಿತನಗಳು

ಮನುಷ್ಯನ ಸಣ್ಣತನ ಯಾವಾಗಲೂ ಅವನ ಅಭಿವ್ಯಕ್ತಿಯಲ್ಲೆ ಕಂಡುಬರುತ್ತದೆ. 'ಆನೆಗೆ ಆನೆ ಹೋದ್ರು ಬಾಲಕ್ಕೆ ಬಡದಾಡಿದ್ರಂತೆ' ಏನೆಲ್ಲಾ ಆಗಿರುತ್ತೆ ಆದರೆ ಚಿಕ್ಕಪುಟ್ಟ ವಿಷಯಗಳಿಗೆ ಜಿದ್ದಿಗೆ ಬಿದ್ದಿರುತ್ತಾರೆ. ಅದರಲ್ಲೂ ತಲೆ ಇಲ್ಲದವರು ಪಕ್ಕದಲ್ಲಿದ್ದರಂತು ಮುಗದೆ ಹೋಯ್ತು. ಯಾರದೊ ಪಕ್ಕದ ಮನೆಯವರ ಕುರಿಮರಿ ಬಂದು ಮನಿ ಮುಂದೆ ಏನಕ್ಕೊ ಇಟ್ಟ ಪಾತ್ರೆಯಲ್ಲಿನ ನೀರಿಗೆ ಬಾಯಿ ಹಾಕ್ತು. ಹಸುಕಟ್ಟೆ ಮೇಲಿದ್ದ ಹುಲ್ಲು ಹಿರಿದುಕೊಂಡು ತಿನ್ನತೊಡಗಿತು. ಕೋಳಿಮನೆ ಸಂದಿಯೊಳಗಿನ ಕಸವನ್ನ ಕೆದರಿ ಕಾಳು ಹುಡುಕ ತೊಡಗಿತು. ಅದಕ್ಕೆ ಪಕ್ಕದವನು ದೊಡ್ಡ ಮನಸ್ಸುಳ್ಳವನಾಗಿರದಿದ್ದರೆ. "ಅಲೆ ಯಾರದಲೆ ಕುರಿಮರಿ ನೀರೆಲ್ಲಾ ಕುಡಿದು ಬಿಡ್ತು. ಕಾಲಮುರಿ ಅದರ್ದು. ಯಾ ಮಗನಂದ ನೋಡು ಅದು, ಮಾನಮರ್ಯಾದೆ ಐತೊ ಇಲ್ಲೊ, ಜಾನುವಾರು ಕಟ್ಟಿದರೆ ಅದಕ್ಕೆ ಮೇವು ನೀರು ನೋಡಬೇಕು" ಅಂತ ಸುರು ಹಚ್ಕೊಂಡು ಕಾಲ ಕೆದರಿ ಜಗಳಕ್ಕೆ ಬರುತ್ತಾನೆ. ಇಂತಹ ಸ್ಥಿತಿಯಲ್ಲಿ ಎದುರಿನವನು ಸುಮ್ಮನಿದ್ದ ಇದ್ದ ಇಲ್ಲಿಕ್ರ ತೆಕ್ಕಮಾರಿ ಬೀಳುವುದೊಂದೆ. ಇಂತಹ ನೆರೆಹೊರೆಯವರಾದರೆ ಬದುಕು ಸಾಗುವುದು ಹೇಗೆ?

ತೊಪುನಾಯ್ಕನಿಗೂ ಇಂತಹವರೆ ಒಂದಿಬ್ಬರು ಗಂಟು ಬಿದ್ದಿದ್ದರು. ಒಬ್ಬ ಅವನ ಸ್ವಂತ ತಮ್ಮ ಜೀವ್ಲನಾಯ್ಕ. ತೊಪುನಾಯ್ಕನೊಂದಿಗೆ ಜಿದ್ದಿಗೆ ಬಿದ್ದು ಮಕ್ಕಳನ್ನ ಹುಟ್ಟಿಸುವ ಪ್ರಕ್ರೀಯೆಯಲ್ಲಿ ತೊಡಗಿದ್ದ. ತೊಪುನಾಯ್ಕನಿಗೆ ಹತ್ತು ಗಂಡು ಮೂರು ಹೆಣ್ಣಾದರೆ, ಜೀವ್ಲನಾಯ್ಕ ಗಂಡು ಮಕ್ಕಳ ಆಶೆಗಾಗಿ ಹತೊಂಬತ್ತು ಹೆಣ್ಣು, ನಾಕು ಗಂಡು. ಮೊದಲನೆ ಹೆಂಡತಿಗೆ ಬರಿ ಹೆಣ್ಣಾಗುತಿದ್ದಿದ್ದರಿಂದ, "ಎಯ್ ನಿಮ್ಮಮ್ಮನ ಬರಿ ಹೆಣ್ಣಿನ ಗರ್ಬ ಚೀಲ ಇಡ್ಕೊಂಡಿಯಾ ಹೆಂಗೆ? ಬರಿ ಹೆಣ್ಣು, ಹೆಣ್ಣು, ಹೆಣ್ಣು. ಗಂಡಿನ ಒಣಸ್ಯಾರನ ಇಲ್ವ ಹೆಂಗೆ?" ಬಾಣಂತಿಗೆ ಧಮಧಮ ಹೇರಿ ಗಂಡಿಗಾಗಿ ಎರಡನೆ ಮದುವೆಯಾಗಿದ್ದ. ಅಕೀನು ಬಂದವಳೆ ನಾಕೈದು ಹೆಣ್ಣು ಹೆತ್ತ ಮೇಲೆ ನಾಕು ಗಂಡಿಗೆ ಜನ್ಮ ನೀಡಿದಳು. ಈ ಪುಣ್ಯಾತ್ಮ ಅಣ್ಣನ ಹೊಲದ ಮೇರೆಯನ್ನ

ದಬಾಸಿ ಒತ್ತುವರಿ ಮಾಡುವುದರಲ್ಲಿ ಕುಖ್ಯಾತನಾಗಿದ್ದ. ಇಡಿ ಹೊಲದಲ್ಲಿ ಬೆಳೆಯದ ಬೆಳೆ ಮೇರೆಯೊಳಗೆ ಬೆಳೆಯುತಿರಬಹುದೆ? ಮಂದಿ ಅಂದಾಜು ಮಾಡಿದ್ದರು. ಅಳತೆ ಮಾಡುವಾಗ ಹೊಟ್ಟೆಕಲ್ಲು, ತಲೆಗಲ್ಲು, ರೆಕ್ಕೆಕಲ್ಲು, ಕಾಲ್ದೆಸಿಗಲ್ಲು ಸರಿಯಾಗಿಯೆ ಇದ್ದಾಗ್ಯೂ ಅದರ ಪಕ್ಕದಲ್ಲಿ ರಂಟೆಸಾಲು ಬಿಟ್ಟು ಅದನ್ನ ತಮ್ಮಕಡೆಗೆ ವಾಲುವಂತೆ ಮಾಡಿಬಿಡುವುದು ವಾಡಿಕೆ.

ತಮ್ಮ ಅಲ್ಲವೆ ಹೋಗಲಿ ಬಿಡು ಅಷ್ಟರೊಳಗೆ ಏನು ಬಿತ್ತಿ ಉದ್ದಾರ ಆದಾನು ಅಂತೇಳಿ ಸುಮ್ಮನಾಗಿದ್ದ. ಆದರೆ ಈ ಕಡೆಗೆ ಛತ್ರನಾಯ್ಕ ಗಂಟು ಬಿದ್ದಿದ್ದ. ಅವನ ಮಗ ಗಬರು ಹೇಲು ಅಂಟ್ಕೊಳ್ಳುವಂತೆ ಅಂಟಿಕೊಂಡು ಬಿಡುತ್ತಿದ್ದ. "ಹೌದಲೆ ಒತ್ತಿದೀನಿ ಏನ್ಮಾಡಿ ಇದು ನಿಮ್ಮಪ್ಪಂದ. ನನಗ ಬರಬೇಕು ಒತ್ತಿ ಹೊಡದೀನಿ" ಎಡವಟ್ಟು ವಾದ ಮಾಡಿದ್ದ. "ಲೇ ತಮ್ಮ ನಿನ್ನ ಪುಣ್ಯಾ ನೆಟ್ಟಗೈತೆ ಸುಮ್ಮನೆ ಹೋಗು" ತೊಪುನಾಯ್ಕ ಸಮಾಧಾನದಿಂದಲೆ ಹೇಳಿದ್ದ. "ಮದಲು ನೀ ಹೋಗು. ನನಗೇನು ಹೇಳುವುದಕ್ಕೆ ಬರಬೇಡ. ನಿಂದು ನೀ ನೋಡ್ಕ ನಂದೇನು ನೋಡಾಕ ಬರ್ತಿ" ಗಬರುನ ಒಣವಾದ. ತೊಪುನಾಯ್ಕನಿಗೆ ಸಾಕು ಸಾಕಾಗಿತ್ತು. ನಿನ್ನೆ ಮನ್ನೆ ಕಣ್ಣು ಬಿಟ್ಟವನು. ಹೋಗಲಿ ಬಿಡು ಅಂತ ಸುಮ್ಮನಾಗಿದ್ದ. ಅದು ಅಲ್ಲಿಗೆ ನಿಲ್ಲಲಿಲ್ಲ. ತೊಪುನಾಯ್ಕ ಹೊಲಹಸನು ಮಾಡಿದಾಗ ಬಿತ್ತಲು ಒಳ್ಳೆಯದಾಗಲಿ ಅಂತಂದು ಕಸನೆಲ್ಲಾ ಮೇರೆಮೇಲೆ ದುಂಡಗೆ ಮಾಡಿಸಿದ್ದ. ಮರುದಿನ ಮುಂಜಾನೆ ಅವನ ಹೊಲದೊಳಗೆ ಮದಲು ಹೆಂಗಿತ್ತೊ ಹಾಗೆ ಮಾಡಿದ್ದ ಗಬರು. ಅವನ ಕಾಟ ಹೆಚ್ಚಾಗಿ ಹೊಲ ಅಳತೆಗೆ ಸರ್ವೆಯರನ್ನ ಕಳುಹಿಸಲು ಸರ್ಕಾರಿ ಕಛೇರಿಗೆ ಹೋಗಿ ಅರ್ಜಿ ಹಾಕಿದ್ದ.

ಸರ್ಕಾರಿ ಸರ್ವೆಯರ ನಾಗರಾಜಪ್ಪ ಅಳತೆ ಮಾಡುವುದಕ್ಕೆ ಪೂರ್ವದಾಗ ಅಕ್ಕಪಕ್ಕದ ಹೊಲದವರಿಗೆ, ಮೇಲೆ ಕೆಳಗಿನ ಹೊಲದವರಿಗೆ ಬರೊದಕ್ಕೆ ನೋಟೀಸ್ ಕಳುಹಿಸಿದ್ದ. ಇಡಿ ಇತಿಹಾಸದ ಮಾಹಿತಿ ಬಲ್ಲ ಬುದ್ಧಿವಂತ ಸರ್ವೆಯರ್ ನಾಗರಾಜಪ್ಪ ನೋಡುವುದಕ್ಕೆ ಸರಳವಾಗಿ ಕಾಣುತ್ತಿದ್ದ. ತೊಪುನಾಯ್ಕ ಎಡಪಕ್ಕ ಗಬರು ತಂದೆ ರಾಂಮಡು ನಾಯ್ಕನ ಹೊಲವಾದರೆ ಬಲಕ್ಕೆ ಅವನ ತಮ್ಮ ಜೀವ್ಲನಾಯ್ಕನ ಹೊಲವಿತ್ತು. ರಾಂಡು, ಜೀವ್ಲ ಎರಡು ತಲೆನೋವಿನ ಕಿರಿಕ್ ಪಾರ್ಟಿಗಳು ಜಗತ್ತಿನಲ್ಲಿ ಯಾರ ಜೋಡಿ ಬೇಕಾದರು ಮಾತಾಡಬಹುದು, ಮಾತಿನ ಧಾಟಿಯಲ್ಲಿ ಹೆಚ್ಚು ಕಮ್ಮಿಯಾಗಬಹುದು ಆದರೆ ಈ ಎರಡು ಹಸ್ತಿಗಳು ತಮ್ಮನ್ನ ತಾವೆ ಊರಿನ ದೊಡ್ಡ ಪಂಟರ್‌ಗಳು ಅಂತ ಅಂದ್ಕೊಂಡಿರುವಾಗ ಮಾತಿಗೆ ಬೆಲೆನೆ ಇಲ್ಲ. ಆದರೆ ನಾಗರಾಜಪ್ಪ ಇಂತಹ ಖಾಲಿಪಿಲಿ ಪಂಟರ್‌ಗಳ ನಡುವೆ ಕೆಲಸಮಾಡಿ ಮಾಡಿ ಇಂತಹವರ ದುರ್ಬಲತೆ ಬಲ್ಲವನಾಗಿದ್ದರಿಂದ ಸರಿಯಾಗಿ ಲೈನು ಎಳೆಯುವವರನ್ನ

ಕರೆತಂದಿದ್ದ. ಮೊದಲು ಸರಹದ್ದನ್ನ ಗುರುತಿಸುವ ಸಲುವಾಗಿ ಬ್ರಿಟೀಷರು ಮಾಪನ ಮಾಡಿದ ಮತ್ತು ಪಕ್ಕ ಮಾಡಿದ ಖಂಡೆ ಕಲ್ಲನ್ನ ಪತ್ತೆ ಹಚ್ಚಲು ಸುತ್ತಲು ಅರ್ದ ಪರ್ಲಾಂಗಿನಷ್ಟು ನಡೆದಾಡಿದ. "ಖಂಡೆಕಲ್ಲು ನೂರು ಎಕ್ಕರೆ ಮೇಲಿನ ಜಮೀನನ್ನು ಅಳೆಯಲು ಬ್ರಿಟೀಷರು ಬಳಸಿದ್ದ ಕಲ್ಲು ಅದು ಸಿಕ್ಕರೆ ನಿಮ್ಮ ಭೂಮಿಯ ಸಂಪೂರ್ಣ ದಾಖಲೆ ಸಿಗುತ್ತೆ" ಅಂದ ನಾಗರಾಜಪ್ಪ ಸರ್ವೆಯರ್. "ಅಂದ್ರೆ ಈ ಊದಕ್ಕೆ ಗೂಟಗಲ್ಲಿನಂತಿರುತ್ತಲ್ಲಾ ಅಂತಹದ್ದ ಸರ್" ತೊಪು ಕೇಳಿದ. "ಹೂಂ ಹೌದು ಅಂತಹದ್ದೆ, ಎಲ್ಲಾದರೂ ಸುತ್ತಮುತ್ತ ನೋಡಿದ್ದಿರಾ" ಆತನನ್ನೆ ಕೇಳಿದ. "ಕುತೂಹಲಕ್ಕೆ ತಿಳಿಯದೆ ನಾನು ಅನೇಕಸಾರಿ ಆ ಕಲ್ಲನ್ನು ಅಲುಗಾಡಿಸಿದ್ದಿನಿ. ಅದು ಬಂದು ಇಲ್ಲೆ ಬಿಸಲೆವಾಡ ಊರಿನ ಹಾಸಿಗೆಯಲ್ಲಿ ಮರಿತಿಮ್ಮಪ್ಪನ ಹೊಲದ ಕೆಳಗಡೆ ನೋಡಿದ್ದೆ." ಸಿದಾ ತಾನು ಬಾಲ್ಯದಿಂದಲೂ ನೋಡುತ್ತ ಬೆಳೆದ ಕಲ್ಲಿನ ಜಾಗಕ್ಕೆ ಹೊರಟ ತೊಪುನಾಯ್ಕ. ಕಲ್ಲು ಮಣ್ಣಿನೊಳಗೆ ಮುಚ್ಚಿ ಹೋಗಿತ್ತು. ಆದರೆ ಅದು ಸುತ್ತಲು ನೂರು ಎಕ್ಕರ ಜಮೀನಿನ ಇತಿಹಾಸವನ್ನ ಬಿಚ್ಚಿಡುವ ತಾಕತ್ತನ್ನ ಹೊಂದಿತ್ತು. ನಾಗರಾಜಪ್ಪ ಅಲ್ಲಿ ನಿಂತು ಸುತ್ತಲು ಒಮ್ಮೆ ನೋಡಿದ.

ಆ ಕಲ್ಲಿನಿಂದ ಜಿ–ಲೈನು ಎಲ್ಲಿದೆ ಎನ್ನುವುದನ್ನ ಗುರುತಿಸುವ ಪ್ರಯತ್ನಮಾಡಿದ. ನಾಗರಾಜಪ್ಪ ಸರ್ವೆಯರು ಅಳತೆಗೆ ಬಂದಾನ ಅಂದ್ರ ಮುಗಿತು ಯಾರು ಮಾತಾಡುತ್ತಿರಲಿಲ್ಲ. ಎಲ್ಲಾ ಪಕ್ಕ ಆದಂಗೆ, ಮಂದಿ ಕಣ್ಣು ಮುಚ್ಚಿ ಆತನನ್ನ ನಂಬುತ್ತಿದ್ದರು. ತೊಪುನಾಯ್ಕನ ಸಂದರ್ಭದಲ್ಲೂ ಆದದ್ದು ಅದೆ. ತೊಪುಗೆ ಭರವಸೆ ನಾಗರಾಜಪ್ಪ ಭೂಮಾಪನದ ತೀವ್ರಜ್ಞಾನ ಉಳ್ಳವರು ಕೈ ಹಾಕಿದರೆ ಕೊನೆಗಾಣಿಸಿಯೆ ಹೋಗುವುದು ಹಾಗೆ ಖಾಲಿಪೀಲಿ ಮಾತನಾಡಲ್ಲ. ಯಾರು ಏನು ಬೇಕಾದರೂ ಕಂಪ್ಲೈಂಟ್ ಮಾಡಲಿ ಮೇಲಾಧಿಕಾರಿಗಳಿಗೆ ಪೂರ್ಣ ಮಾಹಿತಿ ನೀಡುತ್ತಿದ್ದ. ನಾಗರಾಜಪ್ಪ ಭೂಮಾಪನದ ಬಗ್ಗೆ ಮಾಡಿರುವ ಅಧ್ಯಯನ ಹಾಗಿತ್ತು. ಭಾರತೀಯರಿಗೆ ಭೂಮಾಪನದ ಜ್ಞಾನ, ಪರಿಕಲ್ಪನೆ ಕೊಟ್ಟವರೆ ಬ್ರಿಟೀಷರು ಅನ್ನೋದು ನಾಗರಾಜಪ್ಪನವರ ಹೇಳಿಕೆಯಾಗಿದ್ದಿತು. ರಾಜಪ್ರಭುತ್ವದಲ್ಲಿ ರಾಜ ಅಳತೆಯ ಬಗ್ಗೆಯಾಗಲಿ, ಗಡಿ ಭದ್ರತೆಯ ಬಗ್ಗೆ ಹೆಚ್ಚಿನ ಅಸ್ಥೆ ವಹಿಸದ ಹಿನ್ನೆಲೆಯಲ್ಲಿ ಇನ್ನೂರಕ್ಕೂ ಹೆಚ್ಚು ವರ್ಷಗಳ ಕಾಲ ನಮ್ಮನ್ನ ಆಳಿದ ಕೆಂಪುಮಂದಿ ದಾಖಲೆಯನ್ನ ಪಕ್ಕ ಮಾಡಿದ್ದಾರೆ ಎನ್ನುತ್ತಿದ್ದ. ಅವರ ಖಂಡೆ ಕಲ್ಲಿನಿಂದ ಜಿ–ಲೈನಿನಲ್ಲಿ ಯಾವುದೆ ಕಳೆದುಹೋದ ಜಮೀನು, ಅಳತೆ ಹೆಚ್ಚು ಕಡಿಮೆಯಾದ ಜಮೀನಿನ ಮಾಹಿತಿ ಶೋಧಿಸಬಹುದಾಗಿತ್ತು. ಜಿ–ಲೈನು ಗುರುತಿಸುತ್ತಾ ಬಂದ ನಾಗರಾಜಪ್ಪ ಮದಲು ತೊಪುನಾಯ್ಕನ ಹೊಲದ ಚೆಕ್ಕುಬಂದಿಯಂತೆ ತಲೆಗಲ್ಲಿನ ಶೋಧನೆ ಮಾಡಿದ. ತಲೆಗಲ್ಲು ಹೊಲದ ಮೇಲುಭಾಗವನ್ನ ಮೊದಲು ಗುರುತಿಸಿ, ಒಂದು ಭಾಗವನ್ನ

ಮನುಷ್ಯನ ಗ್ರಹಿಕೆಗೆ ಸುಲಭವಾಗಲಿ ಎಂದೆ ಮನುಷ್ಯನ ಆಕೃತಿಯ ಸಂರಚನೆಯನ್ನ ಭೂಮಾಪನದಲ್ಲಿ ಅಳವಡಿಸಲಾಗಿತ್ತು. ಮೇಲಿನಭಾಗ ತಲೆಯಾದರೆ ಕೆಳಗಿನ ಭಾಗ ಕಾಲ್ದೆಸಿ ಎಂದು ಗುರುತಿಸಲಾಗಿತ್ತು. ತಲೆಗಲ್ಲು ಕಿತ್ತುಹಾಕಿದ್ದರು. ಅಂತ ಇಟ್ಕೊಂಡರು ಕಾಲ್ದೆಸಿ ಕಲ್ಲು ಇರಲೆ ಬೇಕಲ್ಲವೆ? ಅದನ್ನು ಕಿತ್ತು ಹಾಕಿದ್ದರು ಅಂದ್ಮೊ ಹೊಟ್ಟೆಕಲ್ಲು ಕಾಣೇಬೇಕು. ಯಾರಾದರೂ ಹೊಟ್ಟೆಕಿಚ್ಚಿನಿಂದಾಗಲಿ, ಬೇಕಂತಲೆ ಪಕ್ಕದ ಹೊಲವನ್ನ ಒತ್ತುವರಿ ಮಾಡಿ ಪಕ್ಕದವನ ನಿದ್ದೆ ಕೆಡಿಸಲು ಕಲ್ಲನೆ ನುಂಗಿ ನೀರು ಕುಡಿವ ಗಬರುನಂತವರು ಎಷ್ಟು ಜನರಿಲ್ಲಾ?

ನಾಗರಾಜಪ್ಪ ಹೈರಾಣಾಗಿದ್ದ. ಕಾಲ್ದೆಸಿಕಲ್ಲು, ಹೊಟ್ಟೆಗಲ್ಲು, ತಲೆಗಲ್ಲು, ರೆಕ್ಕೆಗಲ್ಲೂ ಯಾವು ಸರಿಯಾಗಿರಲಿಲ್ಲಾ. ಕೆಳಗಡೆ ಹಳ್ಳ ಮತ್ತ ದಾರಿ ಇದ್ದಿದ್ದರಿಂದ ಅದು ಒತ್ತುವರಿಯಾಗಿರಲಿಲ್ಲಾ ಆ ಪಕ್ಕ ರಾಂಡು ಮತ್ತ ಅವನ ಮಗ ಗಬರು ಮನಸಾನಿಚ್ಚಿ ಏಕ ಕೆಳಗಿಂದ ಮೇಲೆ ತಮಗೆ ಬೇಕಾದಂಗೆ ಒಳಗೆ ಬಂದು ಹೊರಗೆ ಹೋಗಿದ್ದರು. “ನೋಡಪ್ಪ ನಾಯ್ಕ ನಿನ್ನ ಹೊಲ, ಇಲ್ಲಿ ಇಷ್ಟು ಒತ್ತುವರಿಯಾಗಿದೆ. ಈ ತುಂಡಿನಲ್ಲಿ ಹೀಗೆ ಒತ್ತುವರಿಯಾಗಿದೆ.” ಅಂತ ಪ್ರತಿಯೊಂದನ್ನು ವಿವರಿಸುತ್ತ ಸರಿಯಾದ ಜಾಗಕ್ಕೆ ರೆಕ್ಕೆಗಲ್ಲು ನೆಡಿಸುತ್ತಲೆ ಬಂದಿದ್ದ. “ಹೌದು ಬುದ್ದಿ ಇವರ ಒಸಡಗಲಿ, ಹೆಣ ಎತ್ಲಿ, ಪ್ರತಿವರ್ಷ ಜಗಳ ಆಡಿ ಸಾಕಾಗಿ ಹೋತು. ಒಂದಕಲ್ಲು ಬಿಡಂಗಿಲ್ಲ, ಒಂದ ಕಸ ಬಿಡೊದಿಲ್ಲ. ಆ ಕಡಿಯಿಂದ ಎತ್ತಿ ಸೀದಾ ಈ ಕಡಿಗ ಬಿಸಾಡ್ತಾರ ಏನ್ಮಾಡಲಿ, ತಲಿ ನಿಚ್ಚಾಶಿ ಅಳತೆ ಮಾಡಾಕ ಹಾಕಿದೆ. ಇನ್ನು ಮುಂದಾದರು ಕಮ್ಮಿಯಾತು ಸರಿ ಸರಿ ಇಲ್ಲದಿದ್ದರೆ ಮಕ ಮುಸುಡಿ ನೋಡದಂಗೆ ಬಾರಿಸ್ತಿನಿ.” ತನ್ನ ನೋವನ್ನ ಹೇಳಿದೆ. ಗಬರು ಜಮೀನು ಮಾಡೋದಕ್ಕೆ ಸುರುಮಾಡಿ ಸರಿಸುಮಾರು ಹದಿನೈದು ವರ್ಷಗಳಿಂದ ಅವನ ಕಿರಿಕಿರಿ ಸಹಿಸಿಕೊಂಡೆ ಬಂದಿದ್ದ. ಗಬರು ಅಪ್ಪ ಛತ್ರನಾಯ್ಕ ಒಮ್ಮೆ ಪಾಡಿದ್ದರೆ ಮತ್ತೊಮ್ಮೆ ರೊಳ್ಳಿ ತಗಿತಿದ್ದ. ಅವನ ಸ್ವಂತ ತಮ್ಮ ಮಂದಿ ಮಾತು ಕೇಳಿ “ತೊಪು ತಾಂಡಕ್ಕೆ ದೊಡ್ಡವನಾದ. ಶ್ರೀಮಂತ ಆದ ಅವನು ನಿನ್ನ ಕೇರ್ ಮಾಡ್ತಿಲ್ಲ” ಹೇಳಿ ಹೇಳಿ ಜನ ಉಬ್ಬೆಟ್ಟಿ ತೊಪುನಾಯ್ಕನ ಬದ್ಧ ವೈರಿಯನ್ನಾಗಿ ಪರಿವರ್ತಿಸಿ ಒಂದ ರಂಟಿ ಹೊಡದಾಗ ಹೆಂಡಿ ಆಚೆ ಅವನ ಮೇರಿಮೇಲಿಂದ ಅವನ ಹೊಲದೊಳಗೆ ಉರುಳಿದರು ಹಚ್ಚಿ ಬೊಯ್ಯುವುದಕ್ಕೆ ನಿಂತು ಬಿಡುತ್ತಿದ್ದ. ಆಕಡೆಯಿಂದ ಅವನು ಜಗಳ ತಗಲಿ ತೊಪುನಾಯ್ಕ ಅಂತ ಮನಸಾನಿಚ್ಛೆ ಒತುವರಿ ಮಾಡಿದ್ದ.

ಅಳತೆ ಮಾಂತ್ರಿಕ ಸರ್ವೆಯರ್ ನಾಗರಾಜಪ್ಪ ದಾಖಲೆ, ಮಾಡುವುದರಲ್ಲಿ ನಿಪುಣ. ಒಮ್ಮೆ ಸರಹದ್ದು ಮಾಡಿ ಬಂದೊಬಸ್ತ್ ಮಾಡಿದನೆಂದರೆ ಯಾವನೆ ಡಿಸಿ ಬರಲಿ ನ್ಯಾಯಾಧೀಶ ಬಂದು ಪರಿಶೀಲನೆ ಮಾಡಲಿ ಎಲ್ಲಿಯೂ ತಪ್ಪು ಸಿಗುತ್ತಿರಲಿಲ್ಲ.

ನಾಗರಾಜಪ್ಪ ಸರ್ವೆಯರನ ಕೆಲಸದ ಚರ್ಚೆ ತಾಲೂಕಿನಲ್ಲೆ ನಡೆದಿತ್ತು. ಮಂದಿತಾವ ಸುಕಾಸುಮ್ಮನೆ ಕಾಸು ಕೇಳಲ್ಲ. ಮಂದಿನ ಹೈರಾಣ ಮಾಡಲ್ಲ. ಕೆಲಸದ ಮದ್ಯೆ ಅಡಚಣೆಯಾಗಬಾರದು ಯಾವನಾದರು ಮಾಡಿದ ಒಳ್ಳೆ ಮಾತಿಂದ ಗದರಿಸುತ್ತಿದ್ದ ಮಾತು ಕೇಳದಿದ್ದರೆ ಚೈನು ಬಿಸಾಕಿ ನಿಂತರ ಎದುರಾಳಿ ಗಡಗಡ ನಡುಗಬೇಕು ಅಂತ ನಿಷ್ಠುರವಾದಿ. ಛತ್ರನಾಯ್ಕ ತನಗೆ ಗೊತ್ತು ಅನ್ನುವಂತೆ "ಅಲ್ಲಾ ಆ ಹೊಟ್ಟೆಕಲ್ಲು, ತಲೆಗಲ್ಲು ಪಕ್ಕ ಅದಾವ ಅನ್ನೋದಕ್ಕೆ ಏನು ಗ್ಯಾರಂಟಿ? ಇಲ್ಲಪ್ಪ ನನಗೆ ಹಿಡ್ಸಿಲ್ಲಾ ನೀವು ತೋಪುನಾಯ್ಕನ ಪರವಾಗಿ ಆತನಿಗೆ ಹೆಚ್ಚುಭೂಮಿ ಕೊಟ್ಟಿದ್ದಿರಾ, ನನ್ನ ಹೊಲದೊಳಗೆ ಅತಿಕ್ರಮಣ ಮಾಡಿದ್ದಿರಿ. ಎಲ್ಲಿಯಾದರೂ ಸರಿಯಾಗಿ ಅಳತೆ ಬರಬೇಕಲ್ವಾ? ಕಾಲ್ದಿಸೆಗಲು, ರೆಕ್ಕೆಗಲ್ಲು ಸರಿಯಾಗಿಲ್ಲ. ನಾನು ಹೇಗೆ ಒಪ್ಪಲಿ?" ಚರ್ಚೆ ಮಾಡಿದ್ದ. ನಾಗರಾಜಪ್ಪ ಮೌನವಾಗಿಯೆ ಕೇಳುತ್ತಿದ್ದ. "ಎಯ್ ಬಾ ಇಲ್ಲಿ ನಿನ್ನ ಹೆಸರೇನು?" ಮೌನ. "ಛತ್ರನಾಯ್ಕ ಸಾ" ಆತನ ಮಕ ನೋಡಿದ. "ನಿಮ್ಮವ್ವ ಅಪ್ಪ ಹೆಸರು ಹೇಳಿದಮೇಲೆ, ಮಂದಿ ನಿನ್ನ ಹೆಸರು ಕರದ ಮೇಲೆ ನೀನು ಛತ್ರನಾಯ್ಕ ಅಂತ ಗೊತ್ತಾಯ್ತೊ ಇಲ್ಲ ನಿಮ್ಮವ್ವನ ಹೊಟ್ಟೆಯಲ್ಲಿದ್ದಾಗಲೆ ನೀನು ಛತ್ರನಾಯ್ಕನೆ ಅಂತ ಗೊತ್ತಿತ್ತು?" ಅವನ ಕಡೆಗೆ ತೀಕ್ಷ್ಣವಾಗಿ ನೋಡಿದ. "ಅದು" ತದಬದ ಮಾಡತೊಡಗಿದ. "ಸರಿ ನಿಮ್ಮಪ್ಪ ಯಾರು?" ಮತ್ತೊಂದು ಪ್ರಶ್ನೆ ಕೇಳಿದ ನಾಗರಾಜಪ್ಪ. "ಹನುಮನಾಯ್ಕ ಸಾ. ಯಾಕೆ ಅನುಮಾನಾನ" ಛತ್ರ ತಾಳ್ಮೆ ಕಳೆದುಕೊಂಡಿದ್ದ. "ಈ ಸತ್ಯ ನಿಮ್ಮವ್ವಗೆ ಬಿಟ್ಟು ಭೂಮಿಮೇಲೆ ಯಾ ಮಗನಿಗು ಗೊತ್ತಿಲ್ಲಾ. ಕೇಳು ತನ್ನ ಹೊಟ್ಟೆಯಲ್ಲಿ ಯಾರ ಗರ್ಬ ಕಟ್ಟುತ್ತೆ ಅನ್ನೋದು ಆ ಮಾಹಾತಾಯಿಗೊಬ್ಬಳಿಗೆ ಗೊತ್ತು ಕಣಲೆ ಮುಠ್ಠಾಳ. ಹಂಗೆ ಯಾವ ಜಮೀನಿನ ಅಳತೆ ಸರಿಯಾಗಿದೆ ಎಲ್ಲಿ ಎಡವಟ್ಟು ಆಗಿದೆ ಅನ್ನೋದು ಅಳತೆ ಮಾಡುವ ನಮ್ಮಂತ ಸರ್ವೆಯರುಗಳಿಗೆ ಮಾತ್ರ ಗೊತ್ತು. ನಿನಗೆ ಸೊಟ್ಟ ಕಾಣ್ತಿದೆಯಲ್ಲ ಆ ಕಲ್ಲು, ಅದು ನಿನ್ನ ಕಾರನಾಮ. ನೀನು ಆಶೆಯಿಂದನೊ, ಸೊಕ್ಕಿನಿಂದ, ದುರಾಂಕಾರದಿಂದ ತೊಪುನಾಯ್ಕನ ಹೊಲದೊಳಗೆ ಪ್ರವೇಶ ಮಾಡಿರುವುದು. ಪಾಪ ತೋಪುನಾಯ್ಕ ಬಹಳ ಒಳ್ಳೆಯವನು ಈ ಕಡೆ ನೀನು ಒತ್ತುವರಿ ಮಾಡಿ ಅವನ ತಾಳ್ಮೆ ಪರೀಕ್ಷೆ ಮಾಡಿದಿಯಾ, ಆ ಕಡೆ ಅವನ ಸ್ವಂತ ತಮ್ಮನೆ ಅಣ್ಣನ ಹೊಲವನ್ನ ಹೇಗೆ ಬೇಕೊ ಹಾಗೆ ಒತ್ತಿದ್ದಾನೆ. ಈಗ ಇದು ತಪ್ಪು ಅಂತ ಹೇಳುವುದು ತಪ್ಪಾ ಹೇಳು. ನಾಳೆ ಸಿಟ್ಟಲ್ಲಿ ಮಕ್ಕಳಂದಿಗ ತೊಪು ಜಗಳ ಬಿದ್ದು ಏನೊ ಮಾಡಿದ ಅಂತ ಇಟ್ಕ ಆಗ" ಅವನ ಕಡೆಗೆ ನೋಡಿದ. ಅವನ ಮಕದ ಚಹರೆ ಬದಲಾಗಲಿಲ್ಲ. "ನಾ ಏನು ಬಳಿ ತೊಟ್ಕೊಂಡಿನ ಸಾ, ನಾನು ಹೊಡಿತೀನಿ" ತ್ವರಿತ ಪ್ರತಿಕ್ರೀಯೆ "ನೀವದೀರಲ್ಲಾ ಕಾಟಕಮಂದಿ ಕುರಿ, ಕೋಳಿ ಮಾಂಸ ತಿಂದು ತಿಂದು ದೇಹ ಬೆಳೆಸಿಕೊಂಡ್ರೆ ಏನಃ ಹಾರವರಂತೆ ತುಪ್ಪ ತಿಂದು ತಲಿ ಬೆಳೆಸಿಕೊಳ್ಳಲಿಲ್ಲಾ. ಲೇ ಛತ್ರ್ಯನಾಯ್ಕ,

ಅಲ್ಲಲೆ ಮುತ್ತಾಳ ತೊಪುನಾಯ್ಕನ ಒಂದೇ ಒಂದು ಸಾಲು ಹೊಲದಾಗ ಎಷ್ಟ ಚೀಲ ಬೆಳದಿಯಲೆ. ಯೋಚನೆ ಮಾಡೋದಕ್ಕು ಒಂದು ನ್ಯಾಯ ನೀತಿ ಇರಬೇಕು. ನಾಯಿ ಬಾಲ ಡೊಂಕೆ ನಡಿ ಈ ಜನುಮದೊಳಗೆ ನೀವು ಬದಲಾಗುವುದಿಲ್ಲ. ಸುಧಾರಿಸಿಕೊಂಡು ನೆಮ್ಮದಿಯಿಂದ ಜೀವನ ಮಾಡುವುದನ್ನ ಪಡೆದುಕೊಂಡಿಲ್ಲ" ಬೇಸರಗೊಂಡಿದ್ದ ನಾಗರಾಜಪ್ಪ. ತೊಪುನಾಯ್ಕನ ತಮ್ಮ ಅವನ ಮಾತಿನ ಚಾಟಿಯಿಂದ ದಾರಿಗೆ ಬಂದಂಗೆ ಕಾಣುತ್ತಿತ್ತು. ತಾನು ಮಾಡುತ್ತಿರುವುದು ತಪ್ಪು ಅಂತ ಅನಿಸಿ ಬಿರುನುಡಿ ಮಾತಾಡದಂತೆ ಕೈ ಕಟ್ಟಿಕೊಂಡು ಸುಮ್ಮನೆ ಕೇಳಿಸಿಕೊಳ್ಳತೊಡಗಿದ. ಇಡಿ ದಿನ ಬಿಸಲಲ್ಲಿ ಚೈನು ಎಳಿ, ಕಲ್ಲು ಹೂಳು ಮಾಡಿ ಮಾಡಿ ನಾಗರಾಜಪ್ಪ ಆತನ ಹಿಂದಿದ್ದವರು ಸಾಕು ಸಾಕಾಗಿದ್ದರು. ಸಂಜೆ ಕೆಲಸ ಮುಗಿದಾಗ ನಾಗರಾಜಪ್ಪನ ಮುಖದಲ್ಲಿ ಕೆಲಸ ಮಾಡಿದ ತೃಪ್ತಿಯಿತ್ತು.

* * *

86. ಮನೆ ಮುರುಕರ ಹಿಂಡು

ಊರಿದ್ದ ಹತ್ರ ಉಸಾಬರಿ ಮಾಡುವ ಮಂದಿ ಇರೊದೆ. ಭದ್ರನಾಯ್ಕನ ತಾಂಡದಲ್ಲು ಇಂತ ಗುಂಪುಗಳೇನು ಹೊರತಾಗಿರಲಿಲ್ಲ. ಮಂದಿ ಬಗ್ಗೆ ಮಾತಾಡುವುದು, ಮಂದಿ ಕಾಲು ಎಳೆಯುವುದು, ಇಲ್ಲಸಲ್ಲದ್ದನ್ನ ಮಾತಾಡಿ ಒಬ್ಬನ ಚಾರಿತ್ರ್ಯ ಹರಣ ಮಾಡುವುದು ಇವೆ ಅವರ ಕೆಲಸ. ಅವರಂತು ಕೆಲಸ ಬಗಸಿ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ. ದಂಡಪಿಂಡಗಳು. ಮುಂಜಾನೆ ಹೊತ್ತಾರೆ ಹೆಂಡತಿ ದುಡಿದಿದ್ದರಲ್ಲೆ ನಾಕಣೆ ಕೊಟ್ಟು ಹೆಂಡತಿ ಮಾಡಿ ಹಾಕಿದ ಚಹಾ ಕುಡಿದರು ತೃಪ್ತಿಯಾಗದೆ ಚಹದಂಗಡಿಯೊಳಗೆ ಬಂದಿರಬಹುದಾದ ಜನರನ್ನ ನೆನಪಿಸಿಕೊಂಡು ಬಾಯಿ ಚಟ ತೀರಿಸಿಕೊಳ್ಳುವುದಕ್ಕೆ ಮನಸ್ಸು ತಡೆಯದೆ ಹೆಂಗಾನ ಮಾಡಿ ನಾಕಣೆ ಗಿಟ್ಟಿಸಿಕೊಂಡು ಕಂಡಾಪಟ್ಟೆ ಶ್ರೀಮಂತ ಎನ್ನುವಂತೆ ಹೆಗಲಿ ಮೇಲಿನ ಹರಕು ಟವೇಲು ದಿಮಾಕಿನಿಂದ ಆ ಭುಜದಿಂದ ಈ ಭುಜಕ್ಕೆ ಬದಲು ಮಾಡುತ್ತ ಹುಳಕನ್ನ ಮುಚ್ಚಿಕೊಳ್ಳುವ ಪ್ರಯತ್ನ ಮಾಡುತ್ತ ಚಹದಂಗಡಿಯಲ್ಲಿ ತಮ್ಮ ಎಂದಿನ ಜಾಗದಲ್ಲಿ ಪವಡಿಸಿ "ಲೋಕಣ್ಣ ಒಂದು ಚಾ ಕೊಡು ಮಾರಾಯ ತಲೆ ಗರಂ ಆಗಿದೆ" ಒಳ್ಳೆ ಈ ದೇಶದ ಪ್ರಧಾನಮಂತ್ರಿ ನೂರಮೂವತ್ತು ಕೋಟಿ ಜನರ ಬಗ್ಗೆ ಯೋಚನೆ ಮಾಡಿ ಮಾಡಿ ತಲೆ ಅನ್ನೋದು ಮಸರು ಗಡಿಗೆಯಾದಂತೆ ಮಾತಾಡಿ ಮಂದಿಯನ್ನ ತಮ್ಮ ಕಡೆಗೆ ಆಕರ್ಷಣೆ ಮಾಡಿಕೊಳ್ಳುವುದರಲ್ಲಿ ಮಾಹಿರ್ ಆಗಿದ್ದರು. ಸಿರಬಡಗಿ ರಾಮ, ಕೆಂಧೂಳಿ ಕೆಂಚ, ಕಡೆಮನಿ ಪಾತ್ಲುನಾಯ್ಕ, ಕಮಲನಾಯ್ಕನ ಮಗ ಕಾಳನಾಯ್ಕ, ಹಾಂಡುನಾಯ್ಕನ ಮಗ ಚಿನ್ಯಾನಾಯ್ಕ, ಚೂಡಾಮಣಿನಾಯ್ಕ ಇವರು ಪ್ರಮುಖರು. ಇವರೊಳಗೆ ಬದ್ದ ಭಿನ್ನತೆಗಳಿದ್ದರು ಮಂದಿಗೆ ಚಂಡ ಹಾಕಾಕ ಎಲ್ಲಾ ಬೆರಕಿ ನನ ಮಕ್ಕಳು ಒಂದಾಗಿ ಬಿಡುತ್ತಿದ್ದರು.

ಯಾರಾದರೂ ಪರಸ್ಥಳದಿಂದ ಬಂದವರಿಗೆ ಸಾಕ್ಷ್ಯಾತ್ ಪಂಡಿತರಂತೆ ಅವನ ಮಾತಿನ ವರಸೆಯಲ್ಲೆ ಆತನ ಹಿನ್ನೆಲೆ ತಿಳಿದು ಆತನನ್ನ ಮಾತಲ್ಲೆ ಬೀಳಿಸಿಕೊಂಡು ಒಣಚರ್ಚೆಗೆ ಪಂಟಹೊಡಿತ ಮಾತಲ್ಲಿ ಸಿಗಾಸಿಕೊಂಡು ಗೊದ್ದದ ಕೈ ಸಿಕ್ಕ ಹಸಿರು

ಹುಳುವಿನಂತೆ ಸಿಕ್ಕೊಂಡವನು ವಿಲವಿಲ ಒದ್ದಾಡುವಂತೆ ಮಾಡಿಬಿಡುತ್ತಿದ್ದರು. ಅವನು ಸೋತು ಸುಣ್ಣವಾಗಿ ಪಂಡಿತರ ಗುಂಪಿಗೆ ಶರಣಾಗಿ ಚಹ ಕುಡಿಸಿ, ಬೀಡಿ, ಎಲೆ ಅಡಿಕೆ ಕೊಡಿಸಿ ಕಡದ ಹತ್ರ ತುರಿಸಿಕೊಳ್ಳದಂತೆ "ಓ ಎಚ್ಚರಿಕೆಯಿಂದ ಇರಬೇಕಪ್ಪ" ಅಂತ ನಿರ್ಣಯ ತಗೊಂಡ ಜಾಗ ಖಾಲಿ ಮಾಡುವಂತೆ ಮಾಡುತ್ತಿದ್ದರು. ಒಂಟಿ ಹಿಡಿತ ಹೇಳಿದ್ದನ್ನೆ ಹೇಳುವುದು ಎದುರಾಳಿಯ ಮನಸ್ಸು ರೀಡ್‌ಮಾಡಿ ಅವನು ಹೇಳಿದರ ಉಲ್ಟಾ ಮಾತಾಡಿ, ತಾವು ಪ್ರಖಾಂಡ ಪಂಡಿತರೆಂದು ನಿರೂಪಿಸುವುದು.

ಈ ಆರು ಮಂದಿ ತಾಂಡದಲ್ಲಿ ಗಡಿಯನ್ನ ಹಂಚಿಕೊಂಡಿದ್ದರು. ಹಿಂದಿನ ಓಣಿಯ ಕರಾಮತಿ ಪಟ್ಲೇಶಿ ಅಂಗಡಿ ಸಿರಬಡಗಿ ರಾಮ, ಕೆಂಧೂಳಿ ಕೆಂಚ, ಕಡೆಮನಿ ಪಾತ್ಲುನಾಯ್ಕ, ಇಬ್ಬರು ಲಮಾಣ್ಯಾರೊಳಗೆ ಒಬ್ಬ ಊರಮನಿಯವ ಸೇರಿಕೊಂಡಿದ್ದ. ಇನ್ನ ಎರಡನೆ ಪಂಡಿತರ ಗುಂಪು ಮುಂದಿನ ಓಣಿಯ ರಂಗವ್ವನ ಚಹಾ ದುಕಾನ್, ಕಾಳಿನಾಯ್ಕ, ಚಿನ್ಯಾನಾಯ್ಕ, ಪಾತ್ಲುನಾಯ್ಕ ಇವರು ಮೂವರು ಲಂಬಾಣಿಗರೆ. ಹಬ್ಬ ಹರಿದಿನಕ್ಕೆ ಗಾರಿ ಕಟ್ಟೆ ಮೇಲೆ ಪಂಚಾಯ್ತಿ. ಏನಾರು ಮಾತುಕತೆ ನಡದಾಗ ತೊಪುನಾಯ್ಕ ಇಲ್ಲ ಹಟ್ಟಿನಾಯ್ಕ ಇಲ್ಲದಿದ್ದಾಗ ಇವರದ್ದೆ ಕಾರುಬಾರು. ತೊಪುನಾಯ್ಕನ ಮಾತಿನ ವರಸೆ ಮುಂದೆ ಎಂಥೆಂಥವರದ್ದೊ ಬಾಯಿ ನಿಂತು ಹೋಗುತಿತ್ತು. ಅಂತಹದ್ದರಲ್ಲಿ ಕೇವಲ ಮಾತಿನ ಧಾಟಿಯಲ್ಲಿ ಮತ್ತೊಬ್ಬರನ್ನ ಸಿಗಸಿಹಾಕಿ ಆಯ್ಕೊಂಡು ತಿನ್ನುವವರು ಯಾವ ಲೆಕ್ಕ. ಇವರ ಮಾತುಗಳಿಗೆ ಯಾವ ಹಿನ್ನೆಲೆಯಿಲ್ಲ ಏನೊ ಮಾತಾಡಬೇಕು ಮಾತಾಡ್ತಾರೆ. ಸಣ್ಣ ವಿಷಯವನ್ನ ಹಿಂಜಿ ದೊಡ್ಡದಾಗಿ ಮಾಡಿ ಮಂದಿ ಅದರ ಬಗ್ಗೆ ಯೋಚನೆ ಮಾಡುತ್ತಿರುವಾಗಲೆ ಬೇರೆ ವಿಷಯ ಪ್ರಸ್ತಾಪಮಾಡಿ ದಿಕ್ಕು ತಪ್ಪಿಸುವ ವರಸೆಯಲ್ಲಿ ಪಾರಂಗತರಾಗಿದ್ದರು. ಮೊದಮೊದಲು ಮಂದಿಗೆ ಕೇಳೋದಕ್ಕೆ ಪಾಡನಿಸುತ್ತಿತ್ತು. ಹೊಳಂಬಳ್ಳ ಇವೆ ಮಾತುಗಳು ತಿರುಗಾಡುತ್ತವೆ ಅಂತ ಗೊತ್ತಾತೊ ಉಲ್ಟಾ ಮಾತಾಡೊದಕ್ಕೆ ಸುರು ಮಾಡಿದರು. ಪಾಪ ಅವರಾದರೂ ವಿಷಯವನ್ನ ಎಲ್ಲಿಂದ ತರಬೇಕು. ಪೇಪರು ಓದುವವರಲ್ಲಾ, ರೇಡಿಯೋ ಕೇಳುವವರಲ್ಲಾ. ಯಾರೊ ಹೇಳಿದ್ದನ್ನ ಮನಸ್ಸಿಟ್ಟು ಕೇಳಿ ಹೇಳಿದ ವ್ಯಕ್ತಿ ಇಲ್ಲದಾಗ, ಅವನು ಹೇಳಿದ ವಿಷಯವನ್ನೆ ಅವನಂತೆ ನಕಲಿ ಮಾಡುವ ಕಲೆ ಬಲ್ಲವರಾಗಿದ್ದರು. ಸಿರಬಡಗಿ ರಾಮ ಮೈ ಬಗ್ಗಿಸಿ ಕೆಲಸ ಮಾಡೋದಕ್ಕೆ ತಯಾರಿರಲಿಲ್ಲಾ. ಮನಿಗ ದೊಡ್ಡಮಗ ಅಪ್ಪ ಅಮ್ಮ ಮುಗ್ದರು. ಮಗ ದೊಡ್ಡವನಾದ ಜವಾಬ್ದಾರಿ ತಗೊಂಡು ಇರೋ ಹೊಲಮನಿ ನೋಡಿಕೊಂಡು ಹೋಗ್ತಾನ ಮನಿಕಡಿಗೆ ಏನಾರು ನೋಡ್ತಾನಂತ ಅಂದುಕೊಂಡಿದ್ದರು. ವಯಸ್ಸಿಗೆ ಬಂದಮೇಲೆ ಹೀಗೆ ನಿಕಮ್ಮ ಆಗ್ತಾನಂತ ಅರಿಯದೆ ಗಡಗಡ ಹೋಗಿ ಮದುವೆ ಮಾಡಿಸಿಕೊಂಡು ಬಂದರು. ಪಾಪ ಆ ಹೆಂಗಸು ಒಂದು ಮಾತಾಡಿದರೆ

ಕಡಿಮೆಯಾಯಿತು. ಎರಡು ಮಾತಾಡಿದರೆ ಹೆಚ್ಚು ಅನ್ನೊಹಂಗೆ ಬಹಳ ಕಡಿಮೆ ಮಾತಿನವಳು. ಅವನಿಗೆ ಪ್ರಶ್ನೆ ಮಾಡುವವರೆ ಇಲ್ಲಾ. ಯಾಕಂದರೆ ಪ್ರಶ್ನೆಗೆ ನ್ಯಾಯವಾಗಿ ಉತ್ತರ ಕೊಟ್ಟರೆ ಸರಿಯಾದಿತು. ಸಿರಬಡಗಿ ರಾಮನ ಗುಂಪು ಮೆಲ್ಲಗೆ ಸೇರಿಕೊಂಡು ಎದುರಾಳಿಯ ಮಾನಸಿಕ ಸ್ಥೈರ್ಯದ ಪರೀಕ್ಷೆ ನಡೆಸುತ್ತಿತ್ತು. ಅವನು ಬಲಶಾಲಿ ಎಂದು ಗೊತ್ತಾದರೆ ಸುಮ್ಮನೆ ಅದು ಇದು ಮಾತಾಡಿ ಮೆಲ್ಲಗೆ ಸರಿದು ಬಿಡುತ್ತಿದ್ದರು. ಆಸಾಮಿ ಸ್ವಲ್ಪ ಮೆತ್ತಗೆ ಅಂತ ಕಂಡು ಬಂದರೆ ಅವನ ತಲೆಮೇಲೆ ಮೆಣಸು ಅರಿಯುವ ಪ್ರಯತ್ನ ಮಾಡುತ್ತಿದ್ದರು.

ಕುರಿಕಾಯುವರು, ದನಕಾಯುವರ ಹತ್ತಿರ ಅಷ್ಟೆ ಇವರ ಆಟ ನಡೆಯುತ್ತಿತ್ತು ವಿನಃ ಅಲ್ಪ ಸ್ವಲ್ಪ ವೇದ, ಪುರಾಣ, ರಾಮಾಯಣ, ಮಹಾಭಾರತ ಬಲ್ಲ ತೊಪುನಾಯ್ಕನ ಹತ್ತಿರ ಇವರ ಪುಂಗಿ ಸದ್ದು ಮಾಡುತ್ತಿರಲಿಲ್ಲ "ಓಡ್ರಲೆ ತೊಪುನಾಯ್ಕ ಬಂದ" ಅಂತ ಎರಡೂ ಗುಂಪು ಓಡಿ ಬಿಡುತ್ತಿದ್ದವು. "ಅಲ್ಲಪ್ಪ ರಾಮ ಒಂದ ದಿನ ಆ ತೊಪುನಾಯ್ಕನಿಗೆ ಅಡ್ಡಹಾಕು ಆಗೋದಾಗಲಿ ನೋಡೆ ಬಿಡೋಣ. ಅವನೇನು ಭೂಮಿಮೇಲೆ ಇಲ್ಲದ್ದ ಸಾಧನೆ ಮಾಡ್ಯಾನ, ಅವ್ನಾಪ್ನ ತಡವಲೆ ನೋಡೆ ಬಿಡಾನು, ಆ ಕಡೆ ಈ ಕಡೆಯಿಂದ ನಾವು ಇರ್ತಿವಿ" ಅಂತ ರಾಮ ಇಬ್ಬರು ಚೇಲಾಗಳು ಉಬ್ಬೆಟ್ಟಿದರು. ರಾಮಗೆ ಗೊತ್ತು ಈ ಮಕ್ಕಳು ತುಂಬಿ ಗಿಡ ಹತ್ಸಾಕ ಹತ್ಯಾರಂತ. ಸಿರಬಡಗಿ ರಾಮ ಮೌನವಾಗಿ ಇದ್ದ. ಯಾವತ್ತು ಮೌನವಾಗಿರದವನು ಮಾತನ್ನೆ ಬಂಡವಾಳ ಮಾಡಿಕೊಂಡಿರುವ ಭಂಡನಿಗೆ ಏನಾಯ್ತು ಅಂತ ಅವನ ಚೇಲಾ ಕೆಂಧೂಳಿ ಕೆಂಚ, ಕಡೆಮನಿ ಪಾತ್ಲುನಾಯ್ಕ ಮತ್ತೆ ಮರ ಹತ್ತಿಸೋದಕ್ಕೆ ನೋಡಿದರು. "ಹೆದರ್ಯಾನ ಬಿಡಲೆ ನಮ್ಮ ಮುಂದೆ ಅಷ್ಟೆ ಅವನ ಪೌರುಷ್ಯ. ಅದೇನೊ ಗಾದೆ ಹೇಳ್ತಾರಲ್ಲ ಉತ್ತರನ ಪೌರುಷ ಒಲೆ ಮುಂದೆ ಅಂತಾರಲ್ಲ ಹಂಗೆ" ಕೆಂಧೂಳಿ ಕೆಂಚ ವ್ಯಂಗ್ಯವಾಗಿಯೆ ಹೇಳಿದ. ರಾಮ ಸುಮ್ಮನಿದ್ದ. ಕಡೆಮನಿ ಪಾತ್ಲು "ಹೋಗಲಿ ಬಿಡಲೆ ಕೆಂಚ, ಅವರವರ ತಿಳುವಳಿಕೆ ಏಟೈತೊ ಅಷ್ಟರಲ್ಲೆ ಇರಬೇಕು ನಾನು ನೀನು ಹೇಳಿದರೆ ಆದೀತ" ಅಂದ. ರಾಮನಿಗೆ ತೊಪುನಾಯ್ಕ ಏನು ಅಂತ ಗೊತ್ತಿತ್ತು. ಅವರು ಏನೇನೊ ಮಾತಾಡಿಕೊಳ್ಳುತ್ತಿದ್ದರು. ಆದರೆ ಅವರ ಮಾತಿಗೆ ಸ್ಪಂಧಿಸದೆ ಬೇಜಾರು ಆಗದೆ ಮೌನವಹಿಸಿದ್ದ.

* * *

87. ತಾಂಡದಲ್ಲಿ ಬೀಸಿದ ಬದಲಾವಣೆ ಗಾಳಿ

ತಾಂಡದಲ್ಲಿ ಬ್ರಿಟೀಷರ ಕಾಲದಿಂದಲೂ ಭಟ್ಟಿಸರಾಯಿ ಇಳಿಸುವ ಕ್ರೀಯೆಯಲ್ಲಿ ಲಮಾಣಿಗರು ತೊಡಗಿದ್ದರು. ಯಾವಾಗ ಹಿಡಿದು ಅವರ ಕುಂಬಗಳನ್ನ ಮಡಿಕೆಗಳನ್ನ ಧ್ವಂಸ ಮಾಡತೊಡಗಿದರು, ಪೊಲೀಸರು ಓಡಿಸಿ, ಹಿಡಿದು ಜೈಲಿಗೆ ಹಾಕತೊಡಗಿದ್ದರು. ಬಡವರಿಗೆ ಇದ್ದದ್ದು ಅದೊಂದೆ ದಾರಿ. ಕಾಡಿನೊಳಗೆ ಹೊಲ ಇಲ್ಲ, ಊರ್ನಾಗೆ ಮನೆ ಇಲ್ಲದಂತವರೆ ಬಹಳಮಂದಿ. ಅದರಲ್ಲಿ ದುಡಿದು ತಿನ್ನೋರ ಸಂಖ್ಯೆ ಬಹಳ ಕಡಿಮೆ. ಹೆಂಗೊ ಜೀವನ ಮಾಡಬೇಕು ಅನ್ನೋರ ಹೆಚ್ಚಾಗಿದ್ದರು. ಅಂತಹವರಲ್ಲಿ ಕೈಲಾಗದವರು, ಕುರುಡರು, ಕುಂಟರು, ಹೆಳವರು ಒಂದು ವರ್ಗ ಆದ್ರ, ಹೆಂಗಸರು ಮತ್ತು ಮಕ್ಕಳು ಒಂದು ವರ್ಗ. ಇನ್ನೊಂದು ವರ್ಗ ಶ್ರಮಿಕರದ್ದು ನ್ಯಾಯದಿಂದ ಕೂಲಿ ಮಾಡುವುದು, ಇಲ್ಲ ಕಾಡಿಂದ ಕವಳಿ, ಕಂಚು ಹಣ್ಣು, ಒಣಕಟ್ಟಿಗೆ ಹೊರಿ ತಂದು ಮಾರಿ ಜೀವನ ನಡಸುವ ವರ್ಗ ಅವರಲ್ಲಿ ಒಂದಿಷ್ಟು ಮಂದಿ ಧಿಡೀರ್ ಅಂತ ಸಂಪಾದನೆ ಮಾಡಬೇಕು ಅನ್ನೋರದಿತ್ತು. ಅವರಿಗೆ ಕಾನೂನು, ದೇಶ, ಜನರ ಆರೋಗ್ಯ ನ್ಯಾಯ, ಅನ್ಯಾಯ ಯಾವುದೂ ಇಲ್ಲ ಕಾಸು ಯಾರದಾದರೇನು? ತಮ್ಮ ಹತ್ರ ಬಂದರೆ ಆಯ್ತು ಅನ್ನೊರು. ಕಳ್ಳಭಟ್ಟಿ, ಕಟ್ಟಿಗೆ, ಕಾಡಲ್ಲಿ ಕಟ್ಟಿಗೆ ಕಡಿದು ನೆಲದಲ್ಲಿ ಹೂತಾಕಿ ಬೆಂಕಿ ಹಚ್ಚಿ ಇದ್ಲಿ ಮಾಡುವುದು. ಹೀಗೆ ನಾನಾ ನಮೂನಿ ವಿದ್ಯೆಗಳನ್ನ ಕೆಲವರು ಕೈಲಾಗದವರು, ಆಶೆಬುರುಕರು, ತಾಯಿ ಮತ್ತು ತಾಯ್ನಾಡಿನ ಮೇಲೆ ಪ್ರೀತಿ ಇಲ್ಲದವರು ಮಾಡತೊಡಗಿದ್ದರು. ಪ್ರಾಮಾಣಿಕವಾಗಿ ದುಡಿಯಬೇಕು ಎನ್ನುವವರು, ನ್ಯಾಯಪರ ಮಾತನಾಡುವವರ ಸಂಖ್ಯೆ ಬಹಳ ಕಡಿಮೆಯಾಗಿತ್ತು.

ಹುಲಿಯೂರ ತನಗೆ ತಿಳುವಳಿಕೆ ಬಂದಾಗಿನಿಂದಲೂ ತನ್ನ ತಂದೆ ತೋಪುನಾಯ್ಕನ ಕೆಲಸ ಕಾರ್ಯ ಆತನ ನಡೆ ನುಡಿಯನ್ನ ಗಮನಿಸುತ್ತಲೆ ಬಂದಿದ್ದ ತಾಂಡದ ಪಂಚಾಯ್ತಿಯಲ್ಲಿ ಹಟ್ಟಿನಾಯ್ಕ, ಕಾರಬಾರಿ ಡಾವೊ ಒಂದೊಂದು ನಮೂನೆಯಿಂದ ಮಾತಾಡಿದರೆ, ತೊಪು ಯಾವುದು ನ್ಯಾಯವೊ, ಯಾವುದು

ದಿಟವೊ, ಯಾವುದು ಸತ್ಯ ಅದನ್ನ ಮಾತ್ರ ಮಾತಾಡುತ್ತಿದ್ದ. ಹಾಗಾಗಿ ಬಡಬಗ್ಗರು ಆತನ ಪರವಾಗಿ ನಿಲ್ಲುತ್ತಿದ್ದರು. ಆತನ ಹೊಲದಲ್ಲಿ ಕೆಲಸ ನಿಂತಿದೆ ಅಂದರೆ ಮಂದಿ ಬರುತ್ತಿದ್ದರು. ಜನ ಪರಾಮರ್ಶೆ ಮಾಡತೊಡಗಿದ್ದರು. ಭಾರತದೇಶದ ಸ್ವಾತಂತ್ರ್ಯ ಬಂದಾಗನಿಂದಲೂವೆ ಚುನಾವಣೆಗಳು ಆರಂಭವಾದವು. ತಾಂಡದ ಮಂದಿ ಮನಸ್ಸಿನೊಳಗೆ ಒಂದೇ ಗುಟ್ಟು. ಆದರೆ ಕ್ಯಾಬಳ್ಳಿ ಮಾಡುವವರು ಬೇರೆ ಬೇರೆ ಪಕ್ಷಗಳ ಉಮೇದುವಾರರ ಕದ ತಟ್ಟಿ, ಅಲ್ಲೆನಾರು ಸಿಕ್ಕಿತೇನು, ಇಲ್ಲಿ ಏನಾರ ಸಿಕ್ಕಿರಬಹುದೇನು? ಈ ಅನುಮಾನಗಳಲ್ಲೆ ಬದುಕಿದ್ದರು. ಅದರಲ್ಲೂ ಕಡೆಮನಿ ಬೂರ್‍ಯನಾಯ್ಕ ಇದೇ ಕೆಲಸಕ್ಕೆ ನಿಂತಿದ್ದ. ಐದಾರು ಅವನಂತಹವೆ ಗಿರಾಕಿಗಳನ್ನ ಸೃಷ್ಟಿಮಾಡಿಕೊಂಡಿದ್ದ. ಈ ಐದಾರುಮಂದಿ ಹೌದಪ್ಪಗಳು ಯಾವಾಗಲೂ ಅವನು ಹೇಳಿದ್ದೆ ಸರಿ ಅನ್ಕೊಂತ ಅಡ್ಡಾಡುತ್ತಿದ್ದರು. ಯಾವಾಗಾದರೂ ಚುನಾವಣೆ ಬಂದಾಗ ಅವರು ಕೊಟ್ಟ ಪುಡಿಗಾಸಿನೊಳಗೆ ಒಂದೆರಡು ಬಾಟಲು ಹೆಂಡ ಕೊಡಿಸಿದ್ದ ಅಷ್ಟೆ. ಅವನು ಹೇಳಿದ ವೇದವಾಕ್ಯ ತಾಂಡದ ಯಾವುದಾದರು ಹಬ್ಬ ಹರಿದಿನ ಮಾಡುವಾಗ ಅವನ ಮಾತು ನಡೆಯುತ್ತೆ ಅಂದಾಗ "ಛೆ ಛೆ ಬಹಳ ವರ್ಷಗಳಾದವು ಹಬ್ಬ ಮಾಡಲೇಬೇಕು" ಅನ್ನುವುದು ಅವನ ಮಾತಾಗಿತ್ತು. ಒಂದುವೇಳೆ ಭೂರ್‍ಯನಾಯ್ಕನಿಗೆ ಮನ್ನಣೆ ಸಿಗುವುದು ಖಾತ್ರಿಯಾದರೆ ಅವನ ಚೇಲ ಹಳದಿರಾಮ, ಅಡ್ನಾಡಿ ಧಾನು, "ಎಯ್ ಮಾನ ಮರ್ಯಾದಿ ಐತೊ ಇಲ್ಲ ನಿಮಗೆ ತಾಂಡದ ಹಿರಿಯರು, ಹೇಳೋರು ಕೇಳುವವರು ಯಾರು ಇಲ್ಲ ಅಂದ್ಕೊಂಡ್ರಾ" ಕಲ್ಲಾಕಿ ಬಿಡುವುದು ಹತ್ತಿಲ್ಲಾ ಹರಿಲಿಲ್ಲಾ, ವಿಷಯ ಹಾಗೆ ಬಗೆ ಹರಿಯದಂತೆ ಉಳಿದು ಬಿಡುತ್ತಿತ್ತು. ಅದಕ್ಕೆ ಮಂದಿ ತಾಂಡ ಪಂಚಾಯ್ತಿಯ ಮೇಲೆ ತಮ್ಮ ನಂಬಿಕೆಯನ್ನ ಕಳೆದುಕೊಂಡಿದ್ದರು. ಭೂರ್‍ಯನಾಯ್ಕ ಅವನಂತಹ ಎರಡು ಮೂರು ವಿಭಾಗಗಳು ಯಾವ ಹದ್ದಿಗೆ ಹೋದವು ಅಂದ್ರೆ, ತಪ್ಪುಗಾರ ಖುದ್ದಾಗಿ ಬಂದು ಹೆಂಡ ಕುಡಿಸಿದರೆ ಇನ್ನೊಬ್ಬ ಪಾರ್ಟಿಯನ್ನ ಮಣ್ಣು ಮುಕ್ಕಿಸುವ ಪ್ರತಿಯೋಜನೆಗಳು ತಯಾರಿರುತ್ತಿದ್ದವು. ಅನ್ಯಾಯಕ್ಕೊಳಗಾದವನಿಗೆ ನ್ಯಾಯವೆ ಕೈಗೆಟುಕದಾಗಿತ್ತು.

ಭಟ್ಟಿಸರಾಯಿ ತಯಾರಿಸುವುದರಲ್ಲಿ ಅತ್ಯಂತ ನಿಪುಣರಾದ ತಾಂಡದವರು ಬ್ರಿಟೀಷರ ಕಾಲದಿಂದಲೂ ಅದನ್ನ ಹಾಗೆ ರೂಢಿ ಮಾಡಿಕೊಂಡಿದ್ದರು. ಅದರ ಮುಂದಿನ ತಲೆಮಾರು, ನಂತರದ ತಲೆಮಾರು ಕೂಡ ಅದರಲ್ಲಿ ನೈಪುಣ್ಯತೆ ಪಡೆದಿತ್ತು ಆದರೆ ಸ್ವಾತಂತ್ರ್ಯ ಬಂದಮೇಲೆ ಸರಾಯಿ ಮಾಡುವುದನ್ನ ಬಂಜಾರರಿಗೆ ಕೊಟ್ಟಿದ್ದರೆ ಒಳ್ಳೆಯ ಸರಾಯಿ ಕುಡಿಸುತ್ತಿದ್ದರೇನೊ. ದುಡ್ಡಿದ್ದವರ ಕೈಗೆ ಸರಾಯಿ ಹೋಗಿ ಲಾಭಕ್ಕಾಗಿ, ನೀರು ಸ್ಪಿರಿಟ್ ಹೆಚ್ಚು ಕಮ್ಮಿಯಾಗಿ ಮಂದಿ ಕರಳು, ಲಿವರ್ ಡ್ಯಾಮೇಜ್ ಆಗಿ ಇನ್ನೂ ಗೊತ್ತಾಗದ ಕಾಯಿಲೆಗಳಿಗೆ ಬಲಿಯಾದರು. ಆದರೂ "ಏನೋ ಶಿವ ಕಣ್ಣು ಮುಚ್ಗೊಗಂಟ ಬದುಕಬೇಕು" ಅಂತ ಕುಡಿಯುವ

ಕುಡುಕರ ಸಂಖ್ಯೆ ಹಾಗೆ ಇತ್ತು. ತಾಂಡದಲ್ಲಿ ಪ್ರತಿಯೊಬ್ಬರು ಕುಡಿಯುವವರೆ. ಕುಡಿಯುವುದರಲ್ಲಿ ಎಲ್ಲಾ ಸಮಾನರು, ಇವರು ಕುಡಿಬೇಕು, ಇವರು ಕುಡಿಬಾರದು ಅಂತಿಲ್ಲ. ಇವರು ಗಂಡಸರು, ಇವರು ಹೆಂಗಸರು ಕುಡಿಬಾರದು ಅಂತಾನೂ ಇಲ್ಲ. ದೀಪಾವಳಿಗೆ ಹುಲಿಯೂರನ ತಂದೆ ತೊಪುನಾಯ್ಕ "ಲೇ ತಮ್ಮ ಹುಲಿಯೂರ ನೀನು, ಚಿಕ್ಕವರನ್ನೆಲ್ಲಾ ಕರ್‍ಕೊಂಡು ಆಚೆ ಹೋಗ್ರಿ ಹಂಗೆ ನಿಮ್ಮಣ್ಣಂದಿರನ್ನ ಅತ್ತಿಗೆಯರನ್ನ ಕಳುಹಿಸು." ಅಂದಿದ್ದ. ಹುಲಿಯೂರ ಮಾತ್ರ, ಜಗನ, ಸಿಂಪಿ, ಪೀಕಿ, ಯರನ್ನ ಕರೆದು, "ನೀವೆಲ್ಲಾ ಹೊರಗ ನಡಿರಿ, ಅಪ್ಪ ಹೇಳ್ಯಾನ" ಅಂದ. "ಯಾಕ, ನಾವ್ಯಾಕ ಹೊರಗ ಹೋಗಬೇಕು?" ಪೀಕಿ ಕೇಳಿದಳು. "ಇಲ್ಲಾ ಹೋಗಿ ಸರಾಯಿ ಕುಡಿತಾರ ಅವರ ಜೊತೆಗೆ ಹೋಗಿ ನೀನು ಒಂದು ಬಾಟಲು ಏರಿಸಿಕೊ" ಅಂದ ಹುಲಿಯೂರ. "ಓ ಅದೊ ವಿಷಯ, ನಾ ಮದಲು ನಿನಕೂಡ ಬರ್‍ತಿನಂತ" ಹೊರಗಡೆ ಬಂದಿದ್ದಳು. ಮನೆಗೆ ಒಬ್ಬರು ಇಬ್ಬರು ಚಿಕ್ಕಮಕ್ಕಳು ಅದು ಅರ್ಥ ಆಗಿರುವವು ಕುಡಿಯುವುದನ್ನ ಬಿಟ್ಟರೆ, ಅರ್ಥ ಆಗದವು ಒಂದು ಸಿಲಾವರಿ ಗ್ಲಾಸ್ ತುಂಬ ಸರಾಯಿ ಕುಡಿಯುತ್ತಿದ್ದವು. ಮುಂದೆ ಅವರ ಭವಿಷ್ಯ? ಈಗ ಹೇಳುವರು ಯಾರು? ಆ ಮೇಲಿನ ಒಣಿಯ ನಿಂಬನಾಯ್ಕ ಅವನ ಅಣ್ಣ ಬದಿಯಾನಾಯ್ಕ ಮುಂಜಾನೆ ಬೆಳಕು ಹರಿತು ಅಂತಂದ್ರ ಚಾದುಕಾನಿಗೆ ಹೋಗುವುದ ಬಿಟ್ಟು ಸರಾಯಿ ಅಂಗಡಿಗೆ ಹೋಗುತ್ತಿದ್ದರು. ಅದೇ ಅಮಲಿನಲ್ಲಿ ಸಂಜೆವರೆಗೆ ತೇಲಾಡಿ ಮತ್ತೆ ಸಂಜೆ ಅದೇ ನಶೆ. ದಿನದ ಇಪ್ಪತ್ನಾಕು ಗಂಟೆಗಳ ಕಾಲ ಚಟಮಾಡಿದರೆ ಯಾ ಮಗ ಉದ್ಧಾರ ಆದಾನು?

ಕಾಲ ಕಳಿತಿದ್ದಂತೆ ಒಂದು ಪ್ರತಿಶತ ತಾಂಡದ ಮಂದಿ ಕುಡಿಯೋದು ನಿಲ್ಲಿಸಿದ್ದರು. ಕುಡಿದು ಅಕ್ಕಪಕ್ಕದವರು ವಲಾವಲಾ ಮಾಡುವುದನ್ನ ಕೇಳಿಕೇಳಿಯೆ ಬೇಸರಗೊಂಡು ಸಾಕು ಸಾಕಾಗಿದ್ದರು. ಒಂದೆರಡು ಪ್ರತಿಶತದಷ್ಟು ಸಣ್ಣ ಹುಡುಗರು ಮೇಜಾರಿಟಿಗೆ ಬಂದಿದ್ದರುಕೂಡ ಕುಡಿಯುವುದನ್ನ ನಿಲ್ಲಿಸಿದ್ದರು. ಉಳಿದಂತೆ ಎಲ್ಲರೂ ಕುಡುಕರೆ. ಆದರೆ ಕುಡಿದು ಸಂಸಾರ ಹಾಳುಮಾಡಿಕೊಂಡ ಕೆಲವರು ಬಹಳ ತಡವಾಗಿ ಬಂದ ಸಂತ ಸೇವಾಬಾಯನ ಮಾಲೆ ಹಾಕಿಕೊಂಡು ಅಯ್ಯಪ್ಪಸ್ವಾಮಿ ಭಕ್ತರು ಕಟ್ಟು ನಿಟ್ಟಾಗಿ ಕುಡಿಯುವುದು, ಚಟ ಮಾಡುವುದನ್ನ ಬಿಟ್ಟು ತಣ್ಣೀರಲ್ಲಿ ಸ್ನಾನಮಾಡಿ, ಮಡಿ, ಪೂಜೆ ದೇವರಭಕ್ತಿ ಎನ್ನುವಂತೆ ಸೇವಾಭಾಯನ ಮಾಲೆ ಹಾಕಿಕೊಂಡು ಸೂರಗೊಂಡನ ಕೊಪ್ಪಕ್ಕೆ ಕಾಲ್ನಡಿಗೆಯಲ್ಲೆ ಹೋಗತೊಡಗಿದರು. ಆದರೆ ದುರಂತದ ಬದಲಾವಣೆಯಲ್ಲಿ ಮಾಲೆ ಹಾಕಿಕೊಂಡು ಭಕ್ತಿಯಿಂದ ಹೋದವರು ಜೀವನ ಪರ್ಯಂತ ಸರಾಯಿ ಕೆಟ್ಟ ಆಲೋಚನೆ ಬಿಟ್ಟಿದ್ದರೆ ಎಷ್ಟು ಚೆನ್ನಾಗಿತ್ತು? ಅಲ್ವಾ, ಆದರೆ ದುರಂತ ಅವರು ಬಿಟ್ಟ ಅವಧಿಯ ಸರಾಯಿಯನ್ನು ಮಾಲೆ ಹಾಕಿದ ಅವಧಿ ಮುಗಿದನಂತರ ಕುಡಿದು ರೊಕ್ಕ ಖರ್ಚು ಮಾಡುತ್ತಿದ್ದರು.

ಮತ್ತೆ ಅವೆ ದಿನಗಳು ಪುನರಾವರ್ತನೆಯಾದಂತೆ ಮಂದಿ ಬದಲಾದಂತೆ ನಾಟಕ ಆಡಿದರೂ ಅದೇ ಹಳೆ ಕೊಚ್ಚೆ ರಾಡಿಯಂತಹ ಆಲೋಚನೆಯೊಳಗೆ ತೇಲಾಡುತ್ತಿದ್ದರು. ಇವು ಯಾವತ್ತೂ ಸುಧಾರಿಸಲು ಸಾಧ್ಯವಿಲ್ಲ ಹುಲಿಯೂರ ಮನುಷ್ಯರ ಮಾನಸಿಕ ಸ್ಥಿತಿಗತಿಯನ್ನ ಕಂಡುಕೊಳ್ಳುವ ಆಲೋಚನೆ ಮಾಡಿದ್ದ. ಮನುಷ್ಯ ಯಾವಾಗಲೂ ತಾನು ಮಾಡಿದ್ದೆ ಸರಿ ಎನ್ನುವ ಆಲೋಚನೆಯೊಳಗೆ ಮುಳುಗಿರುತ್ತಾನೆ. ತನ್ನ ಬಿಟ್ಟು ಉಳಿದೆಲ್ಲರೂ ದಡ್ಡರು, ಮುಠ್ಠಾಳರು ಎಂದೆ ತಿಳಿದಿರುತ್ತಾನೆ. ಹಾಗಾಗಿಯೆ ಬೇರೆಯವರ ಬಗ್ಗೆ ಅಸಡ್ಡೆ ತೋರುತ್ತಾನೆ. ಬೇರೆಯವರ ಬಗ್ಗೆ ಬಹಳ ಉಡಾಫೆಯಿಂದಲೆ ವರ್ತಿಸುತ್ತಾನೆ. ಅವನು ಒಂದು ತಾಂಡದಲ್ಲಿ ಇರುವ ವಿಚಿತ್ರ ಮಂದಿಯನ್ನ ಕಂಡಿದ್ದ. ಯಾರೊ ಒಬ್ಬವನು ಒಳ್ಳೆಯವನು, ಒಬ್ಬ ತಿಳಿಗೇಡಿ, ಒಬ್ಬ ಬಹಳ ಬುದ್ಧಿವಂತನೆಂಬಂತೆ ನಟನೆ ಮಾಡುವವನು, ಒಬ್ಬ ಉಪದ್ಯಾಪಿ, ಒಬ್ಬ ಯಾರ ಮುಲಾಜಿಗೂ ಹೋಗದಂತೆ ತಾನು, ತನ್ನ ಕೆಲಸ ಮಾಡಿಕೊಂಡು ಹೋಗುವವ. ಕೆಲವರಿಗಂತು ಹೇಳಿದರೂ ತಿಳಿಯುವ ವ್ಯವಧಾನವಿಲ್ಲ. ತಾವಾದರೂ ತಿಳಿದು ಮಾಡುವುದಿಲ್ಲ. ಇನ್ನೂ ಕೆಲವರು ಗೊಂದಲದಲ್ಲೆ ಇರಲು ಬಯಸುತ್ತಾರೆ.

ಮಂದಿ ಮನೋವೈಜ್ಞಾನಿಕತೆಯ ಮಾಪನ ಮಾಡುವ ಮೊದಲು ತನ್ನ ಕುಟುಂಬದ ಒಳಗಿನ ಸದಸ್ಯರನ್ನ ನೋಡಿ ಹೈರಾಣ ಆಗಿದ್ದ ಹುಲಿಯೂರ. ತಂದೆ ಒಂದು ರೀತಿಯಾದರೆ ತಾಯಿ ಮತ್ತೊಂದು ರೀತಿ ಆದರೂ ಅವರು ಹೊಂದಾಣಿಕೆ, ತಿಟವಾಟ, ಸಂಘರ್ಷ, ಜಗಳ, ಹೊಡದಾಟ, ಮಾರಾಮಾರಿ ಎಷ್ಟೊ ಸಲ ಅವನ ತಾಯಿ ಜಾನಿಬಾಯಿ ಮೂರ್ಛೆಹೋದಂತೆ ಹೊಡೆದ ಪ್ರಕರಣಗಳು ಉಂಟು. ಮರುಕ್ಷಣ ಆಗಲೆ ಹೆಂಡದ ಬಾಟಲುಗಳೊಂದಿಗೆ ಇಬ್ಬರು ಒಟ್ಟಿಗೆ ಕುಳಿತು ಕುಡಿಯುತ್ತ ಲೋಕಾಭಿರಾಮವಾಗಿ ಮಾತನಾಡುವುದನ್ನ ಕಂಡಿದ್ದ. ಮನೆಯೆ ಒಂದು ಪ್ರಪಂಚದಂತೆ ಕಂಡಿತ್ತು ಅವನಿಗೆ. ಒಬ್ಬ ಅಣ್ಣ ಪೆದ್ದ ಅವರು ಹೇಳಿದರೆ ಅದೇ ಸರಿ ಎಂದುಕೊಂಡು ಮನೆಯಲ್ಲಿರುವ ತಂದೆ, ತಮ್ಮನನ್ನ ಬೊಯ್ಯುತ್ತಿದ್ದ. ಎರಡನೇಯವನು ಅಲ್ಪಸ್ವಲ್ಪ ಓದಿಕೊಂಡು ಇಡಿ ಮನೆಯನ್ನ ತನ್ನ ಹತೋಟಿಯಲ್ಲಿಟ್ಟುಕೊಳ್ಳಲು ಪ್ರಯತ್ನ ಮಾಡಿದ್ದ. ಅದಕ್ಕೆ ಅವನು ಬೀಸಿದ ಗಾಳವೆಂದರೆ ಅವನ ತಂದೆ ತೊಪುನಾಯ್ಕ. ಇಡಿ ಮನೆಯ ವ್ಯವಹಾರ, ಕೊಡುವುದು, ತರುವುದು ಎಲ್ಲಾ ತಂದೆಯ ಜವಾಬ್ದಾರಿಯಾಗಿದ್ದರಿಂದ ಆತನನ್ನ ಕಂಟ್ರೋಲ್ ಮಾಡಿಕೊಂಡಿರಲು ಬಯಸಿದ್ದ. ಮಂದಿ ಎದುರು "ಏನಪ್ಪ ನೀನು ಇಡಿ ಜೀವನವನ್ನ ದುಡಿಮೆಗೆ ಮುಡಿಪಾಗಿಟ್ಟೆ. ಯಾ ಮಗನದ್ದು ಹತ್ತುಪೈಸೆ ತಿನ್ನದಂತೆ ನ್ಯಾಯ ಪಂಚಾಯ್ತಿ ಮಾಡ್ತಿಯ ನೀನು ಮಹಾನ್." ತುಂಬೆಗಿಡ ಹತ್ತಿಸುತ್ತಿದ್ದ. ಮುದಕ ತೊಪುನಾಯ್ಕ ಮಗ ಹೇಳುತ್ತಿರುವುದೆ ಸರಿ ಇರಬಹುದು ಎಂಬಂತೆ ಅವನು ಹೇಳಿದ್ದನ್ನೆ ಸತ್ಯ ಎಂದುಕೊಂಡಿದ್ದ. ಆದರೆ ವಾಸ್ತವ ಸತ್ಯವೆ

ಬೇರೆ. ವಾರಕೊಮ್ಮೆ ತಾಂಡಕ್ಕೆ ಬಂದು ಬೇಕಾದ್ದನ್ನ ಪಡೆದುಕೊಳ್ಳುವುದಕ್ಕೆ ಏನೆಲ್ಲ ಆಟ, ಬಯಲಾಟ ಮಾಡುತ್ತಿದ್ದ. ಹುಲಿಯೂರನಿಗೆ ಓದಿ ನೌಕರಿ ಪಡೆಯಲು ಒಂದು ದಾರಿ ಬೇಕಿತ್ತು. ಬೇರೆಯವರಂತೆ ಹೊಗಳಿ ಹೊನ್ನಸೂಲಕ್ಕೆ ಏರಿಸುವ ಪ್ರಮಯವೇನು ಬಂದಿರಲಿಲ್ಲಾ ಅವನಿಗೆ. ಇಂತಹವೆ ನೂರಾರು ಕತೆಗಳು ತಾಂಡದ ತುಂಬೆಲ್ಲಾ ತುಂಬಿಕೊಂಡಿದ್ದವು. ಅವುಗಳು ಇದ್ದಂತೆಯೆ ಪಟ್ಟಣದಲ್ಲಾಗುವ ಪ್ರತಿ ಬದಲಾವಣೆಯ ಗಾಳಿ ತಾಂಡಕ್ಕೂ ಬೀಸಿತ್ತು.

ತಾಂಡದಿಂದ ದುರ್ಗಾಪುರಕ್ಕೆ ತಲೆ ಮೇಲೆ ಹದಿನೈದು ಇಪ್ಪತ್ತು ಕೆ.ಜಿ. ಜೋಳ, ರಾಗಿ ಹೊತ್ತುಕೊಂಡು ಹೋಗಿ ಜೀನು ಮಾಡಿಸಿಕೊಂಡು ಬರಬೇಕಾಗಿತ್ತು. ಇಲ್ಲಾಂದ್ರೆ ಅಷ್ಟೆ ದೂರದಲ್ಲಿದ್ದ ರಾಮಾಪುರಕ್ಕೆ ಹೋಗಬೇಕಿತ್ತು. ರಾಮಾಪುರದಲ್ಲಿ ಗೌಡರ ದಿಳ್ಳಿ, ಹನುಮರ ಗಿರಣಿಗಳು ಬಹಳ ಪ್ರಚಲಿತದಲ್ಲಿದ್ದವು. ಮಂದಿ ಎರಡೂ ಗಿರಣಿಗಳಲ್ಲಿ ತುಂಬಿ ತುಳುಕಾಡುತ್ತಿದ್ದರು. ನೂಕು ನುಗ್ಗಲು, ಯಾರೊ ಒಂದು ಗಿದ್ನ, ಎರಡು, ಮೂರು ಗಿದ್ನ ಬೀಸಿಕೊಂಡರೆ ಮತ್ತೆ ಯಾರೊ ಪ್ಲಾಸ್ಟೀಕ್ ಚೀಲದ ತುಂಬ ಹಿಟ್ಟು ಬಿಡಿಸಿಕೊಳ್ಳುತ್ತಿದ್ದರು. ಮದುವೆ-ಮುಂಜಿ ಇರುವವರು ಒಂದು ಪಲ್ಲ ಬಿಡಿಸಿಕೊಳ್ಳುತ್ತಿದ್ದರು. ಯಾರೋ ಮುಂಜಾನೆಯಿಂದ ಕಾದು ಬೀಸಿಕೊಂಡು ಹೋದರೆ ಯಾರೋ ದಿನ, ಎರಡು ದಿನ ಗಂಟು ಇಟ್ಟು ಕಾದು ಬಿಡಿಸಿಕೊಂಡು ಹೋಗುತ್ತಿದ್ದರು. ಸೈಕಲ್ಲು, ಚಕ್ಕಡಿ, ತಲೆಮೇಲೆ ಹೋರುವುದು ಆಗಿನ ವಸ್ತುಸ್ಥಿತಿಯಾಗಿತ್ತು. ಹುಲಿಯೂರನು, ರಜೆಗೆ ಬಂದಾಗ, ವಾರಕ್ಕೆ ಒಂದು ಸಲ ನಾಕು ಗಿದ್ನ ಜೋಳ ತಲೆಮೇಲೆ ಹೊತ್ಕೊಂಡು ಹೋಗಿ ಬೀಸ್ಕೊಂಡು ಬರಬೇಕಿತ್ತು. ಅದು ಒಂದು ದಿನದ ಕೆಲಸವೆ. ಮುಂಜಾನೆ ಹೊತ್ತಾರೆ ಹೋದರೆ ಈ ಗಂಟಾದ ಮೇಲೆ ಇನ್ನೊಂದು ಸಾಲಿಗೆ ಇಟ್ಟು ತನ್ನ ಪಾಳೆ ಬಂದಾಗ ಜೀನು ಬಿಡಿಸಿಕೊಂಡು ಸುಡುತ್ತಿರುವ ಚೀಲ ತುಸುಹೊತ್ತು ತಣ್ಣಗಾಗಲು ಬಿಟ್ಟು ತಲೆಗೆ ಟವೇಲು ಸುತ್ತಿ ನೆತ್ತಿ ಉರಿ ಕೀಳುವವರೆಗೆ ನಡೆದು ತೀರ ಸಹಿಸಲು ಆಗದಿದ್ದ ಸಂದರ್ಭದಲ್ಲಿ ತಲೆಮೇಲಿಂದ ಗಂಟನ್ನು ಭುಜಕ್ಕೆ ಹಾರಿಸಿ ತಲೆ ತಣ್ಣಗಾದ ಮೇಲೆ ಮತ್ತೆ ತಲೆ ಮೇಲೆ ಹೊತ್ತು ನಡೆದು ತಾಂಡ ಸೇರಬೇಕಿತ್ತು.

ಕಾಲಕ್ರಮೇಣ ತಾಂಡದಲ್ಲಿ ಸೈಕಲ್ಲುಗಳ ಪ್ರವೇಶವಾಗಿತ್ತು. ಹಿಂದಿನಮನಿ ಗಣಪನಾಯ್ಕ, ಮುಂದಿನ ಬೀದಿ ದೇವರಾನಾಯ್ಕ ಮೇಲಿನ ಓಣಿಯ ಗಬಡೇಸಿ, ಸುಕ್ಲಾನಾಯ್ಕ, ಯಾರ್‍ಯಾರೊ ತಂದಿದ್ದ ನೋಡಿ ಜೀನಿಗಾದರು ಬೇಕಂತ ತೊಮುನಾಯ್ಕ ಸೆಕೆಂಡಹ್ಯಾಂಡ್ ಸೈಕಲ್ ತರಿಸಿದ್ದ. ಆಗಿನ ಕಾಲದಲ್ಲಿ ಅದೇ ದೊಡ್ಡ ಸಾಧನೆ "ಲೇ ಅವರ ಮನ್ಯಾಗ ಸೈಕಲ್ ಐತೆ" ಅಂತಂದು ಹುಡುಗರು ಮಾತಾಡಿಕೊಳ್ಳೊದು ವಾಡಿಕೆಯಾಗಿತ್ತು. ಕಾಲಕ್ರಮೇಣ ತಾಂಡದಲ್ಲೂ ಕೆಲಮಂದಿ ಹಂಗೆ ದಂಡಿಗೆ ಹತ್ತಿದರು. ಏನೇ ಮಾಡಿ ವ್ಯವಸಾಯ ಮಾಡಿದರು. ರೈತ ನೆಲಬಿಟ್ಟು ಮೇಲೆ ಬರಾಕವಲ್ಲ.

ಅವಾಗ ಬಹಳ ಅಂದ್ರೆ ಉಣ್ಣೊ ಜೋಳ, ರಾಗಿ ತೊಪುನಾಯ್ಕಗೆ ಐದು ಎಕ್ಕರೆ ಎರೆ ಜಮೀನು ಇರೋದಕ್ಕೆ ಸಣ್ಣತ್ತಿ, ಜೈಧರ ಹಾಕ್ಕೊಂತಿದ್ದ. ಬಹಳ ಅಂದ್ರೆ ಅಕ್ಕಡಿಕಾಳು, ಹೆಸರು, ಅಲಸಂದಿ, ತೊಗರಿ, ಸಾಸಿವೆ, ಔಡಲ, ಮೆಣಸಿನಕಾಯಿ ಚೂರುಪಾರು ತರಕಾರಿ ಅದ್ರಾಗೂ ಹೀರೆಕಾಯಿ, ಸೊರೆಕಾಯಿಗಳಂತು ಮನಗಂಡ ಬಿಡುತ್ತಿದ್ದವು. ತರಕಾರಿ ಅಂತ ಮಾರೊದಕ್ಕೆ ಹೋದರೆ ಹರ್‍ಕೊಂಡು ಹೋದ ಕೂಲಿನೂ ಗಿಟುತ್ತಿರಲಿಲ್ಲಾ. ಪರಿಸ್ಥಿತಿ ಹೀಗಿರುವಾಗ ಮಾಡೋದಾದರು ಏನು? ಕಾಲಕ್ರಮೇಣ ಬಾವಿಗಳು, ಕಪಲಿಗಳು, ಡಬ್ಬ ಕಟ್ಟಿ ನೀರೆತ್ತುವ ಏತಗಳು ಮಾಯವಾಗಿದ್ದವು, ಸಾಲದಕ್ಕೆ ತೊಪುನಾಯ್ಕನೆ ಧೈರ್ಯಮಾಡಿ ತಾಂಡದ ಪಕ್ಕ ಹುಲಗಪ್ಪ, ತಿಂಗಳ ಕಾಲ ಕೊರಸಿದ ಮುದ್ದಿಬೋರನ್ನ ತನ್ನ ಹೊಲದಾಗೂ ಕೊರಸಿದ. ನಾಕಿಂಚು ನೀರು ಬಿದ್ದಿತ್ತು, ಮೋಟಾರು ಇಳಿಸಿ ನೀರು ಎತ್ತಿದ. ಏಳು ಎಕ್ಕರೆ ಜಮೀನಿಗೆ ಭರಪೂರ ನೀರು, ಶೇಂಗ ಹಾಕಿದ, ಕಬ್ಬು, ಡಿಸಿಹೆಚ್ ವರಲಕ್ಷ್ಮಿ ಹತ್ತಿ ತಳಿಗಳು ಬಂದಿದ್ದವು ಅವನ್ನ ಹಾಕಿ ಚೂರುಪಾರು ಲಾಭ ಮಾಡಿಕೊಂಡಿದ್ದ. ಹಾಗಾಗಿ ತೋಪುನಾಯ್ಕನೆ ನೀರಾವರಿ ಜಮೀನು ಮಾಡಿದ್ದು. ಅವನೆ ಅದರಲ್ಲಿ ದುಡಿದು ಏಳು ಎಕ್ಕರೆ ಜಮೀನು ಖರೀದಿಸಿದ್ದ.

ತೊಪುನ ಮಗ ದೇವ್ಲನ ಒತ್ತಾಯದ ಮೇರೆಗೆ ಸೆಕೆಂಡ ಹ್ಯಾಂಡ್ ಟ್ರಾಕ್ಟರ್ ಖರೀದಿಸಿದ್ದ. ತಾಂಡಕ್ಕೆ ಬಂದ ಮಿಷನರಿ ಸಾಮಾನು ಅಂದರೆ ಇದೆ ಮೊದಲು. ಕಾಲ ಸರಿಯುತ್ತಿದ್ದಂತೆ ಆಟೊಮೊಬೈಲಿನಲ್ಲಾದ ಕ್ರಾಂತಿಯಿಂದಾಗಿ ತಾಂಡದಮಂದಿ ಬದಲಾವಣೆಗೆ ಒಗ್ಗಿಕೊಂಡಿದ್ದರು. ಮೀನು ಮಾರೊ ರಂಗಾನಾಯ್ಕ ಟಿ.ವಿ.ಎಸ್-50 ತಗೊಂಡ, ಹಿಂದೆ ಮೀನಿನ ಪುಟ್ಟಿ. ಐದಾರು ಕಿ.ಮೀ.ವೇಗದಲ್ಲಿ ಓಡಿಸುತ್ತಲೆ ಒಮ್ಮೆ ಹಾರನ್ ಹೊಡೆದು. "ಮೀನು ಬೇಕೇನ್ರವ್ವ ತಾಜ ಮೀನು ಹೊಳೆಯಿಂದ ಈಗಲೆ ತಂದದ್ದು" ಅಂತ ಕೂಗಿ ಹೇಳುತ್ತಾ ಗಾಡಿ ಓಡಿಸುತ್ತಿದ್ದ. ತದನಂತರ ಸಿಟಿಗಳಲ್ಲಿ ಹೆಚ್ಚಾದ ಬೈಕುಗಳು ಕ್ರಮೇಣ ಹಳತಾದ ಮೇಲೆ ಕಡಿಮೆ ಧರಗಳಲ್ಲಿ ಮಾರಾಟ ಮಾಡಲಾಗುತ್ತಿತ್ತು. ಅದರಲ್ಲಿ ಭದ್ರಾನಾಯ್ಕನ ತಾಂಡವೇನು ಹೊರತಾಗಿರಲಿಲ್ಲ. ಹಳೆ ಮೊಡ್ಕಾ ಬೈಕುಗಳು ಮನೆಗೊಂದು, ಎರಡು ರಾರಾಜಿಸತೊಡಗಿದವು. ದುರ್ಗಾಪುರದಿಂದ ಬರೊಬರಿ ಮೂರು ಕಿಲೋಮೀಟರ್ ದೂರದ ತಾಂಡಕ್ಕೆ ಸ್ವಾತಂತ್ರ್ಯ ಸಿಕ್ಕ ಅರವತ್ತು ವರ್ಷಗಳಾದರೂ ರಸ್ತೆ, ವಿದ್ಯುತ್ ಬಂದಿರಲಿಲ್ಲಾ. ಮೀಸಲಾತಿ ಕ್ಷೇತ್ರದಿಂದ ಆಯ್ಕೆ ಆಗುತ್ತಿದ್ದ ನಂಜಾನಾಯ್ಕ ಹೆಬ್ಬಟ್ಟು ಯಾವ ಸುಧಾರಣೆಯನ್ನು ಮಾಡಲಿಲ್ಲಾ ಹಿಂದುಳಿದ ಪ್ರದೇಶಗಳಲ್ಲಿ ಒಂದಾದ ಅವನ ತಾಲೂಕು ಹಿಂದುಳಿದೆ ಇತ್ತು. ಮುಂದೆ ಬರುವ ಯಾವ ಲಕ್ಷಣಗಳು ಕಾಣಲಿಲ್ಲಾ.

ಅರವತ್ತು ವರ್ಷಗಳ ವನವಾಸ, ಜಾಲಿಮುಳ್ಳ, ಕಲ್ಲು, ಬಂಡಿ ದಾರಿಯಲ್ಲಿ ಅಡ್ಡಾಡಿದ ಮಂದಿಗೆ ಅಚ್ಚರಿಯೊಂದು ಕಾದಿತ್ತು. ಇದ್ದಕ್ಕಿದ್ದಂತೆ ಎರಡನೇಯ

ಸರ್ತಿಗೆ ಎಂ.ಎಲ್.ಎ. ಪದವಿಗೇರಿದ ಲಮಾಣಿ (ಎಂ.ಎಲ್.ಎ) ಮಂದಿ ಮೇಲಿನ ಕರುಣೆಯಿಂದ ದುರ್ಗಾಪುರದಿಂದ ಮೂರುವರೆ ಕಿಲೋಮೀಟರ್ ಹಾಗೆ ಮುಂದೆ ಆ ತಾಂಡದ ಹೊಲಗಳ ಕಾಲ್ದೆಯಿಸೆಯಿಂದ ಇದ್ದ ಎರಡುವರೆ ಕಿಲೋಮೀಟರ್ ದೂರದ ಸಾತೆನಹಳ್ಳಿ ದಾರಿಗೂ ಡಾಂಬರ ಬಂತು. ಡಾಂಬರು ರಸ್ತೆ ಆಗಿದ್ದೆ ತಡ ದುರ್ಗಾಪುರದ ಸಕ್ಕರೆ ಕಾರ್ಖಾನೆಗೆ ಕಬ್ಬು ಹೊಡೆಯುವವರು ಹಗಲು ರಾತ್ರಿ ಅನ್ನದೆ ಟ್ರಾಕ್ಟರ್, ಲಾರಿ, ಟೆಂಪೊ, ಕಾರು, ಬೈಕುಗಳು ಪಟ್ಟಣಗಳಲ್ಲಿ ಅಡ್ಡಾಡುವಂತೆ ಅಡ್ಡಾಡತೊಡಗಿದವು. ಯಾವಾಗ ವಾಹನಗಳ ಸಂಖ್ಯೆ ಹೆಚ್ಚಾದವೊ ಕೆಲಮಂದಿ ತಲೆಯೊಳಗೆ ಆಲೋಚನೆಗಳು ಬಂದಿದ್ದವು. ಹೊಸ ಅಲೆ ಆರಂಭವಾಗಿ ರಸ್ತೆ ಪಕ್ಕದಲ್ಲಿ ಕಿರಾಣಿ ದುಕಾನ್ ಆರಂಭ ಮಾಡಿದ್ದ ಗೋಲಿಬಾಯಿ ಗಂಡ ಸತ್ತಮೇಲೆ ಇಬ್ಬರು ಹುಡುಗಿಯರನ್ನ ಕಟ್ಟಿಕೊಂಡು ಬ್ರಾಂದಿ ಅಂಗಡಿ ತಗದಳು "ಎಯ್, ಯಾ ಬೊಳಿಮಗ ಮಾತಾಡ್ತಾನ? ಯಾ ಸೂಳಿ ಮಗ ತಡಿತಾನ" ಇವೆ ಮಾತುಗಳು ಆಕಿ ಬಾಯಲ್ಲಿ ಸಾಲದಕ್ಕೆ ಗೋಮ್ಲನ ಮಕ್ಕಳು ಬ್ರಾಂದಿ ಅಂಗಡಿಗೆ ಅಂಟಿಕೊಂಡೆ ಎಗ್‌ಫ್ರೈಡ್‌ರೈಸ್, ಗೋಬಿ, ನೂಡಲ್ ದುಕಾನ್ ಆರಂಭಿಸಿದರು. ತಾಂಡದಲ್ಲಿ ಮಂದಿಗೆ ಇಂಥಹದು ಸಿಗಲ್ಲ ಅನ್ನೊ ಹಾಗಿಲ್ಲ ಎಲ್ಲಾನು ಸಿಗುತ್ತಿತ್ತು. ದಾವಣಗೇರಿ, ಹರಿಹರದ ಬಾರಲ್ಲಿ ಸಿಗುವಂತೆ ಬೀರು, ಬ್ರಾಂದಿ, ಚಾಕಣ ಎಲ್ಲವೂ ಮಾರಾಟವಾಗತೊಡಗಿದವು.

ಸಂಜೆ ಬ್ರಾಂದಿ ವ್ಯಾಪಾರ ಜೋರಾದ ಮೇಲೆಗೋಮ್ಲನಾಯ್ಕ ಮಕ್ಕಳು ಚಿಕನ್ ಮಂಚೂರಿ, ಚಿಕನ್ ಸಿಕ್ಸ್ಟಿ, ಚಿಕನ್ ಹೈದ್ರಾಬಾದಿ ಮಾಡುವುದನ್ನು ಪ್ರಾರಂಭಮಾಡಿಯೆ ಬಿಟ್ಟರು. ಆ ಕಡೆ ಬಾಟಲ್ಲು ಈ ಕಡೆ ಪ್ಲೇಟು ಕಾಸಿದ್ದವನು ದಾವಣಗೇರಿ, ಹರಿಹರಗಳಲ್ಲಿ ಶ್ರೀಮಂತರು, ದಲ್ಲಾಳಿಗಳು, ಡಾಕ್ಟರ್, ಕಾಂಟ್ರಾಕ್ಟರ್, ಇಂಜಿನೀಯರ್, ಪ್ರೊಫೇಸರ್‌ಗಳು ಬಾರಲ್ಲಿ ಕುಳಿತು ಲೋಕಾಭಿರಾಮವಾಗಿ ಮಾತಾಡುತ್ತ ಮುಂದೆ ಗ್ಲಾಸು ಇಟ್ಕೊಂಡು ಗುಟಕರಿಸುತ್ತ ನಾಡಿನ ಜವಾಬ್ದಾರಿ ತಾವೆ ತಗೊಂಡಿರುವಂತೆ ಘಹನ ಚರ್ಚೆ ಮಾಡುವಂತೆ ಇವರೂ ಕೂಡ ಹೊಸದಾಗಿ ಬಂದ ಪ್ಲಾಸ್ಟಿಕ್ ಗ್ಲಾಸುಗಳಲ್ಲಿ ಬ್ರಾಂದಿ ಸುರಿದು ಕೆಂಪಗೆ ಮಾಡಿಕೊಂಡು ಸೈಡಿಗಿಟ್ಟ ಚಿಕನ್ ಹೈದ್ರಾಬಾದಿಗೆ ಕೈ ಹಾಕಿ ಪಟ್ಟಣಿಗರ ಸ್ಟೈಲ್‌ನಲೆ ಅವರ ಅನುಕರಣೆ ಮಾಡತೊಡಗಿದರು.

ಹೇಮ್ಲನ ಮಗ ಡೆಬರ ಒಂದೆರಡು ಆಟೊ ತಂದ, ಕಾರು ತಂದ, ಬಾಡಿಗೆ ಓಡಿಸಲು ಪ್ರಾರಂಭಮಾಡಿಯೇ ಬಿಟ್ಟ. ಇದೆಲ್ಲವನ್ನ ಕೇಳಿದ ಹುಲಿಯೂರ ಬಹಳ ದಿನಗಳ ನಂತರ ಯಾವಾಗಲೊ ಒಮ್ಮೆ ಅವನತಾಯಿ ಜಾನಿಬಾಯಿಗೆ ಹೃದಯಾಘಾತವಾದಾಗ ಭದ್ರನಾಯ್ಕನ ತಾಂಡಕ್ಕೆ ಧಾವಿಸಿದ್ದ ಇದು ಭದ್ರನಾಯ್ಕನ ತಾಂಡವೊ ಇಲ್ಲ ಮಿನಿ ಸಿಟಿ? ಅನುಮಾನ ಬಂದಿತ್ತು. ತಾಂಡದಲ್ಲಿ ಅವನ ತಾಯಿ

ಜಾನಿಬಾಯಿಯ ಕಾಲಕ್ಕೆ ಅವರ ಹೆಂಗಸರು ತೊಡುತ್ತಿದ್ದ ಲಂಭಾಣಿ ಭೂಷಣಗಳು ತೊಡುವುದು ನಿಂತು ಹೋಗಿದ್ದವು. ಕಾರಣ ಒಂದು ಲಂಭಾಣಿ ಹೆಂಗಸು ತೊಡುವ ಕುಪ್ಪಸದೊಳಗೆ ಏನೆಲ್ಲ ಕುಸುರಿ ಕೆಲಸಗಳಿದ್ದವು ಬಕ್ಯಾ, ಕಾಚೆ, ಘೂಂಡಿ, ಪೀಸಾ, ಮಾಕಿ ಹೀಗೆ ನಾನ ನಮೂನಿಯ ದಾರದ ಕೆಲಸವನ್ನು ಬಹಳ ಪುರುಸೊತ್ತಿನಿಂದ ಮಾಡಬೇಕಿತ್ತು. ಈ ಕೆಲಸವನ್ನ ನಾಜುಕಾಗಿ, ವರ್ಷಗಟ್ಟಲೆ ಸಮಯ ತಗೊಂಡು ಹೆಂಗಸರು ಮಾಡುತ್ತಿದ್ದರು. ದಿನಗಳು ಬದಲಾದಂತೆ ಹೊಟ್ಟೆ ಹೊರೆಯುವುದೆ ಸವಾಲು ಆದಾಗ ಉಡುವುದು ಎರಡನೇಯ ಸ್ಥಾನ ಪಡೆಯುತ್ತದೆ. ಈ ನಡುವೆ ದಾರನೇಯುವ ಕೈ ಮಗ್ಗಗಳು ನಿಂತು ಹೋಗಿದ್ದವು. ಹಿಂದೆ ನೇಕಾರರ ಓಣಿಗೆ ಹೋದರೆ ಸಾಟಿ ಬದಲಿಗೆ ಒಂದಿಷ್ಟು ದಾರನಾದರೂ ಕೊಡುತ್ತಿದ್ದರು. ಬರ್ತಾ ಬರ್ತಾ ಅವರು ವ್ಯವಹಾರಿಕ ಬುದ್ಧಿಯನ್ನ ಕಲಿತಮೇಲೆ ದಾರದ ಸಾಟಿ-ಬದಲಿ ನಿಂತು ಹೋಯಿತು. ಲಂಬಾಣಿ ಜನರಿಗೆ ಅಷ್ಟೊಂದು ದುಬಾರಿ ದಾರ, ಗುಂಡಿ, ಗಾಜು, ಬಟ್ಟೆ ತುಂಡು ಖರೀದಿ ದುಸ್ತರವಾಗಿತ್ತು. ಹಾಗಾಗಿ ನಿಧಾನಕ್ಕೆ ಅವರು ಬದಲಾವಣೆಯ ಕಡೆಗೆ ವಾಲತೊಡಗಿದರು.

ಹುಲಿಯೂರನ ದೊಡ್ಡ ಅತ್ತಿಗೆ ಬಂದಾಗ ಅವರ ಉಡುಪು ಧರಿಸಿದ್ದಳು, ತಾಳಿ ಸೀರಿ, ಧಾರೆ ಸೀರಿ ಬಿಟ್ಟರೆ ಮತ್ತೆ ಬೇರೆ ಸೀರೆಗಳೆ ಕಡಿಮೆ. ಬರ್ತಾ ಬರ್ತಾ ಅವಳು ಊರಮನಿ ಹೆಂಗಸರಂತೆ ಸೀರೆ ಧರಿಸುವುದನ್ನ ರೂಢಿ ಮಾಡಿಕೊಂಡಳು. ಅವರ ಕೆಂಪು ಉಡುಪಿನೊಳಗೆ ಸುಂದರವಾಗಿ ಕಾಣುತ್ತಿದ್ದವರೆಲ್ಲಾ ಒಳ್ಳೆ ದರಿದ್ರದವರು ಕಂಡಂಗೆ ಕಾಣತೊಡಗಿದರು. ನಾಕು ದಿನ ಅಸಹ್ಯವಾಗಿ ಕಂಡರು ಸೀರೆ ಅವರ ಮೇಲೆ ಶೋಭಿಸುವ ದಿನಗಳು ದೂರ ಉಳಿಯಲಿಲ್ಲ. ಜಾನಿಬಾಯಿ ಮಾತ್ರ ತನ್ನ ಹಳೆ ಪೇಟಿಯಾಗಳನ್ನ ಉಡತೊಡಗಿದ್ದಳು. "ಈ ವಯಸ್ಸಿಗೆ ಎಲ್ಲಿ ಹಚ್ಚೆ ಹೋಗೊ ಮಹರಾಯ. ಪ್ರಾಣ ಬಿಟ್ಟೆನು ಹೊರತು ಪದ್ಧತಿ ಬಿಡೇನು. ಹರದ ಹತ್ರ ತ್ಯಾಪಿ ಹಾಕಿ ಕಾಲ ಕಳದೇನೆ ವಿನಃ ಈ ಪದ್ಧತಿ ಬಿಡು ಅಂದ್ರೆ ಮಾತ್ರ ಸಾಧ್ಯವಿಲ್ಲ" ತಲೆ ಕೊಡವಿದ್ದಳು.

ಮುಂದಿನ ಮದುವೆಗಳು ಊರಮನಿ ಮಂದಿಯ ಪದ್ಧತಿಯಂತೆ ಸೀರೆ, ರವಿಕೆ ಉಡುವುದರಲ್ಲೆ ನಡೆಯತೊಡಗಿದವು. ಈಗಂತು ಮಂದಿ ಟ್ರಂಕ್ ತುಂಬ ಸೀರೆಗಳನ್ನ ಮಕ್ಕಳಿಗೆ ಕೊಡತೊಡಗಿದರು. ಯಾಕಂದಿ ಐವತ್ತು, ನೂರು ರೂಪಾಯಿಗೆ

* ಬಕ್ಯಾ-ಕಸೂತಿ
* ಕಾಚೆ-ಗ್ಲಾಸು
* ಘೂಂಡಿ-ಗುಂಡಿ
* ಪೀಸಾ-ದುಡ್ಡು
* ಮಾಕಿ-ಕಸೂತಿಯ ಒಂದು ನಮೂನೆ

ಬೇಕಾದಂತ ಸೀರೆ. ಅಂದ ಕಾಣಬೇಕಂತಿಲ್ಲ ಮೈಮುಚ್ಚಿದರೆ ಆಯ್ತು ಎನ್ನುವ ಮಾತು ಕೇಳಿ ಬಂದಿತ್ತು. ಹಳೆ ಹೆಸರುಗಳಾದ, ಜಾತ್ರ್ಯ, ಛತ್ರ್ಯ ಥಾವ್ರ್ಯ, ಟಾಂಕ್ಯ, ಗೊಪ್ಲ, ಬದಿಯಾ, ಗುರ್ರ್ಯಾ, ಸಕರ್ರ್ಯಾ, ಸಾಂತ, ಶೋತ್ರ, ಯಂಕ, ಬದಲಾದವು ಊರಮನಿ ಮಂದಿಯಂತೆ, ಆನಂದ, ಅನಿಕೇತನ, ಚೇತನ, ರವಿ ಚಾಲ್ತಿ ಹೆಸರುಗಳು ರೂಢಿಗೆ ಬಂದವು. ಹೆಂಗಸರ ಹೆಸರುಗಳಂತು ಅದ್ವಾನಾಗಿದ್ದವು. ಲಕ್ಕಿ, ಪಿಂಪರ, ಜಾನ್ಕಿ, ಸೀತ್ಕಿ, ಸಾಮ್ಕಿ, ಕೇಳಿ, ಥಾವರಿ, ಸುವಾಲಿ, ಸೋಮ್ಲಿ ಮರೆಯಾಗಿ ದಾಕ್ಷಾಯಣಿ, ಪುಷ್ಪ ಮುಂತಾದವು ಚಲಾವಣೆಗೆ ಬಂದಿದ್ದವು. ಲಂಬಾಣಿಗರ ಆಚರಣೆಗಳಂತು ಕ್ರಮೇಣ ನಿಂತು ಹೋಗತೊಡಗಿದವು.

ಹುಲಿಯೂರ ಕಂಡ ದೀಪಾವಳಿಯ ಹಬ್ಬದ ತಯಾರಿ ಸುಮಾರು ಅವನಿಗೆ ತಿಳುವಳಿಕೆ ಬಂದು ಐದು ಆರನೆ ವರ್ಷದಿಂದ ನೋಡುತ್ತ ಬಂದಿದ್ದ ಅದ್ದೂರಿಯ ತಯಾರಿ ಕ್ರಮೇಣ ಕಡಿಮೆಯಾಗಿತ್ತು. ಕಾರಣಗಳು ನೂರಿದ್ದರು, ಜನರಲ್ಲಾದ ಬದಲಾವಣೆ ಮಾತ್ರ ಕೆಟ್ಟದ್ದಾಗಿತ್ತು. ಹುಲಿಯೂರನಿಗೆ ಈಗ ಐವತ್ತೈದು ವರ್ಷಗಳು ಸೂಕ್ಷ್ಮಮತಿಯಾದ ಹುಡುಗ ಹುಲಿಯೂರ, ಹುಲಿಯೂರನಾಯ್ಕ ನಾಗಿ ಗೃಹಸ್ಥನಾಗಿ ಇಬ್ಬರು ಮಕ್ಕಳ ತಂದೆಯಾಗಿದ್ದ. ಅವನು ಅನುಭವಿಸಿದ ಪ್ರತಿಯೊಂದು ಕ್ಷಣಗಳನ್ನ ಅವನು ತನ್ನ ಸ್ಮೃತಿಯಲ್ಲಿ ಹೂತಿಟ್ಟಿದ್ದ. ಅವೆಲ್ಲವನ್ನು ಮರೆಯುವ ಮುನ್ನ ಜನರಿಗೆ ಬಿತ್ತರಿಸುತ್ತಿದ್ದ. ಈಗ ಭದ್ರಾನಾಯ್ಕನ ತಾಂಡದ ಕೆರೆ ಸಂಪೂರ್ಣವಾಗಿ ಒಣಗಿತ್ತು. ಅವನು ಆರನೆ ವಯಸ್ಸಿನವನಿರಬಹುದು ಅವನ ಅಣ್ಣ ದಮ್ಮಡಿ ಮತ್ತ ಅವನ ತಮ್ಮ ಜಗನ ಕೂಡ ಆಪಿನಹಳ್ಳ, ಹುದಲಿನ ಹಳ್ಳಕ್ಕೆ ಏಡಿ ಹಿಡಿಯಲು ಹೋಗಿದ್ದ. ಅವನತಾಯಿ ಜಾನಿಬಾಯಿ ಮದ್ಯಾಹ್ನ ಹೊಲಕ್ಕೆ ಹೋದವರು ಬಂದು ಊಟ ಮಾಡಿದ ಮೇಲೆ ಅವಳಿಗೆ ಸಂಜೆಯ ಊಟಕ್ಕೆ ಸಾರು ಜೋಡಿಸುವ ಚಿಂತೆ, ರೊಟ್ಟಿನೊ ಮುದ್ದೆ ಮಾಡಿಬಿಡಬಹುದು ಸುಮಾರು ಮೂವತ್ತು ಮಂದಿಗೆ ಸಾರು ಮಾಡುವುದೆ ದೊಡ್ಡ ಶ್ರಮ. ಪ್ರತಿದಿನ ಮುಂಜಾನೆ ಅವರೇ ಬೆಳೆದ ಬೇಳೆ ಇತ್ತು, ಬೇಳೆಸಾರು ಆಯ್ತು, ಮದ್ಯಾಹ್ನಕ್ಕೂ ಅದೇ ಆಯ್ತು ಸಂಜೆದೆ ದೊಡ್ಡ ಕೊರಗು. ಅದಕ್ಕಂತೇಳಿ, ಹಳ್ಳದ ಏಡಿ, ಮೀನುಗಳಿಗೆ ಜೋತು ಬಿಳಬೇಕಾದ ಪ್ರಸಂಗ ಬರುತ್ತಿತು. ಐವತ್ತಾದರು ಏಡಿಗಳು ಸಿಗುತ್ತಿದ್ದವು. ಈಗ ಏಡಿ ಅಂದರೆ, ಮೀನು ಅಂದರೆ ಏನು? ಅಂಥ ಕೇಳುವ ಪರಿಸ್ಥಿತಿ ನಿರ್ಮಾಣವಾಗಿದೆ.

ಆ ಮಳೆಗಾಲ, ಸಿಡಿಲು, ಗುಡುಗು ಭಯಾನಕವಾಗಿದ್ದವು ನಡುವೆ ಒಂದು ಮೂವತ್ತು ವರ್ಷ ಮಳೆಯಂತು ಅಂಟ ಕುಂಟ, ತಿಂಗಳಿಗೆ ಒಂದು ಮಳೆಯಾದರೂ ಬಂದರೆ ಮುಂಗಾರಿನ ಮಾನ್‌ಸೂನ್ ಮಳೆ ನಂಬಿ ಸಾಲಮಾಡಿ ಬೀಜಗೊಬ್ಬರ ತಂದ ರೈತನಿಗೆ ಧೈರ್ಯ ಬಂದೀತು. ಆದರೆ ಹಾಕಿದ ಬೆಳೆ ಹೊಲದಲ್ಲೆ ಬಾಡಿ ಕಮರಿ ಹೋಗುತ್ತಿತ್ತು. ಹಾಕಿದ್ದು ಗಂಟು ಎಂಟಾಣೆಯಾದಮೇಲೆ ಆತ್ಮಹತ್ಯೆಗಳು

ಅವಿರತವಾಗಿದ್ದವು. ಈ ನಡುವೆ ಬೇರೆ ಏನೇ ಕಾರಣ ಇದ್ದಾಗ್ಯೂ ಆ ಸಾವನ್ನ ರೈತರ ಆತ್ಮಹತ್ಯೆ ಅಂತ ಹಣೆಪಟ್ಟಿ ಕಟ್ಟತೊಡಗಿದ್ದು ಇನ್ನೊಂದು ವಿಪರ್ಯಾಸ. ಇಂತಹವರಿಂದಾಗಿ ನಿಜವಾಗಿಯೂ ಸಾಲದ ಹೊರೆಯಿಂದಾಗಿ ಸತ್ತ ರೈತರಿಗೆ ಮರ್ಯಾದೆ ಇಲ್ಲದಾಗಿತ್ತು. ಭೂಮಿ ಕಸು ಕಳೆದುಕೊಂಡು ಬಂಜೆಯಾಗಿತ್ತು ಮಳೆಬಾರದೆ ಬೀಜಬಿತ್ತಲು ಮಂದಿ ಕಂಗಾಲಾಗಿದ್ದರು ಬಿತ್ತಿದರೂ ಬೆಳೆ ಬಂದೀತು ಎನ್ನುವ ಯಾವ ಗ್ಯಾರಂಟಿನೂ ಇಲ್ಲಾ, ಏನಪ್ಪ ಅಂದ್ರೆ ಹೊಟ್ಟೆ ಕಿಚ್ಚಿಗೆ ಹಾಕಬೇಕು, ಹಾಕಬೇಕು ಅಷ್ಟೆ! ಹುಲಿಯೂರ ಅವನ ಹಿರಿಯಕ್ಕಂದಿರ ಮದುವೆ ನೋಡಿರಲಿಲ್ಲಾ ಆದರೆ ಉಳಿದವರ ದೀಪದಲ್ಲಿ ಕಾಸು ಹಾಕಲು ಅಕ್ಕಪಕ್ಕದ ಹೊಲದಲ್ಲಿ ರಾಗಿ ಸಿವುಡುಗಳನ್ನು ಹಿರಿದು ತಂದು ರಾಗಿ ತಿಕ್ಕಿ ಮಾರಿ ಒಂದು ರೂಪಾಯಿ ನೋಟನ್ನ ದೀಪಕ್ಕೆ ಹಾಕಿದರೆ ಮುಗಿತು ತನ್ನ ಬಹಳ ದೊಡ್ಡ ಜವಾಬ್ದಾರಿ. ಈಗ ಯಾರನ್ನ ಕೇಳು ಬರೀ ಮೆಕ್ಕೆಜೋಳ ಯಾವಾಗ ಮಂದಿ ಲಾಭವನ್ನ ಕಂಡುಕೊಂಡರೊ ಅಲ್ಲಿಗೆ ಅವರ ಕತೆ ಮುಗದಿತ್ತು. ತಾಂಡದಲ್ಲಿ ಕುಣಿಯುವುದು ನಿಂತು ಹೋಗಿತ್ತು ಮನೆಗೊಂದು ಟಿ.ವಿ. ಸಿನೀಮಾ, ಕೇಬಲ್‌ಗಳು ಬಂದ ಮೇಲೆ ಯಾಕೆ ಮಾಡಬೇಕು, ಯಾಕೆ ಕುಣಿಯಬೇಕು ಎನ್ನುವುದೆಲ್ಲಾ ಮನಸ್ಸಿನೊಳಗೆ ಹುಟ್ಟಿ ದೂರ ಓಡತೊಡಗಿದರು.

ಲಂಬಾಣಿ ಉಡುಪುಗಳು ನಿಂತ ಮೇಲೆ ಸೀರೆ ಬಂದಿತ್ತು, ಈಗ ಸೀರೆ ಹೋಗಿ ನೈಟಿ ಆಕ್ರಮಿಸಿದೆ. ನೈಟಿ ತೊಟ್ಟೆ ಅಡುಗೆ, ನೈಟಿ ಮೇಲೆ ಹೊಲಕ್ಕೆ ಹೋಗುವುದು, ನೈಟಿ ಮೇಲೆ ಪಕ್ಕದ ಊರಿಗೆ ಹೋಗಿ ಸಂತೆ ಮಾಡುವುದು ಆರಂಭವಾಗಿತ್ತು. ಪಾಶ್ಚಾತ್ಯ ಹೆಂಗಸರನ್ನೂ ಮೀರಿ ನಮ್ಮ ಜನ ಬೆಳೆಯ ತೊಡಗಿದ್ದರು. ಈ ಬೆಳವಣಿಗೆ ಸಾಮಾಜಿಕ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರಿತ್ತು. ನೈಟಿಯ ಬೆನ್ನಲ್ಲೆ ಬಂದ ಮೊಬೈಲ್ ಕ್ರಾಂತಿಯಂತು ದನ, ಕುರಿ, ಗಳೆ ಹೊಡೆಯುವವನ ಜೇಬಿಗೂ ಇಳಿದಿತ್ತು. ಯಾರೊ ರೈತ ನೊಗಕ್ಕೆ ರೇಡಿಯೊ ಕಟ್ಕೊಂಡು ಹಾಡು ಕೇಳುತ್ತಾ ಗಳೆ ಹೊಡಿತ್ತಿದ್ದ ಅನ್ನೋದು ಹಳೆ ಮಾತಾಗಿತ್ತು ಮೊಬೈಲ್ ಬಂದ ಮೇಲೆ "ಹಲೋ, ಎನಮ್ಮಿ ಹೆಂಗೈತೆ ಮೈಯಾಗ ಹೊತ್ತು ನೆತ್ತಿ ಮೇಲೆ ಬಂದ್ರು, ಅಂಬ್ಲಿ ಇಲ್ಲಾ, ಮಜ್ಜಿಗಿಯಿಲ್ಲ. ಬಂದು ಬೆನ್ನ ಮೇಲೆ ನಾಕು ಗುದ್ದು ಅಂದ್ಯಾಹೆಂಗೆ?" ಮಂದಿ ಪೋನಿನಲ್ಲೆ ಜಾಡಿಸುವುದು ಆರಂಭವಾಗಿತ್ತು. "ಅಯ್ಯ ಒಸಿ ಇರ್ರಿ ಹಸ ಹಾಲ ಕೊಡವಲ್ದು ಅದಕ್ಕೆ ಮಿಜಿಕ್ ಹಾಕ್ಕೊಂಡು ಹಾಲು ಕರಿತಿವ್ನಿ" ಅಂತೇಳಿ ಹೆಂಡತಿ ಸಮಜಾಯಿಸಿ. ಇದರ ನಡುವೆ ಎರಡು ಸಾವಿರದ ಇಪ್ಪತ್ತಕ್ಕೆ ಜಗತ್ತು ಕಾಲಿಟ್ಟಿದ್ದೆ ತಡ ಅದ್ಯಾವನೋ ಅಬ್ಬೆ ಪಾರಿ ಚೈನಾ ದೇಶದವನು ಕರೋನ ವೈರಸ್ಸ್ ಅನ್ನೊ ರೋಗಾಣುವನ್ನ ಸಾಕಿ, ಸಲಹಿ ಕೊಬ್ಬಿದ ಮೇಲೆ ಮಂದಿ ಮೈಯೊಳಗೆ ಬಿಟ್ಟು ಜಗತ್ತಿನ ಮಾನವ ಕುಲವನ್ನೆ ಸರ್ವನಾಶ ಮಾಡುವ ಹುನ್ನಾರ ನಡೆಸಿದರ ಪರಿಣಾಮ ಇಡಿ ಜಗತ್ತಿನ ತುಂಬ ಜನ ಹೌಹಾರಿದ್ದರು. ಹುಲಿಯೂರ

ಕಳೆಯುತ್ತಿರುವ ವಯಸ್ಸು, ಹೆಚ್ಚುತ್ತಿರುವ ವೈರಾಣುವಿನಿಂದಾಗಿ ಹೈರಾಣಾಗಿದ್ದ. ಮನೆಯಿಂದ ಹೊರಗೆ ಹೋಗುವಂತಿಲ್ಲ, ಇಟಲಿ ದೇಶದಲ್ಲಿ ಬೀದಿ ಬೀದಿಯಲ್ಲೆ ಜನ ಸತ್ತಿದ್ದು, ಅಮೇರಿಕಾದಲ್ಲಿ ಕರೋನಾದಿಂದ ಬಲಿಯಾದವರ ಸಂಖ್ಯೆಯನ್ನ ನೋಡಿದರೆ ಸುಖಸುಮ್ಮನೆ ಮಂದಿಗೆ ಗಾಬರಿಯಾಗುತ್ತಿತ್ತು. ಮಾರ್ಚ್ ತಿಂಗಳಲ್ಲಿ ಭಾರತದೇಶವೆ ಸ್ಥಬ್ಧಗೊಂಢಿತ್ತು. ಅಂಗಡಿ ಮುಂಗಟು ವಾಹನಗಳು, ರೈಲು, ವಿಮಾನಯಾನ ಎಲ್ಲವೂ ನಿಂತು ಹೋಗಿತ್ತು. ವೇಗವಾಗಿ ನಾಗಾಲೋಟದಿಂದ ಓಡುತ್ತಿದ್ದ ಜಗತ್ತು ಒಮ್ಮಿಂದೊಮ್ಮೆ ಗಕ್ಕಂತ ನಿಂತು ಬಿಟ್ಟಿತ್ತು. ಆದರೆ, ಇದು ಸುಮಾರು ಫೇಸ್‌ಬುಕ್, ಟ್ವಿಟರ್, ವಾಟ್ಸ್‌ಅಪ್, ಗೂಗಲಿನಲ್ಲಿ ಸುದ್ದಿ ಹರಿದಾಡುತ್ತಿದೆ. ಕೆಲ ಪಂಡಿತರ ಪ್ರಕಾರ ಇದೊಂದು ದೊಡ್ಡ ಷಢ್ಯಂತ್ರ, ಮೆದಳು, ಹಣ ಮತ್ತು ಮನುಕುಲವನ್ನು ನಿಯಂತ್ರಿಸಲು ಮಾಡಿರವುದು ಅದರಲ್ಲಿ ಬಿಲ್‌ಗೇಟ್ಸ್, ಅಮೇರಿಕಾದ ವಿಜ್ಞಾನಿಗಳು, ಇದ್ದಾರೆ ಎಂದು ಸಿರಿಯಲ್‌ನಂತೆ ಸುದ್ಧಿಯನ್ನು ಬಿಡುತ್ತಿದ್ದಾರೆ. ಆದರೆ ಇಪ್ಪತ್ತೊಂದನೆಯ ಇಸವಿಯಲ್ಲಂತು ವಾರಕ್ಕೆ ಎರಡೆ ದಿನ ಹೊರಗೆ ಹೋಗಲು ಬಿಡುತ್ತಿದ್ದು ಸಂಪೂರ್ಣ ಲಾಕ್‌ಡೌನ್ ಆಗಿವೆ. ಅಂತು ಜಗತ್ತು ಮನುಕುಲದ ವಿನಾಶದ ಅಂಚಿನಲ್ಲಿದೆ ಎನ್ನುವ ತಾಕಲಾಟದಲ್ಲಿದೆ.

* * *



ನನ್ನ ಕಿರಿಯ ಮಿತ್ರ ಡಾ.ಶಾಂತನಾಯ್ಕ ಅವರದು ಅತ್ಯಂತ ಉತ್ಸಾಹಶೀಲ ವ್ಯಕ್ತಿತ್ವ. ವೃತ್ತಿಯಿಂದ ಬಳ್ಳಾರಿಯ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಇಂಗ್ಲಿಷ್ ವಿಭಾಗದಲ್ಲಿ ಪ್ರಾಧ್ಯಾಪಕರಾಗಿರುವ ಇವರು ಕನ್ನಡ ಸಾಹಿತ್ಯದ ಬಗೆಗೆ ಅಪಾರ ಪ್ರೀತಿಯನ್ನಿಟ್ಟುಕೊಂಡವರು.

ಕನ್ನಡಕಾವ್ಯ, ಕಥನಗಳ ಓದಿನ ಬಗ್ಗೆ ವಿಶೇಷ ಆಸಕ್ತಿ ಹೊಂದಿರುವ ಇವರು, ಇದೀಗ 'ತಾಂಡ' ಎನ್ನುವ ಜನಾಂಗೀಯ ಕಥನವನ್ನು ಕಟ್ಟಿಕೊಡುವ ವಿಶಿಷ್ಟ ಕಾದಂಬರಿಯನ್ನು ರಚಿಸಿದ್ದಾರೆ. ಡಾ.ಶಾಂತನಾಯ್ಕ ಅವರು ಲಂಬಾಣಿ ಸಮುದಾಯದ ಅಮೂಲ್ಯ ಉತ್ಪನ್ನವಾಗಿದ್ದಾರೆ. ತಮ್ಮ ಸಮುದಾಯದ ವರ್ತಮಾನ ಜೀವನದ ಕಷ್ಟ ನಷ್ಟಗಳ ನೇರ ಅನುಭವಗಳನ್ನು ಹೊಂದಿರುವ ಇವರು 'ತಾಂಡ' ಕಾದಂಬರಿಯಲ್ಲಿ ಆ ಅನುಭವಗಳ ಪ್ರಾಮಾಣಿಕ ಮತ್ತು ಸಮರ್ಥ ನಿರೂಪಣೆಯನ್ನು ಸಾಧಿಸಿದ್ದಾರೆ.

ಲಂಬಾಣಿ ಜನ ಸಮುದಾಯದ ಮಧ್ಯಯುಗದ ಇತಿಹಾಸ, ಅವರ ಸಾಂಸ್ಕೃತಿಕ ಮತ್ತು ಸಾಮಾಜಿಕ ಬದುಕಿನ ಸೂಕ್ಷ್ಮ ತಿಳುವಳಿಕೆಗಳನ್ನು ಆತ್ಮಗತ ಮಾಡಿಕೊಂಡಿರುವ ಡಾ.ಶಾಂತನಾಯ್ಕ ಅವರು 'ತಾಂಡ' ಕಾದಂಬರಿಯಲ್ಲಿ ಕಟ್ಟಿಕೊಡುವ ಕಥನವು ಅನನ್ಯವೂ, ಅಧಿಕೃತವೂ ಆಗಿದೆ. ಹೃದ್ಯವೂ ಆಗಿದೆ. ಡಾ.ಶಾಂತನಾಯ್ಕ ಅವರ ಈ ಕೃತಿಯನ್ನು ಸ್ವಾಗತಿಸುತ್ತ ಅವರಿಗೆ ಅಭಿನಂದನೆಗಳನ್ನು ತಿಳಿಸುತ್ತೇನೆ. ಮತ್ತು ಅವರು ತಮ್ಮ ಕಥನ ಕಟ್ಟುವ ಕ್ರಿಯೆಯನ್ನು ನಿರಂತರವಾಗಿ ಕಾಪಿಟ್ಟುಕೊಂಡು ಮುಂದುವರಿಸುತ್ತ ಇನ್ನಷ್ಟು ಮತ್ತಷ್ಟು ಉನ್ನತಿಯನ್ನು ಸಾಧಿಸಲಿ ಎಂದು ಹಾರೈಸುತ್ತೇನೆ.

ಧಾರವಾಡ
17 ಜುಲೈ 2021

–ರಾಘವೇಂದ್ರ ಪಾಟೀಲ



ಪ್ರಗತಿ ಪ್ರಕಾಶನ

ISBN 978-81-948957-1-8
9 788194 895718